Sri P. F. D'MELLOW (Nominated).—Mr. Speaker, Sir, when the house ose last Saturday, I was about to remark that it was a pity to find so many young people in this State disfigured and mutilated as the result of Hansen's disease or Leprosy as it is better known. Is there any reason why we should lag behind other States by not providing ourselves with facilities for surgical repair and rehabilitation of such patients? I am told that there is a hospital in Mysore City which is willing to undertake such work, if it could be provided with the means to acquire the additional accommodation that it needs for in-patients stricken by leprosy. I ask our Hon'ble Health Minister to please examine the possibility of providing such accommodation.

Sir, while on the subject of Hansen's disease, I am not sure whether we possess the authority to separate children of parents found with active disease. It has been long established that in India the greater majority of Leprosy patients are infected before their 20th year, many even before their 15th year. So, if we could only provide for the children of patients suffering from active or open leprosy to be separated from their parents and taken care of in suitable schools, there is no reason why we should not succeed in finally eradicating the disease of leprosy from our midst.

Sir, I shall now revert to the subject of the 'care of the Aged'. I do not claim that there is anything particularly original in what I suggest. But as one who has spent some time in this particular field of medicine, I have never ceased to hope that somebody we in this country will have a Plan of our own, one that concerns every one of intimately, for we all hope one day, to be happy in our old age.

(Sri P. F. D'MELLOW)

Sir, with our eyes rivetted on that future we plan to build for the country, we are apt to overlook a problem that grows more acute every year, and one that should concern us both as citizens, and tax-payers. The problem of our Aged citizen, who thanks to advances in both preventive and curative medicine, better housing, nutrition and the rise in the general standard of living, will remain with us very longer than they used to in years gone by.

I should like to offer to our Hon'ble Minister for Health, the suggestion that he appoints a Committee on the lines of that which produced a valuable report in 1949, on behalf of the British Medical Association, a blue print for the "Care and Treatment of the Aged and Infirm" in the United Kingdom.

We are shortly to have yet another medical college and hospital in Bangalore, one for which a large sum of money has been made available from the private sector. I now ask the Government, to invite the Governing Body of the new St. John's Medical College and Hospital to accept the responsibility of undertaking comprehensive research in the subject of *Geriatrics*, and help both the State and the country to evolve a Plan of its own, one that will later allow for the establishment of geriatric departments in all our lyrger hospitals, working in co-operation with such voluntary agencies as are willing to undertake the "After care" of the "long stay geriatric patient".

MR. SPEAKER.—I am convinced that there is enormous scope for research in the peculiar ways in which diseases work out and the knowledge so gained can then be applied all over the country. Sir, I commend this for the serious consideration of Government and I hope that when he comes to reply to this debate, the Hon'ble Minister for Health will find it possible to hold out some such hope and promise to the increasingly large population of the Aged who have come to make their homes in the salubrious climate of Mysore State.

There remain one more point which I should like to mention, and that is while I have had no personal experience of such, I have heard from medical colleagues of their experiences in coming across many undesirable side effects and sequel in the matter of mass vaccination against small pox. My Hon'ble colleague Dr. Gowdiah appears to be aware of such instances, and I would suggest that our Public health authorities cause an enquiry into the causes, if only to ensure that the campaign for eradication of small pox does not suffer.

Before concluding I should like to touch on the decision to introduce the mid-day meals scheme in our schools.

As we are all aware, recent surveys have revealed serious protein deficiency in the children of poorer families in this State and so I hope the need to supplement this deficiency will be kept in mind. More than quantity of food comes the manner of its presentation and variation combined with scrupulous cleanliness in its preparation and our Health Department must be associated with this scheme in all its stages.

I should like to conclude with one more request. The Hon'ble Minister 12 months ago held out a hope of a hospital for aged incurables within two years. I sincerely trust that today when he replies he is going to give us an assurance that we are indeed 12 months nearer.

ಶ್ರೀ ಸಂಜೀವನಾಥ ಐಕಲ (ಸುರತ್‌ಕಲ್).—ಮಾನ್ಯ ಸಭಾಪತಿಗಳೇ, ನಾನು ಇದೇ ಮೆಡಿಕಲ್ ಡಿಮ್ಯಾಂಡಿನ ವಿಷಯದಲ್ಲಿ ಕಳೆದ ವರ್ಷ ಮಾತನಾಡುವಾಗ ಆಯುರ್ವೇದದ ಅಭಿವೃದ್ಧಿಗೆ ಆಯುರ್ವೇದ ಶಾಲೆಗಳಿಗೆ, ಆಯುರ್ವೇದ ಕಾಲೇಜುಗಳಿಗೆ ಮತ್ತು ಆಯುರ್ವೇದ ಸಂಸ್ಥೆಗಳಿಗೆ ಸರ್ಕಾರದವರು ತೋರಿಸುತ್ತಿರುವ ಮಲತಾಯಿ ಧೋರಣೆಯನ್ನು ಕುರಿತು ಮಾತನಾಡಿದ್ದೆ. ಒಂದು ವರ್ಷದ ಅವಧಿಯಲ್ಲಿ ನಾವು ಹೇಳಿದಂಥಾ ಅಭಿಪ್ರಾಯಗಳನ್ನು ಸರ್ಕಾರದವರು ತಿಳಿದುಕೊಂಡು ಅದರಲ್ಲಿ ಅನುಸರಿಸಬೇಕಾದ ಯಾವ ಕಾರ್ಯಕ್ರಮಗಳಿವೆ, ಯಾವ ತಮ್ಮ ಧೋರಣೆಗಳಿವೆ ಅವುಗಳನ್ನು ಬದಲಾಯಿಸಿ ಆಯುರ್ವೇದಕ್ಕೆ ಒದಗಿಸಬೇಕಾದ ಹಣವನ್ನು ಮತ್ತು ಇತರ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿ ಆಯುರ್ವೇದ ಶಾಸ್ತ್ರಕ್ಕೆ ನ್ಯಾಯ ಸಮ್ಮತವಾಗಿ ಯಾವ ಸಹಾಯ ಸೌಲಭ್ಯಗಳು ಸಿಕ್ಕಬೇಕೋ ಅವುಗಳು ಸಿಕ್ಕಬಹುದು ಎಂದು ನಾನು ಆಶಿಸಿದ್ದೆ. ಆದರೆ ಈ ಒಂದು ವರ್ಷದ ಅವಧಿಯಲ್ಲಿ ಈ ಆಯುರ್ವೇದ ಶಾಸ್ತ್ರದಬಾಬಗೆ ಸರ್ಕಾರದವರು ಮಾಡಿರತಕ್ಕ ಸಹಾಯ ಸೌಲಭ್ಯಗಳನ್ನು ನೋಡಿದರೆ ಮಲತಾಯಿ ಧೋರಣೆ ಹೆಚ್ಚಾಗಿದೆ. ಯಾವ ರೀತಿಯಲ್ಲೂ ಅದನ್ನು ನಿವಾರಣೆ ಮಾಡಲು ಪ್ರಯತ್ನಿಸಿರುವಂಥ ಅಂಶಗಳು ಕಂಡು ಬರುವುದಿಲ್ಲ. ಈ ಆಯುರ್ವೇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಆಕ್ಟನ್ನು ತಯಾರಿಸಿ ಅದರಲ್ಲಿ ಈ ಆಯುರ್ವೇದದ ಅಭಿವೃದ್ಧಿಗೆ ಬೇಕಾದಂಥ ಅನೇಕ ಸವಲತ್ತುಗಳನ್ನು ಸೂಚಿಸಲಾಗಿದೆ. ಆ ಆಕ್ಟಿನಲ್ಲಿರುವ ಅನೇಕ ಸವಲತ್ತುಗಳನ್ನು ಸರ್ಕಾರ ಜಾರಿಗೆ ತರುವುದರಲ್ಲಿ ತುಂಬಾ ಅಸಮರ್ಥನೀಯವಾಗಿದೆ. ಆಯುರ್ವೇದ ಶಾಸ್ತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ಬೋರ್ಡನ್ನು ನೇಮಿಸಬೇಕೆಂದು ಆ ಶಾಸನದಲ್ಲಿ ಸೂಚಿಸಿದೆ. ಇಲ್ಲಿಯ ತನಕ ಆ ಬೋರ್ಡನ್ನು ನೇಮಿಸುವ ಯಾವ ಒಂದು ಕಾರ್ಯಕ್ರಮವನ್ನೂ ಸರ್ಕಾರದವರು ಕೈಗೊಂಡಿಲ್ಲ. ಈ ಆಯುರ್ವೇದದ ಬಗ್ಗೆ ಡೈರೆಕ್ಟರ್ ಆಫ್ ಆಯುರ್ವೇದ ಮೆಡಿಸಿನ್ ಎಂದು ಒಂದು ಪ್ರತ್ಯೇಕವಾದ ಪೋಸ್ಟನ್ನು ಮಾಡಬೇಕೆಂದು ಶಾಸನದಲ್ಲಿ ಸೂಚಿಸಿದೆ. ಅದನ್ನು ಸಹ ಸರ್ಕಾರದವರು ಈ ತನಕ ಮಾಡಿಲ್ಲ. ಒಬ್ಬ ಪ್ರತ್ಯೇಕ ಆಯುರ್ವೇದ ಡೈರೆಕ್ಟರನ್ನು ಇದುವರೆಗೂ ನೇಮಿಸಿಲ್ಲ. ಇನ್ನು ಆಯುರ್ವೇದ ಡಿಸ್‌ಪೆನ್ಸರಿಗಳ ವಿಷಯದಲ್ಲಿ ಹೇಳುವುದಾದರೆ ಸರ್ಕಾರದವರು ನಡೆಸುತ್ತಿರುವ ಆಯುರ್ವೇದ ಆಸ್ಪತ್ರೆಗಳಲ್ಲಿ ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಸರ್ಕಾರದವರು ಏತಕ್ಕೆ ಈ ರೀತಿಯಲ್ಲಿ ಬೇಜವಾಬ್ದಾರಿಯಿಂದ ಈ ಬಾಬನ್ನು ನೋಡುತ್ತಿದ್ದಾರೋ ಎಂದು ಮನಸ್ಸಿಗೆ ಖೇದವಾಗುತ್ತಿದೆ.

ನಮ್ಮ ಪ್ರಾಂತ್ಯದಲ್ಲಿ ಅನೇಕ ಆಯುರ್ವೇದ ಡಿಸ್‌ಪೆನ್ಸರಿಗಳು ಇವೆ. ಒಂದೆರಡು ಆಯುರ್ವೇದ ಹಾಸ್ಪಿಟಲ್ಲುಗಳಿವೆ, ಒಂದು ಆಯುರ್ವೇದ ಕಾಲೇಜಿದೆ. ಮೈಸೂರಿನಲ್ಲಿರುವಂತೆ ಒಂದು ಆಯುರ್ವೇದ ಕಾಲೇಜು (School of Indian Medicine) ಇಲ್ಲಿದೆ, ಈ ಪದ್ಧತಿಯನ್ನು ಕಲಿಸಲಿಕ್ಕೆ ಬೇಕಾದ ಅನುಕೂಲತೆಗಳಿಲ್ಲ; ಕಟ್ಟಡಗಳೂ ಇಲ್ಲ; ಕಲಿಸಲಿಕ್ಕೆ ಬೇಕಾದ equipmentsಗಳು ತುಂಬ ಕಡಿಮೆ ಇವೆ. ಕೇವಲ ಯಾವುದೇ ಒಂದು ಪುರಾತನ ಸಂಪ್ರದಾಯಕ್ಕೆ ಕಟ್ಟುಬಿದ್ದು, ನಮ್ಮ ಪಾಲಿಗೆ ಇದು ಬಂದುಬಿಟ್ಟಿದೆ, ಅನುಭವಿಸೋಣ ಅನ್ನುವಹಾಗಿದೆ; ಕೆಳಗಡೆ ನೀರಿನಿಂದಲೇ ಸಂತೃಪ್ತಿಗೊಳ್ಳಲಿ ಎಂದು ಸರ್ಕಾರ ಭಾವಿಸಿಕೊಂಡಹಾಗಿದೆ. ಬಜೆಟ್ಟಿನಲ್ಲಿ ಆಯುರ್ವೇದಕ್ಕೆ ಇಟ್ಟಿರುವ ಹಣ ನೋಡಿದರೆ ಈ ರೀತಿ ನಡೆದಿದೆ ಎಂದು ಕಾಣುತ್ತದೆ.

2.00 P.M.

ಆಯುರ್ವೇದ ಪದ್ಧತಿಯಿಂದ ಚಿಕಿತ್ಸೆ ಹೊಂದುವಷ್ಟು, ಗುಣವಾಗುವಷ್ಟು ಮಂದಿ, ಅಲೋಪತಿಯಲ್ಲಿ ಇಲ್ಲ. ನಮ್ಮ ದುರಾದೃಷ್ಟವೇನೋ; ಹೆಲ್ತ್ ಮಿನಿಷ್ಟರಾಗುವಂಥವರೆಲ್ಲಾ ಅಲೋಪತಿ ಡಾಕ್ಟರೇ ಆಗಿದ್ದಾರೆ, western system of medicine ಕಲಿತಂಥವರೇ ಆಗಿದ್ದಾರೆ. ಅಲೋಪತಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರೇ ಹೆಲ್ತ್ ಮಿನಿಸ್ಟರುಗಳಾಗಿರುವುದರಿಂದ ಆಯುರ್ವೇದ ಪದ್ಧತಿಯ, ಸಂಸ್ಕೃತಿಯ ಜೀವನದಲ್ಲಿ ಒಂದು ಹೊಸ ಕ್ರಾಂತಿಯನ್ನು ಹುಟ್ಟಿಸಲು ಸಾಧ್ಯವಾಗಿಲ್ಲ. ಆಯುರ್ವೇದ ಪದ್ಧತಿಯ ಗಂಧವೇ ಗೊತ್ತಿಲ್ಲದವರು ಈ ಇಲಾಖೆಯ ಮಂತ್ರಿಗಳಾಗುವುದರಿಂದ ಸ್ವಾಭಾವಿಕವಾಗಿ ಈ ಪದ್ಧತಿಗೆ ಪ್ರೋತ್ಸಾಹ ಕೊಡದಂಥ ಮನಸ್ಸು ಉತ್ಪನ್ನವಾಗುತ್ತದೆ.

ಆಯುರ್ವೇದ ಪದ್ಧತಿ ಕೇವಲ ಒಂದು ಔಷಧಿ, ಮಾತ್ರೆ, ಕಷಾಯ ಕೊಡುವ system ಅಲ್ಲ. ಅದು ಒಂದು science of life; ಜೀವಂತ ಶಾಸ್ತ್ರ ತಿಳಿಸುವ ದೊಡ್ಡ ಶಾಸ್ತ್ರ. ಆ ಶಾಸ್ತ್ರದಲ್ಲಿ ನಮ್ಮ

(ಶ್ರೀ ಸಂಜೀವನಾಥ ಐಕಳ)

ದೇಶವ ಸಂಸ್ಕೃತಿ ಪರಂಪರೆಯಾಗಿ ಬೆಳೆದ ಕೊಂಡು ಬಂದಿದೆ. ಈ ಪದ್ಧತಿಗೆ ಅಂಥ ದೊಡ್ಡ ಪರಂಪರೆಯಾದ ಹಿನ್ನೆಲೆ ಇರುತ್ತದೆ. ಸರ್ಕಾರ ಈ ಪದ್ಧತಿಗೆ ಮಲತಾಯಿ ಧೋರಣೆ ತೋರಿಸುತ್ತಲೇ ಬೆಳೆದು ಕೊಂಡು ಬಂದಿದೆ. ಈ ಒಂದು ಪದ್ಧತಿಯಿಂದ ನಮ್ಮ ದೇಶದ ಹಳ್ಳಿಗಳಲ್ಲಿರುವ ಬಹು ಜನರಿಗೆ ಪ್ರಯೋಜನ ದೊರಕಬೇಕಾದರೆ ಸರ್ಕಾರ ಅದಕ್ಕೆ ಪ್ರೋತ್ಸಾಹ ಕೊಟ್ಟು ಅದನ್ನು ಬೆಳೆಸಬೇಕು. ಅದರಿಂದ ಭಯದ ರೀತಿಯಲ್ಲಿ ಚಿಕಿತ್ಸೆ ಪಡೆಯುವ ಅಗತ್ಯವಿಲ್ಲ. ಈ ಪದ್ಧತಿಯ ಬಗ್ಗೆ ಆ ಅಭಿಪ್ರಾಯವಿದ್ದರೆ, ಹಾಗೆಯೇ ತೀರ್ಮಾನ ತೆಗೆದುಕೊಂಡು ಈ ಪದ್ಧತಿಯ ಶಾಲೆಗಳನ್ನೂ, ಹಾಸ್ಪಿಟಲುಗಳನ್ನೂ, ಕಾಲೇಜುಗಳನ್ನೂ ಮುಚ್ಚಿಬಿಡಿರಿ. ಈ ರೀತಿ ಅರ್ಧಂಬರ್ಧ ಸಹಾಯ ಮಾಡಿ, ಈ ಪದ್ಧತಿಯಿಂದ ಚಿಕಿತ್ಸೆ ಕೊಡಿಸಿದರೆ ಉಪಯೋಗವಿಲ್ಲ ಎಂಬ ಅಪವಾದವನ್ನು ಹೊರಿಸುವುದು ಸರಿಯಲ್ಲ. ಹಲವರು ಹೇಳಿದಹಾಗೆ, ಎರಡು ಮಕ್ಕಳಿದ್ದರೆ, ಒಂದು ಮಗುವಿಗೆ ಬೇಕಾದ ತಿಂಡಿ ತೀರ್ಥಗಳನ್ನು ಕೊಟ್ಟು ಪೋಷಣೆಮಾಡಿ ಇನ್ನೊಂದು ಮಗುವಿಗೆ ಏನೂ ಆಧಾರ ಸೌಕರ್ಯ ಕೊಡದೆ, "ನೋಡಿ, ಈ ಅಲೋಪತಿ ಮಗು ಹೇಗೆ ಪುಷ್ಟಿಯಾಗಿ ಬೆಳೆಯುತ್ತದೆ, ಅದೇ ಆಯುರ್ವೇದ ಮಗು ಕ್ಷೀಣವಾಗಿದೆ" ಎಂದು ಹೇಳುವುದು ಯೋಗ್ಯ ಸಾಮ್ಯ (comparison) ಅಲ್ಲ. ಸರ್ಕಾರದವರು ಆಯುರ್ವೇದ ಪದ್ಧತಿಗೆ ಇಷ್ಟರವರೆಗೆ ತೋರಿಸಿದ ಧೋರಣೆಯನ್ನು ಮುಂದಕ್ಕೆ ತಿದ್ದಿಕೊಂಡು ಅದಕ್ಕೂ ಯೋಗ್ಯ ರೀತಿಯಲ್ಲಿ ಬೆಳೆಯುವಂತೆ ಅನುಕೂಲ ಮಾಡಿ ಕೊಡಬೇಕೆಂಬುದು ನನ್ನ ಆಸೆ.

ಇನ್ನು ಆಯುರ್ವೇದ ಪದ್ಧತಿಯನ್ನು ಪ್ರಾಕ್ಟೀಸ್ ಮಾಡತಕ್ಕಂಥ ಅನೇಕ ಪಂಡಿತರುಗಳ ಅವಸ್ಥೆ ಬಹಳ ಬೇಸರಕರವಾಗಿದೆ. ಅವರು ಮಾರುವಂಥ, ತಯಾರಿಸುವಂಥ ಭಸ್ಮ, ಇತರ ಮಾತ್ರೆಗಳಿಗೆ, ರಸಾಯನಕ್ಕೆ ಲೆಕ್ಕ ಇಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ. ಇದರಿಂದ ಈ ಪಂಡಿತರುಗಳಿಗೆ ಬಹಳ ಕಠಿಣ ಸನ್ನಿವೇಶ ಒದಗಿದೆ. ಹಳ್ಳಿಗಳಲ್ಲಿ ವಂಶಪಾರಂಪರ್ಯವಾಗಿ ಈ ಆಯುರ್ವೇದ ಚಿಕಿತ್ಸೆಯನ್ನು ನಡೆಸಿಕೊಂಡು ಬಂದಿರುವವರೂ ಪಂಡಿತರುಗಳ ಮೇಲೆ ಇಂಥ ಒಂದು ಕಷ್ಟಕರವಾದ ಆಜ್ಞೆಯನ್ನು ಹಾಕುವುದು ತಪ್ಪು. "ಅಷ್ಟರಿಷ್ಟ"ದಲ್ಲಿ, ಯಾವವಿಧದಲ್ಲಿಯೂ ಪ್ರೊಹಿಬಿಷನ್ನಿಗೆ ವಿರುದ್ಧವಾದ ಆಲ್ಕೋಹಾಲುಗಳು ಇರುವುದಿಲ್ಲ. ಆದರೆ ನಮ್ಮ ಸರ್ಕಾರದವರು ಈ "ಅಷ್ಟರಿಷ್ಟ"ದಲ್ಲಿ ಆಲ್ಕೋಹಾಲ್ ಇದೆಯೆಂದು ತಿಳಿದುಕೊಂಡು ಇದನ್ನು ತಯಾರಿಸುವಂಥವರು ಲೆಕ್ಕ ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆ, ಇದರಿಂದ ಪಂಡಿತರೊಳಗೆ ಬಹಳ ದೊಡ್ಡದಾದ ಕಷ್ಟವಾಗಿದೆ. ಆ ಔಷಧಿ ಮೇಲೆ ಹಾಕಿರುವ ಆಜ್ಞೆ ಬಹಳ ಅನ್ಯಾಯ.

ಅನೇಕ ಕಡೆಗಳಲ್ಲಿ ಹಳ್ಳಿಗಳಲ್ಲಿ ಆಯುರ್ವೇದ ಪಂಡಿತರುಗಳು, ಪಾಶ್ಚಾತ್ಯ ಪದ್ಧತಿಯಲ್ಲಿ ಗುಣವಾಗದ ತುಂಬಾ ಭಯಂಕರವಾದ cronic case ಗಳನ್ನು, ಗುಣ ಮಾಡುವುದರಲ್ಲಿ ಹೆಸರು ಪಡೆದಿದ್ದಾರೆ. ಇಂಥ ಎಷ್ಟೋ ಪಂಡಿತರುಗಳು ಹಳ್ಳಿಗಳಲ್ಲಿ ಇರುತ್ತಾರೆ. ಈಗ ಸರ್ಕಾರದವರು ಅವರಮೇಲೆ ಹೊರಿಸಿರುವ ಆಜ್ಞೆಯಿಂದ ಬಹಳ ತೊಂದರೆಯಾಗಿ, ದೊಡ್ಡ ದೊಡ್ಡ ಆಯುರ್ವೇದ ಪಂಡಿತರುಗಳು practice ಮಾಡಲಿಕ್ಕೆ ಅನುಕೂಲವಾಗದೆ ಅವರುಗಳಿಂದ ಜನಗಳಿಗೆ ದೊರಕುತ್ತಿದ್ದ ಯೋಗ್ಯ ಸಹಾಯವು ತಪ್ಪಿಹೋಗುತ್ತದೆ. ಇನ್ನು ಮುಂದಾದರೂ ಆಯುರ್ವೇದ ಪದ್ಧತಿ ಬದುಕಿಕೊಳ್ಳಬೇಕಾದರೆ, ಉಳಿಯಬೇಕಾಗಿದ್ದರೆ, ಹಳ್ಳಿಗಾಡಿನ ಜನರಿಗೆ ಅವರಿಂದ ಚಿಕಿತ್ಸೆ ಸಿಗಬೇಕಾಗಿದ್ದರೆ, ಈ ಪಂಡಿತರುಗಳ ಸಂಸ್ಕೃತಿ ಶಕ್ತಿ ಬೆಳೆಯಲು ಅವಕಾಶ ಕೊಟ್ಟು, ಈ ಪದ್ಧತಿಗೆ ಯೋಗ್ಯವಾದ ಹಣ ಸಹಾಯವಾಗಬೇಕು ಪಾಶ್ಚಾತ್ಯ ಪದ್ಧತಿಗೆ 100 ರೂಪಾಯಿ ಖರ್ಚು ಮಾಡಿದರೆ, ಆಯುರ್ವೇದ ಡಿಸ್‌ಪೆನ್ಸರಿಗಳಿಗೆ, ಹಾಸ್ಪಟಲುಗಳಿಗೆ, ಕಾಲೇಜುಗಳಿಗೆ ಅದರ ಶೇಕಡ ಮೂರರಷ್ಟು ಖರ್ಚು ಮಾಡುತ್ತೀರೆಂದರೆ, ಆಯುರ್ವೇದ ಪದ್ಧತಿ ಮೇಲೆ ಎಷ್ಟು ಕಮ್ಮಿ ಹಣ ಖರ್ಚು ಮಾಡುತ್ತೀರಿ! ಇಷ್ಟು ಕಮ್ಮಿ ಖರ್ಚು ಮಾಡಿದರೆ ಆಯುರ್ವೇದ ಪದ್ಧತಿ ಯಾವ ರೀತಿಯಲ್ಲಿ ಬೆಳೆಯುತ್ತದೆ!

ಈ ಡಿಪಾರ್ಟ್‌ಮೆಂಟಿನಲ್ಲಿರುವ ಲೋಪ ದೋಷಗಳನ್ನು ಕುರಿತು ಮಾತನಾಡುವುದಾದರೆ, ಒಂದು ವಿಷಯ ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಚಾಮರಾಜ ಪೇಟೆಯಲ್ಲಿ ನರ್ಸುಗಳಿಗಾಗಿ ಹೆಚ್ಚು ಕಡಿಮೆ 340 ಕೋಣೆಗಳನ್ನೊಳಗೊಂಡ 2-3 ಕಟ್ಟಡಗಳನ್ನು ಕಟ್ಟಿದ್ದಾರೆ. ಈ ಕಟ್ಟಡಗಳ ಕೆಲಸ ಪೂರ್ತಿಯಾಗಿ ಆರೇಳು ತಿಂಗಳುಗಳು ಆಯಿತು. ಎಲೆಕ್ಟ್ರಿಸಿಟಿ ಕೆಲಸ, ನೀರು ಸರಬರಾಜು ಎಲ್ಲಾ ಆಗಿದೆ. ಆದರೆ ನರ್ಸುಗಳನ್ನು ಅಲ್ಲಿಗೆ ಸ್ಥಳಾಂತರಿಸಲಿಲ್ಲ. ಅದರ ಬದಲು ಕೆಲವು ಕೋಣೆಗಳಲ್ಲಿ post-graduate ಗಳನ್ನು ನಿಲ್ಲಲು ಹೇಳಿದ್ದಾರೆ. ಕಾರಣವೇನೆಂದರೆ, ನರ್ಸುಗಳು ಅಲ್ಲಿ ಕಟ್ಟಿರುವ ಬ್ಲಾಕುಗಳು ಬಹಳ ಸಣ್ಣದಾಗಿವೆ ಎಂದು ಹೇಳಿ, ಹೋಗಲಿಕ್ಕೆ ಇಷ್ಟಪಡಲಿಲ್ಲ. ಸರ್ಕಾರದವರು ಇಂಜನಿಯರುಗಳನ್ನು consult ಮಾಡಿ ನಿರ್ಮಿಸಿದಂಥ ಇಂಥ ಕಟ್ಟಡಗಳಿಗೆ, ಅವರ ಕೈಕೆಳಗಿರುವ ನರ್ಸುಗಳು ಹೋಗುವುದಿಲ್ಲವೆಂದರೆ ಅರ್ಥವೇನು! ನರ್ಸುಗಳಿಗಾಗಿ ಅನುಕೂಲವಾಗು

ವಂಥ ತಯಾರಿಸಿದ ಕಟ್ಟಡವನ್ನು ನರ್ಸುಗಳಮೇಲೆ ಸರ್ಕಾರದವರು ಹೊರಿಸಲು ಅಸಮರ್ಥರಾದುದು ಬೇಸರಕರವಾದ ಸಂಗತಿ.

ತಾಲ್ಲೂಕು ಬೋರ್ಡು ಆಸ್ಪತ್ರೆಗಳ ವಿಷಯ ಈ ಮಾನ್ಯ ಸಭೆಯಲ್ಲಿ ಮೊನ್ನೆ ಸದಸ್ಯರು ಮಾತನಾಡುತ್ತಾ, ಅಲ್ಲಿ ಇರುವಂಥ ಔಷಧಗಳ ಅನಾನುಕೂಲತೆಗಳನ್ನು ಸರಿಪಡಿಸದೆ ಇರುವುದರಿಂದ ಅನೇಕ ರೀತಿಯ ತೊಂದರೆಗಳಾಗುತ್ತವೆ ಎಂದು ಹೇಳಿದರು. ಇಂಥ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯಕೀಯ ಅಧಿಕಾರಿಗಳು ಯಾರಿದ್ದಾರೆಯೋ ಅವರಿಗೆ ಸಲ್ಲುತ್ತಾ ಇರುವಂಥ ವೇತನ ಬಹಳ ಕೆಳಮಟ್ಟದ್ದು ಇದೆ. ಅಂಥ ಕಡೆಗಳಲ್ಲಿ ಕೆಲಸ ಮಾಡಲು ಡಾಕ್ಟರುಗಳು ನಿಜವಾಗಿ ಅಪೇಕ್ಷಿಸುವುದಿಲ್ಲ ಎಂದು ಈ ಸಭೆಯ ತುಂಬ ಸದಸ್ಯರು ಹೇಳಿದರು. ಅದು ನಿಜ: ಹಳ್ಳಿಗಾಡಿನ ಆಸ್ಪತ್ರೆಗಳಿಗೆ ಅಥವಾ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿರುವ ಆಸ್ಪತ್ರೆಗಳಿಗೆ ಡಾಕ್ಟರುಗಳು ಹೋಗಲಿಕ್ಕೆ ಒಡಂಬಡುವುದಿಲ್ಲ. ಅಲ್ಲಿ ಕೊಡತಕ್ಕ ವೇತನ ಮತ್ತು ಇತರ ಸೌಲಭ್ಯಗಳು ಬಹಳ ಕಡಿಮೆಯಾಗಿವೆ. ಈ ವೇತನ ನಿರ್ಣಯದಲ್ಲಿ ಒಂದು ಸುಧಾರಣೆಯನ್ನು ಮಾಡಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ವಿಚಾರದ ಬಗ್ಗೆ ಸರ್ಕಾರದವರ ಕ್ರಮವನ್ನು ಕುರಿತು ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಯೋಜನೆಯ ತಾತ್ವಿಕ ಹಿನ್ನೆಲೆಯನ್ನು ನಾನು ಈಗ ಚರ್ಚಿಸುವುದಿಲ್ಲ. ಇವತ್ತು ಸರ್ಕಾರದವರು ಈ ವಿಚಾರದಲ್ಲಿ ತೆಗೆದುಕೊಳ್ಳುತ್ತಿರುವ ಕಾರ್ಯಕ್ರಮದ ದೃಷ್ಟಿಯನ್ನು ನೋಡುವುದಾದರೆ ಈ ಫ್ಯಾಮಿಲಿ ಪ್ಲಾನಿಂಗ್ ಅಥವಾ ಕುಟುಂಬ ನಿಯಂತ್ರಣ ಯೋಜನೆಯನ್ನು ಕಾರ್ಯಗತ ಮಾಡುವುದೇ ಒಂದು ದೊಡ್ಡ ಕಾರ್ಯಕ್ರಮ ಸರ್ಕಾರದವರಿಗೆ ಆಗಿ ಹೋಗಿದೆ. ನಾವು ಒಂದು ಗಾದೆಯನ್ನು ಆಗಾಗ್ಗೆ ಕೇಳುತ್ತಿರುತ್ತೇವೆ. ಅದೇನೆಂದರೆ "ಉಂಟು ಮಾಡಿದ ದೇವರು ಊಟಕೊಡದೆ ಇರರಾರ" ಎಂದು ಮಕ್ಕಳು ಎಷ್ಟಾದರೂ ಆಗಲಿ. ಉದಾಹರಣೆಗಾಗಿ ಮನುಷ್ಯನಿಗೆ ಒಂದು ಬಾಯಿ ಇದೆ ಎರಡು ಕೈಗಳಿವೆ ಎರಡು ಕೈಗಳಿಗೆ 10 ಬೆರಳುಗಳಿವೆ. ಹಾಗೆ ದೇಶದಲ್ಲಿ ಸಂತಾನ ಜಾಸ್ತಿಯಾದರೆ ಅದರಿಂದೇನೂ ತೊಂದರೆಯಾಗಲಿಕ್ಕಿಲ್ಲ. ಆದರೆ ಸರ್ಕಾರದವರು ಏನೋ ಒಂದು ಆಧಾರದ ಮೇಲೆ ಕುಟುಂಬ ನಿಯಂತ್ರಣ ಯೋಜನೆಯನ್ನು ಜಾರಿ ಮಾಡಬೇಕೆಂದು ಒಂದು ಕಾಯಿದೆಗೆ ಬಲಬಿದ್ದು ಈ ಯೋಜನೆಯನ್ನು ಅಪ್ರಾಸಂಗಿಕವಾದ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ. ಇದರಲ್ಲಿ ಇತ್ತೀಚೆಗೆ ದುರ್ನೀತಿ ವ್ಯವಹಾರ ಜಾಸ್ತಿಯಾಗಿದೆ. ಇದಕ್ಕೆ ಬೇಕಾದ ಸೆಮಿನಾರ್‌ಗಳನ್ನು, ವಿಚಾರ ಗೋಷ್ಠಿಗಳನ್ನು, ಚರ್ಚಾ ಕೂಟಗಳನ್ನು ಮತ್ತು ಸ್ಟಡಿ-ಗ್ರೂಪ್‌ಗಳನ್ನು ಮಾಡಿಕೊಂಡು ಬೇರೆ ಹೋಗುತ್ತಿದ್ದಾರೆ. ಕುಟುಂಬ ನಿಯಂತ್ರಣ ಯೋಜನೆಗೆ ಈ ವ್ಯವಸ್ಥೆಗಳನ್ನು ಮಾಡುವುದರಲ್ಲೂ ತುಂಬಾ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).— ಬೇಜವಾಬ್ದಾರಿಯಿಂದಲ್ಲ; ಜವಾಬ್ದಾರಿಯಿಂದಲೇ ಅವನ್ನೆಲ್ಲಾ ಮಾಡುತ್ತಿದ್ದೇವೆ.

ಶ್ರೀ ಸಂಜೀವನಾಥ ಐಕಳ.—ಅಷ್ಟು ಬೇಜವಾಬ್ದಾರಿಯಿಂದ ಇವನ್ನೆಲ್ಲಾ ಮಾಡಲೇ ಬಾರದು. ಇದು ನಿಜವಾಗಿ ದುರ್ನೀತಿಗೆ ಎಡೆ ಕೊಟ್ಟ ಹಾಗಾಗುತ್ತದೆ. ಖಂಡಿತವಾಗಿ ಇದರ ಅವಶ್ಯಕತೆಯಿಲ್ಲ. ಈ ವಿಷಯವನ್ನು ಆಯಾ ವ್ಯಕ್ತಿಗಳಿಗೇ ಬಿಡುವುದು ಒಳ್ಳೆಯದು. ಕುಟುಂಬ ನಿಯಂತ್ರಣದ ಯೋಜನೆ ಬಗ್ಗೆ ಪ್ರಚಾರ ಮಾಡಬೇಕೆಂದು ಹೋಗುವುದು ಬಹಳ ಸಣ್ಣ ಕೆಲಸ. ಮುಖ್ಯವಾಗಿ ಇದನ್ನು ವ್ಯಕ್ತಿಯ ವಿಚಾರಕ್ಕೇ ಬಿಡಬೇಕು ಇನ್ನೂ ಕೆಲವು ಸಣ್ಣ ಸಂಘ ಸಂಸ್ಥೆಗಳಿವೆ. ಉದಾಹರಣೆಗೆ ಹೇಳುವುದಾದರೆ ಸೋಷಿಯಲ್ ವೆಲ್‌ಫೇರ್, ಭಾರತ ಸೇವಾ ಸಮಾಜ—ಇಂತಹುಗಳಿವೆ. ಇಂತಹ ಸಣ್ಣ ಸಾಮಾಜಿಕ ಕಾರ್ಯಕ್ಷೇತ್ರ ಸಂಘಗಳಿಗೆ ಆ ವಿಚಾರಗಳನ್ನು ಬಿಡಬೇಕು. ಸರ್ಕಾರದವರು ಇದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆಯುವುದು, ಅಲ್ಲಿ ಸಾಕಷ್ಟು ಸಿಬ್ಬಂದಿಯನ್ನು ನೇಮಿಸಿಕೊಂಡು ಅವರಿಗೆ ಕಾಲ ಪರಿಸ್ಥಿತಿಗೆ ಅನುಗುಣವಾದ ಸಂಬಳವನ್ನು ಕೊಟ್ಟು, ಸರ್ಕಾರದ ಹಣವನ್ನು ನಷ್ಟ ಮಾಡಿಕೊಂಡು ದುರ್ನೀತಿ ಪ್ರಚಾರ ಮಾಡುವುದಕ್ಕೆ ಖರ್ಚು ಮಾಡುವುದು ನ್ಯಾಯವಾದುದಲ್ಲ. ಈ ಕುಟುಂಬ ನಿಯಂತ್ರಣದ ಯೋಜನೆ ಪ್ರಚಾರ ವಿನಿದೆ ಇದನ್ನು ಸೆಮಿನಾರ್ ಮೂಲಕ ವಿಶೇಷವಾಗಿ ಮಾಡದೆ ಕೇವಲ ಸಣ್ಣ ಸಂಘ ಸಂಸ್ಥೆಗಳೇ ಈ ಯೋಜನಾ ಕ್ರಮವನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಂಡು ಹೋಗುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎಷ್ಟೋ ಆಸ್ಪತ್ರೆಗಳಲ್ಲಿ ಆಯುರ್ವೇದ ಕಾಲೇಜು ನಡೆಸುವವರು ಅಲ್ಲಿ ವಿದ್ಯೆ ಕಲಿಯುವ ವಿದ್ಯಾರ್ಥಿಗಳಿಗೆ ಆ ಆಸ್ಪತ್ರೆಯಿಂದ ತಕ್ಕ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಮೈಸೂರು ಪ್ರಾಂತದಲ್ಲಿ 10-11 ಆಯುರ್ವೇದಿಕ್ ಪ್ರೈವೇಟ್ ಕಾಲೇಜುಗಳಿವೆ. ಆ ಖಾಸಗೀ ಸಂಸ್ಥೆಯವರು ತಮ್ಮ ವಿದ್ಯಾರ್ಥಿಗಳನ್ನು ಅಂದರೆ ಅಲ್ಲಿ ಈ ವಿದ್ಯೆಯನ್ನು ಕಲಿಯುವ

(ಶ್ರೀ ಸಂಜೀವನಾಥ ಐಕಳ)

ವಿದ್ಯಾರ್ಥಿಗಳಿಗೆ ಆಸ್ಪತ್ರೆಯ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ಕೇಳಿದ್ದಾರೆ. ಆದರೆ ಸರ್ಕಾರದವರು ಎಂ. ಬಿ. ಬಿ. ಎಸ್. ವಿದ್ಯಾರ್ಥಿಗಳಿಗೆ ಈ ಸೌಕರ್ಯವನ್ನು ಒದಗಿಸುತ್ತಿರುವಂತೆ ಈ ಆಯುರ್ವೇದಿಕ್ ಕಾಲೇಜು ಆಸ್ಪತ್ರೆಗಳಲ್ಲಿಯೂ ಇಂತಹ ಅನುಕೂಲತೆಗಳನ್ನು ಏಕೆ ಒದಗಿಸಬಾರದು ಎಂಬುದಾಗಿ ನಾನು ಪ್ರಶ್ನೆ ಮಾಡುತ್ತೇನೆ. ಅವರಿಗೂ ಕೂಡ ಪ್ರಾಕ್ಟಿಕಲ್ ಟ್ರೈನಿಂಗ್ ಅನುಕೂಲತೆಯನ್ನು ಸರ್ಕಾರದವರು ಕೊಡುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಮಾದಯ್ಯ ಗೌಡ (ರಾಮನಗರಂ).—ಸ್ವಾಮಿ, ನಮ್ಮ ಮುಂದಿರತಕ್ಕ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಯ ಬೇಡಿಕೆಯನ್ನು ಸ್ವೀಕರಿಸುತ್ತಾ, ಈ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗಳು ಒಂದು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಾ ಇವೆ ಯೆಂದು ಹೇಳಿ ಈ ವಿಚಾರವಾಗಿ ನಾನು ಸರ್ಕಾರದವರನ್ನು ಅಭಿನಂದಿಸಲು ಇಚ್ಛೆಪಡುತ್ತೇನೆ. ನನಗೆ ಗೊತ್ತಿರುವ ಹಾಗೆ ಸುಮಾರು 40-50 ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣವಾಗಿ ಪ್ರತಿವರ್ಷವೂ ಪ್ಲೇಗು, ಕಾಲರಾ, ವಾಂತಿ ಭೇದಿ ಇತ್ಯಾದಿ ರೋಗಗಳಿಗೆ ಸಾವಿರಾರು ಜನ, ಲಕ್ಷಾಂತರ ಜನ ತುತ್ತಾಗುತ್ತಿದ್ದರು. ಅಂಥಾದ್ದನ್ನೆಲ್ಲಾ ಈ ದಿವಸ ತಡೆಹಿಡಿದು ನಿಲ್ಲಿಸಿದ್ದಾರೆ. ಈಗ ಸಾಂಕ್ರಾಮಿಕ ಜಾಡ್ಯಗಳು ದೇಶದಲ್ಲಿ ಕೇಳುವುದೇ ದುಸ್ತರವಾಗಿದೆ. ಇದಕ್ಕೋಸ್ಕರವಾಗಿ ಸರ್ಕಾರದವರು ಹೆಚ್ಚು ಹೆಚ್ಚಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಮತ್ತು ತುಂಬಾ ಮೆಹನತ್ತು ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಅಭಿನಂದನೀಯವಾದ ವಿಚಾರ. ಇಷ್ಟು ವಿಷಯಗಳನ್ನು ಹೇಳಿ ಕೆಲವು ಸಲಹೆಗಳನ್ನು ಈ ಇಲಾಖೆಗೆ ನಾನು ಕೊಡಲು ಇಚ್ಛಿಸುತ್ತೇನೆ. ಕೆಲವು ವರ್ಷಗಳ ಹಿಂದೆ ನಾನು ಡೆನ್ಮಾರ್ಕ್ ದೇಶಕ್ಕೆ ಹೋಗಿದ್ದೆ. ಅಲ್ಲಿ ಒಂದು ಆಸ್ಪತ್ರೆಗೆ ಹೋಗಬೇಕಾದ ಪ್ರಸಂಗ ಬಂತು. ನನ್ನ ಜೊತೆಯಲ್ಲಿದ್ದ ಸ್ನೇಹಿತರು ಆಮಶಂಕೆಯಿಂದ ಆಸ್ಪತ್ರೆಗೆ ಸೇರಬೇಕಾಯಿತು. ಅವರು ಅಲ್ಲಿ ಅಡ್ಮಿಟ್ ಆದಮೇಲೆ ನಾನು ಅವರನ್ನು ನೋಡುವುದಕ್ಕೆ ಆಗಾಗ್ಗೆ ಹೋಗುತ್ತಿದ್ದೆ. ಅಲ್ಲಿನ ವೈದ್ಯರು ಅವರಲ್ಲಿದ್ದಂಥ ಒಂದು ದಯಾಪೂರಿತವಾದ ಹೃದಯದಿಂದ ಕಾಯಿಲೆಗಳನ್ನು ವಾಸಿ ಮಾಡುತ್ತಿದ್ದರೋ ಅಥವಾ ಔಷಧಿಗಳನ್ನು ಕೊಟ್ಟು ವಾಸಿ ಮಾಡುತ್ತಿದ್ದರೋ ನನಗೆ ಗೊತ್ತಾಗಲಿಲ್ಲ. ಅಲ್ಲಿನ ವೈದ್ಯರೆಲ್ಲರೂ ರೋಗಿಗಳ ವಿಚಾರದಲ್ಲಿ ಅಷ್ಟು ದಯಪೂರಿತವಾಗಿ ವರ್ತಿಸುತ್ತಿದ್ದಾರೆ. ಕಾಯಿಲೆಯವರನ್ನು ಕಂಡರೆ ತುಂಬಾ ಪ್ರೀತಿಯಿಂದ ನೋಡುತ್ತಿದ್ದರು. ಬಹುಶಃ ಅದರಿಂದಲೇ ಅವರ ಕಾಯಿಲೆಗಳು ವಾಸಿಯಾಗುತ್ತಿತ್ತೋ ಏನೋ ಎಂದು ನನಗನ್ನಿಸಿತು. ಬಹುಶಃ ಮಂತ್ರಿಗಳು ಈ ಮಾತನ್ನು ಒಪ್ಪಲಾರರು ಎಂಬುದಾಗಿ ನಾನು ಅಂದುಕೊಂಡಿದ್ದೇನೆ. ಎಲ್ಲಾ ಕಾಯಿಲೆಗಳಿಗೆ ನಿಜವಾಗಿ ಅವರ ಪ್ರೇಮ ಪೂರಿತವಾದ ಉಪಚಾರವೇ ಉತ್ತಮ ಔಷಧಿಯೆಂಬುದಾಗಿ ನಾನು ಅಂದುಕೊಂಡೆ. ಅಲ್ಲಿನ ವೈದ್ಯರುಗಳು ಹಸನ್ಮುಖರಾಗಿ, ಪ್ರೇಮ ಪೂರಿತವಾದ ಮಾತುಕತೆಗಳನ್ನು ರೋಗಿಗಳೊಡನೆ ಆಡುತ್ತಿದ್ದುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತಿತ್ತು.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಕವಿ ವರ್ಣನೆ ಮಾಡಿದಂತೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರಲ್ಲಾ!

ಶ್ರೀ ಟಿ. ಮಾದಯ್ಯ ಗೌಡ.—ಆಸ್ಪತ್ರೆಯಲ್ಲಿ ಕಾಯಿಲೆ ಇದ್ದಂಥ ನನ್ನ ಸ್ನೇಹಿತರು 8 ದಿವಸಗಳ ಮೇಲೆ ಸಂಪೂರ್ಣವಾಗಿ ಗುಣ ಹೊಂದಿ ಹೊರಗಡೆ ಬರುವಾಗ ಇನ್ನು ನಾಲ್ಕು ದಿವಸಗಳು ಆಸ್ಪತ್ರೆಯಲ್ಲಿ ಇದ್ದು ಬರಬೇಕು ಎಂದು ನನಗೆ ಹೇಳಿದರು. ಅಂದರೆ ಅಲ್ಲಿನ ಆಸ್ಪತ್ರೆಯಲ್ಲಿ ಎಷ್ಟರಮಟ್ಟಿಗೆ ರೋಗಿಗಳಿಗೆ ಉಪಚಾರ, ಒಳ್ಳೆಯ ಸಹವಾಸ, ಒಳ್ಳೆಯ ಔಷಧಿ ಕೊಡುತ್ತಿದ್ದರು ಎಂದು ನನಗೆ ಚೆನ್ನಾಗಿ ಅನುಭವವಾಯಿತು. ಆದರೆ ನಮ್ಮ ಆಸ್ಪತ್ರೆಯಲ್ಲಾದರೋ ನಮ್ಮ ಡಾಕ್ಟರುಗಳು ಕೇವಲ ವೈದ್ಯರಾಗಿರುವುದೇ ಅಲ್ಲದೆ ಅಲ್ಲಿನವರ ಹಾಗೆ ರೋಗಿಗಳ ಬಗ್ಗೆ ದಯಪೂರಿತರಾಗಿಯೂ ಇರಬೇಕೆಂದು ನಾನು ಆಶಿಸುತ್ತೇನೆ. ಆದ್ದರಿಂದ ನಮ್ಮ ಮೆಡಿಕಲ್ ಕಾಲೇಜುಗಳಲ್ಲಿ ಕೇವಲ ವೈದ್ಯಕೀಯ ವಿಚಾರಗಳನ್ನೇ ಹೇಳದೆ ಡಾಕ್ಟರುಗಳು ಸಂಪೂರ್ಣವಾಗಿ ಮಾನವೀಯತೆಯ ಮಾರ್ಗದಲ್ಲಿ ವರ್ತಿಸುವ ಮನೋಧರ್ಮವನ್ನು ಪಡೆಯುವಹಾಗೆ ಅವರಿಗೆ ತರಪೇತು ಮಾಡಬೇಕು ಎಂಬುದಾಗಿ ನನಗಾದರೂ ಅನ್ನಿಸುತ್ತದೆ. ಇನ್ನು ಮತ್ತೊಂದು ವಿಚಾರವನ್ನು ನಾನು ಪಾಶ್ಚಿಮಾತ್ಯ ದೇಶದಲ್ಲಿ ನೋಡಿದ್ದನ್ನು ಈ ಸಭೆಯ ಮುಂದೆ ತಿಳಿಸಲು ಅಪೇಕ್ಷಿಸುತ್ತೇನೆ. ಅಲ್ಲಿ ಕೆಲವು ಸ್ಕೂಲುಗಳಿಗೆ ನಾನು ಹೋಗತಕ್ಕ ಪ್ರಸಂಗ ನನಗೆ ದೊರಕಿತು. ಸುಮಾರು 500-1000 ವಿದ್ಯಾರ್ಥಿಗಳಿರತಕ್ಕ

ಒಂದೊಂದು ಸ್ಕೂಲಿನಲ್ಲಿ ಒಂದೊಂದು ಆಸ್ಪತ್ರೆ ಇರುತ್ತಿತ್ತು. ಅಲ್ಲಿನ ಮಕ್ಕಳನ್ನು ಅಲ್ಲಿನ ಆಸ್ಪತ್ರೆ ಡಾಕ್ಟರು ಆಗಾಗ್ಗೆ ಪರೀಕ್ಷೆ ಮಾಡಿ ಅವರಿಗೆ ತಿಳುವಳಿಕೆಯನ್ನು ಕೊಡುತ್ತಿದ್ದರು. ಅವರ ಹಲ್ಲು, ಕಿವಿ, ಮೂಗು, ಗಂಟಲು ಇತ್ಯಾದಿಗಳನ್ನು ಪರೀಕ್ಷೆ ಮಾಡಿ ಅವುಗಳಲ್ಲಿ ಏನಾದರೂ ದೋಷವಿದ್ದರೆ ಅವನ್ನು ಜಾಗ್ರತೆಯಾಗಿ ನಿವಾರಣೆ ಮಾಡುತ್ತಿದ್ದರು. ಪ್ರತಿ ಮಗುವಿಗೂ ಒಂದು ರಿಜಿಸ್ಟರ್‌ನಲ್ಲಿ ಒಂದೊಂದು ಪುಟವನ್ನು ಬಿಟ್ಟು ಇಂತಹ ದಿವಸ ಪರೀಕ್ಷೆ ಮಾಡಿದೆ ಇಂತಹ ದಿವಸ ಹೀಗಿತ್ತು ಈ ತರಹ ಎಲ್ಲಾ ಮಕ್ಕಳನ್ನು ಪರೀಕ್ಷೆ ಮಾಡಿ ತಿಳುವಳಿಕೆ ಕೊಡುತ್ತಿದ್ದರು. ಎರಡು-ಮೂರು ತಿಂಗಳಿಗೊಂದು ಸಾರಿ ಪರೀಕ್ಷೆ ಮಾಡುವುದನ್ನು ಮುಂದುವರಿಸಿಕೊಂಡು ಅವರು ಆ ದೇಶದ ಮಕ್ಕಳ ಯೋಗಕ್ಷೇಮಕ್ಕಾಗಿ ಆಗಾಗ್ಗೆ ವೈದ್ಯಕೀಯ ಪರೀಕ್ಷೆಗಾಗಿ ಅವರನ್ನು ಒಳಪಡಿಸಿ ಎಲ್ಲ ಜನಾಂಗದ ಒಂದು ಆರೋಗ್ಯಾಭಿವೃದ್ಧಿಗೆ ಎಷ್ಟರಮಟ್ಟಿಗೆ ವೈದ್ಯರು ನೆರವಾಗುತ್ತಿದ್ದುದನ್ನು ನಾನು ನೋಡಿದೆ. ನಮ್ಮ ದೇಶದಲ್ಲಿ ನಾವೂ ಕೂಡ ಮಕ್ಕಳ ವೈದ್ಯ ಪರೀಕ್ಷೆಗೋಸ್ಕರ ಫೀಸ್ ಕೊಡುತ್ತೇವೆ. ಆದರೆ ನಮ್ಮ ಮಕ್ಕಳಿಗೆ ಯಾವ ಡಾಕ್ಟರೂ ಕೂಡ ನಾಲ್ಕು ವರ್ಷಗಳಿಗೊಂದು ಸಾರಿಯಾದರೂ ಪರೀಕ್ಷೆ ಮಾಡಿದ್ದನ್ನು ನಾನು ನೋಡಲಿಲ್ಲ. ಇದು ಸರಿಯಾದುದಲ್ಲ. ನಾವು ಫೀಜು ಕಟ್ಟಿದ ಮೇಲೂ ಮಕ್ಕಳಿಗೆ ವೈದ್ಯ ಪರೀಕ್ಷೆ ನಡೆಸದೇ ಹೋದರೆ ಅದು ನ್ಯಾಯವಲ್ಲ, ಧರ್ಮವಲ್ಲ ಎನಿಸುತ್ತದೆ. ವೈದ್ಯಪರೀಕ್ಷೆಗಾಗಿ ಕೊಡತಕ್ಕ ಫೀಜು ವಿದ್ಯಾಭ್ಯಾಸದ ಇಲಾಖೆಯಲ್ಲಿ ಸಾವಿರಾರು ರೂಪಾಯಿ ವಸೂಲಾಗುತ್ತದೆ, ಇದನ್ನು ಯಾವರೀತಿ ಖರ್ಚುಮಾಡುತ್ತಾರೋ ಗೊತ್ತಿಲ್ಲ. ವೈದ್ಯ ಇಲಾಖೆಯವರು ಈ ವಿಷಯಕ್ಕೆ ಗಮನಕೊಡುವುದು ಅತ್ಯಗತ್ಯ. ಜನರ ಆರೋಗ್ಯಭಾಗ್ಯವನ್ನು ಕಾಪಾಡುವುದು ಬಹಳ ಮುಖ್ಯ. ನಮ್ಮ ಮಕ್ಕಳಿಗೆ ವಿದ್ಯೆ ಹೇಗೆ ಅವಶ್ಯಕವೋ ಹಾಗೆಯೇ ಅವರ ಆರೋಗ್ಯವೂ ಮುಖ್ಯ. ಚಿಕ್ಕವಯಸ್ಸಿನಲ್ಲಿ ಆರೋಗ್ಯವನ್ನು ಕಾಪಾಡಿಕೊಂಡರೆ, ಮುಂದಿನ ಪ್ರಜೆಗಳಾಗುವ ನಮ್ಮ ಮಕ್ಕಳು ಆರೋಗ್ಯವಂತರಾದ ದೃಢಕಾಯರಾದ ಪ್ರಜೆಗಳಾಗಿ ಬೆಳೆಯಲು ಅವಶ್ಯಕವಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಯಾರಾದರೂ ಕಾಹಿಲೆಯವರು ಹೋದರೆ ಈ ವೈದ್ಯಪದ್ಧತಿ ಆ ವೈದ್ಯಪದ್ಧತಿ ಎಂದು ಹೇಳಿ ಔಷಧವನ್ನು ಕೊಡುವುದಿಲ್ಲ. ಅವರು ಕೊಡುವುದು ಕಾಹಿಲೆ ವಾಸಿಯಾಗತಕ್ಕ ಔಷಧ. ಯಾವ ಪದ್ಧತಿಯದಾದರೂ ಆಗಿರಬಹುದು; ಅಲೋಪತಿ, ಆಯುರ್ವೇದ, ಹೋಮಿಯೋಪತಿ, ಯಾವುದಾದರೂ ಆಗಿರಬಹುದು. ಕಾಹಿಲೆ ಗುಣವಾಗಲು ಯಾವುದಾದರೇನು ? ಭಗವಂತ ಸೃಷ್ಟಿಮಾಡಿರುವುದರಲ್ಲಿ ಯಾವುದನ್ನಾದರೂ ಕಾಹಿಲೆ ಗುಣವಾಗುವುದಕ್ಕೆ ಕೊಡಬೇಕು. ನಮ್ಮ ಪದ್ಧತಿಯೇ ಸರಿ ಎಂದು ಹೇಳುವುದು ಸೂಕ್ತವಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ರೀತಿ ಹೇಳುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಕಾಹಿಲೆ ಗುಣವಾಗಲು ತಕ್ಕ ಔಷಧ ಯಾವಪದ್ಧತಿಯದಾದರೇನೋ ನನಗೆ ಅರ್ಥವಾಗುವುದಿಲ್ಲ. ಹೀಗಿರುವಾಗ ನಾವು ಕಾಲೇಜಿನಲ್ಲಿ ಇದು ಅಲೋಪತಿ, ಆಯುರ್ವೇದ, ಹೋಮಿಯೋಪತಿ ಕಾಲೇಜು ಎಂದೇಕೆ ಬೇರೆ ಬೇರೆ ವಿಭಾಗ ಇದೆಯೋ ನನಗೆ ಅರ್ಥವಾಗುವುದಿಲ್ಲ. ಅಥವಾ ಈ ವಿಚಾರದಲ್ಲಿ, ನಾನೇ ತಪ್ಪುಭಾವನೆಯನ್ನಿಟ್ಟುಕೊಂಡಿದ್ದೇನೋ ಗೊತ್ತಿಲ್ಲ; ಇದನ್ನು ಮಂತ್ರಿಗಳು ಹೇಳಬೇಕು. ಎಲ್ಲಾ ಪದ್ಧತಿಗಳಲ್ಲಿಯೂ ಅತ್ಯುತ್ತಮವಾದುದೇನಿದೆಯೋ ಅದನ್ನು ತೆಗೆದುಕೊಂಡು ಅಭ್ಯಾಸಮಾಡಿ ಏಕೆ ಉಪಯೋಗಮಾಡಿಕೊಳ್ಳಬಾರದು, ಏಕೆ ಜನರ ರೋಗಗಳನ್ನು ಗುಣಪಡಿಸಬಾರದು ಎನ್ನಿಸುತ್ತದೆ. ಆಯುರ್ವೇದಕ್ಕೆ ತಕ್ಕ ಪ್ರೋತ್ಸಾಹವಿಲ್ಲ, ಇದು ನಮ್ಮ ದೇಶದ ವೈದ್ಯ, ಇದನ್ನು ಏನಾದರೂ ಅಭಿವೃದ್ಧಿ ಮಾಡಬೇಕೆಂದು ಕೆಲವರು ಸ್ನೇಹಿತರು ಹೇಳಿದರು. ನಿಜವಾಗಿ ಆಯುರ್ವೇದದಲ್ಲಿ ಏನು ಒಳ್ಳೆಯ ಪ್ರಯೋಗವಿದೆಯೋ ಅದನ್ನು ಆದಷ್ಟು ಬೇಗ ನಾವು ಹೊಂದಿಸಿಕೊಳ್ಳಬೇಕಾಗುತ್ತದೆ. ಆಯುರ್ವೇದದ ಜೊತೆಗೆ ಬೇರೆ ವೈದ್ಯವನ್ನು ಸೇರಿಸಬಾರದೆಂದು ಕಟುಕತರವಾದ ಭಿನ್ನಾಭಿಪ್ರಾಯವಿರುವುದು ಸೂಕ್ತವಲ್ಲ. ಆಯುರ್ವೇದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಇತ್ತೀಚೆಗೆ ನಮ್ಮ ಸರಕಾರದವರೂ Council of Indian Medicines ಅವರೂ ಮಾಡಿದ್ದಾರೆ. ಅಲ್ಲಿ ಅವರು ಆಯುರ್ವೇದ, ಯುನಾನಿ, ಹೋಮಿಯೋಪತಿ ಪದ್ಧತಿಗಳಿಗೆ ಗಮನಕೊಟ್ಟು ಯೋಚನೆ ಮಾಡುತ್ತಿದ್ದಾರೆ. ಆದರೆ ಇದು ಸಾಲದು. ಆಯುರ್ವೇದ, ಯುನಾನಿ ಇತ್ಯಾದಿ ಪದ್ಧತಿಗಳಲ್ಲಿ ಸಂಶೋಧನೆ ಏನು ನಡೆಯಬೇಕೋ, ಈ ಕಾಲಕ್ಕೆ ತಕ್ಕ ಹಾಗೆ ಔಷಧಗಳನ್ನು ತಯಾರುಮಾಡುವುದು, ಪ್ರಯೋಗ ಮಾಡುವುದು ಮುಂತಾದುವು ಸೂಕ್ತ ರೀತಿಯಲ್ಲಿ ನಡೆಯುತ್ತಿಲ್ಲ. ಇನ್ನೂ ಅಭಿವೃದ್ಧಿಸ್ಥಿತಿಗೆ ಬರಬೇಕು. ನಮ್ಮ ದುರದೃಷ್ಟದಿಂದ ಅಲೋಪತಿ ಮೇಲುಗೈ ಆಗಿದೆ. ಆಯುರ್ವೇದ, ಯುನಾನಿ ಪದ್ಧತಿಗಳಿದ್ದರೂ ಅಲೋಪತಿಕ್ ಡಾಕ್ಟರುಗಳು ಬಾಕಿ ಪದ್ಧತಿಗಳ ಮೇಲೆ prejudice ಇಟ್ಟುಕೊಂಡಿದ್ದಾರೋ ಎಂಬ ಸಂಶಯ ಅನೇಕ ಸಲ ಬರುತ್ತದೆ. ಹಾಗಿದ್ದರೆ, ಇದು ಸರಿಯಿಲ್ಲ. ಅಲೋಪತಿಯಿಂದ ನಮ್ಮ ದೇಶದ ಹಣ ಹೊರದೇಶಗಳಿಗೆ ಹೋಗುತ್ತದೆ. ಇದನ್ನು ತಡೆಯಲು ನಮ್ಮ ಪದ್ಧತಿಗಳನ್ನು ಅಭಿವೃದ್ಧಿ ಪಡಿಸಿಕೊಂಡು ನಮ್ಮ ದೇಶದ ಔಷಧಗಳಿಗೆ ಹೆಚ್ಚು ಮಾನ್ಯತೆ ಬರುವಹಾಗೆ ಮಾಡುವುದು ಯೋಗ್ಯವೆಂದು ನಾನಾದರೂ ಅಭಿಪ್ರಾಯ ಪಡುತ್ತೇನೆ. ಆದುದರಿಂದ ನಮ್ಮಲ್ಲಿ

(ಶ್ರೀ ಟಿ. ಮಾದಯ್ಯಗೌಡ)

ಸಂಶೋಧನೆಗೆ ಹೆಚ್ಚು ಅವಕಾಶವಿರಬೇಕು. ನಮ್ಮಲ್ಲಿರುವ ಒಳ್ಳೆಯ ಮೂಲಿಕೆಗಳು ಪರದೇಶಗಳಲ್ಲಿಲ್ಲ. ಅವರು ನಮ್ಮಿಂದ ಅನೇಕ ಒಳ್ಳೆಯ ಮೂಲಿಕೆಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಅವುಗಳಿಂದ ಔಷಧಗಳನ್ನು ತಯಾರುಮಾಡಿ ಹೆಚ್ಚಿನ ಬೆಲೆಗೆ ನಮ್ಮ ಮೇಲೆ ತಂದು ಹೊರಿಸುತ್ತಿದ್ದಾರೆ. ಉದಾಹರಣೆಗೆ, ಸರ್ಪಗಂಧಿ ನಮ್ಮ ದೇಶದ ಮೂಲಿಕೆ. ಇದನ್ನು ಇಲ್ಲಿಂದ ತೆಗೆದುಕೊಂಡು ಹೋಗಿ ಅಲ್ಲಿ ಔಷಧಮಾಡಿ ಹೃದಯದ ರೋಗಕ್ಕೆ ಉಪಯೋಗಿಸುತ್ತಿದ್ದಾರೆ. ಹೀಗೆ ಅನೇಕ ಮೂಲಿಕೆಗಳು ನಮ್ಮಲ್ಲಿರುವುದು ಪರದೇಶಗಳಲ್ಲಿಲ್ಲ. ನಮ್ಮ ಔಷಧಗಳನ್ನು ಉಪಯೋಗ ಮಾಡಬೇಕಾದರೆ ಮೂಲಿಕೆಗಳನ್ನು ಬೆಳೆಸುವುದಕ್ಕೆ ಹೆಚ್ಚಿನ ಗಮನ ಕೊಡಬೇಕು. ಸಂಶೋಧನ ಮಾಡುವುದಕ್ಕೂ ಪ್ರಯೋಗ ಮಾಡುವುದಕ್ಕೂ ಹೆಚ್ಚು ಶ್ರದ್ಧೆವಹಿಸಬೇಕೆಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ವೈದ್ಯಸಹಾಯ ಗ್ರಾಮಾಂತರಗಳಲ್ಲಿ ಇನ್ನೂ ಸ್ವಲ್ಪ ಹೆಚ್ಚು ನಡೆಯಬೇಕು. ಇದು ಅತ್ಯಂತ ತುರ್ತಿನ ಕೆಲಸವೆಂದು ಹೇಳುತ್ತೇನೆ. ಗ್ರಾಮವಾಸಿಗಳು ಪ್ರಕೃತಿ ಜನ್ಯವಾದ ವಾತಾವರಣದಲ್ಲಿ ಬೆಳೆಯುತ್ತಿದ್ದರೂ ಅನೇಕ ರೋಗಗಳಿಗೆ ತುತ್ತಾಗುತ್ತಾರೆ. ಅವರಿಗೆ ಈ ಚಿಕಿತ್ಸೆಗೆ ಸರಿಯಾದ ವ್ಯವಸ್ಥೆಯಿಲ್ಲ. ಯಾವುದಾದರೂ ಪ್ರದೇಶದ ಜನರಿಂದ ಧನ ಸಹಾಯ ಬರಲಿಲ್ಲವೆಂದು ಆಪ್ರದೇಶವನ್ನು ಉಪೇಕ್ಷೆಮಾಡುವ ಸಂಭವವಿದೆ. ಉದಾಹಣೆಗೆ, ನನ್ನ ಕ್ಷೇತ್ರದಲ್ಲಿ ಕೊಟಗಲ್ಲು ಹೋಬಳಿಯಿದೆ. ಅದು ದೊಡ್ಡ ಹೋಬಳಿ. ಅಲ್ಲಿ ಆಸ್ಪತ್ರೆಯಿಲ್ಲ. ಹಿಂದೆ ಒಬ್ಬ ಸೂಲಗಿತ್ತಿ ಮಾತ್ರ ಇದ್ದುದ್ದು ಈಗ ಅವರೂ ಕೂಡ ಇಲ್ಲ. ಇದು ಶೋಚನೀಯವಾದ ಸ್ಥಿತಿ. ಇದ್ದವರನ್ನು ಯಾವುದೋ ಹಳ್ಳಿಗೆ ವರ್ಗಮಾಡಿದಮೇಲೆ ಪುನಃ ಅಲ್ಲಿಗೆ ಬೇರೆಯಾರೂ ಬರಲಿಲ್ಲ. ಇಂಥಾದ್ದನ್ನು ನೋಡಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಪೇಕ್ಷಿಸುತ್ತೇನೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಸರ್ಕಾರದವರು Birth control ಮಾಡಬೇಕೆಂದು ಹೇಳುತ್ತಿದ್ದರೆ ನೀವು ಸೂಲಗಿತ್ತಿ ಇಲ್ಲವೆಂದು ಹೇಳುತ್ತೀರಲ್ಲ!

ಶ್ರೀ ಟಿ. ಮಾದಯ್ಯಗೌಡ.—ಅದಕ್ಕೆ ಆಮೇಲೆ ಉತ್ತರ ಹೇಳುತ್ತೇನೆ.

ಹೋಮಿಯೋಪತಿ ವೈದ್ಯ ಪದ್ಧತಿಯನ್ನು ಬಹಳ ಸುಲಭವಾಗಿ ಕಲಿಯಬಹುದೆಂದು ಬಹಳ ಜನ ತಜ್ಞರು ಅಭಿಪ್ರಾಯ ಪಡುತ್ತಾರೆ. ಈ ಪದ್ಧತಿಯನ್ನು ನಮ್ಮ ನೆರೆ ಪ್ರಾಂತಗಳಾದ ಆಂಧ್ರ ಮತ್ತು ಮದರಾಸು ಪ್ರಾಂತಗಳಲ್ಲಿ ಬಹಳ ಉಪಯೋಗಿಸಿ, ಅಲ್ಲಿ ಹೋಮಿಯೊಪತಿ ವೈದ್ಯರನ್ನು ಸರ್ಕಾರದವರು ನೇಮಕಮಾಡಿಕೊಂಡಿದ್ದಾರೆ. ಹಾಗೆಯೇ ಇಲ್ಲಿಯೂ ಮಾಡಲು ಹೋಮಿಯೋಪತಿಕ್ ಕಾಲೇಜನ್ನು ಸ್ಥಾಪನೆಮಾಡಿ ಉತ್ತೇಜನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಹೋಮಿಯೊಪತಿ, ಆಯುರ್ವೇದ ಮತ್ತು ಯುನಾನಿ ವೈದ್ಯ ಪದ್ಧತಿಗಳ ರಿಜಿಸ್ಟ್ರೇಷನ್ ಸಂಬಂಧವಾದ ಮಸೂದಾ ಕಾನೂನನ್ನು ಸುಮಾರು ಎರಡು ವರ್ಷದ ಹಿಂದೆಯೇ ಪಾಸ್ ಮಾಡಿದ್ದೆವು, ಅದನ್ನು ಜಾರಿಗೆ ಕೊಡಲಿಲ್ಲವೆಂದು ಮಿತ್ರರು ಹೇಳುತ್ತಿದ್ದಾರೆ. ಅದನ್ನು ಜಾರಿಗೆ ಕೊಡುವುದರಿಂದ ಈಗ ನಮ್ಮ ದೇಶದಲ್ಲಿರುವ ಪಂಡಿತರು ಮತ್ತು ಡಾಕ್ಟರುಗಳನ್ನು ರಿಜಿಸ್ಟರ್ ಮಾಡಿಕೊಂಡು ಅವರು ಯಾರು, ಎಲ್ಲಿಲ್ಲದ್ದಾರೆಂದು ಗೊತ್ತುಮಾಡಿಕೊಳ್ಳುವುದಕ್ಕನುಕೂಲವಾಗುತ್ತದೆ. ರಿಜಿಸ್ಟರಾದ ಡಾಕ್ಟರುಗಳಿರುವುದರಿಂದ ಜನರಿಗೂ ಅನುಕೂಲವಾಗುತ್ತದೆ. ಆದುದರಿಂದ, ಆ ಕಾನೂನನ್ನು ಆದಷ್ಟು ಜಾಗ್ರತೆ ಜಾರಿಗೆ ಕೊಡುವುದುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತೇನೆ.

Family Planning ವಿಚಾರವನ್ನು ಮಿತ್ರರು ಹೇಳಿದರು. ನನಗೆ ಮೊದಲು ಈ ವಿಷಯದಲ್ಲಿ ಒಂದು ರೀತಿಯ ಅಭಿಪ್ರಾಯವಿತ್ತು. ಮೇಧಾವಿಗಳೂ, ತಿಳಿವಳಿಕಸ್ಥರೂ ಈ ಮಿತ ಸಂತಾನ ಮಾಡುವುದು ಬೇಡ, ದೇವರು ಹೇಗಿದ್ದರೂ ನಮಗೆ ಕೈಕಾಲುಗಳನ್ನು ಕೊಟ್ಟಿದ್ದಾನೆ, ಹುಟ್ಟಿಸಿದ ದೇವರು ಹುಲ್ಲುಮೇಯಿಸುತ್ತಾನೆಯೋ ಎಂದು ಹೇಳುತ್ತಿದ್ದರೂ, ನನಗೂ ಆರೀತಿ ಅನಿಸಿತ್ತು. ಆದರೆ ಈಗಿನ ಪರಿಸ್ಥಿತಿಯನ್ನು ನೋಡಿದರೆ, ಸಂತತಿ ನಿರೋಧ ಮಾಡಬೇಕಾಗುತ್ತದೆ. ಇತರ ದೇಶಗಳಿಗಿಂತ ನಮ್ಮ ದೇಶದಲ್ಲಿ ಇದು ಹೆಚ್ಚು ಅಗತ್ಯವಾಗಿದೆ. ಪ್ರಜಾಸಂಖ್ಯೆ ಬೆಳೆದಂತೆ ಹೆಚ್ಚು ಆಹಾರ ಬೇಕಾಗುತ್ತದೆ. ಮಕ್ಕಳಿಗೆ ಬೇಕಾದ ವಿದ್ಯೆ, ವಿವೇಕ ತಕ್ಕಷ್ಟಿಲ್ಲವಾಗುತ್ತದೆ...

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಈ ದೇಶದಲ್ಲಿ ಪುತ್ರಕಾಮೇಷ್ಟಿ ಯಾಗಮಾಡಿ ಮಕ್ಕಳನ್ನು ಪಡೆಯುತ್ತಿದ್ದರು; ನೀವು ಹೀಗೆ ಹೇಳಬಹುದೆ?

ಶ್ರೀ ಟಿ. ಮಾದಯ್ಯಗೌಡ.—ಪುತ್ರಕಾಮೇಷ್ಟಿ ಯಾಗಮಾಡುತ್ತಿದ್ದ ಕಾಲದಲ್ಲಿ ಹೋಟೆಲುಗಳು, ಸಿನೆಮಾಗಳು, ಡಾಲ್ಡಾ ಮುಂತಾದವು ಇರಲಿಲ್ಲ. ಇವುಗಳಿರುವುದರಿಂದ ಈಗ ಮಕ್ಕಳು ಜಾಸ್ತಿ ಆಗುತ್ತಿವೆ. ಈಗಿನ ನವನಾಗರಿಕತೆಯ ಕಾಲದಲ್ಲಿ ಜಾಗ್ರತೆ ಹೆಚ್ಚು ಹೆಚ್ಚು ಮಕ್ಕಳಾಗಲು ಅವ

ಕಾಶವಿದೆ. ಪುತ್ರಕಾಮೇಷ್ಟಿಯ ಕಾಲ ಬೇರೆ, ಈಗ ಬೇರೆಕಾಲ. ಈಗ ಬೆಳೆಯುತ್ತಿರುವ ಪ್ರಜಾ ಸಂಖ್ಯೆಯಿಂದ ಆಗುವ ಅನಿಷ್ಟವನ್ನು ಹೋಗಲಾಡಿಸಲು ಏನಾದರೂ ಮಾಡಬೇಕು.

ಶ್ರೀ ಸಂಜೀವನಾಥ ಐಕಳ.—ಸಂತತಿ ಸಂಯಮ ಮಾಡಬೇಕು, ನಿರೋಧವಲ್ಲ.

Mr. CHAIRMAN.—The Hon'ble members time is over.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ಸಂಬಂಧದಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಎರಡು ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಆಶಪಡುತ್ತೇನೆ.

2.30 P.M.

ಸುಮಾರು 6½—7 ಕೋಟಿ ರೂಪಾಯಿಗಳನ್ನು ನಾವು ಈ ಎರಡು ಬಾಬುಗಳಿಗಾಗಿ ಖರ್ಚು ಮಾಡುತ್ತಿದ್ದೇವೆ. ಆದಾಗ್ಯೂ ನಮ್ಮ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗಿಲ್ಲ. ಮುಖ್ಯ ವಾಗಿ ಹಳ್ಳಿಗಳಲ್ಲಿ ವೈದ್ಯಕೀಯ ಉಪಚಾರ ಬಹಳ ಕಡಮೆಯಾಗಿ ದೊರೆಯುತ್ತಿದೆ, ಅನೇಕ ವೇಳೆ ಅದೂ ಕೂಡ ದೊರೆಯುವುದಿಲ್ಲ. ನಮ್ಮ ಮಂಗಳೂರು ಜಿಲ್ಲೆಯಿಂದ ಬಂದಿರುವ ಮಾನ್ಯ ಸದಸ್ಯರು ಅಧ್ಯಕ್ಷತೆ ವಹಿಸಿದ್ದಾರೆ. ಅವರು ತಮ್ಮ ವೃತ್ತಿಯಲ್ಲಿ ಬಹಳ ಹೆಸರು ಗಳಿಸಿರುವ ಹಾಗೆ ಡಾ॥ ನಾಗಪ್ಪ ಆಳ್ವರವರೂ ಸಹ ಮಂಗಳೂರಿನಲ್ಲಿ ಬಹಳ ದೊಡ್ಡ ವೈದ್ಯರು. ಈಗಿನ ಆರೋಗ್ಯ ಮಂತ್ರಿಗಳಾದ ನಾಗಪ್ಪ ಆಳ್ವರವರು ಅಧಿಕಾರಕ್ಕೆ ಬಂದ ತಕ್ಷಣ ಅವರ ಹಿಂದಿನ ಆರೋಗ್ಯ ಸಚಿವರು ತೆರೆದಿದ್ದ ಎರಡು ಮೆಡಿಕಲ್ ಸ್ಕೂಲುಗಳನ್ನೂ ಮುಚ್ಚಿದರು. ಕಾರಣ ಮೆಡಿಕಲ್ ಸ್ಕೂಲು ಇರ ಬಾರದೆಂದು ಮೆಡಿಕಲ್ ಕೌನ್ಸಿಲ್ ಅಭಿಪ್ರಾಯಪಟ್ಟಿತು, ಮತ್ತು ಮೆಡಿಕಲ್ ಸ್ಕೂಲನಿಂದ ಹೊರ ಬಂದವರ ಜ್ಞಾನಪೂರ್ಣವಾಗಿರುವುದಿಲ್ಲ ಅಥವಾ ಅವರು ಪೂರ್ಣ ಡಾಕ್ಟರಾಗಿರುವುದಿಲ್ಲ, ಅದಕ್ಕೆ M.B.B.S. ಆಗಬೇಕು, ಸರ್ಜರಿಯಲ್ಲಿ ಒಳ್ಳೆಯ ಅನುಭವವಿರಬೇಕು ಎಂಬ ಕಾರಣದಿಂದ ಮೆಡಿಕಲ್ ಸ್ಕೂಲನ್ನು ಕೈಬಿಡಬೇಕೆಂದು ಆ ಕೌನ್ಸಿಲ್ ಸೂಚಿಸಿತು. ಆದರೆ ಮಾನ್ಯ ಮಂತ್ರಿಗಳ ಗಮನವನ್ನು ಒಂದು ವಿಷಯದ ಕಡೆ ಸೆಳೆಯುತ್ತೇನೆ. ಈಗ ಬಹಳ ಜನ L.M.P. ಆದ ಡಾಕ್ಟರುಗಳಿದ್ದಾರೆ, ಅವರಲ್ಲಿ ಕೆಲವರು ಹೊರಗಡೆ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಅವರಲ್ಲಿ ಕೆಲವರಿಗೆ M.B.B.S.ಗೆ ಹೋಗಲು ಅವಕಾಶ ಕೊಡುತ್ತಿದ್ದಾರೆ. ಸರ್ಕಾರದವರು ಒಂದು ವಯಸ್ಸಿನ ಮಿತಿಹಾಕಿ ಈಗಿರುವ ಎಲ್ಲಾ L.M.P. ಡಾಕ್ಟರುಗಳು M.B.B.S.ಗೆ ಹೋಗಲು ಅವಕಾಶಕೊಟ್ಟು ಅವರಿಗೆ ಒಂದೇ ರೀತಿಯ ಸ್ಕೇಲ್, ಸಂಬಳ ಇವುಗಳ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಇದೇ ಸಂದರ್ಭದಲ್ಲಿ ಇನ್ನೂ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದು ಏನೆಂದರೆ ಹಳೆಯ ಮೈಸೂರಿನಲ್ಲಿ ಹೆಚ್ಚು ಪ್ರಮಾಣದಲ್ಲಿ ಹೆಲ್ತ್ ಯೂನಿಟ್, ಲೋಕಲ್ ಫಂಡ್ ಡಿಸ್ಪೆನ್ಸರಿ ಮುಂತಾದು ವನ್ನು ತೆರೆಯಲಾಗಿದೆ. ಆದರೆ ಇವತ್ತು M.B.B.S. ಆಗಿರುವ ಒಬ್ಬ ಡಾಕ್ಟರು ತೀರ್ಥಹಳ್ಳಿ ತಾಲ್ಲೂಕು ಅರಳುಮಲ್ಲಿಗೆ ಗ್ರಾಮಕ್ಕೆ ಹೋಗಬೇಕೆಂದರೆ ಅಲ್ಲಿ ಸಂಸಾರ ಹೂಡತಕ್ಕವರಿಗೆ ವಿದ್ಯಾ ಭ್ಯಾಸಕ್ಕೆ ಮಕ್ಕಳನ್ನು ಕಳುಹಿಸಲು ಅಲ್ಲಿ ಹೈಸ್ಕೂಲಿನ ಸೌಕರ್ಯವಿಲ್ಲ. ಏಕೆಂದರೆ ಹೈಸ್ಕೂಲಿಗೆ ಆರು ಮೈಲಿ ದೂರ ಹೋಗಬೇಕು, ಕಾಲೇಜಿಗೆ ಶಿವಮೊಗ್ಗಾಕ್ಕೆ ಹೋಗಬೇಕು, ಹೆಚ್ಚಿನ ವಿದ್ಯಾ ಭ್ಯಾಸಕ್ಕೆ ಬೆಂಗಳೂರಿಗೆ ಮಕ್ಕಳನ್ನು ಕಳುಹಿಸಬೇಕು. ಅದಕ್ಕಾಗಿ ಆತ ಮಕ್ಕಳಿಗಾಗಿ, ಒಂದು ಮನೆ, ತನಗಾಗಿ ಒಂದು ಮನೆ ಹೀಗೆ ಬೇರೆ ಬೇರೆ ಏರ್ಪಾಡು ಮಾಡಲು ಸಾಧ್ಯವಾಗುವುದಿಲ್ಲ. ತಾಲ್ಲೂಕ್ ಹೆಡ್‌ಕ್ವಾರ್ಟರುಗಳಿಗೆ ಹೋಗುವುದಕ್ಕೂ ಕೂಡ M.B.B.S. ಆಗಿರುವವರು ಹಿಂದು ಮುಂದೆ ನೋಡುತ್ತಾರೆ. ಅಂಥ ಸಂದರ್ಭದಲ್ಲಿ ಸಣ್ಣ ಸಣ್ಣ ಆಸ್ಪತ್ರೆಗಳಲ್ಲಿ ಯಾವ ಡಾಕ್ಟರುಗಳಿಗೆ ವಹಿಸಬೇಕೆಂದು ಸರ್ಕಾರ ಇಷ್ಟಪಡುವುದು ಅಥವಾ ಏರ್ಪಾಡು ಮಾಡುವುದಿದೆ ಎಂಬುದು ಸ್ಪಷ್ಟ ವಾಗಬೇಕು. ನಮ್ಮಲ್ಲಿ ಕೆಲವು ಆಸ್ಪತ್ರೆಗಳಲ್ಲಿ ಎರಡು ವರ್ಷಗಳಾದರೂ ಡಾಕ್ಟರೇ ಇಲ್ಲದೆ ಹಾಗೆಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸರ್ಕಾರ ಯಾವ ರೀತಿಯ ಯೋಜನೆ ಮಾಡಿದೆ ಎನ್ನುವುದನ್ನು ನಮ್ಮ ಮಾನ್ಯ ಮಂತ್ರಿಗಳು ಸ್ವಲ್ಪ ತಿಳಿಸಬೇಕು. ಈ ವಿಷಯದಲ್ಲಿ ಒಂದು ಸಲಹೆ ಮಾಡುವುದೇನೆಂದರೆ ತಾಲ್ಲೂಕು ಕೇಂದ್ರಗಳಲ್ಲಿ ಒಂದು ಸಂಪೂರ್ಣ ಸುಸಜ್ಜಿತವಾದ ಆಸ್ಪತ್ರೆಯಿರಬೇಕು, ಅದಕ್ಕೆ ಒಂದು ಮೊಬೈಲ್ ವ್ಯಾನ್ ಇರಬೇಕು. ಅಲ್ಲಿನವರು ಆ ತಾಲ್ಲೂಕಿನಲ್ಲಿರುವ ಎಲ್ಲಾ ಹೆಲ್ತ್ ಯೂನಿಟ್ಟುಗಳು ಮತ್ತು ಆಸ್ಪತ್ರೆಗಳಿಗೆ ಹೋಗಿ ವಾರಕ್ಕೆ ಎರಡು ದಿವಸಗಳಾದರೂ ಸಹಾಯ ಮಾಡಬೇಕು. ಸೀರಿಯಸ್ ಆಗಿರುವ ಕೇಸುಗಳಿದ್ದರೆ ತಕ್ಷಣ ನೋಡಿ ಚಿಕಿತ್ಸೆ ನಡೆಸಬೇಕು. ಇಂಥ ಕ್ರಮ ಅನುಸರಿಸುವುದರಿಂದ ಮಾತ್ರ ಹಳ್ಳಿಗಳಿಗೆ ನೀವು ಯೋಗ್ಯ ಸೌಲಭ್ಯ ಒದಗಿಸಲು ಸಾಧ್ಯವೇ ಹೊರತು ಎಲ್ಲಾ ಗ್ರಾಮಗಳಲ್ಲೂ ಆಸ್ಪತ್ರೆ ತೆರೆದು

(ಶ್ರೀ ಎಸ್. ಗೋಪಾಲಗೌಡ)

ಅಲ್ಲಿಗೆ ಒಳ್ಳೆಯ ಡಾಕ್ಟರು, ಔಷಧಿ, ನರ್ಸು, ಇತ್ಯಾದಿ ಸೌಲಭ್ಯಗಳನ್ನೆಲ್ಲಾ ಒದಗಿಸುವದಕ್ಕೆ ಹಣ ಕಾಸಿನ ದೃಷ್ಟಿಯಿಂದ ಕಷ್ಟವಾಗಬಹುದು. ಮತ್ತು ತರಬೇಕಾದ ಡಾಕ್ಟರು, ನರ್ಸುಗಳಿಲ್ಲದಿರುವುದರಿಂದ ಇಂದು ನಾನು ಹೇಳಿದ ಏರ್ಪಾಡನ್ನು ಜಾರಿಗೆ ತರುವುದನ್ನು ಸರ್ಕಾರ ಬಹಳ ತೀವ್ರವಾಗಿ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಸ್ಪತ್ರೆಗಳ ವಿಷಯದಲ್ಲಿ ಈಗ ಹೇಗೆ ನಡೆಯುತ್ತಿದೆಯೆಂದು ಆಗಲೇ ಹೇಳಿದ್ದೇನೆ. ಆಸ್ಪತ್ರೆಯಿದ್ದರೆ ಡಾಕ್ಟರಿಲ್ಲ, ಡಾಕ್ಟರಿದ್ದರೆ ಔಷಧಿಯಿಲ್ಲ, ನರ್ಸ್ ಇಲ್ಲ, ಇತ್ಯಾದಿ ಸೌಲಭ್ಯಗಳಿಲ್ಲದೆ ತೊಂದರೆಯಾಗುತ್ತಿದೆಯೆಂಬುದು ಸಾಮಾನ್ಯವಾದ ಟೀಕೆಯಾಗಿದೆ. ಇದರಲ್ಲಿ ಬಹಳ ನಿಜ ಕೂಡ ಇದೆ. ಆಸ್ಪತ್ರೆಗಳಿಗೆ ಒದಗಿಸುತ್ತಿರುವ ಆಹಾರ, ಹಾಲು, ಮೊಟ್ಟೆ, ಹಣ್ಣು ಮುಂತಾದವುಗಳ ಕಡೆ ಸರ್ಕಾರ ಹೆಚ್ಚು ನಿಗ ವಹಿಸಬೇಕು. ಇದಕ್ಕೆ ಕೊಡುವ ಹಣ ಅನೇಕ ಸಲ ಪೂರ್ಣವಾಗಿ ಖರ್ಚಾಗುವುದಿಲ್ಲ, ಇದರಲ್ಲಿ ಬಹಳ ನಷ್ಟವಾಗುತ್ತಿದೆ ಮತ್ತು ಎಲ್ಲಾ ರೀತಿಯಲ್ಲೂ ಅದು ದುರುಪಯೋಗವಾಗುತ್ತಿದೆ ಎಂದು ಹೇಳಿದ್ದೇವೆ. ಔಷಧಿ ಕೊಡುವುದು ಕೂಡ ಹಳೇಕಾಲದ ರೀತಿಯಲ್ಲೇ ನಡೆದುಕೊಂಡು ಹೋಗುತ್ತಿದೆ. ಅನೇಕ ಆಸ್ಪತ್ರೆಗಳಲ್ಲಿ ಔಷಧಿಯೇ ಇರುವುದಿಲ್ಲ. ತೀರ್ಥಹಳ್ಳಿಯ ಕಡೆ ಯಾರಾದರೂ ಕಾಯಿಲೆ ಬಿದ್ದರೆ ಔಷಧಿ ತೆಗೆದುಕೊಂಡು ಹೋಗಿ ಕೊಟ್ಟರೆ 'ಆಸ್ಪತ್ರೆಯಿಂದ ತಂದೆಯಾ' ಎಂದು ರೋಗಿ ಕೇಳುವುದುಂಟು. 'ಹೌದು' ಎಂದರೆ ಅದರಿಂದ ಕಾಯಿಲೆ ಬೇಗ ಗುಣವಾಗುವುದಿಲ್ಲ ಎಂದು ಹೇಳುತ್ತಾರೆ. ಅದಕ್ಕೆ 'ಆಸ್ಪತ್ರೆ ನೀರು' ಎಂದು ಸಾಮಾನ್ಯವಾಗಿ ಹೇಳುವುದುಂಟು. ಪ್ರೈವೇಟ್ ಪ್ರಾಕ್ಟೀಷನರುಗಳಿಂದ ಔಷಧಿ ತಂದು ಕುಡಿದರೆ ಎರಡೇ ದಿವಸಗಳಲ್ಲಿ ಗುಣವಾಗುವುದೆಂಬ ಅಭಿಪ್ರಾಯವಿದೆ. ಮಂಗಳೂರಿನಲ್ಲೂ ಹೀಗೆಯೇ ಇರಬಹುದು. ಮಂತ್ರಿಗಳಿಗೆ ಇದು ಗೊತ್ತಿರಬಹುದು. ಮಂಗಳೂರಿನವರು ಡಾಕ್ಟರ್ ನಾಗಪ್ಪ ಆಳ್ವರವರನ್ನೇ ಹುಡುಕಿಕೊಂಡು ಹೋಗುತ್ತಿದ್ದರೆಂದು ಹೇಳುತ್ತಾರೆ. ಕಾರಣ ಗೊತ್ತಿದೆ. ಒಂದು ತಾಲ್ಲೂಕಿನಲ್ಲಿ, ಜಿಲ್ಲೆಯಲ್ಲಿ ಹತ್ತಾರು ಜನ ಪ್ರಗತಿಪರರಾದ ಡಾಕ್ಟರುಗಳಿರಬಹುದು. ಜನರು ಅವರಲ್ಲೇ ಹೋಗುವುದುಂಟು. ಅವರಿಗೆ ಹೆಚ್ಚು ಹಣ ದೊರೆಯುತ್ತದೆ. ಶಿವಮೊಗ್ಗ ಅಥವಾ ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಮುಂತಾದ ದೊಡ್ಡ ದೊಡ್ಡ ಆಸ್ಪತ್ರೆಗಳಿವೆ. ಅಲ್ಲಿ ಲಕ್ಷಗಟ್ಟಲೆ ಖರ್ಚುಮಾಡಿ ಬಹಳ ಅತ್ಯುತ್ತಮವಾದ ಆಧುನಿಕ ಉಪಕರಣಗಳನ್ನಿಟ್ಟು ಸತ್ತವನನ್ನು ಕೂಡ ಬದುಕಿಸಬಹುದು ಅನ್ನಿಸುವ ಹಾಗೆ ವ್ಯವಸ್ಥೆ ಮಾಡಿದ್ದರೂ ಜನಗಳೇಕೆ ಆ ಆಸ್ಪತ್ರೆಗಳಿಗೆ ಹೋಗಲು ಹಿಂದುಮುಂದೆ ನೋಡುತ್ತಾರೆ ಎಂಬುದನ್ನು ಮಂತ್ರಿಗಳು ಸ್ವಲ್ಪ ವಿಚಾರ ಮಾಡಿ ನೋಡಬೇಕು. ಮತ್ತು ಈ ಅಭಿಪ್ರಾಯವನ್ನು ಹೋಗಲಾಡಿಸುವುದು ಈ ಎರಡು ಇಲಾಖೆಗಳ ಪ್ರಥಮ ಕರ್ತವ್ಯವಾಗಬೇಕು. ಇಲ್ಲದಿದ್ದರೆ ಅವು ಸೇವೆ ಮಾಡಿದಂತಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ನಾನು ಜನರ ಸೇವೆ ಮಾಡಿ ಅವರನ್ನು ಬದುಕಿಸಬೇಕು ಎಂಬ ಆದರ್ಶ, ಎಂ.ಬಿ.ಬಿ.ಎಸ್. ಓದಿದವರಿಗೂ, ಇಂಜನಿಯರಿಂಗ್ ಪಾಸ್ ಮಾಡಿದವರಿಗೆ ಈ ಹಣದಿಂದ ಉತ್ತಮ ಸೇತುವೆ ಕಟ್ಟಬೇಕು ಜನರ ಸೇವೆಸಲ್ಲಿಸಬೇಕು ಎನ್ನುವುದು ಬಹಳ ಮುಖ್ಯ. ಇದರಿಂದ ಒಂದು ಅನ್ಯೋನ್ಯತೆ ಬರುತ್ತದೆ. ಡಾಕ್ಟರ್, ಅಡಿಸ್‌ಸ್ಕಡ್ಡರ್ ಅನ್ನತಕ್ಕವರು ವೆಲ್ಲೂರು ಆಸ್ಪತ್ರೆ ಸ್ಥಾಪನೆ ಮಾಡಿದ ಆ ಮಹಾತಾಯಿ. ಒಂದು ವೇಳೆ ಚಿಕ್ಕಂದಿನಲ್ಲಿ, ಅವರ ತಂದೆಯಿಂದ ಹೆರಿಗೆಗಾಗಿ ಬಂದವರು, ಗಂಡಸರ ಹತ್ತಿರ ಹೆರಿಗೆ ಮಾಡಿಸಿಕೊಳ್ಳುವುದಿಲ್ಲ ಎಂದು ಹೇಳಿ ಗರ್ಭಿಣಿಸ್ತ್ರೀಯರು ಅವರ ತಂದೆಗೆ ಅವಕಾಶ ಕೊಡದೇ ಸತ್ತು ಹೋದರು. ಅದನ್ನು ನೋಡಿ ಅಡಿಸ್‌ಸ್ಕಡ್ಡರ್ ತನ್ನ ದೇಶಕ್ಕೆ ಹೋಗಿ ತಾನೇ ಎಂ. ಬಿ. ಬಿ. ಎಸ್. ವೈದ್ಯಕೀಯ ಪರೀಕ್ಷೆ ಪಾಸ್ ಮಾಡಿ ಈ ದೇಶಕ್ಕೆ ಪುನಃ ಬಂದು, ಹಣವನ್ನು ಒಟ್ಟುಗೂಡಿಸಿ ಕಟ್ಟಿರತಕ್ಕ ವೆಲ್ಲೂರು ಆಸ್ಪತ್ರೆಯನ್ನು ಇವತ್ತು ತಾವೆಲ್ಲರೂ ನೋಡಬಹುದು. ತಾನೇ ಸ್ವತಃ ಹೆಣ್ಣುಮಕ್ಕಳಿಗೆ ವೈದ್ಯಕೀಯ ಕೊಡಬಹುದು ಎಂಬ ಆಕೆಯ ಆ ಒಂದು ಆದರ್ಶ ಏನಿದೆ ಅದು ನಮ್ಮ ಡಾಕ್ಟರುಗಳ ಕಣ್ಣು ಮುಂದೆ ಇರಬೇಕು. ಅದು ಬಹಳ ಸಲ ಇರುವುದಿಲ್ಲ. ಅವರ ಇನ್‌ಕ್ರಿಮೆಂಟ್ ವಿಷಯ, ವರ್ಗದ ವಿಷಯ, ತಮ್ಮ ಸ್ಥಾನಮಾನದ ವಿಷಯ, ಏನು ಮಾಡಬೇಕು ಎನ್ನುವ ವಿಷಯ, ಮನುಷ್ಯ ಸಹಜವಾದ ಒಂದು ತಾಪತ್ರಯ ಇರುತ್ತದೆ. ಅವರಿಗೂ ಹೆಂಡತಿ ಮಕ್ಕಳು ಮರಿ ಸಂಸಾರ ಇರುತ್ತದೆ. ಕೆಲವು ಮಟ್ಟಿನ ದುಡ್ಡಿನ ಆಶೆಯೂ ಬಂದಿರುತ್ತದೆ. ಮೆಡಿಕಲ್ ಸ್ಟೋರ್ ಯಾವುದು ಎಷ್ಟು ಕೊಟ್ಟಿರುತ್ತಾರೆಯೋ ಅಷ್ಟೇ, ಆಯಿತು ಎಂಬ ಅಭಿಪ್ರಾಯ ಕೆಲವರಿಗೆ ಬರುತ್ತದೆ. ಇದು ಮಾನವ ಸಹಜವಾದ ಒಂದು ದೌರ್ಬಲ್ಯ ಎಂದು ಹೇಳಬಹುದು. ದೇಶದಲ್ಲಿ ಇಂಥಾ ಜನರನ್ನು ಇಟ್ಟು ಹಣವನ್ನು ಯಾರ ಸ್ವಾರ್ಥಕ್ಕೋ ಉಪಯೋಗಿಸಬಾರದು. ಡಾಕ್ಟರುಗಳು ಮತ್ತು ಅದರಲ್ಲೂ ರಾಜಕಾರಣಿಗಳು ಯಾರಿದ್ದಾರೆ ಅವರ ಕೈ ಶುದ್ಧವಾಗಿರಬೇಕು. ಸೇವಾ

ಮನೋಭಾವ ಇಟ್ಟು, ತನುಮನ ಧನ ಉಪಯೋಗಿಸಿ ಕೆಲಸಮಾಡಬೇಕೆಂದು ಜನ ಹೇಗೆ ನಿರೀಕ್ಷೆ ಮಾಡುತ್ತಾರೆಯೋ ಹಾಗೆ ತಾವೂ ಕೂಡ ಎಂದರೆ ಈ ದೇಶದ ವೈದ್ಯರೂ ಕೂಡ ಜನರ ಸೇವೆಯೇ ತಮ್ಮ ಜೀವನದ ಉದ್ದೇಶ ಅಂತ ಹೇಳಿ ಜೀವನವನ್ನೇ ಧಾರೆ ಎರೆದು ಈ ಕ್ಷೇತ್ರಕ್ಕೆ ಬಂದು ಕಾಲಿಟ್ಟ ಮೇಲೆ ಅವರು ತಮ್ಮ ಆದರ್ಶ ಮರೆಯ ಕೂಡದು. ಯಾವನೇ ಬರಲಿ ಅವನ ಖಾಯಿಲೆ ಅನುಸರಿಸಿ ಚಿಕಿತ್ಸೆ ಆಗಬೇಕೇ ಹೊರತು ದೊಡ್ಡವನು, ಸಣ್ಣವನು, ಯಾವ ಜಾತಿಯವನು; ಎಂಬ ಭೇಧ ಭಾವ ತಾರತಮ್ಯ ಇಲ್ಲದೆ ಕೆಲಸಮಾಡಿ ನಮ್ಮ ಇಲಾಖೆಗೆ ಕೀರ್ತಿಯನ್ನು ತರುತ್ತಾರೆ ಎಂದು ಆಶಿಸುತ್ತೇನೆ.

ಈ ಎರಡು ಇಲಾಖೆಗಳನ್ನು ಒಂದು ಮಾಡತಕ್ಕ ಮಾತು ಬಹಳ ದಿವಸದಿಂದ ಇದೆ. ಡಾಕ್ಟರ್ ಆಳ್ವರವರು ಬಂದಮೇಲೆ ಆಶ್ವಾಸನ ಕೊಟ್ಟಿದ್ದಾರೆ. ಇದು ಮಾಡಿಯೇ ಮಾಡುತ್ತೇನೆ ಎಂದು ಆದರೆ ಕೆಲವುಕಾಲ ತೊಡರು ಬಂದಿದೆ ಎಂದು ಕೇಳುತ್ತೇನೆ. ಜನಾರೋಗ್ಯ ರಕ್ಷಣೆ ಅಧೀನದಲ್ಲಿ ವೈದ್ಯಕೀಯ ಇಲಾಖೆ ಕೆಲಸಮಾಡುವುದು ಎಲ್ಲಾ ದೇಶದಲ್ಲೂ ಇದೆ. ಇಲ್ಲೂ ಆಗಬೇಕಾದ್ದು ಅವಶ್ಯಕ. ಕೆಲವರು ಹುದ್ದೆಗಳಲ್ಲಿ ಹೆಚ್ಚು ಕಡಿಮೆ ಆಗಬಹುದು. ಹೇಗೆ ಅವರ ಕೆಳಗೆ ಕೆಲಸ ಮಾಡುವುದು ಎಂದು ಕಸವಿಸಿಯಾಗಬಹುದು. ಆದರೆ ಒಂದೇ ರೀತಿಯ ವ್ಯವಸ್ಥೆ ಇರಬೇಕು. ಮುಖ್ಯವಾಗಿ ಇವತ್ತು ಹೇಳುವುದಾದರೆ ಹಿಂದೆ ನಾವು ಯಾವ ಖಾಯಿಲೆ ಹೆಸರು ಕೇಳಿಯೇ ನಡುಗುತ್ತಾ ಇದ್ದೆವೋ ಕಾಲರಾ, ಪ್ಲೇಗು, ಇವೆಲ್ಲ ಇನ್‌ಫ್ಲುಯೆಂಜಾ ಇಂಥಾ ಅನೇಕ ಖಾಯಿಲೆಗಳು ಸ್ವಲ್ಪಮಟ್ಟಿಗೆ ಮೈಸೂರು ಇಂಥಾ ಖಾಯಿಲೆಗಳನ್ನು ತಡೆಗಟ್ಟಲು ಜನಾರೋಗ್ಯ ರಕ್ಷಣೆ ಇಲಾಖೆಯವರು ಮಾಡಿರತಕ್ಕ ಕೆಲಸ ಕಾರ್ಯಗಳಿಂದ ಬಹಳವಾಗಿ ಕಡಿಮೆಯಾಗಿದೆ. ಬಹಳ ರೀತಿಯಲ್ಲಿ ಅವುಗಳನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಬಹುದು. ಇನ್ನು ಕೆಲವು ಖಾಯಿಲೆಗಳು ಇವೆ. ಸೊರಬದಲ್ಲಿ ಮಂಗನ ಖಾಯಿಲೆ ಎಂದು ಬರುತ್ತದೆ ವೈರಸ್‌ಯಿಂದ ಇವತ್ತು ಕೂಡ ಮೈಸೂರು ವಿಷಯದಲ್ಲಿ ಡೀಮೆಲೋ ಅವರು ವ್ಯಾಕ್ಸೀನ್‌ನಲ್ಲಿ ಏನೋ ತೊಂದರೆ ಇದ್ದಹಾಗೆ ಇದೆ ಎಂದು ಹೇಳಿದರು. ಬಿ.ಸಿ.ಜಿ. ವ್ಯಾಕ್ಸೀನ್ ಬಗ್ಗೆ ಕೂಡ ವಿವಾದ ಇದೆ. ಆದ್ದರಿಂದ ಜನಾರೋಗ್ಯ ರಕ್ಷಣೆಯ ಕೆಲಸ ಬಹಳ ಮುಖ್ಯವಾಗಿರುತ್ತದೆ. ಏಕೆಂದರೆ ಖಾಯಿಲೆ ಬರದಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಒಳ್ಳೆಯ ಆಹಾರ ಕೊಡಬೇಕು. ಖಾಯಿಲೆ ಬರದಂತೆ ತಡೆಗಟ್ಟಬೇಕು. ಒಂದು ವೇಳೆ ಅಕಸ್ಮಾತ್ತಾಗಿ ಖಾಯಿಲೆ ಬಂದರೆ ಚಿಕಿತ್ಸೆ ಕೊಡಬೇಕು. ಈ ಎರಡು ಇಲಾಖೆಗಳು ಬಹಳ ಮುಖ್ಯ ಹೆಲ್ತ್ ಇಲಾಖೆಯಿಂದ ಉಪಯೋಗವೇ ಇಲ್ಲ ಎಂಬ ಅಭಿಪ್ರಾಯ ಇದ್ದರೆ ಅದು ಸರಿಯಾದ ಅಭಿಪ್ರಾಯವಲ್ಲ. ಆದ್ದರಿಂದ ಈ ಎರಡು ಇಲಾಖೆಯನ್ನು ಒಟ್ಟಿಗೆ ಸೇರಿಸಿ ಒಂದು ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಹೆಲ್ತ್ ಯೂನಿಟ್ ಮಾಡುವಾಗ ಮೈಸೂರಿನವರ ಹೆಲ್ತ್ ಯೂನಿಟ್ಟು, ಇಂಡಿಯಾ ಗವರ್ನಮೆಂಟಿನ ಹೆಲ್ತ್ ಯೂನಿಟ್ಟು ಎಂದು ಮಾಡಿದ್ದಾರೆ G.O.I.P. ಪ್ಯಾಟರ್ನ್ ಅಂತ ಇವನ್ನೆಲ್ಲಾ ಕಡಿಮೆ ಮಾಡಿ ಒಂದು ಒಳ್ಳೆಯ ವ್ಯವಸ್ಥೆಮಾಡಬೇಕು. ಆಸ್ಪತ್ರೆಗಳಲ್ಲಿ ಕನಿಷ್ಟಪಕ್ಷ ಇಂಥಾ ಔಷಧಿ ಇರಬೇಕು ಎಂದು ಏನಿದೆಯೋ ಅವನ್ನೆಲ್ಲಾ ಇಡಬೇಕು,

ಇನ್ನೊಂದು ಮಾತು ಆಯುರ್ವೇದದ ಬಗ್ಗೆ ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ನಾನು ಆಯುರ್ವೇದದ ಪ್ರೇಮಿಯೇ : ಆಯುರ್ವೇದದ ಬಗ್ಗೆ, ಅಲೋಪತಿ ಬಗ್ಗೆ, ಹೋಮಿಯೋಪತಿ ಬಗ್ಗೆ, ಯುನಾನಿ ಬಗ್ಗೆ ಅವರವರಲ್ಲೇ ಅನೇಕ ರೀತಿಯ ಭಿನ್ನಾಭಿಪ್ರಾಯ ಇದೆ. ಅದನ್ನೆಲ್ಲಾ ಒಟ್ಟಿಗೆ ಸೇರಿಸಿ ಯಾವುದರಿಂದ ಹೆಚ್ಚು ಸುಲಭವಾಗಿ ಒಳ್ಳೆಯ ರೀತಿಯಲ್ಲಿ, ಪರಿಣಾಮಕಾರಿಯಾಗಿ ಗುಣವಾಗುತ್ತದೆಯೋ ಅದನ್ನು ಚೆನ್ನಾಗಿ ತಿಳಿದುಕೊಂಡು ಒಂದು ಇಂಟಿಗ್ರೇಟೆಡ್ ಸಿಸ್ಟಂ ಅಂತ ಹೇಳಬಹುದು. ಉತ್ತಮವಾದ ವೈದ್ಯ ಎಂದರೆ ಎಲ್ಲಾ ಗೊತ್ತಿರಬೇಕು. ಸಣ್ಣ ಉಗುರಿನಲ್ಲಿ ಹೋಗುವುದಕ್ಕೆ ದೊಡ್ಡ ಕೊಡಲಿ ತೆಗೆದುಕೊಳ್ಳದೆ ಇದ್ದಹಾಗೆ ನಮ್ಮ ದೇಶ ಬಡದೇಶ ಬಹಳ ಹಣವನ್ನು ಹೊರಗಿನಿಂದ ತರಿಸತಕ್ಕ ಔಷಧಿಗೆ ಖರ್ಚು ಮಾಡುತ್ತಾ ಇದ್ದೇವೆ. ನಾರುಬೇರಿನಿಂದ ಖಾಯಿಲೆ ಹೋಗುವುದಕ್ಕೆ ಔಷಧಿ ಬೇಕೆಂದರೆ 10 ರೂಪಾಯಿ ಅನ್ನುತ್ತಾನೆ. ಟಾನಿಕ್ ಅಂತ ಏನು ಹೇಳುತ್ತಾರೆ ಅದನ್ನು ಕಷಾಯದಲ್ಲಿ ಪಡೆದುಕೊಳ್ಳಬಹುದು. 8 ಆಣೆಯಲ್ಲಿ ವಾಸಿಯಾಗುವ ಖಾಯಿಲೆಗೆ 10 ರೂಪಾಯಿನ ಔಷಧಿ ಬರೆದುಕೊಡುತ್ತಾರೆ. ಬಡವನಿಗೆ ಅದು ಎಟಕುವುದಿಲ್ಲ. ಆದ್ದರಿಂದ ನಮ್ಮ ದೇಶೀಯ ಪದ್ಧತಿ ಏನಿದೆ ಅದರ ಬಗ್ಗೆ ಪರಿಣಾಮ ಮತ್ತು ಉಳಿತಾಯದ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಅಂಥಾ ಔಷಧಿಗಳನ್ನು ತಯಾರುಮಾಡುವುದು ಮತ್ತು ಅದಕ್ಕೆ ತಕ್ಕ ವೈದ್ಯಕೀಯ ವ್ಯವಸ್ಥೆ ಮಾಡುವುದೂ ಒಳ್ಳೆಯದೆಂದು ತಿಳಿದುಕೊಂಡಿದ್ದೇನೆ. ಡಾಕ್ಟರುಗಳ ಅಭಿಪ್ರಾಯ ಹೇಗಿದೆಯೋ ಗೊತ್ತಿಲ್ಲ. ಅವರು ಅಲೋಪತಿಯವರು ಬೇರೆ ಪದ್ಧತಿಗಳ ಬಗ್ಗೆ ಬೇಸರ ಅಥವಾ ತಾತ್ಸಾರ ಇಲ್ಲದೇ ಇರಬಹುದು. ಆದ್ದರಿಂದ ಈ ವಿಷಯವನ್ನು ಪರಿಶೀಲಿಸಬೇಕೆಂದು ಹೇಳಿ ಅವರನ್ನು ಕೇಳಿಕೊಂಡು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

Sri M. GHOUSE MOHIUDDIN (Raichur).—Mr. Speaker Sir, I am grateful to you for granting me a chance at least today.

Sir, human life is precious. Every State is bound to provide facilities for medical as well as public health. This Demand has been debated since two days. So, it is not necessary for me to elaborate more. But one point I will put up. Our country, India, consists of population living in villages only. There are few cities and towns. Majority of population resides in villages. From this point of view, we have to see that arrangements for medical and public health are made and what facilities they have provided for this population living in the villages. At the headquarters of the districts, there are hospitals and in cities there are several hospitals. These hospitals at the district level are not fully equipped. There are no facilities and amenities for them. At the level of the taluka, there are no doubt hospitals, but there are no meternity homes. It is necessary to establish maternity homes at every taluka so that all the villagers of that taluka may have the facility of maternity home.

In like manner, at the headquarters of a Panchayet, there must be one dispensary to serve all the villages that come under that Panchayet. Sir, last year, there was one Cess, Bill which was passed in this House and at that time the Hon'ble Minister for Finance assured us that the income derived through that Cess would be solely provided for medical and public health facilities to all the villages. Now, we have to see as to how far this promise has been implemented by Medical and Health Departments.

Sir, besides all party there are two systems of medicines called Ayurvedic and Unani and these are very cheap. But we are sorry to see that these two systems are not duly encouraged by Government. For instance, at Raichur there is one Unani Dispensary. The population of Raichur is 80,000. But, you will be surprised to know that the provision made for that dispensary is only one rupee per day and the medicines are supplied from Bangalore which are not genuine medicine. The Unani Hakim complains that some medicines which ought to be prepared with honey are prepared with jaggery. If jaggery is used for the preparation instead of honey, what effect it would have may just be imagined. All this is because there are no separate Directorates. So, it is necessary that a separate Directory is constituted for these two systems.

Sir, I want to point out one important thing in this connection and I request the Hon'ble Chief Minister to kindly take note of this. Sir, according to the Fazal Ali Commission, States were reorganised mostly on linguistic basis. But what is happening now in regard to human treatment is the point which I would like to bring to the notice of the House and the Chief Minister. Sir, recently, a girl suffering from bone T. B. was taken to Hyderabad hospital. She was not admitted there because she belonged to Mysore State. This is the inhuman attitude that is developing in some hospitals in the States. Because a patient belongs to another State, it should not be a bar for the admission of that

patient to any hospital of any State. This is a point to be tackled at the State level and I request the Hon'ble Chief Minister to please look into this question.

Sri C. J. MUCKANNAPPA.—Is there anything in the S.R.C. Report about this?

Sri M. GHOUSE MOHIUDDIN.—No; but that is the feeling created as a result of the States Reorganisation. Then, Sir, I would be failing in my duty if I do not bring some of the affairs of the Raichur Dispensary. There was a Doctor by name Dr. Rama Rao and there were so many complaints about him. He was the District Surgeon.

Sri C. J. MUCKANNAPPA.—Sir, there is a ruling that name of a particular individual should not be dragged here. What is the complaint? Is it corruption or nepotism?

Sri M. GHOUSE MOHIUDDIN.—Corruption, nepotism and ill-treatment and so many allegations.

Sri K. NAGAPPA ALVA (Minister for Health).—Enquiry was held, Sir.

Sri M. GHOUSE MOHIUDDIN.—As far as I know, no officer came there for any enquiry. But, he was transferred and we are glad for that. But, another District Surgeon is thrust on our heads (laughter). Ever-since he came, the public have so many grievances which I will enumerate. Sir, the designation of that person is District Surgeon but he is a raw hand in operation. I will give an instance. For tonsil operation three girls of the age of 10 and 11 were taken to him and every girl was very anxious that she should be operated first. One girl was taken for operation and when he conducted the operation for tonsil the girl expired there itself. The other two girls ran away. He has conducted so many operations and all of them have failed. About the administration of that dispensary, I will give one instance. There was a patient in the hospital and he died; he was a villager. The body was kept in the mortuary room. According to rule, the body should be kept in the mortuary room for three days. The next day a man came to inquire about the patient and he was informed that he expired and the body was kept in the mortuary room and that the same may be removed. He said that he was alone and he would go to the village and bring some more persons to remove the dead body. After twelve days there was a murder case and that dead body was brought for post-mortem to the mortuary room. When they put this dead body on the table, they found that there was another dead body lying there. Then, they recollected that they had kept the dead body of the villager there. The police was informed in the night. It was not possible for the police to take the dead body then. So, in the morning the Sub-Inspector of Somwarpet Police Station went to the Hospital but the body could not be removed as it was decomposed and lot of foul smell was eminating from it He was a clever S.I. He spent three rupees from his pocket and gave drinks to some people and got the body removed. In a drunken state, they took the dead body from the mortuary.

MR. CHAIRMAN.—Now the House will rise for half-an-hour and meet again at 3-30 P.M.

The House adjourned for recess at Three of the Clock and re-assembled at Thirty Minutes past Three of the Clock.

[MR. CHAIRMAN (SRI M. SREENIVASA NAYAK) in the Chair]

SRI M. GHOUSE MOHIUDDIN.—Sir, I was speaking about the dead body which was kept in mortuary room of Raichur dispensary for 12 days. This matter was reported in 'Lokvani', a Kannada weekly of Raichur District and the 'Blitz' of Bombay. I myself sent a report to the Hon. Minister for Health, the Chief Minister and the Director of Medical Services. To the extent I am aware, no action has been taken. The District Surgeon is still working in Raichur.

About this District Surgeon working at Raichur, I have much to say. Women of any caste do not like to expose their bodies naked before any man. But in some cases she has to expose her body, say, before a doctor for an operation. At Raichur there are 2 lady doctors. One is a qualified, M.B.B.S lady doctor who conducts operations. Whenever she conducts operations on women, this District Surgeon is in the habit of going into the operation theatre. To this attitude of the District Surgeon, the people of Raichur have expressed resentment and objections. Why should he go there unnecessarily when his services are not needed ? Again, Government supplies good quantities of medicines to all hospitals but in Raichur we have complaint. The District Surgeon does not supply the medicines from the stores. Some of the medicines become time-barred. I came to know all these from some sources.

I would like the Hon. Minister for Health to investigate some aspects of the past career of this gentleman. Why he returned from England without acquiring any qualifications; why he could not remain in Tumkur for more than three months, what was the protest at Karwar about him ?

SRI NAGAPPA ALVA.—An inquiry has been held. Another inquiry is being conducted about this person.

SRI GHOUSE MOHIUDDIN.—In this connection, the Director of Medical Services came to Raichur. He did not send his programme beforehand. On 22nd he sent a letter to me saying that I could see him on 22nd and 24th. That letter was also sent to Agadi Sanganna, Ex-M.P., Srimati Basavarajeswari, M.L.A and Siddaramappa Patil. It shows that all these people have sent complaints about this D.S. As the Chief Minister came for a function on 22nd I went to see the Director on 24th morning. I was asked to see him at the hospital. I went there and waited for 20 minutes but as he did not turn up, I want to know what steps have been taken by the higher authorities in respect of the complaints made by me and other distinguished persons of that place.

I request the Hon. Minister for Health to consider my suggestion for establishing an outpatient dispensary at Raichur Town. The new building which has been constructed is very far away from Raichur town. It is more than 2 miles from certain areas in Raichur town and in some cases it is 3 miles away. No action has been taken in this regard.

These dispensaries are meant for the poor people but in practice we find poor people are not wanted there. The Hyderabad Karnatak area is backward in medical facilities and I request the Government to provide more medical amenitities in this area.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ರಾಜ್ಯದ ಆರೋಗ್ಯ ಮಂತ್ರಿಗಳು ಈ ಸಭೆಯಮುಂದೆ ಇಟ್ಟ ವೈದ್ಯಕೀಯ, ಹಾಗೂ ಜನಾರೋಗ್ಯ ರಕ್ಷಣೆಯ ಬೇಡಿಕೆಗಳನ್ನು ಸ್ವಾಗತಿಸಿ, ಈ ಸಮಯದಲ್ಲಿ ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಮಾಡಲು ಅಪೇಕ್ಷಿಸುತ್ತೇನೆ. ಸರ್ಕಾರದವರು ಜನಾರೋಗ್ಯ ರಕ್ಷಣೆಯ ಸಲುವಾಗಿ ಸಾಕಷ್ಟು ಪ್ರಚಾರವನ್ನು ಕೈಕೊಳ್ಳುವುದು ನಮ್ಮೆಲ್ಲರಿಗೂ ತಿಳಿದ ವಿಷಯ. ಆ ಪ್ರಚಾರದಂತೆ ಇವೊತ್ತು ಕಾರ್ಯಗತ ಮಾಡಲಿಕ್ಕೆ ವಿಳಂಬ ವಾಗುವುದನ್ನು ನೋಡಿ ಅದಕ್ಕೆ ವಿಷಾದ ಪಡಬೇಕಾಗಿದೆ. ಸರ್ಕಾರ ಸಾಕಷ್ಟು ಹಣವನ್ನು ಇವೊತ್ತಿನ ದಿವಸ ಜನಾರೋಗ್ಯ ರಕ್ಷಣೆಯ ಸಲುವಾಗಿ ಇಟ್ಟಿದೆ. ಆ ಹಣವನ್ನು ಹೇಗೆ ಉಪಯೋಗ ಮಾಡ ಬೇಕು ಎನ್ನುವುದನ್ನು ಅಲ್ಲಿಯ ಆಡಳಿತ ವರ್ಗದವರು ಸರಿಯಾಗಿ ಮಾಡುತ್ತಿಲ್ಲವೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಸರ್ಕಾರದವರು ಹಳ್ಳಿಯವರಿಗೆ ಸರಿಯಾದ ಔಷಧೋಪಚಾರ ಸಿಕ್ಕಲೆಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿ ಅದರ ಮುಖಾಂತರವಾಗಿ ಔಷಧಿಗಳನ್ನು ಒದಗಿಸ ಬೇಕೆಂಬ ಹವ್ಯಾಸವನ್ನಿಟ್ಟುಕೊಂಡಿದ್ದಾರೆ. ಆದರೆ ಎಷ್ಟು ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರುಗಳು, ನರ್ಸ್‌ಗಳು, ಹೆಲ್ತ್ ವಿಸಿಟರುಗಳು ಇದ್ದಾರೆನ್ನುವುದು ವಿಚಾರ ಮಾಡತಕ್ಕ ಸಂಗತಿ. ಸಾಕಷ್ಟು ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರಿದ್ದ ಕಡೆ ಉಳಿದ ಸಿಬ್ಬಂದಿಯಿಲ್ಲ; ಉಳಿದ ಸಿಬ್ಬಂದಿ ಇದ್ದರೆ ಡಾಕ್ಟರು ಗಳಿಲ್ಲ. ಈ ತರನಾದ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ಆದಷ್ಟು ಹೆಚ್ಚಿಗೆ ಡಾಕ್ಟರುಗಳನ್ನು ಒದಗಿಸಲೇ ಬೇಕಾಗಿದೆ. ಆರೋಗ್ಯ ಕೇಂದ್ರಗಳನ್ನು ತೆರೆದು ಅದರ ಮುಖಾಂತರ ಸವಲತ್ತುಗಳನ್ನು ಒದಗಿಸ ಬೇಕೆಂದು ಸರ್ಕಾರಕ್ಕೆ ಈ ಸಮಯದಲ್ಲಿ ಹೇಳುತ್ತೇನೆ. ಆರೋಗ್ಯ ಕೇಂದ್ರಗಳನ್ನು ಕೊಡಬೇಕಾದರೆ 15 ಸಾವಿರ ಜನಸಂಖ್ಯೆ ಇರಬೇಕು ಎಂದು ಯೋಜನೆಯನ್ನಿಟ್ಟುಕೊಂಡಿದ್ದಾರೆ. ಮತ್ತು ಹೊಸದಾಗಿ ಯಾರಾದರೂ ಆರೋಗ್ಯ ಕೇಂದ್ರಗಳನ್ನು ಕೇಳಿದಾಗ ಅವರು 17 ಸಾವಿರ recurring ಮತ್ತು 17½ ಸಾವಿರ ರೂಪಾಯಿ non-recurring charges ಯಾರು ಕೊಡುತ್ತಾರೆಯೋ ಅಂಥವರಿಗೆ ಮಾತ್ರ ಆರೋಗ್ಯ ಕೇಂದ್ರಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಆದರೆ ಇವೊತ್ತಿನ ದಿವಸ ತಾಲ್ಲೂಕು ಬೋರ್ಡಿನವರು ಕೂಡ ಭಾಗವಹಿಸುವ ಪರಿಸ್ಥಿತಿಯೊಳಗೆ ಇಲ್ಲ. ತಾಲ್ಲೂಕು ಬೋರ್ಡಿನಲ್ಲಿ ಹಣ ಕಡಮೆಬಂದಾಗ ಯಾವ ರೀತಿ ಈ ಕೇಂದ್ರಗಳನ್ನು ನಡೆಸಬೇಕೆನ್ನುವುದು ತಿಳಿಯದಾಗಿದೆ.

ಬೊಂಬಾಯಿ ಕರ್ಣಾಟಕದ ಬಗ್ಗೆ ಹೇಳುವುದಾದರೆ ಅಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಕೇಂದ್ರವಿದೆ. ಮತ್ತೊಂದು ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದರೆ ಹಣವಿಲ್ಲ ವೆಂದು ಕೂಡ ತಕ್ಕ ಪರಿಸ್ಥಿತಿ ಬಂದಿದೆ

ಬೊಂಬಾಯಿ ಕರ್ಣಾಟಕ ಭಾಗದಲ್ಲಿ ನಾಲ್ಕೈದು ಹಳ್ಳಿಗಳನ್ನು ಜೋಡಿಸಿ S.M.P. centres ಎಂದು ತೆಗೆದು ಒಂದು ರೀತಿ ಮಾಡಿದ್ದಾರೆ. ಅವು ಅತ್ಯುತ್ತಮವಾಗಿ ಕೆಲಸ ಮಾಡಿಕೊಂಡು ಬಂದಿವೆ ಎಂದು ನನ್ನ ಅನುಭವವಿದೆ. ಈ ಕೇಂದ್ರಗಳಿಗೆ ಆಯುರ್ವೇದ ಡಾಕ್ಟರುಗಳನ್ನು ಹಾಕಿ ಅದಕ್ಕೆ ಸಂಬಂಧಪಟ್ಟಂತೆ 300-400 ರೂಪಾಯಿ ಆಯುರ್ವೇದ ಔಷಧಿಗಳನ್ನು ಸಪ್ಲೈ ಮಾಡುತ್ತ ಬಂದಿದ್ದಾರೆ. ಈ S.M.P. Cntres ನಲ್ಲಿರುವ ಆಯುರ್ವೇದ ವೈದ್ಯರಿಗೆ ಅಲೋಪಥಿಯಲ್ಲಿ ಮೂರು ನಾಲ್ಕು ತಿಂಗಳು ಟ್ರೈನಿಂಗ್ ಕೊಟ್ಟು ಅವರಿಗೆ ನೂತನ ಔಷಧಿ ಸಾಮಗ್ರಿಗಳನ್ನು ಒದಗಿಸಲು ಸರ್ಕಾರ ಪ್ರಯತ್ನ ಮಾಡಿದರೆ ಡಾಕ್ಟರುಗಳ ಅಭಾವ ಕಡಮೆಯಾಗಬಹುದು ಎಂದು ನಾನು ಸೂಚನೆ ಮಾಡಬಯಸುತ್ತೇನೆ.

S.M.P. ಸೆಂಟರ್‌ಗಳನ್ನು ಪ್ರತಿಯೊಂದು ಕಡೆಯೂ ತೆಗೆದು ಡಾಕ್ಟರನ್ನು ಪೋಸ್ಟ್ ಮಾಡಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಡಬೇಕು.

ಪ್ರೈಮರಿ ಹೆಲ್ತ್ ಸೆಂಟರುಗಳ ಬಗ್ಗೆ ಒಂದೆರಡು ವಿಷಯ ಹೇಳಬೇಕೆಂದರೆ ಅಲ್ಲಿ ಕೆಲಸ ಮಾಡುವ ಡಾಕ್ಟರು ಮುಂಜಾನೆ ಆಸ್ಪತ್ರೆಯಲ್ಲಿದ್ದು, ಮಧ್ಯಾಹ್ನ ಜೀಪಿನಲ್ಲಿ ಹಳ್ಳಿಗಳಿಗೆ ಹೋಗಿ ಸಂದರ್ಶಿಸಿ ಕೊಂಡು ಬರತಕ್ಕ ಪರಿಸ್ಥಿತಿ ಇದೆ. ಈ ಪ್ರಾಥಮಿಕ ಹೆಲ್ತ್ ಯೂನಿಟ್ಟಿಗೆ ಸಂಬಂಧಿಸಿದ ಸಿಬ್ಬಂದಿ

(ಶ್ರೀ ಸಿದ್ದಯ್ಯ ಕಾಶೀಮಠ)

20 ಸಾವಿರ ಜನಸಂಖ್ಯೆಗೆ ಒಳಪಡುವ ಹಳ್ಳಿಗಳಿಗೆ ಭೇಟಿಕೊಡತಕ್ಕ ವಿಚಾರದಲ್ಲಿ ಕೆಲವೊಂದು ಸಲಹೆಗಳನ್ನು ಕೊಡಬೇಕೆಂದಿದ್ದೇನೆ.

ಇದರಿಂದ ಏನಾಗಿದೆ ಎಂದರೆ ಹಾಸ್ಪಿಟಲ್ಲುಗಳಲ್ಲಿ ಡಾಕ್ಟರುಗಳಿಲ್ಲದಂತಾಗಿದೆ. ಅದಕ್ಕಾಗಿ ಇಂತಹ ಹಾಸ್ಪಿಟಲ್ಲುಗಳಲ್ಲಿ ಒಬ್ಬೊಬ್ಬರು ಅಸಿಸ್ಟೆಂಟರುಗಳನ್ನಾದರೂ ನೇಮಕ ಮಾಡಿದರೆ, ಡಾಕ್ಟರುಗಳಿಲ್ಲದಿದ್ದರೂ ಅಲ್ಲಿಗೆ ಬಂದಂತಹ ಜನಗಳಿಗೆ ಇಂತಹ ಅಸಿಸ್ಟೆಂಟರುಗಳಿಂದ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ಯೋಚನೆ ಮಾಡಬೇಕು.

ಪ್ರೈಮರಿ ಹೆಲ್ತ್ ಯೂನಿಟ್ಟುಗಳಲ್ಲಿರುವ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸತಕ್ಕ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಆಸ್ಪತ್ರೆಗಳಿಂದ ಔಷಧಿಗಳಿಗಾಗಿ ಇಂಡೆಂಟನ್ನು ಕಳುಹಿಸಿದರೆ, ನಿರ್ದಿಷ್ಟವಾದ ಔಷಧಿಗಳನ್ನು ಕೊಳ್ಳಬೇಕಾದರೆ ಸರ್ಕಾರದಿಂದ ಮನ್ನಣೆ ಪಡೆದಂತಹ ಸ್ಟೋರುಗಳಿಂದಲೇ ಈ ಔಷಧಿಗಳನ್ನು ಕೊಳ್ಳಬೇಕೆಂದು ಮಾಡಿದ್ದಾರೆ. ಇವೊತ್ತಿನ ದಿವಸ ನಮ್ಮ ಬಿಜಾಪುರ ಜಿಲ್ಲೆಗೆ ಔಷಧಿ ಬೇಕಾದರೆ ಬೆಂಗಳೂರಿನಲ್ಲಿರುವ ಮನ್ನಣೆ ಪಡೆದಂತಹ ಸ್ಟೋರುಗಳಿಗೆ ಬಂದು ಔಷಧಿಗಳನ್ನು ಕೊಂಡುಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ಅಲ್ಲದೆ ಕೆಲವು ವೇಳೆ ಇಲ್ಲಿಂದ ಇಂಡೆಂಟು ಕಳುಹಿಸುವ ಔಷಧಿಗಳೂ ಅಂತಹ ಸಮಯದಲ್ಲಿ ಸಿಗುವುದಿಲ್ಲ ಇದರಿಂದ ರೋಗವನ್ನು ವಾಸಿ ಮಾಡಲು ಅನುಕೂಲವಾದ ಔಷಧಿಗಳೂ ಸಿಗುವುದಿಲ್ಲ. ಅದಕ್ಕಾಗಿ ಆದಷ್ಟು ಮಟ್ಟಿಗೆ ಆಯಾ ಜಿಲ್ಲೆಗೆ ಸಂಬಂಧಪಟ್ಟಂತೆ ಹತ್ತಿರವಿರುವ ಊರುಗಳಲ್ಲಿ ಮನ್ನಣೆ ಪಡೆದಂತಹ ಸ್ಟೋರ್ಸುಗಳನ್ನು ತೆರೆದು ಅಲ್ಲಿಂದ ಸರಳವಾಗಿ ಮತ್ತು ಸುಲಭವಾಗಿ ಔಷಧಿಗಳು ದೊರೆಯುವಂತೆ ಮಾಡಿದರೆ, ಇಂತಹ ತೊಂದರೆಗಳು, ಅನಾನುಕೂಲಗಳು ತಪ್ಪುತ್ತವೆ ಎಂದು ಈ ಸಮಯದಲ್ಲಿ ಹೇಳುತ್ತೇನೆ.

ನಮ್ಮ ಭಾಗದಲ್ಲಿ ಕರ್ನಾಟಕ ಮೆಡಿಕಲ್ ಹಾಸ್ಪಿಟಲ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇಲ್ಲಿಗೆ ಹೆಚ್ಚಿನ ಅನುಕೂಲಗಳು ಸಿಗುತ್ತೆ ಎಂದು ಹೆಚ್ಚುಹೆಚ್ಚಾಗಿ ಜನರು ಬರುತ್ತಿದ್ದಾರೆ. ಆದರೆ ಇಲ್ಲಿ ಕೆಲಸ ಮಾಡಲು ಸಾಕಷ್ಟು ಸಂಖ್ಯೆಯಲ್ಲಿ ಡಾಕ್ಟರುಗಳಿಲ್ಲ. ಇಲ್ಲಿ ಇನ್ನೂ ಹೆಚ್ಚಾಗಿ ಡಾಕ್ಟರಗಳನ್ನು ನೇಮಿಸಿದರೆ ಇಲ್ಲಿನ ಜನಕ್ಕೆ ಅನುಕೂಲವಾಗುತ್ತದೆ. ಇಲ್ಲಿಗೆ ಇನ್ನೂ ಒಬ್ಬರು ಡಾಕ್ಟರೂ ಒಬ್ಬರು ಲೇಡಿ ಡಾಕ್ಟರನ್ನಾದರೂ ಬೇಗನೆ ನೇಮಿಸಿದರೆ, ಇಲ್ಲಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ವಿಚಾರ ಮಾಡಬೇಕು. ಅಲ್ಲದೆ ಈಗಿರುವ ಒಬ್ಬೊಬ್ಬ ಡಾಕ್ಟರುಗಳೂ ದಿವಸಕ್ಕೆ ಹನ್ನೆರಡು ಗಂಟೆಗಳಷ್ಟು ಕಾಲ ಕೆಲಸ ಮಾಡಬೇಕಾಗಿದೆ. ಇದಕ್ಕೆ ಬದಲಾಗಿ ಆರುತಾಸುಗಳಷ್ಟು ಕೆಲಸ ಮಾಡಲು ನಾಲ್ಕು ಷಿಫ್ಟುಗಳಂತೆ ಮಾಡಿದರೂ ಅನುಕೂಲವಾಗುತ್ತದೆ. ಕೆಲವು ವೇಳೆ 24-ಗಂಟೆಗಳ ಕಾಲವೂ ಕೆಲಸ ಮಾಡಬೇಕಾಗಿ ಬರುತ್ತದೆ. ಇದರ ಕಡೆಗೆ ಸ್ವಲ್ಪ ಗಮನ ಕೊಡಬೇಕು.

ಇನ್ನು ಊಟವನ್ನು ಕೊಡುವ ವಿಚಾರದಲ್ಲಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಇಲ್ಲಿ ಕೊಡುವ ರೊಟ್ಟಿ ಮತ್ತಿತ್ತರ ಆಹಾರಗಳನ್ನು ಸರಿಯಾಗಿ ತಯಾರು ಮಾಡದೇ ಕೊಡುತ್ತಿದ್ದಾರೆ. ಅಲ್ಲದೆ ಕೊಳೆತ ಹಣ್ಣುಗಳನ್ನು ಕೊಡುತ್ತಿದ್ದಾರೆಂದು ತಿಳಿದುಬರುತ್ತದೆ. ಇದರ ಬಗ್ಗೆ ಆಹಾರವನ್ನು ಸರಬರಾಜು ಮಾಡುವ ಅಧಿಕಾರಿಗಳು ಸರಿಯಾದ ಆಹಾರವನ್ನು ಸಪ್ಲೈ ಮಾಡಲು ತಕ್ಕ ಕ್ರಮ ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನೊಂದು ವಿಷಯ ಅದು ರೋಗಿಗಳಿಗೆ ಕೊಡುವ ಡ್ರೆಸ್ಸಿನ ವಿಚಾರ. ಇಲ್ಲಿ ಕೊಡುವ ಡ್ರೆಸ್ಸುಗಳನ್ನು ನೋಡಿದರೆ, ಇದು ಖೈದಿಗಳೂ ಕೂಡ ಉಡದಂತಹ ಡ್ರೆಸ್ಸು ಆಗಿದೆ ಎಂತ ಹೇಳಬಹುದು. ರೋಗಿಗಳ ಮನಸ್ಸಿನಮೇಲೆ ಸರಿಯಾದ ಪರಿಣಾಮವಾಗತಕ್ಕಂತೆ ಇವರಿಗೆ ಡ್ರೆಸ್ಸುಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಈಗ ಕೊಡುತ್ತಿರುವ ಬಟ್ಟೆ ಬಹಳ Rough ಆದುದು. ಇದನ್ನು ಬದಲಾಯಿಸಿ ಮೃದುವಾಗಿರುವಂತಹ ಮತ್ತು ಚೆನ್ನಾಗಿರುವ ಡ್ರೆಸ್ಸನ್ನು ಕೊಡಬೇಕು ಎಂದು ಹೇಳುತ್ತೇನೆ. ಇದಕ್ಕಾಗಿ ಸರಕಾರ ರೊಕ್ಕ ಕೊಡುತ್ತಿರುವುಧರಿಂದ ಕೊಳ್ಳುವಾಗ ಸ್ವಲ್ಪ ಮೆತ್ತಗಿರತಕ್ಕ ಬಟ್ಟೆಗಳನ್ನು ತೆಗೆದು ಮತ್ತು ಶುಚಿಯಾಗಿ ಮಾಡಿರುವ ಬಟ್ಟೆಗಳನ್ನು ಇಲ್ಲಿನ ರೋಗಿಗಳಿಗೆ ಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಈ ಆಸ್ಪತ್ರೆಗೆ ಬೇಕಾದ ಕೆಲವೊಂದು ಸಾಮಗ್ರಿಗಳನ್ನು ಇನ್ನೂ ಒದಗಿಸಿಲ್ಲ ಎಂದು ತಿಳಿದುಬರುತ್ತದೆ. ಇವನ್ನೆಲ್ಲಾ ತಿಳಿದುಕೊಂಡು ತೀವ್ರವಾಗಿ ಒದಗಿಸಿದರೆ ಈ ಆಸ್ಪತ್ರೆಯಿಂದ ಜನಗಳಿಗೆ ಬಹಳ ಒಳ್ಳೆಯದಾಗುತ್ತದೆ. ಇದರ ಕಡೆಗೆ ಸ್ವಲ್ಪ ಪ್ರಯತ್ನ ಮಾಡಬೇಕು.

ಹುಬ್ಬಳ್ಳಿಯಲ್ಲಿ ಬಹಳ ಉತ್ತಮವಾಗಿ ಕೆಲಸ ಮಾಡತಕ್ಕ ಡಾಕ್ಟರಗಳು ಇಲ್ಲಿರುವ ಒಂದು ಕೋ-ಆಪರೇಟಿವ್ ಹಾಸ್ಪಿಟಲ್ಲಿನಲ್ಲಿದ್ದಾರೆ. ಈ ಕೋ-ಆಪರೇಟೀವ್ ಸಂಸ್ಥೆಯವರಿಂದ ಈ ಆಸ್ಪತ್ರೆ ಚೆನ್ನಾಗಿ ಕೆಲಸ ಮಾಡುತ್ತಿರುವುದರಿಂದ ಜನಗಳೂ ಇದಕ್ಕೆ ಹೆಚ್ಚಾಗಿ ಹೋಗುತ್ತಿದ್ದಾರೆ. ಇದರ

ಬಗ್ಗೆ ಸರಕಾರದವರು ಸ್ವಲ್ಪ ಗ್ರ್ಯಾಂಟನ್ನು ಕೊಡುತ್ತಿದ್ದಾರೆ. ಇದನ್ನು ಸರಕಾರ ಗಮನಿಸಿ ಇನ್ನೂ ಸ್ವಲ್ಪ ಹೆಚ್ಚಿನ ಗ್ರ್ಯಾಂಟನ್ನು ಕೊಟ್ಟು ಸಹಾಯ ಮಾಡಿದರೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ.

Sri B. D. JATTI (Minister for Finance).—It is a private institution.

Sri SIDDIAH KASIMAT.—It is a co-operative hospital.

Sri B. D. JATTI.—The point is this; the grant that is given is given as a matter of discretion. They cannot compel Government to give so much grant. After all, it is a private institution.

ಶ್ರೀ ಸಿದ್ದಯ್ಯ ಕಾಶೀಮಠ್.—ಅದಷ್ಟೂ ಇಲ್ಲಿನ ಜನಕ್ಕೆ ಹೆಚ್ಚಾಗಿ ಉಪಯೋಗವಾಗುತ್ತದೆ. ಏಕೆಂದರೆ ಇಲ್ಲಿಯೂ ಕೂಡ ಕೆಲವರಿಗೆ ಉಚಿತವಾಗಿ ಔಷಧಿಗಳನ್ನು ಕೊಡುತ್ತಿದ್ದಾರೆ. ಇಂತಹ ಸಂಸ್ಥೆಗಳಿಗೆ ಸರಕಾರ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಸಹಾಯ ಮಾಡಿದರೆ ಬಹಳ ಜನರಿಗೆ ಸಹಾಯ ಮಾಡಿದಂತಾಗುತ್ತದೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಹೋದವರ್ಷ ಸಹ ಸ್ವಲ್ಪ ಸಹಾಯ ಮಾಡಿದ್ದಾರೆ. ಈ ರೀತಿ ಈ ಸಲವೂ ಸ್ವಲ್ಪ ಹೆಚ್ಚಿನ ಸಹಾಯ ಮಾಡಬಹುದು ಎಂದು ಸಲಹೆ ಮಾಡುತ್ತೇನೆ.

[MR. SPEAKER in the Chair]

ಈ ಹಿಂದೆ ಬೊಂಬಾಯಿ-ಕರ್ಣಾಟಕದಲ್ಲಿ ಮೆಡಿಕಲ್ ಇಲಾಖೆಯಲ್ಲಿದ್ದ ಕೆಲವು ನರ್ಸುಗಳನ್ನು 1956 ರಲ್ಲಿ ಇಂಟಿಗ್ರೇಷನ್ ಆದಮೇಲೆ ಇಲ್ಲಿಗೆ ಬಂದಾಗ ಆ ಜನರನ್ನು ಇಲ್ಲಿ ಪಬ್ಲಿಕ್ ಹೆಲ್ತ್ ಇಲಾಖೆಗೆ ವರ್ಗಾಯಿಸಿದ್ದಾರೆ. ಆದ್ದರಿಂದ ಆ ಇಲಾಖೆಯಲ್ಲಿ ಕೆಲವು ಹೆಸರುಗಳು ಬಿಟ್ಟುಹೋಗಿವೆ. ಇದರಿಂದ ಸರಿಯಾದ ಸೀನಿಯಾರಿಟಿ ದೊರಕಲಿಲ್ಲ ಎಂದು ಹೇಳುತ್ತಾರೆ. ಇದನ್ನೂ ತೀವ್ರವಾಗಿ ಪರಿಶೀಲಿಸಿ ಸರಿಪಡಿಸಬೇಕು.

Mr. SPEAKER.—He is discussing a Demand that has already been passed.

Sri SIDDIAH KASIMAT.—It relates to the Medical Department because that Department has deputed those nurses to the Public Health Department.

ಈಗಾಗಲೇ ನಾನು ಹೇಳಿದಂತಹ ಸಲಹೆಗಳನ್ನೆಲ್ಲಾ ಪರಿಶೀಲನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ವ್ಯವಸಾಯಾಭಿವೃದ್ಧಿ ಮತ್ತು ಆಹಾರೋತ್ಪತ್ತಿ ಜಾಸ್ತಿಯಾಗಬೇಕು, ಅದಕ್ಕೋಸ್ಕರವಾಗಿ minor irrigation ಗೆ ಬಹಳ ಹಣವನ್ನು ಒದಗಿಸುತ್ತಿದ್ದೀರಿ. ಇದು ಬಹಳ ಸ್ತುತ್ಯವಾದ ಕೆಲಸವೆಂದು ನಾನು ಮೇಲಿಂದ ಮೇಲೆ ಹೇಳಿದ್ದೇನೆ. ಇವೊತ್ತು, ಕೂಡ ತುರ್ತು ಪರಿಸ್ಥಿತಿಯಲ್ಲಿ ಕೂಡ ಹೆಚ್ಚು ಆಹಾರ ಬೇಕಾಗಿರುವ ಸಮಯದಲ್ಲಿ minor irrigation ಗೆ ಹೆಚ್ಚು ಗಮನ ಕೊಡುತ್ತೇವೆಂದು ಹೇಳಿರುವುದು ನಿಜವಾಗಿಯೂ ಬಹಳ ಸ್ತುತ್ಯವಾದ ಕೆಲಸ. ಈ ಮೈನರ್ ಇರಿಗೇಷನ್ ವಿಚಾರದಲ್ಲಿ ಮಾತನಾಡುವಾಗ ನಮ್ಮ ದೇಶದಲ್ಲಿ ಆದಿಕಾಲದಿಂದಲೂ ಇರುವಂಥ ಕೆರೆಗಳು ಸಹಸ್ರಾರು ಸಂಖ್ಯೆಯಲ್ಲಿವೆ. ಆ ಕೆರೆಗಳನ್ನು ಸರಿಯಾಗಿ, ಶೀಘ್ರವಾಗಿ ರಿಪೇರಿ ಮಾಡಿದರೆ ಖಂಡಿತವಾಗಿಯೂ ನಮ್ಮ ದೇಶದಲ್ಲಿ ಅನೇಕ ಲಕ್ಷ ಎಕರೆಗಳಲ್ಲಿ ಬಹಳ ಸುಲಭವಾಗಿ ವ್ಯವಸಾಯ ಮಾಡತಕ್ಕ ಸೌಲಭ್ಯವಿದೆ. ಇದನ್ನು ತಾವು ಹೆಚ್ಚಿನ ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ.

ಮೈನರ್ ಇರಿಗೇಷನ್ ವಿಚಾರವಾಗಿ ಮಾತನಾಡುವಾಗ ಒಂದು ವಿಷಯವನ್ನು ಹೇಳಬೇಕಾಗಿದೆ. ಮೊದಲು ಇದಕ್ಕಾಗಿಯೇ ಪ್ರತ್ಯೇಕವಾಗಿ minor irrigation circle ಎಂದು ಇತ್ತು. ಅದನ್ನು ಈಗ ತೆಗೆದು amalgamate ಮಾಡಿದ್ದಾರೆ.

ಕೆಲಸ ಚೆನ್ನಾಗಿಮಾಡಲು ಅನುಕೂಲವಾಗುವಂತೆ ಇರಿಗೇಷನ್ ಶಾಖೆಯನ್ನು ಡಿವಿಜನ್ ಮತ್ತು ಸರ್ಕಲ್‌ಗಳನ್ನಾಗಿಮಾಡಿ ಈ ಬಾಬಿನಿಂದ ಹೆಚ್ಚಿನ ಅನುಕೂಲ ಪಡೆಯಲು ವ್ಯವಸ್ಥೆ ಮಾಡಬೇಕಾಗಿದೆ.

ತಮಗೆ ಇನ್ನೊಂದು ಸಲಹೆ ಮಾಡಬೇಕಾಗಿದೆ. ಈಗ ತಾವು ಮಾಡಿರುವ ಇಂಜನೀಯರಿಂಗು ಡಿವಿಜನ್ನುಗಳು ಮತ್ತು ಸರ್ಕಲ್ಲುಗಳು ಏನಿವೆ, ಅವು ಶಾಸ್ತ್ರೀಯವಾಗಿ ಆಗಿಲ್ಲ. ಕೆಲವು ಕಡೆ ಎಲ್ಲಿ ಕೆಲಸ ಕಡಿಮೆ ಇದೆಯೋ ಅಲ್ಲಿ ಕೆಲಸಮಾಡಲು ಹೆಚ್ಚಿನ ಇಂಜನೀಯರುಗಳಿದ್ದಾರೆ. ಎಲ್ಲಿ ಜಾಸ್ತಿ ಕೆಲಸಗಳಾಗಬೇಕಾಗಿದೆಯೋ ಅಲ್ಲಿ ಇಂಜನೀಯರುಗಳು ಕಡಿಮೆ ಸಂಖ್ಯೆಯಲ್ಲಿರುತ್ತಾರೆ. ಆದ್ದರಿಂದ ತಾವು ಇದನ್ನು ಶಾಸ್ತ್ರೀಯವಾಗಿ ರೀ-ಆರ್ಗನೈಜು ಮಾಡಬೇಕು. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಈಗ ಎಲ್ಲಾ ಭಾಗದಲ್ಲಿಯೂ ಇವೆ. ಅಲ್ಲಿ ಏನಾದರೂ ರಸ್ತೆ ಕೆಲಸ ಮಾಡಬೇಕಾದರೆ ಅಲ್ಲಿ ಒಬ್ಬರು ಸಬ್-ಓವರ್‌ಸೀಯರಿರುತ್ತಾರೆ. ಅವರ ಕೈಯಲ್ಲಿ ಇಂತಹ ರಸ್ತೆ ಕೆಲಸಗಳನ್ನೆಲ್ಲಾ ಮಾಡಲು ಸಾಧ್ಯವಾಗುವುದಿಲ್ಲ. ಇನ್ನೂ ದೊಡ್ಡ ದೊಡ್ಡ ಶರಾವತಿ ಯೋಜನೆಯ ಕೆಲಸಗಳಲ್ಲಿ, ore carrying roadsಗಳ ಡಿವಿಜನ್ನುಗಳಲ್ಲಿ ನೋಡಿದರೆ ಅಲ್ಲಿ ಇಂಜನೀಯರುಗಳು ಹೇರಳವಾಗಿದ್ದಾರೆ. ಆದುದರಿಂದ ತಾವು ಡೀಟೇಲ್‌ಆಗಿ ಪರಿಶೀಲನೆ ಮಾಡಿ ರೀ-ಆರ್ಗನೈಜು ಮಾಡಿ ಇಂಜನೀಯರುಗಳ ಹಂಚಿಕೆಯ ಕೆಲಸವನ್ನು ಶಾಸ್ತ್ರೀಯವಾಗಿ ತೆಗೆದುಕೊಂಡು ಮಾಡಬೇಕೆಂದು ತಮ್ಮ ಮೂಲಕ ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಮತ್ತೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ವಿಚಾರ ಮಾಡುವಾಗ ತಮ್ಮಲ್ಲಿ ಪ್ರತಿಸಾರಿಯೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿರುತ್ತೇವೆ. ಈಗಲೂ ಸಹ ಬಿಚ್ಚುಮನಸ್ಸಿನಿಂದ ಒಂದು ವಿಚಾರ ಹೇಳುತ್ತೇನೆ. ಇದರ ಬಗ್ಗೆ ಈ ದೇಶದಲ್ಲಿ ನಿಜವಾಗಿಯೂ ಒಂದು ಸಂಶಯವಿದೆ. ನೀವು ಕೋಟಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಹೀಗೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿರುವುದು ಸರಿಯಾಗಿ ಖರ್ಚು ಆಗುತ್ತೊ ಇಲ್ಲವೋ ಎಂದು ಸಂಶಯ ಬಂದಿದೆ. ಇದರಲ್ಲೇನೋ ಲೋಪವಾಗಿದೆ ಎಂದು ಜನತೆ ಹೇಳುತ್ತಿದ್ದಾರೆ. ಲೋಕೋಪಯೋಗಿ ಶಾಖೆಯಲ್ಲಿ ತರುಣರಾದ ತಾವು ಸಚಿವರಾಗಿರುವಾಗ ಇದರ ಬಗ್ಗೆ ತಾವು ಕಟ್ಟುನಿಟ್ಟಾದ ನೀತಿಯನ್ನೂ ಇಟ್ಟುಕೊಂಡು ಇದನ್ನು ಪರಿಶೀಲಿಸಬೇಕು. ದೇಶದ ಜನತೆಯ ದುಡ್ಡು, ಕೋಟಿಗಟ್ಟಲೆಯಲ್ಲಿ ವಸೂಲು ಮಾಡಿ ಉಪಯೋಗಿಸುತ್ತಿರುವಾಗ ಅವರು ಕೊಟ್ಟ ಪ್ರತಿಯೊಂದು ಕಾಸೂ ಸರಿಯಾಗಿ ವಿನಿಯೋಗವಾಗುವುದರ ಕಡೆಗೆ ತಾವು ಗಮನ ಕೊಡಬೇಕು. ಈ ವಿಚಾರವನ್ನು ನಾನೀಗ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ—ಬಹಳ ಪ್ರಭಾವವಿರತಕ್ಕಂಥ ಕೆಲವು ವ್ಯಕ್ತಿಗಳು ಇವೊತ್ತಿನ ದಿವಸ ದೊಡ್ಡ ದೊಡ್ಡ ಪ್ರಗತಿದಾಯಕವಾದ ಇಂಥ ದೊಡ್ಡ ಯೋಜನೆಗಳಲ್ಲಿ ಕೆಲಸಗಳನ್ನು ಹಿಡಿದು ಸುಲಭ ರೀತಿಯಲ್ಲಿ ಹಣ ಸಂಪಾದನೆ ಮಾಡುತ್ತಿದ್ದಾರೆಂದು ಈ ದೇಶದಲ್ಲಿ ಜನತೆಯ ಮನಸ್ಸಿಗೆ ಒಂದು ಸಂಶಯ ಬಂದಿದೆ. ಅವರು ತಮ್ಮಂತಹವರ ಮೇಲೆ ಪ್ರಭಾವ ಬೀರಿ ವಿಶ್ವಾಸ ಸಂಪಾದಿಸುತ್ತಾರೆ. ಅದರಲ್ಲೂ ಇಂತಹ ಕಾಮಗಾರಿಯ ಕೆಲಸಗಳಲ್ಲಿರುವ ಒಳ್ಳೆಯ ಅಧಿಕಾರಿಗಳು ಕೂಡ ಯಾವ ರೀತಿಯಾಗಿ ಹಣ ದುರುಪಯೋಗ ಮಾಡಬಹುದು ಎಂಬುದನ್ನೂ ನಮ್ಮ ದೇಶದ ಜನತೆಗೆ ಹೇಳಿಕೊಡಬೇಕಾಗಿಲ್ಲ. ಅವರೇ ಹಂಚಿಕೊಂಡು ಕೆಲಸ ಮಾಡಿಕೊಳ್ಳಬಲ್ಲರು. ಇಲಾಖೆಯಲ್ಲಿ ಒಳ್ಳೆಯವರೂ ಇರುತ್ತಾರೆ. ನಾನು ಈ ವಿಚಾರದಲ್ಲಿ ಯಾವ ವ್ಯಕ್ತಿಗಳ ಮೇಲೆಯೂ ಆರೋಪಣೆ ಮಾಡುವ ಗೋಜಿಗೆ ಹೋಗುವುದಿಲ್ಲ. ಈ ದೇಶದಲ್ಲಿ ಈ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎಲ್ಲೆಲ್ಲಿ ಏನೇನು ಆಗುತ್ತಿದೆ ಎನ್ನುವುದು ಜನಕ್ಕೆ ಚೆನ್ನಾಗಿ ವಿದಿತವಾಗಿದೆ. ನಾನು ಈ ಬಗ್ಗೆ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದು

(ಶ್ರೀ ಎಸ್. ಶಿವಪ್ಪ)

ಏನೆಂದರೆ—ಅವರು ಇದನ್ನೆಲ್ಲಾ ಕಟ್ಟುನಿಟ್ಟಾಗಿ ವಿಚಾರಣೆ ಮಾಡಬೇಕು ಎಂದು ಅನೇಕ ಸಾರಿ ಹೇಳಿದ್ದೇನೆ. ಅದರಂತೆ ಈಗಲೂ ಹೇಳಿ ತಮ್ಮ ಮೂಲಕ ಸಚಿವರ ಗಮನವನ್ನು ಇತ್ತ ಸೆಳೆಯುತ್ತಿದ್ದೇನೆ.

ಮತ್ತೆ ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ ರೀತಿಯಲ್ಲಿ ನಮ್ಮ ದೇಶದಲ್ಲಿ ರಸ್ತೆಗಳ ಕೆಲಸಗಳನ್ನು ಮಾಡಲು ಸಾಕಷ್ಟು ಹಣವಿಲ್ಲ. ಈ ಸಾರಿ ರಸ್ತೆ ಕೆಲಸಗಳನ್ನು ಬಹಳ ಕಡಿಮೆ ಮಾಡಬೇಕಾಗಿದೆ ಎಂದು ಹೇಳಿದರು ಇದು ಬಹಳ ತಪ್ಪು ಭಾವನೆ. ಇವೊತ್ತಿನ ತುರ್ತಿನ ಪರಿಸ್ಥಿತಿಯಲ್ಲಿ ಆಹಾರದ ಸಂಪತ್ತು ಜಾಸ್ತಿಯಾಗಬೇಕಾದರೆ, ನಮ್ಮ ದೇಹದಲ್ಲಿ ರಕ್ತನಾಳಗಳು ದೇಹಕ್ಕೆ ಹೇಗೆ ಅಗತ್ಯವೋ ಹಾಗೇ ನಮ್ಮ ದೇಶದಲ್ಲಿ ಕೈಗಾರಿಕೆ ಮತ್ತು ವ್ಯವಸಾಯ ಕ್ಷೇತ್ರಗಳು ಬೆಳೆಯಬೇಕಾಗಿದ್ದರೆ ರಸ್ತೆಗಳು ಅಷ್ಟೇ ಪ್ರಾಮುಖ್ಯವಾದದ್ದು. ಇದರ ಬಗ್ಗೆ ಮೈಸೂರಿನ ಅಂಕಿ ಅಂಶಗಳನ್ನೂ ನಾನು ನೋಡಿದ್ದೇನೆ. ಅದರಂತೆ ನಮ್ಮ ದೇಶದ ಪರ್ಸಂಟೇಜ ಬಹಳ ಕಡಿಮೆಯಾಗಿದೆ. ಆಲ್ ಇಂಡಿಯಾ ಲೆವೆಲ್ಲಿನಲ್ಲಿಯೂ ನೋಡಿದರೆ ಭಾರತದಲ್ಲಿಯೂ ಕೂಡ ರಸ್ತೆಗಳ ಪರ್ಸಂಟೇಜು ಕಡಿಮೆ. ಅದರಂತೆ ನಮ್ಮ ಮೈಸೂರು ದೇಶದಲ್ಲಿಯೂ ಕೂಡ ರಸ್ತೆಗಳು ಬಹಳ ಕಡಿಮೆ. ಹಳ್ಳಿಗಳಿಂದ ಹಳ್ಳಿಗಳಿಗೆ ಹೋಗುವುದಕ್ಕೂ ಕೂಡ ಸರಿಯಾದ ರಸ್ತೆಗಳಿಲ್ಲ ಎಂದು ಹೇಳಲು ಬಹಳ ವಿಷಾದವಾಗುತ್ತದೆ. ಇದರ ಬಗ್ಗೆ ನಾನು ಹೇಳತಕ್ಕದ್ದು ರಸ್ತೆಗಳ ವಿಚಾರದಲ್ಲಿ ತಾವು ಇನ್ನೂ ಸ್ವಲ್ಪ ಹೆಚ್ಚಿನ ಹಣ ಕೊಟ್ಟು ಗ್ರಾಮಾಂತರ ರಸ್ತೆಗಳ ನಿರ್ಮಾಣಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಇವೊತ್ತಿನ ದಿವಸ ಗ್ರಾಮಾಂತರ ರಸ್ತೆಗಳ ವಿಚಾರಗಳಲ್ಲಿ ನಾನು ತಮಗೆ ಹೊಸದಾಗಿ ಹೇಳಬೇಕಾಗಿಲ್ಲ. ಕೆಲವು ಗ್ರಾಮಗಳು ದ್ವೀಪದಂತಿವೆ. ಅಲ್ಲಿಗೆ ಯಾರೂ ಹೋಗುವುದಕ್ಕೂ ಸಾಧ್ಯವಿಲ್ಲ. ಯಾವ ಕಡೆಯಿಂದಲೂ ಹೋಗಲಿಕ್ಕೆ ಸಾಧ್ಯವಿಲ್ಲ. ಅದರಲ್ಲೂ ನಮ್ಮ ದೇಶದ ಹೈದರಾಬಾದು ಕರ್ಣಾಟಕದ ಭಾಗಗಳಲ್ಲಿ ನಾನೂ ಹೋಗಿ ಸಂಚಾರ ಮಾಡಿ ನೋಡಿದ್ದೇನೆ. ಅಲ್ಲಿ ಕೆಲವು ಊರುಗಳಿಗೆ ಹೋಗಲು ಸರಿಯಾದ ರಸ್ತೆಗಳೇ ಇಲ್ಲ. ಅದರಲ್ಲೂ ತಾಲ್ಲೂಕು ಹೆಡ್ ಕ್ವಾರ್ಟರುಗಳಿಗೆ ಹೋಗುವುದಕ್ಕೂ ಆಗುವುದಿಲ್ಲ. ಇಂತಹ ಭಾಗದಲ್ಲಿ ಖಂಡಿತವಾಗಿಯೂ ರಸ್ತೆಗಳನ್ನು ನಿರ್ಮಾಣ ಮಾಡಿ, ತಾಲ್ಲೂಕು ಹೆಡ್ ಕ್ವಾರ್ಟರುಗಳಿಗೆ ಜನ ಹೋಗಲು ಸೌಕರ್ಯ ಮಾಡಿಕೊಡಬೇಕು. ಇಲ್ಲಿರುವ ರಸ್ತೆಗಳು ನಿಜವಾಗಿಯೂ ಬಹಳ ಶೋಚನೀಯ ಪರಿಸ್ಥಿತಿಯಲ್ಲಿದೆ. ಅದಕ್ಕಾಗಿ ಮೈಸೂರು ದೇಶದ ಎಲ್ಲಾ ಪ್ರದೇಶದ ಗ್ರಾಮಾಂತರ ಪ್ರದೇಶಗಳಲ್ಲಿರುವ ಎಲ್ಲಾ ಭಾಗಗಳಿಗೂ ಹೆಚ್ಚಿನ ಹಣವನ್ನು ರಸ್ತೆಗಳಿಗಾಗಿ ಒದಗಿಸಿಕೊಟ್ಟು ಈ ಕಾರ್ಯವನ್ನು ಚನ್ನಾಗಿ ಮಾಡಬೇಕು ಎಂದು ಸೂಚನೆ ಮಾಡಬೇಕಾಗಿದೆ.

ಇನ್ನು ಬಿಲ್ಡಿಂಗುಗಳ ವಿಚಾರದಲ್ಲಿ ನೀವೇನೋ ತುರ್ತಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ ಎಂದು ಹೇಳಬಹುದು. ಆದರೆ Necessity ಇರುವಂತಹ ರಸ್ತೆಗಳಿಗೂ ಹಾಗೂ ಸ್ಕೂಲು ಕಟ್ಟಡಗಳಿಗೂ ಮತ್ತು ಎಲ್ಲಿ ರಸ್ತೆ ಅಥವಾ ಶಾಲಾ ಕಟ್ಟಡಗಳ ಕೆಲಸ ಸ್ವಲ್ಪ ಆಗಿದ್ದು ಆ ಕೆಲಸ ಪೂರ್ತಿಯಾಗಿ ಮುಗಿಸದೆ ಅರ್ಧಕ್ಕೆ ಬಿಟ್ಟುಬಿಟ್ಟಿದ್ದಾರೋ ಅಂಥ ಬಾಬುಗಳಿಗೆ ಹಣವನ್ನೊದಗಿಸಲೇ ಬೇಕು. ಇಲ್ಲವಾದರೆ ಹಳ್ಳಿಗಾಡಿನ ಜನತೆಗೆ ಎಷ್ಟೋ ಕಷ್ಟವಾಗುತ್ತದೆ. ತಾವು ಕೆಲವುಕಡೆ ಹಳ್ಳಿಗಳಲ್ಲಿ ನೋಡಿರಬಹುದು. ಹಳ್ಳಿಗಳಲ್ಲಿರುವ ಮಕ್ಕಳು ಶಾಲಾ ಕಟ್ಟಡವಿಲ್ಲದೆ ಮುರುಕು ಚಾವಡಿಯಲ್ಲೋ ಮುರುಕಲು ದೇವಸ್ಥಾನದಲ್ಲೋ ಕುಳಿತು ಓದುತ್ತಿರುತ್ತಾರೆ. ಅದರಲ್ಲೂ ಕೆಲವು ಕಡೆ ಈ ಚಿಕ್ಕ ಪುಟ್ಟ ಮಕ್ಕಳನ್ನು ಮರದ ಕೆಳಗೆ ಕೂರಿಸಿ ಓದಿಸುತ್ತಿದ್ದಾರೆ. ಇದಕ್ಕಿಂತ ಶೋಚನೀಯವಾದ ಪರಿಸ್ಥಿತಿ ಬೇರೆ ಯಾವುದೂ ಇಲ್ಲ. ಎಷ್ಟೋ ಖರ್ಚು ಆಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಬೇಕಾದರೆ ಬೇರೆ ಯಾವುದಾದರೂ ಒಂದು ಪ್ರಾಜೆಕ್ಟಿಗೆ ಕೊಡುವ ಹಣವನ್ನು ತಪ್ಪಿಸಿ ಓದುವ ಮಕ್ಕಳಿಗೆ ಸ್ಕೂಲುಗಳನ್ನು ಕಟ್ಟಿಸಿಕೊಡಬೇಕಾದುದು ನಮ್ಮ ದೇಶದ ಆದ್ಯ ಕರ್ತವ್ಯ. ಸುಖೀರಾಜ್ಯ ಸ್ಥಾಪನೆ ಮಾಡುವಾಗ ನಮ್ಮ ನಾಡಿನ ಮಕ್ಕಳು ಬೆಳೆಯುವುದಕ್ಕಾಗಿ ತಕ್ಕ ಅವಕಾಶವನ್ನೂ ಕಲ್ಪಿಸಿಕೊಡಬೇಕು. ಅದಕ್ಕಾಗಿ ಸ್ಕೂಲು ಕಟ್ಟಡಗಳಿಗಾಗಿ ಸ್ವಲ್ಪ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ನಾನು ಸೂಚನೆ ಮಾಡುತ್ತೇನೆ.

ಇನ್ನೊಂದು ವಿಚಾರವನ್ನು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಪಿ. ಡಬ್ಲ್ಯು. ಡಿ. ವಿಚಾರದಲ್ಲಿ ಮಾತನಾಡುವಾಗ, ನಾನು ಈ ಇಲಾಖೆಯ ಮೇಲೆ ಬಹಳ ಗೌರವ ಇಟ್ಟುಕೊಂಡಿದ್ದೇನೆ. ಈ ದೇಶದ ಗೌರವವನ್ನು ಉತ್ಪತ್ತಿಮಾಡುವಂತಹ ಶಾಖೆ. ಈ ಲೋಕೋಪಯೋಗಿ ಖಾತೆ ಎಂಬ ಒಳ್ಳೆಯ ಹೆಸರನ್ನುಳಿಸಿಕೊಳ್ಳಬೇಕಾದರೆ ಲೋಕದಜನಕ್ಕೆ ಈ ಖಾತೆ ಉಪಯೋಗವಾಗಿರಬೇಕೇ ಹೊರತು ಇದು ಲೋಕಕ್ಕೆ ಮಾರಿಯಾಗಿರಬಾರದು. ಈ ಇಲಾಖೆ ಅಂತಹ ಒಳ್ಳೆಯ ಕೆಲಸ ಮಾಡುವಂತೆ ಮಾಡತಕ್ಕ ಭಾರ ತಮ್ಮದು. ತಾವು ಲೋಕೋಪಯೋಗಿ

ಖಾತೆಯಲ್ಲಿರತಕ್ಕ ಅನೇಕ ಅಂತಸ್ತಿನ ಅಧಿಕಾರಿಗಳು ಅವರವರ ಕೆಲಸಗಳನ್ನು ಅವರು ಚೆನ್ನಾಗಿ ನೆರವೇರಿಸುವಂತೆ ಏರ್ಪಾಡು ಮಾಡಿ ಜನತೆಯ ವಿಶ್ವಾಸ ಮತ್ತು ಗೌರವವನ್ನು ಸಂಪಾದನೆ ಮಾಡುವಂತೆ ವ್ಯವಸ್ಥೆ ಮಾಡಬೇಕು. ಈ ಇಲಾಖೆಯಲ್ಲಿ ದಕ್ಷತೆಯಿಂದ ಚೆನ್ನಾಗಿ ಕೆಲಸಮಾಡುವ ವ್ಯಕ್ತಿಗಳಿದ್ದಾರೆ. ಏನೋ ಒಂದು ಅಧಿಕಾರ ಇವೊತ್ತಿನ ದಿವಸ ಅವರ ಕೈಯಲ್ಲಿದೆ, ಅಂತಹ ಅಧಿಕಾರವನ್ನು ಸರಿಯಾಗಿ ಉಪಯೋಗಿಸದಿದ್ದರೆ ದೇಶಕ್ಕೇನೂ ಅನುಕೂಲವಾಗುವುದಿಲ್ಲ. ಈ P. W. D. ಇಲಾಖೆಯಲ್ಲಿರುವ ಅಧಿಕಾರಿಗಳ ಆಡಳಿತ ಚೆನ್ನಾಗಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ. ನಾನು ಈ ಇಲಾಖೆಯಲ್ಲೀ ಯಾರೂ ಅರ್ಹರಿಲ್ಲ ಬುದ್ಧಿವಂತರಿಲ್ಲ ಎಂದು ಹೇಳುತ್ತಿಲ್ಲ. ಒಳ್ಳೆಯವರೂ ಬುದ್ಧಿವಂತರೂ, ಆಡಳಿತದಲ್ಲಿ ದಕ್ಷರಾದವರೂ ಇದ್ದಾರೆ. ಆದುದರಿಂದ ಅಪಾರ ಹಣವನ್ನು ವೆಚ್ಚ ಮಾಡುವ ಈ ಇಲಾಖೆಯ ಹೊಣೆಯನ್ನು ಹೊತ್ತಿರತಕ್ಕವರು, ದೇಶದ ಕೆಲಸವನ್ನು ದಕ್ಷತೆಯಿಂದ ಮಾಡಿದರೆ ನಿಜವಾಗಿಯೂ ನಮ್ಮ ದೇಶಕ್ಕೆ ಮತ್ತು ನಮ್ಮ ಮಂತ್ರಿಗಳಿಗೆ ಒಳ್ಳೆಯ ಹೆಸರು ಬರುತ್ತದೆ ಅದರಲ್ಲೂ ನಮ್ಮ ಮೈಸೂರು ದೇಶದಲ್ಲಿ ಕೀರ್ತಿಯನ್ನು ಗಳಿಸಿದ ದಿವಂಗತ ಶ್ರೀಮಾನ್ ವಿಶ್ವೇಶ್ವರಯ್ಯನವರು ಮೈಸೂರು ದೇಶ ಮತ್ತು ಭಾರತದಲ್ಲೀ ಅಲ್ಲದೆ ಇಡೀ ಪ್ರಪಂಚದಲ್ಲೀ ಕೀರ್ತಿಯನ್ನು ಗಳಿಸಿ ಒಬ್ಬ ಖ್ಯಾತಿವೇತ್ತ ಇಂಜನೀಯರಾಗಿದ್ದರು. ಇಡೀ ಭಾರತದಲ್ಲೀ ನಮ್ಮ ಮೈಸೂರು ದೇಶದ ಇಂಜನೀಯರುಗಳು ಬಹಳ ಒಳ್ಳೆಯ ಹೆಸರನ್ನು ಸಂಪಾದಿಸಿರತಕ್ಕವರು ಎನ್ನುವ ವಿಚಾರ ಎಲ್ಲರಿಗೂ ತಿಳಿದಿದೆ. ಮೊನ್ನೆ ತಾನೇ ಮಾನ್ಯ ಶ್ರೀಮಾನ್ ರಾಜಗೋಪಾಲಾಚಾರಿಯವರು ಒಂದು ಕಡೆ ಮಾತನಾಡುತ್ತಾ ಅವರು " P. W. D. is my enemy No. I " ಎಂದು ಹೇಳಿದರು.

Mr. SPEAKER.—He might have had reasons which could not prevail here.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶದಲ್ಲಿ ಭಾರತದಲ್ಲಿರುವ ಇತರ ದೇಶಗಳಿಗಿಂತ ಖ್ಯಾತರಾದ ಬುದ್ಧಿವಂತರಾದ ಇಂಜನೀಯರುಗಳಿದ್ದಾರೆ ಎಂದು ಇಲ್ಲಿನ ಜನತೆಗೆ ಅಪಾರವಾದ ಗೌರವವಿದೆ. ನಮ್ಮ ದೇಶದ ಅನೇಕ ಇಂಜನೀಯರುಗಳು ಅನೇಕ ಯೋಜನೆಗಳನ್ನು ಕಟ್ಟಿಸಿದ್ದಾರೆ. ಮೈಸೂರು ದೇಶವನ್ನು ಒಂದು ಮಾದರಿ ರಾಜ್ಯವನ್ನಾಗಿ ಮಾಡಬೇಕೆಂದು ಅವರ ಉದ್ದೇಶವಾಗಿತ್ತು. ಅಂತಹ ಒಳ್ಳೆಯ ಉದ್ದೇಶವನ್ನೇ ಇಟ್ಟುಕೊಂಡು ಈ ದೇಶವನ್ನು ಮುಂದಕ್ಕೆ ತರಬೇಕೆಂದೂ, ಎಲ್ಲದರಲ್ಲಿಯೂ ಮುಂದುವರಿದು, ಮಾದರಿಯಾಗಿರತಕ್ಕ ರೀತಿಯಲ್ಲಿ ನಮ್ಮ ಮೈಸೂರು ದೇಶದ ಮೇಲ್ಮೆಯನ್ನು ಇನ್ನೂ ಹೆಚ್ಚುವಂತೆ ಮಾಡಿ ಎಂದು ಹೇಳುತ್ತೇನೆ. ತಮ್ಮ ಇಲಾಖೆ ಇನ್ನೂ ಚನ್ನಾಗಿ ಬೆಳೆಯಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಸ್ವಾಮೀ, ಈಗತಾನೇ ಮರಾಮತ್ತು ಶಾಖೆಯ ಸಚಿವರು ಮಂಡಿಸಿದ ಬೇಡಿಕೆಗಳನ್ನು ಸಮರ್ಥನೆಮಾಡುತ್ತಾ, ಹಾಗೂ ಇದರೊಡನೆ ಇರುವ ಮೂರು ಬೇಡಿಕೆಗಳನ್ನು ಒಟ್ಟುಗೂಡಿಸಿದರೆ ಸುಮಾರು ಅರವತ್ತು ಕೋಟಿಯಷ್ಟು ರೂಪಾಯಿಗಳ ಬೇಡಿಕೆಗಳಿಗೂ ನನ್ನ ಪೂರ್ಣ ಅನುಮೋದನೆಯನ್ನು ಕೊಡುತ್ತೇನೆ. ಈ ಬೇಡಿಕೆಗಳಲ್ಲಿ ಮುಖ್ಯವಾದುದು ನೀರಾವರಿ ಯೋಜನೆಗಳು. ಇದರಲ್ಲಿ ದೊಡ್ಡ ನೀರಾವರಿಯೂ ಬೇಕು, ಸಣ್ಣ ನೀರಾವರಿಯೂ ಬೇಕು. ದೊಡ್ಡ ನೀರಾವರಿ ಯೋಜನೆಗಳನ್ನು ನಮ್ಮ ಸರಕಾರದವರು ಕೈಗೊಂಡು ಅದನ್ನು ಬಹಳ ತ್ವರಿತದಿಂದ ಸಾಧಿಸಿಕೊಂಡು ಬಂದಿದ್ದಾರೆ. ಇಂತಹ ಯೋಜನೆಗಳು ನಮ್ಮ ದೇಶಕ್ಕೆ ಬಹಳ ಮುಖ್ಯವಾದವುಗಳು ಮತ್ತು ಇದರಿಂದ ಲಕ್ಷಾಂತರ ಎಕರೆ ಜಮೀನು ನೀರಾವರಿಯಾಗಿ ಬಹಳ ಪ್ರಾಮುಖ್ಯವಾದ ಆಹಾರ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಜನಗಳಿಗೆ ಇದು ಅತ್ಯವಶ್ಯಕವಾಗಿ ಬೇಕಾಗಿದೆ. ಹೆಚ್ಚು ಆಹಾರದ ಉತ್ಪತ್ತಿಯನ್ನು ಮಾಡುವಂಥ ಮಹತ್ಕಾರ್ಯಕ್ಕೆ ಈ ಇಲಾಖೆಯವರು ಈಗ ಹೆಚ್ಚಿನ ಗಮನ ಕೊಟ್ಟಿದ್ದಾರೆ.

ಮಾನ್ಯ ಮಂತ್ರಿಗಳು ನಂಜನಗೂಡು ಸಬ್‌ಡಿವಿಜನ್ನಿನಲ್ಲಿ ಪ್ರವಾಸ ಮಾಡಿದ್ದಾರೆ. ಆಗ್ಗೆ ಅವರ ಗಮನಕ್ಕೆ ಈ ವಿಷಯ ತರಲಾಗಿದೆ. ಅಲ್ಲಿ ಸುವರ್ಣಾವತಿ ಯೋಜನೆ ಒಂದು ದೊಡ್ಡ ನೀರಾವರಿ ಯೋಜನೆಯಾಗಿದೆ. ಆದರೆ ನಮ್ಮ ದುರದೃಷ್ಟವಶಾತ್ ಈ ಯೋಜನೆಯು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಲಿಲ್ಲ. ಇದರಿಂದ 60,000 ಎಕರೆ ಜಮೀನು ನೀರಾವರಿಯಾಗುತ್ತದೆ. ಇದನ್ನು ಮೂರನೇ ಯೋಜನೆಯಲ್ಲಿ ಸೇರಿಸಬೇಕು. ಯಾಕೆಂದರೆ ನಮ್ಮ ಭಾಗ ಬಹಳ ಹಿಂದುಳಿದ ಪ್ರದೇಶ. ಇತ್ತಕಡೆ ಉಪೇಕ್ಷೆ ಮಾಡಬಾರದು. ಇನ್ನೊಂದು ಚಿಕ್ಕ ಯೋಜನೆಯಾದ ಚಿಕ್ಕೋಡೆ ಯೋಜನೆ ಪ್ರಾರಂಭವಾಗಿದೆ. ಇದರಿಂದ 6,000 ಎಕರೆ ನೀರಾವರಿಯಾಗುತ್ತದೆ. ಇದರ ಕೆಲಸ ಈಗ ನಡೆದಿದೆ. ಆದರೆ ಮುಖ್ಯವಾಗಿ ಗಮನಕ್ಕೆ ತರಬೇಕಾದುದು ಸುವರ್ಣಾವತಿ ಯೋಜನೆ. ಇದನ್ನು ಅತಿಮುಖ್ಯವಾಗಿ ಮೂರನೇ ಯೋಜನೆಯಲ್ಲಿ ಸೇರಿಸಬೇಕು ಎಂದು ಹೇಳುತ್ತೇನೆ. ಈ ವರ್ಷದ ಬಜೆಟ್ಟಿನಲ್ಲಿ ಮೇಜರ್ ಇರಿಗೇಷನ್ನಿಗೆ ಹಣ ಕಡಿಮೆ ಮಾಡಿದ್ದೀರಿ. ದೇಶದಲ್ಲಿ ಇಂದು ಆಹಾರ ಉತ್ಪಾದನೆ ಜಾಸ್ತಿಯಾಗಬೇಕಾಗಿದೆ. ಆದ್ದರಿಂದ ಮಧ್ಯಮ ಪ್ರೊಜೆಕ್ಟುಗಳನ್ನು ಯೋಜನೆ

(ಶ್ರೀ ಡಿ. ಎಂ. ಸಿದ್ದಯ್ಯ)

ಯಲ್ಲಿ ಸೇರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಯಳಂದೂರ ತಾಲ್ಲೂಕಿನಲ್ಲಿ ಮಾನ್ಯಮಂತ್ರಿಗಳು ಪ್ರವಾಸ ಮಾಡಿದ್ದಾರೆ. ಇಲ್ಲಿ ಒಂದು ಯೋಜನೆ ಮಾಡಿದರೆ ಮುಕ್ಕಾಲು ಭಾಗ ಕೊಳ್ಳೇಗಾಲ ತಾಲ್ಲೂಕಿಗೂ ನೀರಾವರಿಯಾಗುತ್ತದೆ. ಇಲ್ಲಿ ಭತ್ತ ಬೆಳೆಯುವುದಕ್ಕೆ ಅನುಕೂಲವಾಗುವುದು. ಈ ಬಗ್ಗೆ ಮನವಿ ಮಾಡಿಕೊಂಡಾಗ್ಗೆ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ಈ ಯೋಜನೆಯ ಬಗ್ಗೆ ಸಹಾನುಭೂತಿಯಿಂದ ನೋಡಿ ಅದನ್ನು ಕಾರ್ಯಗತ ಮಾಡುವ ವ್ಯವಸ್ಥೆ ತೀವ್ರ ಮಾಡಬೇಕೆಂದು ಸರಕಾರಕ್ಕೆ ಸೂಚನೆ ಕೊಡುತ್ತೇನೆ.

5-30 P.M.

ಈ ವರ್ಷ ತುರ್ತುಪರಿಸ್ಥಿತಿಯ ಮೂಲಕ ಉಪಯುಕ್ತವಾದ ಮೈನರ್ ಇರಿಗೇಷನ್ ಕೈಕೊಂಡಿರುವುದು ಬಹಳ ಸೂಕ್ತವಾದ ಕೆಲಸ. ನಮ್ಮ ತಾಲ್ಲೂಕಿನಲ್ಲಿ ನೀರಿನ ಸೌಕರ್ಯವಿಲ್ಲ. ಒಂದು ಸಣ್ಣ ಯೋಜನೆಗಾಗಿ ಮೂರುಲಕ್ಷ ಎಸ್ಟಿಮೇಟು ಸ್ಯಾಂಕ್ಷನ್ ಆಗಿದೆ. ಕೆಲಸ ಪ್ರಾರಂಭವಾಗುವ ಸಿದ್ಧತೆಯಲ್ಲಿದೆ. ಇದರಿಂದ ಒಂದು ಸಾವಿರ ಎಕರೆ ಜಮೀನು ನೀರಾವರಿಯಾಗಿ ಅನುಕೂಲವಾಗುತ್ತದೆ. ಅನೇಕ ಸಣ್ಣಪುಟ್ಟ ಕೆರೆಗಳ ದುರಸ್ತು ಕೆಲಸವಾಗಬೇಕಾಗಿದೆ. ಸಣ್ಣ ಕೆರೆಗಳ ಪಿಕ್‌ಅಪ್‌ನಿಂದ ಯಥೇಚ್ಛವಾಗಿ ನೀರು ಹರಿದುಬರುವುದರಿಂದ ಉಪಯೋಗವಾಗುತ್ತದೆ. ಸಣ್ಣ ನೀರಾವರಿ ಯೋಜನೆಯ ಉಪಮಂತ್ರಿಗಳು ನಮ್ಮ ತಾಲ್ಲೂಕಿನಲ್ಲಿ ಪ್ರವಾಸ ಮಾಡಿ ಇಲ್ಲಿಯ ವಿಷಯ ಚೆನ್ನಾಗಿ ತಿಳಿದುಕೊಂಡು ತಜ್ಞರಿಂದ ಪರಿಶೀಲಿಸಿ ಎಸ್ಟಿಮೇಟು ಸ್ಯಾಂಕ್ಷನ್ ಮಾಡಿಸಿ ಜನರಿಗೆ ಸೌಕರ್ಯವಾಗುವ ಕೆಲಸ ಮಾಡಿದ್ದಾರೆ. ನಮ್ಮಕಡೆ ಕೆರೆಗಳ ಸಣ್ಣಸಣ್ಣ ಯೋಜನೆ ಮಾಡಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಯೋಜನೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ನೀರಾವರಿ ಯೋಜನೆಯು ಸಣ್ಣದೇ ಆಗಲಿ ದೊಡ್ಡದೇ ಆಗಲಿ ಈಗಿನ ಯುದ್ಧದ ಸ್ಥಿತಿಯಲ್ಲಿ ಮಾಡಬೇಕಾದುದು ಅಗತ್ಯ. ಈಗ ಆಹಾರ ಬಹಳ ಮುಖ್ಯವಾದುದು. ಯುದ್ಧದ ಪರಿಸ್ಥಿತಿಯಲ್ಲಿ ಮದ್ದುಗುಂಡುಗಳಷ್ಟೇ ಆಹಾರವೂ ಪ್ರಾಮುಖ್ಯವಾದುದು. ಆದುದರಿಂದ ಆಹಾರ ಉತ್ಪಾದನೆಯನ್ನು ಹೆಚ್ಚಿಸಬಲ್ಲ ಯಾವ ಯೋಜನೆಯನ್ನು ಕೈಬಿಡಬಾರದು. ಆಹಾರ ಬೆಳೆಯುವುದರಲ್ಲಿ ನಾವು ಸ್ವಯಂಪೂರ್ಣರಾಗಬೇಕು. ಮತ್ತು ಚೀಣೀಯರನ್ನು ದೇಶದಿಂದ ಓಡಿಸಬೇಕು. ನಮ್ಮ ರಕ್ಷಣಾಮಂತ್ರಿ ಚವ್‌ಹಾಣ ಅವರು ನಾವು ಯುದ್ಧಕ್ಕಾಗಿ ಸದಾ ಸಿದ್ಧರಾಗಿರಬೇಕೆಂದು ಅಪ್ಪಣೆ ಕೊಡಿಸಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಏನುಮಾಡುತ್ತಾರೋ ಗೊತ್ತಿಲ್ಲ. ಯಾವರೀತಿಯಿಂದಲಾದರೂ ಆಹಾರ ಉತ್ಪಾದನೆ ಹೆಚ್ಚಿಸಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ರಸ್ತೆಯ ವಿಚಾರ. ರಸ್ತೆ ಸೌಕರ್ಯ ಒದಗಿಸುವುದು ಬಹಳ ಮುಖ್ಯವಾದುದು. ನ್ಯಾಷನಲ್ ಹೈವೇಜ್, ದೊಡ್ಡದೊಡ್ಡ ರಸ್ತೆಗಳನ್ನು ಮಾಡಬೇಕಾದುದು ಮುಖ್ಯ. ಆದರೆ ಅತಿಮುಖ್ಯವಾದ ವಿಶೇಷ ಶ್ರದ್ಧೆಯಿಂದ ಮಾಡಬೇಕಾದುದು Inter village communication roads. ಇವು ಡಿಸ್ಟ್ರಿಕ್ಟ್‌ಬೋರ್ಡ್ ಅಧೀನದಲ್ಲಿದ್ದ ರಸ್ತೆಗಳು. ಜನರ ಅನುಕೂಲತೆಗೋಸ್ಕರ ಸರಕಾರ ಶೀಘ್ರವಾಗಿ ಮಾಡಬೇಕೆಂದು ಸೂಚಿಸುತ್ತೇನೆ. Inter village communication roads ಎಷ್ಟು ಮುಖ್ಯವಾಗಿದೆ ಎಂದರೆ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗುವುದು ಕಷ್ಟವಾಗಿದೆ. ಚಾಮರಾಜನಗರಕ್ಕೆ ಮಂತ್ರಿಗಳು ಬಂದಾಗ್ಗೆ ನಮ್ಮ ಹಳ್ಳಿಗೆ ಅವರನ್ನು ಕರೆದುಕೊಂಡು ಬರಬೇಕಾದರೆ ಎರಡು ಮೈಲಿ ದೂರ ಅವರ ಕಾರು ನಿಂತುಹೋಯಿತು. ವ್ಯಾನಿನಲ್ಲಿ ಅವರನ್ನು ಕರೆದುಕೊಂಡು ಬರಬೇಕಾಯಿತು. ಅಂಥ ರಸ್ತೆಗಳಲ್ಲಿ ಮೋಟಾರ್‌ಕಾರ್ ತರಲು ಶಕ್ಯವಿಲ್ಲ. ಇದರಿಂದ ಅನಾನುಕೂಲವಾಗಿದೆ. ಆದುದರಿಂದ ಮರಾಮತ್ ಇಲಾಖೆಯ ಸಚಿವರು ಇದನ್ನು ಗಮನಿಸಬೇಕು. ಈ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಸಾಕಷ್ಟು ನಿಗಾ ಕೊಟ್ಟಿಲ್ಲವೆಂದು ವಿಷಾದದಿಂದ ತಿಳಿಸಬೇಕಾಗಿದೆ. ನ್ಯಾಷನಲ್ ಹೈವೇಜಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡತಕ್ಕಂಥಾದ್ದು ಅಗತ್ಯ. ಪ್ರಜಾಪ್ರಭುತ್ವದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಿ ಪಂಚಾಯತಿರಾಜ್ಯ ಸ್ಥಾಪನೆ ಮಾಡಿದ್ದಾಯಿತು. ತಾಲ್ಲೂಕ್‌ಬೋರ್ಡ್ ರಚನೆಯಾಯಿತು. ರಾಜಕೀಯ ಸ್ವಾತಂತ್ರ್ಯ ದೊರೆತು ಎಲ್ಲರೂ ನಾಗರೀಕರಾಗಬೇಕು. ಈ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಯಶಸ್ವಿಯಾಗಿ ಪಾತ್ರವಹಿಸಬೇಕು ಎಂಬ ಆಶೆ ಆಕಾಂಕ್ಷೆ ಇಟ್ಟುಕೊಂಡಿರುವುದರಿಂದ ಹಳ್ಳಿಗಾಡಿನ ಜನರಿಗೆ ಅವರ ಆವಶ್ಯಕತೆಗಳನ್ನು ಒದಗಿಸಿಕೊಡಬೇಕು. ಅಂದರೆ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ ಯಶಸ್ವಿಯಾಗಲಾರದು. ಇವತ್ತಿನ ದಿವಸ Inter village communication ರೋಡ್ಸ್ ಅಂದರೆ ಗ್ರಾಮಾಂತರ ಸಾರಿಗೆಗಳಿಗೆ ಸಾಕಷ್ಟು ನಿಗಾ ಕೊಟ್ಟಿಲ್ಲ. ಸಾರಿಗೆ ಮುಂತಾದ ಕನಿಷ್ಠ ಸೌಕರ್ಯ

ಒದಗಿಸದಿದ್ದರೆ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು. ಆದುದರಿಂದ ಗ್ರಾಮಾಂತರ ಸಾರಿಗೆಗೆ ಸಾಕಷ್ಟು ನಿಗಾ ಕೊಟ್ಟು ಅದಕ್ಕೆ ಹೆಚ್ಚು ಹಣ ಒದಗಿಸಿ, ಡಿಸ್ಟ್ರಿಕ್ಟ್‌ಬೋರ್ಡ್ ರಸ್ತೆಗಳನ್ನು ನಿಮ್ಮ ಇಲಾಖೆಗೆ ಸೇರಿಸಿಕೊಂಡು ಚೆನ್ನಾಗಿ ರಸ್ತೆ ಮಾಡಿಸಬೇಕು ಎಂದು ಈ ಸಂದರ್ಭದಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ.

ಈ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಕೆಲವುಕಡೆ ಇರತಕ್ಕಂಥ ಅಧಿಕಾರಿಗಳು ಕೆಲಸ ಮಾಡುವುದು ಕಷ್ಟವಾಗಿದೆ. ನಮ್ಮಲ್ಲಿ ಹಣ ಒದಗಿಸುತ್ತೇವೆಂದರೆ, ಹಣ ಕೊಡುವುದು ಬೇಡ ಎಂದು ಅಸಿಸ್ಟೆಂಟ್ ಎಂಜಿನಿಯರರು ಹೇಳುತ್ತಾರೆ. ಒಂದು ಭಾಗದಲ್ಲಿ ಕೆಲಸ ಮಾಡಿದರೆ, ಇನ್ನೊಂದು ಭಾಗದಲ್ಲಿ ಕೆಲಸ ಮಾಡುವದಿಲ್ಲ. ಏನಾದರೂ ಒಂದು ನೆಪ ಹೇಳುತ್ತಾರೆ. ಕೆಲಸ ಕಾರ್ಯಗಳನ್ನು ಸೇವಾ ಮನೋಭಾವನೆಯಿಂದ ಮಾಡಬೇಕು, ಶ್ರದ್ಧೆಯಿಂದ ಮಾಡಬೇಕು ಎಂದು ಅನೇಕ ಅಧಿಕಾರಿಗಳ ಮನಸ್ಸಿನಲ್ಲಿ ಇಲ್ಲವೆಂದು ಹೇಳದೆ ವಿಧಿ ಯಿಲ್ಲ. ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಯೋಜನೆಯ ಕೆಲಸ ನಿಧಾನವಾಗಿದೆ. ಲಕ್ಷಾಂತರ ರೂಪಾಯಿ ಸ್ಯಾಂಕ್ಷನ್ ಆಗಿದ್ದರೂ ಕೂಡ ಕೆಲಸ ನಿಧಾನವಾಗಿ ಮಂಜೂರು ಮಾಡಿದ ಹಣ ಲ್ಯಾಪ್ಸ ಆಗುತ್ತದೆ. ಉದಾಹರಣೆಗಾಗಿ ಹೇಳುವದಾದರೆ ನಮ್ಮ ತಾಲ್ಲೂಕಿನಲ್ಲಿ ಯಾವ ನೀರಾವರಿ ಸೌಕರ್ಯವಿಲ್ಲ, ಎರಡು ಕೆರೆಗಳ ಯೋಜನೆಯಿಂದ 500 ಎಕರೆ ಮತ್ತು 200 ಎಕರೆ ನೀರಾವರಿ ಯಾಗುತ್ತದೆ.

ಇನ್ನೂರು ಎಕರೆ ಇರತಕ್ಕಂಥ ದೊಡ್ಡಮರೆಕೆರೆ ಎನ್ನುವುದು ಇದೆ. ಸುಮಾರು ಐದಾರು ವರ್ಷಗಳಿಂದಲೂ ಆ ಕೆರೆಯ ಕೆಲಸ ಪೂರ್ತಿಯಾಗಿಲ್ಲ. ಈ ವಿಷಯ ಸರ್ಕಾರಕ್ಕೂ ಗೊತ್ತಿದೆ. ಈ ಸಂಬಂಧದಲ್ಲಿ ನಾನು ಎಗ್ಜಿಕ್ಯುಟೀವ್ ಇಂಜಿನಿಯರನ್ನು ನೋಡಿದಾಗ ಆ ಕೆರೆಯ ಎಸ್ಟಿಮೇಟ್ ಮಾಡುತ್ತಿದ್ದೇವೆಂದು ಹೇಳಿದರು. ಆ ಕೆರೆಯನ್ನು ಕಟ್ಟಿದರೆ ಅಲ್ಲಿ ಸುಮಾರು ನೂರಾರು ಎಕರೆ ಇರಿಗೇಟ್ ಆಗುತ್ತದೆ. ಆ ವಿಷಯದಲ್ಲಿ ಅಧಿಕಾರಿಗಳನ್ನು ಎಷ್ಟೇ ಒತ್ತಾಯ ಮಾಡಿದರೂ ಕೂಡ ಅವರು ಯಾವ ದೃಷ್ಟಿಯಿಂದಲೋ ಏನೋ ಆ ಕೆಲಸವನ್ನು ಸಕಾಲದಲ್ಲಿ ಮಾಡದೆ ಅಶ್ರದ್ಧೆ ಮನೋ ಭಾವವುಳ್ಳವರಾಗಿದ್ದಾರೆ, ತಾತ್ಸಾರ ಮನೋಭಾವವುಳ್ಳವರಾಗಿದ್ದಾರೆ. ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಸಾಮಾನ್ಯ ಮನುಷ್ಯ ಅದರ ಸುಖವನ್ನು ಅದರ ಫಲವನ್ನು ಅನುಭವಿಸಲಿ ಎಂದು ಹೇಳಿದರೆ ಅದು ತಲುಪದೆ ನಿಜವಾಗಿ ಜನತೆಗೆ ತೊಂದರೆಯಾಗುತ್ತಿದೆ ಎನ್ನುವ ಮಾತನ್ನು ನಾನು ಸರ್ಕಾರದವರ ಮುಂದೆ ಹೇಳುತ್ತಿದ್ದೇನೆ. ಮರಾಮತ್ ಶಾಖೆಯ ಮಂತ್ರಿಗಳಿಗೂ ಈ ವಿಷಯ ಗೊತ್ತಿದೆ. ನಾನು ಅನೇಕ ವೇಳೆ ಅವರಿಗೆ ಈ ವಿಷಯವನ್ನು ತಿಳಿಸಿ ದ್ದೇನೆ. ಆ ಕೆಲಸವನ್ನು ಮಾಡುವುದಕ್ಕೆ ಸರ್ಕಾರದವರಿಗೆ ಏನು ಕಷ್ಟವಿದೆಯೋ ನನಗಂತೂ ಗೊತ್ತಿಲ್ಲ. ಆ ವಿಷಯದಲ್ಲಿ ನಾನು ಬಹಳ ಕಠಿಣವಾಗಿ ಕಾಗದವನ್ನು ಬರೆದಿದ್ದೇನೆ. ನಮ್ಮ ಮಾನ್ಯ ಸ್ನೇಹಿತರು ಮಂತ್ರಿಗಳಾಗಿದ್ದರೆ, ನಾನು ಮೆಂಬರಾಗಿದ್ದೇನೆ. ಅದು ಕೂಡ ಅವರಿಗೆ ಅಸಮಾಧಾನವಾಗುವುದಾದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ. ನಾವು ಜನಗಳಿಂದ ಚುನಾಯಿತರಾಗಿ ಬಂದು ಜನಗಳ ಪರವಾಗಿ, ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲಸ ಮಾಡ ಬೇಕು. ಸರ್ಕಾರದಲ್ಲಿ ಅದಕ್ಕೆ ಸಂಬಂಧಪಟ್ಟ ಉನ್ನತ ಮಟ್ಟದ ಅಧಿಕಾರಿಗಳಿಂದ ಎಲ್ಲಾ ಕೆಲಸ ಕಾರ್ಯಗಳನ್ನೂ ಸ್ಯಾಂಕ್ಷನ್ ಮಾಡಿಸಿ ಕೊಟ್ಟರೂ ಕೂಡ ಅದು ಎಲ್ಲಿಗೆ ತಲುಪಬೇಕೋ ಅಲ್ಲಿಗೆ ತಲುಪದೇ ಹಾಗೇ ನಿಂತುಕೊಂಡರೆ ಅದರಿಂದ ಜನಗಳಿಗೆ ನಿರುತ್ಸಾಹವಾಗುತ್ತದೆ. ಅವರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಒಮ್ಮೆ ಜನಗಳು ತಾವು ಚುನಾವಣೆ ಮಾಡಿ ಇಲ್ಲಿಗೆ ಕಳು ಹಿಸಿರತಕ್ಕ ಜನ ಕೆಲಸಕ್ಕೆ ಬಾರದ ಜನ, ಅಧಿಕಾರಿಗಳಲ್ಲಿ ಮತ್ತು ಮಂತ್ರಿಮಂಡಲದಲ್ಲಿ ಇವರಿಗೆ ಗೌರವವಿಲ್ಲ ಎನ್ನುವ ಭಾವನೆ ಬರಬಹುದು. ಅದಕ್ಕಿಂತ ಹೆಚ್ಚಾಗಿ ನಮ್ಮ ಕ್ಷೇತ್ರದಲ್ಲಿ ನೀವು ಏನು ಕೆಲಸ ಮಾಡಿದಿರಿ ಎಂದು ಜನಗಳು ಕೇಳಿದರೆ ನಿರಪರಾಧಿಗಳಾದ ನಾವು ಜನಗಳ ಮುಂದೆ ತಲೆ ಬಾಗಿಸಿ ನಿಲ್ಲಬೇಕಾಗುತ್ತದೆ. ಎಂದು ನಾನು ಹೇಳಬಯಸುತ್ತೇನೆ. ಅಧಿಕಾರಿಗಳು ಎಲ್ಲೆಲ್ಲಿ ಸರಿಯಾಗಿ ಕೆಲಸ ಮಾಡುವದಿಲ್ಲವೋ ಅಲ್ಲೆಲ್ಲಾ ಸರ್ಕಾರದವರು ಅವರಿಗೆ ಸರಿಯಾಗಿ ವಿವೇಕವನ್ನು ಹೇಳಿ ಅದು ಯಾವುದೇ ಕೆಲಸ ಆಗಿರಲಿ ಅದನ್ನು ಮಾಡುವುದಕ್ಕೆ ಹೇಗೆ ಮಾಡಬೇಕೋ, ಮತ್ತು ಯಾವ ರೀತಿ ತಹಬಂದಿಗೆ ತರಬೇಕೋ ತಂದು ಸರ್ಕಾರದವರು ಖರ್ಚು ಮಾಡುತ್ತಿರುವ ಕೋಟ್ಯಾಂತರ ರೂಪಾಯಿಗಳು ಪ್ರಜೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕು ಎಂದು ನಾನು ಈ ಖಾತೆಗೆ ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಇಂಟರ್ ಕಮ್ಯುನಿಕೇಷನ್ ರೋಡ್ಸ್, ತಾಲ್ಲೂಕು ಬೋರ್ಡು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಆಡಳಿತದಲ್ಲಿರುವ ರಸ್ತೆಗಳು ಇವುಗಳ ವಿಷಯವನ್ನು ಹೇಳುವುದಾದರೆ ಒಂದು ತಾಲ್ಲೂಕಿ ನಲ್ಲಿ ಕೊನೆಯ ಪಕ್ಷ 50 ಮೈಲಿಗಳ ರಸ್ತೆಯನ್ನು ಮಾಡಬೇಕೆಂದು ಸರ್ಕಾರದವರು ಒಂದು ಕಾರ್ಯ ಕ್ರಮವನ್ನು ಹಾಕಿ ಕೊಂಡಿದ್ದಾರೆ. ಕೆಲವು ಕಡೆ ಒಂದು ತಾಲ್ಲೂಕಿನಲ್ಲಿ 400 ಮೈಲಿ 500 ಮೈಲಿ

(ಶ್ರೀ ಡಿ. ಎಂ. ಸಿದಯ್ಯ)

ಉದ್ದದ ರಸ್ತೆಗಳು ಆಗಿರುತ್ತವೆ, ಕೆಲವು ಕಡೆ 20-25 ಮೈಲಿ ರಸ್ತೆ ಕೂಡ ಆಗಿರುವುದಿಲ್ಲ. ಪ್ರತಿ ತಾಲ್ಲೂಕಿಗೂ ಕೊನೆಯ ಪಕ್ಷ 100 ಮೈಲಿ ರಸ್ತೆಯನ್ನು ಮಾಡಬೇಕು, 50 ಮೈಲಿ ಮಿನಿಮಮ್ ಮಾಡಬೇಕು. ಹಳ್ಳಿಗಾಡಿನ ಸ್ಥಿತಿ ತುಂಬಾ ಕೆಟ್ಟಿದೆ. ದೊಡ್ಡವರು ಹಳ್ಳಿಗಳ ಕಡೆ ಬರಬೇಕು. ಮೋಟಾರಿನಲ್ಲಿ ತಿರುಗಾಡುವವರು ಅಲ್ಲಿಗೆ ಬಂದರೆ ಅಲ್ಲಿನ ಸ್ಥಿತಿ ಅವರಿಗೆ ಚೆನ್ನಾಗಿ ಗೊತ್ತಾಗುತ್ತದೆ. ಸ್ಕೂಲು, ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನ ಶಾಖೆಗಳು ಹೆಲ್ತ್ ಸೆಂಟರು ಮತ್ತು ರಸ್ತೆ ಇವುಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಹರಡಿದರೆ ಮಾತ್ರ It will be open out for the civilization ಅದಕ್ಕೋಸ್ಕರ ವಿಲೇಜ್ ಕಮ್ಯೂನಿಕೇಷನ್ ರೋಡ್ಸ್ ಮತ್ತು P.W.D. ರೋಡ್ಸ್ ಮಟ್ಟಿಗೆ ತೆಗೆದುಕೊಂಡು ಆ ರಸ್ತೆಗಳಿಗೆ ಹೆಚ್ಚು ಹಣವನ್ನು ಕೊಟ್ಟು ರಸ್ತೆಗಳನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಇಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಆಮೇಲೆ ವಿದ್ಯುಚ್ಛಕ್ತಿ ವಿಷಯದಲ್ಲಿ ಹೇಳುವುದಾದರೆ ಈಗಾಗಲೇ ಶರಾವತಿಯ ಕೆಲಸ ಪ್ರಾರಂಭವಾಗಿದೆ, 1962ನೇ ಇಸವಿಯಲ್ಲಿ ಕರೆಂಟ್ ಕೊಡುತ್ತೇವೆಂದು ಹೇಳಿದ್ದರು. ಈಗ 64ನೇ ಇಸವಿಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. 1962ನೇ ಇಸವಿಯಲ್ಲಿ ಆ ಕೆಲಸ ಮುಗಿಯದೆ ಇರುವುದಕ್ಕೆ ಸರ್ಕಾರದವರು ಅನೇಕ ಕಾರಣಗಳನ್ನು ಕೊಟ್ಟಿದ್ದಾರೆ. ಫಾರಿನ್ ಸಾಮಾನುಗಳು ಬರುವುದು ಡಿಲೇ ಆದದ್ದು, ಮಳೆಗಾಲ ಬಂದದ್ದು ಇತ್ಯಾದಿ ಕಾರಣಗಳನ್ನು ಕೊಟ್ಟಿದ್ದಾರೆ. ಏನೇ ಆದರೂ ಸಹ ಆ ಕೆಲಸ ಕಾರ್ಯಗಳು ಬಹಳ ಚುರುಕಾಗಿ ನಡೆಯಬೇಕು. ಪವರ್ ಅವಶ್ಯಕವಾಗಿ ಬೇಕೇ ಬೇಕು. ಇವೊತ್ತಿನ ದಿವಸ ನೀರಾವರಿ ಬಾವಿಗಳಿಗೆ I.P. ಸೆಟ್ಟುಗಳನ್ನು ಕೊಡುವುದರ ಜೊತೆಗೆ, ನಮಗೆ ಎಲೆಕ್ಟ್ರಿಸಿಟಿ ಬೇಕು ಎಂದು ಹಳ್ಳಿಗಳಲ್ಲಿ ಜನರ ಆಶೆ ಆಕಾಂಕ್ಷೆ ಜಾಸ್ತಿಯಾಗುತ್ತಿದೆ. ಹಳ್ಳಿಗಳಿಗೆ ದೀಪ ಬರಬೇಕು. ಬೆಂಗಳೂರು ಮತ್ತು ಮೈಸೂರು ಪಟ್ಟಣಗಳನ್ನು ನೋಡಿ ಹಳ್ಳಿಗಳಿಗೆ ಹೋದರೆ ಬೆಳಕಿನಿಂದ ಕತ್ತಲೆಗೆ ಹೋದ ಹಾಗಾಗುತ್ತದೆ. ಹಳ್ಳಿಗಳಲ್ಲಿ ಡೈನಮೋ ಇಟ್ಟುಕೊಂಡು ಎಷ್ಟೋ ಜನ ರೇಡಿಯೋ ಕೇಳುತ್ತಿದ್ದಾರೆ. ನೀರಾವರಿ ಸೌಕರ್ಯ ಬೇಕು, ಎಲೆಕ್ಟ್ರಿಸಿಟಿ ಬೇಕೆಂದು ಜನಗಳು ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಪ್ರಾಂತ್ಯಕ್ಕೆ ಪ್ರವಾಸ ಬಂದಿದ್ದಾಗ ಸುಮಾರು ಸಾವಿರಾರು ಜನಗಳು ಅವರನ್ನು ಕಂಡು ನಮಗೆ ನೀರಾವರಿ ಸೌಕರ್ಯವನ್ನು ಒದಗಿಸಬೇಕು, ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಕೇಳಿದ್ದಾರೆ. ಪ್ರತಿ ಹಳ್ಳಿಯಲ್ಲಿಯೂ ಕೂಡ ನೂರಾರು ಜನ ಸಾವಿರಾರು ಜನ ಸೇರಿ ನಮಗೆ ದೀಪಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ರೆಪ್ರೆಜೆಂಟೇಷನ್ ಕೊಟ್ಟರು. ಈಗ ತುರ್ತುಪರಿಸ್ಥಿತಿಯಾಗಿರುವುದರಿಂದ ವ್ಯವಸಾಯಕ್ಕೆ ಮಾತ್ರ ನಾವು ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳಿದರು. ಶರಾವತಿಯ ಕೆಲಸ ಜಾಗ್ರತೆಯಾಗಿ ಮುಗಿದು ಅದರಿಂದ ಜನಗಳಿಗೆ ಪ್ರಯೋಜನವಾಗಬಹುದು ಎಂದು ಜನಗಳು ತಮ್ಮ ಬೇಡಿಕೆಯನ್ನು ಸರ್ಕಾರದ ಮುಂದೆ ಇಡುತ್ತಿದ್ದಾರೆ. ಹಳ್ಳಿಗಳಿಗೆ ಮುಖ್ಯವಾಗಿ ಸರ್ಕಾರದವರು ಒಂದು ರಸ್ತೆ, ಒಂದು ಆಸ್ಪತ್ರೆ ದೀಪ ಇವುಗಳನ್ನು ಒದಗಿಸಲೇಬೇಕು. ಯುದ್ಧ ಪರಿಸ್ಥಿತಿ ಮತ್ತು ತುರ್ತುಪರಿಸ್ಥಿತಿ ದೇಶದಲ್ಲಿ ಕಂಡು ಬಂದಿರುವುದರಿಂದ ಹೆಚ್ಚು ಉತ್ಪಾದನೆಗೋಸ್ಕರ ಸರ್ಕಾರದವರು ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಬಾವಿಗೋಸ್ಕರ ಐ.ಪಿ. ಸೆಟ್ ತೆಗೆದುಕೊಳ್ಳಲು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಅರ್ಜಿ ಹಾಕಿದರೆ ಅದನ್ನು ತೆಗೆದುಕೊಳ್ಳಬೇಕಾದರೆ 6 ತಿಂಗಳಾಗುತ್ತಿತ್ತು. ಈಗ ಅದನ್ನು ಸರ್ಕಾರದವರು ಪರಿಹರಿಸಿ ಐ.ಪಿ. ಸೆಟ್ ತೆಗೆದುಕೊಳ್ಳಲು ಅರ್ಜಿ ಕೊಟ್ಟರೆ 8 ದಿವಸಗಳಲ್ಲಿ ಹಣ ಕೊಡಬೇಕೆಂದು ಮಾಡಿದ್ದಾರೆ. ಇದರಿಂದ ರೈತರಿಗೆ ಅನುಕೂಲವಾಗಿದೆ. ಈಗ ರೈತರು ಒಬ್ಬರಮೇಲೊಬ್ಬರು ಬಂದು ಸರ್ಕಾರಕ್ಕೆ ಅರ್ಜಿಹಾಕಿ ಬಾವಿಗಳಿಗೋಸ್ಕರ ಹಣವನ್ನು ಪಡೆಯುತ್ತಿದ್ದಾರೆ. ಹಳ್ಳಿಗಾಡಿನಲ್ಲಿ ಜನಗಳು ನಮಗೆ ಬಾವಿಗೆ ವಿದ್ಯುಚ್ಛಕ್ತಿ ಬೇಕು, ಮನೆಗಳಿಗೆ ವಿದ್ಯುಚ್ಛಕ್ತಿ ಬೇಕು ಎನ್ನುವ ಆಶೆ ಆಕಾಂಕ್ಷೆಗಳನ್ನುಳ್ಳವರಾಗಿದ್ದಾರೆ. ಜನಗಳು ಏನೇನು ಪಡೆಯದೆ ಇದ್ದರೂ ಕೇವಲ ಮನುಷ್ಯನಾಗಿ ನಾಗರೀಕನಾಗಿ ಬದುಕಬೇಕಾದರೆ ಏನು ಅಗತ್ಯವಾಗಿ ಬೇಕೋ ಅಂಥಾ ಸಾಮಾನ್ಯ ಬೇಡಿಕೆಗಳನ್ನು ಸರ್ಕಾರದವರು ಪೂರೈಸದೆ ಇದ್ದ ಪಕ್ಷದಲ್ಲಿ ಅವರಿಗೆ ನಿರಾಶೆಯುಂಟಾಗುತ್ತದೆ. ಅಂಥಾ ಸೌಕರ್ಯಗಳನ್ನು ನಾವು ಜನತೆಗೆ ಒದಗಿಸದೆ ಇದ್ದರೆ ಯಾವ ಉಪಕಾರಕ್ಕಾಗಿ ನಾವು ಇಲ್ಲಿಗೆ ಎರಡು ತಿಂಗಳು ಗಟ್ಟಲೆ ಮೀಟಿಂಗ್ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡಬೇಕು ? ಇವೊತ್ತಿನ ದಿವಸ ಮೈಸೂರು ಅಥವಾ ಭರತಖಂಡದ ಪ್ರತಿಯೊಬ್ಬ ಪ್ರಜೆಯೂ ಕೂಡ ಪ್ರಜಾಪ್ರಭುತ್ವದ ಸುಖ ಸಂಪತ್ತನ್ನು ಪಡೆದು ತಾನು ನಾಗರೀಕನಾಗಿ ಉತ್ತಮವಾದ ಮನುಷ್ಯನಾಗಿ ಬಾಳುತ್ತೇನೆ ಎನ್ನುವ ಒಂದು ಆಶೆ ಆತನಲ್ಲಿ ಮೂಡಿ

ಆತನು ಮನುಷ್ಯನಾಗಿ ಬದುಕಬೇಕಾದರೆ ಅವನಿಗೆ ಬೇಕಾದ ಸೌಕರ್ಯಗಳನ್ನು ಸರ್ಕಾರದವರು ಒದಗಿಸಬೇಕು. ಇವೊತ್ತು ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ತಮ್ಮ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ರಸ್ತೆಗಳು, ನೀರಾವರಿ ಯೋಜನೆಗಳು, ಮತ್ತು ಎಲೆಕ್ಟ್ರಿಸಿಟಿ ಇವುಗಳು ಬಹಳ ಪ್ರಾಮುಖ್ಯವಾದುವುಗಳು. ಇವುಗಳನ್ನು ಸರ್ಕಾರದವರು ರೈತನಿಗೆ ಒದಗಿಸ ಬೇಕು.

ಇನ್ನು ಕೊನೆಯದಾಗಿ ಒಂದು ಮಾತನ್ನು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳು ತ್ತೇನೆ. ದೊಡ್ಡ ದೊಡ್ಡ ರಸ್ತೆಗಳನ್ನು, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾಡುವುದರ ಜೊತೆಗೆ ಹಳ್ಳಿಗಾಡಿನ ಕಡೆಗೂ ಸರ್ಕಾರದವರು ಹೆಚ್ಚು ನಿಗಾ ಇಟ್ಟು ಹಳ್ಳಿಗಾಡಿನವರಿಗೂ ಅಂಥಾ ಸೌಲಭ್ಯ ಗಳನ್ನೂ ಒದಗಿಸಿ ಕೊಡಬೇಕು. ಹಳ್ಳಿಗಾಡಿನ ರೈತರಿಂದ ಏನು ಮನವಿಗಳು ಬರುತ್ತವೆಯೋ, ಅವರು ಏನು ಅಪೇಕ್ಷೆ ಮಾಡುತ್ತಾರೆಯೋ ಅವುಗಳ ಕಡೆ ಸರ್ಕಾರದವರು ಹೆಚ್ಚು ಶ್ರದ್ಧೆ ಹೆಚ್ಚು ವಿಶ್ವಾಸ ಹೆಚ್ಚು ನಿಗಾ ಇಟ್ಟು ಹಣವನ್ನು ಒದಗಿಸಿ ಅದನ್ನು ಅಧಿಕಾರಿಗಳು ಸರಿಯಾಗಿ ವಿನಿಯೋಗಿಸು ವಂತೆ ಮತ್ತು ಸರಿಯಾಗಿ ಕೆಲಸ ಕಾರ್ಯಗಳನ್ನು ಮಾಡುವಂತೆ ಬಹಳ ಮುಖ್ಯವಾಗಿ ಸರ್ಕಾರ ದವರು ನೋಡಿಕೊಳ್ಳಬೇಕು. ಮಾರ್ಚಿ ತಿಂಗಳು ಒಂದೇ ತಿಂಗಳಿನಲ್ಲಿ ಲಕ್ಷಾಂತರ ರೂಪಾಯಿಗಳ ರಸ್ತೆಗಳನ್ನು ಮಾಡಬೇಕು, ಮತ್ತು ಮುಖ್ಯವಾದ ಇತರೆ ಕೆಲಸಗಳನ್ನು ಮಾಡಬೇಕು ಎಂದು ಎಷ್ಟೇ ಶ್ರದ್ಧೆಯನ್ನು ವಹಿಸಿದರೂ ಕೂಡ ಎಷ್ಟೋ ಹಣ ಲ್ಯಾಪ್ಸಾಗುತ್ತದೆ. ಆದ್ದರಿಂದ ಎರಡು ತಿಂಗಳು ಮುಂಚಿತವಾಗಿ ಆ ಕೆಲಸಗಳನ್ನು ಮಾಡಿದ ಪಕ್ಷದಲ್ಲಿ ನಮ್ಮ ಕ್ಷೇತ್ರಗಳ ಕೆಲಸ ಕಾರ್ಯ ಗಳಿಗೆ ಎಷ್ಟು ಹಣವನ್ನು ಒದಗಿಸಿರುತ್ತಾರೆಯೋ ಅಷ್ಟು ಹಣವನ್ನೂ ಸಹ ಖರ್ಚು ಮಾಡಿದರೆ ಅದ ರಿಂದ ಜನಗಳಿಗೆ ಅನುಕೂಲವಾಗುತ್ತದೆ ಎಂದು ನಾನು ಸರ್ಕಾರದ ಮುಂದೆ ಬಿನ್ನವಿಸಿ ಕೊಳ್ಳು ತ್ತೇನೆ. ಸರ್ಕಾರದವರು ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಉದ್ದೇಶಪಟ್ಟಿರು ತ್ತಾರೆಯೋ ಮತ್ತು ಹಣವನ್ನು ಒದಗಿಸಿರುತ್ತಾರೆಯೋ ಅದೆಲ್ಲವನ್ನೂ ಮಾಡಿ ಈ ಮರಾಮತ್ತು ಇಲಾಖೆಯಲ್ಲಿ ಗತಿಸಿದ ಸರ್ ಎಂ. ವಿಶ್ವೇಶ್ವರಯ್ಯನವರು ಏನು ಒಂದು ಅದ್ಭುತ ಕೆಲಸವನ್ನು ಮಾಡಿ ಒಂದು ಒಳ್ಳೆಯ ಹೆಸರನ್ನು ಸಂಪಾದನೆಮಾಡಿದ್ದಾರೋ ಅದನ್ನು ಉಳಿಸಿಕೊಂಡು ಲೋಕೋಪಯೋಗಿ ಖಾತೆ ಎಂದು ಏನು ಒಂದು ಒಳ್ಳೆಯ ಹೆಸರಿದೆ ಅದನ್ನು ಉಳಿಸಿಕೊಂಡು ನಮ್ಮ ದೇಶಕ್ಕೆ ಕೀರ್ತಿಯನ್ನು ತರುತ್ತೀರೆಂದು ನಂಬಿ ಈ ಲೋಕೋಪಯೋಗಿ ಶಾಖೆಯ ಬೇಡಿಕೆಗೆ ನಾನು ಮನಸಾರೆ ಒಪ್ಪಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಎಷ್ಟು ಹಣ ಖರ್ಚುಮಾಡುತ್ತೇವೆಂತಾ ಇದ್ದೀರೋ ಅದರ ಲೆಕ್ಕ ಇಟ್ಟುಕೊಂಡು, ಕೆಲಸ ಎಷ್ಟುವೇಗವಾಗಿ, ಉತ್ತಮವಾಗಿ ಆಗುತ್ತಿದೆ ಅನ್ನುವುದನ್ನು ಲೆಕ್ಕ ಹಾಕಿಕೊಂಡರೆ, ಈ ಹೊಗಳಿಕೆ ತೆಗಳಿಕೆಗಳನ್ನು ಒಂದು ಕಡೆ ಇಟ್ಟರೆ, ಮಾಡ ಬೇಕಾದ ಕೆಲಸ ಮಾಡಿದ್ದಾರೆಯೇ ಎನ್ನುವುದು ಅರ್ಥವಾಗುತ್ತದೆ. 64,49,21,000 ರೂಪಾಯಿ ಖರ್ಚುಮಾಡುತ್ತೀರ. ಲೋಕೋಪಯೋಗಿ ಖಾತೆಯವರು 31, 48, 49, 29, 30, 45, 46, 43, 47, 32, 50 ಈ ಡಿಮ್ಯಾಂಡುಗಳಿಗೆ ರಾಜ್ಯದಲ್ಲಿರುವ ಹಣದಲ್ಲಿ ಮುಕ್ಕಾಲು ಭಾಗವನ್ನು ಖರ್ಚು ಮಾಡುತ್ತಾರೆ. ಇಷ್ಟು ಅಗಾಧವಾದ ಹಣಖರ್ಚುಮಾಡುವಾಗ ಕೆಲಸ ಎಷ್ಟು ವೇಗವಾಗಿ ಇರಬೇಕು, ಎಷ್ಟು ತ್ವರಿತವಾಗಿ ಕೆಲಸ ಮಾಡಬೇಕು. ಎಷ್ಟರಮಟ್ಟಿಗೆ ಕೆಲಸವಾಗಿ ದೇಶದ ಅಭ್ಯುದಯ, ಕಲ್ಯಾಣ ವಾಗಿರಬೇಕು, ಒಬ್ಬ ಅಧಿಕಾರಿಯನ್ನು ತೆಗಳಬೇಕೋ, ಹೊಗಳಬೇಕೋ ಅನ್ನುವುದು ಬೇಡ. ಅಧಿಕಾರಿ ಗಳನ್ನು ಹೊಗಳಿದರೆ ತೆಗಳಿದರೆ ರಾಜ್ಯದ ಕಲ್ಯಾಣವಾಗುವುದಿಲ್ಲ. ಅಧಿಕಾರಿಗಳು ನಮ್ಮ ಊರಿನವರು ಎಂದು ತಿಳಿದುಕೊಂಡು ಕೆಲಸಮಾಡಬೇಕು.

ಒಟ್ಟಿನಲ್ಲಿ ಈ ಲೋಕೋಪಯೋಗಿ ಖಾತೆಗೆ ಕೊಟ್ಟಿರತಕ್ಕಂಥ ಹಣವನ್ನು ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಇದರಲ್ಲಿ ರಾಜಕೀಯ ಇಲ್ಲವೆಂದು ನಾನು ತಿಳಿದುಕೊಂಡಿಲ್ಲ. ಈ ಬಡ್ಜೆಟ್ಟಿನಬಗ್ಗೆ ಮಾತ ನಾಡುತ್ತಾ ಶ್ರೀ ಕಡಿದಾಳ್ ಮಂಜಪ್ಪನವರು, ಹೋದ ವರ್ಷ ಬಡ್ಜೆಟ್ ತಯಾರುಮಾಡಿದ್ದನ್ನೂ ಈ ವರ್ಷ ತಯಾರುಮಾಡಿದ್ದನ್ನೂ ನೋಡಿದರೆ ಇದರಲ್ಲಿ ಏನೋ ಗುಪ್ತ ಮನೋಭಾವ ಅಡಕವಾಗಿದೆ, ಯಾವ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಖರ್ಚುಮಾಡಬೇಕು, ಗುಂಪು ಗೂಂಪಿಗೂ ಇಷ್ಟಿಷ್ಟು ಉಪಯೋಗ ಬೇಕು ಎಂಬ ಉದ್ದೇಶವನ್ನು ಸರ್ಕಾರ ಮನಸ್ಸಿನಲ್ಲಿಟ್ಟುಕೊಂಡು ಈ ರೀತಿ ಆಯವ್ಯಯ ಅಂದಾಜನ್ನು ತಯಾರಿಸಿದೆ ಅನ್ನುವ ರೀತಿಯಲ್ಲಿ ಹೇಳಿದರು. ಇದರಲ್ಲಿ ಅದು ಇಲ್ಲ ಅಂತ ಹೇಳುವ ಸಾಮರ್ಥ್ಯ ನನಗಿಲ್ಲ. ಅವರು ಹೇಳಿದ್ದು ನೂರಕ್ಕೆ ನೂರರಷ್ಟು ದಿಟ. ನಿಮ್ಮ ಕೈನಲ್ಲಿ ದುಡ್ಡು ಕೊಡುವಾಗ, ನೀವು ಬಜೆಟ್ ತಯಾರುಮಾಡುವಾಗ ಬೇರೆ ಬೇರೆಯಾಗಿ ಮೈನರ್ ಇರಿಗೇಷನ್ನಿಗೆ ಎಷ್ಟು, ಎಲೆಕ್ಟ್ರಿಸಿಟಿಗೆ ಎಷ್ಟು, ರಸ್ತೆಗಳು, ಬ್ರಿಡ್ಜ್‌ಗಳು ಮುಂತಾದುವುಗಳಲ್ಲಿ ಯಾವ ಯಾವುದರಮೇಲೆ ಎಷ್ಟೆಷ್ಟು ಹಣ ಖಚಿತವಾಗಿ ಖರ್ಚಾಗುತ್ತದೆ, ಇವುಗಳಮೇಲೆ ಎಸ್ಟಿಮೇಟೆಷ್ಟು, ಎಷ್ಟು ಪೂರೈಸುತ್ತೀರ ? ಅನ್ನುವುದನ್ನು ಹೇಳದೆ,

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಎಲ್ಲಾ ಸೇರಿಸಿ ತಯಾರಿಸಿದ್ದೀರಿ. ನಾನು 1953ರಲ್ಲಿ ಅಸೆಂಬ್ಲಿಗೆ ಬಂದಾಗಿನಿಂದ ಬಜೆಟ್ಟುಗಳನ್ನು ನೋಡುತ್ತಿದ್ದೇನೆ. ಇದರಲ್ಲಿ ಲೇಟೆಸ್ಟ್ ಕೆಲಸಗಳಿವೆಯೇ ಹೊರತು ಅದಕ್ಕಿಂತ ಮುಂಚಿನವು ಬಜೆಟ್ಟಿನಲ್ಲಿ ಎಲ್ಲಿಯೂ ಕಾಣುತ್ತಿಲ್ಲ. ಇದರಲ್ಲಿ ಸ್ವಲ್ಪ ಯೋಚನೆ ಮಾಡಿದರೆ ಪ್ರತಿಭಾವಂತರು, ಪ್ರತಿಷ್ಠಾವಂತರು, ಅಥವಾ ಇನ್ಯಾರಾದರೂ ದೊಡ್ಡ ಮನುಷ್ಯರು ಹೇಳಿದರೆ ಆ ಕೆಲಸ ನೋಡಿಕೊಳ್ಳುತ್ತೀರ ಅಂತ ಕಾಣುತ್ತೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಸಿದ್ದಯ್ಯನವರು ಬಹಳ ಎಚ್ಚರಿಕೆಯಿಂದ ಸರ್ಕಾರದ ಕಣ್ಣನ್ನು ತೆರಸತಕ್ಕಂಥ ರೀತಿಯಲ್ಲಿ ಮಾತನಾಡಿದರು. ಅಧಿಕಾರಿಗಳು ಲೋಪದೋಷ ಮಾಡುತ್ತಿದ್ದಾರೆ, ಅವನ್ನು ಸರಿಮಾಡಿ ಅಂತ ಹೇಳಿದರು. ನಿಮಗೆ ಒಂದು ಖಾತೆ ಕೊಟ್ಟಿದ್ದಾರೆ. ನೀವು ಎಷ್ಟು ಬಿಲ್ಡಿಂಗ್, ಮಾಡಬಹುದು, ಎಷ್ಟು ಸೇತುವೆಗಳಾಗುತ್ತವೆ, ಎಷ್ಟು ರಸ್ತೆ ಆಗುತ್ತದೆ, ಕಾಂಕ್ರೀಟ್ ಎಷ್ಟಕ್ಕೆ ಹಾಕುತ್ತೀರ, ಅಸ್‌ಫಾಲ್ಟ್ ಎಷ್ಟಕ್ಕೆ ಮಾಡುತ್ತೀರ, ಎಲ್ಲೆಲ್ಲಿ ಮಾಡುತ್ತೀರ ಅನ್ನುವುದನ್ನು ಸ್ವಲ್ಪ ಪ್ರತ್ಯೇಕವಾಗಿ ತೋರಿಸುತ್ತೀರಾ ?

ರಸ್ತೆ, ಸೇತುವೆ, ಬಿಲ್ಡಿಂಗುಗಳಿಗಾಗಿ ಒಂದು ಪ್ರತ್ಯೇಕ ಮಂತ್ರಿ ಜಾಗವಿದೆಯೋ ಗೊತ್ತಿಲ್ಲ. ನಾವು ಹೋದ ಸಾರಿಯೇ ಹೇಳಿದೆವು. ಎಮರ್ಜನ್ಸಿ ಬಂದುಬಿಟ್ಟಿತು. ರಸ್ತೆ, ಬಿಲ್ಡಿಂಗ್, ಬ್ರಿಜ್‌ಸ್ ಕಟ್ಟುವುದನ್ನು ನಿಲ್ಲಿಸಿಬಿಡಿ, ಆಹಾರ ಬೆಳೆಯತಕ್ಕಂಥ ಮೈನರ್ ಇರಿಗೇಷನ್ನಿಗೆ ಜಾಸ್ತಿ ಗಮನಕೊಟ್ಟು ಆಹಾರ ಜಾಸ್ತಿ ಉತ್ಪನ್ನ ಮಾಡಬೇಕು. ಎಲೆಕ್ಟ್ರಿಸಿಟಿ ಜಾಸ್ತಿ ಪ್ರೊಡ್ಯೂಸ್ ಮಾಡಬೇಕು. ಅದನ್ನು ಹಳ್ಳಿ ಹಳ್ಳಿಗೆ ಹಂಚಬೇಕು. ರಾಗಿ, ಭತ್ತ, ಬೆಳೆಯಬೇಕು ಎಂದು ಹೇಳಿದೆವು. ಹಾಗೆಯೇ ಮುಖ್ಯ ಮಂತ್ರಿಗಳು ಒಂದು ಚಾರ್ಟ್‌ಹಾಕಿ ಅದರಂತೆ ಕೆಲಸ ನಡೆಯುವಂತೆಮಾಡಿ, ನೀವು ಒಂದು ಸೂಪರ್ ವೈಸರಿ ಕಂಟ್ರೋಲ್ ಕೂಡ ಇಟ್ಟುಕೊಂಡು ಇರಿ ಎಂದು ಪ್ರಾರ್ಥನೆ ಮಾಡಿಕೊಂಡೆವು. ಮುಖ್ಯಮಂತ್ರಿ ಗಳು P.W.D. ಮಂತ್ರಿಗಳೂ ಆಗಿರುವುದರಿಂದ, P.W.D. ಮಂತ್ರಿಗಳಿಗೆ ಏನೇನೂ ಕೆಲಸವಿಲ್ಲ. ಆ ಮಂತ್ರಿಗಳಿಗೇ P.W.D. ಕೆಲಸವನ್ನೆಲ್ಲಾ ವಹಿಸಿಬಿಡಿ. ಇಷ್ಟು ಹಣದ ಜವಾಬ್ದಾರಿಹೊತ್ತು, ನಿಮ್ಮಲ್ಲಿರತಕ್ಕಂಥ ಸಣ್ಣ ಪುಟ್ಟ ವ್ಯಾಜಗಳನ್ನು ಬಗೆಹರಿಸಿಕೊಂಡು, ಯಾರಿಗೆ ಏನೇನು ಕೊಡಬೇಕೆಂದು ತಲೆ ಕೆಡಿಸಿಕೊಂಡು, ಈ ಖಾತೆಯ ಹಣ ಹಂಚುವುದಕ್ಕೆ ವೇಳೆ, ಅವಕಾಶವೆಲ್ಲಿದೆ ? ಲೋಕೋಪಯೋಗಿ ಖಾತೆಯನ್ನು ಸಂಪೂರ್ಣವಾಗಿ P.W.D. ಮಂತ್ರಿಗಳಿಗೇ ಬಿಟ್ಟುಕೊಡಿ. ಮುಖ್ಯಮಂತ್ರಿಗಳು P.D.W. ಮಂತ್ರಿಗಳೂ ಅಂದರೆ ನನಗೆ ಅರ್ಥವಾಗುವುದಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು.

ಚೀಣಾದಿಂದ ಒದಗಿದ ಎಮರ್ಜನ್ಸಿ ಹೋಗಿಬಿಟ್ಟಿತು ಅಂದು ನೀವು ತಿಳಿದುಕೊಂಡ ಹಾಗಿದೆ. ಅದು ದೂರವಾಗಿಲ್ಲ, ಹಿಂದಿಗಿಂತ ಹತ್ತಿರ ಬರುತ್ತಿದೆ. ಅದಕ್ಕೋಸ್ಕರ ಎಚ್ಚರಿಕೆಯಿಂದ ಇರಬೇಕೆಂದು, ಎಂಟು ದಿವಸಗಳ ಕೆಳಗೆ ಪ್ರಧಾನ ಮಂತ್ರಿಗಳು ಹೇಳಿದರು. ಇಂಥ ಪರಿಸ್ಥಿತಿಗೆ ಏನು ಮಾಡಬೇಕು : October, November, December, January, February, March ಆರು ತಿಂಗಳು ಆಗಿಹೋಯಿತು. ಆಹಾರೋತ್ಪತ್ತಿ ಜಾಸ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಅದಕ್ಕೆ ಎಷ್ಟು ಬಾವಿ ತೆಗ್ಗಿಸಿದಿರಿ, ಎಷ್ಟು ಪಿಕ್‌ಅಪ್ ಹಾಕಿದಿರಿ, ಕೆರೆಕಟ್ಟೆಗಳು, ರಸ್ತೆ ಎಷ್ಟು ಮಾಡಿದಿರಿ, ಎಷ್ಟು sanction ಆಗಿದೆ, ಎಷ್ಟಕ್ಕೆ ಎಸ್ಟಿಮೇಟ್ ಮಾಡಿದ್ದೀರಿ, ಮಾಡತಾ ಇದ್ದೀರಿ, ಎಮರ್ಜನ್ಸಿಗೋಸ್ಕರ ಎಷ್ಟು sanction ಮಾಡಿದ್ದೀರ, ಅವುಗಳನ್ನು ಯಾವಾಗ ಪೂರೈಸುತ್ತೀರ, ಈ ಅಂಶಗಳಿಗೆಲ್ಲ ತಾವು ಸರಿ ಯಾದ ರೀತಿಯಲ್ಲಿ ಉತ್ತರ ಕೊಡುತ್ತೀರಾ ! ಮೈನರ್ ಇರಿಗೇಷನ್ ಕೆಲಸ ಏನಾದರೂ ಒಂದು ರೀತಿ ಯಲ್ಲಿ ವೇಗದಿಂದ ಚಲನೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರ ? ನನಗಾದರೂ ಅನ್ನಿಸು ತ್ತದೆ : ನಾವು ಇಲ್ಲಿ ಬೇಕಾದಷ್ಟು ಮಾತನಾಡುತ್ತೇವೆ, ನೀವೂ ಅದಕ್ಕೆ ಉತ್ತರ ಕೊಡುತ್ತೀರ, ಇಬ್ಬರೂ ಹೊರಟು ಹೋಗುತ್ತೇವೆ, ಅದರಿಂದ ಏನೂ ಉಪಯೋಗವಾಗದೆ ನಾವೂ ನೀವೂ ದುಃಖ ಪೀಡಿತ ಸನ್ನಿವೇಶ ದೇಶದಲ್ಲಿ ತರುತ್ತೇವೆ. ಲೋಕೋಪಯೋಗಿ ಖಾತೆಯವರು ಹೆಚ್ಚು ಆಹಾರ ಬೆಳೆ ಯುವುದಕ್ಕೆ ಎಷ್ಟು ಕೆರೆಗಳನ್ನು ರಿಪೇರಿ ಮಾಡಿದ್ದೀರ, ಮತ್ತು ಇಂಥ ಬೇರೆ ಸೌಕರ್ಯಗಳನ್ನು ಎಷ್ಟು ವೇಗದಿಂದ ಒದಗಿಸಿ ಕೊಟ್ಟಿದ್ದೀರ ? ನಮ್ಮ ಮೈಸೂರಿನಲ್ಲಿ ಏಳು ಎಕರೆ ಮಾತ್ರ ಕರಿಭೂಮಿ ಇದ್ದರೆ. ಆಂಧ್ರದಲ್ಲಿ 24 ಎಕರೆ, ಮದ್ರಾಸಿನಲ್ಲಿ 42 ಎಕರೆ, ಕೇರಳದಲ್ಲಿ ಇನ್ನೆಷ್ಟೋ ಎಕರೆ ಇದೆ ಎಂದು ಹೇಳು ತ್ತೀರೇ ಹೊರತು, ನೀವು ಏನು ಮಾಡಿದ್ದೀರ ? ನಿಮ್ಮ ಕಾಂಗ್ರೆಸ್ ಸರ್ಕಾರವೇ ಅಲ್ಲಿಯೂ ಇರುವುದು, ಇಲ್ಲಿಯೂ ಇರುವುದು. ಅಲ್ಲಿಯೂ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ, ಇಲ್ಲಿಯೂ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇಲ್ಲಿಯೂ Chief Engineer, Superintending Engineers, Executive Engineers, ವಗೈರೆ ಇಟ್ಟುಕೊಂಡು, ಅತಿ ವೇಗದಲ್ಲಿ ಏಕೆ ಹೋಗಲಿಲ್ಲ ! ಕೊನೆಯ ಪಕ್ಷ 100 ಎಕರೆಗೆ 20 ಎಕರೆಯಾದರೂ ನೀರಾವರಿ ಸಾಗುವಳಿಗೆ ಬಂದಿದೆಯೇ ? ಬರದಿದ್ದರೆ, ಏಕೆ ಮಾಡಿಸಲಿಲ್ಲ ? over-night, 5 ಸಾವಿರ ಪಂಪುಸೆಟ್ ಹಂಚುತ್ತೇವೆ, 5 ಸಾವಿರ ಬಾವಿ ತೋಡಿಸು

ತ್ತೀವೆ, ಕೇಂದ್ರ ಸರ್ಕಾರದಿಂದ ಒಂದು ಕೋಟಿ ರೂಪಾಯಿ ತಂದು ಕೊಡುತ್ತೇವೆಂದು, ಪ್ರಿಂಟ್ ಮಾಡಿಸಿ ಹೇಳುತ್ತೀರ. ಈ ಎಲ್ಲಾ ಭಾಷಣಗಳನ್ನು ಕೇಳುವುದರಿಂದ ಏನು ಪ್ರಯೋಜನ ? ಒಂದು ಲಕ್ಷ ಟನ್ ಹೆಚ್ಚಿಗೆ ಆಹಾರ ಬೆಳೆಯುವುದಕ್ಕೆ ಏನಾದರೂ ಮಾರ್ಗ ಮಾಡಿದ್ದೀರಾ ! ನಿಜವಾಗಿಯೂ ಇದು ಮೈಸೂರಿನ ದುರ್ದೈವ ! ಲೋಕೋಪಯೋಗಿ ಖಾತೆ ಸರಿಯಾದ ರೀತಿಯಲ್ಲಿ ಹೋಗುತ್ತಾ ಇಲ್ಲ. ಯಾವ ಅಧಿಕಾರಿಯನ್ನು ತೆಗೆಯಬೇಕು, ಯಾರನ್ನು promote ಮಾಡಬೇಕು, ಯಾರನ್ನ demote ಮಾಡಬೇಕು ಅಂತಹೇಳಿ ಇದರಲ್ಲಿ ನಿಮ್ಮ ಕಾಲ ಹೋಗುತ್ತಿದೆಯೇ ವಿನಾ ಅಧಿಕಾರಿಗಳನ್ನು wipe ಮಾಡಿ. ಅವರುಗಳಿಂದ ಕೆಲಸ ತಗೆದುಕೊಂಡು, ಇಲಾಖೆಯನ್ನು ಸರಿಯಾಗಿ ನಡೆಸಿಕೊಂಡು ಹೋಗುವುದರಲ್ಲಿ ವಿನಿಯೋಗವಾಗುವುದಿಲ್ಲ, ದೇಶ ಕಲ್ಯಾಣವಾಗತಕ್ಕಂಥ ಕೆಲಸ ಮಾಡುವ ಮಾರ್ಗದಲ್ಲಿ ನೀವು ಕುಂಟಿದ್ದೀರ ಅಂದರೆ, ಅದು ಸೋಜಿಗದ ಮಾತಲ್ಲ. ನೀವು ವಯಸ್ಸಿನಲ್ಲಿ ಚಿಕ್ಕವರು.

Mr. SPEAKER.—The age of the Minister does not come in.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವನ್ನು ಯಾವ Context ನಲ್ಲಿ ಹೇಳಿದನೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ವಯಸ್ಸಿನಲ್ಲಿ ಚಿಕ್ಕವರಾಗಿರುವುದರಿಂದ, ಬುದ್ಧಿ ಅಷ್ಟು ಚುರುಕಾಗಿ ಓಡುತ್ತದೆ, ಅಷ್ಟು ಭಾರ ಹೊರಬಲ್ಲರು. ಅದಕ್ಕೋಸ್ಕರ ರಾತ್ರಿ ಹಗಲೂ ದುಡಿಯಬಲ್ಲರು.

Mr. SPEAKER.—Whatever may be the reason, the age of the Minister cannot come in during the discussion of Budget.

Sri C. J. MUCKANNAPPA.—May I submit that we are giving a huge amount of money into the hands of the P.W.D. Minister ? Unless he is wise and rich in experience......

Mr. SPEAKER.—Please come to the subject and speak.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೈಟ್. ಅದಕ್ಕೋಸ್ಕರವಾಗಿ P.W.D. ಮಂತ್ರಿಗಳಿಗೆ ನಾನು ಹೇಳುತ್ತಾ ಇದ್ದೇನೆ : ಚೀಫ್ ಮಿನಿಸ್ಟರಿಗೆ ಕೇಳಿ : "ಖಾತೆ ಎಲ್ಲಾ ಕೊಡಿ, ಎಲ್ಲಾ ಖಾತೆ ವಹಿಸಿಬಿಡಿ. ಹಾಗಾಗದಿದ್ದರೆ ನನಗೆ ಏನೊಂದೂ ಕೊಡಬೇಡಿ, ನನಗೆ ಸಂಬಳ ಸಾಕು", ಎಂದು. ಇಲ್ಲದೆ ಹೋದರೆ ನಾನು ಹೇಳುತ್ತೇನೆ, ನೀವು ದೇಶಕ್ಕೆ ನ್ಯಾಯ ಮಾಡದೆ ಹೋದರೆ ದೇವರಿಗೆ ಉತ್ತರ ಹೇಳಬೇಕಾಗುತ್ತದೆ. ದೇವರು "ನೀನು P.W.D. ಮಂತ್ರಿಯಾಗಿ ಏನೇನು ಮಾಡಿದೆ" ಎಂದು ಕೇಳುತ್ತಾನೆ ದೇವರು ಅವನ ಬುಕ್ ತೆಗೆದುಕೊಂಡರೆ, ಅವನ ಕೈಯಲ್ಲಿ ನೀವು ಮಾಡಿದ್ದೆಲ್ಲಾ ಇರುತ್ತದೆ. ಅದಕ್ಕೋಸ್ಕರ, ಆದ್ದರಿಂದ ನಿಮ್ಮ ಕೈಲಿ ಕೊಟ್ಟಂಥ ಹಣದಿಂದ ಜನಗಳಿಗೆ ಉಪಯೋಗವಾಗಲು ಎಲ್ಲಾ ಯೋಜನೆಗಳನ್ನು implement ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

Mr. SPEAKER.—The House will now rise and meet tomorrow at 1 p.m. and the Hon'ble Member will have only ten more minutes to speak.

The House adjourned at Six of the Clock to meet again at one of the Clock on Tuesday, the 19th March 1963.

WD 367—GPB—900—24-8-63

MYSORE LEGISLATIVE ASSEMBLY

TWENTY-FIRST DAY

Tuesday, 19th March 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Disforestment of forest land in North Kanara District for residential purposes.

**Q.*—160. Smt. V. V. MIRJANKAR (Kumta).—

Will the Government be pleased to state :—

(*a*) whether they have received any proposals from the District of North Kanara of disforestment of forest lands for residential purposes ;

(*b*) the policy of the Government regarding the same ?

A.—Sri B. RACHAIAH (Minister for Forests and Fisheries).—

(*a*) Yes.

(*b*) According to the policy laid down by Government, the Deputy Commissioner, North Kanara, is competent to order the disforestment of 5 acres for housing purposes in consultation with the Forest Department, and more than 5 acres will be sanctioned by Government. Also, as per orders in vogue, an area of 10 guntas in each individual case out of Betta S Nos. can be granted for constructing residential purposes.

Smt. V. V. MIRJANKAR.—What is the area so far released by Government in each of the taluks of Karwar District ?

Sri B. RACHIAH.—In Karwar taluk 80 acres 36 guntas ; in Ankola 28 acres 11 guntas ; Yellapur 16 acres 20 guntas ; Mundgod 48 acres 5 guntas ; Banavar 109 acres 20 guntas and Kumta 39 acres 36 guntas.

ಶ್ರೀಮತಿ ವಿ. ವಿ. ಮಿರ್ಜಾಂಕರ್.—ಈ ಜಮೀನನ್ನೆಲ್ಲಾ ಈಗ ಡಿಸ್ಟ್ರಿಬ್ಯೂಟ್ ಮಾಡಿದ್ದಾರೆಯೇ ?

Sri B. RACHIAH.—This has been referred to the Forest Settlement Officers to disforest the area and fix the boundaries. In some cases, distribution has taken place.

ಶ್ರೀಮತಿ ಪಿ. ಪಿ. ಮಿಜಾರ್ಂಕರ್.—ಹರೆಹಾಳ್ ಗ್ರಾಮದ 309ನೇ ಸರ್ವೆ ನಂಬರಿನಲ್ಲಿ ಹರಿಜನರು ಒಂದು ಪ್ಲಾಟನ್ನು ಕೇಳಿದ್ದರು. ಅವರಿಗೆ ಅದನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದಾರೆಯೆ ?

ಶ್ರೀ ಬಿ. ರಾಚಯ್ಯ.—ತಾವು ಕಳುಹಿಸಿದ್ದ ಪ್ರಶ್ನೆ ಜನರಲ್ ಸ್ವಭಾವದಾಗಿತ್ತು. ಇದರಲ್ಲಿ ಇಂಡಿವಿಜಿಯಲ್‌ಗಳ ಪ್ರಶ್ನೆ ಉದ್ಭವಿಸುವುದಿಲ್ಲ. ತಮಗೆ ಆ ವಿಚಾರ ಬೇಕಾಗಿದ್ದರೆ ಪ್ರತ್ಯೇಕವಾಗಿ ಬರೆದು ಅದನ್ನು ತರಿಸಿಕೊಡುತ್ತೇನೆ.

ಶ್ರೀ ಎಸ್. ಪಿ. ಫಾಯದೆ.—ನಮ್ಮ ಕಡೆಗಳಲ್ಲಿ ಅದರಲ್ಲೂ ಅಂಕೋಲಾದಲ್ಲಿ ವಸತಿ ಸೌಕರ್ಯ ವಿಲ್ಲದೆ ಜನರಿಗೆ ಬಹಳ ತೊಂದರೆಯಾಗಿರತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಕೆಲವು ಕಡೆ ತೊಂದರೆ ಇದೆ ಎಂದು ಸರ್ಕಾರದವರಿಗೂ ತಿಳಿದುಬಂದಿದೆ. ಅದಕ್ಕಾಗಿಯೇ ಈಗ ಫಾರೆಸ್ಟ್ ಪ್ರದೇಶದಿಂದ ಜಮೀನನ್ನು ಸೈಟುಗಳಿಗಾಗಿ ರಿಜರ್ವ್ ಮಾಡಿ ಕೊಳ್ಳಲಾಗಿದೆ.

ಶ್ರೀ ಎಸ್. ಪಿ. ಫಾಯದೆ.— ಗ್ರಾಮ ಠಾಣದ ಪ್ರದೇಶಕ್ಕೆ ಬೇಗ ಜಮೀನು ಬಿಟ್ಟುಕೊಡಲು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಐದು ಎಕರೆಗಳಿಗೆ ಕಡಮೆ ಪ್ರದೇಶವಿರತಕ್ಕದ್ದನ್ನು ಡಿ. ಸಿ. ಅವರು ಮತ್ತು ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳೂ ಅಲ್ಲೇ ಕ್ಷಣನಲ್ಟ್ ಮಾಡಿ ವಿಲೇವಾರಿ ಮಾಡಬಹುದೆಂದು ತಿಳಿಸಿದೆ. ಐದು ಎಕರೆಗೆ ಮೇಲ್ಪಟ್ಟ ಕೇಸುಗಳು ಮಾತ್ರ ಸರ್ಕಾರದ ಮಂಜೂರಾತಿ ಪಡೆಯಬೇಕಾಗಿದೆ ಎಂದು ತಿಳಿಸಿದೆ.

ಶ್ರೀ ವಿ. ಎಂ. ದೇವ್.—ನಾರ್ತ್ ಕೆನರಾ ಜಿಲ್ಲೆಯ ಫಾರೆಸ್ಟ್ ಪ್ರದೇಶದಲ್ಲಿ ಈಗ ಬಿಟ್ಟು ಕೊಟ್ಟಿರತಕ್ಕ ಭಾಗವು ಶೇಕಡ ಎಷ್ಟು ಪಾಲು ಆಗುತ್ತದೆ ?

ಶ್ರೀ ಬಿ. ರಾಚಯ್ಯ.—ಅಲ್ಲಿ ಶೇಕಡ 81 ಫಾರೆಸ್ಟ್ ಇದೆ. ಅದರಲ್ಲೀಗ 346 ಎಕರೆಗಳನ್ನು ಬಿಡಿಸಿ ಕೊಡಲಾಗಿದೆ.

ಶ್ರೀ ಜಿ. ವಿ. ಗೌಡ.—ಇದನ್ನು ಅಪ್‌ಸೆಟ್ ಬೆಲೆಗೆ ಕೊಡಲಾಗುತ್ತಿದೆಯೋ ? ಹೇಗೆ ?

ಶ್ರೀ ಬಿ. ರಾಚಯ್ಯ.—ಮಲೆನಾಡು ಕನ್‌ಸೆಷನ್ ರೂಲ್ಸ್ ಪ್ರಕಾರ ಕೊಡಲಾಗುತ್ತದೆ.

Quota of stainless steel, zinc and copper allotted to the Mysore State during 1961-62.

***Q.—272.** Sri S. SIVAPPA (Sravanabelagola).—

Will the Government be pleased to state :—

(a) what is the quota of stainless steel, zinc and copper allotted to the Mysore State during the year 1961-62 ;

(b) how it is distributed ?

(c) the basis on which it is distributed ?

A.—Sri K. MALLAPPA (Minister for Industries and Commerce).—

(a)—

Period	*Copper*	*Zinc*	*Stainless Steel*
April-September, 1961.	500	400	126
October, 1961 March, 1962.	500	400	307

(*b*) The material is distributed to Small Scale Industries Units under the following categories :—

(i) Wire drawing units ;

(ii) Alloy Castings ;

(iii) Rolling Mills;

(iv) Press Button Manufactures.

(v) Other units and utensil manufactures.

(*c*) The distribution is made on the basis of the production capacity of the machinery installed by the Small Scale Industries Units and their past consumption.

Sri S. SIVAPPA.—Sir, some figures are given in the answer. May I know whether they are tons or sheets or what they are ?

†Sri K. MALLAPPA.—It indicates ton, Sir.

Sri S. SIVAPPA.—Will the Government be pleased to state whom this quota has been distributed in Bangalore City ?

Sri K. MALLAPPA.—I have not got the list ; I can give the purpose. It is given to various persons.

Sri S. SIVAPPA.—I want to know where those factories are situated

Sri K. MALLAPPA.—Sir, all over the State they are situated, places like Bangalore, Mysore, Gulbarga, Belgaum, Hubli and so on.

Sri S. SIVAPPA.—May I know the number of tons of products that have been produced out of this raw material supplied to them ?

Sri K. MALLAPPA.—I have no information ; if the Hon'ble Member wants, I will be too happy to get it. But, I can only say that equivalent quantity has been produced.

ಶ್ರೀ ಸಿ. ಆರ್. ರಂಗೇಗೌಡ.—(ಸಿ) ಪ್ರಶ್ನೆಗೆ ಉತ್ತರವಾಗಿ ಯಂತ್ರದ ಉತ್ಪಾದನಾ ಸಾಮರ್ಥ್ಯ ಹಾಗೂ ಅವುಗಳ ಹಿಂದಿನ ಬಳಕೆ ಪ್ರಮಾಣದ ಆಧಾರದ ಮೇಲೆ ತಾಮ್ರ ಇತ್ಯಾದಿ ಲೋಹಗಳನ್ನು ಹಂಚಲಾಗುತ್ತಿದೆ ಎಂದು ತಿಳಿಸಲಾಗಿದೆ. ಆದರೆ ಹಿಂದಿನಿಂದಲೂ ಈ ಕೈ ಕೆಲಸದಲ್ಲೇ ಪಾತ್ರೆ ಪಡಗಳನ್ನು ಮಾಡಿಕೊಂಡಿದ್ದ ಜನರಿಗೇನು ಅನುಕೂಲ ಮಾಡಿಕೊಟ್ಟಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಅವರೆಲ್ಲರೂ ಈ ಹಿಂದೆ ಎಷ್ಟು ಪ್ರಮಾಣದಲ್ಲಿ ಈ ಕೈಗಾರಿಕೆ ನಡೆಸುತ್ತಿದ್ದರೆಂಬುದನ್ನು ನೋಡಿ ಅವರಿಗೂ ಕೊಡಲಾಗುತ್ತಿದೆ.

ಶ್ರೀ ಸಿ. ಆರ್. ರಂಗೇಗೌಡ.—ಸರ್ಕಾರದವರು ಕೊಡತಕ್ಕ ಕೋಟಾಕ್ಕೆ ಅಥವಾ ಮೆಟೀರಿಯಲ್ಸ್‌ಗೆ ಸರಿಯಾಗಿ ಅವರ ಉತ್ಪನ್ನವಿರುತ್ತೆಂಬುದನ್ನು ಯಾವ ರೀತಿ ಪರಿಶೀಲನೆ ಮಾಡುತ್ತಾರೆ, ಯಾರು ಸೂಪರ್‌ವೈಸ್ ಮಾಡುತ್ತಾರೆ ?

ಶ್ರೀ ಕೆ. ಮಲ್ಲಪ್ಪ.—ಅದಕ್ಕೆ ಸಂಬಂಧಪಟ್ಟ ಹಾಗೆ ಯಾವ ಸಮಿತಿಯೂ ಇಲ್ಲ. ಅಂಥ ದುರುಪಯೋಗವಾಗತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ತಂದರೆ, ಅದನ್ನು ವಿಚಾರ ಮಾಡುತ್ತೇವೆ.

Sri G. V. GOWDA.—Out of this allotment made, are they able to meet the demand in the State ?

Sri K. MALLAPPA.—The demand is much more ; it is more than twice.

---

†Indicates that the remarks or speeches have not been revised by the member concerned.

Sri G. V. GOWDA.—What steps have Government taken to meet the demand of raw material ?

Sri K. MALLAPPA.—We have made representation to the Central Government.

Sri S. SIVAPPA.—Has it come to the notice of the Government that the stainless steel supplied to the so called manufacturers are not utilised by them but they send it outside the State in black-market ?

Sri K. MALLAPPA.—We have received information that the quota given so far as stainless is concerned is not used and it being black-marketted.

Sri C. J. MUCKANNAPPA.—Out of the quota shown in the answer, may I know how many are getting this quota in this State ?

Sri K. MALLAPPA.—The particulars are not immediately available with me on the file. If the Hon'ble Member wants, I will get the information and furnish.

ಶ್ರೀಮತಿ ಸುಶೀಲಾ ಬಾಯಿ ಹೀರಾಚಂದ್ ಷಾ.—ಈಗ ತಾವು ಕೊಡುತ್ತಿರುವ ತಾಮ್ರದ ಕೋಟ ಜನರಿಗೆ ಸಕಾಲಕ್ಕೆ ದೊರೆಯದೆ 4-6 ತಿಂಗಳು ಲೇಟಾಗುತ್ತದೆ. ಆ ತಾಮ್ರದ ಕೆಲಸಗಾರರು ಈ ಕೈಗಾರಿಕೆಗೆ 3-4 ಜನ ಆಳುಗಳನ್ನಿಟ್ಟುಕೊಂಡಿರುತ್ತಾರೆ. ಅವರಿಗೆ ಕೊಡತಕ್ಕ ಕೋಟಾದಲ್ಲಿ ಒಂದೊಂದಾವರ್ತಿ ಅರ್ಧ ಕೋಟ-ಕಾಲು ಕೋಟ ದೊರೆಯುತ್ತಿರುವುದರಿಂದ ಅವರಿಗೆ ಆಳುಗಳನ್ನಿಟ್ಟುಕೊಳ್ಳುವುದಕ್ಕೂ ಆಗುತ್ತಿಲ್ಲ—ಅವರನ್ನು ಕೈಬಿಟ್ಟು ಈ ಕೈಗಾರಿಕೆ ನಡೆಸುವುದಕ್ಕೂ ಆಗುತ್ತಿಲ್ಲ. ಇಂಥ ತೊಂದರೆ ಇದೆ. ಇದರ ನಿವಾರಣೆಗೆ ಸರ್ಕಾರದವರೇನು ಆಲೋಚನೆ ಮಾಡಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಒಂದು ವರ್ಷದಲ್ಲಿ ಬರತಕ್ಕ ಕೋಟಾದಲ್ಲಿ ಸ್ವಲ್ಪ ಕಡಮೆ ಬಿದ್ದರೆ ಅದು ಮುಂದಿನ ವರ್ಷದಲ್ಲಿ ಬಂದೇ ಬರುತ್ತೆ. ಇದರಿಂದ ಅವರ ಉದ್ಯಮಕ್ಕೇನೂ ತೊಂದರೆಯಾಗುವುದಿಲ್ಲ.

ಶ್ರೀಮತಿ ಚಂಪಬಾಯಿ ಭೋಗಳೆ.—ಈ ಕೈಗಾರಿಕೆಗಳು ಮುಂದುವರಿಯಲು ರಾ ಮೆಟೀರಿಯಲ್ಸ್ ಸರಿಯಾಗಿ ಸಪ್ಲೈ ಆಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ? ಇದು ಕಾಲಾ ಬಜಾರಿನಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಈ ಕೋಟಾ ಹೋಲ್ಡರುಗಳೇ ಕಾಲಾ ಬಜಾರಿನಲ್ಲಿ ಮಾರಾಟ ಮಾಡಬೇಕು. ಅದಕ್ಕೆ ಕೋಟಾ ಹೋಲ್ಡರೇ ಕಾರಣ.

ಶ್ರೀಮತಿ ಚಂಪಾಬಾಯಿ ಭೋಗಳೆ.—ಅದನ್ನು ತಡೆಗಟ್ಟಲೇನು ಪ್ರಯತ್ನ ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಅಂಥ ನಿದರ್ಶನಗಳು ನಮ್ಮ ಗಮನಕ್ಕೆ ಬಂದರೆ ಅವರಿಗೆ ಶಿಕ್ಷೆಯಾಗುತ್ತದೆ. ಅವರಿಗೆ ಕೊಟ್ಟಿದ್ದ ಕೋಟಾ ಸಹ ಕ್ಯಾನ್ಸಲ್ ಆಗುತ್ತೆ.

ಶ್ರೀ ಎಸ್. ಶಿವಪ್ಪ.—ಇಲ್ಲಿ ನಮೂದಿಸಿರುವ Stainless Steel, Zinc and Copper ಇವುಗಳಲ್ಲಿ ಹತ್ತಾರು ವರ್ಷಗಳಿಂದ ಇದೇ ವೃತ್ತಿಯನ್ನು ಅವಲಂಬಿಸಿಕೊಂಡು ಬಂದಿರುವವರಿಗೆ ಎಷ್ಟು ಕೋಟಾ ಕೊಟ್ಟಿದ್ದೀರಿ ಮತ್ತು ಇತ್ತೀಚೆಗೆ ಹೊಸದಾಗಿ ಬಂದಿರುವವರಿಗೆ ಎಷ್ಟು ಕೋಟಾ ಕೊಟ್ಟಿದ್ದೀರಿ.

ಶ್ರೀ ಕೆ. ಮಲ್ಲಪ್ಪ.—ವಿವರಗಳು ನನ್ನ ಹತ್ತಿರ ಇಲ್ಲ. ಮೊದಲಿನಿಂದಲೂ ಯಾರು ಕೆಲಸ ಮಾಡುತ್ತಿದ್ದಾರೆಯೋ ಅವರಿಗೆ first preference ಕೊಟ್ಟು ಹೊಸದಾಗಿ ಈ ವೃತ್ತಿಯನ್ನು ಅವಲಂಬಿಸಿರುವವರಿಗೆ next preference ಕೊಟ್ಟು ಹಂಚುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಕೋಟಾ ಹಂಚುವಾಗ ಮೊದಲು ಅವರಲ್ಲಿ ಯಂತ್ರೋಪಕರಣಗಳಿವೆಯೇ ಎಂದು inspection ಮಾಡುವುದಕ್ಕೆ ಏನಾದರೂ ಸಿಬ್ಬಂದಿಯನ್ನು ಇಟ್ಟಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಉತ್ತರದಲ್ಲೇ, ತಿಳಿಸಿದೆ. ಅವರಲ್ಲಿರುವ ಉತ್ಪಾದನಾ ಶಕ್ತಿ ಏನು, machinery ಏನಿದೆ, ಎಂಬುದನ್ನೆಲ್ಲ ಗಮನಿಸಿ ಆಮೇಲೆ ಹಂಚಲಾಗುತ್ತದೆ. ಅದಕ್ಕೆ ಬೇಕಾದ ಸಿಬ್ಬಂದಿ ಇದೆ. Deputy Director, Assistant Director, Inspecting Officers ಇದ್ದಾರೆ. ಅವರ ಶಿಫಾರಸುಗಳನ್ನು ಅಂಗೀಕರಿಸಿ ವಿಚಾರ ಮಾಡಿ ಹಂಚಲಾಗುತ್ತಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಪಾತ್ರೆಗಳ ತಯಾರಿಕರಿಗೆ ಎರಡು ವರ್ಷಗಳಿಂದ ತಾಮ್ರವನ್ನು ಕೊಟ್ಟಿಲ್ಲವೆಂಬುದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಎಲ್ಲೆಲ್ಲಿ ಯಾರು ಯಾರು ಕೈಗಾರಿಕೆಯನ್ನು ನಡೆಸುತ್ತಿದ್ದಾರೆಯೋ ಅವರಿಗೆ ಹಂಚಿಕೆಯಾಗುತ್ತಿದೆ. ಕೇಳಿದಷ್ಟು ಪ್ರಮಾಣದಲ್ಲಿ ಕೊಡದೆ ಇದ್ದರೂ ನಮಗೆ ಬರುವ ಪ್ರಮಾಣವನ್ನನುಸರಿಸಿ ಕೊಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಯಾರಕರು 'ಟ್ರೇಡ್ ಮಾರ್ಕ್' ಮತ್ತು 'ಬ್ರಾಂಡ್' ರಿಜಿಸ್ಟರ್ ಮಾಡಿದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಸಾಮಾನ್ಯ ಕೈಗಾರಿಕೆಗಳಲ್ಲಿ 'ಟ್ರೇಡ್ ಮಾರ್ಕ್' ಮತ್ತು 'ಬ್ರಾಂಡ್' ರಿಜಿಸ್ಟರ್ ಮಾಡತಕ್ಕ ಅಗತ್ಯವಿಲ್ಲ. ವಿಶೇಷವಾದ ತಯಾರಿ ಇದ್ದರೆ ಮಾತ್ರ ಆ ಪ್ರಶ್ನೆ ಬರುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರಾಜ್ಯದಲ್ಲಿ ಇದುವರೆಗೂ ತಾಮ್ರ ಮತ್ತು ಸ್ಟೀಲ್ ಕೋಟ ಕೊಟ್ಟದ್ದನ್ನು ಸರಿಯಾಗಿ ಉಪಯೋಗ ಮಾಡದೆ ಇರತಕ್ಕವರಲ್ಲಿ ಎಷ್ಟು ಜನರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡಿದ್ದೀರಿ, ಲೈಸನ್ಸ್ ವಜಾ ಮಾಡಿದ್ದೀರಿ ಮತ್ತು ಶಿಕ್ಷೆ ವಿಧಿಸಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಶಿಕ್ಷೆ ವಿಧಿಸಿಲ್ಲ, ಎರಡನೆಯ ಹಂಚಿಕೆ ಮಾಡುವಾಗ ಅವರ ಕೋಟಾ ಕೊಡುವುದಿಲ್ಲ.

Sri C. S. HULKOTI.—Is any quota fixed for particular industries ?

ಶ್ರೀ ಕೆ. ಮಲ್ಲಪ್ಪ.—ಇಷ್ಟೇ percentage ಎಂದು ಗೊತ್ತುಮಾಡುವುದಕ್ಕಾಗುವುದಿಲ್ಲ. ಅವರು ಎಷ್ಟು ವರ್ಷದಿಂದ ಕೈಗಾರಿಕೆಯನ್ನು ನಡೆಸುತ್ತಿದ್ದಾರೆ, ಅವರ ಆವಶ್ಯಕತೆಗಳೇನು ಎಂದು ನಿರೀಕ್ಷಿಸಿ ಹಂಚಿಕೆ ಮಾಡುತ್ತೇವೆಯೇ ವಿನಾ ಇಷ್ಟೇ percentage ಎಂದು ನಿಗದಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಎಷ್ಟು ಜನರಿಗೆ ಲೈಸನ್ಸ್ ವಜಾ ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಕೆಲವರ ಲೈಸನ್ಸ್ ವಜಾ ಆಗಿದೆ. ಇಷ್ಟೇ ಜನರದ್ದು ಎಂದು ಹೇಳಲು ನನ್ನ ಹತ್ತಿರ ಮಾಹಿತಿ ಇಲ್ಲ. ಬೇಕಾದರೆ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ರಾಜ್ಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ಕೋಟ ಸಿಕ್ಕುತ್ತಿಲ್ಲ ವೆನ್ನುವ ಕಾರಣ ಹೆಚ್ಚಿನ ಕೋಟ ಪಡೆಯುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ನಮಗೆ ಇಂಡಿಯಾ ಸರ್ಕಾರದವರು ಕೊಡುತ್ತಾರೆ. ಅವರು ಕೊಡು ವುದು ಸಾಲದು, ಹೆಚ್ಚಿಗೆ ಕೊಡಬೇಕು ಎಂದು ಬರೆದಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾವು ಒಂದು ಆಧಾರದ ಮೇಲೆ ಹಂಚುತ್ತಿದ್ದೀರಿ. ಕೊಡುವ ಕೋಟ ಸಾಲದು ಎನ್ನುವಾಗ ಅದನ್ನು ತೆಗೆದುಕೊಂಡವರು ತಾವು ಉಪಯೋಗಿಸದೆ ಬೇರೆಯವರಿಗೆ ಕೊಡುವುದಕ್ಕೆ ಹೇಗೆ ಸಾಧ್ಯ ?

ಶ್ರೀ ಕೆ. ಮಲ್ಲಪ್ಪ.—ಈಗ ಕೆಲವರಿಗೆ ಅದೇ ಒಂದು ವೃತ್ತಿಯಾಗಿದೆ. ಯಾವಾಗ ಅಭಾವ ಉಂಟಾಗುತ್ತದೆಯೋ ಆವಾಗ ಇದೆಲ್ಲ ಉದ್ಭವವಾಗುತ್ತದೆ. ಕೊಟ್ಟದ್ದನ್ನು ತೆಗೆದುಕೊಂಡು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾರೆ. ಇದು ಸರ್ಕಾರದ ತಿಳುವಳಿಕೆಗೂ ಬಂದಿದೆ.

ಶ್ರೀ ಎಚ್. ನಂಜೇಗೌಡ.—ಲೈಸನ್ಸ್ ವಜಾ ಮಾಡುತ್ತೇವೆಂದು ಹೇಳಿದಿರಿ. ಹೀಗೆ ಮಾಡಿದರೆ ಅನೇಕ ವೇಳೆ ಇದನ್ನು ನಂಬಿಕೊಂಡಿರುವ ಕೆಲಸಗಾರರಿಗೆ ತೊಂದರೆಯಾಗುವುದರಿಂದ ಕಾಳಸಂತೆ ವ್ಯಾಪಾರ ಮಾಡುವವರಿಗೆ ಶಿಕ್ಷೆ ಮಾಡಿ, ಕೈಗಾರಿಕೆ ನಡೆಯುವಂತೆ ಮಾಡುವುದು ಅಗತ್ಯವಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಕೆಟ್ಟವರ ಸಹವಾಸ ಬಿಟ್ಟು ಒಳ್ಳೆಯವರ ಸಹವಾಸಕ್ಕೆ ಹೋಗಬೇಕು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸ್ಟೇನ್ ಲೆಸ್ ಸ್ಟೀಲ್ ಕಾರ್ಖಾನೆಗಳು ಎಷ್ಟೆಷ್ಟು ಪ್ರಮಾಣ ದಲ್ಲಿ ಯಾವ ಯಾವ ಊರಿನಲ್ಲಿ ಕೆಲಸ ಮಾಡುತ್ತಿವೆ ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಪಾತ್ರೆಗಳನ್ನು ಮಾಡುತ್ತಿದ್ದಾರೆ Surgical instruments ಎಂದು ಆಸ್ಪತ್ರೆಗಳಲ್ಲಿ ಉಪಯೋಗಿಸತಕ್ಕ basin ವಗೈರೆ ಮಾಡುತ್ತಿದ್ದಾರೆ.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಕಾಳಸಂತೆ ವ್ಯಾಪಾರವಾಗುವುದನ್ನು ತಡೆಗಟ್ಟುವುದಕ್ಕೆ ಏನೇನು ಕಾರ್ಯಕ್ರಮ ಸರ್ಕಾರ ತೆಗೆದುಕೊಂಡಿದೆ ?

ಶ್ರೀ ಕೆ. ಮಲ್ಲಪ್ಪ.—ಕಾಳಸಂತೆ ವ್ಯಾಪಾರವನ್ನು ಕಂಡುಹಿಡಿಯುವುದು ಕಷ್ಟ. ಒಳ್ಳೆಯವರಿಗೆ ಕೊಟ್ಟರೆ ಅವರೂ ಕೂಡ ಕಾಳಸಂತೆಯಲ್ಲಿ ಮಾರುತ್ತಾರೆ. ಕಾಳಸಂತೆ ಕ್ರಯ ಬಹಳ ಹೆಚ್ಚು. ಐದಾರು ಸಾವಿರ ರೂಪಾಯಿ ಒಂದು ಟನ್‌ಗೆ ಅಸಲು ಬೆಲೆಯಾಗುತ್ತದೆಂದು ಕೇಳಿದ್ದೇನೆ. ಕಾಳ ಸಂತೆಯಲ್ಲಿ ಇಪ್ಪತ್ತು ಸಾವಿರ ರೂಪಾಯಿ ಆಗುತ್ತದೆ. ಆದುದರಿಂದ ಒಳ್ಳೆಯವರೂ ಕೆಟ್ಟವರಾಗು ತ್ತಾರೆ. ಯಂತ್ರೋಪಕರಣಗಳನ್ನಿಟ್ಟುಕೊಂಡಿದ್ದಾರೆ, ಲೈಸೆನ್ಸ್ ಇದೆ, ಎಲ್ಲ ಇದೆ. ಅವರನ್ನು ಹೋಗಿ ಕೇಳಿದರೆ ಸೇಲ್ಸ್ ಟ್ಯಾಕ್ಸ್ ಕೊಟ್ಟದ್ದಕ್ಕೆ ರಸೀತಿಗಳನ್ನು ತೋರಿಸುತ್ತಾರೆ. ಅಂಥವರೇ

(ಶ್ರೀ ಕೆ. ಮಲ್ಲಪ್ಪ)

ಬ್ಲಾಕ್ ಮಾರ್ಕೆಟ್ ಮಾಡುತ್ತಾರೆ. ಆದುದರಿಂದ ಇಂಥವರನ್ನು ಕಂಡು ಹಿಡಿಯುವುದು ಕಷ್ಟವಾಗುತ್ತದೆ. ಈಗ ಇದನ್ನೆಲ್ಲ ಸರಿ ಮಾಡಬೇಕೆಂದು, ಒಳ್ಳೆಯವರಿಗೆ, ಯಾರು ಸರಿಯಾಗಿ ಕೆಲಸ ಮಾಡುತ್ತಾರೆಯೋ ಅಂಥವರಿಗೆ stainless steel ಕೊಡತಕ್ಕ ಉದ್ದೇಶದಿಂದ ಒಂದು ಕಮಿಟಿಯನ್ನು ಏರ್ಪಾಡು ಮಾಡುತ್ತೇವೆ. ಆ ಕಮಿಟಿಯವರು ಎಲ್ಲ ವಿಚಾರಗಳನ್ನೂ ಗಣನೆಗೆ ತೆಗೆದುಕೊಂಡು inspection ವಗೈರೆ ಮಾಡಿ ಯೋಗ್ಯರಿಗೆ ಕೊಡುವಂತೆ ಮಾಡಿ, ಆದಷ್ಟು ಮಟ್ಟಿಗೆ ಭದ್ರಪಡಿಸಬೇಕೆಂದು ಎಲ್ಲ ಪ್ರಯತ್ನಗಳನ್ನೂ ಸರ್ಕಾರ ಮಾಡುತ್ತಿದೆ.

ಶ್ರೀ ಇ. ನಾರಾಯಣಗೌಡ.—ಮೊದಲನೆಯ ಸಲ ಕೋಟ ಪಡೆದವರು ಸದುಪಯೋಗ ಪಡಿಸಿದ್ದಾರೆಯೇ ದುರುಪಯೋಗ ಪಡಿಸಿದ್ದಾರೆಯೇ ಎಂದು ಸರಿಯಾದ ವಿಚಾರಣೆ ನಡೆಸಿ ಎರಡನೆಯ ಸಲ ಕೋಟ ಕೊಡುವಾಗ ಒಂದು ರಿಪೋರ್ಟ್ ತರಿಸಿಕೊಂಡು ಕೊಡುವುದು ಉತ್ತಮವಲ್ಲವೇ?

ಶ್ರೀ ಕೆ. ಮಲ್ಲಪ್ಪ.—ಮೊದಲನೆಯ ಸಲ ಕೊಟ್ಟ ಕೋಟಾ ಸದುಪಯೋಗವಾಗಿದೆಯೇ ಅಥವಾ ದುರುಪಯೋಗವಾಗಿದೆಯೇ ಎಂಬುದನ್ನು ತಿಳಿದುಕೊಂಡು ಎರಡನೆಯ ಕೋಟಾ ಹಂಚುವ ಏರ್ಪಾಡು ಮಾಡುತ್ತೇವೆಂಬ ಭರವಸೆಯನ್ನು ನಾನು ಕೊಡುತ್ತೇನೆ.

Amount spent for the construction of new Tank at Nagarabhavi in Manchenahalli Hobli, Gauribidanur Taluk.

**Q.*—371. Sri R. N. LAKSHMIPATHI (Gauribidanur).—

Will the Government be pleased to state :—

(*a*) whether they have spent any amount for the construction of new tank at Nagarabhavi in Manchenahally Hobli, Gauribidanur Taluk, and if so, the amount spent ;

(*b*) at what stage the work of the tank is pending now ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes ; Rs. 46,716.

(*b*) The question of continuance of the work or otherwise is under examination.

ಶ್ರೀ ಆರ್. ಎನ್. ಲಕ್ಷ್ಮೀಪತಿ.—46,716 ರೂಪಾಯಿ ಕೆರೆಗೋಸ್ಕರ ಖರ್ಚು ಮಾಡಿದೆಯೆಂದು ಹೇಳಿದೆ. ಇದು ಯಾವಾಗ ಮಂಜೂರಾಯಿತು; ಖರ್ಚು ಮಾಡಿ ಎಷ್ಟು ವರ್ಷವಾಯಿತು ?

Sri ALUR HANUMANTHAPPA.—This restoration work was sanctioned in 1954 but afterwards the Chief Engineer inspected the spot and found that the restoration was not feasible. He wanted to change the tank by alignment and construction of new tank. After that, estimates were prepared but there were some working and technical difficulties with regard to this work.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಒಂದು ನ್ಯೂನತೆಯನ್ನು ಕಂಡುಹಿಡಿದದ್ದು 46 ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ಮೊದಲೋ ಅಥವಾ ಖರ್ಚು ಮಾಡಿದ ಮೇಲೋ ?

ಶ್ರೀ ಆಲೂರು ಹನುಮಂತಪ್ಪ.—ಮೊದಲೇ ಕಂಡುಹಿಡಿದರು. ಕಂಡುಹಿಡಿದು ಕೆರೆಯನ್ನು restore ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ದೊಡ್ಡ ಹಳ್ಳವಿರುವುದರಿಂದ ಒಡೆದಿರುವ ಸ್ಥಳವನ್ನು ತುಂಬುವುದಕ್ಕೆ ಆಗುವುದಿಲ್ಲ.

They preferred the construction of a new tank. They called for tenders but the tenderers quoted abnormal rates. So they decided to carry on the work on a piece-work basis. But labour was difficult to secure and it could not be worked on a piece-work system. Materials had to be collected from long distances. Therefore the work prolonged. Now we have received the revised estimates from the Chief Engineer and we will take further action.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಹಣವನ್ನು ಖರ್ಚು ಮಾಡುವುದರಿಂದ ಸ್ಥಳದ ಜನಗಳಿಗೆ ಕೆರೆ ಖಾತ್ರಿಯಾಗಿ ಆಗುತ್ತದೆಂಬ ನಂಬಿಕೆ ಇದೆ. ಆದುದರಿಂದ ಈಗಲಾದರೂ ಹೊಸದಾಗಿ ಎಸ್ಟಿಮೇಟ್ ತಯಾರಿಸಿ ಅದನ್ನು ಮಂಜೂರ್ಮಾಡಿ ಕೆರೆಯನ್ನು ಕಟ್ಟಿಸಿಕೊಡುತ್ತೇವೆಂಬ ಭರವಸೆಯನ್ನು ಕೊಡುತ್ತೀರಾ ಸ್ವಾಮಿ ?

Sri ALUR HANUMANTHAPPA.—We are examining the whole thing. The revised estimates are before the Government. We are considering that.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಹಾಗೆ ತಾವು ಹೊಸದಾಗಿ ಮಂಜೂರು ಮಾಡಿ ಕಟ್ಟಿಸದೇ ಇದ್ದ ಪಕ್ಷದಲ್ಲಿ 46 ಸಾವಿರ ರೂಪಾಯಿ waste ಆಗುತ್ತದೆ. ಇದಕ್ಕೆ ಯಾರು ಜವಾಬ್ದಾರರು ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಖರ್ಚು ಮಾಡಿದ್ದನ್ನು ನಷ್ಟ ಮಾಡಿಕೊಳ್ಳಬೇಕೆಂಬುದು ಸರ್ಕಾರದ ಉದ್ದೇಶವಲ್ಲ. ಯಾವ ರೀತಿ ಮಾಡಬೇಕೆಂದು ನಾವು ಪರ್ಯಾಲೋಚನೆ ಮಾಡಿದ್ದೇವೆ. ಆದಷ್ಟು ಜಾಗ್ರತೆ ಅದನ್ನು ತೀವ್ರತೆಯಿಂದ ತೆಗೆದುಕೊಳ್ಳುತ್ತೇವೆ.

Sri S. RAJAGOPAL.—What is the revised estimate expenditure ?

Sri ALUR HANUMANTHAPPA.—Rs. 3,20,000.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಹೊಸದಾಗಿ ಬಂದಿರುವ ಎಸ್ಟಿಮೇಟಿನ ಅಂದಾಜು ಎಷ್ಟು ?

ಶ್ರೀ ಆಲೂರು ಹನುಮಂತಪ್ಪ.—3,20,000 ರೂಪಾಯಿಗಳಿಗೆ ಅಂದಾಜಾಗಿದೆ ಎಂದು ಆಗಲೇ ಹೇಳಿದೆ.

Proposals for the amendment of the Corporation Act

*Q.—377. Sri B. NANJAPPA (Cubbonpet).—

Will the Government be pleased to state :—

(a) whether the Corporation of the City of Bangalore have sent proposals for the amendment of the Corporation Act ;

(b) the stage at which the matter is pending at present ;

(c) when they intend to take necessary action in the matter ?

A.—Sri K. PUTTASWAMY (Minister for Municipal Administration).—

(a) Yes.

(b) and (c) Certain amendments have been approved and enacted as Mysore Act No. 32 of 1961. Other amendment proposed are under consideration.

The question of approving other amendments is likely to be finalised soon.

Sri B. NANJAPPA.—How long the amendments are pending before Government ?

Sri K. PUTTASWAMY.—These amendments are not pending now with the Government. After certain consideration, the Corporation has been informed about the tentative decisions Government have taken and the opinion of the Corporation is awaited.

Sri B. NANJAPPA.—Is it a fact that these amendments are now before Government ?

Sri K. PUTTASWAMY.—I said that these amendments were before Government. The proposals sent by the Corporation were considered by Government and the opinion of Government has been communicated to the Corporation and their reaction awaited.

ಶ್ರೀ ಕೆ. ದೇವಯ್ಯ.–ಕಾರ್ಪೊರೇಷನ್ನು ಆಕ್ಟ್‌ಗೆ 1954 ನೇ ಇಸವಿಯಲ್ಲೇ ಅಮೆಂಡ್‌ಮೆಂಟ್‌ಗಳನ್ನು ಕಳುಹಿಸಿರುವುದು ನಿಮ್ಮಲ್ಲೇ ಇದೆ. ಇದಕ್ಕೆ ಸಾಮರ್ಥ್ಯವಾದ ಯಾವ ರೀತಿಯ ಉತ್ತರಗಳನ್ನಾದರೂ ಕೊಟ್ಟಿದ್ದೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಹಿಂದೆ ಕೆಲವು ತಿದ್ದುಪಡಿಗಳು ಈ ಸಭೆಯಮುಂದೆ ಬಂದು ಪಾಸಾಗಿ ಅದು ಆಗಲೇ ಕಾನೂನಾಗಿದೆ. ಇನ್ನೂ ಕೆಲವು ತಿದ್ದುಪಡಿಗಳನ್ನು ಕಾರ್ಪೊರೇಷನ್ನಿನವರು ಸೂಚಿಸಿದ್ದಾರೆ. ಅವನ್ನೆಲ್ಲಾ ಪರಿಶೀಲನೆಮಾಡಿ ಅದನ್ನು ಈ ಸಭೆಯಮುಂದೆ ತರಬೇಕಾಗಿದೆ. ಸಭೆ ಒಪ್ಪಿದ ಮೇಲೆ ಕಾನೂನಾಗುತ್ತದೆ.

Sri K. S. SURYANARAYANA RAO.—In view of the fact that a large number of amendment are due to the Corporation Act, do the Government consider having a uniform legislation in this matter ?

Sri K. PUTTASWAMY.—At present there are two Acts governing the Corporation—one, the Bombay Corporation Act. It governs the administration of Hubli and Dharwar ? The other is, the Bangalore Corporation Act. Now Government are seriously considering to bring in a Bill before this House for a uniform legislation which will be made applicable to both the Corporations and also for Corporations that may hereafter come into existence.

ಶ್ರೀ ಬಿ. ನಂಜಪ್ಪ.—(*b*) ಗೆ ಉತ್ತರವಾಗಿ "other amendments proposed are under consideration" ಎಂದಿದೆ. ಹಾಗಾದರೆ ಇವು ಇನ್ನೂ ಸರಕಾರದಲ್ಲಿವೆಯೆ ?

ಶ್ರೀ ಕೆ. ಪುಟ್ಟಸ್ವಾಮಿ.—ಸರಕಾರ ಇದನ್ನು ಪರಿಶೀಲನೆ ಮಾಡಲೇಬೇಕು ಮತ್ತು ಬೇಕಾದರೆ ಪರಿಶೀಲನೆ ಮಾಡಿ ಈ ಸಭೆಯುಮುಂದೆ ಒಪ್ಪಿಗೆಗಾಗಿ ಇಡಬೇಕು.

ಶ್ರೀ ಕೆ. ದೇವಯ್ಯ.—ನಾವು ಕಾರ್ಪೊರೇಷನ್ನಿನ ಕಡೆಯಿಂದ ಕಳುಹಿಸಿದ ತಿದ್ದುಪಡಿಗಳನ್ನು ತಾವು ಇಲ್ಲಿ ಇನ್ನೂ ಪಾಸುಮಾಡದೆ ಇರುವುದರಿಂದ ಪ್ರತಿ ವರ್ಷವೂ ಅನೇಕ ಕೇಸುಗಳಲ್ಲಿ ಕೋರ್ಟಿನಲ್ಲಿ ತೀರ್ಮಾನವಾಗಿ ಕಾರ್ಪೊರೇಷನ್ನಿನವರಿಗೆ ಅನಾನುಕೂಲಗಳಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿವೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಕೆಲವು ತಿದ್ದುಪಡಿಗಳನ್ನು ಆಗಲೇ ಮಾಡಿ ಕಾರ್ಪೊರೇಷನ್ನಿಗೆ ಕಳುಹಿಸಿದೆ. ಇನ್ನೂ ಕೆಲವು ತಿದ್ದುಪಡಿಗಳು ಅವಶ್ಯಕವಾಗಿವೆ. ಅವನ್ನೆಲ್ಲಾ ಸರಕಾರ ಒಪ್ಪಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಅವು ಈ ಸಭೆಯುಮುಂದೆ ಬಂದಾಗ ಸರಕಾರ ಅದರ ಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

Sri K. S. SURYANARAYANA RAO.—When could we expect uniform legislation to come before this House ?

Sri K. PUTTASWAMY.—Government are now taking steps to have it drafted.

ಶ್ರೀ ಬಿ. ನಂಜಪ್ಪ.—ಅವಶ್ಯಕತೆ ಇರುವ ತಿದ್ದುಪಡಿಗಳನ್ನಾದರೂ ಬೇಗನೆ ಈ ಸಭೆಯುಮುಂದೆ ತರುವ ಭರವಸೆ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ರೀತಿ ಭರವಸೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಕೆಲವು ಮಸೂದೆಗಳನ್ನು ಈ ಸಭೆಯಲ್ಲಿ ಮಂಡಿಸಲು ಅವಕಾಶ ಸಿಕ್ಕದೇ ಇರುವುದರಿಂದ ಇದು ಸಾಧ್ಯವಾಗುತ್ತದೆಯೇ ಎನ್ನುವುದನ್ನೂ ನೋಡಬೇಕಾಗುತ್ತದೆ.

ಶ್ರೀ ಬಿ. ನಂಜಪ್ಪ.—ತಿದ್ದುಪಡಿಗಳು ಬಾರದೇ ಇರುವುರಿಂದ ಕಾರ್ಪೊರೇಷನ್ನಿನ ಕೆಲಸ ಕಾರ್ಯಗಳಿಗೆ ಅಡಚಣೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅಡಚಣೆಗಳಿರುವುದರಲ್ಲಿ ಅವಶ್ಯವಾದ ಕೆಲವು ತಿದ್ದುಪಡಿಗಳನ್ನು ಮಾಡಬೇಕು ಅದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಬಿ. ನಂಜಪ್ಪ.—ಇದೇ ಅಧಿವೇಶನದಲ್ಲೇ ಈ ಕಾನೂನಿಗೆ ಅವಶ್ಯಕವಾದ ತಿದ್ದುಪಡಿಗಳನ್ನಾದರೂ ತರಲು ಪ್ರಯತ್ನ ಪಡುತ್ತಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.— ದಷ್ಟು ಪ್ರಯತ್ನ ಮಾಡುತ್ತೇನೆ.

Number of Acres of Land Irrigated by the Marconahalli Reservoir

*Q.—480. Sri T. N. MADAPPA GOWDA (Nagamangala).—

Will the Government be pleased to state :—

(a) the total length of the right bank canal of the Marconahalli Reservoir that is flowing in Nagamangala Taluk, and the number of acres of land that is being irrigated for the present in that canal ;

(b) what is the designed irrigable area (acres) for this Canal ;

(c) in which taluk is the site of the Marconahalli Dam and the submerged area located ;

(d) the reason for not giving water to the stipulated number of acres in the right bank canal of the reservoir ;

(e) whether they will take steps at least now to supply water to the area which was fixed originally to get water when the reservoir was designed and built ?

A.—Sri ALUR HANUMANTHAPPA (Deputy Minister for Irrigation).—

(a) 5 miles ; 895 acres in all.

(b) 1,488 acres.

(c) The site of Marconahalli dam lies in Kunigal Taluk and the submerged area lies both in Kunigal and Nagamangala Taluks.

(d) Due to the shortage in supply of water to the Reservoir.

(e) This will be examined.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಐದು ಮೈಲಿಗಳಷ್ಟು ನಾಲಾ ತೆಗೆದು ನಿಗದಿಯಾಗಿರುವಷ್ಟು ನೀರನ್ನು ಕೊಡದೆ ಇರಲು ಏನು ಕಾರಣ ?

† ಶ್ರೀ ಆಲೂರು ಹನುಮಂತಪ್ಪ.—ನಾಲಾ ತೆಗೆದಿದ್ದರೂ ಅದಕ್ಕೆ ಪೂರ್ತಿಯಾಗಿ ನೀರು ಸಿಕ್ಕುವುದಿಲ್ಲ. ಅಲ್ಲಿಂದ ಈಗ ನಾಗಮಂಗಲ ತಾಲ್ಲೂಕಿಗೆ ಸೇರಿದ ಕೆಲವು ಭಾಗಗಳಿಗೆ ಸುಮಾರು 455 ಎಕರೆಯಷ್ಟು ಭೂಮಿಗೆ ನೀರು ಹೋಗುತ್ತಿದೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ನಾಲಾ ತೆಗೆಯಬೇಕೆಂದು ಮಾಡಿದಾಗ, ಎಷ್ಟುದೂರ ನೀರು ಕೊಡುತ್ತೆನ್ನುವುದನ್ನು ಮೊದಲೇ ತೀರ್ಮಾನ ಮಾಡಬೇಕಾಗಿರಲಿಲ್ಲವೇ ?

Sri ALUR HANUMANTHAPPA.—The entire reservoir has got the capacity of 8,890 units. But due to scarcity of rain and other things they have now in Nagamangala taluk and Kunigal Taluk, under the right bank channel about 895 acres are under irrigation and the supply of water to the right bank channel may be considered after the Mangalapura reservoir is taken up and completed.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ತಾವು ಉತ್ತರದಲ್ಲಿ ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ಈಗಾಗಲೇ ಕೆರೆ ಕಟ್ಟಿದಮೇಲೆ ಸುಮಾರು ಇಪ್ಪತ್ತು ವರ್ಷಗಳಿಂದಲೂ ಪರಿಶೀಲನೆ ಮಾಡಿ ಇನ್ನು ಹೆಚ್ಚಿನ ಅಚ್ಚುಕಟ್ಟಿಗೆ, ನೀರು ಕೊಡುವುದಕ್ಕಾಗುವುದಿಲ್ಲ ಎಂದರೆ ತಾವು ಎಷ್ಟು ಎಕರೆಗಳಿಗೆ ನೀರು ಕೊಡಬಹುದು ?

ಶ್ರೀ ಆಲೂರು ಹನುಮಂತಪ್ಪ.—1,488 ಎಕರೆಗಳಲ್ಲಿ ಸುಮಾರು 600 ಎಕರೆಗಳಷ್ಟು ಭೂಮಿಗೆ ನೀರು ಸಿಗುವುದಿಲ್ಲ ಎಂದು ವರದಿ ಬಂದಿದೆ. ಅದನ್ನು ಪರಿಶೀಲಿಸಬೇಕಾದರೆ, ಮಂಗಳ ರಿಸರ್ವಾಯರು ಆದಮೇಲೆ ಮಾಡಬೇಕು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ನಾಲಾ ತೆಗೆದಮೇಲೆ ಒಂದೊಂದು ವರ್ಷ ಒಂದೊಂದು ತರಹ ಕೆಪಾಸಿಟಿ ಬದಲಾವಣೆಯಾದರೆ ಹೇಗೆ ?

ಶ್ರೀ ಆಲೂರು ಹನುಮಂತಪ್ಪ.—600 ಎಕರೆಗಳಷ್ಟು ಜಮೀನಿಗೆ ನೀರು ಸಿಗುವುದಿಲ್ಲ ಎಂದು ವರದಿ ಇದೆ. ಅದಕ್ಕಾಗಿ ಮಂಗಳ ಯೋಜನೆಯಾದಮೇಲೆ ಇದನ್ನು ಪರಿಶೀಲಿಸಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ಮಳೆಯು ಸರಾಸರಿ ಇಷ್ಟು ಬರುತ್ತದೆ ಎನ್ನುವ ಲೆಕ್ಕಗಳನ್ನು ಇಟ್ಟುಕೊಂಡು. ನಾಲಾ ತೆಗೆಯುವ ಕೆಲಸವನ್ನು ನಿರ್ಧಾರ ಮಾಡುತ್ತೀರಾ ಹೇಗೆ ?

ಶ್ರೀ ಆಲೂರು ಹನುಮಂತಪ್ಪ.—ಮಾರ್ಕೋನಹಳ್ಳಿ ಜಲಾಶಯ ಮೊದಲು ಮಂಜೂರಾದದ್ದು 1937 ರಲ್ಲಿ. 1939 ರಲ್ಲಿ ಅದರ ನಾಲಾ ತೆಗೆದದ್ದು. 1940 ರಲ್ಲಿ ಬಿಸನಾಲೆ, ತೊರೆಹಳ್ಳಿ, ದುಡುಗನಹಳ್ಳಿ, ನಾಗಮಂಗಲಕ್ಕೆ ಸೇರಿದ ಗ್ರಾಮಗಳು ಇಲ್ಲಿರುವ ರೈತರಿಂದ ಅರ್ಜಿ ಬಂದುದರಿಂದ ಅದರಂತೆ ಎಸ್ಟಿಮೇಟು ತಯಾರಿಸಿ, 455 ಎಕರೆಯಷ್ಟಕ್ಕೆ ಮಾತ್ರ ನೀರು ಸಿಗುತ್ತದೆ, 600 ಎಕರೆಗಳಿಗೆ ಸಿಗುವುದಿಲ್ಲ. ಮಂಗಳ ಪ್ರಾಜೆಕ್ಟು ಆದಮೇಲೆ ಇದಕ್ಕೆ ನೀರು ಬರುವಂತಹ ಸೂಚನೆ ಇದೆ ಎಂದು ಮೊದಲೇ ಹೇಳಿದ್ದಾರೆ.

1-30 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಮಳೆ ಹೆಚ್ಚಿಗೆ ಬಂದರೆ ಹೆಚ್ಚು ನೀರು ಕೊಡುತ್ತೇವೆಂದು ಹೇಳಿದಿರಿ. ಮಳೆ ಹೆಚ್ಚಿಗೆ ಬಿದ್ದಾಗ ಈ ಐದು ಮೈಲಿ ವಿಸ್ತೀರ್ಣವುಳ್ಳ ಜಮೀನಿಗೆ ಈ ನಾಲೆಯಿಂದ ಎಷ್ಟು ಸಾರಿ ನೀರು ಕೊಟ್ಟಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಮಳೆ ಹೆಚ್ಚಿಗೆ ಬಿದ್ದಾಗ ಎನ್ನುವುದೇ ಅಲ್ಲ. ಜೂನ್ 10ನೇ ತಾರೀಖು ಈ ರಿಜರ್‌ವಾಯರ್‌ನಿಂದ ನೀರು ಬಿಡುತ್ತೇವೆ. ಸೆಪ್ಟೆಂಬರ್‌ವರೆಗೂ ಮಳೆಗಾಲವಿರುವುದರಿಂದ ಈ ಜಲಾಶಯಕ್ಕೆ ನೀರು ಹೆಚ್ಚಿಗೆ ಬರುತ್ತದೆ. Tail end of the area ಎಂದರೆ ಸುಮಾರು 11,500 ಎಕರೆ ಜಮೀನಿಗೆ ನೀರು ಸಿಗುತ್ತದೆಂದು ನಾನು ಹೇಳಿದ್ದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಡದಂಡೆ ನಾಲೆಯಿಂದ ಸುಮಾರು 12½ ಸಾವಿರ ಎಕರೆ ಅಚ್ಚುಕಟ್ಟಾಗಿದೆ ಎಂದು ಹೇಳುವಾಗ ಪ್ರತಿವರ್ಷವೂ ಅಲ್ಲಿಯ ರೈತರಿಗೆ ಸಾಕಷ್ಟು ನೀರು ಸಿಗದೆ ತೊಂದರೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಹೌದು. ಅದಕ್ಕೆ ಸರ್ಕಾರದಿಂದ ನೇಮಿತವಾದ ಒಂದು ಕಮಿಟಿ ಇದೆ. ಆ ಕಮಿಟಿಯವರು ಅಲ್ಲಿನವರಿಗೆ ಸೆಮಿ-ಡ್ರೈ-ಕ್ರಾಪ್ ಬೆಳೆಯಬೇಕೆಂದು ಸೂಚನೆ ಕೊಟ್ಟಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—Tail-end ಜಮೀನುಗಳಿಗೆ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಯಥೇಚ್ಛವಾಗಿ ನೀರನ್ನು ಕೊಡುವುದಕ್ಕೆ ಸಾಧ್ಯವೆಂದು ಹೇಳುತ್ತೀರಿ. ಹಾಗಾದರೆ ಈ ವರ್ಷವಾದರೂ ನೀರು ಸರಬರಾಜು ಮಾಡಲು ತಕ್ಕ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—600 ಎಕರೆಗೆ ನೀರು ಈಗ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಮಂಗಳ ಪ್ರಾಜೆಕ್ಟ್ ಆದ ಮೇಲೆ 600 ಎಕರೆಗೆ ನೀರು ಕೊಡಲಿಕ್ಕೆ ಸಾಧ್ಯವೆಂದು ಹೇಳಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಮಿಟಿಯವರು ಸೆಮಿ-ಡ್ರೈ-ಕ್ರಾಪ್ಸ್ ಬೆಳೆಯಬೇಕೆಂದು ಸೂಚನೆ ಕೊಟ್ಟಿದ್ದಾರೆಂದು ಹೇಳಿದಿರಿ. ಒಂದು ವೇಳೆ ಆಗ ನೀರು ಸಾಕಾಗುತ್ತದೆಂದು ತಮಗೆ ಅನುಭವ ಬಂದಮೇಲೆ ಸಾಕಷ್ಟು ನೀರನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಕರ್ನಾಟಕ ರಾಜ್ಯ ...
(ಇಂಗ್ಲಿಷ ಗ್ರಂಥಾಲಯ) (B) 4794
ಪ್ರಾಪ್ತಿ ಕ್ರಮಾಂಕ Accession No........
ದಿನಾಂಕ Date..........

ಶ್ರೀ ಆಲೂರು ಹನುಮಂತಪ್ಪ.—ಚಾನಲ್‌ನಲ್ಲಿ ನೀರು ಹೋಗುವುದೆಲ್ಲಾ ಎಡದಂಡೆಗೇ ಹೋಗುತ್ತಿದೆ. ಬಲದಂಡೆ ಚಾನಲ್ಲಿನಲ್ಲಿ ನೀರು ಎಷ್ಟಿದೆ, ಎಷ್ಟು ಹರಿಯುತ್ತದೆ ಎಂಬುದನ್ನು ನೋಡಬೇಕು.

ಶ್ರೀ ವಿ. ಎಂ. ದೇವ್.—ಹೋದ 10 ವರ್ಷಗಳಲ್ಲಿ ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ಯೂನಿಟ್ಟುಗಳ ನೀರು ಕೆರೆಗಳಲ್ಲಿ ತುಂಬಿತ್ತು ಎಂಬ ಬಗ್ಗೆ ತಪ್ಸೀಲು ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಒಂದೆರಡು ವರ್ಷಗಳ ವಿನಹ ಬಾಕಿ ವರ್ಷಗಳಲ್ಲಿ ಕೆರೆಗಳಲ್ಲಿ ನೀರಿಲ್ಲದೆ ತೊಂದರೆಯಾಗಲಿಲ್ಲ. ಸೆಮಿ-ಡ್ರೈ-ಕ್ರಾಪ್ಸ್ ಬೆಳೆಯುವುದಕ್ಕೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸೆಮಿ-ಡ್ರೈ-ಕ್ರಾಪ್ಸನ್ನು ಬೆಳೆಯುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಇದಕ್ಕೆ ಬೇಕಾದ ಸ್ಕೋಪು ನಾಗಮಂಗಲ ತಾಲ್ಲೂಕಿನಲ್ಲಿದೆಯೆಂದು ಹೇಳಿದಿರಿ. ಅದನ್ನೇನೋ ಒಪ್ಪುತ್ತೇನೆ. ಆ ಪ್ರಕಾರ catchment area ಮಾಡಲಾಯಿತು ಎಂದು ಹೇಳಿದ್ದೀರಿ. ನಾಳೆ ಈ ತಾಲ್ಲೂಕಿನವರಿಗೆ ಕಟ್ಟುನಿಟ್ಟಾಗಿ ಇಂತಹ ಬೆಳೆಯನ್ನೇ ಬೆಳೆಯಬೇಕೆಂದು ಹೇಳುತ್ತೀರಿ. ಆದರೆ ಇದೇ ರೀತಿ ಹಿಂದೆ ವಾಗ್ದಾನ ಮಾಡಿದ್ದಂತಹ ಕುಣಿಗಲ್‌ಗೆ ಮೊದಲು ಪ್ರೈಯಾರಿಟಿ ಕೊಡಬೇಡವೇ ?

ಶ್ರೀ ಆಲೂರು ಹನುಮಂತಪ್ಪ.—ನಾಗಮಂಗಲ ತಾಲ್ಲೂಕಿನಲ್ಲಿ ಟ್ಯಾಂಕ್‌ಸೈಟ್ ಕುಣಿಗಲ್ ತಾಲ್ಲೂಕಿನಲ್ಲಿ ಕ್ಯಾಚ್‌ಮೆಂಟ್ ಏರಿಯಾ—ಹೀಗೆ ಎರಡರಲ್ಲೂ ಬಂದಿದೆ. ಕೆರೆ ಕಟ್ಟಿದರೆ ಸಾಮಾನ್ಯವಾಗಿ ನೀರು ಕೊಡುವುದಕ್ಕೆ ರೈತರ ದೃಷ್ಟಿಯಿಂದ ಅನುಕೂಲವಾಗುತ್ತದೆ. ಆದರೆ ಇಲ್ಲಿ ಬಲದಂಡೆ ಚಾನಲ್ಲಿನಲ್ಲಿ ಸಾಕಷ್ಟು ನೀರು ಹೋಗದೇ ಇರುವುದರ ದೆಸೆಯಿಂದ ಮಂಗಳ ಪ್ರಾಜೆಕ್ಟ್ ಆದಮೇಲೆ 600 ಎಕರೆ ಜಮೀನಿಗೆ ಮಾತ್ರ ನೀರು ಕೊಡುವುದಕ್ಕೆ ಸಾಧ್ಯವೆಂದು ಹೇಳಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಂತ್ರಿಗಳು ಟೂರ್ ಹೋದಾಗ ಆ ಸ್ಥಳವನ್ನಾದರೂ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅದು ದೊಡ್ಡ ಕೆರೆ. ನೋಡುತ್ತೇನೆ.

ಶ್ರೀ ಟಿ. ಮಾದಯ್ಯಗೌಡ.—ಈ ಜಲಾಶಯದ ಬಲದಂಡೆಯಲ್ಲಿ ಐದು ಮೈಲುಗಳ ನಾಲೆಯನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಇನ್ನೂ ಈಗ ಮಂಗಳ ಪ್ರಾಜೆಕ್ಟು ಕಟ್ಟಬೇಕೆಂಬ ಯೋಜನೆಯೊಂದಿದೆ ಎಂದು ಹೇಳುತ್ತೀರಿ. ಅಂದಮೇಲೆ ಈಗ ಐದು ಮೈಲಿಗಳ ನಾಲೆಯನ್ನು ಮಾಡುವಾಗ ವೇಸ್ಟು ಎಷ್ಟಾಗಿದೆ, ಅದನ್ನು ಯಾರು ಮಾಡಿದ್ದಾರೆಂಬುದನ್ನು ವಿಚಾರಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈ ಮಂಗಳ ಪ್ರಾಜೆಕ್ಟು ಬಹಳ ದಿವಸಗಳಿಂದ ಆಗಬೇಕೆಂದು ಸರ್ಕಾರದ ಮುಂದಿದೆ. ಅದಕ್ಕೆ ಹಣ ಮಂಜೂರಾಗಿದೆ ; ಸ್ವಲ್ಪ ಹಣ ಖರ್ಚೂ ಆಗಿದೆ.

ಶ್ರೀ ಟಿ. ಡಿ ದೇವೇಂದ್ರಪ್ಪ.—ಜಮೀನಿಗೆ ನೀರು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದಿರಿ. ಹಾಗಾದರೆ ಜಮೀನಿನ ಮೇಲೂ ಕೂಡ ವಾಟರ್‌ರೇಟ್ ಕಾಂಟ್ರಿಬ್ಯೂಷನನ್ನು ವಸೂಲು ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಸಾಮಾನ್ಯವಾಗಿ ನೀರು ಕೊಡದಿದ್ದರೆ ವಾಟರ್ ರೇಟನ್ನು ಕೇಳಿದರೂ ರೈತರು ನಮಗೆ ಕೊಡುವುದಿಲ್ಲ. ಆದರೆ ಮಂಗಳ ಪ್ರಾಜೆಕ್ಟು ಕಟ್ಟಿದಮೇಲೆ ಆ ಕೆರೆಗೆ ಬರುತ್ತದೆ.

ಶ್ರೀ ಅಂದಾನಯ್ಯ.—ಈ ಮಂಗಳ ಪ್ರಾಜೆಕ್ಟ್ ಯಾವಾಗ ಮುಗಿಯುತ್ತದೆ.

ಶ್ರೀ ಆಲೂರು ಹನುಮಂತಪ್ಪ.—ಈ ವರ್ಷದ ಬಡ್ಜೆಟ್ಟಿನಲ್ಲಿ 1 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇನ್ನೂ 6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ.

ಶ್ರೀ ಟಿ. ಎಕ್. ಮಾದಪ್ಪಗೌಡ.—ಇಷ್ಟೆಲ್ಲಾ ತಕರಾರು ಬಂದುದು ಈ ಒಂದು ಕಮಿಟಿ ರಚನೆಯಾದ ಮೇಲಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಸಾಮಾನ್ಯವಾಗಿ ಇಂತಹ ದೊಡ್ಡ ಕೆರೆಗಳಿಗೆ ಕಮಿಟಿ ಮಾಡಿದರೆ ಅಲ್ಲಿನ ಕೆಲಸ ಎಫೆಕ್ಟಿವ್ ಆಗಿ ನಡೆಯುತ್ತದೆಂಬುದು ಸರ್ಕಾರದ ಉದ್ದೇಶ. ಈಗ ಸುಮಾರು 11,500 ಎಕರೆ ಜಮೀನಿಗೆ ನೀರಾವರಿ ಸೌಕರ್ಯ ಕೊಡತಕ್ಕ ಒಂದು ದೊಡ್ಡ ರಿಜರ್ವಾಯರ್‌ಗೆ ಒಂದು ಕಮಿಟಿ ಮಾಡಿರುವುದರಿಂದ ಅಲ್ಲಿನ ಕೆಲಸ ಎಫೆಕ್ಟೀವ್ ಆಗಿ ಎಫಿಷಿಯಂಟಾಗಿ ನಡೆಯುತ್ತಿದೆಯೆಂದು ಸರ್ಕಾರಕ್ಕೆ ವರದಿ ಬಂದಿದೆ.

———

V-31 N63
N63·20-23

Economy measures proposed and given effect to in the present Emergency Conditions.

*Q.—482. Sri G. A. THIMMAPPA GOWDA (Arkalgud).—

Will the Government be pleased to state :—

(*a*) the economy measures proposed and given effect to in the present Emergency conditions ;

(*b*) the extent of economy effected by those measures in various Departments of the State ?

A.—Sri B. D. JATTI (Minister for Finance).—

(*a*) Instructions regarding the special austerity and economy measures to be observed with immediate effect in all Government Offices in the State, have been issued in G. O. No. GAD 129 OOM 62, dated 21st November 1962 and G.O. No. FD 189 BUD 62, dated 3rd December 1962 (opies placed on the Table of the House); placed in the Mysore Legislature Library *vide* Nos. 6/L.A. Bud. 68.

(*b*) It is too early to assess the extent of economy effected.

Sri G. A THIMMAPPA GOWDA.—Is Government in a position now to say regarding the approximate amount that may be saved by effecting these economy measures ?

Sri B. D. JATTI.—Sir, I hope to save 1½ Crores of Rupees.

Sri G. V. GOWDA.—May I know whether any periodical report is being called for from the Heads of Departments to know that these instructions with regard to the special austerity measures are being observed ?

Sri B. D. JATTI.—Government will get necessary information from the Heads of Departments and Government will know what action has been taken.

Sri G. V. GOWDA.—May I know for what period the Government hopes to save 1½ Crores of Rupees ?

Sri B. D. JATTI.—For one year.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಮಿತವ್ಯಯವನ್ನು ಸರ್ಕಾರೀ ಆಫೀಸುಗಳಲ್ಲಿ ಮಾಡಿದ್ದೇವೆಂದು ಹೇಳಿದ್ದೀರಿ. ಯಾವ ನಮೂನೆಯಲ್ಲಿ ಅದನ್ನು ಮಾಡಿದ್ದೀರಿ ? ಅಥವಾ ಈಗಿರತಕ್ಕ ಅಧಿಕಾರಿಗಳನ್ನು ನಿವೃತ್ತಿಗೊಳಿಸಿರುವ ರೀತಿಯಲ್ಲಿ ಮಿತವ್ಯಯ ಮಾಡಿದ್ದೀರಾ ?

Sri B. D. JATTI.—In addition to the two Government Orders which have been mentioned in the reply, I can give additional information to the Hon'ble Member that a 10 per cent cut has been made in the provision in the Budget for 1963-64 under T.A., Contingency and other items. Similarly, action has been taken to treat 10 per cent of sanctioned staff in all Departments as surplus and absorb them in future vacancies or posts to be created for Plan Schemes.

Sri C. J. MUCKANNAPPA.—Sir, may I know what is the economy measure implemented in the General Administration Department and the State Legislature Secretariat ?

Mr. SPEAKER.—With regard to the Legislature Secretariat, you can ask me and not the Minister.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮ್ಮ ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ವಿಷಯ ಬೇಡವೆಂದು ಹೇಳುತ್ತೀರಾ ? ಹಾಗಾದರೆ ಅದು ಬೇಡ, ಬಿಡಿ ಸ್ವಾಮಿ, ಜಿ. ಎ. ಡಿ. ಯಿಂದ ಮಾತ್ರ ಎಷ್ಟು ಹಣ ಉಳಿತಾಯವಾಗುತ್ತದೆ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಈ ಕಡೆ ಲಕ್ಷ್ಯವಿಡಲಿಲ್ಲವೆಂದು ಕಾಣುತ್ತದೆ. ಒಟ್ಟು $1\frac{1}{2}$ ಕೋಟಿ ರೂಪಾಯಿಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ಒಂದೂವರೆ ಕೋಟಿ ರೂಪಾಯಿಗಳೇ !

Sri B. D. JATTI.—No Sir, for the whole State.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಕೇಳಿರುವುದು ಜಿ.ಎ.ಡಿ. ವಿಷಯ, ಇದುವರೆಗೆ ಅಲ್ಲಿ ಎಷ್ಟು ಎಕಾನಮಿಯನ್ನು ಇಂಪ್ಲಿಮೆಂಟ್ ಮಾಡಿದ್ದೀರಿ, ಎಷ್ಟು ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡಿದ್ದೀರಿ ?

Sri B. D. JATTI.—Sir, the cut is applicable to all the Departments and in all the Departments, General Administration Department is included.

Sri C. J. MUCKANNAPPA.—I want to know what is the amount saved particularly from the General Administration Department ?

Sri B. D. JATTI.—Sir, it is impossible for anybody to calculate separately on the spot.

ಶ್ರೀ ಇ. ನಾರಾಯಣಗೌಡ.—ಕೆಲವು ಆಫೀಸುಗಳಲ್ಲಿ ನಿವೃತ್ತರಾದ ನೌಕರರನ್ನು ಪುನಃ ನೇಮಿಸಬಾರದು ಎಂದು ಸರ್ಕಾರೀ ಆಜ್ಞೆಗಳಲ್ಲಿ ಆದೇಶವನ್ನು ಕೊಟ್ಟಿದ್ದಾರೆ. ಆದರೆ ಇನ್ನೊಂದು ಕಡೆ ಡೆಪ್ಯೂಟಿ ತಹಸೀಲ್‌ದಾರ್, ಅಡಿಷನಲ್ ಜಿಲ್ಲಾಧಿಕಾರಿಗಳು, ಅಡಿಷನಲ್ ತಹಸೀಲ್‌ದಾರರನ್ನು ಹೆಚ್ಚು ಮಾಡುತ್ತಿದ್ದಾರೆ. ಇದರ ಅರ್ಥವೇನು ?

Sri B. D. JATTI.—Both are correct. The general policy of the Government is not to give extension and not to re-employ, but whenever it is necessary in some offices, judging on the work-load, we will appoint.

Sri S. SIVAPPA.—After the introduction of 10 per cent cut in the staff of various Departments, may I know the number that will be thrown out of employment ?

Sri B. D. JATTI.—The policy of the Government is not to throw out any of the Government officers or officials. Vacancies will not be filled in.

Sri D. M. SIDDAIAH.—You were pleased to say that on account of introduction of economy measures in G. A. D. and also Finance Department, Rs. $1\frac{1}{2}$ crores is saved. What about other Departments ?

Sri B. D. JATTI.—The total saving is from all the Departments.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮಿತವ್ಯಯ ಮಾಡುವುದರಲ್ಲಿ ಯಾವ ಇಲಾಖೆಯಲ್ಲಿ ಹೆಚ್ಚು ಉಳಿತಾಯವಾಗಿದೆ ?

ಶ್ರೀ ಬಿ. ಡಿ. ಜತ್ತಿ.—ಅದನ್ನು ಹೇಳುವುದು ಕಷ್ಟ. ಕೆಲವು ಮಟ್ಟಿಗೆ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಉಳಿತಾಯ ಹೆಚ್ಚಾಗಬಹುದು.

Sri G. V. GOWDA.—You were pleased to say that 10 per cent of the existing staff will be treated as surplus and they have to be posted to vacancies that are usually created or for plan postings. May I know in how many cases this surplus 10 per cent officers have been posted ?

Sri B. D. JATTI.—Whenever new vacancies arise, instead of appointing new persons, these persons will be sent there and they will be appointed.

Sri G. V. GOWDA.—How many such instances are there?

Sri B. D. JATTI.—These are details and they cannot be collected in a day or two. If necessary they will be collected and supplied.

Sri J. P. SARWESH.—There are Departments in which Officers have no work at all. For example, District Social Welfare Officers. Will the Government consider the question of abolishing such Departments which have no work?

Sri B. D. JATTI.—That may be the opinion of the Hon'ble Member. But from that he should not presume that it is the opinion of the Members and the Hon'ble House.

Sri K. S. SURYANARAYANA RAO.—Are these appointments of Special Deputy Commissioners made subsequent to the economy drive or prior to it?

Sri B. D. JATTI.—Prior to it.

ಶ್ರೀ ಎಸ್. ಎಂ. ಗುರ್ರಡ್ಡಿ.—ಕನ್ನಡ ಪ್ರೈಮರಿ ಶಾಲೆಯ ಶಿಕ್ಷಣಕ್ಕೆ 10 ಪರ್ಸೆಂಟ್ ಕಟ್ ಮಾಡಿದ್ದಾರೆಂದು ಕೇಳಿದ್ದೇನೆ. ಅದರ ಪರಿಣಾಮ ಕೆಡುಕು ಆಗುವುದಿಲ್ಲವೇ?

Sri B. D. JATTI.—Education Department is not covered by this Order.

ಶ್ರೀ ಟಿ. ಮಾದಯ್ಯಗೌಡ.—ತುರ್ತು ಪರಿಸ್ಥಿತಿಯಲ್ಲಿ ವ್ಯವಸಾಯ ಇಲಾಖೆಗೆ ಮತ್ತು ಮೈನರ್ ಇರಿಗೇಷನ್ನಿಗೆ ಕಟ್‌ಮಾಡಿ ಸೇವಿಂಗ್ಸ್ ತೋರಿಸುವುದು ಯುಕ್ತವಲ್ಲ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಡಿ. ಜತ್ತಿ.—ಎಲ್ಲಿ ಮಿತವ್ಯಯ ಮಾಡುವುದು ಅನಾವಶ್ಯಕವೋ ಅಲ್ಲಿ ಮಾಡುವುದಿಲ್ಲ.

Sri S. SIVAPPA.—After economy measures have been introduced how many new posts have been created?

Sri B. D. JATTI.—Unless development of economic activities damand it, it is not necessary to introduce any new posts.

ಶ್ರೀ ಎಸ್. ಗೋಪಾಲಗೌಡ.—ಮಂತ್ರಿ ಮಂಡಲಕ್ಕೆ ಸಂಬಂಧಪಟ್ಟ ಹಾಗೆ ಏನೇನು ಉಳಿತಾಯ ಕ್ರಮಗಳನ್ನು ಕೈಗೊಂಡಿದ್ದೀರಿ, ಮಂತ್ರಿ ಮಂಡಲದ ಸಂಖ್ಯೆಯನ್ನು ಕಡಿಮೆ ಮಾಡುವ ಯೋಚನೆ ಇದೆಯೇ?

Sri B. D. JATTI.—One question does not arise here and that is the number of the Ministers. That is not a matter for eliciting information.

Sri C. J. MUKKANNAPPA.—We are not bothered about your size.

Sri B. D. JATTI.—Even if the Hon'ble Member is bothered, he cannot do anything. I am sure about it. Regarding saving in expenses in the Ministers Establishment, I have already explained while replying to the Budget that T. A. and Contingencies and other items have been reduced and we have been saving some money.

ಶ್ರೀ ಎನ್. ನಂಜೇಗೌಡ.—ವಿದ್ಯಾಭ್ಯಾಸ ಇಲಾಖೆಯಲ್ಲಿ ಅಸಿಸ್ಟೆಂಟ್ ಡಿ. ಇ. ಓ. ಎಂದು ನೇಮಕ ಮಾಡಿದ್ದಾರೆ. ಆ ಸಿಬ್ಬಂದಿ ಅನಾವಶ್ಯಕವೆಂದು ಕಾಣುತ್ತದೆ. ಅದನ್ನು ವಜಾ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

Sri B. D. JATTI.—The report is not before the Government. If that is the opinion of the Department, we will consider.

Sri G. V. GOWDA.—It is said that the appointment of additional Deputy Commissioners was contemplated or given effect to prior to this Order. In view of this Order will the Government stop appointing additional Deputy Commissioners?

Sri B. D. JATTI.—It is not a continuing process. Additional work was there in some of the Districts. In order to collect arrears and do additional work, temporary posts have been created for a period of one year and the Government will reconsider it after the period is over.

Sri K. DEVIAH.—Primary and Middle schools are run in two shifts and the teachers are getting full pay for doing half a day's work. They are paying Rs. 15,000 per year for them. Whereas at a cost of about Rs. 1,500 per year, you can have additional accommodation for these schools. So, will the Government consider the question of saving money by abolishing shift system and provide additional accommodation and get full work from the teachers ?

Sri B. D. JATTI.—Teachers who are working know how many hours they have to work. If they are not working according to schedule, they will not be kept there. Again shift system is introduced because it is difficult for Government to spare money for additional buildings. In order to teach more students we are running it. There is no question of economy as the Hon'ble Member thinks.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಈಗ ಮೈಸೂರು ಸಂಸ್ಥಾನದಲ್ಲಿ ಸುಮಾರು 30 ಕಡೆಗಳಲ್ಲಿ ಬೆಟರ್‌ಮೆಂಟ್‌ಲೆವ್ಹಿ ಸಬ್‌ಡಿವಿಜನ್ ಆಫೀಸರುಗಳು ಇದ್ದಾರೆ. ಇವರಿಗೆ ಒಂದು ವರ್ಷಕ್ಕೆ ಸುಮಾರು 50 ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಇವರಿಗೆ ಯಾವ ಕೆಲಸವೂ ಇಲ್ಲ. ಇವರನ್ನು ಈಗ ಸುಮಾರು ಎರಡು ವರ್ಷಗಳಿಂದಲೂ ನೇಮಕ ಮಾಡಿಕೊಂಡು ಮುಂದುವರಿಸಿಕೊಂಡು ಬಂದಿದ್ದಾರೆ. ಇದನ್ನು ಏನಾದರೂ ಏಕಾನಮಿ ಮೆಷರ್ಸ್‌ನಲ್ಲಿ ಸೇರಿಸಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳಿದ ಉದಾಹರಣೆ ನಮಗೆ ಕಂಡು ಬಂದಿಲ್ಲ. ಅದನ್ನು ಪರಿಶೀಲನೆ ಮಾಡಿ ಉಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri H. R. KESHAVA MURTHY.—In a developing economy, if 10 per cent cut is made in the establishment will it not hamper progress of the country by hampering daily routine work ?

Sri B. D. JATTI.—The Government will take all precautionary measures not to allow hampering of any progress.

Sri S. SIVAPPA.—Has it come to the notice of Government that after introduction of these economy measures, they have increased the number of members in the Public Service Commission ?

Sri B. D. JATTI.—That will not come under the economy measures.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಬಿಜಾಪುರದೊಳಗೆ ಸೆಟ್ಲ್‌ಮೆಂಟ್ ಜೈಲಿನಲ್ಲಿ 50 ಎಕರೆ ಜಮೀನು ಇದೆ. ಅಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿ ಖೈದಿಗಳಿರುತ್ತಾರೆ. ಅದಕ್ಕೆ ಸುಮಾರು 50 ಲಕ್ಷ ರೂಪಾಯಿಗಳು ಖರ್ಚಾಗುತ್ತಾ ಇದೆ. ಆದ್ದರಿಂದ ಆ ಜೈಲು ಬೇಡ ಎಂದು ಹೇಳಿದ್ದೇವೆ. ಅದರ ದೆಶೆಯಿಂದ ಏನು ಮಾಡಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಅಲ್ಲಿಗೆ ಎರಡು ಕಡೆಗಳಿಂದ ಜನ ಬರುತ್ತಿದ್ದಾರೆ. ಅದರ ಬಗ್ಗೆ ಮಹಾರಾಷ್ಟ್ರದವರು ಒಪ್ಪಿಕೊಂಡಿದ್ದಾರೆ. ಆದರೆ ಗುಜರಾತಿನವರು ಅದುಬೇಕು ಎಂದು ಹೇಳಿದ್ದಾರೆ. ಅದನ್ನು ಯೋಚನೆ ಮಾಡುತ್ತೇವೆ.

The Functions of the Mysore State Coir Advisory Board.

***Q.**—506. **Sri B. BHASKAR SETTY** (Kaup).—

Will the Government be pleased to state:—

(a) the functions of the Mysore State Coir Advisory Board;

(SRI B. BHASKAR SETTY)

(b) who are its present members ;

(c) the amount allocated to this Board since its constitution (yearwise figures may be given) ;

(d) the total amount spent by way of T. A. and D. A. and honorarium to the Chairman, Members and also salary and establishment expenses of the staff of the Board (yearwise figures may be given);

(e) the number of Coir Co-operative Societies that are functioning at present in South Kanara District ;

(f) the amount of loans and subsidies given to each of these Societies ?

A.—Sri K. MALLAPPA (Minister for Industries and Commerce).—

(a) 1. To advise Government generally on coir industry and in particular to consider ways and means of promoting the growth of this industry by suggesting ways for meeting their financial needs and to make efforts to start more and more coir industries by creating a favourable atmosphere and organising Co-operative Societies for this industry in the State:

2. To advise Government on specific problems relating to the industries which might be placed before the Board by Government from time to time.

3. To indicate the availability of raw materials and the technical requirements of such units.

4. To advise Government about the general policy regarding the nature and amount of Government assistance necessary in the case of units to be set up under the public sector.

5. To review at such periodical intervals as may be determined from time to time the working of the units so far started and to make suggestions for their expansion or development.

6. To advise the Government in organising production to meet the requirements of Government departments, industrial establishments and for export.

(b)— *Chairman*

1. The Deputy Minister for Sericulture.

Non-Official Members

2. Sri R. S. Hegde, B. A., LL. B., Honnavar, North Kanara District.
3. A. C. Chandra Gowda, Cocoanut Planter and President, Taluk Development Board, Kadur
4. Sri V. M. Deo, M. L. A., Gubbi
5. Sri K. Rangappa, Landlord, Narainagowdanahalli, Holalkeer.
6. Sri T. Madiah Gowda, M. L. A., Ramanagaram
7. Sri T. Ramesh Pai, Udipi, South Kanara

Official Members

8. The Joint Director, S. I., Bangalore
9. The Deputy Director in-charge of Coir (Sri K. Vijayam), Secretary.

(*c*)—

Year	Amount
	Rs. nP.
1959-60	6,089-98
1960-61	23,400-00
1961-62	20,000-00
1962-63	20,000-00

(*d*)—

Year.	Conveyance Allowance and House Rent to the Chairman.	Pay and D. A. to Establishment.	T. A. to the Chairman, members and staff.	Contingency.	Total.
	Rs. nP.	Rs. nP.	Rs. nP.	Rs. nP.	Rs. nP
1959–60	1,500–00	196–94	3,130–04	1,263–00	6,089–98
1960–61	3,600–00	1,514–33	5,305–48	1,871–92	12,291–73
1961–62	3,600–00	2,454–67	4,653–14	2,981–12	13,688–93
1962–63 (to end of November 1962)	2,700–00	2,170–84	675–91	441–37	5,989–12
Total ...	11,400–00	6,336–78	13,764–57	6,557–41	38,058–76

(*e*) Ten (10).

(SRI K. MALLAPPA)

(*f*)—

	Name of the Co-operative Society	Financial assistance given: Working Capital Loan.	Share Capital Loan.	Grant	Total
	1	2	3	4	5
	1957-58	Rs.	Rs.	Rs.	Rs.
1	Udipi Coir Workers Co-operative Production and Sales Society. Malpe, South Kanara District.	50,000	Nil	10,800	60,800
2	Ullal Coir Workers Production and Sales Society, Ullal.	20,000	Nil	8,400	28,400
	1959-60.				
3	Mulki Coir Works Cottage Industrial Co-operative Society.	12,200	1,000	7,200	20,400
4	Gangoli Coir Workers Co-operative Cottage Industrial Society Ltd. Coondapur.	17,700	1,000	7,200	25,900
	1960-61.				
5	Brahmavar Huri Hagga Kushala Kaigarika Sahakari Sanga Ltd. Brahmavar.	12,500	—	6,300	18,800
6	Kalyanpur Huri Hagga Kaigarika Kelasagarara Sangh, Ltd., Kalyanpur.	12,500	1,000	6,300	19,800
7	Kaup Huri Hagga Thayarikara Sahakari Gudi Kaigarika Sangha Ltd., Kaup, Udipi Taluk.	12,500	1,000	6,300	19,800
	1961-62.				
8	Shiroor Huri Hagga Mathu Narina Thayarakegarara Kushala Sangha, Ltd.,	15,580	1,000	1,500	18,080
9	Angalli Coir Workers Co-op. Cottage Industrial Society, Ltd., Coondapur.	15,000	1,000	1,500	17,500
	1962-63				

1		2	3	4	5
10	Thekkatte Coir Workers Cottage Industrial Co-operative Society.	...	...	...	...
	Total ...	1,67,9980	6,000	55,500	2,29,480

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮೈಸೂರು ರಾಜ್ಯದ ಕಾಯರ್ ಬೋರ್ಡಿನ ಸಲಹಾ ಮಂಡಲಿಯ ವರಿಗೆ ಪ್ರಯಾಣ ಭತ್ಯ ಮತ್ತು ದಿನಭತ್ಯ ಹಾಗೂ ಅಧ್ಯಕ್ಷರು ಮತ್ತು ಸದಸ್ಯರುಗಳ ಗೌರವ ಸಂಭಾವನೆ ಮತ್ತು ಸಿಬ್ಬಂದಿ ವರ್ಗದವರ ವೆಚ್ಚ ಇವುಗಳಿಗೆ 38,058–76 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಕಾಯರ್ ಕೋ-ಆಪರೇಟೀವ್ ಸೊಸೈಟಿಗಳಿಗೆ ಒಟ್ಟು 1,67,980 ರೂಪಾಯಿಗಳನ್ನು ಸಾಲವಾಗಿಯೂ ಮತ್ತು 55 ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಟ್ಟಿದ್ದೀರಿ. ಹಾಗಾದರೆ ಇದುವರೆಗೆ ಕಾಯರ್ ಬೋರ್ಡಿನಲ್ಲಿ ಒಟ್ಟು ಎಷ್ಟು ಉತ್ಪತ್ತಿಯಾಗಿದೆ ಮತ್ತು ಹೊರಗಡೆಗೆ ಎಷ್ಟು ರಫ್ತು ಮಾಡಿದ್ದೀರಿ?

†ಶ್ರೀ ಕೆ. ಮಲ್ಲಪ್ಪ.—ಪ್ರೊಡಕ್ಷನ್ ಹೊಸದಾಗಿ ಕೇಳುತ್ತಿದ್ದೀರಿ. ಆ ವಿವರಣೆಗಳನ್ನು ತುಂಬಾ ಸೊಸೈಟಿಗಳಿಂದ ಸಂಗ್ರಹಣೆ ಮಾಡಬೇಕು. ಈಗ ಆ ಇನ್‌ಫರ್‌ಮೇಷನ್ ನನ್ನ ಹತ್ತಿರ ಇಲ್ಲ.

Sri G. V. GOWDA.—Is it a fact that on the advice of the Coir Board, a Show Room was opened in Bangalore ?

Sri K. MALLAPPA.—Yes, it has been recently opened.

Sri G. V. GOWDA.—May I know the establishment charges per month for that Show Room ?

Sri K. MALLAPPA.—The information is not available.

ಶ್ರೀ ಎಂ. ಸಿ. ಬಸಪ್ಪ.—ಈ ಕೈಗಾರಿಕೆಯಲ್ಲಿ training ಕೊಟ್ಟಿದ್ದನ್ನು follow-up ಮಾಡಲು ಕೆಲವು ಸಹಕಾರ ಸಂಘಗಳಿಗೆ ಸೌಕರ್ಯ ಕೊಟ್ಟಿಲ್ಲ. ಈ ವಿಚಾರದಲ್ಲಿ Advisory Boardನವರು ಏನು ಶಿಫಾರಸು ಮಾಡಿದ್ದಾರೆ?

ಶ್ರೀ ಕೆ. ಮಲ್ಲಪ್ಪ.—Advisory Committeeಯವರು ಏನೂ ಶಿಫಾರಸು ಮಾಡಿಲ್ಲ. ಕೆಲವು ಸಾಮುಗ್ರಿಗಳನ್ನು ಪರದೇಶದಿಂದ ಒದಗಿಸಬೇಕಾಗುತ್ತದೆ; ಇದಕ್ಕೆ ವಿದೇಶಿ ವಿನಿಮಯ ಬೇಕಾಗುತ್ತದೆ. ಅದಕ್ಕೆ ಬೇಕಾದಂಥ ಏರ್ಪಾಡುಗಳನ್ನು ಸರ್ಕಾರದವರು ಮಾಡುತ್ತಾ ಇದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಹೊಸ Advisory Committee ಯಾವಾಗ ಆಯಿತು? ಹಿಂದಿನ ಕಮಿಟಿಯಲ್ಲಿದ್ದ ಮೆಂಬರುಗಳು ಯಾರ್‍ಯಾರು ?

ಅಧ್ಯಕ್ಷರು.—ಹಿಂದಿನ ಕಮಿಟಿಯ ವಿಷಯವನ್ನು ಈಗ ಕೇಳುತ್ತಾ ಇದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಈ ಕಮಿಟಿ ಹೊಸದು. ಹಾಲಿ ಇರತಕ್ಕಂಥ ಕಮಿಟಿ ರಚನೆಯಾದುದು ಡಿಸೆಂಬರ್ ತಿಂಗಳಿನಲ್ಲಿ ಹಿಂದಿನ ಕಮಿಟಿಯಲ್ಲಿ ಯಾರ್‍ಯಾರಿದ್ದರು ಅನ್ನುವುದು ನನ್ನ ಫೈಲಿನಲ್ಲಿಲ್ಲ. ಪ್ರತ್ಯೇಕವಾಗಿ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

Sri SANJEEVANATH AIKALA.—How many are directly connected as manufacturers, or traders ?

ಶ್ರೀ ಕೆ. ಮಲ್ಲಪ್ಪ.—ಇದರಲ್ಲಿ ಕೆಲವರು ಸ್ವತಃ ಅಭ್ಯಾಸ ಮಾಡುತ್ತಿದಾರೆ ಕೆಲವು ಪರದೇಶಗಳ ವಿಷಯ ತಿಳಿದುಕೊಂಡಿರುವವರೂ ಇದ್ದಾರೆ. South Kanara, North Kanara, Tumkur Districtನವರೂ ಇದ್ದಾರೆ. ಈ ಕೈಗಾರಿಕೆಯನ್ನು ಹೊಸದಾಗಿ ಪ್ರಾರಂಭ ಮಾಡಬೇಕಾಗಿದೆ. ಅಭಿವೃದ್ಧಿ ಆಗಿಲ್ಲ. ಅದನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಪರದೇಶದಲ್ಲಿರತಕ್ಕ ಕೈಗಾರಿಕೆ ಅನುಭವವಿರುವವರು ಇದ್ದಾರೆ.

ಶ್ರೀ ಕೆ. ಲಕ್ಕಪ್ಪ.—Coir industryಅನ್ನು ಯಾವ ಯಾವ ಕಡೆ ಮಾಡಬೇಕೆಂದು ಈ ಬೋರ್ಡಿನ ಸದಸ್ಯರುಗಳು ಸಲಹೆ ಕೊಟ್ಟಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಸಾಮಾನ್ಯವಾಗಿ advice ಕೊಟ್ಟಿಲ್ಲ. ಹೊಸದಾಗಿ ಈಗತಾನೇ ರಚನೆಯಾಗಿದೆ. ಈಗ ಎಲ್ಲಿ ಮಾಡಬೇಕೆಂಬ ಆಲೋಚನೆ ಸಾಮಾನ್ಯವಾಗಿ ಸರ್ಕಾರಕ್ಕೂ ಇದೆ, ಸದಸ್ಯರಿಗೂ ಇದೆ.

ಶ್ರೀ ಎಸ್. ಗೋಪಾಲಗೌಡ.—ಈ ಬೋರ್ಡಿಗೆ ಕೇಂದ್ರದವರು ಏನಾದರೂ ಹಣ ಸಹಾಯ ಮಾಡಿದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಬರುತ್ತಿದೆ. ಕೆಲವು ಸ್ಕೀಮುಗಳಿಗೆ ಶೇಕಡ 75ರಷ್ಟು, ಕೆಲವಕ್ಕೆ ಶೇಕಡ 50ರಷ್ಟು ಕೇಂದ್ರದಿಂದ ಸಹಾಯ ಬರುತ್ತಿದೆ.

ಶ್ರೀ ಎಂ. ಸಿ. ಬಸಪ್ಪ.—ಹೊರದೇಶದಿಂದ ಬರುವ ಸಾಮಾನುಗಳನ್ನು ಬಿಟ್ಟು ಸ್ಥಳೀಯ ಕಚ್ಚಾ ಸಾಮಾನುಗಳನ್ನು ಉಪಯೋಗಿಸಿಕೊಂಡು ಕೈಗಾರಿಕೆ ನಡಸುವವರಿಗೆ ಯಾವ ರೀತಿ ಸಹಾಯ ಮಾಡುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಸರ್ಕಾರ ಸಹಕಾರ ಸಂಘಗಳನ್ನು ಏರ್ಪಾಡು ಮಾಡಿ ಅವುಗಳ ಮೂಲಕ ಈ ಕೈಗಾರಿಕೆ ನಡೆಸತಕ್ಕಂಥವರಿಗೆ ಸಾಲ ಒದಗಿಸುತ್ತಾರೆ; ಅವರಿಗೆ ಬೇಕಾದಂಥ ಕಚ್ಚಾ ಸಾಮಾನುಗಳನ್ನು ಒದಗಿಸಿ ಕೊಡುತ್ತಾರೆ. ಮಾರಾಟ ಮಾಡುವುದಕ್ಕೆ Marketing Society ಸೌಕರ್ಯವನ್ನು ಒದಗಿಸುತ್ತಾ ಇದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕೈಗಾರಿಕೆಯಲ್ಲಿ ಎಷ್ಟು ಜನಕ್ಕೆ ಉದ್ಯೋಗ ಕಲಿಸಿದ್ದೀರಿ ? ಈ ಸಲಹಾಸಮಿತಿಯಲ್ಲಿ ತೆಂಗು ಬೆಳೆಯುವ ಜಾಗದಲ್ಲಿರತಕ್ಕಂಥ ಜನಗಳನ್ನು ಹಾಕಿದ್ದೀರಾ, ಅಥವಾ ಟೆಕ್ನಿಕಲ್ ಜ್ಞಾನ ತರಬೇಕೆಂದು ಇಂಥಿಂಥದ್ದನ್ನು ಓದಿದವರನ್ನು ಅಪಾಯಿಂಟ್ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಮೊದಲೇ ತಿಳಿಸಿದ ಹಾಗೆ ಈ ಕೈಗಾರಿಕೆ ಅಷ್ಟೊಂದು ಬೆಳೆದಿಲ್ಲ. ತಿರುವಾಂಕೂರಿನಲ್ಲಿ ಎಷ್ಟರ ಮಟ್ಟಿಗೆ ಬೆಳೆದಿದೆಯೋ, ಅಷ್ಟರ ಮಟ್ಟಿಗೆ ನಮ್ಮ ರಾಜ್ಯದಲ್ಲಿ ಬೆಳೆದಿಲ್ಲ. ಇದನ್ನು ಬೆಳೆಸಬೇಕಾಗಿದೆ. ಉದ್ಯೋಗ ಒದಗಿಸಬೇಕೆಂಬ ದೃಷ್ಟಿಯಿಂದ ಒಂದು ಸಮಿತಿ ರಚನೆ ಮಾಡಿದೆ. ಅವರು ಅನೇಕ ಸಮಸ್ಯೆಗಳ ಬಗ್ಗೆ ವಿಚಾರ ನಡೆಸುತ್ತಾ ಇದ್ದಾರೆ. ಇದರಲ್ಲಿ ಸಾಮಾನ್ಯವಾಗಿ, Mysore District, Bangalore District, Tumkur District, Hassan District, Chitradurg, South Kanara and North Kanara Districtಗಳಲ್ಲಿ ವಿಶೇಷವಾಗಿ ತೆಂಗಿನ ಬೆಳೆಯಾಗುತ್ತದೆ. ಇಲ್ಲಿ ಕಚ್ಚಾ ಸಾಮಾನು ವಿಶೇಷವಾಗಿ ಸಿಗುತ್ತದೆ. ಈ ಸ್ಥಳಗಳಲ್ಲಿ ಕೈಗಾರಿಕೆಯನ್ನು ನಡೆಸಿದರೆ ಅದರಿಂದ ಪ್ರಯೋಜನವಾಗುತ್ತದೆಂದು ತಿಳಿದುಕೊಂಡು ಈ ಡಿಸ್ಟ್ರಿಕ್ಟುಗಳಿಂದ ಬರತಕ್ಕಂಥ ಸದಸ್ಯರನ್ನು ಈ ಸಮಿತಿಗೆ ನಾಮಕರಣ ಮಾಡಿದ್ದೇವೆ.

Representation to Harijans and Girijans in all the Committees constituted by the Government.

*Q**.—512. Sri R. KENCHAPPA (Pavagada).—

Will the Government be pleased to state:—

(*a*) whether they have issued a Government Order to the effect that at least one or two persons from amongst Harijans and Girijans must be represented on all the Committees of the Government to be constituted at Taluk, District and State levels together with the date of issue the said Government Order ;

(*b*) the number of Committees constituted since the issue of the above Government Order ?

A.—Sri S. NIJALINGAPPA (Chief Minister).—

(*a*) Though there is no such order, the policy of Government is to give fair representation, as far as possible, to Harijans and Girijans provided suitable persons are available and there are no difficulties in the way.

(*b*) Does not arise.

ಶ್ರೀ ಆರ್. ಕೆಂಚಪ್ಪ.—ಪ್ರಾತಿನಿಧ್ಯ ಕೊಡಬೇಕಾದರೆ ಇರಬೇಕಾದ ಅರ್ಹತೆಗಳೇನು ?

†ಶ್ರೀ ಎಸ್. ನಿಜಲಿಂಗಪ್ಪ.—ಯಾವ ಯಾವ ಕೆಲಸಕ್ಕೆ ಯಾರ್ಯಾರು ಯೋಗ್ಯರೋ, ಅವರೇ ಅರ್ಹರು.

ಶ್ರೀ ಆರ್. ಕೆಂಚಪ್ಪ.—ನೇಮಕ ಮಾಡುವುದಕ್ಕೆ ಯಾವ ಅಡ್ಡಿ ಆತಂಕಗಳೂ ಇರಕೂಡದು ಎಂದು ಹೇಳಿದ್ದೀರಿ. ಆತಂಕಗಳು ಎಂದರೆ ಏನು ಎಂದು ವಿವರಣೆ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಿದೆ ಆತಂಕ ? ಯೋಗ್ಯರು ಇದ್ದರೆ ನೇಮಕ ಮಾಡುತ್ತೇವೆ. ಯಾರೂ ಇಲ್ಲದೆ ಹೋದರೆ ಆತಂಕವಾಗುತ್ತದೆ.

ಶ್ರೀ ಆರ್. ಕೆಂಚಪ್ಪ.—ಯೋಗ್ಯರೆಂದು ಪರಿಗಣಿಸಬೇಕಾದರೆ ಅವರಿಗೆ ನಿರ್ದಿಷ್ಟ ಅರ್ಹತೆಗಳೇನಿರಬೇಕು ?

ಶ್ರೀ ಎಸ್. ನಿಜಲಿಂಗಪ್ಪ.—ಬುದ್ಧಿವಂತರಾಗಿರಬೇಕು, ವಿದ್ಯಾವಂತರಾಗಿರಬೇಕು, ವಿಚಾರಗಳನ್ನು ತಿಳಿದುಕೊಂಡಿರಬೇಕು, ಸಾಕಷ್ಟು ಪ್ರತಿಭಾವಂತರೂ ಆಗಿರಬೇಕು.

Improvements to Bharamasagara Major tank in Chitradurga Taluk.

*Q.—555. Sri M. N. KRISHNASINGH (Jagalur).—

Will the Government be pleased to state.—

(a) whether estimates have been prepared for the improvements of Bharamasagara Major Tank in Chitradurga Taluk ;

(b) if so, the reasons as to why the work has not been carried out as per the estimate made ;

(c) whether they will take steps to commence the works at least now ?

A.—Sri ALUR HANUMANTHAPPA (Deputy Minister for Minor Irrigation).—

(a) No.

(b) Does not arise in view of reply to clause (a)

(c) Do do

ಶ್ರೀ ಎಂ. ಎನ್. ಕೃಷ್ಣಸಿಂಗ್.—ಅಂದಾಜು ತಯಾರಿಸಿಲ್ಲ ಎಂದು ಹೇಳಿದ್ದೀರಿ. ಮೊನ್ನೆ ಭಾರಿ ಮಳೆ ಬಂದು, ಏರೀ ಮೇಲೆ ನೀರು ವಿಪರೀತವಾಗಿ ಹರಿದು ಸ್ಥಳದ ಅಧಿಕಾರಿಗಳು ಧಾವಿಸಿ, ಹಿಂದಿರುವ ಹಳ್ಳಿಗಳಿಗೆ ನೀರು ನುಗ್ಗದಂತೆ ನೋಡಿಕೊಂಡದ್ದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಆಲೂರು ಹನುಮಂತಪ್ಪ.—Detailed estimate ತಯಾರಾಗಿಲ್ಲ. ಆದರೆ ಏರಿ raise ಮಾಡಬೇಕೆಂದು instructions ಕೊಟ್ಟಿದೆ. ತೂಬು ಜಖಂ ಆಗಿರುವುದನ್ನು ಸರಿ ಮಾಡಲು 1930 ರೂಪಾಯಿ ಅಂದಾಜು ಮಾಡಿದೆ. Ageney ಸಹ fix ಮಾಡುವುದರಲ್ಲಿ ಇದೆ. ಕೆಲಸ ತೆಗೆದುಕೊಳ್ಳುವಂತೆ ಮಾಡುತ್ತೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.— ಕೆಲಸ ತೆಗೆದುಕೊಳ್ಳಲು ಯಾವ ಕ್ರಮ ತೆಗೆದುಕೊಂಡಿದ್ದೀರಾ

ಶ್ರೀ ಆಲೂರು ಹನುಮಂತಪ್ಪ.— Agency fix ಮಾಡುವ stageನಲ್ಲಿ ಇದೆ.

ಶ್ರೀ ವಿ. ಮುನಿಯಪ್ಪ.—ಮುಂದಿನ ಮಳೆ ಬಂದು ಆ ಕೆರೆ ಅಪಾಯಕ್ಕೆ ಈಡಾಗುವರೊಳಗೆ ಈ ಬೇಸಿಗೆಯಲ್ಲಿಯೇ ಕಾಂಗಾರಿ ಪೂರೈಸುತ್ತಿಲ್ಲ.

ಶ್ರೀ ಆಲೂರು ಹನುಮಂತಪ್ಪ.—ಹೌದು, ಹೌದು ಅಂಥ ಕೆಲಸಗಳನ್ನು ಆದಷ್ಟು ಶೀಘ್ರ execute ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ಮತ್ತೆ ಅಂದಾಜಿಲ್ಲ ಅಂತ ಹೇಳಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಇದು Detailed estimates ಅಲ್ಲ. Damaged ವೇಸ್ಟ್ ವೇರ್‌ಗೆ, ಸ್ಲೂಸಿಗೆ 2,400 ರೂಪಾಯಿ ಹಾಕಿ ನೀರು ನಿಲ್ಲಿಸಬೇಕೆಂದು ಹೇಳಿದ್ದೇವೆ. ಹಾಗೆಯೇ quard stageಗಳನ್ನು ಹಾಕುವುದಕ್ಕೆ 2,550 ರೂಪಾಯಿ ತಗುಲುವುದಿದೆ,

SHORT NOTICE QUESTIONS.

MR. SPEAKER.—I propose to take up all the three Short Notice Questions together.

Arrangement made to alleviate the grievances of workers affected by Gold Control Order.

Q.—1. Sri S. SHIVAPPA (Shravanabelagola).—

Will the Government be pleased to state :—

(*a*) when the Gold Control Order came into effect in the State:

(*b*) the number of workers employed in the industry that are affeeted by the Gold Control Order in the State;

(*c*) the arrangements made to alleviate the grievances of these workers?

A.— Sri B. D. JATTI (Minister for Finance).—

(*a*) In January 1963.

(*b*) The total number including employers, employees and workers may be 30,000. Number of workers may be about 15,000 to 20,000, but the actual number affected by the Gold Control Order is not available. It must be small as ornaments of silver also are prepared by the same class of workers.

(*c*) If genuine case of unemployment are brought to notice and they are suitable, the question of providing employment to workers seeking employment in various jobs in industrial concerns or other suitable places can be considered. Some of the applications are already under consideration of the industrial concerns.

Number of people likely to be thrown out of employment on account of Gold Control Order.

Q.—3. Sri T. MADAIAH GOWDA (Ramanagaram).—

Will the Government be pleased to state:—

(*a*) the number of people that are likely to be thrown-out of employment in Mysore State on account of Gold Control Order;

(*b*) whether Government have thought of any measures to give relief to such people;

(*c*) if so, what are they?

A.— Sri B. D. JATTI (Minister for Finance).—

(*a*) The number cannot be assessed with any degree of accuracy as goldsmiths were not dealing entirely with gold ornaments.

(*b*) Yes.

(c) If genuine cases of unemployment are brought to notice and if they are suitable, the question of providing employment to workers seeking employment in various jobs in industrial concerns or other suitable places can be considered. Some of the applications are already under consideration of the industrial concerns.

Steps taken to give relief to workers affected by Gold Control Order.

Q.—4. Sri C. R. RANGE GOWDA (Magadi).—

Will the Government be pleased to state:—

(a) whether it has come to the notice of the Government that a large number of goldsmiths are thrown out of employment on account of Gold Control Order;

(b) whether they have taken any steps to give relief to these workers?

A.—Sri B. D. JATTI (Minister for Finance).—

(a) Representations have been received that a number of goldsmiths are thrown out of employment on account of the Order.

(b) If genuine cases of unemployment are brought to notice and they are suitable, the question of providing employment to workers seeking employment in various jobs in industrial concerns or other suitable places can be considered. Some of the applications are already under consideration of the industrial concerns.

Sri S. SIVAPPA.—The Government are pleased to state that there are 30,000 workers in this industry including the persons who work on silver. May I know how many workers have applied to the Government seeking for employment?

Sri B. D. JATTI.— 4,379 persons have applied.

Sri S. SIVAPPA.—Has it come to the notice of the Government that several hundreds of people have applied for employment in various Districts?

Sri B. D. JATTI.—The total number of applications which have been received at Bangalore is 4,379, Some of the District Officers have forwarded these applications to the Headquarters.

Sri S. SIVAPPA.—How can the Government employ these persons immediately?

Sri B. D. JATTI.—The Hon'ble Deputy Minister for Municipal Administration has held a number of meetings and he has invited representatives of the Government of India Undertakings, the State industries and private people who are running industries. All of them have been good enough to receive the applications and employ them. Some of them have suggested that training should be given and then appointed.

2-00 P.M.

Sri T. MADIAH GOWDA.—It is said that if they are suitable they will be employed. How do you judge the suitability of these applicants ?

† **Sri B. D. JATTI.**—It is the people who are to employ who will find out whether they are suitable or not and not ourselves.

Sri T. MADIAH GOWDA.—May I know whether you have consulted them and know who are the suitable persons whose applications are to be recommended to them ?

Sri B. D. JATTI.—All the applications are recommended to different managements and they have received them well. To-day I am told that some of the applicants have also been appointed.

ಶ್ರೀ ಸಿ. ಆರ್ ರಂಗೇಗೌಡ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ಅಕ್ಕಸಾಲಿಗರಿಂದ ನಿರುದ್ಯೋಗಿಗಳಾಗಿರುವ ಬಗ್ಗೆ ಮನವಿಗಳು ಬಂದಿವೆ ಎಂತಲೂ ಮತ್ತು (ಬಿ) ಪ್ರಶ್ನೆಗೆ ಉತ್ತರವಾಗಿ ಕೆಲವು ಅರ್ಜಿಗಳು ಈಗಾಗಲೇ ಕೈಗಾರಿಕಾ ಸಂಸ್ಥೆಗಳವರ ಪರಿಶೀಲನೆಯಲ್ಲಿವೆ ಎಂದು ಹೇಳಿದ್ದಾರೆ. ಅಂದ ಮೇಲೆ ಅವರನ್ನು ಯಾವ್ಯಾವ ಕೈಗಾರಿಕೆಗಳಲ್ಲಿ ನೇಮಕ ಮಾಡುವ ವ್ಯವಸ್ಥೆ ಮಾಡಿದ್ದಾರೆ ?

ಶ್ರೀ ಬಿ. ಡಿ. ಜತ್ತಿ.—ನಾನು ಈಗಾಗಲೇ ಹೇಳಿದಂತೆ ಕೇಂದ್ರ ಸರ್ಕಾರದವರು ನಡೆಸತಕ್ಕ ಎಲ್ಲಾ ಕೈಗಾರಿಕೆ ಸಂಸ್ಥೆಗಳಿಗೂ ಮನವಿಗಳನ್ನು ಕಳುಹಿಸಲಾಗಿದೆ. ಅದೇ ರೀತಿಯಲ್ಲಿ ಸಂಸ್ಥಾನ ಸರ್ಕಾರ ನಡೆಸತಕ್ಕ ಕಾರ್ಖಾನೆಗಳಿಗೆ ಮತ್ತು ಖಾಸಗೀ ಸಂಸ್ಥೆಗಳಿಗೂ ಅವರ ಅರ್ಜಿಗಳನ್ನು ಕಳುಹಿಸಿದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ಮಾನ್ಯ ಶ್ರೀ ಶಿವಪ್ಪನವರ (ಬಿ) ಪ್ರಶ್ನೆಗೆ ಉತ್ತರವಾಗಿ ಮಾಲೀಕರು, ನೌಕರರು ಹಾಗೂ ಕೆಲಸಗಾರರನ್ನೊಳಗೊಂಡ ಒಟ್ಟು ಸಂಖ್ಯೆ 30,000 ಆಗಬಹುದು ಎಂದು ಹೇಳಿದ್ದೀರಿ. ಆದರೆ ಈ Gold Control Act ಕೇವಲ ಅಕ್ಕಸಾಲಿಗರಿಗೆ ಮಾತ್ರವೇ ಅಲ್ಲದೆ Gold thread manufacturersಗೂ ಅನ್ವಯವಾಗುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಅಷ್ಟು ವಿವರಗಳು ಗೊತ್ತಿಲ್ಲ. ಆ ಬಗ್ಗೆ ಸರ್ವೆ ಏನೂ ಮಾಡಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿನ ನೌಕರರಿಗೆ ಸರ್ಕಾರದವರು ಪೂರ್ವಭಾವಿಯಾಗಿ ಯಾವ ಸೂಚನೆಯನ್ನು ಕೊಡದೆ ಈ ಸುವರ್ಣನಿಯಂತ್ರಣ ಕಾನೂನನ್ನು ಜಾರಿಗೆ ತಂದಿರುವುದರಿಂದ, ಅವರು ನಿರುದ್ಯೋಗಿಗಳಾಗಿರುವ ಕಾಲದಲ್ಲಿ ಅವರಿಗೇನಾದರೂ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಕೇಂದ್ರ ಸರ್ಕಾರದವರು ಈ ಆಜ್ಞೆಯನ್ನು ಮಾಡಿದ್ದಾರೆ. ಅದರ ಪರಿಣಾಮವಾಗಿ ಅಂತಹವರಿಗೆ ಎಲ್ಲಾ ಕಡೆಯೂ ಈ ತರಹ ತೊಂದರೆಯಾಗಿದೆ. ನಮ್ಮ ಸಂಸ್ಥಾನ ಸರ್ಕಾರಕ್ಕೂ ಕೇಂದ್ರದವರು ಈ ಬಗ್ಗೆ ಏನಾದರೂ ಸಹಾಯ ಮಾಡಬೇಕೆಂದು ನಾವೂ ಸಹ ಕೇಳುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಸುವರ್ಣ ಹತೋಟಿ ಆಜ್ಞೆ ಬರುವುದಕ್ಕೆ ಪೂರ್ವಭಾವಿಯಾಗಿ ಈ ಕಾರ್ಖಾನೆಗಳಲ್ಲಿ ಕೆಲಸಬೇಕು ಎಂದು ಅರ್ಜಿಕೊಟ್ಟವರಿಗೆ ಕೆಲಸಗಳನ್ನು ಇದುವರೆಗೂ ಕೊಡದೇ ಇರುವುದರಿಂದ ಅಕ್ಕಸಾಲಿಗರಿಗೆ ಮೊದಲು ಪ್ರಿಫರೆನ್ಸ್ ಕೊಡದೇ ಹೋದರೆ ಏನು ಬಹು ಮುಖ್ಯವಾದ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಅವರಿಗೆ ಮಾತ್ರ ಪ್ರಿಫರೆನ್ಸ್ ಕೊಡಬೇಕೆಂದು ಕೇಳಿದ್ದೇವೆ. ಈಗಾಗಲೇ ಕೆಲವು ಕಡೆ ಪ್ರಿಫರೆನ್ಸ್ ಕೊಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರ ಅರ್ಜಿಗಳೆಲ್ಲಾ ಸರ್ಕಾರಕ್ಕೆ ನೇರವಾಗಿ ಬಂದಿವೆಯೋ ಅಥವಾ ಕಾರ್ಖಾನೆಗಳಿಂದ ಬಂದಿವೆಯೋ ?

ಶ್ರೀ ಬಿ. ಡಿ. ಜತ್ತಿ.—ಸರ್ಕಾರಕ್ಕೇ ಬಂದಿವೆ. ನಾವು ಬೇರೆ ಬೇರೆ ಕಾರ್ಖಾನೆಗಳಿಗೆ ಕಳುಹಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ್ಯಾವ ಕಾರ್ಖಾನೆಗಳಿಗೆ ಎಷ್ಟೆಷ್ಟು ಕಳುಹಿಸಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಅವು ಈ ರೀತಿ ಇವೆ:

H.M.T. ...	1772	Rural Industrial Training Centre	61
H.A.L. ...	721	Central Industrial Workshop ...	66
I.T.I. ...	560	Remco	75
B.E.L. ...	610	Government Porcelain Factory	20
M.S.R.T.C. ...	100	B.W.C. and Silk Mills	250
Government Printing and Stationery	62	Krishna Flour Mills	30
Corporation ...	52		
Total ...	3877	Total ...	502

ಶ್ರೀ ಎಸ್. ಶಿವಪ್ಪ.—ಈಗಾಗಲೇ ಮೈಸೂರು ಸಂಸ್ಥಾನದಲ್ಲಿರತಕ್ಕ ಕಾರ್ಖಾನೆಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ವಿಪರೀತವಾಗಿರುವುದರಿಂದ, ಅಕ್ಕಸಾಲಿಗರಿಗಾಗಿ ಅವರ ಒಂದು ವೈಶಿಷ್ಟ್ಯ ವೃತ್ತಿಯನ್ನೇ ಅವಲಂಬಿಸಿ ಪ್ರತ್ಯೇಕವಾಗಿ ಒಂದು ಸಣ್ಣ ಸೊಸೈಟಿಯನ್ನು ಸ್ಥಾಪನೆ ಮಾಡಿ 14 ಕ್ಯಾರೆಟ್‌ನಲ್ಲಿ ಚಿನ್ನದ ಆಭರಣಗಳನ್ನು ಮಾಡತಕ್ಕ ಕಾರ್ಯದಲ್ಲಿ ಸರ್ಕಾರದವರೇನಾದರೂ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಲು ಪರಿಶೀಲನೆ ಮಾಡಿದ್ದಾರೆಯೇ ?

Sri B. D. JATTI.—Government has already thought about it and Government has suggested the formation of either co-operative societies or associations. Government will help them to meet the managerial cost and will also help them with loans and, if necessary, by giving them technical know-how.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಕೈಗಾರಿಕಾ ಸಂಸ್ಥೆಗಳಲ್ಲಿ ಅಕ್ಕಸಾಲಿಗರೆಲ್ಲರಿಗೂ ಉದ್ಯೋಗಸಿಗುವುದರಲ್ಲಿ ತೊಂದರೆಯಾಗಿರುವುದರಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನುಗಳನ್ನು ಕೊಟ್ಟು ಅವರಿಗೆಲ್ಲರಿಗೂ ವ್ಯವಸಾಯ ಕಸುಬನ್ನು ತೋರಿಸುವುದು ಉತ್ತಮವಲ್ಲವೇ ?

Sri B. D. JATTI.—That is a proposal pending before the Government, will consider it carefully.

Smt VIJAYA RAGHAVENDRA RAO DESAI.—In view of the fact that the new engineering work at Shahabad is going to come up, will Government consider the desirability of corresponding with the A.C.C. management and ask them to employ such persons if they are suitable ?

Sri B. D. JATTI.—By all means.

Sri SANJEEVANATH AIKALA.—How many cases of starvation and suicide have been reported among the goldsmiths since the promulgation of the Gold Control Order ?

Sri B. D. JATTI.—Government has not got any information. If the Hon'ble Member has got any special arrangement for knowing such things, he can bring them to the notice of the Government.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಕೆಲಸಗಾರರ ಮಕ್ಕಳಿಗೆ ನಿರುದ್ಯೋಗದ ದೆಸೆಯಿಂದ ಏನಾದರೂ ಫೀಸ್‌ಮನ್ನಾ ಮಾಡುವುದಾಗಲೀ ಅಥವಾ ವಿದ್ಯಾರ್ಥಿ ವೇತನವನ್ನು ಕೊಡುವುದಾಗಲೀ ಏರ್ಪಾಡು ಮಾಡಿದ್ದೀರಾ ?

Sri B. D. JATTI.—That is also being considered ..

ಶ್ರೀ ಪಿ. ವೆಂಕಟಗಿರಿಯಪ್ಪ.—ಇದುವರೆಗೂ ತಾವು ಮಾಡಿರತಕ್ಕ ಪ್ರಯತ್ನದ ಫಲವಾಗಿ ಯಾವ್ಯಾವ ಕಾರ್ಖಾನೆಗಳಲ್ಲಿ ಎಷ್ಟೆಷ್ಟು ಜನರಿಗೆ ಇಷ್ಟರವರೆಗೆ ಕೆಲಸ ಸಿಕ್ಕಿದೆ ?

ಶ್ರೀ ಬಿ. ಡಿ. ಜತ್ತಿ.—ನಾನಾ ಕಡೆಗಳಿಂದ ನನಗೆ ಈಗ ವರದಿಗಳು ಬರುತ್ತಿವೆ. ಅವಿನ್ನೂ ಪೂರ್ತಿಯಾಗಿಲ್ಲ, ಪೂರ್ತಿ ಪಟ್ಟಿಯಾದ ನಂತರ ಮಾನ್ಯ ಸದಸ್ಯರಿಗೆ ಆ ಮಾಹಿತಿಯನ್ನು ಕೊಡುತ್ತೇನೆ..

ಶ್ರೀ ಇ. ನಾರಾಯಣ ಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಇವರಿಗೋಸ್ಕರ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರ ಮೂಲಕ ಇವರಿಗೆ ಸಹಾನುಭೂತಿಯಿಂದ ಸಹಾಯ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅದಕ್ಕಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕೆಲವು ಕಾರ್ಖಾನೆಗಳಿಗೆ ಅರ್ಜಿಗಳನ್ನು ಕಳುಹಿಸಲಾಗಿದೆ ಎಂದು ಮಂತ್ರಿಗಳು ಈಗತಾನೆ ಹೇಳಿದರು. ಭದ್ರಾವತಿ ಕಾರ್ಖಾನೆಗೆ ಏಕೆ ಕೆಲವಾರು ಅರ್ಜಿಗಳನ್ನು ಕಳುಹಿಸಲಿಲ್ಲ ?

ಶ್ರೀ ಬಿ. ಡಿ. ಜತ್ತಿ.—ಭದ್ರಾವತಿಯೊಳಗೆ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವುದು ಅವರ ಕೈಲಿ ಆಗುವುದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—4,300 ಅರ್ಜಿಗಳಲ್ಲಿ ಸೌತ್ ಕೆನರಾದಿಂದ ಅರ್ಜಿಗಳು ಎಷ್ಟು ಬಂದಿವೆ ?

ಶ್ರೀ ಬಿ. ಡಿ. ಜತ್ತಿ.—ಜಿಲ್ಲಾವಾರು ಪ್ರತ್ಯೇಕವಾಗಿ ಏನೂ ಕೊಟ್ಟಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಅದನ್ನು ಒದಗಿಸುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಕ್ಕಸಾಲಿಗರು ಸೌತ್ ಕೆನರಾದಲ್ಲಿ ನಿರುದ್ಯೋಗಿಗಳಾಗುವುದಕ್ಕೆ ಅದರ ವಿಶೇಷವೇನು ?

ಶ್ರೀ ಬಿ. ಡಿ. ಜತ್ತಿ.—ನಾವು ಯಾರಿಗೂ ಈ ಬಗ್ಗೆ ಅರ್ಜಿಗಳನ್ನು ಕೊಡಬಾರದು ಎಂದು ಹೇಳಲಿಲ್ಲ ಸಿಂಪತೆಟಿಕ್ ಕನ್ಸಿಡರೇಷನ್ ಮಾಡುವುದಿಲ್ಲವೆಂದು ಏನೂ ಹೇಳಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ಕ ಸಾಲಿಗರಿಗೆ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗಿರುವುದರಿಂದ ಅವರು ಮಾಡತಕ್ಕ ಕಸುಬಿಗೆ ಈಗ ಧಕ್ಕೆ ಬಂದಿರುವುದರಿಂದ, ಮುಂದೆ ಅವರು ಜೀವನ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅವರ ಕಡೆಯಿಂದ ಅಂತಹ ಸಲಹೆ ಏನೂ ಬಂದಿಲ್ಲ. ಮಾನ್ಯ ಸದಸ್ಯರು ಅವರ ಸಂಘದ ಪರವಾಗಿ ಜವಾಬ್ದಾರಿ ತೆಗೆದುಕೊಂಡರೆ, ವಿಚಾರ ಮಾಡುತ್ತೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಸರ್ಕಾರದವರ ಆಜ್ಞೆ ಪ್ರಕಾರ 14 ಕ್ಯಾರೆಟ್‌ನಲ್ಲಾದರೂ ಚಿನ್ನದ ಆಭರಣಗಳನ್ನು ಅಕ್ಕಸಾಲಿಗರು ಮಾಡುವುದನ್ನೇನೂ ನಿಲ್ಲಿಸಿಲ್ಲ. ಆದರೆ ಎಲ್ಲರನ್ನೂ ಬೇರೆ ಕಡೆಗೆ ಉದ್ಯೋಗಗಳ ಮೇಲೆ ಕಳುಹಿಸಿಕೊಟ್ಟರೆ ಮುಂದೆ ಚಿನ್ನದ ಕೆಲಸಗಳನ್ನು ಮಾಡುವುದಕ್ಕಾಗಿ ಯಾರನ್ನು ತರುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಎಲ್ಲರನ್ನೂ ಕಳುಹಿಸುತ್ತೇವೆ ಎಂಬುದಾಗಿ ಹೇಳಲಿಲ್ಲ. ಅದು ತಮ್ಮ ಅಭಿಪ್ರಾಯದ ಮಾತು. ನಮ್ಮ ಅಭಿಪ್ರಾಯ ಆ ರೀತಿ ಇಲ್ಲ.

QUESTIONS FOR ANSWERS ON THE DAY

(but not taken up)

Promotions given in the Department of Animal Husbandry.

*Q.—129. Sri C. V. VENKATARAYAPPA (Chickballapur).—

Will the Government be pleased to state :—

(a) whether it is a fact that Cadre and Recruitment Rules have not been followed in the Department of Animal Husbandry while giving promotions ;

(b) whether it is a fact that the High Court has issued Writ of Mandamus staying all promotions in the above Department since the Department did not follow Cadre and Recruitment Rules.

(c) whether it is not a fact that the Department did not advertise the vacancies in spite of the fact that the Public Service Commission reminded the Department ?

A.—Sri M. V. KRISHNAPPA (Minister for Revenue).—

(*a*) The Cadre and Recruitment Rules which came into force on 13th March 1959 are being followed while giving promotions in the Department.

(*b*) The High Court had issued a stay order in respect of promotions in the Department. The writ petitions has since been dismissed.

(*c*) No.

Bifurcation and Decentralisation of Industries Department.

**Q.*—471. Sri R. A. KOPPAL (Hubli City).—

Will the Government be pleased to state :—

whether it is proposed to bifurcate Industries Department and decentralise the same ; and if so, the time required for implementation of such a scheme ;

A.—Sri K. MALLAPPA (Minister for Industries and Commerce).—No.

Intimation of Release of a Member.

Mr. SPEAKER.—Before we take up the other work, I have to bring to the notice of the House that the Government under order dated 16th March 1963 have directed the release of Sri A. Krishna Shetty, M.L.A., detained in the Central Jail, Bellary,

---

BUDGET ESTIMATES FOR 1963-64—DEMANDS FOR GRANTS—DEMAND No. 31-50 PUBLIC WORKS

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ನಾನು ನಿನ್ನೆ ಲೋಕೋಪಯೋಗಿ ಖಾತೆಯ ಮೇಲೆ ಮಾತನಾಡುತ್ತಿದ್ದೆ. ನಮ್ಮಲ್ಲಿ ಮೈನರ್ ನೀರಾವರಿಯ ಅಗತ್ಯ ಹೆಚ್ಚಾಗಿದೆ, ಆದರೆ ಕೆಲಸ ಕಡಮೆಯಾಗಿದೆ. ಇದರ 'ಟೆಂಪೋ' ಹೆಚ್ಚು ಮಾಡಬೇಕಾದರೆ, ಬರಿಯ ಭಾಷಣ ಗಳನ್ನೂ, ಹೇಳಿಕೆಗಳನ್ನೂ ಮಾಡಿಕೊಂಡು ಹೋದರೆ ಪ್ರಯೋಜನವಿಲ್ಲ. ಹೆಚ್ಚು ಆಹಾರ ಬೆಳೆಯ ಬೇಕು, ಹೆಚ್ಚು ಕೆಲಸ ಆಗಬೇಕು ಎಂದು ಸರ್ಕಾರದವರು ಸೂಚನೆ ಕೊಡುತ್ತಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ಅಲ್ಲಲ್ಲಿ ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದಾರೆ. ಹಳ್ಳಿಗಳಲ್ಲಿ ಸಣ್ಣ ಕೆರೆ ಕಟ್ಟೆಗಳನ್ನು ಮಾಡಿಸಬೇಕಾದರೆ ನೀವು ಹಣಕೊಡಿ, ನಿಮ್ಮ ಕಾಂಟ್ರಿಬ್ಯೂಷನ್ ಕೊಡಿ, ಸರ್ಕಾರಕ್ಕೆ ಹಣ ಬೇಕಾಗಿದೆ, ನೀವು ಕೊಟ್ಟರೆ ನಿಮಗೂ ಅನುಕೂಲ ಸರ್ಕಾರಕ್ಕೂ ಅನುಕೂಲ ಎಂದು ಹೇಳು ತ್ತಿದ್ದಾರೆ. ನಾವು ಹಣಕೊಡಲು ಮುಂದೆ ಬಂದರೆ ಸರಿ ಇಲ್ಲದಿದ್ದರೆ ಕೇಳಬೇಡಿ ಎಂದು ಅವರು ಹೇಳುವುದು ಎಂದು ನಾನು ಅರ್ಥಮಾಡಿಕೊಂಡಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಅದು ನಿಮ್ಮ ಅರ್ಥ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮ್ಮ ಅರ್ಥವೂ ಹಾಗೆಯೇ.

ಸರ್ಕಾರ ಹಾಗೆ ಕೇಳುವುದಕ್ಕೆ ಬದಲು ಬೇರೆ ರೀತಿ ಮಾಡಬಹುದು. ಬೇರೆ ಅಭಿವೃದ್ಧಿ ಕೆಲಸಗಳಿಗೆ ಅವರಿಗೆ ಹಣ ಬೇಕಾದರೆ ಸಾಲ ಮಾಡುತ್ತಾರೆ. ಹಾಗೆಯೇ ಮೈನರ್ ಮತ್ತು ಮೀಡಿಯಮ್ ನೀರಾವರಿ ಕೆಲಸಗಳಿಗೆ ಸರ್ಕಾರದವರು 25-30 ಕೋಟಿ ರೂಪಾಯಿ ಸಾಲಮಾಡಲಿ. ಒಂದು ಲೋನ್ ಎತ್ತಿ ಅದನ್ನು ಇದಕ್ಕೆ ಖರ್ಚು ಮಾಡುತ್ತೇವೆಂದು ಹೇಳಲಿ. ಇದು ಬಿಟ್ಟು ಹಳ್ಳಿ ಯವರನ್ನು ಕೇಳಿದರೆ, ಒಂದು ಗ್ರಾಮದಲ್ಲಿ ಯಾರಾದರೂ ಹತ್ತು ಜನರು ಹಣಕೊಡಲು ಮುಂದೆ ಬರಬಹುದು; ಎರಡು ಸಾವಿರ ಕೊಡುತ್ತೇವೆಂದು ಹೇಳಬಹುದು. ಇದರಿಂದ ಕಾಮಗಾರಿಗಳಾಗು ವುದಿಲ್ಲ. ನಿಜವಾಗಿಯೂ ಸರ್ಕಾರದವರು ಮೈನರ್ ನೀರಾವರಿ ಕೆಲಸವನ್ನು ಕೈಗೊಂಡು ಮೂರ ನೇಯ ಯೋಜನೆ ಮುಗಿಯುವುದರಲ್ಲಿ ಕೊನೆಯ ಪಕ್ಷ ಬೇರೆ ರಾಜ್ಯಗಳಲ್ಲಿರುವಂತೆ ಸೇಕಡ 20ರಷ್ಟು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನೀರಾವರಿಯನ್ನಾದರೂ ಮಾಡಬೇಕಾದರೆ ಜನರನ್ನು ನೀವು ಹಣಕೊಡಿ ಎಂದು ಹೇಳುವ ಬದಲು ಒಂದು ಸಾಲ ಎತ್ತುವುದು ಸಮಂಜಸವಾಗಿದೆ. ಸರ್ಕಾರ ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕೆಂದು ಸೂಚಿಸುತ್ತೇನೆ. ಮೈನರ್ ನೀರಾವರಿಯ ಕಾರ್ಯವನ್ನು ಚುರುಕುಗೊಳಿಸ ಬೇಕೆಂಬ ಉದ್ದೇಶದಿಂದ, ಆಹಾರೋತ್ಪತ್ತಿಯನ್ನು ಹೆಚ್ಚಿಸಬೇಕೆಂಬ ದೃಷ್ಟಿಯಿಂದ ಒಂದು ಕೋಟಿ ಹದಿನೇಳು ಲಕ್ಷ ರೂಪಾಯಿನಷ್ಟು ಹಣವನ್ನು ಪಂಪ್ ಸೆಟ್ಟುಗಳನ್ನು ಕೊಳ್ಳುವುದಕ್ಕಾಗಿ ಮಂಜೂರು ಮಾಡಿದರು ಸರ್ಕಾರದವರು. ಆದರೆ ವಿದ್ಯುಚ್ಛಕ್ತಿ ಬೋರ್ಡಿನವರು ಕೊಟ್ಟಿಲ್ಲ. ಈವರೆಗೆ ಪಂಪು ಗಳನ್ನು ಎಷ್ಟು ಕೊಟ್ಟಿದ್ದಾರೆ, ಎಷ್ಟು ಜನರು ಹಾಕಿದರು ಎಂಬುದನ್ನು ನೋಡಿದರೆ, ಸರ್ಕಾರ ಹೇಳುವುದನ್ನು ಕಾರ್ಯಗತ ಮಾಡುವ ಯಂತ್ರ ಏನಿದೆಯೋ ಅದು lethargic ಆಗಿದೆ. ಅದಕ್ಕೆ ಬೆಣ್ಣೆ ಹಾಕಬೇಕು, ಎಣ್ಣೆ ಹಾಕಬೇಕು ಅದು ಸರಿಯಾಗಿ ಕೆಲಸ ಮಾಡುವುದಕ್ಕೆ ಎಂದು ಹೇಳು ತ್ತಾರೆ. ಈ ಯಂತ್ರದಿಂದ ಸರಿಯಾಗಿ ಕೆಲಸ ಮಾಡಿಸಬೇಕಾದರೆ, ಮುಖ್ಯಮಂತ್ರಿಗಳು ತಮ್ಮ ಕೆಲಸವನ್ನು ಸ್ವಲ್ಪ ಹಗುರ ಮಾಡಿಕೊಂಡು ಈ ಕಡೆ ದೃಷ್ಟಿ ಇಡಬೇಕು. ಯಾವ ಯಾವ ಕೆಲಸ ಹೇಗೆ ಹೇಗೆ ನಡೆಯುತ್ತಿದೆ ಎಂದು ನೋಡಬೇಕು. ಹಾಗೆ ಮಾಡುವುದು ಬಿಟ್ಟು ಅಧಿಕಾರಿಗಳ ವರ್ಗಗಳು, ಪ್ರಮೋಷನ್‌ಗಳು ಇಂಥವುಗಳ ಕಡೆ ನೋಡಿದರೆ ಪ್ರಯೋಜನವಿಲ್ಲ. ಅವರ ಕಾಲವನ್ನು ಇದಕ್ಕೆ ವಿನಿಯೋಗ ಮಾಡುವ ಬದಲು ಮೈನರ್ ನೀರಾವರಿಯ ಕೆಲಸವನ್ನು ನೋಡಲಿ. ಅವರು ಮುಖ್ಯಮಂತ್ರಿಗಳಾದ ತಕ್ಷಣ ಆಯಾ ಜಿಲ್ಲೆಯಲ್ಲಿರುವ ಎಂ.ಎಲ್.ಎ.ಗಳನ್ನು ಕರೆಸಿ, ಅಲ್ಲಿ ಯಾವ ಯಾವ ನೀರಾವರಿ ಕೆಲಸಗಳಾಗಬೇಕು, ಎಂದು ಕೇಳಿ ಮೈನರ್ ನೀರಾವರಿ ಅಭಿವೃದ್ಧಿಯಾಗಲು ಪ್ರಯತ್ನಿಸುತ್ತಾರೆಂಬ ಆಸೆ ಇತ್ತು. ಆದರೆ ಈ ಆಶೆ ಈಡೇರಲು ಅನೇಕ ಎಡರುತೊಡರುಗಳಿವೆ. ಈ ಕಡೆ ಅವರು ದೃಷ್ಟಿಯಿಟ್ಟು ಅವರು ಹೇಳಿದ ಕೆಲಸವನ್ನು ಮಾಡದೇಯಿರುವ ಅಧಿಕಾರಿಗಳು, ಅವರ ಆಶಯವನ್ನು ಕಾರ್ಯರೂಪಕ್ಕೆ ತರದೆಯಿರುವ ಜನರು ಇದ್ದರೆ ಅವರ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳಬೇಕು. ಒಂದು ಕೆಲಸವನ್ನು ಮಾಡಬೇಕೆಂದು ಎಕ್ಸಿಕ್ಯೂಟಿವ್ ಇಂಜನಿಯರಿಗೆ ಹೇಳಿ ದರೆ, ಅವರು ಅವರ ಬೆನ್ನ ಹಿಂದೆ ಚೀಫ್ ಇಂಜಿನಿಯರನ್ನು ಕೇಳುವುದು, ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಹೇಳಿದರೆ ಅವರು ಚೀಫ್ ಇಂಜಿನಿಯರನ್ನು ಕೇಳುವುದು ಅವರ ಬೆನ್ನ ಹಿಂದೆ, ಹೀಗೆ ಮಾಡಬಾರದು: ಈ ರೀತಿ ಅಧಿಕಾರಿಗಳಿದ್ದರೆ ದೇಶಕ್ಕೆ ಅನ್ಯಾಯವಾಗುತ್ತದೆ. ಅಧಿಕಾರಿಗಳು ಈಗಿನ ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ಹೋಗಬೇಕು. ಚಾಡಿ ಮಾತು ಕೇಳಿಕೊಂಡು, ರಾಜ ಕೀಯ ಗುಂಪುಗಳೊಡನೆ ಸೇರಿಕೊಂಡು ಎಳೆಯುವುದಕ್ಕೆ power politics ಗೆ ಇಳಿಯಬಾರದು. ಮೈನರ್ ನೀರಾವರಿ ಅಭಿವೃದ್ಧಿ ಮಾಡಬೇಕು, ಮೇಜರ್ ನೀರಾವರಿ, ಎಂದರೆ ಕೃಷ್ಣಾ, ಗೋದಾವರಿ, ಮಲಪ್ರಭಾ, ತುಂಗಾ ಇವುಗಳ ಯೋಜನೆಗಳು ಮುಂತಾದುವನ್ನು ನೋಡಿಕೊಳ್ಳಬೇಕು, ಹೆಚ್ಚಿನ ಕೆಲಸವಿದೆ ಎಂದು ಮೇಜರ್ ನೀರಾವರಿ ಕಾರ್ಯಗಳಿಗೇ ಒಬ್ಬರು ಚೀಫ್ ಇಂಜಿನಿಯರನ್ನು ನೇಮಕ ಮಾಡಿದರು. ಹೀಗೆ ಮೇಜರ್ ನೀರಾವರಿ ಚೀಫ್ ಇಂಜಿನಿಯರ್ ಎಂದು ಮಾಡಿದ ಮೇಲೆ ಇವರಿಗೆ ಬೇರೆ ಇಲಾಖೆಯ ಜವಾಬ್ದಾರಿಯನ್ನೇಕೆ ಕೊಡಬೇಕು. ಯಾವ ಶಾಲೆಯಲ್ಲಿ ಎಷ್ಟೆಷ್ಟು ವಿದ್ಯಾರ್ಥಿ ಗಳು ಓದುತ್ತಿದ್ದಾರೆ, ಯಾವ ಲೆಕ್ಚರರನ್ನು ಎಲ್ಲಿಗೆ ವರ್ಗಮಾಡಬೇಕು ಎಂಬುದನ್ನೆಲ್ಲಾ ನೋಡಿ ಕೊಳ್ಳಲು ಟೆಕ್ನಿಕಲ್ ಎಜ್ಯುಕೇಷನ್ ಡೈರೆಕ್ಟರಾಗಿ ಮಾಡಿ ಈ ಕೆಲಸವನ್ನು ಅವರಿಗೇ ಕೊಟ್ಟರೆ ಹೇಗಾಗುತ್ತದೆ? ಈ ಕೆಲಸವನ್ನೂ ಪೂರ್ತಿಮಾಡುವ ಹಾಗಿಲ್ಲ, ಆ ಕೆಲಸವನ್ನೂ ಪೂರ್ತಿ ಮಾಡುವ ಹಾಗಿಲ್ಲ, ಹೀಗಾಗಿದೆ. ಯಾವ ಮನುಷ್ಯನಿಗೆ ಒಂದು ನಿರ್ದಿಷ್ಟವಾದ ಕೆಲಸವನ್ನು ವಹಿಸಿದ್ದಾರೋ ಅದನ್ನು ಸರಿಯಾಗಿ ಮಾಡಲು ಸರ್ಕಾರದವರೇ ಹೀಗೆ ಅಡ್ಡಿಮಾಡುತ್ತಿದ್ದಾರೆ. ಮೈನರ್ ನೀರಾವರಿ ಚೀಫ್ ಇಂಜಿನಿಯರ್, ಮೇಜರ್ ನೀರಾವರಿ ಚೀಫ್ ಇಂಜಿನಿಯರ್ ಎಂದು ನೇಮಕ ಮಾಡಿದ ಮೇಲೆ ಅವರಿಗೆ ಬೇರೆ ಕೆಲಸಗಳನ್ನು ಕೊಡಬಾರದು. ಎಷ್ಟು ಕಾಲದಲ್ಲಿ ನೀರಾವರಿ ಕಾರ್ಯವನ್ನು ಜಯಪ್ರದವಾಗಿ ಮಾಡಬೇಕೆಂಬ ಉದ್ದೇಶವನ್ನಿಟ್ಟು ಕೊಂಡಿದ್ದಾರೋ ಅದಕ್ಕೆ ದಾರಿ ಮಾಡಬೇಕು. ಒಬ್ಬನು ಮಾಡಬಹುದಾದಷ್ಟು ಕೆಲಸಕ್ಕಿಂತ ಹೆಚ್ಚು ಕೆಲಸವನ್ನು ಕೊಟ್ಟು ಎಲ್ಲ ಕೆಲಸಗಳನ್ನೂ ಕುಂಠಿತ ಮಾಡಬಾರದು. ಮೇಜರ್ ನೀರಾವರಿ ಚೀಫ್ ಇಂಜಿನಿಯರು ಕೃಷ್ಣಾ, ಗೋದಾವರಿ, ಮಲಪ್ರಭಾ ಮುಂತಾದ ಯೋಜನೆಗಳ ಅಭಿವೃದ್ಧಿಗೆ ಗಮನಕೊಟ್ಟು ಪ್ರತಿಯೊಂದು ಹನಿ ನೀರನ್ನೂ ಉಪಯೋಗ ಮಾಡಿ ನೀರಾವರಿ ಸಮಸ್ಯೆಯನ್ನು ನಿವಾರಿಸುವ ಕಡೆ ಗಮನಕೊಡಬೇಕು. ಈ ದೃಷ್ಟಿ ಯಿಂದ, ಮೇಜರ್ ನೀರಾವರಿ ಚೀಫ್ ಇಂಜಿನಿಯರಿಂದ ಟೆಕ್ನಿಕಲ್ ಶಿಕ್ಷಣದ ಡೈರೆಕ್ಟರ ಕೆಲಸವನ್ನು ತಪ್ಪಿಸಬೇಕು. ಈ ಸ್ಥಾನವನ್ನು ಯಾರಿಗೆ ಕೊಡಬೇಕೆಂಬ ವಿಚಾರವನ್ನು ನಾನು ಹೇಳುತ್ತಿಲ್ಲ. ಕೃಷ್ಣಾ, ಗೋದಾವರಿ ಮುಂತಾದ ದೊಡ್ಡ ದೊಡ್ಡ ನದಿಗಳ ನೀರಿನ ಉಪಯೋಗದ ಬಗ್ಗೆ ಯೋಜನೆ ಗಳ ಸರ್ವೆ ಮತ್ತು ಅಂದಾಜು ಇವುಗಳನ್ನು ಮಾಡತಕ್ಕ ಕಾರ್ಯ ಕುಂಠಿತವಾದರೆ ತುಂಗಭದ್ರಾ,

ಮಲಪ್ರಭಾ ಮುಂತಾದ ದೊಡ್ಡ ಯೋಜನೆಗಳು ತೀವ್ರವಾಗಿ ಆಗಬೇಕು, ಆಗಿಲ್ಲ ಎಂದು ಹೇಳಿ ಕೊಂಡು ಹೋದರೆ ಅದು ಬರಿಯ ಬಾಯಿ ಮಾತಾಗುತ್ತದೆ. ಆದುದರಿಂದ ಪ್ರತ್ಯೇಕ ಮೇಜರ್ ನೀರಾವರಿ ಚೀಫ್ ಇಂಜಿನಿಯರು ತಮ್ಮ ಕೆಲಸವನ್ನು ಯಶಸ್ವಿಯಾಗಿ ಮಾಡುವಂತಿರಬೇಕು.

ಮೈನರ್ ನೀರಾವರಿ ಚೀಫ್ ಇಂಜಿನಿಯರ ಕಚೇರಿಯಲ್ಲಿ ಎಷ್ಟೋ ವರ್ಷಗಳಿಂದ ಅನೇಕ ಫೈಲ್‌ಗಳು ಕೊಳೆಯುತ್ತಿವೆ. ಅಲ್ಲಿ ಏನಾದರೂ ಕೆಲಸ ಕಾರ್ಯಗಳಾಗುತ್ತಿವೆಯೆ, ಫೈಲ್‌ಗಳು ಬೇಗ ತೀರ್ಮಾನವಾಗುತ್ತಿವೆಯೆ ಎಂಬುದನ್ನು ವಿಮರ್ಶೆ ಮಾಡಬೇಕು. ಅಲ್ಲಿಗೇನಾದರೂ ಫೈಲ್ ಗಳು ಹೋದರೆ ಹೊರಗೇ ಬರುವುದಿಲ್ಲ, ಯಾವ ಕೆಲಸವೂ ಆಗುವುದಿಲ್ಲ. ಅಲ್ಲಿ ಕೆಲವರು ಕದೀಮರು ಬೇರೂರಿದ್ದಾರೆ, ಅವರನ್ನು ಸ್ಥಳಪಲ್ಲಟ ಮಾಡಿದರೆ ಕೆಲಸ ಸರಿಯಾಗಿ ನಡೆಯುತ್ತದೆಂದು ಕಾಣು ತ್ತದೆ. ಜಿಲ್ಲಾಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಒಂದು ಸ್ಥಳದಲ್ಲಿ ಎರಡು ಮೂರು ವರ್ಷಕ್ಕೆ ಮೇಲ್ಪಟ್ಟು ಇರಬಾರದೆಂದು ಮಾಡಿದ್ದಾರೆ. ಆದರೆ ಮೈನರ್ ನೀರಾವರಿ ಚೀಫ್ ಇಂಜಿನಿ ಯರ ಕಚೇರಿಯಲ್ಲಿ ಕೆಲವರು ಹತ್ತು ವರ್ಷಗಳಿಂದ ಅಲ್ಲೇ ಇದ್ದಾರೆ, ಇದನ್ನು ಮುಖ್ಯಮಂತ್ರಿ ಗಳೂ ಚೀಫ್ ಇಂಜಿನಿಯರೂ ಯೋಚನೆ ಮಾಡಬೇಕು. ಆ ಕಚೇರಿಯಲ್ಲಿ ಒಂದು ಅಭ್ಯಾಸ ಬೆಳೆದು ಬಂದಿದೆ. ಪೂರ್ವಕಾಲದಲ್ಲಿ 'ಬ್ಯೂರೋ ಕ್ರಾಟಿಕ್' ಸರ್ಕಾರವಿದ್ದಾಗ ಅನುಸರಿಸುತ್ತಿದ್ದ ನೀತಿ ಯನ್ನೇ ಅನುಸರಿಸುತ್ತಿದ್ದಾರೆ. ಅದಕ್ಕೆ ತರ್ಪಣಕೊಟ್ಟು ಹೊಸ ಮಾರ್ಗವನ್ನು ಕಂಡು ಹಿಡಿದು, ಶೀಘ್ರವಾಗಿ ಜನರ ಆಕಾಂಕ್ಷೆ ಈಡೇರುವುದಕ್ಕೆ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಸಧ್ಯದಲ್ಲೇ ವಿದ್ಯುಚ್ಛಕ್ತಿಯನ್ನು ಬೇಕಾದಷ್ಟು ಕೊಟ್ಟುಬಿಡುತ್ತೇವೆ ಎಂದು ಹೇಳುತ್ತಾರೆ. ಆದರೆ ವಿದ್ಯುಚ್ಛಕ್ತಿಗೆ ಬಡ್ಜೆಟ್‌ನಲ್ಲಿ ಎರಡೂವರೆ ಕೋಟಿ ರೂಪಾಯಿ ಕಡಮೆ ಇಟ್ಟಿದ್ದಾರೆ. ಹೋದ ವರ್ಷಕ್ಕಿಂತ ಈ ಸಾರಿ ಇಷ್ಟು ಕಡಮೆಕೊಟ್ಟು ಏಪ್ರಿಲ್, ಮೇ ಹೊತ್ತಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಸಪ್ಲಿಮೆಂಟರಿ ಗ್ರಾಂಟಿಗಾಗಿ ನಮ್ಮ ಮುಂದೆ ಬರುತ್ತಾರೋ ಏನೋ. ಶರಾವತಿ ಯೋಜನೆ ಒಂದು ದೊಡ್ಡ ಕತೆ. ಇದರಲ್ಲಿ ಮುಖ್ಯಮಂತ್ರಿಗಳನ್ನು ಚಿತ್ರಿಸದೇ ಹೋದರೂ, ಇದರಲ್ಲಿ ಏನಾಗಿದೆಯೆಂಬುದನ್ನು ಈಗಿನ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ದಿನದಿಂದಲೂ ಹೇಳುತ್ತಿದ್ದೇವೆ. ಇದರ ಕಾರ್ಯತ್ವರಿತವಾದ ವೇಗದಲ್ಲಿ ನಡೆಯುತ್ತಿಲ್ಲ. ತ್ವರಿತವಾಗಿ ಕೆಲಸನಡೆಯದಿರುವುದಕ್ಕೆ ಕಾರಣ ಕಂಟ್ರಾಕ್ಟರುಗಳ ಅಶಕ್ತತೆ, ಅನುಭವ ಸಾಲದಿರು ವಿಕೆ ಅಥವಾ ಸರ್ಕಾರ ವಶೀಲಿ ಬಾಜಿಗೆ ಸಿಕ್ಕಿರುವುದು ಅಥವಾ ಅವರ ಜೇಬಿನಲ್ಲಿ ನೀವು ಅಥವಾ ನಿಮ್ಮ ಜೇಬಿನಲ್ಲಿ ಅವರು ಸಿಕ್ಕಿಬಿದ್ದಿರುವುದು ಎಂಬ ಅನುಕೂಲವಿದೆ. ಒಮ್ಮೆ ಇಷ್ಟು ಹಣಕೊಟ್ಟಿದೆ, ಒಪ್ಪಂದವಾಗಿದೆ, ಮುಂದೆ ತೊಂದರೆಯಾಗುವುದಿಲ್ಲ ಎಂದು ಹೇಳಿದರು. ನಾವು ಒಕ್ಕೊರಳಿನಿಂದ ಹೇಳುವುದು ಕಂಟ್ರಾಕ್ಟರುಗಳಿಗೆ ಹಣ ಹೆಚ್ಚಾಗಿಕೊಡುವುದು ಮುಂತಾದ ಕ್ರಮವೇನು ಕೈಕೊಂಡಿದೆ ಅದು ಸ್ವಲ್ಪ ಸರಿಯಾಗಿಲ್ಲ. ಆ ವಿಚಾರದಲ್ಲಿ ಈ ಸಭೆಗಿರುವ ಅನುಮಾನವನ್ನು ಪರಿಹಾರಮಾಡ ಬೇಕು ಎಂದು ಕೇಳಿಕೊಳ್ಳುತ್ತೇನೆ. ಇದುವರೆಗೆ ಎಷ್ಟೋ ಸಲ ಈ ವಿಚಾರ ಹೇಳಿದರೂ ಸರಿಯಾಗಿ ಗಮನ ಕೊಟ್ಟಿಲ್ಲ. ತಮ್ಮ ಪಕ್ಷದ ಹಿಂದಿನ ಕಂದಾಯ ಮಂತ್ರಿಗಳೇ ಶರಾವತಿ ವಿಷಯದಲ್ಲಿ ಜನರ ಲ್ಲೇನೋ ಅನುಮಾನವಿದೆ, ಮಾಡಬಾರದ್ದನ್ನು ಸರ್ಕಾರ ಮಾಡಿದೆ ಎಂಬ ಶಂಕೆಯಿದೆ ಅದನ್ನು ಜಾಗ್ರತೆ ಪರಿಹಾರ ಮಾಡಬೇಕು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಮೌನವಾಗಿರು ವುದರಿಂದ ಜನತೆಯ ಅನುಮಾನಕ್ಕೆ ಬೆಂಬಲ ಕೊಟ್ಟಂತಾಗುತ್ತದೆ. ಈಗ ಹಿರಿಯರಾದ ಮೈಸೂರು ರಾಜಕಾರಣಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಈ ವಿಚಾರವನ್ನು ಪರಿಶೀಲಿಸಬೇಕು. ತಪ್ಪಿಲ್ಲದಿದ್ದರೆ ಯಾವ ಎಂಕ್ವೈರಿಗಾದರೂ ತಾವು ಸಿದ್ಧರಾಗಿ ಒಂದು ದಿಟ್ಟ ಹೆಜ್ಜೆಯನ್ನಿಡಬೇಕು. ಇಲ್ಲದಿದ್ದರೆ ಶರಾವತಿ ಯೋಜನೆಯ ಸಂಬಂಧದಲ್ಲಿ ಲಂಚತೆಗೆದು ಕೊಂಡರು, ದುಡ್ಡು ಹೊಡೆದರು, ಹಾಗಾಯಿತು, ಹೀಗಾಯಿತು ಎಂದು ಜನರು ಮುಂದೆ ಕೂಡ ಮಾತನಾಡಿಕೊಳ್ಳಲು ಅವಕಾಶವಾಗುತ್ತದೆ. ಅದಕ್ಕೆ ಅವಕಾಶವಿಲ್ಲದಂತೆ ಈ ಬಗ್ಗೆ ಸೂಕ್ತ ಗಮನ ಕೊಟ್ಟು ಉತ್ತರ ಹೇಳುವಾಗ ಸರಿಯಾಗಿ ಜವಾಬುಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಮಂಗಳೂರು ಬಂದರಿಗೆ ಹಣ ತರುತ್ತೇವೆ, ಕೇಳಿದಷ್ಟು ಹಣಕೊಡುತ್ತಾರೆ ಎಂದು ಹೇಳಿದ್ದರು. ಆದರೆ ಬಡ್ಜೆಟ್ಟಿನಲ್ಲಿ ಮಂಗಳೂರಿನ ಬಂದರಿಗೆ ಹಣ ಒದಗಿಸಿಲ್ಲ. ಬಂದರಿನ ಅಭಿವೃ ದ್ಧಿಗೆ, ಕೋಸ್ಟಲ್ ಲೈನ್ ಡೆವಲಪ್‌ಮೆಂಟಿಗೆ ಎಷ್ಟು ಹಣ ಒದಗಿಸುತ್ತಾರೆ, ಕೇಂದ್ರ ಸರ್ಕಾರ ಎಷ್ಟು ಕೊಡುವುದು, ಯಾವ ರೀತಿ ಇದನ್ನು ತ್ವರಿತಗೊಳಿಸುತ್ತೀರಿ ಎಂದು ಉತ್ತರ ಹೇಳುವಾಗ ತಿಳಿಸಬೇಕು ಎಂದು ಪ್ರಾರ್ಥಿಸಿ ಇಷ್ಟು ಕಾಲಾವಕಾಶಕೊಟ್ಟ ಅಧ್ಯಕ್ಷರಿಗೆ ಕೃತಜ್ಞತೆಯನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ ಅಧ್ಯಕ್ಷರೆ, ಈ ದಿವಸ ನಮ್ಮ ಮುಂದಿ ಟ್ಟಿರುವ ಸಾರ್ವಜನಿಕ ಕಾಮಗಾರಿಗಳು, ಸಣ್ಣ ನೀರಾವರಿ ಕಾಮಗಾರಿಗಳು, ದೊಡ್ಡ ದೊಡ್ಡ

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಇರಿಗೇಷನ್ ಕಾಮಗಾರಿಗಳು ಮುಂತಾದುವುಗಳಿಗೆ ಸಂಬಂಧಿಸಿದ ಡಿಮ್ಯಾಂಡನ್ನು ಸ್ವಾಗತಿಸುತ್ತೇನೆ. ಇದಕ್ಕಾಗಿ 61 ಕೋಟಿ ರೂಪಾಯಿಗಳ ಹಣ ಕೊಟ್ಟಿರುವುದು ಕಡಮೆ. ಇನ್ನೂ ಹೆಚ್ಚು ಹಣವನ್ನು ಈ ಅಭಿವೃದ್ಧಿ ಕಾರ್ಯಗಳಿಗೆ ಕೊಡಬೇಕಾಗಿತ್ತು. ದೇಶದಲ್ಲಿ ರಸ್ತೆಗಳು, ಸೇತುವೆಗಳು, ದೊಡ್ಡ ದೊಡ್ಡ ಅಣೆಕಟ್ಟುಗಳು, ವಿದ್ಯುಚ್ಛಕ್ತಿ ಯೋಜನೆ, ಅಗತ್ಯವಾಗಿ ಸರ್ಕಾರಕ್ಕೆ ಬೇಕಾಗಿರುವ ಕಟ್ಟಡಗಳು, ಹೀಗೆ ರಾಜ್ಯದಲ್ಲಿ ಅತಿ ಮುಖ್ಯವಾಗಿ ಮಾಡಬೇಕಾದ ಕೆಲಸಗಳನ್ನು ಲೋಕೋಪಯೋಗಿ ಎಂಬ ಹೆಸರುಳ್ಳ ಲೋಕವನ್ನೇ ಅಭಿವೃದ್ಧಿಪಡಿಸುವ ಇಲಾಖೆಯು ವಹಿಸಿಕೊಂಡು ದಕ್ಷತೆಯಿಂದ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ಸ್ವಾತಂತ್ರ್ಯ ಗಳಿಸಿದ ನಂತರ 15 ವರ್ಷಗಳ ಕಾಲದಲ್ಲಿ ಈ ಇಲಾಖೆಯು ಪ್ರಾಮುಖ್ಯವಾಗಿ ಜನರಿಗೆ ಎದ್ದು ಕಾಣುವಂತೆ ಸಾಧನೆಯನ್ನು ಮಾಡಿಕೊಂಡು ಬಂದಿದೆ. ನಮ್ಮ ರಾಜ್ಯದಲ್ಲಿರುವ ಇಂಜನಿಯರುಗಳು ಬಹಳ ಶ್ರೇಷ್ಠ ದರ್ಜೆಯವರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಕೆಲವರು ಕೆಟ್ಟವರಿರಬಹುದು. ಹಿಂದಿನ ಕಾಲದಲ್ಲಿದ್ದ ಮಿರ್‌ಸಾದಕ್ ನಂಥವರು ಕೆಲವರಿರಬಹುದು. ಹಾಗಿದ್ದ ಮಾತ್ರಕ್ಕೆ ಲೋಕೋಪಯೋಗಿ ಇಲಾಖೆಯನ್ನೇ ದೂರುವುದು ಅಷ್ಟು ಸೂಕ್ತವಲ್ಲ. ಕಳೆದ 15 ವರ್ಷಗಳಲ್ಲಿ ರಾಜ್ಯದಲ್ಲಿರುವ ಇಂಜನಿಯರುಗಳು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ನಿರ್ಮಿಸಿದ್ದಾರೆ. ಈಗಾಗಲೆ ಅವುಗಳಿಂದ ಪ್ರತಿಫಲ ದೊರೆಯುತ್ತಿದೆ. ಉದಾಹರಣೆ ಹೇಳುವುದಾದರೆ ಇಲ್ಲಿರುವ ವಿಧಾನಸೌಧವೇ ಸಾಕ್ಷಿ. ಈ ಇಲಾಖೆಯು ಇನ್ನೂ ದಕ್ಷತೆಯಿಂದ ಕೆಲಸ ಮಾಡಬಹುದು. ನೀರಾವರಿ ಕೆಲಸಗಳನ್ನು ಅತಿಮುಖ್ಯವಾಗಿ ಗಮನಿಸಬೇಕಾದ್ದು ಸರ್ಕಾರದ ಕರ್ತವ್ಯ. ಈ ನೀರಾವರಿ ಪ್ರದೇಶಗಳಲ್ಲಿ ನೀರಿನ ಒತ್ತಡ ಜಾಸ್ತಿಯಾಗಿ ಜಮೀನಿನ ಬಳಿಗೆ ಹೋಗಿಬರಲು ತುಂಬಾ ಕಷ್ಟವಾಗಿರುತ್ತದೆ. ದನಕರುಗಳು, ಗಾಡಿಗಳು ಹೋಗಿಬರಬೇಕಾಗಿದೆ, ನೀರಿನ ಸೌಕರ್ಯಕ್ಕೆ ತಕ್ಕ ಹಾಗೆ ರಸ್ತೆಗಳು, ಸೇತುವೆಗಳು ಮುಂತಾದುವನ್ನು ಮಾಡಿದರೆ ಒಳ್ಳೆಯ ಹೆಸರು ಬರುತ್ತದೆ. ಆದುದರಿಂದ ಸರ್ಕಾರ ನೀರಾವರಿ ಪ್ರದೇಶಗಳಿರುವಕಡೆ ಅತಿ ಮುಖ್ಯವಾಗಿ ರಸ್ತೆ ಮತ್ತು ಸಣ್ಣ ಸಣ್ಣ ಸೇತುವೆಗಳನ್ನು ನಿರ್ಮಿಸಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಪ್ರದೇಶದಲ್ಲಿ ಭದ್ರ ಪ್ರಾಜೆಕ್ಟ್ ಮತ್ತು ತುಂಗಭದ್ರ ಪ್ರಾಜೆಕ್ಟುಗಳ ಕೆಲವು ಭಾಗಗಳಲ್ಲಿ ರಸ್ತೆ ಮತ್ತು ಸೇತುವೆ ಸೌಕರ್ಯಕ್ಕಾಗಿ ಸರ್ಕಾರಕ್ಕೆ ಅಂದಾಜನ್ನು ಕಳುಹಿಸಿದ್ದಾರೆ. ಅದರ ಮೊಬಲಗು 8,50,000 ರೂಪಾಯಿಗಳು. ಅದನ್ನು ಕಳುಹಿಸಿ ಬಹಳ ದಿವಸಗಳಾಯಿತು; ಸರ್ಕಾರಿ ಲೆವಲ್‌ನಲ್ಲಿದೆ ತುರ್ತುಪರಿಸ್ಥಿತಿ ಆದಕ್ಕೆ ಅನ್ವಯಿಸಬಾರದು. ಅತಿ ಮುಖ್ಯವಾದ ಕೆಲಸವಾಗಿರುವುದರಿಂದ ಅದನ್ನು ಮಂಜೂರುಮಾಡಿ ಕೆಲಸ ಮಾಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಪ್ರಾರ್ಥನೆಮಾಡುತ್ತೇನೆ.

ಹಾಗೆಯೇ ಶರಾವತಿ ಯೋಜನೆಯಿಂದ ಮುಳುಗಡೆಹೊಂದುವ ಗ್ರಾಮಗಳ ವಿಷಯವೂ ಕೂಡ ಅಷ್ಟೇ ಮುಖ್ಯವಾಗಿದೆ. ಮತ್ತು ಭದ್ರಜಲಾಶಯ ಮತ್ತು ತುಂಗಾಜಲಾಶಯ ಇವುಗಳ ಕೆಳಗಿರುವ ಅನೇಕ ಗ್ರಾಮಗಳ ಸ್ಥಳ ಬದಲಾವಣೆ ಕೂಡ ಮಾಡಬೇಕಾಗಿದೆ. ಸರ್ಕಾರ ಇದಕ್ಕೆ ಜಾಗ್ರತೆ ಗಮನ ಕೊಡಬೇಕಾಗಿದೆ. ಸುಮಾರು ಆರೇಳು ವರ್ಷಗಳಾದರೂ ವರ್ಗಾವಣೆ ಕೆಲಸವಾಗಿಲ್ಲ. ಸಂಬಂಧಪಟ್ಟವರಿಗೆ ಪರಿಹಾರ ಕೊಡುವುದೂ ತಡವಾಗುತ್ತಿದೆ. ವರ್ಗಾವಣೆ ಆಗುವ ಗ್ರಾಮಗಳಿಗೆ ಎಷ್ಟು ಬೇಗ ಪರಿಹಾರಕೊಟ್ಟರೆ ಅಷ್ಟು ಬೇಗ ಸ್ಥಳ ಬಿಡುವರು. ಆ ದೆಸೆಯಿಂದ ಶರಾವತಿ ಯೋಜನೆಯಿಂದ ಮುಳುಗಡೆಯಾಗುವ ಗ್ರಾಮಗಳು ಮತ್ತು ಪುನರ್ವಸತಿಯ ಗ್ರಾಮಗಳ ಬಗ್ಗೆ ತಕ್ಷಣ ಗಮನಕೊಟ್ಟು ಬೇರೆ ಒಳ್ಳೆಯ ಸ್ಥಳಗಳಿಗೆ ಜನರು ಹೋಗಲು ಯೋಗ್ಯ ವ್ಯವಸ್ಥೆ ಮಾಡ ಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

2-30 P.M.

ಸ್ವಾಮಿ, ಏನೇ ಆದರೂ ಕೆಲವು ರಸ್ತೆಗಳನ್ನು ಮಾಡಬೇಕು ಎಂದಾಗ ಪಬ್ಲಿಕ್ ವರ್ಕ್ಸ್ ಮಿನಿಸ್ಟರು ಏನು ಮಾಡುವುದು ಹಣವಿಲ್ಲ, ನಾವು ಹೇಗೆ ಮಾಡಬೇಕು ಬಹಳ ಕಷ್ಟ ಪರಿಸ್ಥಿತಿ ಬಂದಿದೆ ಎಂದು ಹೇಳುತ್ತಾರೆ. ಬಹಳ ದಿವಸದ ಹಿಂದೆ ಸರ್ಕಾರದವರು ಕೆಲಕೆಲವು ರಸ್ತೆಗಳನ್ನು ಸ್ಟೇಟ್ ಫಂಡ್ ರಸ್ತೆ ಆಗಿ ತೆಗೆದುಕೊಂಡಿದ್ದಾರೆ. ಉದಾಹರಣೆಗೆ ಭದ್ರಾವತಿಯಿಂದ ಕೇವಲ ಮೂವತ್ತು ಮೈಲಿಯಲ್ಲಿರುವ ಶಿವನಿ ರೈಲ್ವೇಸ್ಟೇಷನ್‌ಗೆ ಸೇರತಕ್ಕ ಒಂದು ಹೊಸ ರಸ್ತೆ ಸ್ಟೇಟ್ ಫಂಡ್ ರಸ್ತೆಯಾಗಿ ಇಟ್ಟುಕೊಂಡು ಸ್ವಲ್ಪ ಕೆಲಸ ಮಾಡಿದ್ದಾರೆ. ಈಗ ಇಲಾಖೆಯವರನ್ನು ಕೇಳಿದರೆ ಹಣ ಇಲ್ಲ ಎಂದು ಹೇಳುತ್ತಾರೆ. ಹೀಗೆ ಅತಿ ಮುಖ್ಯವಾಗಿರತಕ್ಕ ರಸ್ತೆಗಳನ್ನು ತೆಗೆದುಕೊಂಡು ಅಲ್ಲಿ ಸ್ವಲ್ಪ ದುಡ್ಡು ಹಾಕಿ, ಖರ್ಚು ಮಾಡಿ, ಬಾಕಿ ಉಳಿದ ಹಣವನ್ನು ಖರ್ಚು ಮಾಡಿ ರಸ್ತೆ ಪೂರೈಸದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ಆ ದೆಸೆಯಿಂದ ದಯವಿಟ್ಟು ಈ ರಸ್ತೆಯನ್ನು ಕೂಡ ಮಾಡಿಸತಕ್ಕ

ವ್ಯವಸ್ಥೆ ಮಾಡಬೇಕು. ಹೀಗೆಯೇ ಶಿವಮೊಗ್ಗ ಜೈಲಿನಿಂದ ತ್ಯಾಜವಳ್ಳಿ ಮೇಲೆ ಚೈವಳಂಗಕ್ಕೆ ಹೋಗುವ ರಸ್ತೆ ಮುಖ್ಯವಾದದ್ದು ಅದನ್ನು ಕೂಡ ಸ್ಟೇಟ್ ಫಂಡ್ ರಸ್ತೆಯಾಗಿ ತೆಗೆದುಕೊಂಡು ಸ್ವಲ್ಪ ಕೆಲಸ ಮಾಡಿದ್ದಾರೆ. ಉಳಿದಿರತಕ್ಕ ಕೆಲಸ ಪೂರೈಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ಭದ್ರಾ ಪ್ರಾಜೆಕ್ಟಿನ ಕೆಳಭಾಗದಲ್ಲಿ ಹಿಂದೆ ಇದೇ ಸಭೆಯಲ್ಲಿ ಮುಖ್ಯಮಂತ್ರಿಗಳು ರಂಗೋಲಿ ಹಳ್ಳದ ಪ್ರಶ್ನೆ ಬಂದಾಗ ಮಂಜೂರಾಗಿದೆ ತಕ್ಷಣದಲ್ಲೇ ಕೆಲಸ ಷುರು ಮಾಡುತ್ತೇವೆ ಎಂದು ಹೇಳಿದರು. ಇದುವರೆಗೂ ಯಾವ ಕಾರ್ಯಕ್ರಮವೂ ಆಗಿಲ್ಲ. ರಂಗೋಲಿ ಹಳ್ಳಕ್ಕೆ ಮುಖ್ಯವಾಗಿ ಸೇತುವೆ ಆಗಬೇಕಾಗಿರುವುದು ಏಕೆಂದರೆ ಭದ್ರಾವತಿ ತಾಲ್ಲೂಕಿನಿಂದ ಹೊನ್ನಾಳಿಗೆ ಹೋಗತಕ್ಕ ರಸ್ತೆಯಲ್ಲಿ ಅದು ಒಂದು ದೊಡ್ಡ ಹಳ್ಳ ಮತ್ತು ಭದ್ರಾ ಚಾನಲ್ ಬರತಕ್ಕ ಸಂಭವ ಇರುವುದರಿಂದ ಅಲ್ಲಿ ಗಾಡಿಗಳಾಗಲೀ, ಬಸ್ಸುಗಳಾಗಲೀ, ದನಕರುಗಳಾಗಲೀ ಹೋಗುವುದಕ್ಕೆ ಬಹಳ ತೊಂದರೆಯಾಗಿದೆ. ಅಲ್ಲದೆ ಅದು ಮುಖ್ಯವಾಗಿ ಇರಿಗೇಷನ್‌ಗೆ ಸಂಬಂಧಪಟ್ಟ ಸೇತುವೆ ಅದರ ದೆಶೆಯಿಂದ ಮುಖ್ಯಮಂತ್ರಿಗಳು ತಕ್ಷಣ ಅದನ್ನು ಮಾಡಿಸಿಕೊಡಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದೇ ರೀತಿ ಲೋಕೋಪಯೋಗಿ ಶಾಖೆಗೆ ಸೇರಿರತಕ್ಕ ಒಂದು ಹಳ್ಳ ಎಂದರೆ ಕಾಗೆ ಹಳ್ಳ. ಬಹಳ ದಿವಸದಿಂದ ಬಡ್ಜೆಟ್‌ನಲ್ಲಿ ಸೇರಿರುತ್ತಿತ್ತು. ಈ ಬಡ್ಜೆಟ್‌ನಲ್ಲಿ ಬಿಟ್ಟುಹೋಗಿದೆ. ಇದು ಅತಿ ಮುಖ್ಯವಾದ ಸೇತುವೆ. ಇದನ್ನು ಕೂಡ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಸ್ವಾಮಿ ಮುಖ್ಯವಾದ ಕೆಲಕೆಲವು ಯೋಜನೆಗಳು ಮಂಜೂರಾಗಿ ಕೆಲವಾರು ವರ್ಷಗಳಾಗಿ ಸ್ಥಳದ ಇಲಾಖೆಯವರಿಂದ ತಡವಾಗುತ್ತಾ ಇದೆ. ಹಣ ಲ್ಯಾಪ್ಸ್ ಆಗುತ್ತಿದೆ. ಕೆಲಸ ಆಗುವುದಿಲ್ಲ. ಏನು ಲೋಪದೋಷವಿದೆ ಎಂಬುದನ್ನು ಮಂತ್ರಿಗಳು ಮತ್ತು ಮುಖ್ಯ ಇಂಜಿನಿಯರುಗಳು ಯೋಚನೆ ಮಾಡಬೇಕು. ಸ್ಥಳದಲ್ಲಿ ಕೆಲವು ಸಣ್ಣ ಸಣ್ಣ ಮತ್ತು ಸ್ವಲ್ಪ ಮಟ್ಟದ ದೊಡ್ಡ ಅಧಿಕಾರಿಗಳು ಈ ಕೆಲಸಗಳನ್ನು ಪೂರ್ತಿ ಮಾಡಿಸತಕ್ಕವರ ಬಗ್ಗೆ ತಾವು ವಿಚಾರಣೆ ನಡೆಸಬೇಕು. ಏನು ಕಾರಣದಿಂದ ತಡವಾಗಿದೆ, ಯಾರು ಅಸಡ್ಡಾಳತನ ಮಾಡಿದರು, ಅಸಿಸ್ಟೆಂಟ್ ಇಂಜಿನಿಯರಾಗಲೀ, ಸಬ್ ಓವರ್ಸೀಯರಾಗಲೀ, ಎಕ್ಸಿಕ್ಯೂಟಿವ್ ಇಂಜಿನೀಯರಾಗಲೀ, ಸೂಪರಿಂಟೆಂಡಿಂಗ್ ಇಂಜಿನಿಯರಾಗಲೀ ಯಾರು ಕಾರಣಕರ್ತರು ಎಂದು ಶೋಧನೆ ಮಾಡಿ ಅವರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದು ಚೀಫ್ ಇಂಜಿನಿಯರ ಕರ್ತವ್ಯ ಮತ್ತು ಸರ್ಕಾರದ ಕರ್ತವ್ಯ. ಉದಾಹರಣೆಗೆ ಹೇಳುವುದಾದರೆ ಸೆಂಟರ್‌ನಿಂದ ಮಂಜೂರಾಗಿರುವ ಭದ್ರಾವತಿ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್‌ಗೆ ಕಟ್ಟಡ ಮಂಜೂರಾಗಿ 3 ವರ್ಷವಾಯಿತು. 6 ಲಕ್ಷ ರೂಪಾಯಿ ಮಂಜೂರಾಗಿತ್ತು ಎಂದು ಕೇಳಿದ್ದೇನೆ. ಅಲ್ಲಿ ಜಾಗವನ್ನು ಸುಮಾರು 10 ಸಾವಿರ ರೂಪಾಯಿ ಕೊಟ್ಟು ಅದು ಫಸ್ಟ್‌ಕ್ಲಾಸ್ ತರೀ ಜಮೀನು ಇಲಾಖೆಯವರು ಆಕ್ವೈರ್ ಮಾಡಿಕೊಂಡು ಸುಮಾರು 1½ ವರ್ಷವಾದರೂ ಕೂಡ ಆ ಕಟ್ಟಡ ಇದುವರೆಗೂ ಕಟ್ಟಿಲ್ಲ. ಇದಕ್ಕೆ ಅಲ್ಲಿನ ಸೂಪರಿಂಟೆಂಡಿಂಗ್ ಇಂಜಿನಿಯರೇ ಕಾರಣ ಕರ್ತರು ಎಂದು ನಾನು ಕೇಳಿದ್ದೇನೆ. ದಯವಿಟ್ಟು ಸರ್ಕಾರದವರು ಮತ್ತು ಚೀಫ್ ಇಂಜಿನಿಯರು ಇದನ್ನು ಪರಿಶೀಲನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

ಸ್ವಾಮಿ ಈ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆ ಎಂದು ನಾನು ಮುಂಚಿತವಾಗಿಯೇ ಹೇಳಿದ್ದೇನೆ. ಈ ಇಲಾಖೆಗೆ ಹಣ ಬೇಕು. ಎಷ್ಟೇ ಕಷ್ಟ ಇದ್ದರೂ ಕೂಡ ನಮ್ಮ ರಾಜ್ಯ ಅಭಿವೃದ್ಧಿ ಹೊಂದಬೇಕಾದರೆ ಪ್ರತಿ ಮೂಲೆ ಮೂಲೆಯಲ್ಲೂ ಕೂಡ ಸಣ್ಣ ಸಣ್ಣ ನೀರಾವರಿ ಅಣೆಕಟ್ಟುಗಳು ಆಗಬೇಕಾದ್ದು ಬಹಳ ಅವಶ್ಯಕ. ಅದನ್ನು ಮಾಡಬೇಕಾದ್ದು ನಮ್ಮ ಕರ್ತವ್ಯ. ಹೆಚ್ಚು ಆಹಾರ ಬೆಳೆದು ನಾವು ಸಮೃದ್ಧಿಯಾಗಬೇಕಾದರೆ ಮುಖ್ಯವಾದ ಈ ಅಣೆಕಟ್ಟುಗಳು ಆಗಲೇಬೇಕು. ಶ್ರೀಮಾನ್ ಮುಕ್ಕಣ್ಣಪ್ಪನವರು, ಹಣ ಖೋತ ಇದೆ. ಮುಖ್ಯವಾದ ಯೋಚನೆಗಳನ್ನು ಸಾಲವಾದರೂ ಸರ್ಕಾರ ಎತ್ತಿ ಸುಮಾರು 30-40 ಕೋಟಿ ರೂಪಾಯಿಗಳ ಬಂಡವಾಳವನ್ನು ತೆಗೆದುಕೊಂಡು ಮಾಡಬೇಕೆನ್ನತಕ್ಕ ಒಂದು ಸಲಹೆ ಕೊಟ್ಟರು. ನಾನಾದರೂ ಕೂಡ ಇದು ಬಹಳ ಒಳ್ಳೆಯದು ಎಂದು ಹೇಳುತ್ತೇನೆ. ಇವತ್ತು ನಾವು ಸಾಲ ಪಡೆದುಕೊಂಡು ಸುಮಾರು 50 ಕೋಟಿ ರೂಪಾಯಿಗಳಿಂದ ಅತಿ ಮುಖ್ಯವಾದ ಕೃಷ್ಣಾ-ಗೋದಾವರಿ ಹೀಗಿರತಕ್ಕ ಅನೇಕ ಯೋಚನೆಗಳನ್ನು ಮಾಡಿದ್ದೇ ಆದರೆ ಸುಮಾರು ಹತ್ತಾರು ವರ್ಷಗಳಲ್ಲಿ ಆ ಹಣವನ್ನು ತೀರಿಸಲೂಬಹುದು. ಅದರಿಂದ ಅಲ್ಲಿರತಕ್ಕ ಜನತೆಗೆ ವ್ಯವಸಾಯಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ನಮ್ಮ ರಾಜ್ಯದ ಅಭಿವೃದ್ಧಿಯನ್ನು ಕೂಡ ಸಾಧನೆ ಮಾಡಿಕೊಳ್ಳಬಹುದು. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು ಅತಿ ಮುಖ್ಯ ವಿಚಾರ. ಇಷ್ಟು ಹೇಳಿ ನಮ್ಮಲ್ಲಿ ಮುಳುಗಡೆಗೆ ಬರತಕ್ಕ ಪ್ರದೇಶ ಇದೆ. ಆದ್ದರಿಂದ ಮುಖ್ಯಮಂತ್ರಿಗಳು, ಪಬ್ಲಿಕ್ ವರ್ಕ್ಸ್ ಮಿನಿಷ್ಟರು, ಮೈನರ್ ಇರಿಗೇಷನ್ ಮಿನಿಷ್ಟರು ಕೂಡ ಅತಿ ಮುಖ್ಯವಾದ ಮಳೆನಾಡು ಪ್ರಾಂತ್ಯಕ್ಕೆ ತಮ್ಮನಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ, ಅಧ್ಯಕ್ಷರೇ, ನಮ್ಮ ದೇಶ ಖರ್ಚು ಮಾಡುವ 100 ಕೋಟಿ ರೂಪಾಯಿಗಳ ಪೈಕಿ ಸುಮಾರು 65 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಈ ಪಬ್ಲಿಕ್ ವರ್ಕ್ಸ್ ಬಾಬಿನ ಮೇಲೆ ಮಾತನಾಡುತ್ತಾ ಇದ್ದೇನೆ. ಸ್ವಾಮಿ ಒಂದು ವಿಷಯ ಈ ಸಭೆಯಲ್ಲಿ ಮತ್ತು ದೇಶದಲ್ಲಿ ಬಹಳವಾಗಿ ಚರ್ಚೆಯಾಗುತ್ತಾ ಇದೆ. ಅದೇನೆಂದರೆ ಕೃಷ್ಣಾ-ಗೋದಾವರೀ ನೀರಿನ ಪ್ರಶ್ನೆ ಈ ಮನೆಯಲ್ಲೂ, ಹೊರಗಡೆಯೂ, ಒಳಗಡೆಯೂ ಅನೇಕ ಗೊಂದಲಕ್ಕೆಸಿಕ್ಕಿಕೊಂಡಿದೆ. ನಾನು ಅನ್ನುವುದಾದರೂ ಇಷ್ಟೆ. ನಮ್ಮ ಸ್ನೇಹಿತರಿಗೆ ಕೇಳಿದೆ. ''ಇಷ್ಟು ಗೊಂದಲಕ್ಕೆ ತುತ್ತಾಗಿ ಬಹಳ ಗೊಂದಲ ಮಾಡುತ್ತಾ ಇರುವ ಕೃಷ್ಣಾ-ಗೋದಾವರಿ ನೀರನ್ನು ಯಾವ ಡೆವಲಪ್‌ಮೆಂಟ್ ಏರಿಯಾಕ್ಕೆ ಕೇಳುತ್ತೀರಿ, ಹೈದರಾಬಾದು ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕದ ಜನಗಳಿಗೆ ಹೆಚ್ಚು ಪ್ರಯೋಜನವಾಗುತ್ತದೆ. ಅದು undeveloped ಏರಿಯಾ ಎಂದು ಹೇಳುತ್ತಾ ಇದ್ದೀರಿ. ಎಲ್ಲರೂ ಗಲಾಟೆ ಮಾಡುತ್ತಾ ಇದ್ದಾರೆ ನೀವು ಇದರ ಬಗ್ಗೆ ಏನೂ ಗಲಾಟೆ ಮಾಡುವುದು ಕಾಣುವುದಿಲ್ಲ ಸುಮ್ಮನೆ ಇದ್ದೀರಿ, ಏಕೆ ಸುಮ್ಮನೆ ಇದ್ದೀರಿ'' ಎಂದು ಆಕಡೆಯವರನ್ನು ಕೇಳಿದ್ದಕ್ಕೆ—ಅವರು ನಮಗೆ ಹೊಸಬರು—ಅವರು ಹೇಳಿದ್ದೇನೆಂದರೆ ನೋಡಿ ಅದರಲ್ಲಿ ಅರ್ಥವಿಲ್ಲ. ನಾವು ನಮ್ಮ ಲೀಡರನ್ನು ಚುನಾಯಿಸಿದ್ದೇವೆ. ಅವರ ಮಂತ್ರಿ ಮಂಡಲ ಇದೆ ಅವರ ಮೇಲೆ ನಮಗೆ ಪೂರ್ಣ ಭರವಸೆ ಇದೆ. ಅವರು ಈ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತಾರೆ ಎಂಬ ನಂಬಿಕೆ ಇದೆ. ಅದೂ ಅಲ್ಲದೇ ಅವರು ಪದೇ ಪದೇ ಒತ್ತಾಯಪೂರ್ವಕವಾಗಿ ಹೇಳುತ್ತಾ ಇದ್ದಾರೆ ನಾವು ಖಂಡಿತವಾಗಿ ಇದರಿಂದ ಏನು ಹಕ್ಕು ಬರಬೇಕೋ ಅದನ್ನು ಪಡೆಯುತ್ತೇವೆ ಇದರ ಬಗ್ಗೆ ಯಾರೂ ಸಂಶಯ ಪಡಬೇಕಾಗಿಲ್ಲ ಎಂದು ಅವರು ಹೇಳುತ್ತಾ ಇರಬೇಕಾದರೆ ಈ ಬಗ್ಗೆ ಸುಮ್ಮನೆ ಗೊಂದಲ ಮಾಡುವುದರಿಂದ ಪ್ರಯೋಜನ ವಾದರೂ ಏನು ಎಂದು, ಕೆಲವರು ಹೇಳಿದರು. ಇಷ್ಟು ಗೊಂದಲ ಮಾಡುತ್ತೀರಲ್ಲಾ ಮುಖ್ಯ ಮಂತ್ರಿಗಳನ್ನು ನಾವು ಚುನಾಯಿಸಿದವರು, ನಮ್ಮ ದೇಶದವರು, ಆಂಧ್ರದವರಲ್ಲ ಅಥವಾ ಮದರಾಸಿನವರಲ್ಲ.

ನಮ್ಮವರೇ, ಇಲ್ಲಿಯವರೇ, ಇಲ್ಲಿರತಕ್ಕ ಮೆಂಬರುಗಳೇ, ಇಲ್ಲಿಯ ಜನರ ಬಗ್ಗೆ ಕಾತುರತೆ ಇರತಕ್ಕವರೇ! ನಾವೀದಿವಸ ಇವರಿಗೆ ಈ ದೇಶದ ಜವಾಬ್ದಾರಿಯನ್ನೇ ನಾವು ನಮ್ಮವರೆಂತ ವಹಿಸಿರುವಾಗ ಅವರು ಇಡೀ ದೇಶದ ಜವಾಬ್ದಾರಿಯನ್ನೇ ಹೊತ್ತಿರುವಾಗ ಅವರಿಗೆ ಇದರ ಜವಾಬ್ದಾರಿಯಿಲ್ಲವೇ? ಇವರೆಲ್ಲರೂ ಎಂದಿದ್ದರೂ ಇಲ್ಲಿಯೇ ಇರಬೇಕು, ಇವರು ಇಲ್ಲಿಯೇ ಹುಟ್ಟಿದ್ದಾರೆ, ಇಲ್ಲೇ ಬೆಳೆದಿದ್ದಾರೆ. ಇಲ್ಲಿಯ ಜನರ ಕಷ್ಟ ಕಾರ್ಪಣ್ಯಗಳನ್ನೆಲ್ಲ ಚೆನ್ನಾಗಿ ಅರಿತಿದ್ದಾರೆ. ಹೀಗಿರು ವಾಗ ಈ ದಿವಸ ನಮ್ಮವರೇ ಆದ ಇವರು ಯಾವ ಕಾರಣಕ್ಕಾಗಿ ಆಂಧ್ರರಿಗೋ ಅಥವಾ ಮದ್ರಾಸಿ ನವರಿಗೋ ಅಥವಾ ಬೊಂಬಾಯಿನವರಿಗೋ ಒಂದು ಫೇವರಿಟಿಜಂ ತೋರಿಸುತ್ತಾರೆ?. ಅಂಥಾದ್ದಕ್ಕೆ ಸ್ವಲ್ಪವೂ ಕಾರಣವಿಲ್ಲ. ಏಕೆಂದರೆ ಇವರೆಲ್ಲರೂ ಇಲ್ಲಿಯೇ ಮೆಂಬರುಗಳಾಗಬೇಕು, ಇಲ್ಲಿಯೇ ಮಂತ್ರಿ ಗಳಾಗಬೇಕು. ಇಲ್ಲಿಯೇ ಮುಖ್ಯಮಂತ್ರಿಯಾಗಬೇಕು. ಹೀಗಿರುವಾಗ ಇವರು ಈ ದಿವಸ ಆಂಧ್ರ ದವರ ಅಥವಾ ಮದ್ರಾಸಿನವರ ಅಥವಾ ಬೊಂಬಾಯಿನವರ ಒತ್ತಾಯಕ್ಕೆ ಏಕೆ ಈಡಾಗಬೇಕು? ಇವರು ಆಂಧ್ರಕ್ಕಾಗಲೀ—ಮದ್ರಾಸಿಗಾಗಲೀ ಅಥವಾ ಬೊಂಬಾಯಿಗಾಗಲಿ ಮುಖ್ಯಮಂತ್ರಿಗಳಾಗಿ ಎಂದೂ ಹೋಗುವುದಕ್ಕಾಗುವುದಿಲ್ಲ. ಆ ರೀತಿ ಹೋಗಬೇಕೆಂಬ ಪ್ರಯತ್ನದಲ್ಲಿ ಇವರೆಂದೂ ಜಯ ಪ್ರದ ಹೊಂದುವಂತಿಲ್ಲ. ಅಂದಮೇಲೆ ನಾವೇತಕ್ಕೆ ಇವರಮೇಲೆ ವೃಥಾ ಸಂಶಯಪಡಬೇಕು? ಅಷ್ಟೇ ಅಲ್ಲದೆ ನಮ್ಮ ಮುಖ್ಯಮಂತ್ರಿಗಳು ಇಡೀ ಕರ್ಣಾಟಕಕ್ಕಾಗಿ ಹಿಂದಿನಿಂದ ಬಹಳ ಶ್ರಮಿಸಿರತಕ್ಕವರು, ಅವರಿಗೆ ದೊಡ್ಡ ಮನಸ್ಸಿದೆ, 30 ವರ್ಷಗಳ ರಾಜಕೀಯದಲ್ಲಿ ದೇಶದ ಹಿತಸಾಧನೆಗೆ ಕಷ್ಟಪಟ್ಟು ದುಡಿ ದಿದ್ದಾರೆ, ಇಡೀ ಹಿಂದೂಸ್ಥಾನದಲ್ಲೆಲ್ಲ ಒಳ್ಳೆ ಹೆಸರನ್ನು ಗಳಿಸಿಕೊಂಡಿದ್ದಾರೆ, ಅಕ್ಕಪಕ್ಕದ ರಾಜ್ಯ ಗಳಲ್ಲೂ ಹಾಗೂ ಭಾರತವಾದ್ಯಂತವೂ ಇವರಿಗೆ ಅನೇಕ ಸ್ನೇಹಿತರಿದ್ದಾರೆ, ಇಂಥವರಿಗೆ ನಾವೀದಿವಸ ಈ ಕೆಲಸವನ್ನು ಎಂಟ್ರಸ್ಟ್ ಮಾಡಿರುವಾಗ ನಾವೇಕೆ ಸುಮ್ಮನೆ ಕೂಗಾಡಬೇಕು ಎಂತ ಅವರು ವಾದ ಮಾಡುತ್ತಿದ್ದಾರೆ. ಅವರು ಹೇಳತಕ್ಕ ವಾದವೂ ಸಹ ಸರಿಯಾದುದೆಂತಲೇ ನನಗೆ ಅನ್ನಿಸಿತು.

ನನ್ನನ್ನು ಇನ್ನು ಕೆಲವರು ಕೇಳಿದರು; ಆಂಧ್ರದವರು ಈಗಾಗಲೇ ನಾಗಾರ್ಜುನ ಸಾಗರ ವನ್ನು ಕಟ್ಟಿದ್ದಾರೆ. ಈಗ ಮತ್ತೆ ಶ್ರೀಶೈಲ ಪ್ರಾಜೆಕ್ಟನ್ನು ಕಟ್ಟುವುದಕ್ಕೆ ಅವರು ಮುಂದೆ ಹೋಗು ತ್ತಿದ್ದಾರೆ. ಹೀಗಿರುವಾಗ ಇಲ್ಲಿ ಇವರೇಕೆ ಸುಮ್ಮನಿರುತ್ತಾರೆ ಅಂತ ಕೆಲವರು ಕೇಳುತ್ತಿದ್ದಾರೆ. ನಾಗಾರ್ಜುನ ಸಾಗರ ಈ ದಿವಸ ಕಟ್ಟಿದ್ದಲ್ಲ. ಅದನ್ನು ಕೆಲವು ವರ್ಷಗಳ ಕೆಳಗೇ ಕಟ್ಟಲಾಯಿತು. ಆದುದರಿಂದ ಅದರ ಪರವಾಗಿ ಈಗ ಇಲ್ಲಿ ಅಧಿಕಾರದಲ್ಲಿರತಕ್ಕವರನ್ನು ಕಾರಣರೆಂತ ಹೇಗೆ ಹೇಳು ವುದು? ಇವರ ಕಾಲಕ್ಕೆ ಹಿಂದೆಯೇ ಅದನ್ನು ಕಟ್ಟಲಾಗಿದೆ. ಅದಕ್ಕಾಗಿ ಈಗ ಹಾಲಿ ಇರತಕ್ಕ ಮುಖ್ಯ ಮಂತ್ರಿಗಳನ್ನು ಹೀಯಾಳಿಸುವುದು ಸರಿಯಲ್ಲ ಎಂತ ಕೆಲವರು ವಾದಿಸುತ್ತಾರೆ.

ಇಲ್ಲಿಗೆ ಬಹಳ ದಿವಸಗಳ ಹಿಂದಿನಿಂದ ಕನ್ನಡನಾಡು ಒಂದಾಗಬೇಕು ಎಂಬ ಹೆಬ್ಬಯಕೆ ನಮ್ಮೆಲ್ಲರಿಗೂ ಇತ್ತು. ನಮ್ಮ ಸಹೋದರರು ಬೇರೆ ಬೇರೆ ಪ್ರಾಂತಗಳಲ್ಲಿ ಅನೇಕ ಭಾಷೆಗಳ

ಜನರೊಂದಿಗೆ ಸೇರಿ ಅವರಿಗೆ ಯಾವ ತರಹದ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಲಕ್ಕಾಗಲಿಲ್ಲ ಎಂಬ ಒಂದು ಮೂಲ ಧ್ಯೇಯದಿಂದ ಆ ನಮ್ಮ ಸಹೋದರರು ಈಗ ನಮ್ಮೊಡನೆ ಸೇರಿಕೊಂಡಿದ್ದು ಒಳ್ಳೆಯದೇ ಆಯಿತು. ಈ ದಿವಸ ಕನ್ನಡನಾಡು ರಚನೆಯಾಗಿದೆ.

ಸ್ವಾಮಿ ಅಧ್ಯಕ್ಷರೇ, ಆ ಕಡೆಯಿಂದ ಬಂದಿರತಕ್ಕ ಜನರು ಬಹಳ ಕಷ್ಟಪಡತ್ತಿದ್ದಾರೆ. ಇಲ್ಲಿಯ ವರೆಗೆ ಅವರಿಗೆ ನ್ಯಾಯವಾಗಿ ಎಷ್ಟು ನೀರಾವರಿ ಸೌಲಭ್ಯಗಳು ದೊರೆಯಬೇಕಾಗಿತ್ತೋ ಅದು ದೊರೆಯದೆ ಅವರ ಜೀವನ ಬಹಳ ಕಷ್ಟಕರವಾದುದಾಗಿದೆ. ಆದುದರಿಂದಲೇ ಈ ದಿವಸ ಅವರ ಪ್ರದೇಶಗಳನ್ನು ನಾವು ಅನ್-ಡೆವಲಪ್ಡ್ ಏರಿಯಾ ಎಂತ ಕರೆಯುತ್ತಿದ್ದೇವೆ. ಈ ದಿವಸ ಆದಷ್ಟು ಜಾಗ್ರತೆ ಈ ಅನ್-ಡೆವಲಪ್ಡ್ ಏರಿಯಾಗಳನ್ನು ಅಭಿವೃದ್ಧಿ ಮಾಡಲು ಅವರಿಗೆ ನ್ಯಾಯವಾಗಿ ದೊರೆಯ ಬೇಕಾಗಿರತಕ್ಕ ನೀರಿನ ಸೌಕರ್ಯಗಳನ್ನೊದಗಿಸಿಕೊಡಲು ಒಂದು ಡೆವಲಪ್‌ಮೆಂಟ್ ಬೋರ್ಡನ್ನು ಅಲ್ಲಿಗೆ ಕೂಡಲೆ ರಚಿಸಿ ಅವರು ನಮ್ಮ ರಾಜ್ಯಕ್ಕೆ ಬಂದು ನಮ್ಮೊಡನೆ ಸೇರಿಕೊಂಡುದುದಕ್ಕಾಗಿ ಅವರಿಗೆ ನಮ್ಮಲ್ಲಿ ಒಂದು ನಂಬಿಕೆ ಉಳಿಯುವ ಹಾಗೆ ನಾವು ಅವರ ಕೆಲಸವನ್ನು ಮಾಡಿಕೊಟ್ಟರೆ ಬಹಳ ಒಳ್ಳೆಯದು. ಈಹೊತ್ತು ಇದರ ಪೂರ್ಣ ಜವಾಬ್ದಾರಿ ನಮ್ಮೆಲ್ಲರಮೇಲೂ ಬಿದ್ದಿರುತ್ತೆಂದು ನಾನ ತಿಳಿಸಬಯಸುತ್ತೇನೆ.

ಇನ್ನು ನಮ್ಮ P. W. D. ಬಾಬಿನವರು ಈ ಹಿಂದೆ 1959-60 ಮತ್ತು 1960-61 ಸಾಲುಗಳಲ್ಲಿ ಸುಮಾರು 11 ಸಾವಿರ ಮೈಲಿ ರಸ್ತೆ ಮಾಡಿದ್ದಾರೆ. ಇದು ನನಗಂತೂ ಅ- ವಾಗುತ್ತಿಲ್ಲ. ಈ ರಸ್ತೆಗಳ ನಿರ್ಮಾಣ ಕಾರ್ಯಕ್ಕಾಗಿ ಸುಮಾರು 8-9 ಕೋಟಿ ರೂಪಾಯಿಗಳನು ಖರ್ಚು ಮಾಡಲಾಗಿದೆ. ಕೆಲವು ಕಡೆ ರಸ್ತೆಗಳಲ್ಲಿ ಮಣ್ಣನ್ನು ತೆಗೆದುಹಾಕಿದ್ದಾರೆ. ಇನ್ನು ಕಲವು ಕಡೆ ಹಾಗೆಯೇ ಬಿಟ್ಟುಬಿಟ್ಟಿದ್ದಾರೆ. ಇದನ್ನು ಒಳ್ಳೆ ರಸ್ತೆಗಳನ್ನು ಮಾಡತಕ್ಕದ್ದೆಂದು ಯಾರು ಹೇಳಿದರೋ ತಿಳಿಯಲಿಲ್ಲ. ಆದರೆ ನನಗೆ ಗೊತ್ತಿರುವಂತೆ ಒಂದು ಮೈಲಿ ಒಳ್ಳೆಯ ರಸ್ತೆ ಮಾಡ ಬೇಕಾದರೆ ಕನಿಷ್ಠ 10 ಸಾವಿರ ರೂಪಾಯಿಗಳಾದರೂ ಬೇಕು; ಗರಿಷ್ಠ ಎಂದರೆ ಅದು 75 ಸಾವಿರ ದಿಂದ ಹಿಡಿದು 1 ಲಕ್ಷದವರೆಗೂ ಬೇಕಾಗುತ್ತದೆ. ಹೀಗಿರುವಾಗ ಈ ದಿವಸ ಈ ಹನ್ನೊಂದು ಸಾವಿರ ಮೈಲಿ ರಸ್ತೆ ಮಾಡಬೇಕಾಗಿದ್ದರೆ ಎಷ್ಟು ದುಡ್ಡು ಬೇಕು, ಇಷ್ಟು ಮೈಲಿಗಳ ರಸ್ತೆ ಕೆಲಸವನ್ನು ಏಕಾಏಕಿ ಯಾವ ಒಂದು ಆಲೋಚನೆಯನ್ನು ಮಾಡದೆ ಇವರು ಯಾವ ಆಧಾರದಮೇಲೆ ಟ್ರೆಜರಿ ಯಲ್ಲಿದ್ದ ಹಣವನ್ನು ತೆಗೆದುಕೊಂಡು ಹೋಗಿ ಈ ವ್ಯವಸ್ಥೆಕಾಣದ ಕೆಲಸಕ್ಕೆ ವ್ಯಯ ಮಾಡಿದರು? ಈ ಕೆಲಸವು ಪೂರಾ ಅವ್ಯವಸ್ಥೆಯಿಂದ ಯಾವ ಆಲೋಚನೆಯೂ ಇಲ್ಲದೆ ಹಣವನ್ನು ಪೋಲು ಮಾಡಿರ ತಕ್ಕದ್ದಾಗಿದೆ ಅಂತ ಹೇಳಿದರೆ ಅದೇನೂ ತಪ್ಪಾಗಲಾರದು. ಎರಡನೆಯ ಪಂಚವಾರ್ಷಿಕ ಯೋಜನೆ ಯಲ್ಲಿ ಕೇಂದ್ರಸರ್ಕಾರದವರು ಇಲ್ಲಿ ನಮ್ಮ ರಾಜ್ಯದ ಕೆಲವು ಅಭಿವೃದ್ಧಿ ಕಾರ್ಯಗಳಿಗಾಗಿ ಏನು ಹಣವನ್ನೊದಗಿಸಿದ್ದರೋ ಆ ಹಣವನ್ನು ಬೇರೆ ಯಾವ ಯಾವ ಇಲಾಖೆಗಳು ಉಪಯೋಗ ಮಾಡ ಬೇಕಾಗಿತ್ತೋ ಅವು ಆ ಹಣವನ್ನು ಉಪಯೋಗ ಮಾಡದೆ ಕೈಬಿಟ್ಟು ಆ ಹಣ ಲ್ಯಾಪ್ಸಾಗತಕ್ಕ ಸಂಭವ ಒದಗಿದಾಗ ಇನ್ನು ಮುಂದಿನ ಯೋಜನೆಗಳಿಗೆ ಕೇಂದ್ರದವರು ನಾವು ಕೇಳುವಷ್ಟು ಹಣವನ್ನು ಕೊಡಲಾರರೆಂಬ ಭೀತಿಯಿಂದ ಹಣವನ್ನೆಲ್ಲ ಈ ಇಲಾಖೆಗೆ ಹಾಕಿ ಇದನ್ನು ಇಲ್ಲಿ ಖರ್ಚು ಮಾಡ ಬೇಕೆಂದು ಹೇಳಿದ್ದಾರೆಂತ ಕಾಣುತ್ತದೆ. ಆದರೆ ಯಾವ ಸರ್ಕಾರವೇ ಆಗಲೀ ಇಂಥಾ ಕೆಲಸಗಳನ್ನು ಇಷ್ಟು ಅವ್ಯವಸ್ಥೆಯಿಂದ ಮಾಡಬಾರದು. ಹಣ ಉಳಿದರೆ ಅದು ಎಲ್ಲಿ ಹೋಗುತ್ತೆ? ಇದ್ದರೆ ಕೇಂದ್ರ ಸರ್ಕಾರದಲ್ಲಿರುತ್ತೆ; ಇಲ್ಲವೇ ಮೈಸೂರು ಸರ್ಕಾರದಲ್ಲಿರುತ್ತೆ. ಖರ್ಚು ಮಾಡುವುದೆಂದರೆ ಸುಮ್ಮನೆ ವೆಚ್ಚ ಮಾಡುವುದಲ್ಲ. ಆ ಖರ್ಚಿಗೆತಕ್ಕಹಾಗೆ ಜನಗಳಿಗೆ ಏನೇನು ಪ್ರಯೋಜನ ದೊರೆಯಬೇಕೋ ಅದು ದೊರೆಯಲೇಬೇಕು. ಸುಮ್ಮನೆ ಏನೋ ಒಂದು ಉದ್ದೇಶವಿಟ್ಟುಕೊಂಡು ಇಷ್ಟು ಹಣ ಖರ್ಚು ಮಾಡಿರತಕ್ಕದ್ದು ದೊಡ್ಡ ತಪ್ಪು. ಅಷ್ಟು ಹಣವನ್ನು ಹೇಗೆ ಖರ್ಚುಮಾಡಿದರು? ಈ ದಿವಸ ಆ ರಸ್ತೆ ಕೆಲಸವೆಲ್ಲ ಅರ್ಧಮರ್ಧವಾಗಿದೆ. ಅದನ್ನು ಕಂಪ್ಲೀಟ್ ಮಾಡತಕ್ಕ ಜವಾಬ್ದಾರಿ ಈ ದಿವಸ ಯಾರದು? ಆ ಜವಾಬ್ದಾರಿ ಈ ದಿವಸ ಸಂಪೂರ್ಣವಾಗಿ ಸರ್ಕಾರದವರಮೇಲೆ ಬಿದ್ದಿದೆ. ಈ ದಿವಸ ಈ ಕಾರ್ಯ ವನ್ನು ನೆರವೇರಿಸಲು ದುಡ್ಡಿಲ್ಲ ಅಂತ ಹೇಳಿದರೆ ಅದು ಜವಾಬ್ದಾರಿಯುತವಾದ ಮಾತಲ್ಲ; ಅದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಈ ದಿವಸ ಸರ್ಕಾರದವರು ಎಲ್ಲಿಂದಲಾದರೂ ದುಡ್ಡನ್ನು ತಂದು ಅವರು ಮಾಡಿರತಕ್ಕ ತಪ್ಪನ್ನು ಸರಿಪಡಿಸಿಕೊಳ್ಳಬೇಕಾದುದು ಅವರ ಜವಾಬ್ದಾರಿ. ಇಲ್ಲ ವಾದರೆ ಅವರು ಈ ಹಿಂದೆ ವೃಥಾ ಖರ್ಚು ಮಾಡಿರತಕ್ಕ 9 ಕೋಟಿ ರೂಪಾಯಿಗಳಿಗೆ ಯಾರು ಜವಾಬ್ದಾರರು? ಏನೋ ಒಂದು ಚೀಪ್‌ಪಾಪ್ಯುಲಾರಿಟಿಗಳಿಸಲು ಈ ಕೆಲಸವನ್ನು ನಡೆಸಿರುವಂತೆ ಕಂಡುಬರುತ್ತಿದೆ. ಇಂಥಾ ಭ್ರಾಂತಿಯುತವಾದ ಕಾರ್ಯಗಳಿಂದ ಖಂಡಿತ ನಮ್ಮ ರಾಜ್ಯಕ್ಕೆ ಕಲ್ಯಾಣ ವಾಗುವುದಿಲ್ಲ.

ಈ ದಿವಸ ಮಲಪ್ರಭ ಕೆಲಸ ಮಂಜೂರಾಗಿ 2 ವರ್ಷಗಳಮೇಲಾಯಿತು. ಈ ಕೆಲಸಕ್ಕೆ 25-30 ಲಕ್ಷ ರೂಪಾಯಿಗಳಷ್ಟು ಹಣ ಮಂಜೂರಾಗಿದೆ. ಈ ದಿವಸ ಆ ಪ್ರದೇಶದಲ್ಲಿ ರೈತನಿಗೆ

(ಶ್ರೀ ಜಿ. ಮರುಳಪ್ಪ)

ನೀರಾವರಿ ಸೌಲಭ್ಯಗಳನ್ನು ಇಲ್ಲಿಯವರೆಗಾದರೂ ಏಕೆ ಇನ್ನೂ ಒದಗಿಸಿಲ್ಲ? ಅವರಿಗೇನು ವ್ಯವಸ್ಥೆ ಮಾಡಿದ್ದಾರೆ? ಈಗಾಗಲೇ ಅಲ್ಲಿ 50-60 ಲಕ್ಷ ರೂಪಾಯಿಗಳಷ್ಟು ಖರ್ಚಾಗಿವೆ. ಅಷ್ಟು ಹಣ ಏತಕ್ಕೆ ಖರ್ಚಾಯಿತು? ಆ ಹಣವೆಲ್ಲ ಅಲ್ಲಿರತಕ್ಕ ಅಧಿಕಾರಿಗಳಿಗೆ ಒಳ್ಳೊಳ್ಳೆಯ ಬಂಗಲೆಗಳನ್ನು ಕಟ್ಟಿಸಲು ಖರ್ಚಾಗಿದೆ. ಅವರಿಗೆ ಎಲೆಕ್ಟ್ರಿಸಿಟಿ ಒದಗಿಸಲು ಖರ್ಚಾಗಿದೆ. ಆದರೆ ಜನರಿಗೆ ಮಾತ್ರ ಕಾಸಿನ ಪ್ರಯೋಜನವೂ ಆಗಿಲ್ಲ. ಮೊದಲು, ಹೀಗೆ ಯಾವ ಪ್ರಾಜೆಕ್ಟುಗಳನ್ನೇ ತೆಗೆದುಕೊಳ್ಳಲಿ ನನಗೆ ಗೊತ್ತಿರುವಂತೆ, ಈ ಅಫಿಸಿಯಲ್ಸ್ ಕ್ವಾರ್ಟರುಗಳಿಗೆ, ಫ್ಲಷ್‌ಔಟುಗಳಿಗೆ ದುಂದು ವೆಚ್ಚವಾಗುತ್ತಿದೆ, ಅವರಿಗೆ ಎಲೆಕ್ಟ್ರಿಸಿಟಿ ಆಗಬೇಕು, ಇಂಥಾದ್ದಕ್ಕೆಲ್ಲ ವಿಶೇಷವಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಮೊದಲು ಈ ಅಧಿಕಾರಿಗಳು ಅಲ್ಲಿ ಟೆಂಟುಗಳನ್ನು ಹಾಕಿಕೊಂಡು ಇಲ್ಲವೇ ಜಿಂಕ್‌ಷಿಟ್ ಅಥವಾ ಆಸ್ಬೆಸ್ಟಾಸ್‌ಷೀಟುಗಳಲ್ಲಿ ಮನೆಗಳನ್ನು ಮಾಡಿಕೊಂಡು ಆದಷ್ಟು ಬೇಗ ಆ ಪ್ರಾಜೆಕ್ಟ್‌ಗಳನ್ನು ಮುಗಿಸಿ ಜನರಿಗೆ ಅನುಕೂಲ ಕಲ್ಪಿಸಲು ವ್ಯವಸ್ಥೆ ಮಾಡುತ್ತಿದ್ದರು. ಆದರೆ ಈಗ ಹಾಗಿಲ್ಲ. ಈ ದಿವಸ ಈ ಇಂಜಿನಿಯರಿಂಗ್ ಇಲಾಖೆಯಲ್ಲಿರತಕ್ಕ ನಮ್ಮ ಅಧಿಕಾರಿಗಳಾದರೋ ರಾಜಮನೆತನಕ್ಕೆ ಸೇರಿದವರಲ್ಲ ಶ್ರೀಮಂತರ ಮಕ್ಕಳೂ ಅಲ್ಲ ಅವರು ಕೇವಲ ಹಳ್ಳಿಗಳಲ್ಲಿ ಹುಟ್ಟಿ-ಬೆಳೆದು ಬಡಜನರ ಕಷ್ಟ ಸುಖಗಳನ್ನು ಚೆನ್ನಾಗಿ ಮನಗಂಡ ಜನರಾಗಿದ್ದಾರೆ. ಈ ದಿವಸ ಅವರು ಯಾರ ದುಡ್ಡಿನಿಂದ ಆ ಡಿಗ್ರಿಗಳನ್ನು ಪಡೆದರೋ, ಈ ದಿವಸ ಅವರು ಯಾರ ದುಡ್ಡಿನಿಂದ ಸಂಬಳ ಸಾರಿಗೆಗಳನ್ನು ಪಡೆಯುತ್ತಿದ್ದರೋ ಅಂಥಾ ಜನರ ಸೇವೆ ಮಾಡದೆ ವಾಸಕ್ಕೆ ಬಂಗಲೆಗಳಾಗಬೇಕೆಂದು ಕೇಳುತ್ತಿರುವುದು ಅಷ್ಟು ಸಮರ್ಪಕವಾಗಿದ್ದಂತೆ ಕಾಣುತ್ತಿಲ್ಲ. ಸರ್ಕಾರದವರು ಈ ವಿಚಾರದ ಕಡೆಗೆ ಸ್ವಲ್ಪ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಾನೀಗ ಈ ರೈಲ್ವೆ ಬಗ್ಗೆ ಎರಡು ಮಾತನಾಡಬೇಕೆಂಬ ಆಸೆಯುಂಟಾಗಿದೆ. ಈ ದಿವಸ ಗುಂತಕಲ್ ಮತ್ತು ಹೊಸಪೇಟೆಗಳ ಮಧ್ಯೆ ಇರತಕ್ಕ ರೈಲ್ವೆ ಲೈನನ್ನು ಬ್ರಾಡ್‌ಗೇಜಿಗೆ ಕನ್ವರ್ಟ್ ಮಾಡುತ್ತಿದ್ದಾರೆ. ಆದರೆ ಅದರ ಉದ್ದೇಶವೇನು? ಇಂಡಿಯಾ ದೇಶದಲ್ಲೇ ಸುಪ್ರಸಿದ್ಧವಾದ ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳಲ್ಲಿ ದೊರೆಯತಕ್ಕ ಐರನ್-ಓರನ್ನು ಮದ್ರಾಸಿನ ಬಂದರಿಗೆ ರಫಾನೆ ಮಾಡಬೇಕೆಂಬುದೇ ಆ ಉದ್ದೇಶ. ಹೊಸಪೇಟೆಯಿಂದ ಮದ್ರಾಸಿಗೆ ಇರತಕ್ಕ ದೂರ 380 ಮೈಲಿಗಳು. ಆದರೆ ಈ ಐರನ್ ಓರನ್ನು ಕಾರ್‍ವಾರ ಬಂದರಕ್ಕೆ ರಫಾನೆ ಮಾಡಿದರೆ ಇದರ ಫಾಸಲೆ ಸುಮಾರು 200 ಮೈಲಿಗಳ ಒಳಗಾಗುತ್ತೆ. ನಮ್ಮ ದೇಶದ ಅದರು, ಅಲ್ಲಿ ಕೂಲಿ ಕೆಲಸ ಮಾಡತಕ್ಕವರು ನಮ್ಮವರು. ನಮ್ಮ ಅದರನ್ನು ನಮ್ಮವರಿಗೆ ಕೊಡದೆ ಈ ದಿವಸ 380 ಮೈಲಿ ಹೊತ್ತುಕೊಂಡು ಹೋಗಿ ಮದರಾಸಿನವರಿಗೆ ಕೊಡುತ್ತಿದ್ದಾರೆ. ಇದರಲ್ಲಿ ಯಾವುದು ಒಳ್ಳೆಯದು? ನಮ್ಮ ರಾಜ್ಯದ ರಸ್ತೆಯನ್ನೇ ಇನ್ನೂ ಒಂಬುನೂರು ಮೈಲಿ ಡೆವಲಪ್ ಮಾಡಿ ನಮ್ಮ ರಾಜ್ಯದಲ್ಲಿರತಕ್ಕ ಬಂದರಿಗೇನೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾದ್ದು ಅತ್ಯಗತ್ಯ ಎಂಬುದನ್ನು ಸರ್ಕಾರದವರು ಗಮನಿಸಬೇಕಾದಂಥ ವಿಷಯ ಇದು.

ಸ್ವಾಮಿ, ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಬೇರೆಯವರು ಯಾರಾದರು ಜಗಳಮಾಡುವ ಮಟ್ಟದಲ್ಲಿ ಹಿಂದೂಸ್ಥಾನ ಸರ್ಕಾರದಲ್ಲಿ ಸಣ್ಣ ದರ್ಜೆಯಲ್ಲಿ ಜಗಳಮಾಡಿ ನಿಮ್ಮ ದೊಡ್ಡ ಸ್ಥಿತಿಯನ್ನು ಕಳೆದುಕೊಳ್ಳಬೇಡಿ. Dignified ಆಗಿ ಜಗಳಮಾಡಿ. ನಿಮ್ಮಲ್ಲಿ ಇರತಕ್ಕ ವಾಸ್ತವಾಂಶಗಳನ್ನು ಅವರ ಎದುರಿನಲ್ಲಿ ಇಡಿ. ಅವರು ತಪ್ಪು ಮಾಡಿದರೆ ನೀವು ನೋಡಿದ್ದು ತಪ್ಪು ಎಂದು ದಿಟ್ಟತನದಿಂದ ತಿಳಿಸಿ. ಇದು ಆಗಲೇ ಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿಯೇ ತೀರಬೇಕು. ಒಂದು ವೇಳೆ ನಿಮ್ಮ ಒತ್ತಾಯವನ್ನು ಅವರು ಮನ್ನಿಸದೆ ಹೋದರೆ land acquire ಮಾಡಿಕೊಳ್ಳುವುದಕ್ಕೆ ನೀವು ಅನುಮತಿಯನ್ನ ಕೊಡಬಾರದು. "ಆಗುವುದಿಲ್ಲ" ಎಂದು ಬರೆಯಬಾರದು ಎನ್ನುವುದಾದರೆ, ನಿಮ್ಮ ನಿಲುವನ್ನು ನ್ಯಾಯವಾದ ರೀತಿಯಲ್ಲಿ, ದಿಟ್ಟತನದಿಂದ ಅವರಿಗೆ ಹೇಳಿನೋಡಿ. ಅವರು ನಿಮ್ಮ ಸಲಹೆಗಳಿಗೆ ಮಾನ್ಯತೆಯನ್ನು ಕೊಡದೆ ಹೋದರೆ ಆಗ "ನೀವು ಇದಕ್ಕೆ ಒಪ್ಪದೆ ಹೋದರೆ ನಾನೂ ಇದಕ್ಕೆ ಒಪ್ಪುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ" ಎಂದು ಹೇಳಿ ನೋಡೋಣ, ಆಮೇಲೆ ಏನಾಗುತ್ತದೆ ಎಂದು.

ಸ್ವಾಮಿ, ಮೊದಲಿನಿಂದಲೂ ಹೇಳುತ್ತಿದ್ದರು ಹರಿಹರ ಕೊಟ್ಟೂರು ರೈಲ್ವೆ ಮಾರ್ಗವನ್ನು ಹಾಸನ-ಮಂಗಳೂರು ಮತ್ತು ಸೇಲಂ-ಬೆಂಗಳೂರು ರೈಲ್ವೆ ಹಾಕುವ ಕಾಲಕ್ಕೆ ತೆಗೆದುಕೊಳ್ಳುತ್ತೇವೆಂದು. ಈ ಮಾರ್ಗ ಕೇವಲ 43 ಮೈಲಿ ಇದೆ. ಹಿಂದೆ ತೀರ್ಮಾನ ಮಾಡಿದ್ದುದನ್ನು ಈಗ ಯಾವ ಕಾರಣದಿಂದ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಯೋಚನೆ ಮಾಡಿ, ಇದನ್ನು ತಮ್ಮಲ್ಲಿ ವಿನಂತಿಮಾಡಿ ಕೊಳ್ಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲ ಶಕ್ತಿ ಇದೆ. ಅವರಿಗೆ ಎಲ್ಲರ ಪರಿಚಯವೂ ಇದೆ, ಎಲ್ಲರನ್ನೂ ಚೆನ್ನಾಗಿ ಅರಿತಿದ್ದಾರೆ. ಸ್ವಲ್ಪ ದಿವಸ ಮೈಸೂರು ಸಂಸ್ಥಾ

ನದ ಕಾರ್ಯಭಾರವನ್ನು ಬೇರೆಯವರಿಗೆ ವಹಿಸಿ ತಿಂಗಳಲ್ಲಿ ಹದಿನೈದು ದಿವಸವಾದರೂ ಡೆಲ್ಲಿಯಲ್ಲಿರಬೇಕೆಂದು ನನ್ನ ವಿನಂತಿ. ಅಲ್ಲಿದ್ದು ಹೆಚ್ಚಾಗಿ ಕೆಲಸಮಾಡಿ, ನ್ಯಾಯಬದ್ಧವಾಗಿ. ಕಾನೂನು ಬದ್ಧವಾಗಿ ನಮಗೆ ಏನು ಹಿಸ್ಸೆ ಬರಬೇಕೋ ಅದನ್ನು ಕೊಟ್ಟರೆ ಸಾಕು. ನಮಗೆ ಅದು ಬೇಕು, ಇದು ಬೇಕು, ಎಂದು ಹೆಚ್ಚಿಗೆ ಕೇಳುವುದು ಬೇಡ. ಇದಕ್ಕಾದರೂ ಹೆಚ್ಚು ಗಮನ ಕೊಡಬೇಕೆಂದ ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಸ್ವಾಮಿ, ಇಂಜಿನಿಯರಿಂಗ್ ಇಲಾಖೆಲ್ಲಿ ಕೆಲವು ಕಾರಣಗಳಿಗಾಗಿ ಕೆಲವುಕಡೆ Circles, Divisions ಪ್ರಾರಂಭಮಾಡುತ್ತಾರೆ. ಅಲ್ಲಿಯ ಕೆಲಸ ಮುಗಿದು ಹೋದಮೇಲೂ, ಕೆಲಸ ಕಡಮೆ ಇದ್ದಾಗಲೂ ಅದನ್ನು ಮುಚ್ಚಬೇಕು ಎಂದು ಹೇಳಿದಾಗ ಅವರಿಗೆ ಸ್ವಲ್ಪ prestige question ಬಂದ ಹಾಗೆ ಆಗುತ್ತದೆ. ಅದಕ್ಕೆ ಅವರು ತಯಾರಾಗಿ ಕೆಲಸ ವಿದ್ದಾಗ ಇರಲಿ, ಕೆಲಸವಿಲ್ಲದಾಗಿ ಅದನ್ನು ಮುಚ್ಚಿ ಆ ಹಣವನ್ನು ಉಳಿತಾಯಮಾಡಬೇಕು. ಪುನಃ ಅವಶ್ಯಕತೆ ಕಂಡುಬಂದರೆ ಪ್ರಾರಂಭಮಾಡಬಹುದು, ಇದರಲ್ಲಿ ಹೆಚ್ಚಿಗೆ ಹಣ ವಿನಿಯೋಗವಾಗಿದೆ ಎಂದು ನನಗನ್ನಿಸುತ್ತದೆ.

ಸ್ವಾಮಿ, ಎಲ್ಲ ಇಲಾಖೆಯವರೂ ಆದಷ್ಟು ಕಡಮೆ ಖರ್ಚುಮಾಡಿ ನೀರಾವರಿಯನ್ನು ಅಭಿವೃದ್ಧಿ ಮಾಡಬೇಕು. ದೇಶದಲ್ಲಿ ನೀರಾವರಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಬಹಳ ಅವಕಾಶವಿದೆ. ಕೆಲವರು ಪ್ರಶ್ನೆಮಾಡುತ್ತಾರೆ ಸ್ವಾಮಿ, ಆಂಧ್ರದಲ್ಲಿ ಶೇಕಡ 26 ಮದ್ರಾಸಿನಲ್ಲಿ ಶೇಕಡ 46 ಇರುವಾಗ ನಮ್ಮ ಮೈಸೂರಿನಲ್ಲಿ ಶೇಕಡ 7-8 ಮಾತ್ರ ನೀರಾವರಿ ಪ್ರದೇಶ ಇರಲುಕಾರಣವೇನು? ಅದನ್ನು ಯೋಚಿಸಬೇಕು. ನಿಮಗೆಲ್ಲ, ಮಂತ್ರಿಮಂಡಲದವರಿಗೂ ಶೇಕಡ 50 ನೀರಾವರಿ ಮಾಡಬೇಕೆಂದು ಆಸೆಇದೆ. ಆದರೆ ನಿಮ್ಮ ಕಷ್ಟ ಏನು ಎಂಬುದು ಗೊತ್ತು-ಜನಗಳಿಗೆ ಬಹಳ ಹೇಳಿರಾತ್ತೀರಿ ಆದರೆ ಆರೀತಿ ಮಾಡದೆ ಹೋದರೆ ನಿಮ್ಮಗತಿಏನು, ಜನ ಏನಂದಾರು ಎನ್ನುವ ಶಂಕೆಇದೆ. ಇಂಜಿನಿಯರಿಂಗ್ ಇಲಾಖೆಯವರು ಏನು ಹೇಳುತ್ತಾರೆ? ಅದೇ ಸಿಬ್ಬಂದಿ ಇಲ್ಲಿದೆ, ಅದೇ ಕೆಲಸಗಾರರು ಇಲ್ಲದ್ದಾರೆ. ಆದರೆ ಅವರು ಇಷ್ಟು ಜಾಗ್ರತೆಯಾಗಿ ನೀರಾವರಿಯಲ್ಲಿ ಮುಂದೆ ಹೋಗಿರುವುದಕ್ಕೂ ನಾವು ಹಿಂದೆ ಬಿದ್ದಿರುವುದಕ್ಕೆ ಏನು ಕಾರಣ? ಅವರ ಮನಸ್ಸಿನಲ್ಲಿ ಅವರೇ ಯೋಚನೆಮಾಡಿಕೊಳ್ಳಲಿ. ಹಿಂದೆ ಬೀಳುವುದಕ್ಕೆ ಏನು ಕಾರಣ ವಾಗಿದೆ ಎಂದರೆ—ಈಗಲಾದರೂ ಅದು ಆಗದೆ ಇರಲಿ—ಮಂತ್ರಿಮಂಡಲದ ಬದಲಾವಣೆಗಳು ಸ್ವಲ್ಪ ತಲೆ ಕೆಡಿಸುತ್ತವೆ ಎಂದು ಕಾಣಿಸುತ್ತದೆ. ಇದನ್ನು ಮಾಡಿದರೆ, ಅವರು ಬಂದರೆ ಏನು ಹೇಳುತ್ತಾರೆಯೋ, ಇವರು ಏನು ಹೇಳುತ್ತಾರೆಯೋ ಎಂದು ಕೆಲಸ ಮಾಡದಿರುವುದು ಇಂಥ ಕಾರಣಗಳಿಂದ ಆಗಿರಬಹುದು. ಬೇರೆ ರಾಜ್ಯದವರು ಹೇಗೆ ಶೇಕಡ 46 ನೀರಾವರಿ ಮಾಡಿದ್ದಾರೆಯೋ ಹಾಗೆಯೇ ನಾವೂ ಶೇಕಡ 50ರಷ್ಟು ಮಾಡಬೇಕೆಂದು ಮುಂದೆ ಹೋಗತಕ್ಕ ಉತ್ಸಾಹದಿಂದ ಕೆಲಸ ಮಾಡಬೇಕು.

ನಮ್ಮ ತಾಲ್ಲೂಕಿಗೆ ಶ್ರೀಮಾನ್ ಆಲೂರು ಹನುಮಂತಪ್ಪನವರು ಮೊನ್ನೆ ಪ್ರವಾಸಬಂದಿದ್ದರು.—ನಾನು ಈ ಸಂದರ್ಭದಲ್ಲಿ ಅದನ್ನು ಹೇಳಬೇಕೋ ಬಿಡಬೇಕೋ ಗೊತ್ತಿಲ್ಲ.—ಬಂದವರು ಅನಿರೀಕ್ಷಿತವಾಗಿ, tour programme ಇಲ್ಲದೆ ಇರುವ ಒಂದು ಜಾಗಕ್ಕೆಹೋಗಿ ಅಲ್ಲಿಗೆ ಎಲ್ಲ ಅಧಿಕಾರಿಗಳನ್ನು ಕರೆಸಿದರು. ನೀರಾವರಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಏನು ಮಾಡಬೇಕು, ಏನು ಕೆಲಸಮಾಬೇಕು, ಯಾವ ರೀತಿ ಮಾಡುವುದರಿಂದ ಒಳ್ಳೆಯದಾಗುತ್ತದೆ ಎಂದು ಅರಿತು ಅವರಿಗೆಲ್ಲ instructions ಕೊಟ್ಟು ಬಂದರು. ಅದು ಜನಗಳಿಗೆ ಎಷ್ಟು ಸಂತೋಷ ಪಡಿಸಿತು ಎಂದರೆ ಕೆಲಸವಾಗುವುದು ಒಂದು ಕಡೆಇದ್ದರೂ, ಮಾಡತಕ್ಕ ಉತ್ಸಾಹ ನಿಜವಾಗಿಯೂ ಜನಗಳಿಗೆ ಸಂತೋಷವನ್ನುಂಟುಮಾಡಿತು. ಅದಷ್ಟು ಮಟ್ಟಿಗೆ ಎಲ್ಲ ಮಂತ್ರಿಗಳೂ ಪ್ರವಾಸ ಹೋಗತಕ್ಕ ಸಂದರ್ಭದಲ್ಲಿ ಸುಮ್ಮನೆ ಪ್ರವಾಸ ಹೋಗುವುದು ಒಳ್ಳೆಯದಲ್ಲ, ಪ್ರವಾಸ ಹೋದಾಗ ಜನಗಳ ಕಷ್ಟ ಸುಖಗಳೇನು, ಇಲಾಖೆಗಳಲ್ಲಿ ಏನು ಅಡಚಣೆಗಳಿವೆ, ಅವುಗಳನ್ನು ನಿವಾರಣೆ ಮಾಡುವುದಕ್ಕೆ ಏನು ಮಾಡಬೇಕು ಎಂದು ಅದಷ್ಟು ಮಟ್ಟಿಗೂ ಆಚರಣೆಗೆ ತರುವುದು ಒಳ್ಳೆಯದು,

ಶ್ರೀ ಮಾನ್ ದೇವರಾಜ ಅರಸ್ ಅವರು ಅಜ್ಜಂಪುರಕ್ಕೆ ಹೋಗುವಾಗ ದೊಡ್ಡ ಕೆರೆಯನ್ನು ನೋಡಿದರು. ಇದು ಯಾವಕೆರೆ ಎಂದು ಕೇಳಿದರು. ಕೆರೆಸಂತೆ ಕೆರೆ ಎಂದು ಹೇಳಿದಾಗ ಇದು ಎಷ್ಟು ದೊಡ್ಡ ಕೆರೆ, ಸಮುದ್ರದ ಹಾಗೆಕಾಣುತ್ತೆ. ಇಷ್ಟು ದೊಡ್ಡ ಕೆರೆ ಕೆಳಗೆ ಎಷ್ಟು ಎಕರೆ ಜಮೀನಿಗೆ ನೀರಾವರಿ ಯಾಗುತ್ತಿದೆ ಎಂದು ಕೇಳಿದರು. ನನಗೆ ತಿಳಿದ ಮಟ್ಟಿಗೆ 900 ಎಕರೆ ಅಚ್ಚುಕಟ್ಟು ಎಂದು ಹೇಳುತ್ತಾರೆ. ಆದರೆ ಈಗ ವ್ಯವಸಾಯವಾಗುತ್ತಿರುವುದು 200-300 ಎಕರೆ ಮಾತ್ರ ಎಂದು ತಿಳಿಸಿದಾಗ ಅವರು ನೇರವಾಗಿ ಅಸಿಸ್ಟೆಂಟ್ ಇಂಜಿನಿಯರ್ ಅವರ ಆಫೀಸಿಗೆ ಹೋದರು. ಅಲ್ಲಿ ಸಂಬಂಧಪಟ್ಟ ಕಡತವನ್ನು ತರಿಸಿನೋಡಿ, ಅವರೊಡನೆ ಮಾತನಾಡಿ ಮುಂದಕ್ಕೆ ಪ್ರಯಾಣ ಮಾಡಿದರು. ಮಾನ್ಯ ಮಂತ್ರಿಗಳು ಬಂದು ಹೋದಮೇಲೆ ಈಗ investigate ಮಾಡುತ್ತಿದ್ದಾರೆ. ಅಲ್ಲಿರುವ ಅಧಿಕಾರಿಗಳೇ ಹೇಳುವ ಪ್ರಕಾರ ಈಗ ಇರುವ 900 ಎಕರೆ ಯಲ್ಲದೆ ನೂರಾರು, ಒಂದು ಸಾವಿರ ಎಕರೆಗೆ ನೀರು ಕೊಡಬಹುದು. ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿದ ಅಧಿಕಾರಿಗಳೂ

(ಶ್ರೀ ಜಿ. ಮರುಳಪ್ಪ)

ಎಲ್ಲರೂಇದೇದಾರಿಯಲ್ಲಿ ಹೋಗಬೇಕಾಗಿದೆ, ಪ್ರತಿಯೊಬ್ಬರೂ ನೋಡುತ್ತಾರೆ. ಆದರೆ ಅವರಿಗೆ ಇಷ್ಟು ಬುದ್ಧಿ ಏಕೆ ಓಡಲಿಲ್ಲ ? ಇಷ್ಟು ನೀರು ಸದುಪಯೋಗವಾಗುವುದರ ಕಡೆ ಅವರ ಗಮನ ಏಕೆ ಹರಿಯ ಲಿಲ್ಲ ? ಇಂಥ ವಿಚಾರಗಳಿಗೆ ಸರ್ಕಾರ ಗಮನ ಕೊಡಬೇಕೆಂದು ಸಲಹೆಮಾಡುತ್ತೇನೆ.

ಸ್ವಾಮಿ, ಇನ್ನೊಂದು ವಿಷಯ. ಒಳ್ಳೆಯ ಕೆಲಸ ಮಾಡಿರುವುದನ್ನು ಹೇಳಲೇಬೇಕು. ಇಂಜಿನಿಯ ರಿಂಗ್ ಇಲಾಖೆಯ ವಿಷಯವನ್ನು ಇಲ್ಲಿಗೇ ಬಿಟ್ಟು ಎಲೆಕ್ಟ್ರಿಕಲ್ ವಿಷಯ ಮಾತನಾಡಲು ಆಸೆಯಾ ಗಿದೆ. ಹೊಸದಾಗಿ ಎರಡು oil turbines ತರಿಸುತ್ತಾರಂತೆ. ಬಹಳ ಒಳ್ಳೆಯದು. ಈ ಕಾಲ ದಲ್ಲಿ 20 ಸಾವಿರ K.W. power ಬರುತ್ತದೆಂದು ಹೇಳುತ್ತಾರೆ. ವಿದ್ಯುಚ್ಛಕ್ತಿಗೆ ತೊಂದರೆ ಇರತಕ್ಕ ಕಾಲದಲ್ಲಿ ಕಷ್ಟಪಟ್ಟು ಯಶಸ್ವಿಯಾಗಿ ಅದನ್ನು ಪಡೆಯತಕ್ಕದ್ದು ಬಹಳ ಸಂತೋಷ, ಬಹಳ ಕಷ್ಟದ ಕೆಲಸ. ಇದಕ್ಕೋಸ್ಕರ ನಿಮ್ಮನ್ನು ಅಭಿನಂದಿಸುತ್ತೇನೆ. ಇದರಲ್ಲಿ ನನಗೆ ಬಂದು ಕಷ್ಟವಾಗಿದೆ. ಇದನ್ನು ಎಲ್ಲಿ ಉಪಯೋಗಿಸುತ್ತೀರಿ ? ಪ್ರಾಯಶಃ ಬೆಂಗಳೂರಿನಲ್ಲಿ ಉಪಯೋಗಿಸುತ್ತೀರೆಂದು ಕಾಣುತ್ತದೆ. ಇಲ್ಲಿ ಕೈಗಾರಿಕೆಗಳಿವೆ, ಅದಕ್ಕೆ ಅಪಾಯವಾಗಬಾರದೆನ್ನುವ ದೃಷ್ಟಿಯಿಂದ ಬೆಂಗಳೂರಿ ನಲ್ಲಿ ಈಟರ್ಬೈನ್‌ಗಳನ್ನು ಇಟ್ಟುಕೊಳ್ಳಬೇಕಾದ್ದು ಸರಿ, ಅಲ್ಲಿ ಅದನ್ನು ಉಪಯೋಗಿಸಿದಾಗ ಅಲ್ಲಿಂದ release ಆಗುವ ವಿದ್ಯುತ್ತನ್ನು ಹಳ್ಳಿಗಳಕಡೆಗೆ ಕೊಡಬೇಕೆಂದು ತಮ್ಮನ್ನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ.

ಇದಕ್ಕಿಂತ ಬಹಳ ಮುಖ್ಯವಾದ ಕೆಲಸ ಇನ್ನೊಂದು ಮಾಡಿದ್ದಾರೆ. ಚಿತ್ರದುರ್ಗದಿಂದ ರಾಯಚೂರಿಗೆ ಒಂದು ರಾಷ್ಟ್ರೀಯ ಹೆದ್ದಾರಿಯನ್ನು ಏಳುಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಾಡಲು ಸೇರಿಸಿದ್ದಾರೆ. ಇದೂ ಬಹಳ ಒಳ್ಳೆಯ ಕೆಲಸ. ಇದು ಹೆಚ್ಚಾಗಿ underveloped area ದಲ್ಲಿ ಹೋಗುವುದರಿಂದ ಆ ಭಾಗದ ಜನರಿಗೆ ಬಹಳ ಸಹಾಯವಾಗುತ್ತದೆ. ಅದಕ್ಕೆ ಏಳು ಕೋಟಿ ರೂಪಾಯಿ ಖರ್ಚು ಮಾಡುವಾಗ ಆ ಭಾಗದ ಜನತೆಗೆ ಕೂಲಿ ಕೆಲಸ ಸಿಕ್ಕಿ ಸಹಾಯವಾಗುತ್ತದೆ, ಇದನ್ನು ಬಹಳ ಯಶಸ್ವಿಯಾಗಿ ತಾವು ನಿರ್ವಹಿಸಿದುದಕ್ಕೋಸ್ಕರವಾಗಿ ನಾನು ತಮ್ಮನ್ನು ಅಭಿ ನಂದಿಸುತ್ತೇನೆ.

Mr. SPEAKER.—The House will now rise and meet half an hour late.

The House adjourned for recess at Three of the Clock and re-assembled at Thirty Minutes past Three of the Clock.

ಶ್ರೀ ಜಿ. ಮರುಳಪ್ಪ.—ಮಾನ್ಯ ಅಧ್ಯಕ್ಷರೇ, ಸ್ವಲ್ಪಕಾಲ ಹೆಚ್ಚಿಗೆ ತೆಗೆದುಕೊಳ್ಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ಅಭಿನಂದಿಸುತ್ತೇನೆ.

ನದಿಗಳಮೇಲೆ ಹೊಸದಾಗಿ ಅಣೆಕಟ್ಟು ವಗ್ಯೆರೆಗಳನ್ನು ಕಟ್ಟುವುದರಿಂದ ಜನಕ್ಕೆ ಸೌಕರ್ಯ ವಾಗದೇ ಹೋದರೆ ಇಂತಹ ಕೆಲಸಗಳನ್ನು ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಸರಿಯಾಗಿ ಜನ ನೀರನ್ನು ಉಪಯೋಗಿಸಿಕೊಳ್ಳುವ ಪ್ರದೇಶಗಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕು. ಎಲ್ಲಿ Non-Developmental ಏರಿಯಾ ಇದೆಯೋ ಅದನ್ನು ನೋಡಿಕೊಂಡು ಅಲ್ಲಿಯ ಜನರ ಕಷ್ಟಸುಖಗಳು ಹೇಗಿವೆ, ಎನ್ನುವುದನ್ನು ತಿಳಿದುಕೊಂಡು ಸರಕಾರ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಸೆಂಟ್ರಲ್ ಗವರ್ನಮೆಂಟಿನಲ್ಲಿರುವ ಎಂ.ಪಿ.ಗಳಿಗೆ ಭಾರತದೇಶದಾದ್ಯಂತ ಸುತ್ತಿಕೊಂಡು ಬರಲು ಪಾಸುಗಳನ್ನು ಕೊಡುತ್ತಿದ್ದಾರೆ. ಅವರು ಒಂದಲ್ಲ ಒಂದು ಪ್ರಾಂತಕ್ಕೆ ಹೋಗಿ ಅಲ್ಲಿನ ಸ್ಥಿತಿಗಳನ್ನು ತಿಳಿದುಕೊಳ್ಳಲು ಅವಕಾಶ ಮತ್ತು ಅನುಕೂಲವಿದೆ. ಆ ರೀತಿ ನಮ್ಮ ಪ್ರತಿನಿಧಿಗಳು ಕೂಡ ಊರನ್ನು ಸುತ್ತಿ ಚೆನ್ನಾಗಿ ತಿಳಿದುಕೊಂಡು ವ್ಯವಹಾರ ಮಾಡದೇ ಹೋದರೆ ಕಷ್ಟ. ಇಂತಹುದಕ್ಕೆ ಸರಕಾರ ಅವಕಾಶ ಕಲ್ಪಿಸಿಕೊಡುತ್ತಾರೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಣ).—ಮಾನ್ಯ ಸಭಾಪತಿಗಳೇ, ಈ ದಿವಸ ಸರಕಾರವು ನಮ್ಮ ಮುಂದಿಟ್ಟಿರುವ ಬೇಡಿಕೆಗಳನ್ನು ಸಮರ್ಥಿಸುತ್ತ ನಾನು ಕೆಲವು ವಿಷಯಗಳನ್ನು ಮಾತನಾಡ ಬೇಕೆಂದು ಇಚ್ಛೆಪಟ್ಟಿದ್ದೇನೆ.

ನಮ್ಮ ಸರಕಾರದ ಮುಂದೆ ಈಗ ಭಾವಿ ನೀರಾವರಿ ಯೋಜನೆಗಳು ಮತ್ತು ಸಣ್ಣ ನೀರಾವರಿ ಯೋಜನೆಗಳು ಬಹಳ ಪ್ರಾಮುಖ್ಯವಾದವುಗಳಾಗಿವೆ. ಕೃಷ್ಣ ಗೋದಾವರಿ ನೀರಿನ ಹಂಚಿಕೆ ಸಮಸ್ಯೆ, ಮತ್ತು ಕಾವೇರಿ ನದಿಯ ನೀರಿನಿಂದ ಪ್ರಯೋಜನ ಪಡೆದುಕೊಳ್ಳುವ ಯೋಜನೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ನಮ್ಮ ನಾಯಕರಲ್ಲಿ ನಾವು ಪೂರ್ಣ ನಂಬಿಕೆ ಇಟ್ಟರೆ ಅವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನೆಲ್ಲಾ ತೆಗೆದುಕೊಂಡು ನಮ್ಮ ಮೈಸೂರು ದೇಶದ ಪ್ರಗತಿ ಮತ್ತು ಹಿತಕ್ಕೆ ಬೇಕಾದುದೆಲ್ಲವನ್ನೂ ಮಾಡಲು ಪ್ರಯತ್ನಿಸುತ್ತಾರೆಂದು ನಾನು ನಂಬಿಕೊಂಡಿದ್ದೇನೆ. ಈ ವಿಷಯದಲ್ಲಿ ಈಗ ನಾನು ಹೆಚ್ಚಿಗೆ ಏನನ್ನೂ ಮಾತನಾಡುವುದಕ್ಕೆ ಇಷ್ಟ ಪಡುವುದಿಲ್ಲ.

ನಮ್ಮ ದೇಶದ ಜನತೆ ಸುಖದಿಂದ ಇರಬೇಕಾಗಿದ್ದರೆ, ನೀರಾವರಿ ಕಾಮಗಾರಿಗಳನ್ನು ತ್ವರಿತ ದಿಂದ ಲೋಕೋಪಯೋಗಿ ಇಲಾಖೆಯವರು ಕೈಗೊಳ್ಳಬೇಕಾದುದು ಬಹಳ ಅವಶ್ಯಕವಾಗಿದೆ. ಈ ಸಂದರ್ಭದಲ್ಲಿ ಸರಕಾರದವರು ಎಷ್ಟು ಶೀಘ್ರತೆಯಿಂದ ಈ ಕೆಲಸ ಕಾರ್ಯಗಳನ್ನು ಮಾಡಿಸಬೇಕಾ ಗಿತ್ತೋ ಅಷ್ಟು ಶೀಘ್ರತೆಯಿಂದ ಕೆಲಸಕಾರ್ಯಗಳನ್ನೂ ಕೈಗೊಂಡು ಪೂರೈಸುವುದಕ್ಕೆ ಸಾಧ್ಯವಾ ಗಿಲ್ಲ. ಇದಕ್ಕೆ ಮುಖ್ಯ ಕಾರಣಹಣದ ಅಭಾವ ಅಷ್ಟೇ ಅಲ್ಲ. ಈ ಕೆಲಸಗಳನ್ನು ಕೈಗೊಂಡು ಅಗ ಮಾಡುವುದಕ್ಕೆ ತಕ್ಕ ಸಿಬ್ಬಂದಿಯನ್ನು ಕೂಡ ಸರಿಯಾಗಿ ಒದಗಿಸುತ್ತ ಇಲ್ಲ ಎಂದು ಅನೇಕರ ಅಭಿ ಪ್ರಾಯವಾಗಿದೆ. ಅನೇಕ ತಜ್ಞರು ಕೂಡ ಈ ವಿಷಯಗಳನ್ನು ನಮ್ಮ ಗಮನಕ್ಕೆ ತರುತ್ತಿದ್ದಾರೆ. ಬಹಳ ಯೋಜನೆಗಳ ಗುರಿಯನ್ನಿಟ್ಟುಕೊಂಡು ಸಾಕಾಗುವಷ್ಟು ಸಿಬ್ಬಂದಿ ವರ್ಗದವರನ್ನು ಒದಗಿಸ ದಿದ್ದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಯುದ್ಧದಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಎಷ್ಟುಮಟ್ಟಿಗೆ ಹೆಚ್ಚಿಗೆ ನಾವು ಶಿಬ್ಬಂದಿಯನ್ನು ಒದಗಿಸಿಕೊಳ್ಳುವುದು ಪ್ರಾಮುಖ್ಯವೋ ಅಷ್ಟೇ ಮುಖ್ಯವಾಗಿ ಲೋಕೋಪಯೋಗಿ ಇಲಾಖೆಯಸಿಬ್ಬಂದಿಯನ್ನು ಸಾಕಷ್ಟು ನೇಮಕ ಮಾಡಿಕೊಂಡು ನೀರಾವರಿ ಯೋಜನೆಗಳನ್ನು ಮುಂದುವರಿಸುವುದು ಅವಶ್ಯಕ. ನಮ್ಮ ಕೆಲವು ಮಾನ್ಯ ಸದಸ್ಯರು ಗಳು ಶಿಬ್ಬಂದಿಯ ಖರ್ಚನ್ನು ಕಡಿಮೆಮಾಡಿಕೊಳ್ಳುವುದು ಸಾಧ್ಯವಿದೆ ಎಂದು ಹೇಳಿದ್ದಾರೆ. ನನ್ನ ಅನುಭವದಿಂದ ನಾನು ಹೇಳುತ್ತಿದ್ದೇನೆ. ಸರಕಾರದವರು ಅನೇಕ ಕಾಮಗಾರಿಗಳನ್ನು ಮಾಡಿಸ ಬೇಕು. ಎನ್ನುವ ಯೋಚನೆ ಇಟ್ಟುಕೊಂಡಿದ್ದರೆ ತಕ್ಕ ಸಿಬ್ಬಂದಿ ವ್ಯವಸ್ಥೆಯನ್ನು ಮೊದಲು ಮಾಡದೆ ಯಾವ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಸರಕಾರಕ್ಕೆ ಶಕ್ತಿಯಿಲ್ಲ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು. ಒಂದು ತಾಲ್ಲೂಕಿನಲ್ಲಿ ಎಷ್ಟು ಯೋಜನೆಗಳನ್ನು ಕೈಗೊಳ್ಳ ಬೇಕೆಂದು ಸರಕಾರಕ್ಕೆ ಆಸೆಯಿದೆಯೋ ಆ ಯೋಜನೆಗಳಲ್ಲಿ ಹತ್ತನೇ—ಒಂದು ಭಾಗದಷ್ಟು ಕೂಡ ಮಾಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಉದಾಹರಣೆಯಾಗಿ ನಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆಲಸ ಕಾರ್ಯಗಳು ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ಪರಿಶೀಲಿಸಿದರೆ, ಅನೇಕ ಕಾಮಗಾರಿ ಯೋಜನೆಗಳನ್ನು ತೆಗೆದುಕೊಳ್ಳುತ್ತೇವೆ ಎಂದು ನಮ್ಮ ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಆಲೂರು ಹನುಮಂತಪ್ಪನವರು ಹೇಳುತ್ತಲೇ ಇದ್ದಾರೆ. ಪ್ರೆಸ್‌ನಲ್ಲೂ ಸ್ಟೇಟುಮೆಂಟುಗಳು ಬರು ಬರುತ್ತಲೇ ಅವೆ. ಆದರೆ ಕಾಮಗಾರಿಗಳನ್ನು ತೆಗೆದುಕೊಳ್ಳುವುದರಲ್ಲಿ ಬಹಳ ನಿಧಾನವಾಗಿದೆ. ಎಂಧು ನಾನು ಅವರಿಗೆ ಹೇಳಿದರೆ ಅವರು ತಪ್ಪುತಿಳಿದುಕೊಳ್ಳುವುದಿಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ. ದೊಡ್ಡದೊಡ್ಡ ಅಧಿಕಾರಿಗಳೂ ಕೂಡ ಎಷ್ಟೇ ಪ್ರಯತ್ನ ಮತ್ತು ಆಸೆ ಪಟ್ಟರೂ ಕೂಡ ಸಾಧ್ಯವಾಗುತ್ತಿಲ್ಲ. ಉಪಮಂತ್ರಿಗಳು ಈ ವಿಚಾರದಲ್ಲಿ ಗಮನಕೊಡಬೇಕೆಂದು ನಾನು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕು ಬಹಳ ಹಿಂದುಳಿದಿರುವ ಪ್ರದೇಶ ಎಂದು ನಾನು ಪದೇಪದೇ ಸರಕಾರಕ್ಕೆ ತಿಳಿಸುತ್ತಲೇ ಇದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಕಣ್ವಾ ಪ್ರಾಜೆಕ್ಟನ್ನು ಹಿಂದೆ ರಾಜರ ಆಶ್ರಯದಲ್ಲಿ ಇದ್ದ ಸರಕಾರದವರೇ ಕಟ್ಟಿದ್ದರೂ ಆ ಕಣ್ವಾ ಪ್ರಾಜೆಕ್ಟಿಗೆ ಸಾಕಷ್ಟು ನೀರಿನ ಆಶ್ರಯವಿಲ್ಲದಂಥ ಯೋಜನೆ ಮಾಡಿದ್ದಾರೆ. ಈ ಪ್ರಾಜೆಕ್ಟನ್ನು ಕಟ್ಟಬೇಕಾದರೆ ರಾಜಕೀಯ ಕಾರಣಗಳು ಕೂಡ ಇದ್ದವು. ಆ ವಿಷಯವನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವುದು ಈಗ ಅನವಶ್ಯಕ. ಆದರೆ ಇಷ್ಟೊಂದು ಹಣ ಖರ್ಚುಮಾಡಿ ಕಟ್ಟಿರತಕ್ಕ ಕಣ್ವಾ ಜಲಾಶಯಕ್ಕೆ ಸರಿಯಾದ ನೀರಿನ ವಸತಿಯನ್ನು ಕಲ್ಪಿಸುವುದು ಈಗಿನ ಪ್ರಜಾ ಸರಕಾರದವರ ಆದ್ಯಕರ್ತವ್ಯವೆಂದು ಇದನ್ನು ಪದೇಪದೇ ಈ ಮಾನ್ಯ ಸಭೆಯಲ್ಲಿ ಮತ್ತು ಇತರ ಕಡೆಗಳಲ್ಲಿ ಒತ್ತಾಯ ಮಾಡುತ್ತಲೇ ಇದ್ದೇನೆ. ನಮ್ಮ ಸರಕಾರದವರು ಇತ್ತೀಚೆಗೆ ಮಂಚನಬೆಲೆ ಹತ್ತಿರ ಅರ್ಕಾವತಿ ನದಿಗೆ ಅಣೆಕಟ್ಟು ಹಾಕುವುದೂ ಮತ್ತು ಅಲ್ಲಿಂದ ಚಾನಲ್ಲು

(ಶ್ರೀ ಬಿ. ಜೆ. ಲಿಂಗೇಗೌಡ)

ತೆಗೆದು ಕಣ್ವಾಜಲಾಶಯಕ್ಕೆ ನೀರನ್ನು ಒದಗಿಸುವ ಭರವಸೆ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಸರಕಾರವನ್ನು ವಂದಿಸುತ್ತೇನೆ.

ಮುಖ್ಯ ಮಂತ್ರಿಗಳು ಈ ಯೋಜನೆ ಕಾರ್ಯಗತವಾಗುವ ಹಾಗೆ ಶೀಘ್ರವಾಗಿ ಕ್ರಮ ತೆಗೆದು ಕೊಳ್ಳುವ ಭರವಸೆ ಕೊಟ್ಟಿರುವುದು ನಮ್ಮ ತಾಲ್ಲೂಕಿನ ಜನತೆಗೇ ಆನಂದವನ್ನುಂಟು ಮಾಡಿದೆ. ಈ ಸಭೆಯಲ್ಲಿಯು unstarred Question and Answer 1st list ನಲ್ಲಿ 44ನೇ ಪ್ರಶ್ನೆಯಲ್ಲಿ ಕೇಳಲಾದ ಕಣ್ವಾ ಜಲಾಶಯದ ನೀರಿನ ಅವಶ್ಯಕತೆಯ ಬಗ್ಗೆ ಸರಕಾರ ಉತ್ತರ ಕೊಟ್ಟಿರುವುದರ ಬಗ್ಗೆ ಒಂದೆರಡು ಮಾತುಗಳನ್ನು ಪ್ರಸ್ತಾಪಮಾಡಬೇಕಾಗಿದೆ.

Sri G. V. GOWDA.—Sir, he is telling something from the answers got for the unstarred questions. The intention of the answers to unstarred question is : "not to elicit information within the House."

Mr. SPEAKER.—It is, during the Question Hour, but it can be also referred to during the course of the Debate.

ಶ್ರೀ ಬಿ. ಜೆ. ಲಿಂಗೇಗೌಡ.—ಈ ಪ್ರಶ್ನೆಗೆ ಸರಕಾರದವರು ಉತ್ತರ ಕೊಡುತ್ತಾ ಕಣ್ವಾ ಅಚ್ಚುಕಟ್ಟಿನಲ್ಲಿ ಎಷ್ಟು ಜಮೀನು ಸಾಗುವಳಿಯಾಗಲು ಯೋಜನೆ ಇತ್ತೋ ಅಷ್ಟು ಸಾಗುವಳಿ ಯಾಗಿದೆ ಮತ್ತು ಕಣ್ವಾ ಜಲಾಶಯಕ್ಕೆ ನೀರಿನ ವಸತಿ ಸಾಕಷ್ಟಿದೆ ಎಂಬ ಅರ್ಥ ಬರುವ ಹಾಗೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರ ಸರಿಯಾಗಿ ಇದೆಯೇ ಎನ್ನುವರನ್ನು ಸರಕಾರ ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಈಗಾಗಲೇ ಹೇಳಿದ ಮಂಚನಬೆಲೆ ಯೋಜನೆ ಜೊತೆಗೆ ನಮ್ಮ ತಾಲ್ಲೂಕಿನ ಯೋಜನೆಗಳಲ್ಲಿ ಬಹಳ ಪ್ರಾಮುಖ್ಯವಾದವುಗಳು ಯಾವುವೆಂದರೆ:—1. ಶಿಂಷಾ ಅಣೆಕಟ್ಟು ತಗ್ಗಳ್ಳಿ ಹತ್ತಿ 2. ಕೀಲಾರ pick up ಯೋಜನೆಗಳ ಈ ಬಗ್ಗೆಯೂ ನಾನು ಪದೇ ಪದೇ ಹೇಳುತ್ತಲೆ ಇದ್ದೇನೆ. ಮತ್ತು 3. ಶಿಂಶಾನದಿಗೆ ಮಟ್ಟದೊಡ್ಡಿ ಹತ್ತಿರ ಅಡ್ಡಕಟ್ಟೆ ಕಟ್ಟಿದರೆ ಸುಮಾರು ಮೂರು ಸಾವಿರ ಎಕರೆ ಪ್ರದೇಶ ನೀರಾವರಿಯಾಗುತ್ತದೆ. ಅಲ್ಲಿ ಜಮೀನು ಮುಳುಗಡೆಯಾಗುವುದಿಲ್ಲ. ಚನ್ನಪಟ್ಟಣ ತಾಲ್ಲೂಕಿನ ಕೆಲವು ಭಾಗ ಮತ್ತು ಹಲಗೂರು ಹೋಬಳಿಯ ಜಮೀನು ವ್ಯವಸಾಯಕ್ಕೆ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ತಜ್ಞರು ಪರಿಶೀಲನೆ ಮಾಡಬೇಕೆಂದು ಸರಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಈಗ ರಸ್ತೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಆಡಬೇಕೆಂಬ ಆಶೆಯಿದೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಹಳ್ಳಿಗಳಿಗೆ ರಸ್ತೆ ಮಾಡಿದ್ದೀರಿ ಈಗ ಹಣದ ಅಭಾವದಿಂದ ರಸ್ತೆ ಕೆಲಸ ಮುಂದುವರಿಸಲು ಸಾಧ್ಯವಿಲ್ಲವೆಂದು ಹೇಳಿದ್ದೀರಿ. ನಮ್ಮ ದೇಶ ಕಷ್ಟದ ಪರಿಸ್ಥಿತಿಯಲ್ಲಿದೆ ಎನ್ನುವುದನ್ನು ಅರಿತುಕೊಂಡಿದ್ದೇವೆ. ಸರ್ಕಾರವನ್ನು ನಾನು ಪ್ರಾರ್ಥಿಸುವುದು ಇಷ್ಟೇ. ಹೇರಳ ವಾಗಿ ಹಣ ಖರ್ಚು ಮಾಡಿ ರಸ್ತೆಗಳ ರಚನೆ ಮಾಡಿರುವುದನ್ನು ಯೋಗ್ಯ ಸ್ಥಿತಿಗೆ ತರುವುದಕ್ಕೆ ಎಷ್ಟು ಹಣಬೇಕೋ ಅಷ್ಟನ್ನಾದರೂ ಒದಗಿಸಬೇಕೆಂದು ಒತ್ತಾಯವಾಗಿ ಪ್ರಾರ್ಥಿಸುತ್ತೇನೆ. ಅಲ್ಲದೆ ಸಣ್ಣ ಪುಟ್ಟ ಕಟ್ಟಡಗಳ ಕೆಲಸ ಕೂಡ ಕೈಬಿಡಕೂಡದು ಆಸ್ಪತ್ರೆಗಳ ಮತ್ತು ಸ್ಕೂಲ್ ಬಿಲ್ಡಿಂಗ್ ಕೆಲಸಗಳನ್ನು ಮಾಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶೀಘ್ರವಾಗಿ ನೀರಾವರಿ ಕೆಲಸಗಳು ಕಾರ್ಯಗತವಾಗಬೇಕಾದರೆ ಮೆಷಿನರಿ ಉಪಯೋಗಿಸು ವುದು ತುಂಬಾ ಸೂಕ್ತ. ಚನ್ನಪಟ್ಟಣ ತಾಲ್ಲೂಕಿನಲ್ಲಿ ನಮ್ಮ ಎಂಜಿನಿಯರುಗಳು ಮೆಷಿನರಿಯಿಂದ ಕೆಲಸಮಾಡಿಸುತ್ತಿದ್ದಾರೆ. ಒಂದು ಒಂದೂವರೆತಿಂಗಳಿನಲ್ಲಿ ಒಂದೊಂದು ಕೆರೆ ನಿರ್ಮಾಣ ಮಾಡಿ ದ್ದಾರೆ. ಇದರಿಂದ ಜನತೆ ಶೀಘ್ರವಾಗಿ ಪ್ರಯೋಜನ ಪಡೆದಿದ್ದಾರೆ. ಆದುದರಿಂದ ಸರಕಾರದವರು ಮೆಷಿನರಿ ಆದಷ್ಟು ಇಲಾಖೆಗೆ ಒದಗಿಸಿ ಕೆರೆಗಳ ಕೆಲಸಗಳನ್ನು ತ್ವರಿತದಿಂದ ಮಾಡಿಸಬೇಕು ಎಂದು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಸ್ವಾಮಿ. ಈ ಇಲಾಖೆಯಲ್ಲಿ ಲಂಚ ಸ್ವಲ್ಪಮಟ್ಟಿಗೆ ಇದೆ ಎಂದು ಜನರು ಹೇಳುತ್ತಾರೆ. ನಾನೂ ಅದನ್ನು ಒಪ್ಪಿಕೊಳ್ಳುತ್ತೇನೆ. ಬೇರೆ ಇಲಾಖೆಯಲ್ಲಿ ಯಾವ ರೀತಿ ಲಂಚವಿದೆಯೋ ಅದೇ ರೀತಿ ಈ ಇಲಾಖೆಯಲ್ಲಿ ಸ್ವಲ್ಪಮಟ್ಟಿಗೆ ಇದೆ ಆದರೆ ಈ ಇಲಾಖೆಯಲ್ಲಿ ಹೆಚ್ಚಾಗಿ ಲಂಚ ಇದೆ ಎಂದು ನಾನು ಅಂದುಕೊಂಡಿಲ್ಲ.

ಶ್ರೀ ವಿ. ಎಂ. ದೇವ್.—ಎಷ್ಟು ಪರ್ಸೆಂಟ್ ಇದೆ ಎಂದು ಅಂದಾಜು ಮಾಡುತ್ತೀರಿ ?

ಶ್ರೀ ಬಿ. ಜೆ. ಲಿಂಗೇಗೌಡ.—ಬಹುಶಃ ಮೈಸೂರು ದೇಶದ ನಾನಾ ಇಲಾಖೆಗಳೆಲ್ಲಕ್ಕೂ ಹೋಲಿಸಿದರೆ ಈ ಇಲಾಖೆಯಲ್ಲಿ ತೀರ ಕಡಿಮೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಇಲಾಖೆಯಲ್ಲಿ ಉತ್ಸಾಹದಿಂದ ಕೆಲಸಮಾಡತಕ್ಕಂಥ ಅಧಿಕಾರಿಗಳಿಗೆ ಇವತ್ತಿನ ದಿವಸ ಲಂಚ ನಿರೋಧ ಶಾಖೆಯಿಂದ ಕಿರುಕುಳವಾಗುತ್ತಾ ಇದೆ. ಇದನ್ನು ನಾನು ಕಣ್ಣಾರೆ ನೋಡಿದ್ದೇನೆ. ಪೋಲೀಸ್ ಅಧಿಕಾರಿಗಳಿಂದ ಕೂಡಿದ ಲಂಚ ನಿರೋಧ ಶಾಖೆಯಿಂದ ಜನರಿಗೆ ತುಂಬಾ ಅನಾಹುತ ಜಾಸ್ತಿಯಾಗುತ್ತಿದೆ ಎಂದು ವಿಷಾಧದಿಂದ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಲಂಚ ನಿರೋಧ ಶಾಖೆ ಇರಬೇಕೋ ಇರಬೇಡವೋ ?

ಶ್ರೀ ಬಿ. ಜೆ. ಲಿಂಗೇಗೌಡ.—ಅದನ್ನು ಮೊದಲೆ ಹೇಳಿದ್ದೇನೆ. ರಾಮನಗರಂ ದಿವಿಜನ್ನಿನಲ್ಲಿ ಅದೃಷ್ಟವಶಾತ್ ಒಳ್ಳೆ P.W.D. ಅಧಿಕಾರಿಗಳಿದ್ದಾರೆ. ಅವರ ಕೆಲಸವನ್ನು ನೋಡಿದರೆ ಪ್ರತಿಯೊಬ್ಬರೂ ಹೊಗಳಲೇ ಬೇಕಾಗುತ್ತದೆ. ಲಂಚ ವಿರೋಧ ಶಾಖೆಯ ಸಣ್ಣ ಪುಟ್ಟ ಅಧಿಕಾರಿಗಳು ಗೆಜೆಟೆಡ್ ಆಫೀಸರ್‌ಗಳ ವಿಚಾರಣೆ ಮಾಡುವುದಕ್ಕೆ ಬರುವದನ್ನು ನಾನು ನೋಡಿದ್ದೇನೆ. ಒಬ್ಬ ಸಬ್ ಇನ್‌ಸ್ಪೆಕ್ಟರ್ ಅಧಿಕಾರಿ, ಅಸಿಸ್ಟೆಂಟ್ ಎಂಜನಿಯರ್ ಮತ್ತು ಎಗ್ಸಿಕ್ಯೂಟಿವ್ ಎಂಜಿನಿಯರ್‌ಗಳು ಅವರ ಮನೆಯಲ್ಲಿ ಜವಾನನ್ನು ಇಟ್ಟುಕೊಂಡಿದ್ದಾರೆ ಎಂದು ಹೇಳಿ ಮನೆಗೆ ಸೀದಾ ನುಗ್ಗುತ್ತಾರೆ. ಇದು ಆಗಬಾರದು. ದೇಶದಲ್ಲಿ ಅನೇಕ ಇಲಾಖೆಗಳಲ್ಲಿ ಹಣ ತುಂಬಾ ದುರ್ವ್ಯಯವಾಗುತ್ತಿದೆಂಬ ಕೂಗು ಇರುವಾಗ್ಗೆ ಒಬ್ಬ ಜವಾನನ್ನು ಗೆಜೆಟೆಡ್ ಆಫೀಸರು ಮನೆಗೆ ಇಟ್ಟುಕೊಂಡಿದ್ದಾರೆಯೇ ಎಂದು ಕೇಳುವುದು ಬಹಳ ಕೀಳು ದರ್ಜೆಯಾಗುತ್ತದೆಂದು ಹೇಳುತ್ತೇನೆ. ನಾನು ಮೊದಲೇ ಸಲಹೆ ಮಾಡಿದಂತೆ ಲಂಚ ತಿಂದವರಿಗೆ ಉಗ್ರ ಶಿಕ್ಷೆಯಾಗಲೇಬೇಕು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರೆ ಈ ಕೆಲಸ ಲಂಚ ನಿರೋಧ ಶಾಖೆ ಅಧಿಕಾರಿಗಳಿಂದ ಸಾಧ್ಯವಾಗುವುದಿಲ್ಲ. ಆಯಾ ಇಲಾಖೆಯವರು ಅವರಲ್ಲಿಯೇ ಇರುವ ನಿಸ್ಪೃಹ ಮತ್ತು ಸತ್ಯವಂತ ಆಫೀಸರ್‌ಗಳನ್ನು ಚುನಾವಣೆ ಮಾಡಿ ಆಯಾಯ ಇಲಾಖೆಯಲ್ಲೇ ಲಂಚನಿರೋಧ ಶಾಖೆಯನ್ನು ಮಾಡಿಕೊಂಡು ಲಂಚ ತೆಗೆದುಕೊಳ್ಳುವುದನ್ನು ತಡಗಟ್ಟುವುದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳುವುದು ಸೂಕ್ತ. ಈ ವಿಷಯ ಸರಕಾರ ಪರಿಶೀಲಿಸಬೇಕು ಎಂದು ನಾನು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಕೊನೆಯದಾಗಿ ಸ್ವಾಮಿ, ಈಗ ಎರಡು ವರ್ಷಗಳಿಂದ ರಾಮನಗರಂ ಡಿವಿಜನ್ ಪ್ರಾರಂಭ ಮಾಡಿದ್ದಾರೆ ಅಲ್ಲಿ ಒಳ್ಳೆಯ ಕೆಲಸ ಕಾರ್ಯಗಳು ನಡೆಯುತ್ತಿವೆ. ಇತ್ತೀಚೆಗೆ ರಾಮನಗರ ಡಿವಿಜನ್ ಅನ್ನು ಮುಚ್ಚಬೇಕು ಎನ್ನುವ ಪ್ರಪೋಜಲ್ ಸರ್ಕಾರದ ಮುಂದೆ ಇದೆಯೆಂದು ಕೆಲವರು ಹೇಳುತ್ತಾರೆ. ಅದು ಖಂಡಿತಾ ಸಾಧುವಾದದ್ದಲ್ಲ. ರಾಮನಗರ ಡಿವಿಜನನ್ನು ಮುಂದುವರಿಸಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಇಷ್ಟು ವಿಷಯಗಳನ್ನು ಹೇಳಿ ನಾನು ನಮ್ಮ ಮುಂದೆ ಇರುವ ಬೇಡಿಕೆಗಳನ್ನು ಸಮರ್ಥಿಸುತ್ತೇನೆ.

† Sri G. V. GOWDA (Palya).—At the outset I want to confess that huge sums of money are being obtained year after year and have been spent without resulting in corresponding benefits accruing to the State or its people. Just in the question hour, our Hon'ble Finance Minister has been pleased to say that instructions have been issued to observe economy measures and all that. If you could see the expenditure or amount provided towards establishment charges, so far as Public Works Department is concerned, it is rapidly growing. Sir, in 1961-62 the amount provided towards Establishment was Rs. 50.88 lakhs; in 1962-63 it was Rs. 60.12 lakhs; in 1963-64 it is Rs. 82 lakhs. There is in increase of 64 per cent from 1961-62. If you see the over-all expenditure in the Department, under 50 Civil Works during the current year, the amount expected to be spent is Rs. 1200 lakhs and even during the last year it was Rs. 1,200 lakhs. So, the over-all expenditure is the same more or less. I do not understand why there must be an increase of nearly Rs. 21 lakhs towards Establishment Charges. These establishment charges do not include the amount provided under Demand Nos. 99,100 and 103. This is exclusive of Demand 50 Civil Works. My humble suggestion is that as things are not as they are expected to be, when

(Sri G V. Gowda)

the overall picture is the same, why should there be more money allotted towards establishment charges I fail to understand. Therefore, the increase in expenditure in the establishment charges is not justified in any circumstance. So far as the capital outlay on improvement of public health is concerned, during the current year, a provision of Rs. 122 lakhs has been made; next year they have provided only Rs. 47 lakhs. This relates to water supply and other public health measures. Sir, I fail to understand how through a provision of Rs. 47 lakhs, the Government could provide rural water supply or take other public health measures is not known. If you could see the capital outlay on electricity schemes, Sir, for 1961-62 there was a provision of Rs. 930 lakhs and for 1962-63 Rs. 1900 lakhs have been provided but the amount expected to be spent by the close of the year is only Rs. 1,400 lakhs. So, the Government had not shown any reason why they are not able to spend Rs. 500 lakhs. The capital outlay on electricity schemes relates to Tungabhadra Hydro-electric Project, and first and second stages of Sharavathi Projects. The other day the Chief Minister had been pleased to give an explanation why work in Sharavathi has been delayed. Let us concede those explanations are genuine. But to the extent of Rs. 500 lakhs they not have been able to spend as has been provided for the current year. Sir, all is not well so far as Sharavathi is concerned. That is my opinion. Sir, this House remembers that last year several members of this House raised protests and objections and a huge cry was raised in respect of extra additional amount that was paid to contractors. I can recall the assurance given by the Hon'ble Chief Minister then that any terms and conditions in the agreement between the Contractor and the Government which are detrimental to the interest of the State would be revoked and steps would be taken in that regard. I do not know whether such of those terms and conditions which are detrimental to the interest of the State as such have bern revoked by this time. The other day in answer to a question he was pleased to say they had sent proposals to the contractors. Naturally the would not agree. In that deal it has been conceded by the Government that they had paid Rs. 50 lakhs and odd more than the stipulated tender rate. Now also I have learnt, subject to correction that the Government have agreed to pay Rs. 30 lakhs to one Contractor more than the accepted tender rates on a claim made by him over a certain item. If that is true, I should say this is nothing but allowing the interest of State to suffer. Sir, it has been made clear by the Hon'ble Chief Minister that such things would not be allowed to continue in future when he gave explanation how the Government was obliged to pay Rs. 50 and odd more lakhs to the contractors for the claims made last year. Now, it is learnt, that, the Government have passed order awarding Rs. 30 lakhs over and above the accepted and stipulated rates. This is something I should say not only ridiculous; it is something unimaginable; it is beyond the reasoning capacity of any person......

Sri S. NIJALINGAPPA.—I want to know what exactly is it about Rs. 30 lakhs. I am not aware of it.

Sri G. V. GOWDA.—That is my information that a contractor made a claim of Rs. 30 lakhs.

Sri S. NIJALINAPPA.—I only wish my friends come and ask me about it instead of making these statements here. What is the use of creating unnecessary wrong impressions?

Sri G. V. GOWDA.Let me request the Chief Minister to see that if such a move were to be there, let it be put an end to and see that the terms and conditions which are detrimental, as the Chief Minister himself is obliged to concede some time ago, to interest of the State are revoked earlier so that the work could be got expedited and the interest of the State is not allowed to suffer. If the information I have received is not correct, I am very happy. I would request the Chief Minister not to give scope for such things in future because on every item and on every occasion some claim may be made. It is open for a contractor to come now and then and say that something is wrong there and his claim is just. Therefore, I request the Government to see that terms and conditions which make the appointment of arbitrators......

Mr. SPEAKER.—The Hon'ble Chief Minister has told the House that there will be no Arbitration clause in future contracts.

Sri G. V. GOWDA.—Yes.

Mr. SPEAKER.—Then why develop it further? The contracts which have been entered into have to subsist.

Sri G. V. GOWDA.—Many of my friends were telling that work connected with irrigation facilities in the State has not made much headway. So far as minor irrigation works are concerned, only 10 lakh acres are brought under cultivation. It is said that nearly 30 lakh acres can be brought under cultivation. So, if we see the amounts provided, it is too meagre. If proper steps are taken, I believe by the end of the Third Plan nearly 30 lakh acres can be brought under irrigation in addition to what they have already achieved.

4-00 P.M.

In respect of medium irrigation projects it has not made much headway. Investigations connected with these projects have not been completed with the result that not even a single project has been taken up. I request the Government to pay immediate attention to minor and medium irrigation projects so that more irrigable area can be brought under cultivation and we can have more food production.

At the very outset I said that money has been spent on rural communications. As the hon'ble member Sri G. Marulappa was urging, the Government must take proper care to see that money already spent on the construction of roads do not go as waste. If the intention of the Government is that the money should not go as waste, they must try to maintain the roads properly because nearly Rs. 9 crores have been spent. I am told more than 17000 miles have been formed and they

(SRI G. V. GOWDA)

have not taken care to maintain them properly after completion. I request the Government not to allow such things and steps must be taken before the end of this month either to make arrangements for maintaining them properly or else to hand them over to the Taluk Boards with sufficient funds.

So far as communications are concerned, last year a sum of Rs. 514 lakhs was provided but this year only a sum of Rs. 142 lakhs is made. I do not know how the Government is able to cope with the work with this meagre money. It may not be possible to maintain the roads that are already formed.

As far as my taluk is concerned, I have word to say in respect of medium irrigation projects. Time and again we have been requesting the Government and the Chief Minister has held out assurances that immediate steps would be taken to see that one or two projects are included in the Third Plan and the work started. I am told that investigations are not yet completed though investigations sub-divisions were started about three or four years ago. At first, two sub-divisions were sanctioned and subsequently one was withdrawn with the result the one sub-division functioning is not able to investigate all the feasible projects. In that area there are many rivers with perennial source of water and if they are properly exploited, more than 40,000 acres can be brought under cultivation. In Gundal and Udigere, if projects are undertaken and completed more than 30,000 acres would come under irrigation and we can get more than 7.4 per cent return. There are seven tanks and if those tank-beds are sold by public auction it would fetch more than Rs. 100 lakhs and we canuse this money. When these areas were in Madras, nothing was done and now the people are expecting much from the Government. So I appeal to the Chief Minister to see that these projects at least are included in the Third Plan and work started.

So far as restoration of tank work is concerned many tanks in Chamarajanagar Taluk have been included. But in Kollegal Taluk not even a single tank is included. There are several tanks in our area and I request the Chief Minister to see that at least in 1964-65 some tanks are taken up and water facility could be restored and more lands are brought under irrigation.

As regards the electricity schemes. I do not wish to point out again the need for taking up the Cauvery Hydel schemes. The Government contemplates taking up Kalinadi and other projects for which more funds have to be secured If Cauvery projects are taken it would facilitate Government getting more electricity. In respect of providing electricity to the I. P. sets and for rural electrification, things are not happy. So far as my area is concerned even in the Third Plan they have not made any provision for providing electricity. When this area

formed part of Madras, rural electrification had been earmarked and several villages with a population of more than 5,000 were proposed to be given electricity. The Panchayats and the concerned local bodies co-operated with the Electricity Department and plans and estimates were ready but not even a single village has been sanctioned rural electrification so far. I request the Government that at least territorial distribution must be made in this respect. We see in our State in certain areas several villages being electrified and, in certain other areas not even one village having electricity. Let there be territorial distribution so as to see that progress is achived more or less on par with other progressive areas.

So far as Krishna and Godavari waters are concerned, let me not say what has been told time and again. We have confidence that justice can be secured to us. The other day I read that the Government of Mysore is willing to give two lakh kwts. of power to the Andhra Government if they were to stop the Sri Sailam project. We may have ample power. That is a different matter. We have got to study the implications involved in such bargains. But if we go on making such bargains I am afraid we may weaken our stand. Let us not do anything which would weaken our stand. We have our right and we.........

Sri S. NIJALINGAPPA.—Does the hon'ble member think that we have promised them free supply?

Sri G. V. GOWDA.—It is not the question of free supply. No Government can give free supply. The Hon'ble Chief Minister stated that by the next April or May two units of Sharavathy will be able to supply 9 lakh kwts. of power. Of course on payment if that goes to other place, what would be the fate of us in the State. That has to be studied by the Chief Minister.

It may show to the world that our stand is not strong and it may get weakened. After the determination of the shares, if we have got enough power to spare, we may spare it not only for Andhra or Maharashtra but also for other States. That is why I would request the Hon'ble the Chief Minister that while bargaining we should not weaken our case.

As regards the taking over of the roads for management by the P.W.D., there is discrimination—not intentionally perhaps; it may be through oversight. There are very big taluks having a good length of mileage of roads belonging to the erstwhile district boards. According to the area of the taluk and the length of mileage of roads, these roads should have been taken up. In taluks where there is a good length of road, a substantial portion of it has to be taken up, so that the burden on the Taluk Board can be lessened and roads could be maintained properly.

Provision of rural water supply and communication facilities are the two primary and basic necessities. Unless the two basis necessities are provided, we cannot say that we have achieved rural development.

(Sri G. V. Gowda)

Therefore, I would request the Government to provide them. In my taluk, the village level workers cannot go from one village to another for want of communication facilities. Under such circumstances, how is rural development to take place? Therefore, I am firmly of the opinion that unless these two basic amenities are provided, no rual development worth the name can take place.

ಶ್ರೀ ಶರಣಪ್ಪ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನನಗೆ ಲೋಕೋಪಯೋಗಿ ಶಾಖೆ ಮತ್ತು ವಿದ್ಯುಚ್ಛಕ್ತಿ ಮತ್ತು ನೀರಾವರಿ ಡಿಮ್ಯಾಂಡಿನ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ನಾನು ರಾಯಚೂರ್ ಜಿಲ್ಲೆಯ ದೇವದುರ್ಗ ಕ್ಷೇತ್ರದಿಂದ ಚುನಾಯಿತನಾಗಿ ಆರಿಸಿ ಬಂದರೂ ನಾನು ಕೇವಲ ಆ ಕ್ಷೇತ್ರದ ಮಟ್ಟಿಗೆ ಮಾತನಾಡದೆ ಹೈದರಾಬಾದ್ ಕರ್ಣಾಟಕದ ಒಂದು ಸಂಕ್ಷಿಪ್ತ ಚಿತ್ರವನ್ನು ತಮ್ಮ ಮುಂದೆ ಇಡಬೇಕೆಂದು ಇಚ್ಛಿಸುತ್ತೇನೆ. ಇದಕ್ಕೆ ಮೊದಲು ಕೆಲವು ಮಂದಿ ಮಾನ್ಯ ಸದಸ್ಯರು ನಮ್ಮ ಮೈಸೂರು ರಾಜ್ಯದ ಅನೇಕ ಹಿಂದುಳಿದ ಪ್ರದೇಶಗಳ ಬಗ್ಗೆ ತಂತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅದು ನಿಜವಾದ ಸಂಗತಿ, ಏಕೆಂದರೆ ಹೈದರಾಬಾದ್ ಭಾಗದ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಟ್ಟರು. ನಾವು 1956ಕ್ಕೆ ಮುಂಚಿತವಾಗಿ ಹೈದರಾಬಾದ್ ರಾಜ್ಯದಲ್ಲಿದ್ದಂತಹ ಪರಿಸ್ಥಿತಿಯನ್ನು ಅಥವಾ ನಮ್ಮ ಹಣೆಯಬರಹವನ್ನು ಅಥವಾ ನಮ್ಮ ಅಭಿವೃದ್ಧಿಯನ್ನು ಹೊಂದುವುದಕ್ಕೆ ಒಂದು ರಾಜ್ಯವಾಗಬೇಕು, ಅದರಲ್ಲೂ ಕರ್ಣಾಟಕ ರಾಜ್ಯವಾಗಬೇಕು ಎಂಬ ಒಂದು ದೊಡ್ಡ ಆಕಾಂಕ್ಷೆಯಿಂದ ಅನೇಕ ಕಷ್ಟಗಳನ್ನು ಸಹಿಸುತ್ತಾ ಇದ್ದು ಇಷ್ಟು ದೂರವಾಗಿದ್ದರೂ 1956ರಲ್ಲಿ ಮೈಸೂರು ರಾಜ್ಯಕ್ಕೆ ಬಂದು ಸೇರಿದೆವು. ಆ ಒಂದು ಕಾಲದಲ್ಲಿ ನಮ್ಮ ಹೈದರಾಬಾದ್ ಭಾಗದಲ್ಲಿ ಈ ರಸ್ತೆ, ನೀರಾವರಿ, ವಿದ್ಯುಚ್ಛಕ್ತಿ ಸೌಕರ್ಯಗಳು ಯಾವ ರೀತಿಯಾಗಿದ್ದವೋ ಅದೇ ರೀತಿಯಲ್ಲಿ ಈಗಲೂ ಕೂಡ ಇವೆಯೆಂದು ನನಗೆ ಕಾಣಿಸುತ್ತಿದೆ. ಆ ಒಂದು ದೃಷ್ಟಿಯಿಂದ ಇದು ಒಂದು ಭಾಗ, ಅದು ಒಂದು ಭಾಗ ಎಂಬುದಾಗಿ ಭೇದಭಾವಮಾಡದೆ ನಾವು ಬೇರೆ, ಇನ್ನೊಬ್ಬರು ಬೇರೆ ಎಂಬ ವಿಚಾರವನ್ನು ತರದೆ ಈ ಒಂದು ಲೋಕೋಪಯೋಗಿ ಶಾಖೆಯಲ್ಲಿ ನಡೆಯತಕ್ಕ ಎಲ್ಲ ಕಾಮಗಾರಿಗಳು ಲೋಕಕ್ಕೇ ಸಹಾಯವಾಗುವಂತೆ ಇರಬೇಕೆಂದು ಹೇಳಿ ಆ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಮುಂದಿಡಬೇಕೆಂದು ನಾನು ಬಯಸುತ್ತೇನೆ.

ಸ್ವಾಮಿ, ಪ್ರಾಂತಪುನರ್ವಿಂಗಡಣಾನಂತರ 1957ನೇ ಇಸವಿಯಲ್ಲಿ ಕೇಂದ್ರ ಸರ್ಕಾರದವರು, ಒಂದು ಫೈನಾನ್ಸ್ ಕಮಿಷನ್ ಎಂದು ನೇಮಿಸಿದರು. ಆಗ ಮೈಸೂರ, ಆಂಧ್ರ, ಕೇರಳ, ಮದ್ರಾಸ್ ಪ್ರಾಂತಗಳಿಗೆ ಬೇಕಾದ ಹಣದ ಅವಶ್ಯಕತೆ, ಆಹಾರೋತ್ಪನ್ನ-ಈ ವಿಷಯಗಳ ಬಗ್ಗೆ, ಆಯಾ ಪ್ರಾಂತಗಳಲ್ಲಿ ಎಷ್ಟರಮಟ್ಟಿಗೆ ಕೇಂದ್ರದಿಂದ ಸಹಾಯಧನ, ಮತ್ತು ಆಯಾ ಪ್ರಾಂತಗಳ ಅಭಿವೃದ್ಧಿಗೆ ಬೇಕಾದಂಥ ಹಣದ ಅವಶ್ಯಕತೆಯನ್ನು ಹೊಂದುವುದಕ್ಕಾಗಿ ಪ್ರತಿಯೊಂದು ಸಂಸ್ಥಾನದಲ್ಲೂ ಈ ಫೈನಾನ್ಸ್ ಕಮಿಷನ್ ವಿಚಾರವಿನಿಮಯ ನಡೆಸಿ ಕಡೆಗೆ ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟರು. ಆ ಕಮಿಷನ್ನಿನ ಶಿಫಾರಸಿನ ಪ್ರಕಾರ ನಮ್ಮ ಕೇಂದ್ರ ಪುನಃ ಸರ್ಕಾರದವರು ಈ ಮೈಸೂರು ರಾಜ್ಯಕ್ಕೆ ಸುಮಾರು 6 ಕೋಟಿ, 7 ಕೋಟಿ ರೂಪಾಯಿಗಳ ಹೆಚ್ಚು ಹಣವನ್ನು ಕೊಡಲು ಒಪ್ಪಿದರು. ನಮ್ಮ ಮೈಸೂರು ರಾಜ್ಯದಲ್ಲಿ ಹೆಚ್ಚು ಕಾಮಗಾರಿಗಳನ್ನು ತೆಗೆದುಕೊಂಡು ಅಭಿವೃದ್ಧಿ ಹೊಂದುವುದಕ್ಕಾಗಿ ಸಹಾಯ ಧನವನ್ನು ಕೇಂದ್ರ ಸರ್ಕಾರದ ಉತ್ಪಾದನೆಯಿಂದ ಕೊಡಲು ಒಪ್ಪಿಕೊಂಡರು. 1957ನೇ ಇಸವಿಯಲ್ಲಿ ಆದ ಒಂದು ತೀರ್ಮಾನದ ಪ್ರಕಾರ ನಮ್ಮ ಪಾಲಿಗೆ ಸುಮಾರು 36 ರಿಂದ 40 ಕೋಟಿ ರೂಪಾಯಿಗಳವರೆಗೆ ಹೆಚ್ಚಿದಂತಾಗಿದೆ. ಆ ಕಾಲದಲ್ಲಿ ಈ ವಿಷಯಗಳನ್ನು ಚರ್ಚಿಸುವಾಗ, ಅನೇಕ ವಿಷಯಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವಾಗ ಹಿಂದುಳಿದ ಭಾಗಗಳು ಯಾವುದೆಂದರೆ ಮುಖ್ಯವಾಗಿ ಹೈದರಾಬಾದ್ ಪ್ರದೇಶದ 3 ಜಿಲ್ಲೆಗಳು, ಮುಂಬೈ ಕರ್ಣಾಟಕದ ಕೆಲವು ಜಿಲ್ಲೆಗಳು ಮತ್ತು ಹಳೆಯ ಮೈಸೂರಿನ ಕೆಲವೊಂದು ಜಿಲ್ಲೆಗಳು ಎಂದು ಹೇಳಿ ಅಂತಹ ಪ್ರದೇಶಗಳಲ್ಲಿ ಅನೇಕವಾಗಿ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿವೆ ಎಂಬ ವಿಷಯವನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತಂದು ಕೊಟ್ಟಿದ್ದೆವು. ಆದಕಾರಣ ಈ ದಿವಸ ನಮ್ಮ ಸರ್ಕಾರ ಇರತಕ್ಕಂಥ ಹಣದ ಪೈಕಿ ಹೆಚ್ಚು ಭಾಗ ಹಣವನ್ನು ಹಿಂದುಳಿದ ಪ್ರದೇಶಗಳಿಗೆ ಮಾತ್ರ ಒಂದೇ ಸಮಾನತೆಯಿಂದ, ಒಂದೇ ರೀತಿಯಲ್ಲಿ ಮತ್ತು ಆಯಾ ಪ್ರಾಂತಗಳು ಅಭಿವೃದ್ಧಿ ಹೊಂದಲಿಕ್ಕೆ ಅವಕಾಶವಾಗುವಂತೆ ಹಂಚಬೇಕಾಗಿದೆ. ಯಾವ್ಯಾವ ಬಾಬುಗಳಿಗೆ ಕೊಟ್ಟಿದ್ದಾರೆ ಎಂಬ ವಿವರವನ್ನು ನಮ್ಮೆಲ್ಲರ ಸಮಾಧಾನಕ್ಕೋಸ್ಕರವಾಗಿ ಲೋಕೋಪಯೋಗಿ ಶಾಖೆಯ ಮಂತ್ರಿ

ಗಳಾದ ಮಾನ್ಯ ವೀರೇಂದ್ರ ಪಾಟೀಲ್ ಅವರು ಹೇಳಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇವೆ. ಸುಮಾರು 6-7 ವರ್ಷಗಳಿಂದಲೂ ನಮ್ಮ ಪಾಲಿಗೆ ಸಿಕ್ಕಿದಂಥ ಹಣ ಈಗ ಸಿಕ್ಕಿರುವುದರಿಂದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಖರ್ಚುಮಾಡುವ ಯೋಜನೆಯನ್ನು ಜಾಗ್ರತೆಯಾಗಿ ತಂದು ಆ ಪ್ರದೇಶಗಳಲ್ಲಿರತಕ್ಕಂಥ ಕೆಲವೊಂದು ಕುಂದುಕೊರತೆಗಳನ್ನು ದೂರಮಾಡಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಯವರನ್ನು ಪ್ರಾರ್ಥಿಸುತ್ತೇನೆ. ಇಂತಹ ಒಂದು ತುರ್ತು ಪರಿಸ್ಥಿತಿಯಲ್ಲಿ, ಎಮರ್ಜೆನ್ಸಿ ಪೀರಿಯಡ್ ಇದ್ದಾಗಲೂಕೂಡ ನಮ್ಮ ದೇಶದ ಅಭಿವೃದ್ಧಿಗಾಗಿ ನಮ್ಮ ಸರ್ಕಾರ ತಮ್ಮ ಆದಾಯ ವೆಚ್ಚದಲ್ಲಿ ಶೇಕಡ 50 ಕ್ಕಿಂತ ಮೇಲ್ಪಟ್ಟು ಲೋಕೋಪಯೋಗಿ ಕಾರ್ಯಗಳಿಗೆ ಅಂದರೆ ನೀರಾವರಿ, ರಸ್ತೆ, ವಿದ್ಯುಚ್ಛಕ್ತಿ ಬಾಬುಗಳಿಗೆ ಖರ್ಚುಮಾಡುವ ವಿಷಯ ನಿಜವಾಗಿ ಶ್ಲಾಘನೀಯವಾದತಕ್ಕ ವಿಚಾರವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಈ ಡಿಮ್ಯಾಂಡ್‌ಗಳಿಗೆ ಸಮ್ಮತಿ ಕೊಡುತ್ತಾ ಇನ್ನೂ ಹೆಚ್ಚಿನ ಹಣ ಈ ಕಾಮಗಾರಿಗಳಿಗೆ ಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಮೊಟ್ಟಮೊದಲನೆಯದಾಗಿ ಮಾತನಾಡಬೇಕೆಂದರೆ, ಅದು ನೀರಾವರಿಯ ವಿಷಯ. ಹೈದರಾಬಾದು ಕರ್ಣಾಟಕದ 13 ಸಾವಿರ ಚದರಮೈಲಿಗೆ ಮೇಲ್ಪಟ್ಟ ಪ್ರದೇಶವನ್ನು ತೆಗೆದುಕೊಂಡರೆ, 30 ಲಕ್ಷಕ್ಕೆ ಮೇಲ್ಪಟ್ಟ ಜನ ಸಂಖ್ಯೆಯನ್ನು ತೆಗೆದುಕೊಂಡು ಬಂದಿದ್ದೇವೆ. ನಮ್ಮ ಭಾಗಕ್ಕೆ ಭೀಮಾ, ಕೃಷ್ಣಾ, ಮಲಪ್ರಭಾ ಮುಂತಾದ ನದಿಗಳು ಬಂದಿವೆ; ಎಷ್ಟೋ ಅರಣ್ಯಗಳು ಬಂದಿವೆ. ಇಂಥ ಕೃಷ್ಣಾ, ಭೀಮಾ, ತುಂಗಭದ್ರಾ ನದಿಗಳ ವಿಷಯ ಮಾತನಾಡುವಾಗ ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ತುಂಗಭದ್ರಾ ಯೋಜನೆಯ ಕೆಳಗೆ 5 ಲಕ್ಷದ 80 ಸಾವಿರ ಎಕರೆ ನೀರಾವರಿಯಾಗತಕ್ಕ ಭೂಮಿ ಇದೆ. ಆ ಯೋಜನೆ 1925 ರಿಂದಲೂ ಪರಿಶೀಲನೆಯಲ್ಲಿದ್ದು ಪ್ರಥಮವಾಗಿ 1945 ರಿಂದ ಪ್ರಾರಂಭವಾಗಿ ಇದುವರೆಗೂ ಕೆಲಸ ನಡೆಸಿ, ಅಣೆಕಟ್ಟಿನ ಕೆಲಸ ಮುಗಿದಿದೆ. ಆದರೆ ಕಾಲುವೆಗಳಾಗಿಲ್ಲ, ಸಾಕಷ್ಟು ನೀರಾವರಿ ಸೌಕರ್ಯ ಜನರಿಗೆ ಸಿಕ್ಕಿಲ್ಲ. ನೀರಿದೆ, ನದಿಯಿದೆ, ಜನರಿದ್ದಾರೆ, ಭೂಮಿಯಿದೆ, ಆದರ ಅದರ ಲಾಭ ಪಡೆಯುವ ಶಕ್ತಿ ನಮಗೆ ಬರಲಿಲ್ಲ. ಏಕೆಂದರೆ, ಕೆಲವು ಲೋಪದೋಷಗಳಿವೆ. ಹೈದರಾಬಾದು ಸರ್ಕಾರವಿದ್ದಾಗ ರಾಯಚೂರು ಜಿಲ್ಲೆಯಲ್ಲಿ localisation ಎಂದು ಮಾಡಿದ್ದರು. ಹೀಗೆ ಮಾಡಿ ನೀರು ಹರಿಯಲಾರದೇಯಿದ್ದ ಜಾಗವನ್ನು ಸೇರಿಸಿದ್ದರು; ನೀರು ಹರಿಯುವ ಭೂಮಿಯನ್ನು ಬಿಟ್ಟುಬಿಟ್ಟರು. ನೀರು ಹರಿಯದೇಯಿರುವ ಎಷ್ಟೋ ಭೂಮಿಯನ್ನು ಲೋಕಲೈಸೇಷನ್‌ನಲ್ಲಿ ಸೇರಿಸಿದ್ದಾರೆ. ಯಾವ ಭೂಮಿಗೆ ನೀರು ಹೋಗುವುದಿಲ್ಲವೋ ಆ ಭೂಮಿಯನ್ನು ಮಾಡತಕ್ಕವರ ಮೇಲೆ ತೆರಿಗೆ, ಎಂದರೆ water tax ಮತ್ತು betterment tax ಹಾಕಿದ್ದಾರೆ. ಉದಾರಣೆಗೆ, ಸಿಂದನೂರು, ಗಂಗಾವತಿ ಮತ್ತು ಕೊಪ್ಪಳ ಜನರಮೇಲೆ ಹಾಕಿದ್ದಾರೆ. ಇದನ್ನು ಬದಲಾವಣೆ ಮಾಡುವುದಕ್ಕೆ ಆಗಾಗ ಮನವಿ ಮಾಡಿಕೊಂಡಿದ್ದೇವೆ. ಈ ಸಂಬಂಧದಲ್ಲಿ ನಾನು ಹೇಳುವುದಿಷ್ಟೆ: ಅಲ್ಲಿ ಅದಷ್ಟು ಭೂಮಿ ಇದೆ, ನೀರಿದೆ; ಈ ಯೋಜಯಲ್ಲಿ ನಾವು ಹೆಚ್ಚು ಶ್ರದ್ಧೆವಹಿಸಿ ಕೆಲಸ ಮಾಡುವುದಾದರೆ, ಉತ್ತಮವಾದ ತುಂಗಭದ್ರಾ ನದಿಯಿಂದ ರಾಯಚೂರು ಜಿಲ್ಲೆಯ ಭೂಮಿಯಲ್ಲಿ ಆಹಾರವನ್ನು ಅದಷ್ಟು ಹೆಚ್ಚು ಉತ್ಪತ್ತಿ ಮಾಡಬಹುದು. ಭೀಮಾನದಿಯಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಅದಷ್ಟು ಲಾಭ ಪಡೆಯಬಹುದು. ಆ ಯೋಜನೆಯನ್ನು ತೆಗೆದುಕೊಂಡರೆ, ಸುಮಾರು ಮೂರು ನಾಲ್ಕು ಲಕ್ಷ ಎಕರೆಯಲ್ಲಿ ಬೆಳೆಯಬಹುದು, ನಮ್ಮ ತಾಲ್ಲೂಕಿಗೆ ಲಾಭವಾಗುವ ಸಂಭವವಿದೆ. ಅಪ್ಪರ್ ಕೃಷ್ಣಾ ಯೋಜನೆಯ ಬಗ್ಗೆ ನಮ್ಮ ಮೆಚ್ಚಿನ ನೆಚ್ಚಿನ (ನಾಯಕರಾದ ಮುಖ್ಯ ಮಂತ್ರಿಗಳು) ವಿವರಣೆ ಕೊಟ್ಟಿದ್ದಾರೆ. ಅದರಲ್ಲಿ ನಮಗೆ ವಿಶ್ವಾಸವಿದೆ. ಅಲ್ಲದೆ, ನಾವು ನದಿಯ ಮೇಲಿದ್ದೇವೆ ಅವರು ಕೆಳಗಿದ್ದಾರೆ, ಒಂದು ವೇಳೆ ಕೆಳಗಿನವರು ನಮಗೆ ನ್ಯಾಯ ದೊರಕಿಸದಿದ್ದರೆ, ನ್ಯಾಯ ದೊರಕಿಸಿಕೊಳ್ಳುವ ಶಕ್ತಿ ನಮಗಿದೆ ಎಂಬ ಆತ್ಮ ವಿಶ್ವಾಸವಿದೆ, ಆದ್ದರಿಂದ ಅಪ್ಪರ್ ಕೃಷ್ಣಾ ಯೋಜನೆ ಮುಂದುವರಿಯುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಹೇಳಬಹುದು.

ಸಣ್ಣ ಪುಟ್ಟ ಕಾಮಗಾರಿಗಳನ್ನು ಇದುವರೆಗೆ ಕೆಲವನ್ನು ತೆಗೆದು ಕೊಂಡಿದ್ದಾರೆ. ಹತ್ತಿಗುಣಿ ಯೋಜನೆ ಒಂದು ಸಣ್ಣ ಯೋಜನೆ, ಅದು ಇದುವರೆಗಾಗಲೇ ಮುಗಿಯುತ್ತದೆಂದು ನಿರೀಕ್ಷಿಸಿದ್ದೆವು, ಆ ಅಂತಸ್ತಿಗೆ ಬರಲಿಲ್ಲ. ತುಂಗಭದ್ರಾ, ಭೀಮಾ, ಕೃಷ್ಣಾ ಮತ್ತು ಇನ್ನೂ ಕೆಲವು ಸಣ್ಣ ಸಣ್ಣ ಹೊಳೆಗಳಿವೆ. ಆದರೂ ನಮ್ಮ ಭಾಗದ ನೀರಾವರಿಯ ಸೇಕಡಾವಾರು ವಿಚಾರ ಮಾಡಿದರೆ, ಬಿದರ್ ಜಿಲ್ಲೆಯಲ್ಲಿ ಕೇವಲ 2.34, ಗುಲ್ಬರ್ಗದಲ್ಲಿ 1.25, ರಾಯಚೂರಿನಲ್ಲಿ 3.23 ಪ್ರಕಾರ ನೀರಾವರಿಯಾಗುತ್ತದೆ, ದಕ್ಷಿಣ ಭಾರತದ ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿಯಿದ್ದರೂ ಕೂಡ, ಎಷ್ಟೋ ನದಿಗಳು ಹರಿದರೂ ಕೂಡ, ನೀರಾವರಿ ಇಲ್ಲಿ ಕೇವಲ ಏಳೆಂಟು ಪರ್‌ಸೆಂಟ್ ಇದೆ. ಅದೇ ಮದರಾಸು, ಆಂಧ್ರ ಮತ್ತು ಕೇರಳದಲ್ಲಿ ಹೆಚ್ಚಾಗಿದೆ; ಮಹಾರಾಷ್ಟ್ರ ಕೂಡ ನಮಗಿಂತ ಮುಂದೆ ಹೋಗುತ್ತಾರೆಂದು ಕೇಳುತ್ತಿದ್ದೇವೆ. ನಮ್ಮ ಭಾಗದಲ್ಲಿ ಎಲ್ಲಕ್ಕಿಂತ ಕಡಮೆ, ಎಂದರೆ, ಕೇವಲ ಸೇಕಡ ಎರಡು ಅಥವಾ ಮೂರರಷ್ಟಿದೆಯೆಂದರೆ, ಎಷ್ಟು ಮಟ್ಟಿಗೆ ನಮ್ಮ ಆಹಾರ ಪರಿಸ್ಥಿತಿ ಹಾಗೂ

(ಶ್ರೀ ಶರಣಪ್ಪ)

ಆರ್ಥಿಕ ಪರಿಸ್ಥಿತಿ ಮುಂದುವರಿಯುತ್ತಿದೆ, ಮುಂದುವರಿಯಬಹುದು ಎಂಬುದನ್ನು ನಮ್ಮ ಸರ್ಕಾರದ ಗಮನಕ್ಕೆ ತರಲಚ್ಛಿಸುತ್ತೇನೆ.

ನಮ್ಮಲ್ಲಿನ ರಸ್ತೆಗಳ ವಿಚಾರವನ್ನೂ ನೋಡುವುದಾದರೆ, ನಮ್ಮ ಮೂರು ಜಿಲ್ಲೆಗಳ ಸರಾಸರಿ ತೆಗೆದುಕೊಂಡರೆ, ನೂರು ಚದರ ಮೈಲಿಗೆ ಕೇವಲ ಎಂಟು ಮೈಲಿ ರಸ್ತೆ ನಮ್ಮಲ್ಲಿದೆ. ಇದರಲ್ಲಿ ಬಿದರ್‌ಗೆ 11 ಮೈಲಿ, ಗುಲ್ಬರ್ಗಕ್ಕೆ 12 ಮೈಲಿ, ರಾಯಚೂರಿಗೆ 13 ರಿಂದ 14 ಮೈಲಿ ಈರೀತಿ ಲೆಕ್ಕ ಬರುತ್ತದೆ. ಆದರೂ ಈ ಮೂರು ಕ್ಷೇತ್ರಗಳನ್ನೂ ಒಗ್ಗೂಡಿಸದರೆ ನೂರು ಚದರ ಮೈಲಿಗೆ ಕೇವಲ ಎಂಟು ಮೈಲಿ ರಸ್ತೆ ಇದೆ. ಇದರಲ್ಲಿ ಎಲ್ಲವೂ ಪಕ್ಕ ರಸ್ತೆಯಲ್ಲ, ಸಾಧಾರಣವಾಗಿ ಹೋಗಿ ಬರತಕ್ಕ ರಸ್ತೆ. ನಾನು ಬೇರೆ ಜಿಲ್ಲೆಗಳ ವಿಚಾರ ಹೇಳಿದರೆ ಅವರು ಬೇರೆ, ನಾವು ಬೇರೆ ಎಂದು ಭಾವಿಸತಕ್ಕ ಮನುಷ್ಯನಲ್ಲ. ಆದರೆ ರಸ್ತೆಯ ಕಾಮಗಾರಿ ಅಥವಾ ಬೇರೆ ಯಾವ ಕಾಮಗಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕಾದರೆ, ಎಲ್ಲಿ ಹಿಂದುಳಿದ ಪ್ರದೇಶವಿದೆ, ಎಲ್ಲಿ ಇನ್ನೂ ಕೆಲಸವಾಡತಕ್ಕ ಆವಶ್ಯಕತೆ ಇದೆ, ಎನ್ನುವುದನ್ನು ವಿಚಾರಮಾಡಿ ಅಗತ್ಯವಿರುವ ಕಡೆ ಕಾಮಗಾರಿ ಮಾಡಿಸಿದರೆ ಉತ್ತಮವೆಂದು ಪ್ರಾರ್ಥಿಸುತ್ತೇನೆ. ಉದಾಹರಣೆಗೆ ಮಂಡ್ಯ ಜಿಲ್ಲೆಯಲ್ಲಿ ನೂರು ಚದರ ಮೈಲಿಗೆ 119 ಮೈಲಿ ರಸ್ತೆ ಇದೆ. ಗುಲ್ಬರ್ಗ, ರಾಯಚೂರು, ಬೆಳಗಾಂ ಜಿಲ್ಲೆಗಳನ್ನು ನೋಡಿದರೆ, ನೂರು ಚದರ ಮೈಲಿಗೆ ಕೇವಲ ಎಂಟು ಮೈಲಿ ಇದೆ. ಮಂಡ್ಯ ಜಿಲ್ಲೆ ಮಾತ್ರ ಮುಂದುವರಿದರೆ ಇಡೀ ದೇಶ ಮುಂದುವರಿದ ಹಾಗಾಗುವುದಿಲ್ಲ; ಅಥವಾ ಕೇವಲ ಬಿದರ್ ಜಿಲ್ಲೆ ಮುಂದುವರಿದರೆ ದೇಶವೇ ಮುಂದುವರಿಯುವುದಿಲ್ಲ. ನಮ್ಮಲ್ಲಿರುವ ಎಲ್ಲ ಭಾಗಗಳೂ ಸರಿಯಾಗಿ ಮುಂದುವರಿಯಬೇಕು. ಪ್ರತಿ ಜಿಲ್ಲೆಯಲ್ಲಿಯೂ ಅದಷ್ಟು ರಸ್ತೆಯನ್ನು ನಿರ್ಮಾಣ ಮಾಡಬೇಕು. ಬಿದರ್ ಜಿಲ್ಲೆಯಲ್ಲಿ ಒಂದು ತಾಲ್ಲೂಕಿನಿಂದ ಇನ್ನೊಂದಕ್ಕೆ ಹೋಗಬೇಕಾದರೆ ಒಂಟೆ, ಕುದುರೆ, ಕತ್ತೆಗಳ ಮೇಲೆ ಹೋಗುತ್ತಾರೆ. ಈ ಇಪ್ಪತ್ತನೆಯ ಶತಮಾನದಲ್ಲಿ. ನಮ್ಮ ತಾಲ್ಲೂಕು ನೋಡಿದರೆ ಸುಮಾರು 600 ಮೈಲಿ ಇರುವ ತಾಲ್ಲೂಕಿನಲ್ಲಿ ಕೇವಲ 18 ಮೈಲಿ ಇದೆ. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗುವುದಕ್ಕೆ ಯಾವ ರಸ್ತೆಯೂ ಇಲ್ಲ. ಈ ಖಾತೆಯ ಮಂತ್ರಿಗಳಾದ ವೀರೇಂದ್ರ ಪಾಟೀಲರ ಕ್ಷೇತ್ರ ಚಿಂಚೋಳಿಯಲ್ಲಿಯೂ ಇದೇ ಪರಿಸ್ಥಿತಿ ಇದೆ. ಇಂಥ ವಿಷಯಗಳನ್ನು ಅದಷ್ಟು ಬೇಗ ಗಮನಕೊಟ್ಟು ಸರಿಪಡಿಸಬೇಕು. ನಮ್ಮ ಅಭಿವೃದ್ಧಿಯೇ ನಿಮ್ಮ ಅಭಿವೃದ್ಧಿ, ದೇಶದ ಅಭಿವೃದ್ಧಿ ಎಂಬ ಭಾವನೆಯಿಂದ ಹೆಚ್ಚು ಕಡಮೆ ಮಾಡದೆ ಇತರ ಕಡೆಗಳಿಗೆ ಗಮನ ಕೊಟ್ಟಿರುವಂತೆ ನಮ್ಮ ಕಡೆಯ ಗ್ರಾಮಗಳಿಗೂ ಗಮನವನ್ನು ಕೊಟ್ಟು ರಸ್ತೆ ಸಾರಿಗೆ ಮತ್ತು ನೀರಾವರಿಯ ಬಗ್ಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ನಮ್ಮ ಆರ್ಥಿಕ ಸಂಪತ್ತು ಬೆಳೆದು ನಾವು ನಮ್ಮ ದೇಶದ ಇತರ ಜನರ ಸರಿಸಮಾನರಾಗುವುದಕ್ಕೆ ಅವಕಾಶ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

4-30 P.M.

ಈಗ ಕೆಲವೊಂದು ಲಿಂಕ್ ರಸ್ತೆಗಳು ಮತ್ತು ಇಂಟರ್ ತಾಲ್ಲೂಕು, ಇಂಟರ್ ಡಿಸ್ಟ್ರಿಕ್ಟ್ ರಸ್ತೆಗಳ ಆವಶ್ಯಕತೆ ಬಹಳ ಮುಖ್ಯವಾಗಿ ಗಮನಿಸತಕ್ಕ ವಿಚಾರವಾಗಿದೆ. ಕಲುಬುರ್ಗಿ, ರಾಯಚೂರು ಮತ್ತು ಬಿಜಾಪುರ ಜಿಲ್ಲೆಗಳಿಗೆ ಸಂಬಂಧಪಟ್ಟ ಕೆಲವು ರಸ್ತೆಗಳ ವಿಚಾರ ಹೇಳಬೇಕಾಗಿದೆ. ಈಗ ಷಾಪುರ ತಾಲ್ಲೂಕಗೆ ಸುಮಾರು 150 ಮೈಲಿಗಳಷ್ಟು ಸುತ್ತಿಕೊಂಡು ಹೋಗಬೇಕು. ಅಷ್ಟು ಸುತ್ತನ್ನು ತಪ್ಪಿಸಲು ಸರ್ಕಾರ ನಮಗೆ ಕೇವಲ 16 ಮೈಲಿಗಳ ಒಂದು ರಸ್ತೆ ಮಾಡಬೇಕಾಗಿದೆ. ಈಗ ಕೆಲವೇ ದಿನಗಳ ಹಿಂದೆ ಮಾನ್ಯ ಮಂತ್ರಿಗಳು ಆ ರಸ್ತೆಯನ್ನು ಪ್ರಾರಂಭಿಸಬೇಕೆಂದು ಆದೇಶ ನೀಡಿದ್ದಾರೆ, ಕೆಲವು ಮಟ್ಟಿಗೆ ಕೆಲಸವಾಗಿದೆ. ಆದಷ್ಟು ಕೆಲಸವನ್ನು ತೀವ್ರ ಮಾಡಲು ತಾವು ಒಪ್ಪಿಗೆ ನೀಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ. ಅದಲ್ಲದೆ ದೇವದುರ್ಗದಿಂದ ತಿಲ್ವಾರಕ್ಕೆ ಹೋಗುವ ರಸ್ತೆ ಕೇವಲ 18 ಮೈಲಿಯಿದೆ. ಅದರ ಮಣ್ಣಿನ ಕೆಲಸ ಈ ದಿವಸ ಪ್ರಾರಂಭವಾಗಿದೆ. ಅದನ್ನು ಪಬ್ಲಿಕ್‌ವರ್ಕ್ಸ್ ಶಾಖೆ ತನ್ನ ವಶಕ್ಕೆ ತೆಗೆದುಕೊಂಡು ಪಕ್ಕ ರಸ್ತೆ ಮಾಡಿದರೆ ಕೇವಲ 10-20 ಲಕ್ಷ ಸರ್ಕಾರಕ್ಕೆ ಖರ್ಚಾಗಬಹುದು. ದೇಶದ ಜನತೆಗಾಗಿ, ನ್ಯಾಷನಲ್ ವೆಲ್ತ್ ಉತ್ತಮ ಪಡಿಸಿ ಮನುಷ್ಯನ ಶಕ್ತಿಯನ್ನು ಬೆಳೆಸುವುದಕ್ಕಾಗಿ ಖರ್ಚು ಮಾಡುವುದು ಅನ್ಯಾಯವಾಗುವುದಿಲ್ಲ. ಈ 18 ಮೈಲಿಯ ಒಂದು ರಸ್ತೆ ಮಾಡಿದರೆ ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ಆಹಾರ ಪದಾರ್ಥಗಳನ್ನು ಸರಿಯಾದ ರೀತಿಯಲ್ಲಿ ಸ್ವಲ್ಪ ವೇಳೆಯಲ್ಲೇ ಯಾವ ಕಷ್ಟವೂ ಇಲ್ಲದೆ ಒದಗಿಸಿ ಪ್ರತಿಯೊಬ್ಬ ಮನುಷ್ಯನಿಗೂ ನೆರವಾಗಲು ಮಾರ್ಗ ಮಾಡಿದಂತಾಗುತ್ತದೆ. ಆ ಕಾರಣ ದಯೆಯಿಟ್ಟು ಇಂಥ ಮುಖ್ಯವಾದ ರಸ್ತೆಗಳನ್ನು ತಪ್ಪದೆ ಈ ವರ್ಷ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಈಗ ತಿಂತಣಿ (Tintani) ಸೇತುವೆಗಾಗಿ ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಸೌಕರ್ಯವಾಗಿದೆ. ಆದರೆ ಬಿಜಾಪುರಕ್ಕೆ ಹೋಗಲು ಸ್ವಲ್ಪ ಕಷ್ಟವಿದೆ, ಏಕೆಂದರೆ ತಾಳೀಕೋಟೆ ಮತ್ತು ಮಾಲೂರು ನಡುವೆ ಕೇವಲ 8-9 ಮೈಲುಗಳ ರಸ್ತೆ ಪಬ್ಲಿಕ್‌ವರ್ಕ್ಸ್ ಇಲಾಖೆಯದೇ ಇದೆ. ಅದರಲ್ಲಿ ಮಳೆಗಾಲದಲ್ಲಿ ಮೋಟಾರುಗಳು ಮತ್ತು ಬಂಡಿಗಳು ಹೋಗುವುದಕ್ಕಾಗುವುದಿಲ್ಲ. ಆದುದರಿಂದ ಅದನ್ನು ಸರಿಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಸೂಚಿಸಬಯಸುತ್ತೇನೆ.

ಕೊನೆಯದಾಗಿ ವಿದ್ಯುಚ್ಛಕ್ತಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗ ತುಂಗಭದ್ರ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಕೆಲಸ ನಡೆಯುತ್ತಿದೆ, ಮೂರು ಯೂನಿಟ್ಟುಗಳ ಪೈಕಿ ಎರಡು ಯೂನಿಟ್‌ಗಳ ಕೆಲಸವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಎರಡು ತಿಂಗಳ ಹಿಂದೆ ಆ ಪ್ರಾಂತದ ಕೆಲವೊಂದು ಗ್ರಾಮಗಳಿಗೆ ಬೆಳಕನ್ನು ಒದಗಿಸಿದ್ದಾರೆ. ಅಲ್ಲಿ ಮೂರು ಯೂನಿಟ್ಟುಗಳಿಂದ ಸುಮಾರು 27 ಸಾವಿರ ಕಿಲೋ ವಾಟುಗಳಷ್ಟು ಪವರ್ ಉತ್ಪತ್ತಿಯಾಗಲು ಅವಕಾಶವಿದೆ. ಅದನ್ನು ಮೂರು ನಾಲ್ಕು ಜಿಲ್ಲೆಗಳಿಗೆ ಒದಗಿಸಬಹುದು. ಕೆಲಮಟ್ಟಿಗೆ ಲೈನು ಹಾಕುವ ಕಾರ್ಯವಾಗಿದೆ. ಕೆಲಸ ಭರದಿಂದ ಸಾಗುತ್ತಿದೆ. ಹೆಚ್ಚು ಉತ್ಪತ್ತಿ ಕೂಡಿ ಪಟ್ಟಣದವರಿಗೂ, ಹಳ್ಳಿಯವರಿಗೂ, ವ್ಯವಸಾಯಗಾರರಿಗೂ ವಿದ್ಯುಚ್ಛಕ್ತಿಯನ್ನು ಸಾಕಷ್ಟು ಒದಗಿಸಲು ಅವಕಾಶ ಮಾಡಬೇಕು. ಹಾಗೆ ಮಾಡಿ ಆಹಾರದ ಉತ್ಪನ್ನವನ್ನು ಹೆಚ್ಚಿಸುವುದಕ್ಕೆ ಮತ್ತು ಸಣ್ಣ ಸಣ್ಣ ಕೈಗಾರಿಗಳು, ಕಾರ್ಖಾನೆಗಳನ್ನು ನಡೆಸುವುದಕ್ಕೆ ಅವಕಾಶ ಕಲ್ಪಿಸಬೇಕೆಂದು ಬೇಡಿ ಈ ಒಂದು ವಿಷಯದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ಮತ್ತೊಮ್ಮೆ ವಂದಿಸುತ್ತೇನೆ.

(Sri K. Lakkappa was Standing).

Mr. SPEAKER.—The Hon'ble member must remember that his party has sent a list. He may please look into it, at any rate.

Sri SANJEEVANATHA AIKALA (Suratkal).—Mr. Speaker, Sir, let me make a few general observations first and then come to specific points about which I have sent cut motions. It has been often told that the Public Works Department is a department which by its very nature of work developed itself as an enemy of the people. Rajaji has rightly said that it is the enemy, number one of the public.

Mr. SPEAKER.—It may be so in Madras so far as Rajaji is concerned. In the Mysore State, it is not like that, unless you substantiate it. What the great man has said does not form part of the Budget.

Sri SANJEEVANATHA IKALA. Such are the ways and methods of this department that it plays drucks and drakes with the taxpayers' money. Several projects are placed before the people and to implement these projects, several sections, several divisions, several offices, and several officers have been appointed. Consequently, the out-turn of the work is not quite in relation to the amount spent. Fortunately, this department is manned by a person, no less than a man, possessing vim, vigour and vitality, i. e., in the person of Veerendra. He is rightly Indra Veera as far as this department is concerned. He possesses, as far as I know, a sort of drive to get the works done. But unfortunately, he dismally failed to inject the same vigour, vitality and the same force in the department to get the works done immediately and as quickly as possible and without much waste. Of course, I will never make any accusation without any facts as my disposal against officers of that Department. I know, as far as top-level is concerned, officers at the State capital or the district level, really they are fine officers who are as enthusiastic and energatic as we are in getting implemented the projects sanctioned. But unfortunately at the bottom level, in the lower rung

(SRI SANJEEVANATHA IKALA)

of the ladder, everything is at pell mell. There is no proper co-ordination among the officers in the lower rung. Many of the works are simply kept pending because the head-clerk or an accountant or the cashier will not pass orders which the higher officers want. That is the fate in many offices. I know many of the works could not be implemented merely because the cashier or the accountant or the head-clerk is not given his mamool or gratification. That is what is happening in the small offices even at the district level. This is one serious blot on the Department and I wish the Head of this Department or the Minister looks into these matters and see that such irregularities will not occur and whatever works are sanctioned are implemented immediately. For small technical reasons, works could not be completed. The clerks put unnecessary querries and they simply pull on days. Simple works are dragged on this way for days together. It is my request that the Hon'ble Minister should see that these things should never happen in the lower-rung of the offices.

Several works have to be taken up, as far as roads or bridges and irrigation projects are concerned. Gigantic and massive works are required to be taken up. Big projects and small brains will never go well. Big projects will require big sums of money and bigger men to tackle. Unfortunately it is not so. While entrusting these works, the contract is given with an idea of getting certain benefits from the contractors. That is what happened in many of the projects and consequently we have very bad legacy as far as many projects are concerned especially about Sharavathi. I do not wish to wash the dirty linen here by going i to these affairs.

An HON'BLE MEMBER.—Where is the dirty linen !

Sri SANJEEVANATHA IKALA.—There is enough of it.

Mr. SPEAKER.—Let us discuss the Budget.

Sri SANJEEVANATHA IKALA.—So, I wish that the consideration should be given to the recommendations which have been made by the Resources and Economy Committee to have a State Construction Corporation formed to undertake big works of the Government. Sir, it is said that there are some considerations in giving the contract also. I understand that as far as Huliyar, Hassan-Mangalore ore road is concerned, several representations were made that the work should not be entrusted to big contractors only. What happens ? The four or five big contractors again divide the work to fourth or fifth class contractors and consequently they have proved themselves only to be commission agents. That is what happened in Mangalore-Hassan ore road. I feel that in future, works should be decentralised—smaller estimates should be made so as to facilitate small contractors to take up works.

I now come to the cut motions of which I gave notice. One of my cut motions relates to the failure of Government to give assurance to the

families which are likely to be displaced on account of the location of the all-weether port at Panambur, Mangalore taluk, South Kanara District.

MR. SPEAKER.—Does the Hon'ble Member know who they are?

SRI SANJEEVANATHA IKALA.—I have got all the facts and figures—nearly 1,700 families will be displaced. Now it is almost settled about the location of the all-weether port. It is five miles from Mangalore. Now we have been able to get the co-operation of the people for the location of the harbour at Panambur. We will give every co-operation to the Government. As far as the execution of the work is concerned. But our demand is that the people who are to be displaced should be properly rehabilitated. There is no question of merely giving compensation. Any amount of compensation will not solve the problem. Because in these days, in the coastal areas of South Kanara, it is not possible even to find dwelling places for the people. So, Government must see that they are given Government lands in the coastal side and they must acquire lands belonging to private people if necessary lying vacant. In this area, people who are likely to be displaced and who may lose their occupation should be rehabilitated in such a way that no least difficulty is felt, so that they can carry on their normal work and business in the new places taken over. Along with this, they must be given proper compensation to meet the new Expenditure.

Sir, another cut motion is regarding the payment of compensation for lands acquired in connection with the widening of West Coast Highway as well as for other Government purposes such as the Regional Engineering College at Suratkal. Sir, reference has already been made by me during the course of the Budget debate. I want to emphasise the same thing here again. Sir, four or five years have passed since the people have voluntarily given up their lands for the purpose of the formation of this road. Unfortunately, proposals have been sent and all the papers have been completed in this respect, but not even a naya paisa worth of compensation was given to these people. Several memoranda have been submitted to the Government, but Government seems to possess a deaf ear. The Hon'ble Minister in this House assured that everything will be done here and immediately. But unfortunately everything is kept pending and delayed. Several families, on account of this acquisition of land, are now displaced and they have to seek shelter elsewhere. They want money and they want compensation to be given immediately. But Government have kept them in *trishanku swarga*. Neither they could leave the place nor could they go elsewhere. That is the fate of most of the people who gave their lands voluntarily. I understand that all the work is done by the District Land Acquisition Officer; papers have been completed and sent to the Divisional offices. But simply on technical grounds or on lame excuses, cases are being delayed and payment of compensation has been delayed.

Sir, about frequent transfer of Engineers or Executive officers, it is said that it is very wide-spread in this Department. Last year Sir, six months back, I made a reference to the committal of suicide by an

(SRI SANJEEVANATHA IKALA)

Assistant Engineer at Shimoga. Within the course of three months, he was transferred from one place to another...nearly five places he was transferred, and that was the cause for committing suicide, on the fateful night.

Sir, I came in contact with several Engineers of this Department and they all tell the same story. The result is that they can never give proper attention to any work, continuously and consistantly.

Sir, about broadening west coast road, I had referred to it last year itself. When the actual road breadth is only 38 feet, the land taken is 150 feet wide. I do not understand why so much area should be acquired for a road with a margin of 38 feet. So, I suggest that they may have a uniform margin of 80 feet. I do not expect æroplanes would run there ; after all, it is meant for the use of buses, cars and lorries. I do not know why Government wants 150 feet wide road from Cape Camorin to Delhi. Sir, I understand that in Kerala the breadth is limited to 80 feet. So, the same 80 feet limitation should be fixed in our area, *i.e.*, South Kanara and North Kanara also.

Sir, about construction of walls to rivers for flood prevention, this is a work that has got to be attended immediately because most of our roads run on the river banks and several such projects should be undertaken in our district.

A special feature about my district is the scope for salt water prevention projects in the coastal area. Sir, we have a river for every five miles and they have, what we call, back water channels. Most of these channels flow in the middle of irrigated fields and consequently, the second and the third crop gets destroyed. This is a peculiar feature in South Kanara and North Kanara. Our minor irrigation works should be mainly concentrated on this. We require several such works to be taken up. They do not cost more than 20 to 25,000 rupees. Several plans have been sent in this regard but very few works are sanctioned. I urge that these are some of the most important works which are to be done in respect of salt water prevention dams in our district. Another special feature of our district is that any construction work could be taken up only 6 months during the year. Because the rains start from May and it will be continuously pouring for the next six months, no work could be done during that period. No picture of this is known to the several officers sitting at Bangalore and I wish that this should be noted and the construction works in our districts should be undertaken only during the other six months period and estimates prepared accordingly.

Then, Sir in our districts as well as elsewhere, there are several works half done. Most of these works are left unfinished on the ground of emergency. I suggest that instead of taking up new works, the works already taken up and not completed may be completed first.

Sir, there is no proper co-ordination between the Revenue Department and the Public Works Department so far as the acquisition of land

is concerned. Unnecessary delay is being caused by simply passing on the papers from one department to the other. I urge that there should be some sort of co-ordination between these two departments so far as acquisition of land is concerned.

Sir, while taking up works in our districts, no step-motherly treatment must be shown between area and area. There are so many works to be done in respect of rural communication, roads, culverts and other reservoirs. In Belthangadi and other western parts of our district, we have plenty of hills and fine valleys. If you only put some small bunds between the valleys so much of water could be stored and through small channels water can be taken to various parts of the neighbouring villages. I wish some such survey is undertaken to find out the possibility of formation of such water reservoirs. There is also scope for production of electricity through these reservoirs. Some survey has been made and there are 3 or 4 such works in our districts which are being surveyed. I wish the Government to take up these projects. Thank you, Sir.

ಶ್ರೀ ಎ. ಜಿ. ಬಂದೀಗೌಡ (ಶ್ರೀರಂಗಪಟ್ಟಣ).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ಡಿಮ್ಯಾಂಡ್‌ಗಳನ್ನು ನಾನು ಸಮರ್ಥಿಸುತ್ತ ಇವುಗಳ ವಿಚಾರದಲ್ಲಿ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಇಡಲು ಇಷ್ಟಪಟ್ಟಿದ್ದೇನೆ.

ನನ್ನ ಉದ್ದೇಶವಾದರೂ ಇಷ್ಟೆ—ಈ ಕಾರ್ಯಗಳೆಲ್ಲ ತ್ವರಿತವಾಗಿ ನೆರವೇರಬೇಕು, ಈಗ ನಾವು ಕೊಡತಕ್ಕ ಈ ಹಣ ಸದ್ವಿನಿಯೋಗವಾಗಬೇಕು ಅನ್ನುವ ದೃಷ್ಟಿಯಿಂದ ನಾನೀಗ ಒಂದೆರಡು ವಿಷಯಗಳನ್ನು ಈ ಸಭೆಯಮುಂದಿಡಬೇಕಾಗಿದೆ. ನಮ್ಮ ಈ ವರ್ಷದ ಬಡ್ಜೆಟ್ 100 ಕೋಟಿ ರೂಪಾಯಿಗಳಿವೆ. ಆದರಲ್ಲಿ ನಾನೀಗ ಲೆಕ್ಕ ಹಾಕಿರುವ ಪ್ರಕಾರ ನಾವು 65 ಕೋಟಿ 45 ಲಕ್ಷ ರೂಪಾಯಿಗಳನ್ನು P.W.D. ಮತ್ತು ಅದಕ್ಕೆ ಸಂಬಂಧಪಟ್ಟ ಬಾಬುಗಳಿಗೆ ಕೊಡುತ್ತಿದ್ದೇವೆ. ಈ ಮೊಬಲಗು ಒಟ್ಟಿನಲ್ಲಿ ನಮ್ಮ ಬಡ್ಜೆಟ್ಟಿನ ಶೇಕಡ 65 ರಷ್ಟಿದೆ. ಈ ಹಣ ಈಗ ಸದ್ವಿನಿಯೋಗವಾಗಬೇಕಾಗಿದೆ, ಇದು ಅಗತ್ಯ. ಈಗಾಗಲೇ ನನ್ನ ಅನೇಕ ಮಿತ್ರರು ಇರಿಗೇಷನ್ ಅಂದರೆ ಮೇಜರ್ ಇರಿಗೇಷನ್ ಹಾಗೂ P.W.D. ವಿಚಾರದಲ್ಲಿ ಕೆಲವು ಮಾತುಗಳನ್ನಾಡಿದ್ದಾರೆ. ಆದರಿಂದ ನಾನೀಗ ಹೆಚ್ಚಿಗೆ ಈ ಜನರಲ್ ಸ್ವಭಾವದ ವಿಚಾರಗಳಿಗೆ ಕೈಹಾಕದೆ ಕೇವಲ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಮಾತನಾಡುವುದು ಸೂಕ್ತವಾದುದೆಂದು ಭಾವಿಸಿ ನಮ್ಮ ಜಿಲ್ಲೆಯ ವಿಚಾರವನ್ನುಮಾತ್ರ ಮಾತನಾಡಲಿಚ್ಛಿಸುತ್ತೇನೆ.

ನಾನು ಮೊದಲನೆಯದಾಗಿ ನಮ್ಮ ರಾಜ್ಯಕ್ಕೂ-ಮದ್ರಾಸ್ ಸರ್ಕಾರಕ್ಕೂ 1924ರಲ್ಲಿ ಆದ ಒಂದು ಒಪ್ಪಂದದ ವಿಚಾರವನ್ನು ಪ್ರಸ್ತಾಪಿಸಲಿಚ್ಛಿಸುತ್ತೇನೆ. ಈ ಒಪ್ಪಂದದ ವಿಚಾರ ಈ ದಿವಸ ಹೇಗೆ ಕಾಣುತ್ತಿದೆ ಎಂದರೆ ಇದು ಒಂದು one-way traffic ಇದ್ದಹಾಗೆ ಕಾಣುತ್ತಿದೆ. ಈ ದಿವಸ ಕಾವೇರಿ ನದಿಯನೀರಿನ ಹೆಚ್ಚು ಉಪಯೋಗ ಮದ್ರಾಸ್ ರಾಜ್ಯಕ್ಕೇ ಆಗುತ್ತಿದೆ. ನಮ್ಮ ದೇಶಕ್ಕೆ ಇದರ ಉಪಯೋಗ ಬಹಳ ಕಡಮೆಯಾಗಿದೆ. ನಾವೀಗ ಈ ನದೀನೀರಿನ ಉಪಯೋಗವನ್ನು ಹೆಚ್ಚಿಸಿಕೊಳ್ಳಬೇಕಾದ್ದು ಅಗತ್ಯವಾಗಿದೆ. 1924ರಿಂದ 50ವರ್ಷಗಳ ಕಾಲ ಅಂದರೆ 1974ರ ವರೆಗೂ ಈ ಅವಧಿ ಇರುತ್ತದೆ. ನಾವು ಈ ಅವಧಿಯಲ್ಲಿ ನಮ್ಮ ಪ್ರಯತ್ನಗಳನ್ನು ನಡೆಸದೇಇದ್ದಲ್ಲಿ ನಮಗೆ ಮುಂದೆ ಬಹಳ ಧಕ್ಕೆಯಾಗುತ್ತದೆ. ಈ ದಿವಸ ನಾವು ಕೈಗೊಳ್ಳಲಿರತಕ್ಕ ವಿಚಾರಗಳಲ್ಲಿ ಯಾವುಯಾವುದು ಡಿಸ್ಪ್ಯೂಟ್‌ಗೆ ಸಂಬಂಧಿಸಿರುತ್ತದೆಯೋ ಅಂಥವನ್ನು ಸ್ವಲ್ಪ ಹಿಂದಕ್ಕಿಟ್ಟು ಡಿಸ್ಪ್ಯೂಟ್ ಇಲ್ಲದಂಥ ಬಾಬುಗಳನ್ನು ನಾವು ಕಾರ್ಯಗತಮಾಡಲು ಪ್ರಯತ್ನಿಸುವುದು ಒಳ್ಳೆಯದು. ಇದರಿಂದ ನಮಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಒಂದು ಸೂಚನೆಯನ್ನು ಸರ್ಕಾರಕ್ಕೆ ಕೊಡುತ್ತ ನಾನೀಗ ತಿಳಿಸಬೇಕಾಗಿರುವುದೇನೆಂದರೆ—ನಾವೀ ದಿವಸ ಕಾವೇರಿ ನೀರನ್ನು ಕೇವಲ ಒಂದು ಲಕ್ಷ ಎಕರೆಗಳವರೆಗೆ ವ್ಯವಸಾಯಕ್ಕೆ ಅನುಕೂಲಪಡಿಸಿಕೊಂಡಿದ್ದೇವೆ. ನಮಗಿನ್ನೂ ಕಾವೇರಿ ನದಿಯ ನೀರಿನಿಂದ ಅಂದರೆ K.R. ಸಾಗರದ ಮೂಲಕ ಇನ್ನೂ 20-25 ಸಾವಿರ ಎಕರೆಗೆ ನೀರಾವರಿ ಅನುಕೂಲ ಕಲ್ಪಿಸಿಕೊಳ್ಳಲು ಅವಕಾಶವಿದೆ. ಅದನ್ನು ಮಾಡತಕ್ಕದ್ದು ಅಗತ್ಯವಿದೆ.

1924ನೆ ಇಸವಿಯ ಒಪ್ಪಂದದ ಪ್ರಕಾರವಾಗಿ ನಾವು ಕಾವೇರಿ ನದಿಯ ನೀರಿನ ಪ್ರಯೋಜನವನ್ನೂ ಪಡೆದು ಸುಮಾರು ನಾಲ್ಕು ಲಕ್ಷ ಚಿಲ್ಲರೆ ಎಕರೆಗಳಷ್ಟು ಜಮೀನನ್ನೂ ನೀರಾವರಿಗೆ

(ಶ್ರೀ ಎ. ಜಿ. ಬಂದೀಗೌಡ)

ತರಬೇಕಾಗಿದೆ. ಆದುದರಿಂದ ನಾವೀಗ ಯಾವುದು ವಿವಾದಾಸ್ಪದವಾಗಿಲ್ಲವೋ ಅಂಥ ಪ್ರಾಜೆಕ್ಟ್ ಗಳನ್ನೂ ಎಂದರೆ, ಕಬಿನಿ ಪ್ರಾಜೆಕ್ಟ್, ಹೇಮಾವತಿ ಪ್ರಾಜೆಕ್ಟ್, ಲಕ್ಷ್ಮಣತೀರ್ಥ, ಲೋಕಪಾವನಿ ಇವುಗಳೆಲ್ಲವನ್ನೂ ಜಾಗ್ರತೆ ಕಾರ್ಯರೂಪಕ್ಕೆ ತಂದು ಕೆಲಸ ಮಾಡುವುದು ಬಹಳ ಸೂಕ್ತವಾಗಿದೆ.

5.00 P.M.

ನಮ್ಮ ಮಾನ್ಯ ಮಂತ್ರಿಗಳು ಕಳೆದ ತಿಂಗಳು 9ನೆಯ ತಾರೀಖು ಮಂಡ್ಯಕ್ಕೆ ಬಂದಿದ್ದಾಗ ಅವರ ಗಮನಕ್ಕೆ ನಾವು ತಂದಿದ್ದೇವೆ. ಕಬಿನಿ ಪ್ರಾಜೆಕ್ಟ್ ಕೂಡಲೆ ಆಗಿ ಅದರಿಂದ ಮಂಡ್ಯ ಜಿಲ್ಲೆಯಲ್ಲಿ ಈಗ ವ್ಯವಸಾಯವಾಗದೆ ಇರತಕ್ಕ ಸುಮಾರು 30 ಸಾವಿರ ಎಕರೆಯಷ್ಟು ಜಮೀನು ನೀರಾವರಿಗೆ ಬರುತ್ತದೆಂದು. ಹೇಗೆಂದರೆ ಮದ್ರಾಸ್ ರಾಜ್ಯದೊಡನೆ ಆಗಿರುವ ಒಪ್ಪಂದದ ಪ್ರಕಾರ ನಾವು 900 cusecs ನೀರನ್ನು ಮದ್ರಾಸಿಗೆ ಕೊಡಬೇಕಾಗಿದೆ. ಇದನ್ನು ನಾವು ಕಬಿನಿ ನದಿಯಿಂದ ಮದ್ರಾಸಿಗೆ ಕೊಟ್ಟು ಕಾವೇರಿ ನದಿಯಿಂದ ಎಂದರೆ ಕೃಷ್ಣರಾಜಸಾಗರದಲ್ಲಿ ಉಳಿಯುವ 900 ಕ್ಯೂಸೆಕ್ಸ್ ನೀರನ್ನು ಉಪಯೋಗಿಸಿಕೊಂಡರೆ, ಈಗ ವ್ಯವಸಾಯವಾಗದೆ ಇರತಕ್ಕ ಕೊಪ್ಪ, ಕಾಡ್ಲೆ ಹೋಬಳಿಗಳಿಗೆ ಸೇರಿದ ಹತ್ತು ಸಾವಿರ ಎಕರೆ; ಮಳವಳ್ಳಿ, ಟಿ. ನರಸೀಪುರಕ್ಕೆ ಸೇರಿದ ಹತ್ತು ಸಾವಿರ ಎಕರೆ ಜಮೀನಿಗೆ ರಿವಿಷನ್ ಕೊಡುವುದು ತಪ್ಪಿ, ವ್ಯವಸಾಯಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಕಬಿನಿ ಪ್ರಾಜೆಕ್ಟನ್ನೂ ಕೂಡಲೇ ಪೂರೈಸಿ ಅದರಿಂದ ಬರತಕ್ಕ 900 ಕ್ಯೂಸೆಕ್ಸ್ ನೀರನ್ನು ಮಂಡ್ಯ ಜಿಲ್ಲೆಗೆ ಉಪಯೋಗಿಸಬೇಕೆಂದು ಮೊದಲನೆಯದಾಗಿ ಅವರ ಗಮನಕ್ಕೆ ತರುತ್ತಿದ್ದೇನೆ.

ಎರಡನೆಯದು ಲೋಕಪಾವನಿಗೆ ಒಂದು pickup ಮಾಡಬೇಕೆಂದು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಪಾಂಡವಪುರ ತಾಲ್ಲೂಕು ಮಡಕಪಟ್ಟಣ ಮತ್ತು ಚಿಕ್ಕಮರಳಿ ಗ್ರಾಮಗಳ ಮಧ್ಯೆ ಲೋಕಪಾವನಿ ನದಿಗೆ ಲೆವೆಲ್ ಸಿಕ್ಕಿದೆ. C.D.S. channelಗೆ ಪಿಕ್‌ಅಪ್ ಹಾಕಿಕೊಂಡು channel ಮೂಲಕ ನೀರನ್ನು ತೆಗೆದುಕೊಂಡರೆ C.D.S. channel ನಿಂದ ಬೇಸಿಗೆ ಕಾಲದಲ್ಲಿ ನೀರು ಕೊಟ್ಟು ಸಂಪೂರ್ಣವಾಗಿ ವ್ಯವಸಾಯಕ್ಕೆ ಅನುಕೂಲಮಾಡಬಹುದು, ಅದರಿಂದ ಬಹಳ ಎಕರೆಗಳಷ್ಟು ಜಮೀನಿನಲ್ಲಿ ಕಬ್ಬು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ತೆಗೆದುಕೊಳ್ಳಬೇಕೆಂದು ನಾವು ಹೇಳುತ್ತಿದ್ದೇವೆ. ಇದಕ್ಕೆ ದುಡ್ಡಿಲ್ಲವೆಂದು ಸರ್ಕಾರ ಒಂದುವೇಳೆ ಅಭಿಪ್ರಾಯ ಪಡುವುದಾದರೆ ಪಾಂಡವಪುರ ಸಕ್ಕರೆ ಕಾರ್ಖಾನೆಯವರು ದುಡ್ಡು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಇದರ ಅಂದಾಜು ವೆಚ್ಚ 5 ಲಕ್ಷ 40 ಸಾವಿರ ರೂಪಾಯಿ. ಒಂದುವೇಳೆ ಪಾಂಡವಪುರ ಸಕ್ಕರೆ ಕಾರ್ಖಾನೆಯವರು ಕೊಡದೆಇದ್ದರೆ ರೈತರು ಅಡ್ವಾನ್ಸ್ ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಆದುದರಿಂದ ಲೋಕಪಾವನಿ ಪಿಕ್‌ಅಪ್ ಕೆಲಸವನ್ನೂ ಕೂಡಲೇ ತೆಗೆದುಕೊಳ್ಳಬೇಕೆಂದು ಎರಡನೆಯ ಸಲಹೆ ಕೊಡುತ್ತಿದ್ದೇನೆ.

ಕಾವೇರಿ ನದಿಯಿಂದ ವಿಶ್ವೇಶ್ವರಯ್ಯ ನಾಲಾದಲ್ಲಿ ನೀರು ಹೆಚ್ಚಾಗಿ ಬಂದರೂ ಹುಲಿಕೆರೆ ಟನಲ್‌ಗೆ ನೀರು ಏಳಿಯದೆ ವ್ಯವಸಾಯಕ್ಕೆ ಕಡಮೆಯಾಗುತ್ತಿದೆ. ಆದ್ದರಿಂದ ಹುಲಿಕೆರೆ ಟನಲ್‌ನಿಂದ ಒಂದು channel ತೆಗೆದುಕೊಂಡು ಅದನ್ನು ತುರುವನೂರುಬಳಿ ತೆಗೆದುಕೊಂಡುಹೋದರೆ—ಸುಮಾರು ಹತ್ತು ಸಾವಿರ ಎಕರೆ ಜಮೀನು ವ್ಯವಸಾಯವಿಲ್ಲದೆ. ಇದೆ—ಅದಕ್ಕೂ ನೀರನ್ನು ಕೊಡಬಹುದು. ಹುಲಿಕೆರೆ ಟನಲ್‌ನಿಂದ ಈ ಪ್ರದೇಶ ಸುಮಾರು 10-15 ಮೈಲಿ ಆಗುತ್ತದೆ. ಆ ಪ್ರದೇಶದಲ್ಲಿಯೂ ಕೂಡ ಯಾವ ನದಿಯೂ ಇಲ್ಲ. ಅದಕ್ಕೂ ನೀರನ್ನು ಕೊಟ್ಟಹಾಗೆ ಆಗುತ್ತದೆ. ಅದಕ್ಕೂ ರೈತರು ಮುಂದೆ ಬಂದು ಹಣ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಇದನ್ನೂ ತೆಗೆದುಕೊಳ್ಳಬೇಕೆಂದು ಮೂರನೆಯ ಸಲಹೆ ಮಾಡುತ್ತಿದ್ದೇನೆ.

ಶ್ರೀರಂಗಪಟ್ಟಣ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಅನೇಕ ಪಿಕ್-ಅಪ್‌ಗಳನ್ನು ತೆಗೆದುಕೊಳ್ಳಬಹುದು. ಈಗ ಮೇಜರ್ ಇರಿಗೇಷನ್ ಎಂದರೆ 60 ಕೋಟಿ, 80 ಕೋಟಿ, 100 ಕೋಟಿ ಹೀಗೆಲ್ಲ ಆಗುತ್ತದೆ. Pick-ups ಎಂದರೆ ಎರಡು ಲಕ್ಷ, ಐದು ಲಕ್ಷ, ಹತ್ತು ಲಕ್ಷ ಇಷ್ಟು ಮಾತ್ರ ಆಗುತ್ತದೆ. ಆದರೆ ಅದರಿಂದ ಬರತಕ್ಕ ಪ್ರತಿಫಲ ಬಹಳ, ವ್ಯವಸಾಯಗಾರರಿಗೂ ಕೂಡ ಅನುಕೂಲವಾಗುತ್ತದೆ. ಬಹಳ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಅಂಥ pick-ups ನಾವು ಮೊನ್ನೆ ನೋಡಿದ್ದರಲ್ಲಿ ಬಹಳ ಅನುಕೂಲವಾದವುಗಳು ಬೇಕಾದಷ್ಟಿವೆ. ಅವುಗಳ ಪೈಕಿ ನಾಲ್ಕಾರು ಹೆಸರುಗಳನ್ನು ನಾನು ಕೊಡಲು ಇಚ್ಛೆಪಡುತ್ತೇನೆ. ಸರ್ಕಾರದವರು ವಿಚಾರಮಾಡಿ ಅವುಗಳೆಲ್ಲವನ್ನೂ ಕೂಡ ತೆಗೆದುಕೊಂಡರೆ ನಮಗೆ ವ್ಯವಸಾಯಕ್ಕೆ ಬಹಳ ಜಮೀನು ಬರುತ್ತದೆ. ಮತ್ತು ಸರ್ಕಾರಕ್ಕೆ ಕೂಡ ಫಾಯಿದೆ

ಯಾಗುತ್ತದೆ. ಅಂಥವು ಶ್ರೀರಂಗಪಟ್ಟಣ ತಾಲ್ಲೂಕು ಮೇಳಾಪುರದಹತ್ತಿರ ಒಂದು, ಮತ್ತು ಮಹದೇವಪುರದಹತ್ತಿರ ಎರಡು ಪಿಕ್-ಅಪ್‌ಗಳು. ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿಗೆ ಸೇರಿದ ದೇವೇಗೌಡನ ಕೊಪ್ಪಲು ಪಿಕ್-ಅಪ್, ಟಿ-ಮಲ್ಲಿಗೆರೆ ಪಿಕ್-ಅಪ್, ಕಬ್ಬನಹಳ್ಳಿ ಪಿಕ್‌ಅಪ್, ಕೊತ್ತತ್ತಿ ಪಿಕ್‌ಅಪ್ ಹೀಗೆ ನಾಲ್ಕು ಪಿಕ್‌ಅಪ್‌ಗಳು. ಇದಲ್ಲದೆ ಮಂಡ್ಯ ತಾಲ್ಲೂಕಿನಲ್ಲಿ ದೊಡ್ಡವು ಎರಡು ಪಿಕ್-ಅಪ್‌ಗಳಿವೆ. ಅವುಗಳಿಂದ 20 ಸಾವಿರ ಎಕರೆಯಷ್ಟು ಜಮೀನಿಗೆ ಅನುಕೂಲವಾಗುತ್ತದೆ. ಇವು ಹೊಳಲು ಪಿಕ್-ಅಪ್ ಮತ್ತು ಚಿಕ್ಕಬಳ್ಳಿ ಪಿಕ್-ಅಪ್. ಈ ಆರೇಳು ಪಿಕ್-ಅಪ್‌ಗಳು ಶ್ರೀರಂಗ ಪಟ್ಟಣ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಇರುವುದನ್ನು ತೆಗೆದುಕೊಂಡರೆ ಬಹಳ ಪ್ರಯೋಜನ ವಾಗುತ್ತದೆ.

ಇಷ್ಟನ್ನು ಮೇಜರ್ ಮತ್ತು ಮೈನರ್ ಇರಿಗೇಷನ್ ಸಂಬಂಧವಾಗಿ ಮಾತನಾಡಿ ರಸ್ತೆ ವಿಚಾರ ದಲ್ಲಿ ಒಂದೆರಡು ಮಾತನ್ನು ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ನನ್ನ ಮಾನ್ಯ ಮಿತ್ರರಾದ ಶ್ರೀ ಶರಣಪ್ಪನವರು ಮಂಡ್ಯ ಜಿಲ್ಲೆಯಲ್ಲಿ ನೂರು ಮೈಲಿಗೆ 109 ಮೈಲಿ ರಸ್ತೆ ಇದೆ ಎಂದು ಸರಾಸರಿ ಲೆಕ್ಕವನ್ನು ಕೊಟ್ಟಿದ್ದಾರೆ. ಇರಬಹುದು, ಬಹಳ ರಸ್ತೆಗಳಿವೆ. ಮೊದಲಿನಿಂದಲೂ ಕೂಡ ರಸ್ತೆಗಳಿಗೆ ಹೆಚ್ಚು ಗಮನವನ್ನು ಕೊಡುತ್ತ ಬಂದಿದ್ದೇವೆ. ಇದರ ಜೊತೆಗೆ ಮಂಡ್ಯದಲ್ಲಿ ಎರಡು ಸಕ್ಕರೆ ಕಾರ್ಖಾನೆಗಳಿವೆ. ಅದರಿಂದ ಬರತಕ್ಕ Sugarcane Cess Fund ಉಪಯೋಗಿಸಲು ಒಂದು ಡಿವಿಷನ್ ಮಾಡಿ ಅದಕ್ಕೆ ಒಬ್ಬ ಖಾಸಗಿಯವರನ್ನು ಚೇರ್ಮನ್‌ಮಾಡಿ official and non-official members ಮಾಡಿ, ಆ ಡಿವಿಷನ್ ಮೂಲಕ ಅನೇಕ ರಸ್ತೆಗಳನ್ನು ತೆಗೆದುಕೊಂಡು ಬಹಳವಾಗಿ ಬೆಳಸಿಕೊಂಡು ಬಂದಿದ್ದೇವೆ. Sugarcane Cess ಒಂದು ಟನ್ ಕಬ್ಬಿಗೆ ಆರು ರೂಪಾಯಿ ಪ್ರಕಾರ ಕೊಡುತ್ತಾರೆ. ಮಂಡ್ಯ ಜಿಲ್ಲೆಯಿಂದ 30 ಲಕ್ಷ ರೂಪಾಯಿ ವಸೂಲಾಗುತ್ತದೆ. ಮೈಸೂರು ದೇಶದ ಎಲ್ಲ ಸಕ್ಕರೆ ಕಾರ್ಖಾನೆಗಳನ್ನು ತೆಗೆದುಕೊಂಡರೆ ಒಂದು ವರ್ಷಕ್ಕೆ ಸುಮಾರು 65-70 ಲಕ್ಷ ರೂಪಾಯಿ Sugar cane cess ಬರುತ್ತದೆ. ಇದನ್ನು ನಮ್ಮ ಮೈಸೂರು ದೇಶದಲ್ಲಿ ಪ್ರಾರಂಭ ಮಾಡುವಾಗ ಆಗಿನ ಮಂತ್ರಿವರ್ಯರು ಹೇಳಿದ್ದಾರೆ; ಇದರಿಂದ ಬರುವ ಹಣವನ್ನು ಕಬ್ಬು ಬೆಳೆಯುವ ಪ್ರದೇಶದಲ್ಲಿ ರಸ್ತೆಗಳ ಕೆಲಸಕ್ಕೆ ಉಪಯೋಗಿಸುತ್ತೇವೆ, ಜನರಲ್ ಫಂಡಿಗೆ ಇಟ್ಟುಕೊಳ್ಳುವುದಿಲ್ಲ, ಜನರಲ್ ಬಡ್ಜೆಟ್‌ನಲ್ಲಿ earmark ಮಾಡಿ sugar cane areaದಲ್ಲಿ ಮಾತ್ರ ಉಪಯೋಗಿಸುತ್ತೇವೆಂದು ವಾಗ್ದಾನ ಮಾಡಿದ್ದಾರೆ. ಅದರಂತೆಯೇ ಇಲ್ಲಿಯವರೆಗೂ ನಡೆದುಕೊಂಡು ಬಂದಿದೆ. ಈಗ ಅದನ್ನು ಜನರಲ್ ಬಡ್ಜೆಟ್ಟಿಗೆ ಸೇರಿಸಿಕೊಂಡು ಒಂದು ವರ್ಷಕ್ಕೆ 15-20 ಲಕ್ಷ ರೂಪಾಯಿಗಳನ್ನು ಕೊಡು ತ್ತಿದ್ದಾರೆ. ಈ ವರ್ಷವೂ ಕೂಡ Sugar Cane Cess Fundನಿಂದ 20 ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಇದರಿಂದ ಬರತಕ್ಕ 70 ಲಕ್ಷ ರೂಪಾಯಿಗಳಲ್ಲಿ 20 ಲಕ್ಷ ರೂಪಾಯಿಮಾತ್ರ ಕೊಟ್ಟಿದ್ದಾರೆ. ಕಬ್ಬು ಬೆಳೆಯುವ ಪ್ರದೇಶದಲ್ಲಿ ಗಾಡಿಗಳ ಮೂಲಕ ಕಬ್ಬನ್ನು ಸಾಗಿಸುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಆದುದರಿಂದ sugar cane cessನಿಂದ ಬರತಕ್ಕ ಹಣವನ್ನೆಲ್ಲಾ sugarcane areaಕ್ಕೆ ಉಪಯೋಗಿಸತಕ್ಕದ್ದು ಬಹಳ ಸೂಕ್ತವೆಂದು ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ.

Rural Communication Roads ಈ ವಿಚಾರದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದಾಗ ಮಾನ್ಯ ಮಂತ್ರಿಗಳ ಗಮನಕ್ಕೆ ಕೆಲವು ವಿಷಯಗಳನ್ನು ತಂದಿದ್ದೇನೆ. R.C. ರಸ್ತೆಗಳನ್ನು ಒಳ್ಳೆಯ ಉದ್ದೇಶದಿಂದ ಪ್ರಾರಂಭ ಮಾಡಿದ್ದಾರೆ ಎರಡನೆಯ ಪಂಚವಾರ್ಷಿಕ ಯೋಜನೆ ಮುಗಿದು ಮೂರನೆಯ ಯೋಜನೆಯಲ್ಲಿ ನಾವಿದ್ದೇವೆ. ಇದು ಮುಗಿಯುವುದರೊಳಗಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಐವತ್ತು ಮೈಲಿಯಷ್ಟಾದರೂ R.C. roads ಮಾಡಬೇಕೆಂದು ಪ್ರಾರಂಭ ವಾಯಿತು. ಕೆಲವರು ಉತ್ಸಾಹದಿಂದ 50 ಮೈಲಿಗಿಂತ ಹೆಚ್ಚು ಎಂದರೆ 100-150 ಮೈಲಿ ಮಾಡಿದ್ದಾರೆ. ಕೆಲವರು ಐವತ್ತು ಮೈಲಿ ಇಟ್ಟುಕೊಂಡಿದ್ದಾರೆ. ಇನ್ನೂ ಕೆಲವರು ಬಹಳ ಕಡಮೆ ಮಾಡಿದ್ದಾರೆ. ಏನೇ ಇರಲಿ ಈಗ R.C. roads ಪ್ರಾರಂಭಮಾಡಿದ್ದೇವೆ ಮತ್ತು ಅದನ್ನು ಮಾಡು ವುದಕ್ಕೆ ಅನುಮತಿಯನ್ನು ಕೂಡ ಕೊಟ್ಟಿದ್ದೇವೆ ಒಂದು ವಿಧದಲ್ಲಿ. ಆದುದರಿಂದ ಯಾವ ಯಾವ ತಾಲ್ಲೂಕಿನಲ್ಲಿ R.C. roadsಮಾಡಿ ಆಗಿದೆಯೋ ಅಲ್ಲಿ ಬರೀ ಮಣ್ಣನ್ನು ಹಾಕಿರುವುದರಿಂದ ಜನಗಳು ಕೂಡ ತಿರುಗಾಡುವುದಕ್ಕಾಗಿದೆ, ಗಾಡಿಗಳು ಹೋಗುವುದಕ್ಕೆ ಆಗದೆ ದತ್ತೂರಿ ಗಿಡ ಬೆಳೆದುಕೊಂಡು ತಿರುಗಾಡುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಆದುದರಿಂದ R.C. roads ಎಂದು ಯಾವುದನ್ನು ಪ್ರಾರಂಭಮಾಡಿದ್ದೇವೆ ಆ ರಸ್ತೆಗಳನ್ನಾದರೂ ನಾವು ಮುಗಿಸಿ ಜನಗಳಿಗೆ ಉಪಯೋಗವಾಗುವಂತೆ ಮಾಡಿಕೊಟ್ಟರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಒಂದುವೇಳೆ ನಮ್ಮ ಮಂತ್ರಿವರ್ಯರು ದುಡ್ಡಿಲ್ಲ ಎಂದು ಹೇಳುವುದಾದರೆ, ಅದಕ್ಕೆ ಈಗಾಗಲೇ ನಮ್ಮ ಚೀಫ್ ಮಿನಿಸ್ಟರವರು ಒಂದು ಸಲಹೆ ಕೊಟ್ಟಿದ್ದಾರೆ: ಅದೇನೆಂದರೆ, ಯಾವುದಾದರೂ ಒಂದು ಇರಿಗೇಷನ್ನು ತೆಗೆದುಕೊಳ್ಳಲು ಅಲ್ಲಿರುವ ಜನರೇ ಮುಂದೆ ಬಂದು ಸಾಲದ ರೂಪದಲ್ಲಿ ಸರಕಾರಕ್ಕೆ ಹಣ ಕೊಡಲು ಒಪ್ಪಿದರೆ, ಆ ದುಡ್ಡನ್ನು

(ಶ್ರೀ ಎ. ಜಿ. ಬಂದೀಗೌಡ)

ತೆಗೆದುಕೊಂಡು ಇಂತಹ ಕೆಲಸಗಳನ್ನು ಎಲ್ಲಿ ಕಡೆಯಲ್ಲಿಯೂ ಮಾಡಬಹುದು. ಹಾಗೆಯೇ R.C. ರೋಡುಗಳಕೆಲಸ. ಇನ್ನಿತರ ಪ್ರಾಜೆಕ್ಟಿನ ಕೆಲಸಗಳಿಗೂ ದುಡ್ಡು ಕೊಡಲು ನಮ್ಮ ಭಾಗದ ಜನ ಸಿದ್ಧರಾಗಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಯಾರಾದರೂ ದುಡ್ಡುಕೊಟ್ಟರೆ ಮಾಡೋಣ.

ಶ್ರೀ ಎ. ಜಿ. ಬಂದೀಗೌಡ.—ಆದುದರಿಂದ ಮಾನ್ಯ ಮಂತ್ರಿಗಳು ಈ ರಸ್ತೆಯ ಕೆಲಸಗಳನ್ನೂ ಪೂರ್ತಿಮಾಡಬಹುದು ಎಂದು ಇಲ್ಲಿ ಸೂಚನೆ ಮಾಡುತ್ತೇನೆ. ಕೆಲವುಕಡೆ ಒಂದು ತಾಲ್ಲೂಕಿನಲ್ಲಿ R.C. ರೋಡನ್ನು ಕೇವಲ ನಾಲ್ಕು ಮೈಲಿಯಷ್ಟು ಮಾತ್ರ ಮಾಡಿದ್ದಾರೆ. ಈ ರೀತಿ ಅಲ್ಲಿ ಅನ್ಯಾಯ ಮಾಡಲು ಏನು ಕಾರಣವೋ ಗೊತ್ತಿಲ್ಲ. ಅಲ್ಲಿಯೂ 50 ಮೈಲಿಗಳಷ್ಟು ರಸ್ತೆಮಾಡಿಸಿ ಕೊಡಬೇಕು. ಇಂತಹ ರಸ್ತೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೆಂದು ನಾನು ಸೂಚನೆ ಮಾಡುತ್ತೇವೆ.

ನಮ್ಮ ಊರಿನ ಹತ್ತಿರ ಶಗಡವಾಡಿ ಎನ್ನುವಲ್ಲಿ ಒಂದು ಹಳ್ಳ ಇದೆ. ಅದಕ್ಕೆ ಒಂದು Causeway ಕೂಡ ಇತ್ತು. ಈಗ ಅದು ಬಿದ್ದುಹೋಗಿದೆ. ಇದು ಹೋಗಿ ಸುಮಾರು ಏಳು ವರ್ಷಗಳಾಗಿದೆ. ಈ ಹಳ್ಳದಲ್ಲಿಯೇ ಅನೇಕ ಗಾಡಿಗಳು, ಬಸ್ಸುಗಳು, ಕಾರುಗಳು ಎಲ್ಲ ಓಡಾಡುತ್ತಿವೆ. ಕೆಲವುವೇಳೆ ಈ ಹಳ್ಳದಲ್ಲಿ ಒಂದುಸಾರಿ ಹೋಗುವಾಗ ನೀರಿರುವುದಿಲ್ಲ. ಆದರೆ ವಾಪಸು ಬರುವಾಗ ನೀರು ಬಂದು ಅಲ್ಲಿ ಓಡಾಡುವ ವಾಹನಗಳಿಗೆ ಅನಾನುಕೂಲವಾಗುತ್ತಿದೆ. ಈ ತೊಂದರೆಯನ್ನು ಅನೇಕಸಾರಿ ಸರಕಾರದ ಗಮನಕ್ಕೆ ತಂದಿದ್ದೇನೆ. ಈಗ ಎಮರ್ಜನ್ಸಿಗೋಸ್ಕರ ಇದನ್ನು ಸ್ವಲ್ಪ ದಿವಸ ಪೋಸ್ಟುಪೋನು ಮಾಡಿದ್ದೇವೆಂದು ಹೇಳುತ್ತಾರೆ. ಇದು ಪೋಸ್ಟುಪೋನು ಮಾಡತಕ್ಕ ವಿಷಯವಲ್ಲ. ಆದಷ್ಟು ಜಾಗ್ರತೆ ಇದನ್ನು ತೆಗೆದುಕೊಂಡು ನೆರವೇರಿಸುತ್ತಾರೆಂದು ನಾನು ನಂಬುತ್ತೇನೆ. ಮಹದೇವಪುರದ ಬಳಿಯಲ್ಲಿ ಕಾವೇರಿ ನದಿ ಹರಿದುಹೋಗುತ್ತಿದೆ. ಇಲ್ಲಿ ಒಂದು ಸೇತುವೆಯನ್ನು ಕಟ್ಟಿಸಿ ಕೊಡಬೇಕಾದುದು ಬಹಳ ಅಗತ್ಯ. ಸರಕಾರದವರು ಇದನ್ನುಕೂಡ ಎಮರ್ಜನ್ಸಿ ಎಂದು ಕೈ ಬಿಟ್ಟಿದ್ದಾರೆಂದು ತೋರುತ್ತೆ. ಬಜೆಟ್ಟಿನಲ್ಲಿ ಇದಕ್ಕಾಗಿ 12 ಲಕ್ಷ ರೂಪಾಯಿಗಳನ್ನು ಸೇರಿಸಿದ್ದುದನ್ನು ಏನು ಕಾರಣವೋ ಈ ವರ್ಷ ಮಾಡಿಲ್ಲ. ಕಾವೇರಿ ನದಿಗೆ ಇದು ಅಗತ್ಯವಾದ ಸೇತುವೆ. ಈ ಸೇತುವೆ ಕೆಲಸವನ್ನು ಕೂಡಲೆ ತೆಗೆದುಕೊಂಡು ಮಾಡಿ ಮುಗಿಸಬೇಕೆಂದು ನಾನು ಕೋರುತ್ತೇನೆ. ಇದಕ್ಕಾಗಿ ಟೆಂಡರನ್ನು ಕರೆದಿದ್ದರು. ಅಲ್ಲದೆ ಕೆಳಗಿನ ಅಧಿಕಾರಿಗಳು ಡಿಸೈನು, ಪ್ಲಾನುಗಳು ಮಾಡಿ ಮೂರು ನಾಲ್ಕನ್ನೂ ಕೂಡ ಒಪ್ಪಿಗೆಗಾಗಿ ಕಳುಹಿಸಿದ್ದರು ಎಂದು ತಿಳಿದುಬರುತ್ತದೆ. ಇದರಬಗ್ಗೆ ಇನ್ನೂ ಸರಕಾರ ಮಾಡಬೇಕೇ ಇಲ್ಲವೇ ಎನ್ನುವಂತಿದೆ. ಆದ್ದರಿಂದ ಮಹದೇವಪುರದ ಈ ಸೇತುವೆಯನ್ನು ಆದಷ್ಟು ಜಾಗ್ರತೆ ಮಾಡಿಸುತ್ತಾರೆಂದು ಭಾವಿಸುತ್ತೇನೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri N. O. SAMAJI (Belgaum-II).—[*Spoke in Marathi*].

5-30 P.M.

Mr. SPEAKER.—What time will be required by the Hon'ble Minister to reply?

Sri VEERENDRA PATIL.—I will require 2 hours.

Sri S. SIVAPPA.—The time allotted for this Demand is 2 days. Yesterday we had discussed it for one hour. So, we may discuss it tomorrow up to 4 O' clock.

Mr. SPEAKER.—We may meet at 12 NOON tomorrow. Sri S. Sivappa, can think it over and tell me.

†Sri M. SRINIVASA NAYAK (Mangalore-I).—Mr. Speaker, Sir, I rise to support the Demand placed before this August House by the Hon'ble Minister for Public Works. Public Works Department is a welfac

Department. Public Works Department is criticised by my friends on the Opposition side as Public enemy No 1. But I would say........

MR. SPEAKER.—That has already been replied to.

SRI M. SRINIVASA NAYAK.—I would say Public Works Department is a welfare Department which seeks to transform the State into a welfare State. Education and Public Works are the two main portfolios or Departments which seek to transform the face of this State and I should say that the Public Works Department in our State has done well for the last 10 years and today we can be proud that we have achieved so much in our State. The Chief Engineer and the Department has bestowed very good attention.

ಶ್ರೀ ಕೆ. ಪಿ. ರೇವಣ್ಣಸಿದಪ್ಪ.—ಅಕ್ಕಪಕ್ಕದ ಸಂಸ್ಥಾನಗಳಿಗೆ ಹೋಲಿಕೆ ಆಗುವ ಹಾಗೆ ಹೇಳಿ.

ಶ್ರೀ ಎಂ. ಶ್ರೀನಿವಾಸ ನಾಯಕ್.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಕೆಲವು ವಿವರಗಳನ್ನು ಕೊಡುತ್ತಾರೆ. We should congratulate the Chief Engineer and the Department for the very good work they have done during these years. There is a feeling among the Government here and there in the State the South Kanara is a place where honey and milk flow. I hail from South Kanara and would like to place before this August House and the Government that South Kanara is a place which is a remote malnad area and it does require careful attention of the Government for its due development. One thing I would like to place before the Government at this stage is that South Kanara has not received as much attention it should have because South Kanara is a place which is thickly populated. I should say that the density of population in South Kanara is 410 per square mile which is equivalent or coming nearer to Bangalore. The population density of North Kanara is only 131; the population density of Shimoga is 163; that of Hassan is 275; and that of Mysore is 308.. Taking into consideration the density of population, the Public works that ought to have been done in South Kanara ought to have had preferential share. Further, our terrain is hilly; we have got excessive rains; the rainfall in South Kanara is over 2,500 m.m. whereas in Hassan and Shimoga it is only 1,500 to 2,000 m.m. In Mysore Belgaum and Dharwar it is 600 to 900 m.m. per year. We have got 21 rivers which go breadthwise our District and it has got more than 3,000 tributaries and over a lakh of channels. These have to be bridged so that the traffic from the interior areas flows to Cities. We are thinking in terms of having minor irrigation and major irrigation and increasing foodstuffs. If these were to be achieved, we must have rural roads to bring this produce to the market place at a very cheap rate so that overhead charges incurred on this does not affect the price of the commodities. If that is so, there is need that the Public Works Department has to review the allocations made to my District, that is, South Kanara and see that proper allocations are made for rural communications and roads and work taken up during this year.

There is also a feeling that there are many development works in South Kanara developed at the cost of other districts. I may say that the bridges built there are at the cost of the Central Government. Even when South Canara formed a part of Madras, the bridges across the

(SRI M. SRINIVASA NAIK)

Pavanji River, Netravati River and the Multi river were built at the cost of the Central Government under the Road Transport Fund. The alignment of the West Coast road was changed through the efforts of our representatives in the Parliament. The roads cross the Netravati, Gangavati and other major rivers. The Netravati bridge costing a crore of rupees, the bridge across Gangavati costing 60 lakhs, the bridge across Kalyanapuri costing 15 lakhs and the bridge across Mubaguti costing several lakhs of rupees, were all built at the cost of the Central Government and it was all through the efforts of our representatives in the Parliament and so much cost is saved to the Government. The old alignment would have to pass through the Ghat section which is vital to be opened up. There we have a lot of forest wealth and it is said that South Canara's forest wealth is valuable and the Government is getting much income from the forest produces of malnad area. The Madras Government and the Mysore Government have agreed to build up projects over the old alignment of the West Coast even though there is the Central Government's present alignment so that the hinterland, the lower ghat section may be opened up. I may say that your constituency is also involved in a particular way.

Mr. SPEAKER.—My constituency is safe in the hands of the Minister for Public Works.

Sri M. SRINIVASA NAYAK.—I know you were pleased to remark that your constituency is safe in the hands of the Government. But, I hailing from South Canara take it as a duty cast on me to refer to something about that constituency also. If you were on this side of the House, I know you would have ably pleaded for your constituency. But you are now in a different position. But, whatever it be, the Government had also agreed to take up certain roads in malnad area as a certainty in the last budget. But so far these works have not been taken up. If they are not taken up this year, there are beautiful lands, arable lands where plenty of water is available all through the year, and they will go as waste. Such lands can be used for the purpose of growing more food and that would be very valuable for the people of our district. If that road is not taken up, I think the constituency is going to suffer and the food crops that we would otherwise raise would go waste. So, I appeal to the Government to examine that question and such of the works that were included in the last budget as asterisk works should be taken up. Otherwise a great injustice will be done to the people living in these areas, and a great injustice will be done to the constituency of the Hon'ble Speaker. I would like to say that the people of South Canara are enterprising. Inspite of the handicaps they are facing in regard to rainfall, in regard to terrain that has been cut off by the rivers, and hard soil. By their own efforts the people have built up 74 educational institutions as high schools. There are 104 high schools in our district, out of which 24 are District Board schools, 74 are aided ones and six are run by private enterprise. Further there are

11 colleges, out of which three are Government ones and eight are run by private agencies. Similarly, the people in South Canara have invested more than Rs. 10 crores on education and I have talked about it during the discussion of Education budget. Even the legitimate grants that are due to these institutions have not yet been disbursed though we are nearing 31st March.

I am not asking too much of the Government nor am I asking too much from the Government. I am only trying to draw the attention of the Government to certain facts that we in South Canara are contributing nearly 40 lakhs to the Motor Vehicles Taxation fund; we are paying nearly one crore by way of sales tax and there is hundred per cent collection; 100 lakhs are paid as income-tax and 125 lakhs as excise duty. There is cent per cent collection. We were paying about 40 lakhs as land revenue and now we are paying 80 lakhs and there is cent per cent collection. We are not due to the Government by way of taxation in our district. Further, we have built up our own industries. We have nearly 50 tile factories in which our people have invested more than Rs. 10 crores. We have nine Cashew factories, which is a dollar earning commodity. The Government have shown keen interest in the development of the cashew industry. All these require roads. Unless there are proper roads to take these produces to the market, the produce grown will go as waste, involving their head weight charges for conveying them. We have 20 saw mills and the investment is about a crore of rupees. The malnad area has to be opened up to get timber for the saw mills established. Further, from Mangalore port itself we are exporting nearly 80 per cent of coffee grown in Mysore. That means transport facilities to the port and transport facilities for carrying coffee and timber from the hinterland to the main city has to be developed. I may also bring the fact to the notice of the House, that Hassan-Mangalore road is being developed and 50 miles of the road are lying in South Canara. From Mudigere to Mangalore ore is being carried and that road has not been developed. Twelve million tons of iron ore is being shipped from the Mangalore port. So, it may be imagined how these roads will have to be developed. Further, when the port is developed, Mangalore port will receive and despatch goods to the whole State of Mysore. That will be the gateway of Mysore and when the Home Minister visited Mangalore, he was pleased to say that in due course of time Mangalore will be the face of Mysore State. That being the case it is essential that the Public Works Department of our Government should bestow keen interest on the development of roads in our district. But for the fact that the port is developed and the railway is linked, we will find ourselves too late to take up development of roads because development works of the port and other things will be very much hampered. That is why I am cautioning the Government beforehand so that we may have a long range policy and have proper roads opened up from the hinterland and other roads that lead to the port and development plans taken up at this stage itself. In South

(SRI M. SRINIVASA NAIK)

Canara we have six miles of railway. The Hassan-Mangalore railway which comes up will be entirely at the cost of the Central Government.

God has given us a shore of 200 miles and we can increase food production by taking up minor and major irrigation works. We have not yet applied our mind and sufficient thought on the development of fisheries on our coast. South Canara is a rich coast with tremendous deposit of fish. I should say that Banasandra mines or any other mines has got a limit. But that mine which is available in our sea is unlimited.

That has to be tapped. Fisheries roads are to be built up and proper facilities for fishermen have to be afforded. I am going to take the oppurtunity to speak on the Fisheries demand separately when it comes up here, but still I would like to make just a passing remark about it on the Public Works Demand. Without proper fishery roads, the fishermen will not be able to get that sort of convenience for them to bring the fish from the shore to the marketing centres. Last year, there was a proposal to form fishery roads and I do not know whether they will be continued or completed this year. Anyway, I am taking this opportunity to request the Hon'ble Minister for Public Works to see that the fishery roads are given priority and taken up and completed this year. During the Second Plan only Rs. 29 lakhs were spent in my district whereas, as I said earlier, we have contributed to the exchequer of our State to a very large extent. We were looking forward to the day when we would become part of Mysore State for our dreams to be realised and we hope and trust that the aspirations with which we became part of the Mysore State will be fulfilled and that the Hon'ble Minister for Public Works will take interest in the development of South Kanara.

MR. SPEAKER.—What about the fishing harbours?

SRI M. SRINIVASA NAIK.—Only Rs. 10,000 have been set apart for the fishing harbour. It is quite necessary that a fishing harbour should be established in South Kanara; it may be in Malpe or in Coondapur. It is quite necessary that a fishing harbour should be established in Mangalore because fish is a staple food and the fish that is available in the deep seas is equivalent to milk, eggs and fruits. When we are spending so much on agriculture and minor irrigation, we should also make adequate provision for fisheries as it is also an equally important foodstuff. It is an open treasure into which we can put our hands and draw as much staple food as we want. I therefore request the Government that they should improve the fishery roads and provide a fishing harbour for our district. For the development of Karwar they have spent more than they should have spent legitimately for Mangalore, but we have no grievance on that score because after all Karwar is a place in Mysore State. I am only drawing the attention of the Government to the fact that Mangalore lacks the attention of the Government. When T. Mariappa was in power in Mysore, it was represented to him

that more money should be provided for South Kanara. He came on an extensive tour, went round the district and said that the Mysore Government has not spent as much money as it ought to have and he has left a note in the Government files that Mangalore has not received the proper quota of expenditure from the Mysore Government. Whatever major works have been taken up have been done at the cost of the Central Government. What I am driving at is that it is not too late even now for the Minister to rethink and give proper allocations to our district so that our malnad roads and communications can be improved.

Another thing is that our rains begin from 15th May or June and last till November so much so the workable season in South Kanara is only 8 months as against 12 months in the maidan areas. So, materials such as cement that are required for developmental works in Mangalore should be made available in good time so that the works that are going to be taken up could be completed in the course of these 8 months. I know the Chief Engineer had an occasion to be there during the rains. I do not know whether the Minister has been able to go to Mangalore during the rainy season and I do not know whether I can on the floor of the House invite him to go over there during the rainy season so that he may know the difficulties there. We have not got sufficient communicable roads by which we can go to the remotest villages. So, it is necessary that our bridges and roads should be properly maintained and rural roads should be made available to the people so that the agricultural produce can be brought to the cities and the overhead charges can thereby be reduced to a great extent.

We are thinking of minor irrigation only. There are some major irrigation projects which can and should be taken up in our district. Now, the rain water is going to waste; it is being drained to the sea. It could be stored by having a big reservoir at Halady or some other place. I request the Hon'ble Minister to get this properly investigated. When we were in Madras, these works were got examined by the Madras Government and I request the Government of Mysore to pursue those works and see that major irrigation works are also made available to our district so that our people may be able to grow more food.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈ ಲೋಕೋಪಯೋಗಿ ಖಾತೆಯ ಬಗ್ಗೆ ಮಾತನಾಡುತ್ತಾ ನನ್ನ ಮಿತ್ರರಾದ ಅನೇಕ ಸದಸ್ಯರುಗಳು ಕಟುವಾಗಿ ಟೀಕೆ ಕೂಡ ಮಾಡಿದ್ದಾರೆ. ಅದರಲ್ಲೂ ಸಹ ಕಾಂಗ್ರೆಸ್ ಪಕ್ಷದವರು ಬಹಿರಂಗವಾಗಿ ವಿರೋಧ ಮಾಡದೆ ಹೋದರೂ ಅಂತರಂಗದಲ್ಲಿ ವಿರೋಧ ಮಾಡಿ ಹೇಳಿದ್ದಾರೆ. ಅವರು ಆ ರೀತಿ ಹೇಳುವುದಕ್ಕೆ ಏನು ಕಷ್ಟವಿದೆಯೆಂಬುದು ನನಗೆ ಗೊತ್ತು. ಆದರೆ ಈ ಮರಾಮತ್ತು ಇಲಾಖೆಗೆ ಕೋಟ್ಯಾಂತರ ರೂಪಾಯಿಗಳ ಹಣವನ್ನು ಪ್ರತಿವರ್ಷವೂ ಕೂಡ ಖರ್ಚುಮಾಡಬೇಕಾಗಿದೆ. ಇದರಿಂದ ದೇಶದ ಬಹುತೇಕವಾದಂಥ ಅಭಿವೃದ್ಧಿ ಆಗಬೇಕಾದುದು ಇದೆ. ಈ ಇಲಾಖೆ 15 ವರ್ಷಗಳ ಅವಧಿಯಲ್ಲಿ ನಮ್ಮ ದೇಶದಲ್ಲಿ ಆಹಾರೋತ್ಪಾದನೆಯನ್ನು ಜಾಸ್ತಿ ಮಾಡುವುದಕ್ಕೆ ಯಾವ ಒಂದು ಕ್ರಮವನ್ನೂ ಸಹ ಸರಿಯಾಗಿ ಹಾಕಿಲ್ಲವೆಂಬ ವಿಚಾರವನ್ನು ನಾನು ಹೇಳಬೇಕಾಗಿದೆ. ಈಗತಾನೆ ನಮ್ಮ ಸ್ನೇಹಿತರು ಹೇಳುತ್ತಿದ್ದರು. ಈ ತುರ್ತುಪರಿಸ್ಥಿತಿಯಿಂದ ನಮಗೆ ಸಾಕಾದಷ್ಟು ಹಣ ದೊರಕುವುದಿಲ್ಲ. ಹಣದ ಅಭಾವ ಜಾಸ್ತಿ ಇದೆ. ಮುಖ್ಯವಾಗಿ ದೇಶದಲ್ಲಿ ಆಗಬೇಕಾದಂಥ ಕೆರೆ ಕಾಮಗಾರಿ ಕೆಲಸಗಳು, ನೀರಾವರಿ ಕೆಲಸಗಳು ಬಹಳ ಮಟ್ಟಿಗೆ ಕುಂಠಿತವಾಗಿವೆಯೆಂದು ನಾನು ಹೇಳುತ್ತೇನೆ. ಹದಿನೈದು ವರ್ಷಗಳ ಅವಧಿಯಲ್ಲಿ ಯಾವ ತುರ್ತುಪರಿಸ್ಥಿತಿ ಕಾಣದೇ ಇದ್ದ ಸಮಯದಲ್ಲೂ ಕೂಡ ಲೋಕೋಪಯೋಗಿ ಇಲಾಖೆ ನಿಜವಾಗಿಯೂ ಕೂಡ ನಮ್ಮ ದೇಶದ ಅಭಿವೃದ್ಧಿಯನ್ನು ಸರಿಯಾಗಿ ಸಾಧನೆ ಮಾಡದೇ

(ಶ್ರೀ ಕೆ. ಲಕ್ಕಪ್ಪ)

ಇರುವ ನಿದರ್ಶನಗಳು ನಮಗೆ ಬೇಕಾದಷ್ಟು ದೊರೆತಿವೆ. ಮರಾಮತ್ ಇಲಾಖೆಯಲ್ಲಿ ಆಗ ಬೇಕಾದ ಕೆಲಸಗಳು ಶೀಘ್ರವಾಗಿ ನಡೆಯುತ್ತಿಲ್ಲ. ಅದರಿಂದಲೇ ಯಾವ ಬಾಬುಗಳಿಗೆ ಹಣ ಖರ್ಚು ಮಾಡಬೇಕೋ ಅವಕ್ಕೆ ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿಲ್ಲವೆಂಬ ಅಪಾದನೆಗಳನ್ನು ಸರ್ಕಾರದ ಮೇಲೆ ಅನೇಕರು ಹೊರಿಸುತ್ತಿದ್ದಾರೆ. ಇದಕ್ಕೆ ಕಾರಣವಿಷ್ಟೆ! ನಮ್ಮ ಮೈಸೂರು ದೇಶ ಮೈನರ್ ನೀರಾವರಿಯ ವಿಷಯದಲ್ಲಿ ರಾಜಾಸ್ಥಾನವನ್ನು ಬಿಟ್ಟರೆ ಎರಡನೆಯದು. ಏಕೆಂದರೆ, ಯಾವ ರೀತಿಯಲ್ಲಿಯೂ ಮೈನರ್ ನೀರಾವರಿ ಇಲ್ಲಿ ಅಭಿವೃದ್ಧಿಯಾಗಿಲ್ಲ. ಅನೇಕ ಯೋಜನೆಗಳನ್ನು ಹಾಕಿದ್ದೇವೆಂದು ಇದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಿ, ಸಿಬ್ಬಂದಿಯನ್ನು ನೇಮಕ ಮಾಡಿ, ಇದಕ್ಕೆ ಒಬ್ಬ ಉಪಮಂತ್ರಿಗಳನ್ನು ಕೂಡ ಮಾಡಿ ಶ್ರೀಮಾನ್ ಆಲೂರು ಹನುಮಂತಪ್ಪನವರಿಗೆ ಈ ಸ್ಥಾನವನ್ನು ಕೊಟ್ಟಿದ್ದಾರೆ. ಅವರು ಬಹಳ ಉತ್ಸಾಹದಲ್ಲಿ, ದೇಶದಲ್ಲಿ ನೀರಾವರಿ ಅಭಿವೃದ್ಧಿ ಮಾಡುತ್ತೇವೆ, ಈ ತುರ್ತುಪರಿಸ್ಥಿತಿಯಲ್ಲಿ ಜನರಿಗೆ ಇನ್ನೂ ಜಾಸ್ತಿ ತಿನ್ನಿಸುತ್ತೇವೆ ಎಂದು ಬಹಿರಂಗವಾಗಿ ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಟ್ಟಿದ್ದಾರೆ.

MR. SPEAKER.—The House will now rise and meet at one of the clock on the 20th March 1963.

The House adjourned at Six of the clock to meet again at One of the Clock on Wednesday the 20th March 1963.

V D. 368—GPP—900—26-8-1963

MYSORE LEGISLATIVE ASSEMBLY

TWENTY-SECOND DAY.

Friday, 20th March 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.), in the Chair.

STARRED QUESTIONS

(to which oral answers were given)

Subsidy and Loan granted by the Central Government towards Sericulture Wells in Kunigal Taluk.

**Q.*—79. Sri ANDANAIAH (Kunigal).—

Will the Government be pleased to state:—

(*a*) the amount of subsidy and loan granted by the Central Government for the year 1961-62 towards Sericulture wells in Kunigal Taluk;

(*b*) out of this amount granted, the amount spent for the purpose?

A.—Sri R. DAYANANDA SAGAR (Deputy Minister for Sericulture)

(*a*) Rs. 64,380.

(*b*) No expenditure was incurred for the purpose during the year.

ಶ್ರೀ ಅಂದಾನಯ್ಯ.—1961-62ನೇ ಸಾಲಿನಲ್ಲಿ ಯಾವ ಹಣವನ್ನೂ ಖರ್ಚು ಮಾಡದೇ ಇರುವುದಕ್ಕೆ ಕಾರಣವಾದರೂ ಏನು ಸ್ವಾಮಿ?

ಶ್ರೀ ಆರ್. ದಯಾನಂದಸಾಗರ್.—ನಾವು ಗ್ರಾಂಟನ್ನು ತಾಲ್ಲೂಕು ಬೋರ್ಡ್‌ಗಳ ಮೂಲಕ ಹಂಚಬೇಕೆಂದು ವ್ಯವಸ್ಥೆ ಮಾಡಿದ್ದೆವು. ತಾಲ್ಲೂಕು ಬೋರ್ಡಿನವರು ಖರ್ಚು ಮಾಡಲಿಲ್ಲ. ನಾವು ಬಹಳ ದಿನದಿಂದ ಅಪ್ಲಿಕೇಷನ್ ಹಾಕಬೇಕು ಎಂದು ಕೇಳಿದರೂ ಯಾರೂ ಅಪ್ಲಿಕೇಷನ್ ಹಾಕಲಿಲ್ಲ. ಆ ಕಾರಣದಿಂದ ಯಾರಿಗೂ ಕೊಡುವುದಕ್ಕಾಗಲಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕಳೆದ ವರ್ಷ ತಾಲ್ಲೂಕು ಬೋರ್ಡ್‌ಗಳಿಗೆ ಹಣ ಖರ್ಚುಮಾಡುವ ಜವಾಬ್ದಾರಿಯನ್ನು ವಹಿಸಿದ್ದೆವು, ಆ ಹಣ ಖರ್ಚಾಗದೆ ಉಳಿಯಿತು ಎಂದು ಹೇಳಿದಿರಿ. ಅದಕ್ಕೆ ಮುಂಚೆ ಈ ಬಗ್ಗೆ ಯಾವ ವಿಧಾನವನ್ನು ಅನುಸರಿಸುತ್ತಿದ್ದಿರಿ?

ಶ್ರೀ ಆರ್. ದಯಾನಂದಸಾಗರ್.—ತಾಲ್ಲೂಕ್ ಬೋರ್ಡಿಗೆ ಕೊಡುವುದಕ್ಕೆ ಮುಂಚೆ ಇಲಾಖೆಯವರೇ ಖರ್ಚು ಮಾಡುತ್ತಿದ್ದರು. ಆದರೆ ಹೊಸದಾಗಿ ತಾಲ್ಲೂಕು ಬೋರ್ಡಿಗೆ ವಹಿಸಿದೆವು. ಅವರಿಗೆ ಏನು ಕಷ್ಟವೋ ಖರ್ಚು ಮಾಡುವುದಕ್ಕೆ ಆಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ರೇಷ್ಮೆ ಬೆಳೆಯುತಕ್ಕ ಹೆಬ್ಬೂರು ಕ್ಷೇತ್ರ ಕುಣಿಗಲ್‌ಗೆ ಸೇರಿದೆ. ಕೇಂದ್ರ ಸರ್ಕಾರದಿಂದ ತುಮಕೂರಿಗೆ ಎಷ್ಟು ಹಣ ಕೊಟ್ಟಿದ್ದೀರಿ?

ಶ್ರೀ ಆರ್. ದಯಾನಂದಸಾಗರ್.—ಒಟ್ಟು 75 ಸಾವಿರ ತುಮಕೂರಿಗೋಸ್ಕರ ಕೊಟ್ಟಿದ್ದೇವೆ. ಅದರಲ್ಲಿ 64,380 ರೂಪಾಯಿಗಳನ್ನು ಕುಣಿಗಲ್‌ಗೆ ಕೊಟ್ಟಿದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—1961-62ನೇ ಇಸವಿಯಲ್ಲಿ ತಾಲ್ಲೂಕು ಬೋರ್ಡಿಗೆ ಹಣವನ್ನು ಕೊಟ್ಟದ್ದು ವರ್ಷದ ಕೊನೆಯಲ್ಲಿ ಅಲ್ಲವೇ ?

ಶ್ರೀ ಆರ್. ದಯಾನಂದಸಾಗರ್.—ವರ್ಷದ ಮಧ್ಯದಲ್ಲಿ ಕೊಟ್ಟಿದ್ದೇವೆ. ಅವರಿಗೆ ಹಣ ಕೊಡುತ್ತೇವೆಂದು ಗೊತ್ತಿತ್ತು. ಅವರು ಅಪ್ಲಿಕೇಷನ್ ತರಿಸಿಕೊಂಡು process ಮಾಡಿ ಇಟ್ಟುಕೊಂಡಿದ್ದರೆ ಹಣ ಕೊಡುವುದಕ್ಕೆ ಅಡ್ಡಿ ಇರುತ್ತಿರಲಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ತಾಲ್ಲೂಕ್ ಬೋರ್ಡಿನವರು ಹಣವನ್ನು lapse ಮಾಡಿರುವುದರಿಂದ ಇಲಾಖೆಯ ಮೂಲಕ ಹಂಚುವ ಏರ್ಪಾಡು ಮಾಡುತ್ತೀರಾ ?

ಶ್ರೀ ಆರ್. ದಯಾನಂದಸಾಗರ್.—ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಯಾವ ಉದ್ದೇಶಕ್ಕಾಗಿ ಇಂಡಿಯಾ ಸರ್ಕಾರದವರು ಹಣವನ್ನು ಕೊಟ್ಟರೋ ಆ ಉದ್ದೇಶಕ್ಕೋಸ್ಕರ ಖರ್ಚಾಗಲಿಲ್ಲವೆಂದು ಹೇಳಿದರು. ಬೇರೆ ಯಾವುದಾದರೂ ಉದ್ದೇಶಕ್ಕೆ ಖರ್ಚಾಗಿದೆಯೇ ಅಥವಾ ಮುಂದಿನ ವರ್ಷಕ್ಕಾದರೂ ಆ ಗ್ರ್ಯಾಂಟ್ ಇರುತ್ತದೆಯೇ ?

ಶ್ರೀ ಆರ್. ದಯಾನಂದಸಾಗರ್.—ಇಂಡಿಯಾ ಸರ್ಕಾರದಿಂದ ಐದು ವರ್ಷಗಳಿಗೋಸ್ಕರ 12½ಲಕ್ಷ ರೂಪಾಯಿಗಳನ್ನು ಬಾವಿಗಳಿಗೋಸ್ಕರ ಖರ್ಚು ಮಾಡಬೇಕೆಂದು ಸಿದ್ಧಾಂತವಾಗಿದೆ. ಅದರಲ್ಲಿ ಒಂದು ವರ್ಷ ಖರ್ಚಾಗಲಿಲ್ಲವೆಂದರೆ ಮುಂದಿದ ವರ್ಷ ಖರ್ಚುಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Sri G. V. GOWDA.—Is it not a fact that there is much delay in scrutinising and returning applications in the Sericulture Department submitted by the Taluk Boards ?

Sri R. DAYANANDA SAGAR.—It is not so, Sir.

ಶ್ರೀ ಜಿ. ರಾಮೇಗೌಡ.—ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಂದ ಸರ್ಕಾರದವರು ಹಾಕಿರತಕ್ಕ ಕಂಡೀಷನ್‌ಗಳನ್ನೂ ಸಡಿಲಗೊಳಿಸಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿಲ್ಲವೇ, ಸ್ವಾಮಿ ?

ಶ್ರೀ ಆರ್. ದಯಾನಂದಸಾಗರ್.—ಆ ವಿಚಾರ ನನ್ನ ಹತ್ತಿರವಿಲ್ಲ. ಬಹುಶಃ ಸಂಬಂಧಪಟ್ಟ ಮಂತ್ರಿಗಳು ನೋಡುತ್ತಿದ್ದಾರೆಂದು ಕಾಣುತ್ತದೆ.

Sri R. N. LAKSHMIPATHI.—Would not the amounts lapse if they are not spent before March ?

Sri R. DAYANANDA SAGAR.—These are schemes under the Five-Year plan and if it could not be spent in one year, it would be used in the next.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರೇಷ್ಮೆ ವ್ಯವಸಾಯವನ್ನು ಎಲ್ಲೆಲ್ಲಿ ಮಾಡಬಹುದೆಂದು ಸರ್ಕಾರ ಏನಾದರೂ ಸರ್ವೆ ಮಾಡಿದೆಯೇ ?

ಶ್ರೀ ಆರ್. ದಯಾನಂದಸಾಗರ್.—ಎಲ್ಲಾ ಕಡೆಯೂ ರೇಷ್ಮೆ ಬೆಳೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಹವಾಗುಣ, ಎತ್ತರ ಎಲ್ಲ ಬೇಕಾಗುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಈಗಾಗಲೇ ಮಾಡುತ್ತಿದ್ದೇವೆ. ಇನ್ನೂ ಎಲ್ಲಿಯಾದರೂ ಮಾಡುವುದಕ್ಕೆ ಸಾಧ್ಯವೇ ಎಂದು ತಜ್ಞರು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ತಾಲ್ಲೂಕು ಬೋರ್ಡಿಗೆ ಕೊಟ್ಟಂಥ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡದೇ ಇರುವುದರಿಂದ ಆ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ, ಸ್ವಾಮಿ ?

ಶ್ರೀ ಆರ್. ದಯಾನಂದಸಾಗರ್.—ತಾಲ್ಲೂಕು ಬೋರ್ಡ್ ಅಧಿಕಾರಿಗಳ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳಬಹುದೋ ಅದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆ ಖರ್ಚು ಮಾಡಿಲ್ಲವೆಂದು ವಿಚಾರಣೆ ಮಾಡುತ್ತೇವೆ.

ಶ್ರೀ ವಿ. ಎಂ. ದೇವ್.—ಹಣವನ್ನು ತಾಲ್ಲೂಕ್ ಬೋರ್ಡಿಗೆ ಕೊಟ್ಟ ಸರಿಯಾದ ತಾರೀಖು ಯಾವುದು ?

ಶ್ರೀ ಆರ್. ದಯಾನಂದಸಾಗರ್.—ಆ ಸಮಾಚಾರ ನನ್ನ ಹತ್ತಿರ ಈಗ ಇಲ್ಲ. ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾಲ್ಲೂಕ್ ಬೋರ್ಡಿನವರು ಖರ್ಚು ಮಾಡದೇ ಇರುವುದರಿಂದ ಅವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ತಾಲ್ಲೂಕು ಬೋರ್ಡುಗಳಿಗೆ ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಗ್ರಾಂಟ್ ಯಾವಾಗ ಸ್ವಾಮಿ ಕೊಟ್ಟದ್ದು ?

ಶ್ರೀ ಆರ್. ದಯಾನಂದಸಾಗರ್.—ಜಿಲ್ಲಾ ಅಭಿವೃದ್ಧಿ ಮಂಡಳಿಯವರಿಂದ ತಾಲ್ಲೂಕ್ ಬೋರ್ಡಿಗೆ ಹೋಗುತ್ತದೆ. ಮಾನ್ಯ ಸದಸ್ಯರು ಅಲ್ಲಿ ಇರುವುದರಿಂದ ಅವರು ಚೆಕ್ ಮಾಡಿದರೆ ಬಹಳ ತೀವ್ರವಾಗಿ ಕೆಲಸವಾಗುತ್ತದೆಂದು ತಿಳಿದುಕೊಂಡಿದ್ದೇನೆ.

ಶ್ರೀ ಟಿ. ಮಾದಯ್ಯಗೌಡ.—ಬಾವಿಗಳನ್ನು ತೆಗೆಯಲು ಹಣವನ್ನು ಹಂಚದೇ ಇರುವುದಕ್ಕೆ ತಾಲ್ಲೂಕು ಬೋರ್ಡಿನವರು ಕಾರಣರು, ರೇಷ್ಮೆ ಇಲಾಖೆಯವರು ಯಾವ ರೀತಿಯಲ್ಲಿಯೂ ಕಾರಣರಲ್ಲವೆನ್ನುವುದು ಮಾನ್ಯ ಉಪಮಂತ್ರಿಗಳ ಅಭಿಪ್ರಾಯವೋ ?

ಶ್ರೀ ಆರ್. ದಯಾನಂದಸಾಗರ್.—ವಿಕೇಂದ್ರೀಕರಣ ಮಾಡಬೇಕೆಂದು ತೀರ್ಮಾನ ಮಾಡಿ ಮಾಡಿದ್ದೇವೆ. ಅದು ಸರ್ಕಾರದ ನೀತಿ. ಅದರ ಪ್ರಕಾರ ತಾಲ್ಲೂಕು ಬೋರ್ಡ್‌ನವರಿಗೆ ಅಧಿಕಾರ ಕೊಟ್ಟಿದ್ದೇವೆ. ಅವರು ಆ ಅಧಿಕಾರವನ್ನು ಚಲಾಯಿಸಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಇನ್ನು ಮುಂದೆಯಾದರೂ ರೇಷ್ಮೆ ಇಲಾಖೆಯ ಕೆಲಸವನ್ನು ತಾಲ್ಲೂಕು ಬೋರ್ಡ್‌ಗಳ ಮೂಲಕ ಮಾಡಿಸಬೇಕೆಂದು ತೀರ್ಮಾನ ಮಾಡಿದ್ದೀರಾ ?

ಶ್ರೀ ಆರ್. ದಯಾನಂದಸಾಗರ್.—ಬಾವಿಗೆ ಹಣ ವಿತರಣೆ ಮಾಡುವಾಗ ತಾಲ್ಲೂಕ್ ಬೋರ್ಡ್‌ನವರು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಇ. ನಾರಾಯಣಗೌಡ.—ಬಾವಿ ತೆಗೆದು ಪಂಪ್ ಸೆಟ್ ಹಾಕುವವರೆಗೂ ಗ್ರಾಂಟ್ ಕೊಡುವುದಕ್ಕೆ ಆಗುವುದಿಲ್ಲವೆಂದು ನಿರ್ಬಂಧವಿದೆ. ಇದರಿಂದ ರೈತರಿಗೆ ತೊಂದರೆಯಾಗುವುದರಿಂದ ಈ ನಿರ್ಬಂಧವನ್ನು ಸ್ವಲ್ಪ ಸಡಿಲಿಸುತ್ತೀರಾ ?

ಶ್ರೀ ಆರ್. ದಯಾನಂದಸಾಗರ್.—ಪಂಪ್ ಸೆಟ್ ಹಾಕುವುದು ಬಹಳ ಮುಖ್ಯ. ನಾಲ್ಕೈದು ಸಾವಿರ ರೂಪಾಯಿ ಖರ್ಚುಮಾಡಿ ಬಾವಿ ತೆಗೆದರೆ ಪಂಪ್ ಸೆಟ್ ಇಲ್ಲದೆ ಇದ್ದರೆ ನಾಲ್ಕೈದು ಎಕರೆಗೆ ಕೂಡ ಪ್ರಯೋಜನವಾಗುವುದಿಲ್ಲ. ಅದಕ್ಕೋಸ್ಕರ ಬಾವಿ ತೆಗೆದಮೇಲೆ ಪಂಪ್ ಸೆಟ್ ಹಾಕಬೇಕೆಂದು ಮಾಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರ ಜಿಲ್ಲಾ ಅಭಿವೃದ್ಧಿ ಮಂಡಳಿಗಳಿಗೆ ಹಣವನ್ನು ಕಳಿಸಿದ್ದು ಯಾವಾಗ, ಮತ್ತು ಅವರು ತಾಲ್ಲೂಕು ಬೋರ್ಡಿಗೆ ಹಣವನ್ನು ಕೊಟ್ಟದ್ದು ಯಾವಾಗ ?

ಶ್ರೀ ಆರ್. ದಯಾನಂದಸಾಗರ್.—ಆ ವಿಷಯ ನನ್ನ ಹತ್ತಿರವಿಲ್ಲ, ತರಿಸಿ ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ರೇಷ್ಮೆ ಕೈಗಾರಿಕೆ ಬಗ್ಗೆ ಒಂದು ಅಡ್ವೈಸರಿ ಕಮಿಟಿ ಏನಾದರೂ ಮಾಡಿದ್ದೀರಾ ?

ಶ್ರೀ ಆರ್. ದಯಾನಂದಸಾಗರ್.—ಮಾಡಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—1962-63ನೇ ಸಾಲಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಸ್ವಾಮಿ ?

ಶ್ರೀ ಆರ್. ದಯಾನಂದಸಾಗರ್.—ಅದರ ಬಗ್ಗೆ ನನ್ನ ಹತ್ತಿರ ಲೆಕ್ಕ ಪತ್ರಗಳಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಏನಾದರೂ ಕೊಟ್ಟಿದ್ದಾರೆಯೋ ಇಲ್ಲವೇ ಸ್ವಾಮಿ ?

ಶ್ರೀ ಆರ್. ದಯಾನಂದಸಾಗರ್.—ಕೊಟ್ಟಿದ್ದಾರೆ.

ಶ್ರೀ ಇ. ನಾರಾಯಣಗೌಡ.—ಇಲಾಖೆಯಿಂದ ದುಡ್ಡು ಕೊಡುವುದು ಬಹಳ ತಡವಾಗಿರುವುದರಿಂದ ದುಡ್ಡು ಖರ್ಚಾಗಲಿಲ್ಲವಲ್ಲವೇ ಸ್ವಾಮಿ ?

ಶ್ರೀ ಆರ್. ದಯಾನಂದಸಾಗರ್.—ಅದು ಸರಿಯಲ್ಲ ಸ್ವಾಮಿ.

Establishment of a Central Cardamom Board.

*Q. 128. Smt. B. L. SUBBAMMA (Chickmagalur).—

Will the Government be pleased to state,—

(a) whether they have not received representation requesting to establish a Central Cardamom Board to safeguard the interests of Cardamom Planters;

(b) if so, the decision they have taken in this behalf ?

A.—**Sri K. MALLAPPA** (Minister for Industries and Commerce).—

(*a*) A representation has been received from the Cardamom Planters' Association of South India.

(*b*) The constitution of a Board for Cardamom is being considered by Government of India.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಏಲಕ್ಕಿ ಬೆಳೆ ಅಭಿವೃದ್ಧಿಯಾಗಬೇಕಾದರೆ ಯಾವ ಸಲಹೆಗಳನ್ನು ಕೊಡಬೇಕು ಮತ್ತು ಏಲಕ್ಕಿ ಬೆಳೆಗಾರರ ಹಿತದೃಷ್ಟಿಯಿಂದ ಎಲ್ಲ ಪ್ರತಿನಿಧಿಗಳು ಆ ಮಂಡಳಿಯಲ್ಲಿರಬೇಕು ಎಂದು ಸಿಫಾರಸು ಮಾಡಿದ್ದಿರಾ ಸ್ವಾಮಿ ?

†ಶ್ರೀ ಕೆ. ಮಲ್ಲಪ್ಪ.—ಸಿಫಾರಸು ಮಾಡಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಬೋರ್ಡ್ ಆದಷ್ಟು ಜಾಗ್ರತೆ ನಿರ್ಮಾಣವಾಗುತ್ತದೆಂದು ಭರವಸೆ ಕೊಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಇಂಡಿಯಾ ಸರ್ಕಾರದವರು ಬೋರ್ಡ್ ನಿರ್ಮಾಣ ಮಾಡತಕ್ಕದ್ದನ್ನು ಯೋಚನೆ ಮಾಡುತ್ತಿದ್ದೇವೆಂದು ಬರೆದಿದ್ದಾರೆ. ಇತ್ತೀಚೆಗೆ ಒಂದು ಸಲಹಾಸಮಿತಿಯನ್ನು ಮಾಡಿ ಅದರಲ್ಲಿ 18 ಜನ ಸದಸ್ಯರನ್ನು ನೇಮಕ ಮಾಡಿದ್ದಾರೆ ?

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಸಮಿತಿಯಲ್ಲಿ ಬೆಳೆಗಾರರ ಪರವಾಗಿ ಮತ್ತು ಕೂಲಿಕಾರರ ಪರವಾಗಿ ಯಾರಿದ್ದಾರೆಂದು ದಯವಿಟ್ಟು ತಿಳಿಸಲಾಗುತ್ತದೆಯೇ ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಆ ವಿವರಗಳು ಬಂದಿಲ್ಲ. ನಾನು ಪತ್ರಿಕೆಗಳಲ್ಲಿ ನೋಡಿದ್ದು, ಅದರಲ್ಲಿದ್ದ ಸಮಾಚಾರವನ್ನು ಹೇಳುತ್ತಿದ್ದೇನೆ. ಅದರಲ್ಲಿ ಕೆಲವು ವ್ಯವಸಾಯಗಾರರನ್ನು ಹಾಕಿದ್ದಾರೆಂದು ಆ ಪಟ್ಟಿಯಿಂದ ತಿಳಿಯಬಹುದು.

ಶ್ರೀ ಎಸ್. ಎ. ವಾಸಣ್ಣ ಶೆಟ್ಟಿ.—ಇಂಡಿಯಾ ಸರ್ಕಾರದವರು ಏಲಕ್ಕಿ ಅಭಿವೃದ್ಧಿ ಸಮಿತಿಯನ್ನು ಕಾಫಿ ಬೋರ್ಡ್ ಆಶ್ರಯದಲ್ಲಿ ರಚಿಸಿದ್ದಾರೆ. ಏಲಕ್ಕಿಗೋಸ್ಕರ ಬೇರೆ ಒಂದು ಮಂಡಳಿಯನ್ನು ರಚಿಸಬೇಕೆಂದು ಸಲಹೆ ಕೊಡುವುದಕ್ಕಾಗಿಯೇ ಅಥವಾ ಅಭಿವೃದ್ಧಿ ಸಮಿತಿಯೇ ಆದರ ಕಾರ್ಯ ಕಲಾಪಗಳನ್ನು ನಡೆಸುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ಏಲಕ್ಕಿಗಾಗಿ ಒಂದು ಬೋರ್ಡನ್ನು ರಚನೆ ಮಾಡುವ ವಿಷಯವನ್ನು ಪರ್ಯಾಲೋಚನೆ ಮಾಡುತ್ತಿದ್ದೇವೆಂದು ಇಂಡಿಯಾ ಸರ್ಕಾರದವರು ತಿಳಿಸಿದ್ದಾರೆ. ಇತ್ತೀಚೆಗೆ ಒಂದು ಸಲಹಾ ಸಮಿತಿಯನ್ನು ನೇಮಕ ಮಾಡಿದ್ದಾರೆ. ಬಹುಶಃ ಸಲಹಾ ಸಮಿತಿಯ ಸಿಫಾರಸಿನ ಮೇರೆ ಒಂದು ಬೋರ್ಡನ್ನು ಮಾಡಬೇಕೆಂದು ಇರಬಹುದು.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಏಲಕ್ಕಿ ಮಂಡಲಿಯಲ್ಲಿ ಏಲಕ್ಕಿ ವ್ಯವಸಾಯಗಾರರು ಮಾರಾಟಗಾರರು, ಇವರನ್ನೆಲ್ಲಾ ನೇಮಕ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ನಾವು ನೇಮಕ ಮಾಡುವುದಿಲ್ಲ. ಇಂಡಿಯಾ ಸರಕಾರದವರು ನೇಮಕ ಮಾಡುವವರು. ಅದರಲ್ಲಿ ಈ ಗಾಗಲೇ ಎಷ್ಟೋ ಪರಿಣತರಿದ್ದಾರೆ; ನಾನು ತಿಳಿದುಕೊಂಡಿರುವ ಮಟ್ಟಿಗೆ ಎಂ. ಎಲ್. ಎ. ಗಳಿದ್ದಾರೆ, ಎಂ. ಪಿ. ಗಳಿದ್ದಾರೆ, ವರ್ತಕರಿದ್ದಾರೆ. ಆದರೆ ಇದರ ಸಂಪೂರ್ಣ ವಿವರಗಳು. ಇನ್ನೂ ನನಗೆ ಸಿಕ್ಕಿಲ್ಲ.

ಶ್ರೀ ಕೆ. ಎಂ. ದೇವಯ್ಯ.—ಈ ಸಮಿತಿಯ ವ್ಯಾಪ್ತಿ ಏನು ?

Mr. SPEAKER.—Have not the objects of the Committee been enunciated in the Order constituting the Committee ?

Sri K. MALLAPPA.—That information is not fully available. The information was furnished in the Press. Whatever information I am able to gather, I am furnishing. The object of the Committee is to make recommendations regarding cultivation, marketing, the diseases that affect the cultivation—all these matters are included.

ಶ್ರೀ ಕೆ. ಎಂ. ದೇವಯ್ಯ.—ಏಲಕ್ಕಿ ಬೆಳೆ ಮೈಸೂರಿನ ಬಹು ಭಾಗದಲ್ಲಿ ಬೆಳೆಯುತ್ತಿರುವುದರಿಂದ ಅವರ ಕಷ್ಟಗಳನ್ನು ತಿಳಿಯಲು ಇಂತಹ ಒಂದು ಬೋರ್ಡನ್ನು ಸ್ಥಾಪಿಸುವುದು ಅತ್ಯವಶ್ಯಕ ಎಂದು ಕಂಡುಬಂದಿರುವುದರಿಂದ ಈ ರಾಜ್ಯದಲ್ಲೇ ಒಂದು ಬೋರ್ಡನ್ನು ಸ್ಥಾಪಿಸಲು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

†ಶ್ರೀ ಕೆ. ಮಲ್ಲಪ್ಪ.—ಏಲಕ್ಕಿ ಬೆಳೆಗಾರರ ಕಷ್ಟಗಳನ್ನು ಸರಕಾರ ಗಮನಿಸಿದೆ. ಆದರೆ ನಮ್ಮ ಸರಕಾರ ಒಂದೇ ಇಂತಹ ಮಂಡಲಿ ಮಾಡುವುದು ಸಾಧ್ಯವಿಲ್ಲ. ಏಲಕ್ಕಿ ಬೆಳೆ ಮದರಾಸಿನಲ್ಲಿ ಹಾಗೂ ತಿರುವಾಂಕೂರಿನಲ್ಲಿ ಆಗುತ್ತದೆ, ಇವೆಲ್ಲ ರಾಜ್ಯಗಳಿಗನುಕೂಲವಾಗುವಂತೆ ಕೇಂದ್ರ ಸರಕಾರ

---

† Indicates that the remarks or speeches have not been revised by the member concerned

ಮಂಡಲಿಯನ್ನು ಮಾಡುತ್ತಿದೆ. ಅವರ ಗಮನಕ್ಕೂ ಇವೆಲ್ಲವನ್ನು ತಂದಿದ್ದೇವೆ. ಇದರ ಬಗ್ಗೆ ನಮ್ಮ ರಾಜ್ಯದಲ್ಲಿಯೂ ಒಂದು ಸಲಹಾ ಸಮಿತಿಯನ್ನ ಮಾಡಿದ್ದೇವೆ. ಅವರೇನು ಸಲಹೆಗಳನ್ನು ಕೊಡುತ್ತಾರೋ ಅದನ್ನು ತಿಳಿದುಕೊಂಡು ಈ ಬೋರ್ಡಿಗೆ ಶಿಫಾರಸನ್ನು ಕಳುಹಿಸುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಮಂಡಲಿಯಲ್ಲಿ ವ್ಯವಸಾಯಗಾರರನ್ನೂ, ಮತ್ತು ಕಾಯಿಲೆಗಳನ್ನು ನೋಡಿ ಕಂಡುಹಿಡಿಯತಕ್ಕ ತಜ್ಞರನ್ನೂ ಮತ್ತು ಇನ್ನಿತರ ಅಧಿಕಾರಿಗಳನ್ನೂ ನೇಮಿಸುವಂತೆ ನಿರ್ಧಾರಮಾಡಿ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಬೆಳೆಯುವವರೂ ಇದ್ದಾರೆ, ವ್ಯಾಪಾರಮಾಡುವವರೂ ಇದ್ದಾರೆ, ತಜ್ಞರಾಗಿರುವವರನ್ನು ಮತ್ತು ಇಲ್ಲಿರುವ ಪ್ರತಿನಿಧಿಗಳನ್ನು, ಮತ್ತು ಅನುಭವವಿದ್ದು ಚೆನ್ನಾಗಿ ಈ ವೃತ್ತಿಯಲ್ಲಿ ಕೆಲಸ ಮಾಡುವವರನ್ನು ನೇಮಕ ಮಾಡಬೇಕೆನ್ನುವ ಸಲಹೆಯನ್ನು ಇಂಡಿಯಾ ಸರಕಾರಕ್ಕೆ ಕೊಟ್ಟಿದ್ದೇವೆ.

ಶ್ರೀ ಕೆ. ಎಂ. ದೇವಯ್ಯ.—ಈ ಮಂಡಲಿಯಲ್ಲಿ ಮೈಸೂರು ರಾಜ್ಯದವರು ಎಷ್ಟು ಜನರಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ನನಗೆ ಇನ್ನೂ ಪೂರ್ತಿ ವಿವರ ಸಿಕ್ಕಿಲ್ಲ. ನಾನು ತಿಳಿದುಕೊಂಡಿರುವಂತೆ ಐದಾರು ಜನರಿದ್ದಾರೆ.

ಶ್ರೀ ಸಂಜೀವನಾಥ ಐಕಳ.—ಚಿಕ್ಕಮಗಳೂರು ತಾಲ್ಲೂಕಿಗೂ ಆ ಸಮಿತಿಯಲ್ಲಿ ಪ್ರಾತಿನಿಧ್ಯ ಕೊಟ್ಟಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಚಿಕ್ಕಮಗಳೂರು ತಾಲ್ಲೂಕು ಒಂದೇ ಅಲ್ಲ. ಏಲಕ್ಕಿ ವ್ಯವಸಾಯಗಾರರು ಎಲ್ಲೆಲ್ಲಿ ಬೆಳೆಯುತ್ತಿದ್ದಾರೋ ಅವನ್ನೆಲ್ಲಾ ತಿಳಿದುಕೊಂಡು ಇಂತಿಂತಹವರನ್ನು ನೇಮಕ ಮಾಡಬಹುದು ಎಂದು ಶಿಫಾರಸನ್ನು ಮಾಡಲಾಗಿದೆ. ಸಕಲೇಶಪುರ ತಾಲ್ಲೂಕಿಗೂ ಈ ಸಮಿತಿಯಲ್ಲಿ ಪ್ರಾತಿನಿಧ್ಯ ದೊರಕಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ರಾಜ್ಯದಲ್ಲಿ ಎಲ್ಲೆಲ್ಲಿ ಏಲಕ್ಕಿ ಬೆಳೆಯುತ್ತಿದ್ದಾರೆನ್ನುವುದನ್ನು ರಾಜ್ಯ ಸರಕಾರದವರು ಏನಾದರೂ ಸರ್ವೆ ಮಾಡಿದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಎಲ್ಲೆಲ್ಲಿ ಏಲಕ್ಕಿ ಬೆಳೆಯುತ್ತಿದ್ದಾರೆ ಎನ್ನುವ ಆಧಾರದ ಮೇಲೆಯೇ ಶಿಫಾರಸನ್ನು ಮಾಡಲಾಗಿದೆ. ಸಾಧಾರಣವಾಗಿ ಮಲೆನಾಡಿನಲ್ಲೆಲ್ಲಾ ಏಲಕ್ಕಿ ಬೆಳೆ ಮಾಡುತ್ತಿದ್ದಾರೆ.

ಶ್ರೀ ಟಿ. ಮಾದಯ್ಯ ಗೌಡ.—ಇಂಡಿಯಾ ಸರಕಾರದವರು ನೇಮಿಸಿರತಕ್ಕ ಸಲಹಾ ಸಮಿತಿಯಲ್ಲಿ ಮೈಸೂರು ರಾಜ್ಯದ ಪಾತ್ರವೇನು ?

ಶ್ರೀ ಕೆ. ಮಲ್ಲಪ್ಪ.—ಮೈಸೂರು ದೇಶದಲ್ಲಿ ಎಲ್ಲೆಲ್ಲಿ ಏಲಕ್ಕಿ ವ್ಯವಸಾಯವಿದೆ, ಅದರಲ್ಲಿ ನುರಿತವರನ್ನು ನೇಮಕ ಮಾಡಬೇಕೆಂದು ಈ ಸಲಹಾ ಸಮಿತಿಯನ್ನು ಮಾಡಿದೆ. ಸಲಹಾಸಮಿತಿಯವರು ಕೊಡುವ ಅಭಿಪ್ರಾಯಗಳನ್ನು ತಿಳಿದುಕೊಂಡು ಈ ಮಂಡಳಿಯನ್ನು ಮಾಡುವಾಗ ಮೈಸೂರು ದೇಶಕ್ಕೂ ಸರಿಯಾದ ಪ್ರಾತಿನಿಧ್ಯ ಕೊಡುವುದು ಅವಶ್ಯಕ ಎಂದು ತಿಳಿಸಿದ್ದೇನೆ.

ಶ್ರೀ ಎಸ್. ಎ. ವಾಸಣ್ಣಶೆಟ್ಟಿ.—ಸಕಲೇಶಪುರದಲ್ಲಿ ಏಲಕ್ಕಿ ವ್ಯವಸಾಯಮಾಡುವವರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕಿಲ್ಲ ಎನ್ನುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಬಂದಿದೆ. ಸಕಲೇಶಪುರಕ್ಕೂ ಒಂದು ಪ್ರಾತಿನಿಧ್ಯ ಕೊಡಬೇಕೆಂದು ಕೇಂದ್ರ ಸರಕಾರಕ್ಕೆ ಶಿಫಾರಸನ್ನು ಕಳುಹಿಸಲಾಗಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಲೆನಾಡಿನಲ್ಲಿ ಬೆಳೆಯತಕ್ಕ ಏಲಕ್ಕಿ ಎಲ್ಲಾ ಹಾಸನದ ಮೂಲಕ ರೈಲಿನಲ್ಲಿ ರಫ್ತಾಗುತ್ತಿದೆ. ಆದ್ದರಿಂದ ಈ ಬೋರ್ಡಿನ ಹೆಡ್‌ಕ್ವಾರ್ಟರ್ ಅನ್ನು ಹಾಸನದನ್ನು ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ತಾವು ಸರಿಯಾಗಿ ತಿಳಿದುಕೊಳ್ಳದೆ ಪ್ರಶ್ನೆ ಕೇಳುತ್ತಿದ್ದೀರಿ. ಕೆಲವರು ಹಾಸನದಿಂದಲೂ ಏಲಕ್ಕಿ ಕಳುಹಿಸುತ್ತಾರೆ. ಆದರೆ ಮಂಗಳೂರಿನಿಂದ ಹೆಚ್ಚಾಗಿ ಹೋಗುತ್ತದೆ. ಅಲ್ಲಿಯೂ ಇದರ ಮಾರ್ಕೆಟ್ಟಿದೆ. ಈ ಮಂಡಲಿ ಮಾಡುವವರು ಕೇಂದ್ರ ಸರಕಾರದವರು. ಇದು ನಮ್ಮ ದೇಶವೊಂದರಲ್ಲೇ ಬೆಳೆಯುತ್ತಿಲ್ಲ. ತಿರುವಾಂಕೂರಿನಲ್ಲಿ ಶೇಕಡಾ 51ರಷ್ಟು ಏಲಕ್ಕಿ ಬೆಳೆಯುತ್ತಾರೆ. ಮೈಸೂರು ಮತ್ತು ಮದರಾಸು ರಾಜ್ಯಗಳಲ್ಲಿ ಶೇಕಡಾ 49ರಷ್ಟು ಬೆಳೆಯುತ್ತಾರೆ, ಇದನ್ನು ನೋಡಿಕೊಂಡು ಕೇಂದ್ರದವರು ಹೆಡ್‌ಕ್ವಾರ್ಟರನ್ನು ನಿರ್ಧರಿಸುತ್ತಾರೆ.

ಶ್ರೀ ಎಸ್. ಪಿ. ಫಾಯದೆ.—ಉತ್ತರ ಕನ್ನಡ ಜಿಲ್ಲೆಯ ಬೆಟ್ಟದ ಭಾಗಗಳಲ್ಲಿಯೂ ಏಲಕ್ಕಿ ಬೆಳೆ ಬೆಳೆಯುತ್ತಿರುವುದೂ ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಮಲೆನಾಡಿನ ಎಲ್ಲ ಭಾಗದಲ್ಲಿಯೂ ಬೆಳೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯೂ ಮಲೆನಾಡಿನ ಭಾಗವೇ.

ಶ್ರೀ ಅಣ್ಣಾರಾವ್ ಗಣಮುಖಿ.—ಏಲಕ್ಕಿ ಬೆಳೆಯುವವರ ಜೊತೆಗೆ ಏಲಕ್ಕಿ ತಿನ್ನುವವರ ಪ್ರತಿನಿಧಿಗಳೂ ಇದರಲ್ಲಿರಬೇಕೆಂದು ಶಿಫಾರಸು ಮಾಡಿದ್ದೀರಾ?

ಶ್ರೀ ಕೆ. ಮಲ್ಲಪ್ಪ.—ಏಲಕ್ಕಿ ತಿನ್ನತಕ್ಕವರಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೋ ಇಲ್ಲವೋ ಎನ್ನುವುದನ್ನು ಹೇಳಲು ನನಗೆ ಇನ್ನೂ ಪೂರ್ತಿ ವಿವರಗಳು ಸಿಕ್ಕಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗಳೂರಿನಲ್ಲಿ ಏಲಕ್ಕಿ ಸಂಶೋಧನಾ ಕೇಂದ್ರದಲ್ಲಿರುವ ತಜ್ಞರಾದ ಅಧಿಕಾರಿಗಳನ್ನು ಈ ಮಂಡಲಿಯಲ್ಲಿ ಏಕೆ ಹಾಕಿಲ್ಲ?

ಶ್ರೀ ಕೆ. ಮಲ್ಲಪ್ಪ.—ಸಾಮಾನ್ಯವಾಗಿ ಈ ಏಲಕ್ಕಿ ಬಗ್ಗೆ ಸರಿಯಾದ ಮಾಹಿತಿ ಇರುವವರು ಬೇಕೆಂದು ಎರಡು ಮೂರು ಜಿಲ್ಲೆಗಳ ಪ್ರತಿನಿಧಿಗಳನ್ನು ನೋಡಿಕೊಂಡು ಆರಿಸುವುದು ಯೋಗ್ಯ ಎಂದು ಹೇಳಿದೆ. ಇದರಲ್ಲಿ ರೋಗ ರುಜಿನಗಳನ್ನು ನಿವಾರಿಸುವ ತಜ್ಞರೂ ಇದ್ದಾರೆ. ಮತ್ತು ಇನ್ನೂ ಚೆನ್ನಾಗಿ ಕೆಲಸಮಾಡುವವರನ್ನೂ ತೆಗೆದುಕೊಳ್ಳಬೇಕೆಂದು ಹೇಳಿ. ಚಿಕ್ಕಮಗಳೂರಿನವರನ್ನು ಬಿಟ್ಟುಬಿಡಬೇಕೆಂದು ಶಿಫಾರಸನ್ನು ಮಾಡಿಲ್ಲ.

Establishment of a Rural Artisans Centre at Tiptur.

*Q.—297. Sri K. P. REVANNA SIDDAPPA (Tiptur).—

Will the Government be pleased to state:—

(a) whether it is a fact that they had inspected a building at Tiptur with a view to establish a Rural Artisans Centre ;

(b) the particulars of the Report received from the officers in this behalf ;

(c) the reason for not establishing such a Centre at Tiptur so far ?

A.— Sri K. MALLAPPA (Minister for Industries and Commerce).—

(a) No. They did not inspect any building. But the Departmental officers during their visit to Tiptur casually enquried the local people about the availability of suitable building for establishing a Rural Artisan Training Institute at Tiptur.

(b) It is reported that no building was available at the place and the people of that area had agreed to make available the Choultry for starting a Rural Artisan Training Institute in case the Government were to decide to establish the same at that place.

(c) Government decided to locate the Rural Artisan Training Institute at Madhugiri. Since this Rural Artisan Training Institute at Madhugiri with a branch at Tumkur is already there to cater to the needs of the Tumkur District people, it is not considered necessary to start an additional Institute at Tiptur.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಉತ್ತರದಲ್ಲಿ (ಎ) ಭಾಗಕ್ಕೆ "ಆಕಸ್ಮಿಕವಾಗಿ ವಿಚಾರಿಸಿದರು" ಎಂದಿದೆ. ಅಂತಹ ಆಕಸ್ಮಿಕವಾದವುಗಳು ಏನಿತ್ತು.

† ಶ್ರೀ ಕೆ. ಮಲ್ಲಪ್ಪ.—ತರ್ಜುಮೆ ಮಾಡುವಾಗ ಹಾಗೆ ಬಂದಿರಬಹುದು. Casually ಎನ್ನುವುದಕ್ಕೆ ಹಾಗೆ ಅಚ್ಚಾಗಿರಬಹುದು. ಇದರಿಂದ ಸ್ವಲ್ಪ ವ್ಯತ್ಯಾಸ ತಮಗೆ ಕಾಣಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧಿಕಾರಿಗಳು ಇಲ್ಲಿಗೆ ಬಂದು ನೋಡಿಕೊಂಡು ಇದರ ಫೈಲನ್ನು ತರಿಸಿಕೊಂಡು, ಸಾರ್ವಜನಿಕರಿಗೆಲ್ಲಾ ಅನುಕೂಲಮಾಡಿಕೊಡಬಹುದು ಎಂದು ಇಲ್ಲಿ ಕೇಂದ್ರ ತೆರೆಯಲು ಬಿಲ್ಡಿಂಗನ್ನು ಬಾಡಿಗೆಗೆ ಗೊತ್ತುಮಾಡಿ ಇದಕ್ಕೆ ಬೇಕಾದ ಉಪಕರಣಗಳನ್ನೆಲ್ಲಾ ಸಿದ್ಧಮಾಡಿಕೊಂಡು ಇದ್ದ ಸಂದರ್ಭದಲ್ಲಿ ಹಠಾತ್ತನೆ ಇದನ್ನು ಬೇರೆ ಕಡೆಗೆ ಬದಲಾಯಿಸಬೇಕಾದಂತಹ ಕಾರಣಗಳೇನಿದ್ದವು.

ಶ್ರೀ ಕೆ. ಮಲ್ಲಪ್ಪ.—ಈ ಸರ್ಕಾರದವರು ಇಂತಹ ಸೆಂಟರನ್ನು ಕೊಡತಕ್ಕ ವಿಚಾರದಲ್ಲಿ ಎಲ್ಲವನ್ನು ವಿಚಾರಮಾಡಿ ಇಲ್ಲಿ ಒಂದು ಶಾಖೆಯನ್ನು ತೆರೆಯಬೇಕೆನ್ನುವಾಗ ಇದಕ್ಕೆ ಬೇಕಾಗುವ ಎಲ್ಲ ಕಾರಣಗಳನ್ನು ಪರಿಶೀಲಿಸಿ ಕೊನೆಗೆ ಮಧುಗಿರಿಯಲ್ಲಿ ಆಗಬಹುದೆಂದು ತೀರ್ಮಾನಮಾಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಧುಗಿರಿಯಲ್ಲಿ ಈ ಸೆಂಟರು ತೆರೆಯಲು ಇದ್ದ ಗುಣಗಳೇನು ಮತ್ತು ತಿಪಟೂರಿನಲ್ಲಿ ತೆರೆಯಲು ಇದ್ದಂತಹ ಅವಗುಣಗಳೇನು ?

ಶ್ರೀ ಕೆ. ಮಲ್ಲಪ್ಪ.—ಮಧುಗಿರಿ ಸ್ವಲ್ಪ ಹಿಂದುಳಿದಿದೆ. ಅದು ಒಂದು ಬರಗಾಲದ ಏರಿಯಾ ಎಂದು ಬದಲಾವಣೆ ಮಾಡಿಕೊಟ್ಟಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹೋಗಲಿ, ಎನೋ ಆದದ್ದು ಆಗಿ ಹೋಯಿತು. ಈಗಲಾದರೂ ಹೆಚ್ಚಿನ ತರಪೇತಿಯಾಗತಕ್ಕಂಥ ಅವಕಾಶವಿಲ್ಲವೆ, ಇರುವುದರಿಂದ, ಒಂದು Additional Centre ತಿಪಟೂರಿಗೆ ಕೊಡುತ್ತೀರಾ !

ಶ್ರೀ ಕೆ. ಮಲ್ಲಪ್ಪ.—ಈಗಾಗಲೇ 22 ಸೆಂಟರುಗಳು ನಮ್ಮ ರಾಜ್ಯದಲ್ಲಿವೆ. ಮತ್ತೆ ತುಮಕೂರಿನಲ್ಲಿ ಕೂಡ ಒಂದು ಸೆಂಟರ್ ಇದೆಯೆನ್ನುವುದು ತಮ್ಮ ತಿಳಿವಳಿಕೆಗೆ ಬಂದಿರಬಹುದು. ತುಮಕೂರು ಡಿಸ್ಟ್ರಿಕ್ಟಿಗೆ ಎರಡು ಸೆಂಟರುಗಳಿವೆ. ಇತರ ಡಿಸ್ಟ್ರಿಕ್ಟುಗಳಲ್ಲಿ ಅಷ್ಟೂ ಇಲ್ಲ. ಅದೂ ಅಲ್ಲದೆ ತಿಪಟೂರಿನಲ್ಲಿ ಒಂದು ನಾರು ಕೈಗಾರಿಕೆ ಸ್ಥಾಪನೆ ಮಾಡಬೇಕೆಂದು ಏರ್ಪಾಡಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆದರೂ ಸಹ ವಿರೋಧಿ ಪಕ್ಷದ ಸದಸ್ಯರಿರುವ ಊರಿಗೆ ಬಂದಂಥ ಸೆಂಟರನ್ನು ಅಲ್ಲಿಗೆ ಹಾಕಿರುವುದರಿಂದ, ದಯೆಯಿಟ್ಟು ಅಧಿಕಾರಿಗಳ ರಿಪೋರ್ಟಿನಲ್ಲಿ ತಿಪಟೂರಿಗೆ ಕೊಡಬೇಕೆಂದಿರುವುದರಿಂದ, ಸರ್ಕಾರ ಅದರಂತೆ ತೀರ್ಮಾನ ಮಾಡಿ, ಕಡೆಗೆ influence ಗೆ ಒಳಗಾಗಿ training centre ಬದಲಾಯಿಸಿರುವುದರಿಂದ ಇನ್ನೊಂದು ಸೆಂಟರನ್ನು ತಿಪಟೂರಿಗೆ ಕೊಡಲೇಬೇಕಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಬರೀ ಪಕ್ಷಪಾತ ದೃಷ್ಟಿಯಿಂದ ವಿಚಾರ ಮಾಡಿ ಸರ್ಕಾರ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಮಾಡಿಲ್ಲ.

ಶ್ರೀ ಕೆ. ಮಲ್ಲಪ್ಪ.—ಹಾಗೆ ಮಾಡಿದ್ದರೂ. ಮುಂದೆಯೂ ಸರ್ಕಾರ ಆದರ ಜವಾಬ್ದಾರಿಗೆ, ಹೊಣೆಗಾರಿಕೆ ಹೊರಬೇಕು. ಎಲ್ಲಾ ವಿಚಾರಮಾಡಿ, ಅಧಿಕಾರಿಗಳು ರಿಪೋರ್ಟುಗಳನ್ನು ತರಿಸಿಕೊಂಡು, ವಿಮರ್ಶೆಮಾಡಿ, ತೀರ್ಮಾನಮಾಡಿದ್ದಾರೆ. ಮಧುಗಿರಿಗೆ ಕೊಟ್ಟಿರುವುದನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಹೆಚ್ಚಿಗೆ ಸೆಂಟರ್ ಕೊಡಬೇಕಾದರೆ ಕಷ್ಟವಾಗುತ್ತದೆ. ಹಣದ ಅಡ್ಡಿ ಇದೆ. ಇಂಥ ತುರ್ತು ಪರಿಸ್ಥಿತಿಯಲ್ಲಿ ನಮ್ಮ ಹಣಕಾಸಿನ ವ್ಯವಸ್ಥೆ ಯಾವ ರೀತಿಯಲ್ಲಿ ಇರುತ್ತೆ ಅನ್ನುವುದು ತಮಗೇ ವೇದ್ಯವಾಗಿದೆ.

Repairs to Sri Mallikarjunaswamy and Sri Kaitabheswaraswamy Temples in Sagar and Sorab Taluks.

*Q.—333. Sri V. S. LAKSHMIKANTAPPA (Sagar).—

Will the Government be pleased to state :—

the agency through which the repairs of Sri Mallikarjunaswamy Temple at Kalasi in Sagar Taluk and Sri Kaitabheswaraswamy temple in Sorab Taluk have been executed and the amount spent for the respective works ?

A.—Sri M. V. KRISHNAPPA (Minister for Revenue).—

The Archæological Department is taking necessary action for their repairs, and so far, no amount has been spent.

ಶ್ರೀ ಬಿ. ಎಸ್. ಲಕ್ಷ್ಮೀಕಾಂತಪ್ಪ.—ತಮ್ಮ ಉತ್ತರದಲ್ಲಿ ದುರಸ್ತು ಕಾಮಗಾರಿಯನ್ನು ನಡೆಸುವ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತಿದೆ ಮತ್ತು ಇದುವರೆಗೂ ಹಣವನ್ನೇನೂ ವೆಚ್ಚಮಾಡಿಲ್ಲವೆಂದು ಹೇಳಿದ್ದೀರಿ. ಹೋದ ಮಳೆಗಾಲದ ಮುಂದೆ ಎರಡು ದೇವಸ್ಥಾನಗಳ ಛಾವಣಿ ದುರಸ್ತಿ ನಡೆದು, ದುರಸ್ತಿಯಾಗುವುದಕ್ಕೆ ಮುಂಚೆ ಇದ್ದ ಸ್ಥಿತಿಗಿಂತಲೂ ನಾದುರಸ್ತಿಯಾಗಿದೆ. ಹಾಗಿದ್ದ ಮೇಲೆ ಪ್ರಾಚೀನ ಶೋಧನಾ ಇಲಾಖೆಯವರು ದುರಸ್ತಿ ನಡೆಸುವ ಉದ್ದೇಶವಾದರೂ ಏನು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರಾಚೀನ ಶೋಧನಾ ಇಲಾಖೆ ನಮ್ಮ ಮಿನಿಸ್ಟ್ರಿಯಲ್ಲಿಲ್ಲ, ಇಂಡಸ್ಟ್ರೀಸ್ ಮಿನಿಸ್ಟ್ರಿಯಲ್ಲಿದೆ. ಆದ್ದರಿಂದ ಅವರಿಗೇ ಈ ಪ್ರಶ್ನೆ ಹಾಕಿದ್ದರೆ ಚೆನ್ನಾಗಿತ್ತು. ಇದು ತಪ್ಪಾಗಿ ನನಗೆ ಬಂದಿದೆ.

Sri K. P. REVANNASIDDAPPA.—On a Point of Order, Sir.

Mr. SPEAKER.—I know the point and it will be answered. If the answer is not ready, I will hold over the question.

Sri M. V. KRISHNAPPA.—It is a question about old temples. All temples come under the Muzrai Department. The question is: "who repaired it", and I have answered. The estimate was prepared for Rs. 2,900 and no money was spent.

Mr. SPEAKER.—To that extent, the Hon. Minister has done a good job, but the correct information should have been furnished by the Government. I will hold over this question for to-morrow.

Amount spent since 1959 to Mahila Samajas in Gauribidanur Taluk.

***Q.**—370. Sri R. N. LAKSHMIPATHI (Gauribidanur):

Will the Government be pleased to state:—

(*a*) the amount spent since 1959 to Mahila Samajas under the Budget head 'Industries in Gauribidanur taluk'.

(*b*) the details of the expenditure incurred in each centre towards the establishment and other expenses in the above taluk ?

A.— Sri K. MALLAPPA (Minister for Industries and Commerce).—

(*a*) Rs. 7,642 (Rs. 2,592 towards recurring and Rs. 5,050 towards non-recurring expenditure).

(*b*)

	1959-60		1960-61	
	Recurring	*Non-Recurring*	*Recurring*	*Non-Recurring*
	Rs.	Rs.	Rs.	Rs.
(1) Mahila Samaja, Gowribidnur	432	500	432	1,100
(2) Mahila Samaja, Gollahalli.	...	...	432	650
(3) Mahila Samaja, Narasapura.	...	...	432	650
(4) Mahila Samaja, Manivala	432	650	432	1,500
Total ...	864	1,150	1,728	3,900

No grant-in-aid were paid during 1961-62, and during 1962-63, so far as the Samajas have not complied with certain conditions governing the grant-in-aid.

Sri R. N. LAKSHMIPATHI.—Has it come to the notice of the Government that in Gowribidanur and Narasapur, there is no trace of Mahila Samajas and they are merely make-believes ?

Mr. SPEAKER.—Items (1) and (3) in the reply "are not existing".

ಶ್ರೀ ಜಿ. ವಿ. ಗೌಡ.—Recurring Rs. 864, non-recurring Rs. 1,150 ಯಾವ ಉದ್ದೇಶಕ್ಕಾಗಿ ಖರ್ಚಾಗಿದೆ ?

†ಶ್ರೀ ಕೆ. ಮಲ್ಲಪ್ಪ.—Non-recurring ಸಾಮಾನ್ಯವಾಗಿ ಯಂತ್ರ ಮತ್ತು ಬಿಲ್ಡಿಂಗಿಗೆ ಕೊಡುತ್ತಾರೆ. Recurring ಕೊಟ್ಟಿರತಕ್ಕಂಥಾದ್ದು ಅಧಿಕಾರಿಗಳ ಮೇಲಿನ ವೆಚ್ಚಕ್ಕೆ.

ಶ್ರೀ ಜಿ. ವಿ. ಗೌಡ.—ದುಡ್ಡು ಕಟ್ಟಡಕ್ಕೆ ಕೊಟ್ಟಿದ್ದೀರ, ಯಂತ್ರಗಳನ್ನು ತೆಗೆಯಲು ಕೊಟ್ಟಿದ್ದೀರ, ಯಾವುದಕ್ಕೆ ಎಷ್ಟು ?

ಶ್ರೀ ಕೆ. ಮಲ್ಲಪ್ಪ.—ನನ್ನಲ್ಲಿ ವಿವರವಿಲ್ಲ. ಹಣ ನೋಡಿದರೆ ಬಹುಶಃ ಯಂತ್ರಗಳಿಗೆ ಎಂದು ಕಾಣುತ್ತೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸೊಸೈಟಿಗಳು ಆಡಿಟ್ ಆಗಿ ವರದಿ ಆಗಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಇದನ್ನು ಇತ್ತೀಚೆಗೆ ಮಾಡಿದ್ದೇವೆ. ಈಗ ಸಂಘಗಳು ರಿಜಿಸ್ಟರ್ ಆಗಬೇಕು, ರಿಜಿಸ್ಟರ್ ಆಗದೆ ಸಹಾಯ ಕೊಡಕೂಡದು ಎಂಬ ರೂಲನ್ನು ಜಾರಿಗೆ ತಂದಿದ್ದೇವೆ. ಇದು ಮೊದಲು 1959-60, 1960-61ರಲ್ಲಿ ಕೊಟ್ಟಿರತಕ್ಕಂಥ ಹಣ. ಈಗ ಹಣ ಕೊಟ್ಟಿಲ್ಲವೆಂಬುದು ಉತ್ತರದಿಂದಲೇ ಅರ್ಥವಾಗುತ್ತದೆ. ಈಗ ಕೊಡಬೇಕಾದರೆ ಆಡಿಟ್ ಆಗಬೇಕು, ಅಕೌಂಟ್ಸ್ ಸರಿಯಾಗಿ ಇಟ್ಟುಕೊಳ್ಳಬೇಕು ; ರಿಪೋರ್ಟ್ ಬರಬೇಕು. ಅವುಗಳನ್ನು ಪರಿಶೀಲಿಸಿ ಕೊಡಲಾಗುವ ಕ್ರಮವಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಂಗಳೂರಿನಲ್ಲಿ ಇದ್ದುಕೊಂಡು, ಹೆಣ್ಣು ಮಕ್ಕಳ ರುಜು ಹಾಕಿಸಿ, ಹಣ ತೆಗೆದುಕೊಂಡು ಬಿಟ್ಟು ಈ ಅಧ್ವಾನಕ್ಕೆ ಬಂದಿದೆಯಲ್ಲವೆ ?

ಶ್ರೀ ಕೆ. ಮಲ್ಲಪ್ಪ.—1959—60, 1960—61ಕ್ಕೆ ಹಿಂದೆ ಇದು ಆಗಿರತಕ್ಕಂಥಾದ್ದು. ಈಗ ಎರಡು ವರ್ಷಗಳಿಂದ ಕೊಟ್ಟಿಲ್ಲ. ಈ ಸಮಾಜಗಳ ವ್ಯವಸ್ಥೆ ಸರಿಯಾಗಿಲ್ಲ ಎನ್ನುವುದು ಉತ್ತರ ನೋಡಿದರೇ ನಿಶ್ಚಿತವಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಮಹಿಳಾ ಸಮಾಜಗಳು ರಿಜಿಸ್ಟರ್ ಆಗಬೇಕೆಂದು ಹೇಳಿದಿರಿ. Co-operative Socities Act ಪ್ರಕಾರ ಮಾಡಬೇಕಾದರೆ 50 ರೂಪಾಯಿ ಕೊಡಬೇಕು, Trust Act ಪ್ರಕಾರ ಮಾಡಬೇಕಾದರೆ 5 ರೂಪಾಯಿ ಕೊಡಬೇಕು. ಇದರಲ್ಲಿ ಯಾವುದರ ಪ್ರಕಾರ ಮಾಡಬೇಕು ?

ಶ್ರೀ ಕೆ. ಮಲ್ಲಪ್ಪ.—Co-operative Society Actನ ಪ್ರಕಾರ ರಿಜಿಸ್ಟರ್ ಮಾಡಬಹುದು ಅಥವಾ ಇನ್ನೊಂದು ರೀತಿಯಲ್ಲಿಯೂ ಮಾಡಬಹುದು. ಆದರೆ ಮೇಲ್ವಿಚಾರಣೆ ಚೆನ್ನಾಗಿ ನಡೆಯಬೇಕು ಮತ್ತು ಲೆಖ್ಖಪತ್ರಗಳನ್ನು ಚೆನ್ನಾಗಿ ಇಟ್ಟಿರಬೇಕು.

ಶ್ರೀ ಜಿ. ವಿ. ಗೌಡ.—ಎರಡು ವರ್ಷಗಳಲ್ಲಿ 7,642 ರೂಪಾಯಿಗಳು ದುರುಪಯೋಗವಾಗಿ ಈ ಮಹಿಳಾ ಸಮಾಜಗಳು ಸಹಾಯಧನ ಪಡೆದ ಉದ್ದೇಶ ಸಾಧನೆಯಾಗದಿದ್ದರೆ ದುಡ್ಡನ್ನು ವಾಪಸು ಪಡೆಯಲು ಪ್ರಯತ್ನ ಮಾಡುತ್ತೀರ ?

ಶ್ರೀ ಕೆ. ಮಲ್ಲಪ್ಪ.—ಇದು ಹಿಂದೆ ಕೊಟ್ಟಿರುವಂಥಾದ್ದು ಈಗ ನಾನು ಕೊಟ್ಟಿಲ್ಲ. ಸರಿಯಾಗಿ ಉಪಯೋಗವಾಗಿಲ್ಲ. ವಸೂಲು ಮಾಡುವುದು ಕಷ್ಟವಾಗುತ್ತದೆ. ವಿಚಾರ ಮಾಡಬಹುದು. ಆದರೆ ಈಗ ಎರಡು ವರ್ಷದಿಂದ ನಾವು ಕೊಟ್ಟಿಲ್ಲ ಅನ್ನುವುದನ್ನು ಸ್ಪಷ್ಟಪಡಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ Grant-in-aidನಿಂದ ಚೆನ್ನಾಗಿ ಕೆಲಸ ನಡೆಯುತ್ತಿತ್ತೆಂದು ಹೇಳಿ ಆ ಎರಡು ವರ್ಷ ಅರ್ಜಿ ಬಂದಿತ್ತೆ ?

ಶ್ರೀ ಕೆ. ಮಲ್ಲಪ್ಪ.—ಅರ್ಜಿ ಕೊಟ್ಟಿರಬಹುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅಲ್ಲಿ ಮಹಿಳಾ ಸಮಾಜಗಳೇ ಇಲ್ಲ. ಬೆಂಗಳೂರಿನಿಂದ ನಾಲ್ಕು ಜನ ಹೆಣ್ಣುಮಕ್ಕಳು ಅಲ್ಲಿಗೆ ಬಂದು ಕಳ್ಳತನದಿಂದ ಸಹಾಯಧನ ತೆಗೆದುಕೊಂಡುಹೋಗಿ ತಿಂದುಹಾಕಿದ್ದಾರೆನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಕೂಲಂಕಷವಾಗಿ ತನಿಖೆ ಮಾಡಿ ರಿಪೋರ್ಟ್ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ನಮ್ಮ ತಿಳುವಳಿಕೆಗೆ ಇದು ಈಗ ಬಂದಿದೆ. ಇವತ್ತು ಮಾನ್ಯ ಸದಸ್ಯರು ತಿಳಿಸಿರುತ್ತಾರೆ. ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಮಹಿಳಾ ಸಮಾಜ ಸಾರ್ವಜನಿಕರು ಓಡಾಡುವ ಮಾರ್ಗದಲ್ಲಿದೆಯೋ, ಅಥವ ಗುಪ್ತದಲ್ಲಿದೆಯೋ ?

Mr. SPEAKER.—What is that question ? please put it.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಗ್ರ್ಯಾಂಟು ಪಡೆಯುವುದಕ್ಕೆ ಸಾರ್ವಜನಿಕ ಮುಖಂಡರು ಯಾರಾದರೂ ಪಾತ್ರವಹಿಸಿದ್ದರೆ ಅವರ ಉದ್ಯೋಗ, designation ಏನು ?

ಶ್ರೀ ಕೆ. ಮಲ್ಲಪ್ಪ.—ಈ ಸಮಾಜಗಳು ಸರಿಯಾಗಿ ಕೆಲಸಮಾಡದೆ ಮೋಸ ಮಾಡಿವೆ ಎನ್ನುವ ಆರೋಪಣೆ, ಆಕ್ಷೇಪಣೆ ಬಂದಿರುವುದು ಪ್ರಥಮವಾಗಿ ಇವತ್ತು. ಇದನ್ನು ವಿಚಾರ ಮಾಡಬಹುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಾವು ವಿಚಾರಮಾಡುತ್ತೇವೆಂದು ಹೇಳಿದಿರಿ. ಕೂಲಂಕಷವಾಗಿ ವಿಚಾರಮಾಡಿ ಅನ್ಯಾಯವಾಗಿರುವುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುತೀರಾ ?

ಶ್ರೀ ಕೆ. ಮಲ್ಲಪ್ಪ.—ಮೋಸಕೃತ್ಯದಿಂದ ಹಣ ಪಡೆದಿರತಕ್ಕಂಥವರ ಮೇಲೆ ಏನು ಕ್ರಮ ನಡೆಸಬೇಕೋ ನಡೆಸುತ್ತೇವೆ.

1-30 P.M.

ಶ್ರೀ ಆರ್ ಎನ್. ಲಕ್ಷ್ಮೀಪತಿ.—ನಾಲ್ಕು ಸಮಾಜಗಳಿಗೂ ಒಬ್ಬರೇ ಅಧ್ಯಕ್ಷರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಅಂಥಾ ಇನ್ಫರ್ಮೇಷನ್ ಮಾನ್ಯ ಸದಸ್ಯರಿಗೆ ಗೊತ್ತಿದ್ದು ಅದನ್ನು ಕೊಟ್ಟಿದ್ದರೆ ಬಹಳ ಉಪಕಾರವಾಗುತ್ತಿತ್ತು. ಅದನ್ನು ವಿಚಾರ ಮಾಡಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಎರಡು ವರ್ಷಗಳಿಂದ ಒಬ್ಬರೇ ಮಹಿಳೆಯರು ಆ ಹಣವನ್ನು ತೆಗೆದುಕೊಂಡಿದ್ದಾರೆ. ಅವರ ಮೇಲೆ ಆಕ್ಷನ್ ತೆಗೆದುಕೊಂಡರೆ ಚೆನ್ನಾಗಿರುತ್ತದೆ ಅಲ್ಲವೇ?

Mr. SPEAKER.—The Hon'ble Members may write to the Hon'ble Minister about it.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಎರಡು ವರ್ಷಗಳ ಕಾಲ ದುಡ್ಡು ತೆಗೆದುಕೊಂಡಿರತಕ್ಕ ಮಹಿಳೆಯರ ವಿಳಾಸವನ್ನು ಕೊಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ದಯವಿಟ್ಟು ಮಾನ್ಯ ಸದಸ್ಯರು ಆ ಇನ್ಫರ್ಮೇಷನ್ ಅನ್ನು ಕೊಟ್ಟರೆ ಅದನ್ನು ವಿಚಾರ ಮಾಡುತ್ತೇವೆ. ಅವರು ಮೋಸದಿಂದ ಹಣವನ್ನು ಪಡೆದುಕೊಂಡಿದ್ದಾರೆ. ಆ ಬಗ್ಗೆ ಏನು ಕ್ರಮವನ್ನು ಜರುಗಿಸಬೇಕೋ ಅದನ್ನು ಜರುಗಿಸುತ್ತೇವೆ.

Mr. SPEAKER.—The Hon'ble Member might write to the Hon'ble Minister. It could be usefully persued rather than putting vague supplimentaries.

Reconstruction of the Managing Committee of the Mangalore Depressed Classes Mission Trust.

*Q.—434. Sri S. GOPALA SALENNA (Mudabidri).—

Will the Government be pleased to state:—

(a) whether Managing Committee of the Mangalore Depressed Classes Mission Trust has been reconstituted;

(b) the extent of landed properties and the number of different charitable endowments managed by the above Trust;

(c) the total amount of annual income in each year derived from the above said Trust properties, since the Government took over the management?

A.—**Sri M. V. KRISHNAPPA** (Minister for Revenue).—

(*a*) Yes.

(*b*) Landed Property—62 Acres 42 cents.

The following are the Charitable Endowments :

1. Dr. Karnad Fund.
2. H. Narayana Rao Fund.
3. Gomatiamma Maternity Fund.

(*c*)

Year	*Annual Income* Rs.
1953-54	720-12
1954-55	746-40
1955-56	740-18
1956-57	760-19
1957-58	764-25
1958-59	187-50
1959-60	318-19
1960-61	350-30
1961-62	202-75
Total :	4,789-88

ಶ್ರೀ ಗೋಪಾಲ ಸಾಲೆನ್ನ.—ಮಂಗಳೂರಿನ ನಿಮ್ನವರ್ಗದ ಮಂಡಲಿ ನ್ಯಾಸದ ಆಡಳಿತ ನಿರ್ವಹಣೆಗೆ ಒಳಪಟ್ಟ ಜಮಾನು 62 ಎಕರೆ 42 ಗುಂಟೆಗಳು ಎಂದು ಹೇಳಿದ್ದೀರಿ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಇದೆ, ಮುಖ್ಯವಾಗಿ ಮಂಗಳೂರಿನಲ್ಲಿ ಎಷ್ಟು ಎಕರೆ ಇದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಜಮಾನು ಎಷ್ಟು ಎಕರೆ ಇದೆಯೆಂಬುದು ಗೊತ್ತು. ಅದರಿಂದ ಉತ್ಪತ್ತಿ ವರ್ಷೇ ವರ್ಷೇ ಎಷ್ಟು ಬರುತ್ತದೆ ಎಂಬುದು ಗೊತ್ತಿದೆ. ಆದರೆ ಆ ಜಮಾನು ಯಾವ ಯಾವ ತಾಲ್ಲೂಕಿನಲ್ಲಿದೆ ಎಂಬುದಕ್ಕೆ ಸಂಬಂಧಪಟ್ಟ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಗೋಪಾಲ ಸಾಲೆನ್ನ.—ನಿಮ್ನ ವರ್ಗದ ಮಂಡಲಿಯ ನ್ಯಾಸದ ಆಡಳಿತದ ನಿರ್ವಹಣೆಗೆ ಒಳಪಟ್ಟಿರುವ ಜಮೀನು ಬಹಳ ಉತ್ತಮವಾದ ಜಮೀನು. ಅದು ಡಿಪ್ರೆಸ್ಡ್ ಕ್ಲಾಸಿನ ಪರ್ಪಸ್ಸಿಗೆ ಉಪಯೋಗವಾಗುವುದಿಲ್ಲ ಎಂದು ಕೇಳಿದ್ದೇನೆ. ಅದನ್ನು ಉತ್ತಮವಾದ ರೀತಿಯಲ್ಲಿ ಉಪಯೋಗ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಕಮಿಟಿಯ ಛೇರ್ಮನ್ ಡೆಪ್ಯುಟಿ ಕಮೀಷನರೇ ಇದ್ದಾರೆ. ಮತ್ತು ಆ ಕಮಿಟಿಯ ಮೆಂಬರುಗಳು ಇದ್ದಾರೆ. ಅವರು ಅದನ್ನು ಸದುಪಯೋಗ ಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ.

Sri SIDDAIAH KASHIMATH.—What are the functions of the Mangalore Depressed Classes Mission Trust ?

Sri M. V. KRISHNAPPA.—It is to help the Depressed Classes.

Sri SANJEEVANATH AIKALA.—Who are the members of the committee ;

Sri M. V. KRISHNAPPA.—The Deputy Commissioner is the Chairman. Dr. N. P. Malya who was a member is no more, District Social Officer is another member.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ ನಾಲ್ಕು ವರ್ಷಗಳಿಂದ ಉತ್ಪತ್ತಿ ಕಡಿಮೆ ಯಾಗುವುದಕ್ಕೆ ಕಾರಣವೇನು ?

ಶ್ರೀ. ಎಂ. ವಿ. ಕೃಷ್ಣಪ್ಪ.—ಈಗ ಟೆನೆನ್ಸಿ ಕಾನೂನು ಜಾರಿಯಲ್ಲಿದೆ. ಟೆನೆಂಟ್ಸ್ ಗೇಣಿಯನ್ನು ಸರಿಯಾಗಿ ಕೊಡುವುದಿಲ್ಲ. ಈಗ ಟೆನೆಂಟ್ಸ್‌ಗೆ ಪ್ರೊಟೆಕ್ಷನ್ ಕೊಟ್ಟಿದ್ದಾರೆ. ಆದ್ದರಿಂದ, ಅದರಿಂದಲೇ ಅರ್ಥವಾಗುತ್ತದೆ ಲ್ಯಾಂಡ್ ಲಾರ್ಡ್ಸ್‌ಗತಿ ಏನು ಎಂದು.

ಶ್ರೀ ಗೋಪಾಲ ಸಾಲೆನ್ನ.—ಈ ಯೋಜನೆಗಳನ್ನು ಕಮಿಟಿಯವರು ತಯಾರು ಮಾಡಿ ಹಾಕಿದ್ದು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—202ರೂಪಾಯಿಗಳಲ್ಲಿ ಏನು ದೊಡ್ಡ ಯೋಜನೆಯನ್ನು ಮಾಡುವುದಕ್ಕೆ ಸಾಧ್ಯ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು.

ಶ್ರೀ ವಿ. ಎಂ. ದೇವ್.—ಮಂಗಳೂರು ಡಿಪ್ರೆಸ್ಡ್ ಕ್ಲಾಸ್ ಮಿಷನ್ ಟ್ರಸ್ಟಿನ ಮ್ಯಾನೇಜಿಂಗ್ ಕಮಿಟಿಯವರ ನಿರ್ವಹಣೆಗೆ ಒಳಪಟ್ಟಿರುವ ಜಮೀನಿನಲ್ಲಿ ಯಾವ ಯಾವ ತರಹ ಜಮೀನು ಇದೆ, ತೋಟ ಎಷ್ಟಿದೆ, ಗದ್ದೆ ಎಷ್ಟಿದೆ, ಡ್ರೈಲ್ಯಾಂಡ್ಸ್ ಎಷ್ಟು ಇದೆ ಎನ್ನುವ ಡೀಟೈಲ್ಸ್ ಕೊಡುತ್ತೀರಾ?

Mr. SPEAKER.—Those are details.

ಶ್ರೀ. ವಿ. ಎಂ. ದೇವ್.—ಏನು ಸ್ವಾಮಿ ಇದು ಹುಡುಗಾಟ. 1961-62ನೇ ಸಾಲಿನಲ್ಲಿ 62 ಎಕರೆ 42ಗುಂಟೆ ಜಮೀನಿನಲ್ಲಿ 202ರೂಪಾಯಿ 75ನಯಾಪೈಸೆ ಉತ್ಪತ್ತಿ ಬಂದಿದೆ. ಆದ್ದರಿಂದ ದಯವಿಟ್ಟು ಆ ಡೀಟೇಲ್ಸ್ ಕೊಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಟೆನೆನ್ಸಿ ಲ್ಯಾಂಡ್ ಲೇಜಿಸ್ಲೇಶನ್ ಇರುವುದರಿಂದ ಅವರು ಗೇಣಿಯನ್ನು ಕೊಡುವುದಿಲ್ಲ. ಗೇಣಿಯನ್ನು ವಸೂಲುಮಾಡುವುದಕ್ಕೆ ಆ ಕಮಿಟಿಯವರು ಕೋರ್ಟಿಗೆ ಹೋಗಬೇಕಾಗುತ್ತದೆ. You cannot claim much more than what they are paying to you.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಆ ಟ್ರಸ್ಟಿನಲ್ಲಿ ಒಟ್ಟು ಎಷ್ಟು ಫಂಡ್ಸ್ ಇದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಡೀಟೇಲ್ಸ್ ಈಗ ನನ್ನ ಹತ್ತಿರ ಇಲ್ಲ. ಒಂದು ವರ್ಷಕ್ಕೆ 202 ರೂಪಾಯಿಗಳ ಉತ್ಪತ್ತಿ ಬರುವುದರಿಂದ ಅವರ ಹತ್ತಿರ ಸಾವಿರಾರು ರೂಪಾಯಿಗಳ ಫಂಡ್ಸ್ ಇಲ್ಲ ಎಂದು ಹೇಳಬಹುದು.

ಶ್ರೀ ಗೋಪಾಲ ಸಾಲೆನ್ನ.—ಇಂಡಿಯನ್ ಸೊಸೈಟಿಯವರು ಅದನ್ನು ನಡೆಸುವಾಗ ಆ ಜಮೀನಿನಲ್ಲಿ ಒಂದು ವರ್ಷಕ್ಕೆ 700ರೂಪಾಯಿಗಳಿಗಿಂತ ಜಾಸ್ತಿ ಆದಾಯ ಬರುತ್ತಿತ್ತು. ಈಗ ಆ ಜಮೀನು ಸರ್ಕಾರದ ವಶಕ್ಕೆ ಬಂದಮೇಲೆ ಆದಾಯ ಕಡಿಮೆಯಾಗಿದೆ. ಮಂಗಳೂರಿನಲ್ಲಿ ಒಂದು ಎಕರೆ ಜಮೀನಿಗೆ ಒಂದು ಲಕ್ಷರೂಪಾಯಿ ಕ್ರಯ ಆಗುತ್ತದೆ. ಹೀಗಿರುವಾಗ ಆ ಜಮೀನನ್ನು ಎಷ್ಟು ವಕ್ಕಲುಗಳು ಬೇಸಾಯ ಮಾಡುತ್ತಾರೆ, ಎಷ್ಟು ವಕ್ಕಲುಗಳು ಗೇಣಿಯನ್ನು ಕೊಟ್ಟಿದ್ದಾರೆ, ಎಷ್ಟು ವಕ್ಕಲುಗಳು ಗೇಣಿಯನ್ನು ಕೊಟ್ಟಿಲ್ಲ ಎನ್ನುವುದಕ್ಕೆ ಅಂಕಿ ಸಂಖ್ಯೆಗಳನ್ನು ಕೊಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರದ ವಶಕ್ಕೆ ಬಂದಮೇಲೆ ಆದಾಯ ಕಡಿಮೆ ಆಯಿತು ಎನ್ನುವ ಪ್ರಶ್ನೆಯಿಲ್ಲ. 1958ನೇ ಇಸವಿಯಲ್ಲಿ ಟೆನೆನ್ಸಿ ಲೇಜಿಸ್ಲೇಷನ್ ಬಂತು. ಆದ್ದರಿಂದ ಟೆನೆಂಟ್ಸಿಗೆ ಪ್ರೊಟೆಕ್ಷನ್ ಸಿಕ್ಕಿ ಅವರು ಇಷ್ಟೇ ಗೇಣಿಯನ್ನು ಕೊಡಬೇಕೆಂದು ನಿಗದಿಯಾಗಿದೆ. ಒಂದು ವೇಳೆ ಅವರು ಗೇಣಿಯನ್ನು ಕೊಡದೆ ಇದ್ದರೂ ಕೂಡ ಅವರನ್ನು ಎವಿಕ್ಟ್ ಮಾಡಿಸುವುದಕ್ಕಾಗುವುದಿಲ್ಲ. ಸರ್ಕಾರದವರಿಗೆ ಟ್ರಸ್ಟೀಸ್ ಅನ್ನು ಇಟ್ಟುಕೊಳ್ಳಬೇಕೆಂಬ ಆಸೆಯಿಲ್ಲ. If there is a proper body to look after even to-day, the Government is prepared to hand it over to the Depressed Classes.

Sri SANJEEVANATH AIKALA.—Is land revenue paid for these 62 acres?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಡೀಟೇಲ್ಸ್ ಈಗ ನನ್ನ ಹತ್ತಿರ ಇಲ್ಲ.

Total Grant received by the State Government to finance the Second Five-Year Plan Schemes.

*Q.—448. Sri ANNA RAO GANAMUKHI (Afzalpur).—

Will the Government be pleased to state :—

(a) the total grant received by the State Government to finance the Second Five-Year Plan Schemes ;

(ಇಲಾಖಾ ಗ್ರಂಥಾಲಯ)
ಪಟ್ಟಿ, ಕ್ರಮಾಂಕ Accession No. 4794 (B)
ದಿನಾಂಕ Date..................

(*b*) the total loan advanced in the above period ?

(*c*) the total loan and grant promised for financing the Third Plan and the principle on which it will be given ?

A.—Sri B. D. JATTI (Minister for Finance).—

	For State Plan Schemes	*For Centrally Sponsored Schemes*	*Total*
		(Rs. in crores)	
(*a*)	14.99	5.85	20.84
(*b*)	59.33	2.28	61.61

(*c*) The total outlay for III Plan is of the order of Rs. 250.00 crores and the total Central assistance promised is of the order of Rs. 140.00 crores, out of which the grant portion may be between Rs. 28 to 30 crores. Different States had put forth different criteria for determining Central assistance, *i.e*, population, area, State's own resources, backwardness, etc. The Central assistance had been worked out independently taking a number of criteria into consideration. It was explained by Planning Commission that there was no direct link between the resources raised and the Central assistance allocated.

Sri ANNA RAO GANAMUKHI.—May I know what are the criteria suggested by the Mysore Government for giving the grants ?

Sri B. D. JATTI.—Population, resources of the Mysore State, backwardness of the Mysore State.

Sri ANNARAO GANAMUKHI.—What criteria they have taken into consideration while giving the grants ?

Sri B. D. JATTI.—Central Assistance has been worked out entirely by taking a number of criteria into consideration. It was explained that there was no direct link between rasources raised and the Central Assistance allocated.

Sri ANNA RAO GANAMUKHI.—The Planning Commission is not following uniform criteria while giving grants. Therefore, all the States are not treated equally.

Sri B. D. JATTI.—Sir; it depends upon the backwardness of an area and needs of the area and also resources of the area.

Sri ANNA RAO GANAMUKHI.—Has it come to the notice of the Government that Andhra and Madras are proportionately getting more grants and loans in comparison with Mysore ?

Sri B. D. JATTI.—It is a fact, but similarly Maharashtra and Gujarath are getting less.

Sri G. V. GOWDA.—Have you made any representations to the Finance Commission to fix up uniform criteria to detemine central assistance to be given ?

Sri B. D. JATTI.— Suggestion will be considered and we will try to place it before the next Finance Commission.

Sri G. V. GOWDA.—May I know what are the criteria the Planning Commission took into consideration in giving Central Assistance

Sri B. D. JATTI.—Just now I have explained.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನಮ್ಮ ಮೈಸೂರು ಸಂಸ್ಥಾನಕ್ಕೆ ಮೂರನೇ ಪಂಚವಾರ್ಷಿಕ ಯೋಜನೆಗೆ ಕೇಂದ್ರ ಸರ್ಕಾರದವರು ಕೊಟ್ಟಿರುವಷ್ಟು ಕಡಿಮೆ ಹಣವನ್ನು ಯಾವ ಸ್ಟೇಟಿಗೂ ಕೊಟ್ಟಿಲ್ಲ ಎಂದು ಹೇಳಿದರು. ಜಾಸ್ತಿ ಹಣವನ್ನು ಪಡೆಯುವುದಕ್ಕೆ ಏತಕ್ಕೆ ಪ್ರಯತ್ನವನ್ನು ಮಾಡಲಿಲ್ಲ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರಿಗೆ ಈ ವಿಷಯ ಗೊತ್ತಿಲ್ಲವೆಂದು ಕಾಣುತ್ತದೆ. ಮೊದಲು ನಮ್ಮ ಸ್ಟೇಟಿಗೆ ಕೊಟ್ಟಿದ್ದು 198 ಕೋಟಿ. ಆ ಮೇಲೆ ನಾವು ಪ್ರಯತ್ನ ಮಾಡಿದಮೇಲೆ ಕೊಟ್ಟಿದ್ದು 250 ಕೋಟಿ.

Sri K. S. SURYANARAYANA RAO.—It was mentioned that different States get different treatment. Are we to understand that there are no uniform accepted principles in deciding about grants ?

Sri B. D. JATTI.—There is no uniform backwardness in all the States. Population is also not uniform. The criterion goes on changing according to the needs of the State. The main principle that the Government of India takes into consideration is whether the State has got better resources and if there is any State for which is not possible to come forward, they give more ; there may be areas which may be more backward than ours.

Sri G. V. GOWDA.—Does the Government mean to say that there is link between the resources of the State and Central assistance to be given ?

Sri B. D. JATTI.—I replied, but the Hon'ble Member was not at that time attentive.

Sri G. V. GOWDA.—When our internal resources have been fixed as 110 crores and while that of Madras is Rs. 90,000 what is the reason that we should be given less and they are given more ?

Sri B. D. JATTI.—Why should I repeat my replies continuously ?

Sri K. S. SURYANARAYANA RAO.—Are we to understand that backwardness in Andhra and Madras is much more than in Myore ?

Sri B. D. JATTI.—That is not the only test. But they are not following uniform criteria. That was why I explained in Maharashtra and Gujarath where resources are more, assistance given by the Government of India is less.

Sri ANNA RAO GANAMUKHI.—May I know whether the Third Finance Commission has recommended to the Central Government saying that the financial liabilities of the State Government are increasing day by day and therefore an Independent Commission should be set up to examine the financial relationship between the State and the Centre ?

Sri B. D. JATTI.—I do not know that.

Sri V. M. DEO.—May I know the break up of figures of the Central assistance received for the last two years ?

Sri B. D. JATTI.—There are many details and if the Hon'ble Member is interseted, I will give.

Sri V. M. DEO.—May I know out of 145 crores how much you have spent ?

Sri B. D. JATTI.—The outlay of the second plan was 145 crores and the total amount spent is 142 crores.

Sri C. J. MUKKANNAPPA.—In addition to the three principles mentioned by you, is it not one of the reasons that you were not ready with your plans and estimates ?

Sri B. D. JATTI.—It is not correct.

Sri H. R. KESHAVAMURTHY.—Is there not an understanding that the amount shown in the budget should be spent ? If so, may I know why you have not spent for the Hassan-Mangalore railway line ?

Sri B. D. JATTI.—I do not understand the relevancy of this question. For the information of the Hon'ble Member, I can say that the State schemes are different from the Centrally sponsored schemes. For the Centrally sponsored schemes, the Government of India provide funds and the State is the agency to spend the amount.

ಶ್ರೀ ಎಸ್. ಗೋಪಾಲಗೌಡ.—ಕೇಂದ್ರ ಸರ್ಕಾರದವರು ಅನುದಾನಗಳನ್ನು ಮತ್ತು ಸಾಲಗಳನ್ನು ರಾಜ್ಯ ಸರ್ಕಾರಕ್ಕೆ ಕೊಡುವಾಗ ರಾಜ್ಯ ಸರ್ಕಾರದವರು ಕೆಲಸ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆಯೇ ಇಲ್ಲವೇ ಎಂಬುದನ್ನು ಪರಿಗಣನೆಗೆ ತೆಗೆದುಕೊಂಡು ಅವನ್ನು ಕೊಡುತ್ತಾರಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೂ ನಮಗೆ ಸಾಮರ್ಥ್ಯವಿಲ್ಲವೆಂದು ಕೇಂದ್ರ ಸರ್ಕಾರದವರು ಯಾಗಲೂ ಹೇಳಲಿಲ್ಲ.

Sri ANNA RAO GANAMUKHI.—May I know, out of 61.66 crores how much was paid under the recommendation of the Finance Commission and how much is paid as loan and grant by the Central Government ?

Sri B. D. JATTI.—I do not know on which information the Planning Commission decided that.

Sri. G. V. GOWDA.—In the absence of uniform criteria observed in determining the Central assistance, are the Government sure that no discrimination has been done in respect of granting Central assistance to the State ?

Sri B. D. JATTI.—What the Hon'ble Member is expressing just now was expressed on behalf of the Mysore Government also after considering all the complaints and discussions, they have decided.

Sri G. V. GOWDA.—May I know what portion of the loan was utilised by the Government of Mysore ?

Sri B. D. JATTI.—Practically all the money has been utilsed and spent.

Contractors entrusted with the work of transporting Cement and Steel, etc., from Mangalore to various work sites in Special West Coast Division, Coondapoor.

*Q.—509. Sri B. BHASKAR SHETTY (Kaup).—

Will the Government be pleased to state.—

(a) who are the contractors entrusted with the work of transporting cement and steel, etc., from Mangalore to the various work sites in

(SRI B. BHASKAR SHETTY)

Special West Coast Division, Coondapoor in South Kanara District during the period 1961-62 and 1962-63;

(*b*) the terms and conditions agreed between the contractors and the Government with regard to the transport of these materials;

(*c*) whether the contractor had infringed any one of the terms and conditions of the agreement;

(*d*) if so, what are they;

(*e*) the action they have taken for infringement of these terms and conditions?

A.—Sri VEERENDRA PATIL (Minister for Public Works).—

(*a*) Sri P. Anandakunda Hegde during 1961-62;

Sri B. Sadananda Achar during 1962-63.

(*b*) Copies of the agreements comprising the conditions agreed to between the Government and the contractors are placed on the Table of the House. [Placed in the Mysore Legislative Library *vide* No. 7 dated 20—3—63]

(*c*) Yes.

(*d*) Conditions (2) and (4) of the agreement had been infringed by the contractor for 1961-62; So also the other contractor for 1962-63 had infringed the conditions (2) and (5) of the agreement.

(*e*) Final notice has been sent to Sri P. Anandakunda Hegde to make good the shortages.

As regards the other contractor the causes for delay in the transport of materials, etc., are under investigation.

However to avoid loss to Government sufficient amount has been withheld from the bills of both the contractors apart from the Security Deposits.

ಶ್ರೀ ಬಿ. ಭಾಸ್ಕರಶೆಟ್ಟಿ.—1962-63ನೇ ಸಾಲಿನಲ್ಲಿ ಆದಂಥ ಒಪ್ಪಂದದ 3ರ ಪ್ರಕಾರ ಕಂಟ್ರಾಕ್ಟುದಾರರಿಗೆ ಎಷ್ಟು ಮೊತ್ತ ಪೆನಾಲ್ಟಿ ಬಿದ್ದಿದೆ?

ಶ್ರೀ ವೀರೇಂದ್ರ ಪಾಟೀಲ್.—ಆ ವಿವರಗಳು ಈಗ ನನ್ನಲ್ಲಿಲ್ಲ. ಪೆನಾಲ್ಟಿ ಎಷ್ಟು ಹಾಕಿದ್ದಾರೆಂಬುದಕ್ಕೂ ನನ್ನಲ್ಲಿ ಅಂಕಿಅಂಶಗಳಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ನನ್ನ ಈ ಪ್ರಶ್ನೆಗೆ ಉತ್ತರವಾಗಿ ಮತ್ತೊಬ್ಬ ಕಂಟ್ರಾಕ್ಟರ ವಿಷಯವಾಗಿ ಹೇಳುವುದಾದರೆ, ಸಾಮಗ್ರಿ ಮೊದಲಾದುವುಗಳನ್ನು ಸಾಗಿಸುವುದರಲ್ಲಿ ಸಾವಕಾಶವುಂಟಾಗಿರುವುದರ ಬಗ್ಗೆ ಕಾರಣಗಳೇನೆಂಬುದನ್ನು ಪರಿಶೀಲಿಸಲಾಗುತ್ತಿದೆಯೆಂದು ಹೇಳಿದ್ದೀರಿ. ಆದರೆ ವಿಧಾನಸಭಾ ಸದಸ್ಯರಿಂದಾಗಲೀ ಅಥವಾ ಇತರರಿಂದಾಗಲೀ ಈ ವಿಷಯದ ಬಗ್ಗೆ ಸುಮಾರು 8 ತಿಂಗಳುಗಳ ಹಿಂದೆ ಸುಮಾರು 37 ಸಾವಿರ ರೂಪಾಯಿಗಳ ಪೆನಾಲ್ಟಿ ಕಂಟ್ರಾಕ್ಟರಿಗೆ ಬಿದ್ದಿದೆ; ಅದನ್ನು ಯಾರೋ ಒಬ್ಬ ಪ್ರತಿಭಾ ವ್ಯಕ್ತಿಗಳಿಂದ ರೈಟ್ ಆಫ್ ಮಾಡುವ ಗೋಜಿನಲ್ಲಿ ಸರ್ಕಾರದವರು ಇದ್ದಾರೆ. ಆ ಬಗ್ಗೆ ವಿಶೇಷ ಕ್ರಮವನ್ನು ಆ ಕೂಡಲೆ ತೆಗೆದುಕೊಳ್ಳಬೇಕೆಂದು ಏನಾದರೂ ಕಾಗದಗಳು ಬಂದಿವೆಯೇ?

ಶ್ರೀ ವೀರೇಂದ್ರ ಪಾಟೀಲ್.—ತಾವೇ ಹೇಳಿದ್ದೀರಿ. ಈ ರೀತಿಯಾಗಿ right off ಮಾಡುವ ಪ್ರಯತ್ನಗಳು ನಡೆದಿವೆಯೆಂದು. ಆ ಬಗ್ಗೆ ಒಂದು ಕಾಗದವನ್ನೂ ಸಹ ಬರೆದಿದ್ದೀರಿ. ನಮಗೆ ಆ ಬಗ್ಗೆ ಇನ್ನೂ ವರದಿ ಬಂದಿಲ್ಲ. ಒಂದು ತಡವಾಗಿದೆ, ಇನ್ನೊಂದು ಷಾರ್ಟೇಜ್ ಪ್ರಶ್ನೆ ಬಂದಿದೆ. ಆದ್ದರಿಂದ ಈ ಎರಡು ಪ್ರಶ್ನೆಗಳನ್ನು ಪರಿಶೀಲನೆ ಮಾಡುತ್ತಿದ್ದೇವೆ. ಸರ್ಕಾರದ ಹಣ ಜೋಪಾನವಾಗಿಡಲು ಕಾನೂನು ಪ್ರಕಾರ ಕಂಟ್ರಾಕ್ಟರುಗಳ ಸೆಕ್ಯೂರಿಟಿ ಠೇವಣಿ ಮತ್ತು ಅವರಿಗೆ ಕೊಡಬೇಕಾದ ಹಣವನ್ನು withhold ಮಾಡಿದ್ದೇವೆ. ಅದ್ದರಿಂದ ಸರ್ಕಾರದ ಹಣಕ್ಕೆ ಹಾನಿಯಾಗುವುದಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಅವರಿಗೆ ಕೊಡುವ ಹಣದ ಪೈಕಿ ಶೇ. 80 ಅಥವಾ ಶೇ. 85ರಷ್ಟು ಈಗಾಗಲೇ ಕೊಡುವುದಕ್ಕೆ ಸರ್ಕಾರಕ್ಕೆ ಆಲೋಚನೆ ಬಂದಿದೆಯೆಂಬುದು ಸರಿಯೇ?

ಈಗ ಷಾರ್ಟೇಜ್ ಏನು ಬಂದಿದೆಯೋ ಅದನ್ನು make up ಮಾಡಿ ಕವರ್ ಮಾಡುವ ಸಲುವಾಗಿ ಎಷ್ಟು ಹಣ ತಡೆಹಿಡಿಯಬೇಕೋ ಅದಕ್ಕಿಂತಲೂ ಹೆಚ್ಚು ಹಣ ತಡೆ ಹಿಡಿದುಕೊಂಡಿದೆ. ಸೆಕ್ಯೂರಿಟಿ ಠೇವಣಿ 64,73,014 ಸಾವಿರ ರೂಪಾಯಿಗಳವರೆಗೂ ಇದೆ. ಅದಲ್ಲದೆ ಅನೇಕ ಬಿಲ್ಲುಗಳು ಪೆಂಡಿಂಗ್‌ನಲ್ಲಿವೆ. ಇವೆಲ್ಲಾ ಪೂರ್ತಿ ತೀರ್ಮಾನವಾಗುವವರೆಗೂ ಅವರಿಗೆ ಪಾವತಿ ಮಾಡುವುದಿಲ್ಲ. ಈ ವಿಷಯದಲ್ಲಿ ಜಾಗ್ರತೆಯಾಗಿ ಸಾಕಷ್ಟು ಕೆಲಸ ಮಾಡುತ್ತಿದ್ದೇವೆ.

ಶ್ರೀ ಗೋಪಾಲ ಸಾರೆನ್ನ.—ಅವರಿಗೆ ಪೆನಾಲ್ಟಿ ಹಾಕಬೇಕೆಂಬುದಾಗಿ violation of conditions ನಲ್ಲಿದೆಯೇ?

Mr. SPEAKER.—It is an indiviunal instance that the member is having in his mind. Let him not go into many details.

ಶ್ರೀ ವೀರೇಂದ್ರ ಪಾಟೀಲ್.—ಪೆನಾಲ್ಟಿ ಎಷ್ಟು ಹಾಕಿದ್ದಾರೆ ಎಂಬ ಬಗ್ಗೆ ಅಂಕಿಅಂಶಗಳು ನನ್ನಲ್ಲಿಲ್ಲ. ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

Sri SANJEEVANATH AIKALA.—Is it a fact that the cement which they were expected to transport, was sold in black-market in Mangalore?

Sri VEERENDRA PATIL.—I am not aware of it. I know that there is shortage to that extent, we are taking action to recover the amount.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಬಗ್ಗೆ ತಮಗೆ ಇದರಲ್ಲಿ ಏನೋ ಗಲಾಟೆ ನಡೆದಿದೆ ಎಂಬ ಆಲೋಚನೆ ಅನುಮಾನ, 8 ತಿಂಗಳುಗಳ ಹಿಂದೆಯೇ ಬಂದಿದ್ದರೂ ಕೂಡ ಇಷ್ಟು ದಿವಸಗಳವರೆಗೂ ವಿಚಾರಮಾಡಿ ನಿಜಾಂಶವನ್ನು ತಿಳಿಯುತ್ತಿದ್ದೀರಿ. ಅಂದ ಮೇಲೆ ತಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ವೀರೇಂದ್ರ ಪಾಟೀಲ್.—ತಾವೇ 8 ತಿಂಗಳು ಮೊದಲು ಬರೆದಿದ್ದೇನೆಂದು ಹೇಳುತ್ತೀರಿ. ನನಗೆ ತಾರೀಖು ಸರಿಯಾಗಿ ಗೊತ್ತಿಲ್ಲ. ಒಂದು ಸಲ, ಎರಡು ಸಲ ಬೇಕಾದರೆ ವರದಿಯನ್ನು ತರಿಸೋಣ. ಪೆನಲ್ಟಿ ಎಷ್ಟು ಹಾಕಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆ ರೀತಿ ಹಾಕುವುದಕ್ಕೆ ಅಧಿಕಾರಿಗಳಿಗೆ ಅಧಿಕಾರವಿರುತ್ತದೆ. ಆ ಅಧಿಕಾರದ ಪ್ರಕಾರ ಎಷ್ಟೋ ಕಂಡೀಷನ್‌ಗಳು ಇರುತ್ತವೆ. ಆದರೆ ಎಲ್ಲವನ್ನು ಹಾಕಬೇಕೆಂದು ಇರುವುದಿಲ್ಲ. ಮತ್ತೇನಾದರೂ ಕಂಡೀಷನ್ಸ್ ಹಾಕಬೇಕೆಂದರೆ ರಿವ್ಯೂ ಮಾಡಬಹುದು. ಮಾನ್ಯ ಸದಸ್ಯರು ಹೇಳಿದರೆ ಬೇಕಾದರೆ ವೇಯ್ ಸಹ ಮಾಡಬಹುದು. ಹೇಗಾದರೂ ಆಗಲೀ ವರದಿಯನ್ನು ತರಿಸುತ್ತೇನೆ.

Sri C. S. HULKOTI.—May I know the quantum of shortage of Cement and Steel?

Sri VEERENDRA PATIL.—2,069 tons of steel.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕಂಟ್ರಾಕ್ಟರ್ ವಿಷಯದಲ್ಲಿ ಏನಾದರೂ ಸರ್ಕಾರಕ್ಕೆ ದೂರು ಬಂದರೆ ಅವರಿಗೆ ಕೊಡುವ ಬಿಲ್ಲನ್ನು ತಡೆಹಿಡಿದು ತಕ್ಷಣ ಇನ್ವೆಸ್ಟಿಗೇಷನ್ ಮಾಡುವ ಪದ್ಧತಿ ಸರ್ಕಾರಕ್ಕಿದೆ. 8-9 ತಿಂಗಳುಗಳಿಂದಲೂ ಕಾನೂನಿಗನುಸಾರವಾಗಿ ಅವರ ಮೇಲೆ ಸರ್ಕಾರದವರು ನೇರವಾಗಿ ಕ್ರಮ ತೆಗೆದುಕೊಳ್ಳುವುದು ಅವರ ಕರ್ತವ್ಯವಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಕ್ರಮ ತೆಗೆದುಕೊಳ್ಳುವ ಬಗ್ಗೆ ತಡಮಾಡಲಿಲ್ಲ. ಆದರೆ ಅವರ ಪೇಮೆಂಟುಗಳನ್ನು ಕೊಟ್ಟಿಲ್ಲ. ಈಗ ಕಂಟ್ರಾಕ್ಟರು ಏನು ಹೇಳುತ್ತಿದ್ದಾರೆಂದರೆ, ರೈಲ್ವೆಯಿಂದ ಈ ಪದಾರ್ಥಗಳನ್ನು ಸಾಗಾಣಿಕೆ ಮಾಡುವ ಸಂಬಂಧದಲ್ಲಿ ಷಾರ್ಟೇಜ್ ಇದೆ. ರೈಲ್ವೆಯವರೇ ಲೋಡ್ ಮತ್ತು ಅನ್‌ಲೋಡ್ ಮಾಡಿದ್ದಾರೆ. ಅವರನ್ನೇ ಕೇಳಿ ಎಂದು ಹೇಳುತ್ತಾರೆ. ಆದರಿಂದ ರೈಲ್ವೆಯವರೊಡನೆ ಈ ಬಗ್ಗೆ ಪತ್ರವ್ಯವಹಾರ ನಡೆಯುತ್ತಾ ಇದೆ. ನಮ್ಮ ಹಣ safe ಆಗಿ ಇರಬೇಕೆಂದು ಅವರ ಯಾವ ಬಿಲ್ಲನ್ನೂ ಪೇಮೆಂಟ್ ಮಾಡಿಲ್ಲ. ಪೆಂಡಿಂಗ್ ಬಿಲ್ ವಿತ ಹೋಲ್ಡ್ ಮಾಡಿದ್ದೇವೆ.

Construction of a Feeder Channel from Hagarihalli to Minor Tanks of Bilichedu Village, Jagalur Taluk.

*Q.—552. Sri M. N. KRISHNA SINGH (Jagalur).—

Will the Government be pleased to state:—

(*a*) whether survey has been conducted to construct a feeder channel from Hagarihalli to Minor Tanks of Bilichedu Village, Jagalur Taluk;

(*b*) if so, the estimated cost of this work;

(*c*) whether they have accorded sanction for the same; and if so, when;

(*d*) the reasons for the delay in commencing the work;

(*e*) whether the work will be included in the Budget for the year 1962-63?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) Does not arise in view of the reply to clause (*a*).

(*c*) Does not arise in view of the reply to clause (*a*).

(*d*) Does not arise in view of the reply to clause (*a*).

(*e*) Does not arise in view of the reply to clause (*a*).

ಶ್ರೀ ಎಂ. ಎನ್. ಕೃಷ್ಣಸಿಂಗ್.—ಬಿಳಿಚೇಡು ಗ್ರಾಮದ ಸಣ್ಣ ಕೆರೆಗಳಿಗೆ ನಾಲೆಯನ್ನು ನಿರ್ಮಿಸಬೇಕೆಂದು ಮನವಿಗಳು ಬಂದಿವೆಯೋ?

† ಶ್ರೀ ಆಲೂರು ಹನುಮಂತಪ್ಪ.—ಹಗರಿಹಳ್ಳಿಯಿಂದ ಬಿಳಿಚೇಡು ಗ್ರಾಮಕ್ಕೆ ನೀರನ್ನು ಒದಗಿಸಬೇಕೆಂದು ಮನವಿ ಬಂದಿಲ್ಲ. ಬಿಳಿಚೇಡು ಗ್ರಾಮದ ಮಧ್ಯೆ ಇರಕ್ಕ ಚಂದ್ರಗೂಡ್ ಕಡೆಯಿಂದ ನೀರನ್ನು ತರಬೇಕೆಂಬ ಅಭಿಪ್ರಾಯವಿದೆ. ಅದರಲ್ಲಿ ಇನ್ವೆಸ್ಟಿಗೇಷನ್ ಆಗಿ-ಪಿಕ್‌ಅಪ್ ಸೈಟ್ ಈಗಾಗಲೇ ಸೆಲೆಕ್ಟ್ ಮಾಡಿದ್ದೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಈ ಕಾಮಗಾರಿಯ ಅಂದಾಜು ಆಗಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಅದಿನ್ನೂ ತೀರ್ಮಾನವಾಗಿಲ್ಲ. ಎಲ್ಲವನ್ನೂ ಇನ್ವೆಸ್ಟಿಗೇಷನ್ ಮಾಡಿ ಫೈನಲೈಜ್ ಮಾಡುತ್ತಿದ್ದೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.—1953ರಲ್ಲಿ ಅಂದಾಜಾಗಿ ಅದು ಸರ್ಕಾರದ ಮಂಜೂರಾತಿ ಪಡೆದಿತ್ತೆಂಬುದು ನಿಜವೇ?

ಶ್ರೀ ಆಲೂರು ಹನುಮಂತಪ್ಪ.—ಅದು ಇದಕ್ಕಲ್ಲ, ಬೇರೆ ಕೆಲಸಗಳಿಗೆ. ಜಗಳೂರು ತಾಲ್ಲೂಕಿನಲ್ಲಿ ನಾಲ್ಕು ಅಂದಾಜಾಗಿವೆ, ಚಿತ್ರದುರ್ಗ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಎರಡು ಅಂದಾಜಾಗುತ್ತಿವೆ.

New Dispensaries proposed to be started under Third Five-Year Plan in Sagar and Sorab Taluks.

*Q.—335. Sri V. S. LAKSHMIKANTHAPPA (Sagar).—

Will the Government be pleased to state:—

(*a*) the number of new Veterinary Dispensaries proposed to be started under Third Five-Year Plan in Sagar and Sorab Taluks separately;

(*b*) the reasons for the delay in up-grading the Rural Veterinary Despensary at Anavathi in Sorab Taluk ?

A.—Sri M. V. KRISHNAPPA.—(Minister for Revenue).—

(*a*) Nil.

(*b*) Due to shortage of technical personnel.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೊರಬ ಮತ್ತು ಸಾಗರ ತಾಲ್ಲೂಕುಗಳಲ್ಲಿ ಯಾವ ಹೊಸ ಆಸ್ಪತ್ರೆಯನ್ನೂ ಆರಂಭಮಾಡುವುದಿಲ್ಲವೆಂದು ಹೇಳಿದ್ದೀರಿ, ಯಾವ ಷರತ್ತುಗಳ ಮೇಲೆ ಹೊಸ ಆಸ್ಪತ್ರೆಯನ್ನು ಕೊಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.— ಸಾಮಾನ್ಯವಾಗಿ 25 ಸಾವಿರ ಪಶುಗಳಿಗೆ ಒಂದು ಆಸ್ಪತ್ರೆಯನ್ನು ಕೊಡಬಹುದೆಂದಿದೆ. ಈಗಾಗಲೇ ಸಾಗರ ತಾಲ್ಲೂಕಿನಲ್ಲಿರುವ 80 ಸಾವಿರ ಪಶುಗಳಿಗೆ 5 ಆಸ್ಪತ್ರೆಗಳಿವೆ, ಸೊರಬ ತಾಲ್ಲೂಕಿನಲ್ಲಿರುವ 80 ಸಾವಿರಕ್ಕೆ 3 ಆಸ್ಪತ್ರೆಗಳಿವೆ. 50 ಸಾವಿರ ಪಶುಗಳಿದ್ದರೂ ಆಸ್ಪತ್ರೆ ಇಲ್ಲದಿರುವ ತಾಲ್ಲೂಕುಗಳಿವೆ, ಅವಕ್ಕೆ ಮೊದಲು ಕೊಡಬೇಕಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಪಶು ವೈದ್ಯ ಇಲಾಖೆಯಲ್ಲಿ ಅನೇಕರಿಗೆ ಸರಿಯಾಗಿ ಪಗಾರ ಸಿಕ್ಕದೇಯಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥ ಸಂದರ್ಭಗಳನ್ನು ನಮ್ಮ ಗಮನಕ್ಕೆ ತಂದರೆ ನಿವಾರಣೆ ಮಾಡುತ್ತೇವೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಪಶು ಸಂಪತ್ತಿನ ಸಂಖ್ಯೆಯನ್ನು ಜಿಲ್ಲೆಯಮೇಲೆ ತೆಗೆದುಕೊಳ್ಳುತ್ತೀರೋ ಅಥವಾ ತಾಲ್ಲೂಕಿನಮೇಲೆ ಲೆಕ್ಕ ಹಾಕುತ್ತೀರೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲಾ ಮೇಲೆಯೂ ತೆಗೆದುಕೊಳ್ಳುತ್ತೇವೆ, ತಾಲ್ಲೂಕು ಲೆಕ್ಕವನ್ನೂ ತೆಗೆದುಕೊಳ್ಳುತ್ತೇವೆ. ಶಿವಮೊಗ್ಗ ಜಿಲ್ಲೆಯಲ್ಲಿ ಆರು ಲಕ್ಷ ಪಶುಗಳಿಗೆ 40 ಪಶು ವೈದ್ಯಶಾಲೆಗಳಿವೆ, ನಿಮ್ಮ ತಾಲ್ಲೂಕಿನಲ್ಲಿ ನಾಲ್ಕು ಇರಬೇಕಾದ ಸ್ಥಳದಲ್ಲಿ ಐದು ಇವೆ. ಹೆಚ್ಚು ಮಾಡಬಾರದೆಂದಲ್ಲ. Malnad Cattle Improvement Scheme ಇದೆ. ಇದಕ್ಕೆ ಕೇಂದ್ರ ಸರ್ಕಾರದವರೂ ಒಪ್ಪಿದ್ದಾರೆ. ಅದರ ಪ್ರಕಾರ ಇನ್ನೂ ಪಶು ವೈದ್ಯಶಾಲೆಗಳು, artificial insemination centres ತೆರೆಯಬೇಕಾಗುತ್ತದೆ.

ಶ್ರೀ ಆರ್. ಎಲ್. ಲಕ್ಷ್ಮೀಪತಿ.—Recurring and nonrecurring ಖರ್ಚು ಇಷ್ಟು ಕೊಟ್ಟರೆ ಅಂಥ ಕಡೆ ಆಸ್ಪತ್ರೆ ಕೊಡಬೇಕೆಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಲೋಕಲ್ ಬೋರ್ಡುಗಳಿಗೆ ಕೊಟ್ಟಿರುವ ಉತ್ಪತ್ತಿಯಲ್ಲಿ ಆಸ್ಪತ್ರೆಗಳಿಗೆ ಇಷ್ಟು ಕೊಡಬೇಕೆಂದಿದೆ ಅದರ ಪ್ರಕಾರ ಕೇಳುತ್ತೇವೆ. Rural Veterinary Dispensaryಗೆ nonrecurring expenditure ವರ್ಷಕ್ಕೆ ಎರಡು ಸಾವಿರ, recurring ನಾಲ್ಕು ಸಾವಿರ ರೂಪಾಯಿ ಇವೆ. ಇದರಲ್ಲಿ ನಾಲ್ಕನೆಯ ಒಂದು ಭಾಗ ಕೊಡಬೇಕೆಂದಿದೆ. ಕಟ್ಟಡ ಕಟ್ಟುವುದಕ್ಕೆ ನಮ್ಮಲ್ಲಿ ಹಣವಿರುವುದಿಲ್ಲ. ಆದುದರಿಂದ ಸ್ಥಳದ ಜನರು ಕಟ್ಟಡವನ್ನು ಕೊಟ್ಟರೆ ಅಲ್ಲಿ ಮೊದಲು ಪ್ರಾರಂಭ ಮಾಡುತ್ತೇವೆ.

Mr. SPEAKER.—Questions Nos. 449 and 507 may be taken up together.

Rent Government are paying for the Buildings occupied by the Ministers and Deputy Ministers.

**Q.*—449. Sri ANNA RAO GANAMUKHI (Afzalpur).—

Will the Government be pleased to state :—

(*a*) the rent they are paying for the buildings occupied by the Ministers and Deputy Ministers ;

(*b*) the number of them who have occupied Government buildings and the estimated rentals ;

(*c*) the amount spent, in fully furnishing the houses ;

(SRI ANNA RAO GANAMUKHI)

(*d*) whether is it a fact that they have been confronted with difficulty in getting private houses on reasonable rents;

(*e*) if so, the steps they propose to take to remove the shortage of houses to the Ministers ?

A.—Sri VEERENDRA PATIL (Minister for Public Works).—

(*a*) Rs. 3,475 per month.

(*b*) 15, Rs. 10,590 per month.

(*c*) Rs. 3.2 lakhs.

(*d*) Yes.

(*e*) 3 Houses are proposed to be constructed to overcome the shortage of buildings.

Government buildings vacated to accommodate the Ministers and Deputy Ministers.

**Q*.—507. Sri B. BHASKAR SHETTY (Kaup).—

Will the Government be pleased to state:—

(*a*) which are the Government buildings where Government Offices were functioning that have been vacated to accommodate the Ministers and Deputy Ministers of the present Ministry;

(*b*) to which places they have been shifted ?

A.—Sri VEERENDRA PATIL (Minister for Public Works).—

(*a*) 'Park House' was vacated to accommodate the Minister for Municipal Administration.

(*b*) Office of the Director of Social Welfare has been shifted to 'Sandur House' and some sections of the Office of the Director of Medical Services have been shifted to the sheds near the main office of the Director of Medical Services.

Sri VEERENDRA PATIL.—Sir, with your permission I would like to correct the answer. In reply to (*a*) it is stated Rs. 3,475. It is not correct; it should be Rs. 3,105. In clause (*b*), instead of 15 it should be 16 and instead of Rs. 10,590, it should be Rs. 10,840. After furnishing the reply, the Hon'ble Deputy Minister for Co-operation has moved into a Govennment quarter from a rented buliding.

Sri ANNA RAO GANAMUKHI.—Supplementary to (*e*): What is the estimated cost of each house that is going to be constructed ?

Sri VEERENDRA PATIL.—Rs. 89,000.

Sri ANNA RAO GANAMUKHI.—Has the Government any phased programme to construct all the houses ?

Sri VEERENDRA PATIL.—The original proposal was to construct 6 houses. In view of the emergency, in the first instance we want to construct only 3 houses. Later on, we shall see.

Sri ANNA RAO GANAMUKHI.—What is the number of Minister that will be appointed in the future and what is the number of houses that will be constructed ?

[*No reply*]

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸಂಡೂರ್ ಹೌಸ್‌ಗೆ ಎಷ್ಟು ಬಾಡಿಗೆ ?

ಶ್ರೀ ವೀರೇಂದ್ರ ಪಾಟೀಲ್.—1,900 ರೂಪಾಯಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಾರ್ಕ್ ಹೌಸ್‌ನಲ್ಲಿದ್ದ ಕಚೇರಿಗಳ ಸೌಕರ್ಯವನ್ನು ತಪ್ಪಿಸಿ, ಇಬ್ಬರು ಮಂತ್ರಿಗಳಿಗೆ ಕೊಟ್ಟರಿ, ಒಬ್ಬರಿಗೆ ಎಷ್ಟು ಜಾಗ ಬೇಕು ?

ಶ್ರೀ ವಿರೇಂದ್ರ ಪಾಟೀಲ್.—ನೀವೇ ಹೇಳಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮೂರು ಸಾವಿರ ಚಿಲ್ಲರೆ ಮಂತ್ರಿಗಳ ಮನೆಗಳಿಗಾಗಿ ಬಾಡಿಗೆ ಕೊಡುವುದಕ್ಕೆ ಬದಲು, ಈ ಒಂದು ಕಟ್ಟಡದಲ್ಲಿ ಮೂರು ಜನ ಮಂತ್ರಿಗಳಿರಬಹುದಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಪಾರ್ಕ್ ಹೌಸ್‌ನಲ್ಲಿ ಡಿ. ಎಂ. ಎಸ್. ಕಚೇರಿಗೆ ಸೇರಿದ ಒಂದು ಭಾಗವಿತ್ತು. ಮಹಡಿಯ ಮೇಲೆ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ ಕಚೇರಿಯಿತ್ತು. ಈ ಕಚೇರಿಗಳ ಬೇರೆ ಬೇರೆ ಭಾಗಗಳು ಬೇರೆ ಬೇರೆ ಕಡೆ ಇದ್ದುದರಿಂದ ಅನಾನುಕೂಲವಾಗುತ್ತಿತ್ತು. ಆದಕಾರಣ ಒಂದೇ ಕಡೆ ಇದ್ದರೆ ಉತ್ತಮವೆಂದು ದೊಡ್ಡದಾಗಿದ್ದ ಸಂಡೂರ್ ಹೌಸ್‌ಗೆ ಪೂರ್ತಿಯಾಗಿ ಒಂದು ಕಚೇರಿಯನ್ನು ವರ್ಗಮಾಡಲಾಯಿತು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಂದು ಕಚೇರಿಯನ್ನು ವರ್ಗ ಮಾಡುವುದಕ್ಕೆ 1,900 ರೂಪಾಯಿ ಬಾಡಿಗೆ ಆಗಿದೆ, ಇನ್ನು ಮಿಕ್ಕದ್ದನ್ನು ವರ್ಗ ಮಾಡುವುದಕ್ಕೆ ಎಷ್ಟು ಖರ್ಚಾಗಬಹುದು.

Mr. SPEAKER.—It is a hypothetical question.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಂಡೂರ್ ಹೌಸ್‌ಗೆ 1,900 ರೂಪಾಯಿ ಬಾಡಿಗೆ ಜಾಸ್ತಿ, ಅದನ್ನು ಕಡಮೆ ಮಾಡಬೇಕೆಂದು ಮುಖ್ಯ ಮಂತ್ರಿಗಳಿಗೆ ಹೇಳಿದಾಗ, ಅದನ್ನು ಪರಿಶೀಲನೆ ಮಾಡುತ್ತೇನೆ, ಸಾಧ್ಯವಾದಷ್ಟು ಕಡಮೆ ಮಾಡುತ್ತೇನೆಂದು ಹೇಳಿದರು ; ಏನು ಮಾಡಿದ್ದಾರೆ ?

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಯಾರು ಮನೆಗಳನ್ನು ಮಂತ್ರಿಗಳಿಗಾಗಿ ಕಟ್ಟುತ್ತಿದ್ದಾರೆ, ಅದನ್ನು ಕಟ್ಟಿದ ಮೇಲೆ ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1,900 ರೂಪಾಯಿ ಕೊಡುತ್ತಿದ್ದೀರಿ, ಅದನ್ನು ರೆಂಟ್ ಕಂಟ್ರೋಲರು ನಿಗದಿ ಮಾಡಿಲ್ಲವೆಂದು ಹೇಳಿದಾಗ, ಅದನ್ನು ಕಡಮೆ ಮಾಡಲು ಪ್ರಯತ್ನ ಮಾಡುತ್ತೇವೆಂದು ಹೇಳಿದಿರಿ, ಈ ದಾರಿಯಲ್ಲಿ ಎಷ್ಟು ದೂರ ಹೋಗಿದ್ದೀರಿ, ಎಷ್ಟು ಕಡಮೆ ಮಾಡಿದ್ದೀರಿ ಎಂಬುದು ನನ್ನ ಪ್ರಶ್ನೆ.

ಶ್ರೀ ಬಿ. ಡಿ. ಜತ್ತಿ.—ಅದು ಹೆಚ್ಚಾಗುವುದಿಲ್ಲ, ಅದು ಕಡಮೆಯೆಂದು ಇನ್ನೂ ಹೆಚ್ಚಾಗಿ ಕೇಳುತ್ತಾರೆ.

Sri G. V. GOWDA.—It is stated that for furnishing the houses the amount spent is Rs. 3. 2 lakhs. It is being spent towards furnishing the houses of Ministers or only in respect of those that are secured for rent ?

Sri B. D. JATTI.—It includes the amount spent for furnishing all Houses of Ministers and Deputy Ministers.

ಶ್ರೀ ಎಸ್. ಗೋಪಾಲಗೌಡ.—3,105 ರೂಪಾಯಿಗಳ ಬಾಡಿಗೆ ಕೊಡುತ್ತಿರುವುದಾಗಿ ಹೇಳಿದ್ದೀರಿ, ಎಷ್ಟು ಮನೆಗಳಿಗೆ ?

ಶ್ರೀ ವೀರೇಂದ್ರ ಪಾಟೀಲ್.—25 ಜನ ಮಂತ್ರಿ, ಉಪಮಂತ್ರಿಗಳಲ್ಲಿ ಏಳು ಜನ ಮಾತ್ರ ಬಾಡಿಗೆ ಕಟ್ಟಡಗಳಲ್ಲಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂತ್ರಿಗಳಿಗೆ 250 ರೂಪಾಯಿ ಮನೆ ಬಾಡಿಗೆ ಭತ್ಯ ಕೊಡಬೇಕು ಅವರು ಬೇರೆ ಮನೆಗಳನ್ನು ತೆಗೆದುಕೊಂಡರೆ. ಎಂದು ನಿಯಮವಿದೆ. ನಮಗೆ ಬಂದಿರುವ ವರ್ತಮಾನದ ಪ್ರಕಾರ, ಕೆಲವರು ಐನೂರು ರೂಪಾಯಿಗಿಂತ ಹೆಚ್ಚಿನ ಬಾಡಿಗೆ ಮನೆಗಳನ್ನು ತೆಗೆದುಕೊಂಡಿದ್ದಾರೆ. ಅದು ನಿಯಮಕ್ಕೆ ವಿರೋಧವಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಇದು Ministers Salaries Act ನಲ್ಲಿದೆ. ಮಂತ್ರಿಗಳು ತಾವು ಬೇರೆ ಮನೆಯಲ್ಲಿದ್ದರೆ ಅಥವಾ ಇರಬೇಕೆಂದು ಹೇಳಿದರೆ ಅವರಿಗೆ 250 ರೂಪಾಯಿ ಮನೆ ಬಾಡಿಗೆ ಸಿಕ್ಕುತ್ತದೆ. ಒಂದು ವೇಳೆ ಸರ್ಕಾರವೇ ಮನೆ ಕೊಡಬೇಕೆಂದರೆ ಅದು ಸರ್ಕಾರದ ಜವಾಬ್ದಾರಿ. Free house ಕೊಡುವ ಜವಾಬ್ದಾರಿ ಇರುವುದರಿಂದ, ಮನೆಗಳ ಅಭಾವವಿದ್ದರೆ, ಹೆಚ್ಚು ಬಾಡಿಗೆಯಾದರೂ ತಾತ್ಕಾಲಿಕವಾಗಿ ಕೊಟ್ಟು ಬಾಡಿಗೆಗೆ ತೆಗೆದುಕೊಳ್ಳಬೇಕು.

2-00 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—(c) ಪ್ರಶ್ನೆಗೆ ಉತ್ತರವಾಗಿ 3.2 ಲಕ್ಷ ರೂಪಾಯಿಗಳು ಮಂತ್ರಿಗಳು ಮತ್ತು ಉಪಮಂತ್ರಿಗಳು ವಾಸಿಸುವ ಕಟ್ಟಡಗಳನ್ನು ಪೂರ್ಣ ಸಜ್ಜುಗೊಳಿಸಲು ವೆಚ್ಚಕೊಡಲಾಗಿದೆಯೆಂದು ಹೇಳಿದೆ. ಎಲ್ಲಾ ಮಂತ್ರಿಗಳ ವಿಚಾರವೂ ಇದರಲ್ಲಿ ಸೇರಿದೆಯೆಂದು ಹೇಳಿದ್ದೀರಿ. ಇದರಲ್ಲಿ ಮುಂಚೆ ಫರ್ನಿಷ್ ಆಗಿರುವುದು ಸೇರಿದೆಯೋ ಅಥವಾ ಈಚೆಗೆ ಫರ್ನಿಷ್ ಮಾಡಿದ್ದು ಮಾತ್ರ ಸೇರಿದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಇದು ಈಸಲ ಖರ್ಚಾಗಿರುವುದಲ್ಲ. ಮಂತ್ರಿಗಳು ಮತ್ತು ಉಪಮಂತ್ರಿಗಳು ಬಂದಾಗ ಫರ್ನಿಷ್ ಮಾಡಿರುವುದಕ್ಕಾಗಿರುವ ಒಟ್ಟು ವೆಚ್ಚ ಇದರಲ್ಲಿ ಸೇರಿದೆ.

Sri SANJEEVANATH AIKALA.—Is it not a fact that the electricity and water charges of Ministers are paid by Government ?

Mr. SPEAKER.—The Hon'ble member has not read the rules. Ministers are given a certain amount and if they go beyond that they have to pay it.

Sri VEERENDRA PATIL.—I would request the hon'ble member to go through the Ministers Salaries Act. We are entitled only to Rs. 35. Over and above that, we have to pay from our pocket.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—3.2 ಲಕ್ಷ ರೂಪಾಯಿಗಳು ಖರ್ಚಾಗುವುದರಲ್ಲಿ ಯಾವ ಮಂತ್ರಿಗಳ ನಿವಾಸಕ್ಕೆ ಹೆಚ್ಚು ಹಣ ಖರ್ಚಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ಆ ತಪಶೀಲು ಈಗ ನನ್ನ ಬಳಿ ಇಲ್ಲ. ಪ್ರತಿಯೊಬ್ಬ ಸಚಿವರಿಗೆ ಮತ್ತು ಉಪಸಚಿವರಿಗೆ ಇಷ್ಟು ಸಾಮಗ್ರಿಗಳನ್ನು ಸರಬರಾಯಿ ಮಾಡಬೇಕೆಂದು ಆಕ್ಟಿನಲ್ಲಿ ವಿಧಾಯಕ ಮಾಡಿದೆ. ಅದರ ಪ್ರಕಾರ ಸರಬರಾಯಿ ಮಾಡಲು ಇಷ್ಟು ಖರ್ಚಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಕೇಳುವುದು ಅದಲ್ಲ; ಈ 3.2 ಲಕ್ಷದಲ್ಲಿ ಯಾವ ಮಂತ್ರಿಗಳ ಮನೆಗೆ ಫರ್ನಿಷ್ ಮಾಡಲು ಹೆಚ್ಚು ಹಣ ಖರ್ಚಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತ್ಯೇಕ ಪ್ರಶ್ನೆ ಹಾಕಿದರೆ ಅದಕ್ಕೆ ಉತ್ತರ ಹೇಳಬಹುದು.

ಶ್ರೀ ಎಸ್. ಗೋಪಾಲಗೌಡ. ಈ ರೀತಿ ಬೇರೆಬೇರೆ ಬಾಬುಗಳಲ್ಲಿ ಹಣ ಒದಗಿಸುವುದಕ್ಕೆ ಬದಲಾಗಿ ಸಚಿವರುಗಳು ಬೇಕಾದ ಸೌಲಭ್ಯ ಪಡೆಯಲು ಎಷ್ಟುಬೇಕೋ ಅಷ್ಟು ಸಂಬಳ ನಿಗದಿ ಮಾಡುವುದನ್ನು ಪರ್ಯಾಲೋಚಿಸುತ್ತೀರಾ ?

Mr. SPEAKER.—Does the member seriously suggest that it arises out of this question ?

Now, question hour is over.

Revenue Minister's Statement

Sri M. V. KRISHNAPPA (Minister for Revenue).—Sir, on a point of personal explanation. I am sorry for the mistake while answering question No. 333 though it is a bordering question. I was in Parliament for the past 10 years. In Parliament the practice is that members address

questions to the individual Minister as "Will the Food and Agriculture Minister reply......" and while answering the question if the concerned Minister feels that it is a border question he will say: "You please refer to so and so Minister" That old Parliamentarian in me appeared when I was replying to this question for which I am sorry. People may mistake that I am arrogant. I will get the information from the concerned Ministry. As soon as I get the correct information I will reply.

Mr. SPEAKER.—Can I hold over the question for tomorrow or the day after tomorrow?

Sri S. R. KANTHI (Minister for Education).—We will have to collect information from the Archaeological Department and it may take three or four days.

Mr. SPEAKER.—Then I will take it up after 3 or 4 days.

BUDGET ESTIMATES FOR 1963-64—DEMANDS FOR GRANTS.

DEMAND NO. 31 / 50 } PUBLIC WORKS.

(Debate continued.)

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮಿ, ನಿನ್ನೆ ನಾನು ಮಾತನಾಡುತ್ತಾ ಸಣ್ಣ ನೀರಾವರಿ ಯೋಜನೆ ವಿಚಾರ ಪ್ರಸ್ತಾಪಿಸುತ್ತಿದ್ದೆ. ಈ ಖಾತೆಯ ಉಪಮಂತ್ರಿಗಳಾಗಿರುವ ಶ್ರೀ ಆಲೂರು ಹನುಮಂತಪ್ಪನವರು ಬಹಳ ಚುರುಕಾಗಿ ಕೆಲಸ ಮಾಡಬೇಕೆಂದು ಉದ್ದೇಶವನ್ನೇನೋ ಇಟ್ಟುಕೊಂಡಿದ್ದಾರೆ. ಆದರೆ ಅವರು ಅದನ್ನು ಕಾರ್ಯಗತ ಮಾಡುವ ಸಂದರ್ಭದಲ್ಲಿ ಎಲ್ಲಿ ಎಡವುತ್ತಾರೋ ಎಂಬ ಸಂಶಯ ಬರುತ್ತಿದೆ. ಏಕೆಂದರೆ ಈ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ 15 ವರ್ಷಗಳಿಂದ ಯಾವ ಒಂದು ನಿರ್ದಿಷ್ಟವಾದ ಕಾರ್ಯಕ್ರಮವಿಲ್ಲ, ಇರುವ ಜಮೀನುಗಳನ್ನು ನೀರಾವರಿಯಾಗಿ ಪರಿವರ್ತನೆ ಮಾಡುವ ಕಾರ್ಯ ವಿಫಲವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೈಸೂರು ದೇಶದಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಿರುವ ಕೆರೆಕಟ್ಟೆಗಳು ಶಿಥಿಲವಾಗಿವೆ. ಅವುಗಳ ದುರಸ್ತಿಗೆ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿ ಅದನ್ನು ಅಭಿವೃದ್ಧಿಪಡಿಸಲು ಸರ್ಕಾರ ಮನಸ್ಸುಮಾಡಿಲ್ಲ. ಇದಕ್ಕಾಗಿ ಸರ್ಕಾರದಲ್ಲಿ ಕೋಟ್ಯಾಂತರ ರೂಪಾಯಿಗಳ ಹಣ ಒದಗಿಸಲ್ಪಟ್ಟರೂ ನಿಜವಾಗಿಯೂ ಸುಖೀರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳುವುದನ್ನು ಕಾರ್ಯಗತ ಮಾಡುವರೇ ಎಂಬ ಅನುಮಾನವಿದೆ. ಕೆರೆ ದುರಸ್ತು ಮಾಡುತ್ತೇವೆ, ಡೀಸಿಲ್ಟ್ ಮಾಡುತ್ತೇವೆ, ಸರ್ವೆಮಾಡಿ ಉತ್ತಮಪಡಿಸುತ್ತೇವೆ ಎಂದು ನಮ್ಮ ಉಪಮಂತ್ರಿಗಳು ಹೇಳಿದ್ದರು. ಅಲ್ಲದೆ ಈಗಿನ ತುರ್ತುಪರಿಸ್ಥಿತಿಯಲ್ಲಿ ಆಹಾರದ ಅಭಾವ ನೀಗಲು ತ್ವರಿತವಾದ ಕಾರ್ಯಕ್ರಮ ಹಾಕಬೇಕೆಂದು ಉದ್ದೇಶಿಸಿರುವುದಾಗಿ ಮುಖ್ಯಮಂತ್ರಿಗಳು ಅನೇಕ ಸಾರಿ ಈ ಸಭೆಯಲ್ಲಿ ಹೇಳಿದರು. ಆದರೆ ಇಲ್ಲಿಯವರೆಗೆ ನೋಡಿದರೂ ಕೆರೆ ಸರ್ವೆ ಮಾಡುವುದರಲ್ಲೇ ಕಾರ್ಯಪರ್ಯವಸಾನವಾಗುತ್ತಿದೆ, ನಿಜವಾಗಿಯೂ ಸೂಕ್ತ ಕಾರ್ಯಕ್ರಮ ಕೈಕೊಂಡಿಲ್ಲ. ಇದನ್ನು ನೋಡಿದರೆ ಸರ್ಕಾರದಲ್ಲಿ ನಂಬಿಕೆಯಿಡಲು ಸಾಧ್ಯವಿಲ್ಲವಾಗಿದೆ. ಈ ದಿವಸ ಅವರು ಮಾಡುವ ಕಾರ್ಯದಲ್ಲಿ ವಿಫಲರಾಗಿದ್ದಾರೆ.

ಸಣ್ಣ ನೀರಾವರಿ ಯೋಜನೆ ಕೆಲಸಗಳನ್ನು ಜಾಗ್ರತೆಯಾಗಿ ಒಂದು ವರ್ಷದೊಳಗಾಗಿ ಮಾಡುತ್ತೇವೆ, ಅದಷ್ಟು ಬೇಗ ಮುಕ್ಕಾಲುಭಾಗ ಸಣ್ಣಸಣ್ಣ ಕೆರೆಗಳ ಕೆಲಸವನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದರು. ನನಗೆ ಅದರಲ್ಲಿ ಭರವಸೆಯಿತ್ತು. ಆದರೆ ಅನುಭವವೇ ಬೇರೆಯಾಗಿದೆ. ಮೈನರ್ ಇರಿಗೇಷನ್ ಇನ್‌ವೆಸ್ಟಿಗೇಷನ್ ಆಫೀಸುಗಳು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಎರಡಿವೆ. 10-15 ಸಾರಿ ಒಂದು ಕೆರೆಯ ವಿಚಾರ ಕೇಳಿದರೂ ಕಾರ್ಯಗತ ಮಾಡುವ ಹಾಗಿಲ್ಲ, ಕೆರೆ ಸರ್ವೆ ಮಾಡುವುದಕ್ಕೆ ಆಗಿಲ್ಲ ಎಂದು ಹೇಳುತ್ತಾರೆ. ಆಹಾರದ ಅಭಾವ ನೀಗಿಸಬೇಕೆಂದು ಹೇಳುವಾಗ ತೆರಿಗೆ ಹಾಕುವುದು, ಕಂದಾಯ ಹೆಚ್ಚಿಸುವುದು ಈ ಕೆಲಸ ಮಾತ್ರ ನಡೆದಿದೆ. ರೈತರು ಒಂದು ಕೆರೆ ಆಗಬೇಕು, ಕಟ್ಟಿ, ಕಟ್ಟಿಸಿಕೊಡಿ ಎಂದು ಕೇಳಿದರೆ ಒಂದು ಸಣ್ಣಕೆಲಸಕ್ಕೂ ಹತ್ತಾರು ವರ್ಷಗಳಾದರೆ

(ಶ್ರೀ ಕೆ. ಲಕ್ಕಪ್ಪ)

ಯಾವ ರೀತಿ ಸರ್ಕಾರ ಜನರಿಗೆ ಸುಖೀರಾಜ್ಯ ನಿರ್ಮಿಸಲು ಪ್ರಯತ್ನ ಮಾಡುತ್ತಿದೆ ಎಂದು ಯೋಚನೆ ಮಾಡಬೇಕಾಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈಗ ಬುಲ್‌ಡೋಜರುಗಳು, ಲಾರಿಗಳು ಮುಂತಾದ ಉಪಕರಣಗಳಿಂದ ಕೋಟಿಗಟ್ಟಲೆ ಹಣ ಹಾಳಾಗುತ್ತಿದೆ. ವಿಧಾನಸೌಧದ ಕೆಲಸಕ್ಕಾಗಿ ಕೊಟ್ಟಿದ್ದ ಕೆಲವು ಬುಲ್‌ಡೋಜರುಗಳು, ಟ್ರ್ಯಾಕ್ಟರುಗಳು ಮತ್ತು ಲಾರಿಗಳು ಈ ದಿವಸ ಕೆಲಸಕ್ಕೆ ಉಪಯೋಗವಾಗದ ರೀತಿಯಲ್ಲಿ ಬಿದ್ದಿವೆ. ಅವನ್ನು ಈ ದಿವಸ ಲೆಕ್ಕದಲ್ಲಿ ಸೇರಿಸಿಲ್ಲ. ಆ ವಿಚಾರದಲ್ಲಿ ಸರ್ಕಾರ ಇದುವರೆಗೆ ಯಾವ ಕ್ರಮವನ್ನೂ ಕೈಕೊಂಡಿಲ್ಲ. ಇದನ್ನು ಗಮನಿಸಿ ಬಹಳ ಎಚ್ಚರಿಕೆ ವಹಿಸಿ ದೇಶದ ಹಣ ಅನ್ಯಾಯವಾಗದೆ ಸರಿಯಾದ ರೀತಿಯಲ್ಲಿ ಉಪಯೋಗವಾಗುವಂತೆ ಸರ್ಕಾರ ನೋಡಿಕೊಳ್ಳಬೇಕು.

ಇವತ್ತಿನ ದಿವಸ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟು ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟ್ ಆಗಬಾರದು ಎಂಬುದನ್ನು ಸರ್ಕಾರದವರು ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಮೀಡಿಯಂ ಪ್ರಾಜೆಕ್ಟುಗಳಿಗೆ ನಮ್ಮ ಕೇಂದ್ರಸರ್ಕಾರದಿಂದ ಹಣ ಬರುತ್ತದೆ. ಅದನ್ನು ಸೇರಿಸಿ ನಾವು ಮಾಡಬೇಕಾಗಿದೆ ಎಂದು ಹೇಳುತ್ತಾ ಇದ್ದೀರಿ. ಇವತ್ತಿನವರೆಗೂ ಒಂದು ಮೀಡಿಯಂ ಪ್ರಾಜೆಕ್ಟಿನ ಕೆಲಸವೂ ಕೂಡ ಪ್ರಾರಂಭವಾಗಿಲ್ಲ. ಅದಕ್ಕೇ ಒಂದೊಂದು ಪ್ರಾಜೆಕ್ಟ್ ಆದಮೇಲೆ ಒಂದೊಂದು ಪ್ರಾಜೆಕ್ಟು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಒಂದು ಪ್ರಾಜೆಕ್ಟನ್ನು ಕೂಡ ಇವತ್ತಿನ ದಿವಸ ತೆಗೆದುಕೊಂಡು ಮಾಡಲಿಲ್ಲವಲ್ಲಾ ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಮೀಡಿಯಂ ಪ್ರಾಜೆಕ್ಟುಗಳ ಬಗ್ಗೆ ಸರ್ಕಾರ ಇರತಕ್ಕ ನೀತಿಯನ್ನು ಬದಲಾವಣೆ ಮಾಡಿದರೆ ಈಗಿನ ತುರ್ತುಪರಿಸ್ಥಿತಿಯಲ್ಲಿ ನಿಜವಾಗಿಯೂ ಬೇಗ ಆಹಾರದ ಅಭಾವವನ್ನು ನೀಗಿಸುವುದಕ್ಕೆ ಬಹಳ ಒಳ್ಳೆಯದಾಗುತ್ತದೆ. 12-13 ಲಕ್ಷ ರೂಪಾಯಿಗಳ ಈ ಮೀಡಿಯಂ ಪ್ರಾಜೆಕ್ಟುಗಳು ಬಜೆಟ್‌ನಲ್ಲಿ ಸೇರಿಲ್ಲ ಎಂದು ಹೇಳಿ ಸರ್ಕಾರದವರು ಆ ಕೆಲಸವನ್ನು ಹಿಂದೆ ಹಾಕುತ್ತಾ ಇದ್ದೀರಿ. ಅದು ತಪ್ಪು. ಅದರ ಬಗ್ಗೆ ಏನು ಮಾಡಬೇಕೆಂದರೆ ಎಷ್ಟು ಅಚ್ಚುಕಟ್ಟಾಗುತ್ತದೆ, ಎಷ್ಟು ನೀರಾವರಿಯಾಗುತ್ತದೆ, ಎಷ್ಟು ಆಹಾರ ಬೆಳೆಯಬಹುದು ಎಂಬುದನ್ನು ಗೊತ್ತುಮಾಡಿ ಮೀಡಿಯಂ ಪ್ರಾಜೆಕ್ಟುಗಳನ್ನು ಸರ್ಕಾರ ಜಾಗ್ರತೆ ಮಾಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಬಜೆಟ್‌ನಲ್ಲಿ ಸೇರಿಲ್ಲ, ಸರ್ವೇ ಮಾಡುತ್ತಾ ಇದ್ದೇವೆ. ಅದು ಮುಗಿದಮೇಲೆ ಟೆಕ್ನಿಕಲ್ objection ಇದೆ ಎಂದು ಹೇಳಿ ಹತ್ತಾರು ವರ್ಷ ಮುಂದೂಡುತ್ತಾ ಇರುವ ಮೀಡಿಯಂ ಪ್ರಾಜೆಕ್ಟಿನ ಒಂದು ಉದಾಹರಣೆ ಹೇಳುವುದಾದರೆ ತುಮಕೂರು ತಾಲ್ಲೂಕಿನ ತಿರುಕನಪಾಳ್ಯ ಪ್ರಾಜೆಕ್ಟು 4-5 ಸಾವಿರ ಎಕರೆ ನೀರಾವರಿ ಆಗತಕ್ಕ ಒಂದು ಪ್ರಾಜೆಕ್ಟು. ಅದರ ನೀರು ಆಂಧ್ರಕ್ಕೆ ಹೋಗುತ್ತಾ ಇದೆ. ಅದನ್ನು ಕೂಡ ಇದುವರೆಗೂ ಮಾಡದೇ ಇರುವುದು ಬಹಳ ವಿಷಾದವಾಗುತ್ತದೆ. ಅದನ್ನು ತೀವ್ರ ಗಮನದಲ್ಲಿಟ್ಟು ಈಗಿನ ತುರ್ತು ಪರಿಸ್ಥಿತಿಯಲ್ಲಿ ಆ ಕಾರ್ಯವನ್ನು ಕೈಕೊಳ್ಳುವುದು ಒಳ್ಳೆಯದು ಎಂದು ಸರ್ಕಾರದವರಿಗೆ ಸಲಹೆ ಮಾಡುತ್ತೇನೆ.

ಕಂಟ್ರಾಕ್ಟ್ ಮಾಡತಕ್ಕ ಬಗ್ಗೆ ಹೋದಸಾರಿಯೂ ಕೂಡ ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಕಂಟ್ರಾಕ್ಟ್ ಮಾಡತಕ್ಕ ರೀತಿನೀತಿ, ಕಂಟ್ರಾಕ್ಟರುಗಳು ಮಾಡತಕ್ಕ ಅನ್ಯಾಯ ಸರ್ಕಾರದವರು ಅವರಿಗೆ ಕೊಡತಕ್ಕ ಬೆಂಬಲ ಇದನ್ನೆಲ್ಲಾ ಬಹಳ ಸಮರ್ಪಕವಾದ ರೀತಿಯಲ್ಲಿ ಹೇಳಿದರು ಎಂದು ಹೇಳಬೇಕಾಗಿದೆ. ಇವತ್ತಿನ ದಿವಸ ಒಂದು, ಎರಡನೇ ದರ್ಜೆಯ ಕಂಟ್ರಾಕ್ಟುದಾರರು ದೇಶಾದ್ಯಂತ ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೋ ಅವರು ಬಹಳ ಪ್ರಭಾವದಿಂದ ಅದನ್ನು ನಡೆಸುತ್ತಾ ಇದ್ದಾರೆ. ಅವರೇ ನೇರವಾಗಿ ಆ ಕೆಲಸ ಮಾಡುತ್ತಿಲ್ಲ. ಕೋಟ್ಯಾಂತರ ರೂಪಾಯಿನ ಕೆಲಸ ಇವತ್ತಿನ ದಿವಸ ಅವರು ಒಬ್ಬರೇ ಮಾಡುತ್ತಿಲ್ಲ, ಕೆಲವು ಏಜೆಂಟರುಗಳ ಮೂಲಕ ಮಾಡಿಸುತ್ತಾ ಇದ್ದಾರೆ. ಇದು ತಪ್ಪಬೇಕು. ನನಗೆ ತಿಳಿದಮಟ್ಟಿಗೆ ಇದರಲ್ಲೂ ಕೂಡ ಇವತ್ತಿನ ದಿವಸ ಅಧಿಕಾರದಲ್ಲಿರತಕ್ಕ ಮಂತ್ರಿಮಂಡಲದವರ ನೆಂಟರು ಇಷ್ಟರು ಅಂಥಾ ಒಂದು ಉದ್ಯಮಕ್ಕೆ ಕೈಹಾಕಿ ದುಡ್ಡು ಹೊಡೆಯುತ್ತಾಯಿರುವುದನ್ನು ನಿಲ್ಲಿಸಬೇಕು. ರಾಜಕೀಯ ಪ್ರಭಾವ ಕಡಿಮೆಯಾಗಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಉದಾಹರಣೆಗೆ ಹೇಳಬೇಕೆಂದರೆ ಶರಾವತಿಯಲ್ಲಿ ಆಗಿರತಕ್ಕ ಕೈವಾಡ ಮತ್ತು ಓರ್‌ಕ್ಯಾರಿಯಿಂಗ್‌ರೋಡ್ ತಿಪಟೂರು ಇದಕ್ಕೆ ಸಂಬಂಧಪಟ್ಟಂತೆ ನಡೆದಿರುವ ವಿಷಯವನ್ನು ಮೊನ್ನೆ ಸರ್ಕಾರದವರ ಗಮನಕ್ಕೆ ತಂದಿದ್ದೇವೆ. ಬಹಳ ಸಾರಿ ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಭರವಸೆ ನೀಡಿದ್ದಾರೆ, ಪರಿಶೀಲನೆ ಮಾಡುತ್ತೇವೆ ಎಂದು, ಅದನ್ನು ಇವತ್ತಿನ ದಿವಸ ಅವರು ಮಾಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಓರ್‌ಕ್ಯಾರಿಯಿಂಗ್ ರೋಡಿನ ವಿಷಯ ಏನು ?

ಶ್ರೀ ಕೆ. ಲಕ್ಕಪ್ಪ.—ಒಬ್ಬರೇ ಕಂಟ್ರಾಕ್ಟ್‌ದಾರರಿಗೆ ಕೊಡುತ್ತಾ ಇರುವುದು, ತಿಪಟೂರು—ಮಂಗಳೂರು ರೋಡಿನ ವಿಷಯ ರೇವಣ್ಣಸಿದ್ದಪ್ಪನವರು ಹೇಳಿದ್ದಾರೆ. ಒಬ್ಬರೇ ಕಂಟ್ರಾಕ್ಟ್ ಮಾಡುತ್ತಾ ಇದ್ದಾರೆ. ಅವರು ಇತರರಿಗೆ ಕೊಡುತ್ತಾ ಇದ್ದಾರೆ. ಅಂಥವರ ಪ್ರಭಾವಕ್ಕೆ ಒಳಗಾಗಿ ದೇಶದ ಹಣ ಏನಾಗುತ್ತದೆ ಎಂಬುದನ್ನು ನೋಡಬೇಕು. ಎಸ್ಟಿಮೇಟ್ ಮಾಡತಕ್ಕ ವಿಚಾರ, ಸರ್ವೇ ಮಾಡತಕ್ಕ ವಿಚಾರ, ಕಲ್ಲು ಸಾಗಿಸತಕ್ಕ ವಿಚಾರ ಪ್ರತಿಯೊಂದರಲ್ಲೂ ಇವತ್ತಿನ ದಿವಸ ಅಧಿಕಾರಿಗಳು ಅವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಅಸಿಸ್ಟೆಂಟ್ ಇಂಜನಿಯರ್ ಅಲ್ಲರತಕ್ಕ ಕಂಟ್ರಾಕ್ಟ್‌ದಾರರನ್ನು ಮಾತನಾಡಿಸುವುದಕ್ಕೆ ಆಗುವುದಿಲ್ಲ. ಅಸಿಸ್ಟೆಂಟ್ ಇಂಜನಿಯರಿಗೆ ಅವರು ಹೆದರುತ್ತಿಲ್ಲ. ಅಂಥಾ ಪ್ರಭಾವಶಾಲಿಗಳಾದ ಕಂಟ್ರಾಕ್ಟ್‌ದಾರರುಗಳನ್ನು ನಿರ್ಮಾಣ ಮಾಡಿಕೊಂಡು ಇವತ್ತಿನ ದಿವಸ ರಸ್ತೆ ಸಂಚಾರ ಮಾರ್ಗ ಆಗುತ್ತಿಲ್ಲ. ಅಂಥವರನ್ನು ಕಟ್ಟಿಕೊಂಡು ಹಣ ಖರ್ಚು ಮಾಡುತ್ತಾ ಹೋದರೆ ಅನ್ಯಾಯ, ನಮಗೆ ಏನು ಒಳ್ಳೆಯದಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು ಎಸ್ಟಿಮೇಟ್ ಮಾಡತಕ್ಕ ವಿಚಾರದಲ್ಲಿ, ಪ್ರತಿಸಾರಿ ಎಸ್ಟಿಮೇಟ್ ಆಗುತ್ತಿದೆ. ಯಾವ ಕೆಲಸವೇ ಆಗಲೀ ಸರಿಯಾಗಿ ಮತ್ತು ನಿರ್ದಿಷ್ಟವಾಗಿ ಎಸ್ಟಿಮೇಟ್ ಮಾಡಲು ತಾವು ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಇವತ್ತಿನ ದಿವಸ ಕೆರೆ ಎಸ್ಟಿಮೇಟ್ ಮಾಡಿ ಎಂದರೆ 6 ತಿಂಗಳಾಗಲೀ, 1 ವರ್ಷ ವಾಗಲೀ ಒಂದು ಆಫೀಸಿನಿಂದ ಒಂದು ಆಫೀಸಿಗೆ ಹೋಗುತ್ತಾ ಇದ್ದು 4-6 ಅರ್ಜಿಗಳು ಬರುತ್ತಾ ಇವೆ. ಮಂತ್ರಿಗಳಿಗೆ ಬಂದಂಥ ಅರ್ಜಿ, ಚೀಫ್ ಇಂಜನಿಯರಿಗೆ ಹೋಗುತ್ತದೆ. ಚೀಫ್ ಇಂಜನಿಯರಿಂದ ಸೂಪರಿಂಟೆಂಡಿಂಗ್ ಇಂಜನಿಯರು, ಸೂಪರಿಂಟೆಂಡಿಂಗ್ ಇಂಜನಿಯರಿಂದ ಎಕ್ಸಿಕ್ಯೂಟಿವ್ ಇಂಜನಿಯರು, ಎಕ್ಸಿಕ್ಯೂಟಿವ್ ಎಂಜಿನಿಯರಿಂದ ಅಸಿಸ್ಟೆಂಟ್ ಇಂಜನಿಯರು, ಅಸಿಸ್ಟೆಂಟ್ ಇಂಜನಿಯರಿಂದ ಸಬ್-ಓವರ್ಸೀಯರು, ಸಬ್-ಓವರ್ಸೀಯರಿಂದ ಕೊನೆಗೆ ತಾಲ್ಲೂಕಿನ ರೆವಿನ್ಯೂ ಇನ್ಸ್‌ಪೆಕ್ಟರಿಗೆ ಬಂದು ಆ ಅರ್ಜಿ ಅವರ ಹತ್ತಿರ ಇರುತ್ತದೆ. ಚಿತ್ರಪಟ ತೋರಿಸುತ್ತಾ ಇದ್ದೀರಿ. ಮರಾಮತ್ತು ಇಲಾಖೆಯಿಂದಲೇ ದೇಶಕ್ಕೆ ಕಲ್ಯಾಣವಾಗಬೇಕಾಗಿದ್ದರೆ, ಏನೇನು ಕೆಲಸ ಮಾಡಿದ್ದೇವೆ ಎಂಬುದನ್ನು ತೋರಿಸಬೇಕಾಗಿದ್ದರೆ ಮರಾಮತ್ತು ಇಲಾಖೆಯಿಂದ ಮಾತ್ರ ಸಾಧ್ಯ. ಹಾಗಿರುವಾಗ ನೀವು ಅಧಿಕಾರ ತೆಗೆದುಕೊಂಡಮೇಲೆ ಏನು ಸಾಧನೆ ಮಾಡಿದ್ದೀರಿ ಎಂದು ಪ್ರಶ್ನೆ ಮಾಡುತ್ತಾ ಇದ್ದೇನೆ. ಏಕೆಂದರೆ ಹಾರಂಗಿ, ಕಂಬದ ಕಡದಂತಹ ಅನೇಕ ಬೃಹತ್ ಯೋಜನೆಗಳನ್ನು ಮಾಡುತ್ತೇವೆ ಎಂದು ತಾವು ಹೇಳುತ್ತಾ ಇದ್ದೀರಿ. ಆದರೆ ಇವತ್ತಿನವರೆಗೂ ಯಾವ ಕೆಲಸವನ್ನೂ ಪ್ರಾರಂಭ ಮಾಡಿಲ್ಲ. ಚಿತ್ರಪಟ ದಯವಿಟ್ಟು ಜನಗಳಿಗೆ ತೋರಿಸಬೇಡಿ, ಬಾಯಿಮಾತಿನಲ್ಲಿ ಭಾಷಣ ಮಾಡಿ, ಮನಸ್ಸಿಗೆ ತೃಪ್ತಿಪಟ್ಟುಕೊಳ್ಳುವುದನ್ನು ಬಿಡಿ. ಜನಗಳಿಗೆ ಬೇಕಾಗಿರುವುದು ಅನ್ನ, ವಾಹನ ಸೌಕರ್ಯಕ್ಕೆ ಬೇಕಾಗಿರತಕ್ಕ ರಸ್ತೆಗಳು ಏನಿವೆ ಅದನ್ನು ನೀವು ಇವತ್ತಿನ ದಿವಸ ಮಾಡುತ್ತಾ ಇಲ್ಲ. ಸ್ವಾಮಿ ಹಿಂದೆ ಶ್ರೀಮಾನ್ ಚನ್ನಬಸಪ್ಪನವರು ಪಬ್ಲಿಕ್ ವರ್ಕ್ಸ್ ಮಿನಿಸ್ಟರಾಗಿದ್ದಾಗ ದೇಶಾದ್ಯಂತ ಹಳ್ಳಿ ಹಳ್ಳಿಗೂ ರಸ್ತೆ ಆಗಬೇಕು ಎಂದು ಚಳುವಳಿ ಮಾಡಿದರು. ರಸ್ತೆಗಳನ್ನು ಮಾಡಿಸಿದರು. ಇವತ್ತಿನ ದಿವಸ ಏನಾಗಿದೆ ಎಂದರೆ ಆ ರಸ್ತೆಗಳಿಗೆ ಸರಿಯಾದ ಸೇತುವೆಗಳಿಲ್ಲ, ಖರ್ಚು ಮಾಡಿದ ಹಣವೆಲ್ಲಾ ನಿಷ್ಪ್ರಯೋಜನವಾಗುತ್ತಾ ಇದೆ. ಆ ರಸ್ತೆಗಳನ್ನು ಸರಿಯಾದ ರೀತಿಯಲ್ಲಿಡಲು ಸೇತುವೆಗಳನ್ನು ಮಾಡಬೇಕೆಂದರೆ ಸರ್ಕಾರದವರು ಹಣ ಇಲ್ಲ ಎಂದು ಹೇಳುತ್ತಾರೆ. ಇದರಿಂದಾಗಿ ಹಿಂದೆ ಖರ್ಚು ಮಾಡಿದ ಹಣ ಇವತ್ತು ಅನ್ಯಾಯವಾಗಿ ರಸ್ತೆಗಳೂ ಕೂಡ ಸರಿಯಾಗಿಲ್ಲ. ಅದಕ್ಕೋಸ್ಕರ ಒಂದು ಬಂದೋಬಸ್ತಾಗಿರತಕ್ಕ ಸಂಚಾರಕ್ಕೆ ಅನುಕೂಲವಾಗತಕ್ಕ ಸೇತುವೆಗಳನ್ನು ಮಾಡಿಯೇ ತೀರಬೇಕೆಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ನಿಗಾ ಕೊಡಬೇಕೆಂದು ಹೇಳುತ್ತೇನೆ. ಸಣ್ಣ ನೀರಾವರೀ ಯೋಜನೆಗಳನ್ನು ಮಾಡಲು, ನಿರ್ದಿಷ್ಟವಾದ ಯೋಜನೆ, ನಿರ್ದಿಷ್ಟವಾದ ಕಾಲ ಗೊತ್ತು ಮಾಡಿದರೆ ನಿಜವಾಗಿಯೂ ನೀವು ಪುಸ್ತಕದಲ್ಲಿ ಅಂಕಿಅಂಶಗಳನ್ನು ತೋರಿಸತಕ್ಕದ್ದು ಸತ್ಯವಾಗುತ್ತದೆ. ಆ ಕೆಲಸಕಾರ್ಯಗಳು ಯಶಸ್ವಿಯಾಗಿ ಜರುಗುತ್ತವೆ. ಆದರೆ ಇವತ್ತು 40-50 ಸಾವಿರ ರೂಪಾಯಿನ ಒಂದು ಸಣ್ಣ ಕೆರೆ 8-10 ವರ್ಷದಿಂದ ಕೇಳುತ್ತಾ ಇದ್ದರೂ ಕೂಡ ಆಗುತ್ತಿಲ್ಲ. ಟೆಕ್ನಿಕಲ್ ತಕರಾರು ಹಾಕುತ್ತಾ ಇದ್ದಾರೆ. ಇಂಥಾ ಕೆಲಸಗಳನ್ನು ಮಾಡದಿದ್ದರೆ ಕೊಟ್ಟಂಥ ಹಣ ನಷ್ಟವಾಗುತ್ತದೆ. ದೇಶಕ್ಕೆ ಯಾವ ಸುಖವೂ ಸಿಕ್ಕುವುದಿಲ್ಲ.

ಲ್ಯಾಂಡ್ ಅಕ್ವಿಜಿಷನ್ ಕೇಸುಗಳು ವಿಲೇವಾರಿ ಬಹಳ ನಿಧಾನವಾಗುತ್ತಿದೆಯೆಂಬ ಅಂಶವನ್ನು ಈ ಹಿಂದೆಯೇ ನಾವು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಈ ಒಂದು ತೊಂದರೆಯಿಂದ ಈ ದಿವಸ ಕೆಲವು ನೀರಾವರಿ ಕಾಂಗಾರಿಗಳೂ ಕಟ್ಟಡದ ಕೆಲಸಗಳೂ ಹಾಗೆಯೇ ನಿಂತುಹೋಗಿವೆ. ಈ ಸೌಕರ್ಯಗಳು ಜನರಿಗೆ ನೇರವಾಗಿ ಶೀಘ್ರವಾಗಿ ಲಭಿಸಬೇಕಾಗಿದ್ದರೆ ಈ ಇಲಾಖೆಯ ಮಂತ್ರಿಗಳು ರೆವಿನ್ಯೂ ಮಂತ್ರಿಗಳಿಗೆ ಬರೆದು ಆ ಮೂಲಕ ರೆವಿನ್ಯೂ ಇಲಾಖೆಗೆ ನೋಟೀಸನ್ನು ಕಳುಹಿಸಿ ಆ ಇಲಾಖೆಯವರೂ ಈ ಇಲಾಖೆಯವರೂ ಸೇರಿ ಕನ್ಸಲ್ಟೇಷನ್ ನಡೆಸಿ ಈ ಕಾರ್ಯ ಬೇಗ ಆಗುವಂತೆ ಮಾಡಬೇಕು. ಈ ದಿವಸ ಒಂದೇ ಕೆರೆ ಭೂಮಿಯ ಅಕ್ವಿಜಿಷನ್‌ಗಾಗಿ ಒಂದು ಕೆರೆಯ ಕೆಲಸವೇ

(ಶ್ರೀ ಕೆ. ಲಕ್ಕಪ್ಪ)

8-10 ವರ್ಷಗಳಿಂದ ನಿಂತು ಹೋಗಿದೆ. ಈ ವಿಚಾರವನ್ನು ಇಲ್ಲಿ ನಾವು ಪ್ರತಿಸಾರ್ತಿ ಹೇಳಿದ್ದೇವೆ, ಆದರೆ ಈ ಮಾತು ಮಂತ್ರಿಗಳ ಕಿವಿಗೇ ಬೀಳುತ್ತಿಲ್ಲ. ಆದರೆ ನಾನೀಗ ಈ ರೆವಿನ್ಯೂ ಚರ್ಚೆಗಳನ್ನು ಪ್ರಸ್ತಾಪಿಸುವುದಿಲ್ಲ. ಲ್ಯಾಂಡ್ ರೆವಿನ್ಯೂ ಬಗ್ಗೆ ಆ ಡಿಮ್ಯಾಂಡ್ ಬಂದಾಗ ಈ ವಿಚಾರವನ್ನು ಹೇಳುತ್ತೇನೆ. ಈ ದಿವಸ ರೆವಿನ್ಯೂ ಇಲಾಖೆಯಲ್ಲಿ ಯಾವ ಒಂದು ಕೆಲಸವೂ ಸುಗಮವಾಗಿ ಆಗುತ್ತಿಲ್ಲ. ಲ್ಯಾಂಡ್ ಅಕ್ವಿಜಿಷನ್ ರೆಕಾರ್ಡುಗಳನ್ನು ಸಕಾಲದಲ್ಲಿ ಇತ್ಯರ್ಥ ಮಾಡುತ್ತಿಲ್ಲ. ಇನ್ನಾದರೂ ಈ ಕೆಲಸ ಬೇಗ ನಡೆಯುವಂತೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸಣ್ಣಪುಟ್ಟ ಕಂಟ್ರಾಕ್ಟರುಗಳಮೇಲೆ ಹಾಕಿರತಕ್ಕ ರಾಯಲ್ಟಿಯನ್ನು ರದ್ದು ಮಾಡುವುದಾಗಿ ಈ ಹಿಂದೆ ಮಂತ್ರಿಗಳು ಭರವಸೆ ಕೊಟ್ಟಿದ್ದರು. ಇದನ್ನು ಇಲ್ಲಿಯವರೆಗೂ ರದ್ದು ಮಾಡಿಲ್ಲ. ಇದರಿಂದ ಸಣ್ಣಪುಟ್ಟ ಕಂಟ್ರಾಕ್ಟರುಗಳಿಗೆ ತುಂಬಾ ಕಿರುಕುಳ ತೊಂದರೆಯುಂಟಾಗಿದೆ. ಈ ರಾಯಲ್ಟಿ ಜಾರಿಯಲ್ಲಿರುವುದರಿಂದ ಅಧಿಕಾರಿಗಳೂ ದೊಡ್ಡದೊಡ್ಡ ಕಂಟ್ರಾಕ್ಟರುಗಳೂ ಈ ಸಣ್ಣ ಪುಟ್ಟ ಕಂಟ್ರಾಕ್ಟರುಗಳಿಗೆ ತೊಂದರೆ ಕೊಡುತ್ತಿದ್ದಾರೆ. ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಆದ್ದರಿಂದ ಈ ರಾಯಲ್ಟಿಯನ್ನು ಸರ್ಕಾರದವರು ಕೂಡಲೆ ವಾಪಸು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ತುಮಕೂರು ಜಿಲ್ಲೆಯಲ್ಲಿರತಕ್ಕ ಪ್ರತಿಯೊಂದು ರೋಡಿನಲ್ಲೂ ಇರತಕ್ಕ ರಸ್ತೆ ಮರಗಳನ್ನು ಕಡಿದುಹಾಕುತ್ತಿದ್ದಾರೆ. ಈ ಮರಗಳಿರುವುದರಿಂದ ರಸ್ತೆಯಲ್ಲಿ ಬೊಂಬಾಯಿಗೆ ಹೋಗತಕ್ಕ ಲಾರಿಗಳಲ್ಲಿ ಎತ್ತರವಾಗಿ ಸಾಮಾನುಗಳನ್ನು ಜೋಡಿಸಿ ತೆಗೆದುಕೊಂಡು ಹೋಗಲು ತೊಂದರೆಯಾಗುತ್ತಿದೆ, ಅದರಿಂದ ಕತ್ತರಿಸಿ ಹಾಕಬೇಕೆಂದು ಹೇಳುತ್ತಿದ್ದಾರೆ. ಈ ಕತ್ತರಿಸಿದ ಮರಗಳ ಮಾರಾಟದಲ್ಲಿ ಬಹಳ ಕ್ರಮಬಾಹಿರ ನಡೆಯುತ್ತಿದೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನ ಕೊಡಬೇಕೆಂದು ಹೇಳುತ್ತೇನೆ. ರಸ್ತೆಯಲ್ಲಿರತಕ್ಕ ಮರಗಳು ನಾಶವಾಗದಂತೆ ಈ ಕತ್ತರಿಸತಕ್ಕ ಕೆಲಸವನ್ನು ಕೂಡಲೆ ನಿಲ್ಲಿಸುವಂತೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಅತ್ತಕಡೆ ಸಂಚಾರ ಹೋದಾಗ ನಾನೀಗ ಹೇಳುತ್ತಿರುವ ಅಂಶ ನಿಜವೇ–ಅಲ್ಲವೇ ಎಂಬುದನ್ನು ಅವರು ಪರೀಕ್ಷೆ ಮಾಡಿಕೊಳ್ಳಬಹುದು. ಅಂತೂ ಈ ದಿವಸ ಈ P. W. D. ಬಾಬಿನಿಂದ ಜನಗಳಿಗೇನೂ ಅನುಕೂಲವಾಗುತ್ತಿಲ್ಲ. ದೊಡ್ಡದೊಡ್ಡ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ಈ ಇಲಾಖೆ ವಿಫಲವಾಗಿದೆ ಎಂದು ಹೇಳುತ್ತೇನೆ.

ನಮ್ಮ ತುಮಕೂರು ಜಿಲ್ಲೆಯಲ್ಲಿ ಕೆಲವು ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ತ್ವರಿತವಾಗಿ ಕೈಗೊಳ್ಳಬೇಕಾಗಿದೆಯೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಹಿಂದೆ ಒಂದಾವರ್ತಿ ಮಾನ್ಯ ಮಂತ್ರಿಗಳನ್ನು ನಮ್ಮ ಜಿಲ್ಲೆಗೆ ಸಂಚಾರ ಬರಬೇಕೆಂದು ಕೇಳಿಕೊಂಡಿದ್ದೆವು. ಅವರು ಏಕೋ ಹಿಂದೇಟು ಹಾಕುತ್ತಿದ್ದಾರೆ. (ಅಧ್ಯಕ್ಷರು ಮಾತನಾಡಲು ಕಾಲಾವಕಾಶವಿಲ್ಲವೆಂದು ಹೇಳಿದರು. ಸದಸ್ಯರು ಕುಳಿತುಕೊಂಡರು).

ಸನ್ಮಾನ್ಯ ಸಭಾಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಲೋಕೋಪಯೋಗಿ ಶಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ಅನುಮೋದಿಸುತ್ತ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ.

ಈ ಬೇಡಿಕೆಗಳಲ್ಲಿ ಇರಿಗೇಷನ್ ಬಾಬುಗಳಿಗೇನೋ ಸಾಕಷ್ಟು ಹಣವನ್ನೊದಗಿಸಿದ್ದಾರೆ. ಆದರೆ P. W. D. ಬಾಬಿಗೆ ಸೇರಿರತಕ್ಕ ಸೇತುವೆಗಳು ಹಾಗೂ ರಸ್ತೆಗಳ ಬಗ್ಗೆ ಒದಗಿಸಿರತಕ್ಕ ಹಣ ಬಹಳ ಕಡಿಮೆಯಾಗಿದೆಯೆಂದು ತಿಳಿಸಬಯಸುತ್ತೇನೆ. ನಮ್ಮ ದೇಶದಲ್ಲಿ ಒಂದು ತುರ್ತು ಪರಿಸ್ಥಿತಿಯುಂಟಾಗಿದೆ. ಇಂಥ ತುರ್ತು ಪರಿಸ್ಥಿತಿಯಲ್ಲಿ ನಮ್ಮ ಸೈನಿಕರೂ—ಸಾಮಾನು ಸರಂಜಾಮುಗಳೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಬೇಕಾಗಿದ್ದರೆ ನಮಗೆ ಈ ರಸ್ತೆಗಳು—ಸೇತುವೆಗಳೆಲ್ಲ ಒಳ್ಳೆ ಸ್ಥಿತಿಯಲ್ಲಿದ್ದೇ ತೀರಬೇಕು. ಆದುದರಿಂದ ಇವುಗಳಿಗೆ ಸಾಕಾಗುವಷ್ಟು ಹಣವನ್ನು ಒದಗಿಸಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಶಿವಮೊಗ್ಗ ವಿಚಾರವನ್ನು ಅನೇಕ ಸಾರ್ತಿ ಹೇಳಿಕೊಂಡಿದ್ದಾಗಿದೆ. ಅಲ್ಲಿಗೆ ಬಂದಾಗ ಈ ಸೇತುವೆ ಆಗತಕ್ಕದ್ದು ಅಗತ್ಯವೆಂದು ಮುಖ್ಯ ಮಂತ್ರಿಗಳೂ, P. W. D. ಮಂತ್ರಿಗಳೂ ಒಪ್ಪಿಕೊಂಡಿದ್ದಾರೆ. ಆದರೆ ಈ ಸೇತುವೆ ಏಕೆಬೇಕು ಎಂಬುದರ ಪೂರ್ಣ ವಿವರಗಳಿಗೆ ಹೋಗದೆ ಒಂದು ಮಾತಿನಲ್ಲಿ ಹೇಳುವುದಾದರೆ—ಈ ಸೇತುವೆ ಅತ್ಯಾವಶ್ಯಕವಾಗಿದೆ. ಶಿವಮೊಗ್ಗ ಕಾಲೇಜು ಊರಿಗೆ ದೂರದಲ್ಲಿದೆ. ಅಲ್ಲಿಗೆ ಮಕ್ಕಳು ವಿದ್ಯಾಭ್ಯಾಸಕ್ಕೆ ಹೋಗಲು ಈ ಸೇತುವೆ ಬಹಳ ಅವಶ್ಯಕವಾಗಿದೆ. ಆ ದೃಷ್ಟಿಯಿಂದ ಸರ್ಕಾರ ಇದನ್ನು ಒಪ್ಪಿಕೊಂಡಿದೆ. ಈ ಹಿಂದೆ ಸರ್ಕಾರದವರು ಶಿವಮೊಗ್ಗ ಮುನಿಸಿಪಾಲಿಟಿಯವರು ಇದರ ವೆಚ್ಚದಲ್ಲಿ ನಾಲ್ಕನೇ ಒಂದು ಭಾಗ ಕೊಟ್ಟರೆ ಆಗ

ಬಹುದೆಂದು ಹೇಳಿದ್ದರು. ಅದಕ್ಕನುಗುಣವಾಗಿ ಆ ಮುನಿಸಿಪಾಲಿಟಿಯವರು ತಮ್ಮ ಭಾಗದ ಅಂದರೆ ನಾಲ್ಕನೇ ಒಂದು ಭಾಗದ ಹಣವನ್ನು ಕೊಡುವುದಕ್ಕೆ ತಯಾರಾಗಿದ್ದರೆಂದು ತಾ. 21-8-1956ನೇ ದಿವಸ ಒಂದು ನಿರ್ಣಯವನ್ನು ಪಾಸ್‌ಮಾಡಿ ಆ ವಿಚಾರವನ್ನು ಸರ್ಕಾರಕ್ಕೆ ಬರಹ ಮೂಲಕ ತಿಳಿಸಿದ್ದಾರೆ. ಹಾಗೆ ಅವರು ಒಪ್ಪಿಕೊಂಡಿರುವಾಗ ಸರ್ಕಾರದವರು ಇದಕ್ಕೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್‌ಗೆ ಅನುಮತಿಕೊಟ್ಟು ಸೇತುವೆ ಕೆಲಸವನ್ನು ಶುರುಮಾಡಬಹುದು. ಇಷ್ಟೊಂದನ್ನು ಸರ್ಕಾರದವರು ಅಲ್ಲಿಗೆ ಅವಕಾಶ ಮಾಡಿಕೊಡಬೇಕು. ಎಸ್ಟಿಮೇಟ್ ಪ್ಲಾನ್ ಆಗಿ, ನಮ್ಮ ಮುನಿಸಿಪಾಲಿಟಿಯವರು ಕೊಡಲೊಪ್ಪಿರುವ ಹಣದಿಂದ ಶುರುಮಾಡಿದ್ದಲ್ಲಿ ಶಿವಮೊಗ್ಗ ಜನತೆಯ ಸುದೈವದಿಂದ ಕರ್ಣಾಟಕ ಸಂಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯರವರ ಪ್ರಾರ್ಥನೆಯಿಂದ ಒಲಿದ ಮಹಾಲಕ್ಷ್ಮಿ ಚಿನ್ನದ ಮಳೆಗರೆದಂತೆ ಎಲ್ಲಿಂದಲಾದರೂ ಚಿನ್ನದ ಮಳೆ ಕರೆಯಬಹುದು.

ಇನ್ನು ಹಾರ್ನಹಳ್ಳಿ—ಮುದುವಾಲ ರಸ್ತೆ. ಅದು ಒಂದು ಚರಿತ್ರಾರ್ಹವಾದ ರಸ್ತೆಯಾಗಿದೆ. ಈ ರಸ್ತೆಗೆ ಪ್ರತಿ ವರ್ಷವೂ ಬಜೆಟ್ಟಿನಲ್ಲಿ ಹಣವನ್ನು ಒದಗಿಸಲಾಗುತ್ತಿದೆ. ಆದರೆ ಈ ರಸ್ತೆ ಕೆಲಸ ಮಾತ್ರ ಆಗಿಲ್ಲ—ಹಾಗೆಯೇ ನಿಂತಿದೆ. ಆದರೆ ಅಲ್ಲಿ ಈ ರಸ್ತೆಗೆ ಎರಡು ಪಾರ್ಟಿಗಳಿದ್ದು ಕೆಲಸಕ್ಕೆ ತೊಂದರೆ ಆಗಿರಬಹುದು ಈಗಲಾದರೂ ಸರ್ಕಾರದವರು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ, ಯಾವ ಪಾರ್ಟಿ ಏನೇ ಹೇಳಲಿ ಅದಕ್ಕೆ ಕಿವಿಗೊಡದೆ, ಈ ವಿಚಾರವನ್ನು ತನಿಖೆ ಮಾಡುವಂತೆ ಮಾಡಿ ಇಲ್ಲವೇ ಮಂತ್ರಿಗಳು ಸ್ಥಳ ಪರೀಕ್ಷೆ ಮಾಡಿ ಈ ರಸ್ತೆ ಕೆಲಸವನ್ನು ಬೇಗ ಮುಗಿಸಲೇಬೇಕಾಗಿದೆ. ಈ ರಸ್ತೆ ಸೌಕರ್ಯವಿಲ್ಲದೆ ಅಲ್ಲಿರತಕ್ಕ ಜನರಿಗೆ ಮಳೆಗಾಲದಲ್ಲಿ ಅವರು ದ್ವೀಪಾಂತರ ವಾಸಿಗಳಂತೆ ಕಾಲ ಹಾಕಬೇಕಾಗಿದೆ. ಅವರಿಗೆ ಈ ರಸ್ತೆ ಆಗದೆ ಬಹಳ ತೊಂದರೆ ಪಡುತ್ತಿದ್ದಾರೆ. ಆದ್ದರಿಂದ ಬೇಗ ರಸ್ತೆಯ ಕೆಲಸವನ್ನು ಪ್ರಾರಂಭಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಶಿವಮೊಗ್ಗಾ ತಾಲ್ಲೂಕಿನಲ್ಲಿ ರಾಮದೇವರ ಕೆರೆ ಅಂತ ಇದೆ. ಈ ಕೆರೆಯನ್ನು ಕೂಡಲೆ ರೆಸ್ಟೋರ್ ಮಾಡಬೇಕಾಗಿದೆ. 1957 ರಿಂದ ಇದನ್ನು ರೆಸ್ಟೋರ್ ಮಾಡಬೇಕೆಂದು ಆರ್ಡರಾಗಿತ್ತು. ಈ ಕೆರೆಯನ್ನು ಕೂಡಲೆ ರೆಸ್ಟೋರ್ ಮಾಡಿ ಅಲ್ಲಿ ಹಿಂದುಳಿದ ಜನಾಂಗಕ್ಕೆ ಅನುಕೂಲ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ—

ಇನ್ನು ಷಿಫ್ಟಿಂಗ್ ಆಫ್ ವಿಲೇಜುಗಳ ವಿಚಾರದಲ್ಲಿ ಸರ್ಕಾರದವರು ಇಲ್ಲಿಯತನಕ ಯಾವ ಸೌಕರ್ಯಗಳನ್ನೂ ಅವರಿಗೆ ಒದಗಿಸಿಲ್ಲ ಅಂತ ಹೇಳಬೇಕಾಗಿದೆ. ಪ್ರಶ್ನೋತ್ತರ ಕಾಲದಲ್ಲಿ ಅವಕಾಶವಿಲ್ಲದೆ ಕೇಳಲಾಗಿಲ್ಲ ಸರಕಾರದಿಂದ ಯಾವ ತಡವೂ ಆಗಿಲ್ಲ ಎಂದಿರಿ. ಈ ಹಳ್ಳೀ ಜನರಿಗೆ ಕಾಂಪೆನ್ಸೇಷನ್ ಕೊಡತಕ್ಕ ಬಗ್ಗೆ ಏನೇನು ಕ್ರಮಗಳು ಆಗಬೇಕೋ ಅಲ್ಲೆಲ್ಲ ಗೆಜೆಟ್ ನೋಟಿಫಿಕೇಷನ್ ಎಲ್ಲ ಕರ್ಮಗಳೂ ಆಗಿವೆ. ಆದರೂ ಇನ್ನೂ ಪರಿಹಾರ ಸಿಕ್ಕಿಲ್ಲ. ಜಾಗ್ರತೆ ಪರಿಹಾರ ದೊರಕುವಂತೆ ಇನ್ನು ಶಿವಮೊಗ್ಗ ತಾಲ್ಲೂಕು—ಗಾಜನೂರಿನ ಬಳಿ ಇರತಕ್ಕ ಕಡಲೆವಡ್ಡು ಜಲಾಶಯ ಒಂದು ಆಣೆಕಟ್ಟನ್ನು ಹಾಕಿದರೆ ಅದರಿಂದ ಸುಮಾರು 3 ಸಾವಿರ ಎಕರೆ ಜಮೀನು ನೀರಾವರಿಯಾಗಲು ಅವಕಾಶವಿದೆ. ಇದರ ಅಂದಾಜು-ಎಸ್ಟಿಮೇಟುಗಳಲ್ಲಿ ತಯಾರಾಗಿದೆ. ಸರ್ಕಾರದವರು ಇದರ ಕಡೆಗೆ ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಶಿವಮೊಗ್ಗಾ ತಾಲ್ಲೂಕು ಹಾರ್ನಹಳ್ಳಿಗೆ ಯಾವ ನೀರಾವರಿ ಯೋಜನೆಯೂ ಇಲ್ಲ. ಆದುದರಿಂದ ಆ ಗ್ರಾಮದ ಅಜುಬಾಜು ಜನಗಳಿಗೆ ಅನುಕೂಲವಾಗುವಂತೆ ಸಂಪಿಗೆಹಳ್ಳ ಮತ್ತು ಗುತ್ತಿಹಳ್ಳದ ನೀರನ್ನು ಉಪಯೋಗಿಸಿಕೊಳ್ಳಲು ಅವಕಾಶವಿದೆ. ಈ ಯೋಜನೆ ಜಾಗ್ರತೆ ಮಾಡಬೇಕು. ಈ 2 ಹಳ್ಳಗಳ ಎಸ್ಟಿಮೇಟ್ ಪ್ಲಾನ್ ಆಗಿದೆ. ಕೆಲಸ ಜಾಗ್ರತೆ ಕೈಗೊಳ್ಳುವಂತೆ ಮಾಡಿ.

ಇನ್ನು ಶರಾವತಿ ಯೋಜನೆ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳಾಗಲೇ ಮಾತನಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಅವರು ಮುಖ್ಯ ಮಂತ್ರಿಗಳಾದೊಡನೆ ತಿಂಗಳಿಗೊಮ್ಮೆ ಹೋಗಿ ಈ ಕೆಲಸ ಹೇಗೆ ಸಾಗುತ್ತಿದೆ ಎಂಬುದನ್ನು ಪರಿಶೀಲನೆ ಮಾಡಿಕೊಂಡು ಬರುತ್ತಿದ್ದಾರೆ. ಇದರಿಂದ ಶಿವಮೊಗ್ಗಾದವರಿಗೆ ಇವರ ದರ್ಶನ ಆಗಿಂದಾಗ್ಗೆ ಆಗುತ್ತಿರುತ್ತದೆ ಕುಂದು ಕೊರತೆಗಳನ್ನು ತಿಳಿಸಲು ಅವಕಾಶ ಸಿಗುತ್ತೆ. ನಮ್ಮ ಮುಖ್ಯ ಮಂತ್ರಿಗಳು ಈ ಶರಾವತಿ ಕೆಲಸವನ್ನು ಬೇಗ ಪೂರ್ಣಗೊಳಿಸುವುದಾಗಿ ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ನಾವು ಕಳವಳ ಪಡಬೇಕಾಗಿದ್ದಿಲ್ಲ. ಜಾಗ್ರತೆ ಯಶಸ್ವಿಯಾಗಿ ನಡೆಯುತ್ತದೆಂದು ನನ್ನ ಭರವಸೆ.

ಇನ್ನು ಕೃಷ್ಣಾ-ಗೋದಾವರಿ ನೀರಿನ ಬಗ್ಗೆ ಎರಡು ಮಾತನ್ನು ಮಾತನಾಡಬೇಕಾಗಿದೆ. ನಮ್ಮ ಮುಖ್ಯ ಮಂತ್ರಿಗಳು—ನಮ್ಮವರೇ ಇಲ್ಲಿಯವರೇ. ಸ್ವಂತಃ ಅನೇಕ ವರ್ಷಗಳ ಕಾಲ ರಾಜಕೀಯದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದು ಕಷ್ಟನಷ್ಟಗಳನ್ನು ಅನುಭವಿಸಿದವರು, ಅವರಿಗೆ ಈ ಕರ್ನಾಟಕದ ಪರಿಸ್ಥಿತಿ ಏನಿದೆ ಎಂಬುದು ಚೆನ್ನಾಗಿ ಗೊತ್ತಿದೆ. ಅವರು ನಮ್ಮ ರಾಜ್ಯಕ್ಕೆ ಈ ನದಿಗಳಿಂದ ನ್ಯಾಯವಾಗಿ ಬರತಕ್ಕ ಪಾಲನ್ನು ಯಾರಿಗೂ ಬಿಟ್ಟುಕೊಡಬಾರದೆಂಬ ಅಂಶ ಅವರಿಗೆ ಚೆನ್ನಾಗಿ ಗೊತ್ತಿದೆ—ನಮಗೆಷ್ಟು ಕಾತುರತೆ ಇದೆಯೋ ಅದಕ್ಕಿಂತ ಹೆಚ್ಚಾಗಿಯೇ ಅವರಿಗಿದೆ. ಈ ನೀರಿನ ಹಕ್ಕಿಗಾಗಿ

(ಶ್ರೀ ಕೆ. ಲಕ್ಕಪ್ಪ

ಅವರು ಸರ್ವ ಪ್ರಯತ್ನಗಳನ್ನು ಮಾಡುತ್ತಿರುವಾಗ ನಾವು ಇದರ ಬಗ್ಗೆ ಟೀಕೆ-ಟಿಪ್ಪಣಿಗಳನ್ನು ಮಾಡದೆ ಈ ವಿಚಾರವನ್ನು ಸಂಪೂರ್ಣವಾಗಿ ಅವರಿಗೊಪ್ಪಿಸಿ-ಅವರಿಗೆ ನಾವೆಲ್ಲರೂ ಬೆಂಬಲಕೊಡ ತಕ್ಕದ್ದು ನಮ್ಮೆಲ್ಲರ ಮುಖ್ಯ ಕರ್ತವ್ಯವಾಗಿದೆ ಎಂತ ನನಗೆ ಕಾಣುತ್ತದೆ. ಅವರು ಧೈರ್ಯದಿಂದ ಈ ಕಾರ್ಯ ಸಾಧಿಸಿ ನಮ್ಮ ಪಾಲನ್ನು ಪಡೆಯುತ್ತಾರೆಂಬುದರಲ್ಲಿ ನಮಗೆ ಯಾವ ಸಂಶಯವೂ ಇಲ್ಲ ವೆಂದು ನನ್ನ ಭರವಸೆ.

ಇನ್ನು ಬೆಂಗಳೂರು ನಗರದ ಕುಡಿಯುವ ನೀರಿನ ವಿಚಾರದಲ್ಲಿ ಎರಡು ಮಾತನ್ನು ಹೇಳಬೇಕಾಗಿದೆ. ಇಲ್ಲಿ ನೀರಿಗೆ ಜನ ಎಷ್ಟು ತೊಂದರೆ ಪಡುತ್ತಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಹೆಣ್ಣು ಮಕ್ಕಳು ನೀರಿಗಾಗಿ ಬಿಂದಿಗೆ ಹಿಡಿದುಕೊಂಡು ಬಿಸಿಲಿನಲ್ಲಿ ಅಲೆದಾಡುತ್ತಿರುವುದನ್ನು ನೋಡಿದರೆ ಎಂಥವರಿಗೂ ಕನಿಕರವನ್ನುಂಟು ಮಾಡತಕ್ಕ ದೃಶ್ಯ ಅದು. ಇದಕ್ಕಾಗಿ ಸರ್ಕಾರದವರು ಕಾವೇರಿ ಯೋಜನೆಯನ್ನು ಕೈಗೊಂಡು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ಹಣ ದೊರೆತಿದೆ. ಇದನ್ನು ಪೂರೈಸಲು 5-6 ವರ್ಷ ಬೇಕೆಂದು ತಿಳಿದು ಬಂದಿದೆ.

2-30 P.M.

ಅದುವರೆಗೂ ಜನತೆ ಏನು ಮಾಡಬೇಕೆಂದು ನಾವು ಯೋಚನೆ ಮಾಡಬೇಕು. ಈಗ ದಿನಕ್ಕೆ $17\frac{1}{4}$ ಮಿಲಿಯನ್ ಗ್ಯಾಲನ್ ನೀರು ಸರಬರಾಜಾಗುತ್ತದೆ ಎಂದು ತಿಳಿದಿದ್ದೇನೆ. ಕಳೆದ ಆರು ವರ್ಷಗಳಿಂದ ನಗರಕ್ಕೆ ಒಂದು ಗ್ಯಾಲನ್ ನೀರು ಕೂಡ ಹೆಚ್ಚಾಗಿಲ್ಲ. ಜನ ಸಂಖ್ಯೆ ಮಾತ್ರ ಐದು ಲಕ್ಷಕ್ಕಿಂತ ಹೆಚ್ಚಿದೆ ಎಂದು ಅಂದಾಜಾಗಿದೆ. ನೀರಿನ ಪರಿಸ್ಥಿತಿಯನ್ನು ತಿಳಿದು ಸರ್ಕಾರ ತಿಪ್ಪಗೊಂಡನ ಹಳ್ಳಿಯಿಂದ ದಿನಕ್ಕೆ ಹತ್ತು ಮಿಲಿಯನ್ ಗ್ಯಾಲನ್ ನೀರನ್ನು ಹೆಚ್ಚಿಸಬೇಕಾಗಿದೆ. ಇದಕ್ಕೆ ಮೂರನೆಯ ಪೈಪ್‌ಲೈನ್ ಕೆಲಸವನ್ನು ಪೂರೈಸಬೇಕು. ಅದನ್ನೂ ಪೂರೈಸದೆ ಇರುವುದು ವಿಷಾದರಕ. ಇದನ್ನು ಜಾಗ್ರತೆ ಮುಗಿಸಬೇಕು. ಇದಕ್ಕೆ ಬೇಕಾದ ಪಂಪ್ ಸೆಟ್‌ಗಳನ್ನು ತರಿಸುವುದಕ್ಕೆ ಒಂದುವರೆ ಲಕ್ಷ ರೂಪಾಯಿ ವಿದೇಶಿ ವಿನಿಮಯ ಸಿಕ್ಕಿಲ್ಲವೆಂದು ಗೊತ್ತಾಗಿದೆ. ಇದು ನಿಜವೇ ಎಂದು ಕೇಳುತ್ತಿದ್ದೇನೆ. ಇಂಥ ಮುಖ್ಯ ಕೆಲಸಕ್ಕೆ ಕೇಂದ್ರ ಸರ್ಕಾರ ಇಷ್ಟು ಸಣ್ಣ ಪ್ರಮಾಣದ ವಿದೇಶಿ ವಿನಿಮಯವನ್ನು ಕೊಡುವುದಿಲ್ಲವೆ? ಸರ್ಕಾರ ಈ ಬಗ್ಗೆ ಕೂಲಂಕಷವಾಗಿ ವಿಚಾರಿಸಿ ನಗರಕ್ಕೆ ಹೆಚ್ಚಿಗೆ ನೀರು ಸಿಕ್ಕುವ ಹಾಗೆ ಮಾಡಬೇಕು. ಈ ಕಾರ್ಯವನ್ನು ಯುದ್ಧ ಸಮಯದ ಕಾರ್ಯದ ಹಾಗೆ ತಿಳಿದು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲದೆ ಹೋದರೆ ಬೆಂಗಳೂರಿನ ಜನತೆಗೆ ಬಹಳ ತೊಂದರೆಯಾಗುತ್ತದೆ. ಒಂದು ದಿನಕ್ಕೆ ಮೂರು ಮಿಲಿಯನ್ ಗ್ಯಾಲನ್ ನೀರನ್ನೂ ಹೆಚ್ಚಿಗೆ ಕೊಡಬೇಕಾದರೆ ಮೂರನೆಯ ಪೈಪ್‌ಲೈನ್ ಕೆಲಸ ಪೂರೈಸಬೇಕು, ಈ ಕೆಲಸ ಪೂರೈಸುವುದಕ್ಕೆ ಒಂದು ವರ್ಷವಾಗುತ್ತದೆ. ಆಗ ಕಿಂಚಿತ್ತಾದರೂ ಪರಿಹಾರ ಕೊಡಬಹುದು. ಅಲ್ಲದೆ ಇದಕ್ಕೆ ಬೇಕಾದ Values ಕಲ್ಕತ್ತದಿಂದ ಬರಬೇಕು ಎಂದು ತಿಳಿದಿದೇನೆ. ಇದನ್ನು ಕೂಡಲೇ ತರಿಸುವ ವ್ಯವಸ್ಥೆ ಮಾಡಬೇಕು. ಬೆಂಗಳೂರಿಗೆ ಇರುವ ನೀರಿನ ಕಷ್ಟವನ್ನು ಕೊನೆಗಾಣಿಸಲು ಕಾವೇರಿ ಯೋಜನೆಯನ್ನು ಕಾರ್ಯಗತ ಮಾಡಲು ತಕ್ಷಣ ಕಾರ್ಯಕ್ರಮ ಕೈಗೊಳ್ಳಬೇಕೆಂದು ಮಾನ್ಯ ಪಬ್ಲಿಕ್ ವರ್ಕ್ಸ್ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. P. W. D ಮಂತ್ರಿಗಳೂ ಮಾನ್ಯ ಮುಖ್ಯ ಮಂತ್ರಿಗಳೂ ಎಷ್ಟು ಉತ್ಸಾಹದಿಂದ ಕೆಲಸ ಮಾಡುತ್ತಾರೆಯೋ ಅಷ್ಟೇ ಉತ್ಸಾಹದಿಂದ ಇಲಾಖಾಧಿಕಾರಿಗಳೂ ಕೆಲಸ ಮಾಡಿದರೆ ಪಬ್ಲಿಕ್ ವರ್ಕ್ಸ್ ಶಾಖೆಯ ಕೆಲಸ ಯಶಸ್ವಿಯಾಗಿ ನಡೆಯುತ್ತದೆಂದು ಹೇಳಿ ಹೆಚ್ಚು ಕಾಲಾವಕಾಶವಿಲ್ಲದರಿಂದ ನನ್ನ ಮಾತನ್ನೂ ಮುಗಿಸಿ, ಈ ಬೇಡಿಕೆಗಳನ್ನು ಸಮರ್ಥನೆ ಮಾಡಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

†ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಷಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರದವರು ನಮ್ಮ ಮುಂದೆ ಚಿಕ್ಕನೀರಾವರಿಗಳು, ಕಟ್ಟಡ, ಬ್ರಿಡ್ಜ್‌ಗಳು ಈ ಬಗ್ಗೆ ಇಟ್ಟಿರುವ ಬೇಡಿಕೆಗಳನ್ನು ಸ್ವಾಗತಿಸಲು ಸಂತೋಷ ಪಡುತ್ತೇನೆ. ಬಿಜಾಪುರ ಜಿಲ್ಲೆಯೊಗಳಗೆ ಚಿಕ್ಕನೀರಾವರಿ ಕೆಲಸಗಳನ್ನು ಮಾಡಬೇಕಾಗಿದೆ ಅಲ್ಲಿ ಚಿಕ್ಕನೀರಾವರಿಗಳು ಇಲ್ಲದ ದೆಸೆಯಿಂದ ಐದು ವರ್ಷಗಳಲ್ಲಿ ಮೂರು ವರ್ಷ ಬರಗಾಲ ಬರುತ್ತದೆ. ನೀರಾವರಿ ಅನುಕೂಲ ಒದಗಿಸಿದರೆ ಈ ತೊಂದರೆಯನ್ನು ನಿವಾರಣೆ ಮಾಡಬಹುದು. ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿಗೆ ಕೃಷ್ಣಾ ನದಿಯ ನೀರು ಬರುವಹಾಗಿಲ್ಲ. ಬೇರೆ ಪ್ರಾಜೆಕ್ಟಿನಿಂದಲೂ ನೀರು ಬರುವಹಾಗಿಲ್ಲ. ಚಿಕ್ಕ ಚಿಕ್ಕ ನೀರಾವರಿ ಕೆಲಸಗಳನ್ನು ತೆಗೆದುಕೊಂಡರೆ ಅನುಕೂಲವಾಗುತ್ತದೆ. ಬಾಗೇವಾಡಿ ತಾಲ್ಲೂಕಿನಲ್ಲಿ ಮುದಗಿ ಕೆರೆ, ಕುಪ್ಪಕೋಟಿ ಕೆರೆ ಇಂಥ ಮೂರುನಾಲ್ಕು ಕೆರೆ ಕೆಲಸ ಆಗುವುದಿದೆ. ಆ ಕೆರೆ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಬಿಜಾಪುರ ತಾಲ್ಲೂಕಿನಲ್ಲಿ ಡೋಣ ನದಿ ದಡದಲ್ಲಿ ಟ್ಯೂಬ್‌ವೆಲ್ಸ್ ಹಾಕಬೇಕೆಂದು ಮುಂಬೈ ಸರ್ಕಾರದವರು ತೀರ್ಮಾನ ಮಾಡಿದ್ದರು. ಇಲ್ಲಿ ಟ್ಯೂಬ್‌ವೆಲ್ಸ್ ಅಭಿವೃದ್ಧಿ ಮಾಡಿದರೆ ಆ ತಾಲ್ಲೂಕಿಗೆ ಅನುಕೂಲವಾಗುತ್ತದೆ.

ಈ ಡೋಣ ನದಿಯಿಂದ ಮಣ್ಣು ಕೊಚ್ಚಿ ಹೋಗಿ ಅಕ್ಕಪಕ್ಕದ ಜಮೀನೆಲ್ಲ ಉಪಯೋಗವಿಲ್ಲದೆ ಆಗುತ್ತಿದೆ. ಇದು ಉಪ್ಪು ನೀರಿನಿಂದ ಕೂಡಿರುವುದರಿಂದ ಆ ನೀರು ವ್ಯವಸಾಯಕ್ಕೆ ಉಪಯೋಗವಾಗುವುದಿಲ್ಲ. ಈ ನದಿಯ ದೆಸೆಯಿಂದ ಸುಮಾರು 20 ಸಾವಿರ ಎಕರೆ ಒಳ್ಳೆಯ ಕರಿ ಭೂಮಿ ಉಪ್ಪಾಗಿ ಹತ್ತಿ ಬೆಳೆಯುವುದಕ್ಕೆ ಸಾಧ್ಯವಿಲ್ಲದೆ ಹೋಗಿ ಬಹಳ ಲುಕ್ಸಾನಾಗುತ್ತಿದೆ. ಇದರಿಂದ ಮಣ್ಣು ಕೊಚ್ಚಿಕೊಂಡು ಹೋಗಿ ಅಕ್ಕಪಕ್ಕದ ಜಮೀನುಗಳಿಗೆ ನಷ್ಟವಾಗದಿರಲು ಒಂದು ಬ್ರಿಡ್ಜ್ ಆದರೆ 20 ಸಾವಿರ ಎಕರೆಗೆ ಅನುಕೂಲ ಮಾಡಿಕೊಟ್ಟಹಾಗೆ ಆಗುತ್ತದೆ. ಇದನ್ನು ಲಗೂನೆ ತೆಗೆದುಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ವಿಷಯದಲ್ಲಿ ಮುಖ್ಯಮಂತ್ರಿಯವರಿಗೆ ಒಂದು ಪ್ರಶ್ನೆ ಹಾಕಿದಾಗ 1963ನೆಯ ಇಸವಿಯಲ್ಲಿ ಬಿಜಾಪುರ ಜಿಲ್ಲೆಗೆ ಕೊಡುವುದಾಗಿ ಹೇಳಿದ್ದಾರೆ. ಬಹಳ ಸಂತೋಷ. ಅವರು ಕೊಟ್ಟೇ ಕೊಡುತ್ತಾರೆಂಬ ನಂಬಿಕೆ ಇದೆ. ಶರಾವತಿಯಿಂದ ಬಾಗಲಕೋಟೆಯವರೆಗೂ ಲೈನ್ ಹಾಕಲು ಸರ್ವೆ ಆಗಿದೆ. ಆ ಕೆಲಸ ಬಿಜಾಪುರದ ತನಕ ಆಗಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಎಂಟು ದಿವಸದಲ್ಲಿ ಮೂರು ದಿವಸ ಲೈಟ್ ಇಲ್ಲದೆ ಕಂದೀಲು ಇಟ್ಟುಕೊಳ್ಳಬೇಕಾಗಿದೆ. ಆದ್ದರಿಂದ ಬಿಜಾಪುರದ ತನಕ ಸರ್ವೆ ಕೆಲಸವನ್ನು ಲಗೂನೆ ಮಾಡಿಸಿ ಶರಾವತಿಯಿಂದ ವಿದ್ಯುಚ್ಛಕ್ತಿಯನ್ನು ಕೊಡಿಸಬೇಕು.

ರಸ್ತೆ ಮತ್ತು ಬ್ರಿಡ್ಜ್ ವಿಚಾರಕ್ಕೆ ಬಂದರೆ ಮುಳವಾಡ ಮತ್ತು ಆಲಮಟ್ಟಿ ರಸ್ತೆಗಳನ್ನು ತಾವು ತೆಗೆದುಕೊಳ್ಳಬೇಕು. ಬಾಗಲಕೋಟೆಯಿಂದ ಬಿಜಾಪುರಕ್ಕೆ ಬರಬೇಕಾದರೆ ಬ್ರಿಡ್ಜ್ ಇಲ್ಲದೆ ಇರುವುದರಿಂದ ಸುತ್ತಿಕೊಂಡು ಬರಬೇಕು. ಇದನ್ನು ಮಾಡಿದರೆ ನಮಗೆ ಬೆಂಗಳೂರಿಗೆ ಬರುವದಕ್ಕೂ ಅನುಕೂಲವಾಗುತ್ತದೆ. ನಮಗೆ ವರ್ಷದಲ್ಲಿ ನಾಲ್ಕು ತಿಂಗಳು ಬರುವುದಕ್ಕೆ ಬಹಳ ಕಷ್ಟವಾಗಿರುವುದರಿಂದ ಈ ಬ್ರಿಡ್ಜ್ ತೆಗೆದುಕೊಳ್ಳಬೇಕು.

ಪ್ರತಿ ತಾಲ್ಲೂಕಿನಲ್ಲಿಯೂ 50 ಮೈಲಿ ಗ್ರಾಮಾಂತರ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದರು. ಇದನ್ನು ನೋಡಿಕೊಳ್ಳಲು ತಾಲ್ಲೂಕ್ ಬೋರ್ಡಿನಲ್ಲಿ ಹಣವಿರುವುದಿಲ್ಲ. ಈ ರಸ್ತೆಗಳಿಂದ ರೈತರ ಭೂಮಿ ಹೋಗಿದೆ. ಈ ರಸ್ತೆಗಳಲ್ಲಿ ಗಾಡಿ ಹೋಗುವದಕ್ಕೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಈ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿ ಎಷ್ಟು ಸಾಧ್ಯವಾದರೆ ಅಷ್ಟು ರಸ್ತೆಯನ್ನಾದರೂ ಚೆನ್ನಾಗಿ ಮಾಡಿ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ರಸ್ತೆ ಕೆಲಸಕ್ಕಾಗಿ ಭೂಮಿಯನ್ನು ತೆಗೆದು ಕೊಂಡದ್ದರಿಂದ ರೈತರಿಗೆ ಬೆಳೆ ತೆಗೆಯಲು ಅನುಕೂಲವಿಲ್ಲದೆ ರಸ್ತೆಯಲ್ಲಿ ತಿರುಗಾಡಲೂ ಅನುಕೂಲವಿಲ್ಲ. ಹೀಗೆ ತೆಗೆದು ಕೊಂಡಿರುವ ಭೂಮಿಯಲ್ಲಿ ದೇವಸ್ಥಾನದ ಪೂಜಾರಿಗಳ ಭೂಮಿಯೂ ಇದೆ. ಅವರಿಗೆ ಭೂಮಿಯಲ್ಲಿ ಏನು ಉತ್ಪನ್ನ ಸಿಕ್ಕುತ್ತಿತ್ತೋ ಅದರಿಂದ ಜೀವನ ಮಾಡುತ್ತಿದ್ದರು. ಈಗ ಅವರಿಗೆ ಆ ಭೂಮಿಯಿಂದ ಏನೂ ಸಿಕ್ಕುವುದಿಲ್ಲ. ಇದರ ದೆಸೆಯಿಂದ ದೇವಸ್ಥಾನದ ಭೂಮಿ ಹೋದದ್ದಲ್ಲದೆ ಪೂಜಾರಿಗಳಿಗೆ ಉತ್ಪನ್ನ ಬರುತ್ತಿದ್ದುದೂ ನಿಂತು ಹೋಗಿದೆ. ಆದುದರಿಂದ ಇವರಿಗೆ ಈ ಭೂಮಿಯಿಂದ ವರ್ಷೇ ವರ್ಷೇ ಎಷ್ಟು ಉತ್ಪನ್ನ ಬರುತ್ತಿತ್ತೋ ಅಷ್ಟು ಹಣವನ್ನು ಪ್ರತಿವರ್ಷವೂ ಸರ್ಕಾರ ಇವರಿಗೆ ಕೊಡುವದಕ್ಕೆ ವ್ಯವಸ್ಥೆ ಮಾಡಬೇಕು.

1963-64ನೇ ಸಾಲಿನೊಳಗೆ ಬಿಜಾಪುರ ಜಿಲ್ಲೆಯೊಳಗೆ ವಿದ್ಯುಚ್ಛಕ್ತಿ ಬರುತ್ತದೆಂದು ಹೇಳಿದ್ದಾರೆ. ಅದು ಸಂತೋಷದ ಸಂಗತಿ ಎಂದು ಹೇಳಿ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನಾನು ರಜ ತೆಗೆದುಕೊಳ್ಳುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ಲೋಕೋಪಯೋಗಿ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟ ಸಾರ್ವಜನಿಕ ಕಾಮಗಾರಿಗಳು ಹಾಗೂ ಅದಕ್ಕೆ ಸಂಬಂಧಪಟ್ಟ ಇತರ ಬೇಡಿಕೆಗಳ ಬಗ್ಗೆ ಈಗಾಗಲೇ ಈ ಸಭೆಯಲ್ಲಿ ಸದಸ್ಯರು ಅದರ ಆಗು ಹೋಗುಗಳನ್ನು ತಿಳಿಸಿದ್ದಾರೆ. ಮುಖ್ಯವಾಗಿ ಸರ್ಕಾರದ ಆಯವ್ಯಯ ಅಂದಾಜಿನಲ್ಲಿ ಅರ್ಧಕ್ಕಿಂತ ಹೆಚ್ಚು ಹಣವನ್ನು ಈ ಖಾತೆಗೆ ಖರ್ಚುಮಾಡುವಾಗ ಅದು ಸದ್ವಿನಿಯೋಗವಾಗುತ್ತದೆಯೋ ಇಲ್ಲವೋ ಎನ್ನುವುದನ್ನು ನೋಡುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ.

ಸರ್ಕಾರ ಇವೊತ್ತಿನ ದಿವಸ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕೆನ್ನುವ ದೃಷ್ಟಿಯಿಂದ ಸಣ್ಣ ನೀರಾವರಿ, ದೊಡ್ಡ ನೀರಾವರಿ ಮತ್ತು ವಿದ್ಯುತ್ ಉತ್ಪಾದನೆ ಇವುಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುವುದು ಸ್ವಾಗತಾರ್ಹವಾದುದು. ಸಣ್ಣ ನೀರಾವರಿ ಯೋಜನೆಯ ಬಗ್ಗೆ ಸಾಕಷ್ಟು ಬಾವಿಗಳನ್ನು ಮಳೆ ಇಲ್ಲದ ಪ್ರದೇಶಗಳಲ್ಲಿಯೂ, ಮಳೆ ಇಲ್ಲದೆ ಬರಬೀಳತಕ್ಕ ಪ್ರದೇಶಗಳಲ್ಲಿಯೂ ಹೆಚ್ಚು ಹೆಚ್ಚಾಗಿ ತೋಡಿಸುತ್ತಿರುವುದು ಎಲ್ಲರಿಗೂ ಕಂಡ ವಿಷಯ.

(ಶ್ರೀ ಸಿದ್ದಯ್ಯ ಕಾಶೀಮಠ)

ಇದರಿಂದ ಮಳೆಯಿಲ್ಲದ ಪ್ರದೇಶದಲ್ಲಿ ನೀರಾವರಿಯುಂಟಾಗಿದೆ. ಇಂಥ ಬಾವಿಗಳಿಗೆ 3,000 ರೂಪಾಯಿಗಳನ್ನು ಸರ್ಕಾರದವರು ಕೊಡಬೇಕು ಎಂದು ಇಟ್ಟುಕೊಂಡಿದ್ದಾರೆ. ಆದರೆ ಕೆಲವು ಕಡೆ ನಾವು ಹೋಗಿ ನೋಡಲಾಗಿ ಒಂದು ಬಾವಿ ತೆಗೆಯಬೇಕಾದರೆ ಐದಾರು ಸಾವಿರ ರೂಪಾಯಿ ಖರ್ಚು ಬೀಳತಕ್ಕ ಪರಿಸ್ಥಿತಿ ಬಂದಿದೆ. ಆದುದರಿಂದ ಬಾವಿ ಕೆಲಸಕ್ಕೆ ಹಣವನ್ನು ಕೊಡುವಾಗ ಆ ಜಾಗದ ಯೋಗ್ಯತೆ, ಅಲ್ಲಿಂತಕ್ಕ ಪರಿಸ್ಥಿತಿ ಇವುಗಳನ್ನು ನೋಡಿ percentage ಮುಖಾಂತರ ಅಥವಾ ಒಂದು ಬಾವಿಗೆ ನಾಲ್ಕು ಸಾವಿರ ರೂಪಾಯಿನಂತೆ ಕೊಟ್ಟರೆ ಸರಿಹೋಗುತ ದೆಂದನ್ನಿಸುತ್ತದೆ.

ಸಣ್ಣ ನೀರಾವರಿ ಯೋಜನೆಗಾಗಿ ಭಾವಿಗಳನ್ನು ತೆಗೆಸಬೇಕಾದರೆ ಜನ ಅವರ ಜಮೀನನ್ನು ಅಡ ಹಾಕಬೇಕಾಗುತ್ತದೆ. ನಮ್ಮಲ್ಲಿ ಎಷ್ಟೋ ಕಡೆಗಳಲ್ಲಿ ಈ ಪರಿಸ್ಥಿತಿ ಇದೆ. ಇಂತಹ ಭಾಗಗಳಲ್ಲಿ ಪಾತ್ರ, ನೆಟ್ಟುಗಳನ್ನು ಹಾಕಲು ಸರಕಾರ ಸ್ವಲ್ಪ ಹಣ ಸಹಾಯ ಮಾಡಿಕೊಟ್ಟರೆ ಈ ರೈತರಿಗೆ ಉಪಯೋಗವಾಗುತ್ತದೆ, ಇಲ್ಲದಿದ್ದರೆ ಇವರುಗಳು ಪಂಪು ಸೆಟ್ಟುಗನ್ನೇಕೆ ತೆಗೆದ ಕೊಳ್ಳುವುದಕ್ಕಾಗುವುದಿಲ್ಲ ಎಂದು ಬಿಟ್ಟುಬಿಡುತ್ತಾರೆ. ಇದು ಅಲ್ಲಿನ ಜನರ ನಿಸ್ಸಹಾಯಕತೆಯನ್ನು ತೋರಿಸುತ್ತದೆ. ಇಂತಹ ಪರಿಸ್ಥಿತಿಗಳಿರುವ ಕಡೆಗಳಲ್ಲಿ, ಇದಕ್ಕೆ ಬೇಕಾದಷ್ಟು ಹಣವನ್ನು ಬಾವಿಗಳಿಗೆ ಕೊಡುವ ಹಣದ ಜೊತೆಗೇ ಕೂಡಿಸಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ಎಂದು ಹೇಳುತ್ತೇವೆ.

ದೊಡ್ಡ ನೀರಾವರಿಗಳ ಬಗ್ಗೆ ಹೇಳುವುದಾದರೆ ಸರಕಾರ ಎಲ್ಲ ಭಾಗದಲ್ಲಿಯೂ ಸಾಕಷ್ಟು ಮಾಡಿದ್ದಾರೆ. ಆದರೆ ನಮ್ಮ ಶಿರಹಟ್ಟಿಯ ಬಳಿ ಮದ್ದೂರು ಡ್ಯಾಂ ಎನ್ನುವ ಕಟ್ಟೆಯನ್ನು ಸುಮಾರು 5-6 ವರ್ಷಗಳಿಂದಲೂ ಕಟ್ಟಬೇಕೆಂದಿದ್ದು ಇದರಿಂದ ಸುಮಾರು 2400 ಎಕರೆಯಷ್ಟು ಭೂಮಿ ಸಾಗುವಳಿಯಾಗುತ್ತದೆ ಎಂದು ಇದಕ್ಕೆ ಎಸ್ಟಿಮೇಟಾಗಿ ಸ್ಯಾಂಕ್ಷನ್ನೂ ಆಗಿತ್ತು. ಹಿಂದಿದ್ದ ಮುಖ್ಯ ಮಂತ್ರಿಗಳು ಇದರ ಬಗ್ಗೆ ತೀವ್ರವಾಗಿ ಸ್ಯಾಂಕ್ಷನ್ನು ಮಾಡಿಕಳುಹಿಸುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದರು. ನಮ್ಮ ಭಾಗಕ್ಕೆ ಇದು ಅತ್ಯವಶ್ಯಕವಾಗಿ ಬೇಕಾದದು. ಇಲ್ಲಿ ಒಂದು ಹಳ್ಳವಿದೆ. ಇದರ ಸುತ್ತಮುತ್ತಲಿನ ಜನಕ್ಕೆ ಅನುಕೂಲವಾಗುವಂತೆ ಈ ಮದ್ದೂರು ಡ್ಯಾಂ ಅನ್ನು ಕಟ್ಟಿದರೆ 5400 ಎಕರೆಯಷ್ಟು ಜಮೀನು ಸಾಗುವಳಿಯಾಗುತ್ತದೆ ಎಂದು ಇತ್ತು. ಈಗ ಇನ್ನೂ 4000 ಎಕರೆಗಳಷ್ಟು ಭೂಮಿಗೂ ನೀರು ಸಾಕಷ್ಟು ಸಿಗುತ್ತದೆ. ಇದರಿಂದ ಇಲ್ಲಿನ ಜನತೆಗೂ ಅನುಕೂಲವಾಗುತ್ತದೆ. ಇದಕ್ಕೋಸ್ಕರ ಎಸ್ಟಿಮೇಟು ಕೂಡ ಆಗಿತ್ತು. ಈಗಲಾದರೂ ಜಾಗ್ರತೆ ಈ ಮದ್ದೂರು ಡ್ಯಾಂ ಅನ್ನು ಮಾಡಿಸಿ ಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ನೀರಾವರಿ ಭಾವಿಗಳ ಮತ್ತು ಕೆರೆಗಳ ಮುಖೇನ ನಾವು ವ್ಯವಸಾಯ ಮಾಡಬೇಕಾದರೆ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ಬೇಕೇಬೇಕು. ಇದಕ್ಕೆ ಯೋಜನೆಯನ್ನು ಪೂರೈಸಿ ಸಾಕಷ್ಟು ವಿದ್ಯುತ್ತನ್ನು ಎಲ್ಲ ಗ್ರಾಮಾಂತರ ಪ್ರದೇಶಗಳಿಗೂ ಒದಗಿಸುತ್ತೇವೆಂದು ಹೇಳುತ್ತಾರೆ. ಅದೇ ರೀತಿ ಮೊನ್ನೆ ದಿವಸ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಶರಾವತಿ ಯೋಜನೆ 1967 ರ ವೇಳೆಗೆ ಮುಗಿಯಬಹುದು. ಆದರೆ ಇದರ ಒಂದು ಯೂನಿಟ್ಟಾದರೂ ಮುಗಿದರೆ ಅದರಿಂದ ಎಷ್ಟೋ ಭಾಗಗಳಿಗೆ ವಿದ್ಯುತ್ತಿನ ಅನುಕೂಲಗಳು ಸಿಗುತ್ತವೆ. ಇದೇ ರೀತಿ ಕಾವೇರಿ ಮತ್ತು ಕಾಳೀ ನದಿಯ ವಿದ್ಯುತ್ ಯೋಜನೆಗಳು, ಇವು ಮೂರು ಯೋಜನೆಗಳೂ ಬಹಳ ಅಗತ್ಯವಾದವುಗಳು. ಇದರಿಂದ ಸಾಕಷ್ಟು ವಿದ್ಯುಚ್ಛಕ್ತಿ ಪೂರೈಕೆಯಾಗುತ್ತದೆ. ಅದರ ಸಲುವಾಗಿ ಈ ಮೂರು ಯೋಜನೆಗಳನ್ನು ತೀವ್ರವಾಗಿ ತೆಗೆದುಕೊಂಡು ಹಳ್ಳಿಗಳ ಕಡೆಗೆ ಹೆಚ್ಚಿನ ವಿದ್ಯುಚ್ಛಕ್ತಿ ಕೊಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇವೆ.

ಈ ಸಂದರ್ಭದಲ್ಲಿ ಮೇಲಿಂದ ಮೇಲೆ ಇಲ್ಲಿ ಕೃಷ್ಣಾ-ಗೋದಾವರಿ ನೀರಿನ ಪ್ರಶ್ನೆ ಉದ್ಭವವಾಗುತ್ತದೆ. ಇದರ ಬಗ್ಗೆ ಮೊನ್ನೆ ದಿವಸ ಚೀಫ್ ಮಿನಿಸ್ಟರವರು ಉತ್ತರ ಕೊಡುತ್ತಾ ಈ ನದಿಗಳಿಂದ ನ್ಯಾಯವಾದ ನೀರಿನ ಪಾಲನ್ನು ಹಂಚುವಿಕೆಯಲ್ಲಿ ಪಡೆಯುತ್ತೇವೆನ್ನುವ ಭರವಸೆ ಹೊಂದಿದ್ದೇವೆಂದು ಹೇಳಿರುವುದನ್ನು ನಾವೂ ಒಪ್ಪಬೇಕಾಗುತ್ತದೆ.

ಇನ್ನು ಕೆರೆಗಳ ಬಗ್ಗೆ ಹೇಳುವಾಗ ನಮ್ಮ ತಾಲ್ಲೂಕಿನ ಕೆರೆಗಳ ಬಗ್ಗೆ ಮೊನ್ನೆ ದಿವಸ ಪ್ರಶ್ನೆ ಬಂದಾಗ ಕೂಡ ಹೇಳಿದರೂ, ಇಲ್ಲಿ ಕೇವಲ ನಾಲ್ಕು ಕೆರೆಗಳು ಇವೆ. ಅವು ಹೂತು ಹಾಳಾಗಿವೆ. ಇದರಲ್ಲಿ ಹದಿನೈದು ವರ್ಷಗಳಿಂದಲೂ ಹೂಳು ತೆಗೆದಿಲ್ಲ, ಇದರ ಕಡೆಗೆ ಸರಕಾರದ ಗಮನವೇ ಇನ್ನೂ ಹರಿದಿಲ್ಲ. ಆದಷ್ಟು ಮಟ್ಟಿಗೆ ಇಂತಹ ಹಳೆಯ ಕೆರೆಗಳನ್ನೂ ದುರಸ್ತು ಮಾಡಿಕೊಟ್ಟರೆ ನೀರಾವರಿ ಸಲುವಾಗಿ ಅಭಿವೃದ್ಧಿ ಮಾಡಿಕೊಳ್ಳಬಹುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹೊಸ ಕೆರೆ ಮಾಡುವ ವಿಚಾರದಲ್ಲಿ ನಮ್ಮ ಭಾಗದ ಅಡವೀಕೆರೆ ಎನ್ನುವುದನ್ನು ಮಾಡಲು ಸುಮಾರು ಎರಡು ಲಕ್ಷ ರೂಪಾಯಿಗಳ ಅಂದಾಜು ಒಂದು ಆಗಿತ್ತು. ಇದರ ಬಗ್ಗೆ ಯೋಜನೆ ಕೂಡ ಆಗಿತ್ತು. ಇದನ್ನು ಕೂಡ ತೀವ್ರತೆಯಿಂದ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಹಳ್ಳಿಗಳಲ್ಲಿ ಪಂಪು ಸೆಟ್ಟುಗಳನ್ನುಪಯೋಗಿಸಿ ನೀರನ್ನು ತೆಗೆಯಬೇಕೆಂದು ಸರಕಾರದವರು ಹೇಳುತ್ತಿದ್ದಾರೆ. ಆ ರೀತಿ ನಮ್ಮ ಭಾಗದಲ್ಲಿಯೂ ಪಂಪು ಸೆಟ್ಟುಗಳನ್ನು ಹಾಕಿ ನೀರು ತೆಗೆದು ನಿರ್ಮಾಣ ಕೆಲಸಕ್ಕೆ ಸಹಾಯ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ರಸ್ತೆಗಳ ಬಗ್ಗೆ ಹೇಳುವುದಾದರೆ, ನಮ್ಮ ಭಾಗದಲ್ಲಿ ನಾಲ್ಕೈದು ತರಹದ ರಸ್ತೆಗಳಿವೆ, ಇದರಲ್ಲಿ National Highways, State Roads and, Rural Communications Roads and T. D. Roads ಇದರಲ್ಲಿರುವ, ಟಿ. ಡಿ. ರೋಡುಗಳನ್ನು ಪಿ. ಡಬ್ಲ್ಯು. ಡಿ. ಇಲಾಖೆಯವರೇ ತೆಗೆದುಕೊಳ್ಳುತ್ತಾರೆ ಎಂದು ಇದ್ದರೂ ಇದರಲ್ಲಿ ಯಾವುದೂ ಸರಿಯಾಗಿ ಗೊತ್ತಾಗುತ್ತಿಲ್ಲ, ಹಿಂದೆ ಇದ್ದ ಡಿ. ಬಿ. ರೋಡುಗಳು ಈಗ ಟಿ. ಡಿ. ಬೋರ್ಡುಗಳ ಕೈಗೆ ಬಂದಿವೆ, ಆದುದರಿಂದ ಅವಶ್ಯಕ ವಾಗಿರುವ ರೋಡುಗಳ ಕಡೆಗೆ ಹೆಚ್ಚಿಗೆ ಪ್ರಾಶಸ್ತ್ಯಕೊಟ್ಟು ಅದನ್ನು ರಿಪೇರಿ ಮಾಡಬೇಕು. ನ್ಯಾಷನಲ್ ಹೈವೇಸ್ ರೋಡುಗಳಿಗಾಗಿ ಕೇಂದ್ರ ಸರಕಾರದವರು ಸಾಕಷ್ಟು ಹಣವನ್ನು ಕೊಡುತ್ತಿದ್ದಾರೆ ಅವರಿಂದಾಗಿ ಈಗ ಈ ರಸ್ತೆಗಳ ರಿಪೇರಿ ಕೆಲಸ ಬಹಳ ಉತ್ತಮ ರೀತಿಯಲ್ಲಿ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ, ಸ್ಟೇಟ್ ಫಂಡು ರೋಡುಗಳಲ್ಲಿಯೂ ಕೂಡ ಎಷ್ಟೋ ಕೆಲಸಗಳಿಗಾಗಿ ಅಂದಾಜಾಗಿತ್ತು, ಆದರೆ ತುರ್ತಿನ ಪರಿಸ್ಥಿತಿಯಿಂದಾಗಿ ಈ ಕೆಲಸಗಳು ಹಾಗೆಯೇ ನಿಂತಿವೆ. ಇನ್ನು ರೂರಲ್ ಕಮ್ಯೂನಿಕೇಷನ್ಸಿನ ರೋಡುಗಳ ಬಗ್ಗೆ ಹೇಳುವಾಗ, ಹಿಂದಿದ್ದ ಮಂತ್ರಿಗಳು ಪ್ರತಿ ತಾಲ್ಲೂಕಿನಲ್ಲೂ 50 ಮೈಲುಗಳಷ್ಟು ರಸ್ತೆಯನ್ನು ಸರಕಾರದವರೇ ಪೂರೈಸಿಕೊಡುತ್ತಾರೆಂದು ಹೇಳಿದ್ದರು ರೂರಲ್ ಕಮ್ಯೂನಿಕೇಷನ್ಸ್ ರೋಡುಗಳು ಯಾವ ತಾಲ್ಲೂಕಿನಲ್ಲಿ 50 ಮೈಲುಗಳಷ್ಟು ರಸ್ತೆಯನ್ನು ಮಾಡಿಲ್ಲವೋ ಅಲ್ಲೆಲ್ಲಾ ಈ 50 ಮೈಲುಗಳಷ್ಟು ರಸ್ತೆ ಕೆಲಸ ಪೂರೈಕೆ ಮಾಡುತ್ತೇವೆಂದು ಹೇಳಿದ್ದರೂ ನಮ್ಮ ತಾಲ್ಲೂಕಿನಲ್ಲಿ ಕೇವಲ ಆರು ಮೈಲಿ ನಾಲ್ಕು ಫರ್ಲಾಂಗಿನಷ್ಟು ರಸ್ತೆ ಮಾತ್ರ ಆಗಿದೆ. ಆದಷ್ಟು ಮಟ್ಟಿಗೆ ಈ ಭಾಗದಲ್ಲಿ 50 ಮೈಲುಗಳಷ್ಟು ರಸ್ತೆಯನ್ನು ಪೂರ್ಣ ಮಾಡಲಿಕ್ಕೆ ಸಾಹಸಪಡಬೇಕೆಂದು ಹೇಳುತ್ತೇನೆ, ನಮ್ಮಲ್ಲಿರುವ ಎರಡು T. D. Road ಗಳ ಬಗ್ಗೆ ಹೇಳಬಹುದು. ಈ ರಸ್ತೆಗಳನ್ನು ದುರಸ್ತು ಮಾಡದೇ ಇಲ್ಲಿ ಚಕ್ಕಡಿಗಳು ಬಸ್ಸುಗಳು ಹೋಗುವ ಪರಿಸ್ಥಿತಿಯಲ್ಲಿಲ್ಲ. Laxmeswara to Hubli *via* Kundagole ಲಕ್ಷ್ಮೇಶ್ವರದ ಕಡೆಯಿಂದ ಹಳ್ಳಿಗಳಿಗೆ ಹೋಗಲು ಸಾಕಷ್ಟು ರೋಡುಗಳ ವ್ಯವಸ್ಥೆ ಮಾಡಿದರೆ ಇಲ್ಲಿನ ಜನರಿಗೆ ಅನುಕೂಲವಾಗುತ್ತದೆ, Bellati to Itagi *via* Thogod ರಸ್ತೆ ಕೂಡ ಆಗಬೇಕಾಗಿದೆ.

ಇನ್ನು ಬಿಲ್ಡಿಂಗ್ಸ್‌ನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗಾಗಲೇ ಕೆಲವು ಕಡೆ ಇರುವ ಸರಕಾರದ ಬಿಲ್ಡಿಂಗುಗಳು, ಮಳೆ ಬಂದಾಗ ಸೋರುತ್ತವೆ. ಕೆಲವು ಕಡೆ ಬೀಳುವ ಪರಿಸ್ಥಿತಿಯಲ್ಲಿವೆ. ಕೆಲವು ಕಡೆ ಒಂದು ನೂರು ರೂಪಾಯಿಗಳಷ್ಟಾದರು ಖರ್ಚು ಮಾಡಿದರೆ ಕೆಲವು ಬಿಲ್ಡಿಂಗುಗಳನ್ನು ರಿಪೇರಿ ಮಾಡಬಹುದು ಹಾಗೆ ಈಗಲೇ ಮಾಡದೇ ಹೋದರೆ ಮುಂದೆ ಸಾವಿರಾರು ರೂಪಾಯಿಗಳಷ್ಟು ಖರ್ಚು ಬೀಳಬಹುದು. ಆದಷ್ಟು ಮಟ್ಟಿಗೆ ಇಂತಹ ಬಿಲ್ಡಿಂಗುಗಳನ್ನು ರಿಪೇರಿ ಮಾಡಿಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ನಮ್ಮ ತಾಲ್ಲೂಕಿಗೆ ಸೇರಿದ ಲಕ್ಷ್ಮೇಶ್ವರದಲ್ಲಿ ಎಲ್ಲ ಬಿಲ್ಡಿಂಗುಗಳ ಕೆಲಸವನ್ನೂ ತಾಲ್ಲೂಕು ಬೋರ್ಡಿಗೇ ಕೊಡಬೇಕೆಂದು ಹೇಳಿ ಅದರಂತೆ ಕೆಲವು ಕಟ್ಟಡಗಳಿಗೆ ಎಷ್ಟಿಮೇಟುಗಳು ಆಗಿದ್ದರೂ ಕೂಡ ಇವೊತ್ತಿನವರೆಗೂ ಕೆಲಸವಾಗದೇ ಹಾಗೇ ನಿಂತಿವೆ. ನಮ್ಮಲ್ಲಿದ್ದ ಹೈಕೋರ್ಟಿನ ಬಿಲ್ಡಿಂಗಿನ ಕೆಲಸವೂ ಕೂಡ ಅರ್ಧದಲ್ಲೇ ನಿಂತಿದೆ. ಇಂತಹವನ್ನೆಲ್ಲಾ ಪೂರ್ತಿ ಮಾಡಿಸಿ ಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇವೆ.

ಕುಡಿಯುವ ನೀರಿನ ಸಲುವಾಗಿ ಕುಂದಗೋಳ, ಯರೇಬೂದಿ ಹಾಳ ಮತ್ತು ಪಶುಪತಿ ಹಾಳ, ಈ ಭಾಗದಲ್ಲಿ ಜನ ಐದಾರು ಮೈಲುಗಳಷ್ಟು ದೂರ ಹೋಗಿ ಕುಡಿಯುವ ನೀರನ್ನೂ ತರುತ್ತಿದ್ದಾರೆ. ಮೊನ್ನೆ ನಮ್ಮ ಆರ್ಥಿಕ ಮಂತ್ರಿಗಳು ಬೂದಿಹಾಳ, ಪರಮೇಶ್ವರದ ಕಡೆಗೆ ಬಂದಿದ್ದಾಗ ಈ ಜನರು ರೆಪ್ರೆಸೆಂಟೇಶನ್ನು ಕೂಡ ಕೊಟ್ಟಿದ್ದರು. ಕುಡಿಯುವ ನೀರಿಗಾಗಿ ಬಹಳ ಕಷ್ಟಪಡುತ್ತಿದ್ದಾರೆ, ಇದರ ಬಗ್ಗೆ ಸರಿಯಾದ ಒಂದು ಯೋಜನೆಯನ್ನು ತೀವ್ರವಾಗಿ ಮಾಡಲು ತಕ್ಕ ಪ್ರಯತ್ನ ಮಾಡಬೇಕೆಂದು ಹೇಳುತ್ತೇವೆ. ಇದು ನಿಜವಾದ ಸಂಗತಿ ಎನ್ನುವುದು ಸರಕಾರಕ್ಕೆ ಗೊತ್ತಿದೆ. ಇಲ್ಲಿ ಬಾವಿ ತೆಗೆಸಬೇಕೆಂದರೆ ಎಪ್ಪತ್ತು ಅಡಿಗಳಷ್ಟು ತೆಗೆದರೂ ಬರೀ ಎರೆ ಮಣ್ಣು ಸಿಗುವ ಸ್ಥಿತಿ ಇದೆ ಗಟ್ಟಿಯಾದ ಕಲ್ಲು ಸಿಗುವುದಿಲ್ಲ, ಪಶುಪತಿ ಹಾಳಿನ ಹತ್ತಿರ ಇದನ್ನು ಪರೀಕ್ಷೆ ಮಾಡಿ ನೋಡಿಯೂ ಇದ್ದಾರೆ. ಇನ್ನೊಂದು Alternative ಇಲ್ಲದೆ. ಕುಂದಗೋಳದಿಂದ ಟ್ಯಾಪ್‌ಗಳನ್ನು ಹಾಕಿಸಿ ಸುಮಾರು ನಾಲ್ಕು, ನಾಲ್ಕುವರೆ ಮೈಲಿಗಳಷ್ಟು ದೂರದವರೆಗೆ ತಂದರೆ ನೀರು ಬರುತ್ತದೆ ಎನ್ನುತ್ತಾರೆ. ಇದನ್ನು ತರಲು ಪ್ರಯತ್ನ ಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತೇವೆ.

ಕೊನೆಯದಾಗಿ ವಿದ್ಯುತ್ತಿನ ಬಗ್ಗೆ ಕೆಲವು ಮಾತು ಹೇಳಬೇಕಾಗಿದೆ. ವಿದ್ಯುಚ್ಛಕ್ತಿ ಬೋರ್ಡಿನವರು 5 ಸಾವಿರಕೂ, ಮೇಲ್ಪಟ್ಟು ಜನಸಂಖ್ಯೆಯಿರುವ ಹಳ್ಳಿಗಳಿಗೆ ವಿದ್ಯುತ್ತನ್ನು ಪೂರೈಕೆ

(ಶ್ರೀ ಸಿದ್ದಯ್ಯ ಕಾಶಿಮಠ)

ಮಾಡುತ್ತೇವೆಂದು ಹೇಳಿದ್ದರು. ಆದರೆ ನಮ್ಮ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ವಿದ್ಯುತ್ತೇ ಬಾರದ ಪರಿಸ್ಥಿತಿ ಬಂದಿದೆ. ಮೊನ್ನೆ ದಿವಸ ಶಿರಹಟ್ಟಿ ಕಡೆಯಿಂದ ಲೈನು ಹಾಕಬೇಕು. ಎಂದಿದ್ದರೂ ಅಲ್ಲಿ ಅವಾಗೆ ಎಷ್ಟೋ ಆತಂಕಗಳಾಗುತ್ತಿವೆ. ಕಬ್ಬಿಣದ ಕಂಬಗಳಿಲ್ಲ, ವೈರಿಲ್ಲ. ಗೇವೈರಿಲ್ಲ ಹೀಗೆ ಯಾವುದೋ ಒಂದು ನೆಪ ಹೇಳಿಕೊಂಡು ಕೆಲಸ ಮುಂದೂಡುತ್ತಾ ಇದ್ದಾರೆ. ಇದೇ ರೀತಿಯಾಗಿ ಲಕ್ಷ್ಮೇಶ್ವರದಲ್ಲಿಯೂ ಆಗಿದೆ.

ಆ ಎಲೆಕ್ಟ್ರಿಕ್ ಲೈನು ಶಿಗ್ಗಾವಿಯಿಂದ ಗುಡುಗೇರಿ ಮೇಲಿಂದ ಲಕ್ಷ್ಮೇಶ್ವರಕ್ಕೆ 24 ಮೈಲಿ ದೂರ ಆಗುತ್ತದೆ. ಆಮೇಲೆ ಮುಳುಗುಂದದಿಂದ ಲಕ್ಷ್ಮೇಶ್ವರಕ್ಕೆ 9 ಮೈಲಿ ದೂರ ಆಗುತ್ತದೆ. ಈ ಬಗ್ಗೆ ರೆಪ್ರಿಜೆಂಟೇಷನ್ ಕೊಟ್ಟಿದೆ. ಅದರ ಬಗ್ಗೆ ಎಷ್ಟಿಮೇಟು ವಗೈರೆಗಳೆಲ್ಲವೂ ತಯಾರಾಗಿದೆ. ಗದಗ್,—ಮುಳಗುಂದ ಮೇಲೆ ಎಲೆಕ್ಟ್ರಿಕ್ ಲೈನ್ ಹಾಕತಕ್ಕ ಕಾರ್ಯವನ್ನು ತೆಗೆದುಕೊಳ್ಳಬೇಕು. ಶಿಗ್ಗಾವಿ, ಗುಡುಗೇರಿ, ಲಕ್ಷ್ಮೇಶ್ವರ ಈ ಲೈನಿನ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಆದ್ದರಿಂದ ಆದಷ್ಟು ಬೇಗ ಆ ಲೈನಿನಲ್ಲಿ ಕಂಬಗಳನ್ನು ನಿಲ್ಲಿಸಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಒಟ್ಟಿನಲ್ಲಿ ನಮ್ಮ ತಾಲ್ಲೂಕಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ವಿಚಾರದಲ್ಲಿ ಸರ್ಕಾರದವರು ಹೆಚ್ಚು ಗಮನ ಕೊಟ್ಟು 1964ನೇ ಇಸವಿಯ ವೇಳೆಗಾದರೂ ನಮ್ಮ ತಾಲ್ಲೂಕಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†Sri GANJI VEERAPPA (Harihar).—Mr. Speaker, Sir, while dealing with some of the aspects of the Budget regarding the Public Works Department, I prefer to confine myself mostly to river water disputes and specially regarding Godavari, Krishna waters—the burning problem before the State. At the outset, I am thankful ot the Honourable Chief Minister and the Honourable Public Works Minister and friends for having undertaken a trip to Delhi with due difference to the wishes of the members of this House and I am sure that they must have carried their mission successfully, at any rate, created a tempo in Delhi circles regarding our claim for Krishna—Godavari waters. We have got very unfriendly neighbours—I do not want to use a harder or a harsher term than this. If you look at Maharashtra, there is a tendency on their part to divert all the waters of the rivers to Arabian Sea just for the sake of getting power. That will be depriving the other States that are placed in the downstream, of utilising the waters of these rivers for irrigation purposes. It is better to stop the tendency and to bring it to the notice of the Central Government. If you look at the State of Madras, there is a dispute between us and Madras regarding Cauveri waters. In 1924 an agrrement has been entered into between Mysore and Madras with regard to the use of Cauveri waters and they have violated the terms of that Agreement in having put up certain constructions. If we do not take proper action within the time left before us, that is, 12 years, by the end of 1974, we will be losing all our rights to utilise even a drop of water from Cauveri. So it is necessary for the Government of Mysore to plan other projects and complete them within the course of next 12 years so as to make use of Cauveri waters.

With regard to the State of Andhra Pradesh, there is trouble once again with regard to the use of Krishna Godavari waters. The result of all this is that we are likely to deprive ourselves of the use of major quantity of waters to which we are entitled. The facts show that our

claim in Krishna waters is 47½ per cent. When the Gulhati Commission was here, thanks to the Officer and the concerned Minister of the State Government, they had placed our case fully and completely before them and we are convinced that the Gulhati Commission is likely to have appreciated our stand and submitted their report. I do not know why and how this Report of the Gulhati Commission is kept a secret. We have been hearing in the Press statements being given by the Chief Minister of Andhra and other responsible officers from Andhra Pradesh and public men condemning the Gulhati Commission Report. If really they had not known of the recommendations of the Gulhati Commission, they would not have taken an attitude whether of condemning or appreciating the Report. Here only I see that the Report is kept a secret, while in other States the matter is being discussed; in a way indirectly or directly it is being discussed. Whatever it is, whether it is a secret or it is a matter kept open, decency requires that before the Central Government announces it, it must be kept a secret.

With regard to the two projects that are before us—Srisailam and Nagarjunasagar projects, my own apprehension is, if Srisailam project is allowed to go on as it is, I am sure that we will not be left with any water at all here; so also with regard to Nagarjunasagar project. They have also proposed to have power projects both in Srisailam and Nagarjunasagar projects. I do not know how they will get surplus water for the projects and unless and until we bring pressure on the Central Government to see that these power projects are not undertaken, the consequences would be severe. Suppose rightly or wrongly they commence power projects and they produce some power as a result of which some industries are started in Andhra. After some years suppose there is a direction from the Central Government or a Tribunal that we are entitled to certain shares and if we go to court for claiming our share of whatever they are enjoying, I think that is not proper. That may be the attitude the courts may take. So it is not advisable to allow the state of affairs to continue, because it may create prescriptive rights, whether irrigation or power projects, if these two power projects are allowed to go on. Andhra is entitled to only 24 per cent of Krishna waters. Considering the quantum of water that they have already used, their share is exhausted; they are no more entitled to any other share of Krishna waters. During discussion when the Gulhati Commission was here, I believe there was a suggestion made that the Godavari water should be diverted to Krishna, so that other projects are undertaken, without any sort of controversy with any other State and they can have all the lands irrigated; they can even have the power projects. The wisest course for us would be to bring pressure on the Central Government to see that Andhra is made to accept the proposal for the diversion of Godavari waters into Krishna. That may perhaps solve part of our difficulty. What has taken place so far, is, unfortunately the present State of Mysore came into existence in 1956; prior to that, Andhra had gone on with certain projects. When the Planning Commission announced the sharing of waters, they ignored the claims

(SRI GANJI VEERAPPA)

of Mysore State. Perhaps this Government's pressure was not felt on the Centre. The Planning Commission ignored the case of Mysore and they announced the distribution of water to the detriment of Mysore. When the new State of Mysore came into being in 1956, thanks to the Government, they took prompt action. Let us not be misguided by certain controversies outside the House, I am told, by reading certain statements of ex-Minister that the present Ministry has not done its best to safeguard the rights of Mysore. After having gone through the facts and figures placed before us, I feel that these statements are not correct. In 1956 alone, the first stage of Nagarjunasagar Project came into existence. What was done to prevent it? Nothing was done. A suggestion was also made by some quarters that we should go to the Supreme Court and that is the only remedy for us. Why did they not go to Supreme Court? While making the suggestion, I wish to draw the attention of the Members of this House to the legal position.

Are we getting up, Sir?

3-00 P.M.

MR. SPEAKER.—Yesterday, it was announced that there would be no tea-break, so that more Members might participate. The Hon'ble Member may kindly go on.

SRI GANJI VEERAPPA.—I did not know that, Sir.

I may bring to the notice of the Hon'ble Members of this House that Article 31 of the Constitution of India lays down......

[MR. CHAIRMAN (SRI SIDDIAH KASIMATH in the Chair.]

SRI G. V. GOWDA (Palya).—Subsequent to the Re-organisation, suggestions have been made on the floor or this House as well as outside, so that the matter may be taken to the Supreme Court.

SRI GANJI VEERAPPA.—I would like to enlighten the Hon'ble Members of this House to the legal position that if we look at article 131 of the Constitution, it gives exclusive jurisdiction to Supreme Court only on certain matters and the disputes with regard to the sharing of waters is not covered under article 131. Under article 262 of the Constitution, Parliament has got powers to make a law to exclude the jurisdiction of Supreme Court on certain matters, especially with regard to the River Water Disputes, and in 1956 Parliament has enacted a law called "The inter-State Water Disputes Act, 1956". Even so, if you look at Section 11 of this Act, it is very clear that the Supreme Court is devoid of this jurisdiction. Jurisdiction of Supreme Court is taken away to entertain disputes regarding the sharing of waters. So, the position is very clear. If you look at section 11 of this Act, the Supreme Court has got jurisdiction to entertain matters concerning sharing of waters in dispute. So, I am sure, that the quarters from which the suggestion has been made, *i.e.*, that the matter should be

taken to the Supreme Court—they could not examine the legal position so that the matter cannot in any way be taken to Supreme Court. So, we are not helpless, simply because section 11 is there in the Inter-State Water Disputes Act. What is provided under Section 3 of this Act is: "In complaints by State Governments as to water disputes, the Central Government can take action either to remedy or settle any of the complaints made by the concerned State Governments."

Sri G. V. GOWDA.—Supposing they fail to take?

Sri GANJI VEERAPPA.—I am coming to that. Under Section 3 it is stated:

> "If it appears to the Government of any State that a water dispute with the Government of another State has arisen or is likely to arise by reason of the fact that the interests of the State, or of any of the inhabitants thereof, in the waters of an inter-State river or river valley have been, or are likely to be, affected prejudicially by.... the State Government may, in such form and manner as may be prescribed, request the Central Gevernment to refer the water dispute to a Tribunal for adjudication."

Suppose we are aggrieved by the decision of the Central Government or the Central Government fails to see that any settlement does not come into existence amicably between the two States, then the matter can be referred to this Tribunal. What the word used is: '*shall*' Under Section 4 it is stated:

> "When any request under section 3 is received from any State Government in respect of any water dispute and the Central Government is of opinion that the water dispute cannot be settled by negotiations, the Central Government shall, by notification in the Official Gazette, constitute a Water Disputes Tribunal for the adjudication of the water dispute."

So, there is no question of the Central Government exercising its discretion against us. The Central Government shall appoint a Tribunal.

Sri G. V. GOWDA.—If they do not appoint?

Sri GANJI VEERAPPA.—Then, the remedy suggested is there. Suppose the Central Government refuses to appoint such a Tribunal, then by means of a *writ of mandamus* we can approach the High Court of Punjab, which only has got jurisdiction, to issue a writ against the Central Government. Let us imagine an extreme case.

Sri D. DEVARAJ URS (Minister for Labour, Housing and Transport).—There is no discretion given to the Central Government.

Sri GANJI VEERAPPA.—I agree with that.

Sri G. V. GOWDA.—Before 1958, a request has been made on the floor of this House through a resolution requesting the Central Government to constitute a Tribunal, but the Central Government did not constitute a Tribunal.

Sri GANJI VEERAPPA.—The legal position is very clear, because, only for this purpose this Act has been enacted and the Central Government has powers and they shall constitute a Tribunal under the provisions of this Act. This Tribunal is a high-powered body and it has also been laid down that the Tribunal should consist of a Judge of the Supreme Court either an ex-Judge of the Supreme Court, and with him two sitting Judges of High Courts shall be associate Members. Such a high-powered body will form itself as a Tribunal (one Judge and two Assessors). Such a high-powered body has powers to go into the question in detail, and I am sure, my friends will agree that on facts and merits we have got an excellent case. So, we can redress our grievances, we ought to, because our State is economically very backward. During the Budget discussions, criticisms were levelled and rightly too, that we have not been able to improve our economic conditions. How can we improve our economic conditions when only 6 per cent of the total land is irrigated; whereas in the neighbouring State of Andhra it is 26 per cent and in Madras it is 40 per cent, and ours is only 6 per cent? How can our economic conditions improve? So, this is the burning question before us. Unless all of us devote our wholehearted attention to this burning problem, there is no other way of improving our economic conditions. If all these schemes are undertaken, not only will these schemes improve the economic conditions and bring under irrigation more lands also, but also power production will improve, so that our industries may develop. That is why I suggest that even at this stage Sir, a resolution of this Hon'ble House is passed. Let us not have any other resolution on the non-official days. Let us confine ourselves to pass a resolution unanimously because there are no two opinions of this House so far as this aspect is concerned, because it is a question of our State.

Sri G. V. GOWDA.—In 1958, this House has adopted a unanimous resolution.

Sri GANJI VEERAPPA.—I am thankful to the Leader of the Opposition, when he stated that he was even prepared to offer 'Satyagraha'. I am one with him, when I say "all of us are prepared". I can go to any length either to offer 'Satyagraha' or even to resign my membership if it comes to that, if our grievances and our claims are not met by the Central Government. We are all good people in Mysore we are not given to agitations and we are not given to wire-pullings and these measures. I am sure, our goodness may not be mistaken as our weakness and let not the Central Government ignore our claims and proceed passing orders. I am sure, such a situation will not arise.

Sri ANNA RAO GANAMUKHI (Afzalpur).—Central Government cannot decide—it can at the most refer the matter to arbitration.

Sri GANJI VEERAPPA.—Central Government has powers to bring us together and by negotiations let they try their very best—I am sure, they will do it, because that was the object of Members of Parliament of neighbouring States who had met in New Delhi. Of course, they have failed in their attempt. Let there be further attempts between

the Chief Ministers and Ministers concerned, so that an amicable settlement may be arrived at. In the meanwhile, what I suggest is, we must bring pressure on the Central Government that no progress is allowed to be made on these huge and gigantic projects of Andhra Government. That will create certain rights which ultimately we will not be in a position to get over or withstand. By mutual persuasions, arguments and negotiations, let them ask them to stop these works. We have got an excellent case before us. In fact, River Krishna flows in a very large part of the State and our catchment area, cultivable area and the population and the deficit of irrigated land here are factors which go to show that Mysore's case is best and sound. So, Sir, with one voice let us all back up the Government and say let them put forth all the efforts whatever be the sacrifice that will be called for. That is with regard to Krishna and Godavari river disputes. With regard to other aspects concerning the State, I wish to speak one or two points more. Sir, if we take the national Highway here and compare it with neighbouring States, the figure shows that Mysore has only 536 miles whereas Andhra has got 1,416 miles, Madras 1,050 and the undivided Bombay has got 2,660 miles of National Highway. So, our State is the lowest when compared to all the four States round about. So, I request the Government to put pressure that is necessary so that the total mileage of these national highways is brought if not to a higher level, at least up to the level of neighbouring States. Let not this discrimination be made. Take the national highways of Bangalore—Poonna Road and compare it with other national highways. We do not find any improvement there except calling it a National highway. Even the width of the road of the asphalted portion is not increased. With regard to national highway, I hope the Government will certainly take prompt action to see that the total mileage is brought to the same level as that of other States.

With regard to Railways, woe be to our State: nothing has been done to increase the railway lines or the mileage here. A simple request that Hubli—Bangalore Railway line must at least converted into broad-gauge line is not conceded by the Government of India. Whereas I am told Poona—Miraj is going to be converted into broadgauge line. What have we done? Do not we deserve similar treatment? Mangalore—Hassan Railway line is another. Of course, perhaps, it is an achieved thing because they have been telling us that survey has been made and they are going to develop it. Chamarajanagar—Satyamangalam and Harihara—Kottur are other lines. Kottur—Harihar line is an important line and now that the Government are giving importance to ore-carrying roads or railway lines, it is very essential to link up Harihar—Kottur because from Hospet area of Bellary District most of the ore is sent to Karwar or Mangalore now. It is necessary that Government should do all their best to see that some of the railway lines are taken up. Sir, I do not want to take the time of this Hon'ble House any more. In concluding, I only request the Government that so far as the sharing of waters of Krishna, Godavari and Cauveri is concerned, all efforts should

(SRI GANJI VEERAPPA)

be made and we must even allow them to spend more money for these projects.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರತಕ್ಕ ಈ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಬಗ್ಗೆ ನಮ್ಮ ಅಭಿಪ್ರಾಯವನ್ನೂ, ಹಾಗೂ ಸಮ್ಮತಿಯನ್ನು ಕೊಡುವುದಕ್ಕೆ ಮುಂಚೆ ನಾನು ಒಂದೆರಡು ಸಲಹೆಗಳನ್ನು ಸರ್ಕಾರದ ಮುಂದಿಡಬೇಕೆಂದು ಪ್ರಯತ್ನ ಮಾಡುತ್ತೇನೆ. ಅನೇಕ ಮಾನ್ಯ ಸದಸ್ಯರು ಈ ಇಲಾಖೆಯ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಈ ಇಲಾಖೆಯಲ್ಲಿರತಕ್ಕ ಅನೇಕ ಲೋಪದೋಷಗಳನ್ನು ಈ ಮಾನ್ಯ ಸಭೆಯ ಹಾಗೂ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಇಲಾಖೆಯಲ್ಲಿ ನನಗೆ ತಿಳಿದಮಟ್ಟಿಗೆ ಅಧಿಕಾರಿಗಳು ನಿಷ್ಠಾವಂತರಾಗಿ ಕೆಲಸ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ರಾಜಕೀಯ ಮುಖಂಡರುಗಳ ಹಾಗೂ ಆಡಳಿತ ಸೂತ್ರ ಹಿಡಿದಿರತಕ್ಕ ಮಂತ್ರಿಗಳ ಪ್ರತ್ಯಕ್ಷ ಅಥವಾ ಪರೋಕ್ಷವಾದ ಬೆಂಬಲ ಮತ್ತು ಈಗಿರತಕ್ಕ ಪ್ರಥಮ ಮತ್ತು ದ್ವಿತೀಯ ದರ್ಜೆ ಕಂಟ್ರಾಕ್ಟರುಗಳ ಬಲದಿಂದ ಅಂತಹ ಅಧಿಕಾರಿಗಳಿಗೆ ತಮ್ಮ ಕೆಲಸ ಕಾರ್ಯಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುವುದಕ್ಕೆ ಬಹಳ ಕಷ್ಟವಾಗಿದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನಾನು ಈಗಿರತಕ್ಕ ಮಂತ್ರಿಗಳಮೇಲೆ ಯಾವ ತರಹ ಅನುಮಾನವನ್ನೂ ಇಟ್ಟುಕೊಂಡು ಹೇಳುತ್ತಾ ಇಲ್ಲ. ಅನೇಕ ಸಾರಿ ಇದನ್ನು ನಾನು ಸ್ವಂತ ಅನುಭವದಿಂದ ನೋಡಿದ್ದೇನೆ. ಮಂತ್ರಿಗಳು ಟೂರ್ ಹೋದಾಗ ಅಥವಾ ಯಾವುದಾದರೂ ಪ್ರಾಜೆಕ್ಟುಗಳ ಇನ್‌ಸ್ಪೆಕ್ಷನ್‌ಗೆ ಹೋದಾಗ ಕಂಟ್ರಾಕ್ಟರ್‌ಗಳು ಸಹ ಜೊತೆಯಲ್ಲಿಯೇ ಟೂರ್ ಮಾಡುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಇದೇನಾಗುತ್ತದೆಂದರೆ ಸರ್ಕಾರದ ಅಧಿಕಾರಿಗಳು ಯಾವ ಒಂದು ವಿಷಯದ ಮೇಲೆ ತನ್ನ ಕೆಲಸಕಾರ್ಯಗಳನ್ನು ನಿರ್ವಹಿಸುವಾಗ ತನ್ನ ನಿಲುವನ್ನು ಸರಿಯಾದ ಮತ್ತು ನ್ಯಾಯವಾದ ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಕಷ್ಟವಾಗಿರುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಯಾವುದಾದರೂ ನಿರ್ದಿಷ್ಟ ಉದಾಹರಣೆಗಳಿವೆಯೇ ?

ಶ್ರೀ ಎಚ್. ಡಿ. ದೇವೇಗೌಡ.—Best examples ಬೇಕಾದಷ್ಟು ಕೊಡಬಲ್ಲೆ. ಒಂದು ಕ್ವಾಲಿಟಿ ವಿಷಯದಲ್ಲಿ ಇನ್‌ಸಿಸ್ಟ್ ಮಾಡುವುದೇ ಆಗಲೀ ಅಥವಾ ಯಾವುದೇ ತರಹ ಕಾನೂನು ರೀತ್ಯ ಕಂಟ್ರಾಕ್ಟರು ನಡೆಯಬೇಕು ಎಂಬುದಾಗಿ ಇನ್‌ಸಿಸ್ಟ್ ಮಾಡುವುದಾಗಲೀ ಬಹಳ ಕಷ್ಟವಿರುತ್ತದೆ. ಅದರ ಬಗ್ಗೆ ಮಂತ್ರಿಗಳು ಬಹಳ ಎಚ್ಚರಿಕೆಯಿಂದಿರಬೇಕು. ಏಕೆಂದರೆ ಮೊನ್ನೆ ಒಂದು ಪೇಪರ್‌ನಲ್ಲಿ ನೋಡಿದೆ. ಅದನ್ನು ಮಾನ್ಯ ಮಂತ್ರಿಗಳು ಬಹು ಚೆನ್ನಾಗಿ ಗಮನಿಸಬೇಕು. ಸುಮಾರು 200-300 ಲಾರಿಗಳನ್ನು ಪ್ರಾಜೆಕ್ಟುಗಳ ಕೆಲಸಕ್ಕೆ ಇಟ್ಟುಕೊಂಡಿರತಕ್ಕ ಒಬ್ಬ ಕಂಟ್ರಾಕ್ಟರ್ ಪರ್ಮಿಟ್ ಇಲ್ಲದೆಯೇ ಸೆಸ್ ಕೊಡದೇಯೇ ಆ ಗಾಡಿಗಳನ್ನು ಓಡಿಸುತ್ತಿದ್ದಾನೆ. ಇವತ್ತಿನ ದಿವಸ ಅತನಿಗೆ ಕೋರ್ಟಿನಿಂದ ಒಂದು ವಾರೆಂಟ್ ಇಷ್ಯೂ ಆಗಿದೆಯೆಂಬುದನ್ನು ನಾನು ಪತ್ರಿಕೆಯಲ್ಲಿ ಓದಿ ನೋಡಿದೆ. ಆದ್ದರಿಂದ ಈ ತರಹ ಕಂಟ್ರಾಕ್ಟರುಗಳಿಗೆ ಸರ್ಕಾರದವರು ನಿಜವಾಗಿ ಆಶ್ರಯ ಕೊಡುವುದು ಬಹಳ ಹೇಯಕರವಾದುದು ಎಂದು ನಾನು ಹೇಳುತ್ತೇನೆ. ಏನೇ ಬಂದರೂ ಸರ್ಕಾರ ಬಹು ಎಚ್ಚರಿಕೆಯಿಂದಿರಬೇಕು ಎಂಬುದಾಗಿ ನಾನು ಅಧ್ಯಕ್ಷರ ಮುಖಾಂತರ ಆಡಳಿತ ಸೂತ್ರವನ್ನು ವಹಿಸಿರತಕ್ಕ ಮಂತ್ರಿಗಳಿಗೆ ಪ್ರಾರ್ಥನೆ ಮಾಡುತ್ತೇನೆ. ಇಷ್ಟು ಹೇಳಿ ಇನ್ನು ಇಲಾಖೆಯಲ್ಲಿರತಕ್ಕ ಕೆಲವು ಲೋಪ ದೋಷಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ.

ಸ್ವಾಮಿ, ಈ ಮೈನರ್ ಇರಿಗೇಷನ್ ಬಗ್ಗೆ ಏನೋ ಒಂದು ತರಹ ಟೆಂಪೊ ಕ್ರಿಯೇಟ್ ಮಾಡುತ್ತಿದ್ದಾರೆ. ನಿಜವಾಗಿ ಇದು ಬಹಳ ಅನಾವಶ್ಯಕ. ಈ ತುರ್ತುಪರಿಸ್ಥಿತಿಯಲ್ಲಿ ಸರ್ಕಾರದವರು ಹೆಚ್ಚು ಹೆಚ್ಚಾಗಿ ಆಹಾರ ಬೆಳೆಯಬೇಕೆಂದು ಎಲ್ಲಾ ತರಹ ಕ್ರಮಗಳನ್ನೂ ಕೈಗೊಳ್ಳುತ್ತಿದ್ದಾರೆ. ಅದು ಬಹಳ ಸಂತೋಷಕರವಾದ ಸಂಗತಿ. ಆದರೆ ಈ ಒಂದು ತುರ್ತು ಪರಿಸ್ಥಿತಿ ಸಂಬಂಧದಲ್ಲಿ ಅಥವಾ ನೆಪದಲ್ಲಿ ಸರ್ಕಾರದವರು ಎಲ್ಲೋ ಕೆಲವು ಕಡೆ ಮಾತ್ರ ಕೆಲಸಮಾಡುವಂತಹ ಗೋಜಿಗೆ ಹೋಗದೆ ಸಂಸ್ಥಾನದ 19 ಜಿಲ್ಲೆಗಳ ವಿಚಾರದಲ್ಲಿಯೂ ಏಕೀಭಾವದಿಂದ ವರ್ತಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ರೀತಿ ಏಕೆ ಹೇಳುತ್ತಿದ್ದೇನೆಂದರೆ ಚೀಫ್ ಇಂಜನಿಯರ್ ಸುಮಾರು 16 ಕೋಟಿ ರೂಪಾಯಿಗಳ ಒಂದು ಅಂದಾಜನ್ನು 63-64ನೇ ಸಾಲಿನ ಬಡ್ಜೆಟ್ಟಿನಲ್ಲಿ ಸೇರಿಸಬೇಕೆಂದು ಕಳುಹಿಸಿ ಕೊಟ್ಟಿರುವ ಸಂಗತಿ ನನಗೆ ತಿಳಿದು ಬಂದಿದೆ. ಆದರೆ ಬಡ್ಜೆಟ್ಟಿನಲ್ಲಿ ಈಗ ಈ ಬಾಬಿಗೆ ಒದಗಿಸಿರುವುದು ಕೇವಲ 8 ಕೋಟಿ ರೂಪಾಯಿಗಳು. ಆದ್ದರಿಂದ ಅಂದಾಜುಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸುವಾಗ ಯಾವ ಒಂದು ಬೇಸಿಸ್ ಮೇಲೆ ಸೇರಿಸುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಗಳು ಉತ್ತರ

ಕೊಡುವಾಗ ನನಗೆ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸುಮಾರು ಎರಡು ಮೂರು ವರ್ಷಗಳಿಂದಲೂ ಪೆಂಡಿಂಗ್‌ನಲ್ಲಿರತಕ್ಕ ಕೆಲವು ಪ್ರಾಜೆಕ್ಟುಗಳ ಕೆಲಸವನ್ನು ಪೂರ್ತಿಮಾಡಲು ಬಡ್ಜೆಟ್ಟಿನಲ್ಲಿ ಹಣ ಒದಗಿಸಿ ಅಂದಾಜುಗಳು ತಯಾರಾಗಿದ್ದರೂ ಕೂಡ, ಮತ್ತು ಅದಕ್ಕೆ ಬೇಕಾದ ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟಿದ್ದರೂ ಇನ್ನೂ ಹಣವನ್ನು ಮಂಜೂರು ಮಾಡಲಿಲ್ಲ. ಅದಕ್ಕೆ ಕಾರಣ ವೇನೆಂಬುದನ್ನು ಸರ್ಕಾರ ತಿಳಿಸಬೇಕು.

ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ದೇಶದ 19 ಜಿಲ್ಲೆಗಳೂ ಸರ್ಕಾರದ ದೃಷ್ಟಿಯಲ್ಲಿ ಸಮ ತೂಕದಲ್ಲಿರಬೇಕು. ಕಾಮಗಾರಿಗಳನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕಾದರೆ ಯಾವ ನೀತಿಯನ್ನು ಹಾಕಿ ಕೊಂಡಿದ್ದೀರಿ ಎಂದು ಒಬ್ಬ ಅಧಿಕಾರಿಗಳನ್ನು ನಾನು ಕೇಳಿದಾಗ ಅವರು, ಕೆಲವು unsanctioned works ಕೂಡ ಸೇರಿಸಬೇಕಾಯಿತು ಎಂದು ಹೇಳಿದರು. ಅದು ಹೇಗೆಂದು ಕೇಳಿದಾಗ, 'ಸ್ವಲ್ಪ ಪ್ರಭಾವ ಬೀರಿದರೆ ಹೀಗಾಗುತ್ತದೆ, ನೀವು ಹಾಗೆ ಬೀರಲಿಲ್ಲವೆಂದು ಕಾಣುತ್ತದೆ. ಅದರಿಂದ ನಿಮ್ಮ ಕಡೆಯ ಕೆಲಸ ಸೇರಲಿಲ್ಲ'ವೆಂದು ಹೇಳಿದರು. ಯಾವ ಪ್ರಭಾವ ಬೀರಬೇಕಾಗಿತ್ತು? ಇಡೀ ದೇಶದ ಜವಾಬ್ದಾರಿಯನ್ನು ಮಂತ್ರಿಗಳು ಹೊತ್ತಿರುವ ಸಂದರ್ಭದಲ್ಲಿ ಏಕೆ ಈ ರೀತಿ ಆಗಬೇಕು?......

Sri ALUR HANUMANTHAPPA (Deputy Minister for Minor Irrigation).—ಅಧಿಕಾರಿ ಈ ರೀತಿ ಹೇಳಬೇಕಾದರೆ, he is not vigilant about the works that are going on in his area. He could have seen the estimates and plans.

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರಿಗಳ ವಿಜಿಲೆನ್ಸಿಯನ್ನು ಪರಿಶೀಲಿಸುವವನು ನಾನಲ್ಲ ಎಂದು ಸ್ಪಷ್ಟ ಪಡಿಸುತ್ತೇನೆ. ಮಂತ್ರಿಗಳು ಚೀಫ್ ಇಂಜಿನಿಯರ ಅಭಿಪ್ರಾಯವನ್ನು ಕೇಳಿ, ಪ್ರಯಾರಿಟಿ ಪಟ್ಟಿಯನ್ನು ತಯಾರಿಸಿ, ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕೆಂಬುದನ್ನು ನಿರ್ಧರಿಸಿ, ಅವನ್ನು ಮಾಡಬೇಕು. ಹಾಗಿಲ್ಲದೆ ವೈಯುಕ್ತಿಕ ಪ್ರಭಾವ ಕ್ಕೊಳಗಾಗುವುದು ಖಂಡನೀಯ; ಹಾಸನ ಜಿಲ್ಲೆಯಲ್ಲಿ ಆರು ಸಾವಿರ ಕೆರೆಗಳಿವೆ, ಅಲ್ಲಿಗೆ ಒದಗಿಸಿರುವುದು ಆರು ಲಕ್ಷ ರೂಪಾಯಿ. ಧಾರವಾಡ, ಬಿಜಾಪುರ ಜಿಲ್ಲೆಗಳಿಗೆ ಐವತ್ತು ಅರವತ್ತು ಲಕ್ಷ ರೂಪಾಯಿ ಒದಗಿಸಿದ್ದಾರೆ. ಅಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು, ಇಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು ಎನ್ನುವುದನ್ನು ನೋಡಬೇಕು. ಬೇರೆ ಜಿಲ್ಲೆಗಳಲ್ಲಿ ಕೆಲಸಗಳನ್ನು ಮಾಡಿಸುವುದರಲ್ಲಿ ನನ್ನ ಅಭ್ಯಂತರ ವೇನೂ ಇಲ್ಲ. ಆದರೆ ಹಾಗೆಯೇ ಬಾಕಿ ಜಿಲ್ಲೆಗಳ ವಿಷಯವೂ ಸರ್ಕಾರದ ದೃಷ್ಟಿಯಲ್ಲಿರಬೇಕು. ಚೀಫ್ ಇಂಜಿನಿಯರಿಂದ ಪ್ರಯಾರಿಟಿ ಪಟ್ಟಿಯನ್ನು ತರಿಸಿ ಮೊದಲು ಮಾಡಬೇಕಾದ ಕೆಲಸಗಳನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕಾಗಿತ್ತು.

ಉತ್ಸಾಹದಿಂದ ಕೆಲಸ ಮಾಡಬೇಕೆಂದು ಹೊರಟಿದ್ದಾರೆ, ನಿಜ. ಆದರೆ ಮೈನರ್ ನೀರಾವರಿ ಕೆಲಸಗಳಿಗೆ ವಾಟರ್‌ರೇಟ್ ಮತ್ತು ಕಾಂಟ್ರಿಬ್ಯೂಷನ್ ಗೊತ್ತು ಮಾಡುವಾಗ ಸರಿಯಾದ ನಿಯಮವಿಲ್ಲ. ತಾಲ್ಲೂಕ್ ಬೋರ್ಡ್ ಮತ್ತು ಎನ್. ಇ. ಎಸ್. ನಿಂದ ಮಾಡತಕ್ಕ ಕೆರೆಗಳಿಗೆ, ಹತ್ತು ಎಕರೆಯೊಳಗೆ ಅಚ್ಚು ಕಟ್ಟಿರುವ ಕೆರೆಗಳನ್ನು ತಾಲ್ಲೂಕ್ ಬೋರ್ಡಿನ ಅಧಿಕಾರಕ್ಕೆ ಕೊಟ್ಟಿದ್ದಾರೆ. ಅಲ್ಲಿ ವಾಟರ್‌ರೇಟ್ ಗೊತ್ತು ಮಾಡದೆ popular contribution ಶೇಕಡ ಹತ್ತರಂತೆ ಗೊತ್ತು ಮಾಡಿದ್ದಾರೆ. ಇದರಿಂದ ಕಷ್ಟ. ಒಂದೇ ರೀತಿ ಮಾಡಬೇಕು. ಯಾವುದೇ ಕೆಲಸವನ್ನು ಮಾಡಲಿ, ವಾಟರ್‌ರೇಟ್ ಮತ್ತು ಕಾಂಟ್ರಿಬ್ಯೂಷನ್ ಗೊತ್ತು ಮಾಡುವಾಗ ಎಲ್ಲಕ್ಕೂ ಸಮಾನವಾದ ನೀತಿಯನ್ನನುಸರಿಸುವುದು ಸೂಕ್ತ.

ಲಿಫ್ಟ್ ಇರಿಗೇಷನ್ ವಿಚಾರದಲ್ಲಿ ಸಾಕಷ್ಟು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದರು, ಇಂದು ಅಭಿನಂದನೀಯ. ಆದಷ್ಟು ಜಾಗ್ರತೆ ಸರ್ಕಾರದ ಯಂತ್ರದ ಮೂಲಕ, ಸಹಕಾರ ಇಲಾಖೆಯ ಬದಲು ಲೋಕೋಪಯೋಗಿ ಇಲಾಖೆಯ ಮೂಲಕ ಮಾಡಿಸುವುದು ಬಹಳ ಸೂಕ್ತ. ಏಕೆಂದರೆ, ಇದರಲ್ಲಿರುವ ಕಷ್ಟ ಮಂತ್ರಿಗಳಿಗೆ ಗೊತ್ತಿದೆ. ಸಹಕಾರ ಇಲಾಖೆಯ ಮೂಲಕ ಮಾಡುವುದಾದರೆ ಜಮೀನನ್ನು ಅಡಮಾನವಾಗಿ ಕೊಡಬೇಕಾಗುತ್ತದೆ. ಇದರಲ್ಲಿ ಬಹಳ ಅಡ್ಡಿ ಆತಂಕಗಳು ಬರುತ್ತವೆ. ಆ ಜಮೀನಿನ ಮೇಲೆ ಪೂರ್ವದ ಸಾಲವಿದ್ದರೆ ಆಗುವುದಿಲ್ಲ. ಆದುದರಿಂದ ಈ ಲಿಫ್ಟ್ ಇರಿಗೇಷನ್ ಕೆಲಸವನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡಿಸಿದರೆ ಉತ್ತಮ. ಇದಕ್ಕೆ ಹಣವನ್ನೊದಗಿಸಬೇಕು. ಈ ವರ್ಷ ಹಣವನ್ನೊದಗಿಸಿಲ್ಲವೆಂದು ಕಾಣುತ್ತದೆ. ಸಪ್ಲಿಮೆಂಟರಿ ಗ್ರಾಂಟ್‌ನಿಂದ ಹಣವನ್ನೊದಗಿಸಿ ಲೋಕೋಪಯೋಗಿ ಇಲಾಖೆಯಿಂದ ಮಾಡಿಸುವುದೊಳ್ಳೆಯದೆಂದು ಸೂಚಿಸುತ್ತೇನೆ.

ಕೆರೆ ಅಂಗಳಗಳನ್ನು ವ್ಯವಸಾಯಕ್ಕೆ ಕೊಡಬೇಕಾದರೆ, ಎಲ್ಲಿಯೂ ಕೊಡಬಾರದೆಂದು ಹೇಳಿದ್ದಾರೆ. ಎಲ್ಲ ಕಡೆಯೂ ಹೀಗೆ ಮಾಡಿದರೆ ಬಹಳ ಕಷ್ಟ. ಕೆಲವು ಕಡೆ ಹಿಂದಿನ ಕೆರೆಗಳು ಈಗ ಅನಾವಶ್ಯಕವಾಗಿವೆ. ಏಕೆಂದರೆ ಅಲ್ಲಿಗೆ ನಾಲೆಗಳು ಬಂದಿವೆ. ಆ ನಾಲೆಯಿಂದ ಕೆರೆಯಲ್ಲಿ ಅಚ್ಚು

(ಶ್ರೀ ಎಚ್. ಡಿ. ದೇವೇ ಗೌಡ)

ಕಟ್ಟೆಗೆ ನೀರು ಬಂದರೆ, ಕೆರೆ ಅನಾವಶ್ಯಕ. ಇಂಥ ಸಂದರ್ಭಗಳಲ್ಲಿ ಕೆರೆಯ ಅಂಗಳವನ್ನು ವ್ಯವಸಾಯಕ್ಕೆ ಕೊಡುವುದು ಬಹಳ ಒಳ್ಳೆಯದು. ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಈ ವಿಚಾರವನ್ನಿಟ್ಟಿದ್ದೇನೆ. ಎಲ್ಲಿ ಕೆರೆ ಅಂಗಳಗಳ ಅವಶ್ಯಕತೆಯಿಲ್ಲವೋ, ಎಲ್ಲಿ ಕೆರೆಯಿಂದ ನೀರನ್ನು ತೆಗೆದುಕೊಳ್ಳುವುದಿಲ್ಲವೋ ಅಂಥ ಕೆರೆ ಅಂಗಳಗಳನ್ನು ವ್ಯವಸಾಯಕ್ಕೆ ಕೊಡುವ ಬಗ್ಗೆ ಸರ್ಕಾರಿ ಆಜ್ಞೆ ಮಾಡಬೇಕೆಂದು ಪ್ರಾರ್ಥನೆ.

Incomplete works ಬಡ್ಜೆಟ್‌ನಲ್ಲಿ ಸೇರಿಸಿದ್ದಾರೆ. ಆದರೆ ಸಾಕಷ್ಟು ಹಣವನ್ನೊದಗಿಸಿಲ್ಲ. ಸುಮಾರು 240 incomplete works ಇವೆ. ಇವುಗಳಿಗೆ ಸಾಕಷ್ಟು ಹಣವನ್ನು ಕೊಟ್ಟಿಲ್ಲ. ಸಪ್ಲಿಮೆಂಟರಿ ಗ್ರಾಂಟಿನಿಂದರಾದರೂ ಒದಗಿಸಬೇಕು. ಈ ಸಾರಿ ಏನೋ ತಪ್ಪಾಗಿರಬಹುದು.

ಇನ್ನೊಂದು ವಿಷಯವೇನೆಂದರೆ, ಹಾಸನ ಡಿವಿಜನ್‌ಗೆ workload ಜಾಸ್ತಿ ಇದೆ. Reorganisation of Divisions ಆಗಬೇಕೆಂದು Economy and Resources ಕಮಿಟಿಯವರು ಹೇಳಿದ್ದಾರೆ. ಇದು ಬಹಳ ಅವಶ್ಯಕ. ಮೂವತ್ತು ಲಕ್ಷ ರೂಪಾಯಿ ಕೆಲಸವಿರುವುದಕ್ಕೆ ಕೆಲವು ಕಡೆ ಒಂದು ಡಿವಿಜನ್ ಇದೆ. ಆದರೆ ಹಾಸನ ಡಿವಿಜನ್‌ಗೆ ಒಂದು ಕೋಟಿ ಐದು ಲಕ್ಷದವರೆಗೆ ಬರುತ್ತದೆ. ಇಷ್ಟನ್ನು ಒಬ್ಬರು ಎಗ್ಜಿಕ್ಯೂಟಿವ್ ಇಂಜಿನಿಯರು ನಿರ್ವಹಿಸುವುದು ಕಷ್ಟ. ಅಲ್ಲಿ ಸುಮಾರು ಆರು ಸಾವಿರ ಕೆರೆಗಳನ್ನಿಟ್ಟುಕೊಂಡು ಮಿಕ್ಕೆಲ್ಲ ಕೆಲಸಗಳನ್ನು ನೋಡಿಕೊಳ್ಳುವುದು ಕಷ್ಟವಾಗುತ್ತದೆ. ಅಲ್ಲಿಗೆ ಒಂದು ಹೆಚ್ಚಿಗೆ ಡಿವಿಜನ್ ಕೊಡುವುದು ಸೂಕ್ತ. ಡಿವಿಜನ್ನುಗಳ ಪುನರ್ವಿಂಗಡಣೆ ಮಾಡುವುದನ್ನು ಯೋಚನೆ ಮಾಡಬೇಕು.

Rural Communications ಬಗ್ಗೆ ಮಂತ್ರಿಗಳು ಹಣವಿಲ್ಲವೆಂದು ಹೇಳುತ್ತಿದ್ದಾರೆ. ಇದು ನಿಜ; ಆದರೆ ಈಗ ನಿಲ್ಲಿಸಿದರೆ ಇದುವರೆಗೆ ಖರ್ಚು ಮಾಡಿರುವ 9 ಕೋಟಿ ರೂಪಾಯಿಗೆ ಯಾವ ಫಲವೂ ದೊರಕುವುದಿಲ್ಲ. ಕೆಲವು ಕಡೆ ಮಾಡಿಸಿರುವ ರಸ್ತೆಗಳಲ್ಲಿ ಲಂಟಾನಾ ಬೆಳೆದಿದೆ, ಏನೂ ಉಪಯೋಗವಿಲ್ಲದಂತಾಗಿದೆಯೆಂದು ಯಾರೋ ಒಬ್ಬ ಸದಸ್ಯರು ಹೇಳಿದರು. ಅನೇಕ ಕಡೆ ಹೀಗಾಗಿದೆ. ಸರ್ಕಾರಕ್ಕೆ ಹಣವಿಲ್ಲದಿರುವ ತೊಂದರೆಯನ್ನು ಮಂತ್ರಿಗಳು ಹೇಳಿದ್ದಾರೆ. ಇವುಗಳನ್ನು ಏನಾದರೂ ಒಂದು ಘಟ್ಟಕ್ಕೆ ತಂದು ಖರ್ಚಾಗಿರುವ ಒಂಭತ್ತು ಕೋಟಿ ರೂಪಾಯಿ ವ್ಯರ್ಥವಾಗದೇಯಿರುವ ಹಾಗೆ ಪ್ರಯತ್ನ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ. ಕೆಲವು ಕಡೆ 50 ಮೈಲಿ ಆಗಿಲ್ಲ, ಕೇವಲ ಹತ್ತು-ಇಪ್ಪತ್ತು ಮೈಲಿ ಮಾತ್ರ ರಸ್ತೆ ಆಗಿದೆ. ಇಂಥ ಕಡೆ 50 ಮೈಲಿಗೆ ತರಲು ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ.

ಲೋಕೋಪಯೋಗಿ ಇಲಾಖೆಯ ಆಡಳಿತದಲ್ಲಿ ಕೆಲವು ಲೋಪ ದೋಷಗಳಿವೆ. ಎಕ್ಸಿಕ್ಯೂಟಿವ್ ಇಂಜಿನಿಯರುಗಳಿಗೆ ಪರ್ಸನಲ್ ಅಸಿಸ್ಟೆಂಟ್‌ಗಳನ್ನು ಕೊಟ್ಟಿದ್ದಾರೆ. ಇವರಿಂದ ಯಾವ ರೀತಿಯ ಸಹಾಯವೂ ಎಕ್ಸಿಕ್ಯೂಟಿವ್ ಇಂಜಿನಿಯರುಗಳಿಗೆ ಆಗುತ್ತಿಲ್ಲ. ಇವರು ಬಿಲ್‌ಗಳನ್ನು ಪಾಸು ಮಾಡುವ ಹಾಗಿಲ್ಲ, ಆ ಅಧಿಕಾರ ಇವರಿಗಿಲ್ಲ. ಬೇರೆ ಯಾವ ಅಧಿಕಾರವೂ ಇಲ್ಲ. ಹೀಗಿರುವಾಗ ಈ ಸ್ಥಾನಗಳಲ್ಲಿ ಅಸಿಸ್ಟೆಂಟ್ ಇಂಜಿನಿಯರುಗಳೇಕಿರಬೇಕು. ಕೆಲವು ಡಿವಿಜನ್‌ಗಳಲ್ಲಿ 30 ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಹೀಗಿರುವಾಗ ಏಕೆ ಬೇಕು? ಕೆಲವು ಕಡೆ ಇಬ್ಬರು ಪರ್ಸನಲ್ ಅಸಿಸ್ಟೆಂಟುಗಳಿದ್ದಾರೆ. ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಮೂರು ಜನರಿದ್ದಾರೆ. ಸ್ಪೆಷಲ್ ಓರ್ ಕ್ಯಾರಿಯಿಂಗ್ ಡಿವಿಜನ್‌ಗಳಲ್ಲಿ ಎರಡು ಮೈಲಿಗೊಬ್ಬರಂತೆ ಅಸಿಸ್ಟೆಂಟ್ ಇಂಜಿನಿಯರುಗಳು ಇದ್ದಾರೆ. ಇದರ ಅಗತ್ಯವಾದರೂ ಏನು? ಟೆಕ್ನಿಕಲ್ ಸಿಬ್ಬಂದಿಯನ್ನು ಹೀಗೆ ಉಪಯೋಗಿಸುವುದರಿಂದ ಸರ್ಕಾರಕ್ಕೆ ಅನ್ಯಾಯವಾಗುತ್ತದೆ. ಅಗತ್ಯವಿದ್ದ ಕಡೆ, ಅಸಿಸ್ಟೆಂಟ್ ಇಂಜಿನಿಯರಿಗೆ ಈ ಪರ್ಸನಲ್ ಅಸಿಸ್ಟೆಂಟ್‌ಗಳ ಸ್ಥಾನ ಕೊಡುವ ಬದಲು, ಜೂನಿಯರ್ ಇಂಜಿನಿಯರಿಗಳಿಗಾದರೂ ಕೊಟ್ಟರೆ ಸಾಕು. ಎಗ್ಸಿಕ್ಯುಟಿವ್ ಇಂಜಿನಿಯರ್ ಹೆಸರಿನಲ್ಲಿ fair copiesಗೆ ರುಜು ಮಾಡುವುದಕ್ಕೆ ಇವರು ಸಾಕೆಂದು ಅನಿಸುತ್ತದೆ, ಇದನ್ನು ಸರ್ಕಾರ ಯೋಚನೆ ಮಾಡಬೇಕು.

ಇನ್ನೊಂದು ದೋಷವೆಂದರೆ, ಕೆಲವು ಕಡೆ ಕೆಲವು items of worksಗೆ scheduled rates ಇಲ್ಲ. ಪರಿಹಾರ ಮಾಡಲು ಇದು ಕಷ್ಟದ ಪ್ರಶ್ನೆಯೇನಲ್ಲ. ಷೆಡ್ಯೂಲ್ಡ್ ರೇಟ್ಸ್ ಇಲ್ಲದಿದ್ದರೆ ಕೆಲವು ಕಡೆ ಅಧಿಕಾರಿಗಳು ಈ ಅವಕಾಶವನ್ನು ದುರುಪಯೋಗಪಡಿಸಲು ಅವಕಾಶವಾಗುತ್ತದೆ. Non-scheduled items of work ಮಾಡತಕ್ಕ ಕಾಲದಲ್ಲಿ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಾರೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಯಾವುದೇ ಕೆಲಸವಾದರೂ ನಾನ್ ಷೆಡ್ಯೂಲ್ಡ್ ರೇಟ್ ಇರುವುದಕ್ಕೆ ಅವಕಾಶ ಕೊಡಬಾರದು. ಪ್ರತಿಯೊಂದು ಕೆಲಸಕ್ಕೂ ಸರ್ಕಾರ ದರ ನಿಗದಿ ಮಾಡಿ ಅದರ ಪ್ರಕಾರ ಕೆಲಸ ನಡೆಯುವಂತೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಹಣ ಸರಿಯಾಗಿ ವ್ಯಯವಾಗಲು ಅವಕಾಶವಾಗುವುದಿಲ್ಲ.

3-30 P.M.

ಈಗ ಡಿವಿಜನ್‌ಗಳ ಸ್ಟೋರ್ಸ್‌ನಲ್ಲಿ ಮಿಸ್‌ಮ್ಯಾನೇಜ್‌ಮೆಂಟ್ ಬಹಳ ಹೆಚ್ಚಾಗಿದೆ. ಕೆಲವು ಡಿವಿಜನ್‌ಗಳಲ್ಲಿ 4-5 ಲಕ್ಷ ರೂಪಾಯಿಗಳವರೆಗೆ ಅನ್ಯಾಯವಾಗಿದೆ. ಮುಖ್ಯಮಂತ್ರಿಗಳು ಇದನ್ನೆಲ್ಲಾ ನೋಡಲು ಅವರಿಗೆ ಅವಕಾಶವಿರುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳು, ಮುಖ್ಯವಾಗಿ ಚೀಫ್ ಇಂಜನಿಯರು ಇದರ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕು. ಕೆಲವು ಡಿವಿಜನ್‌ಗಳಲ್ಲಿ 4-5 ಲಕ್ಷ ರೂಪಾಯಿಗಳಿಗೆ ಅಕೌಂಟೇ ಇಲ್ಲ. ಒಂದು ಡಿವಿಜನ್‌ನಲ್ಲಿ ಸುಮಾರು 11-12 ಸಾವಿರ ಸಿಮೆಂಟ್ ಮೂಟೆಗಳೇ ಇಲ್ಲ. ಮೊನ್ನೆ ಬೆಂಗಳೂರಿನಲ್ಲಿ 165 ಟನ್ ಕಬ್ಬಿಣ ಇಲ್ಲದಂತಾಗಿ ಸಂಬಂಧಪಟ್ಟ ಕ್ಲಾರ್ಕ್ ರಾಜೀನಾಮೆ ಕೊಟ್ಟಿದ್ದಾರೆ. ಅದು ಅಕ್ಸೆಪ್ಟ್ ಆಗಿಲ್ಲ. ಹಾಸನ ಡಿವಿಜನ್ ಸ್ಟೋರ್ಸ್‌ನಲ್ಲಿ ನಾಲ್ಕು ಲಕ್ಷ ರೂಪಾಯಿಗಳವರೆಗೆ ಹಿಂದಿನ ಅಧಿಕಾರಿಗಳ ಕಾಲದಲ್ಲಿ ದುರುಪಯೋಗವಾಗಿದೆ. ಸಂಬಂಧಪಟ್ಟ ಸ್ಟೋರ್‌ಕೀಪರ್ ಸತ್ತುಹೋಗಿದ್ದಾರೆ. ಹೀಗಾದರೆ ಹಣ ವಸೂಲು ಮಾಡುವುದು ಹೇಗೆ ? ಇಂಥಾದ್ದಕ್ಕೆ ಅವಕಾಶವಿಲ್ಲದಂತೆ ತೀವ್ರ ಕ್ರಮ ಕೈ ಕೊಳ್ಳಬೇಕು. ಹಾಗೆ ಮಾಡದಿದ್ದರೆ ಸರ್ಕಾರ ಇದೆಯೋ, ಇಲ್ಲವೋ ಎಂಬ ಭಾವನೆ ಕೆಲಸಗಾರರಲ್ಲಿ ಬರಲು ಅವಕಾಶವಾಗುತ್ತದೆ. ಅದಕ್ಕೆ ಅವಕಾಶವಿಲ್ಲದಂತೆ ಸೂಕ್ತ ಕ್ರಮ ಕೈಕೊಳ್ಳಬೇಕು. ಮುಂದೆ ಇಂಥ ಅನ್ಯಾಯವಾಗದಂತೆ ತಡೆಗಟ್ಟುವುದು ಬಹಳ ಸೂಕ್ತ.

ಈಗ ನಾರ್ನ್-ಪಿ. ಡಬ್ಲ್ಯು. ಡಿ. ರಸ್ತೆಗಳಲ್ಲಿ ಕಂಟ್ರಾಕ್ಟರ್ಸ್‌ಗೆ ಹಣ ಒದಗಿಸಿದ್ದಾರೆ. ಆದರೆ ಈ ಸಾರಿ ಕೊಟ್ಟಿರುವ 10 ಲಕ್ಷ ರೂಪಾಯಿಗಳು ಸಾಲದು. ಕೆಲವು ಕಡೆ ಸ್ಥಳೀಯ ಮುಖಂಡರು ಮತ್ತು ಇತರರ ಒತ್ತಾಯದ ಮೇಲೆ ಕೆಲಸ ಪ್ರಾರಂಭಿಸಿದ್ದಾರೆ. ಆದರೆ ಬಡ್ಜೆಟ್ಟಿನಲ್ಲಿ ಹಣವಿಲ್ಲದೆ ಪ್ರಾರಂಭಿಸಿರುವ ಕೆಲಸವನ್ನು ನಿಲ್ಲಿಸಿದ್ದಾರೆ. ಅದಕ್ಕಾಗಿ ನಾರ್ನ್-ಪಿ. ಡಬ್ಲ್ಯು. ಡಿ. ರಸ್ತೆಗಳಿಗೆ ಕನ್‌ಸ್ಟ್ರಕ್ಷನ್ ಆಫ್ ಕಂಟ್ರಾಕ್ಟರ್ಸ್ ಹೆಡ್‌ನಲ್ಲಿ ಹೆಚ್ಚು ಹಣ ಒದಗಿಸಲು ಪ್ರಯತ್ನ ಮಾಡಬೇಕು. ಹಾಗೆ ಮಾಡುತ್ತೀರೆಂದು ನಂಬಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಅನಂತವಾಗಿ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†Sri ANNA RAO GANAMUKHI (Afzalpur).—Mr. Speaker, Sir, with regard to the Irrigation Demand, in the first instance, I support the demand and I want to give some suggestions and also want to dwel upon the various aspects of the irrigation projects in our State.

As far as Mysore State is concerned, Krishna and Cauvery are the two rivers which are the very life-blood of our State and in this connection, I should say that so far our case has gone by default as far as the sharing of the Krishna waters are concerned. Here, I should like to say that at the time of the allocation of waters in 1951, we know what injustice has been done to Mysore State in respect of the Bombay Districts which were in the Ex-Bombay State and the Hyderabad districts which were in the ex-Hyderabad State. In 1951, the agreement was drawn up by the Planning Commission. The Mysore State was not represented by any of the technical personnel of our State. The so called 1951 agreement has not given sufficient thought to the rightful share of Mysore in Krishna and Godavari waters. Here, I should like to say that when the Gulhati Commission was appointed, the Central Government should have given advice to the Andhra Government not to proceed with the Nagarjunasagar Project and also other projects. Instead, they have got clearance from the Planning Commission for the first phase of the Nagarjunasagar Project and they are proceeding with the construction of this project. If the Nagarjunasagar Project is allowed to proceed in the manner in which it is done, after the completion of the second phase of that project, I think we will not be getting any water whatsoever. Therefore, the Andhra Government is trying its level best to include not

(SRI ANNA RAO GANAMUKHI)

only the Srisailam Power Project in the plan but they also want to include the second phase of the Nagarjunasagar Project. If these two projects go on uninterruptedly, Mysore will be left high and dry and we may not be able to get much water expecting the water which is required for the Malaprabha Project. In this connection, I will quote figures. The Ex-P. W. D. Minister has given the figures and I think they are in conformity with the allocation made by the 1951 agreement. The figures in the small pamphlet giving the proceedings of the Planning Commission in this behalf are also the same. That is to say, 86 per cent dependability. 1,746 T. M. C. of water is available in Krishna. For pre-1951 works, 745 T.M.C. of water is committed already and out of the remaining 1,000 T.M.C. of water about 827 T.M.C. is allotted for works during the First and Second Plans. The remaining quantity of water is only 173 T.M.C. Here again, if the Srisailam and the Nagarjunasagar Second Phase Projects are allowed to continue, another 175 T. M. C. of water will be taken away. As a result, only 57 TMC.ft. of water will be left over for use.

SRI VEERENDRA PATIL.—May I know from the Hon'ble Member whether he will be satisfied if the balance of 173 TMCft as he has just now mentioned is given to Mysore ?

SRI ANNA RAO GANAMUKHI.—It is not a question of giving any quantity of water to Mysore or Andhra. It is a question of the figures according to the 1951 agreement. I have also seen the figures given to Members of Parliament by our State Government. In the 1951 agreement, the dependability of water was taken at 86%, but in the figures given to Members of Parliament, I think the dependabillity of water was taken at a lower figure, namely 75 per cent. According to that, the share of Andhra is 28.5 per cent, the share of Mysore is 47.5 per cent, and the share of Maharashtra is 24 per cent. According to that, the figures are :

Maharashtra	622	TMC.ft.
Mysore	1050	,,
Andhra	545	,,
Total	2217	,,

In this, it has been said that for pre-1951 works the allocation is 449 TMCFt and for post-1951-1961 works 724 TMCFt, *i. e.*, for works undertaken during the first and the secound plan periods.

SRI M. C. BASAPPA (Chamarajanagar).—What is Mysore's quota out of that ?

SRI ANNA RAO GANAMUKHI.—247 TMC.ft. for Mysore, 125 for Maharashtra and 352 for Andhra making a total of 724 TMCFt. If we take away 449 TMCFt for pre-1951 works, the whole thing works out to 1173 TMCFt. If we deduct

1173 TMC.ft. out of 2217 then that leaves 1044 TMC for distribution between the States. Here there seems to be a difference and I think the Government should explain what is the import of it because they have worked out these figures at a reduced dependabiliy of 76 per cent. If the dependability had been taken at 86 per cent then practically no water would have been left. If we take it on the basis of the figures supplid to the Members of Parliament then I think we will have about 1044 TMC.ft. available. Even here, the Government of Mysore have stated that on this basis also the Andhra Government's position is *minus* 97 because they have already over-stepped their quota and used water in excess of their share. So if at this stage we keep quiet or if they insist upon the 1951 agreement, then I think we will be doomed because they will be using more then their share. We know that the Central Government cannot give any award and they cannot do anything except referring the matter to a Tribunal. Once we have approached the Central Government with a request to refer the matter to a Tribunal, I think we should not again say that we would go to the Supreme Court. Although it is perfectly open to us to withdraw the application for reference to a Tribunal and go to the Supreme Court, we cannot at the same time have both.

MR. SPEAKER.—What is the idea of going to the Supreme Court?

Sri ANNA RAO GANAMUKHI.—To assert our rights for the water. Of course Sri Ganji Veerappa has said that even if we go to the Supreme Court the result will be nil. If the Nagarjunasagar and the Srisailam works are allowed to proceed, then definitely we will be put to a huge loss. Their argument is that they are going to adhere to the 1951 agreement. I have not come across any law which binds a person or a State without that person/State agreeing to it. Unless we ratify the agreement how can they bind us and how can they argue that it is an agreement which is binding on us. We in India are governed by our Constitution and we are bound by our statutes and our Constitution, but if they take the attitude of 'Might is right' without recourse to law and if they go on constructing things even without the Planning Commission's clearance, then I think it would be very unfortunate for our State. In such a situation it is the duty of the Centre to intervene and persuade the Andhra Government not to undertake these works so that in future our interests may not be jeopardised. Their argument is that if they are prevented from going on with the work, it may not be in the interests of the country.

MR. SPEAKER.—How is it to be prevented? Would the Hon. member make some concrete suggestion as to who is to go and prevent them; how is it to be done?

Sri ANNA RAO GANAMUKHI.—My suggestion is that the Central Government ought to have immediately referred the case to arbitration instead of delaying the matter so much. In the meantime they could have appointed the Commission for collection of data about availability of water, etc., and advised the Andhra Government not to proceed with the works. They have not done that. it is very unfortunate. Instead

(SRI ANNA RAO GANAMUKHI)

they are emphasising that if we come in their way then we will be doing a disservice and we will be preventing the Andhra State from increasing food production. After all, if we also get water we will not be growing weeds but we will also be growing food. It is very unfortunate that such arguments are put forward by the Andhra Government. The Andhra leaders have gone to the extent of saying: "Let the clearance be given for the Pochampad Project, for the Srisailam hydel project and for the Nagarjunasagar Second Stage and let the water dispute be settled afterwards. Subject to that, let the clearance be given."

That is their stand. I do not know what waters will be left there. That is a very deceptive idea put forward. There are some disputes existing in regard to Tungabhadra High Level Canal and Rajolabanda Project. I would say that we request the Centre to expedite the matter, either by referring it to a tribunal or bringing the parties together and do justice to us.

In this connection, I would like to say that our Chief Minister has promised 15 T.M.C.ft. of water to Madras for drinking purposes. I should say that it is the generosity of our Chief Minister that he has made such a promise. I want to ask one thing, because, I do not know what is the position. In 1951, when the allocations were made, the Krishna-Pennar project was there. In that 450 TMC.ft. of water was visualised to be used from Krishna and 68 TMC.ft. of water from Pennar river. When that water is available in the Pennar river, why is it that Krishna water has to be given to Madras? They have said that 68 TMC.ft. of water will be used from the Krishna-Pennar Project. Now, all those projects are given the go-by. Instead of the visualised Ramapadasagar and Krishna-Pennar Projects, this Nagarjunasagar has sprung up in their place. Not only that. 15 TMC.ft. of water is not a small thing. Our Chief Minister has compared 15 TMC.ft. of water to two drops in an ocean, and I am sorry I cannot agree with that. Their requirement is at the tail end, for drinking purposes. When this statement was made, the Andhra Chief Minister made a statement that all the people residing in that area, round about 200 miles, will use that water for irrigation purposes. First, schemes have to be made and then water used. But in this case, I do not know how far they will use those waters. I would suggest that this should be stopped and if water is available in Pennar—it has already been stated that 68 TMC.ft. of water is available in Pennar—this 15 TMC.ft. of water for drinking purposes to the City of Madras can be easily made available.

SRI C. J. MUCKANNAPPA.—Is it the opinion of the Hon'ble Member, that there is any mischief underlying this?

SRI ANNA RAO GANAMUKHI.—Sir, immediately after the statement of our Chief Minister, the Andhra Chief Minister comes out with a statement that an integrated scheme will be prepared for irrigating area around the canal. Therefore, I say that this will be taken advantage of by them. An unfortunate situation has developed. All the projects,

the Pochampadi, Srisailam power project and also the second phase of Nagarjunsagar should not be allowed to go on. Once again, I would suggest that our Government—our Chief Minister has already announced that the Upper Krishna project will be immediately taken up and that investigation has already started—should try its level best to make a ten or twenty per cent cut in the expenditure of every department and then invest this money so that Upper Krishna project may be executed as speedily as possible, just as they have undertaken the Nagarjunasagar project without consulting anybody. I do not know how the planning Commission have turned a blind eye to the execution of such a big project, even depriving the rightful share of water to Mysore.

Mr. SPEAKER.—Sri Anna Rao is developing a new point ? He has already taken 25 minutes.

Sri ANNA RAO GANAMUKHI.—I will finish, Sir. Again, our Chief Minister has promised to give two lakhs K.W. of power to Srisailam if they stop the project. I would say that this will not stop them. This does not seem to be a good idea. If we go on yielding, they will be taking all the water and we will be left with nothing. We should be firm as far as our justful claim is concerned. How can we promise anything, either water for drinking purposes to Madras or two lakhs K.W. of power ? Then Maharashtra will come up—diversion of water for Koina Project. All these things will not help. Let us tell the Centre to expedite the matter and refer it immediately to the tribunal and get the award of the tribunal so that we may get our rightful share.

Mr. SPEAKER.—Yesterday, it was agreed that the Hon'ble Minister should commence the reply at 4 o' clock. I am inclined to give a little more time to members. As we are sitting till 7 P.M., the Minister can begin the reply at 4-30 P.M. as half an hour for clarification and two hours for reply.

Sri V. M. DEO (Gubbi).—Let us begin at 5 P.M. Sir.

Mr. SPEAKER.—Now, there is one more thing. We are already one day behind the schedule. Today, tomorrow and day after, we should have discussed Agriculture and associate Demands. Normally, if we take three and half hours out of five hours—half an hour for tea break and one hour for questions—we will have ten and half hours. I suggest that instead of meeting at 1 P.M., we will meet at 12 NOON and instead of

4 P.M.

closing at 6 P.M., we will close at 7 P.M. That means we will get six hours without tea break, with an hour for questions. We shall, therefore, get 12 hours for two days. By that, we will make up one day with regard to which we are behind the schedule. Is the House agreeable to this arrangement ?

HON'BLE MEMBERS.—Yes, Sir.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಮುಂದಿನ ವಾರ ಸೋಮವಾರ ಮತ್ತು ಮಂಗಳವಾರ ಹಬ್ಬವಿರುತ್ತೆ. ಸದಸ್ಯರು ಕೆಲವರು ಬಹಳ ದೂರ ಹೋಗಬೇಕಾಗಿದೆ. ಆದ್ದರಿಂದ ಬೆಳಿಗ್ಗೆ ಮತ್ತು ಮಧ್ಯಾಹ್ನ ಕುಳಿತು ಸೋಮವಾರ-ಮಂಗಳವಾರ ಮತ್ತು ಬುಧವಾರ ರಜಾ ಇರುವಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಸೂಚಿಸುತ್ತೇನೆ. ನಾಳೆ ಬೆಳಗ್ಗೆ 8-30ಕ್ಕೆ ಏಕೆ ಸಭೆ ಸೇರಬಾರದು ?

Sri S. NIJALINGAPPA.—It is not possible.

Mr. SPEAKER.—If we sit in the mornings, when we adjourn there will be an interval of two to three hours. That will not give you more time.

Sri S. NIJALINGAPPA.—The arrangement suggested is better.

Mr. SPEAKER.—Now, I will see how the debate should proceed. I will give 15 minutes each to four speakers. I will give one hour and four members may speak. The Minister may begin his reply at 5 P.M. There will be no time for clarification. I can't help.

Sri Gopala Gowda will now speak for fifteen minutes and this time limit is to be rigidly adhered to by everybody.

ಶ್ರೀ ಎಸ್ ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಬೇಡಿಕೆ 31, 48, 29, 30, 45, 46, 47, 32, 50, ಇವುಗಳ ಸಂಬಂಧದಲ್ಲಿ ಸುಮಾರು 65 ಕೋಟಿ ರೂಪಾಯಿಗಳನ್ನೂ ನಾವು ಸರ್ಕಾರಕ್ಕೆ ಮಂಜೂರು ಮಾಡುವುದಕ್ಕೆ ಮುಂಚೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಮಾನ್ಯ ಸದಸ್ಯರನೇಕರು ಈ ವಿಷಯದ ಬಗ್ಗೆ ಹೇಳಿದ್ದಾರೆ. ನಾನು ಒಂದೆರಡು ಮಾತುಗಳನ್ನು ಮುಖ್ಯವಾದ ವಿಷಯಗಳ ಬಗ್ಗೆ ಹೆಚ್ಚು ಅಂಕಿ ಸಂಖ್ಯೆಗಳಿಗೆ ಹೋಗದೆ ಹೇಳಬೇಕೆಂದಿದ್ದೇನೆ.

ಮೊದಲು ನಾನು ಶರಾವತಿಯ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ಏಕೆಂದರೆ ಈಗ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚು ಗಮನವನ್ನು ರಾಜ್ಯಸರ್ಕಾರದವರು ಕೊಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಶರಾವತಿಗೆ ನಾವೆಲ್ಲ ಹೋಗಿ ಬರೋಣವೆಂದು ಹೇಳಿದ್ದಾರೆ. ಅದು ಒಳ್ಳೆಯ ಕೆಲಸ. ಹೋಗಿ ಬರುವುದು ಒಳ್ಳೆಯದು. ಆದರೆ ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಹೋಗಿ ಬರುವುದರಿಂದ, ಅಲ್ಲಿಯ ಕೆಲಸ ಕಾರ್ಯಗಳನ್ನು ನೋಡುವುದರಿಂದ ಅದರಲ್ಲಿರುವ ಲೋಪದೋಷಗಳಾಗಲೀ, ಅಲ್ಲಿ ನಡೆಯುತ್ತಿರುವ ನ್ಯೂನತೆಗಳಾಗಲೀ ನಮಗೆ ಅಷ್ಟು ಬೇಗ ಕಂಡುಬರುವುದಿಲ್ಲ. ಕೆಲವು ತಾಂತ್ರಿಕವಾದವು ಇರುತ್ತವೆ, ಕೆಲವು ವಿಚಾರ ಮಾಡಿ, ವಿಮರ್ಶೆ ಮಾಡಿ, ಕುಳಿತ ಕೊಂಡು ಅಗ್ರಿಮೆಂಟ್ ಇತ್ಯಾದಿಗಳನೆಲ್ಲ ನೋಡಬೇಕಾಗುತ್ತದೆ. ಅದಕ್ಕೆ ನಾವು ಸರ್ಕಾರದ ವಿರುದ್ಧವಾಗಿ ಏನು ಅವಿಶ್ವಾಸ ನಿರ್ಣಯನ್ನು ಈ ಕಡೆಯಿಂದ ಮಂಡಿಸಿದ್ದೆವು, ಆವಾಗ ಏನೊಂದು ಬೇಡಿಕೆಯನ್ನ ನಾವು ಸರ್ಕಾರದ ಮುಂದೆ ಇಟ್ಟಿದ್ದೆವು. ಅದೇ ಬೇಡಿಕೆಯನ್ನು ನಾನು ಪುನಃ ಇಲ್ಲಿ ಒತ್ತಿ ಹೇಳುತ್ತೇನೆ. ಅದಕ್ಕೆ ಒಂದು ಮುಖ್ಯವಾದ ವಿಷಯವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಮುಂದೆ ಇಡುವುದಕ್ಕೆ ಬಯಸುತ್ತೇನೆ. ನಾನು ಆಗ ಮಾಡಿದ ಭಾಷಣದಲ್ಲಿ ಶರಾವತಿಗೆ ಸುಮಾರು 34 ಕೋಟಿ ರೂಪಾಯಿಗಳನ್ನು ಅಮೆರಿಕದವರ ನಮಗೆ ಒದಗಿಸುತ್ತಿದ್ದಾರೆ. ಅವರು U.S.I.S. ಹೊರಡಿಸುತ್ತಿರತಕ್ಕ ಒಂದು ಬುಲೆಟಿನ್‌ನಲ್ಲಿ ಬಂದಿರತಕ್ಕ ಲೇಖನದಲ್ಲಿ ಕೆಲವು ವಿಷಯಗಳನ್ನೂ ಹೇಳಿದ್ದಾರೆ. ಅದನ್ನು ನಾನು ಸಭೆಯ ಗಮನಕ್ಕೆ ತಂದಿದ್ದೇನೆ. ಅಲ್ಲಿ ಏನೂ ಅಂಥಾದ್ದು ನಡೆಯುತ್ತಿಲ್ಲ, ಹಣ ಸದ್ವಿನಿಯೋಗವಾಗುತಿದೆ ಮತ್ತು ಕಾಮಗಾರಿ ನಿರೀಕ್ಷಿಸಿದಂತೆ ಪ್ರಗತಿಯನ್ನು ಸಾಧಿಸುತ್ತ ಇದೆ, ಎನ್ನತಕ್ಕ ಆಶ್ವಾಸನೆಯನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ತನ್ಮೂಲಕ ಯಾವ ಅಮೆರಿಕ ಧನಸಹಾಯವನ್ನು ಕೊಟ್ಟಿರುತ್ತದೆಯೋ ಅವರಿಗೂ ನಾವು ಒದಗಿಸಿಕೊಡಬೇಕಾಗುತ್ತದೆ ಎಂದು ನಾನು ಹೇಳಿದೆ. ಈಚೆಗೆ ನನಗೆ ಬಂದಿರುವ ವರ್ತಮಾನದ ಪ್ರಕಾರ ಈ ಧನ ಸಹಾಯವನ್ನು ಮಾಡತಕ್ಕ ಅಮೆರಿಕದ ಸಂಸ್ಥೆಯವರು ಕೇಂದ್ರ ಸರ್ಕಾರವನ್ನು ಕೇಳಿದ್ದರು, ಕೇಂದ್ರದವರು ರಾಜ್ಯ ಸರ್ಕಾರವನ್ನು ಕೇಳಿದರು, ಈ ವಿಷಯದಲ್ಲಿ ನಮಗೆ ಸ್ಪಷ್ಟೀಕರಣ ಕೊಡಿ ಎಂದು. ಆದರೆ ರಾಜ್ಯ ಸರ್ಕಾರದವರು ಇನ್ನೂ ಆ ಸಂಬಂಧದಲ್ಲಿ ಉತ್ತರ ಕೊಟ್ಟಿಲ್ಲವೆಂದು ಕೇಳಿದ್ದೇನೆ, ಮತ್ತು ಈಚೆಗೆ arbitration clause ತೆಗೆದು ಹಾಕಿದ್ದೇವೆ ಎಂದು ಮಾನ್ಯ ಮಂತ್ರಿಗಳು ಈ ಸಭೆಗೆ ತಿಳಿಸಿದರು. ಒಂದು ರೀತಿಯಲ್ಲಿ ಅದು ಸಮಾಧಾನದ ವಿಷಯವಾದರೂ ಇನ್ನೂ ಕೂಲಂಕಷವಾಗಿ ಅದನ್ನು ಪರಿಶೀಲನೆ ಮಾಡತಕ್ಕದ್ದು ಬಹಳ ಅಗತ್ಯ. ಕೇವಲ ಒಂದು balanced symptomatic treatment ಮತ್ತು ಹೊರಗಿನಿಂದ ಬಂದಂಥ ವಿಷಯಕ್ಕೆ ಮಾತ್ರ ನಾವು ಒಂದು ಲೇಪ ಹಾಕಿ ಅದನ್ನು ಸರಿಮಾಡಿದ್ದೇವೆ ಎಂದು ಹೇಳಿ

ಇಷ್ಟು ಕೋಟಿಗಟ್ಟಲೆ ಹಣವನ್ನು ಖರ್ಚುಮಾಡತಕ್ಕಂಥ ಯಾವ ಪ್ರಾಜೆಕ್ಟಿನ ಕಾಮಗಾರಿ ಪೂರೈಸಿಕೊಳ್ಳುವುದರ ಮೇಲೆ ನಮ್ಮ ರಾಜ್ಯದ ಬಹುಭಾಗದ ಭವಿಷ್ಯ ನಿರ್ಮಾಣವಾಗುವುದು ಇದೆ, ಅಂಥ ಒಂದು ಯೋಜನೆಯ ಕಾಮಗಾರಿಯ ಬಗ್ಗೆ ರಾಜ್ಯ ಸರ್ಕಾರ ಇಂಥ ತಾತ್ಸಾರ ಭಾವನೆಯನ್ನು ಎಂದೂ ತೋರಬಾರದು. ಅದನ್ನೂ ನಾನು ಮೊದಲೇ ಹೇಳಿದ್ದೇನೆ. ನಿಮ್ಮ ಹಿತದೃಷ್ಟಿಯಿಂದಲೇ ಇದನ್ನು ವಿಚಾರಣೆಗೆ ಗುರಿಪಡಿಸಿ ಈಗ ಹೊತ್ತಿರತಕ್ಕ ಅಪಾದನೆಗಳನ್ನು ಸ್ಪಷ್ಟವಾಗಿ ಎಲ್ಲರಿಗೂ ತಿಳಿಯುವಂತೆ ಇದು ನಿಜವಲ್ಲ, ನಿರಾಧಾರವಾದ ಅಪಾದನೆಗಳು ಎಂದು ಸ್ಥಿರಪಡಿಸಿಕೊಳ್ಳಿ ಎಂದು ನಾನು ಹೇಳಿದೆ. ಆದರೆ ರಾಜ್ಯ ಸರ್ಕಾರದವರು ಏಕೋ ಹಿಂಜರಿಯುತ್ತಿದ್ದಾರೆ. ಆದ್ದರಿಂದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಕೆಲವು ಸಲ ವ್ಯಾಮೋಹಗಳು ಅಡ್ಡಿಬರಬಹುದು, ಆದರೆ ಇಂಥ ವಿಷಯಗಳಲ್ಲಿ ವ್ಯಾಮೋಹ ಯಾರನ್ನೂ ಕಾಡಬಾರದು. ಇದರಲ್ಲಿ ದಾಕ್ಷಿಣ್ಯ ಅಥವಾ ಬಾಂಧವರು, ತನ್ನವರು ಎನ್ನುವ ಪಕ್ಷಪಾತ ಸರ್ಕಾರಕ್ಕೆ ಇರಬಾರದು. ಆ ವಿಷಯದಲ್ಲಿ ಮಾನ್ಯ ಶ್ರೀ ನಿಜಲಿಂಗಪ್ಪನವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ವಿದ್ಯುಚ್ಛಕ್ತಿ ಮತ್ತು ನೀರಾವರಿ portfolio ಹೊಂದಿದ್ದಾರೆ. ಅವರ ಬಗ್ಗೆ ವೈಯುಕ್ತಿಕವಾಗಿ ನನಗೆ ಗೌರವ ಮತ್ತು ವಿಶ್ವಾಸವಿದೆ. ಅಲ್ಲದೆ, ಒಮ್ಮೆ ಈ ರಾಜ್ಯದ ಮುಖ್ಯ ಮಂತ್ರಿಗಳ ಸ್ಥಾನವನ್ನು ಹಿಡಿದಿದ್ದು ಕಾರಣಾಂತರದಿಂದ ಅದನ್ನು ಕೈಬಿಟ್ಟು ಮತ್ತೆ ಎರಡನೆಯ ಸಲ ಮುಖ್ಯಮಂತ್ರಿಗಳಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಮಂತ್ರಿಮಂಡಲವನ್ನು ಉರುಳಿಸಲು ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕದ್ದು ಒಂದು ಹವ್ಯಾಸವಾಗಿ ಬೆಳೆದು ಬಂದಿದೆ. ಈ ಜಗಳದಲ್ಲಿ ರಾಜ್ಯದ ಎಷ್ಟೋ ಹಿತಗಳನ್ನು ನಾವು ಕೈಬಿಡಬೇಕಾಯಿತು. ಇದು ಇತಿಹಾಸಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಕೆಲವುಸಲ ಅಂಥ ವಿಷಯಗಳನ್ನು ನಾವು ಪ್ರಸ್ತಾಪಮಾಡಿದಾಗ ಇದು ರಾಜಕೀಯಕ್ಕಾಗಿ ಪ್ರಸ್ತಾಪಿಸಲ್ಪಡುತ್ತಿದೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಮುಖ್ಯಮಂತ್ರಿಗಳು ವ್ಯಕ್ತಪಡಿಸಿದರು. ನಾನಾಗಲೀ, ಈ ಕಡೆಯಿಂದ ಯಾವ ಸದಸ್ಯರೇ ಆಗಲೀ ಏನು ಮಾತನಾಡಿದ್ದಾರೆ ಅದನ್ನು ರಾಜಕೀಯಕ್ಕಾಗಿ ಮಾತನಾಡಿದ್ದಾರೆ ಎಂದು ತಾವು ದಯವಿಟ್ಟು ತಿಳಿದುಕೊಳ್ಳಬಾರದು ಎನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ತಮ್ಮ ಪಕ್ಷದಲ್ಲಿ ಕೆಲವರು ಅನೇಕ ಸಲ ಹೇಳಿಕೆಗಳನ್ನು ಕೊಟ್ಟಿದ್ದಾರೆ, ಒತ್ತಾಯಪಡಿಸುತ್ತಿದ್ದಾರೆ. ಅವರಲ್ಲಿ ಬಹುಶಃ ಈ ಸಮಸ್ಯೆಗಳನ್ನು ಮುಂದೊಡ್ಡಿ ನಿಮ್ಮ Cabinet ಒಡೆದು ನಿಮ್ಮ ಅಧಿಕಾರವನ್ನು ಕಸಿದುಕೊಳ್ಳಬೇಕೆನ್ನುವ ಹವಣಿಕೆ ಇರಬಹುದು. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಶರಾವತಿ ವಿಷಯದಲ್ಲಿ ಬಹಳ ಸ್ಪಷ್ಟವಾದ ಧೋರಣೆಯನ್ನು ತಾವು ವಹಿಸಬೇಕು. ಅಮೆರಿಕದವರು ಹಣವನ್ನು ಈಗಾಗಲೇ ಬಹು ಭಾಗ ಕೊಟ್ಟಿದ್ದಾರೆ, ಇನ್ನೂ ಕೊಡುವುದು ಇದೆ, ಮತ್ತು ಹೆಚ್ಚು ಹಣ ಪಡೆದುಕೊಳ್ಳಬೇಕು. ಅವರಿಗೆ ಪೂರ್ಣ ವಿಶ್ವಾಸ ಬರುವಂತೆ ಪ್ರತಿಯೊಂದು ವಿಷಯವನ್ನು ಸಾರ್ವಜನಿಕರ ಮುಂದೆ, ಕೇಂದ್ರ ಸರ್ಕಾರದ ಮುಂದೆ, ಮತ್ತು ಅಮೆರಿಕದವರ ಮುಂದೆ ಇಡಬೇಕಾದ್ದು ಬಹಳ ಅಗತ್ಯ, ಆವಶ್ಯಕವೆಂದು ನಾನು ಸರ್ಕಾರವನ್ನು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಚನ್ನಪಟ್ಟಣದ ಮಾನ್ಯ ಸದಸ್ಯರು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಬೇರೆ ಇಲಾಖೆಗಳಿಗಿಂತ ಲಂಚ ಹೆಚ್ಚಾಗಿಲ್ಲವೆಂದು ಹೇಳಿಬಿಟ್ಟರು. ಇವರು ಯಾವ ಕಾರಣಕ್ಕಾಗಿ ಹೇಳಿದರು, ಯಾವ ಧೈರ್ಯಮಾಡಿ ಹೇಳಿದರು, ಯಾವ ಅಂಕಿಅಂಶಗಳ ಆಧಾರದ ಮೇಲೆ ಹೇಳಿದರು, ಯಾವ ಉದ್ದೇಶ ಹೇಳಿದರು ಎನ್ನುವುದನ್ನು ನನಗೆ ತಿಳಿಯದಾಗಿದೆ. ಅವರು ಏನೋ ಒಂದು ಮಾತನ್ನು ಹೇಳಬೇಕೆಂದು ಹೇಳಿರಬಹುದು. ಆದರೆ ಇದು ದೊಡ್ಡ ವಿಷಯವಾದುದರಿಂದ ಅಂಥ ಮಾತುಗಳನ್ನು ನಿರ್ಣಾಯಕವಾದ ಮಾತುಗಳು ಎಂದು ಯಾರೂ ತೆಗೆದುಕೊಳ್ಳುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ಸಂಬಂಧಪಟ್ಟ ಮಂತ್ರಿಗಳಾಗಲೀ, ಯಾವುದೇ ದೊಡ್ಡ ಇಲಾಖೆಯ ಅಧಿಕಾರಿಗಳಾಗಲೀ, ಎದೆ ಮುಟ್ಟಿಕೊಂಡು ನನ್ನ ಇಲಾಖೆಯಲ್ಲಿ ಲಂಚವಿಲ್ಲ, ನನ್ನ ಇಲಾಖೆ ಪ್ರಾಮಾಣಿಕವಾಗಿ ಕೆಲಸಮಾಡುತ್ತಿದೆ, ಎಂದು ಹೇಳಿಬಿಟ್ಟರೆ ಆಗ ಅವಕ್ಕೆ ಜನರು ಏನು ಉತ್ತರ ಕೊಡುತ್ತಾರೆ; ಜನ ಇದ್ದಾರೆ ನಮಗಿಂತ ಹೆಚ್ಚು ನಿರ್ಣಯ ಕೊಡತಕ್ಕವರು, ಅವರು ತೀರ್ಮಾನ ಮಾಡಬೇಕು.

ಇವೊತ್ತಿನ ದಿವಸ ಇಲ್ಲಿ ಒಂದು ಪತ್ರಿಕೆ ಬಂದಿದೆ. ಅದರಲ್ಲಿ ಶರಾವತಿ ಲಂಚದ ವಿಚಿತ್ರ ಆಡಳಿತ, ಇವೆಲ್ಲಾ ಇದೆ. ನಾನು ಇದನ್ನು ಸರಕಾರದವರ ಕೈಗೆ ಕೊಡುತ್ತೇನೆ. ಈ ಪತ್ರಿಕೆ ನನಗೋಸ್ಕರವಾಗಿ ಬಂದಿರುವುದಿಲ್ಲ, ಇದು ಒಂದು ಪತ್ರಿಕೆ ರಿಜಿಸ್ಟರಾಗಿರುವುದು ಮತ್ತು ಜವಾಬ್ದಾರಿಯನ್ನು ಹೊತ್ತಿರತಕ್ಕ ಪ್ರಜೆಗಳ ಪ್ರತಿನಿಧಿಗಳಿಂದ ಬಂದಿರುವಂತಹ ಆಪಾದನೆಗಳು ಸಣ್ಣ ಪುಟ್ಟದೇನಲ್ಲ. ಇದರಲ್ಲಿರುವ ಆಪಾದನೆಗಳನ್ನೆಲ್ಲಾ ತಾವು ಸ್ವಲ್ಪ ವಿಚಾರ ಮಾಡಬೇಕು, ಮತ್ತು ಇದರಲ್ಲಿ ಅನೇಕ ಒಳ್ಳೆಯ, ಸಮಯೋಚಿತವಾದ ಗಹನವಾದ ವಿಷಯಗಳು ಇವೆ. ಅಂತಹ

(ಶ್ರೀ ಎಸ್. ಗೋಪಾಲ ಗೌಡ)

ವಿಷಯಗಳನ್ನು ಕೈಬಿಡ ಬೇಕಾಗುತ್ತದೆ ಎಂದು ಹೇಳುತ್ತಾ, ಇದರ ಬಗ್ಗೆ ಏನೂ ಗೊತ್ತಿಲ್ಲ ಎಂದು ಮಾನ್ಯ ಸಭೆಗೆ ಸರಕಾರ ಹೇಳುತ್ತ ಬರುವುದು ಸರಿಯಲ್ಲ. ಏಕೆಂದರೆ, ಈ ಸಮಸ್ಯೆಯನ್ನು ಸರಿಯಾಗಿ ತಿಳಿದುಕೊಂಡರೆ, ಎಲ್ಲಿ ನೋಡಿದರೂ ಇದೇ ಖಾತೆಯ ಲೆಕ್ಕದ ಅಂದಾಜು, ಲಂಚದ ಆಡಳಿತ ಎಂದು ಜನ ಮಾತನಾಡುತ್ತಲೇ ಇರುತ್ತಾರೆ. ಇಷ್ಟೊಂದು ಸಂಗತಿಗಳನ್ನು ಮುಚ್ಚಿಡು ವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ಈ ವಿಷಯದಲ್ಲಿ ಸರಕಾರ ಸರಿಯಾಗಿ ವರ್ತಿಸಬೇಕು.

ಎ. ಜಿ. ಆರ್. ಕಮಿಟಿಯಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ನೀರಾವರಿ ಯೋಜನೆಗಳ ಬಗ್ಗೆ ಬಹಳ ಒತ್ತಿ ಹೇಳಿದ್ದಾರೆ. ರಾಜ್ಯದ ಹಣಕಾಸಿನ ಸಂಪನ್ಮೂಲಗಳನ್ನು ಯಾವ ರೀತಿ ಹೆಚ್ಚಿಸಿ ಕೊಂಡು ಮಿತವ್ಯಯ ಮಾಡಬಹುದು ಎನ್ನುವ ವಿಷಯಗಳನ್ನೆಲ್ಲಾ ಸಾವಧಾನದಿಂದ ಪರಿಶೀಲಿ ಸುವುದು ಅತ್ಯಾವಶ್ಯಕ, ಇದಕ್ಕೆ ರಾಜಕೀಯ ಬಣ್ಣವನ್ನುಪಯೋಗಿಸಿ ಸರಕಾರ ಸಲಹೆಗಳನ್ನು ಅಂಗೀಕಾರ ಮಾಡಬೇಕೆಂದು ನಾನು ಮಾತನಾಡುತ್ತಿಲ್ಲ. ಮಾನ್ಯ ಹಣಕಾಸಿನ ಮಂತ್ರಿಗಳು ಸುಮಾರು ಒಂದು, ಒಂದೂವರೆ ಕೋಟಿಯಷ್ಟು ಹಣವನ್ನು ಮಾತ್ರ ಉಳಿತಾಯ ಮಾಡಿದ್ದೇವೆಂದು ಹೇಳಿದರು, ಸರ್ಕಾರ ಇನ್ನೂ ಮೂರು ಅಥವಾ ನಾಲ್ಕು ಕೋಟಿಯಷ್ಟು ಉಳಿತಾಯ ಮಾಡ ಬಹುದು. ಆ ರೀತಿ ಉಳಿತಾಯ ಮಾಡಬೇಕಾದುದು, ಬಹಳ ಅಗತ್ಯ.

ಇನ್ನು ಲಂಚದ ವಿಷಯವಾಗಿ ಮಾತನಾಡುತ್ತ ಅನೇಕರು ಅನೇಕ ರೀತಿಯಲ್ಲಿ ಹೇಳಿದರು, ಮಾನ್ಯ ನೆಹರೂರವರೂ ಕೂಡ ಲಂಚ ಇಂದು ದೇಶದಲ್ಲಿ ಭ್ರಷ್ಟಚಾರವಲ್ಲ, ಸ್ವಜನ ಪಕ್ಷಪಾತ ಎಂದು ಒಪ್ಪಿಕೊಂಡಿದ್ದಾರೆ, ಸರಿಯಲ್ಲ. ಇದರಿಂದ ಬಹಳ ಶೋಚನೀಯ ಪರಿಸ್ಥಿತಿ ಏರ್ಪಟ್ಟಿದೆ ಎಂದೂ ಹೇಳಿದರು. ಇದರ ಬಗ್ಗೆ ವಿಚಾರ ಮಾಡಬೇಕು, ನಾವು ಇವೊತ್ತು 60-65 ಕೋಟಿಗಳಷ್ಟು ರೂಪಾಯಿಗಳನ್ನು ಯಾವ ಇಲಾಖೆಯ ಮೂಲಕ ಖರ್ಚು ಮಾಡುತ್ತೇವೋ ಅಲ್ಲೆಲ್ಲಾ ನಿಮ್ಮ ಪ್ರಾಮಾಣಿಕತೆಯನ್ನು ಜನ ನಿರೀಕ್ಷಿಸುತ್ತಾರೆ. ಹಾಗೆ ನಿರೀಕ್ಷಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಈ ಸಂಸ್ಥೆ ಎಷ್ಟು ಚೆನ್ನಾಗಿ ನಡೆದರೆ, ಅಷ್ಟು ಒಳ್ಳೆಯದು. ಹಿಂದೆ ಶರಾವತಿ ಕೆಲಸ ಆರಂಭ ಮಾಡಿದಾಗ, ಅದನ್ನು ದೊಡ್ಡ ಕಂಟ್ರಾಕ್ಟುಗಳಿಗೆ ಕೊಟ್ಟಾಗ ಈ ದೇಶದಲ್ಲಿ ಏನು ಒಂದು ದೊಡ್ಡ ಅಪಾದನೆ ಸರ್ಕಾರದ ಮುಂದೆ ಬಂದಿತ್ತು ಎನ್ನುವುದನ್ನು ವಿಚಾರ ಮಾಡಿಲ್ಲ. ಆ ರೀತಿ ಶ್ರೀಮಾನ್ ನಿಜಲಿಂಗಪ್ಪನವರು ಹೇಳಬೇಕಾದುದು ಅವರ ಕರ್ತವ್ಯ. ವಿಷಯ ತಿಳಿದವರು ಯಾರಾದರೂ, ಸರ್ಕಾರದಂತಹ ಒಂದು ಯಂತ್ರದ ನಡೆವಳಿಕೆಗಳ ಜವಾಬ್ದಾರಿ ಹೊತ್ತವರು ಮೈಸೂರು ಸರ್ಕಾರದ ಆಡಳಿತದ ಬಗ್ಗೆ ಹೇಳಬೇಕು. ಗೋಪಾಲ ಗೌಡರಿಗಾಗಿ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನ ಬಹುದು, ಸರಕಾರ ತಪ್ಪು ನಡೆವಳಿಕೆಗಳಲ್ಲಿ ನಡೆದಿದೆಯೋ ಇಲ್ಲವೋ ಎನ್ನುವುದನ್ನು ಈಗಲೂ ಹೇಳ ಬಹುದು. ಈ ವಿಚಾರವಾಗಿ ನಡೆದಿರುವುದರಲ್ಲಿ ತಪ್ಪಿಲ್ಲದಿದ್ದರೆ, ನಿಮ್ಮ ಮೇಲಿನ ಅಪಾದನೆಗಳೆಲ್ಲ ನಿರಾಧಾರವಾದುವುಗಳು ಆಗದಿದ್ದರೆ ಅಂತಹ ಅಪಾದನೆಗಳನ್ನು ನಿರಾಧಾರವಾದವುಗಳೆಂದು ಸಾಬೀತು ಮಾಡುವುದು ಸರಕಾರದ ಕರ್ತವ್ಯ.

ಇನ್ನು ಕೃಷ್ಣಾ-ಗೋದಾವರಿ ನೀರಿನ ಹಂಚುವಿಕೆ ಬಗ್ಗೆ ಗುಲ್ಹಾಟಿ ಕಮಿಷನ್ನಿನಿಂದ ಅನುಕೂಲ ವಾಗದೇ ಹೋದರೆ, ನಮ್ಮ ಸ್ನೇಹಿತರು ಸುಪ್ರೀಂ ಕೋರ್ಟಿಗೆ ಹೋಗಿ ಎಂದು ಹೇಳಿದರು. ಅವರು ಆಗ ಏಕೆ ಹೋಗಲಿಲ್ಲ ? ಆಗ ತಾವು ವ್ಯವಹಾರವನ್ನೆಲ್ಲಾ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾಡು ತ್ತಿದ್ದುದರಿಂದ ಸುಪ್ರೀಂ ಕೋರ್ಟಿಗೆ ಹೋಗಲು ಅವಕಾಶವಾಗಲಿಲ್ಲ ಎಂದು ಆಗ ಮುಖ್ಯ ಮಂತ್ರಿ ಗಳಾಗಿದ್ದ ಶ್ರೀಮಾನ್ ಜತ್ತಿಯವರು ಹೇಳಿದ್ದಾರೆ ಮತ್ತು ಆಗ ಅಧಿಕಾರದಲ್ಲಿದ್ದ ಶ್ರೀಮಾನ್ ಚನ್ನ ಬಸಪ್ಪನವರು ಹೇಳಿದ್ದಾರೆ. ಅವರು ಜವಾಬ್ದಾರಿ ಸ್ಥಾನದಿಂದ ಇದನ್ನು ವಿಚಾರ ಮಾಡಿದವರು. ಈ ವಿಷಯ ಮಹತ್ವವಾದದ್ದು ಎಂದು ತಿಳಿದವರು. ಆದುದರಿಂದ ಅವರ ಮಾತುಗಳಿಗೆ ಗೌರವ ಕೊಡಬೇಕಾಗಿದೆ. ಅವರ ಪರವಾಗಿ ನಾನು ವಾದ ಮಾಡುತ್ತಿಲ್ಲ. ಅವರು ಹೇಳುವುದೂ ಸರಿ ಎಂದು ಹೇಳುತ್ತಿಲ್ಲ. ಆದರೆ ನಾನು ಬಹಳ ದುಃಖದಿಂದ ಹೇಳುತ್ತೇನೆ. ಶ್ರೀಮಾನ್ ನಿಜಲಿಂಗಪ್ಪ ನವರಲ್ಲಿ ನಮಗೆ ವಿಶ್ವಾಸವಿದೆ. ಆದುದರಿಂದ ಅವರು ನಮ್ಮ ಪರವಾಗಿ ನಮ್ಮ ಬೇಡಿಕೆಗಳನ್ನು ಪೂರೈಸಿಕೊಡುತ್ತಾರೆ. ಮೈಸೂರಿನ ರಾಜ್ಯದ ಹಿತವನ್ನು ರಕ್ಷಿಸಿ ಕೊಳ್ಳುತ್ತಾರೆ ಎನ್ನುವ ಮಾತು ಬಹಳ ಒಳ್ಳೆಯದು. ಆದರೆ ಈ ರಣರಂಗದಲ್ಲಿ ಆಡಳಿತದ ಒಳ್ಳೆಯತನ ಪರಿಣಾಮಕಾರಿಯಾಗಲಿಲ್ಲ ಎನ್ನುವುದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಈ ಮೊದಲೇ ನಾನು ಹೇಳಿದ ಹಾಗೆ ಕೇಂದ್ರ ಸರ್ಕಾರದವರ ಈ ಜಗಳ ಆದದ್ದು ಗುಲ್ಹಾಟಿ ಕಮಿಷನ್ನು ನೇಮಕವಾದಂದಿನಿಂದೀಚೆಗೆ. ಈ ಗುಲ್ಹಾಟಿ ಕಮಿಷನ್ನಿನವರು ಈ ದೇಶದಲ್ಲಿ ಮತ್ತು ಮದರಾಸು ರಾಜ್ಯದಲ್ಲಿ ನೋಡಿಕೊಂಡು ಹೋದ ಮೇಲೆ ಸ್ಪಷ್ಟವಾಗಿ ರಿವರ್ ಬೋರ್ಡ್‌ಗಳು ಬೇಡ ಎಂದು ರಾಜ್ಯ ಸರ್ಕಾರಗಳು ಹೇಳಿದವು. ಕೇಂದ್ರ ಸರ್ಕಾರದ ಅಭಿಪ್ರಾಯ ಏನು, ರಾಜ್ಯ ಸರ್ಕಾರಗಳ ಅಭಿಪ್ರಾಯವೇನು ಎನ್ನುವುದನ್ನು

ನೋಡಿಕೊಂಡು ನೀರಿನ ಹಂಚಿಕೆ ಯಾವ ರೀತಿಯಾಗಿರಬೇಕು, ಎಂಬುದನ್ನು ಹೇಳಿದರು. ಆ ರೀತಿ ಯಾಗದೇ ಹೋದರೆ, ಮೈಸೂರು ರಾಜ್ಯದ ಹಿತದೃಷ್ಟಿಯಿಂದ ಇದು ಅಪಾಯಕರ. ಗುಲ್ಹಾಟಿ ಸಮಿತಿಯ ವರದಿಯಿಂದ ನಮ್ಮ ರಾಜ್ಯಕ್ಕೆ ಉಪಯೋಗವಾಗುವ ಹಾಗೆ ಕಾಣಿಸಲಿಲ್ಲ. ತಾವು ಮನ್ನಣೆ ಕೊಡುವಂತಹ ಸಲಹೆಗಳು ಅಲ್ಲವೆಯೋ ಇಲ್ಲವೋ ಗೊತ್ತಿಲ್ಲ. ತಾವು ಬಹಿರಂಗವಾಗಿ ಈ ಕಮಿಷನ್ನಿನವರು ಮಾಡುವ ಕಾರ್ಯ ತಿರುಳಿಲ್ಲದ ಮಾತು ಎಂದು ಆ ವರದಿಯನ್ನು ತಿರಸ್ಕರಿಸುವುದೇನೂ ಕಷ್ಟವಲ್ಲ. ಆದರೆ ಇವೆಲ್ಲ ಬರೀ ರಾಜಕೀಯ, ಇಂತಹ ರಾಜಕೀಯ ನಮ್ಮ ದೇಶದಲ್ಲಿ ನಡೆಯಬಾರದು. ನೀವು ಅಧಿಕಾರವನ್ನು ನಿಮ್ಮ ಕೈಯಲ್ಲೇ ಇಟ್ಟು ಕೊಳ್ಳುವ ಪ್ರಯತ್ನದಲ್ಲಿ ಇಂತಹ ಅತಿ ಮುಖ್ಯವಾದ ಪ್ರಸಂಗದಲ್ಲಿ ಸರಿಯಾದ ನಿಲುವನ್ನು ಕಳೆಯದೆ ಹೋಗಬಾರದು. ಇದು ಕೋಟಿ ಗಟ್ಟಲೆ ಜನರ ಜೀವನ ಮರಣಗಳ ಪ್ರಶ್ನೆ. ಗುಲ್ಹಾಟಿ ಕಮಿಷನ್ನಿನವರು ಹೇಳಿದ್ದಾರೆ ಎಂದು ಹೋದರೆ ಬಹಳ ಕಷ್ಟವಾದೀತು. ಇದರ ಹೊಣೆಯನ್ನು ನೀವೇ ಹೊರಬೇಕಾದದ್ದು ಎಂದು ಈ ವಿಷಯದಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತೇನೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಈ ರಾಜ್ಯದ ನಿಲುವನ್ನು ಆಗಿನಿಂದಲೂ ಬಹಳ ದಿಟ್ಟತನದಿಂದ ಹೇಳಬೇಕಾಗಿತ್ತು. ಈ ಪ್ರಸಂಗಕ್ಕೆ ಯಾರೇ ಕಾರಣರಾಗಿರಲಿ ಇಂತಹ ಸಮಸ್ಯೆಗಳ ಬಗ್ಗೆ ಮಾನ್ಯ ಸಭೆಯವರನ್ನು ತನ್ನವರಂತೆ ಗೌರವಿಸಿ ಇದರ ಬಗ್ಗೆ ಯಾವ ಯಾವ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುವ ಪ್ರಶ್ನೆಯೂ ಇರುತ್ತದೆ. ಇಂತಹ ವಿಷಯಗಳ ಬಗ್ಗೆ ಒಂದು ವೇಳೆ ಅವರುಗಳು ಯಾವ ನಿರ್ಣಯಕ್ಕೆ ಬಂದರೂ ಇಂತಹ ದೊಡ್ಡ ದೊಡ್ಡ ವಿಷಯಗಳ ಬಗ್ಗೆ ಮುಖ್ಯ ಮಂತ್ರಿಗಳು ಅಂತಹ ಜನರ ನಿರ್ಣಯವನ್ನು ನಾವು ಅಂಗೀಕಾರ ಮಾಡಲು ಸಮರ್ಥರು ಎನ್ನುವುದನ್ನು ಯೋಚನೆ ಮಾಡಬೇಕು. ಕಾಲ ಬಹಳ ಮುಖ್ಯವಾದ ವಿಷಯ. ಇವೊತ್ತಿದ್ದ ಕಾಲ ನಾಳೆ ಬರುವುದಿಲ್ಲ. ನಾವು ಅನೇಕ ವರ್ಷಗಳಿಂದಲೂ ಈ ತೊಳಲಾಟದಲ್ಲಿಯೇ ಕಾಲ ಕಳೆದಿದ್ದೇವೆ. ಆವೊತ್ತು ತುಂಗ ಅಥವಾ ತುಂಗಭದ್ರಾ ಅಣೆಕಟ್ಟಿನ ವಿಷಯದಲ್ಲಿ ಏನು ಮಾತುಗಳನ್ನು ಹೇಳಿದ್ದೆವೋ ಅದು ಈಗಲೂ ಸಲ್ಲುತ್ತದೆ. ನೀವು ಕೋಟಿ ಕೋಟಿಗಟ್ಟಲೆ ರೂಪಾಯಿಗಳನ್ನು ಇಂತಹ ದೊಡ್ಡ ಯೋಜನೆಗಳಿಗಾಗಿ ಕೊಟ್ಟು ಅವುಗಳಿಂದ ಸಾಕಷ್ಟು ಪ್ರತಿಫಲ ಪಡೆಯದೆ ಹೋದರೆ ಈ ಬಂಡವಾಳದ ಮೇಲೆ ಬಡ್ಡಿ ಎಷ್ಟಾದೀತು. ಇದರಿಂದ ಪ್ರಯೋಜನ ಪಡೆಯದೇ ಹೋದರೆ ಯೋಜನೆಯನ್ನು ಮಾಡಿ ಫಲ ಸಾಧಿಸಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಯೋಜನೆ ಷುರು ಆದಂದಿನಿಂದ ಕೊನೆಯವರಿಗೆ ಆಗಿರುವ ಚಿತ್ರ ಬಹಳ ಸ್ಪಷ್ಟವಾಗಿರುವುದರಿಂದ ಹಿಂದಿನಿಂದ ಅಂದಾಜು ಮಾಡಿದುದಕ್ಕಿಂತ ನಾಲ್ಕರಷ್ಟು ಹೆಚ್ಚಿನ ಹಣವನ್ನು ಈ ಯೋಜನೆಗಾಗಿ ಕೊಡಲಾಗಿದೆ. ಇಂತಹ ಯೋಜನೆಯಿಂದ ದೇಶದ ಜನತೆಗೆ ಸ್ವಲ್ಪ ಪ್ರಮಾಣದಲ್ಲಿಯಾದರೂ ಅನುಕೂಲವಾಗಬೇಕು. ಈ ವಿಷಯದಲ್ಲಿ ಕೇವಲ ಆಶ್ವಾಸನೆಯನ್ನು ಕೊಡುವುದರ ಮೂಲಕವೇ ಕೃಷ್ಣ-ಗೋದಾವರಿಯ ವಾದ ಬಗೆ ಹರಿಯುವುದಿಲ್ಲ. ಆ ರೀತಿಯಾಗಿ ಈ ನೀರಿನ ವಿವಾದ ಬಗೆ ಹರಿಯುತ್ತದೆ ಎಂದು ನಾನು ನಂಬುವುದಕ್ಕೂ ಸಾಧ್ಯವಿಲ್ಲ. ಇಂತಹ ವಿಷಯಗಳ ಬಗ್ಗೆ ಬೇಗನೆ ಮೈಸೂರು ಸರಕಾರ ತನ್ನ ನಿಲುವನ್ನೂ ನಿರ್ಧಾರವನ್ನೂ ತೆಗೆದುಕೊಳ್ಳಬೇಕು ಎಂದು ಇಲ್ಲಿ ಹೇಳುತ್ತೇನೆ.

ಇನ್ನು ರೈಲ್ವೇ ಬಗ್ಗೆ ಹೇಳುವಾಗ ನಮಗೆ ಬಹಳ ದುಃಖವಾಗುತ್ತದೆ. ಹೇಗೆಂದರೆ, ಕೇಂದ್ರ ಸರ್ಕಾರದವರು, ಮೈಸೂರು ರಾಜ್ಯವನ್ನು ಸಂಪೂರ್ಣವಾಗಿ ಕಡೆಗಾಣಿಸಿದಂತಿದೆ. ಜೀವಂತವಾಗಿದ್ದ ಕೆಲವು ರೈಲ್ವೇ ಯೋಜನೆಗಾಗಿ 13 ಕೋಟಿಯವರೆಗೆ ಖರ್ಚು ಮಾಡುತ್ತೇವೆಂದಿತ್ತು. ಮಂಗಳೂರು ಬಂದರು ಇದರಲ್ಲಿತ್ತು. ನಾವು ಬಹಳ ದಿವಸಗಳಿಂದಲೂ ಇದಾಗಬೇಕೆಂದು ಹೇಳುತ್ತಲೇ ಬಂದಿದ್ದರೂ ಇನ್ನೂ ಇದು ಹಿಂದುಳಿದಿದೆ. ಈ ಬಡ್ಜೆಟ್ಟಿನಲ್ಲಿ ಇದಕ್ಕೆ ಹಣ ಒಟ್ಟು ಎಷ್ಟು ಒದಗಿಸಿದ್ದೀರಿ ಎಂದರೆ, 13 ಕೋಟಿಯಲ್ಲ, 50 ಲಕ್ಷ ಮಾತ್ರ.

ಶ್ರೀ ಎಸ್. ನಿಜಲಿಂಗಪ್ಪ.—ಐವತ್ತು ಲಕ್ಷವಲ್ಲದೇ ಇನ್ನೂ ಹೆಚ್ಚು ಖರ್ಚಾದರೂ ಇದನ್ನು ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಎಸ್. ಗೋಪಾಲ ಗೌಡ.—ಆದುದರಿಂದ ಈಗಲಾದರೂ ಇದಕ್ಕೆ ಹಣ ಹೆಚ್ಚಾಗಿ ಕೊಡುವ ವ್ಯವಸ್ಥೆ ಮಾಡಬೇಕು. ಇದರಲ್ಲಿ ನನಗೇನೋ ಒಂದು ಶಂಕೆಯಿದೆ. ಕೇಂದ್ರ ಸರ್ಕಾರದಲ್ಲಿ ಬಹಳ ಜನ ಸಮುದ್ರವನ್ನೇ ನೋಡದಂತಹ ಜನರಿದ್ದಾರೆ. ಅವರಿಗೆ ಈ ಬಂದರು ಎನ್ನುವ ವಿಷಯವೇ ಗೊತ್ತಿಲ್ಲ. ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

ಆ ಬಗ್ಗೆ ಮೈಸೂರು ರೈತರಿಗೆ ಯಾವ ಆಶ್ವಾಸನೆಯನ್ನೂ ಕೊಡಲಿಲ್ಲ. ಆದಕ್ಕೆ ಮೈಸೂರು ಸರ್ಕಾರದವರು ಸ್ವಲ್ಪಮಟ್ಟಿಗೆ ಹೊಣೆಯನ್ನು ಹೊರಬೇಕಾಗುತ್ತದೆ. ಆದ್ದರಿಂದ ಇಂಥಾ ಕೆಲಸಗಳನ್ನು ಇನ್ನು ಮುಂದೆಯಾದರೂ ಸರಿಯಾದ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗತಕ್ಕ ಶಕ್ತಿ ನಮ್ಮ ಸರ್ಕಾರಕ್ಕೆ ಬರಲಿ ಎಂದು ನಾನು ಆಶಿಸುತ್ತೇನೆ. ಶರಾವತಿಯ ಯೋಜನೆಯ ವಿಚಾರದಲ್ಲಿ ಬಂದಿರತಕ್ಕ ಆಪಾದನೆಗಳನ್ನು ಸ್ಪಷ್ಟವಾಗಿ ಜನಗಳ ಮುಂದೆ ತೊಳೆದುಕೊಳ್ಳುವುದಕ್ಕೆ ಏನೂ ಕಳಂಕವಿಲ್ಲ. ಆದ್ದರಿಂದ ಅದನ್ನು ಜನತೆಯ ಮುಂದೆ ಇಡುವುದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡುತ್ತಾರೆಂದು ನಾನು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎ. ವಾಸಣ್ಣಶೆಟ್ಟಿ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ, ಈ ದಿನ ಈ ಸಭೆಯ ಮುಂದಿಟ್ಟಿರುವ ಪಬ್ಲಿಕ್ ವರ್ಕ್ಸ್ ಇಲಾಖೆಯ ಡಿಮ್ಯಾಂಡಿನ ಮೇಲೆ ನಾನು ಮಾತನಾಡುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಈ ಇಲಾಖೆಯ ಎಸ್ಟಿಮೇಟುಗಳು ಮತ್ತು ಖರ್ಚುಬಾಬುಗಳನ್ನು ನೋಡಿದರೆ ನಮ್ಮ ಹಾಸನ ಜಿಲ್ಲೆ ಬಹಳ ಹಿಂದೆ ಬಿದ್ದಿದೆ ಎಂದು ವ್ಯಕ್ತವಾಗುತ್ತದೆ. ಆ ಜಿಲ್ಲೆಗೆ ಕೇವಲ 6 ಲಕ್ಷ ರೂಪಾಯಿಗಳ ಒಂದು ಕಾಮಗಾರಿ ಕೆಲಸ ನಡೆಯುವಂಥಾ ಪರಿಸ್ಥಿತಿಯನ್ನು ನಾವು ಪಡೆದಿದ್ದೇವೆ. ಇದಕ್ಕೆ ಕಾರಣ ಹಾಸನ ಜಿಲ್ಲೆಯಲ್ಲಿ ಮತ್ತೊಂದು ವಿಭಾಗವನ್ನು ಪ್ರಾರಂಭಿಸಬೇಕೆಂದು ನಾವು ಕೇಳುತ್ತಿದ್ದೇವೆ. ಆದರೂ ಸಹ ಸರ್ಕಾರದವರು ಅದನ್ನು ಮಾಡಲಿಲ್ಲ. ವರ್ಕ್‌ಲೋಡ್ ಕೆಲಸ ಜಾಸ್ತಿಯಿಲ್ಲ ಎನ್ನುವ ಭಾವನೆಯಿಂದ ಹಾಸನ ಜಿಲ್ಲೆಯಲ್ಲಿ ಒಂದೇ ಡಿವಿಜನ್ ಇದೆ. ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ ಎರಡು ಸಬ್‌ಡಿವಿಜನ್ ಮಾಡಿದ ಪಕ್ಷದಲ್ಲಿ ಅಲ್ಲಿ ಹೆಚ್ಚಿನ ಕಾಮಗಾರಿಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಮಾಡಿಸಿಕೊಡಬೇಕೆಂದು ಹೋದ ವರ್ಷ ಕೂಡ ನಾನು ಕೇಳಿದ್ದೆನು. ಮಲೆನಾಡಿನ ಕ್ಷೇತ್ರದಲ್ಲಿ ಕೆಲವು ಉಪಯುಕ್ತವಾದ ಕೆಲಸಗಳು ನಡೆಯಬೇಕು ಎಂದು ನಾವು ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತಿದ್ದರೂ ಸಹ ಅವುಗಳನ್ನು ಯಾವುದನ್ನೂ ಸರ್ಕಾರದವರು ಕೈಗೊಂಡಿಲ್ಲ. ಅತಿ ಮುಖ್ಯವಾಗಿ ಮೂರು ಸೇತುವೆಗಳ ಕೆಲಸ ನಮ್ಮ ತಾಲ್ಲೂಕಿನಲ್ಲಿ ನಡೆಯಬೇಕಾಗಿದೆ. ಹುಳಿಮಾವಿನ ಸೇತುವೆಯ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಕೈಗೊಳ್ಳಬೇಕೆಂದು ನಾವು ಬಹಳ ಸಾರಿ ಸರ್ಕಾರಕ್ಕೆ ಒತ್ತಾಯ ಮಾಡಿ ತಿಳಿಸಿದ್ದೇವೆ. ಇದು ಬಹಳ ಪ್ರಾಮುಖ್ಯವಾದದ್ದು. ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಮತ್ತು ಹಾಸನ ಜಿಲ್ಲೆಯ ಸಂಪರ್ಕದಲ್ಲಿ ಬಹಳ ಸಮೀಪ ಸಂಪರ್ಕವನ್ನು ಏರ್ಪಡಿಸುವಂಥಾ ಬಹಳ ಪ್ರಾಮುಖ್ಯವಾದಂಥ ಸೇತುವೆ ಇದು ಆಗಿದೆ. ಈ ವರ್ಷ ಅದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದಂತೆ ಕಾಣುವುದಿಲ್ಲ. ಹಾಗೆಯೇ ಕೊಡಗು ಹಾಸನ ಜಿಲ್ಲೆಗೆ ಸಂಪರ್ಕವನ್ನು ಏರ್ಪಡಿಸುವಂಥಾ ನಂಬಲಗೆರೆ ಎಂಬ ಸೇತುವೆಗೆ ಹಣವನ್ನು ಒದಗಿಸಿ ಅದಕ್ಕೆ ಈಗಾಗಲೇ 40 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೂ ಸಹ ಸಿಮೆಂಟ್ ಮತ್ತು ಕಬ್ಬಿಣದ ಅಭಾವದಿಂದ ಅದರ ಕೆಲಸ ಆಗಿಲ್ಲ. ಇಲ್ಲಿಯವರೆಗೆ ಆ ಸೇತುವೆಯ ಕೆಲಸಕ್ಕೆ ಖರ್ಚು ಮಾಡಿರುವ ಹಣವನ್ನು ಉಪಯುಕ್ತವಾಗುವ ರೀತಿಯಲ್ಲಿ ಖರ್ಚು ಮಾಡಿಲ್ಲ. ಆ ಕೆಲಸ ಇನ್ನೂ ಮುಗಿಯದೆ ಹಾಗೆಯೇ ಅರ್ಧಂಬರ್ಧವಾಗಿ ನಿಂತಿದೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನು ಒದಗಿಸಿಲ್ಲ. ಆದ್ದರಿಂದ ಈ ವರ್ಷ ಕೂಡ ಆ ಕೆಲಸವನ್ನು ಮುಗಿಸುವಂಥಾ ಸಂದರ್ಭವಿಲ್ಲ. ಹಾಗೆಯೇ ಎಡಕೆರೆ ಸೇತುವೆಗೆ ಈಗಾಗಲೇ ಸರ್ಕಾರದವರು 40 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆ ಸೇತುವೆಗೆ ಒಂದು ಲಕ್ಷ ಚಿಲ್ಲರೆ ಎಸ್ಟಿಮೇಟ್ ಮಾಡಿ ಈಗಾಗಲೇ ಆ ಕೆಲಸವನ್ನು ಪ್ರಾರಂಭಮಾಡಿ ಅರ್ಧಂಬರ್ಧ ಕೆಲಸವಾಗಿದ್ದರೂ ಕೂಡ ಈ ವರ್ಷದ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನು ಒದಗಿಸಿಲ್ಲ. ನಮ್ಮ ತಾಲ್ಲೂಕಿನಲ್ಲಿ ಅತಿ ಪ್ರಾಮುಖ್ಯವಾದ ವೋರ್ ಕ್ಯಾರಿಯಿಂಗ್ ರೋಡಿನಲ್ಲಿ ಇರತಕ್ಕ ಒಂದು ಸೇತುವೆ ಕೆಲಸವನ್ನು ಮಾಡಿಕೊಡಬೇಕೆಂದು ಕೇಳಿದ್ದೆವು. ಅದನ್ನು ಸಹ ಮಾಡಿಕೊಟ್ಟಿಲ್ಲ. ಅಲ್ಲಿನ ರಸ್ತೆ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ಅದನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಮಾನ್ಯ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ಹಾಸನ ಜಿಲ್ಲೆಯ ವಿಚಾರದಲ್ಲಿ ಹೆಚ್ಚಿನ ಗಮನವನ್ನು ತೆಗೆದುಕೊಂಡು ಈ ವರ್ಷ ಸ್ವಲ್ಪ ಚುರುಕಾಗಿ ಕೆಲಸ ಕಾರ್ಯಗಳನ್ನು ಮಾಡಿ ಈಗ ಅರ್ಧಂಬರ್ಧ ಆಗಿರತಕ್ಕ ಕೆಲಸ ಕಾರ್ಯಗಳನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಮೂಲಕ ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಸುಮಾರು 60 ಕೋಟಿ ಚಿಲ್ಲರೆ ರೂಪಾಯಿಗಳನ್ನು ನಮ್ಮ ಸರ್ಕಾರದವರು ಖರ್ಚುಮಾಡುತ್ತಿದ್ದಾರೆ. ಇವೊತ್ತಿನ ದಿವಸ ಸ್ಥಳೀಯವಾಗಿ ಸರ್ಕಾರದವರು ಯಾವ ಯಾವ ಕೆಲಸ ಕಾರ್ಯಗಳನ್ನು ಮಾಡಿಸುತ್ತಿದ್ದಾರೆಯೋ ಅವುಗಳನ್ನೆಲ್ಲಾ ಆಯಾ ಸಂಸ್ಥೆಗಳ ಮುಖಾಂತರ ಮಾಡಿಸುವುದು ಒಳ್ಳೆಯದು. ಈಗಾಗಲೇ ಆಡಳಿತ ವಿಕೇಂದ್ರೀಕರಣ ಮಾಡಿ ಸ್ಥಳೀಯ ಸಂಸ್ಥೆಗಳಿಗೆ ಕೆಲವು ಅಧಿಕಾರಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಈಗ ಯಾವ ಒಂದು ಕ್ಷೇತ್ರದಲ್ಲೇ ಆಗಲಿ ಅಲ್ಲಿ ನಡೆಯತಕ್ಕಂಥ ಕೆಲಸ ಕಾರ್ಯಗಳು ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ನಡೆಯುತ್ತಿವೆ. ಅದರ ಮೇಲ್ವಿಚಾರಣೆಯನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಿ ಇದರ ಅಧಿಕಾರವನ್ನು ಅವರಿಗೆ ಕೊಡಬೇಕೆಂದು ನನಗಾದರೂ ಅನ್ನಿಸುತ್ತದೆ. ಈಗ ತಾಲ್ಲೂಕು ಬೋರ್ಡುಗಳ ಅಧೀನದಲ್ಲಿ ಕೆಲಸ ಮಾಡುತ್ತಿರುವ ಅಸಿಸ್ಟೆಂಟ್ ಇಂಜಿನಿಯರುಗಳ ಮುಖಾಂತರವೇ ಈ ಕೆಲಸಗಳನ್ನು ಮಾಡಿಸಬಹುದು. ಒಂದೊಂದು ತಾಲ್ಲೂಕಿನಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಏನೇನು ಕೆಲಸ ಕಾರ್ಯಗಳು ನಡೆಯುತ್ತಿವೆಯೋ ಅವುಗಳ ಮೇಲ್ವಿಚಾರಣೆಯನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸುವಂಥಾ ಒಂದು ಏರ್ಪಾಡನ್ನು ಮಾಡುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ.

ಇನ್ನು ನೀರಾವರಿ ಯೋಜನೆಗಳ ವಿಚಾರ. ನೀರಾವರಿ ಯೋಜನೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಸರ್ಕಾರದವರು ಹೇಳುತ್ತಿದ್ದಾರೆ. ಅತಿ ಪ್ರಾಮುಖ್ಯವಾಗಿ ಎಲ್ಲೆಲ್ಲಿ ಎರಡು ಬೆಳೆಗಳನ್ನು ತಗೆಯತಕ್ಕ ಕೆರೆಗಳು ಇವೆಯೋ ಅಂಥಾ ಕೆರೆಗಳ ಕೆಲಸವನ್ನು ಮೊದಲು ತೆಗೆದುಕೊಂಡು ಮಾಡಬೇಕು. ಆದರೆ, ಈಗ ಅಂಥಾ ಕೆರೆಗಳ ಕೆಲಸವನ್ನು ಸರ್ಕಾರದವರು ಕೈಗೊಳ್ಳುತ್ತಾ ಇಲ್ಲ. ಎಲ್ಲಿ ಕಂಟ್ರಾಕ್ಟರುಗಳು ಒತ್ತಾಯದಿಂದ ತಮ್ಮ ಒಂದು ಕೆಲಸವನ್ನು ಮಾಡುವ ಉದ್ದೇಶದಿಂದ ಕೆಲಸಗಳನ್ನು ಮಾಡುವುದಕ್ಕೆ ಇಷ್ಟಪಡುತ್ತಾರೆಯೋ ಅಲ್ಲಿ ಕೆರೆಗಳಾಗಿವೆ. ಎಲ್ಲಿ ದಕ್ಷರಾದ ಅಧಿಕಾರಿಗಳು ಇದ್ದಾರೆಯೋ ಅಲ್ಲಿ ಕೆರೆಯ ಕೆಲಸಗಳಾಗಿವೆ. ಎಲ್ಲಿ ಕೆರೆಗಳ ಕೆಲಸವನ್ನು ಮಾಡುವುದಕ್ಕೆ ಕಂಟ್ರಾಕ್ಟರುಗಳು ಇಷ್ಟಪಡುವುದಿಲ್ಲವೋ, ಎಲ್ಲಿ ದಕ್ಷರಾದ ಅಧಿಕಾರಿಗಳು ಇರುವುದಿಲ್ಲವೋ ಅಂಥಾ ಕಡೆ ಕೆರೆಗಳ ಕೆಲಸಗಳು ಆಗದೆ ಆ ಒಂದು ಸೌಕರ್ಯವನ್ನು ಜನಗಳು ಪಡೆಯುವುದಕ್ಕೆ ಅವಕಾಶವಾಗಿಲ್ಲ. ಈ ರೀತಿ ಅನೇಕ ಕೆರೆಗಳಿವೆ. ಅದಕ್ಕೆ ಕಾರಣವನ್ನು ನಾನು ಈಗಾಗಲೇ ಹೇಳಿದ್ದೇನೆ. ಯಾವ ಒಂದು ತಾಲ್ಲೂಕಿನಲ್ಲೇ ಆಗಲಿ, ಆ ತಾಲ್ಲೂಕಿನಲ್ಲಿ ಏನೇನು ನೀರಾವರಿ ಯೋಜನೆಯ ಕೆಲಸ ಕಾರ್ಯಗಳನ್ನು ಸರ್ಕಾರದವರು ಕೈಗೊಳ್ಳುತ್ತಾರೆಯೋ ಅವುಗಳ ಮೇಲ್ವಿಚಾರಣೆಯನ್ನು ತಾಲ್ಲೂಕು ಬೋರ್ಡಿಗೆ ವಹಿಸಬೇಕು. ಮತ್ತು ತಾಲ್ಲೂಕು ಬೋರ್ಡಿನಲ್ಲಿ ಯಾವ ಯಾವ ಪ್ರಾಮುಖ್ಯವಾದ ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವಂಥಾದ್ದನ್ನು ಚರ್ಚಿಸಿ ಅಂಥವುಗಳನ್ನು ಮಾತ್ರ ತೆಗೆದುಕೊಳ್ಳುವಂಥಾ ವ್ಯವಸ್ಥೆಯನ್ನು ಮಾಡಬೇಕು.

ಆ ಮೇಲೆ ನನ್ನ ಕ್ಷೇತ್ರದಲ್ಲಿ ಒಂದು ದೊಡ್ಡ ಯೋಜನೆ ಇದೆ. ಅದು ಯಾವುದೆಂದರೆ ಹೇಮಾವತಿ ಯೋಜನೆ. ಅದರ ವಿಚಾರದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಈ ಅಣೆಕಟ್ಟನ್ನು ಕಟ್ಟಬೇಡಿ ಎಂದು ನಾನು ಈ ದಿವಸ ಹೇಳಿದರೆ ಅದು ಹಾಸ್ಯಾಸ್ಪದವಾದ ಮಾತಾಗುತ್ತದೆ ಎನ್ನುವ ನಂಬಿಕೆ ನನಗೆ ಇದೆ. ಆದರೂ ಸಹ ನಾನು ಆ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳುತ್ತೇನೆ. ಅನೇಕ ವರ್ಷಗಳ ಹಿಂದೆ ಈ ಯೋಜನೆಯನ್ನು ಕೈಗೊಂಡು ಶೀಘ್ರವಾಗಿ ಕಾರ್ಯಗತ ಮಾಡಬೇಕು ಎಂದು ಹಿಂದಿನ ಸರಕಾರದವರು 1933 ರಲ್ಲಿ ಒಂದು ಎಸ್ಟಿಮೇಟನ್ನು ತಯಾರು ಮಾಡಿದ್ದರು. ಆ ಮೇಲೆ ಅದು ಅಷ್ಟು ಉಪಯುಕ್ತವಾದ ಯೋಜನೆಯಲ್ಲ ಮುಳುಗಡೆಯಾಗತಕ್ಕಂಥ ಜಮೀನು ಜಾಸ್ತಿ. ಆದರೆ ಈ ಯೋಜನೆಯಲ್ಲಿ ಹೊಸದಾಗಿ ಸಾಗುವಳಿಯಾಗತಕ್ಕಂಥ ಜಮೀನು ಬಹಳ ಕಡಿಮೆ ಎಂದು ನನಗೆ ತಿಳಿದ ಮಟ್ಟಿಗೆ ಎರಡು ಸಾರಿ ಈ ಯೋಜನೆಯನ್ನು ಕೈಬಿಟ್ಟರು. ಆ ಪ್ರದೇಶದ ಅಭಿವೃದ್ಧಿಗಾಗಿ ಹೇಗೋ ಅಣೆಕಟ್ಟನ್ನು ಕಟ್ಟುತ್ತಾರೆಂದು ಬಹಳ ದಿವಸಗಳಿಂದ ಆ ಕ್ಷೇತ್ರದಲ್ಲಿ ಯಾವ ಒಂದು ಕಾಮಗಾರಿಯನ್ನು ಕೂಡ ತೆಗೆದುಕೊಂಡಿಲ್ಲ. ಆದ್ದರಿಂದ ನಮ್ಮ ಕ್ಷೇತ್ರದ ಜನಗಳಿಗೆ ಯಾವ ಸೌಲಭ್ಯವೂ ಸಿಕ್ಕಿಲ್ಲ. ಈ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳುವಂಥಾ ಕಾವೇರಿ ನದಿಗೆ ಸಂಬಂಧ ಪಟ್ಟ ಯೋಜನೆ ಎಂದರೆ ಹಾರಂಗಿ ಪ್ರಾಜೆಕ್ಟ್ ಬಹಳ ಪ್ರಾಮುಖ್ಯವಾದ ಮತ್ತು ಉಪಯುಕ್ತವಾದದ್ದು. ಇದನ್ನು ಜಾಗ್ರತೆ ತೆಗೆದುಕೊಳ್ಳಬೇಕು. ಹೇಮಾವತಿ ಯೋಜನೆಯಲ್ಲಿ ಉಪನದಿಗಳಿಂದ ನೀರನ್ನು ಉಪಯೋಗಿಸಿಕೊಂಡು ಸಣ್ಣ ಕಾಮಗಾರಿಗಳು ನಡೆಯುವಂಥಾ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಉತ್ತಮ ಎಂದು ನನ್ನ ಭಾವನೆ.

ಬಹಳ ವರ್ಷಗಳಿಂದ ಈ ಸ್ಥಳದಲ್ಲಿ ಒಂದು ಅಭಿವೃದ್ಧಿ ಕಾರ್ಯಕೂಡ ನಡೆಯುತ್ತಾ ಇಲ್ಲ. ಸರ್ಕಾರದವರು ಈ ಯೋಜನೆಯನ್ನು ಕೈಗೊಳ್ಳಲೇಬೇಕು. ಇದು ಬಹಳ ಉಪಯುಕ್ತವಾದ ಯೋಜನೆ ಅಂತ ಹೇಳಿ ಅವರು ಮನಗೊಳ್ಳುವುದಾದರೆ ಕೂಡಲೆಯಾದರೂ ಈ ಒಂದು ಕಾರ್ಯವನ್ನು ಕಾರ್ಯಗತ ಮಾಡಬೇಕು. ಅಲ್ಲಿಯ ಜನಗಳಿಗೆ ಈ ಯೋಜನೆಯನ್ನು ಈವಾಗಲಾದರೂ ಕೈಗೊಳ್ಳುತ್ತಾರೆಯೋ ಇಲ್ಲವೋ ಅಥವ ಮೂವತ್ತು ವರ್ಷದಿಂದ ಕೈಗೊಳ್ಳದೆ ಇರುವ ಈ ಯೋಜನೆಯಲ್ಲಿ ಇದೇ ರೀತಿ ಬಿಟ್ಟುಬಿಡುತ್ತಾರೆಯೋ ಅನ್ನುವ ಒಂದು ಭಯವೂ ಕೂಡ ಬಂದಿದೆ. ಅದೂ ಅಲ್ಲದೆ ಆ ಪ್ರದೇಶದಲ್ಲಿನ ಜನಗಳಿಗೆ ಒಂದು ವಸತಿ ಸೌಕರ್ಯವನ್ನು ಕಲ್ಪಿಸಿಕೊಡುವಾಗ, ಅವರು ಎಲ್ಲೆಲ್ಲಿ ಹೋಗುತ್ತಾರೆಯೋ, ಅಂಥ ಸ್ಥಳಗಳಲ್ಲಿ ಜಮೀನು ಕೊಟ್ಟು, ಮನೆಮಠಗಳನ್ನು ಕಟ್ಟಿಕೊಳ್ಳುವುದಕ್ಕೂ ಒಂದು ಸ್ಥಳ ಅವರಿಗೋಸ್ಕರ ರಿಜರ್ವ್ ಮಾಡುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ. ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕೆಂದು ಸರ್ಕಾರಕ್ಕೆ ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

4-30 P.M.

ಈ ಯೋಜನೆಯನ್ನು ಮೊದಲನೇ ಹಂತ, ಎರಡನೇ ಹಂತ ಎಂದು ಹೇಳಿ ಎರಡು ಸ್ಟೇಜುಗಳಲ್ಲಿ ಪ್ರಾರಂಭ ಮಾಡಬೇಕೆಂದು ಹಿಂದಿನ ಸಚಿವರು ಹೇಳಿದ್ದರು. ಈ ಮೂರು ಯೋಜನೆಗಳನ್ನು

(ಶ್ರೀ ಎಸ್. ಎ. ವಾಸಣ್ಣಶೆಟ್ಟಿ)

ಕೈಗೊಳ್ಳಬೇಕೆಂದು ಹೇಳಿ ಟೇಪ್‌ಷೀಟ್ ನೋಡಿ. ಎಷ್ಟು ಮುಳುಗಡೆಯಾಗುತ್ತದೆ, ಎಷ್ಟು ಪ್ರದೇಶ ಸಾಗುವಳಿಗೆ ಬರುತ್ತದೆ ಎಂದು ಲೆಕ್ಕ ಹಾಕಿ ಒಂದು ಕಾರ್ಯಕ್ರಮವನ್ನು ಹಿಂದೆಯೇ ಹಾಕಿ ಅಂಕಿ ಅಂಶಗಳನ್ನು ಶೇಖರಿಸಿದ್ದರು, ಎಂದು ನನಗಾದರೂ ಅನಿಸುತ್ತದೆ. ನಮ್ಮ ಸಕಲೇಶಪುರದಲ್ಲಿ ಸೇತುವೆ ಕೆಲಸ ವಿಳಂಬವಾಗುವುದಕ್ಕೆ ಇದೂ ಒಂದು ಕಾರಣ. ಹೇಮಾವತಿ ನದಿ ಆಳ ಎಷ್ಟಿದೆ ಯೆಂದು ನೋಡುವ ಬಾವಿಗಳನ್ನು ತೋಡುತ್ತಾ ಇರುವ ಸಂದರ್ಭದಲ್ಲಿ, ನಮಗೆ ಇದರ ಅರಿವು ಆಗಿದೆ. ಅನೇಕ ದೊಡ್ಡ ದೊಡ್ಡ ಮರಗಳು ಕೂಡ ಕಳಗೆ ಸಿಕ್ಕಿ, ಬಾವಿಗಳ ಕೆಲಸ ನಿಲ್ಲಿಸಬೇಕಾಗಿಬಂದು, ಸೇತುವೆ ಕೆಲಸ ತಡವಾಗಲು ಒಂದು ಕಾರಣವಾಯಿತು. ಹೇಮಾವತಿ ಮರಳು ತುಂಬಿ, ಹೇಮಾವತಿ ದಡದ ಅಕ್ಕಪಕ್ಕದಲ್ಲಿ ಉದ್ದಕ್ಕೂ ಕೂಡ, ಎರಡು ಕಡೆಗೂ ಕೂಡ ಫಲವತ್ತಾದ ತರಿ ಜಮೀನು ಇದೆ; ಈ ಪ್ರದೇಶಕ್ಕೆ ಭತ್ತದ ಕಣಜ ಎಂದು ಹೆಸರು ಕೊಟ್ಟಿದ್ದಾರೆ. ಮಳೆಗಾಲದಲ್ಲಿ ನೀರಿನ ಕಾರಣ ದಿಂದ, ನಾಟಿ ಮಾಡಬೇಕಾದರೆ, ಸೆಪ್ಟೆಂಬರ್, ಅಕ್ಟೋಬರಿನಲ್ಲಿ ನಾಟಿ ಮಾಡಿ, ಬತ್ತದ ಪೈರನ್ನು ತೆಗೆಯುತ್ತಾರೆ. ನದಿಯ ಎರಡು ಕಡೆಯಲ್ಲಿಯೂ ಫಲವತ್ತಾದ ಗದ್ದೆಯಿರುವುದರಿಂದ, ಈ ಸಲ ಕಟ್ಟಿದರೆ ಈ ಜಮೀನು ಸಾಗುವಳಿಗೆ ಪ್ರಯೋಜನವಿಲ್ಲದೆ, ಇನ್ನು ಇಪ್ಪತ್ತು ಸಾವಿರ ಎಕರೆ ಮುಳುಗಡೆ ಯಾಗಿ ಹೋಗುತ್ತದೆ. ಆದ್ದರಿಂದ ಈ ಹೇಮಾವತಿ ಯೋಜನೆ ಆಗಬಾರದು. ಈ ತೊಂದರೆಗಳ ನ್ನೆಲ್ಲಾ ವಿಮರ್ಶೆ ಮಾಡಬೇಕು.

ಇನ್ನು ವಿದ್ಯುಚ್ಛಕ್ತಿ ವಿಚಾರದಲ್ಲಿ ಹೇಳುವುದಾದರೆ ನಮ್ಮಲ್ಲಿ ಕೆಲವು ಕಡೆಗಳಿಗೆ ಮನೆದೀಪಗಳಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳಿ ನಾಲ್ಕು-ಐದು ವರ್ಷಗಳಿಂದ ವೈರ್‌ಗಳನ್ನು ಹಾಕಿಕೊಂಡು, ಇವತ್ತು ವಿದ್ಯುಚ್ಛಕ್ತಿ ಬರುತ್ತದೆ, ನಾಳೆ ಬರುತ್ತದೆಂದು ಕಾಯುತ್ತಾ ಇದ್ದಾರೆ. ಈ ಎರಡು ಹಳ್ಳಿ ಗಳೆಂದರೆ-ಅತ್ತಿಹಳ್ಳಿ ಮತ್ತು ದೇವಲಾಕೆರೆ. ಐದು ವರ್ಷಗಳಿಂದ ಬೇಕಾದ ಸಾಮಾನು, ಸಾಮಗ್ರಿ ಗಳಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತಿಗೂ ಕೂಡ ಪರಿಸ್ಥಿತಿ ಹೊಸದಾಗಿಲ್ಲ; ನಾನು ಈ ಸಭೆಯ ಸದಸ್ಯನಾದ ಮೇಲೆ Electricity Board Chairman ಅವರನ್ನು ನೋಡಿ ಅವರಲ್ಲಿ ಪ್ರಾರ್ಥನೆ ಮಾಡಿಕೊಂಡೆ. ನಾನು ಒತ್ತಾಯಪೂರ್ವಕವಾಗಿ ತಿಳಿಸಿದ್ದರೆ ಮೇಲೆ ಈ ಕಾಂಗಾರಿಯನ್ನು ಕೈಗೊಂಡಿ ದ್ದಾರೆ. ಇಂಥ ಒಂದು ವಿಳಂಬವಾದರೆ ಇದನ್ನು ನಂಬಿರುವಂಥ ಜನರಿಗೆ ಬಹಳ ತೊಂದರೆಯಾಗು ತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕೂಡ ತಾವು ಒದಗಿಸಿರುವ ಹಣ ಮತ್ತು ಸಾಮಗ್ರಿಗಳು ಸ್ಪಷ್ಟವಾಗಿ ಸಿಗುವಂತಹ ಕೆಲಸಗಳನ್ನು ಮಾತ್ರ ಕೈಗೊಳ್ಳಬೇಕು. ಇಲ್ಲದೆ ಹೋದರೆ ಪ್ರತಿವರ್ಷವೂ scheduled rate ಜಾಸ್ತಿಯಾಗುತ್ತಾ ಬರುತ್ತದೆ. ಅನೇಕ ಸಂದರ್ಭಗಳಲ್ಲಿ ಕಂಟ್ರಾಕ್ಟ್‌ದಾರ ರಿಗೂ ಮತ್ತು ಡಿಪಾರ್ಟ್‌ಮೆಂಟಿನವರಿಗೂ ವ್ಯತ್ಯಾಸ ಬಂದು, ಕಂಟ್ರಾಕ್ಟರು ಹೆಚ್ಚಿಗೆ ಹಣ ಕೇಳುವ ಪ್ರಸಂಗ ಬಂದು, ಅನೇಕ ಕೆಲಸಗಳು ಮುಗಿಯದೆ ನಿಲ್ಲುವುದಕ್ಕೆ ಕಾರಣವಾಗುತ್ತದೆ. ಅದಕ್ಕೆ ನಿದರ್ಶನ ಬೇಕಾದರೆ ನಮ್ಮ ಸಕಲೇಶಪುರದಲ್ಲಿಯೇ ಇದೆ; ಸಕಲೇಶಪುರ ಪುರಸಭೆಯವರು ಹಣ ವನ್ನು ಕಟ್ಟಿ, ಒಂದು ಟೌನ್‌ಹಾಲ್ ಕಟ್ಟಬೇಕು ಅಂತ ಹೇಳಿ ಈಗ ನಾಲ್ಕು ವರ್ಷಗಳಿಂದ ಕಷ್ಟ ಪಟ್ಟರೂ ಸಹ, ಸಿಮೆಂಟ್, ಕಬ್ಬಿಣ ಇಲ್ಲವೆಂತ ಹೇಳಿ ಎರಡು ವರ್ಷದಿಂದ ಕೆಲಸ ನಿಲ್ಲಿಸಿ, ಕಂಟ್ರಾಕ್ಟರು revised estimate ಪ್ರಕಾರ ಹೆಚ್ಚಿಗೆ ಹಣ ಕೇಳುವ ಪರಿಸ್ಥಿತಿ ಬಂದಿದೆ; ಕೆಲಸ ಮುಗಿಯದೆ ನಿಂತಿದೆ. ಒಂದು ಕೆಲಸವನ್ನು ತೆಗೆದುಕೊಂಡರೆ, ನಿಗದಿಯಾದ ಅವಧಿಯಲ್ಲಿ ಮುಗಿಯುತ್ತಾ ಬಂದರೆ ಬಹಳ ಉತ್ತಮ. ಇದಕ್ಕೆ ಹೆಚ್ಚಿನ ಗಮನಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ನನ್ನ ಪಕ್ಕದ ಕಾನ್‌ಸ್ಟಿಟ್ಯುಯನ್ಸಿ ಚಂದ್ರ ಶೇಖರಪುರ. ಅದು ನನ್ನ ಮಾನ್ಯ ಸ್ನೇಹಿತರಾದ ಶ್ರೀ ಹುಚ್ಚಮಾಸ್ತಿಗೌಡರ ಕಾನ್‌ಸ್ಟಿಟ್ಯುಯನ್ಸಿ. ಅಲ್ಲಿ ನೀರಾವರಿ ಕೆಲಸ ಚೆನ್ನಾಗಿ ಆಗಿದೆ ಅಂತ ಹೇಳುತ್ತಾರೆ. ಅದಕ್ಕೆ ಬಹಳ ಸಂತೋಷ. ಸರ್ಕಾರ ದವರಿಗೆ ಬೇಕಾದವರಿಗೆ ಕೆಲಸ ಚೆನ್ನಾಗಿ ಆಗುತ್ತೆ. ನಮ್ಮಲ್ಲಿ ಬಹಳ ಕೆರೆಗಳು ಹೊಡೆದುಹೋಗಿವೆ. ಅವುಗಳ ಅಂಗಳದಲ್ಲಿ ಸಾಹುಕಾರರು ಜಮೀನು ತೆಗೆದುಕೊಂಡು, ಪಕ್ಕದಲ್ಲಿರುವ ಹಳ್ಳಿಯವರಿಗೆ ಅರ್ಧ, ಮುಕ್ಕಾಲು ಎಕರೆ ಕೊಟ್ಟುಬಿಟ್ಟಿದ್ದಾರೆ; ಆ ಸಾಹುಕಾರರುಗಳಲ್ಲಿ ಯಾರೂ ಕೆರೆ ಕಟ್ಟಿ ಅಂತ ಮುಂದಕ್ಕೆ ಬರುವುದಿಲ್ಲ. ಒಡೆದು ಹೋಗಿರುವ ಕೆರೆಗಳನ್ನು ಕಟ್ಟಿ ಅಂತ ಕೇಳಿದರೆ ತಾವು ಕಟ್ಟು ವುದಕ್ಕೆ ಪ್ರಯತ್ನ ಮಾಡಬೇಕು. ಸಾಹುಕಾರರು ಈ ತರಹ ಮಾಡಿರುವುದು ಇದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಕುಣಿಗಲ್ಲಿನಿಂದ ಮೈಸೂರಿಗೆ ಹೋಗುವಾಗ ಸಿಗುವ ಕಬ್ಬಿಣದ ಸೇತುವೆ ಅಗಲ ಬಹಳ ಕಡಿಮೆ; ಬಸ್ಸು ಅದರ ಮೇಲೆ ಹೋಗುವಾಗ ಪಕ್ಕದಲ್ಲಿ ಅರ್ಧ ಅಡಿ ಬಿಟ್ಟಿರುತ್ತದೆ. ಅದನ್ನು ಯಾವಾಗಲೋ ಅಗಲ ಮಾಡಬೇಕಾಗಿತ್ತು; ಒಳನಾಡಿಗೆ ಸಂಪರ್ಕ ಬರಬೇಕಾದರೆ, ಈ ಸೇತುವೆ ಬಹಳ ಮುಖ್ಯ. ಇದನ್ನು ವಿಶಾಲ ಮಾಡಬೇಕು.

ಮೂರನೆಯದಾಗಿ, ನನ್ನ ಕಾನ್ಸ್ಟಿಟ್ಯುಯನ್ಸಿಯಲ್ಲಿ ಒಬ್ಬ ಹೆಡ್ ಕೂಲಿ, ಒಬ್ಬ ಕೇವಲ ಬಡ ಅಧಿಕಾರಿ ಇದ್ದಾನೆ; ಆತ ಬಡ ಬ್ರಾಹ್ಮಣ. ಅವನಿಗೆ ಅನ್ಯಾಯವಾಗಿದೆ. ಏಕೆ ಅನ್ಯಾಯವಾಗಿದೆಯೆಂದರೆ ನಮ್ಮಲ್ಲಿ ಅನುಕೂಲಸ್ಥರಾಗಿರುವವರು ಮೂರು ತರಹ ಅಧಿಕಾರಿಗಳು ಸೇರಿದ್ದಾರೆ. ಅವರು ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು. ನಿಜವಾಗಲು ನಮ್ಮ ದೇಶದಲ್ಲಿ ಇದು ಮೂಲ ಪ್ರಶ್ನೆಯೆಂದರೆ, ಎರಡು ಜಾತಿಗಳಾಗಿವೆ. ಒಂದು ಅನುಕೂಲಸ್ಥರದು, ಇನ್ನೊಂದು ಅನಾನುಕೂಲಸ್ಥರದು. ಇಲ್ಲಿ ಏಟು ಬೀಳುವುದು ಆ ಕೂಲಿಗೆ ಆಗಿರುವ ಅನ್ಯಾಯವನ್ನು ನಾಳೆಯೇ ಸರಿಮಾಡಿದರೆ ಬಹಳ ಸಂತೋಷವಾಗುತ್ತದೆ; ಈ ಹೆಡ ಕೂಲಿಗೆ ಟ್ರಾನ್ಸ್‌ಫರ್ ಮಾಡಿಬಿಟ್ಟಿದ್ದಾರೆ; ಅದಕ್ಕೆ ಸೇರಿದವರು 3 ಜನ. ಇದರಲ್ಲಿ ಅನ್ಯಾಯ ಮಾಡುವುದಕ್ಕೆ ಸೇರಿರುವರು 3 ಜನರು, ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು, ಇವರು ಸೇರಿಕೊಂಡು ತುಂಬಾ ಅನ್ಯಾಯ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಅಸೆಂಬ್ಲಿಗೆ ಚುನಾಯಿತರಾಗಿ ಬಂದಿರುವವರಲ್ಲಿ ಸ್ವಲ್ಪ ಮಟ್ಟಿಗಾದರೂ ಜಾತಿ, ಮತ ಭೇದಗಳು ಇವೆ. ಹಳ್ಳಿಗಾಡುಗಳಲ್ಲಿ ಸಹ ಅನುಕೂಲಸ್ಥರು ಮತ್ತು ಬಡವರು ಇದ್ದಾರೆ. ಅವರಲ್ಲಿಯೂ ವಿಶೇಷ ಪಂಗಡಗಳುಂಟು. ಜನ ಜೀವನದಲ್ಲಿ ಎಷ್ಟೋ ವ್ಯತ್ಯಾಸವಿರುತ್ತದೆ. ಆದರೆ ಅಷ್ಟಾಗಿ ಇದರಲ್ಲಿ ಬದಲಾವಣೆಗಳಾಗಿಲ್ಲ. ನಾನು ಇದನ್ನು ಆಡಳಿತ ಯಂತ್ರ ಚೆನ್ನಾಗಿ ನಡೆಯಬೇಕೆಂಬು ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾನು ಮೊದಲನೆಯದಾಗಿ ನಾಜೋಕು ರೀತಿಯಿಂದ, ವಾಸ್ತವಿಕ ದೃಷ್ಟಿಯಿಂದ ಆಡಳಿತ ಮತ್ತು ಕಾರ್ಯ ರಂಗಗಳಲ್ಲಿ ಏನೋ ಪರಿಣಾಮಕಾರಿಯಾದ ಫಲಿತಾಂಶ ಬರಬೇಕೆಂಬ ದೃಷ್ಟಿಯಿಂದ ಮೂಲಭೂತ ಬದಲಾವಣೆಗಳನ್ನು ಯಾವ ರೀತಿ ಮಾಡಬೇಕೆಂಬದನ್ನು ತಿಳಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಈಗ ಮುಖ್ಯವಾಗಿರುವುದು ಪಿ. ಡಬ್ಲ್ಯೂ. ಡಿ. ನಿಜವಾಗಿ ನಮ್ಮ ದೇಶ ಮುಂದುವರಿಯಬೇಕಾದರೆ ಈ ಇಲಾಖೆಯಲ್ಲಿ ಚೆನ್ನಾಗಿ ಕೆಲಸವಾಗಬೇಕು. ಡಿಪಾರ್ಟ್‌ಮೆಂಟಲ್ ವರ್ಕ್ಸ್ ಎಲ್ಲಿ ಆಗುವುದಿಲ್ಲವೋ ಆಗ ಪೀಸ್ ವರ್ಕ್ ತೆಗೆದುಕೊಳ್ಳಬೇಕು. ಅದೂ ಆಗದಿದ್ದರೆ ಕಂಟ್ರಾಕ್ಟರ ಮೂಲಕ ಕಾಮಗಾರಿಗಳನ್ನ ತೆಗೆದುಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ ಒಬ್ಬ ದೊಡ್ಡ ಮನುಷ್ಯನಾಗಿರತಕ್ಕಂಥ ಯಾರಾದರೂ ಒಬ್ಬ ಚೆನ್ನಾಗಿ ಕೆಲಸ ಮಾಡುತ್ತಿರತಕ್ಕಂಥ ಅಧಿಕಾರಿಯನ್ನೇ ತೆಗೆದುಕೊಳ್ಳಿ. ಅವನಿಗೆ full responsibility ಕೊಡಬೇಕು. ಒಂದು ವೇಳೆ ಏನಾದರೂ ಅವನಲ್ಲಿ ಅಥವಾ ಅವನ ಆಡಳಿತದಲ್ಲಿ ಲೋಪ ದೋಷ ಕಂಡು ಬಂದರೆ ಆಗ ಚೆನ್ನಾಗಿ ವಿಚಾರ ಮಾಡಬೇಕು. ಪ್ರತಿಯೊಂದಕ್ಕೂ ಸರ್ಕಾರವೇ ಕೈಯೊಡ್ಡಬಾರದು. ಇಲಾಖೆಯ ಕೆಲಸಗಳ ಜವಾಬ್ದಾರಿಯನ್ನೆಲ್ಲಾ ಅಲ್ಲಿನ ಅಧಿಕಾರಿಗಳಿಗೇ ಬಿಟ್ಟದ್ದೇ ಆದರೆ ಒಂದು ವೇಳೆ ಅಲ್ಲಿನ ಅವರ ಆಡಳಿತದ ಫಲಿತಾಂಶ ಕೆಟ್ಟದ್ದು ಆದರೆ ಆಗ ಸರ್ಕಾರ ಕೈ ಹಾಕಬೇಕು.

Ability list ನ್ನು ಮಾಡುವಾಗ ಅತ್ಯಲ್ಪ ಖರ್ಚಿನಲ್ಲಿ ಮಾಡುವಂತಹವರಿಗೆ ನಿಜವಾಗಿ ನಿಮ್ಮ ಇಲಾಖೆಯವರು ತೋರಿಸಿರುವಂತಹ ಸಹಾನುಭೂತಿ ಸರಿಯಾಗಿಲ್ಲ. ಅದು ಬಹಳ ಕಠಿಣವಾಗಿರುತ್ತೆ. ಮೂರನೆಯದಾಗಿ ರಾಜಕೀಯದಲ್ಲಿ ಬದಲಾವಣೆ ಬರಬೇಕಾದರೆ ಆಡಳಿತ ಶಕ್ತಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಆಗಬೇಕು. ಇದರಿಂದಲೇ ರಾಜಕೀಯ ಆಡಳಿತದಲ್ಲಿ ಮೂಲಭೂತವಾದ ಬದಲಾವಣೆಗಳಾಗುತ್ತವೆ. ಅದಕ್ಕೆ ಲ್ಯಾಂಡ್ ರಿಫಾರ್ಮ್ಸ್ ಮೊದಲನೆಯ ಹೆಜ್ಜೆ. ಅದು ಜಾಗ್ರತೆ ಜಾರಿಗೆ ಬರಬೇಕು.

ಈಗ ಆಂಟಿ-ಕರಪ್ಷನ್ ಡಿಪಾರ್ಟ್‌ಮೆಂಟ್ ಎಂದು ಇದೆ. ಅದಕ್ಕೆ ಬದಲಾಗಿ ರೋವಿಂಗ್ ಕಮಿಷನ್ ಎಂದು ಮಾಡಿಕೊಂಡರೆ ನಾವು ಇನ್ನೂ ಮುಂದಕ್ಕೆ ಹೋಗಬಹುದು. ಆಗ ಏನು ಬೇಕಾದರೂ ನಾವು ಸಾಧಿಸಬಹುದು ಎಂಬುದಾಗಿ ನಾನು ಹೇಳುತ್ತೇನೆ. ಇನ್ನೊಂದು ವಿಚಾರ. ಇದುವರೆಗೂ ಸರ್ಕಾರದವರು ಮಾಡಬೇಕಾದ ಕೆಲಸಗಳನ್ನು ಮಾಡಲೇ ಇಲ್ಲವೆಂದು ಹೇಳಿದರೆ ನಿಜವಾಗಿ ಸರ್ಕಾರದವರು ಒಪ್ಪುತ್ತಾರೆಂದು ನಾನು ಹೇಳುತ್ತೇನೆ. ಕಾಂಗ್ರೆಸ್ ಪಕ್ಷದಲ್ಲಿರತಕ್ಕ ನೀತಿ ನಮಗೂ ಗೊತ್ತು. ಅವರಲ್ಲಿಯೂ ಎಷ್ಟೋ ತಲೆಕೆಳಗೂ ಇರುತ್ತದೆ. ಒಟ್ಟಿನಲ್ಲಿ ಜನಗಳು ಈ ಸರ್ಕಾರದ ಆಡಳಿತವನ್ನು ನೋಡಿ ಇವರಿಗೇನೋ ಧನ ಪಿಶಾಚಿ ಹಿಡಿದಿದೆಯೋ ಏನೋ ಎಂದು ಹೇಳುತ್ತಿದ್ದಾರೆ. ಇವರಿಗೆ fear of something new ಇದೆ. ಹೊಸದು ಮಾಡೋಣವೆಂದರೆ ಸ್ವಲ್ಪ ಕಷ್ಟವೇ? ನಿಜವಾಗಿ ಇವರು ತಾತ್ವಿಕವಾದ ಆಲೋಚನೆ ಮಾಡಿದರೇನೇ ಮುಂದಕ್ಕೆ ಹೋಗಲಿಕ್ಕೆ ಅನುಕೂಲ. ಒಟ್ಟಿನಲ್ಲಿ ಇವರಿಗೆ ಆಲೋಚನೆಯ ಮಟ್ಟ ಬಹಳ ಕಡಿಮೆ ಇದೆ; ಒಂದು ವೇಳೆ ಅದು ಸ್ವಲ್ಪ ಮಟ್ಟಿಗೆ ಹೋಗಿದೆ ಎಂದು ಹೇಳಿದರೂ ತಪ್ಪಾಗಲಾರದು. ಇದನ್ನು ನಾನು ಸರಿಯಾಗಿ ಮನವರಿಕೆಯಾಗಿ ಹೇಳಿದ್ದೇನೆ. ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಸೀಮಾ ರಾಜ್ಯಗಳಲ್ಲಿ ಯಾವ ಮುಖ್ಯ ಮಂತ್ರಿಯೂ ಹೇಳದೆ ಇದ್ದಂಥ ಒಂದು ಮಾತನ್ನು ಹೇಳಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಅದು ಏನೆಂದರೆ ನೀವು ಸಾಲ ಕೊಡಿ ಎಂದು ಹೇಳುವುದು. ಈ ಅಭಿಪ್ರಾಯ ಅವರಿಗೆ ಹೇಗೆ ಬಂತು? Did it come from wise? Is it possible? Certainly

(ಶ್ರೀ ವಿ. ಎಂ. ದೇವ್)

not. ಆದುದರಿಂದ ಈ ಸರ್ಕಾರ ಮಾಡತಕ್ಕ ಯೋಜನೆಗಳು ಕಾರ್ಯಗತವಾಗಬೇಕಾಗಿದ್ದರೆ ಯೋಜನೆಗಳಿಗಾಗಿ ಖರ್ಚಾಗತಕ್ಕ ಹಣ ಯಾವ ರೀತಿಯಲ್ಲೂ ಪೋಲಾಗದಂತೆ ನೋಡಬೇಕು. ನಿಜವಾಗಿ ದೇಶಕ್ಕೆ ಒಳ್ಳೆಯದು ಆಗಬೇಕಾದರೆ ತೀವ್ರತರವಾದ ಒಳ್ಳೆಯ ಭಾವನೆ ಸರ್ಕಾರಕ್ಕೆ ಬರಬೇಕು. ಈಗ ಆಗಿರುವುದರ ಪರಿಣಾಮವೇನೆಂದರೂ ಏನು ಅಂದರೆ sub-conscious. He is just like a Cornered wild animal Why, I say is......

Mr. SPEAKER.—It is not a good Comparison.

Sri V. M. DEO.—I think he is big enough to understand it.

Mr. SPEAKER.—He is not only big, but gracious, but why should the Hon'ble Member do it ?

ಶ್ರೀ ವಿ. ಎಂ. ದೇವ್.—ಇದರಿಂದಲೇ ದೇಶ ಹಾಳಾಗಿ ಹೋಗುತ್ತದೆ. ದೇಶ ಕಟ್ಟುವುದಕ್ಕೆ ಸರ್ಕಾರ ಏನಾದರೂ ಪ್ರಯತ್ನಗಳನ್ನು ಮಾಡಬೇಕು. ಏಕೆಂದರೆ ಇತ್ತೀಚೆಗೆ ಹಣಕಾಸಿನ ಪರಿಸ್ಥಿತಿ ತುಂಬಾ ಕುಲಗೆಟ್ಟು ಹೋಗಿದೆ. ಈಗ ಇರುವುದು ಎರಡೇ ವಿಷಯಗಳು. ಒಂದು ಅಳಿವಿನ ಪ್ರಶ್ನೆ; ಇನ್ನೊಂದು ಉಳಿವಿನ ಪ್ರಶ್ನೆ. ಇಂಥಾದ್ದನ್ನು sub-conscious ಆಗಿ ವರ್ಕ್ ಮಾಡಬೇಕಾಗಿದೆ. ಆಯಾ ಮನುಷ್ಯರ ಸ್ವಭಾವಕ್ಕೆ ಅನುಗುಣವಾಗಿ ತಕ್ಕ ಪರಿಹಾರಸಿಗಬೇಕಾಗಿದೆ. ಸಮತಾಸಮಾಜವಾದದ ತತ್ವವನ್ನು ನಮ್ಮ ಕರ್ನಾಟಕದಲ್ಲಿ ಹೆಚ್ಚಿಗೆ ತಿಳಿದುಕೊಂಡಿರುವವರು ಅಂದರೆ ನಮ್ಮ ಮುಖ್ಯಮಂತ್ರಿಗಳು ಅವರ ಒಂದು ಪ್ರಭಾವ ಮೂಲೆ ಮೂಲೆಗೂ ಹರಡಿದೆ. ಆದರೆ ನಾನು ಈಗ ಕೃಷ್ಣಾ ಮತ್ತು ಗೋದಾವರಿ ನದಿಗಳ ನೀರಿನ ವಿವಾದದ ಬಗ್ಗೆ ಮಾತನಾಡುತ್ತಾ ಒಂದು ವಿಷಯವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದವರು ಸುಪ್ರೀಂ ಕೋರ್ಟಿಗೆ ಹೋಗಲಿ ಅಥವಾ ಟ್ರಿಬ್ಯೂನಲ್ಲಿಗೇ ಹೋಗಲಿ. ಇದು ಎಲ್ಲಿ ಹೋದರೂ ಕೂಡ ನಮಗೆ ನ್ಯಾಯವಾಗಿ ಬರಬೇಕಾದುದು ಬಂದೇ ಬರುತ್ತದೆ. ಪೂರ್ತಿ ಸಿಗುತ್ತದೋ ಇಲ್ಲವೋ ಎಂಬುದಾಗಿ ಹೇಳಿ ಅ ಬಗ್ಗೆ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ವಿವರಣೆಗಳನ್ನು ಕೊಟ್ಟರು. ಇದರಲ್ಲಿ ಏನೋ ಅರ್ಥವಾಗುತ್ತದೆ ಅಂದರೆ ತಿರಗಂಜಿ, ಮರಗಂಜಿ, ಎಲ್ಲೋ ಅಲ್ಲಿ ಇವೆಯೆಂದು ನಾನು ಹೇಳಬೇಕಾಗಿದೆ. ಕೇಂದ್ರ ಸರ್ಕಾರದವರು ಇದನ್ನು ಒಪ್ಪಲಿ ಅಥವಾ ಒಪ್ಪದೇ ಇರಲಿ, Fair accompli ಉಂಟು. ಕೇಂದ್ರದವರು ಇಲ್ಲಿಯವರನ್ನು ಬಹು ದೊಂಡಾವೃತ್ತಿ ಜನರೆಂದು ತಿಳಿದು ಎಷ್ಟು ಜನ ಈ ಬಗ್ಗೆ ರೇಗುತ್ತಾರೋ ಎಂಬ ಅಂಶವನ್ನು ತಿಳಿದಿದ್ದರೂ ಇದರಲ್ಲಿ ಮೂಲಭೂತವಾದ ಪ್ರಶ್ನೆ ಏನು ಎನ್ನುವುದು ಬಹು ಮುಖ್ಯ ಪ್ರಶ್ನೆ. ಈಗ ದುಡ್ಡು ಸಾಕಷ್ಟು ಖರ್ಚುಮಾಡೋಣವೆಂದರೆ ಅದು ಇಲ್ಲವೇ ಇಲ್ಲ. ಆದರೆ ಅದರಲ್ಲಿ ಎಷ್ಟು ಪೋಲಾಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಇನ್ನು ಬೇರೆ ದೇಶಗಳು ಹೇಗೆ ಸಾಧಿಸಿದವು ಎಂಬುದನ್ನು ನೋಡಿದರೆ ಇವರು ಒಪ್ಪಿಕೊಳ್ಳಲಿ, ಒಪ್ಪಿಕೊಳ್ಳದೇ ಇರಲಿ, ಇರುವ ಸಮಾಚಾರ ಇಷ್ಟೇ ಎಂಬುದು ಎಲ್ಲರಿಗೂ ಬಹಳ ಚೆನ್ನಾಗಿ ಮನವರಿಕೆಯಾಗಿದೆ. ಒಟ್ಟಿನಲ್ಲಿ ನಾನು ಹೇಳಿದಹಾಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಜನಗಳಿಂದ ಸಾಲ.ಎತ್ತೋಣ ಈಗಾಗಲೆ ಬೇಕಾದಷ್ಟು ನೀರಾವರಿ ಮಾಡಿಸುತ್ತಿದ್ದೇವೆ ಎಂದು ಹೇಳಿದರು. ನಿಜವಾಗಿ ಈ ಬಾಬಿಗೆ ಎಷ್ಟೋ ಸಾವಿರಾರು ರೂಪಾಯಿಗಳು ಖರ್ಚಾಗುವುದೇನೋ ನಿಜ. ಆದರೆ ಇದರಲ್ಲಿ ಸರಿಯಾದ ಬಂದೋಬಸ್ತನ್ನು ಮಾಡದೇ ಇದ್ದರೆ, ಅದರ ಅಭಿವೃದ್ಧಿ ಅವಹೇಳನಕ್ಕೆ ಗುರಿಯಾಗುತ್ತದೆ. ಈ ವಿಷಯವನ್ನು ಹಿಂದೆ ನಾನು ಒಂದು ಸಾರಿ ಬೇರೆ ಸಂದರ್ಭದಲ್ಲಿ ಹೇಳಿದ್ದೆ. ನಾನು ಹೇಳಿದ ರೀತಿಯಲ್ಲಿ ನನ್ನ ಸಲಹೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಇದು ಒಂದು ಪಟಾಕಿ ಸರ ಇದ್ದಹಾಗೆ. ಇದಕ್ಕೆ ಸರಿಯಾದ ಬಂದೋಬಸ್ತು ಆಗಬೇಕಾದರೆ ಅನೇಕ ಕಡೆಗಳಲ್ಲಿ ಆಡಳಿತ ಕಾರ್ಯರಂಗದಲ್ಲಿ ಏನೊಂದು chain reaction ಎಂಬುದಾಗಿ ಹೇಳುತ್ತಾರೋ ಆ ರೀತಿ ಅನೇಕ ಬದಲಾವಣೆಗಳು ಆಗಬೇಕಾಗಿದೆ. ಆಗ ಅದರಲ್ಲಿ ಉಂಟಾದ ಬದಲಾವಣೆಗಳಲ್ಲಿ main idea ಬಗ್ಗೆ ಖಂಡಿತವಾಗಿ ಜಯಗಳಿಸುವುದಕ್ಕೆ ಸಾಧ್ಯವೇ ಹೊರತು ಸುಮ್ಮನೆ ನಾನು ಹೀಗೆ ಮಾಡುತ್ತೇನೆ; ಹಾಗೆ ಮಾಡುತ್ತೇನೆ ಎಂದು ಬಾಯಿಯಲ್ಲಿ ಹೇಳಿದರೆ ಖಂಡಿತ ಅದು ಸಾಧ್ಯವಾಗುವುದಿಲ್ಲ. ನಮ್ಮ ದೇಶದಲ್ಲಿ ಅನೇಕ ಪ್ರಾಜೆಕ್ಟುಗಳನ್ನು ಕಟ್ಟಿದರೂ ಎಷ್ಟೋ ಜನ ತಿಳಿದವರು ಏನು ಹೇಳುತ್ತಾರೆಂದರೆ ಇವರಿಗೆಲ್ಲೋ ಧನ ಪಿಶಾಚಿ ಹಿಡಿದಿದೆ ಎಂಬುದಾಗಿ ಹಿಂದೆ ಹೇಳಿದ್ದು ಉಂಟು. ಆದ್ದರಿಂದ ಇವರ ಹಣದ ಮೂಲ ರೂಪ ಏನು ಎಂಬುದನ್ನು ಯೋಚನೆ ಮಾಡಬೇಕು. ಒಟ್ಟಿನಲ್ಲಿ ಈ ಕಂಟ್ರಾಕ್ಟರುಗಳ ಹವ್ಯಾಸವನ್ನು ಬಿಟ್ಟುಬಿಡಿ. ನಾನು ಇಂತಹ ಇಲಾಖೆಯಲ್ಲಿದ್ದುಕೊಂಡು ಒಂದಿಷ್ಟೋ

ಅಷ್ಟೋ ದುಡ್ಡು ಮಾಡುವುದು ಹೇಗೆ ಎಂದು ಯೋಚಿಸುವುದು ಸರಿಯಲ್ಲ. ನನ್ನ ಸ್ನೇಹಿತರ ಮೂರಾಜು ಬಿಡುವುದು ಹೇಗೆ, ನನ್ನ ಈ ಜೀವನವನ್ನು ಮುಂದೆ set up ಮಾಡುವುದು ಹೇಗೆ, ಈ ಪದವಿಯನ್ನು ಬಿಡುವುದು ಹೇಗೆ ಎಂಬೀ ಅನೇಕ ಪ್ರಶ್ನೆಗಳು ಬರುತ್ತವೆ. ಆದ್ದರಿಂದ ಹಣದ ಮೂಲ ಸ್ವರೂಪವೇನು, ಈ ಹಣ ನಿಜವಾಗಿ ಶಾಶ್ವತವಾಗಿ ಇರುವುದಿಲ್ಲ ಎಂಬುದನ್ನು ಅರಿತು ಕೆಲಸ ಕಾರ್ಯ ಗಳನ್ನು ಮಾಡಬೇಕು. ಪೂರ್ವ ಕಾಲದಲ್ಲಿ ಶ್ರೀಮಾರ್ಕ್ ಡ್ರೈಡನ್ ಎಂಬುವರು ಒಂದು ಪದ್ಯ ರೀತಿಯಲ್ಲಿ ಕೆಲವು ಮಾತುಗಳನ್ನು ಈ ರೀತಿ ಹೇಳುತ್ತಿದ್ದರು:

"Some pray for riches, and riches they obtain
And watched by robbers, for their wealth on slain
Some pray from prison, to be freed and come when guilty of
their woes to fall at home, murdered by those, they
trusted with their lives, a favoured servant or a bosom wife."

ಆ ಕಾಲದಲ್ಲಿಯೇ ಅದು ಅಷ್ಟು ಶಾಶ್ವತವಾಗಿ ಇರುತ್ತಿರಲಿಲ್ಲ. ಈಗ ಯಂತ್ರ ಯುಗ. ಇಂತಹ ಯಂತ್ರ ಯುಗದಲ್ಲಿ ಸಾಮಾಜಿಕ ಯಂತ್ರೋಪಕರಣಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ. ಅದ ಕ್ಕಾಗಿ ಸರ್ಕಾರದವರು ಮತ್ತಷ್ಟು ಗಮನವನ್ನು ಕೊಡಬೇಕಾಗಿದೆ.

ಗಿರಾಕಿಯೇನಾದರೂ ಇಲ್ಲದಿದ್ದರೆ ಯಂತ್ರಗಳನ್ನು ಮುಚ್ಚಬೇಕಾಗುತ್ತದೆ. ಸಾರ್ವಜನಿಕರ ಕೈಲಿದ್ದರೆ ಎಲ್ಲರಿಗೂ ಹಣ ಸಿಕುತ್ತದೆ. ಈ ದೃಷ್ಟಿಯಿಂದ ನಾನು ಹೇಳುವುದಿಷ್ಟೆ; ಇದು ಯಂತ್ರ ಯುಗವಾಗಿರುವುದರಿಂದ ಉತ್ಪಾದನಾ ಶಕ್ತಿ ಹೆಚ್ಚಾಗಿದೆ. ಇದಕ್ಕೊಂದು ಮಿತಿ ಇದೆ. ಕೊನೆ ಗಾದರೂ ಇದು ನ್ಯಾಷನಲೈಸ್ ಆಗಿಯೇ ಆಗುತ್ತದೆ. ಈ ಯಂತ್ರ ಯುಗದಲ್ಲಿ ಅನುಕೂಲವಿದೆ ಯೆಂದು ಎಷ್ಟೇ ಆಸ್ತಿಯನ್ನು ಕೆಲವರು ಸಂಪಾದನೆ ಮಾಡಿದರೂ ಇನ್ನು ಹತ್ತು ಇಪ್ಪತ್ತು ವರ್ಷ ವರ್ಷಗಳಲ್ಲಾದರೂ ನ್ಯಾಷನಲೈಸ್ ಆಗುತ್ತದೆ; ಗಳಿಸಿರುವ ಐಶ್ವರ್ಯ ಆಸ್ತಿ ವ್ಯಕ್ತಿಗಳ ಕೈಯಿಂದ ಹೋಗುತ್ತದೆ. ಮುಂದೆ ಈಗಿನ ಮಂತ್ರಿಗಳ ಮಕ್ಕಳು 'ನಮ್ಮ ಅಪ್ಪ ಮಂತ್ರಿ ಆಗಿದ್ದ, ಅಷ್ಟು ಹಣ ಸಂಪಾದನೆ ಮಾಡಿದ, ಅದು ಏನಾಯಿತು? ಅವನ ಹೊಟ್ಟೆಯಲ್ಲಿ ಏಕೆ ಹುಟ್ಟಿದೆ' ಎಂದು ಕೊಳ್ಳುತ್ತಾರೆ. ಅದ ಕಾರಣ ನಾನು ಹೇಳುವುದಿಷ್ಟೆ; ಈ ಯಂತ್ರ ಯುಗದಲ್ಲಿ ಕೆಲ ಜನರಿಗೆ ಧನ ಪಿಶಾಚಿ ಹಿಡಿದಿದೆ. ಈ ಹಣ ತನ್ನ ಸ್ಥಾನವನ್ನು ಕಳೆದುಕೊಂಡರೆ, ಈಹೊತ್ತಿರುವ ದುರಾಶೆ ಹೋಗು ತ್ತದೆ. ಹಣವೇನೋ ಬೇಕು ಮನುಷ್ಯನಿಗೆ, ಆದರೆ ಇದಕ್ಕೊಂದು ಮಿತಿ ಇದೆ. ಕಂಟ್ರಾಕ್ಟರುಗಳಿರ ಬೇಕು, ಕಂಟ್ರಾಕ್ಟು ಕೊಡಬೇಕು ಎಂದು ವಾದ ಮಾಡುವವರು ಅದರಿಂದ ಹಣ ಎಳೆಯಬಹುದೆಂದು ಹೇಳುತ್ತಾರೆ.

ಇನ್ನೊಂದು, Labour heroism ಹುಟ್ಟುತ್ತದೆ. ಎಷ್ಟೋ ಸಾರಿ ಸಿಮೆಂಟ್ ಕೊಡುತ್ತಾರೆ. Home cement ಮಾಡುತ್ತಾರೆ. ಉತ್ಪತ್ತಿ ಹೆಚ್ಚಾಗಬೇಕಾದರೆ, ಇದು ನನ್ನ ಕೆಲಸ ಎಂದು ಜನರ ಮನಸ್ಸಿನಲ್ಲಿ ಹುಟ್ಟಬೇಕು. ಐನೂರು ಕೋಟಿ ರೂಪಾಯಿನಲ್ಲಿ ಎಷ್ಟು ಉತ್ಪತ್ತಿಯಾಗಬಹುದೋ ಅಷ್ಟನ್ನು ಇನ್ನೂರು ಕೋಟಿ ರೂಪಾಯಿನಲ್ಲಿ ಮಾಡಬೇಕಾದರೆ, ಅದಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸಬೇಕು; ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ನಾನು ಹೊಸ ವಿಷಯವನ್ನು ಹೇಳುತ್ತೇನೆ, ಅದು logical, ಎಂದರೆ ತರ್ಕಬದ್ಧವಾಗಿರುತ್ತದೆ..........

ಅಧ್ಯಕ್ಷರು.—ಹೊಸ ವಿಚಾರ ಬಂದರೆ ನನಗೆ ಹೆದರಿಕೆಯಾಗುತ್ತದೆ. (ನಗು !)

ಶ್ರೀ ಕೆ. ಎಂ. ದೇವಯ್ಯ (ಪಿರಿಯಾಪಟ್ಟಣ).—ಸ್ವಾಮಿ, ಈ ಬೇಡಿಕೆಗಳನ್ನು ಸಮರ್ಥಿಸುತ್ತ ನಮ್ಮ ಪ್ರದೇಶಕ್ಕೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ವಿವರವಾದ ಬಡ್ಜೆಟನ್ನು ಪರಿಶೀಲಿಸಿದರೆ, ಮಲೆನಾಡಿಗೆ ಯಾವುದು ಅವಶ್ಯಕವೋ ಅದಕ್ಕೆ ಹೆಚ್ಚು ಗಮನ ಕೊಡಲಿಲ್ಲ, ಅದಕ್ಕೆ ಹೆಚ್ಚು ಹಣವನ್ನು ಮೀಸಲಾಗಿಡಲಿಲ್ಲ ಎಂಬುದು ವ್ಯಕ್ತವಾಗುತ್ತದೆ. ಇದು ಬಹಳ ಶೋಚ ನೀಯವೆಂದು ಹೇಳಬೇಕಾಗಿದೆ. ಮಲೆನಾಡಿಗೆ ಮುಖ್ಯವಾಗಿ ಬೇಕಾದುದು ರಸ್ತೆಗಳು. ತುಂಬಾ ಆಹಾರ ಬೆಳೆಸಬೇಕು, ಉತ್ಪತ್ತಿ ಹೆಚ್ಚು ಮಾಡಬೇಕು, ಒಂದಕ್ಕೆ ನಾಲ್ಕರಷ್ಟು ಜನರು ಬೆಳೆಸಬೇಕು ಎಂದು ಸರ್ಕಾರದವರು ಹೇಳುತ್ತಿದ್ದಾರೆ. ನಮ್ಮ ಪ್ರದೇಶದಲ್ಲಿ ಇದಕ್ಕೆ ಅಗತ್ಯವಾಗಿ ಬೇಕಾ ಎದು ರಸ್ತೆಗಳು. ಸ್ವಾಮಿ, ಹಳ್ಳಿಗಳಲ್ಲಿ ಬೆಳೆದುದನ್ನು ಪಟ್ಟಣಗಳಿಗೆ ತರಬೇಕಾದರೆ ರಸ್ತೆಗಳ ಅನುಕೂಲ ವಿಲ್ಲದಿದ್ದರೆ ಹೇಗೆ ತರುವುದು ? ತರಲು ಸಾಧ್ಯವಿಲ್ಲದಿದ್ದರೆ ಏಕೆ ಬೆಳೆಬೇಕು ? ರಸ್ತೆಯಿಲ್ಲದಿದ್ದರೆ ಸಾಗಿಸಲು ಖರ್ಚು ಕೂಡ ಜಾಸ್ತಿಯಾಗುತ್ತದೆ. ಆದುದರಿಂದ ರಸ್ತೆಗಳನ್ನು ಮಾಡದಿದ್ದರೆ ಅವರು ಹೆಚ್ಚು ಬೆಳೆಯುವುದಿಲ್ಲ. ಒಂದು ವೇಳೆ ಬೆಳೆದರೂ ಅದರಿಂದ ಪ್ರಯೋಜನವಾಗುವುದಿಲ್ಲ. ಈ ದೃಷ್ಟಿ

(ಶ್ರೀ ಕೆ. ಎಂ. ದೇವಯ್ಯ)

ಯಿಂದ ಮಲೆನಾಡಿನಲ್ಲಿ ರಸ್ತೆಗಳು ಅಗತ್ಯ. ಸಾಗಾಣಿಕೆ ಅನುಕೂಲ ಹೆಚ್ಚಾದರೆ ಉತ್ಪತ್ತಿಯನ್ನು ಜಾಸ್ತಿ ಮಾಡುತ್ತಾರೆ. ಇದನ್ನು ಸರ್ಕಾರ ಮಾಡಬೇಕು. ಆದರೆ ರಸ್ತೆಗಳಿಗೆ ಬಡ್ಜೆಟ್ಟಿನಲ್ಲಿ ಹೆಚ್ಚು ಹಣವನ್ನೊದಗಿಸಿಲ್ಲ. ಬಡ್ಜೆಟ್ ನೋಡಿದರೆ, ಭಾಗಮಂಡಲದಿಂದ ಕರಿಕೆಗೆ ರಸ್ತೆ ಮಾಡಲು ತಗೆದು ಕೊಂಡಿದ್ದಾರೆ; ಒಂದು ಸೇತುವೆ ಹಾಕುವುದಕ್ಕೆ ಬಡ್ಜೆಟ್‌ನಲ್ಲಿ ಹಣವನ್ನೊದಗಿಸಿದ್ದಾರೆ. ಇದೊಂದೇ ಸಾಲದು. ಇನ್ನೂ ಒಂದೆರಡು ಸೇತುವೆ ಆಗಬೇಕು. ಕರಿಕೆಗೆ ಹೋಗಬೇಕಾದರೆ ಬೆಟ್ಟದ ನಡುವೆ ಹೋಗಬೇಕು. ಈಗ ಅಲ್ಲಿಗೆ ನೇರವಾಗಿ ಹೋಗುವುದಕ್ಕಾಗುವುದಿಲ್ಲ. ನೇರವಾಗಿ ಹೋದರೆ ಮಡಿಕೇರಿಯಿಂದ ಕರಿಕೆಗೆ 35 ಮೈಲಿ ದೂರವಿದೆ. ಆದರೆ ಈಗ ಮಲಬಾರಿನ ಮೂಲಕ ಸುತ್ತಿಕೊಂಡು ಹೋಗಬೇಕಾಗಿದೆ, ಬಹಳ ದೂರವಾಗುತ್ತದೆ. ಇಂಥ ಪರಿಸ್ಥಿತಿ ನಮಗೆ ಇರುವುದರಿಂದ ಆ ರಸ್ತೆಯನ್ನು ಆದಷ್ಟು ಬೇಗ ಮಾಡಿ ಮುಗಿಸಬೇಕು. ಕರಿಕೆಯಲ್ಲಿ ಏಲಕ್ಕಿ, ಒಣ ಮೆಣಸು ಬೆಳೆಯುತ್ತಾರೆ. ಅದು ಫಲವತ್ತಾದ ಪ್ರದೇಶ. ಮತ್ತೊಂದು ಪೆರಾಜೆಯಿಂದ ಕರಿಕೆಗೆ ಬರುವ ರಸ್ತೆ. ಇದಕ್ಕೆ 26 ಲಕ್ಷ ಚಿಲ್ಲರೆ ರೂಪಾಯಿಗೆ ಅಂದಾಜಾಗಿದೆ. ಆದರೆ ಬಜೆಟ್‌ನಲ್ಲಿ ಬರಿಯ 50 ಸಾವಿರ ರೂಪಾಯಿ ಒದಗಿಸಿರುವಂತೆ ಕಾಣುತ್ತದೆ. ಮಡಿಕೇರಿ ಮಂಗಳೂರು ರಸ್ತೆಗೆ parallel ಆಗಿ ಹೋಗುವ ರಸ್ತೆಯ ನಡುವೆ ಹೊಳೆ ಹರಿಯುತ್ತದೆ. ಅಲ್ಲಿ ಸೇತುವೆ ಕಟ್ಟದಿದ್ದರೆ ಆ ರಸ್ತೆಯನ್ನು ಮಾಡಿಯೂ ಪ್ರಯೋಜನವಿಲ್ಲ. ಇದನ್ನು ಮಾಡುವುದರಿಂದ ಜನರಿಗೂ ಸರ್ಕಾರಕ್ಕೂ ಉತ್ಪತ್ತಿಯಾಗುತ್ತದೆ. ಅಲ್ಲಿ ಬೇಕಾದಷ್ಟು ಮರಗಳಿವೆ, ಆದರಿಂದ ಸರ್ಕಾರಕ್ಕೆ ಹೆಚ್ಚಿನ ಹಣ ಸಿಕ್ಕುತ್ತದೆ. ಹೀಗೆ ಸರ್ಕಾರದ ಮತ್ತು ಜನರ ದೃಷ್ಟಿಯಿಂದ ಈ ರಸ್ತೆ ಅಗತ್ಯ. ಸರ್ಕಾರ ಈ ಕಡೆ ಗಮನ ಕೊಡಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ.

ನಮ್ಮ ಪ್ರದೇಶದ ಬೇರೆ ರಸ್ತೆಗಳ ವಿಚಾರವನ್ನು ಮೊನ್ನೆ ಹೇಳಿದ್ದೇನೆ. ತಾಲ್ಲೂಕಿಗೆ 50 ಮೈಲಿಯಂತೆ ಗ್ರಾಮಾಂತರ ರಸ್ತೆ ಮಾಡಬೇಕೆಂಬ ಯೋಜನೆಯ ಮೇರೆಗೆ ಕೆಲವು ರಸ್ತೆಗಳನ್ನು ಅರ್ಧಮರ್ಧ ಮಾಡಿದ್ದಾರೆ. ಇದರಿಂದ ಜನರಿಗೆ ಕಷ್ಟವಾಗಿದೆ. ಇದಕ್ಕೆ ಹೆಚ್ಚು ಹಣವನ್ನೊದಗಿಸಿ ಪೂರ್ಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪಬ್ಲಿಕ್ ವರ್ಕ್ಸ್ ಮಂತ್ರಿಗಳಿಗೆ ಹೇಳಿದರೆ ಅವರು ಹಣವಿಲ್ಲವೆಂದು ಹೇಳುತ್ತಾರೆ. ಹಣಕಾಸಿನ ಮಂತ್ರಿಗಳು ನಮ್ಮ ಮಲೆನಾಡಿನ ಕಷ್ಟವನ್ನು ತಿಳಿದುಕೊಂಡು ಹಣವನ್ನೊದಗಿಸಿ ಸಹಾಯ ಮಾಡಬೇಕು. ನಮಗೆ ಹೊಸ ಸ್ಕೂಲುಗಳು ಬೇಕಾಗಿಲ್ಲ, ಆಸ್ಪತ್ರೆ ಬೇಕಾಗಿಲ್ಲ, ರಸ್ತೆಗಳನ್ನಾದರೂ ಜಾಸ್ತಿ ಮಾಡಿ, ನಮ್ಮನ್ನು ಕಾಡುಮನುಷ್ಯರನ್ನಾಗಿಡದೆ ಮನುಷ್ಯರನ್ನಾಗಿ ಮಾಡಬೇಕು. ಚಿನ್ನದ ಗಣಿಯ ಹಾಗಿರುವ ಮಲೆನಾಡು ಮರಗಳಿಂದಲೂ ವ್ಯವಸಾಯ ತೆರಿಗೆಯಿಂದಲೂ ಸರ್ಕಾರದ ಬೊಕ್ಕಸಕ್ಕೆ ಹಣವನ್ನು ಕೊಡುತ್ತಿದೆ. ಹೀಗಿದ್ದೂ ಅಲ್ಲಿ ರಸ್ತೆಗಳ ಅಭಾವದಿಂದ ತೊಂದರೆಯಾಗುತ್ತಿದೆ. ಕಂದಾಯ ಕೊಟ್ಟಮೇಲೆ ನಮಗೆ ತಕ್ಕಷ್ಟು ಅನುಕೂಲ ಮಾಡಬೇಕು, ಇಲ್ಲವಿದ್ದರೆ ಜನರಿಗೆ ಜಿಗುಪ್ಸೆಯಾಗಬಹುದು. ಇದಕ್ಕವಕಾಶ ಕೊಡದೆ ಅವರೂ ತಮ್ಮಂತೆಯೇ ಮನುಷ್ಯರು, ಅವರಿಗೆ ರಸ್ತೆಗಳು ಬೇಕಾಗಿವೆ, ಅದರಿಂದ ಸರ್ಕಾರಕ್ಕೆ ಉತ್ಪತ್ತಿ ಬರುತ್ತದೆ, ಇದನ್ನು ಇನ್ನೂ ಹೆಚ್ಚು ಮಾಡಬೇಕು ಎಂಬುದನ್ನು ಮನಗಾಣಬೇಕು. ವ್ಯವಸಾಯ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ, ಅದನ್ನೂ ಕೊಡುತ್ತೇವೆ. ಆದರೆ ಈ ಅನುಕೂಲಗಳನ್ನು ಹೆಚ್ಚು ಮಾಡಿಕೊಟ್ಟರೆ, ಒಂದು ಕೋಟಿಯಲ್ಲ, ಇನ್ನೂ ಹೆಚ್ಚು ಒಂದೂವರೆ ಕೋಟಿ ಉತ್ಪತ್ತಿ ಬರಬಹುದು. ಅಲ್ಲಿ ರಸ್ತೆಗಳನ್ನು ಮಾಡುವುದರಿಂದ ನಷ್ಟವೇನೂ ಇಲ್ಲ. ಮಾಡಿ ನೋಡಲಿ. ಈ ಎಲ್ಲ ದೃಷ್ಟಿಯಿಂದಲೂ ಅಲ್ಲಿ ಕೆಲಸಗಳನ್ನು ಮಾಡುತ್ತಾರೆಂದು ನಂಬಿದ್ದೇನೆ. ಹಣಕಾಸಿನ ಮಂತ್ರಿಗಳು ನಮ್ಮ ಕಡೆ ದೃಷ್ಟಿಯಿಟ್ಟು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಮೈಸೂರಿನಿಂದ ಕಡಿಗೆ-ಮಂಗಳೂರಿಗೆ ಹೋಗುವ ರಸ್ತೆಯನ್ನು ತಾವು ನೋಡಿರಬಹುದು. ಪಿರಿಯಾಪಟ್ಟಣದ ಹತ್ತಿರ ಇದು ಬಹಳ ಕೆಟ್ಟುಹೋಗಿದೆ. ಒಂದು ಸೇತುವೆ ಇದೆ

ಈ ಸೇತುವೆಯು ದೊಡ್ಡದಾಗಿಲ್ಲದೆ ಬಹಳ ಕಷ್ಟವಾಗಿದೆ. ಇದನ್ನು ಬಿಚ್ಚಿ ಸ್ವಲ್ಪ ಅಗಲವಾಗಿ ಕಟ್ಟಬೇಕು. ಹಾಗೆ ಸ್ವಲ್ಪ ಸರಿಪಡಿಸಿದರೆ ಸಾಕು. ಈಗ ಕಿತ್ತಳೆ ಹಣ್ಣನ್ನು ತುಂಬಿಕೊಂಡು ಲಾರಿಗಳು ಹೋಗಬೇಕಾದರೆ ಬಹಳ ಕಷ್ಟವಿದೆ. ಈ ತೊಂದರೆಯನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

5 P.M.

ಮೈಸೂರಿನ ಇರಿಗೇಷನ್ ವಿಷಯಕ್ಕೆ ಸಾಕಷ್ಟು ಗಮನ ಕೊಟ್ಟಿರುವುದು ಸಂತೋಷಕರ. ಹಾರಂಗಿ ಪ್ರಾಜೆಕ್ಟನ್ನಾದರೂ ಆದಷ್ಟು ಶೀಘ್ರವಾಗಿ ಮಾಡಿಕೊಡಬೇಕು. ಚುನಾವಣಾ ಕಾಲದಲ್ಲಿ

ಆ ಪ್ರಾಜೆಕ್ಟ್ ಕೊಡಿಸಿಕೊಡುವುದಾಗಿ ನಾವು ವಾಗ್ದಾನ ಮಾಡಿ ಓಟನ್ನು ಪಡೆದಿದ್ದೇವೆ. ಜನರಿಗೆ ಈ ವಿಚಾರದಲ್ಲಿ ಬಹಳ ಆಶೆ ಇದೆ. ಸರ್ಕಾರ ಇದರ ನಿರ್ಮಾಣಕ್ಕೆ ಒಪ್ಪಿದೆ. ಆದರೆ ಎತ್ತರದ ವಿಷಯದಲ್ಲಿ ಮಾತ್ರ ಸ್ವಲ್ಪ ಜಿಜ್ಞಾಸೆಯಿದೆ. ಎಷ್ಟು ಎತ್ತರ ಕಟ್ಟಲು ಸಾಧ್ಯವೋ ಅಷ್ಟೇ ಮಾಡಿ. ಜನರಿಗೆ ನಿರಾಶೆ ಮಾಡಬಾರದು. ಇದುವರೆಗೆ ಈ ಕೆಲಸ ಮಾಡದೆ ಮುಂದುವರಿಸುತ್ತಿರುವುದರಿಂದ ಜನರಿಗೆ ತಪ್ಪಭಿಪ್ರಾಯ ಬರುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಎಷ್ಟು ಅಡಿ ಎತ್ತರದಲ್ಲಿರಬೇಕೆಂಬುದನ್ನು ಹೇಳಿ.

ಶ್ರೀ ಕೆ. ಎಂ. ದೇವಯ್ಯ.—ಪ್ಲಾನು ಎಸ್ಟಿಮೇಟ್ ಆಗಿರುವ ಹಾಗೆ ಎರಡು ಕಟ್ಟೆ ಕಟ್ಟುವುದು ಬೇಡ. 180 ಅಡಿ ಕಟ್ಟೆಗೆ ಪಾಯ ಹಾಕಿ 120 ಅಡಿ ಮಾತ್ರ ಕಟ್ಟಿನೋಡಿ, ಅದರ ಅನುಕೂಲ, ಅನಾನುಕೂಲ ನೋಡಿ ಮುಂದುವರಿಸಬಹುದು. ಈಗ ಜನ 180 ಅಡಿ ಕಟ್ಟುತ್ತೇವೆಂದರೆ ಹೆದರುತ್ತಾರೆ. ತೊಂದರೆಯಾಗಬಹುದೆಂಬ ಭಯವಿದೆ. ಇದನ್ನು ನಿರ್ಮಿಸಿ ಜನರಿಗೆ ನೀರಿನ ಅನುಕೂಲ ಒದಗಿಸಬೇಕೆಂದು ತಮ್ಮನ್ನು ಪದೇ ಪದೇ ಕೇಳುತ್ತಿದ್ದೇವೆ. ಏಕೆಂದರೆ ಜನರಿಗೆ ಈ ನೀರಿನ ಆಸೆ ಬಹಳವಾಗಿದೆ. ಈ ನೀರು ಒದಗಿದರೆ 8–10 ಸಾವಿರ ಎಕರೆಗಳಲ್ಲಿ ಚಿನ್ನದಂಥ ಬೆಳೆ ಬೆಳೆಯಬಹುದು. ಈಗ ನೀರಿಲ್ಲದೆ ಬಹಳ ಕಷ್ಟವಾಗಿದೆ. ಸರ್ಕಾರಕ್ಕೂ ಇದನ್ನು ಕೈಗೊಳ್ಳಲು ಇಷ್ಟವಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯೊಳಗಾಗಿ ಈ ಕೆಲಸ ಮಾಡಬೇಕು, ಈ ವರ್ಷವೇ ಪ್ರಾರಂಭಿಸಬೇಕು ಎಂದು ಕೇಳಿಕೊಂಡು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ.

† ಶ್ರೀ ಆಲೂರು ಹನುಮಂತಪ್ಪ (ಸಣ್ಣ ನೀರಾವರಿ ಉಪಸಚಿವರು).—ಮಾನ್ಯ ಸಭೆಯಲ್ಲಿ ಮರಾಮತ್ ಇಲಾಖೆಯ ವಿಷಯದಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಾ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ನನ್ನ ಖಾತೆಗೆ ಸಂಬಂಧಪಟ್ಟ ಸಣ್ಣ ನೀರಾವರಿ ಬಗ್ಗೆ ಮಾತನಾಡುತ್ತಾ ಕೆಲಸಗಳು ಬಹಳ ತೀವ್ರತೆಯಿಂದ ಆಗಬೇಕು, ಈಗ ಬಹಳ ನಿಧಾನವಾಗುತ್ತಿದೆ, ಅಂದಾಜು ತಯಾರಾಗಲು ಬಹಳ ನಿಧಾನವಾಗುತ್ತಿದೆ, ಎಂದು ಮುಕ್ಕಣ್ಣಪ್ಪನವರು ಮತ್ತು ಲಕ್ಕಪ್ಪನವರು ಹೇಳಿದ್ದಾರೆ, ಈ ಸಂಬಂಧವಾಗಿ ಬಹಳವಾಗಿ ಏನೂ ಸಾಧನೆಯಾಗಿಲ್ಲವೆಂದು ಆಕ್ಷೇಪಿಸಿದ್ದಾರೆ. ಆದರೆ ಏನೂ ಆಗಿಲ್ಲವೆಂದು ಹೇಳುವುದು ಸೂಕ್ತವಲ್ಲ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ನೀರಾವರಿ ಬಗ್ಗೆ 415:31 ಲಕ್ಷ ರೂಪಾಯಿಗಳ ಖರ್ಚಾಗಿ 16,870 ಎಕರೆಗಳ ಹೊಸ ಅಚ್ಚುಕಟ್ಟಾಗಿದೆ. ಅಷ್ಯೂರ್ಡ್ ವಾಟರ್ ಸಪ್ಲೈ 2 ಲಕ್ಷ ಚಿಲ್ಲರೆ ಎಕರೆಗೆ ದೊರೆತಿದೆ. ಎರಡನೆಯ ಯೋಜನೆಯಲ್ಲಿ 673.72 ಲಕ್ಷ ರೂಪಾಯಿಗಳ ಹಣ ಖರ್ಚಾಗಿ 41,963 ಎಕರೆ ಹೊಸ ಅಚ್ಚುಕಟ್ಟು ಅನುಕೂಲ ಪಡೆಯಿತು. 1,11,441 ಎಕರೆಗಳಿಗೆ ಅಷ್ಯೂರ್ಡ್ ವಾಟರ್ ಸಪ್ಲೈ ದೊರೆಯಿತು. ಮೂರನೆಯ ಯೋಜನೆಯಲ್ಲಿ ಸಣ್ಣ ನೀರಾವರಿಗೆ 850 ಲಕ್ಷ ರೂಪಾಯಿಗಳನ್ನು ಒದಗಿಸಿ, ಹೋದ ವರ್ಷ 1962 ನೆಯ ಇಸವಿ ಅಕ್ಟೋಬರ್ ತಿಂಗಳಿನಿಂದ ದೇಶದ ತುರ್ತುಪರಿಸ್ಥಿತಿಯಲ್ಲಿ ಅಧಿಕ ಆಹಾರ ಬೆಳೆಯಬೇಕು, ನಮ್ಮಲ್ಲಿ ಹೆಚ್ಚು ನೀರಾವರಿಗೆ ಸರಿಯಾದ ಅನುಕೂಲ ಮಾಡಿಕೊಡಬೇಕು ಎಂದು ರಾಜ್ಯ ಸರ್ಕಾರ ಕೇಂದ್ರ ಸರ್ಕಾರವನ್ನು ಕೇಳಿದಾಗ, ಕೇಂದ್ರ ಸರ್ಕಾರ ಮೂರನೆಯ ಯೋಜನೆ ಹಣದ 50 ಭಾಗದಷ್ಟು, ಅಂದರೆ 8½ ಕೋಟಿ ರೂಪಾಯಿಗಳನ್ನು 12 ಕೋಟಿ 75 ಲಕ್ಷ ರೂಪಾಯಿಗಳಿಗೆ ಏರಿಸಿರುವುದು ಶ್ಲಾಘನೀಯವಾದ ವಿಷಯ. ದೇಶಾದ್ಯಂತ ಅನೇಕ ಸಣ್ಣ ಪುಟ್ಟ ಕೆಲಸಗಳನ್ನು ಅಂದರೆ ಕೆರೆ ಕಟ್ಟುವುದು, ಪಿಕಪ್ ನಿರ್ಮಿಸುವುದು ಹಾಗೂ ಇರುವ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು ಮುಂತಾದ್ದರ ಬಗ್ಗೆ ಏನು ಕಾರ್ಯಕ್ರಮ ನಡೆದಿದೆ ಎಂಬ ಬಗ್ಗೆ ಒಂದೆರಡು ಮಾತನ್ನು ಮಾನ್ಯ ಸಭೆಯಲ್ಲಿ ಹೇಳಬೇಕೆಂಬ ಇಚ್ಛೆಯಿದೆ. ನಮ್ಮ ದೇಶದಲ್ಲಿರುವ 37,372 ಕೆರೆಗಳಲ್ಲಿ ಸುಮಾರು 14,000 ಕೆರೆಗಳು ಎಕ್ಕಲಿನಿಂದ ಮುಚ್ಚಿಕೊಂಡಿವೆ. ಅದರ ಪರಿಣಾಮವಾಗಿ ಇರುವ ಅಚ್ಚುಕಟ್ಟೆಗೆ ನೀರು ಸಾಲುವುದಿಲ್ಲ ಎಂಬ ವಿಷಯವನ್ನು ಮಾನ್ಯ ಸಭೆಯ ಸದಸ್ಯರಿಗೆ ಹೇಳಿದ್ದೇನೆ. ಅನೇಕ ಪ್ರದೇಶಗಳಲ್ಲಿ ಸರ್ಕಾರ ಇದನ್ನು ನೋಡಿದೆ. ಅಧಿಕಾರಿಗಳ ವರದಿ ಸಹ ಅದೇರೀತಿಯಿದೆ. ಈ ಕೆರೆಗಳ ದುರುಸ್ತಿಯು ಬಹಳ ದೊಡ್ಡ ಸಮಸ್ಯೆಯಾಗಿದೆ. ಇದಕ್ಕಾಗಿ ಇರುವ ಕೆರೆಗಳ ಹೂಳು ತೆಗೆಸಲು ಕ್ರಮ ತೆಗೆದುಕೊಳ್ಳದೆ ಹೊಸಕೆರೆಗಳನ್ನು ನಿರ್ಮಿಸುವುದಕ್ಕಾಗುವುದಿಲ್ಲ. ಇರುವ ಕೆರೆಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಮೊದಲು ಕೆರೆ ಕಟ್ಟಿದಾಗ ಎಷ್ಟು ನೀರು ನಿಲ್ಲುತಿತ್ತೋ ಈಗ ಅದರಲ್ಲಿ ಅರ್ಧ ಕಡಮೆಯಾಗಿದೆ. ಇಂಥ 14,000 ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕಾದರೆ 20 ಕೋಟಿ ರೂಪಾಯಿಗಳು ಬೇಕು. ಈ ಬಗ್ಗೆ ಒಂದು ಯೋಜನೆ ಮಾಡಿ ಇಷ್ಟು ಹಣ ಕೊಡಬೇಕೆಂದು ಕೇಂದ್ರಕ್ಕೆ ತಿಳಿಸಿದೆ.

ಮೈಸೂರು ದೇಶದ ನೀರಾವರಿ 11 ಲಕ್ಷ ಎಕರೆಗಳು ಮಾತ್ರವಿದೆ, ನೂರಕ್ಕೆ ಆರರಷ್ಟು ಮಾತ್ರವಿದೆ, ಹೆಚ್ಚಾಗಬೇಕು ಎಂದು ಸದಸ್ಯರು ಹೇಳಿದರು. ಸರ್ಕಾರಕ್ಕೂ ಸಹ ಈ ವಿಚಾರದಲ್ಲಿ

(ಶ್ರೀ ಆಲೂರು ಹನುಮಂತಪ್ಪ)

ತೀವ್ರಾಸಕ್ತಿಯಿದೆ. ಇದಕ್ಕಾಗಿ ಈಗ ನಮ್ಮ ಪಬ್ಲಿಕ್ ವರ್ಕ್ಸ್ ಇಲಾಖಾಧಿಕಾರಿಗಳು ಅಂದಾಜು ಮತ್ತು ಪ್ಲಾನುಗಳನ್ನು ತಯಾರಿಸಿರುವುದು, ಸುಮಾರು 1,500 ಅಂದಾಜುಗಳ ಸ್ಕ್ರೂಟಿನಿಯಾಗಿದೆ, ಸರ್ಕಾರನಿಂದ ಮಂಜೂರಾಗಿರುವ ಅಂದಾಜುಗಳಿಗೆ 14 ಕೋಟಿ ರೂಪಾಯಿಗಳು ಬೇಕು ಎಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಅಷ್ಟನ್ನು ಒದಗಿಸಿ ಈ ಕೆಲಸಗಳನ್ನು ಮಂಜೂರು ಮಾಡಿ ಕಾರ್ಯಗತ ಮಾಡುವುದಾದರೆ 1½ ಲಕ್ಷ ಹೊಸ ಅಚ್ಚುಕಟ್ಟು ಬರುತ್ತದೆಂದು ವರದಿಯಾಗಿದೆ.

ಕೆರೆ ದುರಸ್ತಿ ವಿಷಯ ಮಾನ್ಯ ಸದಸ್ಯರು ಹೇಳಿದರು, ಬುಲ್ಡೋಜರ್ ಬೇಕು, ಕೆರೆ ಉತಾವಣೆ ಮಾಡಲು ಪ್ರಯತ್ನಿಸಬೇಕು, ನೀರು ಮುಳುಗಡೆಯಾಗುವ ಅನೇಕ ಸಂದರ್ಭಗಳಲ್ಲಿ ತಕ್ಕ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು. ಅದು ಸೂಕ್ತವಾಗಿದೆ. ಕೆರೆಗಳನ್ನು ಈ ದಿವಸವಲ್ಲವಿದ್ದರೆ ನಾಳೆಯಾದರೂ ದುರಸ್ತು ಮಾಡಲೇಬೇಕು. ಸರ್ಕಾರಕ್ಕೆ ಈ ವಿಚಾರ ಗೊತ್ತಿದೆ. ಈಗಾಗಲೆ ಅಧಿಕಾರಿಗಳಿಗೆ ಈ ಬಗ್ಗೆ ಕೆರೆಗಳ ಸರ್ವೆ ಮಾಡಬೇಕೆಂದು ತಿಳಿಸಲಾಗಿದೆ. ಇರುವ 35 ಸಾವಿರ ಕೆರೆಗಳ ಸರ್ವೆ ಮಾಡಿ ಯಾವ ಯಾವ ಕೆರೆಯ ಆಳ ಹಿಂದೆ ಎಷ್ಟಿತ್ತು, ಈಗ ಎಷ್ಟಿದೆ ಏರಿ, ತೂಬು ಮುಂತಾದುವುಗಳು ಯಾವ ಸ್ಥಿತಿಯಲ್ಲಿವೆ ಎಂಬುದನ್ನೆಲ್ಲಾ ಪರಿಶೀಲಿಸಬೇಕೆಂದು ಅಧಿಕಾರಿಗಳಿಗೆ ಹೇಳಿದೆ. ಬಹಳ ಆಸಕ್ತಿಯಿಂದ, ರಭಸದಿಂದ ಕೆಲಸ ನಡೆಯುತ್ತಿದೆ. ಟ್ಯಾಂಕ್ ಮ್ಯಾನ್ಯುಯಲ್ ತಯಾರಿಕೆ ಮುಗಿಯುವ ಮಟ್ಟಕ್ಕೆ ಬಂದಿದೆ.

ಸಣ್ಣ ನೀರಾವರಿ ಯೋಜನೆಯ ಬಗ್ಗೆ ಮೈನರ್ ಪ್ಲಾನ್ ತಯಾರು ಮಾಡಬೇಕೆಂದು. ಈಗಿರತಕ್ಕ 11 ಲಕ್ಷ ಎಕರೆ ಜೊತೆಗೆ ಇನ್ನೂ 11 ಲಕ್ಷ ಎಕರೆ ಮಾಡಬೇಕಾಗಿದ್ದರೆ ಯಾವ ರೀತಿ ಎಸ್ಟಿಮೇಟ್ ತಯಾರು ಮಾಡಬೇಕೆಂಬ ಉದ್ದೇಶದಿಂದ ಮೈನರ್ ಇರಿಗೇಷನ್ ಇನ್‌ವೆಸ್ಟಿಗೇಷನ್ ಡಿವಿಜನ್‌ಗಳನ್ನು ತೆಗೆದಿದ್ದೇವೆ. ಅವರ ಸಿಬ್ಬಂದಿ ವರ್ಗದವರು ಎಲ್ಲಾ ತಾಲ್ಲೂಕುಗಳಲ್ಲೂ ಎಲ್ಲಾ ಜಿಲ್ಲೆಗಳಲ್ಲೂ ಸಹ ಎಸ್ಟಿಮೇಟ್ ತಯಾರು ಮಾಡತಕ್ಕ ಕಾರ್ಯದಲ್ಲಿ ತೊಡಗಿದ್ದಾರೆ. ಯಾವ ತಾಲ್ಲೂಕಿನಲ್ಲಿ ಹೆಚ್ಚು ನೀರಾವರಿ ಆಗುವುದು ಅವಶ್ಯಕ ಎಂಬುದನ್ನು ಅವರ ವರದಿ ಬಂದ ಮೇಲೆ ಪರಿಶೀಲನೆಮಾಡಿ ತೀರ್ಮಾನ ಮಾಡುತ್ತೇವೆ. ಕೇಂದ್ರ ಸರ್ಕಾರದಿಂದ ಹಣ ಕೂಡ ಕೇಳಿದ್ದೇವೆ. ಕಾಂಗಾರಿಗಳನ್ನು ಮಾಡುವಾಗ ಕೆಲವು ಕಡೆ ಹೆಚ್ಚಿನ ಪ್ರಾತಿನಿಧ್ಯ ಕೊಡುತ್ತೀರಿ. ಮತ್ತೆ ಕೆಲವು ಕಡೆ ಕೊಡುವುದಿಲ್ಲ ಎಂದು ಕೆಲವು ಸದಸ್ಯರು ಹೇಳಿದರು. ಅದು ಹಾಗಲ್ಲ ಅದರ ಅರ್ಥವಾದರೂ ಇಷ್ಟೇ. 50 ಸಾವಿರ ರೂಪಾಯಿಗಳಿಗೂ ಕಡಿಮೆ ಎಸ್ಟಿಮೇಟ್ ಇದ್ದಾಗ 2% ರಿಟರ್ನ್ ಬರಬೇಕು ಒಂದು ಎಕರೆಗೆ 1000 ರೂಪಾಯಿ ಖರ್ಚಾಗಬೇಕು ಎಂದು ಸರ್ಕಾರದ ಹುಕುಂ ಇತ್ತು. 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಕೆಲಸಕ್ಕೆ 3% ರಿಟರ್ನ್ ಬರಬೇಕು 1000 ರೂಪಾಯಿ ಖರ್ಚುಮಾಡಬಹುದು ಎಂದು ಇತ್ತು. ರೆಸ್ಟೋರೇಷನ್ ಕೆಲಸಕ್ಕೆ ಒಂದು ಎಕರೆಗೆ 700 ರೂಪಾಯಿಗಳವರೆಗೂ ಖರ್ಚು ಮಾಡಬೇಕೆಂದು ಇತ್ತು. ಎಸ್ಟಿಮೇಟ್‌ಗಳು ತಯಾರಾದ್ದಕ್ಕೆ ನಾನಾ ರೀತಿಯಲ್ಲಿ ತೊಡಕುಗಳು ಬಂದು ಕೆಲಸ ನಿಂತು ಹೋಗುತ್ತದೆ. ಎಂಬ ಉದ್ದೇಶದಿಂದ, ಮಳೆ 24 ಇಂಚಿಗೂ ಕಡಿಮೆ ಆಗತಕ್ಕ ಪ್ರದೇಶ ಮೈಸೂರು ದೇಶದಲ್ಲಿ ಅನೇಕ ಕಡೆ ಇದೆ. ಅಂಥಾ ಪ್ರದೇಶದಲ್ಲಿ ಸಣ್ಣ ನೀರಾವರಿ ಕಾಂಗಾರಿ, ಕೆರೆ ಪಿಕ್ ಅಪ್ ಕಟ್ಟಲಿಕ್ಕೆ ಸಾಧ್ಯವಾಗುತ್ತದೆ ಎಂದು ಒಂದು ಹೊಸ ಆರ್ಡರನ್ನು ಜಾರಿಮಾಡಿ 50 ಸಾವಿರ ರೂಪಾಯಿಗಳ ಕೆಳಗೆ 1500 ರೂಪಾಯಿ ಖರ್ಚು ಮಾಡಬಹುದು. 50 ಸಾವಿರ ರೂಪಾಯಿ ಮೇಲ್ಪಟ್ಟು 1500 ರೂಪಾಯಿ 2% ರಿಟರ್ನ್ ಬಂದರೆ ಸಾಕು ಎಂದು ಆದೇಶ ಕೊಟ್ಟಿದ್ದೇವೆ. ರೆಸ್ಟೋರೇಷನ್ ಆಫ್ ಟ್ಯಾಂಕ್ಸ್‌ಗೆ 1000 ರೂಪಾಯಿ ಎಸ್ಟಿಮೇಟ್ ಮಾಡಬಹುದು ಎಂದು ಆದೇಶಕೊಟ್ಟಿದ್ದೇವೆ. ಈಗ ದೇಶದಲ್ಲಿ ಅನೇಕ ಪ್ರಾಜೆಕ್ಟುಗಳು ಕೆರೆಗಳು ಮುಖ್ಯ ಮಂತ್ರಿಗಳು ಹಾಗೂ ಚೀಫ್ ಇಂಜನೀಯರ ಮಂಜೂರಾತಿ ಪಡೆದು ಈಗ ಕಾರ್ಯ ರೂಪದಲ್ಲಿ ಇವೆ. ಹಿಂದೆ ತೆಗೆದುಕೊಂಡ ಕೆಲಸಗಳು ಬಹಳ ವರ್ಷಗಳಾದರೂ ಮುಗಿಯದೇ ಹಾಗೆಯೇ ನಿಂತು ಹೋಗಿವೆ ಎಂದು ಹೇಳಿದ್ದಾರೆ ಅದಕ್ಕೆ ಕೆಲವು ಕಾರಣಗಳು ಇವೆ. ಅಧಿಕಾರಿಗಳಿಗೆ ಆದೇಶಕೊಟ್ಟಿದ್ದೇವೆ. 1 ಲಕ್ಷ 71 ಸಾವಿರ ಎಕರೆ ಹೊಸ ಅಚ್ಚು ಕಟ್ಟಿಗೆ ಅಷ್ಯೂರ್ಡ್ ವಾಟರ್ ಸಪ್ಲೈ ಆಗುತ್ತದೆ ಆದಷ್ಟು ಜಾಗ್ರತೆ ಹಳೆ ಕೆಲಸ ಪೂರೈಸಬೇಕೆಂದು ಒಂದು ಸ್ಪೆಷಲ್ ಸಬ್ ಡಿವಿಜನ್ ಎಕ್ಸಿಕ್ಯೂಟೀವ್ ಇಂಜನಿಯರು, ತಕ್ಕ ಸಿಬ್ಬಂದಿ ಏರ್ಪಾಡು ಮಾಡಿದ್ದೇವೆ. ಆ ಕೆಲಸ ಮಾಡುತ್ತಾರೆ ಎಂಬ ಭರವಸೆ ಕೊಡುತ್ತಾ ಇದ್ದೇನೆ. ಅಲ್ಲದೇ ಯಾವ ರೀತಿಯ ತೊಡಕು ಬರದಂತೆ ಒಂದು ಟೆಕ್ನಿಕಲ್ ಸೆಲ್ ಎಂಬುದನ್ನು ಸಹ ನಿರ್ಮಾಣ ಮಾಡಬೇಕೆಂದು ಆಲೋಚನೆ ಮಾಡುತ್ತಾ ಇದ್ದೇವೆ. ಅದನ್ನು ಆದಷ್ಟು ತೀವ್ರವಾಗಿ ಮಾಡುತ್ತೇವೆ ಎಂಬ ಭರವಸೆಯನ್ನು ಈ ಸಭೆಗೆ ಕೊಡುತ್ತಾ ಇದ್ದೇನೆ. ಅನೇಕ ಮಾನ್ಯ ಸದಸ್ಯರ ಪ್ರಶ್ನೋತ್ತರ ಕಾಲದಲ್ಲಿ ಹಾಗೂ ಈ ಸಂದರ್ಭದಲ್ಲಿ ಮಾತನಾಡುತ್ತಾ ಹೊಳೆನದಿಗಳಿಗೆ ಲಿಫ್ಟ್ ಇರಿಗೇಷನ್

ವ್ಯವಸ್ಥೆ ಮಾಡುವುದು ಬಹಳ ಅವಶ್ಯಕ ಎಂದು ಹೇಳಿದ್ದಾರೆ. ನಾನೂ ಸಹ ಅನೇಕ ಪ್ರದೇಶಗಳಲ್ಲಿ ನೋಡಿದಾಗ ಈ ನದಿಗಳಿಗೆ ಹೆಚ್ಚು ಎಚ್. ಪಿ. ಪಂಪ್ ಸೆಟ್ಟುಗಳನ್ನು ಹಾಕಿ ಅತಿ ಜಾಗ್ರತೆ ನೀರಾವರಿಯಾಗುವಂತೆ ಮಾಡಬೇಕೆಂದು ಅನಿಸಿತು. ಪಬ್ಲಿಕ್ ವರ್ಕ್ಸ್ ಇಲಾಖೆಯ ಮೂಲಕ ಮಾಡಬೇಕೇ ಅಥವಾ ಯಾವ ರೀತಿ ಮಾಡಬೇಕು ಎಂಬ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ. ಒಂದು ಎಕರೆಗೆ ಎಷ್ಟು ಹಣ ಖರ್ಚಾಗುತ್ತದೆ. ಮೇನ್‌ಟೆನೆನ್ಸ್ ಖರ್ಚು ಎಷ್ಟು ಬರುತ್ತದೆ ಎನ್ನುವುದು ವಿಮರ್ಶೆ ಮಾಡತಕ್ಕ ವಿಷಯವಾಗಿದೆ. ಅದಕ್ಕೆ ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುತ್ತಾ ಇದ್ದಾರೆ ಎಂದು ಮಾನ್ಯ ಸಭೆಗೆ ಹೇಳುತ್ತಾ ಇದ್ದೇನೆ.

ಇನ್ನು ನೀರಾವರೀ ಕೆರೆಗಳನ್ನು ಜೀರ್ಣೋದ್ಧಾರ ಮಾಡತಕ್ಕ ವಿಷಯ. ಮಾನ್ಯಸಭೆಗೆ ಗೊತ್ತಿರುವ ಹಾಗೆ ಹೋದ ವರ್ಷ ಸುಮಾರು 100 ಕೆರೆಗಳು ಒಡೆದು ಹೋದವು. ಅಂಥಾ ಕೆರೆಗಳಿಗೆ ತಕ್ಷಣ ಗಮನ ಕೊಟ್ಟು ಟ್ಯಾಂಕ್ ಬಂಡ್ ಹಾಕುತ್ತೇವೆ. ನೀರು ನಿಲ್ಲುವಂತೆ ಮಾಡುತ್ತೇವೆ. ಆ ರೀತಿ ಮಾಡಿ ಈಗಾಗಲೇ ಸಾವಿರಾರು ಎಕರೆಗಳಿಗೆ ನೀರು ಸರಬರಾಯಿ ಮಾಡಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಹಾಗೆಯೇ ನೂರಾರು ವರ್ಷಗಳ ಹಿಂದೆ ಒಡೆದು ಹೋದ ಕೆರೆಗಳ ಟ್ಯಾಂಕ್ ಬೆಡ್‌ಅನ್ನು ಕಲ್ಟಿವೇಷನ್‌ಗೆ ಕೊಟ್ಟು ಅವುಗಳ ವಿಷಯದಲ್ಲಿ ಲೀಗಲ್ ಕಾಂಪ್ಲಿಕೇಷನ್ ಬಂದು ಅವುಗಳನ್ನು ಸ್ವಾಧೀನಕ್ಕೆ ತೆಗೆದು ಕೊಳ್ಳಲಿಕ್ಕಾಗದೇ ಅವುಗಳ ಜೀರ್ಣೋದ್ಧಾರಕ್ಕೆ ಮಾಡಿದ ಎಸ್ಟಿಮೇಟುಗಳು ಸಹ ಸರ್ಕಾರದಲ್ಲಿ ನಿಂತು ಹೋಗಿವೆ. ಅದಕ್ಕೆ ತಕರಾರುಗಳು ಬಂದಿರುವುದೇ ಒಂದು ಮುಖ್ಯ ಕಾರಣ ಎಂದು ಕಾಣುತ್ತದೆ. ಕೆರೆಗಳನ್ನು ಜೀರ್ಣೋದ್ಧಾರ ಮಾಡುವಾಗ ಬುಲ್‌ಡೋಜರುಗಳಿಂದಾಗಲೀ, ತಾಲ್ಲೂಕು ಬೋರ್ಡು ಅಥವಾ ಗ್ರಾಮಪಂಚಾಯಿತಿಗಳಿಗೆ ಸೇರಿದ ಕೆರೆಗಳನ್ನು ಜೀರ್ಣೋದ್ಧಾರ ಮಾಡಲು ಜನಶಕ್ತಿಯನ್ನು ಉಪಯೋಗಿಸುವುದರ ಮೂಲಕವಾಗಿ ಅಗಲೀ ಕೆರೆಗಳಲ್ಲಿರತಕ್ಕ ಮಣ್ಣನ್ನು ತೆಗೆದು ದುರಸ್ತಿ ಮಾಡಿ ಪ್ರತಿಗ್ರಾಮಕ್ಕೆ ಸುವ್ಯವಸ್ಥಿತವಾದ ಒಂದು ಕೆರೆ ನಿರ್ಮಾಣ ಮಾಡಬೇಕೆಂದು ಒಂದು ರಚನಾತ್ಮಕವಾದ ಕೆಲಸದಲ್ಲಿ ಎಲ್ಲರ ಸಹಕಾರ ಬೆಂಬಲ ಹಾಗೂ ಉತ್ಸಾಹ ಬರಬೇಕು ಎಂದು ನಾನು ಎಲ್ಲರಲ್ಲೂ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಾಲ್ಲೂಕು ಬೋರ್ಡು, ಪಂಚಾಯ್ತಿ ಕೆರೆಗಳು ಎಂದು ಹೇಳಿದಿರಿ. ಅದು ಯಾವುದು?

ಶ್ರೀ ಆಲೂರು ಹನುಮಂತಪ್ಪ.—10 ಎಕರೆಗಿಂತ ಕಡಿಮೆ ಅಚ್ಚುಕಟ್ಟು ಇರತಕ್ಕ ಕೆರೆಗಳನ್ನು ತಾಲ್ಲೂಕು ಬೋರ್ಡಿನವರು ನಿರ್ವಹಣೆ ಮಾಡಬೇಕು. ಕೆರೆಗಳನ್ನು ದುರಸ್ತು ಮಾಡುವುದು ಕೆರೆಏರಿಯನ್ನು ಸರಿಪಡಿಸುವುದು ಇದಕ್ಕೆ ಗಮನ ಕೊಡದಿದ್ದರೆ ಮಳೆಗಾಲದಲ್ಲಿ ಆಗತಕ್ಕ ನಷ್ಟ ಪ್ರವಾಹಗಳನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಆ ಬಗ್ಗೆ ತೀವ್ರತೆಯಿಂದ ಕ್ರಮ ಕೈಕೊಳ್ಳಬೇಕಾಗಿದೆಯೋ ಅದನ್ನೆಲ್ಲಾ ಮಾಡಬೇಕಾದ್ದು ಬಹಳ ಮುಖ್ಯ ಎಂದು ಹೇಳಿ ಆ ವಿಷಯ ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ. ಇತರ ವಿಷಯಗಳನ್ನು ಮಾನ್ಯ ಮಂತ್ರಿಗಳು ಹೇಳುವವರಿದ್ದಾರೆ. ಈ ವಿಷಯದಲ್ಲಿ ಅವರು ಕೇಂದ್ರ ಸರ್ಕಾರದವರೆಗೂ ಸಹ ಮೊನ್ನೆ ಹೋಗಿದ್ದಾಗ ಮನವರಿಕೆ ಮಾಡಿದ್ದಾರೆ. ಇತ್ತೀಚೆಗೆ ಮದ್ರಾಸಿನಲ್ಲಿ ನಡೆದ ಮುಖ್ಯಮಂತ್ರಿಗಳ ಮೀಟಿಂಗಿನಲ್ಲೂ ಮತ್ತು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ರಾಜ್ಯ ಸರ್ಕಾರಗಳ ಹಾಗೂ ಕೇಂದ್ರದ ಮಂತ್ರಿಗಳ ಸಮ್ಮೇಳನದಲ್ಲೂ ನಾವು ಅವರಿಗೆ ಹೆಚ್ಚಿನ ಹಣಕ್ಕಾಗಿ ಮನವಿ ಮಾಡಿಕೊಂಡಿದ್ದೇವೆ. ನಮ್ಮ ದೇಶ ನೀರಾವರಿ ಯೋಜನೆಗಳಲ್ಲಿ ಬಹಳ ಹಿಂದೆ ಬಿದ್ದಿದೆಂಬ ಅಂಶವನ್ನು ಕೇಂದ್ರ ಸರ್ಕಾರದ ಮಂತ್ರಿಗಳು ಮನಗೊಂಡು ನಮ್ಮ ರಾಜ್ಯಕ್ಕೆ ನೀರಾವರಿ ಯೋಜನೆಗಳ ಬಗ್ಗೆ ಆದಷ್ಟು ಹೆಚ್ಚಿನ ಹಣವನ್ನೊದಗಿಸುವುದಾಗಿ ಭರವಸೆ ಕೂಡ ನಮಗೆ ಕೊಟ್ಟಿದ್ದಾರೆ. ಈಗಾಗಲೆ ನಮಗೆ ಕೇಂದ್ರ ಸರ್ಕಾರದವರು ನಮ್ಮ ಈ ಕೆಲಸಗಳ ವೆಚ್ಚದಲ್ಲಿ ಶೇಕಡ 50ರಷ್ಟನ್ನು ಕೊಟ್ಟಿದ್ದಾರೆ.

ಇನ್ನು ಕೆರೆಗಳ ಮೈಂಟಿನೆನ್ಸ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇಲ್ಲಿಯವರೆವಿಗೂ ಈ ರೆವಿನ್ಯೂ ಮೈಂಟೇನ್ಡ್ ಟ್ಯಾಂಕುಗಳ ಬಗ್ಗೆ ರೆವಿನ್ಯೂ ಇಲಾಖೆಯವರೇ ಕೆಲವು ಕೆರೆಗಳ ತೂಬು ರಿವಿಟ್‌ಮೆಂಟ್ ಕೆಲಸ, ಕಟ್ಟೆಗಳ ರಿಪೇರಿ ಇತ್ಯಾದಿಗಳನ್ನೆಲ್ಲ ನಡೆಸುತ್ತಿದ್ದರು. ಈ ಪದ್ಧತಿ ಬಹಳ ಹಿಂದಿನಿಂದಲೂ ಜಾರಿಯಲ್ಲಿತ್ತು. ಈ ಕೆಲಸಗಳಲ್ಲಿ ಎಲ್ಲಿ ಬಂದು ಕ್ಯುಸೆಕ್ಸ್ ನೀರಿರುತ್ತದೋ ಅಲ್ಲಿ ಅಥವಾ 40 ಎಕರೆ ನೀರಾವರಿ ಇರತಕ್ಕ ಕೆರೆಗಳ ಏರಿ ದುರಸ್ತನ್ನು ರೈತರೆ ಮಾಡಿಕೊಳ್ಳಬೇಕೆಂಬ ನಿಯಮವಿತ್ತು. ಆದರೆ ಇತ್ತೀಚೆಗೆ ಹೊಸ ರಾಜ್ಯ ಸ್ಥಾಪನೆಯಾದ ಮೇಲೆ ಒಂದೊಂದು ಕಡೆಯಿಂದ ಬಂದಿರತಕ್ಕ ಒಂದೊಂದು ಭಾಗದಲ್ಲೂ ಒಂದೊಂದು ರೀತಿಯ ಕಾನೂನುಗಳಿರುವುದರಿಂದ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಬಹಳ ತೊಂದರೆಯಾಗಿದೆ. ಆದರೆ ಅದರ ಬಗ್ಗೆ ಒಂದು ಯೂನಿಫಾರಂಲಾ ಜಾರಿಗೆ ತರಲು ಈಗಾಗಲೇ ಡ್ರಾಫ್ಟ್ ಮಸೂದೆ ತಯಾರಾಗಿದೆ. ಅದು

(ಶ್ರೀ ಆಲೂರು ಹನುಮಂತಪ್ಪ)

ಸಧ್ಯದಲ್ಲೇ ಈ ಮಾನ್ಯ ಸಭೆಯ ಮುಂದೆ ಬಂದು ಮಾನ್ಯ ಸದಸ್ಯರಿಂದ ಅನೇಕ ಸಲಹೆಗಳನ್ನು ಪಡೆಯತಕ್ಕದ್ದಾಗಿದೆ. ಈ ವಿಚಾರದಲ್ಲಿ ಅಧಿಕಾರಿಗಳಿಗೆ ಎಷ್ಟು ಪವರ್ ಕೊಡಬಹುದು, ಈ ಕೆರೆಗಳ ಆಡಳಿತ ಯಾರಿಗೆ ಸಂಪೂರ್ಣವಾಗಿ ವಹಿಸಬೇಕು ಎನ್ನತಕ್ಕ ವಿಚಾರ ಒಂದು ಮಸೂದೆ ರೂಪದಲ್ಲಿ ತಮ್ಮೆಲ್ಲರ ಮುಂದೆ ಸಧ್ಯದಲ್ಲೇ ಚರ್ಚೆಗೆ ಬರಲಿದೆ. ಆದರೆ ಇತ್ತೀಚೆಗೆ ಅನೇಕ ಕಡೆಗಳಲ್ಲಿ ಈ ವಾಟರ್ ರೇಟ್ ಬೆಟರ್ ಮೆಂಟ್ ಲೇವಿ ವಸೂಲಿ ಬಹಳವಾಗಿ ನಿಂತು ಹೋಗಿದೆಯಂತೆ ಕೇಳುತ್ತಿದ್ದೇವೆ.

ಇನ್ನು ಮೈನರ್ ಇರಿಗೇಷನ್ ವಿಚಾರದ ಬಗ್ಗೆ ನನಗೆ ಒಂದು ಬಹು ಮುಖ್ಯವಾದ ಸಂತೋಷದ ವಿಚಾರವೇನು ಕಂಡು ಬಂದಿದೆ ಎಂದರೆ ನಾನು ಎಲ್ಲಿಯೇ ಹೋಗಲಿ ಯಾವ ತಾಲ್ಲೂಕಿಗೆ ಹೋಗಲಿ ಅಲ್ಲಿರತಕ್ಕ ಸಾರ್ವಜನಿಕರು ತಾಲ್ಲೂಕು ಬೋರ್ಡಿನ ಸದಸ್ಯರೂ ಮತ್ತು ಈ ಸಭೆಯ ಮಾನ್ಯ ಸದಸ್ಯರು ನಮಗೆ ಕೆರೆಗಳ ಕಾರ್ಯವನ್ನು ತೀವ್ರವಾಗಿ ಮಾಡಿಸಿ ಕೊಡಬೇಕೆಂದು ಕೇಳುತ್ತಾರೆ. ಅವರು ಈ ವಿಚಾರದಲ್ಲಿ ಅಷ್ಟು ತುಂಬಾ ಆಸಕ್ತಿ ವಹಿಸಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ನಾನೀಗ ಈ ನೀರಾವರಿ ಯೋಜನೆಗಳಿಗೆ ಬಹಳ ಮುಖ್ಯ ಗಮನವನ್ನು ಕೊಡುತ್ತಿದ್ದೇನೆ. ಇಲ್ಲಿ ಈ ನೀರಾವರಿ ಯೋಜನೆಗಳಿಗೆ ಬೇಕಾದಷ್ಟು ಅವಕಾಶವಿದೆ. ಈ ಕೆಲಸಗಳನ್ನು ಅತಿ ತೀವ್ರವಾಗಿ ಮುಗಿಸತಕ್ಕ ಬಗ್ಗೆ ಸರ್ಕಾರದವರು ಹೆಚ್ಚಿನ ಆಸಕ್ತಿ ವಹಿಸಿ ಈ ಕೆಲಸ ಕಾರ್ಯಗಳೆಲ್ಲ ಬೇಗ ಮುಗಿಯುವಂತೆ ಮಾಡಲು ಈ ಕೆಲಸಕ್ಕೆ ಬೇಕಾದ ಸಿಬ್ಬಂದಿವರ್ಗವನ್ನೂ ಅವರಿಗೆ ಅಗತ್ಯವಾದ ವಾಹನ ಸೌಕರ್ಯವನ್ನೂ ಒದಗಿಸಿ ಇಲಾಖೆಯವರು ವರ್ಷಕ್ಕೆ ಇಂತಿಷ್ಟು ಕೆಲಸಗಳನ್ನು ಮಾಡಿಯೇ ತೀರಬೇಕೆಂದು ಒತ್ತಾಯ ಹಾಕಿ ಈ ಕೆಲಸ ಕಾರ್ಯಗಳನ್ನು ತೀವ್ರವಾಗಿ ಮುಗಿಯುವಂತೆ ಮಾಡಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನ ಮಾಡಿದೆ. ನಮಗೆ 1962-63ರಲ್ಲಿ ಬಂದ 238 ಲಕ್ಷ ರೂ.ಗಳನ್ನು ಖರ್ಚುಮಾಡಿ ಅನೇಕ ಸಣ್ಣ ಪುಟ್ಟ ನೀರಾವರಿ ಯೋಜನೆಗಳನ್ನು ಕೈಗೊಂಡು ಮುಗಿಸಲಾಗಿದೆ. ಆ ಹಣ ಸದ್ವಿನಿಯೋಗವಾಗಿದೆ. ತತ್ರಾಪಿ ಬಿಜಾಪುರಜಿಲ್ಲೆ ಕ್ಷಾಮ ಪಿಡಿತವಾಗಿದ್ದು ಅಲ್ಲಿಗೆ ಈ ಹೆಚ್ಚಿನ ಹಣಸಹಾಯ ದೊರತದ್ದು ನನಗೆ ಒಂದು ಮಹದಾನಂದವನ್ನುಂಟು ಮಾಡಿದೆ. ಈಗ ಅಲ್ಲಿಯ ಜನರ ಜೀವನ ಬಹಳ ಚೆನ್ನಾಗಿ ನಡೆಯುತ್ತಿದೆ. ಎಂತ ಹೇಳಿದರೆ ತಪ್ಪಾಗಲಾರದು. ಇಂಥಾ ಪರಿಸ್ಥಿತಿ ಇನ್ನು ಎಂದೆಂದಿಗೂ ಅಲ್ಲಿ ಬರಬಾರದೆಂಬ ರೀತಿಯಲ್ಲಿ ಅಲ್ಲಿ ಈ ಕೆಲಸಗಳನ್ನು ಮಾಡಿಸಲಾಗಿದೆ. ಅಲ್ಲಿ ಜನರು ಈ ವಿಚಾರದಲ್ಲಿ ಎಷ್ಟು ತೀವ್ರತೆಯಿಂದದ್ದಾರೆಂಬುದು ಸರ್ಕಾರದವರಿಗೆ ಅರ್ಥವಾಗಿದೆ. ಹೀಗೆ ಲಿಫ್ಟ್ ಇರಿಗೇಷನ್ ಬಗ್ಗೆ ಸಹ ಬೇಕಾದಷ್ಟು ಕೆಲಸ ನಡೆದಿದೆ ಎಂತ ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳ ಮೇಲೆ ಈ ಸಭೆಯ ಅನೇಕ ಮಾನ್ಯ ಸದಸ್ಯರು ಎರಡು ದಿವಸಗಳಿಂದಲೂ ನಡೆದ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ ಹಾಗೂ ಈ ಖಾತೆಯಲ್ಲಿ ಸ್ವಲ್ಪಪ್ರಮಾಣದಲ್ಲಿರುವ ಲೋಪದೋಷಗಳನ್ನೂ ಕೂಡ ಸರ್ಕಾರದವರ ಗಮನಕ್ಕೆ ತರಲು ಅವರು ಪ್ರಯತ್ನಮಾಡಿದ್ದಾರೆ. ಈ ಸಲ ಮಾನ್ಯ ಸದಸ್ಯರು ಈ ಲೋಕೋಪಯೋಗಿ ಖಾತೆಯ ಮೇಲೆ ಮಾತನಾಡುತ್ತ ಎಲ್ಲೂ ಅಂಥಾ ಕಟುವಾದ ಟೀಕೆ ಮಾಡದೆ ಇದ್ದುದನ್ನು ಒಂದು ಸಂತೋಷದ ವಿಚಾರವೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆ ಮಾನ್ಯ ಸದಸ್ಯರುಗಳಿಗೆ ಇನ್ನಷ್ಟು ಕಾಲಾವಕಾಶವನ್ನು ಕೊಟ್ಟಿದ್ದರೂ ಅಂಥ ಕಟುವಾದ ಟೀಕೆಗಳನ್ನೇನೂ ಮಾಡುತ್ತಿರಲಿಲ್ಲ ಅಂತ ನಾನು ತಿಳಿದುಕೊಂಡಿದ್ದೇನೆ. ಆದರೆ ಹೋದ ಸಾರ್ತಿಗಿಂತ ಈ ಸಾರ್ತಿ ಮಾನ್ಯ ಸದಸ್ಯರೆಲ್ಲರೂ ಈ ಖಾತೆಯ ಮಹತ್ವ ಎಷ್ಟಿದೆಯೆಂಬುದನ್ನು ಚೆನ್ನಾಗಿ ತಿಳಿದು ಕೊಂಡಿದ್ದಾರೆ. ಈ ಕಡೆ ಇರತಕ್ಕ ಯಾರೋ ಒಬ್ಬ ಮಾನ್ಯ ಸದಸ್ಯರು ಈ ಲೋಕೋಪಯೋಗಿ ಖಾತೆಯನ್ನು ಪಬ್ಲಿಕ್ ಎನಿಮಿ ನಂಬರ್ ಒನ್ ಎಂತ ಹೇಳಿದ್ದನ್ನು ಕೇಳಿದಕೂಡಲೇ ತಾವೇನು ಹೇಳಿದಿರಿ ಎಂತ ಹಿಂದಕ್ಕೆ ತಿರುಗಿ ಕೇಳಿದ ಕೂಡಲೇ ಅವರು ಒಮ್ಮಿಂದೊಮ್ಮೆಲೆ ಮೇಲೆ ಹಾರಿಬಿದ್ದು ಹಾಗೇನು ಇಲ್ಲ ಎಂತ ಹೇಳಿದರು. ಆದರೆ ಅದೆಲ್ಲ ಹಳೇ ಕಾಲದ ಮಾತುಗಳಾಯಿತು. ಈ ದಿವಸ ನಾನು ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ಮಧ್ಯ ಮಧ್ಯ ಸದಸ್ಯರುಗಳಾರೂ ಇಂಟರಪ್ಟ್ ಮಾಡಬಾರದು. ಅಲ್ಲದೆ ನಾನು ಉತ್ತರ ಕೊಡುವುದನ್ನು ಮುಗಿಸಿ ಮತ್ತೆ ಮುಖ್ಯ ಮಂತ್ರಿಗಳು ಬೇರೆ ಮಾತನಾಡತಕ್ಕವರಿದ್ದಾರೆ. ಅನೇಕ ವಿಚಾರಗಳನ್ನು ಹೇಳಬೇಕಾಗಿದೆ. ಈಗ ನಮ್ಮ ದೇಶ ಸ್ವಾತಂತ್ರ್ಯವಾದ ನಂತರ ದೇಶದ ಪುನರ್ರಚನೆ ಕಾರ್ಯದಲ್ಲಿ ತೊಡಗಿದೆ. ಈ ದಿವಸ ದೇಶಾದ್ಯಂತವೂ ದೊಡ್ಡ ದೊಡ್ಡ ಯೋಜನೆಗಳು ನಡೆಯುತ್ತಿವೆ. ಈ ಯೋಜನೆಗಳ ಕಾರ್ಯದಲ್ಲಿ P.W.D. ವಹಿಸತಕ್ಕ ಪಾತ್ರವನ್ನು ಯಾರು ಅಲ್ಲಗಳೆಯುವಂತಿಲ್ಲ. ಈ ದಿವಸ ದೇಶದಲ್ಲಿ ನಾವು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕೈಗೊಂಡಿರತಕ್ಕದ್ದು ಎಲ್ಲರಿಗೂ ಗೊತ್ತೇ

ಇದೆ. ಈ ಕೆಲಸಗಳೆಲ್ಲ ಈ P.W,D. ಮೂಲಕವೇ ನಡೆಯುತ್ತದೆ. ಈ ವರೆಗೆ ಕೆಲವು ಕೆಲಸಗಳು ಮುಗಿದಿವೆ. ಇನ್ನೂ ಹೊಸದಾಗಿ ನಾವು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ನಮ್ಮ ಇಂಜನಿಯರ್ ಇಲಾಖಾಧಿಕಾರಿಗಳು ಈ ಕಾರ್ಯಗಳನ್ನೆಲ್ಲಾ ದಕ್ಷತೆಯಿಂದ ನಿರ್ವಹಿಸುತ್ತಾರೆಂಬುದು ಕೂಡ ಒಂದು ಸಂತೋಷದ ವಿಷಯವೆಂದು ನಾನು ತಿಳಿದುಕೊಂಡಿದ್ದೇನೆ.

ಆದರೆ ಈ ಸಲ ಅನೇಕ ಮಾನ್ಯಸದಸ್ಯರು ಹಾಗೂ ಆ ಕಡೆ ಈ ಕಡೆ ಜನರು ಮಾಡುತ್ತಿರುವದು ಇಲ್ಲಿ ನಡೆದಿರತಕ್ಕ ಚರ್ಚೆ ಇವುಗಳನ್ನೆಲ್ಲ ನೋಡಿದರೆ ಕೃಷ್ಣ ಗೋದಾವರಿ ನೀರಿನಬಗ್ಗೆ ಮಾನ್ಯ ಸದಸ್ಯರುಗಳು ಒಂದು ಹೆಚ್ಚಿನ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ ಈ ದಿವಸ ಕೆಲವರ ಮನಸಿನಲ್ಲಿರುವ ಈ ನೀರಿನ ಹಿಸ್ಸೆ ವಿಚಾರದಲ್ಲಿ ಏನಾಗಿಬಿಡುತ್ತೋ ಎಂಬ ಒಂದು ಕಳವಳಕ್ಕೆ ಯಾವ ಅವಕಾಶವೂ ಇಲ್ಲವೆಂಬುದನ್ನು ತಿಳಿಸಲು ನಾನೀಗ ಈ ಬಗ್ಗೆ ಒಂದೆರಡು ಮಾತುಗಳನ್ನಾಡತಕ್ಕದ್ದು ಯುಕ್ತವೆಂತ ಭಾವಿಸಿದ್ದೇನೆ. ನಮ್ಮ ದೇಶಕ್ಕೆ ಈ ನೀರಾವರಿ ಯೋಜನೆಗಳು ಹೆಚ್ಚಿಗೆ ಇನ್ನೂ ಆಗಬೇಕಾಗಿವೆ. ಇಡೀ ದಕ್ಷಿಣ-ಭಾರತದಲ್ಲೇ ನಮ್ಮ ಮೈಸೂರು ರಾಜ್ಯ ಈ ನೀರಾವರಿ ಅನುಕೂಲತೆಯಲ್ಲಿ ಬಹಳ ಹಿಂದೆ ಬಿದ್ದಿದೆ ಎನ್ನತಕ್ಕ ವಿಚಾರ ಸಾಕಷ್ಟು ಮಾನ್ಯ ಸದಸ್ಯರಿಗೆ ಘನವರಿಕೆಯಾಗಿರುವಂತೆ ಸರ್ಕಾರಕ್ಕೂ ಮನವರಿಕೆಯಾಗಿದೆ. ಆದರೆ ಈ ಬಗ್ಗೆ ಕೆಲವು ವಿಚಾರಗಳನ್ನೀಗ ತಮ್ಮ ಮುಂದೆ ಇಡ ಬಯಸುತ್ತೇನೆ. ಈ ದಿವಸ ಅನೇಕ ಮಾನ್ಯ ಸದಸ್ಯರು ಹೇಳಿರುವ ಹಾಗೆ ನಮ್ಮ ರಾಜ್ಯದಲ್ಲಿ ಈ ನೀರಾವರಿ ಸೌಕರ್ಯಗಳ ಪ್ರಮಾಣ ಶೇ. 6 ಇರುತ್ತೆ. ಈ ದಿವಸ ನಮ್ಮ ದೇಶದ ಒಕ್ಕಲುತನದ ಜನಗಳಿಗೆ ಸುಮಾರು 350 ಲಕ್ಷ ಎಕರೆ ಜಮೀನು ನೀರಾವರಿ ಸಾಗುವಳಿಗೆ ಬೇಕಾಗಿರುತ್ತೆಂದು ತಿಳಿದು ಬಂದಿದೆ. ಈ ಪೈಕಿ ಈಗ ನಾವು ಕೇವಲ 23 ಲಕ್ಷ ಎಕರೆಗಳಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿ ಕೊಟ್ಟಿದ್ದೇವೆ. ಹೀಗೆ ಈ ದಿವಸ ನಮ್ಮ ರಾಜ್ಯದಲ್ಲಿ ನೀರಾವರಿ ಸೌಕರ್ಯಕ್ಕೆ ಅನುಕೂಲವಿರತಕ್ಕ ಪ್ರದೇಶದಲ್ಲಿ ಶೇ. 6 ಭಾಗವನ್ನು ನಾವು ನೀರಾವರಿ ವ್ಯವಸಾಯಕ್ಕೆ ಅಳವಡಿಸಿಕೊಂಡಿದ್ದೇವೆಂದು ಗೊತ್ತಾಗಿದೆ. ನಾವು ಈಗ ಇದನ್ನು ಇನ್ನೂ ಮುಂದುವರಿಸಿಕೊಂಡು ಹೋಗಲೇಬೇಕಾಗಿದೆ. ಆದರೆ ನಾವು ಈಗ ಈ ಒಂದನೆಯ ಪಂಚವಾರ್ಷಿಕ ಯೋಜನೆ, 2ನೇ ಪಂಚವಾರ್ಷಿಕ ಯೋಜನೆ ಮತ್ತು ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ವರ್ಷ ಇಷ್ಟರಲ್ಲಿ ಕೈಗೊಂಡಿರುವ ಕಾರ್ಯಗಳಿಂದ ಈ ಶೇ. 6 ಇದ್ದದ್ದು ಈಗ ಶೇ. 8ಗೆ ಏರಿದೆ ಅಂತ ತಿಳಿದು ಬರುತ್ತದೆ.

ನಮ್ಮ ಉದ್ದೇಶ ಎಷ್ಟು ಮುಂದೆ ಹೋಗಬೇಕಾಗಿದೆಯೋ ಅಷ್ಟು ತೀವ್ರಗತಿಯಿಂದ ಈ ಕೆಲಸದಲ್ಲಿ ಮುಂದೆ ಹೋಗಬೇಕಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸಬೇಕೆಂದಿದ್ದೇನೆ. ಈಗಾಗಲೇ ನಾನು ಹೇಳಿದ ಹಾಗೆ ಸುಮಾರು 23 ಲಕ್ಷ ಎಕರೆಗೆ ನೀರಾವರಿ ಅವಕಾಶ ಮಾಡುವುದು ಸಾಧ್ಯವಾಗಿದೆ. ಇನ್ನು ನಮ್ಮ irrigation potentiality 60-65 ಲಕ್ಷ ಎಕರೆವರೆಗೂ ಇದೆ. ಇದಕ್ಕೆ ಕೆಲವು ಅಂಕಿ ಸಂಖ್ಯೆಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ನಮಗೆ ಬರಬೇಕಾದ ನೀರು ಇವೊತ್ತು ತಮಗೆಲ್ಲರಿಗೂ ಗೊತ್ತಿರುವುದೇ ಆಗಿದೆ. ನಮ್ಮ ರಾಜ್ಯಕ್ಕೆ ಇರುವಂಥಾದ್ದು ಪಾಲಾರ್ ಬೇಸಿನ್‌ನ ಕೆಲವು ಭಾಗಗಳನ್ನು ಬಿಟ್ಟರೆ, ಕಾವೇರಿ, ಗೋದಾವರಿ ಮತ್ತು ಕೃಷ್ಣ ಬೇಸಿನ್‌ಗಳು. ಈ ಮೂರು ಬೇಸಿನ್‌ಗಳಲ್ಲಿಯೂ ನಮಗೆ ಬರಬೇಕಾದ ನೀರಿನ ಪಾಲು ಬಂದರೆ, ಅದನ್ನೆಲ್ಲ ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡರೆ ಈಗ ನಾವು 22–23 ಲಕ್ಷ ಎಕರೆಗೆ irrigation potential ಏನು provide ಮಾಡಿದ್ದೇವೆ ಅದರ ಜೊತೆಗೆ ಇನ್ನೂ 40–45 ಲಕ್ಷ ಎಕರೆಗೆ irrigation potential provide ಮಾಡಬಹುದು. ಇಷ್ಟು ಭೂಮಿಯನ್ನು ನೀರಾವರಿ ಕೆಳಗೆ ತರುವುದಕ್ಕೆ ಸಾಧ್ಯವಿದೆ. ಇಷ್ಟು irrigation potential ಮಾಡಿದರೂ ಕೂಡ ಶೇಕಡ 24-25 ಮುಟ್ಟಬಹುದು. ಅದಕ್ಕಿಂತ ಮೇಲೆ ಹೋಗುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಮದ್ರಾಸಿನಲ್ಲಿ ಶೇಕಡ 40 ಇದೆ. ಆಂಧ್ರದಲ್ಲಿ ಶೇಕಡ 27 ಇದೆ. ನಾವು ಹೆಚ್ಚು ಓಡಿದರೆ ಶೇಕಡ 26 ಮುಟ್ಟಬಹುದು. ಅದಕ್ಕೂ ಹೆಚ್ಚಿಗೆ ಮುಟ್ಟುವುದಕ್ಕೆ ಸಾಧ್ಯವಿಲ್ಲ. ಇದನ್ನು ಮುಟ್ಟುವುದಕ್ಕೆ ಕೂಡ ಪೋಟಕು ಮಾಡುತ್ತಿದ್ದಾರೆ. ಆದರ ಬಗ್ಗೆ ಇನ್ನೂ ದೀರ್ಘವಾಗಿ ಹೇಳುತ್ತೇನೆ. ಎಷ್ಟು ಘೋರವಾದ ಅನ್ಯಾಯ ನಮಗೆ ಮಾಡಿದಂತಾಗುತ್ತದೆಂದು ತಾವು ತಿಳಿಯಬೇಕು.

5-30 P.M.

ಇವೊತ್ತು ನೀರಾವರಿಯ ಪ್ರಾಮುಖ್ಯ ಎಷ್ಟು ಹೆಚ್ಚಾಗಿದೆ ಎಂದರೆ ಶೇಕಡ 23-24 ಮುಟ್ಟಬೇಕಾದರೆ ಮಾನ್ಯ ಸದಸ್ಯರಾದ ಅಣ್ಣಾರಾಯರು ಹೇಳಿದಂತೆ ನಮ್ಮ ದೃಷ್ಟಿ ಮತ್ತು ಶಕ್ತಿಯನ್ನೆಲ್ಲ concentrate ಮಾಡಬೇಕಾದುದು ಅವಶ್ಯಕ. ಕೇಂದ್ರದವರಿಗೆ ಅಥವಾ ಮತ್ತೆ ಯಾರಿಗಾದರೂ ನಮಗೆ ಬರಬೇಕಾದ ನೀರನ್ನು ನಮ್ಮ ಹೆಸರಿನಲ್ಲಿ ರಿಸರ್ವ್ ಮಾಡಿ ಇಡಿ, 200-300 ವರ್ಷದ ನಂತರ ನಾವು ಅದನ್ನು ಉಪಯೋಗಿಸಿಕೊಳ್ಳುತ್ತೇವೆ ಎಂದರೆ ಆ ಮಾತು ಅವರಿಗೆ ಹಿಡಿಸಲಾರದು

(ಶ್ರೀ ವೀರೇಂದ್ರ ಪಾಟೀಲ್)

ಮತ್ತು ನಮ್ಮ ದೇಶವೆಲ್ಲ ಒಂದು, ನಮ್ಮ ಜನಾಂಗವೆಲ್ಲ ಒಂದು ಎನ್ನುವಂಥ ಭಾವನೆಯಿಂದ ಅವರು ಹೇಳಬಹುದು ಎಂದು ಈ ಸಂದರ್ಭದಲ್ಲಿ ನಾವು ತಿಳಿದುಕೊಳ್ಳಬೇಕಾಗಿದೆ. ನೀರಿನ ಪಾಲನ್ನು ನಾವು ಬೇಡಿದ್ದು ಅದು ಸಿಕ್ಕೀತು ಎಂಬ ಸಂಪೂರ್ಣ ನಂಬಿಕೆ ನಮಗಿದೆ. ಇದಕ್ಕೆ ಒಂದು organisation build up ಮಾಡಬೇಕು. ನಮಗೆ ಬೇಕಾದ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕು ಎಂದರೆ ಬಹುಶಃ 1100 T.M.C.ft. ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆಂದು rough estimate ಮಾಡಬಹುದು. ಇಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕಾದರೆ, ಕನಿಷ್ಠಪಕ್ಷ 600-650 ಕೋಟಿ ರೂಪಾಯಿ ಬೇಕು. ಅದಕ್ಕೆ ಪ್ಲಾನ್ ಹಾಕಬೇಕಾಗಿದೆ, ತಾವೂ ಪ್ಲಾನ್ ಹಾಕಬೇಕಾಗಿದೆ. ನಾವು ಹಾಕುವಂಥ ಪ್ಲಾನಿಗೆ ತಾವು ಸಂಪೂರ್ಣವಾದ ಸಹಕಾರ ಕೊಡಬೇಕಾಗಿದೆ ನಾನು ಏಕೆ ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ ಎರಡು ದಿವಸದ ವಿಪುಲವಾದ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರು ಅನೇಕ ರೀತಿಯಿಂದ ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧ ಪಟ್ಟಂತೆ ಅನೇಕ ಬೇಡಿಕೆಗಳನ್ನು ಮಾಡಿದ್ದಾರೆ. ಯಾವುದಕ್ಕೆ ನಾವು priority ಕೊಡಬೇಕು ? ಕೆಲವು ಜನರು ರಸ್ತೆಗಳನ್ನು ಬೇಡುತ್ತಿದ್ದಾರೆ. ಕೆಲವು ಜನರು ಇದ್ದ ರಸ್ತೆಗಳನ್ನು ಆದಷ್ಟು ತೀವ್ರ ಅಭಿವೃದ್ಧಿ ಮಾಡಿ ಎಂದು ಹೇಳುತ್ತಿದ್ದಾರೆ. ಕೆಲವು ಕಡೆ ಸೇತುಗಳನ್ನು ಕಟ್ಟಿರಿ ಎಂದು ಹೇಳುತ್ತಿದ್ದಾರೆ. ಕೆಲವು ಕಡೆ Travellers Bungalous ಮಾಡಿ ಎಂದು ಹೇಳುತ್ತಿದ್ದಾರೆ. ಸ್ಕೂಲ್ ಕಟ್ಟಡಗಳು ಬೇಕು ಎಂದು ಅನೇಕ ಕಡೆ ಬೇಡುತ್ತಿದ್ದಾರೆ. ಅದೂ ಅಲ್ಲದೆ ನೀರಿನಲ್ಲಿ ಒಂದು ತೊಟ್ಟನ್ನು ಬಿಡದೆ, ದೇಶಕ್ಕೆ ಅನ್ಯಾಯವಾಗದಂತೆ ನಮಗೆ ಬರಬೇಕಾದ ನೀರನ್ನೆಲ್ಲ ಪಡೆಯಬೇಕು ಎಂದು ಹೇಳುತ್ತಾರೆ. ಹಾಗೆ ಪಡೆದಂಥ ನೀರನ್ನು ಉಪಯೋಗ ಮಾಡುವುದಕ್ಕೆ ಏನು ಮಾಡಬೇಕು ಎಂದು ನಾವೂ ನೀವೂ ಕೂಡಿ ವಿಚಾರ ಮಾಡೋಣ, ಆದರೆ ನಮ್ಮ ಹೆಸರಿನಲ್ಲಿ ನೀರನ್ನು ರಿಜಿಸ್ಟರ್ ಮಾಡಿ ಇಡೋಣವೆಂದು ತಿಳಿದುಕೊಂಡಿದ್ದರೆ ತಪ್ಪಾಗುವುದು ಎಂದು ನನಗನ್ನಿಸುತ್ತದೆ. ಈಗ ತಮ್ಮ ಮುಂದೆ ನಾನು ಹೇಳಬೇಕಾಗಿದ್ದರೆ ಈಗಾಗಲೇ ನಾವು ನೀರಾವರಿ ಯೋಜನೆಗಳಿಗೆ ಮೊದಲನೆಯ ಯೋಜನೆಯ ಅಂತ್ಯದೊಳಗೆ 37 ಕೋಟಿ 28 ಲಕ್ಷ ರೂಪಾಯಿಗಳನ್ನು ಎರಡನೆ ಯೋಜನೆಯಲ್ಲಿ 26 ಕೋಟಿ 68 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಮೊದಲ ಎರಡು ಯೋಜನೆಗಳಲ್ಲಿ ಹತ್ತು ವರ್ಷಗಳಲ್ಲಿ 63 ಕೋಟಿ 96 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೂರನೆಯ ಯೋಜನೆಯಲ್ಲಿ ಕಳೆದ ಒಂದು ವರ್ಷದಲ್ಲಿ ಹತ್ತು ಕೋಟಿ 49 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಮೂರನೆಯ ಯೋಜನೆಯಲ್ಲಿ ಮೊದಲ ಎರಡು ಯೋಜನೆಗಳಲ್ಲಿ ಪ್ರಾರಂಭ ಮಾಡಿದ ಕೆಲಸಗಳನ್ನು ಮಾಡುತ್ತಿದ್ದೇವೆ, ಮೂರನೆಯ ಯೋಜನೆಯಲ್ಲಿ ಪ್ರಾರಂಭ ಮಾಡಿದ ಕೆಲಸಗಳನ್ನು ಮುಂದೆ ಸಾಗಿಸಬೇಕಾಗಿದೆ. ಹೀಗಾಗಿ ಹೊಸ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎರಡನೆಯ ಯೋಜನೆಯಲ್ಲಿ ಪ್ರಾರಂಭ ಮಾಡಿದ ಕೆಲಸಗಳನ್ನು ಮುಗಿಸಬೇಕಾಗಿದ್ದರೆ ಹಾಗೂ ಮೂರನೆಯ ಯೋಜನೆಯಲ್ಲಿ ಪ್ರಾರಂಭ ಮಾಡಿದ ಕೆಲಸಗಳನ್ನು ಸಾಗಿಸಬೇಕಾಗಿದ್ದರೆ ನಮಗೆ 66 ಕೋಟಿ ರೂಪಾಯಿ ಬೇಕು. ಆದರೆ ಮೂರನೆಯ ಯೋಜನೆಯಲ್ಲಿ ನಮಗೆ ಒದಗಿಸಿರುವುದು 40 ಕೋಟಿ 66 ಲಕ್ಷ ರೂಪಾಯಿ. ಇನ್ನು ಹೆಚ್ಚು ಹಣವನ್ನು ಪಡೆಯಬೇಕಾಗಿತ್ತು. ನಾವೂ ಹೆಚ್ಚಿನ ಪ್ರಮಾಣದಲ್ಲಿ ಹೊಸ ಹೊಸ ಯೋಜನೆಗಳನ್ನು ಪ್ರಾರಂಭಮಾಡಬೇಕಾದ್ದು ಆವಶ್ಯಕವಿದೆ.

ಇವೊತ್ತು ನಮ್ಮಲ್ಲಿ ಬಹಳ ದೊಡ್ಡ ಜಟಿಲವಾದ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಅದು ಕೃಷ್ಣಗೋದಾವರಿ ನೀರಿನ ಹಂಚಿಕೆ ಬಗ್ಗೆ. ಆ ವಿವಾದ ಪ್ರಾರಂಭವಾದದ್ದು ತಮಗೆಲ್ಲರಿಗೂ ಗೊತ್ತಿದೆ, ಅದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. 1951 ರಲ್ಲಿ ಪ್ಲಾನಿಂಗ್ ಕಮಿಷನ್ ಅವರು ಮೊದಲನೆಯ ಯೋಜನೆಯನ್ನು ತಯಾರು ಮಾಡುವುದಕ್ಕೆ ಪ್ರಾರಂಭ ಮಾಡಿದರು. ಅದನ್ನು ತಯಾರುಮಾಡುವಾಗ ಕೃಷ್ಣ ಬೇಸಿನ್‌ನಲ್ಲಿ ಯಾವ ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳ ಬಹುದು ಎಂದು ಆ ಬೇಸಿನ್‌ನಲ್ಲಿ ಆಸಕ್ತಿ ಇರುವ ಸಂಬಂಧಪಟ್ಟ ಸರ್ಕಾರಗಳ ಪ್ರತಿನಿಧಿಗಳು ಬಂದು ಯಾವ ಪ್ರಾಜೆಕ್ಟ್‌ಗಳು ತಯಾರಾಗಿವೆ, ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳ ಬೇಕು, ಅದಕ್ಕೆ ನಿಮಗೆ ಎಷ್ಟು ನೀರು ಬೇಕು ಎನ್ನುವುದರ ಬಗ್ಗೆ ವಿಚಾರ ಮಾಡುವುದಕ್ಕೆ ಕರೆಸಿದರು. ಆದಕ್ಕೆ ಆಗಿನ ಮೈಸೂರಿನ ಮುಖ್ಯ ಮಂತ್ರಿಗಳೂ ಹೋದರು. ಬೇರೆ ಪ್ರಾಂತದ ಮುಖ್ಯ ಮಂತ್ರಿಗಳೂ, ಪ್ರತಿನಿಧಿಗಳೂ ಹೋಗಿದ್ದರು. 1951ರಲ್ಲಿ ಹಳೆ ಮೈಸೂರಿಗೆ ಇದರಲ್ಲಿ ಆಸಕ್ತಿ ಎಷ್ಟಿತ್ತು ಎನ್ನುವುದು ನಮಗೆ ಗೊತ್ತಿದೆ. ಅವರಿಗೆ ಇದರಲ್ಲಿ ಹೆಚ್ಚಿನ ಮಟ್ಟದ ಸಂಬಂಧವಿರಲಿಲ್ಲವೆಂದು ಹೇಳಬೇಕಾಗಿದೆ. ಬೊಂಬಾಯಿ ಕರ್ಣಾಟಕ ಮತ್ತು ಹೈದರಾಬಾದ್ ಕರ್ಣಾಟಕಕ್ಕೆ ಆ ಭಾಗಗಳಲ್ಲಿರುವಂಥಾ

ಪ್ರದೇಶದ ಹಿತರಕ್ಷಣೆ ಮತ್ತು ಜವಾಬ್ದಾರಿ ಇತ್ತು. ಹಳೆಯ ಮೈಸೂರಿನ ಅಧಿಕಾರಿಗಳು ಇದಕ್ಕೆ ಜವಾಬ್ದಾರರು ಎಂದು ಯಾರಾದರೂ ಹೇಳಿದರೆ ತಪ್ಪಾಗುತ್ತದೆ. ಅವರು ಆದರಲ್ಲಿ ತಮ್ಮ ಹಕ್ಕು ಏನಿದೆ, ಯಾವ ಪ್ರಾಜೆಕ್ಟ್ ಇದೆ, ಎಂದು ವಿಚಾರ ಮಾಡಿ ತಮ್ಮ ಕೆಲಸ ಮಾಡಿಕೊಂಡು ಅವರು ಹೊರಟು ಬಂದರೇ ಹೋಯಿತು, ಹೈದರಾಬಾದ್, ಬೊಂಬಾಯಿ ಪ್ರಾಂತಗಳಲ್ಲಿ ಹರಿದು ಹಂಚಿ ಹೋದಂಥ ಈ ಭಾಗಗಳ ರಕ್ಷಣೆ ಮಾಡಲು ಅವರಿಗೆ ಸಾಧ್ಯವಾಗಲಿಲ್ಲ. 1951ರಲ್ಲಿ ಅಗ್ರಿಮೆಂಟ್ ಆಯಿತು ಎಂದು ಹೇಳುತ್ತಿದ್ದಾರೆ. ಆದರೆ ನಾವು ಹೇಳುತ್ತಿದ್ದೇವೆ ಅದು ಅಗ್ರಿಮೆಂಟ್ ಅಲ್ಲ ಎಂದು. ಒಪ್ಪಂದ ಯಾವಾಗ ಆಗುತ್ತದೆಂದರೆ ಎರಡು ಪಕ್ಷಗಳಲ್ಲಿ ವಿವಾದವಿರಬೇಕು, ಜಗಳವಿರಬೇಕು, ತಕರಾರು ಇರಬೇಕು. ಆಗ ಅದನ್ನು ಪರಿಹರಿಸಿ ಒಂದು ತೀರ್ಮಾನಕ್ಕೆ ಬಂದರೆ ಅದು ಒಪ್ಪಂದವಾಗುತ್ತದೆ. ಪ್ಲಾನಿಂಗ್ ಕಮಿಷನವರು ನೀರಿನ ಜಗಳದಲ್ಲಿ ಒಪ್ಪಂದ ಮಾಡುತ್ತಾರೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಬಹಳ ತಪ್ಪು. ಅವರಿಗೆ ನೀರನ್ನು ಹಂಚುವುದಕ್ಕೆ ಎಂದು ಕಳಿಸಲಿಲ್ಲ. ಯಾವ ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬಹುದು, ಯಾವುದು feasble ಇದೆ ಅಥವಾ ಇಲ್ಲ ಎಂದು ತಿಳಿದುಕೊಂಡು ಅದಕ್ಕೆ ಎಷ್ಟು ನೀರು ಬೇಕಾಗುತ್ತದೆಂದು ವಿಚಾರ ಮಾಡುವುದಕ್ಕೆ ಕಳಿಸಿದರು. ಅದಕ್ಕೆ ಆಂಧ್ರದವರು ಅಗ್ರಿಮೆಂಟ್ ಎಂದು ಹೇಳುತ್ತಾರೆ. ಅದು ಅಗ್ರಿಮೆಂಟ್ ಅಲ್ಲ, ಅದಕ್ಕೆ ನಾವು ಪಾರ್ಟಿ ಅಲ್ಲ ಎಂದು ನಾವು ಹೇಳುತ್ತಿದ್ದೇವೆ. 1951 ರಲ್ಲಿ ಕಾನ್‌ಫರೆನ್ಸ್ ಮಾಡಿ ಅದರ ನಡವಳಿಕೆಗಳನ್ನು ಸಂಬಂಧಪಟ್ಟ ಎಲ್ಲ ಮುಖ್ಯ ಮಂತ್ರಿಗಳಿಗೂ ratify ಮಾಡುವುದಕ್ಕೆ ಕಳಿಸಿಕೊಟ್ಟರು. ಮೈಸೂರು ಮುಖ್ಯ ಮಂತ್ರಿಗಳು ಅದನ್ನು ratify ಮಾಡಲಿಲ್ಲ, ಒಪ್ಪಲಿಲ್ಲ.

ಈ ಒಪ್ಪಂದದ ಬಗ್ಗೆ ಹೀಗೆ ಕರೆಸ್‌ಪಾಂಡೆನ್ಸು ನಡೆಯುತ್ತಾ ಬಂದಿದೆ. ಅಲ್ಲಿಂದ ಮುಂದಕ್ಕೆ ಎಂದರೆ 1956ನೇ ಇಸವಿಯಲ್ಲಿ ರೀ ಆರ್ಗನೈಜೇಷನ್ ಆದಾಗ ನಮ್ಮ ಕರ್ನಾಟಕದ ಭಾಗಕ್ಕೆ, ಬೊಂಬಾಯಿಯಿಂದ ಕೆಲವು ಭಾಗಗಳು, ಹೈದರಾಬಾದಿನಿಂದ ಕೆಲವು ಭಾಗಗಳು ಬಂದವು. ಆ ರೀತಿ ಬಂದ ಮೇಲೆ ಈ ನೀರಿನ ಹಂಚಿಕೆ ಪ್ರಶ್ನೆ ಬಂದಿದೆ. 1951ರಲ್ಲಿ ಈ ನೀರಿನ ಹಂಚಿಕೆಯ ಒಪ್ಪಂದದ ಬಗ್ಗೆ ರೀ ಅಲೋಕೇಟು ಮಾಡುವ ಪ್ರಶ್ನೆ ಆಗಿನ ಮೈಸೂರು ಸರಕಾರದಲ್ಲಿರಲಿಲ್ಲ. ಏಕೆಂದರೆ, ಕೃಷ್ಣಾನದಿಯ ಕೆಲವು ಭಾಗಗಳು ಈಚೆಗೆ ನಮ್ಮ ರಾಜ್ಯಕ್ಕೆ ಬಂದವು. ಅದಕ್ಕೆ ಮುಂಚೆ ಹಿಂದೆ ಆದ ಒಪ್ಪಂದದ ಬಗ್ಗೆ ಹೆಚ್ಚಿನ ಮಹತ್ವವಿರಲಿಲ್ಲ. ಆಗಿದ್ದ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಇದರ ಬಗ್ಗೆ ಹೇಳಿದ್ದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಸ್. ಆರ್. ಸಿ. ಕಮೀಷನ್ನಿನವರು ಬಂದಾಗ ಆಗ ಈ ಪಾಯಿಂಟನ್ನು ಆಲೋಚನೆ ಮಾಡಲಿಲ್ಲವೇ ;

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಆಗಲಿಲ್ಲ. ಯಾವ ರೀತಿಯಾಗಿತ್ತು ಎನ್ನುವುದಕ್ಕೆ ಈ ಪ್ರಾಬ್ಲಂ ಅನ್ನು ನೀವು ತಿಳಿದುಕೊಳ್ಳುವುದಕ್ಕೆ ಅರ್ಥಮಾಡಿಕೊಳ್ಳಲಿ ಎಂದು ಈ ರೀತಿಯಾದ ಕಾರಣಗಳನ್ನೆಲ್ಲಾ ಕೊಡುತ್ತಿದ್ದೇನೆ. ಹಿಂದೆ ಆದುದು ಒಪ್ಪಂದವಲ್ಲ. ಬರೀ ಕಾನ್‌ಫರೆನ್ಸು ಆಯಿತು ಅಲ್ಲಿ ಯಾವ ಒಪ್ಪಂದವೂ ಆಗಲಿಕ್ಕೆ ಸಾಧ್ಯವಿಲ್ಲ. ಇದು ಸರಿಯಲ್ಲ ಎಂದು ಹೇಳಿದ ಮೇಲೆ ಕೇಂದ್ರದವರು ಇದರ ಬಗ್ಗೆ ಏನೇನು ನಿರ್ಣಯ ಮಾಡಬೇಕು, ಯಾವರೀತಿ ನೀರನ್ನು ಹಂಚಬೇಕನ್ನುವುದರ ಬಗ್ಗೆ facts and figures ಗಳನ್ನು ಪಡೆಯಬೇಕಾಗುತ್ತದೆ. ಆ ನಂತರ ಹಂಚಿಕೆ ಮಾಡುವಾಗ ಯಾವ ರೀತಿಯಿಂದ ನ್ಯಾಯವಾಗಿ ಹಂಚಬಹುದು ಎನ್ನುವುದನ್ನು ಮಾಡಲಿಕ್ಕೆ ಒಂದು ನಿರ್ಣಯ ತೆಗೆದುಕೊಳ್ಳಲಿಕ್ಕೆ ನಲುವಾಗಿ ಈ ಗುಲ್ಹಾಟಿ ಕಮಿಷನ್ನು ಎನ್ನುವುದು ನೇಮಕವಾದದ್ದು. ಗುಲ್ಹಾಟಿ ಕಮಿಷನ್ನನ್ನು ಮಾಡಿದಾಗ ನಮ್ಮ ನಿಲುವು ಏನಿದೆ ಎನ್ನುವುದನ್ನು ಹೇಳಬೇಕೆಂದು ಆ ಕಮಿಷನ್ನಿನವರು ಇಲ್ಲಿಗೆ ಬಂದಿದ್ದರು ಆಗ ನಮ್ಮ ಅಧಿಕಾರಿಗಳು ಬಹಳ ಒಳ್ಳೆಯ ರೀತಿಯಿಂದ ಮತ್ತು ದಕ್ಷತೆಯಿಂದ ಕೆಲಸ ಮಾಡಿದರು ಎಂದು ಈ ಸಂದರ್ಭದಲ್ಲಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಇನ್ನೊಂದು ವಿಚಾರವನ್ನು ಇಲ್ಲಿ ಹೇಳುತ್ತೇನೆ. ಈ ಕಮಿಷನ್ನು ಕರ್ನಾಟಕಕ್ಕೆ ಬಂದಾಗ ನಮ್ಮ ಅಭಿಪ್ರಾಯಗಳೇನು ಎನ್ನುವುದನ್ನೆಲ್ಲಾ ಸ್ಪಷ್ಟವಾಗಿ ಕೊಟ್ಟಿದ್ದೇನೆ. ಆದರೆ ಈ ಗುಲ್ಹಾಟಿ ಕಮಿಷನ್ನಿನ ಮುಂದೆ ನಾನು ಹೇಳಿದ್ದೇನೆ ಎನ್ನುವುದನ್ನು ಇಲ್ಲಿ ನಾನು ಇವೊತ್ತು ಹೇಳುವುದಕ್ಕೆ ಸಾಧ್ಯವಿಲ್ಲ. ಇದನ್ನು ಸ್ವಲ್ಪ ಸಂಕೋಚದಿಂದಲೇ ಹೇಳಬೇಕಾಗಿದೆ. ನಮ್ಮ ಅಧಿಕಾರಿಗಳು ಇದರ ಸಲುವಾಗಿ ನಮ್ಮ ಕೇಸುಗಳನ್ನು ಬಹಳ ಒಳ್ಳೆಯ ರೀತಿಯಿಂದ put up ಮಾಡಿ Represent ಮಾಡಿದ್ದಾರೆ. ನಮ್ಮಲ್ಲಿದ್ದ facts and figures ಗಳನ್ನೆಲ್ಲ ಆ ಕಮಿಷನ್ನಿನ ಮುಂದೆ ಇಟ್ಟು ಯಾವ ರೀತಿ ಈ ನೀರಿನ ಹಂಚಿಕೆಯಾಗಬೇಕು, ಯಾವ ರೀತಿಯಾಗಿ ನಮ್ಮ ಪಾಲು ಸಿಗಬೇಕು, ಎನ್ನುವುದನ್ನು ಸರಿಯಾಗಿ ಮನದಟ್ಟು ಮಾಡಿಕೊಡಲು ಸರಿಯಾದ ಕೇಸನ್ನು put up ಮಾಡಿದ್ದಾರೆ. ಅವರಿಗೆ ನಾನು ಈ ಸಂದರ್ಭದಲ್ಲಿ ಅಭಿನಂದನಾರೂಪದಲ್ಲಿ, ಇಷ್ಟು ದಿಟ್ಟತನದಿಂದ ಕಲಸ ಮಾಡಿದ್ದಕ್ಕೆ ಕೆಲವು ಒಳ್ಳೆಯ ಮಾತುಗಳನ್ನು ಹೇಳುತ್ತೇನೆ. ಇದರಿಂದ ಈ ಸರಕಾರ ಎಷ್ಟು ಜಾಗರೂಕತೆಯಿಂದಿದೆ

(ಶ್ರೀ ವೀರೇಂದ್ರ ಪಾಟೀಲ್)

ಎನ್ನುವುದು ತಮಗೆಲ್ಲಾ ಗೊತ್ತಾಗುತ್ತದೆ. ಇವೆಲ್ಲ ಮಾತುಗಳನ್ನು ಹೇಳಲು ನಾನು ಸ್ವಲ್ಪ ಕಾಲಾವಕಾಶವನ್ನು ಕೇಳಿದಾಗ ಇದು ಏತಕ್ಕಾಗಿ, ಇದು delaying tactics ರೀತಿಯಲ್ಲಿ ಹೀಗೆ ಮುಂದೂಡುತ್ತಿದ್ದಾರೆ ಎನ್ನುವ ಮಾತನ್ನೂ ಹೇಳಿದರು ಆ ರೀತಿಯಲ್ಲಿ ನಾವು ರಿಪೋರ್ಟನ್ನು ಕೊಟ್ಟರೆ ಸರಿಯಾಗುವುದಿಲ್ಲ ಎಂದು ಮತ್ತು ಈ ವಾದ ವಿವಾದಗಳು ಇತ್ಯರ್ಥವಾಗಲು ಸರಿಯಾದ ನ್ಯಾಯ ಬೇಕು ಎನ್ನುವ ಮಾತನ್ನು ಗುಲ್ಹಾಟಿ ಕಮಿಷನ್ನಿನ ಮುಂದೆ ಒತ್ತಾಯ ಮಾಡಿದ ಮೇಲೆ ಸ್ವಲ್ಪ ಕಾಲಾವಕಾಶ ನಮಗೆ ದೊರಕಿತು. ಇದಕ್ಕೆ ಸರಿಯಾಗಿ ಆಗ್ರಿ ಆರ್ಗನೈಜೇಷನ್ನು ಕೂಡ ಬಂದು ಇದರ ಬಗ್ಗೆ ಸರಿಯಾದ ನಿರ್ಣಯ ತೆಗೆದುಕೊಳ್ಳಲು ಅವಕಾಶವೂ ಸಿಕ್ಕಿತು. ಇದರಿಂದಾಗಿ ಮೂರನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಸೇರಿಸಿರುವ ಯೋಜನೆಗಳಿಗೆಲ್ಲಾ ಕೇಂದ್ರವರು clearence ಕೊಡಲು ಸಾಧ್ಯವಿಲ್ಲ. ಇದನ್ನು ಸ್ವಲ್ಪ ಕಾಲ ತಡವಾಗಿ ಮಾಡಬೇಕೆಂದು ಎಲ್ಲ ರಾಜ್ಯಗಳಿಗೂ ಸೂಚನೆ ಕೊಟ್ಟಿದ್ದರು. ಅದರಂತೆ ಕೆಲವರು ಕೆಲಸ ನಿಲ್ಲಿಸಿದರು, ಕೆಲವರು ನಿಲ್ಲಿಸಲಿಲ್ಲ. ಆಂಧ್ರದವರು ಕೆಲಸವನ್ನು ನಡೆಸುತ್ತಲೇ ಇದ್ದಾರೆ ಎಂದು ಹೇಳುತ್ತಾರೆ ಇದರ ಬಗ್ಗೆ ಮುಂದೆ ಹೇಳುವುದಕ್ಕೆ ಬರುತ್ತೇನೆ. ಈ ರೀತಿ ತಡವಾದಾಗ 1962ನೇ ಇಸವಿ ಜನವರಿಯಲ್ಲಿ ತಿದ್ದುಪಡಿಯಾದ Inter state River Dispute Act ನ ಸೆಕ್ಷನ್ (3) ರ ಪ್ರಕಾರ ಈ ಪ್ರಾಬ್ಲಂ ಇತ್ಯರ್ಥವಾಗದೇ ಹೋದುದರಿಂದ ಇದನ್ನು ಪ್ರೆಸ್ ಮಾಡಲು ಸಾಧ್ಯವಿಲ್ಲ ಎಂದು, ನಮ್ಮಲ್ಲಿದ್ದ ಅನೇಕ ರೀತಿಯ ಯೋಜನೆಗಳನ್ನು ಸಫಲಗೊಳಿಸಬೇಕಾದರೆ, ಇದಕ್ಕಾಗಿ ಹೆಚ್ಚು ಕೆಲಸ ಮಾಡಬೇಕಾಗಿದೆ ಎಂದು ಗುಲ್ಹಾಟಿ ಕಮಿಷನ್ನಿನ ಮುಂದೆ ನಮ್ಮ ಕೆಲಸವಾಗಲಿಕ್ಕೆ ಸಾಧ್ಯವಿಲ್ಲ ಎಂದು ನಮಗೆ ಟ್ರಿಬ್ಯೂನಲ್ಲಿಗೆ ಹೋಗಲು ಅವಕಾಶ ಮಾಡಿಕೊಡಿ ಎಂದೂ ಕೇಂದ್ರಕ್ಕೆ ಅಪ್ಲಿಕೇಷನ್ನು ಹಾಕಲಾಗಿದೆ. ಅದಕ್ಕೆ ಮಾರ್ಚಿಯಲ್ಲಿ ಉತ್ತರ ಕೂಡ ನಮಗೆ ಬಂದಿವೆ. ಅವರು ಹೇಳಿರುವುದೂ ಇಷ್ಟೇ Inter State River Water Dispute Actನ ಪ್ರಕಾರ ಕೇಂದ್ರ ಸರಕಾರದವರು ಏನೂ ಮಾಡಲು ಸಾಧ್ಯವಿಲ್ಲ ಮತ್ತು ನಮ್ಮ ಕೇಸಿನ ವಿವರ ಪೂರ್ಣವಾಗಿ ಮನವರಿಕೆಯಾಗಿದೆ. ಮುಂದಕ್ಕೆ ಟ್ರಿಬ್ಯುನಲ್ಲಿಗೆ ಹೋಗಲು ಅವಕಾಶವಿರುತ್ತದೆ. ಅಲ್ಲಿಯವರಿಗೆ ಮಹತ್ವವಾದ ಗುಲ್ಹಾಟಿ ಕಮಿಷನ್ನಿನ ರಿಪೋರ್ಟು ಇಷ್ಟರಲ್ಲೇ ನಮ್ಮ ಸರಕಾರಕ್ಕೆ ಬರುತ್ತದೆ. ಅದರ ಸಲುವಾಗಿ ಸ್ವಲ್ಪ ತಡವಾಗಬಹುದು. ಆತುರ ಮಾಡಬೇಡಿ ಎಂದು ಬುದ್ಧಿವಾದ ಹೇಳಿದ್ದರ ಮೇರೆಗೆ ಈ ಸರಕಾರ ಈ ವಿಷಯವನ್ನೆಲ್ಲಾ ಇಟ್ಟುಕೊಂಡು ಇನ್ನು ಕೆಲವೇ ದಿವಸಗಳಲ್ಲಿ ಈ ರಿಪೋರ್ಟು ಬರುತ್ತದೆ. ಈ ರಿಪೋರ್ಟು ಬಂದ ಮೇಲೆ ಸ್ಪೆಷಲ್ ಆದ ಮೆಮೊರ್ಯಾಂಡಂನ್ನು ಇದಕ್ಕೆ ಸಂಬಂಧಪಟ್ಟ ಎಲ್ಲ ಸ್ಟೇಟು ಆಫೀಸರುಗಳೊಂದಿಗೆ ಸೇರಿ ತಯಾರು ಮಾಡಿ ಏನಾದರೂ ಅಪ್ಲಿಕೇಷನ್ನನ್ನು ಕಳುಹಿಸಲು ಸಾಧ್ಯವೇ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಕೆಲವು ವಿಷಯಗಳು ಗಹನವಾಗಿವೆ. ಅವುಗಳ ಜೊತೆಗೆ ನಿಮ್ಮಿಂದ ಬಂದ ಅಭಿಪ್ರಾಯಗಳನ್ನು ಗಮನಕ್ಕೆ ತೆಗೆದುಕೊಂಡು ನಾನು ಮತ್ತು ನಮ್ಮ ಮುಖ್ಯಮಂತ್ರಿಗಳು ಕೇಂದ್ರದಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳೊಡನೆ ಕಲೆತು ಎರಡು ಮೂರು ಸಲ ಚರ್ಚೆ ಮಾಡಿ ಬಂದಿದ್ದೇವೆ. ಅಲ್ಲಿನ ಮಂತ್ರಿಗಳಿಗೆ ನಾವು ರಿಪೋರ್ಟನ್ನು ಕೊಟ್ಟೆವು ಎನ್ನುವುದನ್ನು ಇಲ್ಲಿ ಈಗ ಹೇಳುವುದಕ್ಕಾಗುವುದಿಲ್ಲ. ಇದಾದ ಮೇಲೆ ಈ ವಿಚಾರ ಬಹಳ ದಿವಸದವರೆಗೆ ಹೋಗುವುದು ಬೇಡ, ಇದಕ್ಕಾಗಿ ತೀವ್ರವಾದ ನಿರ್ಣಯವನ್ನು ಮಾಡಬೇಕೆನ್ನುವ ಉದ್ದೇಶದಿಂದ ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ, ಕೇಂದ್ರದಲ್ಲಿರುವ ಈ ಶಾಖೆಯ ಮಂತ್ರಿಗಳಿಗೂ ಹಾಗೂ ಆ ಮಂತ್ರಿ ಮಂಡಲದಲ್ಲಿರುವ ಶ್ರೀಮಾನ್ ಅಳಗೇಶನ್‌ರವರಿಗೂ ಒತ್ತಾಯ ಮಾಡಿ ಹೇಳಿದ್ದೇವೆ ಅವರುಗಳೂ ಸಹ ಇದು ಕರ್ನಾಟಕ ಒಂದಕ್ಕೇ ಸಂಬಂಧಪಟ್ಟಿದ್ದಲ್ಲ ಎಂದು ಅಲ್ಲಿನ ಅಧಿಕಾರಿಗಳು ಇದಕ್ಕೆ ಸಂಬಂಧಪಟ್ಟ ಎಲ್ಲಾ ಸ್ಟೇಟುಗಳಿಗೂ ತಾವಾಗಿಯೇ ಹೋಗಿ ನೋಡಿದ್ದಾರೆ. ಮೊದಲು ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿನ ಅಧಿಕಾರಿಗಳಿಂದ ಅಭಿಪ್ರಾಯಗಳನ್ನು ಪಡೆದ ಮೇಲೆ ಆಂಧ್ರಕ್ಕೆ ಹೋದರು. ಅಲ್ಲಿಂದ ಮೈಸೂರು ದೇಶಕ್ಕೆ ಬಂದು ನೋಡಿಕೊಂಡು ಹೋದರು. ಈ ರೀತಿಯಾದಮೇಲೆ ನಮ್ಮ ಕೇಸನ್ನು ಸರಿಯಾಗಿ put up ಮಾಡಬೇಕೆಂದು ಇಲ್ಲಿಗೆ ಕೇಂದ್ರದಿಂದ ಬಂದಿದ್ದ ಇರಿಗೇಷನ್ನು ಸೆಕ್ರೆಟರಿಗಳ ಮುಂದೆ ಯಾವ ರೀತಿಯಾಗಿ ನಮಗೆ ಅನ್ಯಾಯವಾಗುತ್ತಿದೆ ಇದಕ್ಕೆ ಕಾರಣಗಳೇನು ಎನ್ನುವುದನ್ನೆಲ್ಲಾ ಸರಿಯಾಗಿ ವಿವರಿಸಿ ಹೇಳಿದ್ದೇನೆ. ಇದಾದ ಮೇಲೆ ತಮಗೆ ಗೊತ್ತಿರುವ ಹಾಗೆ, ಅನೇಕ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಕೆಲವು ಪೇಪರುಗಳಲ್ಲಿ ಇದರ ರಿಪೋರ್ಟು ಬಹುಶಃ 15ನೇ ತಾರೀಖಿನ ವೇಳೆಗೆ ಬರಬಹುದು ಎನ್ನುವ ನಿರೀಕ್ಷೆಯೂ ಇತ್ತು. ಇದರಿಂದ ನಮಗೆ ಅನಾನುಕೂಲವಾಗಬಹುದು ಎಂದು ಕೆಲವರು ನಮ್ಮ ಮುಖ್ಯಮಂತ್ರಿಗಳಿಗೆ ಸಲಹೆ ಕೊಟ್ಟರು. ಆಗ ಅವರು ನನ್ನನ್ನು ಕರೆದುಕೊಂಡು ದೆಹಲಿಗೆ ಹೋಗಿದ್ದರು. ಅಲ್ಲಿಯೂ ಕೂಡ ಇಲ್ಲಿರುವುದು ಸುಳ್ಳು ರಾಜಕೀಯ ಎಂದು ತಿಳಿಸಿ, ನಮ್ಮ ಖಚಿತವಾದ ನಿಲುಮೆಯನ್ನು ಪ್ರಧಾನ ಮಂತ್ರಿಗಳಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಅಲ್ಲಿನ ಅಧಿಕಾರಿಗಳಿಗೆ ಹೇಳಿ ಇದರ ಬಗ್ಗೆ ಮಾತುಕತೆ ನಡೆಸಿ

ಹೇಳಿ ಬಂದಿದ್ದೇವೆ. ಅಲ್ಲದೆ ನಮ್ಮ ನಿಲುವಿನಿಂದ ಹಿಂದೆ ಹೋಗಲು ನಾವು ತಯಾರಾಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಅವರ ಮುಂದೆ ಹೇಳಿಬಂದಿದ್ದೇವೆ. ಇದೆಲ್ಲ ತಮಗೇ ಗೊತ್ತಿದೆ ಈ ಸಂದರ್ಭದಲ್ಲಿ ಈ ವಾದ ವಿವಾದಗಳನ್ನು ಇತ್ಯರ್ಥ ಮಾಡಲು ಕೆಲವು ಎಂ.ಪಿ.ಗಳು ಆಂಧ್ರದವರು, ಮಹಾರಾಷ್ಟ್ರದವರು ಹಾಗೂ ಮೈಸೂರಿನವರು ಇಬ್ಬಿಬ್ಬರು ಸೇರಿಕೊಂಡು 'ಆರು ಜನರ 'ಒಂದು' ಕಮಿಟಿಯನ್ನು ಮಾಡಿಕೊಂಡರು. ಅವರೂ ಸಹ ಇದರ ಬಗ್ಗೆ ವಿಚಾರ ವಿನಿಮಯ ಮಾಡಿ ಏನಾದರೂ ಪರಿಹಾರ ಮಾಡಲು ಸಾಧ್ಯವಿದೆಯೇ ಎಂದು ಪ್ರಯತ್ನ ಮಾಡಿದರು. ಈಚೆಗೆ ಕೆಲವು ದಿನಗಳ ಹಿಂದೆ ಪೇಪರಿನಲ್ಲಿ ತಾವೇ ಓದಿದಂತೆ ಇದರಿಂದ ಏನೂ ಸಾಧ್ಯವಾಗಲಿಲ್ಲ ಎನ್ನುವುದು ತಿಳಿದುಬಂದಿದೆ. ಇದನ್ನೆಲ್ಲಾ ಪರಿಶೀಲನೆ ಮಾಡಿ ನೋಡಿದರೆ ಈ ಪ್ರಶ್ನೆ ಎಷ್ಟು ಜಟಿಲವಾಗಿದೆ, ಯಾವ ರೀತಿ ಕ್ಲಿಷ್ಟಕರವಾದ ಸಮಸ್ಯೆ ಎನ್ನುವುದು ಕೇಂದ್ರ ಸರಕಾರಕ್ಕೂ ಅರಿವಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಮಾನ್ಯ ಮುಖ್ಯಮಂತ್ರಿಗಳು ಮದರಾಸಿಗೆ ಒಂದು ಕಾನ್‌ಫರೆನ್ಸಿಗೆ ಹೋಗಿದ್ದಾಗ ಕಾವೇರಿ ನದಿಯಿಂದ 15 T-M.C.ftಯಷ್ಟು ನೀರನ್ನು ಕೊಡುತ್ತೇವೆಂದು ಅಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಹೇಳಿದರು ಎನ್ನುವುದು ನಿಜವೇ ? ಹೇಗೆ.

ಶ್ರೀ ವೀರೇಂದ್ರ ಪಾಟೀಲ್.—ಸ್ವಲ್ಪ ಸಮಾಧಾನದಿಂದ ಇದ್ದರೆ, ಇಷ್ಟರಲ್ಲೇ ಅದರ ಬಗ್ಗೆ ಹೇಳುತ್ತೇವೆ. ಅವರು ಯಾವ ರೀತಿ ಹೇಳಿದರು. ಇಲ್ಲಿ ಯಾವ ರೀತಿ ಎನ್‌ಕ್ವೈರಿ ಮಾಡಿದ್ದೇವೆ. ಎಷ್ಟು ಮಟ್ಟಿಗೆ ನೀರು ಕೊಡುತ್ತಾರೆ ಎನ್ನುವುದನ್ನೆಲ್ಲ ಬಹುಶಃ ತಮ್ಮ ಮುಂದೆ ಇಟ್ಟರೆ, ತಮಗೇ ಅರ್ಥವಾಗುತ್ತದೆ. ಇದರ ಬಗ್ಗೆಯೂ ಮುಂದೆ ಹೇಳುತ್ತೇನೆ.

ಈ ರೀತಿಯಾಗಿ ಆರು ಜನರ ಕಮಿಟಿಯವರೂ ಕೂಡ ಈ ವಿಚಾರವನ್ನು ಇತ್ಯರ್ಥ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವಂತೆ ರಿಪೋರ್ಟನ್ನೂ ಕೊಟ್ಟಿದ್ದಾರೆ. ಇದನ್ನೆಲ್ಲಾ ಪರಿಶೀಲನೆಮಾಡಿ ಕೇಂದ್ರ ಸರಕಾರ ಈ ತಿಂಗಳ ಕೊನೆಯೊಳಗಾಗಿ ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಬಹುದು. ಇನ್ನು ಹೆಚ್ಚು ಮುಂದೆ ಹಾಕುವ ಹಾಗಿಲ್ಲ. ನಮ್ಮ ವಾದವೇನು ಎನ್ನುವುದು ಕೇಂದ್ರಕ್ಕೆ ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿದ್ದೇವೆ. ಇಷ್ಟು ಮಾತ್ರ ತಮ್ಮ ಮುಂದೆ ಈಗ ಹೇಳಬಹುದು. ಕೇಂದ್ರ ಸರಕಾರದವರು Delaying Tactics ಎಂದು ಹೇಳಿ ಮುಂದೆ ಹೋಗುವ ಹಾಗಿಲ್ಲ. ಮಾನ್ಯ ಸದಸ್ಯರಲ್ಲಿ ಒಂದು ಕಳವಳವಿದೆ ಎನ್ನುವುದನ್ನು ನಾವೂ ಮನಗಂಡಿದ್ದೇವೆ. ನಾವು ಏನೇನೋ ಮಾತನಾಡುತ್ತಿದ್ದೇವೆ ಎಂದು ಪೇಪರುಗಳಲ್ಲಿ ಬರೆಯಬಹುದು. ಮೆಮೊರ್ಯಾಂಡಂ ಅನ್ನು ಕೊಟ್ಟು ಹೋಗಬಹುದು ಆಂಧ್ರದವರು ಹೇಗೋ ಮುಂದೆ ಹೋಗುತ್ತಿದ್ದಾರೆ ಎಂದು ನಾವೂ ಹೋಗಬಹುದು ಎಂದು ಮಾಡಿದರೆ ಸ್ವಲ್ಪ ಜನರಿಗೆ ಇದರಿಂದ ಕಳವಳವಾಗಬಹುದು. ಆದಷ್ಟೂ ತೀವ್ರತೆಯಿಂದಾಗಬೇಕು ಎಂದು ಒತ್ತಾಯವಾಗಿ ಹೇಳಿದೆ. ನಮಗಿಂತ ಹೆಚ್ಚು ಕಾತುರತೆ ಕೇಂದ್ರ ಸರಕಾರಕ್ಕಿದೆ. ಅವರೂ ತ್ವರಿತದಿಂದ ಮಾಡಬೇಕೆಂದಿದ್ದಾರೆ. ಆದಷ್ಟೂ ತೀವ್ರವಾದ ಒಂದು ನಿರ್ಣಯ ತೆಗೆದುಕೊಳ್ಳುವ ಮನಸ್ಸು ಮಾಡಿ ಬಹುಶಃ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಈ ಸಂದರ್ಭದಲ್ಲಿ ಈ ನೀರಿನ ಯೋಗ್ಯವಾದ ಪಾಲು ದೊರಕಿಸಿಕೊಳ್ಳುವುದಕ್ಕೆ ನಾವು ಏನೇನು ಪ್ರಯತ್ನ ಮಾಡಿದ್ದೇವೆನ್ನುವುದನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ಅನೇಕ ಮಾನ್ಯ ಸದಸ್ಯರುಗಳು ಕೆಲವು ಕಡೆ ಬಹಳ ಒತ್ತಾಯಪೂರ್ವಕವಾಗಿ ಹೇಳಿದ್ದಾರೆ. ನನಗೆ ತಾವು ಹೇಳುವುದರ ಮೇಲೆ ಯಾವ ಆಕ್ಷೇಪವೂ ಇಲ್ಲ. ಬಹುಶಃ ಈ ರೀತಿ ಏನೂ ಒತ್ತಾಯವಾಗಿಲ್ಲ ಎನ್ನುವ ವಿಷಯವನ್ನು ಹಬ್ಬಿಸಿ ಇವೊತ್ತು ಮೈಸೂರು ಸರಕಾರ ಕರ್ನಾಟಕಕ್ಕೆ ಅನ್ಯಾಯ ಮಾಡಿದರೆ ಅದರ ಪರಿಣಾಮ ಏನಾಗುತ್ತಿತ್ತು ಎನ್ನುವುದನ್ನೂ ತಿಳಿಸಿದ್ದಿದ್ದರೆ ಅದಕ್ಕೆ ನನ್ನ ಆಕ್ಷೇಪಣೆಯೇನೂ ಇರುತ್ತಿರಲಿಲ್ಲ. ಆದರೆ ಇವೊತ್ತು ಇದನ್ನು ಪೊಲಿಟಿಕಲ್ ಇಷ್ಯು ಮಾಡಿದರೆ ಬಹುಶಃ ನಮ್ಮ ಇಷ್ಯೂ ಕೆಟ್ಟುಹೋಗಬಹುದು ಎನ್ನುವ ಹೆದರಿಕೆಯ ಮಾತುಗಳನ್ನೂ ಹೇಳಿದ್ದಾರೆ. ಇದು ಒಂದು ಜಟಿಲವಾದ ಸಮಸ್ಯೆ. ಯಾವುದೇ ಒಂದು ರಾಜಕೀಯಕ್ಕೆ ಸಿಲುಕದೆ ಇದನ್ನು ಬಗೆಹರಿಸಲು ಸ್ವಲ್ಪ ಪ್ರಯತ್ನ ಕಲ್ಪನೆ ಮಾಡಿದರೆ ಬಹುಶಃ ಈ ಕೆಲಸವನ್ನು ಒಂದು ಧೃಡವಾದ ನೀತಿಯಿಂದ ಮಾಡುವುದಕ್ಕೆ ಆದೀತು ಎಂದು ನನಗನಿಸುತ್ತದೆ. ಈ ಸಭೆಯ ಸದಸ್ಯರ ಬಾಯಲ್ಲಿ ಮಾತುಗಳನ್ನು ಹೇಳಿಸಿ ಈ ಸಭೆಯ ಗಮನವನ್ನು ಜನರೇ ಹೇಳಿಸ್ಟು ಎಂದು ವಿಷ ಬೆರಸುವುದಕ್ಕೆ ಪ್ರಯತ್ನ ಮಾಡಿ. ಜನರಲ್ಲಿ ಇಲ್ಲದ ತೊಡರುಗಳನ್ನು ದೂರ ಮಾಡುತ್ತಿಲ್ಲ ಎಂದು ಹೇಳುವುದು ಜವಾಬುದಾರಿಯನ್ನು ಹೊತ್ತವರು ಹೇಳುವ ಮಾತಲ್ಲ.

ಅದು ಒಂದು ಪ್ಲಾಟ್‌ಫಾರಮ್ ಹೇಳಿಕೆಯಾಗಿದೆ. ಅದರಿಂದ ಜನಗಳ ಮನಸ್ಸಿನಲ್ಲಿ ಒಂದು ವಿಧವಾದ ಗೊಂದಲಕ್ಕೆ ಕಾರಣವಾಗಿದೆ. ಕೆಲವುದಿವಸಗಳ ಮೊದಲು ಅಧಿಕಾರ ಸ್ಥಾನದಲ್ಲಿದ್ದಂಥ ವ್ಯಕ್ತಿಗಳು, ಮಂತ್ರಿಗಳು 'ಪ್ರೆಸ್‌ಸ್ಟೇಟ್‌ಮೆಂಟ್‌ಗಳನ್ನು ಕೊಡುತ್ತಿದ್ದಾರೆ.

ಶ್ರೀ ಅಣ್ಣಾರಾವ್ ಗಣಮುಖಿ.—ಮಂತ್ರಿಗಳೆಂದರೆ ಎಷ್ಟು ಜನ ಯಾರು ?

ಶ್ರೀ ವೀರೆಂದ್ರ ಪಾಟೀಲ್.—ತಮಗೇ ಅರ್ಥವಾಗಿದೆ. ಅದನ್ನು ನಾನು ಇಲ್ಲಿ ಹೇಳುವುದಕ್ಕಾಗುವುದಿಲ್ಲ ಅದನ್ನು ಇಷ್ಟಕ್ಕೇ ಬಿಡುವುದು ಸರಿ ಎನಿಸುತ್ತದೆ.

Sri S. AVALA REDDY.—On a point of information Sir.

Mr. SPEAKER.—I have said that point of clarification or information may be raised only after the reply. Sri. Anna Rao is not adhearing to it.

Sri ANNA RAO GANAMUKHI.—As far as this is concerned, there is no political motive whatsoever. If the Minister imputes motives, it is not correct.

Mr. SPEAKER.—No interruption till the reply is over.

ಶ್ರೀ ವೀರೇಂದ್ರ ಪಾಟೀಲ್.—ಅವರು ಈ ಸಭೆಯಲ್ಲಿ ಅಂಥಾ ವಿಷಯಗಳನ್ನು ಹೇಳಿದ್ದಾರೆಂದು ನಾನು ಹೇಳುವುದಿಲ್ಲ. ಇವೊತ್ತು ದೇಶದಲ್ಲ ಒಂದು ಕಳವಳವನ್ನು ಹುಟ್ಟಿಸುವುದಕ್ಕೆ ಕೆಲವು ಜನ ಏನು ಪ್ರಯತ್ನವನ್ನು ಮಾಡುತ್ತಿದ್ದಾರೆಯೋ ಆ ಎಲ್ಲಾ ಪ್ರಯತ್ನಗಳನ್ನು ಮಾಡುವಂಥಾದ್ದು ಅವಶ್ಯವಿಲ್ಲ. ಇದು ಬಹಳ ಜಟಿಲವಾದ ಪ್ರಶ್ನೆ. ಇದನ್ನು ಬಗೆ ಹರಿಸಬೇಕಾದರೆ ಎಂತಹ ಒಂದು ವಾತಾವರಣ ಇರಬೇಕೋ ಅಂಥಾ ವಾತಾವರಣ ಇಲ್ಲದೆ ಹೋದರೆ ನಮ್ಮ ಕೇಸು ಹಾಳಾಗುತ್ತದೆಂದು ನಾನು ಆ ವಿಚಾರವನ್ನು ಈ ಸಭೆಯಲ್ಲಿ ಹೇಳುತ್ತಿದ್ದೇನೆ. ಕೆಲವು ಜನ ಹಿಂದೆ ಅಧಿಕಾರದಲ್ಲಿ ಇದ್ದವರು ಪ್ರೆಸ್‌ಸ್ಟೇಟ್‌ಮೆಂಟ್‌ಕೊಡುತ್ತಿರುವುದನ್ನು ವಿಚಾರ ಮಾಡುವುದು ಬೇಡ, ಅದಕ್ಕೆ ಬೆಲೆ ಕೊಡುವುದು ಬೇಡ ಎಂದು ಈ ಸಭೆಯಲ್ಲಿ ಮಾನ್ಯಸದಸ್ಯರು ಅಭಿಪ್ರಾಯ ಪಡುವುದಾದರೆ ಆ ವಿಚಾರ ಬೇರೆ. ನನ್ನ ಹತ್ತಿರ ಅನೇಕ ಮಾನ್ಯ ಸದಸ್ಯರು ಬಂದು ಬೆಳಿಗ್ಗೆ ಎದ್ದರೆ ಕೃಷ್ಣ ಗೋದಾವರಿ ನೀರಿನ ವಿಚಾರದಲ್ಲಿ ಒಂದು ಸ್ಟೇಟ್ ಮೆಂಟ್ ಬರುತ್ತದೆ. ನೀವು ಆ ವಿಚಾರದಲ್ಲಿ ಸುಮ್ಮನೆ ಕಣ್ಣುಮುಚ್ಚಿ ಕುಳಿತು ಕೊಂಡಿದ್ದೀರಿ, ಆ ಬಗ್ಗೆ ನೀವು ಒಂದು ಸ್ಟೇಟ್‌ಮೆಂಟ್‌ಕೊಡಬೇಕು ವೈಟ್ ಪೇಪರ್ ಇಷ್ಯೂ ಮಾಡಬೇಕು. ಅದು ಬಿಟ್ಟು ಹೇಡಿಗಳ ಹಾಗೆ ಶರಣಾಗತರಾಗಿದ್ದೀರಿ, ನಿಮಗೆ ಶಕ್ತಿಯಿಲ್ಲ, ಧೈರ್ಯವಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಸ್ಟೇಟ್‌ಮೆಂಟ್‌ಕೊಡಿ, ವೈಟ್ ಪೇಪರ್ ಇಷ್ಯೂ ಮಾಡಿ ಎಂದು ಡಿಮ್ಯಾಂಡ್ ಮಾಡಿದಾಗ ನಾವು ವೈಟ್ ಪೇಪರ್ ಇಷ್ಯೂ ಮಾಡಿದರೆ ಅದು ಬರೀ ಒಂದು ವೈಟ್ ಪೇಪರ್ ಇಷ್ಯೂನೇ ಆಗುತ್ತದೆ. ಗೌರ್ನಮೆಂಟ್ ಡಾಕ್ಯುಮೆಂಟಿಗೆ ಬೆಲೆ ಬರುವಂತೆ ನಾವು ವರ್ತಿಸಬೇಕಾಗುತ್ತದೆ. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಕೃಷ್ಣಾ ಗೋದಾವರಿ ನೀರಿನ ವಿಷಯದಲ್ಲಿ ನಾವು ಒಂದೇ ಸಮನಾಗಿ ಪ್ರಯತ್ನ ಮಾಡುತ್ತಿದ್ದೇವೆ. ಆ ವಿಚಾರದಲ್ಲಿ ಒಂದು ಇಂಚು ಕೂಡ ಹಿಂದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಇರಿಗೇಷನ್ ಪೊಟೆನ್‌ಷಿಯಲ್ ಬಹಳ ಕಡಮೆ, ಸೇಕಡ 23-24 ಕಿಂತ ಮುಂದೆ ಹೋಗುವುದಿಲ್ಲ. ಈ ನೀರಿಗೋಸ್ಕರ ಜನ ನಮ್ಮನ್ನು ಶಪಿಸುತ್ತಿದ್ದಾರೆ ಕೆಲವು ಜನ, ಕೆಲವು ವ್ಯಕ್ತಿಗಳು ಹೇಳುತ್ತಾರೆ ತೆರೆಯ ಮರೆಯಲ್ಲಿ ಏನೋ ನಡೆಯುತ್ತಿದೆಯೆಂದು. ಮೈಸೂರಿನ ಹಕ್ಕುಗಳನ್ನುಬೇರೆಯವರಿಗೆ ಮಾರಿಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ತಮ್ಮ ಸ್ವಾರ್ಥಕ್ಕೋಸ್ಕರ ಮೈಸೂರಿನ ಹಕ್ಕುಗಳನ್ನು ಮಾರಿಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇದೂ ಅಲ್ಲದೆ ಇನ್ನೂ ಅನೇಕರೀತಿಯಲ್ಲಿ ಹೇಳುತ್ತಿದ್ದಾರೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಕನ್ನಡ ನಾಡನ್ನು ಒಂದುಗೂಡಿಸಬೇಕೆಂದು ಸತತವಾಗಿ 30 ವರ್ಷಗಳಿಂದ ಪ್ರಯತ್ನ ಮಾಡಿ ಹರಿದು ಹಂಚಿ ಹೋಗಿದ್ದ 5 ಭಾಗಗಳನ್ನು ಒಂದುಗೂಡಿಸಿದ್ದೇವೆಂದು. ಯಾವ ಭಾವನೆಯಿಂದ ಅವರು ಆ ಕೆಲಸವನ್ನು ಮಾಡಿದರು ಎನ್ನುವಂಥಾದ್ದನ್ನು ನಾವು ಗಮನಿಸಬೇಕಾಗಿದೆ. ಇಷ್ಟೊಂದು ದೀರ್ಘಕಾಲ ಸತತವಾಗಿ ಪ್ರಯತ್ನ ಪಟ್ಟು ಒಂದುಗೂಡಿಸಿದಂತಹ ಕನ್ನಡನಾಡಿನ ಹಕ್ಕುಗಳನ್ನು ಎರಡನೆಯವರಿಗೆ ಮಾರಿಕೊಳ್ಳುತ್ತಿದ್ದಾರೆ, ವೈಟ್ ಪೇಪರ್ ಇಷ್ಯೂ ಮಾಡಲಿಲ್ಲ ಎಂದು ಹೇಳು ವಂಥಾದ್ದು ಸರಿಯಲ್ಲ. ಆ ಬಗ್ಗೆ ಏನೇನು ವ್ಯವಹಾರವನ್ನು ಮಾಡಬೇಕೋ ಅದೆಲ್ಲವನ್ನೂ ಮಾಡುತ್ತಿದ್ದೇವೆ ಮತ್ತು ಅದನ್ನು ವಿಚಾರ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಸ್ಟೇಟ್ ಮೆಂಟ್‌ಕೊಟ್ಟು ಜನಗಳಿಗೆ ಸರ್ಕಾರದಲ್ಲಿ ಇದ್ದಂತಹ ನಂಬಿಕೆ ಹೋಗಿ ಅಪನಂಬಿಕೆ ಹೆಚ್ಚಾಗುವುದಕ್ಕೆ ಅವಕಾಶವಾಗಿದೆ. ನಾನು ಸಹ ಆ ನದಿಗಳು ಹರಿಯುತಕ್ಕಂಥಾ ಪ್ರದೇಶಕ್ಕೆ ಹೋಗಿದ್ದೆ, ಅದಕ್ಕೆ ಸಂಬಂಧಪಟ್ಟ ಏರಿಯಾಕ್ಕೆಲ್ಲಾ ಹೋಗಿ ತಿರುಗಾಡಿಕೊಂಡು ಬಂದಿದ್ದೇನೆ. ಬಿಜಾಪುರ, ಗುಲ್ಬರ್ಗ, ಧಾರವಾಡ ಈ ಪ್ರದೇಶಗಳಿಗೂ ಹೋಗಿದ್ದೆ. ನನ್ನ ಕ್ಷೇತ್ರವಾದ ರಾಯಚೂರಿಗಂತೂ ಅನೇಕಸಾರಿ ಹೋಗಿ ಅಲ್ಲಿನ ವಿಚಾರಗಳನ್ನು ತಿಳಿದುಕೊಂಡು ಬಂದಿದ್ದೇನೆ ಇಲ್ಲಿನವರೆಗೂ ಸಹ ಈ ವಿಚಾರದಲ್ಲಿ ಚಕಾರ ಶಬ್ದವನ್ನು ಸಹ ಹೇಳಿಲ್ಲ. ಮೈಸೂರಿನ ಹಕ್ಕುಗಳನ್ನು ಮಾರಿಕೊಳ್ಳುತ್ತಿದ್ದಾರೆಂದು ಯಾರೂ

ಹೇಳಲಿಲ್ಲ. ಸುಮ್ಮನೆಕೆಲವರು ಮನಸ್ಸಿನಲ್ಲೇ ಮುಂಡಿಗೆಹಾಕುತ್ತಾರೆ. ಇಂತಹ ಒಂದು ಸ್ಟೇಟ್‌ಮೆಂಟ್ ಕೊಡುವುದರಿಂದ ಆಗ ಶಕ್ಕ ಲಾಭವಾದರೂ ಏನು ಎನ್ನುವುದನ್ನು ವಿಚಾರ ಮಾಡಬೇಕು.

Sri C. J. MUCKANNAPPA.—What is the motive behind it, Sir ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಮಾನ್ಯ ಸದಸ್ಯರೆ ವಿಚಾರ ಮಾಡಬೇಕು. ಆ ಬಗ್ಗೆ ರಾಜಕೀಯವನ್ನು ತಂದರೆ ನಮ್ಮ ಕೇಸು ಹಾಳಾಗಿ ಹೋಗುತ್ತದೆ. ಈ ನದೀ ನೀರಿನ ವಿವಾದದ ಬಗ್ಗೆ ಸುಪ್ರೀಮ್ ಕೋರ್ಟಿಗೆ ಹೋಗಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಸುಪ್ರೀಮ್ ಕೋರ್ಟಿಗೆ ಹೋಗಬೇಕು ಎಂದು ಹೇಳಿದಾಗ ನಾವು ಅದನ್ನು ಸ್ವಲ್ಪ ವಿಚಾರ ಮಾಡಬೇಕಾಗಿದೆ. ನಾನು ಸಹ ಒಬ್ಬ ಲಾಯರ್ ಆಗಿದ್ದೇನೆ. ಆ ವಿಚಾರದಲ್ಲಿ ನನಗೂ ಸ್ವಲ್ಪ ಮಟ್ಟಿಗೆ ಗೊತ್ತಿದೆ. ನಾವು ಈಗ ಯಾವುದಾದರೂ ಒಂದು ಕೋರ್ಟಿನಲ್ಲಿ ಜಗಳವನ್ನು ಆಡುತ್ತಿರುತ್ತೇವೆ, ಆರ್ಗ್ಯುಮೆಂಟ್ ಆಗುತ್ತದೆ, ಜಡ್ಜ್‌ಮೆಂಟ್ ಆಗುವ ಸ್ಟೇಜಿನಲ್ಲಿ ಕ್ಲಯಂಟ್ ಬಂದು ಅಪೀಲು ಹೋಗುತ್ತೇನೆಂದು ಹೇಳಿದರೆ, ಜಡ್ಜ್‌ಮೆಂಟ್ ಬಾರದೆ ಅಪೀಲು ಹೇಗೆ ಹೋಗುತ್ತಾನೆ. ನಾವು ಯೋಗ್ಯ ರೀತಿಯಿಂದ ನಮ್ಮ ಕೇಸನ್ನು ಕೇಂದ್ರ ಸರ್ಕಾರದ ಸಂಬಂಧ ಪಟ್ಟ ಮಂತ್ರಿಗಳಲ್ಲಿ ರೆಪ್ರೆಜೆಂಟ್ ಮಾಡಿದ್ದೇವೆ. ನಾವು ಕೇಂದ್ರ ಸರ್ಕಾರದ ಮಂತ್ರಿಗಳ ಹತ್ತಿರ ಹೋದಾಗ ಅವರು ಈ ರೀತಿ ಹೇಳಿದರು. ಆ ನದೀ ನೀರಿನ ವಿಷಯದಲ್ಲಿ ನಿಮಗೆ ಅನ್ಯಾಯವಾಗುತ್ತದೆ ಎಂಬುದು ನಮಗೆ ಗೊತ್ತಿದೆ, ಇರಿಗೇಷನ್ ವಿಚಾರದಲ್ಲಿ ನೀವು ಎಷ್ಟು ಬಡವರು ಎನ್ನುವುದು ನಮಗೆ ಗೊತ್ತಿದೆ. ನಾವು ಆ ವಿಚಾರದಲ್ಲಿ ನಿಮಗೆ ನ್ಯಾಯವನ್ನು ದೊರಕಿಸಿಕೊಡುತ್ತೇವೆ. ನಮ್ಮ ಮಾತಿನಲ್ಲಿ ವಿಶ್ವಾಸವನ್ನು ಇಡಿ ಎಂದು ಅವರು ಹೇಳಿದರು. ಇಂಥಾ ಒಂದು ವಾತಾವರಣವಿರುವಾಗ ನಾವು ಸುಪ್ರೀಮ್ ಕೋರ್ಟಿಗೆ ಹೋಗಿ ನಮ್ಮ ಕೇಸನ್ನು ಏತಕ್ಕೆ ಹಾಳು ಮಾಡಿಕೊಳ್ಳೋಣ ಎಂದು ವಿಚಾರ ಮಾಡುತ್ತಿದ್ದೇವೆ. ಈ ಸಭೆಯ ಮಾನ್ಯ ಸದಸ್ಯರೊಬ್ಬರು ಇವರಿಗೆ ಸುಪ್ರೀಮ್ ಕೋರ್ಟಿಗೆ ಹೋಗುವುದಕ್ಕೆ ಬರುವುದಿಲ್ಲ, ಶಕ್ತಿಯಿಲ್ಲ ಎಂದು ಹೇಳಿದ್ದಾರೆ. ಸೆಕ್ಷನ್ 3ರ ಪ್ರಕಾರ ಈ ನೀರಿನ ವಿವಾದವನ್ನು ನ್ಯಾಯ ಮಂಡಲಿಗೆ ಒಪ್ಪಿಸಬೇಕೆಂದು ನಾವು ಅಪ್ಲಿಕೇಷನ್ ಹಾಕಿರುವುದರಿಂದ ಈಗ ನಾವು ಸುಪ್ರೀಮ್ ಕೋರ್ಟಿಗೆ ಹೋಗುವುದಕ್ಕೆ ಸಾಧ್ಯವಿಲ್ಲ

ಶ್ರೀ ಅಣ್ಣಾರಾವ್ ಗಣಮುಖಿ.—ಸುಪ್ರೀಮ್ ಕೋರ್ಟಿಗೆ ಹೋಗಬೇಕೆಂದು ಇಲ್ಲಿ ಯಾರೂ ಹೇಳಲಿಲ್ಲ.

ಒಬ್ಬ ಸದಸ್ಯರು.—ಶ್ರೀಮಾನ್ ಗೋಪಾಲ ಗೌಡರು ಅದನ್ನು ಹೇಳಿದರು.

ಶ್ರೀ ಎಸ್. ಗೋಪಾಲ ಗೌಡ.—ಶ್ರೀಮಾನ್ ಜತ್ತಿಯವರೇ ಆ ವಿಷಯವನ್ನು ಹೇಳಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಅದು ಏನೇ ಇರಲಿ. ಶ್ರೀಮಾನ್ ಗೋಪಾಲ ಗೌಡರೇ ಅದನ್ನು ಹೇಳಿದರು ಎಂದು ನಾನು ವೈಯಕ್ತಿಕವಾಗಿ ಹೇಳಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮುಖ್ಯವಾಗಿ ಕೃಷ್ಣಾ ಗೋದಾವರಿ ನದೀ ನೀರಿನ ವಿವಾದದ ವಿಷಯದಲ್ಲಿ ಮಾತ್ರ ನಮಗೆ ಸ್ವಲ್ಪ ವಿಷಯವನ್ನು ತಿಳಿಸಿದರೆ ಸಾಕು. ಹೆಚ್ಚಿಗೆ ಹೇಳುತ್ತಾ ಹೋದರೆ ಹೆಚ್ಚಿನ ಕಾಲ ಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೂ ಅರ್ಧಗಂಟೆ ಹೆಚ್ಚಿಗೆ ಬೇಕಾಗಿದ್ದರೂ ಕುಳಿತುಕೊಳ್ಳುತ್ತೇವೆ. ಆ ನದೀ ನೀರಿನ ವಿಷಯದಲ್ಲಿ ಏನೇನು ವಿಷಯಗಳಿವೆ ಎಂಬುದನ್ನು ಹೊರಕ್ಕೆ ಹಾಕಿ.

ಶ್ರೀ ವೀರೇಂದ್ರ ಪಾಟೀಲ್.—ಸುಪ್ರೀಮ್ ಕೋರ್ಟಿಗೆ ಹೋಗುವ ಅಥವಾ ಬಿಡುವ ವಿಷಯವನ್ನು ನಮಗೆ ಬಿಟ್ಟು ಬಿಡಿ. ಕೇಂದ್ರ ಸರ್ಕಾರದ ಮಂತ್ರಿ ಮಂಡಲದವರು "ನಿಮಗೆ ಅನ್ಯಾಯ ಮಾಡುವುದಿಲ್ಲ. ಆ ನದೀ ನೀರಿನ ವಿಷಯದಲ್ಲಿ ನಿಮಗೆ ನ್ಯಾಯವನ್ನು ದೊರಕಿಸಿಕೊಡುತ್ತೇವೆ" ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರಲ್ಲಿ ನಮಗೆ ವಿಶ್ವಾಸವಿದೆ. ಕೇಂದ್ರ ಸರ್ಕಾರದವರು ನಮಗೆ ಅಷ್ಟೊಂದು ಭರವಸೆಯನ್ನು ಕೊಟ್ಟಿರುವಾಗ ನಾವೇತಕ್ಕೆ ಸುಪ್ರೀಮ್ ಕೋರ್ಟಿಗೆ ಹೋಗಬೇಕು. ಈ ವಿಷಯದಲ್ಲಿ ಸ್ವಲ್ಪ ಕಾಲ ನಿಧಾನ ಮಾಡಿರಿ ಎಂದು ಹೇಳಿದರೂ ಕೂಡ ಕೆಲವರು ನಮಗೂ ಕೂಡ ಮುಚ್ಚು ಮರೆ ಮಾಡುತ್ತಿದ್ದೀರಿ, ತೆರೆಯ ಮರೆಯಲ್ಲಿ ಏನೋ ವ್ಯವಹಾರಮಾಡುತ್ತಿದ್ದೀರಿ ಎಂದು ಹೇಳಿದರು. ಆ ರೀತಿ ತಿಳಿದುಕೊಳ್ಳುವುದಕ್ಕೆ ಯಾವ ಆಸ್ಪದವೂ ಇಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ತೆರೆಯ ಮರೆಯಲ್ಲಿ ಏನೋ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರು ಯಾರೂ ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೋಸ್ಕರ ನಾನು ಹೇಳುವುದು ಇಷ್ಟೆ. ಕೇಂದ್ರ ಸರ್ಕಾರದವರು ಏನು ನಿರ್ಣಯವನ್ನುಕೊಡುತ್ತಾರೆಯೋ ಅದು ಬಹುಶಃ ಈ ಸಭೆಯ ಮುಂದೆ ಬರುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಅವರಿಗೆ ಆ ಬಗ್ಗೆ ನಿರ್ಣಯ ಕೊಡುವುದಕ್ಕೆ ಅಧಿಕಾರವಿಲ್ಲ. ಅದಕ್ಕೋಸ್ಕರ ಅದು ಹಾಗೆಯೇ ನಿಂತಿದೆ. ಆ ವಿಚಾರ ಟ್ರಿಬ್ಯುನಲ್ಲಿಗೆ ಹೋಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಅಧಿಕಾರ ಇದೆಯೋ ಇಲ್ಲವೋ ....

Mr. SPEAKER.—Order, order.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು, ಕೇಂದ್ರ ಸರ್ಕಾರದವರು ಆ ಬಗ್ಗೆ ನಿರ್ಣಯ ಕೊಡುವುದಕ್ಕೆ ಅಧಿಕಾರವಿಲ್ಲ ಎಂದು ಹೇಳಿದರು. ಗುಲ್ಹಾಟಿ ಕಮಿಟಿಯ ರಿಪೋರ್ಟ್ ಹೊರ ಬೀಳುವುದಕ್ಕೆ ಮುಂಚೆ ಆಯಾ ಸಂಬಂಧಪಟ್ಟ ಮುಖ್ಯ ಮಂತ್ರಿಗಳು ಪರಸ್ಪರ ಭೇಟಿ ಮಾಡಿ ಆ ಬಗ್ಗೆ ಇತ್ಯರ್ಥ ಮಾಡಿಕೊಳ್ಳತಕ್ಕದ್ದು ಅದು ಬೇರೆ ಮಾತು. ಈ ಬಗ್ಗೆ ಕೇಂದ್ರ ಸರ್ಕಾರದವರು ಯಾವುದೇ ಒಂದು ನಿರ್ಣಯವನ್ನು ಕೊಟ್ಟರೂ ಕೂಡ ಅದನ್ನು ಈ ಮಾನ್ಯ ಸಭೆಯ ಮುಂದೆ ಇಟ್ಟು ಚರ್ಚಿಸಿ ಅದರ ಬಗ್ಗೆ ತಮ್ಮ ನಿಲುವು ಏನು, ತಮ್ಮ ಅಭಿಪ್ರಾಯ ಏನು, ಅದು ಯಾವ ರೀತಿ ಇರಬೇಕು ಎಂಬ ಮಾರ್ಗದರ್ಶನ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅಧಿಕಾರ ಇದೆ. ಅಂಥಾ ಒಂದು ಅವಕಾಶ ಈ ಮಾನ್ಯ ಸಭೆಯವರಿಗೆ ಸಿಕ್ಕಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕೃಷ್ಣ ಗೋದಾವರಿ ನೀರಿನ ಸಮಸ್ಯೆ ಏನು? ನಮ್ಮ ಕೇಸು ಏನು ಇದೆ ಎಂಬುದನ್ನು ಕೂಡ ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ. ಈಗ ನಮಗೆ ಗೋದಾವರಿ ದೊಡ್ಡ ಪ್ರಶ್ನೆ ಅಲ್ಲ. ನಾವು 23 ಚಿಲ್ಲರೆ TMCFT ಬೇಡಿದ್ದೇವೆ. ಅದಕ್ಕೆ ಪೋಚಂಪಾಡಿಗೆ 400 TMCFT ಅಷ್ಟು ಕೊಡಬೇಕೆಂತ ಹೇಳಿದ್ದಾರೆ. ಈ ರೀತಿಯಾಗಿ ಅವರಿಗೆ ನೀರು ಇರುವ ಹಾಗಿಲ್ಲ. ಸ್ವಲ್ಪ ಆದರೂ ಕೂಡ ಬಿಡಲಿಕ್ಕೆ ಆಗುವುದಿಲ್ಲ, ಅದು ಬೀದರಿನ ಭಾಗಕ್ಕೆ ನೀರಿನ ಉಪಯೋಗ ವಾಗುತ್ತದೆ.

6-00 P.M.

ಕೃಷ್ಣ ವಾಟರ್ ಬೇಸಿನ್ ನೀರು ಬೇಕು ನಮಗೆ. ನಮ್ಮ ನೀರಿನ ಪಾಲು, ನಮ್ಮ requirement ಕೊಟ್ಟಿದ್ದೇವೆ. 1253 TMCFT ಕೃಷ್ಣ ನದಿಯಿಂದ ನಮಗೆ ದೊರೆಯಬೇಕು, ಕೊಡಿ ಅಂತ ಕೇಳಿದ್ದೇವೆ. ನೀರನ್ನು ಹಂಚಿಕೆ ಮಾಡುವಾಗ ಕೆಲವೊಂದು ಅಂಶಗಳನ್ನು ಗಣನೆಗೆ ತೆಗೆದು ಕೊಳ್ಳಬೇಕೆಂದು ಹೇಳುತ್ತಾ ಇದ್ದೇವೆ. Availability of water ಎಷ್ಟು, catchment area ಎಷ್ಟು, net sum area ಎಷ್ಟು, agricultural land ಎಷ್ಟು, scarcity conditions ಯಾವ ರೀಜನ್ನಿನಲ್ಲಿ ಎಷ್ಟು ಪ್ರಮಾಣದಲ್ಲಿದೆ, population ಯಾವ ರೀತಿ ಇದೆ. ಈ ಐದಾರು ಫ್ಯಾಕ್ಟರುಗಳನ್ನು ಗಮನದಲ್ಲಿಟ್ಟುಕೊಂಡು ನೀರನ್ನು ಹಂಚಿಕೆ ಮಾಡಬೇಕೆಂದು ಹೇಳಿದ್ದೇವೆ. ನಮ್ಮ ಮುಖ್ಯಮಂತ್ರಿಗಳು 1250 TMC ft. ನಮ್ಮ requirement ಇದೆ, ನಮಗೆ ಬೇಕು. ಇರ್ರಿಗೇಷನ್ನಿಗೆ ಎಲ್ಲಿ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೋ ಅಲ್ಲಿಗೆ ಅಷ್ಟು ಕೊಡಬೇಕು. ಒಂದು ವೇಳೆ ಅಷ್ಟು ಕೊಡುವುದಿಲ್ಲವೆಂದು ಹೇಳುವುದಾದರೆ, ಏನೇ ಆಗಲಿ 1050 TMC ft.ಗೆ ಕೆಳಗೆ ಇಳಿಯುವುದಕ್ಕೆ ತಯಾರಿಲ್ಲವೆಂದು ಹೇಳಿ ಸ್ಪಷ್ಟಪಡಿಸಿದ್ದೇವೆ. ಇದು ನಮ್ಮ ನಿಲುವೆಯಾಗಿದೆ. ಅದು ಒಂದು ಜಟಿಲ ಪ್ರಶ್ನೆಯಾಗಿದೆ.

ಈಗ ಇನ್ನು ಎರಡನೇ ಡಿಟೇಲ್ಸ್ ಹೇಳುತ್ತೇನೆ. ಒಂದು ಕಡೆ ಮಹಾರಾಷ್ಟ್ರ, ಇನ್ನೊಂದು ಕಡೆ ಆಂಧ್ರವಿದ್ದು, ಇವುಗಳ ಮಧ್ಯದಲ್ಲಿ ನಾವು ಸ್ಯಾಂಡ್‌ವಿಚ್ ಆಗಿದ್ದೇವೆ. ಮಹಾರಾಷ್ಟ್ರ ಕೃಷ್ಣ ಬೇಸಿನ್ನಿಗೆ ಹರಿಯತಕ್ಕಂಥ ಅನೇಕ ನದಿಗಳ ಜನ್ಮಸ್ಥಾನ, ಉಗಮ; ಆ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಹರಿದುಹೋಗುತ್ತವೆ. 200-250 ಇಂಚ್ ಭಾರಿ ಮಳೆ ವೆಸ್ಟ್‌ಕೋಸ್ಟ್‌ನಲ್ಲಿ ಆಗುತ್ತದೆ. ಕ್ಯಾಚ್‌ಮೆಂಟ್ ಏರಿಯಾ ಕಡಿಮೆ ಇದ್ದು, ಹೆಚ್ಚು ಪ್ರಮಾಣದ ನೀರು ಕೆಳಗೆ ಹರಿದುಕೊಂಡು ಬರುವ ಮುಂಚೆ ಆ ನೀರು ಇನ್ನಾವ ರೀತಿಯಿಂದಲಾದರೂ ಹರಿದುಕೊಂಡು ಹೋಗುವಂತೆ ಮಾಡಿ ನೀರು ಬಿಡಲಾರದೆ ಹೋದರೆ ನಾವೂ ಆಂಧ್ರದವರು ಕೊರಗಬೇಕು. ಈಗ ಮಹಾರಾಷ್ಟ್ರದಲ್ಲಿ ವಿಚಾರ ಮಾಡಿದರೆ, ಅವರು 8-10 ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟುಗಳನ್ನು ಕಟ್ಟಬೇಕೆಂದು ಮಾಡಿದ್ದಾರೆ. ಈ ನದಿಗಳನ್ನು ಆ ಪ್ರಾಜೆಕ್ಟುಗಳಿಗೆ ಉಪಯೋಗಿಸಿ ನೀರನ್ನು ಅರೇಬಿಯನ್ ಸಮುದ್ರಕ್ಕೆ ತಿರುಗಿಸಿ, 17-18 ಲಕ್ಷ ಕಿಲೊವ್ಯಾಟ್ ಪವರ್ ಜನರೇಟ್ ಮಾಡುವ ವಿಚಾರ ಮಹಾರಾಷ್ಟ್ರದವರು ಇಟ್ಟುಕೊಂಡಿದ್ದಾರೆ. ಮಹಾರಾಷ್ಟ್ರ ನದಿಗಳ ನೀರು ಹುಟ್ಟುವ ಉಗಮ ಸ್ಥಳ, ನಸಿಯನ್ನು ಮೊಳಕೆ ಏಳುವ ಮುಂಚೆ ಚಿಗಟಿ ಹಾಕಿದರೆ ಹೇಗೋ ಹಾಗಾಗುತ್ತದೆ. ಅವರು ಬೇಸಿನ್ನಿನಲ್ಲಿರುವ ನೀರನ್ನು ಅರೇಬಿಯನ್ ಸೀಗೆ ತಿರುಗಿಸಿದರೆ ಆವಾಗ ನಾಗಾರ್ಜುನಸಾಗರ ಮತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟುಗಳಿಗೆ ನೀರು ಇಲ್ಲದೆ ಹೋಗುತ್ತದೆ.

ನಮ್ಮ ಒಂದು ನಿಲುವು ಏನೆಂದರೆ ಕೃಷ್ಣ ಬೇಸಿನ್ನಿನಲ್ಲಿರತಕ್ಕಂಥ ನೀರನ್ನು ಮೊದಲು ಇರ್ರಿಗೇಷನ್ನಿಗೆ ಉಪಯೋಗಿಸಬೇಕು, ಎರಡನೆಯದಾಗಿ ಅದು ಪವರ್ ಸಲುವಾಗಿ ಉಪಯೋಗವಾಗಬೇಕು, ಮೂರನೆಯದಾಗಿ ಏನಾದರೂ ಸರ್‌ಪ್ಲಸ್ ಇದ್ದರೆ ಬೇಸಿನ್ ಹೊರಕ್ಕೆ ಹೋಗಬಹುದು. ನಮ್ಮ ನಿಲುವು ಮೊದಲು ನೀರು ಇರ್ರಿಗೇಷನ್‌ಗೆ ಉಪಯೋಗವಾಗಬೇಕು, ಆದ್ದರಿಂದ ನೀರು ಡೈವರ್ಟ್ ಮಾಡುವುದು ಬೇಡ ಎಂದು ಮಹಾರಾಷ್ಟ್ರ ಸರ್ಕಾರಕ್ಕೆ ಹೇಳಿದ್ದೇವೆ. ನೀರು ನಿಮಗೇ ಇರ್ರಿಗೇಷನ್‌ಗೆ ಬೇಕಾದರೆ ಉಪಯೋಗ್ ಮಾಡಿಕೊಳ್ಳಬಹುದು ಎಂದು ಹೇಳಿದ್ದೇವೆ. ಅವರಿಗೆ 300 TMCFT ಬೇಕು ಅಂತ ಹೇಳುತ್ತಾರೆ. ತಾವು ಹೇಳುತ್ತೀರ, ನಾಗಾರ್ಜುನ ಸಾಗರ ಮತ್ತು ಶ್ರೀಶೈಲಮ್ ಪ್ರಾಜೆಕ್ಟುಗಳ ವಿಚಾರವನ್ನು ಒಂದೇ ಸಮನೆ ಚರ್ಚೆ ಮಾಡುತ್ತಾ ಇದ್ದೇವೆ; ಹೇಳಿಕೆ ಕೊಡುತ್ತಾ ಇದ್ದೇವೆ, ಮಹಾರಾಷ್ಟ್ರಕ್ಕೂ ಹೇಳುತ್ತಾ ಇಲ್ಲ ಎಂದು; ಮಹಾರಾಷ್ಟ್ರ ಇತ್ತೀಚೆಗೆ ವಿದ್ಯುಚ್ಛಕ್ತಿ ಉತ್ಪತ್ತಿ ಮಾಡುತ್ತಾ ಇಲ್ಲ; ಆ ಪ್ರಶ್ನೆ ಬರುವ ಹಾಗಿಲ್ಲ. ನಾವು ಸ್ಪಷ್ಟವಾಗಿ ನಮ್ಮ ನಿಲುವೆಯನ್ನು ಅವರಿಗೆ ಹೇಳಿದ್ದೇವೆ. ನೀರು ಡೈವರ್ಟ್ ಮಾಡುವುದನ್ನು ಒಪ್ಪುವುದಿಲ್ಲ ಎಂದು ಕೃಷ್ಣ ಬೇಸಿನ್ನಿನಲ್ಲಿರತಕ್ಕಂಥ ನೀರಿನ requirements ನೋಡಿ ಆ ಮೇಲೆ ಮುಂದಿನ ವಿಚಾರ ಮಾಡುತ್ತೇನೆಂದು ಹೇಳಿದ್ದೇನೆ. ಇನ್ನೊಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಹಾರಾಷ್ಟ್ರವನ್ನು ಅಭಿನಂದಿಸಬೇಕು, ಮಹಾರಾಷ್ಟ್ರದವರ ಉಪಕಾರವನ್ನು ಸ್ಮರಿಸಬೇಕು. ಏಕೆಂದರೆ ಗುಲ್ಹಾಟಿ ಕಮಿಷನ್ ಅಪಾಯಿಂಟ್ ಆದ ಮೇಲೆ ಕೇಂದ್ರ ಸರ್ಕಾರದ ಆದೇಶವಿಲ್ಲದೆ ಯಾವ ಪ್ರಾಜೆಕ್ಟುಗಳನ್ನೂ ತೆಗೆದುಕೊಳ್ಳಬಾರದೆಂಬ ಸೂಚನೆಯನ್ನು ನಾವು ಮತ್ತು ಮಹಾರಾಷ್ಟ್ರ ಸರ್ಕಾರದವರು ಅಕ್ಷರಶಃ ಪಾಲನೆ ಮಾಡುತ್ತಾ ಇದ್ದೇವೆ. ಇವತ್ತಿನವರೆಗೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಅರೇಬಿಯನ್ ಸೀಗೆ ತಿರುಗಿಸುವಂಥ ಯಾವ ಪ್ರಾಜೆಕ್ಟುಗಳನ್ನೂ ಮಹಾರಾಷ್ಟ್ರ ಇಟ್ಟಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು authoritative ಆಗಿ ಹೇಳುತ್ತಿಲ್ಲ. ಕೋಯ್‌ನಾ ಒಂದು ಪ್ರಾಜೆಕ್ಟು ಆಗಲೇ ಕಟ್ಟಿದ್ದರು. ಅದಕ್ಕೆ 67 TMCFT ಡೈವರ್ಟ್ ಮಾಡಿದೆ. ಇದು *fait accompli*.

ಶ್ರೀ ಅಣ್ಣಾರಾವ್‌ರವರು ಹೇಳಿದಹಾಗೆ ಇವತ್ತು ಈ ಆಂಧ್ರದ ಪ್ರಶ್ನೆ ಬಹಳ ಅಗಾಧವಾದುದು. ಆಂಧ್ರದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುತ್ತಾ ಇದ್ದಾರೆ.

ಶ್ರೀ ಅಣ್ಣಾರಾವ್ ಗಣಮುಖಿ.—ಘಟಪ್ರಭಾದ ಟ್ರಿಬ್ಯುಟರಿಯನ್ನು ವಿದ್ಯುಚ್ಛಕ್ತಿಗೆ ಉಪಯೋಗಿಸಬೇಕೆಂದು ಮಹಾರಾಷ್ಟ್ರದವರಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಹಜಾರಿ ಅನ್ನುವ ಒಂದು ಟ್ರಿಬ್ಯೂಟರಿ ಅದಕ್ಕೆ ಸೇರಿದ್ದು. ಮೊದಲು ಅದರ ಉಪಯೋಗ ಇರ್ರಿಗೇಷನ್ನಿಗೆ ಆಗಬೇಕು, ಅನ್ನತಕ್ಕಂಥ ವಿಚಾರ ಇಟ್ಟುಕೊಂಡಿದ್ದೇವೆ. ಬಹುಶಃ ಅದನ್ನು power projectಗೆ ಉಪಯೋಗಿಸಲು ಅರೇಬಿಯನ್ ಸೀಗೆ ತಿರುಗಿಸುತ್ತಾರೆಂದರೆ ತಪ್ಪಾಗುತ್ತದೆ. ಯಾವ ಪ್ರಾಜೆಕ್ಟುಗಳ ಬಗ್ಗೆಯೂ ಅವರು serious ಆಗಿ ತೆಗೆದುಕೊಂಡು Central Power and Water Commission ಗಾಗಲೀ, ಕೇಂದ್ರ ಸರ್ಕಾರಕ್ಕಾಗಲೀ ಹೇಳಿಲ್ಲ. ಅವರು ಅಂಥ ಪ್ರಾಜೆಕ್ಟುಗಳನ್ನು ಕಟ್ಟತಕ್ಕಂಥ ಧೋರಣೆ ತಾಳಿಲ್ಲ. ಅದು ಜಟಿಲ ಸಮಸ್ಯೆಯಾಗಿ ಕೂತಿಲ್ಲ. ಬಹುಶಃ ನಾವೂ ಅವರೂ ಅದನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆ ಎಂದು ನನಗನಿಸುತ್ತದೆ.

ಆದರೆ ಇವತ್ತಿನ ದಿವಸ ಆಂಧ್ರದ್ದು ಜಟಿಲ ಸಮಸ್ಯೆ ಹೇಗಾಗಿದೆಯೆಂದು ತಮ್ಮ ಮುಂದೆ ಹೇಳುತ್ತಾ ಇದ್ದೇನೆ. ನಾವು ಯಾರ ಮೇಲೂ ದ್ವೇಷ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಆಂಧ್ರದಲ್ಲಿ ನಾಗಾರ್ಜುನ ಸಾಗರ ಕಟ್ಟುತ್ತಾ ಇದ್ದಾರೆ. ನಾಗಾರ್ಜುನ ಸಾಗರ ಕಟ್ಟಬೇಕೆಂದಾಗ 1957ರಲ್ಲಿ "ನಿಮ್ಮ ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಬನ್ನಿ" ಎಂದು ಕೇಂದ್ರದವರು ಹೇಳಿದರು. ಆವಾಗ ಕೃಷ್ಣಾ–ಪೆನ್ನಾರ್‌ದು ತೆಗೆದುಕೊಂಡು ಹೋಗಿದ್ದರು. ಬಹುಶಃ ಮದ್ರಾಸ್ ಮತ್ತು ಆಂಧ್ರ ಒಂದು ಕಡೆ ಇದ್ದಾಗ ಕೂಡ ಈ ರೀತಿ ಕೃಷ್ಣ–ಪೆನ್ನಾರನ್ನು ಮದ್ರಾಸಿಗೆ ತೆಗೆದುಕೊಂಡು ಹೋಗಬೇಕು ಎಂಬ ವಿಚಾರ ಬಂದಾಗ, 1951 ರೊಳಗೆ ನಂದಿಕೊಂಡ ಪ್ರಾಜೆಕ್ಟ್ ಇತ್ತು. ಆವಾಗ ನಾವೂ ಅಣ್ಣಾರಾಯರೂ ಹೈದರಾಬಾದಿನಲ್ಲಿ ಇದ್ದೆವು. ಬಹುಶಃ ಆದು ನಮ್ಮ ತಲೆಯಲ್ಲಿ ಹುಟ್ಟಿರಲೇ ಇಲ್ಲ. 1954ರಲ್ಲಿ ಪ್ರಾರಂಭವಾಗಲಿಕ್ಕೆ ಹತ್ತಿತು.

ಶ್ರೀ ಅಣ್ಣಾರಾವ್ ಗಣಮುಖಿ.—1951ರ agreement ಪ್ರಕಾರ ಅಪ್ಪರ್ ಕೃಷ್ಣ, ಭೀಮಾ ಸೇರಿಸಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ನಾವು ನೀವು ಹೇಳಿದ್ದು dispute ಮಾಡುತ್ತಾ ಇಲ್ಲ, challenge ಮಾಡುತ್ತಾ ಇಲ್ಲ. 1954ರಲ್ಲಿ ನಂದಿಕೊಂಡ ಪ್ರಾಜೆಕ್ಟ್ ಪ್ರಾರಂಭ ಮಾಡಿದರು. ಈ ಪ್ರಾಜೆಕ್ಟ್ ಕೆಳಗೆ 20 ಲಕ್ಷ ಎಕರೆಗೆ ನೀರು ನೀರಾವರಿಗಾಗಿ ಬರಿಸಿ ಬಿಟ್ಟು ಒಂದು ಯೋಜನೆ contemplate ಮಾಡಿ, 1956ರಲ್ಲಿ ನಾಗಾರ್ಜುನ ಸಾಗರವಾಯಿತು. ನಾಗಾರ್ಜುನ ಸಾಗರ, First stage, Second stage, Third stage ಅಂತ ಇವೆ. I stageನಲ್ಲಿ 264 TMCft. II stageನಲ್ಲಿ (100 more) 364, III stageನಲ್ಲಿ 594 TMCft. ಅಂದರೆ ಕೃಷ್ಣ ಬೇಸಿನ್ನಿನಲ್ಲಿರತಕ್ಕಂಥ ಯೀಲ್ಡಿನಲ್ಲಿ 50 ಪರ್ಸೆಂಟಿಗಿಂತ ಹೆಚ್ಚಿಗೆ ಒಂದು ಪ್ರಾಜೆಕ್ಟು ನೀರು ಕುಡಿಯುತ್ತಾ ಇದೆ. 1956ರಲ್ಲಿ ನಾಗಾರ್ಜುನ ಸಾಗರ I stage ಪ್ರಾರಂಭ ಮಾಡಿದರು. I stage ಪ್ರಾರಂಭ ಮಾಡುವುದಕ್ಕೆ ಮುಂಚೆ ನಮಗೆ ಯಾರಿಗೂ ಕೇಳಲಿಲ್ಲ. ತಾರ್ತಿನಿಂದ ನಾಗಾರ್ಜುನ ಸಾಗರ first stage complete ಮಾಡಿದ್ದಾರೆ. second stage, third stageಗೆ ಮುಂದೆ ಹೋಗುತ್ತಿದ್ದಾರೆ. ಅಲ್ಲಿನ ಮಂತ್ರಿಗಳು "ನಾಗಾರ್ಜುನ ಸಾಗರದೊಳಗೆ stages ಇಲ್ಲ, ಒಂದೇ ಸ್ಟೇಜ್" ಎಂದು ಹೇಳುವುದಕ್ಕೆ ಪ್ರಾರಂಭ ಮಾಡಿದ್ದಾರೆ.

ಇವತ್ತು ಫಸ್ಟ್ ಸ್ಟೇಜನ್ನು ಅವರು ಮುಗಿಸಿದ್ದಾರೆ. 1956ರಲ್ಲಿ ನಾಗಾರ್ಜುನ ಫಸ್ಟ್ ಸ್ಟೇಜ್ ಪ್ರಾರಂಭವಾದ ಮೇಲೆ ನಾವು ಇಲ್ಲಿಂದಲೇ ಪ್ರೊಟೆಸ್ಟ್ ಪ್ರಾರಂಭ ಮಾಡಿದ್ದೆವು. ನೀವು ಈಗ ಅದನ್ನು ಕಟ್ಟುವುದು ತಪ್ಪಾಗುತ್ತದೆಂದು ಸಹ ನಾವು ಹೇಳಿದ್ದೆವು. ಅಲ್ಲಿನ ನೀರಿನಲ್ಲಿ ನಮಗೇನು ಪಾಲು ಬರಬೇಕೋ ಅದನ್ನು ಮೊದಲು ನಿರ್ಣಯಮಾಡಿ ಎಂದು ಹೇಳಿದ್ದೆವು. ಅವರಿಗೇನು ಆ ಬಗ್ಗೆ ಸಿಕ್ಕಬೇಕೋ ಅದನ್ನು ತೆಗೆದುಕೊಳ್ಳಲಿ ಎಂದು ಒಂದು ತೀರ್ಮಾನ ಮಾಡಿದ್ದೆವು. ಈಗ ನಾಗಾರ್ಜುನ ಫಸ್ಟ್ ಸ್ಟೇಜ್ ಕಟ್ಟಲಿ ಅಥವಾ 100 ಸ್ಟೇಜುಗಳನ್ನು ಕಟ್ಟಲಿ. ಆ ಸಂದರ್ಭದಲ್ಲಿ ಪ್ರೊಟೆಸ್ಟೇನೋ ಮಾಡುತ್ತೇವೆ. ಆದರೆ ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ಆ ಬಗ್ಗೆ ಇನ್ವೆಸ್ಟಿಗೇಷನ್ ಮಾಡಿದ್ದೇನೆ. ಅಲ್ಲಿ 264 ಟಿ.ಎಂ.ಸಿ. ಅಡಿಗಳಷ್ಟು ನೀರಿದೆ. ಇನ್ನು ಫಸ್ಟ್ ಸ್ಟೇಜನ್ನೇ ಕಟ್ಟುತ್ತಾ ಇಲ್ಲ ಎಂಬುದಾಗಿ ಅಂಕಿ ಅಂಶಗಳನ್ನು ಕೊಟ್ಟರು. ಪಿ.ಡಬ್ಲ್ಯು.ಡಿ. ಮಂತ್ರಿಗಳು ಹೋಗಿ ನೋಡಿದಾಗ ಅದು 1745 ಟಿ.ಎಂ.ಸಿ. ಅಡಿ ಎಂಬುದಾಗಿ ತಿಳಿದು ಬಂದಿದೆ. ಜಸ್ಲಾ ಕಮಿಟಿಯವರ ವರದಿ ಪ್ರಕಾರ ಶೇ. 86ರಷ್ಟು dependability ಇದೆ ಎಂದು ಹೇಳಿದೆ. ಆದ್ದರಿಂದ total yield ಕೃಷ್ಣಾ ಬೇಸಿನ್ನಿನಲ್ಲಿ 1745 ಟಿ.ಎಂ.ಸಿ. ಅಡಿಗಳಷ್ಟು ನೀರಿದೆಯೆಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದ ವಾದ ಮೊದಲಿನಿಂದಲೂ ಏನಿದೆಯೆಂದರೆ 1951ರಲ್ಲಿ ಯಾವ ಬೇಸಿಸ್ ಮೇಲೆ ಇದರ ಈಲ್ಡನ್ನು ಲೆಖ್ಖ ಹಾಕಿದ್ದಾರೋ ಅದು ತಪ್ಪು ಎಂದಿದೆ. ಅಲ್ಲಿ ನೀರು ಈಗ ಹೆಚ್ಚಿದೆಯೆಂದೇ ಮೊದಲಿನಿಂದಲೂ ನಾವು ವಾದ ಮಾಡುತ್ತಿದ್ದೇವೆ. ಈಗ ಏನೋ ಅವರೇಜ್ ಈಲ್ಡ್ ಇದೆಯೆಂದು ಒಂದು ಅಂದಾಜು ಹೇಳುತ್ತಿದ್ದೇವೆ. ಅಲ್ಲಿ ಶೇ 75ರಷ್ಟು dependability ಪ್ರಕಾರ 2,150 ಟಿ.ಎಂ.ಸಿ. ಅಡಿಗಳಷ್ಟು ನೀರು ಈಗ ಲೆಖ್ಖ ಉಳಿದಿರುವುದು. After deduction 173 ಟಿ.ಎಂ.ಸಿ. ಅಡಿಗಳಷ್ಟು ಮೊದಲನೆಯ ಮತ್ತು ಎರಡನೆ ಪಂಚವಾರ್ಷಿಕ ಯೋಜನೆಗಳ ಕಮಿಟ್‌ಮೆಂಟನ್ನು ಎಲ್ಲಾ ಸೇರಿಸಿದರೂ; 173 ಟಿ.ಎಂ.ಸಿ. ಅಡಿಗಳಷ್ಟು ನೀರು ಈಗ ಇರತಕ್ಕದ್ದು. ಇವತ್ತು ನಾವು ಕೇಂದ್ರದೊಡನೆ ಈ ಬಗ್ಗೆ ವ್ಯವಹಾರ ಮಾಡಬೇಕಾದರೂ ಕೇವಲ 173 ಟಿ.ಎಂ.ಸಿ. ಅಡಿಗಳಷ್ಟು ನೀರಿನ ವ್ಯವಹಾರ ಎಂಬುದಾಗಿ ನಾವು ಮನಗಾಣಬೇಕು. ಅಂಥಾದ್ದನ್ನು ಒಪ್ಪಿಕೊಳ್ಳತಕ್ಕದ್ದು ಬಹಳ ಘಾತುಕವಾಗುತ್ತದೆ. ಹಿಂದೆ 173 ಟಿ.ಎಂ.ಸಿ. ಅಡಿಗಳಷ್ಟು ಮಾತ್ರ ನೀರು ಇತ್ತೆಂದು ಹೇಳುತ್ತಿದ್ದರು. ಆಂಧ್ರದವರು ಹಿಂದೆ ಏನು ಹೇಳುತ್ತಿದ್ದರೋ ಅದನ್ನು ಈಗ ಹೇಳುತ್ತಿಲ್ಲ. 200-250 ಟಿ.ಎಂ.ಸಿ. ಅಡಿಗಳಷ್ಟು ನೀರನ್ನು ನಾವು ತೆಗೆದುಕೊಳ್ಳುತ್ತೇವೆ ನೀವು 50-50 ರಂತೆ ತೆಗೆದುಕೊಳ್ಳಿ ಎಂದು ನಮಗೆ ಹೇಳುತ್ತಾರೆ. ಆಂಧ್ರದವರು ಏತಕ್ಕೆ ಕಡಿಮೆ ತೋರಿಸುತ್ತಾರೋ ನಮಗೆ ಅರ್ಥವಾಗುತ್ತಿಲ್ಲ. ಹಿಂದೆ ಆಂಧ್ರದವರು 1745 ಟಿ.ಎಂ.ಸಿ. ಅಡಿಗಳಷ್ಟು ನೀರಿದೆ ಎಂದು ಹೇಳಿದ್ದರೆ, ಈಗ ಕೇವಲ 1200 ಟಿ.ಎಂ.ಸಿ. ಅಡಿಗಳಷ್ಟು ನೀರು ಮಾತ್ರ ಇದೆಯೆಂದು ಹೇಳುತ್ತಿದ್ದಾರೆ ನಾವು ನಮ್ಮ dependability ಎಷ್ಟೋ ಅಷ್ಟನ್ನು ಖಂಡಿತವಾಗಿ ತೆಗೆದುಕೊಳ್ಳುತ್ತೇವೆ. ಆಂಧ್ರದವರು ಏತಕ್ಕೆ ಈರೀತಿ ಹೇಳುತ್ತಿದ್ದಾರೋ ಗೊತ್ತಿಲ್ಲ. ಅವರೇನೋ lower level ನಲ್ಲಿದ್ದಾರೆ. ಸ್ವಲ್ಪ ಕಡಿಮೆ ತೋರಿಸುತ್ತಾರೆ. ಇದರಿಂದ ಈಗ ಅವರು ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಳ್ಳೋಣವೆಂದು ಹೇಳುತ್ತಾರೆ. ಈಗ ಇರುವುದು ಕೇವಲ 1250 ಟಿ.ಎಂ.ಸಿ. ಅಡಿಗಳಷ್ಟು ನೀರು ಇದರಲ್ಲಿ ಎಷ್ಟೋ ಮಿಸಲೇನಿಯಸ್ ಐಟಂಗಳನ್ನು ಇಟ್ಟಿದ್ದಾರೆ, impracticable ಎಲ್ಲಾ ತೆಗೆದು ಹಾಕಿದಮೇಲೆ ಉಳಿಕೆಯಾಗಿರುವುದನ್ನು ಹಂಚಿಕೊಳ್ಳೋಣವೆಂದು ಹೇಳುತ್ತಾರೆ. ನಮ್ಮಲ್ಲಿ ಯೋಗ್ಯತೆ ಇಲ್ಲವೆಂದಲ್ಲ, impractical data ಏನಾದರೂ ನೀರು ಉಪಯೋಗ ಮಾಡಿಕೊಳ್ಳುವ ಹಾಗಿಲ್ಲ. ತಾನೇ ಹರಿದು ಹೋಗುತ್ತದೆ ಅವರಿಗೆ ನೀರು ಉಪಯೋಗಿಸಲಿಕ್ಕೆ ಸಾಧ್ಯವಿಲ್ಲದೇ ಇದ್ದರೆ ನಮಗೆ ಬರಬೇಕಾದ ಪಾಲಿಗೆ ಏನೂ ನಾವು ಭಯಪಡಬೇಕಾಗಿಲ್ಲ. ಅವರ ಪಾಲಿಗೆ

ಅವರು ಭಯಪಡಬೇಕಾಗಿಲ್ಲ. ತಾನಾಗಿಯೇ ನೀರು ಹರಿದು ಹೋಗುವಾಗ ಅದನ್ನು ಸರಿಸಮ ನಾಗಿ ಹಂಚಿಕೊಳ್ಳಬೇಕಾದುದು ಈಗ ಇರತಕ್ಕ ಪ್ರಶ್ನೆ. ಆಂಧ್ರದವರು ಹೆಚ್ಚು ಲಾಭ ಇದರಿಂದ ತೆಗೆದುಕೊಳ್ಳುತ್ತಾರೆ. ಆದರೆ ಅವರು ಹೇಳಿದಷ್ಟು ನಾವು ಒಪ್ಪಿಕೊಂಡರೆ ಅದರ ಪರಿಣಾಮ ಏನು ಆಗುತ್ತದೆಂದರೆ 173 ಟಿ ಎಂ.ಸಿ. ಅಡಿಗಳಷ್ಟು ನೀರಿನ ಬಗ್ಗೆ ಮಾತ್ರ ನಾವು ವ್ಯವಹಾರ ನಡೆಸಬೇಕಾ ಗುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—ನಾನು ಒಂದೇ ಹೇಳಲಿಲ್ಲ. ಎರಡನ್ನೂ ಹೇಳಿದ್ದೇನೆ. ನಾವು ಅಲ್ಲಿ ಕೊಟ್ಟ ಸ್ಟೇಟ್‌ಮೆಂಟನ್ನು ಸಹ ಹೇಳಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಕೆಲವು ಜನ ಏನು ಹೇಳುತ್ತಾರೆಂದರೆ ಈ ಪ್ರಶ್ನೆಯನ್ನು ತಿಳಿದು ಕೊಳ್ಳುವುದಕ್ಕೆ ಪ್ರಯತ್ನ ಮಾಡೋಣವೆಂದು ಹೇಳಿ, ಅದರಲ್ಲಿ ಇಷ್ಟೇ ನೀರು ಇದೆಯೆಂಬುದನ್ನು ಮೊದಲು ತಿಳಿದುಕೊಂಡು ಅನಂತರ ನಾಗಾರ್ಜುನ ಸಾಗರ ಫಸ್ಟ್ ಸ್ಟೇಜನ್ನು ಒಪ್ಪಿಕೊಳ್ಳೋಣ ಎಂದು ಹೇಳುತ್ತಾರೆ. ನಾವು ಈ ಬಗ್ಗೆ ಕೇಂದ್ರ ಸರಕಾರಕ್ಕೆ ಸಲಹೆ ಮಾಡಬೇಕೇ ಹೊರತು ವಿರೋಧಮಾಡುವ ಅಧಿಕಾರವಿಲ್ಲ, ಇವೆರಡೂ ನಾವು ಒಪ್ಪಿಕೊಳ್ಳುವ ಹಾಗಿಲ್ಲ ಎಂಬುದಾಗಿ ನಾವು ಈಗಾಗಲೇ ಕೇಂದ್ರ ಸರಕಾರಕ್ಕೆ ವರದಿ ಮಾಡಿದ್ದೇವೆ. ಏನೇ ಆಗಲೀ ನಮ್ಮ ಭಾಗ 264 ಟಿ.ಎಂ.ಸಿ. ಅಡಿಗಳಷ್ಟು ನೀರು ಅವರು ಬಿಡಬೇಕು. ನಾಗಾರ್ಜುನ ಸಾಗರದಿಂದ ಫೀಡ್ ಮಾಡುವುದಕ್ಕೆ ಎಷ್ಟು ನೀರು ಬಿಡಬೇಕೋ ಅಷ್ಟು ನೀರು ಬಿಡದೇ ಹೋದರೆ, ಎಲ್ಲಾ ನೀರು ಶ್ರೀಶೈಲ ಒಳಗೆ ಹೋಗುತ್ತದೆ. ನಿಮ್ಮನ್ನು ನಾವು ಅಷ್ಟು ಬೇಡುತ್ತಿಲ್ಲವೆಂದು ಹೇಳಿದರೆ ನಮಗೆ 30 ಟಿ.ಎಂ.ಸಿ. ಅಡಿಗಳಷ್ಟು ನೀರನ್ನು ಅದಕ್ಕೋಸ್ಕರ ಬಿಡಿ ಎಂದು ಹೇಳುತ್ತಾರೆ. 264 ಟಿ.ಎಂ.ಸಿ. ಅಡಿಗಳಷ್ಟು ನೀರು ನಮಗೆ riparian rights ಮೇಲೆ ಇದೆ. ಆದ್ದರಿಂದ ನಾಗಾರ್ಜುನ-ಶ್ರೀಶೈಲಂ ಬಾಗದೊಳಗೆ 30-40 ಟಿ.ಎಂ.ಸಿ. ಅಡಿಗಳಷ್ಟು ನೀರು ನಮಗೆ ಸಿಗುತ್ತದೆ. ನೀವು ಇದಕ್ಕೆ yes ಎಂದು ಹೇಳಿ ಎಂಬುದಾಗಿ ನಮಗೆ ಹೇಳುತ್ತಿದ್ದಾರೆ. ಈರೀತಿ ಹೇಳಿದಾಗ ಕೇಂದ್ರದವರು ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯ ವಿಲ್ಲವೆಂದು ಹೇಳಿದರು. ಇದು ಕಟ್ ಆಯಿತು ಎಂಬುದಾಗಿ ಹೇಳಿದರು. ನಿಮ್ಮ ಜವಾಬ್ದಾರಿಯಿಂದ ನೀವೇನಾದರೂ ಅನುಮತಿಯನ್ನು ಅದಕ್ಕೆ ಕೊಟ್ಟಿದ್ದರೆ ನೀರು ಒದಗಿಸಿಕೊಳ್ಳುವುದು ನಿಮ್ಮ ಕರ್ತವ್ಯವೇ ಎಂದು ಹೇಳಿದರು. ಈಗಾಗಲೇ ಗೋದಾವರಿ ನದಿಯ ಪಾತ್ರದಲ್ಲಿ ಒಂದು ಸಾವಿರ ಟಿ.ಎಂ.ಸಿ. ಅಡಿಗಳಷ್ಟು ಸರ್ಪ್ಲಸ್ಸಾಗಿ ನೀರು ಇರುವುದು ಎಂಬುದಾಗಿ ಅಂದಾಜು ಇದೆ. ಅದನ್ನು ಈಗ ಡೈವರ್ಟ್‌ಮಾಡಿ ನಾಗಾರ್ಜುನ ಸಾಗರದ ಫಸ್ಟ್‌ಸ್ಟೇಜ್ ಕೆಳಗೆ ಎಷ್ಟು ಕಮ್ಯಾಂಡ್ ಏರಿಯಾ ಇದೆ ಎಂಬುದನ್ನು ನೋಡಿ ಶೇ. 50ರಷ್ಟು ಹಂಚಿಕೆ ಮಾಡುವುದಕ್ಕೆ ಸಾಧ್ಯವೆಂದು ಹೇಳಿದ್ದಾರೆ. ಅನೇಕ ಜನ ಇಂಜಿನಿಯರುಗಳು ಕೂಡ ಆರೀತಿ ಅಭಿಪ್ರಾಯ ಪಟ್ಟಿದ್ದಾರೆ. ನಾನು ಹೇಳುವುದೇ ನೆಂದರೆ ಒಂದು ಸಾವಿರ ಟಿ.ಎಂ.ಸಿ. ಅಡಿಗಳಷ್ಟು ನೀರು ಗೋದಾವರಿಯಲ್ಲಿ ಇರಬಹುದೆಂದು ನಮ್ಮ ಅಂದಾಜು ಇದೆ. ನೀವು ಫಸ್ಟ್ ಸ್ಟೇಜ್, ಸೆಕೆಂಡ್ ಸ್ಟೇಜ್, ಮೂರನೆಯ ಸ್ಟೇಜ್‌ಗಳನ್ನು ಫೀಡ್ ಮಾಡಿ ಎಂದು ಅವರಿಗೆ ಈಗಾಗಲೇ ಹೇಳಿದ್ದಾರೆ. ಅದಲ್ಲದೆ ಶ್ರೀಶೈಲಂ ಯೋಜನೆಯನ್ನು ಕಟ್ಟ ಬೇಕೆಂದು ಈಗಾಗಲೇ ಯೋಚನೆ ಮಾಡಿದ್ದಾರೆ. ಅಲ್ಲಿ 263 ಟಿ.ಎಂ.ಸಿ. ಅಡಿಗಳಷ್ಟು ನೀರು ಬಹುಶಃ ಇರಬಹುದು. ಅದರಲ್ಲಿ 30-40 ಟಿ.ಎಂ.ಸಿ. ಅಡಿಗಳಷ್ಟು ನೀರು ಕೊಡಬೇಕೆಂದು ಹೇಳಿ ಸುಮಾರು 3 ಲಕ್ಷ 30 ಸಾವಿರ ಕಿಲೋವಾಟ್ಸ್ ಪವರನ್ನು generate ಮಾಡಬೇಕೆಂದು ಹೇಳಿದ್ದಾರೆ. ಬಹಳ ಜನ ಸುಮಾರು 3 ಲಕ್ಷ ಪವರ್ ಜನರೇಟ್ ಮಾಡಬೇಕೆಂದು ಬಹಳ ಲಘುವಾಗಿ ಹೇಳಿದರು. ನಾನು ಹೇಳುವುದಿಷ್ಟೆ ದೇಶಕ್ಕೆ ಇವತ್ತು ಮುಖ್ಯವಾಗಿ ಬೇಕಾಗಿರುವುದು ನೀರು, ಇವತ್ತಿನ ದಿವಸ ನೀರು, ಪವರ್ ಇಲ್ಲದೆ ಯಾವ ನಾಡು, ಅಥವ ರಾಜ್ಯ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಇವತ್ತು 275 ಅಥವಾ 300 ಟಿ.ಎಂ.ಸಿ. ಅಡಿಗಳಷ್ಟು ನೀರಿನಿಂದ ಕೇವಲ 3 ಲಕ್ಷ 30 ಸಾವಿರ ಕಿಲೋವಾಟ್ಸ್ ಪವರನ್ನು ಜನರೇಟ್ ಮಾಡಬೇಕಾಗಿದೆ. ಇದರಲ್ಲಿ ಪವರ್ ಪೊಟೆನ್ಷಿಯಲ್ ಎಷ್ಟು ಬರುತ್ತದೆ ಎಂಬ ಬಗ್ಗೆ ವಿವರಗಳನ್ನು ತಿಳಿಯಬೇಕಾಗಿದೆ. ಅವರು ಅದಕ್ಕಾಗಿ ಏನು ಖರ್ಚು ಮಾಡ ಬೇಕೋ ಅದನ್ನು ಈಗಾಗಲೇ ಮಾಡುತ್ತಿದ್ದಾರೆ. ನಮ್ಮಲ್ಲಿ 5 million Killowatts of Power generate ಮಾಡುವುದಕ್ಕೆ ಅವಕಾಶವಿದೆ ಆದರೆ ಎಲ್ಲವನ್ನೂ ತೆಗೆದುಕೊಳ್ಳುವುದಕ್ಕೆ ಖಂಡಿತ ಸಾಧ್ಯವಿಲ್ಲ. ಇಲ್ಲಿನ ಒಂದು ಶರಾವತಿ ಯೋಜನೆಯನ್ನೇ ಇಷ್ಟೊಂದು ಖರ್ಚಾಗಿದ್ದರೂ ಇನ್ನೂ ಮುಗಿಸಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಅವರು ಖರ್ಚುಮಾಡುವ ಹಣವನ್ನು ನಮಗೆ ಕೊಟ್ಟು ಮತ್ತು royalty on water ಸಹ ನಮಗೆ ಕೊಟ್ಟರೆ, ಏನಾದರೂ across the table discuss ಮಾಡಿ ಒಂದು ಇತ್ಯರ್ಥಕ್ಕೆ ಬರಬಹುದು.

ಆದರೆ 'ಕೇಸ್ ವೀಕ್' ಆಗಿದೆ, ಅವರಿಂದ ನೀರನ್ನು ಳಿಸಿಕೊಳ್ಳಬೇಕೆಂಬ ಅಭಿಪ್ರಾಯವಿದ್ದರೆ ಅದು ತಪ್ಪು. Southern States ಗೆ grid ಬರುತ್ತದೆ ಎಂದು ಹೇಳುತ್ತಿದ್ದರು, ಈಗ ಕೇಂದ್ರ ಸರ್ಕಾರದವರು All India Grid ಮಾಡೋಣ ಎಂದು ಹೇಳುತ್ತಿದ್ದಾರೆ. ಆದರೆ, ವಿದ್ಯುಚ್ಛಕ್ತಿ

(ಶ್ರೀ ವೀರೇಂದ್ರ ಪಾಟೀಲ್)

ಯನ್ನು ತೆಗೆದುಕೊಂಡು ಹೋಗುವಂತೆ ನೀರನ್ನು ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಕೃಷ್ಣಾ ಬೇಸಿನ್‌ನಲ್ಲಿ ಸರಾಸರಿ ಶೇಕಡ 1.5 ರಷ್ಟು ನೀರಾವರಿ ಇದೆ. ಕ್ಷಾಮಪೀಡಿತ ಪ್ರದೇಶವಾದ ಬಿಜಾಪುರ ಜಿಲ್ಲೆಯಲ್ಲಿ ಲಕ್ಷಾಂತರ ರೂಪಾಯಿ ಒದಗಿಸಿದರೂ, ನೀರಿನ ಅಭಾವದಿಂದ ಪ್ರಯೋಜನವಾಗುತ್ತಿಲ್ಲ. ಅಲ್ಲಿ ಜನರಿಗೆ ತಿನ್ನುವುದಕ್ಕೆ ಕಾಳಿಲ್ಲ, ಬೇರೆ ಉದ್ಯೋಗವಿಲ್ಲ. ಅದನ್ನು ನಾವು ಕಲ್ಪಿಸಬೇಕು. ಎಷ್ಟು ದಿವಸ ಅವರು ಹೀಗೆ ಕಷ್ಟ ಪರಿಸ್ಥಿತಿಯಲ್ಲಿರುವುದು ? ದೇಶದಲ್ಲಿ ಏನಾದರೂ ಕಷ್ಟದ ಪ್ರಸಂಗ ಬಂದಾಗ ನಾವೆಲ್ಲರೂ ಸೇರಬೇಕೆಂದೂ ಒಗ್ಗಟ್ಟಾಗಿರಬೇಕೆಂದೂ ಮುಖ್ಯ ಮಂತ್ರಿಗಳು ಹೇಳಿರಬಹುದು. ಅದನ್ನು ತಪ್ಪಾಗಿ ತಿಳಿಯಬಾರದು. ಮದರಾಸಿಗೆ ಕುಡಿಯುವ ನೀರನ್ನು ಕೊಡುತ್ತೇವೆ ಎಂದು ಹೇಳಿದರೆ ಅದೇ ಒಂದು ದೊಡ್ಡ ತಪ್ಪೆಂದು ಹೇಳುವುದು ಸರಿಯಲ್ಲ. ಅವರಿಗೆ 15 T.M.C. ft. ಯಷ್ಟು ನೀರನ್ನು ಕೊಟ್ಟರೆ ಮೂರು ರಾಜ್ಯಗಳೂ ಐದೈದು T.M.C. ft. ಬಿಟ್ಟು ಕೊಡಬೇಕಾಗುತ್ತದೆ......

ಶ್ರೀ ಅಣ್ಣಾರಾವ್ ಗಣಮುಖಿ.—ಮುಖ್ಯ ಮಂತ್ರಿಗಳು ಹಾಗೆ ಹೇಳಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಕುಡಿಯುವುದಕ್ಕೆ ನೀರು ಬೇಕೆಂದು ಕೇಳುತ್ತಿದ್ದಾರೆ, ಅದನ್ನು ಕೊಡುವುದಿಲ್ಲ ಎಂದು ಹೇಳಬೇಕೆ ? ಐದು, ಹತ್ತು, ಹದಿನೈದು T.M.C. ft. ಎನ್ನುವುದು ಬೇರೆ ವಿಷಯ. ನಮಗೆ 1053 T.M.C. ft. ಯಷ್ಟು ನೀರು ಬರಬೇಕು. ಇದರಲ್ಲಿ 5 T.M.C. ft. ಕಡಮೆಯಾಗಬಹುದು. ನಾವು ಕಾವೇರಿಯಿಂದ ಇಲ್ಲಿಗೆ ಕುಡಿಯುವ ನೀರನ್ನು ತರಬೇಕೆಂದು ವಿಚಾರ ಮಾಡುತ್ತಿದ್ದೇವೆ. Long range ಯೋಜನೆಯನ್ನು ತಯಾರುಮಾಡುತ್ತಿದ್ದೇವೆ; ಅವರೇನೂ ಇದಕ್ಕೆ ವಿರೋಧ ಮಾಡಿಲ್ಲ. 1924ನೆಯ ಇಸವಿಯ ಕಾವೇರಿ ನೀರಿನ ಒಪ್ಪಂದದ ಪ್ರಕಾರ ನಮ್ಮನ್ನು ಕೇಳದೆ ಮಾಡುತ್ತಿದ್ದಾರೆಂದು ಅವರು ಹೇಳಬಹುದು. ಹೀಗಿರುವಾಗ ಕುಡಿಯುವುದಕ್ಕೆ ನೀರು ಬೇಕೆಂದರೆ, ಕೊಡುವುದಿಲ್ಲ ಎಂದು ಹೇಳಬಾರದು, ದೇಶವೆಲ್ಲ ಒಂದು ಎಂದು ಹೇಳುತ್ತಿರುವಾಗ......

ಶ್ರೀ ಅಣ್ಣಾರಾವ್ ಗಣಮುಖಿ.—ಕೃಷ್ಣಾ-ಪೆನ್ನಾರ್ ಯೋಜನೆ ಮದರಾಸಿಗೆ ಹತ್ತಿರವಿರುವಾಗ ನಮ್ಮನ್ನೇಕೆ ಕೇಳುತ್ತಾರೆ ?

ಶ್ರೀ ವೀರೇಂದ್ರ ಪಾಟೀಲ್.—ಕೃಷ್ಣಾದಿಂದ ನೀರು ಬರಬೇಕಾದರೆ, ಶ್ರೀಶೈಲದಲ್ಲಿ ನೀರು ಬಂದು, ಸಂಗಮೇಶ್ವರದ ನಾಲೆಯಿಂದ ಪೆನ್ನಾರ್‌ಗೆ ತರಬೇಕಾಗುತ್ತದೆ. ಹೀಗಿರುವಾಗ ಅವರು ಹೇಗೆ ನೀರನ್ನು ಅಲ್ಲಿಂದ ತೆಗೆದುಕೊಳ್ಳುತ್ತಾರೆಂದು ವಿಚಾರ ಮಾಡಬೇಕು.

ಶ್ರೀ ಅಣ್ಣಾರಾವ್ ಗಣಮುಖಿ.—ಪೆನ್ನಾರ್‌ನಲ್ಲಿ 68 T.M.C. ft. ನೀರಿದೆ, ಅದನ್ನು ಬಿಟ್ಟು ಇಲ್ಲಿಗೆ ಏಕೆ ಕೈ ಹಾಕಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಇದರ ನೆಪದಲ್ಲಿ ನೀರಾವರಿಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ನಿಮ್ಮ ಸಂದೇಹ. ಈ ಹೊತ್ತು ನಮ್ಮ ಡ್ಯಾಮ್‌ಗಳನ್ನು ಆಂಧ್ರದ ಬಾರ್ಡರ್ ಮೇಲೆ ಕಟ್ಟಿಲ್ಲ. ಡ್ಯಾಮ್ ಕೆಳಗಿರುವ ನೀರನ್ನು ನಾವು ಉಪಯೋಗ ಮಾಡುವುದಿಲ್ಲ, ಅದು ಹರಿದುಕೊಂಡು ಹೋಗುತ್ತದೆ. ಡ್ಯಾಮ್‌ನಲ್ಲಿರುವ ನೀರನ್ನು ಉಪಯೋಗ ಮಾಡಬಹುದು; ನಮ್ಮ ಡ್ಯಾಮ್ಸ್ ನಮ್ಮ ರಾಜ್ಯದೊಳಗೆ ಬರುತ್ತವೆ. ನಾವು ಎಷ್ಟು ಜಲಾಶಯ ಕಟ್ಟುತ್ತೇವೋ ಅಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ. Soil ಮೇಲೆ 5, 10, 15, 20ರ ವರೆಗೆ ಪರ್‌ಸೆಂಟ್ regeneration ಆಗುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—ನಾನು ಕೇಳುವುದು ಪೆನ್ನಾರ್‌ನಿಂದ ಅವರು ಏಕೆ ತೆಗೆದುಕೊಳ್ಳಲಿಲ್ಲ ಎಂದು.

ಶ್ರೀ ವೀರೇಂದ್ರ ಪಾಟೀಲ್.—ಎಲ್ಲವನ್ನೂ ವಿಚಾರ ಮಾಡಬೇಕಾಗಿದೆ; ಗೋದಾವರಿಯಿಂದ ತೆಗೆದುಕೊಳ್ಳಿ ಎಂದು ನಾವೂ ಹೇಳುತ್ತಿದ್ದೇವೆ.

ಶ್ರೀ ಜಿ. ವಿ. ಗೌಡ.—ಯಾವ ಪಾಯಿಂಟ್‌ನಿಂದ 15 T.M.C. ft. ನೀರನ್ನು ಕೃಷ್ಣಾ ನದಿಯಿಂದ ತೆಗೆದುಕೊಳ್ಳಬೇಕೆಂದು ಅಭಿಪ್ರಾಯವಿದೆ ? ಶ್ರೀ ಶೈಲದಿಂದ ತೆಗೆದುಕೊಳ್ಳಬೇಕಾದರೆ, ಆ ಯೋಜನೆ ಆಗಬೇಕು. ಅದಕ್ಕೆ ಶ್ರೀ ಶೈಲಂ, ನಾಗಾರ್ಜುನ ಯೋಜನೆಗಳಿಗೆ ನಮ್ಮನ್ನು commit ಮಾಡುವುದಕ್ಕೆ ಹೀಗೆ ಮಾಡುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—Regenerationನಿಂದ ನೀರು ಬಂದರೆ ಅದರಲ್ಲಿ 15 TMC ft. ತೆಗೆದುಕೊಳ್ಳಿ ಎಂದು ಹೇಳಬಹುದು.

Sri G. V. GOWDA.—The implication is that we are indirectly recognising those two projects.

Sri GANJI VEERAPPA (Harihar).—Is it after diversion of Godavari waters to Krishna that we are taking 15 TMC ft.

ಶ್ರೀ ವೀರೇಂದ್ರ ಪಾಟೀಲ್.—ಕುಡಿಯುವ ನೀರಿಗೆ ನಾವು ಅಡ್ಡ ಬರುವ ಹಾಗಿಲ್ಲ. ನಾಗಾರ್ಜುನ ಅಚ್ಚುಕಟ್ಟು ಪ್ರದೇಶವನ್ನು ಶೇಕಡ 50 ರಷ್ಟು ಕಡಮೆ ಮಾಡಿ ಎಂದು ಹೇಳಿದರೆ, ಇದರಿಂದ ಎಷ್ಟು ನೀರು ಬರುತ್ತದೆಂದು ವಿಚಾರ ಮಾಡಬೇಕಾಗಿದೆ.

ಶ್ರೀ ಪಿ. ಎಂ. ದೇವ್.—ನೀವು ಪರೋಕ್ಷವಾಗಿ ಒಪ್ಪಿಕೊಳ್ಳಲೆಂದು ಹೀಗೆ ಮಾಡುತ್ತಿದ್ದಾರೆಂದು ಅವರು ಹೇಳಿದುದು. 15 TMC ft. ನೀರನ್ನು ಕೊಡಲಿ ಅಥವಾ ಬಿಡಲಿ ಆ ಪ್ರಶ್ನೆಯಿಲ್ಲ.

Mr. SPEAKER.—The matter is still in process. The Hon'ble Member has given him sufficient illumination on the point. He will look after it. If there is time, he will clarify it further.

ಶ್ರೀ ವೀರೇಂದ್ರ ಪಾಟೀಲ್.—ಪೆನ್ನಾರ್‌ನಿಂದ ನೀರು ಕೊಟ್ಟರೆ ತೆಗೆದುಕೊಳ್ಳಬಹುದು. ಅವರು ಸೋಮಶಿಲ ಡ್ಯಾಮ್ ಮಾಡಬೇಕೆಂದಿದ್ದಾರೆ. ಯಾವ ಪಾಯಿಂಟಿನಿಂದ ಈ 15 TMC ft. ನೀರನ್ನು ತೆಗೆದುಕೊಳ್ಳುವುದು ಎಂದು ನಾವೂ ಹೇಳಿಲ್ಲ, ಅವರೂ ಕೇಳಲಿಲ್ಲ. ಕುಡಿಯುವ ನೀರಿಗೆ ಅಡ್ಡಿಯಿಲ್ಲವೆಂದು ಮಾತ್ರ ಹೇಳಿದೆ.

Sri GANJI VEERAPPA.—Is it not after diversion of water of Godavari to Krishna that this point will arise?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಕೃಷ್ಣಾ ನೀರಿನ ಬಗ್ಗೆ ನಮ್ಮ ನಿಲುವು ಏನಿದೆ ಎನ್ನುವುದನ್ನು ನನ್ನಿಂದ ಸಾಧ್ಯವಾದಷ್ಟು ತಿಳಿಸಿದ್ದೇನೆ.

ಎರಡನೆಯದಾಗಿ, ಹಾರಂಗಿ, ಕಂಬದಕಡ ಯೋಜನೆಗಳ ಬಗ್ಗೆ ಬಹಳ ಚರ್ಚೆಯಾಗಿದೆ. ಹಿಂದೆ ಈ ಸಂಬಂಧವಾಗಿ ಅನೇಕ ಪ್ರಶ್ನೆಗಳೂ ಬಂದಿದ್ದವು. ಈಗಿನ ಸರ್ಕಾರ ಬಂದ ಮೇಲೆ ಹಿಂದೆ ಮಾಡಿದುದನ್ನು ಬುಡಮೇಲು ಮಾಡಿದ್ದಾರೋ ಏನೋ ಎನ್ನುವ ರೀತಿ ಕೆಲವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಸ್ವಲ್ಪ ಹೇಳುವುದು ಬಹಳ ಅಗತ್ಯ. ಹಾರಂಗಿ, ಕಂಬದಕಡ ಯೋಜನೆಗಳ ಬಗ್ಗೆ ನಾವು, ಎಂದರೆ, ಈಗಿನ ಮಂತ್ರಿಮಂಡಲ ಅಥವಾ ಕಂಠಿಯವರ ಮಂತ್ರಿ ಮಂಡಲ ಬಂದ ಮೇಲೆ, ಅದರಲ್ಲಿ ಒಂದು ಕಾಮಾ ಕೂಡ ವ್ಯತ್ಯಾಸ ಮಾಡಿಲ್ಲ. ಈ ಎರಡೂ ಯೋಜನೆಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಪ್ರಶ್ನೆಯಲ್ಲಿ ಈಗಿನ ಸರ್ಕಾರ ಯಾವ ರೀತಿಯ ಹಸ್ತಕ್ಷೇಪವನ್ನೂ ಮಾಡಿಲ್ಲ. ಜೂನ್ 1961ರಲ್ಲಿ ಕೊಡಗಿನ ಜನ ಬೇಕಾದಷ್ಟು ಕಾಫಿ, ಮೆಣಸು ಮತ್ತು ಏಲಕ್ಕಿ ಬೆಳೆದಿರುವ ಪ್ರದೇಶ ಮುಳುಗಡೆಯಾಗುತ್ತದೆ ಎಂದು ಇಲ್ಲಿಗೂ ಕೇಂದ್ರ ಸರ್ಕಾರಕ್ಕೂ ಬರೆದರು. ಕೇಂದ್ರದ ನಾಯಕರೂ, Central Water and Power Commission ನವರೂ ಕಾಫಿ, ಏಲಕ್ಕಿ ಪ್ಲಾಂಟೇಷನ್‌ಗಳು ಮುಳುಗಡೆಯಾಗುವುದನ್ನು ಆದಷ್ಟು ಕಡಮೆ ಮಾಡುವ ವಿಷಯವನ್ನು ಪರಿಶೀಲನೆ ಮಾಡಬೇಕೆಂದು ಸಲಹೆ ಹೇಳಿದರು. ಜೂನ್ 1961ರಲ್ಲಿ ನಿರ್ಣಯ ಮಾಡಿ ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಹಾಕಿದ್ದೆವು. ಆ ಮೇಲೆ ನೀವು ಯಾವ ರೀತಿ ಸಲಹೆ ಕೊಟ್ಟಿದ್ದೀರೋ ಅದನ್ನು ವಿಚಾರ ಮಾಡಿ ನಿರ್ಣಯ ಮಾಡಿದ್ದೇವೆಂದು ಜನವರಿ 1962ರಲ್ಲಿ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ.

ಶ್ರೀ ಹಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಹಾರಂಗಿ ಯೋಜನೆಯಿಂದ ನಷ್ಟವೇನೂ ಇಲ್ಲ. It is one of the most beneficial projects.

Mr. SPEAKER.—The matter is still under investigation. If the matter has not been concluded, as and when it is going to be conclude or will be concluded, it can be known.

ಶ್ರೀ ವೀರೇಂದ್ರ ಪಾಟೀಲ್.—ಪ್ಲಾಂಟೇಷನ್ ಪ್ರದೇಶ ಮುಳುಗಡೆಯಾಗುವುದನ್ನು ಕಡಿಮೆ ಮಾಡಲು ಸಾಧ್ಯವೆ, ಅದಕ್ಕೆ ತಕ್ಕಂತೆ ಈ ಪ್ರಾಜೆಕ್ಟ್ ನಿರ್ಮಿಸಲು ಸಾಧ್ಯವೆ ಎಂಬುದನ್ನು ತಿಳಿಸಬೇಕೆಂದು ಕೇಳಿದ್ದಾರೆ, ಪರಿಶೀಲಿಸುತ್ತಿದ್ದೇವೆ. ಆ ಕೆಲಸ ಪೂರ್ಣವಾಗುತ್ತಾ ಬಂದಿದೆ. ಚೀಫ್ ಇಂಜನಿಯರ ಆಫೀಸಿಗೆ ಪರಿಶೀಲನೆಯ ವರದಿ ಬಂದು ಸ್ಕ್ರೂಟಿನಿಯಾಗುತ್ತಿದೆ. ಆದಷ್ಟು ತೀವ್ರವಾಗಿ ಇದಕ್ಕೆ ಸಂಬಂಧಪಟ್ಟ ವಿವರವನ್ನು ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿಗೆ ಕಳುಹಿಸಿ ಅದರ ಅನುಮತಿ ಪಡೆಯಬೇಕೆಂದಿದ್ದೇವೆ.

6-30 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಮೂರನೆಯ ಪಂಚವಾರ್ಷಿಕಯೋಜನೆಯ ಸ್ಕೀಂ ನಂಬರು 32 ರಲ್ಲಿ ತಾವು ಹೇಳುವ ಹಾಗೆ ಇಲ್ಲ. ಟೆಕ್ನಿಕಲ್ ಕ್ಲಿಯರೆನ್ಸ್‌ಗೆ ಕಳುಹಿಸಿರುವುದಾಗಿ ಹೇಳಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ರೀತಿಯಿದೆ. The site proposed is Hardur village in Coorg district across Harangi river. The project is sent for technical clearance for C. W. P. C...... ಅಂದಮೇಲೆ ಫರ್ದರ್ ಇನ್‌ವೆಸ್ಟಿಗೇಷನ್ ಪ್ರಶ್ನೆ ಎಲ್ಲಿಂದ ಬರುತ್ತದೆ?

ಶ್ರೀ ವೀರೇಂದ್ರ ಪಾಟೀಲ್.—ಟೆಕ್ನಿಕಲ್ ಕ್ಲಿಯರೆನ್ಸ್‌ಗೆ ಕಳುಹಿಸಿದಮೇಲೆ ಆಲ್ಟರ್ನೇಟಿವ್ ಸಜೆಷನ್ ಕೊಟ್ಟು ಇನ್‌ವೆಸ್ಟಿಗೇಷನ್ ಮಾಡಿ ಎಂದು ಹೇಳಿದರು. ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿಲ್ಲ. ಕೇಂದ್ರದ ನಾಯಕರು ಕಾಫಿಪ್ಲಾಂಟೇಷನ್ ಮುಳುಗಡೆಯಾಗುವುದನ್ನು ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿದ್ದರಿಂದ ಹಾಗೆ ಮಾಡಲು ಜೂನ್ 1961 ರಲ್ಲಿ ನಿರ್ಣಯಮಾಡಿ ಕೇಂದ್ರಕ್ಕೆ ತಿಳಿಸಿದ್ದೇವೆ. ಅದರ ಪ್ರಕಾರ ಇನ್‌ವೆಸ್ಟಿಗೇಷನ್ ಆಗಿ ಮುಗಿಯುವ ಸ್ಟೇಜಿಗೆ ಬಂದಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಜೂನ್ 1961ರ ಡಿಸಿಷನ್ ಕ್ಯಾಬಿನೆಟ್ ತೆಗೆದುಕೊಂಡಿಲ್ಲವೆಂದು ಹೇಳಿದರು. ಹಾಗಾದರೆ ಪಬ್ಲಿಕ್‌ವರ್ಕ್ಸ್ ಇಲಾಖಾ ಮಂತ್ರಿಗಳು ತೆಗೆದುಕೊಂಡರೆ?

ಶ್ರೀ ವೀರೇಂದ್ರ ಪಾಟೀಲ್.—ಅವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಸರ್ಕಾರ ಒಂದು ನಿರ್ಣಯ ತೆಗೆದುಕೊಂಡಿದೆಯೆಂದು ಹೇಳಿದ ಮೇಲೆ, ಕ್ಯಾಬಿನೆಟ್ ಡಿಸಿಷನ್ ಆದರೆ ಅದು ಗವರ್ನಮೆಂಟ್ ಡಿಸಿಷನ್ ಅಲ್ಲದೆ ಬೇರೆ ಅಲ್ಲ.

ಇನ್ನೊಂದು ವಿಚಾರ: ಹಾರಂಗಿ ಪ್ರಾಜೆಕ್ಟ್ ವಿಚಾರ ಒಂದೇ ಸಮನೆ ಪ್ರಸ್ತಾಪಿಸಲ್ಪಡುತ್ತಿದೆ ಅದು ಮೊದಲು ಆಗಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಆದರೆ ಈ ದಿವಸ ನಮ್ಮ ಮುಂದಿರುವ ಪ್ರಶ್ನೆ 1924ರ ಒಪ್ಪಂದದ ಪ್ರಕಾರ ಆದಷ್ಟು ತೀವ್ರವಾಗಿ ಈ ನೀರಿನ ಉಪಯೋಗ ಯಾವ ರೀತಿ ಮಾಡಿಕೊಳ್ಳಬೇಕೆಂಬುದು. 1924ರ ಅಗ್ರಿಮೆಂಟ್‌ನಲ್ಲಿ ಸೇರಿರುವ ಷೆಡ್ಯೂಲ್ಡ್ ರಿವರ್ಸ್ ಮತ್ತು ಟ್ರಿಬ್ಯೂಟರೀಸ್‌ನಲ್ಲಿ ಹಾರಂಗಿ ಸೇರಿಲ್ಲ. ಹಾರಂಗಿ ನಮ್ಮ ಶೇಕಡ 100 ಆಸ್ತಿ. ಅದು ನಾನ್ ಷೆಡ್ಯೂಲ್ಡ್ ರಿವರ್. ಯಾವತ್ತು ಬೇಕಾದರೂ ಟ್ಯಾಪ್ ಮಾಡಬಹುದು, ಅವಸರವಿಲ್ಲ. ಕಂಬದಕಡ. ಷೆಡ್ಯೂಲ್ಡ್ ರಿವರ್. ಷೆಡ್ಯೂಲಿನಲ್ಲಿರುವ ನದಿಗಳನ್ನು ಒಪ್ಪಂದದ ಪ್ರಕಾರ ಟ್ಯಾಪ್ ಮಾಡಬೇಕು. ಇವತ್ತು ಆಗಿರುವ ಒಪ್ಪಂದದ ಪ್ರಕಾರ 1974ರ ಒಳಗಾಗಿ 45 T. M. C. ft. ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಅದಲ್ಲದೆ ಕೆಳಗೆ ಯಾವ ರೀತಿ ಉಪಯೋಗ ಮಾಡುತ್ತಾರೋ ಅದರ ಶೇಕಡ 60 ರಷ್ಟು ನಾವು ಉಪಯೋಗಿಸಬೇಕು. ಅದನ್ನು ಮಾಡುವಾಗ ಹಾರಂಗಿ ಪ್ರಾಜೆಕ್ಟ್ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಯಾವಾಗ ಬೇಕಾದರೂ ಅದನ್ನು ಟ್ಯಾಪ್ ಮಾಡಬಹುದು ಎಂದು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಈ ದಿವಸ ಅದನ್ನು ಕೈಬಿಡುತ್ತೇವೆಂದು ಹೇಳಿಲ್ಲ. ಇನ್‌ವೆಸ್ಟಿಗೇಷನ್ ಆಗಿದೆ, ಕೆಲವು ದಿವಸಗಳಲ್ಲೇ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿಗೆ ಕಳುಹಿಸಿ ಟೆಕ್ನಿಕಲ್ ಕ್ಲಿಯರೆನ್ಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಂ. ದೇವಯ್ಯ.—ಕಾವೇರಿ ನೀರನ್ನು 1974 ರೊಳಗಾಗಿ ತೆಗೆದುಕೊಳ್ಳದಿದ್ದರೆ ನಮ್ಮ ಹಕ್ಕು ಹೋಗುತ್ತದೆಂದು ಅದಕ್ಕೆ ಪ್ರಾಶಸ್ತ್ಯ ಕೊಟ್ಟು ಹಾರಂಗಿ ಪ್ರಾಜೆಕ್ಟನ್ನು ಹಿಂದಕ್ಕಿಡುವರೆಂಬ ಭಯ ನಮಗಿದೆ.

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಭಯ ಪಡಬೇಕಾಗಿಲ್ಲ. ಅದನ್ನು ಕೈಬಿಡುವುದಿಲ್ಲ. ಅದು ನಾನ್ ಷೆಡ್ಯೂಲ್ಡ್ ರಿವರ್, ಇನ್‌ವೆಸ್ಟಿಗೇಷನ್ ಆಗಿದೆ. ಸ್ವಲ್ಪ ದಿವಸಗಳಲ್ಲಿ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿಗೆ ಕಳುಹಿಸಿ ಟೆಕ್ನಿಕಲ್ ಕ್ಲಿಯರೆನ್ಸ್ ದೊರೆತಮೇಲೆ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದಮೇಲೆ ಸಂಶಯ ಪಡಲು ಅವಕಾಶವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹೇಮಾವತಿ ವಿಚಾರ ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಹೇಮಾವತಿ ಪ್ರಾಜೆಕ್ಟಿಗೆ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ಅನುಮತಿ ಕೇಳಿದಾಗ ಅವರು ಕೆಲವು ಕಾಮೆಂಟ್ಸ್ ಮಾಡಿದ್ದಾರೆ. ಅದಕ್ಕೆ ಜವಾಬು ಕೊಡಬೇಕು. ಇನ್‌ವೆಸ್ಟಿಗೇಷನ್ ಮಾಡಿ ಜವಾಬು ಬರೆಯುತ್ತೇವೆ. ಕೈಬಿಡುವುದಿಲ್ಲ, ಅದಕ್ಕೆ ತಕ್ಕ ಪ್ರಯತ್ನ ಮಾಡುತ್ತೇವೆ.

Sri D. M. SIDDIAH (Biligere).—Suvarnavati project is not included in the Third Five-Year Plan.

ಶ್ರೀ ವೀರೇಂದ್ರ ಪಾಟೀಲ್.—ಅದು ಮೂರನೆಯ ಯೋಜನೆಯಲ್ಲಿ ಸೇರಿಲ್ಲ. ಆದರೂ ಕೂಡ ಬಹಳ ಒಳ್ಳೆಯ ಪ್ರಾಜೆಕ್ಟ್, ರಿಟರ್ನ್ ಬರುತ್ತದೆ. ಟರ್ಮ್ಸ್ ಪ್ರಕಾರ ಅದನ್ನು ತೆಗೆದುಕೊಳ್ಳಲು ಯಾವಾಗಲೂ ಅಧಿಕಾರವಿದೆ. Plan is flexible. ಆದರೆ ನಮ್ಮ ಶಕ್ತಿ ಯಾವರೀತಿಯದೆ ಒಂದು ಪರಿಶೀಲಿಸಬೇಕಾಗಿದೆ. ಒಳ್ಳೆಯ ಪ್ರಾಜೆಕ್ಟ್, ರಿಟರ್ನ್ ಬರುತ್ತದೆ, ತೆಗೆದುಕೊಳ್ಳಬೇಕು ಎಂದು ರಾಚಯ್ಯನವರು ಒತ್ತಾಯವಾಗಿ ಹೇಳುತ್ತಿದ್ದಾರೆ; ಪರಿಶೀಲಿಸುತ್ತೇವೆ. ಅದೊಂದೇ ಅಲ್ಲ, ಕೆಲವು ಮೀಡಿಯಂ ಪ್ರಾಜೆಕ್ಟುಗಳು 'B' ಲಿಸ್ಟಿನಲ್ಲಿ ಸೇರಿವೆ. ಬೇಗ ಹೆಚ್ಚು ನೀರಾವರಿಗೆ ಅನುಕೂಲ ಮಾಡಬೇಕಾದ ಆವಶ್ಯಕತೆಯಿದೆ. ಅದಕ್ಕೆ ಹೆಚ್ಚು ಹಣ ಯಾವರೀತಿ ಒದಗಿಸಬೇಕೆಂದು ವಿಚಾರ ಮಾಡಿ ತೆಗೆದುಕೊಳ್ಳಬಹುದು ಕಷ್ಟವಿಲ್ಲ. ಇವನ್ನೆಲ್ಲಾ ತೆಗೆದುಕೊಳ್ಳಲು ಯಾವ ಅಡ್ಡಿಯೂ ಇಲ್ಲ, ಹಣದ ಅಡ್ಡಿ ಬರಬಹುದು.

ಶ್ರೀ ಸಿ. ಎಸ್. ಹುರ್ಕ್ಕೋಟಿ (ಮುಂದರಗಿ).—ಮಲಪ್ರಭ ಪ್ರಾಜೆಕ್ಟಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ದೊರೆಯುವ ವಿಚಾರ ಯಾವ ಹಂತದಲ್ಲಿದೆ?

ಶ್ರೀ ವೀರೇಂದ್ರ ಪಾಟೀಲ್.—ಅದರಿಂದ ಬಹುಶಃ 36—37 TMC ft. ನೀರನ್ನು ಉಪಯೋಗ ಮಾಡಬಹುದು. ಗುಲ್ಹಾಟಿ ಮಂಡಲಿಯ ವರದಿ ಬರಲೆಂಬ ಉದ್ದೇಶದಿಂದಲೋ ಏನೋ ನಿರ್ಣಯಮಾಡಲು ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ನವರು ಕಾಯುತ್ತಿದ್ದರು. ಇನ್ನೂ ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿಲ್ಲ ಕೇಂದ್ರ ಸರ್ಕಾರದ ಆದೇಶವನ್ನು ಅಕ್ಷರಶಃ ನಾವು ಪರಿಪಾಲನೆ ಮಾಡಿದ್ದೇವೆ, ಮಹಾರಾಷ್ಟ್ರ ಸಹ ಮಾಡಿದೆಯೆಂದು ಹೇಳಬಹುದು; ಆಂಧ್ರದ ವಿಚಾರ ಗೊತ್ತಿಲ್ಲ. ಆದರೆ ಆಂಧ್ರದವರು ಮುಂದೆ ಹೋಗುತ್ತಿದ್ದಾರೆ, ನಾವು ಸುಮ್ಮನಿದ್ದೇವೆ ಎಂದು ಹೇಳುತ್ತಿದ್ದಾರೆ, ಆರೀತಿ ವರದಿ ಬರುತ್ತಿದೆ, ಬಹುಶಃ ಮುಂದೆ ಹೋಗುತ್ತಿರಬಹುದು. ಈಗ ರೈಪೇರಿಯನ್ ರೈಟ್ಸ್ ಪ್ರಶ್ನೆಯಿದೆ. ಅಪ್ಪರ್ ಕೃಷ್ಣ ಯೋಜನೆ ಪ್ರಾರಂಭಿಸಬೇಕೆಂದಿದ್ದೇವೆ. ಕೇಂದ್ರ ಸರ್ಕಾರವನ್ನು ಕೇಳದೆ ನಾವೇನೂ ಮಾಡಿಲ್ಲ. ಕಟ್ಟಡ, ಸೇತುವೆ, ರಸ್ತೆ ಮುಂತಾದ ಪೂರ್ವ ಸಿದ್ಧತೆಗಳನ್ನು ಮಾತ್ರ ಮಾಡಿಕೊಂಡಿದ್ದೇವೆ. ಆದೂ ಕೂಡ ಬರೀ ಕಟ್ಟಡಗಳಿಗೆ 40—50 ಲಕ್ಷ ರೂಪಾಯಿಗಳನ್ನು ಒದಗಿಸುವುದಕ್ಕೆ ಮುಂಚೆ ಡ್ಯಾಮ್ ಕನ್‌ಸ್ಟ್ರಕ್ಷನ್‌ಗೆ ಹೆಚ್ಚು ಹಾಕಬೇಕು, ಕಟ್ಟಡಗಳಿಗೆ ಹೆಚ್ಚು ವೆಚ್ಚ ಮಾಡುವುದು ಬೇಡ ಎಂದು ಮನಸ್ಸುಮಾಡಿಕೊಂಡಿದ್ದೇವೆ. ಇಷ್ಟರಲ್ಲೇ ಟೆಕ್ನಿಕಲ್ ಕ್ಲಿಯರೆನ್ಸ್ ದೊರೆಯಬಹುದು; ಜೋರಿನ ಮೇಲೆ ಕೆಲಸ ಶುರುಮಾಡಬಹುದು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಅದನ್ನಾಗಲೇ ಮನವರಿಕೆ ಮಾಡಿದ್ದೇವೆ. ಈ ದಿವಸ ಜಗಳವಿದೆ, ಆಡ್ ಹಕ್ ಡಿಸಿಷನ್ ಬೇಡ, ನೀವು ಎರಡು ಪ್ರಾಜೆಕ್ಟ್ ತೆಗೆದುಕೊಳ್ಳಿ ಇನ್ನೊಂದು ದೇಶದವರು ಎರಡು ಪ್ರಾಜೆಕ್ಟ್ ತೆಗೆದುಕೊಳ್ಳಲಿ ಎಂದು ಹೇಳುವ ತೀರ್ಮಾನ ಮಾಡಬಾರದು, ನೀವು ಯಾರು ಯಾರು ಎಷ್ಟೆಷ್ಟು ಉಪಯೋಗಿಸಿಕೊಳ್ಳಬೇಕೆಂಬುದು ನಿಷ್ಕರ್ಷೆಯಾಗಬೇಕು, ಅಲೊಕೇಷನ್ ಆಗಬೇಕು ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಅಪ್ಪರ್ ಕೃಷ್ಣ ಯೋಜನೆ ಮೊದಲು ಮಾಡಿ ಮಲಪ್ರಭ ಯೋಜನೆ ಪೂರೈಸಿದರೆ 200 TMC ft. ನೀರನ್ನು ಉಪಯೋಗಿಸಲು ಅಧಿಕಾರವಿದೆ, ಶ್ರೀಶೈಲಂ ಮತ್ತು ನಾಗಾರ್ಜುನ ಸಾಗರ ಯೋಜನೆಗಳಿಗೆ ಅವಕಾಶಕೊಟ್ಟರೆ ನಾವು ಮುಳುಗಿಹೋಗುತ್ತೇವೆ, ನಾವು ಒಂದು ತೊಟ್ಟು ನೀರನ್ನೂ ಉಪಯೋಗ ಮಾಡುವುದಕ್ಕಾಗುವುದಿಲ್ಲ ಎಂದು ತಿಳಿಸಿದ್ದೇವೆ. ಈ ದಿವಸ ಶ್ರೀಶೈಲಂ ಯೋಜನೆಗೆ ಒಪ್ಪಿಗೆ ನೀಡಬಹುದೆಂಬ ಅನುಮಾನವಿದೆ. ಅದಕ್ಕೆ ನಾವು ಪ್ರಾಜೆಕ್ಟ್ ವಾರು ಕ್ಲಿಯರೆನ್ಸ್ ಬೇಕಾಗಿಲ್ಲ, ನಮಗೆ ಎಷ್ಟು ನೀರನ್ನು ಉಪಯೋಗಮಾಡಲು ಅವಕಾಶವಿದೆ ಎಂಬುದನ್ನು ಹೇಳಿ, ಅದರ ಪ್ರಕಾರ ಉಪಯೋಗಮಾಡುತ್ತೇವೆ, ಆದಷ್ಟು ತೀವ್ರವಾಗಿ ಉಪಯೋಗಿಸುತ್ತೇವೆ ಎಂದು ಸ್ಪಷ್ಟವಾಗಿ ಕೇಂದ್ರಕ್ಕೆ ಹೇಳಿದ್ದೇವೆ. ಮಲಪ್ರಭ ಮುಂತಾದ ಪ್ರಾಜೆಕ್ಟುಗಳನ್ನು ಆದಷ್ಟು ಬೇಗ ತೆಗೆದುಕೊಳ್ಳಲು ಪ್ರಯತ್ನಮಾಡುತ್ತೇವೆಂದು ತಮ್ಮ ಮುಂದೆ ಹೇಳುತ್ತೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಹೊಗೇನಕಲ್‌ಗೆ ಇನ್‌ವೆಸ್ಟಿಗೇಷನ್ ಡಿವಿಜನ್ ಮಾಡಿದ್ದೇವೆಂದು ಹೇಳುತ್ತೀರಿ. ಮದರಾಸ್ ಸರ್ಕಾರದವರು 4 ಪ್ರಾಜೆಕ್ಟುಗಳನ್ನು ನಮ್ಮ ಸರ್ಕಾರದವರಿಗೆ ತಿಳಿಸದೇ ಮಾಡಿದ್ದಾರೆ. 1974ರ ಒಳಗೆ ಹಿಂದಿನ ಅಗ್ರಿಮೆಂಟ್ ಪ್ರಕಾರ ಹೊಸ ಪ್ರಾಜೆಕ್ಟುಗಳನ್ನು ಹಾಕಿ ನೀರಾವರಿಗೆ ಪೂರ್ಣ ನೀರಿನ ಸೌಲಭ್ಯ ಪಡೆಯುತ್ತಿರುವಾಗ ನೀವು ಈಗ ಇನ್‌ವೆಸ್ಟಿಗೇಷನ್ ಡಿವಿಜನ್ ಮಾಡುತ್ತೇವೆ ಎಂದರೆ ಅರ್ಥವೇನು ?

ಶ್ರೀ ವೀರೇಂದ್ರ ಪಾಟೀಲ್.—ಈ ಬಗ್ಗೆ ಮಾನ್ಯ ಸದಸ್ಯರು ಸ್ವಲ್ಪ ತಪ್ಪು ತಿಳಿದುಕೊಂಡಿದ್ದಾರೆ. ಹೊಗೇನಕಲ್ ಪ್ರಾಜೆಕ್ಟಿಗೆ ಇನ್‌ವೆಸ್ಟಿಗೇಷನ್ ಡಿವಿಜನ್ ಮಾಡಿಲ್ಲ. ಕಾವೇರಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಇನ್‌ವೆಸ್ಟಿಗೇಷನ್ ಡಿವಿಜನ್ ಅಂತ ಮಾಡಿದೆ. ನಮ್ಮ ಇಂಜಿನಿಯರುಗಳು ಒಂದು ಮಿಲಿಯನ್ ಕಿಲೋವಾಟ್ ವಿದ್ಯುತ್ತನ್ನು ತಯಾರು ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಆ ಒಂದು idea ಅವರು ಕೊಟ್ಟಿದ್ದಾರೆ. ಅಂದಮಾತ್ರಕ್ಕೆ ಹೊಗೇನಕಲ್‌ಗೆ ಒಪ್ಪಿದ್ದೇವೆ ಎಂದು ನಾನು ಹೇಳಲಿಲ್ಲ. ಅವರು ಯಾವರೀತಿ ಭವಾನಿ ಪ್ರಾಜೆಕ್ಟು ತೆಗೆದುಕೊಂಡಿದ್ದಾರೆ ಅದೇ ರೀತಿ

(ಶ್ರೀ ವೀರೇಂದ್ರ ಪಾಟೀಲ್) [illegible] ನಾವೂ ಕೂಡ ನಮ್ಮ ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದೇವೆ. ನಡೆಯುತ್ತಾ ಇದೆ. ಕೈಕಟ್ಟಿಸಿ ಕೊಳ್ಳುವ ಯಾವ ಪ್ರಯತ್ನವನ್ನೂ ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಒತ್ತಿ ಹೇಳುತ್ತೇನೆ.

ಇನ್ನು ಕಮ್ಯುನಿಕೇಷನ್ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಬಹುಶಃ ಅನೇಕ ಮಾನ್ಯ ಸದಸ್ಯರಿಗೆ ನನ್ನಂತೆಯೇ ನಿರುತ್ಸಾಹವಾಗಿರಬಹುದು. ಕೆಲವು ಸದಸ್ಯರು ಮಿನಿಸ್ಟರ ಹತ್ತಿರ ಹೋದಾಗ ಯಾವಾಗಲೂ ದುಡ್ಡಿಲ್ಲ ಎಂದು ಹೇಳುತ್ತಾರೆ. ದುಡ್ಡಿಲ್ಲ ಎಂದು ಹೇಳುವುದಕ್ಕೆ ಮಿನಿಸ್ಟರಾಗಿದ್ದಾರೋ ಏನೋ ಎಂದು ಹೇಳಿದರು. ಮುಚ್ಚುಮರೆ ಏನೂ ಇಲ್ಲ. ದುಡ್ಡಿನ ಅಭಾವ ಬಹಳ ಇದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 350 ಕೋಟಿ ರೂಪಾಯಿಗಳ, ಪೈಕಿ ಕಮ್ಯುನಿಕೇಷನ್‌ಗೆ 9 ಕೋಟಿ ರೂಪಾಯಿ ಕೊಟ್ಟಿದ್ದರು. 9 ಕೋಟಿ ರೂಪಾಯಿಗಳಲ್ಲಿ ಹೊಸ ರಸ್ತೆಗಳನ್ನು ಮಾಡಿಸುವುದಕ್ಕೆ 276.20 ಲಕ್ಷ ರೂಪಾಯಿಗಳನ್ನೂ, ರೂರಲ್ ಕಮ್ಯುನಿಕೇಷನ್‌ಗೆ 90 ಲಕ್ಷ ರೂಪಾಯಿ, ಅಸ್ಫಾಲ್ಟಿಂಗ್‌ಗೆ 173 ಲಕ್ಷ ರೂಪಾಯಿ, ಸಿಮೆಂಟ್ ಕಾಂಕ್ರೀಟಿಂಗಿಗೆ 1 ಲಕ್ಷ ರೂಪಾಯಿ, ಬ್ರಿಡ್ಜಸ್‌ಗೆ 302 ಲಕ್ಷ ರೂಪಾಯಿಗಳನ್ನೂ ಒದಗಿಸಲಾಗಿತ್ತು. 1960-61ರಲ್ಲಿ ಕ್ಯಾಪಿಟಲ್ ವರ್ಕ್ಸ್‌ಗೆ 490 ಲಕ್ಷದ 69 ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ. 1961-62ರಲ್ಲಿ ಪಂಚವಾರ್ಷಿಕ ಯೋಜನೆಯ ಮೊದಲನೇ ಸಾಲಿನಲ್ಲಿ 438 ಲಕ್ಷದ 33 ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ. 1962-63ರಲ್ಲಿ 366 ಲಕ್ಷದ 78 ಸಾವಿರ ರೂಪಾಯಿ ಖರ್ಚು ಮಾಡಬೇಕೆಂದು ಅಂದಾಜಾಗಿತ್ತು. 1963-64ಕ್ಕೆ 135 ಲಕ್ಷ ರೂಪಾಯಿ ಇದೆ. ಈಗ ಒಂದು ಪರಿಸ್ಥಿತಿ ಏನಿದೆ ಎಂಬುದನ್ನು ಫೈನಾನ್ಸ್ ಮಿನಿಸ್ಟರ ಭಾಷಣದಲ್ಲಿ ಹೇಳಿದ್ದಾರೆ. ನಾವು ಈ ಹಿಂದಿನ ವರ್ಷಗಳಲ್ಲಿ ಖರ್ಚು ಮಾಡಿರುವುದನ್ನು ನೋಡಿದರೆ 5 ವರ್ಷಗಳಲ್ಲಿ ಖರ್ಚು ಮಾಡಬೇಕಾಗಿದ್ದುದನ್ನು 2 ವರ್ಷದಲ್ಲೇ ಖರ್ಚು ಮಾಡಿದ್ದೇವೆ. ನಮ್ಮಲ್ಲಿ ದುಡ್ಡಿಲ್ಲ. ಫೈನಾನ್ಸ್ ಮಿನಿಸ್ಟರ ಹತ್ತಿರ ಹೋದರೆ ದುಡ್ಡೆಲ್ಲಾ ತಿಂದು ಹಾಕಿದ್ದೀರಿ ಎಂದು ಹೇಳುತ್ತಾರೆ. ಇನ್ನು ಯಾರಾದರೂ ನಮ್ಮ ಸ್ನೇಹಿತರು ಎರಡನೇ ಖಾತೆಯವರು ಕೊಟ್ಟರೆ ಮಾತ್ರ ಖರ್ಚು ಮಾಡುವುದಕ್ಕೆ ಸಾಧ್ಯವಿದೆ. ಅವರು ಕೊಡುವುದಕ್ಕೆ ತಯಾರಾಗಿಲ್ಲ. ಇವತ್ತಿನ ದಿವಸ ಈ ಎಲ್ಲ ಪ್ರಶ್ನೆಗಳೂ ತಮ್ಮ ಮುಂದೆ ಇವೆ. ಯಾವ ರೀತಿ ಹೇಳುತ್ತೀರೋ ಆ ರೀತಿ ನಡೆಯುತ್ತಾ ಇದೆ. ರಸ್ತೆಗೆ ದುಡ್ಡು ಕಡಿಮೆ ಇದೆ. ಕೆಲವು ಕಡೆಗಳಲ್ಲಿ, ಶ್ರೀಮಾನ್ ಶರಣಪ್ಪನವರು ಹೇಳಿದರು ಹೈದರಾಬಾದು ಕರ್ಣಾಟಕ ಬಹಳ ಹಿಂದುಳಿದ ಪ್ರದೇಶ ಎಂಬುದು ಹಿಂದೆ ತೊಟ್ಟಂಥ ಅಂಕಿಅಂಶಗಳಿಂದಲೇ ಗೊತ್ತಾಗುತ್ತದೆ. ಹಳ್ಳಿಯಿಂದ ಹಳ್ಳಿಗೆ ಹೋಗುವುದಕ್ಕೆ, ತಾಲ್ಲೂಕಿನಿಂದ ತಾಲ್ಲೂಕಿಗೆ ಹೋಗುವುದಕ್ಕೆ ರಸ್ತೆಗಳಿಲ್ಲದೇ ಅದು ಒಂದು ದೊಡ್ಡ ಸಮಸ್ಯೆ ಆಗಿದೆ. ರಸ್ತೆ ಮಾಡಬೇಕು, ಸೇತುವೆ ಮಾಡಬೇಕು. ಅದೇ ರೀತಿಯಿಂದ ಬೊಂಬಾಯಿ ಕರ್ಣಾಟಕದಲ್ಲೂ ಕೂಡ ಮೊನ್ನೆ ಹೋದಾಗ ಸಂಪೂರ್ಣವಾಗಿ ಮನವರಿಕೆಯಾಯಿತು. ಹಿಂದಿನ ಸರ್ಕಾರ ರಸ್ತೆ ಮಾಡಿಸಿದ್ದು ಸೇತುವೆಗಳನ್ನು ಮಾಡದೇ ಬಿಟ್ಟಿದ್ದಾರೆ. ಎಲ್ಲಾ ಕಡೆಗಳಲ್ಲೂ ಕಲ್‌ವರ್ಟ್ಸ್, ಕಾಸ್‌ವೇಸ್ ಇವೆ. 6 ತಿಂಗಳ ಗಟ್ಟಲೆ ಬಿಜಾಪುರದಿಂದ ಬಾಗಲಕೋಟೆಗೆ, ಬಾಗಲಕೋಟೆಯಿಂದ ಬಿಜಾಪುರಕ್ಕೆ ಹೋಗಿ ಬರಲು ಆಗುವುದಿಲ್ಲ. ರೈಲ್ವೆ ಮುಖಾಂತರ ಹೋಗಬಹುದು, ಎರಡನೇ ರೀತಿಯಿಂದ ಹೋಗುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ದೊಡ್ಡ ನದಿಗಳಿಗೂ ಸೇತುವೆ ಇಲ್ಲ, ಬರೀ ಕಾಸ್‌ವೇ ಕೊಟ್ಟಿದ್ದಾರೆ. 20 ಲಕ್ಷ ರೂಪಾಯಿ ಖರ್ಚುಮಾಡಿ ಕಟ್ಟಬೇಕಾದಂಥ ಕೆಲವು ಸೇತುವೆಗಳು ಇವೆ. ಕೊರ್ತಿ ಕೋಲ್ಹಾರ ಸೇತುವೆಗೆ 39 ಲಕ್ಷ ರೂಪಾಯಿ ಬೇಕು. ನಮ್ಮ ಸಂಸ್ಥಾನದಲ್ಲಿ ಹೈವೇ ಇದೆ, ಸೇತುವೆಗಳಿಲ್ಲ. ಕಲ್ವರ್ಟ್ಸ್ ಕಟ್ಟಿ ಮಳೆಗಾಲದಲ್ಲಿ 6-6 ತಿಂಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದಕ್ಕೆ ಸಾಧ್ಯವಿಲ್ಲದಂತಾಗಿದೆ ಎಂದು ಹೇಳುತ್ತಾರೆ. ನಿಜ. ಬೆಣ್ಣೆಹಳ್ಳ ಎಂಬುದು ಹುಬ್ಬಳ್ಳಿ-ಗದಗ್ ಮಾರ್ಗದಲ್ಲಿ ಇದೆ. ಅಲ್ಲಿ ಸೇತುವೆ ಮೇಲೆ ವಾಹನಗಳು ಹೋಗುತ್ತಿದ್ದರೆ ನಡಗುತ್ತಾರೆ. ಲಾರಿಗಳಾಗಲೀ, ದೊಡ್ಡ ಟ್ರಕ್ಕುಗಳಾಗಲೀ, ಬುಲ್‌ಡೋಸರ್‌ಗಳಾಗಲೀ ಹೋಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅಂತಹ ಪ್ರಮುಖವಾದ ಸೇತುವೆಗಳನ್ನು ತೆಗೆದುಕೊಳ್ಳಬೇಕು. ತೆಗೆದುಕೊಳ್ಳಬೇಕೆಂದರೆ ದುಡ್ಡು ಬೇಕು. 135 ಲಕ್ಷ ರೂಪಾಯಿ ಇದೆ. ಅದು ಸಾಕಾಗುವುದಿಲ್ಲ. ಕನಿಷ್ಠ 3 ಕೋಟಿ ರೂಪಾಯಿಗಳಾದರೂ ಬೇಕೆಂಬುದು ಇಂಜಿನಿಯರುಗಳ ಅಂದಾಜು. ಅದಕ್ಕೆ ಈಗ ಟೆಂಡರ್ ಕರೆದದ್ದಾಯಿತು. ನಿಧಾನವಾಗಿ ಕೆಲಸ ಮಾಡಿರಿ ಎಂದು ಹೇಳಬೇಕಾಗಿದೆ. ಅನೇಕ ಮಾನ್ಯ ಸದಸ್ಯರು ಕೆಲಸ ಪ್ರಾರಂಭವಾಗಿ, ಎಷ್ಟೋ ದಿವಸ ಆಯಿತು ಇನ್ನೂ ಕೆಲಸ ಆಗಲಿಲ್ಲ, ಕಂಟ್ರಾಕ್ಟದಾರರು ಮಿನಿಸ್ಟರ ಹತ್ತಿರ ಬಂದರೆ ಟೈಂ ಎಕ್ಸ್‌ಟೆನ್‌ಷನ್ ಕೊಡುತ್ತೀರಿ ಎಂದು ಹೇಳಿದರು. ಅವರಿಂದ ನಿಧಾನವಾಗಿಲ್ಲ. ದುಡ್ಡಿಲ್ಲ ಎಂದು ಹೇಳುವ ಕಾಲ

ಬಂದಿದೆ, ಒಂದು ಅಂಶ ಹೇಳಿದರೆ ಬಹುಶಃ ಮಾನ್ಯ ಸಭೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರ ಸಿಕ್ಕುತ್ತದೆ ಎಂದು ಅನಿಸುತ್ತದೆ. ನಮ್ಮ ಪಬ್ಲಿಕ್ ವರ್ಕ್ಸ್ ಖಾತೆಯವರು 30 ಕೋಟಿ ರೂಪಾಯಿಗಳ ಪ್ಲಾನ್ ಕೊಟ್ಟಿದ್ದರು. ಅದು 9 ಕೋಟಿ ರೂಪಾಯಿಗಳಿಗೆ ಇಳಿದು ಈ ಕಷ್ಟ ಬಂದಿದೆ. 1956-57ರಿಂದ 1961-62ರ ವರೆಗೂ ಪ್ರತಿ ಜಿಲ್ಲೆಯಲ್ಲೂ ರಸ್ತೆ ಮತ್ತು ಸೇತುವೆಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದೇವೆ ಎಂದರೆ :—

ಬೆಂಗಳೂರು ಜಿಲ್ಲೆಯಲ್ಲಿ	...	147.05	ಲಕ್ಷ ರೂಪಾಯಿ
ಬೆಳಗಾಂ ,,	...	117.38	,,
ಬಳ್ಳಾರಿ ,,	...	82.39	,,
ಬಿದರ್ ,,	...	36.73	,,
ಬಿಜಾಪುರ ,,	...	126.05	,,
ಚಿಕ್ಕಮಗಳೂರು ,,	...	112.28	,,
ಚಿತ್ರದುರ್ಗ ,,	...	149.54	,,
ಧಾರವಾಡ ,,	...	132.90	,,
ಗುಲ್ಬರ್ಗ ,,	...	94.07	,,
ಹಾಸನ ,,	...	300.09	,,
ಕೋಲಾರ ,,	...	208.66	,,
ಮಂಡ್ಯ ,,	...	132.85	,,
ಮೈಸೂರು ,,	...	232.47	,,
ನಾರ್ತ್ ಕೆನರಾ ,,	...	301.14	,,
ರಾಯಚೂರು ,,	...	174.98	,,
ಶಿವಮೊಗ್ಗ ,,	...	134.62	,,
ಸೌತ್ ಕೆನರಾ ,,	...	397.11	,,
ತುಮಕೂರು ,,	...	147.93	,,
ಕೊಡಗು ,,	...	171.01	,,

ಈ ರೀತಿಯಿಂದ 31 ಕೋಟಿ, 97 ಲಕ್ಷದ 37 ಸಾವಿರ ರೂಪಾಯಿಗಳನ್ನು ನಾವು ಎರಡನೇ ಪಂಚವಾರ್ಷಿಕ ಯೋಜನೆ ಮತ್ತು 3ನೇ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷಕ್ಕೆ ಎಂದರೆ 1956-57ರಿಂದ 1961-62ರ ವರೆಗೂ ಖರ್ಚು ಮಾಡಿದ್ದೇವೆ. ಇದು final out lay. ಅಲ್ಲಿಂದ ಇಲ್ಲಿಯವರೆಗೆ ನಾವು ಸಾಧಿಸಿರತಕ್ಕ ಅಚೀವ್‌ಮೆಂಟ್ ಎಷ್ಟು ಎಂಬುದನ್ನೀಗ ತಿಳಿಸುತ್ತೇನೆ. ಇಲ್ಲಿಯವರಿಗೆ ನಾವು ಎಷ್ಟು ದುಡ್ಡು ಖರ್ಚುಮಾಡಿದ್ದೇವೆಂಬುದನ್ನೂ ತಿಳಿಸಿ-ಅದರ ಜೊತೆಯಲ್ಲೇ ಸಾಧಿಸಿರತಕ್ಕ ಕೆಲಸದ ಪ್ರಮಾಣವನ್ನೂ ಅಂದರೆ-1956 ರಲ್ಲಿದ್ದ ರಸ್ತೆ ಪ್ರಮಾಣಕ್ಕಿಂತ ಈಗ ಅಂದರೆ 1962ನೇ ಮಾರ್ಚಿ 31ನೇ ತಾರೀಖಿನವರೆಗೆ ಎಷ್ಟು ಮೈಲಿ ರಸ್ತೆ ಜಾಸ್ತಿ ಆಗಿದೆ ಎಂಬುದನ್ನು ಜಿಲ್ಲಾವಾರಾಗಿ ತಿಳಿಸುತ್ತೇನೆ-ಬೆಂಗಳೂರು ಜಿಲ್ಲೆಯಲ್ಲಿ 409 ಮೈಲಿ ರಸ್ತೆ ಜಾಸ್ತಿಯಾಗಿದೆ. ಹೀಗೆ ಬೆಳಗಾಂ ಜಿಲ್ಲೆಯಲ್ಲಿ 754 ಮೈಲಿಗಳೂ-ಬಳ್ಳಾರಿ ಜಿಲ್ಲೆಯಲ್ಲಿ—157 ಮೈಲಿಗಳೂ, ಬಿದಾರ್ ಜಿಲ್ಲೆಯಲ್ಲಿ—106 ಮೈಲಿಗಳೂ, ಬಿಜಾಪುರದಲ್ಲಿ—1106 ಮೈಲಿಗಳೂ, ಚಿತ್ರದುರ್ಗ ಜಿಲ್ಲೆಯಲ್ಲಿ 542 ಮೈಲಿಗಳೂ, ಚಿಕ್ಕಮಗಳೂರು ಜಿಲ್ಲೆಯಲ್ಲಿ—275 ಮೈಲಿಗಳೂ, ಕೂರ್ಗಿನಲ್ಲಿ 175 ಮೈಲಿಗಳೂ, ಧಾರ್ವಾಡ ಜಿಲ್ಲೆಯಲ್ಲಿ—662 ಮೈಲಿಗಳೂ, ಗುಲ್ಬರ್ಗ ಜಿಲ್ಲೆಯಲ್ಲಿ—277 ಮೈಲಿಗಳೂ, ಹಾಸನ ಜಿಲ್ಲೆಯಲ್ಲಿ—336 ಮೈಲಿಗಳೂ, ಕೋಲಾರ ಜಿಲ್ಲೆಯಲ್ಲಿ—420 ಮೈಲಿಗಳೂ, ಮಂಡ್ಯಾ ಜಿಲ್ಲೆಯಲ್ಲಿ—534 ಮೈಲಿಗಳೂ, ಮೈಸೂರು ಜಿಲ್ಲೆಯಲ್ಲಿ—637 ಮೈಲಿಗಳೂ, ಉ. ಕ. ಜಿಲ್ಲೆಯಲ್ಲಿ—452 ಮೈಲಿಗಳೂ, ರಾಯಚೂರು ಜಿಲ್ಲೆಯಲ್ಲಿ—331 ಮೈಲಿಗಳೂ; ಶಿವಮೊಗ್ಗ ಜಿಲ್ಲೆಯಲ್ಲಿ—424 ಮೈಲಿಗಳೂ; ದ. ಕ. ಜಿಲ್ಲೆಯಲ್ಲಿ—7 ಮೈಲಿಗಳೂ ಮತ್ತು ತುಮಕೂರು ಜಿಲ್ಲೆಯಲ್ಲಿ 445 ಮೈಲಿಗಳು—ಇಷ್ಟು ಮೈಲಿ ರಸ್ತೆ ಇತ್ತೀಚೆಗೆ ಜಾಸ್ತಿ ಆಗಿದೆ ಎಂಬುದನ್ನೀಗ ನಾನು ತಮಗೆ ತಿಳಿಸುತ್ತಿದ್ದೇನೆ. ಈ ರಸ್ತೆ ಮಾಡತಕ್ಕ ಕೆಲಸದಲ್ಲಿ ಒಂದು ವಿಚಿತ್ರವಿದೆ. ಒಂದೊಂದು ಕಡೆ ನಾವು ಒಂದು ಲಕ್ಷ ರೂ. ಗಳನ್ನು ಖರ್ಚುಮಾಡಿದರೂ ಒಂದು ಮೈಲಿ ರಸ್ತೆಮಾಡಲು ಬಹಳ ಕಷ್ಟವಾಗುತ್ತದೆ. ಇನ್ನು ಕೆಲವು ಕಡೆ ನಾವು 20-25 ಸಾವಿರ ರೂ. ಗಳನ್ನು ಖರ್ಚುಮಾಡಿದರೆ ಸಾಕು ಒಂದು ಮೈಲಿ ರಸ್ತೆ ಆಗುತ್ತದೆ. ನಾನು ಇಲ್ಲಿಯತನಕ ತಮಗೆಲ್ಲರಿಗೂ ಈ ಫೈನಾನ್‌ಷಿಯಲ್ ಪ್ರೋಗ್ರೆಸ್ ಹಾಗೂ ಫಿಜಿಕಲ್ ಪ್ರೋಗ್ರೆಸ್ ಎರಡನ್ನೂ ತಿಳಿಸಿದ್ದೇನೆ.

(ಶ್ರೀ ವೀರೇಂದ್ರ ಪಾಟೀಲ್)

ಹೀಗೆಯೇ ನಾವು ಈ ರೂರಲ್ ಕಮ್ಯುನಿಕೇಷನ್ ವಿಚಾರದಲ್ಲೂ, ಇಡೀ ರಾಜ್ಯದಲ್ಲಿ 11960 ಮೈಲಿ ರಸ್ತೆ ಮಾಡಲು ಟ್ಯಾಕಲ್ ಮಾಡಿದ್ದೇವೆ. ಈ ಪೈಕಿ ಈಗ 750 ಮೈಲಿ ರಸ್ತೆಯನ್ನು ಮಾತ್ರ ಪೂರೈಸಿದ್ದೇವೆ. ಆದರೆ ನಮ್ಮ ಟಾರ್ಜೆಟ್ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲೂ 50 ಮೈಲಿ ರಸ್ತೆ ಮಾಡಬೇಕೆಂಬ ಗುರಿ ಏನಿತ್ತು ಅದನ್ನು ಕೆಲವು ತಾಲ್ಲೂಕುಗಳಲ್ಲಿ ಸಾಧಿಸಲಿಕ್ಕಾಗಿಲ್ಲ. ಅನೇಕ ತಾಲ್ಲೂಕುಗಳಲ್ಲಿ ಹಾಗೆ ನಿಂತಿರುವುದು 1117 ಮೈಲಿ ಆಗುತ್ತೆ. ನಮ್ಮ ರಾಜ್ಯದಲ್ಲಿರತಕ್ಕ 171 ತಾಲ್ಲೂಕುಗಳಲ್ಲಿ 81 ತಾಲ್ಲೂಕುಗಳಲ್ಲಿ ಈ ಟಾರ್ಜೆಟ್ ಪ್ರಕಾರ ಕೆಲಸ ಪೂರೈಸಿರುತ್ತೆ. ಈಗ ಏನು ರಸ್ತೆ ಮಾಡಲಾಗಿದೆ ಅದಕ್ಕೆ 44 ಲಕ್ಷ ರೂ. ಗಳು ಖರ್ಚಾಗಿದೆ. ಉಳಿದಿರತಕ್ಕ ರಸ್ತೆ ಕೆಲಸವನ್ನು ಪೂರೈಸಲು ಕನಿಷ್ಟಪಕ್ಷ ಇನ್ನೂ 4 ಕೋಟಿ ರೂ. ಗಳು ಬೇಕಾಗಬಹುದೆಂದು ಅಂದಾಜುಮಾಡಲಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಟ್ಯಾಕಲ್ ಮಾಡಿದ್ದೇವೆಂದರೆ ಈ ರಸ್ತೆಗಳಿಗೆ ಮಣ್ಣು ಹಾಕಿದ್ದೇವೆ ಎಂತಲೋ ?

ಶ್ರೀ ವೀರೇಂದ್ರ ಪಾಟೀಲ್.—ಈ ವಿಚಾರದಲ್ಲಿ ತಾಲ್ಲೂಕ್ ಬೋರ್ಡಿನವರು ಒಂದು ಪ್ರೋಗ್ರಾಮನ್ನು ತಯಾರು ಮಾಡುತ್ತಾರೆ. ಆ ಪ್ರಕಾರ ಎಲ್ಲ ಕೆಲಸವನ್ನೂ ತೆಗೆದುಕೊಂಡು ನಾವು ಒಂದೇ ವರ್ಷದಲ್ಲಿ ಮಾಡಬೇಕೆಂದರೆ ಅದು ಸಾಧ್ಯವಿಲ್ಲ. ಈಗ ಅಲ್ಲಲ್ಲೇ ಇಷ್ಟಿಷ್ಟು ಕೆಲಸ ನಡೆಸ ಬೇಕೆಂದು ಗೊತ್ತು ಮಾಡಿದ್ದೇವೆ. ದುಡ್ಡಿನ ಅನುಕೂಲ ಒದಗಿದಂತೆ ಬಾಕಿ ಕೆಲಸವನ್ನೂ ಕೈಗೊಂಡು ಅದನ್ನೂ ಮುಗಿಸಲಾಗುತ್ತದೆ. ಬಾಕಿ ನಿಂತಿರತಕ್ಕ ಕೆಲಸವನ್ನು ನಾವು ಮಾಡುವುದಿಲ್ಲ ಅಂತ ಏನೂ ಹೇಳಿಲ್ಲ. ಈಗ ನಮಗೆ ಈ ರೂರಲ್ ಕಮ್ಯೂನಿಕೇಷನ್ನಿಗೆ ಒದಗಿಸಿರತಕ್ಕದ್ದು 30 ಲಕ್ಷ ರೂ. ಗಳು ಮಾತ್ರ. ಆದರೆ ಮಾನ್ಯ ಸದಸ್ಯರನೇಕರು ಬಂದು ನಮ್ಮಲ್ಲಿ ಎರಡು ಮೈಲಿ ರಸ್ತೆ ಮಾಡಿಸಿಕೊಡಿ, ನಮ್ಮಲ್ಲೆರಡು ಮೈಲಿ ರಸ್ತೆ ಮಾಡಿಸಿಕೊಡಿ ಎಂತ ಕೇಳಬಹುದು. ಆದರೆ ಈ ಹಿಂದೆ 280 ಲಕ್ಷ ರೂ. ಗಳನ್ನು ಖರ್ಚುಮಾಡಿ ಜನರಿಗೆ ಸಮಾಧಾನವನ್ನುಂಟುಮಾಡಲಿಲ್ಲವೆಂದು ಹೇಳುತ್ತಿರುವಾಗ ಈಗ ಇನ್ನು ಈ 30 ಲಕ್ಷ ರೂ. ಗಳಲ್ಲಿ ಎಷ್ಟರಮಟ್ಟಿಗೆ ಈ ಕೆಲಸವಾಗಬೇಕು ಎಂಬುದನ್ನು ತಾವೆಲ್ಲರೂ ಊಹಿಸಬಹುದು. ಇಂಥ ವಿಚಾರಗಳಲ್ಲಿ ನಿಜವಾಗಿ ಎಲ್ಲಾ ಜನರನ್ನು ತೃಪ್ತಿಪಡಿಸುವುದು ಬಹಳ ಕಷ್ಟ, ಆದರೆ ಈಗ ಉಳಿದಿರತಕ್ಕ ಮಣ್ಣಿನ ರಸ್ತೆ ಕೆಲಸವನ್ನೆಲ್ಲಾ ಪೂರೈಸಬೇಕಾದರೆ ಇನ್ನೂ 9 ಕೋಟಿ ರೂ. ಗಳು ಬೇಕಾಗುತ್ತದೆ. ಈ ಹಿಂದೆ ಇದ್ದ D. D. L. ಬೋರ್ಡನ್ನು 58-59 ರಲ್ಲಿ ರದ್ದು ಮಾಡಿದ್ದಾಯಿತು. ಈಗ ಆ ಸಂಸ್ಥೆ ಮಾಡುತ್ತಿದ್ದ ಕೆಲಸಗಳನ್ನೆಲ್ಲ D. L. B. ಮತ್ತು ತಾಲ್ಲೂಕು ಬೋರ್ಡುಗಳು ಮಾಡಬೇಕೆಂದು ಹೇಳುತ್ತಿದ್ದೇವೆ. ಅದಕ್ಕೆ ಆ ಸಂಸ್ಥೆಗಳು ಆ ಕಾರ್ಯದಲ್ಲಿ ಸ್ವಲ್ಪ ಭಾಗವನ್ನು ನೀವೂ ಮಾಡಿ ಅಂತ ನಮ್ಮ ಮೇಲೆ ಹಾಕಿದ್ದಾರೆ. ಈ ಪೈಕಿ ಪ್ರತಿಯೊಂದು ಜಿಲ್ಲೆಯಲ್ಲೂ ತೆಗೆದುಕೊಂಡಿರುವುದು ಬಟ್ಟು 7,056 ಮೈಲಿಗಳೂ ಈ ಪೈಕಿ ಅನೇಕ ರಸ್ತೆಗಳು ಬಂಡಿ ರಸ್ತೆಗಳಿವೆ. ಈ ರಸ್ತೆಗಳ ಕಾರ್ಯ ಕೈಗೊಂಡು ನಾವೀಗ 7 ಲಕ್ಷ ರೂ. ಗಳನ್ನು ಖರ್ಚುಮಾಡಿದ್ದೇವೆ. ಇವುಗಳನ್ನೆಲ್ಲಾ ಪೂರ್ತಿಮಾಡುವ ಹೊತ್ತಿಗೆ ಇನ್ನೂ 10 ಲಕ್ಷ ರೂ. ಗಳು ಬೇಕಾಗಬಹುದು. ಆ ನಂತರ ಈ ರಸ್ತೆಗಳನ್ನೆಲ್ಲ ಇಂಪ್ರೂವ್ ಮಾಡಿ-ಇವುಗಳನ್ನು ಮೈನ್‌ಟೈನ್ ಮಾಡಲು 20-25 ಲಕ್ಷ ರೂ. ಗಳು ಖರ್ಚು ಬರುತ್ತದೆ. ಆದರೆ ಈಗ ಈ ರಸ್ತೆಗಳಲ್ಲಿ ಇನ್ನೂ ಒಂದು ಸಾವಿರ ಮೈಲಿ ರಸ್ತೆಯನ್ನು ಈ ಇಲಾಖೆ ತೆಗೆದುಕೊಳ್ಳಬಹುದೆಂತ ಇಲಾಖೆಗೆ ಸರ್ಕಾರದಿಂದ ಅಧಿಕಾರ ಸಿಕ್ಕಿದೆ. ಈ ಸಾವಿರ ಮೈಲಿ ರಸ್ತೆಯನ್ನು ಇರತಕ್ಕ 208 ಜನ ಈ ಸಭೆಯ ಸದಸ್ಯರಿಗೆ ಹಂಚಿದರೆ ತಲಾ 5 ಮೈಲಿ ರಸ್ತೆ ಬರುತ್ತೆ. ಆದರೆ ಎಲ್ಲಿಗೆ ಪ್ರಯಾರಿಟಿ ಸಿಗಬೇಕು, ಎಲ್ಲಿಗೆ ಈ ಅನುಕೂಲ ಜಾಸ್ತಿ ಆಗಬೇಕಾಗಿದೆ ಎಂಬುದಕ್ಕೆ ಹೆಚ್ಚು ಗಮನ ಕೊಡಬೇಕಾದ್ದು ಯೋಗ್ಯ. ಇದಕ್ಕೆಲ್ಲ ಲಿಮಿಟೇಷನ್ ಹಾಕಲಾಗಿದೆ. ಆದರೆ ಶ್ರೀ ಜಿ. ಮರುಳಪ್ಪನವರು ನಮ್ಮ ದೇಶದಲ್ಲಿ ದೊರೆಯತಕ್ಕ ಐರನ್ ಓರ್ ಇಡೀ ಇಂಡಿಯಾದೇಶದ ಓರಿಗೆಲ್ಲ ಅತ್ಯುತ್ಕೃಷ್ಟವಾದದ್ದಾಗಿದೆ. ಈ ಓರನ್ನು ಈ ದಿವಸ ಮದ್ರಾಸಿಗೋ-ಕಡಲೂರಿಗೋ ತೆಗೆದುಕೊಂಡು ಹೋಗುತ್ತಿದ್ದಾರೆಂತ ಹೇಳಿದರು. ಆದರೆ ಇವನ್ನು ನಾವೂ ಸಹ ವಿಚಾರಮಾಡಿದ್ದೇವೆ. ಈ ಬಗ್ಗೆ ಈಗಾಗಲೇ ಸರ್ಕಾರದವರು ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂತ ತಿಳಿಸಲಿಚ್ಛಿಸುತ್ತೇನೆ. ಈ ವಿಚಾರದಲ್ಲಿ ನಾವು ಕೇಂದ್ರ ಸರ್ಕಾರಕ್ಕೂ ಮತ್ತು ವಾಣಿಜ್ಯ ಕಾರ್ಪೊರೇಷನ್ನಿನವರಿಗೂ ಬಹಳ strong ಆಗಿ ಬರೆದು ಇದನ್ನು ಪ್ರೊಟೆಸ್ಟ್ ಮಾಡಿದ್ದೇವೆ. ನಮ್ಮ ರಾಜ್ಯದಲ್ಲೇ ಕೇವಲ 180-200 ಮೈಲಿ ದೂರದಲ್ಲಿರತಕ್ಕ ಬಂದರಿಗೆ ಸಾಗಿಸತಕ್ಕ ಅವಕಾಶವಿರುವಾಗ ಕಡಲೂರಿಗೆ ತೆಗೆದುಕೊಂಡು ಹೋಗಬೇಕೆಂದು ಹೇಳುವುದು ಸರಿಯಲ್ಲ ಎಂತ ತಿಳಿಸಿದ್ದೇವೆ. ವೆಸ್ಟ್ ಕೋಸ್ಟ್ ಇಂಪ್ರೂವ್‌ಮೆಂಟಿಗೆ ಇದರಿಂದ ತೊಂದರೆ ಆಗುತ್ತದೆಂಬುದನ್ನೂ ಕೂಡ ತಿಳಿಸಿದ್ದೇವೆ. 1960-61ರಲ್ಲಿ 2 ಲಕ್ಷ 45 ಸಾವಿರ ಟನ್ ಓರನ್ನು ಬೇಲಿಕೇರಿ-ಕಾರವಾರ್ ಬಂದರಿನ ಮೂಲಕ ಸಾಗಿಸಲಾಗಿದೆ. ಆದರೆ ಇತ್ತೀಚೆಗೆ ಹುಬ್ಬಳ್ಳಿ-ಕಾರವಾರ್ ರಸ್ತೆ ಉತ್ತಮವಾದ್ದರಿಂದ ಆ ನಂತರ 3 ಲಕ್ಷ 76 ಸಾವಿರದ

600 ಟನ್ ಓರನ್ನು ಈ ಬಂದರಿನ ಮೂಲಕವೇ ಸಾಗಿಸಲಾಗಿದೆ. ಇದರಿಂದ ನಮಗೆ ಸ್ವಲ್ಪ ಸಮಾಧಾನವಾಗಿದ್ದರೂ ಖಂಡತುಂಡಾಗಿ ನೀವು ನಮಗೆ ಬಹಳ ಅನ್ಯಾಯ ಮಾಡುತ್ತಿದ್ದೀರಿ, ಅತ್ಯಾಚಾರ ಮಾಡುತ್ತಿದ್ದೀರಿ ಎಂತ ಆ ರೈಲ್ವೆ ಬೋರ್ಡಿನವರಿಗೂ, ಕೇಂದ್ರ ವಾಣಿಜ್ಯ ಶಾಖೆಯವರಿಗೂ ಮತ್ತು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ನಿನವರಿಗೂ ನಾವು ಒತ್ತಾಯಮಾಡಿ ತಿಳಿಸಿದ್ದೇವೆ ಮತ್ತು ಕೂಡಲೆ ಇದನ್ನು ಸರಿಪಡಿಸಬೇಕೆಂತ ಹೇಳಿದ್ದೇವೆ. ಈ ದಿವಸ ಆ ರೈಲ್ವೆ ಬೋರ್ಡಿನವರು ಪೂನಾ-ಹುಬ್ಬಳ್ಳಿ ಲೈನಿನಲ್ಲಿ ಪೂನಾದಿಂದ ಮಿರಾಜ್‌ವರೆಗೂ ಮತ್ತು ಹುಬ್ಬಳ್ಳಿ-ಗುಂತಕಲ್ ಲೈನಿನಲ್ಲಿ ಹೊಸಪೇಟೆಯಿಂದ-ಗುಂತಕಲ್‌ವರೆಗೂ ಬ್ರಾಡ್‌ಗೇಜ್‌ಮಾಡಲು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಆದರೆ ನಾವು ಅವರಿಗೆ ಈ ಮಧ್ಯೆ ಇರತಕ್ಕ ನಮ್ಮ ಜನರೇನು ಪಾಪಮಾಡಿದ್ದಾರೆಂತ ಬಹಳ ಕಟುವಾಗಿ ಬರೆದಿದ್ದೇವೆ. ನಾವು ಗುಂತಕಲ್‌ನಿಂದ ಹುಬ್ಬಳ್ಳಿವರೆಗೂ ಮುಂದೆ ಪೂನಾವರೆಗೂ ಬ್ರಾಡ್ ಗೇಜ್ ಮಾಡಲೇಬೇಕೆಂದು ತಿಳಿಸಿದ್ದೇವೆ. ಈ ಒತ್ತಾಯದಿಂದ ನಾಳೆ ನಾವು ಆ ಕೆಲಸ ಸಾಧಿಸುತ್ತೇವೆಂಬ ಒಂದು ಆಶಾದಾಯಕವಾದ ಸಂದರ್ಭ ಉಂಟಾಗಬಹುದೆಂದು ನಾನೀಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ.

ಇನ್ನು ಹಾಸನ-ಮಂಗಳೂರು ರೈಲ್ವೆ ಬಗ್ಗೆ ಒಂದು ಮಾತು. ಈ ವಿಚಾರದಲ್ಲೇನೋ ರೈಲ್ವೆ ಇಲಾಖೆಯವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಎರಡು ಎಗ್ಸಿಕ್ಯುಟೀವ್ ಇಂಜಿನಿಯರ್‌ಗಳ ಡಿವಿಜನ್ನನ್ನು-ಒಂದನ್ನು ಮಂಗಳೂರಿನಲ್ಲೂ ಮತ್ತೊಂದನ್ನು ಸಕಲೇಶಪುರದಲ್ಲೂ ತೆರೆದಿದ್ದಾರೆ. ಈಗಾಗಲೇ ಸೇಕಡಾ 40 ಸರ್ವೆ ಕೆಲಸಮುಗಿದಿದೆ. 1963 ರೊಳಗೆ ಸರ್ವೆ ಕಾರ್ಯ ಮುಗಿಸುವುದಾಗಿ ಅವರು ನಮಗೆ ಭರವಸೆ ಕೊಟ್ಟಿದ್ದಾರೆ. 1963-64 ನೇ ಬಡ್ಜೆಟ್ಟಿನಲ್ಲಿ ಈ ಬಗ್ಗೆ 50 ಲಕ್ಷ ರೂ.ಗಳನ್ನು ತೆಗೆದಿಟ್ಟಿದ್ದಾರೆ. ಅವರಿಗೆ ನಾವು ಲ್ಯಾಂಡ್ ಅಕ್ವಿಜಿಷನ್ ಆಫೀಸರನ್ನು ಇತರ ಸಿಬ್ಬಂದಿಯನ್ನೂ ಸಹ ಒದಗಿಸಿದ್ದೇವೆ. ಕೆಲಸವೇನೋ ಚುರುಕಾಗಿ ನಡೆಯುತ್ತಿದೆ. ಆ ಇಲಾಖೆಯವರು ದಕ್ಷತೆಯಿಂದ ಕೆಲಸವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇದೊಂದು ಸಂತೋಷದ ಸಮಾಚಾರ. ಈ ಮಾನ್ಯ ಸಭೆಯವರ ಪರವಾಗಿ ನಾನೀಗ ಅವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

7 P.M.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮೂರು ವರ್ಷಕ್ಕೆ ಮುಗಿಸುತ್ತೇವೆಂದು ಹೇಳಿದ್ದರು. ಪ್ರಾರಂಭಮಾಡಿ ಮೂರು ವರ್ಷವಾಗಿದೆ. ಕೆಲಸ ಎಷ್ಟಾಗಿದೆ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಅವರು final location survey ಮಾಡಿದ್ದಾರೆ Detailed plan ಮತ್ತು ಎಸ್ಟಿಮೇಟ್ ಮಾಡಿ ಕೆಲಸ ಪ್ರಾರಂಭ ಮಾಡುತ್ತಾರೆ. ಅವರು ಖಚಿತವಾಗಿ ಏನು ಹೇಳಿದ್ದಾರೆಂದರೆ ಮಂಗಳೂರು ಬಂದರು ತಯಾರಾಗುವುದರೊಳಗಾಗಿ ನಾವು ರೈಲ್ವೆ ಲೈನ್ ಹಾಕಿಕೊಡುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದರಮೇಲೆ ಅಪನಂಬಿಕೆ ಇಡುವುದಕ್ಕೆ ಯಾವ ಕಾರಣವೂ ಇಲ್ಲ.

ಇನ್ನು ಮಂಗಳೂರು ಬಂದರು ಬಗ್ಗೆ ಹೇಳಬೇಕಾಗಿದ್ದರೆ ಅಲ್ಲಿಯೂ ಕೂಡ ಬಹಳ ಉತ್ತಮವಾದ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಈಗಾಗಲೇ ಅವರು investigation ಮುಗಿಸುವಂಥ ಹಂತದಲ್ಲಿದ್ದಾರೆ. ಬಹುಶಃ final location survey ಮುಗಿದಿದೆ. Sea boring land boring ಹಾಗೂ K. R. S. research stations ಮತ್ತು ಎರಡನೆ research stations ನಲ್ಲಿ testing ನಡೆಯುತ್ತಿದೆ ಅದರ ರಿಪೋರ್ಟ್ ಕೂಡ ತಯಾರಾಗಿ, investigation ಪೂರ್ತಿ ಮಾಡಿದ್ದಾರೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ. ಅದೂ ಅಲ್ಲದೆ ಯಾವ ರೀತಿಯ ಸಂಶಯವೂ ಬರಲಾರದಂತೆ tuticorin ಬಂದರನ್ನು ಯಾವ ರೀತಿ ನೋಡಿಕೊಳ್ಳುತ್ತಾರೆ, ಅಲ್ಲಿ ಯಾವ ರೀತಿ ಕೆಲಸ ಮಾಡುತ್ತಾರೆ, ಯಾವ ವೇಗದಿಂದ ಕೆಲಸ ಕಾರ್ಯಗಳು ನಡೆಯುತ್ತಿವೆ, ಅದೇ ವೇಗದಿಂದ ನಮ್ಮಲ್ಲಿಯೂ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಕೇಂದ್ರ ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾವು ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಈಗ ನಮ್ಮಲ್ಲಿರುವಂಥ ಒಬ್ಬ ಚೀಫ್ ಇಂಜಿನಿಯರನ್ನು ಅವರು ನೇಮಕ ಮಾಡಿಕೊಂಡಿದ್ದಾರೆ. ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಮಂಗಳೂರು ಬಂದರು ಆಗುವಂಥಾದ್ದು ನಮ್ಮ ಜವಾಬ್ದಾರಿಯಲ್ಲ ಕೇಂದ್ರಕ್ಕೆ ಸೇರಿದ್ದು. Minor port state subject, major port central subject. ಆದರೆ ಮೈನರ್ ಪೋರ್ಟ್ ಆಗಿರುವುದು ಮೇಜರ್ ಪೋರ್ಟ್ ಆಗುವ ಮುಂಚೆ ಯಾರು ಮಾಡಬೇಕು ಎಂದು ಒಂದು lacuna ಬರುತ್ತಿತ್ತು. ಅದನ್ನು ನೀವೇ

(ಶ್ರೀ ವೀರೇಂದ್ರ ಪಾಟೀಲ್)

ಮಾಡಿ ಎಂದು ಕೇಂದ್ರಕ್ಕೆ ವಹಿಸಿಕೊಟ್ಟಿದ್ದೇವೆ. ಈಗ ಮಂಗಳೂರು ಬಂದರು ಅಭಿವೃದ್ಧಿಯ ಸಲುವಾಗಿ ನಡೆಯುವ ವಿಷಯಗಳೆಲ್ಲ ಕೇಂದ್ರ ಸರ್ಕಾರದ ಮುಖಾಂತರವಾಗಿಯೇ ನಡೆಯುತ್ತವೆ. ಅವರು ನಮ್ಮ ಮೇಲೆ ದೊಡ್ಡ ಮನಸ್ಸು ಮಾಡಿ ನಮ್ಮ ಕಡೆಯ ಅಧಿಕಾರಿಗಳನ್ನು ಆರಿಸಿದ್ದಾರೆ. ಅವರು ಜೂನ್ ತಿಂಗಳಿನಲ್ಲಿ ಚಾರ್ಜ್ ತೆಗೆದುಕೊಳ್ಳಬೇಕು. Technical Advisory Committee ಎಂದು ಒಂದು standing committee ಮಾಡಿ ನಮ್ಮ ಅಧಿಕಾರಿಗಳನ್ನು ಕೂಡ ಅದರಲ್ಲಿ ಸದಸ್ಯರಾಗಿ ಮಾಡಿದ್ದಾರೆ. ಈ ತಿಂಗಳ ಕೊನೆಯೊಳಗೆ ಅವರು ಒಂದು ಮೀಟಿಂಗ್ ಮಾಡಿ ಯಾವ ರೀತಿ ಈ ಕೆಲಸವನ್ನು ತಗೆದುಕೊಳ್ಳಬೇಕೆನ್ನುವ ತೀರ್ಮಾನಕ್ಕೆ ಬರುತ್ತಾರೆಂದು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ. ಬಹುಶಃ oil refinery, fertiliser factory, aluminium factory ಇವೆಲ್ಲ ಪ್ರಾರಂಭವಾಗಬೇಕಾಗಿದೆ ಅದಕ್ಕಾಗಿ ಆ area develop ಮಾಡುವುದಕ್ಕೆ ಈಗ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದೆ ಹೋದರೆ ಜಮೀನಿನ ಬೆಲೆ ಬಹಳ ಹೆಚ್ಚಾಗಬಹುದು ಎಂದು land freeze ಮಾಡುವ ಸಲುವಾಗಿ 17 ಸಾವಿರ ಎಕರೆ ಭೂಮಿಯ ಸಲುವಾಗಿ Land Acquisition Act ಪ್ರಕಾರ notify ಮಾಡಿದ್ದೇವೆ. ಅದರ ಪ್ರಕಾರ ಸಾಕಷ್ಟು ಸಿಬ್ಬಂದಿ ಇಟ್ಟುಕೊಂಡು ಕೆಲಸಮಾಡುತ್ತಿದ್ದೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ.

ನೀರು ಸರಬರಾಜು ಬಗ್ಗೆ ಬಹಳ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋಗಿದ್ದಾಗ ಕೇಂದ್ರದ ಆರೋಗ್ಯ ಸಚಿವರೊಡನೆ ಮಾತನಾಡಿದ್ದಾರೆ. ಅವರೇ ತಮ್ಮ ಮುಂದೆ ಹೇಳಬಹುದು. ಆದ್ದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಸಂಜೀವನಾಥ ಐಕಳ ಅವರು ಮಾತನಾಡುತ್ತಾ ವೆಸ್ಟ್ ಕೋಸ್ಟ್ ರಸ್ತೆ 150 ಅಡಿ ಮಾಡುತ್ತಿದ್ದೀರಿ. ಸುಮ್ಮನೆ ಭೂಮಿ ಹಾಳು ಮಾಡುತ್ತಿದ್ದೀರಿ ಎಂದು ಹೇಳಿದರು. ಇದು ಕನ್ಯಾಕುಮಾರಿಯಿಂದ ಬೊಂಬಾಯಿಯವರೆಗೂ ಹೋಗುವ ರಸ್ತೆ. ನಮ್ಮ ರಾಜ್ಯದಲ್ಲಿ ಮಾತ್ರ ಆಗುತ್ತಿರುವ ರಸ್ತೆಯಲ್ಲ ಅದು ಕೇರಳ, ಮೈಸೂರು, ಬೊಂಬಾಯಿ ಮತ್ತು ಗೋವಾ ಮೂಲಕ ಹೋಗುವಂಥಾದ್ದು. ಎಲ್ಲಾ ಕಡೆಯೂ uniform standard specification ಇಟ್ಟಿದ್ದಾರೆ. 150 ಅಡಿ ಇರಬೇಕೆಂದು ನಾವು 100 ಅಡಿ ಮಾಡುವುದು, ಮಹಾರಾಷ್ಟ್ರದವರು 150 ಅಡಿ ಮಾಡುವುದು, ಕೇರಳದವರು 80 ಅಡಿ ಮಾಡುವುದು, ಹೀಗೆ ಮಾಡಲು ಅವರು ಬಿಡುವ ಹಾಗಿಲ್ಲ ಈ ರಸ್ತೆ strategic importance ಇರುವಂಥಾದ್ದು. ಅಮೆರಿಕ ಮುಂತಾದ ದೇಶಗಳಲ್ಲಿ ನೋಡಿದರೆ national highway ಎಂದರೆ 300-400 ಅಡಿ ಅಗಲ ಇರುತ್ತದೆ. Approach roads ಅಥವಾ deviation roads ಬಂದರೆ ಅವು ಕೆಳಗೆ ಹೋಗುತ್ತವೆ. ಅಂಥ ಪರಿಸ್ಥಿತಿ ನಮ್ಮಲ್ಲಿಯೂ ಬರುತ್ತದೆ. ಇದೇ ರೀತಿ ಇರುವ ಹಾಗಿಲ್ಲ. ಇದು ಕೇಂದ್ರಕ್ಕೆ ಸಂಬಂಧಿಸಿದ ವಿಷಯವಾದುದರಿಂದ ಅದರ ಖರ್ಚನ್ನೆಲ್ಲ ಅವರೇ ವಹಿಸುತ್ತಾರೆ. ಆದುದರಿಂದ ನಾವು ರಸ್ತೆಯ ಅಗಲವನ್ನು ಕಡಮೆ ಮಾಡಬೇಕೆಂದು ಹೇಳುವುದು ಸರಿಕಾಣುವುದಿಲ್ಲ.

West coast road ಗೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡರೆ ಕಾಂಪೆನ್ ಸೇಷನ್ ಕೊಡುವುದು ಬಹಳ ನಿಧಾನವಾಗುತ್ತಿದೆ; cumbersome procedure ಇರುವುದರಿಂದ ಒಂದು ವರ್ಷಕ್ಕೆ ಮುಂಚೆ ಪರಿಹಾರ ಧನ ಸಿಕ್ಕುವುದಿಲ್ಲ ಆದುದರಿಂದ ಭೂಮಿಯನ್ನು ಕೊಟ್ಟ ಕೂಡಲೇ 75 per cent ಅಡ್ವಾನ್ಸಾಗಿ ಏಕೆ ಕೊಡಬಾರದು ಎಂದು ಕೇಳಿದರು. ನಾವು ಕೂಡ ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟಿದ್ದೇವೆ ಜಮೀನು ನಿಮ್ಮ ವಶಕ್ಕೆ ಕೊಟ್ಟ ಕೂಡಲೇ 75 per cent ಕಾಂಪೆನ್‌ಸೇಷನ್ ಕೊಡಬೇಕೆಂದು ತಿಳಿಸಿದ್ದೇವೆ. ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಹಣವನ್ನು Land Acquisition ಆಫೀಸರ ಕಡೆ ಕಳಿಸುತ್ತೇವೆ. ಅವರು quasi-judiciary officer ಆಗುವುದರಿಂದ ಅವರದೇ ಜವಾಬ್ದಾರಿ. ಸರ್ಕಾರಕ್ಕೆ ಬರುವ ಹಾಗೆಯೇ ಇಲ್ಲ. ಪಬ್ಲಿಕ್‌ವರ್ಕ್ಸ್ ಇಲಾಖೆಯಿಂದ ನಿಧಾನವಾಗುತ್ತಿದೆ ಎನ್ನುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಜಮೀನನ್ನು ಕೊಟ್ಟವರಿಗೆ ತೀವ್ರ ಪರಿಹಾರ ಸಿಕ್ಕಬೇಕು. 75 pet cent compensation ಕೊಡಬೇಕೆಂದರೂ final notification ಆಗುವವರೆಗೂ ಕೊಡುವುದಕ್ಕಾಗುವುದಿಲ್ಲ. ನಾನೂ ಮತ್ತು ರೆವೆನ್ಯೂ ಮಂತ್ರಿಗಳೂ ಕೂಡಿ ಇದನ್ನು ಹೇಗೆ ಬಗೆಹರಿಸಬೇಕೆಂದು ವಿಚಾರ ಮಾಡುತ್ತಿದ್ದೇವೆ. ಭೂಮಿಯ ಬೆಲೆ ಐದು ಸಾವಿರಕ್ಕಿಂತ ಹೆಚ್ಚಾದರೆ ಅದಕ್ಕೆ ಡಿವಿಷನಲ್ ಕಮಿಷನರ್‌ರವರ ಒಪ್ಪಿಗೆಯಿಲ್ಲದೆ ಕೊಡುವುದಕ್ಕಾಗುವುದಿಲ್ಲ. ಈ ತರಹ ಕಷ್ಟಗಳಿಂದ ನಿಧಾನವಾಗಿದೆ. ಆದಷ್ಟು ತೀವ್ರ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ.

ಇನ್ನೂ ಅನೇಕ ವಿಚಾರಗಳನ್ನು ಹೇಳಿದ್ದಾರೆ, ಅನೇಕ ವಿಷಯಗಳನ್ನು ಹೇಳಬೇಕೆಂದು notes ತಯಾರು ಮಾಡಿದ್ದೆ. ಈಗಾಗಲೇ ಬಹಳ ಕಾಲ ತೆಗೆದುಕೊಂಡಿದ್ದೇನೆ. ನಮ್ಮ ಇಲಾಖೆಯ ವಿಚಾರವನ್ನು ಬಿಟ್ಟು ತಮ್ಮ ಮುಂದೆ ಇಟ್ಟಿದ್ದೇನೆ. ತಮ್ಮೆಲ್ಲರಿಗೂ ಸಮಾಧಾನವಾಗಿರಬಹುದು ಎಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಸ್ವಾಮೀ, ಶ್ರೀಮಾನ್ ವೀರೇಂದ್ರ ಪಾಟೀಲ್‌ರವರೇ ನನಗೆ ಸಂಬಂಧಪಟ್ಟ ವಿಚಾರಗಳಲ್ಲಿ ಸಾಕಷ್ಟು ವಿಸ್ತಾರವಾಗಿ ಹೇಳಿದ್ದಾರೆ. ಸಣ್ಣ ನೀರಾವರಿಯ ವಿಚಾರದಲ್ಲಿಯೂ ಸಹ ಶ್ರೀಮಾನ್ ಆಲೂರು ಹನುಮಂತಪ್ಪನವರೂ ಆಗಲೇ ಹೇಳಿದ್ದಾರೆ. ಒಂದು ಮಾತನ್ನು ಮಾತ್ರ ಇಲ್ಲಿ ಸ್ಪಷ್ಟಪಡಿಸುತ್ತೇವೆ; ಸಣ್ಣ ನೀರಾವರಿ ಯೋಜನೆಗಾಗಿ ನಾವು ಎಷ್ಟು ಹಣವನ್ನು ಎತ್ತಿ ಇಟ್ಟಿದ್ದೇವೋ ಅಷ್ಟನ್ನೂ ಉಪಯೋಗಿಸುತ್ತೇವೆ. ಸಾಲದೇ ಹೋದರೆ ಕೇಂದ್ರ ಸರಕಾರದವರು ಈ ಯೋಜನೆಗಾಗಿ ಸಹಾಯ ಮಾಡಬೇಕೆಂದು ಕೇಳಿದರೂ ಕೊಡುತ್ತಾರೆ ಎನ್ನುವ ನಂಬಿಕೆ ನನಗಿದೆ. ಇದರ ಬಗ್ಗೆ ಇಲ್ಲದ ವಿಚಾರಗಳನ್ನು ಎತ್ತುವುದು ಬೇಡ.

ಮತ್ತೆ ಎಲೆಕ್ಟ್ರಿಸಿಟಿ ವಿಚಾರದಲ್ಲಿ, ಎಲ್ಲ ಕಡೆಗೂ ಕೊಡಬೇಕೆಂದು ಕೇಳುತ್ತಿದ್ದಾರೆ. ಒಂದು ಸಮಾಧಾನದ ಮಾತು, ಇಲ್ಲಿ ಹೇಳಬೇಕಾಗಿದೆ. ನಮ್ಮ ಮೈಸೂರ್ ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನವರು ಸಾಕಷ್ಟು ತ್ವರಿತದಿಂದ ಕೆಲಸ ಮಾಡುತ್ತಿದ್ದಾರೆ. ಸಾಧ್ಯವಾದಷ್ಟು ರೈಸಿಗೆ ಬೇಕಾದ ಕಂಬಗಳನ್ನು ಮತ್ತಿತರ ಸಲಕರಣೆಗಳನ್ನು ರೈಲಿನ ಮೂಲಕ ಸಾಗಿಸಲು ಸಾಧ್ಯವಿಲ್ಲದಿದ್ದರೂ ಲಾರಿಗಳಲ್ಲಿ ಹಾಕಿಕೊಂಡು ಹೋಗಿ ಹೈದರಾಬಾದು ಕರ್ಣಾಟಕದ ಭಾಗದಲ್ಲಿ ಬಹು ತ್ವರಿತದಿಂದ ಕೆಲಸ ಮಾಡುತ್ತಿದ್ದಾರೆ, ಇದು ಬಹು ಸಂತೋಷದ ಸಂಗತಿ.

ಶರಾವತಿ ವಿಚಾರದಲ್ಲಿ ಇಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ, ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಅದಕ್ಕೆ ಕೊನೆ ಮೊದಲೇ ಇಲ್ಲ. ನಾನೂ ಇದನ್ನು ಯೋಚನೆ ಮಾಡುತ್ತಿದ್ದೇನೆ. ಇದನ್ನು ವಿವರವಾಗಿ ನೋಡಬೇಕೆಂದಿದ್ದೇನೆ. ಇದರಲ್ಲಿ ಅನುಮಾನಕ್ಕೇನೂ ಕಾರಣವಿಲ್ಲ, ಹಿಂದೆ ಈ ವಿಚಾರವಾಗಿ ತಪ್ಪುಗಳನ್ನು ಮಾಡಿದ್ದಾರೆಯೇ ಎನ್ನುವುದನ್ನು ಮೊದಲಿನಿಂದ ಕೊನೆಯವರೆಗೂ ನೋಡಬೇಕಾಗುತ್ತದೆ. ಈ ಸಭೆಯ ಸದಸ್ಯರನ್ನು confidence ಗೆ ತೆಗೆದುಕೊಂಡು ಏನೇನು ವಿಚಾರ ಮಾಡಬೇಕೋ ಅದನ್ನೆಲ್ಲ ಮಾಡಿ ಅದನ್ನೆಲ್ಲ ಈ ಸಭೆಗೆ ತಿಳಿಸುವುದು ನನ್ನ ಕರ್ತವ್ಯ. ಈಗ್ಗೆ ಎರಡು ದಿವಸಗಳಿಂದಲೂ ಇದರ ರಿಕಾರ್ಡುಗಳಿಗಾಗಿ ಹುಡುಕಿಸುತ್ತಿದ್ದೇವೆ. ಕೆಲವು ರಿಕಾರ್ಡುಗಳು ಅಕೌಂಟೆಂಟ್ ಜನರಲ್ಲರವರ ಹತ್ತಿರ ಇವೆ. ಕೆಲವು ರಿಕಾರ್ಡುಗಳು ಕೋರ್ಟುಗಳಲ್ಲಿವೆ. ಇದನ್ನು ತರಿಸಲು ಪ್ರಯತ್ನ ಮಾಡುತ್ತಿದ್ದೇವೆ. ಕೆಲಸ ಮಾತ್ರ ಇಲ್ಲಿ ಬಹಳ ಚೆನ್ನಾಗಿ ನಡೆಯುತ್ತದೆ. ಇಲ್ಲಿರುವ ಇಂಜನೀಯರುಗಳು ಸಿವಿಲ್ ಇಂಜನೀಯರಿಂಗು ಇಲಾಖೆಯ ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಅರ್ಪಿಸತಕ್ಕದ್ದು ನನ್ನ ಕರ್ತವ್ಯ. ಶರಾವತಿಯಲ್ಲಿ ನಡೆಯುವ ಕೆಲಸಗಳ ಬಗ್ಗೆ ಕೇಂದ್ರ ಸರಕಾರಕ್ಕೆ ಅನುಮಾನ ಬಂದಿತ್ತು. ಆದರೆ ಅಲ್ಲಿಂದ ಬಂದ ಅಧಿಕಾರಿಗಳೇ ಎಲ್ಲವನ್ನೂ ನೋಡಿ ಇದರಲ್ಲೇನೂ ಹುರುಳಿಲ್ಲ ಎಂದು ಹೇಳಿಹೋದರು. ಆದರೆ ಈಚೆಗೆ ಮೊನ್ನೆ ಒಂದು ಶಬ್ದವನ್ನು ಒಂದು ಪೇಪರಿನಲ್ಲಿ ಓದಿದೆ. ಅದರಲ್ಲೇನೋ ಕೆಲವು ವಿಚಾರಗಳನ್ನು ನಾವು ಹೊರಗೆ ಬಿಡದಂತೆ ನಡೆದಿದೆ ಎನ್ನುವ ರೀತಿಯಲ್ಲಿ ಬರೆದಿದ್ದಾರೆ. ಈ ರೀತಿ ಏನಿಲ್ಲ. ಇದು mischievous and bogus statement. ಸತ್ಯವನ್ನು ಎಲ್ಲಿ ಹೊರಗೆಡವಬೇಕೋ ಅದನ್ನು ಹೇಳುವುದು ನಮ್ಮೆಲ್ಲರ ಕರ್ತವ್ಯ. ಅವರು ಯಾರೋ ಬೇಜವಾಬುದಾರಿಯುತವಾಗಿ ಇದನ್ನು ಬರೆದಿದ್ದಾರೆ ಮತ್ತು ಈ ವಿಚಾರದಲ್ಲಿ ಏನೇನೋ ಅಪಪ್ರಚಾರ ನಡೆದಿದೆ ಎಂದು ಏನೇನನ್ನೋ ಹೊರಗೆಡಹಿದ್ದಾರೆ. ಅಂತಹುದೇನೂ ಇಲ್ಲ. ಇದನ್ನೆಲ್ಲಾ ಸರಿಯಾಗಿ ನೋಡಿ ಏರ್ಪಾಡು ಮಾಡುತ್ತೇನೆ.

ಬೆಂಗಳೂರಿನ ವಾಟರ್‌ಸಪ್ಲೈ ವಿಚಾರವಾಗಿ ಎಲ್ಲ ಕಡೆಗೂ ಪ್ರಯತ್ನ ಮಾಡುತ್ತಿದ್ದೇವೆ. ದೇಶದ ಹೊರಗಡೆಯಿಂದ ಏನು ಸಹಾಯ ಸಿಗಬೇಕೋ, ಅದು ಅಮೆರಿಕದಿಂದಲಾಗಲೀ ಅಥವಾ ಬೇರೆ ಯಾವ ಸ್ಥಳದಿಂದಲಾಗಲೀ ಸಹಾಯವನ್ನು ಕೊಡಬೇಕೆಂದು ಮೇಲಿಂದ ಮೇಲೆ ಕೇಳುತ್ತಿದ್ದೇವೆ. ಕೇಂದ್ರ ಸರಕಾರದವರೂ ಈ ವಿಚಾರದಲ್ಲಿ ಸಹಾನುಭೂತಿಯಿಂದ ಇದ್ದಾರೆ. ನಾವು ಪ್ರಧಾನ ಮಂತ್ರಿಗಳಿಗೂ ಹೇಳಿದ್ದೇವೆ. ಕೇಂದ್ರದ ಆರೋಗ್ಯ ಮಂತ್ರಿಗಳಾದ ಶ್ರೀಮತಿ ಸುಶೀಲಾ ನಾಯರ್‌ರವರೂ ಬಂದು ಬೆಂಗಳೂರಿನ ನೀರಿನ ಬಗ್ಗೆ ಸಹಾನುಭೂತಿಯಿಂದ ಇದ್ದಾರೆ. ಇನ್ನೂ ಪ್ರಯತ್ನ ಮಾಡುತ್ತಲೇ ಇದ್ದೇವೆ. ಬಹುಶಃ ಆದಷ್ಟು ಜಾಗ್ರತೆ ಈ ಕೆಲಸ ಕಾರ್ಯರೂಪಕ್ಕೆ ಬರುತ್ತದೆ ಎನ್ನುವ ಆಸೆ ನನಗಿದೆ.

ಈ ಡಿಮ್ಯಾಂಡುಗಳಿಗೆ ಈ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ವೀರೇಂದ್ರ ಪಾಟೀಲ್‌ರವರು ಸುಪ್ರೀಂ ಕೋರ್ಟಿಗೆ ಹೋಗುವ ಬಗ್ಗೆ ಮತ್ತು ಶ್ವೇತ ಪತ್ರವನ್ನು ಹೊರಡಿಸಲಿಕ್ಕೆ ಮತ್ತು ಈ ಸಭೆಯ ಮುಂದಿಡಲು ನಾನು ಹೇಳಿದ ವಿಚಾರಗಳ ಬಗ್ಗೆ ಅವರು ಕೊಟ್ಟ ಉತ್ತರದಿಂದ ನನಗೆ ಸಮಾಧಾನವಾಗಲಿಲ್ಲ. ಅವರು ಈ white paperನ್ನು ಹೊರಡಿಸಲು ಏನೋ ಆತಂಕ ಇದೆ ಮತ್ತು ಅದಕ್ಕೆ ಟೆಕ್ನಿಕಲ್ ಆಗಿ ಒಂದು ಕಷ್ಟವೇ ಇದೆ ಎಂದು ಹೇಳಿದರು. ಮತ್ತು ಮಾನ್ಯಮಂತ್ರಿಗಳು ನಮ್ಮ ಬೇಡಿಕೆಯನ್ನು ಈಡೇರಿಸದೇ ಹೋದರೆ, ಆಂಧ್ರದವರು ನಾಗಾರ್ಜುನ ಸಾಗರ ಕೆಲಸವನ್ನು ಮುಂದುವರಿಸಿಕೊಂಡು ಹೋದರೆ ಆಗ ನಮಗೇನು ನೀರು ಉಳಿಯುತ್ತದೆ ಎಂದರೆ ಏನೂ ಇಲ್ಲ. ಸುಪ್ರೀಂ ಕೋರ್ಟಿಗೆ ಹೋಗುವುದು ಸುಲಭ ಮಾರ್ಗವೇ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರದಲ್ಲಿ ಅಷ್ಟು ಸಂಶಯಕ್ಕೆ ಕಾರಣವಿಲ್ಲ. ನಾವು ಏನೇನು ಹೇಳಬೇಕೋ ಅವನ್ನೆಲ್ಲಾ ಹೇಳಿ ಬಂದಿದ್ದೇವೆ. ಎಲ್ಲ ಸ್ಟೇಟುಗಳವರೂ ಬಂದು ಹೇಳಿದ್ದಾರೆ. ಯಾರು ಯಾರಿಗೆ ಏನೇನು ಬೇಕು ಎನ್ನುವುದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡುತ್ತಿದ್ದಾರೆ. ಕೇಂದ್ರ ಸರಕಾರದ ಅಭಿಪ್ರಾಯವನ್ನು ತಿಳಿಯದೆ ಇಲ್ಲದೇ ಇರುವುದನ್ನು ಇಲ್ಲಿ ಹೇಳುವಂತಹ ಮನೋಭಾವ ಬೇಡ. ಇದನ್ನು ಸಕಾಲದಲ್ಲಿ ಬಗೆಹರಿಸೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶರಾವತಿ ಸ್ಕೀಮಿನ ಬಗ್ಗೆ ಒಬ್ಬ ಕಂಟ್ರಾಕ್ಟರಿಗೆ ಪುನಃ 33 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಇದೆ. ಇದರ ಬಗ್ಗೆ ಸರಕಾರಿ ಆರ್ಡರು ಇನ್ನೊಂದೆರಡು ದಿನಗಳಲ್ಲಿ ಇಷ್ಯೂಮಾಡಲು ಇಟ್ಟುಕೊಂಡಿದ್ದೀರೆಂದು ಕೇಳಿದ್ದೇವೆ. ಇದೂ ಅಲ್ಲದೆ ಇನ್ನು 22 ಲಕ್ಷ ರೂಪಾಯಿಗಳನ್ನು ಆಗಲೇ ಕೊಟ್ಟಿದ್ದೇವೆಂದು ಇದಕ್ಕಾಗಿ ಆರ್ಬಿಟ್ರೇಟರನ್ನು ನೇಮಿಸಿದ್ದಾರೆಂದು ಕೇಳಿದೆ. ಇದರ ಕೇಸುಗಳೇನಾದರೂ ಕೋರ್ಟಿಗೆ ಹೋಗಿದೆಯೇ ! ಇವನ್ನೆಲ್ಲಾ ನಾನು ಪೇಪರಿನಲ್ಲಿ ಓದಿದ್ದೆ. ಇದರ ಬಗ್ಗೆ ವಿವರವೇನು ?

Sri M. V. RAMA RAO (Minister for Law).—There are two arbitration matters which are pending before the Courts of the District Magistrate at Shimoga and the district Magistrate at Bangalore. I do not think it is desirable to discuss matters either by way of questions and answers or by any other way.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—33 ಲಕ್ಷ ಕೊಡಲು G.O. ಆಗಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಕೋರ್ಟಿಗೆ ಹೋಗಿರುವುದು ನಿಜ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶರಾವತಿಯ ಬಗ್ಗೆ ಅನೇಕ ವಿಚಾರಗಳನ್ನು ಪದೇ ಪದೇ ಇಲ್ಲಿ ಹೇಳುತ್ತಿದ್ದರೂ ಯಾವುದಾದರೂ ಇದ್ದರೆ ಕೂಲಂಕಷವಾಗಿ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಲೇ ಬರುತ್ತಿದ್ದೀರಿ. ಯಾವುದಾದರೂ ಒಂದು ಸೆಷನ್ನಿನಲ್ಲಿ ನಾವು ಪುನಃ ಕೇಳಿದರೆ ಇದರ ವಿಚಾರ ನಮಗೆ ಬಿಟ್ಟುಬಿಡಿ ಎನ್ನುತ್ತೀರಿ. ಇದರಿಂದ ನಂಬಿಕೆ ಕೆಟ್ಟು ಹೋಗುತ್ತದೆ. ಕಾಲ ವಿಳಂಬವಾಗುತ್ತದೆ. ಅದರಿಂದ ಕೇಸೂ ಕೆಟ್ಟು ಹೋಗುತ್ತದೆ. ಸರಕಾರಕ್ಕೂ ತೊಂದರೆಯಾಗುವುದರಿಂದ ಯಾವುದಾದರೂ ಒಂದು ನೀತಿಯನ್ನು ಅನುಸರಿಸಿ ಈ ಕೇಸನ್ನು ಸರಿಯಾಗಿ ನಿರ್ಧಾರ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಧ್ಯವಾದಷ್ಟನ್ನೂ ಹೇಳಿದ್ದೇವೆ. ಇದರಿಂದ ನನಗೆ ಸಮಾಧಾನವಾಗದೇ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಇದ್ದರಲ್ಲಿ ಅನೇಕ ವಿಷಯಗಳಿವೆ. ಅವನ್ನೆಲ್ಲಾ ನೋಡಿ ಸರಿಯಾಗಿ ವಿಚಾರ ಮಾಡೋಣ.

ಶ್ರೀ ಅಣ್ಣಾರಾವ್ ಗಣಮುಖಿ.—ಮಾನ್ಯ ಮುಖ್ಯಮಂತ್ರಿಗಳು ಎಲೆಕ್ಟ್ರಿಸಿಟಿಯ ಕೆಲಸದ ಬಗ್ಗೆ ಹೈದರಾಬಾದು ಕರ್ಣಾಟಕದಲ್ಲಿ ಬಹಳ ಹೆಚ್ಚಿಗೆ ಮಾಡಿದ್ದೇವೆಂದು ಹೇಳಿದರು. ಅಷ್ಟು ತೀವ್ರವಾಗಿ ನಡೆದಂತೆ ಕಾಣುತ್ತಿಲ್ಲ. ಲೈನು ಇನ್ನೂ ರಾಯಚೂರುವರೆಗೆ ಬರುವುದರಲ್ಲದೆ, ಬೀದರೆ, ಗುಲ್ಬರ್ಗ ಈ ಭಾಗಕ್ಕೆ ಬರಲು ಇನ್ನೆಷ್ಟು ಕಾಲವಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಹೇಳುವುದು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಎಲೆಕ್ಟ್ರಿಸಿಟಿ ಉತ್ಪತ್ತಿ ಯಾಗೇ ಆರೆಂಟು ತಿಂಗಳಾದವು. ಆದುದರಿಂದ ಹೇಗೆ ಉತ್ಪತ್ತಿಯಾಗುತ್ತಿದೆಯೋ ಹಾಗೆ ಕೊಡಬೇಕೆಂದು ಇಲ್ಲಿ ಲೈನುಗಳನ್ನು ಹಾಕುತ್ತಿದ್ದಾರೆ.

ಶ್ರೀ ಜಿ. ಮರುಳಪ್ಪ (ಕಡೂರು).—Non-Development worksಗಾಗಿ ಒಂದು ಬೋರ್ಡು ಮಾಡಬೇಕೆಂದು ಹೇಳಿದ್ದೆ, ಇದರ ಬಗ್ಗೆ ಉತ್ತರ ಬರಲಿಲ್ಲ. ಅಲ್ಲದೆ ಹಳ್ಳಿಗಳಿಗೆ ಬಹಳ ಮುಖ್ಯವಾದ ಕೆಲವು ಪಂಪು ಸೆಟ್ಸ್‌ಗಳು ಹಾಗೆಯೇ ಬಿದ್ದಿವೆ. ಅದನ್ನು ಏನು ಮಾಡುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ನಾನ್ ಡೆವೆಲಪ್‌ಮೆಂಟು ಬೋರ್ಡು ಮಾಡಬೇಕೆನ್ನುವುದು ಇನ್ನೂ ಆಲೋಚನೆಯಲ್ಲಿದೆ. ಹಿಂದೆ ಮಲೆನಾಡು ಡೆವಲೆಪ್‌ಮೆಂಟು ಬೋರ್ಡು ಎಂದಿತ್ತು. ಯಾವ ರೀತಿ ಮಾಡಬೇಕೆಂದು ಯೋಚನೆ ಇದೆ.

ಶ್ರೀ ಎಸ್. ಗೋಪಾಲಗೌಡ.—ಶರಾವತಿಗಾಗಿ American Aidನ ಅವಶ್ಯಕತೆ ಇದೆ ಎಂದು ನಿಮ್ಮ ಅಭಿಪ್ರಾಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದರಲ್ಲಿ ಯಾವ ಅನುಮಾನವೂ ಇಲ್ಲ. ಸಹಾಯ ಎಲ್ಲಿಂದಲಾದರೂ ಬರಲಿ. ಸೆಂಟ್ರಲ್ ಗವರ್ನಮೆಂಟಿನವರಿಗೆ ಹೋದ ಸಾರಿ ಇಲ್ಲಿ Non Confidenceನ ಬಗ್ಗೆ ಚರ್ಚೆ ನಡೆದಾಗ ಯಾರೋ ಇದರ ವಿಚಾರ ತಿಳಿಸಿದ್ದರಂತೆ. ಅವರೂ ವಿಚಾರ ಮಾಡಿದ್ದರಲ್ಲಿ ಇದರಲ್ಲಿ ಹುರುಳಿಲ್ಲ ಎಂದೂ ಅವರಿಗೆ ತಿಳಿದು ಬಂತು. ಶರಾವತಿಗೋಸ್ಕರ ನಮಗೆ ಅವರೇ ಸಹಾಯ ಕೊಡಲಿ ಅಥವ ಬೇರೆಯವರಾದರೂ ಕೊಡಲಿ, ನಾವು ಆ ಸಹಾಯವನ್ನು ಪಡೆಯಬೇಕಾಗಿದೆ.

Mr. SPEAKER.—I will now put the Demands to the vote of the House.

The question is :

"That the respective sums not exceeding the amounts shown in the list of Demands circulated to the members be granted to defray the charges which will come in course of payment during the financial year ending with 31st day of March 1964, in respect of demands Nos. 31, 48, 49, 29, 30, 45, 46, 43, 47, 32 and 50,"

The motion was adopted.

[*As directed by the Chair the motions for Demands which were adopted by the House are reproduced below*] :—

DEMAND NO. 31.—PUBLIC WORKS.

50. Public Works.

"That a sum not exceeding Rs. 20,17,31,600 be granted to the Government to defray the charges which will come in course of payment during the financial year for the period ending 31st day of March 1964, in respect of 'Public Works'."

DEMAND NO. 48.—CAPITAL OUTLAY ON PUBLIC WORKS.

103. Capital Outlay on Public Works.

"That a sum not exceeding Rs. 4,77,39,500 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on Public Works'."

DEMAND No. 49.—CAPITAL ACCOUNT OF OTHER WORKS OUTSIDE THE REVENUE ACCOUNT.

109. Capital Outlay on other Works.

"That a sum not exceeding Rs. 4,00,000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital outlay on other Works'."

DEMAND No. 29.—IRRIGATION—COMMERCIAL.

43. Irrigation, Navigation, Embankment and Drainage Works (Commercial).

"That a sum not exceeding Rs. 3,48,26,700 be granted to the Government to defray the charges which will come in course of payment during the financial year for the period ending 31st day of March 1964, in respect of 'I.N.E.& D. Works (Commercial)'."

DEMAND No. 30.—IRRIGATION—NON-COMMERCIAL.

44. Irrigation, Navigation, Embankment and Drainage Works (Non-Commercial).

"That a sum not exceeding Rs. 1,21,26,000 be granted to the Government to defray the charges which will come in course of payment during the financial year for the period ending 31st day of March 1964, in respect of I.N.E.& D. Works (Non-Commercial)'."

DEMAND No. 45.—CAPITAL OUTLAY ON IRRIGATION.

99. Capital Outlay on Irrigation, Navigation, Embankment and Drainage Works (Commercial).

"That a sum not exceeding Rs. 8,85,87,000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital out-lay on Irrigation, Navigation, Embankment and Drainage Works—Commercial'."

DEMAND No. 46.—CAPITAL OUTLAY ON IRRIGATION—NON-COMMERCIAL.

100. Capital Outlay on I.N.E. and D. Works Non-Commercial.

"That a sum not exceedings Rs. 2,07,00000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on I.N.E. and D. works-Non-Commercial'."

DEMAND NO. 43.—CAPITAL OUTLAY ON IMPROVEMENT OF PUBLIC HEALTH.

94. *Capital Outlay on Improvement of Public Health.*

"That a sum not exceeding Rs. 47,01,000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on Improvement of Public Health'."

DEMAND NO. 47.—CAPITAL ACCOUNT OF ELECTRICITY SCHEMES OUTSIDE THE REVENUE ACCOUNT.

101. *Capital Outlay on Electricity Schemes.*

"That a sum not exeeding Rs. 23,82,95,400 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on Electricity Schemes'."

DEMAND NO. 32.—PORTS AND PILOTAGE.

53. *Ports and Pilotage.*

"That a sum not exceeding Rs. 4,16,000 be granted to the Government to defray the charges which will come in course of payment during the financial year for the period ending 31st day of March 1964, in respect of 'Ports and Pilotage'."

DEMAND NO. 50.—DEVELOPMENT OF MINOR PORTS.

110. *Capital Outlay on Ports.*

"That a sum not exceeding Rs. 51,00,000 be granted to the Government to defray the charges which will come in course of payment during the financial year for the period ending 31st day of March 1964, in respect of 'Capital Outlay on Ports'.".

Mr. SPEAKER.—The House will now rise and meet to-morrow at 12 NOON.

The House adjourned at Twenty Minutes past Seven of the Clock to meet again at Twelve of the Clock on Thursday, the 21st March 1963.

WD 396—GPB—900—30-8-1963

MYSORE LEGISLATIVE ASSEMBLY

TWENTY-THIRD DAY.

Thursday, 21st March 1963.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given).

Delay caused for Disposal of Groundnut Produce brought to Gadag Market Yard.

**Q.*—59. SRI C. S. HULKOTI (Mundargi).—

Will the Government be pleased to state :—

(*a*) whether they are aware that there is a delay of one week or even ten or twelve days for disposal of groundnut produce brought to Gadag Market Yard for sale by the Agriculturists on account of the auction sale system now introduced by the Gadag Agricultural Produce Market Committee ;

(*b*) the total number of commission agents in the Gadag Market Yard area who are dealing in the disposal of groundnut Produce brought for sale by the agriculturists ;

(*c*) the staff employed by the Agricultural produce Market Committee required to be present at the time of auction sale held by a commission agent ;

(*d*) what is the usual period of time taken to get a turn of auction sale by commission agent in the said market yard area ;

(*e*) whether it has come to the notice of the Government that agriculturists who bring their groundnut produce to the market for sale are put to great loss by ups and downs in the sale price which is daily dependent on Bombay Market;

(*f*) the difficulty in not insisting the uniform system to be followed throughout the State in the auction sale system ;

(*g*) whether they intend to take necessary action to relieve the distress and hardships caused to the agriculturists and stop the loss to be sustained by them on account of the system of auction sale pursued now by the Gadag Agricultural Produce Market Committee ?

A.—Sri KONDAJJI BASAPPA (Deputy Minister for Co-operation).—

(*a*) No.

(*b*) 82.

(*c*) 2 Clerks in addition to the Secretary.

(*d*) Every alternate day during peak season and on every day during slack season.

(*e*) No.

(*f*) The enforcement of an uniform system of sale in all Markets of the State is not found practicable as it will not hold good for all Markets in the State.

(*g*) No distress and hardship is being caused by open auction system in the Gadag Market.

Sri C. S. HULKOTI.—May I know what is the total daily arrival of groundnut bags ?

†Sri KONDAJJI BASAPPA.—Round about 10,000 bags per day during the peak season.

Sri C. S. HULKOTI.—Are the Government aware that 20-30 commission agents deal in the disposal of those bags that arrive daily ?

Sri KONDAJJI BASAPPA.—There are about 82 commission agents in the whole of the Market. Naturally, it is not every merchant that gets the goods ; a few of them may get and a few may not get.

Sri C. S. HULKOTI.—Are the Government aware that auction sales take place daily except on Sunday, from 10 a.m. to 1.30 p.m. ?

Sri KONDAJJI BASAPPA.—Information as to the timings is not available I will furnish the information to the Honourable Member.

ಶ್ರೀ ಸಿದ್ದಯ್ಯ ಕಾಶೀಮಠ್.—ಗದಗ್ ಮಾರ್ಕೆಟಿಂಗ್ ಯಾರ್ಡಿನಲ್ಲಿ ರೈತರು ತಂದು ಮಾರಾಟ ಮಾಡುವ ಮಾಲುಗಳಲ್ಲಿ ಬಹಳ ಜನ ರೈತರಿಗೆ ತೊಂದರೆಯಾಗುತ್ತಿದೆ ಎನ್ನುವ ದೂರುಗಳು ಸರ್ಕಾರಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಏನೂ ಇಲ್ಲ.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ಮಾರ್ಕೆಟ್ಟುಗಳಲ್ಲಿ ಈಗ ಯಾವ ಯಾವ ರೀತಿಯಾದ ಸಿಸ್ಟಂಗಳಿವೆ ?

Sri KONDAJJI BASAPPA.—There are two systems prevalent in the whole of Mysore. One is by open auction ; the other is by tender system.

Sri C. S. HULKOTI.—In what other market area is open auction sale followed ?

Sri KONDAJJI BASAPPA.—Entire Gulbarga Division, Bijapur District in Belgaum Division and Belgaum.

Sri G. V. GOWDA.—Is it not a fact that tender system is very useful both to agriculturists and dalals ?

Sri KONDAJJI BASAPPA.—Where the arrivals are more in the peak season, it is supposed to be the best. Each Market Committee has an alternative system. If they choose to have the other system, they can have it.

Sri G. V. GOWDA.—Is it not possible to dispense with Commission agents and entrust the particular job to officers ?

Sri KONDAJJI BASAPPA.—We cannot dispense with the commission agents. Whoever wants to take part in the auction sale is permitted to do so.

Sri C. S. HULKOTI.—In what parts of Mysore is the tender system prevalent ?

Sri KONDAJJI BASAPPA.—In Hubli market there is the tender system. In Davangere recently, instead of an open auction sale, they have introduced the tender system. In some parts of old Mysore also, they have introduced this system.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಟೆಂಡರು ಸಿಸ್ಟಂ ಇಲ್ಲ, ಇಂಟ್ರೊಡ್ಯೂಸ್ ಮಾಡಬೇಕೆಂದು ಇಲ್ಲಿನ ರೈತರು ಒಪಿನಿಯನ್ ಕೊಟ್ಟಿದ್ದಾರೆಯೆ ?

Sri KONDAJJI BASAPPA.—They have not expressed any opinion in the matter because majority of the regulated market members are from the growers. In a Committee of 15, 8 are from the producers section, 5 from the trade interests, one from municipality and another from the Local Board.

Sri GANJI VEERAPPA.—May I know whether any decision has been taken in the Seminar of Regulated Markets held recently with regard to this point ?

Sri KONDAJJI BASAPPA.—I am not aware.

Sri C. S. HULKOTI.—Is it not desirable to follow the tender system ?

Sri KONDAJJI BASAPPA.—It is an opinion of the Hon'ble Member. That can be looked into.

Sri C. S. HULKOTI.—Are the Government aware that in commission agent's godown, it takes nearly one hour to finish the auction sale of customer ?

Sri KONDAJJI BASAPPA.—The tender system seems to be the better of the two. If in the system the time also is minimised, disposal can be earlier. If it is open auction, naturally a lot of time is wasted.

Sri C. S. HULKOTI.—By the variation of rate, the agriculturists are put to loss by this system ? ...

Sri KONDAJJI BASAPPA.—They are not. They don't incur any loss at all because it is competitive rate. Even in an open auction sale, it is competitive rate.

Sri C. J. MUCKANNAPPA.—What is the difference between tender and auction?

Sri KONDAJJI BASAPPA.—In an open auction sale, each man says that he will bid for so much amount. In a tender system it is kept a secret. Each one quotes his own rate in a sealed cover. Whoever quotes the highest rate, his tender is accepted.

Sri GANJI VEERAPPA.—Is it not a fact that the system of open auction in Davangere has failed and naturally they had to resort to the other system ?

Sri KONDAJJI BASAPPA.—The Market Committee of Davangere wanted the tender system. They find it very satisfactory.

Co-operative Societies working in Kunigal Taluk

*Q.—83. Sri ANDANAIAH (Kunigal).—

Will the Government be pleased to state:—

(a) the number of Co-operative societies working in Kunigal Taluk at present;

(b) the amount that has been advanced as loans through these societies in 1960-61 and 1961-62 (Particulars of Short Term Loans, Medium Term Loans, Long Term Loans and Produce Loans, etc., may be furnished);

(c) the loans which are not been repaid in time;

(d) what action has been taken by the concerned Department in respect of outstanding arrears?

A.—Sri RAMAKRISHNA HEGDE (Minister for Co-operation and Development).—

(a) 69.

(b) Loans.

Loans	*Amount advanced during* 1960-61 Rs.	1961-62 Rs.
Short term	6,22,610	7,56,570
Medium term	3,45,276	38,750
Produce Loan	2,10,445	71,000
Long term	1,14,968	1,79,229

(c) *Amount due as on 30th September* 1962.

Type of loan		Amount. Rs.
Short term	...	2,97,181
Medium term	...	84,662
Long term	...	18,247
Produce loan	...	1,56,503

(d) The societies have been instructed to file disputes and the amount is being recovered through execution proceedings.

ಶ್ರೀ ಅಂದಾನಯ್ಯ.—(d)ಗೆ ಉತ್ತರವಾಗಿ ಸೊಸೈಟಿಗಳಿಗೆ ದಾವಾ ಹಾಕಲು ಸೂಚಿಸಿದೆ ಎಂದು ಹೇಳಿದ್ದೀರಿ ಈಗ ಎಷ್ಟು ದಾವಾಗಳನ್ನು ಹಾಕಿದ್ದಾರೆ ಮತ್ತು ಅಲ್ಲಿಂದೀಚೆಗೆ ಎಷ್ಟು ಹಣ ವಸೂಲಾಗಿದೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕಳೆದ ಎರಡು ಮೂರು ತಿಂಗಳಿನಿಂದೀಚೆಗೆ 30 ಸಾವಿರಕ್ಕಿಂತ ಹೆಚ್ಚಾಗಿ ವಸೂಲಾಗಿದೆ. ಬಾಕಿ ಸಾಲಗಳನ್ನು ವಸೂಲಿ ಮಾಡಲು ಪ್ರಯತ್ನ ನಡೆಯುತ್ತಿದೆ.

ಶ್ರೀ ಅಂದಾನಯ್ಯ.—ಈ ವಸೂಲಿ ಇಷ್ಟು ತಡವಾಗಲು ಕಾರಣವೇನು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರಲ್ಲಿ ತಡವೇನೂ ಆಗಿಲ್ಲ ಕೊಟ್ಟಿದ್ದೇ 1960-61 ಮತ್ತು 1961-62ರಲ್ಲಿ ಆಗಿನಿಂದ ಈಚೆಗೆ ಹತ್ತಾರು ವರ್ಷಗಳೂ ಆಗಿಲ್ಲ. ಐದಾರು ವರ್ಷಗಳೂ ಆಗಿಲ್ಲ.

Sri T. MADIAH GOWDA.—How many persons are involved in each case?

Sri RAMAKRISHNA HEGDE.—It is very difficult to give that information now. If the Hon'ble Member wants the information, I will furnish it.

Sri G. V. GOWDA.—"Produce loan......Rs. 1,56,503." May I know whether the Department has verified that particular marketing society has recovered this loan from the ryots ?

Sri RAMAKRISHNA HEGDE.—This is the amount over-due.

Sri G. V. GOWDA.—Due for payment by the end of .0th September. It has fallen into arrears.

Sri RAMAKRISHNA HEGDE.—This amount is due from the ryots ; it is not due from the society.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೀಡಿಯಂ ಟರ್ಮ್‌ಲೋನು, ಷಾರ್ಟ್‌ಟರ್ಮ್‌ಲೋನು ಎಂದು ಕೊಟ್ಟಿರುವುದರಲ್ಲಿ ಯಾವುದಾದರೂ ಲಾಂಗ್ ಟರ್ಮ್‌ಲೋನಾಗಿ ಕನ್‌ವರ್ಟ್ ಮಾಡಿದ್ದೀರಾ

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಾಗೆ ಕನ್‌ವರ್ಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

Sri G. V. GOWDA.—When the ryots who have pledged their produce, don't redeem that pledge in time, is it not open to the society to auction them ?

Sri RAMAKRISHNA HEGDE.—It is possible in certain circumstances.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಭತ್ತ ಕೊಂಡುಕೊಳ್ಳುವುದಕ್ಕಾಗಿ ಕೆಲವು ಮಾರ್ಕೆಟಿಂಗ್ ಸೊಸೈಟಿಗಳಿಗೆ ಸಾಲವಾಗಿ ದುಡ್ಡು ಕೊಡುತ್ತಿದ್ದಾರೆ. ಅಂತಹ ಸಾಲದ ರೂಪದಲ್ಲಿ ಕೊಟ್ಟಹಣ ಏನಾದರೂ ಬಾಕಿ ನಿಂತಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಜನರಿಗೆ ಸಾಲ ಕೊಟ್ಟಿರುವ ಸಂಬಂಧ ಪ್ರಶ್ನೆಯಲ್ಲ. ಸೊಸೈಟಿಗಳಿಗೆ ಸರಕಾರ ಸಾಲ ಕೊಟ್ಟಿರುವುದು ಮಾತ್ರ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಸೆಂಟ್ರಲ್ ಬ್ಯಾಂಕಿನವರು ಡಿಸ್ಟ್ರಿಕ್ಟ್ ಲೆವೆಲ್ಲಿನಲ್ಲಿ ರೈತರ ನಿಕಟ ಸಂಪರ್ಕವನ್ನಿಟ್ಟುಕೊಳ್ಳುವುದಕ್ಕಾಗಿ ಈ ಸೊಸೈಟಿಗಳಿಗೆ ಸಾಲ ಕೊಡುವುದಕ್ಕೆ ಬದಲಾಗಿ ಸೆಂಟ್ರಲ್‌ಬ್ಯಾಂಕಿನ ಸಂಪರ್ಕ ಇಟ್ಟುಕೊಂಡರೆ ಈ ದೇಶದ ಎಲ್ಲ ಭಾಗದ ಜನಗಳಿಗೂ ತೊಂದರೆ ಕಡಿಮೆಯಾಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಅವರ ಅಭಿಪ್ರಾಯದ ಮಾತು. ಕೆಲವು ವೇಳೆ ಇದರಿಂದ ದುಷ್ಪರಿಣಾಮಗಳು ಆದರೂ ಆಗಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಉತ್ತರದಲ್ಲಿ 1960-61ನೇ ಸಾಲಿಗೆ ಇಷ್ಟು ಸಾಲಗಳು, 61-62 ನೇ ಸಾಲಿಗೆ ಇಷ್ಟು ಸಾಲಗಳು ಕೊಟ್ಟಿದೆ. ಇಷ್ಟುಬಾಕಿಇದೆ ಎಂದು ಹೇಳಿದ್ದೀರಿ ಆದರೆ ಇಂತಹ ರೋಸಿಗಾಗಿ ತಾವು ಹಣಕೊಡುವಾಗ ಇಂತಿಷ್ಟೇ ಅವಧಿಯಲ್ಲಿ ಹಣವನ್ನು ವಾಪಸು ಕೊಡಬೇಕೆಂದು ಷರತ್ತು ಏನಾದರು ಇದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಾಮಾನ್ಯವಾದ ಷರತ್ತುಗಳು ಏನಿವೆಯೋ ಅದನ್ನು ನಿರ್ದಿಷ್ಟ ಪಡಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಸ್ಪೆಸಿಫಿಕ್ ಆಗಿ ಇಂತಿಷ್ಟೇ ದಿವಸದಲ್ಲಿ ಕೊಡಬೇಕೆಂದು ನಿರ್ದಿಷ್ಟವಾಗಿ ಷರತ್ತು ಹಾಕಿಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದಕ್ಕೆ ನಿರ್ದಿಷ್ಟವಾಗಿ ಒಂದುವರ್ಷದೊಳಗೆ ಕೊಡಬೇಕು ಎನ್ನುವ ಷರತ್ತಿದ್ದರೆ ಅದರಂತೆ ಕೊಡುತ್ತಾರೆ.

ಶ್ರೀ ವಿ. ಎಂ. ದೇವ್.—ಸ್ವಾಮಿ, ಮಾನ್ಯ ಮಂತ್ರಿಗಳು ಬರುವಾಗ್ಗೆ ಪ್ರಶ್ನೋತ್ತರಗಳನ್ನು ಸ್ವಲ್ಪ study ಮಾಡಿಕೊಂಡು ಬರಬೇಕೆಂದು ಸೂಚಿಸುತ್ತೇನೆ. ಯಾಕೆಂದರೆ ಮಹತ್ವದ ಪ್ರಶ್ನೆಗಳಿಗೆ ಸರಿಯಾದ ವಿವರ ಕೊಡುವದಿಲ್ಲ.

Mr. SPEAKER.—It is a suggestion for action.

Scarcity of Iron and Steel in the State.

**Q.*—118. Sri T. D. DEVENDRAPPA (Bhadravati).—

Will the Government be pleased to state:—

(*a*) whether it has come to their notice that there is scarcity of Iron and Steel in the State on account of relaxation of control on Iron and Steel;

(*b*) the reasons for not yet taking any decision by the licensing authority even after the receipt of applications for appointing new dealers and stockists in each district in order to avoid the difficulties to consumers;

(*c*) the action taken by them to issue the order early;

(*d*) the number of applicants for appointment as dealers;

(*e*) the principles on which these appointments are made;

(*f*) whether they intend to appoint villagers as dealers as order to ensure the supply of iron articles to the ryots?

A.—Sri K. MALLAPPA (Minister for Industries and Commerce).—

(*a*) No.

(*b*) The decision by the State Government has already been taken.

(*c*) A recommendation has been made to the Iron and Steel Controller, Calcutta, to issue orders of appointment.

(*d*) Particulars of the total number of applicants are not available. Government have considered 167 applications.

(*e*) A fair and proper distribution in all areas of the State.

(*f*) Yes.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಒಟ್ಟು ಎಷ್ಟು ಮಂದಿ ಅರ್ಜಿದಾರರುಗಳು ಇದ್ದಾರೆಂಬ ಬಗ್ಗೆ ವಿವರಗಳು ದೊರೆಯುವಂತಿಲ್ಲ. ಸರ್ಕಾರದವರು 167 ಅರ್ಜಿಗಳನ್ನು ಪರಿಶೀಲಿಸಿದ್ದಾರೆ ಎಂದು ಉತ್ತರ ಹೇಳಿದೆ. ಎಷ್ಟು ಅರ್ಜಿಗಳು ಬಂದಿವೆ ಎಂಬುದನ್ನು ಏಕೆ ತಿಳಿಸಲಿಲ್ಲ?

†ಶ್ರೀ ಕೆ. ಮಲ್ಲಪ್ಪ.—ವಿವರ ಕೊಡುವದಕ್ಕಾಗುವದಿಲ್ಲ. 167 ಅರ್ಜಿಗಳನ್ನು ಪರಿಶೀಲಿಸಿದ್ದೇವೆ.

ಶ್ರೀ ಜಿ. ವಿ. ಗೌಡ.—ಸಹಕಾರ ಸಂಘಗಳಿಂದ ಬಂದ ಅರ್ಜಿಗಳೆಷ್ಟು? ವ್ಯೆಯಕ್ತಿಕವಾಗಿ ಬಂದ ಅರ್ಜಿಗಳೆಷ್ಟು?

ಶ್ರೀ ಕೆ. ಮಲ್ಲಪ್ಪ.—167 ಅರ್ಜಿಗಳ ಪೈಕಿ ಸಂಘಗಳಿಂದ 80 ಅರ್ಜಿಗಳು ಬಂದಿವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಯಾವ ಆಧಾರದಮೇಲೆ ಈ ಅರ್ಜಿಗಳನ್ನು ಚುನಾಯಿಸಿದ್ದೀರಿ!

ಶ್ರೀ ಕೆ. ಮಲ್ಲಪ್ಪ.—167 ಅರ್ಜಿಗಳನ್ನು ಪರಿಶೀಲನೆ ಮಾಡಿ ಎಲ್ಲ ಅರ್ಜಿಗಳನ್ನು ಶಿಫಾರಸು ಮಾಡಿಲ್ಲ. ಸಹಕಾರಿ ಸಂಘಗಳಿಂದ ಬಂದಿರುವ 80 ಅರ್ಜಿಗಳನ್ನು ಮತ್ತು ಕೆಲವು ಖಾಸಗಿಯವರಿಂದ ಬಂದಿರುವ ಅರ್ಜಿಗಳನ್ನು ಶಿಫಾರಸು ಮಾಡಿದೆ.

Sri GANJI VEERAPPA.—Is it not a fact that the Iron and Steel Controller, Calcutta, has referred back the matter to the State Government with the direction that the Societies may be preferred to individuals?

ಶ್ರೀ ಕೆ. ಮಲ್ಲಪ್ಪ.—ಸೊಸೈಟಿ ಅರ್ಜಿಗಳನ್ನು ವಾಪಸ್ ಕಳಿಸಲಿಲ್ಲ. ಸಂಖ್ಯೆ ಕಡಿಮೆ ಮಾಡಲು ತಿಳಿಸಿದರು. ಕೇವಲ 16 ಖಾಸಗಿ ಅರ್ಜಿಗಳನ್ನು ಶಿಫಾರಸು ಮಾಡಿದ್ದೇವೆ.

Sri G. V. GOWDA.—May I know when the Government expects to receive orders in this behalf or if they are not having any dufinite period, may I request them to pursue the matter?

ಶ್ರೀ ಕೆ. ಮಲ್ಲಪ್ಪ.—9-1-1963 ರಲ್ಲಿ ಶಿಫಾರಸು ಮಾಡಿದ್ದೇವೆ. ಶೀಘ್ರದಲ್ಲಿ ಬರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಸಿ. ಎಸ್. ಹುಲಕೋಟಿ.—ಧಾರವಾಡ ಜಿಲ್ಲೆಯಲ್ಲಿ ಎಷ್ಟು ಲೈಸೆನ್ಸ್ ಕೊಟ್ಟಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಎಲ್ಲ ಜಿಲ್ಲೆಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಒಂದು ಸಹಕಾರ ಸಂಘ ಇರಬೇಕೆಂದಿದೆ. ಎಲ್ಲ ತಾಲ್ಲೂಕಿನಲ್ಲಿಯು ಸಹಕಾರಿ ಸಂಘಗಳಿಗೆ ಕೊಡಬೇಕೆಂದು ಶಿಫಾರಸು ಮಾಡಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕಬ್ಬಿಣದ ಸಾಮಗ್ರಿಗಳನ್ನು ರೈತರುಗಳಿಗೆ ಮಾರಾಟ ಮಾಡಲು ಸಾಧ್ಯವಾಗುವಂಥ ಗ್ರಾಮಸ್ಥರುಗಳನ್ನು ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರಗಾರರುಗಳನ್ನಾಗಿ ನೇಮಕ ಮಾಡಲು ಸರ್ಕಾರದವರು ಉದ್ದೇಶಿಸಿರುವರೇ ಎಂದು ಕೇಳಿದ ಪ್ರಶ್ನೆಗೆ ಹೌದು' ಎಂದು ಉತ್ತರ ಕೊಟ್ಟಿದೆ. ಹಾಗಾದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಖಾಸಗಿ ಎಷ್ಟು ಜನಕ್ಕೆ ಕೊಟ್ಟಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳಿಗೆ ಲೈಸೆನ್ಸ್ ಒದಗಿಸಿ ಕೊಟ್ಟಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಜನ ಸ್ಟಾಕಿಸ್ಟ ಅವರಿಗೆ ಲೈಸೈನ್ಸ್ ಕೊಟ್ಟಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—4 ಜನ ನಮ್ಮ ಸ್ಟೇಟ್‌ನಲ್ಲಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಯಾವ ಆಧಾರದಮೇಲೆ ಈ ಅರ್ಜಿಗಳನ್ನು ಶಿಫಾರಸು ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಅವರ ಯೋಗ್ಯತೆ, ಸ್ಟಾಕ್ ಮಾಡುವ ಶಕ್ತಿ, ವ್ಯಾಪಾರ ಎಷ್ಟಿದೆ, ಆವಶ್ಯಕತೆ ಎಷ್ಟಿದೆ ನೋಡಿ, ಎಲ್ಲ ಅಂಶ ಗಣನೆಗೆ ತೆಗೆದುಕೊಂಡು ಶಿಫಾರಸು ಮಾಡಿದ್ದೇವೆ.

Sri H. R. KESHAVA MURTHY.—What steps have you taken to prove the integrity of the persons or organisations in their distribution?

Sri K. MALLAPPA.—The presumption is that all people are honest, and exception is to be proved. If a particular person is dishonest, then investigation will be made and disciplinary action will be taken against him.

Sri G. V. GOWDA.—May I know the additional quantity of Iron and Steel likely to be allotted to our State ?

Sri K. MALLAPPA.—Any quantity can be allotted. Except sheets below 16 gauge, all other materials does not require any quota certificate. Any amount of materials can be given.

Number of new Bus Routes and Extensions sanctioned by the Regional Transport Authority, Kolar.

*Q.—243. Sri P. VENKATAGIRIYAPPA (Kolar).—

Will the Government be pleased to state :—

(*a*) the number of new bus routes and extensions sanctioned from 1-1-1960 by the Regional Transport Authority, Kolar, with names and extent of routes ;

(*b*) whether they are aware that most of the licence holders have leased these bus routes to bus operators on monthly payment ;

(*c*) if so, the action taken by them to prevent such practices ?

A.—Sri R. M. PATIL (Minister for Home).—

(*a*) No. of new routes ... 24

No. of extensions ... 25

The statement showing the names and extent of routes is placed on the Table of the House. Placed in the Mysore Legislature Library *vide* No. 8, dated 21-3-1963.

(*b*) No.

(*c*) Does not arise in view of reply to clause (*b*) above.

ಶ್ರೀ ಪಿ. ವೆಂಕಟಗಿರಿಯಪ್ಪ.—ಹೊಸ ರೂಟುಗಳ ಸಂಖ್ಯೆ 24 ಮತ್ತು ವಿಸ್ತರಣಗಳ ಸಂಖ್ಯೆ 25 ಎಂದು ಹೇಳಿದ್ದೀರಿ. ಕೋಲಾರ ಜಿಲ್ಲೆಯಲ್ಲಿ ಇವುಗಳನ್ನು ಕೊಡುವ ಹೆಚ್ಚಿನ ಅವಶ್ಯಕತೆ ಇದ್ದಿತೇ ?

†ಶ್ರೀ ಆರ್. ಎಂ. ಪಾಟೀಲ್.—ಅವಶ್ಯಕತೆಯಿತ್ತು ಎಂದು ಕೊಟ್ಟಿದೆ.

ಶ್ರೀ ಇ. ನಾರಾಯಣಗೌಡ.—ಬಸ್ ಮಾಲೀಕರು ಬೇರೆ ಇದ್ದು ಕಮೀಷನ್ ಏಜಂಟರು ಕೆಲಸ ಮಾಡುತ್ತಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದರೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಆರ್. ಎಂ. ಪಾಟೀಲ್.—ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವದರ ಬದಲು ನೀವು ನಮ್ಮ ಗಮನಕ್ಕೆ ತಂದುಕೊಟ್ಟರೆ ಖಂಡಿತವಾಗಿ ವಿಚಾರಣೆ ಮಾಡುತ್ತೇವೆ.

Sri GANJI VEERAPPA.—Is it not a fact that Road Transport Corporation Buses are running in the same route where private Buses are also running in Kolar District ?

Sri R. M. PATIL.—It is so.

Sri GANJI VEERAPPA.—Is it not a fact that much loss is incurred on this account ?

Sri R. M. PATIL.—To some extent it is true.

Ministers and Deputy Ministers who are residing in the Rented Buildings

*Q.—273. Sri S. SIVAPPA (Sravanabelagola).—

Will the Government be pleased to state :—

(*a*) how many of the Ministers and Deputy Ministers are residing in the rented buildings ;

(*b*) the amount of rent paid to those buildings every month (details may be given for each building) ?

A.—Sri S. NIJALINGAPPA (Chief Minister).—

(*a*) Ministers...3

Dy. Ministers...4

(*b*) *Vide* statement given below.

Statement showing the list of *rented buildings* occupied by Ministers and Deputy Ministers.

Sl. No.	Name of the Minsters and Deputy Ministers.	Rented building occupied at.	Rent per month
			Rs.
1	Sri B. D. Jatti, Minister for Finance.	Residence No. 591, in Palace Orchard, Sadashivanagar, Bangalore.	300
2	Sri Ramakrishna Hegde, Minister for Co-operation.	Residence No. 18, Palace Orchard, Sadashivanagar, Bangalore.	600
3	Sri D. Devaraj Urs, Minister for Transport and Labour.	Residence in No. 18, Cubbon Road, Bangalore.	600
4	Sri Alur Hanumanthappa, Deputy Minister for Minor Irrigation.	Residence in No. 389, Palace Orchard, Sadashivanagar, Bangalore.	500
5	Sri K. Prabhakar, Deputy Minister for Social Welfare.	Residence at No. 14, Palace Orchard, Sadashivanagar, Bangalore.	500
6	Sri Mallikarjunaswamy, Deputy Minister for Planing and Development.	Residence in No. 94, XII Block, Kumarapark West Extention, Bangalore.	300
7	Sri R. Dayananda Sagar, Deputy Minister for Sericulture.	Residence in No. 6, Hardinge Road, Shankarapuram, Bangalore.	388

Sri S. SIVAPPA.—Is the rent shown against the houses occupied by individual Ministers in conformative with economy measures that the Government is practising on account of emergency ?

†Sri S. NIJALINGAPPA.—Yes.

Sri S. SIVAPPA.—Is the sum of Rs. 600 per month per building in this poor State of Mysore called an economy measure ?

Sri S. NIJALINGAPPA.—Bangalore is a very rich city.

Sri S. SIVAPPA.—Is the house selected by the Government for a particular Minister or the Minister selects the house ?

Sri S. NIJALINGAPPA.—Both processes are in vogue.

Sri S. SIVAPPA.—Have the Government instructed the Ministers that the houses selected by them should be within a certain limit ? Is any limit fixed for the rent ?

Sri S. NIJALINGAPPA.—It is desirable that it should be as low as possible. But regard being had to convenience and other things. In view of the fact that houses in Bangalore are not available, we have to fix up even a high rent.

Sri S. SIVAPPA.—May I know the reasons for the disparity in the rents in the same locality? In Sadashivanagar the house occupied by the Finance Minister is being paid of Rs. 300 per month whereas the house occupied by the other Ministers in the same locality is paid Rs. 600 per month.

Sri S. NIJALINGAPPA.—It depends upon the locality and when they approached.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಮನೆಗಳಿಗೆ ರೆಂಟ್ ಕಂಟ್ರೋಲರ್ ಬಾಡಿಗೆಯನ್ನು ಫಿಕ್ಸ್ ಮಾಡಿದ್ದಾರೆಯೋ ಅಥವಾ ಆ ಮನೆಯ ಮಾಲೀಕರು ಎಷ್ಟು ಬಾಡಿಗೆ ಕೇಳಿದ್ದಾರೋ ಅಷ್ಟು ಕೊಡುತ್ತಿದ್ದೀರೋ ?

ಶ್ರೀ ಎಸ್. ನಿಜಲಿಂಗಪ್ಪ.—ಹೊಸದಾಗಿ ಕಟ್ಟಿರುವ ಬಿಲ್ಡಿಂಗ್‌ಗಳಿಗೆ ರೆಂಟ್ ಕಂಟ್ರೋಲ್ ಆಕ್ಟ್ ಅಪ್ಲೈ ಆಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಮಂತ್ರಿಗಳು ಬಾಡಿಗೆಗೆ ಇರತಕ್ಕ ಮನೆಗಳು ಅಷ್ಟೂ ರೆಂಟ್ ಕಂಟ್ರೋಲ್ ವ್ಯಾಪ್ತಿಯಲ್ಲಿ ಬರುವುದಿಲ್ಲವೋ ಅಥವಾ ಒಂದೆರಡು ಬರುತ್ತದೆಯೋ ?

ಶ್ರೀ ಎಸ್. ನಿಜಲಿಂಗಪ್ಪ.—ಅವು ಯಾವುವೂ ರೆಂಟ್ ಕಂಟ್ರೋಲ್ ವ್ಯಾಪ್ತಿಯಲ್ಲಿ ಬಂದಿಲ್ಲ.

Sri S. M. KRISHNA.—Do the Government think about the possibility of constructing apartment houses for Ministers?

Sri S. NIJALINGAPPA.—No.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಮಂತ್ರಿಗಳಿಗೆ ಕೊಟ್ಟಿರುವ ಮನೆಗಳ ಪೈಕಿ ಒಬ್ಬೊಬ್ಬರ ಮನೆಗೆ ಒಂದೊಂದು ರೇಟಿನ ಬಾಡಿಗೆ ಇದೆ. ಈ ರೀತಿ ತಾರತಮ್ಯ ಏತಕ್ಕೆ ? ಪ್ರತಿಯೊಬ್ಬರಿಗೂ ಒಂದೇ ರೇಟಿನ ಬಾಡಿಗೆ ಮನೆ ಇರಬೇಕೆಂದು ನಿರ್ಬಂಧ ಹಾಕಿ ಅವರಿಗೆ ಮನೆಗಳನ್ನು ಒದಗಿಸುವುದಕ್ಕಾಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತುರ್ತು ಪರಿಸ್ಥಿತಿ ಇರುವಾಗ 600-700 ರೂಪಾಯಿಗಳ ಬಾಡಿಗೆ ಮನೆಗಳನ್ನು ಮಂತ್ರಿಗಳಿಗೆ ಕೊಡುವುದಕ್ಕಿಂತಲೂ 300 ರೂಪಾಯಿ ಬಾಡಿಗೆ ಇರುವಂತಹ ಮನೆಗಳನ್ನು ಎಲ್ಲರಿಗೂ ಒದಗಿಸುವಂತೆ ವ್ಯವಸ್ಥೆ ಮಾಡಿದರೆ ಉತ್ತಮವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮನೆಗಳು ಸಿಕ್ಕಬೇಕಲ್ಲ !

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ರೆಂಟ್ ಕಂಟ್ರೋಲ್ ರೂಲ್ಸ್ ಪ್ರಕಾರ ಸಾಮಾನ್ಯವಾದ ಒಂದು ಮನೆಗೆ ಮಿನಿಮಮ್ 388ರೂ. ಬಾಡಿಗೆ ಇದೆ. ಆದರೆ ಮಂತ್ರಿಗಳು ಸ್ವಂತ ಮನೆಯಲ್ಲಿ ವಾಸ ಇದ್ದರೆ ಅವರಿಗೆ ಸರ್ಕಾರದವರು 250 ರೂಪಾಯಿಗಳ ಮನೆ ಬಾಡಿಗೆ ಭತ್ಯವನ್ನು ಕೊಡುತ್ತಾರೆ. ಇದರಿಂದ ಸ್ವಂತ ಮನೆಯಲ್ಲಿರುವವರಿಗೆ ಅನ್ಯಾಯ ಮಾಡಿದ ಹಾಗೆ ಆಗುವುದಿಲ್ಲವೇ ?

ಶ್ರೀ ಎಸ್, ನಿಜಲಿಂಗಪ್ಪ.—ಇಲ್ಲ.

Sri S. SIVAPPA.—If amount paid per house is calculated per year it comes to Rs. 3,500 for each Minister. Instead of paying, Rs. 3,500 why not build a permanent house for them.

Mr. SPEAKER.—That is a suggestion.

Location of the Cement Factory in Hosadurga Taluk

*Q.—283. Sri GANJI VEERAPPA (Harihar).—

Will the Government be pleased to state :—

(a) whether any survey has been made by the Department of Mines and Geology in connection with the location of the Cement Factory in Hosadurga Taluk;

(b) whether any report has been submitted to Government in this behalf by the Department of Mines and Geology; and if so, whether Government has taken any decision on the above report;

(c) whether any application by private individuals have been received by Government asking for license to start the Cement Factory near Hosadurga and if so, the action taken by them in this behalf?

A.—Sri K. MALLAPPA (Minister for Industries and Commerce).—

(a) A survey has been made by the Department of Mines and Geology for the location of limestone and clay deposits, which are the chief mineral raw materials for Cement manufacture.

(b) A report has been submitted by the Department of Mines and Geology on the availability of limestone and clay in Hosadurga Taluk. The Cement industry is left to private entrepreneurs who will be encouraged, as per rules, if they come forward with definite proposals

(c) No.

Sri GANJI VEERAPPA.—With regard to the report submitted by the department of Mines, may I know whether the Government have examined it and taken any decision regarding the contents of the report?

†Sri K. MALLAPPA.—We have examined the report and we have taken a decision that the deposits are suitable for cement manufacture.

Sri GANJI VEERAPPA.—If any private enterprise is forthcoming may I know whether the Government is giving any financial assistance?

Sri K. MALLAPPA.—That is a matter to be considered. It depends upon the individual.

Sri GANJI VEERAPPA.—It is stated that no private individual has applied for a licence. If the deposits are heavy then will the Government contemplate in starting an industry of the Government?

Sri K. MALLAPPA.—This is private sector industry. We will encourage private sector to invest money and manufacture cement.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೇರೆ ಯಾರೂ ಅದನ್ನು ನಡೆಸುವುದಕ್ಕೆ ಮುಂದೆ ಬಾರದೆ ಇದ್ದರೆ ಸರ್ಕಾರದವರೇ ಅದನ್ನು ನಡೆಸಲು ಕೇಂದ್ರ ಸರ್ಕಾರದವರೊಡನೆ ವ್ಯವಹಾರ ನಡೆಸುವುದಕ್ಕೆ ಇರತಕ್ಕ ಅಡ್ಡಿ ಆತಂಕಗಳೇನು?

ಶ್ರೀ ಕೆ. ಮಲ್ಲಪ್ಪ.—ಸಿಮೆಂಟ್ ಇಂಡಸ್ಟ್ರಿ ಪ್ರೈವೇಟ್ ಸೆಕ್ಟಾರಿಗೆ ಬಿಟ್ಟು ಕೊಟ್ಟಿರತಕ್ಕ ಇಂಡಸ್ಟ್ರಿ. ಪ್ರೈವೇಟ್ ಸೆಕ್ಟಾರಿನವರು ಸಿಮೆಂಟ್ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ನಾವು ಪ್ರೋತ್ಸಾಹ ಕೊಡುತ್ತೇವೆ.

Sri V. M. DEO.—Is it mandatory that no State Government should start a Cement factory in Public Sector.

Sri K. MALLAPPA.—Certain industries have to be taken under public sector and certain industries have to be under the private sector. That is in accordance with the Industrial Policy Resolution of the Government of India. So this particular industry is left to private sector.

ಶ್ರೀ ಜಿ. ಟಿ. ರಂಗಪ್ಪ.—ಖಾಸಗೀಯವರು ಯಾರಾದರೂ ಅಲ್ಲಿ ಸಿಮೆಂಟ್ ಫ್ಯಾಕ್ಟರಿಯನ್ನು ನಡೆಸುವುದಕ್ಕೆ ಮುಂದೆ ಬಂದಿದ್ದಾರೆಯೇ?

ಶ್ರೀ ಕೆ. ಮಲ್ಲಪ್ಪ.—ಸುಂದರಮೂರ್ತಿ ಎನ್ನುವವರು ಬಂದು ವಿವರಗಳನ್ನು ತಿಳಿದುಕೊಂಡು ಹೋಗಿದ್ದಾರೆ ಅವರು ಫಾರಿನ್ ಕೊಲ್ಯಾಬರೇಟರ್ ಒಪ್ಪಂದ ಮಾಡಿಕೊಂಡ ಮೇಲೆ ಅದಕ್ಕೆ ಅರ್ಜಿ ಹಾಕುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಆ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಸರ್ಕಾರಕ್ಕಾಗಲೀ ಅಥವಾ ಖಾಸಗೀಯವರಿಗಾಗಲೀ ಎಷ್ಟು ಹಣ ಬೇಕು ? ಖಾಸಗೀಯವರು ಆ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ ಸರ್ಕಾರದವರು ಕೊಡತಕ್ಕ ಪಾಲು ಎಷ್ಟು, ಖಾಸಗೀಯವರು ಎಷ್ಟು ಪಾಲು ಹಾಕಬೇಕು ?

ಶ್ರೀ ಕೆ. ಮಲ್ಲಪ್ಪ.—ಆ ಕಾರ್ಖಾನೆಯಲ್ಲಿ ಎಷ್ಟು ಸಿಮೆಂಟನ್ನು ತಯಾರು ಮಾಡುತ್ತಾರೆ, ಎಷ್ಟು ಖರ್ಚಾಗುತ್ತದೆ ಎನ್ನುವುದರ ಮೇಲೆ ಅನ್ವಯಿಸುತ್ತದೆ. ಒಂದು ದಿವಸಕ್ಕೆ 500 ಟನ್ ತಯಾರು ಮಾಡತಕ್ಕ ಕಾರ್ಖಾನೆಗೆ ಸುಮಾರು 3–3½ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದರಲ್ಲಿ ಸರ್ಕಾರದವರು ಸ್ಟೇಟ್ ಪಾಲಿಸಿ ಪ್ರಕಾರ 10 ಪರ್ಸೆಂಟ್ ಕೊಡುತ್ತಾರೆ. ಪ್ರೈವೇಟ್ ಸೆಕ್ಟಾರಿನವರು ಎಕ್ವಿಪ್‌ಮೆಂಟ್ ಕ್ಯಾಪಿಟಲ್ ಹಾಕಬೇಕು. ಆ ತತ್ವವನ್ನು ಅವರು ಒಪ್ಪಿಕೊಂಡರೆ ಸರ್ಕಾರದವರು 10 ಪರ್ಸೆಂಟ್ ಕ್ಯಾಪಿಟಲ್ ಕೊಡಬಹುದು.

Sri S. M. KRISHNA.—Will the Government wait indefinitely for private enterprenure to come forward to put up a Cement Factory ?

Mr. SPEAKER.—Alternatively the Hon'ble member means that Government should start the Industry.

Sri S. M. KRISHNA.—Yes.

Sri K. MALLAPPA.—We have got quite a large number of people making enquiries about the possibility of starting a factory. We expect that some people will be coming forward soon.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಭದ್ರಾವತಿ ಸಿಮೆಂಟ್ ಕಾರ್ಖಾನೆಯಲ್ಲಿ ಲಾಭ ಬರುತ್ತಿದೆ. ಅದರ ಕ್ಯಾಪಿಟಲನ್ನೇ ಉಪಯೋಗಿಸಿಕೊಂಡು ಸರ್ಕಾರ ಏತಕ್ಕೆ ಇನ್ನೊಂದು ಸಿಮೆಂಟ್ ಕಾರ್ಖಾನೆ ತೆರೆಯುವುದಕ್ಕೆ ಕಷ್ಟವಾಗಿದೆ, ಅದನ್ನು ಏತಕ್ಕೆ ಸರ್ಕಾರದವರು ಮನಸ್ಸು ಮಾಡಬಾರದು ?

ಶ್ರೀ ಕೆ. ಮಲ್ಲಪ್ಪ.—ಭದ್ರಾವತಿಯಲ್ಲಿರತಕ್ಕ ಸಿಮೆಂಟ್ ಕಾರ್ಖಾನೆ ಕಂಪೆನಿಗೆ ಸೇರಿದ್ದು ಐರನ್ ಅಂಡ್ ಸ್ಟೀಲ್ ಕಂಪೆನಿಯವರು ಈ ಬಗ್ಗೆ ತೀರ್ಮಾನ ಮಾಡಬೇಕು. ಈಗ ಆ ಕಂಪೆನಿಯವರು ಪ್ರೈವೇಟ್ ಸೆಕ್ಟಾರಿನಲ್ಲಿ ಅಲ್ಲಿ ಒಂದು ಸ್ಪೆಷಲ್ ಅಲಾಯ್ ಸ್ಟೀಲನ್ನು ತಯಾರು ಮಾಡತಕ್ಕ ಒಂದು ಕಂಪೆನಿಯನ್ನು ತೆರೆಯಬೇಕೆಂದು ಅದಕ್ಕೆ 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಂಥಾ ಸಂದರ್ಭದಲ್ಲಿ ಅವರು ಇನ್ನೊಂದು ಸಿಮೆಂಟ್ ಕಾರ್ಖಾನೆಯನ್ನು ತೆಗೆಯತಕ್ಕ ಏರ್ಪಾಡು ಇಲ್ಲ.

Amount allotted for each District for construction of Primary School Buildings.

*Q.—331. Sri G. V. GOWDA (Palya).—

Will the Government be pleased to state :—

the amount allotted for each District under the plan for the year 1962-63 for constructing Primary School Buildings at Rs. 1,000 per room (Districtwise figures may be furnished) ?

A.—Sri S. R. KANTHI (Minister for Education).—

Vide statement given below.

STATEMENT

			Rs.
1	Bangalore District and City	...	25,000
2	Kolar District	...	10,000
3	Tumkur District	...	12,000
4	Mysore District	...	10,000

				Rs.
5	Coorg District	...	...	7,000
6	South Kanara District	...	...	13,000
7	Mandya District	...	...	7,000
8	Chitradurga District	...	...	10,000
9	Shimoga District	...	...	7,000
10	Chickmagalur District	...	...	7,000
11	Hassan District	...	...	7,000
12	Gulbarga District	...	...	12,000
13	Raichur District	...	...	12,000
14	Bidar District	...	...	7,000
15	Bellary District	...	...	7,000
16	Dharwar District	...	...	13,000
17	North Kanara District	...	...	10,000
18	Belgaum District	...	...	12,000
19	Bijapur District	...	...	12,000
			Total ...	2,00,000

Sri G. V. GOWDA.—Out of 2 lakhs of rupees allotted 2,000 school building rooms should have been taken up. May I know the number of buildings taken up ?

†Sri S. R. KANTHI.—That information is not here. If the Hon'ble Member gives me notice, I will get the information.

Sri G. V. GOWDA.—May I know at least the number of rooms that have been taken up during the last year ?

Sri S. R. KANTHI.—That question does not arise. This is for 1962-63. I can only say that during 1961-62 a sum of Rs. 4 lakhs had been provided and the entire amount is spent.

Sri D. PARAMESWARAPPA.—May I know the basis on which allotments are made ?

Sri S. R. KANTHI.—The basis is the requirement. If during the year 1960-61 something less had been given more is given in the next year and like that.

12-30 P.M.

ಶ್ರೀ ಎಂ. ಸಿ. ಬಸಪ್ಪ.—ಬೆಂಗಳೂರು ಡಿಸ್ಟ್ರಿಕ್ಟಿಗೆ ಮತ್ತು ಸಿಟಿಗೆ 25 ಸಾವಿರ ರೂಪಾಯಿ ಕೊಟ್ಟಿದ್ದೀರಿ. ಮಾಗಡಿ ತಾಲ್ಲೂಕು ಒಂದರಲ್ಲಿಯೇ 17 ಪ್ರೈಮರಿ ಸ್ಕೂಲುಗಳಿಗೆ ರೂಪಾಯಿ 1,46,000 ಅಂದಾಜಿನಲ್ಲಿ 30 ನೇ ತಾರೀಖು ಕೊಟೇಷನ್ ಕರೆದಿದ್ದಾರೆ. ಆ ದುಡ್ಡು ಯಾವುದು ?

Sri S. R. KANTHI.—There are two schemes. This is a contributory scheme. The scheme which my friend refers to is a different one; it comes under 50 Civil Works in the sub-head of Buildings.

ಶ್ರೀ ಸಿ. ಆರ್. ರಂಗೇಗೌಡ.—ಬೆಂಗಳೂರು ಜಿಲ್ಲೆ ಹಾಗೂ ನಗರಕ್ಕೆ 25 ಸಾವಿರ ರೂಪಾಯಿ ಕೊಟ್ಟಿದ್ದೀರಿ. ಬೆಂಗಳೂರು ಜಿಲ್ಲೆಗೆ ಎಷ್ಟು, ನಗರಕ್ಕೆ ಎಷ್ಟು ಕೊಟ್ಟಿದ್ದೀರ ?

ಶ್ರೀ ಎಸ್. ಆರ್. ಕಂಠಿ.—ಆ break-up ನನ್ನ ಹತ್ತಿರವಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಲೆನಾಡಿಗಿರತಕ್ಕಂಥ ಶಿವಮೊಗ್ಗ ಜಿಲ್ಲೆಗೆ ಪ್ರಾಥಮಿಕ ಶಾಲಾ ಕಟ್ಟಡಕ್ಕೋಸ್ಕರ ಏಳು ಸಾವಿರ ರೂಪಾಯಿ ಕೊಟ್ಟಿದೆ. ಇದು ಬಹಳ ಕಡಿಮೆ. ಒಬ್ಬರಿಗೊಂದು, ಒಬ್ಬರಿಗೊಂದು ಮಾಡಿದ ಹಾಗೆ ಕಾಣುತ್ತದೆ.

ಶ್ರೀ ಎಸ್. ಆರ್. ಕಂಠಿ.—ಅಗಲೇ ಹೇಳಿದ್ದೇನೆ. ಒಂದು ವರ್ಷ ಜಾಸ್ತಿ ಸಿಗುತ್ತದೆ, ಇನ್ನೊಂದು ವರ್ಷ ಕಡಿಮೆ ಸಿಗುತ್ತದೆ. ಒಟ್ಟಿನಲ್ಲಿ 3-4 ವರ್ಷಗಳಲ್ಲಿ adjust ಆಗುತ್ತದೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲೆಗೆ 12 ಸಾವಿರ ರೂಪಾಯಿ ಕೊಟ್ಟಿರುವುದರಲ್ಲಿ ನಾಲ್ಕು ಸಾವಿರ ರೂಪಾಯಿ ಖರ್ಚಾಗಿಲ್ಲ. 8 ಸಾವಿರ ರೂಪಾಯಿ ಖರ್ಚಾಗದೆ ಹಾಗೇ ಉಳಿದು ಹೋಗಿದೆ.

ಶ್ರೀ ಎಸ್. ಆರ್. ಕಂಠಿ.—ಅದು ಖರ್ಚಾಗಿಲ್ಲವೆನ್ನುವಂಥ information ಹೇಳುತ್ತಾರೆ. ನನ್ನ ಭಾವನೆಯಲ್ಲಿ ಕೊಟ್ಟ ಹಣ ಕಡಿಮೆಯಾಗಿದ್ದು ಎಲ್ಲಾ ಖರ್ಚಾಗುತ್ತದೆ.

ಶ್ರೀ ಎಂ. ಸಿ. ಬಸಪ್ಪ.—"50 Civil Works" ನಲ್ಲಿ, 17 ಪ್ರೈಮರಿ ಶಾಲೆಗಳಿಗೆ ರೂಪಾಯಿ 1,46,000 ಕೊಟ್ಟಿದ್ದೀರ. ಅದೇ ರೀತಿ ಇತರೆ ತಾಲ್ಲೂಕುಗಳಿಗೆ ಕೊಡದೆ ಇರುವುದಕ್ಕೆ ಕಾರಣ ಏನು ?

ಶ್ರೀ ಎಸ್. ಆರ್. ಕಂಠಿ.—"50 Civil Works" ನಲ್ಲಿ, ಬಿಲ್ಡಿಂಗ್ಸ್‌ಗೆ 15 ಲಕ್ಷ ರೂಪಾಯಿ ಇದೆ. ಅದನ್ನು P.W.D. ಯವರು ಆಪರೇಟ್ ಮಾಡುತ್ತಾ ಇರುತ್ತಾರೆ. ಈ ವರ್ಷ ಏನಾಗಿದೆ ಯೆಂದರೆ School Buildings ಮಾಡತಕ್ಕಂಥಾದ್ದು Taluk Development Board ಜವಾಬ್ದಾರಿ ಇರುತ್ತದೆ. This sum under '50 Civil Works' is meant only for repairs and extension and will be handed over to the Taluk Development Board.

ಶ್ರೀ ಎಂ. ಸಿ. ಬಸಪ್ಪ.—"50 Civil Works" ಇರುವುದರಿಂದ, ಹೊಸ ಬಿಲ್ಡಿಂಗುಗಳನ್ನು ಕಟ್ಟುವುದಕ್ಕೆ ಕರೆದಿದ್ದೀರಿ. ಈ 1,46,000 ರೂಪಾಯಿಯನ್ನು even ಆಗಿ ಎಲ್ಲಾ ಜಿಲ್ಲೆಗಳಿಗೂ ಏಕೆ distribute ಮಾಡಿಲ್ಲ.

Sri S. R. KANTHI.—That comes under P. W. D. So I cannot say what has happened there ; but I do not think it is for buildings ; it is meant for extension of the old buildings.

Sri N. O. SAMAJI.—(Marathi).

ಶ್ರೀ ಎಸ್. ಆರ್. ಕಂಠಿ.—ಪ್ರತಿಯೊಂದು ಜಿಲ್ಲೆಯಲ್ಲಿಯೂ ಲಕ್ಷಾಂತರ ರೂಪಾಯಿಗಳ ಬೇಡಿಕೆಗಳಿವೆ. ಬೆಳಗಾಂ ಜಿಲ್ಲೆಯಾದರೂ ಲಕ್ಷಾಂತರ ರೂಪಾಯಿ ಬೇಡಿಕೆ ಇದೆ. ಅಷ್ಟೂ ಕೊಡು ವುದಕ್ಕಾಗುವುದಿಲ್ಲ. ಹಣ ಕಡಿಮೆ ಇದೆಯೆಂದು ಒಪ್ಪಿಕೊಳ್ಳುತ್ತೇನೆ. ಶಾಲೆ ಬಿಲ್ಡಿಂಗ್ಸ್ ಕಟ್ಟಿಸು ವುದಕ್ಕೋಸ್ಕರ ಅಷ್ಟು ಕೊಟ್ಟಿದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ 10 ಲಕ್ಷಕ್ಕೆ ಬರುತ್ತದೆ. 40 ವಿದ್ಯಾರ್ಥಿಗಳಿಗೆ ಒಂದು ರೂಮಿನಂತೆ ಕಟ್ಟಿದರೆ, ರೂಮುಗಳು 25 ಸಾವಿರಕ್ಕೆ ಬರುತ್ತವೆ. ಅಲ್ಲಿಗೆ ಕಟ್ಟಡಗಳಿಗೆ 8 ಕೋಟಿ ರೂಪಾಯಿಗಳು ಬೇಕು. ಒಂದು ರೂಮಿಗೆ ಒಂದು ಸಾವಿರ ರೂಪಾಯಿನಂತೆ 250 ಲಕ್ಷ ರೂಪಾಯಿ ಕೊಡಬೇಕು. ಇದು ಲೆಕ್ಕ ಹಾಕಿದರೆ ಅಸಾಧ್ಯವಾದ ಮಾತು. ಹಳೇ ಬಿಲ್ಡಿಂಗುಗಳಿಗೂ ಕೊಡಬೇಕು. ಒಟ್ಟು 40 ಲಕ್ಷ ವಿದ್ಯಾರ್ಥಿಗಳು ಜಾಸ್ತಿಯಾಗುತ್ತಾರೆ. ಇವರೆಲ್ಲರಿಗೂ ಸರ್ಕಾರದವರು ಕಟ್ಟಿಸಿ ಕೊಡಬೇಕೆಂದರೆ 20-25 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಮೊನ್ನೆ ತಿಳಿಸಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೈಸೂರು ಜಿಲ್ಲೆಗೆ 10 ಸಾವಿರ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ಮುನಿಸಿಪಲ್ ಏರಿಯಕ್ಕೆ ಎಷ್ಟು ಭಾಗ ?

ಶ್ರೀ ಎಸ್. ಆರ್. ಕಂಠಿ.—ಆ break of ನನ್ನ ಕಡೆ ಇಲ್ಲ. D. C. ಕಡೆಗೆ ಇರುತ್ತದೆ.

ಶ್ರೀ ಟಿ. ಚನ್ನಬೈರೇ ಗೌಡ.—ಇವತ್ತು ಕೊಟ್ಟಿರುವ ಹಣ ನೋಡಿದರೆ, ತಾಲ್ಲೂಕಿಗೆ ಒಂದು ಸ್ಕೂಲನಂತೆ ಬಂದಿದೆ. ತಾಲ್ಲೂಕಿಗೆ ಒಂದು ಸ್ಕೂಲು ಸಾಕಾಗುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಅನೇಕ ಪ್ರಯತ್ನಗಳಿವೆ. This is called the contributory scheme. It comes under the head '109' if I remember aright. There are other schemes under 50 Civil Works.

"50 Civil Works" ನಲ್ಲಿ ಕಟ್ಟಿಸುತ್ತಾ ಇದ್ದೇವೆ. N. E. S. ನಲ್ಲಿ ಕಟ್ಟಿಸುತ್ತಾ ಇದ್ದೇವೆ. ಹೀಗೆ ಮೂರು ಯೋಜನೆಗಳು ನಡೆಯುತ್ತಾ ಇವೆ.

ಶ್ರೀ ಎಂ. ಸಿ. ಬಸಪ್ಪ.—ಒಂದೇ ತಾಲ್ಲೂಕಿಗೆ 17 ಪ್ರಾಥಮಿಕ ಶಾಲೆಗಳಿಗೆ 1,46,000 ರೂಪಾಯಿ ಕೊಟ್ಟಿದ್ದೀರಿ ; ಇದು ಅನ್ಯಾಯ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಕ್ರಮ ವನ್ನ ತೆಗೆದುಕೊಳ್ಳುತ್ತಾರೆಯೇ!

ಶ್ರೀ ಎಸ್. ಆರ್. ಕಂಠಿ.—ಮೊನ್ನೆ ದಿವಸ ತೋರಿಸಿದ್ದಾರೆ. ನನ್ನ ಕಡೆಗೆ ಅದನ್ನು ಬಿಟ್ಟುಬಿಡಿ ಅಂತ ಹೇಳಿಕೊಂಡಿದ್ದೇನೆ.

ಶ್ರೀ ಇ. ನಾರಾಯಣ ಗೌಡ.—ನಗರಗಳಲ್ಲಿಯೂ ಸಾರ್ವಜನಿಕರಿಂದ ಚಂದ ವಸೂಲು ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಎಲ್ಲಾ ಕಡೆಯಿಂದಲೂ ವಸೂಲು ಮಾಡುತ್ತಾ ಇದ್ದಾರೆ; ಇಲ್ಲ ಅಂತ ಏಕೆ ತಿಳಿದುಕೊಂಡಿದ್ದಾರೆಯೋ ?

Sri N. O. SAMAJI.—(Marathi).

ಶ್ರೀ ಎಸ್. ಆರ್. ಕಂಠಿ.—ನಗರವಾಗಲಿ ಗ್ರಾಮಗಳಾಗಲಿ ಎಲ್ಲ ಕಂಟ್ರಿಬ್ಯೂಷನ್ ಕೊಡಬೇಕು. ಸರ್ಕಾರ 1,000 ರೂಪಾಯಿ ಮಾತ್ರ ಕೊಡುತ್ತದೆ. ಬಾಕೀದು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡು ಪಂಚಾಯಿತಿ, ಜನ ಕೊಡಬೇಕೆಂದು ಸರ್ಕಾರ ಆರ್ಡರ್ ಮಾಡಿದೆ. ಅದನ್ನೂ ಕೂಡ ಮುಂದಿನ ವರ್ಷ ನಡೆಸುವುದು ಸಾಧ್ಯವಿಲ್ಲ. ಕಂಟ್ರಿಬ್ಯೂಷನ್ ಸರ್ಕಾರದವರು ಕೊಡುವುದು ಸಾಧ್ಯವಿಲ್ಲ. ಜನ ಮುಂದೆ ಬಂದು ಕಟ್ಟಿಸಬೇಕು.

Sri S. SIVAPPA.—The question is: "the amount allotted for each District under the plan for the year 1962-63 for constructing Primary School buildings." Now the Minister is saying that only Rs. 2 lakhs have been allotted to various Districts under this head and he is also saying that under some other head there is some allotment. Will the Government state where exactly the figure stands, what is the amount allotted for each district under the plan for the school buildings covering all the heads.

ಶ್ರೀ ಎಸ್. ಆರ್ ಕಂಠಿ.—ಆಗಲೇ ಹೇಳಿದ್ದೇನೆ. Contibutory Scheme ನಲ್ಲಿ ಎಷ್ಟು ಹಣ ಇದೆಯೋ ಅಷ್ಟನ್ನು ಹೇಳಬಹುದು. 50 Civil Works ನಲ್ಲಿ ಸ್ಕೂಲು ಬಿಲ್ಡಿಂಗುಗಳಿಗೂ ಬರುತ್ತವೆ. ರಿಪೇರಿ ದುಡ್ಡನ್ನು P. W. D ಯವರು ಖರ್ಚುಮಾಡಲಾರರು, ಅದನ್ನು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡುಗಳಿಗೆ ಕೊಟ್ಟರೆ ಅವರು ರಿಪೇರಿ ಮಾಡುವುದಕ್ಕೆ ಆಗುತ್ತದೆ ; ಕೊಡಬೇಕು ಅನ್ನುವ ವಿಚಾರ ನಡೆದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಣ ಕೊಟ್ಟದು ಖರ್ಚಾಗಿ ಹೋಗಿದೆ ಎಂದು ಹೇಳಿದರು. ಜನವರಿ ಕೊನೆಯಲ್ಲಿ ಹಣ ಕೊಟ್ಟು. February ಯಲ್ಲಿ District Council ನವರು ತಾಲ್ಲೂಕು ಬೋರ್ಡಿಗೆ ಕೊಟ್ಟಿರುತ್ತಾರೆ. First week of March ನಲ್ಲಿ ಜನಗಳಿಗೆ ಶಾಲೆ ಕಟ್ಟಿ ಎಂದು ಹೇಳಿದ್ದಾರೆ! ಕಟ್ಟುವುದಕ್ಕೆ ಆಗಿಲ್ಲ. ಸರ್ಕಾರದವರ ಹಣ ಖರ್ಚಾಗಿಲ್ಲ. ಈ ಹಣ ಮುಂಜಾಗ್ರತೆಯಾಗಿ ಕೊಡುವುದಕ್ಕೆ ಏನಾದರು ಮಾಡುತ್ತೀರಾ ?

ಶ್ರೀ ಎಸ್ ಆರ್. ಕಂಠಿ.—ಅವರು ಏನೋ ಹೇಳುತ್ತಾರೆ. ತುಮಕೂರು ಜಿಲ್ಲೆಯಲ್ಲಿ ಹೇಗಿದೆಯೋ ಏನೋ ನಾನು ನೋಡುತ್ತೇನೆ.

Collection of one Rupee from the People for each bag of Cement by the Cement Issuing Authorities in Tumkur District.

*Q.—419. Sri T. S. SIVANNA (Koratagere).—

Will the Government be pleased to state :—

(a) whether it has come to the notice of Government that Cement issuing authorities in Tumkur District are demanding one Rupee for each bag of Cement from the people who approach them for permits ;

(b) whether there are any instructions from Government to collect the same compulsorily ;

(c) if no instructions are given, what is the action taken by Government in this connection ?

A.—Sri K. MALLAPPA (Minister for Industries and Commerce).—

(*a*) No.

(*b*) No.

(*c*) Does not arise.

ಶ್ರೀ ಟಿ. ಎಸ್. ಶಿವಣ್ಣ.—ದೂರುಗಳು ಬಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

†ಶ್ರೀ ಕೆ. ಮಲ್ಲಪ್ಪ.—ಬಲಾತ್ಕಾರವಾಗಿ ವಸೂಲು ಮಾಡಬೇಡಿ ಎಂದು ಹೇಳುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೇಶಾದ್ಯಂತ ಒಂದೇ ಸಮನೆ ತೆಗೆದುಕೊಳ್ಳುತ್ತೀರೋ ಅಥವಾ ತುಮಕೂರಿನಲ್ಲಿ ಮಾತ್ರ ಮಾಡಿ ಅಂತ ಹೇಳಿದ್ದೀರೋ. ದೇಶದ ಹಿತದೃಷ್ಟಿಯಿಂದ ನಿಜ ಹೇಳಬಾರದೆಂದು ಮಾಡಿದ್ದೀರೋ ?

ಶ್ರೀ ಕೆ. ಮಲ್ಲಪ್ಪ.—ಇದು ತೆಗೆದುಕೊಳ್ಳುವ ಪ್ರಶ್ನೆ ಅಲ್ಲ. ಯಾರು ತಾವಾಗಿಯೇ ಸ್ವಪ್ರೇರಿತರಾಗಿ ಕೊಡುತ್ತಾರೆಯೋ ಅವರಿಂದ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾನಾಗಿಯೇ ಮುಂದೆ ಬಂದು ಕೊಟ್ಟುದನ್ನು ತೆಗೆದುಕೊಳ್ಳುವುದಕ್ಕೆ ಯಾರ ಅಡ್ಡಿಯೂ ಇಲ್ಲ, ನಾವು ಕೊಡಿಸುತ್ತಾ ಇದ್ದೇವೆ. ಸಿಮೆಂಟಿಗೆ ಹೋದಾಗ ಒಂದು ರೂಪಾಯಿ ಬಲಾತ್ಕಾರವಾಗಿ ವಸೂಲು ಮಾಡುತ್ತಿಲ್ಲವೆ ? ಜನ ತಾವಾಗಿಯೇ ಬಂದು ಕೊಡದಿದ್ದರೆ ?

ಶ್ರೀ ಕೆ. ಮಲ್ಲಪ್ಪ.—ಕೊಡಿ ಅಂತ ಯಾರೂ ಕೇಳುವುದಿಲ್ಲ, ಅವರೇ ಕೊಡುತ್ತೇವೆ ಅಂತ ಬಂದು ಏನಾದರೂ ಕೊಟ್ಟರೆ ತೆಗೆದುಕೊಳ್ಳುತ್ತಾರೆ. ಆ ಪ್ರಕಾರ ತಾವಾಗಿಯೇ ಬಂದು ಕೊಡುತ್ತಿದ್ದಾರೆ. ಕೊಡುವುದಿಲ್ಲವೆಂದರೆ ಬಲಾತ್ಕಾರವಾಗಿ ಏನೂ ತೆಗೆದುಕೊಳ್ಳುವುದಿಲ್ಲ.

Starting of a Rayons Factory at Harihar.

**Q.*—286. Sri GANJI VEERAPPA (Harihar).—

Will the Government be pleased to state:—

(*a*) whether a licence has been granted by Government to start a Rayons Factory at Harihar;

(*b*) if so, the person or persons or firms in whose favour such a licence has been granted;

(*c*) whether any steps have been taken by the person or persons or firms who has obtained such a licence in the matter of starting such an industry?

A.—Sri K. MALLAPPA (Minister for Industries and Commerce).—

(*a*) Yes, by the Government of India.

(*b*) A licence No. L/23/5/N 187/60, dated 27th January 1960 has been granted to M/s. The Modern Mills Ltd., Bombay, for the establishment of a new undertaking at Harihar for the manufacture of Cuprammonium filament rayon yarn.

(*c*) For having failed to implement the licensed scheme within the prescribed time limit without reasonable cause, the Government of India had given a show cause notice to the licensees as to why the licence granted should not be revoked. As a result of having furnished the reasons for the delay in implementing the scheme, by the licensees, the Government of India have granted extension of time for completion of the project up to 27th October 1963.

Sri GANJI VEERAPPA.—May I know whether this company has taken any steps to start this industry at Harihar ?

†**Sri K. MALLAPPA.**—The company has not taken any action so far the reason they were not able to secure the technical know how from foreign firms.

Sri GANJI VEERAPPA.—May I know whether it is a joint stock company and what is the share capital of this company ?

Sri K. MALLAPPA.—The company is the Modern Mills Ltd. of Bombay which is an existing company.

Sri GANJI VEERAPPA.—Has the Government corresponded with the company in regard to taking part of the shares ?

Sri K. MALLAPPA.—No commitment has been made.

Sri GANJI VEERAPPA.—Is it not a fact that they have been thinking of changing the place from Harihar to some other place ?

Sri K. MALLAPPA.—It is not so; formerly, one Saundatti Fibres Ltd. had been granted a licence but later on that licence was transferred to the Modern Mills for locating the factory at Harihar. There is no proposal for changing the site of the factory from Harihar.

Sri GANJI VEERAPPA.—Has the Government any information when this company will start its work ?

Sri K. MALLAPPA.—Originally they were given 24 months' time; now they have got it extended to 45 months.

Sri G. V. GOWDA.—May I know whether the technical know-how has been secured by this company and whether the Government has done anything in that behalf ?

Sri K. MALLAPPA.—Government cannot do anything. They were not able to secure technical know-how for cuprammonium filament rayon yarn. Consequently, they had to go in for some other fibre. I think they are trying to secure technical know-how for fibre 40.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕೃತಕ ರೇಷ್ಮೆಗೂ ಮತ್ತು ಚನ್ನಪಟ್ಟಣದಲ್ಲಿ ತಯಾರಾಗತಕ್ಕ ರೇಷ್ಮೆಗೂ ಏನು ವ್ಯತ್ಯಾಸವಿದೆ ?

ಶ್ರೀ ಕೆ. ಮಲ್ಲಪ್ಪ.—ಕೃತಕ ರೇಷ್ಮೆ ಅಂದರೆ ಕೆಲವು ವಸ್ತುಗಳನ್ನು ಸೇರಿಸಿಕೊಂಡು ಮಾಡುವುದು, ಆದರೆ ಚನ್ನಪಟ್ಟಣದ ರೇಷ್ಮೆ, ರೇಷ್ಮೆಹುಳುಗಳಿಂದ ಆಗುತ್ತವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಕಾರ್ಖಾನೆ ಪ್ರಾರಂಭಮಾಡುವುದಕ್ಕೆ ರಾಜ್ಯಸರ್ಕಾರದವರು ಏನೇನು ಸೌಲತ್ತುಗಳನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಅವರಿಗೆ ಬೇಕಾದ ನೆಲ, ನೀರು ಮತ್ತು ಪವರ್.

ಶ್ರೀ. ಟಿ. ಡಿ. ದೇವೇಂದ್ರಪ್ಪ.—ನಾನು ಕೇಳಿದ್ದು ಈಗ ಬೆಳೆಯತಕ್ಕ ರೇಷ್ಮೆಗೂ, ಈ ಕೃತಕ ರೇಷ್ಮೆಗೂ, ಏನಾದರೂ ವ್ಯತ್ಯಾಸವಿರುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ಇವೆರಡಕ್ಕೂ ಕ್ರಯದಲ್ಲಿ ವ್ಯತ್ಯಾಸವಿರುತ್ತದೆ. ಆದರೆ ಆರ್ಟಿಫಿಷಯಲ್ ರೇಷ್ಮೆಯಲ್ಲಿ ಸ್ವಲ್ಪ ಹೆಚ್ಚಿನ ಹೊಳಪು ಇರುತ್ತದೆ.

Sri D. M. SIDDIAH.—Has the Company selected a site at Nanjangud ?

ಶ್ರೀ ಕೆ. ಮಲ್ಲಪ್ಪ.—ಮೊದಲು ನಂಜನಗೂಡಿನಲ್ಲಿ ಪ್ರಾರಂಭಿಸಲು ಲೈಸೆನ್ಸ್ ಕೊಟ್ಟಿತ್ತು. ಅದನ್ನು "ದಿಮಾಡರ್ನ್ ಮಿಲ್ಸ್" ಅವರಿಗೆ ಟ್ರಾನ್ಸ್‌ಫರ್ ಮಾಡಿತು. ಆ ಮಿಲ್ಲಿನವರು ಹರಿಹರದಲ್ಲಿ ಕೃತಕರೇಷ್ಮೆ ಕಾರ್ಖಾನೆಯನ್ನು ಪ್ರಾರಂಭಿಸಲು ಲೈಸೆನ್ಸನ್ನು ಕೇಂದ್ರ ಸರ್ಕಾರದಿಂದ ಪಡೆದಿದ್ದಾರೆ.

Allotment of Zinc Sheets to South Kanara District during 1961-62 and 1962-63.

*Q.—464. Sri DAYANAND R. KALLE (Karkal).—

Will the Government be pleased to state:—

(a) the total number of zinc sheets allotted to South Kanara District for the years 1961-62 and 1962-63;

(b) the sheets allotted for each taluk during these years for domestic and agricultural purposes to the public;

(c) whether they have given any instructions to the Heads of Departments concerned as the method and manner for such distribution;

(d) whether they are aware that the major portion of the quota sanctioned to South Kanara District has been allotted exclusivly to Buntwal Taluk during the years 1961-62 and 1962-63;

(e) if so, the reasons for the same and what other steps they have taken to comply with the legitimate demands of the other taluk in South Kanara District?

A.—Sri K. MALLAPPA (Minister for Industries and Commerce).—

(a)

1961-62	...	3060
1962-63	...	2185

(b) *For domestic purposes:*

		1961–62	1962–63
1. Coondapur	...	200	100
2. Udipi	...	300	100
3. Karkal	...	300	100
4. Belthangady	...	100	100
5. Buntwal	...	200	...
6. Puttur	...	300	100
7. Mnagalore	...	364	82
		1,764	582

For agricultural purposes:

1. Mangalore	...	240 sheets	1603 sheets
2. Buntwal	...	200 ,,	
3. Belthangady	...	... ,,	
4. Puttur	...	280 ,,	
5. Karkal	...	... ,,	
6. Udipi	...	280 ,,	
7. Coondapur	...	296 ,,	
		1,296 sheets	

(c) No.

(d) No.

(e) Does not arise.

ಶ್ರೀ ದಯಾನಂದ ಆರ್. ಕಳ್ಳೆ.—ಈ ಜಿಲ್ಲೆಗೆ ಕೊಟ್ಟಿರತಕ್ಕ ಕೋಟಾಅನ್ನು ಯಾವ ಆಧಾರದ ಮೇಲೆ ತಾಲ್ಲೂಕ್‌ವಾರ್ ಹಂಚಬೇಕೆಂದು ನಿರ್ಧಾರ ಕೊಟ್ಟಿದ್ದೀರಿ?

†ಶ್ರೀ ಕೆ. ಮಲ್ಲಪ್ಪ.—ಇದರ ಬಗ್ಗೆ ಕೈಗಾರಿಕಾ ಶಾಖೆಯವರು ಏನು ಮಾಡುವುದಕ್ಕಾಗುವುದಿಲ್ಲ. ಇದು ಒಂದು ಸಾಮಾನ್ಯ ಕೋಟವೆಂದು ಭಾವಿಸಿ ಅದನ್ನು ಕೇವಲ ಕೆಲವು ಸಣ್ಣ ಸೊಸೈಟಿಗಳಿಗೆ ಕೊಡುತ್ತಾರೆ. ಅಲ್ಪಸ್ವಲ್ಪ ಡೊಮೆಸ್ಟಿಕ್ ಪರ್ಪಸ್ಸಿಗೂ ಇವು ಸಿಗುತ್ತವೆ. ಹೆಚ್ಚಿಗೆ ಸಿಕ್ಕುವುದು ಅಗ್ರಿಕಲ್‌ಚರಲ್ ಪರ್ಪಸ್ಸಿಗೆ. ಇದನ್ನು ಯಾವ್ಯಾವ ತಾಲ್ಲೂಕಿಗೆ ಎಷ್ಟೆಷ್ಟು ಕೊಡಬೇಕೆಂಬುದನ್ನು ತಿಳಿದು ಕೋ-ಆಪರೇಟಿವ್ ಸೊಸೈಟಿ ರಿಜಿಸ್ಟ್ರಾರ್ ಅವರು ಹಂಚುತ್ತಾರೆ.

ಶ್ರೀ ದಯಾನಂದ ಆರ್. ಕಳ್ಳೆ.—ವ್ಯವಸಾಯದ ಉದ್ದೇಶಗಳಿಗಾಗಿ 61-62 ಮತ್ತು 62-63ನೇ ಸಾಲಿನಲ್ಲಿ ಬೆಳ್ತಂಗಡಿ ಮತ್ತು ಕಾರ್ಕಳ ತಾಲ್ಲೂಕ್‌ಗಳಿಂದ ಜಿಂಕ್ ತಗಡುಗಳು ಬೇಕೆಂದು ಏನಾದರೂ ಬೇಡಿಕೆಗಳು ಬಂದಿವೆಯೇ?

ಶ್ರೀ ಕೆ. ಮಲ್ಲಪ್ಪ.—ಬೇಡಿಕೆಗಳೇನೂ ಬಂದಿಲ್ಲವೆಂದು ನನಗೆ ಕಾಣುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಪ್ರಶ್ನೆಗೆ ಉತ್ತರವಾಗಿ "ಇಲ್ಲ" ಎಂದು ಹೇಳಿದ್ದೀರಿ. ಉತ್ತರದಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ 1962-63ನೇ ಸಾಲಿನಲ್ಲಿ ಈ ಜಿಲ್ಲೆಗೆ ಒಟ್ಟು 2185 ಜಿಂಕು ಷೀಟುಗಳ ಪೈಕಿ 1603 ಜಿಂಕುಷೀಟುಗಳನ್ನು ಒಂದೇ ತಾಲ್ಲೂಕ್ ಬಂಟವಾಳಕ್ಕೆ ಕೊಡಲು ಕಾರಣವೇನು?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂಗ್ಲಿಷ್ ಮತ್ತು ಕನ್ನಡ ಪ್ರತಿಗಳಲ್ಲಿಯೇ ಈ ಬಗ್ಗೆ ವ್ಯತ್ಯಾಸವಿದೆ

Sri K. MALLAPPA.—There is some confusion here. The 1603 sheets were obtained by a stockist in Mangalore.

ಶ್ರೀ ವಿ. ಎಂ. ದೇವ್.—ಇಷ್ಟೊಂದು ಒಂದೇ ತಾಲ್ಲೂಕಿನಲ್ಲಿಯೇ ಹಂಚಲಾಗಿದೆಯೆಂದು ಹೇಳುವಾಗ, ಇದು ನ್ಯಾಯವೆಂದು ಹೇಗೆ ಹೇಳುತ್ತೀರಾ?

ಶ್ರೀ ಕೆ. ಮಲ್ಲಪ್ಪ.—ಇದು ಅಗತ್ಯತೆಯ ಮೇಲೆ ಹೋಗುತ್ತದೆ. ಕೋ-ಆಪರೇಟಿವ್ ಸೊಸೈಟಿಯ ರಿಜಿಸ್ಟ್ರಾರ್ ಅವರು ಇದನ್ನು ಹಂಚಿದ್ದಾರೆ. The Buntwal Taluk Board President meant in a special requisition to the Registrar of Co-operative Societies on 26th January 1962 to the effect that, that taluk was not served by a stockist and that since there was a great demand for G. C. sheets from the agriculturists of that taluk a special allotment might be made to that taluk. Then, the Registrar asked the Mangalore stockist to make this allotment to the Buntwal Taluk on the basis of the request made by the Taluk Board President of Buntwal.

Sri G. V. GOWDA.—Why did the Government not feel the necessity of distributing to all the Taluks?

Sri K. MALLAPPA.—I do not know the exact reason. Perhaps Buntwal is a flood-stricken taluk.

ಶ್ರೀ ವಿ. ಎಂ. ದೇವ್.—ಜಿಂಕು ಷೀಟುಗಳನ್ನು ಹಂಚಿರುವ ಅಂಕಿ ಅಂಶಗಳನ್ನು ನೋಡಿದರೆ ನಿಜವಾಗಿ ಎಲ್ಲಾ ತಾಲ್ಲೂಕ್‌ಗಳಲ್ಲಿಯೂ ಷಾರ್ಟೇಜ್ ಬಹಳ ಜಾಸ್ತಿ ಇದೆ ಎಂಬುದು ಗೊತ್ತಾಗುತ್ತದೆ. ಅಂದಮೇಲೆ ಮಂತ್ರಿಗಳು ಉತ್ತರ ಹೇಳುವಾಗ ಕಾರಣ ಸರಿಯಾಗಿ ಗೊತ್ತಾಗಲಿಲ್ಲ. ಅದಕ್ಕೆ ಕೊಡುವುದು ನ್ಯಾಯವೆನಿಸಿತು ಆ ರೀತಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರಲ್ಲಾ! ಇದೇನು ಉತ್ತರವೇ?

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸದಸ್ಯರು ದಯವಿಟ್ಟು ಪ್ರಶ್ನೋತ್ತರಗಳನ್ನು ಇನ್ನೊಂದು ಸಾರಿ ಓದಬೇಕು. 1962ನೇ ಡಿಸೆಂಬರ್ ಮುಂಚೆ, ಅದರಲ್ಲೂ ಈ ಒಂದು ತುರ್ತು ಪರಿಸ್ಥಿತಿ ಬರುವುದರೊಳಗಾಗಿ ಇದರ ವಿತರಣೆ ಆಗಿ ಹೋಗಿದೆ. ಆದ್ದರಿಂದ ಈ ತೀರ್ಮಾನ 1962 ಡಿಸೆಂಬರ್ ಮುಂಚೆ ಆಗಿರತಕ್ಕದ್ದು.

ಶ್ರೀ ದಯಾನಂದ ಆರ್. ಕಳ್ಳೆ.—ನಾನು ಕೇಳುವುದಿಷ್ಟೆ. ಬೇರೆ ಬೇರೆ ತಾಲ್ಲೂಕ್‌ಗಳನ್ನೆಲ್ಲಾ ಬಿಟ್ಟು ಬಿಟ್ಟು 1962-63ನೇ ಸಾಲಿನಲ್ಲಿ ಈ ಒಂದು ತಾಲ್ಲೂಕಿಗೆ ಕೊಟ್ಟಿರುವ ಕಾರಣವೇನು?

ಶ್ರೀ ಕೆ. ಮಲ್ಲಪ್ಪ.—ಯಾವ ತಾಲ್ಲೂಕ್‌ನಲ್ಲಿಯೂ ಅನ್ಯಾಯವಾಗಿಲ್ಲ. ಈ ಒಂದು ತಾಲ್ಲೂಕಿಗೆ ಹಿಂದೆಯೇ ಕೊಡಬೇಕೆಂದು ತೀರ್ಮಾನವಾಗಿತ್ತು. ಬಂಟವಾಳ ತಾಲ್ಲೂಕಿನಲ್ಲಿ ಇದರ ಅವಶ್ಯಕತೆ ಇದೆ ಸ್ಪೆಷಲ್ಲಾಗಿ ಕೊಡಬೇಕು ಎಂಬುದಾಗಿ ಆ ತಾಲ್ಲೂಕ್ ಬೋರ್ಡಿನ ಛೇರಮನ್ ಅವರು ಅರ್ಜಿ ಹಾಕಿಕೊಂಡದ್ದರಿಂದ ಆ ರೀತಿ ಅದನ್ನು ಅಲ್ಲಿಗೆ ತರಿಸಿಕೊಟ್ಟಿದ್ದೇವೆ.

ಶ್ರೀ ಎ. ಕೃಷ್ಣಶೆಟ್ಟಿ.—1962-63ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆ ಇರಲಿಲ್ಲವೆಂಬುದು ಗೊತ್ತಿದೆಯೆ ?

ಶ್ರೀ ಕೆ. ಮಲ್ಲಪ್ಪ.—ಆಗಲೇ ಬರಬೇಕೆಂದೇನೂ ಇಲ್ಲ, ಅದಕ್ಕಿಂತ ಹಿಂದೆ ಬಂದಿರಬಹುದು. ಆದರೆ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಅಲ್ಲಿಗೆ ಈತನಕ ಸಿಕ್ಕಿಲ್ಲ, ಅಲ್ಲ ಸ್ಟಾಕಿಸ್ಟ್ ಇಲ್ಲ ಕೊಡ ಬೇಕು ಎಂದು ಅರ್ಜಿ ಹಾಕಿದ ಮೇಲೆ, ಅದನ್ನು ಕೋ-ಆಪರೇಟಿವ್ ಸೊಸೈಟಿ ರಿಜಿಸ್ಟ್ರಾರ್ ಅವರಿಗೆ ಕಳುಹಿಸಿ, ಮಂಗಳೂರಿಗೆ ಬಂದಿದ್ದ 1603 ಷೀಟುಗಳನ್ನು ಬಂಟವಾಳಿಗೆ ಕೊಟ್ಟಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತಾಲ್ಲೂಕು ಬೋರ್ಡಿಗೆ ಜಿಂಕ್ ಷೀಟುಗಳು ಬಂದರೆ, ತಾಲ್ಲೂಕು ಬೋರ್ಡಿನ ಸದಸ್ಯರೇ ಹಂಚಿಕೊಳ್ಳುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಮಲ್ಲಪ್ಪ.—ಈತನಕ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ಸ್ಟಾಕ್ ಮಾಡುವುದಕ್ಕೂ ಜನರ ಬೇಡಿಕೆಗೂ ಸಂಬಂಧವೇನು ? ಮಂಗಳೂರಿನಲ್ಲಿ 1603 ಸ್ಟಾಕ್ ಮಾಡಿದೆ, ಬೇಡಿಕೆ ಬಂಟವಾಳದಿಂದ ಬಂದಿದೆ. ಅದಕ್ಕೂ ಇದಕ್ಕೂ ಸಂಬಂಧವೇನು ?

ಶ್ರೀ ಕೆ. ಮಲ್ಲಪ್ಪ.—ಸಂಬಂಧವಿದೆ; ಇದನ್ನು ತರಿಸಿ ಯಾರಾದರೂ ದಾಸ್ತಾನು ಮಾಡಬೇಕು; ರಿಜಿಸ್ಟರ್ಡ್ ಸ್ಟಾಕಿಸ್ಟ್ ಮಂಗಳೂರಿನಲ್ಲಿದ್ದರು. ಅವರು 1603 ಷೀಟುಗಳನ್ನು ದಾಸ್ತಾನು ಮಾಡಿದ್ದರು. ಅದನ್ನು ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಬಂಟವಾಳಕ್ಕೆ ಕಳುಹಿಸಿ ವಿತರಣೆ ಮಾಡಬೇಕೆಂದು ಹೇಳಿದರು, ಆ ರೀತಿ ಆಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಂಟವಾಳ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಸ್ಪೆಷಲ್ ಆಗಿ ಕೇಳಿದರೆಂದು ಹೇಳಿದಿರಿ, ಅವರು ರೈತರಿಂದ ಅರ್ಜಿ ತರಿಸಿಕೊಂಡು ಇದನ್ನು ತಾವು ತಗೆದು ಕೊಂಡು ಮಾರಿಕೊಂಡರೆಂಬುದು ಗೊತ್ತಿದೆಯೆ ?

ಶ್ರೀ ಕೆ. ಮಲ್ಲಪ್ಪ.—ಆ ರೀತಿ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಲ್ಲ ತಾಲ್ಲೂಕುಗಳವರೂ ಕೇಳಿದರೆ ಏಕೆ ಕೊಟ್ಟಿಲ್ಲ ?

ಶ್ರೀ ಕೆ. ಮಲ್ಲಪ್ಪ.—ಬೇರೆಯವರಿಂದ ಅರ್ಜಿಗಳನ್ನು ತೆಗೆದುಕೊಂಡು ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರು ಹೋಗಿ ಷೀಟುಗಳನ್ನು ತರುವುದಿಲ್ಲ. ರಿಜಿಸ್ಟರ್ಡ್ ಸ್ಟಾಕಿಸ್ಟ್ ದಾಸ್ತಾನು ಮಾಡ ಬೇಕು. Demostic useಗಾದರೆ ಡೆಪ್ಯುಟಿ ಕಮೀಷನರು, ವ್ಯವಸಾಯ ಸಂಬಂಧವಾದ ಕೆಲಸಗಳಿಗಾದರೆ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಅವರು ಪರ್ಮಿಟ್ ಕೊಡುತ್ತಾರೆ. ಅದಕ್ಕನುಸಾರವಾಗಿ ಸ್ಟಾಕಿಸ್ಟ್ ಕೊಡಬೇಕಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—1962-63ರಲ್ಲಿ ಯಾರೋ ಒಬ್ಬರು ವ್ಯಕ್ತಿ ಪ್ರಭಾವಕ್ಕೊಳಗಾಗಿ ಅಧಿಕಾರಿಗಳು ಹೀಗೆ ಕೊಟ್ಟಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಯಾರ ಪ್ರಭಾವಕ್ಕೂ ಒಳಗಾಗಿಲ್ಲ. ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರ ಆಜ್ಞೆಯನ್ನನುಸರಿಸಿ ಕೊಟ್ಟಿದೆಯೆಂದು ಹೇಳಿದ್ದೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅದರ ಪೈಕಿ ರೈತರಿಗೆ ಒಂದು ಷೀಟ್ ಕೂಡ ಹೋಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಮಲ್ಲಪ್ಪ.—ವಿವರಗಳನ್ನು ಕೊಟ್ಟರೆ ವಿಚಾರಮಾಡಬಹುದು.

Starting of the Rural Electrification Works in the State

* *Q.*—288. Sri GANJI VEERAPPA (Harihar).—

Will the Government be pleased to state :—

(*a*) whether they have taken a decision to stop the rural electrification works in the State ;

(*b*) whether the above decision apply even to such of the works, wherein estimates are prepared and got sanctioned ;

(*c*) whether the above decision applies to requests for power for irrigation pump sets ?

A.—Sri S. NIJALINGAPPA (Chief Minister).—

(*a*) Recently, in view of the National Emergency the Electricity Board decided to keep in abeyance all rural electrification work in the State. Subsequently the Board has modified its decision and ordered that those of the rural electrification works which have been already taken up on hand and are in various stage of execution may be completed. The Board has also ordered that these schemes wherein consumers have already completed their portion of work and are ready to take service, may also be completed.

(*b*) In view of the reply *vide* (*a*), the question does not arise.

(*c*) No.

Sri GANJI VEERAPPA.—May I know whether there are cases where up to the villages poles are fixed up, wires are drawn but the current is not given?

†Sri S. NIJALINGAPPA.—It may be true, but in view of the emergency it may not be possible to give in all cases.

Sri GANJI VEERAPPA.—Supplementary to (*a*) Does this instruction cover such cases where poles are fixed up, wires are drawn and only power remains to be given?

Sri S. NIJALINGAPPA.—If part of the work has been done, then the rest will be completed.

Sri GANJI VEERAPPA.—In cases where power has been given for pumpsets, the line is there and the Village Panchayats have come forward to have street lights, what is the policy of Government?

Sri S. NIJALINGAPPA.—I do not think they will be given.

Sri C. S. HULKOTI.—May I know whether the construction of power line will be taken up early in the arid area for supply of power to irrigation wells where the agriculturists have applied for supply by paying the necessary deposit amount?

Sri S. NIJALINGAPPA.—That is the policy of Government.

ಶ್ರೀ ಎಚ್. ಆರ್. ಕೇಶವಮೂರ್ತಿ.—ಗ್ರಾಮಾಂತರ ಪ್ರದೇಶಗಳಿಗೆ ಅನೇಕ ದಿನಗಳ ಹಿಂದೆ ಅಂದಾಜು ಮಾಡಿದ್ದರೆ, ಅಂಥ ಕಡೆಗಳಿಗೆ ವ್ಯವಸಾಯಕ್ಕೆ ರಿಯಾಯಿತಿ ಕೊಡಬೇಕೆಂದು ಯೋಚನೆ ಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಯೋಚನಾರ್ಹವಾದುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಾಮಾನುಗಳು ಸಿಕ್ಕದೆ ಉದ್ದೇಶ ವಿಫಲವಾಗಿದೆ. ಎಲ್ಲೆಲ್ಲಿ ಪಂಪುಗಳನ್ನು ಆಗಲೇ ಹಾಕಿ ಕೊಂಡಿದ್ದಾರೋ ಅವಕ್ಕೆ ಕೊಡಬೇಕೆಂದು ಮಾಡಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು, ಅದೇ ಉದ್ದೇಶ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕಲವು ಗ್ರಾಮಗಳಿಗೆ ಕೊಡಬೇಕೆಂದು ಸರ್ಕಾರದ ಮಂಜೂರಾಗಿದ್ದರೆ, ಅಂಥ ಸಂದರ್ಭಗಳಲ್ಲಿ ಒದಗಿಸುವುದು ಸೂಕ್ತವಲ್ಲವೆ?

ಶ್ರೀ ಎಸ್. ನಿಜಲಿಂಗಪ್ಪ.—ಮಂಜೂರಾದ ಮಾತ್ರಕ್ಕೇ ಸಿಕ್ಕುವುದಿಲ್ಲ. ಸ್ವಲ್ಪ ಕೆಲಸವಾಗಿದ್ದರೆ ಅದನ್ನು ಪೂರ್ತಿ ಮಾಡುತ್ತಾರೆ.

Sri N. O. SAMAJI.—(Marathi).

Sri B. D. JATTI.—(Marathi).

Sri GANJI VEERAPPA.—May I take it that there is no restriction for giving power to cases wherein power is required for pumpsets?

Sri S. NIJALINGAPPA.—Yes. You can presume so.

Sri SANJIVANATH AIKALA.—Is it not a fact that officers are not permitted to employ casual labourers on wages prevalent in that area ?

Sri S. NIJALINGAPPA.—It has no reference to this question.

ಶ್ರೀಮತಿ ಬಸವರಾಜೇಶ್ವರಿ.—ಆಹಾರೋತ್ಪತ್ತಿಗೆ ಬಾವಿಗಳಿಗೆ ಪಂಪ್‌ಸೆಟ್ಸ್ ಹಾಕಲು ಕೊಡುತ್ತೇವೆಂದು ಹೇಳಿದರು, ಬಾವಿಗಳಿಗೆ minimum ಎಷ್ಟು ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ನಿಗದಿ ಮಾಡಿಲ್ಲ, ನೋಡಿ ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅನೇಕರು ಪಂಪು ಹಾಕಿಕೊಂಡು ಕುಳಿತಿದ್ದಾರೆ, ತಂತಿ ಇಲ್ಲ, ಸಾಮಾನುಗಳಿಲ್ಲ, ಈ ಪರಿಸ್ಥಿತಿ ಎಷ್ಟು ಮಟ್ಟಿಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಅತ್ಯಂತ ವಿಶೇಷ ಪ್ರಯತ್ನ ನಡೆಯುತ್ತಿದೆ, ಅದನ್ನು ಪಡೆಯುವುದಕ್ಕೆ. Stocks have been replenished to some extent.

Sri GANJI VEERAPPA.—Do Government think of relaxing this restriction in cases like Hirekeriyur where the line has gone up to the building and just only power remains to be given ?

Sri S. NIJALINGAPPA.—I do not know, but I will get it examined.

ಶ್ರೀ ಟಿ. ಡಿ. ದೇವೇಂದ್ರಪ್ಪ.—Lift Irrigationಗೆ ಕೊಡತಕ್ಕ ವಿದ್ಯುಚ್ಛಕ್ತಿಯನ್ನು ರಾತ್ರಿ ಕಾಲದಲ್ಲಿ ಉಪಯೋಗಿಸಿ ನೀರು ಹಾಯಿಸಿಕೊಳ್ಳಲು ತೊಂದರೆಯಾಗುತ್ತದೆ, ಆದುದರಿಂದ ಹಗಲು ಉಪಯೋಗ ಮಾಡಲು ಅವಕಾಶವಾಗುತ್ತದೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಸಧ್ಯಕ್ಕೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿರೇಕೆರೂರು ಮಾತ್ರ ನೋಡಿ ಎಂದು ಶ್ರೀಮಾನ್ ಗಾಂಜಿ ವೀರಪ್ಪನವರು ಹೇಳಿದರು, ಬಾಕಿ ಕಡೆಯೂ ನೋಡುತ್ತೀರಾ ? (ನಗು !)

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಅವರ ಪ್ರಶ್ನೆಯಿಂದ ಯಾರಿಗೂ ಸಿಕ್ಕದ ಹಾಗಾಗುತ್ತದೆಂದು ಕಾಣುತ್ತದೆ (ನಗು).

Mr. SPEAKER.—Question hour is over.

QUESTION FOR ANSWER ON THE DAY.

(but not taken up).

Total Acreage of Inami Lands coming under the Provisions of Hyderabad Abolition of Inams Act, 1955 in the Hyderabad-Karnatak area.

***Q.—445. Sri S. BHIMANNA** (Bhalki).—

Will the Government be pleased to state :—

(*a*) the total acreage of inami lands coming under the provisions of Hyderbad Abolition of Inams Act, 1955 in the Hyderbad-Karnatak area; and the percentage of inami lands compared to that of non-inami lands ;

(*b*) the total number of inamdars and Qualdars specifying the nature of Qualdars (permanent, protected, ordinary) and the acreage of land (inami) possessed by them ;

(*c*) the total acreage of inami lands being under the personal cultivation of inamdars and qualdars separately ?

A.—**Sri M. V. KRISHNAPPA** (Minister for Revenue).—

(*a*) total acreage of inami lands—1,12,387 acres.

Percentage of inami lands—1½ per cent

(b) Inamdars ... 10,344

Tenants ... 9,526

Information regarding the nature of tenancy and acreage of inam lands is not readily available.

(c) The total area of the inami land coming under the purview of the Hyderabad Abolition of Inams Act—1,12,387 acres.

Occupancy rights have been granted to Inamdars to the extent of 41,743 acres.

Occupancy rights have been granted to Tenants to the extent of 37,128 acres.

All the lands granted to the tenants are under their personal cultivation; but, it cannot be definitely stated whether the lands granted to the inamdars are under their (Inamdars) personal cultivation as there is provision in the Inam Abolition Act to grant patta in the name of the inamdars to the extent of 3 family holdings.

BUDGET ESTIMATES FOR 1963-64—DEMANDS FOR GRANTS

Demand No. 20 AGRICULTURE.

SRI G. NARAYANA GOWDA (Minister for Agriculture).—On the recommendation of the Governor of Mysore, I beg to move:

"That a sum not exceeding Rs 3,14,43,000 be granted to the Government to defray the charges which will come in course of payment during the financial year for the period ending on 31st day of March 1964 in respect of 'Agriculture'."

MR. SPEAKER.—Motion moved:

> "That a sum not exceeding Rs. 3,14,43,000 be granted to the Government to defray the charges which will come in course of payment during the financial year for the period ending on 31st day of March 1964 in respect of 'Agriculture'."

Not only Demand No. 20, but Demands Nos. 22, 38, 51, 21, 25 and 23 shall be deemed to have been moved, and they are all before the House for debate.

1-00 P.M.

Before I call upon anybody, I would like to know how many members would be desirous of participating and whether I should put any time-limit.

SRI C. J. MUCKANNPPA (Sira).—It has started today. Why should the Chair to put a time limit?

MR. SPEAKER.—We are sitting for the whole of tomorrow also at six hours a day. In all there are twelve hours. This is a popular Demand in which everybody wants to participate. Therefore, I must have some assessment.

I will fix 20 minutes and that, I think, would be reasonable.

HON'BLE MEMBERS.—Yes, Sir.

Sri G. V. GOWDA (Palya).—Sir, 30 minutes would be reasonable.

Mr. SPEAKER.—30 minutes means, only 12 speakers will be able to participate. I think 20 minutes should be sufficient.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಬೆಳಗ್ಗೆ $8\frac{1}{2}$ ಯಿಂದಲೇ ಕುಳಿತು ಹಬ್ಬದ ಹಿಂದು ಮುಂದೆ ಟೈಂ ಅಡ್ಜಸ್ಟ್ ಮಾಡಿದರೆ ಅನುಕೂಲ.

Mr. SPEAKER.—I think the matter was considered and we agreed that we should sit for six hours a day, exclusive of the question hour. Originally we had $10\frac{1}{2}$ hours and now we have got 12 hours.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇನ್ನೂ ಸ್ವಲ್ಪ ಜಾಸ್ತಿ ಮಾಡಿ.

Mr. SPEAKER.—More than 12 hours. Why did the members not suggest it yesterday ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬಹಳ ಜನ ಮಾತನಾಡಬೇಕಾಗಿರುವುದರಿಂದ 15 ನಿಮಿಷ ನಿಗದಿಮಾಡಿದರೆ ಒಳ್ಳೆಯದು.

Mr. SPEAKER.—I can't go on accepting every contradictory suggestion. Some Hon'ble Member suggests half-an-hour, when twenty minutes have been agreed to. And, another hon'ble member suggests fifteen minutes. I think 20 minutes is reasonable.

†ಶ್ರೀ ಪಿ. ಬಿ. ಬೊಮ್ಮಣ್ಣ (ಅರಸೀಕೆರೆ).—ಅಧ್ಯಕ್ಷರೆ, ವರ್ಷಗಳು ಕಳೆದಹಾಗೆಲ್ಲಾ ಭೂಮಿಯು ನಿಸ್ಸಾರವಾಗಿ ಅದರಲ್ಲಿ ಬೆಳೆಯುವ ಬೆಳೆಯೆಲ್ಲಾ ಕಡಮೆಯಾಗುತ್ತಿರುವುದರ ಜೊತೆಗೆ ಸರಿಯಾದ ಕೃಷಿ ಸಹ ಇಲ್ಲದಂತಾಗಿ, ದನಕರುಗಳಿಗೆಸಹ ಸರಿಯಾದ ಮೇವು ಸಿಕ್ಕದೆ, ಬೆಳೆಯುವ ಮಕ್ಕಳಿಗೆ ಒಳ್ಳೆಯ ಹಾಲು ಸಾಕಾದಷ್ಟು ದೊರೆಯದೆ ದಿನೇದಿನೇ ಜನಾಂಗದ ಆಹಾರ ಸಹ ಕುಗ್ಗುವ ಸ್ಥಿತಿ ಪ್ರಾಪ್ತವಾಗಿದೆ. ನಮಗೆ ಸ್ವಾತಂತ್ರ್ಯ ಬಂದಕೂಡಲೆ ಹೊಟ್ಟೆ ತುಂಬ ಆಹಾರವನ್ನು ಉತ್ಪತ್ತಿ ಮಾಡಬೇಕೆಂಬುದಾಗಿ ಹೇಳಿದೆವು. ಅದಕ್ಕೆ ಮೊದಲನೆಯ ಸ್ಥಾನ ಕೊಡಬಹುದಾಗಿತ್ತು. ಆದರೆ ಹಾಗೆಮಾಡಿಲ್ಲ. ಈಗ ತುರ್ತು ಪರಿಸ್ಥಿತಿಯಲ್ಲಾದರೂ ಮೊದಲನೆಯ ಸ್ಥಾನ ಕೊಡುತ್ತೇವೆಂದು ನಮ್ಮ ಮುಂದೆ 3,14,43,000 ರೂಪಾಯಿಗಳ ಬೇಡಿಕೆಯನ್ನಿಟ್ಟಿದ್ದಾರೆ. ಇಷ್ಟು ಖರ್ಚಿನಿಂದ ಹೆಚ್ಚು ಬೆಳೆಯನ್ನು ಉತ್ಪತ್ತಿಮಾಡಿ ಕೊಡುವುದಾಗಿ ಹೇಳಿದ್ದಾರೆ. ಆದರೆ ಮೊನ್ನೆ ಶ್ರೀ ಕಂಠಿಯವರು ಕೆಲವು ಅಂಕಿ ಅಂಶ ಕೊಟ್ಟಿದ್ದಾರೆ, ಹೋದವರ್ಷ ಮತ್ತು ಈ ವರ್ಷ ಬೆಳೆದಿರುವ ಧಾನ್ಯ ಇಷ್ಟು ಎಂದು ತಿಳಿಸಿದ್ದಾರೆ. ಅದನ್ನು ನೋಡಿದರೆ ಜೋಳ, ಅಕ್ಕಿ, ಬಾಜ್ರ ಮುಂತಾದ ಆಹಾರ ಧಾನ್ಯಗಳ ಉತ್ಪತ್ತಿ ತಿಳಿಯುತ್ತದೆ. ಅದರ ಪ್ರಕಾರ ಒಬ್ಬ ಮನುಷ್ಯನಿಗೆ ವರ್ಷಕ್ಕೆ 145 ಸೇರು ಆಹಾರ ದೊರೆಯುತ್ತದೆ. ನಮ್ಮ ದೇಶಕ್ಕೆ ಅಕ್ಕಿ ಬಹಳವಾಗಿ ಬೇಕು. ಅದು ಅವರ ಲೆಕ್ಕದ ಪ್ರಕಾರ ಒಬ್ಬನಿಗೆ ಒಂದು ವರ್ಷಕ್ಕೆ 45 ಸೇರಿನಂತೆ ದೊರೆಯಬಹುದು. ಎಕರೆಯೊಂದಕ್ಕೆ 9 ಪಲ್ಲ ಬತ್ತ, 2 ಪಲ್ಲ ರಾಗಿ, $1\frac{1}{2}$ ಪಲ್ಲ ಜೋಳ ಈ ಪ್ರಕಾರ ಬೆಳೆಯಾಗಿದೆ. ಹೊರದೇಶಕ್ಕೆ ಈ ಅಂಕಿ ಅಂಶ ತಿಳಿದರೆ ವ್ಯವಸಾಯವು ಪ್ರಾಧಾನ್ಯವಾಗಿರುವ ನಮ್ಮ ದೇಶದಲ್ಲಿ ಇಷ್ಟುಮಾತ್ರ ಉತ್ಪತ್ತಿಯಾಗಿರುವುದನ್ನು ನೋಡಿ ಆ ದೇಶಗಳವರು ಯಾವ ಭಾವನೆ ತಾಳಬಹುದೆಂಬುದನ್ನು ಗಮನಿಸಬೇಕು. ಮೂರನೆಯದು ಸರ್ವೆ ಸೆಟ್ಲ್‌ಮೆಂಟ್, ಕಂದಾಯ ಹೆಚ್ಚಿಸಲು ಸರ್ವೆ ಮಾಡಿಸುತ್ತಾರೆ. ಅದಾದ ನಂತರ ಸರ್ವೆ ಮಾಡಿದವರು ಒದಗಿಸುವ ಅಂಕಿ ಅಂಶಗಳ ಪ್ರಕಾರ ಕಂದಾಯವನ್ನು ಒಂದಕ್ಕೆ ಎರಡರಷ್ಟು ವಿಧಿಸುತ್ತಾರೆ. ಆದರೆ ಈಗಿರುವ ಅಂಕಿಅಂಶಗಳಿಗೂ ನಾಳೆದಿವಸ ಸರ್ವೆಯಾದನಂತರ ದೊರೆಯುವ ಅಂಕಿಅಂಶಗಳಿಗೂ ವ್ಯತ್ಯಾಸ ಬರುತ್ತದೆ. ಆ ಕಾರಣದಿಂದ ಬೆಳೆಯಾಗುವುದನ್ನು ನೋಡಿ ಕಂದಾಯ ಹೆಚ್ಚುಕಡಮೆ ಮಾಡುವುದು ಸೂಕ್ತ. ನಮ್ಮ ವ್ಯವಸಾಯದ ಇಲಾಖೆ ಯಾವರೀತಿ ಕೆಲಸ ಮಾಡುತ್ತಿದೆಯೆಂಬುದು ಈಗ ದೊರೆತಿರುವ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಶ್ರೀ ನಾರಾಯಣಗೌಡರು ಮಂತ್ರಿಗಳಾದಮೇಲೆ ರೈತರಮೇಲೆ ಕಿರುಗಣ್ಣುಬಿಟ್ಟಹಾಗಾಗಿದೆ. ಪಂಪ್‌ಸೆಟ್ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಎಷ್ಟುಮಟ್ಟಿಗೆ ಕೊಡುತ್ತಾರೋ ಗೊತ್ತಿಲ್ಲ. ಮಾರ್ಚ್ ತಿಂಗಳಲ್ಲಿ ಕೊಡುವುದಾಗಿ ಹೇಳಿದ್ದರು. ಆದರೆ ಪಂಪ್‌ಸೆಟ್ಟುಗಳು ಕಾರ್ಖಾನೆಯಲ್ಲೇ ಇವೆ. ಅಮಲ್ದಾರರು 15 ದಿವಸಗಳಲ್ಲಿ ಒದಗಿಸುವುದಾಗಿ ಹೇಳಿದ್ದಾರೆ. ಎಷ್ಟುಮಟ್ಟಿಗೆ ಒದಗಿಸುತ್ತಾರೋ ಗೊತ್ತಾಗಿಲ್ಲ. ನಿಜವಾಗಿಯೂ ಮನಸ್ಸಿದ್ದರೆ ರೈತರಲ್ಲಿ ನಂಬಿಕೆಯಿಟ್ಟು ಪಂಪ್‌ಸೆಟ್ಟುಗಳನ್ನು ಬೇಗ ಒದಗಿಸಬೇಕು. ರೈತರು ರಾಜ್ಯದ ಬೆನ್ನುಮೂಳೆ ಎಂದು ಹೇಳುವಾಗ ಸಕಾಲದಲ್ಲಿ ಅವರಿಗೆ ಬೇಕಾದ ಪಂಪ್‌ಸೆಟ್ ವಗೈರೆ ಒದಗಿಸದಿದ್ದರೆ ಉದ್ದೇಶ ನೆರವೇರುವುದಿಲ್ಲ. ವ್ಯವಸಾಯ ಚೆನ್ನಾಗಿ

ನಡೆಯಬೇಕು. ಉತ್ಪತ್ತಿ ಹೆಚ್ಚಬೇಕು ಎಂದು ಹೇಳುವಾಗ ಇಲಾಖಾ ಡೈರೆಕ್ಟರುಗಳು ಮತ್ತು ಅಧಿಕಾರಿಗಳನ್ನು ಹೆಚ್ಚಿಸಿದರೆ ಸರ್ಕಾರದ ಹಣ ಖರ್ಚಾಗುವುದೇ ಹೊರತು ಉತ್ಪತ್ತಿಮಾತ್ರ ಹೆಚ್ಚುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತೇನೆ.

ಆಮೇಲೆ ಡೈರೆಕ್ಷನ್, ಸೂಪರ್‌ವಿಷನ್ ಸಿಬ್ಬಂದಿ ಮುಂತಾದ್ದಕ್ಕೆ 21,89,000 ರೂಪಾಯಿಗಳನ್ನು ಖರ್ಚುಮಾಡಬೇಕೆಂದಿದ್ದಾರೆ. ಈಗ ಗೊಬ್ಬರದ ಸರಬರಾಯಿ ಮಾಡುತ್ತಿದ್ದಾರೆ. ಆದರೆ ಯಾವ ಗೊಬ್ಬರ ಉಪಯೋಗಿಸಬೇಕೆಂಬುದೇ ತಿಳಿಯದಾಗಿದೆ. ಕೃತಕ ಗೊಬ್ಬರ ಈಗ ದೊರೆಯುತ್ತಿದೆ. ಅದನ್ನು ಫಲವತ್ತಾದ ಭೂಮಿಗೆ ಹಾಕಿದರೆ ಕಣ್ಣಿಗೆ ಮಣ್ಣೆರಚಿದಂತಾಗುತ್ತದೆ. ಒಂದು ವರ್ಷ ಅದನ್ನು ಹಾಕಿದರೆ ಚೆನ್ನಾಗಿ ಬೆಳೆಯಬಹುದು. ಮುಂದೆ ಆ ಭೂಮಿ ಏನಾಗುತ್ತದೆಯೋ ಗೊತ್ತಿಲ್ಲ. ಎರಡನೆಯದು ಬೆಳಗೊಳ ಮುಂತಾದ ಕಡೆ ಅಮೋನಿಯಂ ಸಲ್ಫೇಟನ್ನು ತಯಾರಿಸುತ್ತಿದ್ದಾರೆ. ಆದರೆ ಯಾವ ಪರ್ಸೆಂಟೇಜ್ ಸಲ್ಫೇಟ್ ಇರಬೇಕೆಂಬುದನ್ನು ಸರಿಯಾಗಿ ನೋಡಿಲ್ಲ. ಬೆಳಗೊಳದಲ್ಲಿ ತಯಾರಾಗುವ ಗೊಬ್ಬರ ಉಪಯೋಗಿಸಿದರೆ ಇತರ ಕಂಪೆನಿ ಗೊಬ್ಬರಗಳ ಉಪಯೋಗದಿಂದ ಬೆಳೆಯುವಷ್ಟು ಬೆಳೆ ಬರುವುದಿಲ್ಲ. ಇದನ್ನು ಗಮನಿಸಬೇಕು ಅದರೆ ಬೆಳಗೊಳದವರಿಗೆ ಪ್ರೋತ್ಸಾಹ ಮಾಡುತ್ತಿದ್ದಾರೆ. ಅಲ್ಲದೆ ಮೈಸೂರು ದೇಶದಿಂದ ಹೊರಕ್ಕೆ ಗೊಬ್ಬರ ಅತಿಯಾಗಿ ಹೋಗುತ್ತಿದೆ. ಈ ಸಂಬಂಧದಲ್ಲಿ ಕಾಳಸಂತೆಸಹ ಆಗುತ್ತಿದೆ. ಇದರಿಂದ ನಮ್ಮ ದೇಶದ ಉಪಯೋಗಕ್ಕೆ ಹೆಚ್ಚು ಗೊಬ್ಬರ ದೊರೆಯುತ್ತಿಲ್ಲ. ಇದಕ್ಕೆ ಸಹಾಯಕವಾದ ಡೆಮಾನ್‌ಸ್ಟ್ರೇಷನ್, ಪ್ರಾಪಗ್ಯಾಂಡ ಈ ಕೆಲಸಗಳೆಲ್ಲಾ ಬೇಕಾದಷ್ಟು ಆಗುತ್ತಿವೆ ಎಂದು ಹೇಳಬಹುದು. ಬೆಳೆ ನೋಡಿದರೆ ಕ್ರಾಪ್ ಕಾಂಪಿಟೇಷನ್ ಮಾಡುತ್ತೀರಿ. ಅಂಕಿ ಅಂಶ ಹೇಳುವುದಾದರೆ ಒಂದು ಎಕರೆಗೆ 40-50 ಪಲ್ಲ ಬತ್ತ, ರಾಗಿ ಬೆಳೆಯುವ ಕಡೆ 15 ಪಲ್ಲಾ ಕೂಡ ಬೆಳೆಯುತ್ತಿಲ್ಲ. ಏಕೆ ಈ ರೀತಿ ಆಗುತ್ತದೆ ಎಂಬುದನ್ನು ತಾವು ನೋಡುವುದಿಲ್ಲ. ಎಷ್ಟುಮಟ್ಟಿಗೆ ಕ್ರಾಪ್ ಕಾಂಪಿಟೇಷನ್ ನಡೆಸುತ್ತೀರಿ. ಯಾವ ರೈತರಿಗೆ ಪ್ರೈಸ್ ಕೊಟ್ಟಿದ್ದೀರಿ, ಎಷ್ಟರಮಟ್ಟಿಗೆ ಉತ್ಸಾಹ ಮಾಡಿದ್ದೀರಿ ಎಂಬುದು ಇದರಿಂದ ಗೊತ್ತಾಗುತ್ತದೆ. ಈ ಇಲಾಖೆಯಲ್ಲಿ ನಾನು ಕಂಡಹಾಗೆ ಪ್ರವೀಣರು ಇದ್ದಾರೆ, ಬುದ್ಧಿವಂತರು ಇದ್ದಾರೆ, ಉತ್ಸಾಹಶಾಲಿಗಳು ಇದ್ದಾರೆ. ಆದರೆ ಅವರು ಯಾವ ರಿಸರ್ಚ್ ಕೆಲಸ ಮಾಡಬೇಕೋ ಅದಕ್ಕೆ ತಾವು ಅವಕಾಶ ಕೊಡುತ್ತಿಲ್ಲ. ನಿಮ್ಮ ಸಂಬಂಧಿಕರು ಯಾರೋ ಇದ್ದಾರೆ ಅವರಿಗೆ ಮುಂದೆ ಗ್ರೇಡು ಕೊಡಬೇಕು ಎಂಬ ದೃಷ್ಟಿಯಿಂದ ಬುದ್ಧಿವಂತರನ್ನು ರಿಸರ್ಚ್ ಕೆಲಸದಿಂದ ತೆಗೆದು ಯಾವುದೋ ಒಂದು ಕಡೆಗೆ ಅಡಿಕೆ ಗಿಡ ಹಾಕಿಸಿ ಎಂದು ಕಳುಹಿಸುತ್ತೀರಿ. ದಡ್ಡರನ್ನು ಎಕ್ಸ್‌ಪರಿಮೆಂಟ್ ಮಾಡಲು ಕಳುಹಿಸುತ್ತೀರಿ ಅವರಿಗೆ ತಿಳಿಯುವುದಿಲ್ಲ. ಅಲ್ಲದೆ ಕೆಲವರು ಒಂದು ಕಡೆ ಮೂರು ತಿಂಗಳು ಇದ್ದವರು ಎಷ್ಟೋ ಜನ ಬೇರೆ ಕಡೆಗೆ ವರ್ಗಮಾಡಿಸಿಕೊಂಡು ಹೋಗುತ್ತಾರೆ. ಇನ್ನು ಕೆಲವರು 4-5 ವರ್ಷ ಆದರೂ ಅಲ್ಲೇ ಇರುತ್ತಾರೆ. ಇದಕ್ಕೆ ಕಾರಣವೇನು ? Soil Conservation ಟ್ರೈನಿಂಗ್‌ಗೆ ಕಳುಹಿಸುತ್ತೀರಿ. ಅವರನ್ನು ನೇಮಕ ಮಾಡುತ್ತೀರಿ. ಮೂರು ಮೂರು ತಿಂಗಳಿಗೆ ವರ್ಗ ಮಾಡುತ್ತೀರಿ. ಇದರಿಂದ ಎಷ್ಟರಮಟ್ಟಿಗೆ ನಿಮ್ಮ ಉದ್ದೇಶ ಸಾಧನೆಯಾಗುತ್ತವೆ ಎಂಬುದನ್ನು ಯೋಚನೆ ಮಾಡಿ.

ಎಕ್ಸ್‌ಪರಿಮೆಂಟಲ್ ಅಂಡ್ ರಿಸರ್ಚ್ ಸ್ಟೇಷನ್ ಅಂತ 58 ಲಕ್ಷದ 76 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇಂಡಿಯಾ ಸರ್ಕಾರದ ದುಡ್ಡು ಬರುತ್ತದೆ ಎಂದು ಹೇಳುತ್ತೀರಿ. ಇಲ್ಲಿ ಏನಾಗಿದೆ ಎಂದರೆ ಎರಡು-ಮೂರು ಉದಾಹರಣೆ ಹೇಳುತ್ತೇನೆ. ನಮ್ಮ ಅರದಾಕೆರೆಯಲ್ಲಿ ಹತ್ತಿ ರಿಸರ್ಚ್‌ಮಾಡಿ ಒಳ್ಳೆಯ ಹತ್ತಿ ಕೊಡುತ್ತೇವೆ ಎಂದು ಸರ್ಕಾರಿ ಆರ್ಡರ್ ಮಾಡಿಸಿಕೊಂಡರು. ಹತ್ತಿ ಬೆಳೆ ಹಾಕಿದರು. ಒಂದು ವರ್ಷ ಚೆನ್ನಾಗಿ ಬಂತು. ಒಳ್ಳೆಯ ಬೀಜ ಕೊಟ್ಟರು. ಎರಡು ಮೂರು ವರ್ಷ ಆದಮೇಲೆ ಬೀಜದ ಶಕ್ತಿ ಕಡಿಮೆಯಾಗುತ್ತಾ ಬಂತು. ಒಂದು ಪ್ರೆಸ್ ಅಂತ ಇಟ್ಟುಕೊಂಡರು. ಪ್ರೆಸ್‌ನಲ್ಲಿ ಇದ್ದಾಗ ಹತ್ತಿ ಜೊತೆಗೆ ಬೀಜವನ್ನಿಟ್ಟು ಹಾಗೆಯೇ ಬಿಟ್ಟದ್ದರಿಂದ ಬೀಜಕ್ಕೆ ಏಟು ಬಿದ್ದು ರೋಗ ಬಂತು, ಹಿಂದೆ ಹಣಕಾಸಿನ ಸಚಿವರಿಗೆ ಕೇಳಿದ್ದಕ್ಕೆ ಏನೋ ಕಡಿಮೆ ಆಗಿದೆ ಎಂದು ಬಹಳ ಹಗುರವಾಗಿ ಹೇಳಿದರು. ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ ಎಂದು. ಹಾಗಲ್ಲ ರೈತ ತನ್ನ ಭೂಮಿಯನ್ನು ಎರಡು ಮೂರು ಭಾಗ ಮಾಡುತ್ತಾನೆ, ಅವನು ಬೆಳೆಯುತ್ತಾ ಇದ್ದಂತೆ 60 ಮಣ ಹತ್ತಿ ಆಗುತ್ತಾ ಇದ್ದ ಕಡೆ 5 ಮಣ ಕೂಡ ಆಗಲಿಲ್ಲ. ಆದ್ದರಿಂದ ಅವನು ಇದರಿಂದ ಪ್ರಯೋಜನವಿಲ್ಲ. ಬೇಕಾದರೆ challenge ಮಾಡುತ್ತೇನೆ ಎಂದು ಹೇಳಲು ಪ್ರಾರಂಭಮಾಡಿದ. 1 ಲಕ್ಷ 40 ಸಾವಿರ ಮಣ ಹತ್ತಿ ಕಡಿಮೆಯಾಗಿರಬೇಕಾದರೆ ಕಾರಣವೇನು ; ಏನು ದೋಷ ಇದೆ ಎಂದು ಕೇಳುವುದು ನಿಮ್ಮ ಜವಾಬ್ದಾರಿ ಅಲ್ಲವೆ ? ಇದೇ ತರಹ ಅರಸೀಕೆರೆಯಲ್ಲಿ ಕೋಕೋನಟ್ ರಿಸರ್ಚ್ ಸ್ಟೇಷನ್ ಅಂತ ಪ್ರಾರಂಭ ಮಾಡಿದರು. ರಿಸರ್ಚ್ ಚೆನ್ನಾಗಿದೆ. ಹೀಗೆ ಹೀಗೆ ಮಾಡಬೇಕು, ಇಂತಿಂಥ ಬೀಜ ಆರಿಸಬೇಕು ಎಂದು ಹೇಳುತ್ತಾರೆ. ಈ ತರಹ ಕೆಲಸ ನಡೆಯುತ್ತಿದೆ ನೂರಾರು ಮೈಲಿ ಹೋಗಿ ಮರಗಳಿಗೆ ಗುರುತು ಹಾಕಿ ಬರುತ್ತಾರೆ. ಬೀಜದ ಕಾಲದಲ್ಲಿ ಮಾತ್ರ ಆಳುಗಳು ಹೋಗಿ ರಾತ್ರಿ ಹೊತ್ತು

(ಶ್ರೀ ಪಿ. ಬಿ. ಬೊಮ್ಮಣ್ಣ) —

ಕಾಯಿ ಕುಯ್ದುಕೊಂಡು ಬರಬೇಕು. ಆ ರೀತಿ ಮಾಡಿದರೆ ಮಾತ್ರ ಬೀಜ ಬದುಕುತ್ತದೆ ಇಲ್ಲದೇ ಇದ್ದರೆ ಬದುಕುವುದಿಲ್ಲ. ಮೊನ್ನೆ ಮಿನಿಸ್ಟರು ಬಂದಾಗ ಈ ವಿಷಯ ಅವರ ಗಮನಕ್ಕೆ ತಂದೆ. 17,000 ಕಾಯಿಗಳನ್ನು ಹಾಕಿದ್ದರು ಅದರಲ್ಲಿ ಎಲ್ಲರಿಗೂ ಗೊತ್ತಿದೆ 200 ಕಾಯಿಗಳಿಗೆ ಮೊಳಕೆ ಬಂದಿದೆ. ತೆಂಗಿನಕಾಯಿ ಮೊಳಕೆ ಬರಬೇಕಾದರೆ ಆರು ತಿಂಗಳು ಬೇಕು. ಕೇಳಿದರೆ ಸಮಾಧಾನ ಹೇಳುವುದು ಈ ಸಾರಿ ನೀರು ಇಲ್ಲದೇ ಹಾಗಾಯಿತು ಎಂದು ಹೇಳುತ್ತಾರೆ. ನಮ್ಮ ಅನುಭವದಲ್ಲಿರುವುದು ಅಟ್ಟದಮೇಲೆ ಕಟ್ಟಿ ಮೇಲೆ ನಾತು ಬಿಟ್ಟಿದ್ದರೆ ಮಳೆಗಾಲದಲ್ಲಿ ನೀರು ಬಂದು ಅಷ್ಟರಿಂದಲೇ ಮೊಳಕೆ ಬರುತ್ತದೆ. ಎಂದಮೇಲೆ ನೀರಿಲ್ಲ ಎಂದರೆ ಒಪ್ಪಿಕೊಳ್ಳುತ್ತೀರಾ; ಇಷ್ಟುಮಟ್ಟಿಗೆ ಮಾಡುತ್ತಾ ಇದ್ದಾರೆ ಎಂಬುದನ್ನು ನೀವೇ ತಿಳಿದುಕೊಳ್ಳಿ, ಏನು ಮಾಡಬೇಕೆಂದರೆ ಪೂತನಿ, ಕೃಷ್ಣನ ಕಥೆ ಜ್ಞಾಪಕಕ್ಕೆ ಬರುತ್ತದೆ. ಕೃಷ್ಣ ದೈವಪುರುಷ, ಆಕೆ ತಾಯಿ ವೇಷ ಹಾಕಿಕೊಂಡು ಎದೆ ಹಾಲು ಕೊಡುತ್ತೇನೆ ಎಂದು ಕೃಷ ನನ್ನು ಅಪ್ಪಿಕೊಂಡರೂ ಕೂಡ ದೈವಾಂಶ ಪುರುಷನಾದ್ದರಿಂದ ಅವನಿಗೆ ಏನೂ ಆಗಲಿಲ್ಲ. ಆಕೆಯೇ ಸತ್ತು ಹೋದಳು, ಹಾಗೆ ಬಡವರು ರೈತರು ಕೃಷ್ಣ, ಪೂತನಿ ಆದ ಸರ್ಕಾರ ಕೊಟ್ಟ ತೆಂಗಿನ ಗಿಡವನ್ನು ಪರೀಕ್ಷೆ ಮಾಡಿಸಿ ಕೊಟ್ಟರೂ ಅದರಲ್ಲಿ ದೈವಾಂಶವಿರುವುದರಿಂದ ಅವರೇ ಗಿಡ ಬೆಳೆಸಿ ಕೊಳ್ಳುತ್ತಾರೆ. ಬೇಕಾದರೆ ನಿಮ್ಮ ಗಿಡಗಳನ್ನು ತೆಗೆದುಕೊಂಡುಬಂದು ನಿಮ್ಮ ಮನೆಯಲ್ಲಿ, ಬಂಗಲೆಯ ಮುಂದೆ ಹಾಕಿಕೊಳ್ಳಿ. ಸಿಟಿಗಳಲ್ಲಿ ಅಲಂಕಾರ ಮಾಡಿ ಅಥವಾ ಪಂಚಾಯಿತಿಗಳಿಗೆ ಕೊಡಿ ಖಂಡಿತ ಅವನ್ನು ರೈತರಿಗೆ ಕೊಡದಂತೆ ಏನಾದ್ದರೂಮಾಡಿ ತಪ್ಪಿಸಿ ಎಂದು ಈ ಸಂದರ್ಭ ದಲ್ಲಿ ಹೇಳುತ್ತೇನೆ.

ಅಗ್ರಿಕಲ್ಚರಲ್ ಎಜುಕೇಷನ್ ವಿಚಾರದಲ್ಲಿ 15 ಲಕ್ಷದ 16 ಸಾವಿರ ರೂಪಾಯಿ ಖರ್ಚು ಮಾಡು ತ್ತೀರಿ. ಬಹಳ ಒಳ್ಳೆಯದು, ಆದರೆ ವಿದ್ಯಾವಂತನಾಗಿ ಸ್ವತಃ ತಾನೇ ವ್ಯವಸಾಯ ಮಾಡಬೇಕೆನ್ನ ತಕ್ಕ ಹುಮ್ಮಸ್ಸು ಬರುವ ಹಾಗೆ ಆ ಎಜುಕೇಷನ್ ಇಲ್ಲ. ಯಾವನು ಬಂದರೂ ಸಹ ಫೀಲ್ಡ್‌ಮನ್ ಕೆಲಸ ಕೊಡಿ, ಇನ್ಸ್‌ಪೆಕ್ಟರ್ ಕೆಲಸ ಕೊಡಿ, ಸರ್ಕಾರಿ ಕೆಲಸ ಮಾಡುತ್ತೇನೆ ಎನ್ನುತ್ತಾನೆಯೇ ಹೊರತು ಸ್ವತಃ ವ್ಯವಸಾಯ ಮಾಡುವುದರ ಕಡೆಗೆ ಗಮನ ಕೊಡುವುದಿಲ್ಲ. ವಿದ್ಯಾವಂತರು ಸ್ವತಃ ವ್ಯವಸಾಯ ಮಾಡುವುದಕ್ಕೆ ಗಮನ ಕೊಡುವಂತೆ ಮಾಡಲು ಸರ್ಕಾರ ಪ್ರೋತ್ಸಾಹಿಸಬೇಕು.

ಅನಿಮಲ್ ಹಸ್ಬೆಂಡರಿ, ರೂರಲ್ ಡೆವಲಪ್‌ಮೆಂಟ್, ಕೋ-ಆಪರೇಷನ್ ಇದೆಲ್ಲಾ ನೋಡಿದರೆ ನಿಜವಾಗಿಯೂ ನಿಮಗೆ ದೇಶದಮೇಲೆ ಪ್ರೇಮ ಇದೆ ಎಂದು ಕಾಣುತ್ತದೆ. ನೀವು ಬಹಳ ಬೇಗ ದೇಶ ವನ್ನು ಮುಂದುವರಿಯುವಂತೆ ಮಾಡಲು ಸ್ಕೀಂಗಳನ್ನು ಹಾಕಿದ್ದೀರಿ. ಅದರಲ್ಲಿ ಲೋಪ ದೋಷ ಇಲ್ಲ. ಆದರೆ ಏಕೆ ಸರಿಯಾಗಿ ನಡೆಯುತ್ತಿಲ್ಲ ಎಂದರೆ ನನಗೆ ಅಮೇರಿಕದ ಇತಿಹಾಸ ಜ್ಞಾಪಕಕ್ಕೆ ಬರುತ್ತದೆ. ಅಮೆರಿಕಾ ದೇಶ ಕಂಡು ಹಿಡಿದ ಮೇಲೆ ಜನರು ಅಲ್ಲಿಗೆ ಹೋಗಿ ಸೇರಿಕೊಂಡರು, ಪ್ರಕೃತಿ ಸಂಪತ್ತು ಚೆನ್ನಾಗಿದೆ ಎಂದು ಅನೇಕ ಸ್ಕೀಂಗಳನ್ನು ಹಾಕಿದರು. ಅದೇ ರೀತಿ ನಾವು ಮಾಡಬೇಕೆಂದರೆ ಪ್ರಕೃತಿ ಸಂಪತ್ತು ನಮಗೆ ಅಷ್ಟು ಇಲ್ಲ. ಆದ್ದರಿಂದ ಒಂದೊಂದು ಸ್ಕೀಂಮನ್ನು ಹಾಕಿ ಪೂರ್ತಿಮಾಡಿ ಇಲ್ಲದೇ ಇದ್ದರೆ ಇಂಡಸ್ಟ್ರಿಯಲ್ ಸ್ಕೀಂ ಹಾಕುವುದಕ್ಕೆ ಅವಶ್ಯವಿದ್ದರೆ ಅಮೆರಿಕಾಕ್ಕೆ ಹೋಗಿ ಬದುಕುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಾದಾಮಿ—ಲ ನಿಮ್ನ ಪಂಗಡ).—ಮಾನ್ಯ ಸಭಾಪತಿಗಳೆ, ಈ ದಿವಸ ನಾನು ಸಭೆಯ ಮುಂದಿರತಕ್ಕ ವ್ಯವಸಾಯ ರೂರಲ್ ಡೆವಲಪ್‌ಮೆಂಟ್ ಮತ್ತು ಫಾರೆಸ್ಟ್ ಈ ಬಾಬುಗಳ ಮೇಲೆ ಮಾತನಾಡಬೇಕೆಂದು ಇಚ್ಛೆ ಪಟ್ಟಿದ್ದೇನೆ.

ಈಗ ಮೊದಲನೇಯದಾಗಿ ಈ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯನ್ನು ವಿಚಾರ ಮಾಡುವು ದಾದರೆ—ಬಹಳ ಮಟ್ಟಿಗೆ ಈ ಇಲಾಖೆಯಲ್ಲಿ ಯಾವ ಕೆಲಸ ಕಾರ್ಯಗಳೂ ಯಾವ ಒಂದು ವ್ಯವ ಸ್ಥಿತ ರೀತಿಯಲ್ಲೂ ನಡೆಯುತ್ತಿಲ್ಲವೆಂದು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಪಶುಸಂಗೋಪನ ಮಾಡಬೇಕೆಂದು ಮಿಶ್ರತಳಿಯ ಒಂದು ನೂರು ಜರ್ಸಿ ಗೂಳಿಗಳನ್ನು ಅಮೇರಿಕಾದಿಂದ ತರಿಸ ಲಾಯಿತು. ಈ ಒಂದೊಂದು ರಾಸನ್ನು ತರಿಸಲಿಕ್ಕೆ ಸುಮಾರು ಹನ್ನೆರಡು ಸಾವಿರ ರೂ. ಗಳ ಖರ್ಚು ಬಂದಿದೆ. ಈಗ ಈ ರಾಸುಗಳಿಗೆ ರೆಂಡರ್ ಪೆಸ್ಟ್ ಡಿಸೀಜ್ ಬಂದಿದೆ. ಈ ರೋಗವನ್ನು ಹೇಗೆ ತಡಗಟ್ಟಬೇಕು, ಏನು ಕಾರ್ಯಕ್ರಮ ಕೈಗೊಳ್ಳಬೇಕು ಎನ್ನುವುದೊಂದನ್ನು ವಿಚಾರ ಮಾಡದೆ ಆ ಜರ್ಸಿ ದನಗಳ ಖಾಯಿಲೆಗೆ ಸರಿಯಾದ ಮದ್ದು ಕೊಡದೆ ಈಗಾಗಲೇ ಒಂಬತ್ತು-ಹತ್ತು ದನಗಳು ಸತ್ತುಹೋಗಿವೆ. ಇದು ಈ ದಿವಸ ರಾಜ್ಯ ಸರ್ಕಾರ ಒಂದು ಸೀರಿಯಸ್ ರೀತಿಯಲ್ಲಿ ವಿಚಾರ ಮಾಡ ತಕ್ಕದ್ದಾಗಿದೆ. ಇದರ ಬಗ್ಗೆ ಸರ್ಕಾರದವರು ತಕ್ಕ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಈಗ ಇನ್ನು ಆ ಖಾಯಿಲೆಯಿಂದ ಇಪ್ಪತ್ತು-ಮೂವತ್ತು ದನಗಳು ನರಳುತ್ತಿವೆ. ಅವು ಸಾಯುವ ಸ್ಥಿತಿಯಲ್ಲಿರುತ್ತವೆ. ಆದರೆ ಈ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೆಂದು ಆ ಡೈರೆಕ್ಟರರು ತಕ್ಕಕ್ರಮ

ಕೈಗೊಂಡಿಲ್ಲ. ಈ ದನಗಳ ಕಾಯಿಲೆ ನಿವಾರಣೆ ಬಗ್ಗೆ ಮೊದಲು ಏನೇನು ಕ್ರಮಕೈಗೊಳ್ಳಬೇಕೋ ಅವನ್ನು ಕೂಡಲೆ ಕೈಗೊಳ್ಳುವಂತೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸು ಬಗ್ಗೆ 1959ರಲ್ಲಿ ಸರ್ಕಾರದವರು ಒಂದು ಗೌರ್ನಮೆಂಟ್ ಆರ್ಡರನ್ನು ಹೊರಡಿಸಿದರು. ಆಗ ಅದನ್ನು ನೌಕರರುಗೆಲ್ಲ ಅಪ್ಲೈ ಮಾಡುತ್ತೇವೆಂತ ಹೇಳಿದರು. ಆದರೆ ಇಲ್ಲಿಯವರೆಗೂ ಅದನ್ನು ಅಪ್ಲೈ ಮಾಡಿರುವುದಿಲ್ಲ. ಹೀಗಾಗಿ ಈ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯಲ್ಲೂ ಇತರ ಕಡೆಗಳಲ್ಲೂ ಸೀನಿಯಾರ್ಟಿ ವಿಚಾರದಲ್ಲಿ ಬಹಳ ಧಕ್ಕೆ ಬಂದಿದೆ. ಈ ವಿಚಾರದಲ್ಲಿ ಅಸಮಾಧಾನಗೊಂಡ ಕೆಲವರು ಹೈಕೋರ್ಟಿಗೆ ರಿಟ್ ಹೋದದ್ದೂ ಉಂಟು. ಇಂಥಾ ಅಸಮಾಧಾನ ಈ ದಿವಸ ಅನೇಕ ಇಲಾಖೆಗಳಲ್ಲಿ ಉಂಟಾಗಿದೆ. ಆದ್ದರಿಂದ ಇದರ ಅಗತ್ಯತೆಯನ್ನು ಸರ್ಕಾರದವರು ನೋಡಿಕೊಳ್ಳಬೇಕೆಂದು ಸೂಚನೆ ಮಾಡುತ್ತಿದ್ದೇನೆ. ಈ ಸೀನಿಯಾರಿಟಿ ವಿಚಾರದಲ್ಲಿ ಇತ್ತೀಚೆಗೆ ಬಹಳ ಅನ್ಯಾಯವಾಗುತ್ತಿದೆ ಅಂತ ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಅದು ಇಲ್ಲಿ ಚರ್ಚೆಗೆ ಬಂದಿದ್ದಾಗ 1959ನೇ ಆಜ್ಞೆಯನ್ನೇ ನಾವು ಫಾಲೋ ಮಾಡುತ್ತಿದ್ದೇವೆ ಅಂತ ಮಾನ್ಯ ರೆವಿನ್ಯೂ ಮಂತ್ರಿಗಳು ಆ ದಿವಸ ಉತ್ತರ ಕೊಟ್ಟಿದ್ದಾರೆ. ಆದರೆ ಆ ವಿಷಯಕ್ಕೆ ಅವರು ಮನಸ್ಸನ್ನು ಕೊಟ್ಟಹಾಗೇ ಕಾಣುತ್ತಿಲ್ಲ. ಇಲ್ಲಿಯವರೆಗೂ ಅದನ್ನು ಇಂಪ್ಲಿಮೆಂಟೇ ಮಾಡಿಲ್ಲ.

ಇನ್ನು ಈ ಕುರಿಸಂಗೋಪನ ಕಾರ್ಯಕ್ಕಾಗಿ ಬೆಳಗಾವ, ಧಾರವಾಡ, ಚಿತ್ರದುರ್ಗ ಇತ್ಯಾದಿ ಕಡೆಗಳಲೆಲ್ಲ ಈ ಕುರಿಗಳ ಅಭಿವೃದ್ಧಿಗಾಗಿ ಪ್ರತಿಯೊಂದು ಕಡೆಗೂ ಹತ್ತು ಸಾವಿರ ರೂ. ಗಳನ್ನು ಖರ್ಚುಮಾಡಿ ಅಲ್ಲಲ್ಲಿ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಆದರೆ ಆ ಕಟ್ಟಡಗಳಿರುವಲ್ಲಿ ಎಲ್ಲಿಯೂ ನೋಡಬೇಕೆಂದರೆ ಒಂದು ಕುರಿ ಸಹ ಸಿಗುತ್ತಿಲ್ಲ. ನಮ್ಮ ರಾಜ್ಯದಲ್ಲಿ ಉಣ್ಣೆಯ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂತ ಈ ಕುರಿಗಳನ್ನು ಇಡಿರಿ ಎಂದು ಇಂಡಿಯಾ ಸರ್ಕಾರದವರು ಹೇಳಿದರು. ಮೊದಲು ಮೊದಲು ಎಲ್ಲೋ ಅಲ್ಲೊಂದು-ಇಲ್ಲೊಂದು ಕಡೆ ಎರಡು-ಮೂರು ಟಗರುಗಳನ್ನು-ಕುರಿಗಳನ್ನು ಇಟ್ಟರು. ಆದರೆ ಅವುಗಳಿಗೆ ತಕ್ಕ ಆಹಾರ ಇತ್ಯಾದಿಗಳನ್ನು ಒದಗಿಸಲು ಸಾಧ್ಯವಾಗದೆ--ದಿವಸ ಆ ಕಟ್ಟಡಗಳಿರುವ ಕಡೆ ಯಾವ ಕುರಿಗಳೂ ಇರುವುದಿಲ್ಲ. ಸರ್ಕಾರದವರು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಕೂಡಲೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂತ ಹೇಳುತ್ತೇನೆ.

ಇನ್ನು ಈ ಅಗ್ರಿಕಲ್‌ಚರಲ್ ಬಾಬಿಗೆ ಸಂಬಂಧಿಸಿದ ಮಿನಿಮಂ ವೇಜಸ್ ಆಕ್ಟನ್ನು ಎಲ್ಲ ಕಡೆಗಳಲ್ಲೂ ಇಂಪ್ಲಿಮೆಂಟ್ ಮಾಡಬೇಕೆಂತ ಹೇಳಲಾಗಿದೆ. ಆದರೆ ಈ ಬಗ್ಗೆ ಸರಿಯಾಗಿ ಲೆಕ್ಕ ಇಡಲು ಬೇಕಾದ ಖಾತೆ-ಖರದಿ-ಇತ್ಯಾದಿ ಪುಸ್ತಕಗಳನ್ನು ಕೊಳ್ಳಬೇಕೆಂದರೆ ಅವು 36 ರೂ. ಗಳ ಬೆಲೆಯಾಗುತ್ತದೆ. ಆದರೆ ಜನರಿಗೆ ಈ ಲೆಕ್ಕ ಯಾವ ರೀತಿ ಇಡಬೇಕೆಂಬುದು ಸಹ ಗೊತ್ತಿಲ್ಲ. ಆದಾಗ್ಗೂ ಈ ಲೆಕ್ಕದಲ್ಲಿ ತಪ್ಪುಗಳಿದ್ದರೆ ಅಂಥ ಮನುಷ್ಯನಿಗೆ ಶಿಕ್ಷೆ-ದಂಡ ವಿಧಿಸಬೇಕೆಂದು ಕಾನೂನಿನಲ್ಲಿ ಹೇಳಿರುತ್ತದೆ. ಕೇಂದ್ರ ಸರ್ಕಾರದವರೇನೋ ಈ ಮಿನಿಮಂ ವೇಜಸ್ ಆಕ್ಟನ್ನು ಎಲ್ಲ ರಾಜ್ಯಗಳಲ್ಲೂ ಜಾರಿಗೆ ತರಬೇಕೆಂದು ಹೇಳಿದ್ದಾರೆ. ಆದರೆ ಬೊಂಬಾಯಿ ರಾಜ್ಯದಲ್ಲಿ ಈ ಶಾಸನವನ್ನು ಅವರು ಇನ್ನೂ ಜಾರಿಗೆ ತಂದಿಲ್ಲ. ರೈತರಿನ್ನೂ ನಮ್ಮಲ್ಲಿ ಶಿಕ್ಷಣ ಹೊಂದಬೇಕಾಗಿದೆ. ಬೊಂಬಾಯಿ ರಾಜ್ಯದಲ್ಲಿ ಈ ವಿಚಾರವನ್ನು ಅವರು ಮಾಡಲಿಲ್ಲಾ ಅಲ್ಲಿ ಇದನ್ನಿನ್ನು ಅವರು ಜಾರಿಗೆ ತಂದಿಲ್ಲ. ಅದೇ ರೀತಿ ಇಲ್ಲಿಯೂ ನಮ್ಮ ಸರ್ಕಾರ ಇದನ್ನು ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಸಮಾಜ ಕಲ್ಯಾಣ ಖಾತೆಯಲ್ಲಿ ಹೌಸಿಂಗ್ ಗ್ರಾಂಟನ್ನು ಕೊಡುತ್ತಿದ್ದರು 1959ರಲ್ಲಿ ಒಂದೊಂದು ಮನೆಗೂ 400 ರೂ. ಗಳ ಸಬ್‌ಸಿಡಿ ಕೊಡಲಾಗುತ್ತಿತ್ತು. ಆಗ 85 ಸಾವಿರ ಮನೆಗಳಿಗೆ ಪ್ರಾವಿಜನ್ ಮಾಡಲಾಗಿತ್ತು. ಆದರೆ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಹೌಸಿಂಗ್ ಯೋಜನೆಯನ್ನು ತೆಗೆದುಕೊಂಡು ಒಂದು ಲಕ್ಷ 38 ಸಾವಿರ ಚಿಲ್ಲರೆ ರೂ. ಗಳಲ್ಲಿ 42,500 ಮನೆಗಳನ್ನು ಒದಗಿಸಲಾಯಿತು. ಇತ್ತೀಚೆಗೆ ಸರ್ಕಾರದವರು 1959ರಲ್ಲಿ ಒಂದು ಆರ್ಡರನ್ನು ಮಾಡಿ ಆ ಬೊಂಬಾಯಿ ರಾಜ್ಯದಲ್ಲಿ ಹರಿಜನರಿಗಾಗಿ ಏನೊಂದು ಪೋಸ್ಟ್ ವಾರ್-ರಿ ಕನಸ್ಟ್ರಕ್ಷನ್ ಯೋಜನೆಯಂದು ಅವರು ಅಲ್ಲಿ ಕೈಗೊಂಡಿದ್ದರೋ-ಹಾಗೆ ಇಲ್ಲಿಯೂ ಮಾಡಬೇಕೆಂತ ಮಾಡಿದರು. ಆದರೆ ಅದು ಯಾವ ರೀತಿಯಲ್ಲೂ ಸಕ್‌ಸಸ್ ಆಗಲಿಲ್ಲ. ಈ ದಿವಸ ಜನರು ಹೌಸಿಂಗ್ ಸೈಟ್ ಸಹ ಸಿಗದೆ ನರಳಬೇಕಾಗಿದೆ. ಆದರೆ ಆ ಆರ್ಡರನ್ನು ಇಲ್ಲಿ ಅಪ್ರೂವ್ ಮಾಡಿದ್ದರೂ ಅದನ್ನು ಜಾರೀಲಿ ಅನ್ವಯಿಸುತ್ತಿಲ್ಲ ಎಂತ ಕಾಣುತ್ತಿದೆ. ಈ ದಿವಸ ಬೊಂಬಾಯಿ ರಾಜ್ಯದಲ್ಲಿ ಪೋಸ್ಟ್ ವಾರ್ ರಿ ಕನ್‌ಸ್ಟ್ರಕ್ಷನ್ ಸ್ಕೀಂ 219 ಪ್ರಕಾರ ಸೈಟುಗಳನ್ನು ಮಾಡಿ ಪ್ರತಿ ಸೈಟಿಗೂ ಮನೆ ಕಟ್ಟಲು 1,500 ರೂ. ಗಳಿಂದ 3 ಸಾವಿರ ರೂ. ಗಳ ಸಾಲವನ್ನು ಮಂಜೂರು ಮಾಡಿ, ಆ ಸಾಲವನ್ನು ಇಪ್ಪತ್ತು ವರ್ಷಗಳಲ್ಲಿ ಸುಲಭ ಕಂತುಗಳ ಮೂಲಕ ಮುಟ್ಟಿಸಬೇಕೆಂದು ಒಂದು ವ್ಯವಸ್ಥೆ ಮಾಡಲಾಗಿದೆ. ಈ ಸಾಲಕ್ಕೆ ಅವರು ಹೊಸದಾಗಿ ಕಟ್ಟತಕ್ಕ ಮನೆಯೇ ಸೆಕ್ಯೂರಿಟಿ ಆಗಿ ಇರುತ್ತದೆ. ಇಂಥ ಒಂದು ಏರ್ಪಾಡನ್ನು ಆ ಮುಂಬೈ ರಾಜ್ಯದಲ್ಲಿ ಮಾಡಿದ್ದುಂಟು. ಆದರೆ ಇಲ್ಲಿ ನಮ್ಮ ಹರಿಜನರಿಗೆ ಹತ್ತು-ಹನ್ನೆರಡು ವರ್ಷಗಳಿಂದ ಯಾವ ಸೌಕರ್ಯವೂ ಸಿಕ್ಕಲಿಲ್ಲ.

(ಶ್ರೀ ಜೆ. ಎಲ್. ಕಬಾಡಿ)

ಇನ್ನು ನಮ್ಮ ರಾಜ್ಯಾಂಗದ ಆರ್ಟಿಕಲ್ 16 (4) ರ ಪ್ರಕಾರ ಪ್ರಮೋಷನಲ್ ಕೇಡರಿನಲ್ಲಿ ವೇಕೆನ್ಸಿಯಿದ್ದರೆ ಹರಿಜನರಿಗೆ ಆ ವೇಕೆನ್ಸಿಗಳಲ್ಲಿ ಪ್ರಮೋಟ್ ಮಾಡಬೇಕೆಂದು ಈಗಾಗಲೆ ಸುಪ್ರೀಂ ಕೋರ್ಟಿನ ಆಜ್ಞೆಯಾಗಿದೆ. ಆಂಧ್ರ ರಾಜ್ಯದಲ್ಲಿ ಸರ್ಕಾರ ಈಗಾಗಲೇ ಈ ಕ್ರಮ ಕೈಗೊಂಡು ಹರಿಜನರಿಗೆ ಪ್ರಮೋಷನ್‌ಗಳನ್ನು ಕೊಡುತ್ತಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಕ್ರಮ ಕೈಗೊಳ್ಳಲು ಅಡ್ಡಿ ಏನಿದೆ ಎಂಬುದನ್ನು ಸರ್ಕಾರ ತಿಳಿಸಬೇಕು. ಸರ್ಕಾರ ಈ ವಿಚಾರದಲ್ಲಿ ಏನೂ ಕ್ರಮ ಕೈಗೊಂಡಿಲ್ಲ. ನಾನೇ ಈ ವಿಚಾರವನ್ನು ಪ್ರಶ್ನೋತ್ತರ ಕಾಲದಲ್ಲಿ ಒಂದು ಉಪ ಪ್ರಶ್ನೆ ಹಾಕಿದ್ದಾಗ ನಮ್ಮ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರಿಂದ ಏನೂ ಆಜ್ಞೆ ಬಂದಿಲ್ಲ ನಿರೀಕ್ಷಣೆ ಮಾಡುತ್ತಿದ್ದೇವೆ ಎಂತ ಉತ್ತರ ಹೇಳಿಬಿಟ್ಟರು. ಈ ಆಜ್ಞೆಯನ್ನು ಕೇಂದ್ರ ಸರ್ಕಾರದವರು ಕ್ಲಾಸ್ ಒಂದು ಮತ್ತು ಕ್ಲಾಸ್ ಎರಡನೆ ದರ್ಜೆ ಹುದ್ದೆಗಳಿಗೆ ಅನ್ವಯಿಸಬೇಕೆಂದು ರಾಜ್ಯ ಸರ್ಕಾರಗಳಿಗೆ ಒತ್ತಾಯ ಮಾಡುತ್ತಿದ್ದರೂ, ರಾಜ್ಯ ಸರ್ಕಾರದವರು ಈ ಬಗ್ಗೆ ಎಫಿಷಿಯನ್ಸಿ ಬಾರ್ ಇದೆ ಎಂತ ಹೇಳುತ್ತಿದ್ದಾರೆ. ಆದರೆ ಆ ಸುಪ್ರೀಂ ಕೋರ್ಟಿನ ತೀರ್ಪನ್ನು ಮೂರು ಮತ್ತು ನಾಲ್ಕನೇ ದರ್ಜೆ ನೌಕರಿಗಳಿಗೆ ಅನ್ವಯಿಸಬಹುದೆಂದು ಇಲ್ಲೀಗ ಹೇಳುತ್ತಿದ್ದಾರೆ. ಹೀಗೆ ಇತ್ತೀಚೆಗೆ ಇಲ್ಲಿ ಕೆಲವೊಂದು ವಿಚಾರಗಳು ನಡೆಯುತ್ತಿವೆ. ಈಗ ಈ ಕ್ಲಾಸ್ ಮೂರಕ್ಕೂ ಮತ್ತು ನಾಲ್ಕಕ್ಕೂ ಕೆಲವು ಕೇಡರುಗಳಲ್ಲಿ ಪೇ ವ್ಯತ್ಯಾಸವಿದೆ. ಅದನ್ನು ನಮ್ಮ ಸರ್ಕಾರದವರಿಗೆ ವಿಚಾರ ಮಾಡಿ ಆ ಕ್ಲಾಸ್ ಮೂರಕ್ಕೂ ಮತ್ತು ನಾಲ್ಕಕ್ಕೂ ಪೇನಲ್ಲಿರತಕ್ಕ ಡಿಫರೆನ್ಸನ್ನು ಸರಿಮಾಡಿದರೆ ಆಗ ಕ್ಲಾಸ್ ನಾಲ್ಕರಿಂದ ಕ್ಲಾಸ್ ಮೂರಕ್ಕೆ ಇವರಿಗೆ ಪ್ರಮೋಷನ್ ಕೊಡಬಹುದೆಂಬ ಒಂದು ವಿಚಾರ ನಡೆಯುತ್ತಿದೆ. ಆದರೆ ಸರ್ಕಾರದವರೇನು ಈಗ ಕ್ಲಾಸ್ ಮೂರರಿಂದ ಕ್ಲಾಸ್ ಎರಡಕ್ಕೂ ಮತ್ತು ಕ್ಲಾಸ್ ಒಂದಕ್ಕೂ ಪ್ರಮೋಷನ್ ಕೊಡಲು ಎಫಿಷಿಯನ್ಸಿ ಬಾರ್ ಇರುತ್ತೆಂದು ಹೇಳುತ್ತಿದ್ದಾರೋ ಅದು ಸರಿಯಾದ್ದಲ್ಲ. ಆ ಆಜ್ಞೆ ಎಲ್ಲ ಕ್ಲಾಸ್ ನೌಕರಿಗಳಿಗೂ ಅನ್ವಯಿಸುತ್ತದೆ. ಆದ್ದರಿಂದ ಈ ವಿಚಾರವನ್ನು ನಮ್ಮ ಸರ್ಕಾರ ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆ ಸೌಳು ಭೂಮಿ ಜಾಸ್ತಿ ಇರುತ್ತದೆ. ನಮ್ಮ ಬಿಜಾಪುರ ತಾಲ್ಲೂಕದಲ್ಲಿ ಹೊನ್ನವಾಡ ತಿಗಣಿ ಬಂದಿ ಇತ್ಯಾದಿ ಕೆಲವು ಗ್ರಾಮಗಳೂ ಮತ್ತು ಬಾದಾಮಿ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳೂ, ಬಾಗೇವಾಡಿ ತಾಲ್ಲೂಕಿನಲ್ಲಿ ಬಿದ್ರಿ ಇತ್ಯಾದಿ ಕೆಲವು ಗ್ರಾಮಗಳು ನೀಲಗುಂದ ಇಂಡಿ ತಾಲ್ಲೂಕಿನಲ್ಲಿ ಅಂಜುಟಗಿ ಇತ್ಯಾದಿ ಗ್ರಾಮಗಳಲ್ಲಿ ಈ ಸೌಳು ಭೂಮಿ ಬಹಳ ಹೆಚ್ಚಾಗುತ್ತಿದೆ. ಈ ಬಗ್ಗೆ ಸರ್ಕಾರದವರು ಕೂಡಲೇ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಆ ಹೊನವಾಡ ಇತ್ಯಾದಿ ಗ್ರಾಮಗಳ ಕಡೆ ಇರತಕ್ಕ ಜನರು ಈ ಸೌಳು ಭೂಮಿಯನ್ನು ನಿವಾರಿಸಬೇಕಾದರೆ ಈ ಭೂಮಿಯ ಮೇಲೆ ಹೆಚ್ಚು ನೀರು ನಿಲ್ಲದಂತೆ ಮಾಡಬೇಕಾದರೆ ಎತ್ತರವಾಗಿ ಬಿಜಾಪುರ-ಮಿರಜ್ ರೋಡ್ ಮೇಲೆ ಪೂಲ (ಬ್ರಿಡ್ಜ್) ನ್ನು ಕಟ್ಟಿದರೆ ಸವಳು ಎಲ್ಲಿ ಹರಿದು ಹೋಗುತ್ತದೆ. ಈಗ ಬಂದ ನೀರನ್ನು ತಡೆಗಟ್ಟಿ ನಿಲ್ಲುವಂತಾದ್ದರಿಂದ ಹಿಂದಿನ ಭೂಮಿ ಸವಳು ಆಗುತ್ತ ನಡೆದಿದೆ. ಇದನ್ನು ಹೀಗೆ ಎತ್ತರವಾದ ಪಾಲನ್ನು ಕಟ್ಟಿಸಿದರೇನೆ ಕಡಮೆಯಾಗುತ್ತದೆ ಅಂತ ಹೇಳುತ್ತಿದ್ದಾರೆ. ಇದು ಅಲ್ಲದೆ ಸರ್ಕಾರದವರು ಇದಕ್ಕೆ ಸಹಾಯಕವಾಗುವಂತೆ ಬುಲ್‌ಡೋಜರ್ಸ್ ಹಾಗೂ ಟ್ರ್ಯಾಕ್ಟರುಗಳನ್ನು ಅಲ್ಲಿಗೆ ಒದಗಿಸಿ ರಿಕ್ಲಮೇಷನ್ ಕೆಲಸ ಕೈಗೊಂಡರೆ ಒಳ್ಳೆಯದಾಗುತ್ತದೆ. ಈ ಕಾರ್ಯವನ್ನು ಸರ್ಕಾರದವರು ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಅತ್ತ ಕಡೆ ಈ ಕೋರಿ ಹುಳ ಮತ್ತು ಮಿಡತೆಗಳ ಕಾಟ ಜಾಸ್ತಿಯಾಗಿದೆ. ಅವುಗಳಿಗೆ ಆ ಹುಡಿ ಔಷಧಿ ಹೊಡೆಯುವ ಏರ್ಪಾಡನ್ನು ಮಾಡಬೇಕಾಗಿದೆ. ಈ ರೀತಿ ಹುಡಿ ಔಷಧ ಹೊಡೆಯತಕ್ಕ ಕಾರ್ಯವನ್ನು ಒಂದು ಲಕ್ಷ ಎಕರೆಗಳಿಗೆ ಒದಗಿಸಲಾಗಿದೆ ಎಂಬುದನ್ನು ಮೊನ್ನೆ ಹೇಳಿದ ಭಾಷಣದಲ್ಲಿ ಕೇಳಿದ್ದೇನೆ. ಜಿಲ್ಲೆಗಳಲ್ಲಿ ಈ ಕಾರ್ಯವನ್ನು ಜಾಗ್ರತೆ ಸಾಧಿಸಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

1-30 P. M.

ಸಮಾಜ ಕಲ್ಯಾಣ ಇಲಾಖೆಗೆ 1960-61 ರಲ್ಲಿ 40 ಲಕ್ಷ ಮತ್ತು 1961—62 ರಲ್ಲಿ 50 ಲಕ್ಷ ಹಣವನ್ನು ಕೊಟ್ಟಿದ್ದಾರೆ. ಆದರೆ ಇದರ ಉಪಯೋಗ ಎಷ್ಟರ ಮಟ್ಟಿಗೆ ಆಗಿದೆ ಎಂದು ಕೇಳಬೇಕಾಗಿದೆ. Agriculture scheme ಸಲುವಾಗಿ ನೋಡಿದರೆ 37 ಸ್ಥಳಗಳಲ್ಲಿ ಹೊಸ ಮ್ಯೆನೂರಿನಲ್ಲಿ ಕೊಟ್ಟಿದ್ದರೆ, 75 ಸ್ಥಳಗಳಲ್ಲಿ ಹಳೆಯ ಮ್ಯೆನೂರಿನಲ್ಲಿ ಕೊಟ್ಟಿದೆ. ಇದರಿಂದ ಎಷ್ಟು ಅನ್ಯಾಯ

ವಾಗುತ್ತದೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ನೋಡಬೇಕಾಗುತ್ತದೆ. ನಾನು ಒಂದು ಸಲ State Level Advisory Committee ಯಲ್ಲಿ ಮಂತ್ರಿಗಳಿಗೆ ವಿನಂತಿ ಮಾಡಿಕೊಂಡಿದ್ದೇನೆ. ಜನಸಂಖ್ಯೆಯ ಆಧಾರದ ಮೇಲೆ ಹಣ ಹಂಚಿದರೆ ನಮ್ಮ ತಕರಾರಿಲ್ಲ. ಯಾವ ಪ್ರಭಾವಕ್ಕೂ ಒಳಗಾಗದೆ ಜನಸಂಖ್ಯೆಯ ಆಧಾರದ ಮೇಲೆ ಎಲ್ಲ ಕಡೆಗೂ ಹಣ ಹಂಚಬೇಕು. ಪ್ರಭಾವಕ್ಕೆ ಒಳಗಾಗಿ ಹಣವನ್ನು ಹಂಚುವುದಾದರೆ ಸಮತೋಲನ ದೃಷ್ಟಿಯಿಂದ ನೋಡಿದ ಹಾಗೆ ಆಗುವುದಿಲ್ಲ, ಆ ದೃಷ್ಟಿಯಿಂದ..............

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು).—ಸ್ವಾಮಿ, ಇದರಲ್ಲಿ rural development ಎಂದು ಇದೆ, Social Welfare Deprtment Miscelaneous ನಲ್ಲಿ ಬರುತ್ತದೆ. ಈ ವಿಚಾರಗಳನ್ನು Social Welfare Department ಬೇಡಿಕೆ ಬಂದಾಗ ಮಾತನಾಡಬಹುದು. ಈಗ ಸಭೆಯ ಮುಂದಿರುವ ಬೇಡಿಕೆಗಳ ವಿಚಾರ ಮಾತನಾಡಿದರೆ ಉತ್ತಮವೆಂದು ಹೇಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.—ಗ್ರಾಮೀಣ ಅಭಿವೃದ್ಧಿಗಳಿಗಾಗಿ ಹೇಳಬೇಕಾದ್ದು ಹೇಳಿದೆ, ತಿಳಿಯಿರಿ. ಸ್ವಾಮಿ, ಅರಣ್ಯಗಳ ವಿಷಯದಲ್ಲಿ ಕೆಲವೊಂದು ಸೂಚನೆ ಮಾಡಲಿಕ್ಕೆ ಇಚ್ಛಿಸುತ್ತೇನೆ. ಈಗ ಅಲ್ಲಲ್ಲಿ ಹವಾಮಾನವನ್ನನುಸರಿಸಿ ಯಾವ ಯಾವ ಗಿಡಗಳನ್ನು ನಡೆಸಬೇಕೋ ಆ ರೀತಿ ಮಾಡುತ್ತಿಲ್ಲ. ಬೆಳಗಾಂವ ಜಿಲ್ಲೆಯಲ್ಲಿ Cashewnut ಬೆಳೆಸುತ್ತೇವೆಂದರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿಯ ಹವೆ ಆ ಬೆಳೆಗೆ ಒಗ್ಗುವುದಿಲ್ಲ. ಈ ರೀತಿ ಬೆಳೆಸಿದರೆ ಗಿಡಗಳು ನಷ್ಟವಾಗಿ ಹೋಗುವುದು. Rules and Regulations ಎಲ್ಲ ಕಡೆಗೂ ಜಾರಿ ಮಾಡಿದರೂ ಸಹಿತ ಒಂದು system of work ಅರಣ್ಯ ಇಲಾಖೆಯಲ್ಲಿಲ್ಲ.

ಅರಣ್ಯ ಇಲಾಖೆಯ ಸಂಬಂಧದಲ್ಲಿ Seniority list ಕೇಂದ್ರ ಸರ್ಕಾರದಿಂದ ಬಂದಿದ್ದರೂ ಕೂಡ ಅದನ್ನು ಹಿಂದಕ್ಕೆ refer ಮಾಡುವಂಥ ಯೋಚನೆ ಏಕೆ ಬಂದಿದೆ, ಏನು ತಕರಾರು ಬಂತು ? ಇದಕ್ಕೆ ಅರಣ್ಯ ಖಾತೆಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Fire fiighters ವಿಚಾರ ಹೇಳುವುದಾದರೆ ಅರಣ್ಯದಲ್ಲಿ ಅನಾಹುತಗಳು ಆಗುವ ಸಂಭವವಿರುವುದರಿಂದ fire fighters ಬೇಕು. ಸೆನವಾಳ, ಕಿಬ್ಬಳ್ಳಿ, ಭಾಗಕ್ಕೆ fire fighters ಬೇಕು. ವರ್ಷಕ್ಕೆ ಎರಡು ಸಲ ಟೆಂಡರ್ ಮಾರಾಟ ಮಾಡುತ್ತಾರೆ. ಅದರ ಜೊತೆಯಲ್ಲಿ ಇತರ ಮರಗಳನ್ನು ಹರಾಜು ಮಾಡುವ ಪದ್ಧತಿ ಹಳೇ ಮೈಸೂರಿನಲ್ಲಿದೆ. ಮುಂಬೈ ಕರ್ಣಾಟಕದಲ್ಲಿದ್ದಂಥ ಪದ್ಧತಿ ಏನಿದೆ ಆ ಪ್ರಕಾರ ಮಾಡಿದರೆ ಹೆಚ್ಚಿನ ಫಾಯಿದೆ ನಮ್ಮ ಸರ್ಕಾರಕ್ಕೆ ಆದೀತು ಎಂದು ಸೂಚನೆ ಮಾಡುತ್ತಿದ್ದೇನೆ.

Afforestation scheme ಏನಿದೆ ಅದನ್ನು ಬಯಲು ಸೀಮೆಯಲ್ಲಿ ಕಾರ್ಯಕ್ರಮ ಹಾಕಿಕೊಂಡು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಂಡಿ ತಾಲ್ಲೂಕಿನಲ್ಲಿ afforestation scheme ಹೆಚ್ಚು ಹೆಚ್ಚಾಗಿ ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ವ್ಯವಸಾಯ ಇಲಾಖೆಯಲ್ಲಿ 126 ಜಾಗಗಳನ್ನು ಖಾಲಿ ಇಟ್ಟಿದ್ದರು. ಅದರೊಳಗೆ own pay scalegrade ಮೇಲೆ ಕೆಲವೊಂದು ಜನರನ್ನು ನೇಮಕ ಮಾಡಿದ್ದು ಕೆಲವೊಂದು ಜನರನ್ನು, ಸೀನಿಯಾರಿಟಿ ಮೇಲೆ ಅಲ್ಲ, ತಮಗೆ ಯಾರು ಬೇಕೋ ಅವರನ್ನು ನೇಮಿಸಿರುವುದರಿಂದ ಆ ಇಲಾಖೆಯಲ್ಲಿ ಅಸಂತುಷ್ಟಿ ವಾತಾವರಣ ಉದ್ಭವವಾಗಿದೆ, ಅಗ್ರಿಕಲ್ಚರಲ್ ಖಾತೆಯಿಂದ ಹೆಚ್ಚು ಅನುಕೂಲ ಸಲ್ಲುವ ದೃಷ್ಟಿಯಿಂದ ಇದರ ಅಭಿವೃದ್ಧಿ ಆಗಬೇಕೆಂದು ತಿಳಿದುಕೊಂಡಿದ್ದೇನೆ. ಆದರೆ ಅಧಿಕಾರಿಗಳಲ್ಲಿ discriminatory treatment ನಿಂದ ಅಸಮಾಧಾನವುಂಟಾಗಿ ಅದರಿಂದ ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಡೆಯದೆ ರೈತರಿಗೆ ಬಹಳ ಲುಕ್ಸಾನಾಗುತ್ತಿದೆ. ಇದನ್ನು ಸರ್ಕಾರದವರು ತೀವ್ರವಾಗಿ ಗಮನಿಸಿ ಒಂದು ತಿಂಗಳ ಕಾಲದಲ್ಲಿ ಇತ್ಯರ್ಥ ಮಾಡಿದರೆ ಅನುಕೂಲವಾದೀತು. ಇದಕ್ಕೆ ಮಾನ್ಯ ಮಂತ್ರಿಗಳು ಲಕ್ಷ್ಯ ಕೊಡಬೇಕೆಂದು ವಿನಂತಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri N. O. SAMAJI (Belgaum II).

[Spoke in Marathi]

† ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಮಾನ್ಯ ಅಧ್ಯಕ್ಷರೇ, ವ್ಯವಸಾಯ ಗ್ರಾಮಾಭಿವೃದ್ಧಿ ಬೇಡಿಕೆಗಳಿಗೆ ಬೆಂಬಲ ಕೊಡುತ್ತಾ ಸಹಕಾರ ಸಂಘಗಳ ಬಗ್ಗೆ ಕೆಲವು ಸೂಚನೆ ಮಾಡಲು ಬಯಸುತ್ತೇನೆ. 1904 ನೇ ಇಸವಿಯಲ್ಲಿ ಸಹಕಾರ ಸಂಘಗಳ ಕಾನೂನು ಜಾರಿಗೆ ಬಂದ ಮೇಲೆ ನಮ್ಮ ಗದಗ ತಾಲ್ಲೂಕಿನಲ್ಲಿ ಮೊಟ್ಟ ಮೊದಲನೇ ಸಹಕಾರ ಸಂಘ ಸ್ಥಾಪನೆಯಾಯಿತು. ಅಂದಿನಿಂದ ಇಂದಿನವರೆಗೆ ಸಹಕಾರ ಚಳವಳಿ ಅಭಿವೃದ್ಧಿ ಹೊಂದಿದೆ. ಈ ಸಹಕಾರ ಸಂಘಗಳಿಂದ ರೈತರಿಗೆ

(ಶ್ರೀ ಎ. ಎಸ್. ಪಾಟೀಲ್)

ಸಹಾಯವಾಗಿದೆ. 15,000 ಸಹಕಾರಿ ಸಂಘಗಳು ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಿವೆ. ಇದರಲ್ಲಿ 10,000 ಸಹಕಾರಿ ಸಂಘಗಳು ಒಕ್ಕಲತನ ಬಗ್ಗೆ ದುಡಿಯುತ್ತಿವೆ. ಒಕ್ಕಲತನ ಮಾಡುವದರಲ್ಲಿ ಒಕ್ಕಲಿಗನಿಗೆ ಅನೇಕ ತೊಂದರೆಗಳಿವೆ. ಹಿಂದಕ್ಕೆ ಸಾಲ ಪಡೆಯಲು ರೈತನು ಸಾಹುಕಾರರ ಕಡೆ ಹೋಗುವ ರೂಢಿಯಿದ್ದಿತು. ಸಾಲ ದೊರೆಯುವುದು ಕಷ್ಟವಾಗಿತ್ತು. ಅದರಲ್ಲಿಯೂ ಬರಗಾಲ ಪೀಡಿತ ಪ್ರದೇಶದಲ್ಲಿ ಸಾಲ ಸಿಕ್ಕದಂತಾಯಿತು. ಇತ್ತೀಚೆಗೆ ನೂರಕ್ಕೆ ನೂರರಷ್ಟು ವಸೂಲ್ಮಾಡಿದ ನಂತರ ಸಾಲ ಕೊಡಬೇಕೆಂಬ ತತ್ವ ಜಾರಿಗೆ ಬಂದು ಬರಗಾಲ ಪ್ರದೇಶದಲ್ಲಿ ಅವರಿಗೆ ಕೊಡುವುದಕ್ಕೆ ಶಕ್ತಿಯಿಲ್ಲದೆ ಸಾಲ ತೆಗೆದುಕೊಳ್ಳಲು ಸಾಧ್ಯವಿಲ್ಲದಾಗಿದೆ. ಆದ್ದರಿಂದ ನೂರಕ್ಕೆ ನೂರರಷ್ಟು ವಸೂಲ್ಮಾಡಬೇಕೆಂಬ ನಿಯಮವನ್ನು ಜನರಿಗೆ ಉಪಯೋಗವಾಗುವ ಹಾಗೆ ಮಾರ್ಪಾಟಪಡಿಸಬೇಕು. ಯಾಕೆಂದರೆ ಅನೇಕ ರೈತರಿಗೆ ಸಾಲ ಸಿಕ್ಕದಂತಾಗಿದೆ. ಸಹಕಾರ ಸಂಘಗಳು ಸಾಲ ಕೊಡದಂತಾಗಿದೆ.

2.00 P.M.

ಅದೂ ಅಲ್ಲದೆ ಈಗ ಸುಮಾರು ನಾಲ್ಕು ವರ್ಷಗಳಿಂದಲೂ ಕೂಡ ಅನೇಕ ತಾಲ್ಲೂಕುಗಳಲ್ಲಿ ಬರಗಾಲ ಇದೆ. ಆದ್ದರಿಂದ ಅಲ್ಲಿ ಬಾಕಿ ಬಹಳ ಉಳಿದಿದೆ. ಅನೇಕ ಕಡೆ ನೆರೆ ಹಾವಳಿಯ ದೆಸೆಯಿಂದ ಜನಗಳಿಗೆ ತುಂಬಾ ನಷ್ಟವುಂಟಾಗಿದೆ. ಅವರಿಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕು. ಆದ್ದರಿಂದ ಸಹಕಾರ ಶಾಖೆಯವರು ಆಕಡೆ ಹೆಚ್ಚು ಗಮನಕೊಡಬೇಕು. ವ್ಯವಸಾಯದ ವಿಚಾರದಲ್ಲಿ ರೂರಲ್ ಕ್ರೆಡಿಟ್ ಸರ್ವೆಯವರು ಅನೇಕ ಸೂಚನೆಗಳನ್ನಿಟ್ಟಿದ್ದಾರೆ. ಅದರಂತೆ ಅಗ್ರಿಕಲ್ಚರಲ್ ಕ್ರೆಡಿಟ್ ಸ್ಟೆಬಿಲೈಜೇಷನ್ ಫಂಡ್ ಎನ್ನುವಂಥಾ ಒಂದು ಫಂಡನ್ನು ಮಾಡಬೇಕು. ಬರಗಾಲ ಮತ್ತು ನೆರೆಹಾವಳಿಯ ತ್ರಾಸಿಗೆ ಒಳಪಡತಕ್ಕ ಜನಗಳಿಗೆ ಸಹಾಯ ಮಾಡುವುದಕ್ಕೋಸ್ಕರ ಒಂದು ರೀತಿಯ ಫಂಡ್ ಎಂದು ಅವರಿಗೋಸ್ಕರ ರಿಜರ್ವ್ ಬ್ಯಾಂಕಿನವರು 10 ಕೋಟಿ ರೂಪಾಯಿಗಳನ್ನು ಮೀಸಲಾಗಿಡುತ್ತಾರೆ. ಅದರಂತೆ ನಮ್ಮ ಸರ್ಕಾರದವರೂ ಸಹ ಅಗ್ರಿಕಲ್ಚರಲ್ ರಿಲೀಫ್ ಫಂಡ್ ಮಾಡುವುದು ಅವಶ್ಯ ಇದೆ. ಬರಗಾಲ ಮತ್ತು ನೆರೆಹಾವಳಿಯಿಂದ ಕಷ್ಟಕ್ಕೆ ಒಳಗಾಗಿರತಕ್ಕ ಜನಗಳಿಗೆ ಸಹಾಯ ಮಾಡುವುದಕ್ಕೋಸ್ಕರವಾಗಿ ಸರ್ಕಾರದವರು ಈಗ ನಾಲ್ಕೈದು ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಅದನ್ನು ಇನ್ನೂ ಹೆಚ್ಚು ಬೆಳೆಸಬೇಕು. ಬರಗಾಲ ಮತ್ತು ನೆರೆಹಾವಳಿಗೆ ತುತ್ತಾದ ರೈತರಿಗೆ ಸಹಾಯ ಕೊಡಲಿಕ್ಕೆ ಮತ್ತು ಸಾಲ ಕೊಡುವುದಕ್ಕೋಸ್ಕರವಾಗಿ ಚಾಲ್ತಿ ಸಾಲಗಳನ್ನು ಮಾಧ್ಯಮಿಕ ಸಾಲಗಳಾಗಿ ಪರಿವರ್ತಿಸುವುದಕ್ಕೆ ಅವಕಾಶವಿರಬೇಕು. ಈ ಬಗ್ಗೆ ಅನೇಕ ಸಾರಿ ನಾನು ಈ ಸಭೆಯಲ್ಲಿ ಹೇಳಿದ್ದೇನೆ. ಈ ಬಗ್ಗೆ ಸರ್ಕಾರದವರು ಸೂಚನೆ ಕೊಡುತ್ತಾರೆಂದು ನಾನು ಆಶೆ ಮಾಡುತ್ತೇನೆ.

ಇನ್ನು ಎರಡನೆಯದಾಗಿ ಬರಗಾಲ ಪ್ರದೇಶದಲ್ಲಿ ತಕಾವಿ ಸಾಲ ಕೊಡುವುದು ಹಾಗೆಯೇ ಉಳಿದಿದೆ. ಇದಕ್ಕೆ ಬೇರೆ ಯಾವುದಾದರೂ ಒಂದು ವ್ಯವಸ್ಥೆ ಮಾಡಬೇಕು.

[VICE CHAIRMAN (SRIMATHI BASAVA RAJESWARI) in the Chair.]

ನಮ್ಮ ಭಾಗದಲ್ಲಿ ಹತ್ತಿಬೆಳೆಗೆ ರೋಗ ತಗುಲಿ ಹತ್ತಿ ಬೆಳೆನಾಶವಾಗಿ ಜನಗಳು ಬರಗಾಲಕ್ಕೆ ಆಹುತಿಯಾಗಿದ್ದಾರೆ. ಧಾರವಾಡ ಜಿಲ್ಲೆ, ಬಿಜಾಪುರ ಜಿಲ್ಲೆ, ಚಿತ್ರದುರ್ಗ ಜಿಲ್ಲೆಯ ಅನೇಕ ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ಅಲ್ಲಿಯ ಜನಗಳ ಬವಣೆಯನ್ನು ಹೇಳತೀರದು. ಮುಂದಿನ ವರ್ಷದ ಮಟ್ಟಿಗೆ ಯಾವರೀತಿ ಬದುಕಿ ಬಾಳಬೇಕು ಎನ್ನುವುದು ಒಂದು ದೊಡ್ಡ ಪ್ರಶ್ನೆಯಾಗಿದೆ. ಆದ್ದರಿಂದ ಅವರಿಗೆ ಸಹಾಯಮಾಡುವ ಸಲುವಾಗಿ ಅಗ್ರಿಕಲ್ಚರಲ್ ಕ್ರೆಡಿಟ್ ಸ್ಟೆಬಿಲೈಜೇಷನ್ ಫಂಡ್ ಎಂದು ಮಾಡಬೇಕು. ರೈತರಿಗೆ ಬ್ಯಾಂಕುಗಳಲ್ಲಿ ಹಣಕಾಸಿನ ಸಾಲ ಇದ್ದರೆ ಅವುಗಳಿಗೆ ಸಣ್ಣ ಸಣ್ಣ ಕಂತುಗಳನ್ನು ಮಾಡಿಕೊಡಬೇಕು. ಹಾಗೆಯೇ ಅಲ್ಪಾವಧಿ ಸಾಲಕ್ಕೂ ಕೂಡ ಸಣ್ಣ ಸಣ್ಣ ಕಂತುಗಳನ್ನು ಮಾಡಿ ಅವರು ಸಾಲವನ್ನು ಸೇರಿಸುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಬಹಳ ಜರೂರಾಗಿ ಮಾಡಬೇಕು. ಮೀಡಿಯಮ್ ಟರ್ಮ್ ಸಾಲವನ್ನು ಕೊಡುವುದಕ್ಕೆ ಸಾಕಷ್ಟು ಮೊಬಲಗನ್ನು ಮೀಸಲಾಗಿಟ್ಟಿಲ್ಲ. ಮೀಡಿಯಮ್ ಟರ್ಮ್ ಸಾಲವನ್ನು ರೈತರಿಗೆ ಭೂಮಿಯನ್ನು ಸುಧಾರಣೆ ಮಾಡುವುದಕ್ಕೂ, ಒಡ್ಡುಗಳನ್ನು ಹಾಕುವುದಕ್ಕೂ ಪಂಪು ಸೆಟ್ಟುಗಳನ್ನು ಕೊಂಡುಕೊಳ್ಳುವುದಕ್ಕೂ ಸರಿಯಾಗಿ ಹಣವನ್ನು ಉಪಯೋಗಿಸಿಲ್ಲ. ಅಪಿಕ್ಸ್ ಬ್ಯಾಂಕಿನಲ್ಲಿ ಹೆಚ್ಚು ಹಣವನ್ನು ಸಾಲ ಕೊಡುವುದಕ್ಕೆ ಹಣವಿಲ್ಲ. ಆದ್ದರಿಂದ ಮೀಡಿಯಮ್ ಟರ್ಮ್ ಸಾಲವನ್ನು ಕೊಡುವುದಕ್ಕೆ ಹೆಚ್ಚು

ಹಣವನ್ನು ಒದಗಿಸಬೇಕು. ಲಾಂಗ್ ಟರ್ಮ್ ಸಾಲವನ್ನು ಕೊಡುವುದಕ್ಕೆ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಎಂದು ರಾಜ್ಯಕ್ಕೆ ಒಂದು ದೊಡ್ಡ ಬ್ಯಾಂಕ್ ಇದೆ. ಪ್ರಾಥಮಿಕ ಸಂಘಗಳು ಸುಮಾರು 120 ರಷ್ಟು ಪ್ರತಿ ಜಿಲ್ಲೆಗೂ ಸ್ಥಾಪಿತವಾಗಿವೆ. ಹಳೆಯ ಮೈಸೂರು ಬ್ಯಾಂಕಿನಲ್ಲಿ ದೀರ್ಘಾವಧಿ ಸಾಲವನ್ನು ಸಂರಕ್ಷಿಸುಪಡಿಯಲಿಕ್ಕೆ ಅನುಕೂಲವಾಗಿದೆ. ಸಮನ್ವಯ ಗೊಳಿಸಿದ ಹೊಸ ನಿಯಮ ವನ್ನು ಕೆಲವು ಬ್ಯಾಂಕುಗಳಿಗೆ ಇದುವರೆಗೂ ಕಳುಹಿಸಿ ಕೊಟ್ಟಿಲ್ಲ. ಅಲ್ಲಿ ಹೊಸ ನಿಯಮದ ಕೊರತೆ ಉಂಟಾಗಿದೆ ಹಳೆಯ ಮೈಸೂರಿಗೆ 10 ಲಕ್ಷರೂಪಾಯಿಗಳ ದೀರ್ಘಾವದಿಯ ಸಾಲವನ್ನು ಕೊಟ್ಟರೆ ಹೊಸ ಮೈಸೂರಿಗೆ 10 ಸಾವಿರ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಇದೆ. ಈ ವಿಚಾರದಲ್ಲಿ ಸರ್ಕಾರದವರು ಗಮನಕೊಟ್ಟು ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ. ಈಗ ಇಂಟಿಗ್ರೇಟೆಡ್ ಏರಿಯಾದ ಜನಗಳಿಗೆ ಧೀರ್ಘಾವಧಿ ಸಾಲ ಸಿಕ್ಕದೆ ಅವರು ಹಿಂದಿನ ಸಾಲವನ್ನು ತೀರಿಸುವುದಕ್ಕೆ ತೊಂದರೆಯಾಗಿದೆ. ಇದು ನಮಗೆ ಗೊತ್ತಿರುವ ಮಾತು. 5 ವರ್ಷಗಳಾದರೂ ಯಾವ ಸಾಲವೂ ರೈತರಿಗೆ ಸಿಕ್ಕದಂತಾಗಿದೆ. ಸೆಂಟ್ರಲ್ ಬ್ಯಾಂಕಿನಲ್ಲೂ ಹಣ ಸಿಕ್ಕುತ್ತಾ ಇಲ್ಲ. ಒಂದು ಕೋಟಿರೂಪಾಯಿಗಳ ಡಿಬೆಂಚರ್ ಮೊತ್ತವನ್ನು ಕೊಟ್ಟರೆ ಸಾಲ ಕೊಡುವುದಕ್ಕೆ ಅದು ಸರಿಹೋಗ ಬಹುದು. ಈಗ ದೀರ್ಘಾವಧಿ ಸಾಲದ ವ್ಯವಸ್ಥೆ ಸರಿಯಾಗಿಲ್ಲ. ಒಂದು ಕೋಟಿ ಡಿಬೆಂಚರ್ ಎರಡು ತಿಂಗಳಲ್ಲಿ ಮುಗಿಯುತ್ತದೆ. ಮತ್ತೊಮ್ಮೆ ಡಿಬೆಂಚರ್ ಷುರು ಮಾಡಿದರೆ ರಿಜರ್ವ್ ಬ್ಯಾಂಕಿನವರು 20 ಪರ್ಸೆಂಟ್ ಪೂರ್ವವಾಗಿ ಕೊಟ್ಟರೆ ಡಿಬೆಂಚರ್ ಕಾಂಟ್ರಿಬ್ಯೂಷನ್ ಬರುತ್ತದೆ. ಇಲ್ಲದೆ ಹೋದರೆ ದೀರ್ಘಾವಧಿಯ ಸಾಲದ ವ್ಯವಸ್ಥೆ ನಿಲ್ಲುವಂತಹ ಪ್ರಸಂಗ ಬರುತ್ತದೆ. 30 ಲಕ್ಷರೂಪಾಯಿ ಸ್ಯಾಂಕ್ಷನ್ ಆದಂತ ಸಾಲದ ಹಣವನ್ನು ಕೊಡದೆ ಅದು ಹಾಗೆಯೇ ಉಳಿದಿದೆ. ನಿಯಮಗಳು ಸಮನ್ವಯ ಆಗದೆ ಅವು ಹಾಗೆಯೇ ಉಳಿದಿವೆ. ಬೆಳಗಾಂವ, ಹೈದರಾಬಾದ್ ಭಾಗದ ಅನೇಕ ಸಹಕಾರ ಸಂಘಗಳು 50 ಸಾವಿರ ರೂಪಾಯಿಗಳ ವ್ಯವಹಾರವನ್ನು ಮಾಡಿದ್ದರೂ ಕೂಡ ಸಿಬ್ಬಂದಿ ಖರ್ಚು ಸಹ ಕೊಡಂತೆ ಅವುಗಳನ್ನು ಮುಚ್ಚುವಂತಾ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಅವರಿಗೆ ಯೋಗ್ಯವಾಗ ಸಾಲದ ಹಣ ಸಿಕ್ಕುವಂಥಾ ವ್ಯವಸ್ಥೆಯನ್ನು ಮಾಡಬೇಕು. ಡಿಬೆಂಚರ್ ಒಂದು ಕೋಟಿ ಕೊಡಬೇಕು. 60 ಲಕ್ಷರೂಪಾಯಿಗಳನ್ನು ಕೊಟ್ಟರೆ ಅವರಿಂದ ಏನೂ ಆಗುವುದಿಲ್ಲ. ಕಂಟಿನ್ಯೂಯಿಂಗ್ ಗ್ಯಾರೆಂಟಿ ಡಿಬೆಂಚರ್ ಫ್ಲೋಟ್ ಮಾಡುವುದು 5–6 ತಿಂಗಳು ಸಾಲವನ್ನು ಕೊಡದ ಪ್ರಸಂಗ ಬರುತ್ತದೆ. 10 ಕೋಟಿ, 5 ಕೋಟಿ ಗ್ಯಾರಂಟಿ ಕೊಡಬೇಕು. ತೀವ್ರವಾಗಿ ಹಣದ ವ್ಯವಸ್ಥೆ ಮುಟ್ಟುವುದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಮತ್ತು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸಹಕಾರ ಸಾಲದವ್ಯವಸ್ಥೆ ಏನಿದೆ ಅದು ಸುಗಮವಾಗಿ ಸಿಕ್ಕ ಬೇಕಾದರೆ ಅದು ತೀವ್ರವಾಗಿ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಜನರಿಗೆ ತೊಂದರೆಯಾಗುತ್ತದೆ. ವ್ಯವಸಾಯಗಾರರಿಗೆ ಸರಿಯಾಗಿ ಸಾಲ ಸಿಕ್ಕುವುದಿಲ್ಲ,

ಸಹಕಾರ ಸಂಘಗಳ ವಿಷಯದಲ್ಲಿ ಒಂದೆರಡು ವಿಷಯಗಳನ್ನು ನಾನು ಹೇಳುತ್ತೇನೆ. ಈಗ ಮೈಸೂರು ರಾಜ್ಯದಲ್ಲಿ ಸಹಕಾರ ಕಾಯಿದೆಯನ್ನು ಏನು ಮಾಡಿದ್ದಾರೆಯೋ ಅದರಲ್ಲಿ ಬೊಂಬಾಯಿ, ಮದರಾಸು ಕಾಯಿದೆಯಲ್ಲಿರ ತಕ್ಕ ಕೆಲವು ಮುಖ್ಯಾಂಶಗಳನ್ನು ತೆಗೆದುಕೊಂಡು ಒಂದು ಕಾಯಿದೆಯನ್ನು ಮಾಡಿದ್ದಾರೆ. ಇದರೊಳಗೆ ಒಂದು ಮಹತ್ವದ ಮಾತು ಇದೆ; ಅದೇನೆಂದರೆ ಕೆಲವು ಅಪೆಕ್ಸ್ ಬ್ಯಾಂಕುಗಳಿಗೆ ನಾಮಿನೇಷನ್ ಪದ್ಧತಿ ಇದೆ. ಸಾಧಾರಣವಾಗಿ ಹೋದವರ್ಷ 1962 ನೇ ಇಸವಿಯಲ್ಲಿ ಫೆಬ್ರುವರಿ ತಿಂಗಳಿನಲ್ಲಿ ಕೇಂದ್ರದ ಬ್ಯಾಂಕುಗಳಿಗೆ ಪ್ರೆಸಿಡೆಂಟರನ್ನೂ ಒಳಗೊಂಡು ಆರು ಮಂದಿಯನ್ನು ನಾಮಿನೇಷನ್ ಮಾಡಿದ್ದಾರೆ.

ಆದಕ್ಕೆ ಕೋ-ಆಪರೇಟೀವ್ ಕಾನ್‌ಫರೆನ್ಸಿನಲ್ಲಿ ಈ ವಿಷಯದಲ್ಲಿ ವಿನಂತಿ ಮಾಡಿಕೊಂಡಿದ್ದೇವೆ. ಅವರಿಗೆ ಅಧಿಕಾರವಿದೆ. ರಿಜಿಸ್ಟ್ರಾರರು ಸೂಚನೆ ಕೊಟ್ಟರೆ special general meeting ಕರೆಯ ಲಿಕ್ಕೇಬೇಕು; special general meeting ಕರೆಯುವಂತೆ ಸೂಚನೆ ಮಾಡಲಿಕ್ಕೆ ಸಂಪೂರ್ಣ ಅಧಿಕಾರವಿದೆ. ಅಮೇಲೆ the State Government or any authority specified by the State Government in this behalf, shall have the right to nominate not more than three members or one third of the total number of members of the Committee of the Co-operative society. Whichever is less, ಅಂತ Mysore Co-operative Society Actನ ಸೆಕ್ಷನ್ 30 ರಲ್ಲಿದೆ. ಹಾಗೇನೇ A member nominated on the Committee...under sub-section (1) shall hold office during the pleasure of the State Government or the specified authorty, as the case may be ಅಂತ ಅದರ ಕೆಳಗೇ ಇದೆ. ಗವರ್ನ್‌ಮೆಂಟಿಗೆ ಒಳಪಟ್ಟು

(ಶ್ರೀ ಎ. ಎಸ್. ಪಾಟೀಲ್)

ಅವರನ್ನು ನಾಮಿನೇಟ್ ಮಾಡಲಿಕ್ಕೆ ಬರುತ್ತದೆ. ಅದರಿಂದ special general meeting ಕರೆದು ತಿದ್ದುಪಡಿ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಅದಕ್ಕೋಸ್ಕರವೇ ಕೆಲಮಟ್ಟಿಗೆ Co-operators Conference ವೇಳೆಯಲ್ಲಿ ಇದನ್ನು ಒಪ್ಪಿಕೊಂಡಿದ್ದೇವೆ.

ಈ ಒಂದು ಸಹಕಾರ ಶಿಕ್ಷಣಕ್ಕೆ ಉತ್ತೇಜನ ಕೊಡಲು, ಸಹಕಾರ ಸಂಘಗಳ ಮೇಲೆ compulsary levy ಹಾಕಿ ಅದನ್ನು educational fund ಗೆ ಕೊಡುವ ಹಾಗೆ ಮಾಡಬೇಕು. ಬೊಂಬಾಯಿ ಆಕ್ಟಿನಲ್ಲಿ ಏನಿದೆ ಅದೇರೀತಿ compulsory levy ಏರ್ಪಾಡು ಮಾಡಬೇಕು. ಈ ಸಲಹೆಯನ್ನು ಈಡೇರಿಸಲು ನಮ್ಮ ಸೊಸೈಟಿ ಆಕ್ಟಿನ ಸೆಕ್ಷನ್ 57ಕ್ಕೆ ಅಮೆಂಡ್‌ಮೆಂಟನ್ನು ತಂದು ಈ ಸಭೆಯ ಮುಂದೆ ಆದಷ್ಟು ಜಾಗ್ರತೆಯಾಗಿ ಇಡಬೇಕು. ಬೊಂಬಾಯಿನವರು ಅವರ ಶಿಕ್ಷಣದ ನೀತಿ ಬಗ್ಗೆ ಬೊಂಬಾಯಿ ಆಕ್ಟಿನಲ್ಲಿ ಈರೀತಿ ಹೇಳಿದ್ದಾರೆ:

"Every society which pays a dividend to its members at a rate of 4 per cent or more shall contribute towards the educational fund of the Bombay Provincial Co-operative Institute at such rate as may be prescribed".

ಶಿಕ್ಷಣದ ಬಗ್ಗೆ ಬೊಂಬಾಯಿ ನೀತಿಯನ್ನು ಅನುಸರಿಸದೆ ಇದ್ದರೆ ಶಿಕ್ಷಣ ಪ್ರಚಾರದಲ್ಲಿ, ಶಾಲಾ ಕಾಲೇಜುಗಳಿಗೆ ಸಿಬ್ಬಂದಿ ಒದಗಿಸುವುದರಲ್ಲಿ, ವಿನಾಯಿತಿ ಕೊಡುವುದು, ಮುಂತಾದುದರಲ್ಲಿ ಶಿಕ್ಷಣ ಸಂಸ್ಥೆಗೆ ಅವಕಾಶವಿಲ್ಲದೆ, ಕೆಲಸ ಮಾಡಲು ಅಗತ್ಯವಾಗಿ, ಸಂಸ್ಥೆ ಉಳಿಯುವ ಪ್ರಶ್ನೆಯೇ ಬರುತ್ತದೆ. ಒಟ್ಟಿನಲ್ಲಿ ಈ ಸುಧಾರಣೆಗಳನ್ನು ಕೆಲವು ಗಮನಕ್ಕೆ ತೆಗೆದುಕೊಂಡ, ಅವುಗಳನ್ನು ಆಚರಣೆಗೆ ತರುವ ವಿಚಾರ ಮಾಡುತ್ತೀರೆಂದು ನಂಬಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಸಭಾಪತಿಗಳೆ,

ನಾನು ಈ ಡಿಮ್ಯಾಂಡನ್ನು ಅನುಮೋದಿಸುತ್ತಾ ಇದರಲ್ಲಿರುವ ಕೆಲವು ನ್ಯೂನತೆಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ವ್ಯವಸಾಯಕ್ಕೆ ಮುಖ್ಯವಾಗಿ ಅರಣ್ಯ ಬೇಕು. ಅರಣ್ಯ ಈ ದಿವಸ ಉಳಿಯುತ್ತಾ ಇದೆಯೇ, ಅರಣ್ಯ ಬೆಳೆಯುತ್ತಾ ಇದೆಯೇ, ಇದಕ್ಕೆ ಸಾಕಷ್ಟು ಪ್ರೋತ್ಸಾಹ ಸಿಗುತ್ತಾ ಇದೆಯೇ, ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಈಗ ಅರಣ್ಯದ ಸೌದೆಗೆ ಕೆಲವು ಪರ್ಮಿಟ್ಟುಗಳನ್ನು ಕೊಡುತ್ತಾ ಇದ್ದಾರೆ. ಇದರಲ್ಲಿ ಮೂರು ಅಡಿ ತುಂಡಿಗೆ ಮೇಲ್ಪಟ್ಟು ತರಕೂಡದು, 3 ಅಡಿಗೆ ಒಳಪಟ್ಟು ತರಬೇಕೆಂದಿದೆ. ಇದರಲ್ಲಿ ಬೀಟೆ, ಹೊನ್ನೆ, ಇವುಗಳನ್ನೂ ಕೂಡ ಪರ್ಮಿಟ್ಟಿನಲ್ಲಿ ಅಳವಡಿಸಿಕೊಡುತ್ತಾ ಇದ್ದಾರೆ. ಇದರಲ್ಲಿ ಏನುಮಾಡುತ್ತಾ ಇದ್ದಾರೆಂದರೆ 18 ಅಡಿ ಒಂದು ತುಂಡನ್ನು, 3-3 ಅಡಿಗಳ pieces ಮಾಡುತ್ತಾರೆ. 6 ರಿಂದ 10 ಅಡಿ ಸುತ್ತಳತೆ ಇರುವ ಅಂಥ ಪೀಸುಗಳನ್ನು ಮಾಡಿ, ಬೇರೆ ವರ್ಕ್‌ಷಾಪುಗಳಿಗೆ ತೆಗೆದುಕೊಂಡು ಹೋಗಿ, ಕುಯ್ಯಿಸಿ, ಸಾಮಾನುಗಳನ್ನು ತಯಾರುಮಾಡುತ್ತಾರೆ. ಅರಣ್ಯ ಕಡಿದುಬಿಟ್ಟು, ದುರುಪಯೋಗಮಾಡುತ್ತಿದ್ದಾರೆ. ಸೌದೆ ರೂಪದಲ್ಲಿ ಒಬ್ಬ ದಳ್ಳಾಳಿ ಕೈಯಲ್ಲಿ ಬಂದು, ಅವನಿಗೆ ಪ್ರಾಫಿಟ್ ಆಗುತ್ತಾ ಇದೆ; ಇದಕ್ಕೆ ಗಮನ ಕೊಟ್ಟು ಬೀಟೆ, ಹೊನ್ನೆ ಇಂಥ ಬೆಳೆ ಬಾಳತಕ್ಕಂತ ಮರಗಳ ಬಗ್ಗೆ ಒಂದು ಕಂಡೀಷನ್ ಮಾಡಿ, ಪರ್ಮಿಟ್ಟಿನಲ್ಲಿ ಅವಕ್ಕೆ ಅವಕಾಶ ಮಾಡಿಕೊಡದೆ, ಆ ಮರಗಳನ್ನು ಉಳಿಸುವ ಪ್ರಯತ್ನ ಮಾಡಬೇಕು. ದೊಡ್ಡ ದೊಡ್ಡ ಬೆಲೆಬಾಳುವ ಮರಗಳನ್ನು ಸೀಳಿಬಿಟ್ಟು, ಕಾಡು ಕಡಿದು ಸಾಗಿಸುವ ಪರ್ಮಿಟ್ಟಿನಲ್ಲಿ, ಹೊರಗಡೆಗೆ ಸಾಗಿಸಿಬಿಡುತ್ತಿದ್ದಾರೆ. ಇಲಾಖೆಗೆ instructions ಕೊಟ್ಟು ಈರೀತಿ ನಡೆಯದಂತೆ ಏರ್ಪಾಡು ಮಾಡುತ್ತೀರೆಂದು ನಾನು ನಂಬಿದ್ದೇನೆ.

ಇನ್ನು ಕೆಲವುಕಡೆ ನಾನು ನೋಡಿದ್ದೇನೆ. ಮರಗಳು ಎಲ್ಲಿ ಜಾಸ್ತಿ ಇವೆಯೋ ಅಂಥ ಕಡೆ ದರಖಾಸ್ತು ಜಮೀನು ಕೊಳ್ಳುತ್ತಾರೆ. ಅಲ್ಲಿರುವ ಮರಗಳನ್ನು cheap rateನಲ್ಲಿ, upset price ಗೆ ತೆಗೆದುಕೊಂಡು ಸಾವಿರಾರು ರೂಪಾಯಿ ಗಳಿಸಿದ ನಿದರ್ಶನಗಳು ಬೇಕಾದಷ್ಟು ಇವೆ. ಆದ್ದರಿಂದ ದರಖಾಸ್ತು ಜಮೀನು ಕೊಡುವಾಗ, ದೊಡ್ಡ ಅಧಿಕಾರಿಗಳು ಹೋಗಿ ಪ್ಲಾಟ್ ಇನ್‌ಸ್ಪೆಕ್ಷನ್ ಮಾಡಿ ಎಲ್ಲಿ ಯಾವ ಮರ ಇದೆ, ಯಾವ ಉದ್ದೇಶದಿಂದ ಆ ಜಾಗ ಕೇಳಿದ್ದಾರೆ, ಏತಕ್ಕೋಸ್ಕರ ಕಾಡು ಬಹಳ ಇರುವಸ್ಥಳವನ್ನೇ ವ್ಯವಸಾಯಕ್ಕೆ ಕೇಳಿದ್ದಾರೆ, ಆ ಸ್ಥಳ ವ್ಯವಸಾಯಕ್ಕೆ ಪ್ರಯೋಜನವಾಗುತ್ತದೆಯೇ, ಅದನ್ನು ವ್ಯವಸಾಯಕ್ಕೆ ಲಾಯಕ್ ಮಾಡಬೇಕಾದರೆ ಎಷ್ಟು ದುಡ್ಡು ಬೇಕಾಗುತ್ತದೆ, ಈ ಅಂಶಗಳನ್ನೆಲ್ಲಾ ಚೆನ್ನಾಗಿ ವಿಮರ್ಶೆ ಮಾಡಬೇಕು.

ಮೇಲುಕೋಟೆ ಫಾರೆಸ್ಟು ಹಿಂದೆ 20 ಸಾವಿರ ರೂಪಾಯಿವರೆಗೂ ಅಮರಾಯಿ ಹರಾಜು ಹಾಕುತ್ತಿದ್ದರು, ಈ ದಿವಸ ಮೂರು ಸಾವಿರ ರೂಪಾಯಿಗೆ ಬಂದಿದೆ. ಸಾವಿರಾರು ರೂಪಾಯಿ ಫಲ ಕೊಡುವ ಪದಾರ್ಥ ಇವತ್ತು ಏಕೆ ಹಾಳಾಗುತ್ತಿದೆ ಎನ್ನುವುದನ್ನು ಸ್ವಲ್ಪ ಕೂಲಂಕಷವಾಗಿ ವಿಮರ್ಶೆ ಮಾಡಬೇಕು. 30 ಸಾವಿರ ಎಕರೆ ಕಾಡು ಪ್ರದೇಶ ಇವತ್ತು ಬಂದು ಬಯಲು ಸೀಮೆ ಆಗಿದೆ. ಏಕೆ ಇಂಥ ಹಾಳಾಗುವ ಪರಿಸ್ಥಿತಿ ಬಂದಿದೆಯೆಂದರೆ, ಅಲ್ಲಿ ಅಧಿಕಾರಿಗಳ ದುರಾಚಾರದಿಂದ ಅಲ್ಲಿ ಸಾಕಷ್ಟು staff ನ್ನು ಇಟ್ಟಿಲ್ಲ. ಇಟ್ಟಿರುವ ಸ್ಟಾಫೂ, ಕೆಲವರಿಂದ ದುಡ್ಡು ತೆಗೆದುಕೊಂಡು ಸೌದೆ ಕಡಿಯುವುದಕ್ಕೆ ಬಿಟ್ಟು ಬಿಡುತ್ತಾರೆ. ಅರಳಿ, ಹುಣಿಸೆ ಇಂಥ ಮರಗಳನ್ನು ಕಡಿದುಕೊಂಡು ಬಂದು ಸಾಗಿಸುತ್ತಾ ಇದ್ದಾರೆ. ನಮ್ಮ ಮಾನ್ಯ ಮಂತ್ರಿಗಳು ನನ್ನ ಜೊತೆ ಬಂದರೆ ಲಕ್ಷಗಟ್ಲೆ ಸೌದೆ ಹೋಗುತ್ತಿರುವುದನ್ನು ನಾನು ತೋರಿಸುತ್ತೇನೆ. ಇವತ್ತು 30 ಸಾವಿರ ಎಕರೆ ಬರಡು ಭೂಮಿ ಆಗಿದೆ. ಇದರ ಮೇಲೆ ನಿಗ ತೆಗೆದುಕೊಂಡು ಸರಿಮಾಡಬೇಕು. ಅಮರಾಯಿ ಮೂರು ಸಾವಿರ ರೂಪಾಯಿಗೆ ಇಳಿದಿರುವುದು ಬಹಳ ದುಃಖದ ಸಂಗತಿ. 30 ಸಾವಿರದಿಂದ 3 ಸಾವಿರ ರೂಪಾಯಿಗೆ ಹರಾಜು ಕೆಳಕ್ಕೆ ಬಂದಿರುವುದಕ್ಕೆ ಅರಳಿ ಮರ, ಹುಣಿಸೆ ಮರಗಳನ್ನು ಕಡಿಯುವುದೇ ಕಾರಣ. ಅಲ್ಲಿ ಈಗ ಬಂದೋಬಸ್ತು ಮಾಡಿದ್ದಾರೆ. ಎಲ್ಲಿ ಒಳ್ಳೆಯ ಕಾಡು ನಶಿಸಿ ಹೋಗಿದೆಯೋ ಅಲ್ಲಿ ಜಾಸ್ತಿ ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕು.

ಪಂಚಾಯಿತಿಯವರು ಫಾರೆಸ್ಟ್ ಬೆಳೆಸಬೇಕೆಂದು ಹೇಳಿ, ಅದಕ್ಕೋಸ್ಕರ ಸ್ವಲ್ಪ ದುಡ್ಡನ್ನು ಅವರಿಗೆ ಕೊಡುತ್ತಿರುವುದು ಪ್ರಯೋಜನವಾಗುತ್ತಿಲ್ಲ. ಒಂದು ಎಕರೆಗೆ 20 ರೂಪಾಯಿ ಕೊಡುತ್ತಾರೆ. ಮಂಡ್ಯದಲ್ಲಿ 20 ಸಾವಿರ ರೂಪಾಯಿ ಕೊಟ್ಟಿರಬಹುದು. ಅಲ್ಲಿ ಅರಣ್ಯ ಎಲ್ಲಿಯಾದರೂ ಇದೆಯೇ? ಒಂದು ಎಕರೆಗೆ 20 ರೂಪಾಯಿ ಕೊಟ್ಟು ಕಾಡು ಉಳಿಸುವುದಕ್ಕೆ ಸಾಧ್ಯವೇ? ಅದೂ ಪಂಚಾಯಿತಿಯವರಿಗೆ ಬೆಳೆಸುವುದಕ್ಕೆ ಸಾಧ್ಯವೇ? ದೇಶಪ್ರೇಮದಿಂದ ಕೂಡಿರುವ ಪಂಚಾಯಿತಿಗಳು ಈಗ ಎಲ್ಲಿವೆ ? ಇಂಥ ಮಟ್ಟಕ್ಕೆ ಜನ ಬಂದಿದ್ದಾರೆ. ಡಿಸ್ಟ್ರಿಕ್ಟಿನಲ್ಲಿ ಯಾವುದಾದರೂ ಒಂದು ಸ್ಪಾಟ್ ಸೆಲೆಕ್ಟ್ ಮಾಡಿ, ಈ 20 ಸಾವಿರ ರೂಪಾಯಿಯನ್ನು ಒಂದು ಕಡೆ ಫಾರೆಸ್ಟ್ ಬೆಳೆಸುವುದಕ್ಕೆ ಉಪಯೋಗಿಸಿದರೆ ಉತ್ತಮ. ಪಂಚಾಯಿತಿಗೆ ಈ ಫಾರೆಸ್ಟ್ ಬೆಳೆಸುವ ಜವಾಬ್ದಾರಿಯನ್ನು ಕೊಡುವ ಬದಲು, ಅದನ್ನು ಫಾರೆಸ್ಟ್ ಇಲಾಖೆಗೇ ಕೊಡಬೇಕು. ಫಾರೆಸ್ಟ್ ಡಿಪಾರ್ಟ್‌ಮೆಂಟು ಎಲ್ಲಿಯಾದರೂ ಆಧುನಿಕ ರೀತಿಯಲ್ಲಿ ಬೆಳಸಿ, ಜನಗಳಿಗೆ ತೋರಿಸಬೇಕು, ಈ ತರಹ ಅರೇಂಜ್ ಮಾಡಬೇಕು.

ಅಲ್ಲದೆ ಪಿ. ಡಬ್ಲ್ಯು. ಡಿ. ರೋಡಿನಲ್ಲಿ ಮರಗಳಿದ್ದುವು. ಹಿಂದೆ ಅವನ್ನು ನೋಡುವುದಕ್ಕೆ ಬಹಳ ಆನಂದವಾಗುತ್ತಿತ್ತು. ಈಗ ಅವು ಯಾವ ಇಲಾಖೆಗೆ ಸೇರಿವೆ ಎಂಬುದೇ ಅರ್ಥವಾಗುತ್ತಿಲ್ಲ. ಈಗ ಆ ರಸ್ತೆಗಳಲ್ಲಿರತಕ್ಕ ಮರಗಳನ್ನು ನೋಡಿದರೆ ಎಲ್ಲಾ ಕೊಂಬೆಗಳು ಕೆದರಿಕೊಂಡು ಬರೇ ಬೆಂಡಾಗಿ ನಿಂತಿವೆ. ಅಂಥಾದ್ದನ್ನು ಪಂಚಾಯ್ತಿಗೆ ವಹಿಸಿಕೊಡುವುದರಿಂದ ಇಷ್ಟರಲ್ಲಿ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಬಹುದೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ವ್ಯವಸಾಯ ಬಾಬಿಗೆ ಇವತ್ತು ನಮ್ಮ ಮಂಡ್ಯ ಜಿಲ್ಲೆಗೆ 5 ಕೋಟಿ ರೂಪಾಯಿಗಳನ್ನು ಪ್ಯಾಕೇಜ್ ಪ್ರೋಗ್ರಾಂಗೋಸ್ಕರ ಕೊಟ್ಟಿದ್ದಾರೆ. ಅದರಲ್ಲಿ ಏನಾದರೂ ರೈತನಿಗೆ ಸಿಗುತ್ತದೆಯೇ ಎಂದು ಯೋಚನೆ ಮಾಡಿದರೆ ಏನೂ ಇಲ್ಲ. ಸುಮಾರು 3 ಕೋಟಿ 75 ಲಕ್ಷ ರೂಪಾಯಿಗಳನ್ನು ಕೇವಲ ಸಿಬ್ಬಂದಿಗಾಗಿ ಖರ್ಚು ಮಾಡುತ್ತಿದ್ದಾರೆ. ಬೀಜ, ಗೊಬ್ಬರ ಡೆಮಾನ್‌ಸ್ಟ್ರೇಷನ್ (Demonstration) ಪ್ರಾರಂಭ ಮಾಡುವುದಕ್ಕೆ ಸರಿಯಾದ ಸೌಕರ್ಯವೇ ಇಲ್ಲ. ಅವನಿಗೆ ಕೇವಲ 5 ಸೇರು ಬೀಜ 2 ಮಣ ಅಥವಾ 4 ಮಣ ಉಪ್ಪು ಹೀಗೆ ಕೊಡುತ್ತಾ ಇರುವಾಗ ಇದಕ್ಕಾಗಿ ಒಟ್ಟು ಒಂದೆರಡು ಲಕ್ಷ ರೂಪಾಯಿಗಳು ಖರ್ಚಾಗುತ್ತ ಇರಬಹುದು. ಒಂದು ಕೋಟಿ ಚಿಲ್ಲರೆ ರೂಪಾಯಿಗಳನ್ನು ಸಾಲವಾಗಿ ಹಂಚುವುದಕ್ಕೆ ಖರ್ಚು ಮಾಡುತ್ತಿದ್ದೀರಿ. ಹೀಗೆ ಮಾಡಲು 3.70 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಆದ್ದರಿಂದ ತಲಾ ಒಂದಕ್ಕೆ ಕೇವಲ 50 ರೂಪಾಯಿಗಳು ಬರುತ್ತವೆ. ಈ ರೀತಿ ಕಾಯಿದೆ ನಿಗದಿ ಮಾಡಿದರೆ ಆತ ಹೇಗೆ ವ್ಯವಸಾಯ ಮಾಡಬೇಕು. ಈ ರೀತಿ ಮಾಡಿದರೆ ಅವನು ಹೇಗೆ ಕಂದಾಯ ಕೊಡುತ್ತಾನೆ ? ಆದರೂ ನಿಮ್ಮ ಸ್ಕೀಮು ನಿಜವಾಗಿ ಜಯಪ್ರದವಾಗುತ್ತದೆಂದು ನಾನು ಅಭಿಪ್ರಾಯ ಪಡುತ್ತೇನೆ. ಆದರೆ ಅದನ್ನು ಪ್ರಚಾರ ಮಾಡುತ್ತಿದ್ದೀರಿ. ಸುಮ್ಮನೆ ಪ್ರಚಾರದಿಂದ ಈ ಕೆಲಸವಾಗುವುದಿಲ್ಲ. ಸಾಮಾನ್ಯವಾಗಿ ಒಬ್ಬ ರೈತನಿಗೆ ನೀವು ವ್ಯವಸಾಯ ಮಾಡಿ ಎಂದು ಹೇಳುವಾಗ ಅವನು ಯಾವ್ಯಾವ ರೀತಿ ಅದನ್ನು ಮಾಡಬೇಕು, ಆತನಿಗೆ ಶಕ್ತಿ ಇದೆಯೇ, ಸರಿಯಾಗಿ ಉಳುವುದಕ್ಕೆ ಎತ್ತುಗಳಿವೆಯೇ, ಗೊಬ್ಬರಕ್ಕೆ ದುಡ್ಡು ಇದೆಯೇ, ಅವನ ಮನೆಯಲ್ಲಿ ತಿನ್ನುವುದಕ್ಕೆ ಅನ್ನ ಇದೆಯೇ, ವ್ಯವಸಾಯ ಮಾಡುವ ಕಾಲದಲ್ಲಿ ಸಾಕಷ್ಟು ಖರ್ಚು ಮಾಡುವುದಕ್ಕೆ ದುಡ್ಡು ಇದೆಯೋ ಎಂಬುದನ್ನೆಲ್ಲಾ ನೋಡಬೇಕು. ರೈತನಿಗೆ ಅವಶ್ಯಕವಾಗಿ ಬೇಕಾದ ವ್ಯವಸಾಯದ ಉಪಕರಣಗಳನ್ನು, ಸಾಧನಗಳನ್ನು ಒದಗಿಸಬೇಕು. ಬಹು ಮುಖ್ಯವಾಗಿ ಬೇಕಾದ ಟ್ರಾಕ್ಟರುಗಳು,

(ಶ್ರೀ ಎಚ್. ನಂಜೇಗೌಡ)

ಮತ್ತು ಬುಲ್‌ಡೋಜರುಗಳು ಇತ್ಯಾದಿ ಆಧುನಿಕ ಉಪಕರಣಗಳನ್ನು ಆಯಾ ತಾಲ್ಲೂಕಿನಲ್ಲಿಯೇ ಇಟ್ಟು ಯಾರು ಅವನ್ನು ಬೇಕು ಎಂದು ಕೇಳುತ್ತಾರೋ ಅಂತಹವರಿಗೆ ಅವನ್ನು ಒದಗಿಸಿ ಕೊಡಬೇಕು. ಆ ಕೆಲಸಕ್ಕೆ ಬೇಕಾದಾಗ ಹಣವನ್ನೂ ಸಹ ಒದಗಿಸಿ ಕೊಡಬೇಕು. ಈಗ ಏನಾಗಿದೆಯೆಂದರೆ ಪ್ರಚಾರ ಮಾಡುವವರು ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿನವರು, ಸಾಲ ಮಂಜೂರು ಮಾಡುವವರು, ಸೊಸೈಟಿಯವರು ನಂತರ ದುಡ್ಡು ಕೊಡುವವರು ಬ್ಯಾಂಕಿನವರು. ಈ ರೀತಿ ಮೂರು ಮುಖಗಳಿವೆಯೆಂದು ನಾನು ಹೇಳಬೇಕಾಗಿದೆ. ಅವನಿಗೆ ಅವನ್ನು ಯಾವರೀತಿ ಉಪಯೋಗಿಸಿಕೊಳ್ಳಬೇಕೆಂಬ ಶಕ್ತಿ ಸಾಕಾಗಿಲ್ಲ. ವ್ಯವಸಾಯವನ್ನು ಒಂದೇಕಡೆ ಯಾರು ಪ್ರಚಾರ ಮಾಡುತ್ತಿದ್ದಾರೋ ಅವರಿಂದ ರೈತನಿಗೆ ಸತ್ಫಲ ಸಿಕ್ಕುವಹಾಗೆ ಮಾಡಬೇಕು. ಇದರಿಂದ ಒಳ್ಳೆಯ ಪರಿಣಾಮವಾಗಬಹುದು. ಖಂಡಿತವಾಗಿ ಇಂತಹ ಪ್ಯಾಕೇಜ್ ಪ್ರೋಗ್ರಾಂ ಸಹ ಬೆಳೆಯಬಹುದು. ಆದ್ದರಿಂದ ಸರ್ಕಾರದವರು ರೈತನಿಗೆ ವ್ಯವಸಾಯ ಮಾಡಲು ತಕ್ಕ ಪ್ರೋತ್ಸಾಹ ಕೊಡುವ ರೀತಿಯಲ್ಲಿ ನಾನು ಮೇಲೆ ಹೇಳಿದಹಾಗೆ ರೈತನಿಗೆ ಅವಶ್ಯಕವಾಗಿ ಬೇಕಾದಂಥ ಸಾಮಾನುಗಳನ್ನು ಒದಗಿಸುವ ವ್ಯವಸ್ಥೆಯನ್ನು ಅತಿ ಜಾಗ್ರತೆ ಮಾಡಬೇಕೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ವ್ಯವಸಾಯವನ್ನು 10-20 ಎಚ್. ಪಿ. ಟ್ರಾಕ್‌ಟರ್‌ಗಳಲ್ಲಿ ನಡೆಸಬೇಕು ಎಂದು ಹೇಳುತ್ತಾರೆ. ಇಂತಹ ಹೇಳಿಕೆಗಳಿಂದ ರೈತನಿಗೇನು ಪ್ರಯೋಜನವಾಗುತ್ತಿಲ್ಲ. ಕೂರಿಗೆ, ಇತ್ಯಾದಿ, ವ್ಯವಸಾಯ ಮುಟ್ಟುಗಳನ್ನು ಜಾಸ್ತಿಯಾಗಿ ಮಾಡಿಕೊಳ್ಳುವುದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಗದ್ದೆ ವ್ಯವಸಾಯ ಮಾಡಬೇಕು. ಬತ್ತ ನಾಟಿ ವ್ಯವಸಾಯ ಮಾಡುವವರಿಗೆ ಕೇವಲ 20-30 ಎಚ್. ಪಿ. ಟ್ರಾಕ್ಟರ್ ಇಂಜಿನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹೊಲಗಳಲ್ಲಿ ಒಂದಕ್ಕೆ ಹೊಡೆಯಬಹುದು. ಆದರೆ ಅವುಗಳಿಂದ 3-4 ಸಾರಿ ಉಳುವುದಕ್ಕೆ ಸಾಧ್ಯವಾಗುವುದಿಲ್ಲ. ಚಿಕ್ಕ ಚಿಕ್ಕ ಮೆಷಿನರಿಗಳನ್ನೂ ಸಹ ತರಿಸಿಕೊಂಡಿಲ್ಲ. ಅವುಗಳಿಂದ ಎರಡು-ಮೂರುಸಾರಿ ಉಳಬಹುದು. ಅದರಿಂದ ಖರ್ಚು ಕಡಿಮೆ ಬೀಳುತ್ತದೆ. ವ್ಯವಸಾಯದಲ್ಲಿ ಒಳ್ಳೆಯ ಆಧುನಿಕ ಪ್ರತಿಫಲವುಂಟಾಗುತ್ತದೆ. ಅಲ್ಲದೆ ಜಮೀನುಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟುವುದಕ್ಕಾಗಿ ಸರ್ಕಾರದವರು ಬೇಕಾದ ಔಷಧಿಗಳನ್ನು ಸಾಮೂಹಿಕವಾಗಿ ಮಾಡುವುದು ಒಳ್ಳೆಯದು ಎಂದು ನಾನು ಈ ಸಮಯದಲ್ಲಿ ಅಭಿಪ್ರಾಯಪಡುತ್ತೇನೆ.

ಇನ್ನು ಗ್ರಾಮ ಪಂಚಾಯಿತಿಯ ವಿಷಯ ಇದು ಹೇಗೆ ಕೆಲಸ ಮಾಡುತ್ತಿದೆಯೆಂದರೆ ಜನಗಳಿಗೆ ತಾವು ಹಾಕಿಕೊಟ್ಟ ತತ್ವವನ್ನು ನಿಜವಾಗಿ ಬೆಳೆಸುವ ಶಕ್ತಿ ಇದೆಯೇ ಎಂಬುದನ್ನು ಯೋಚನೆ ಮಾಡಬೇಕು. ಈಗ ಪಂಚಾಯಿತಿ ಎಲೆಕ್ಷನ್ ಎಂದು ಮಾಡಿದ್ದೀರಿ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಒಬ್ಬೊಬ್ಬರಿಗೂ ವೈಷಮ್ಯ ಹೆಚ್ಚಾಗಿ ಗ್ರಾಮಗಳಲ್ಲಿ ಒಗ್ಗಟ್ಟೇ ಹೊರಟುಹೋಗಿರುವ ಸ್ಥಿತಿ ಬಂದಿದೆ. ಇದರಿಂದಲೇ ಅನೇಕರು ಕೋರ್ಟು ಕಚೇರಿಗಳಿಗೆ ಹೋಗುತ್ತಾರೆ. ಒಂದು ಪಾರ್ಟಿ ಮೀಟಿಂಗ್ ಏನಾದರೂ ಇಟ್ಟರೆ, ಒಂದೊಂದು ಪಾರ್ಟಿಗಳಲ್ಲಿ ವಿರೋಧವಾಗಿ ಕೆಲಸ ಮಾಡುತ್ತಾರೆ. ಹೀಗಾದರೆ ಪಂಚಾಯಿತಿ ಕೆಲಸಗಳು ಯಾವರೀತಿ ನಡೆಯುತ್ತವೆ, ಇನ್ನು ಕೆಲವು ಕಡೆಗಳಲ್ಲಿ ಪಂಚಾಯಿತಿಗಳನ್ನು ಇಟ್ಟಿದ್ದೀರಿ. ಅಲ್ಲಿಂದ ರೈತರಿಗೆ ದುಡ್ಡು ಹಂಚಬೇಕಾದರೆ ಸೆಕ್ರೆಟರಿ ಸೈನ್ ಆಗಬೇಕು ಎಂದು ಹೇಳುತ್ತೀರಿ. ಆದರೆ ಅಂತಹ ಕಡೆಗಳಲ್ಲಿ ಇನ್ನೂ ಸೆಕ್ರೆಟರಿಗಳನ್ನೇ ನೇಮಕ ಮಾಡಿಲ್ಲ. ಒಂದೊಂದು ವೇಳೆ ಯಾರನ್ನಾದರೂ ಒಬ್ಬರನ್ನು ನೇಮಿಸುತ್ತೀರಿ ಎಂದರೆ ಅತನಿಗೆ ಆ ಬಗ್ಗೆ ಟ್ರೈನಿಂಗ್ ಆಗಿರುವುದೇ ಇಲ್ಲ. ಟ್ರೈನಿಂಗ್ ಆದವರನ್ನೇ ನೇಮಿಸಬೇಕು. ಎಷ್ಟೋ ಪಂಚಾಯಿತಿ ಬೋರ್ಡುಗಳಲ್ಲಿ ಸೆಕ್ರೆಟರಿಗಳಿಲ್ಲ. ಸೆಕ್ರೆಟರಿಗಳೇ ಇಲ್ಲದಿದ್ದ ಮೇಲೆ ಗ್ರಾಮಾಭಿವೃದ್ಧಿ ಇನ್ನು ಯಾವರೀತಿ ಆಗಬೇಕು. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಕೂಡಲೆ ಯಾವ್ಯಾವ ಪಂಚಾಯಿತಿ ಬೋರ್ಡುಗಳಲ್ಲಿ ಸೆಕ್ರೆಟರಿಗಳೇ ಇಲ್ಲವೋ ಅಂತಹ ಕಡೆಗಳಲ್ಲಿ ಶಿಕ್ಷಿತರಾದ, ಅನುಭವಸ್ಥರಾದ ಮತ್ತು ದಕ್ಷರಾದ ಸೆಕ್ರೆಟರಿಗಳನ್ನು ನೇಮಕ ಮಾಡಬೇಕೆಂದು ಆ ಮೂಲಕ ಸಾರ್ವಜನಿಕ ಕೆಲಸ ಕಾರ್ಯಗಳೆಲ್ಲಾ ಸುಸೂತ್ರವಾಗಿ ನಡೆಯುವುದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಷಯ. ಪಂಚಾಯಿತಿ ಸೆಕ್ರೆಟರಿಗಳನ್ನು ನೇಮಕ ಮಾಡಿದ್ದರೂ ಅವರ ಸಂಬಳಕೆ ಯಾರು ಜವಾಬ್ದಾರರು ಎಂಬುದನ್ನು ವಿಶದೀಕರಿಸಿಲ್ಲ. ಸರ್ಕಾರದವರು ಕೊಡದೇ ಇದ್ದರೆ ಪಂಚಾಯಿತಿಯವರು ಕೊಡಬೇಕು. ಅದಕ್ಕೆ ತಕ್ಕ ಉತ್ಪತ್ತಿ ಪಂಚಾಯಿತಿಗೆ ಬರಬೇಕು. ಒಟ್ಟಿನಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿಯಾಗುವುದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರದವರು ಕೂಲಂಕಷವಾಗಿ ವಿಚಾರ ಮಾಡಿ ಅಲ್ಲಿನ ಉತ್ಪತ್ತಿಯಿಂದ ಗ್ರಾಮಾಭಿವೃದ್ಧಿ ಹೇಗೆ ನಡೆಯಬೇಕೆನ್ನುವುದನ್ನು ದಯವಿಟ್ಟು ಸರ್ಕಾರದವರು ವಿಮರ್ಶೆ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ಬಾವಿಗಳನ್ನು ತೆಗೆಯುವುದಕ್ಕೆ ಹಣವನ್ನು ಕೊಡುತ್ತೀರಿ. ತಾವು ಒಂದು ಘನೋದ್ದೇಶ ವನ್ನಿಟ್ಟುಕೊಂಡು ರೈತನಿಗೆ ಒಳ್ಳೆಯದಾಗಲಿ, ಹೆಚ್ಚು ಆಹಾರ ಬೆಳೆಯಲಿ ಎಂಬ ಬಗ್ಗೆ ತಕ್ಕ ವ್ಯವಸ್ಥೆ ಗಳನ್ನು ಮಾಡುತ್ತಿರುವುದನ್ನು ನಾನು ಸ್ವಾಗತಿಸುತ್ತೇನೆ. ಹಣ ಹಂಚುವಾಗ ಯಾರಿಗೆ ಕೊಟ್ಟಿದ್ದೀರಿ, ನಿಜವಾಗಿ ಕೆಲಸ ನಡೆದಿದೆಯೇ ಎನ್ನುವುದನ್ನು ಸ್ವಲ್ಪ ವಿಮರ್ಶೆ ಮಾಡಬೇಕು. ನನ್ನ ತಾಲ್ಲೂಕಿಗೆ 96 ಬಾವಿಗಳನ್ನು ಮಂಜೂರು ಮಾಡಿ ಅದಕ್ಕೆ ಹಣ ಸಾಕಷ್ಟು ಕೊಟ್ಟಿದ್ದರೂ ಇದುವರೆಗೂ 20 ಬಾವಿಗಳು ಪೂರ್ತಿಯಾಗಿಲ್ಲ. ಅಧಿಕಾರಿಗಳೂ ಇದ್ದಾರೆ ಆದರೆ ಏನು ಪ್ರಯೋಜನ. ಎಲ್ಲಾ ವಿಷಯ ಗಳನ್ನು ಮಂತ್ರಿಗಳ ಹತ್ತಿರವೇ ಬಂದು ಹೇಳುವುದಕ್ಕೆ ಸಾಧ್ಯವೇ? ಇನ್ನುಳಿದ 76 ಬಾವಿಗಳ ಹಣ ವಿನಾಯಿತು. ಅವು ನಿಜವಾಗಿ ರಿಟರ್ನ್ ಕೊಡುವುದಕ್ಕೆ ಸಾಧ್ಯವೇ ಎನ್ನುವುದನ್ನು ವಿಮರ್ಶೆ ಮಾಡ ಬೇಕು. ತಾವು ಕೊಡುವ ಹಣ ನೇರವಾಗಿ ರೈತನಿಗೆ ಸಲ್ಲಬೇಕು. ಅವನಿಗೆ ಅದರಿಂದ ಉತ್ಪತ್ತಿ ಹೆಚ್ಚಾ ಗಬೇಕು. ನಿಜವಾಗಿ ಜಬರದಸ್ತಾಗಿ ಲಗಾಮು ತಮ್ಮ ಕೈಲಿ ಇರಬೇಕು. ಪ್ರತಿ ತಿಂಗಳು ಗ್ರಾಮೋ ತ್ಪತ್ತಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿಗೆ ಕಳುಹಿಸಿಕೊಡಬೇಕು ಎಂಬುದನ್ನು ತಾವು ವಿಮರ್ಶೆ ಮಾಡಬೇಕು. ಅಲ್ಲಿನ ನ್ಯೂನತೆಗಳನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ಎನ್. ಇ. ಎಸ್. ವಿಷಯವಾಗಿ ನಾನು ಪದೇ ಪದೇ ನಾನು ಹೇಳುತ್ತಾ ಬಂದಿದ್ದೇನೆ; ಈಗಲೂ ಅದನ್ನೇ ಹೇಳಿದರೆ ಮಾನ್ಯ ಮಂತ್ರಿಗಳಿಗೆ ಸ್ವಲ್ಪ ಬೇಜಾರು ಆಗಬಹುದು. ನಮ್ಮ ತಾಲ್ಲೂ ಕಿನಲ್ಲಿ 1941ನೇ ಇಸವಿಯಲ್ಲಿಯೇ ಬಾವಿಗಳನ್ನು ಶುರುಮಾಡಿ ಆ ರಾಗಾಯಿತು 1962ನೇ ಇಸವಿ ಹೊತ್ತಿಗೆ 97 ಬಾವಿಗಳು ಅಪೂರ್ಣವಾಗಿವೆ. ನಾನು ಅವರಿಗೆ ಈ ಬಗ್ಗೆ ಎಷ್ಟೋ ಮನವಿಗಳನ್ನು ಬರೆದುಕೊಟ್ಟಮೇಲೆ ಅಸಿಸ್ಟೆಂಟ್ ಡೆವಲಪ್‌ಮೆಂಟ್ ಆಫೀಸರೊಬ್ಬರನ್ನು ಕಳುಹಿಸಿಕೊಟ್ಟರು. ಅವರು ಸ್ವಲ್ಪಮಟ್ಟಿಗೆ ವಿಮರ್ಶೆ ಮಾಡಿ ಸಾಕಾದಷ್ಟು ಆಶ್ಚರ್ಯಕರ ಸಂಗತಿ ಹೊರಬಿದ್ದಿದೆ ಎಂದು ಅಭಿಪ್ರಾಯ ಪಟ್ಟರು. ಈಗ್ಗೆ 1½ ವರ್ಷಗಳಿಂದ ಅಲ್ಲಿ ಬಹಳ Wrong paymentಗಳಾಗಿ ಕೆಲವರಿಗೆ ಬರಬೇಕಾದ ಹಣ ಸಹ ಕೊಡಲಿಲ್ಲ. ಬಾವಿಗಳನ್ನು ಚೆಕ್ ಸಹ ಮಾಡಲಿಲ್ಲ. ಬಿಲ್ ಚೆಕ್ ಮಾಡದೆ ಬಾವಿಗಳನ್ನು ಚೆಕ್ ಮಾಡಿದರೆ ಅಲ್ಲಿಯ ವಿಚಾರ ಏನಿದೆಯೆಂಬುದು ಹೊರಗೆ ಬರುತ್ತವೆಂದು ಪುನಃ ಅಲ್ಲಿಗೆ ಅವರನ್ನೇ ಕಳುಹಿಸಿಕೊಟ್ಟಿಲ್ಲ. ಆದ್ದರಿಂದ ಆ ಕಾಲದಲ್ಲಿ ಆಫೀಸರು ಯಾರು ಇದ್ದರು, ಏಕೆ ಆ ರೀತಿ ಮಾಡಿದರು, ಕೆಲಸಗಳು ನಿಲ್ಲುವುದಕ್ಕೆ ಕಾರಣವೇನು, ಏಕೆ ಬಾವಿಗಳು ಪೂರ್ತಿ ಮಾಡಲಿಲ್ಲ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ವರದಿಯನ್ನು ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇ ನೆ. 97 ಬಾವಿಗಳನ್ನು ತಾಲ್ಲೂಕ್ ಬೋರ್ಡಿನ ಮೂಲಕ ಮಾಡಿ ಎಂದು ಅಸಿಸ್ಟೆಂಟ್ ಡೆವಲಪ್‌ಮೆಂಟ್ ಕಮಿಷನರು ಹೇಳಿದರು. ಇದರಿಂದ 114 ಸಾವಿರ ಉತ್ಪತ್ತಿ 117 ಸಾವಿರ ಖರ್ಚು ಆಗಿ 3 ಸಾವಿರ ಷಾರ್ಟೇಜ್ ಇದೆ. ಇಂಥಾದ್ದನ್ನು ಮಾಡುವುದಕ್ಕೆ ತಾಕತ್ ಇಲ್ಲ. ಆದ್ದರಿಂದ ಕೂಡಲೆ ಸ್ಪೆಷಲ್ ಗ್ರ್ಯಾಂಟ್ ಕೊಟ್ಟು ಈ 97 ಬಾವಿಗಳನ್ನು ಪೂರ್ತಿ ಮಾಡಿಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

2.30. P.M.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ನಮ್ಮ ಮುಂದಿರುವ ಈ ಅತಿ ಮುಖ್ಯವಾದ ವ್ಯವಸಾಯ, ಪಶುಪಾಲನೆ ಮತ್ತು ಗ್ರಾಮಾಭಿವೃದ್ಧಿ, ಈ ಶಾಖೆಗಳಿಗೆ ಸಂಬಂದಪಟ್ಟ ಬೇಡಿಕೆಗಳ ವಿಚಾರದಲ್ಲಿ ಈಗಾಗಲೇ ಮಾನ್ಯ ಸ್ನೇಹಿತರು ಅನೇಕರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಈ ಬಾಬುಗಳ ಚರ್ಚೆಗೆ ಗೊತ್ತು ಮಾಡಿರುವ ಕಾಲ ಅತ್ಯಲ್ಪವೆಂದು ಹೇಳಲಿಚ್ಛಿಸುತ್ತೇನೆ. ನಮ್ಮ ದೇಶದ ಮುಖ್ಯ ಕಸುಬು ವ್ಯವಸಾಯ. ಆದರೆ ಇದಕ್ಕೆ ಒದಗಿಸಿರುವ ಹಣ, ಈ ಇಲಾಖೆ ಮಾಡುತ್ತಿರುವ ಕೆಲಸ ರೈತನಿಗೆ ಎಳ್ಳಷ್ಟು ಉಪಯೋಗವಾಗದೇ ಇರುವ ಹಾಗೆ ಆಗುತ್ತದೆ. ಬಹಳ ಅನುಭವಸ್ಥರೆಂದು ಹೇಳಿಕೊಳ್ಳತಕ್ಕ ಅಧಿಕಾರಿಗಳು ಕೆಲವರನ್ನಿಟ್ಟಿದ್ದಾರೆ. ಆದರೆ ಈ ಕಸುಬಿನಿಂದ ಬಂದವರಲ್ಲ. ಏನೋ ಪಾಸು ಮಾಡಿರುತ್ತಾರೆ, ಎಲ್ಲೋ ಇರುತ್ತಾರೆ. ಇವರಿಗೆ ರೈತನ ಕಷ್ಟ ಗೊತ್ತಿಲ್ಲ. ಹಳ್ಳಿಗಳಿಗೆ ಹೋಗಿ ರೈತರ ಕಷ್ಟವನ್ನು ನೋಡದೇ ಇದ್ದರೆ, ರೈತ ಬದುಕುವುದು ಹೇಗೆ? ಸಾಮಾನ್ಯ ಚರ್ಚೆ ಆಗುವಾಗ ಕೆಲವರು ಮಾನ್ಯ ಮಿತ್ರರು ಒಂದು ಸಲಹೆ ಯನ್ನು ಕೊಟ್ಟರು. ಹಾರ್ಟಿಕಲ್ಚರ್ ಮತ್ತು ಅಗ್ರಿಕಲ್ಚರ್ ಈ ಎರಡು ಇಲಾಖೆಗಳೂ ಒಂದೇ ಆಗ ಬೇಕೆಂದು ಸಲಹೆ ಮಾಡಿದರು. ಇದು ಸುತರಾಂ ಸರಿಯಿಲ್ಲ. ಬೇರೆ ಬೇರೆ ಇಲಾಖೆಗಳಾಗಿ ಬೇರೆ ಬೇರೆ ಡೈರೆಕ್ಟರುಗಳಿರುವುದೇ ಸೂಕ್ತ. ಇದನ್ನೇ ಮುಂದುವರಿಸಿಕೊಂಡು ಬರಬೇಕೆಂದು ನಾನು ಹೇಳಲಿಚ್ಛಿಸುತ್ತೇನೆ. ಇಲ್ಲಿ ಬಾವಿಗಳಿಂದ ಆಹಾರವನ್ನು ಹೆಚ್ಚು ಬೆಳೆಯಬೇಕು. ಆದರೆ ಈ ಹೊತ್ತು ರೈತನಿಗೆ ಅವನೆಷ್ಟು ಕಷ್ಟಪಟ್ಟರೂ ಸರಿಯಾದ ಪ್ರತಿಫಲ ಸಿಕ್ಕದೆ ಅವನು ಹಿಂಜರಿಯಬೇಕಾಗಿದೆ. ಕಾಲ ಕ್ರಮೇಣ ಈ ವ್ಯವಸಾಯ ಕಸುಬನ್ನೇ ಬಿಟ್ಟು ಬೇರೆ ಕೈಗಾರಿಕೆಗಳಿರುವ ಪ್ರದೇಶಗಳಿಗೆ ಬಂದು

(ಶ್ರೀ ಟಿ. ಎಸ್. ಮಾದಪ್ಪ ಗೌಡ)

ದೊಡ್ಡ ಪಟ್ಟಣಗಳಿಗೆ ಸೇರಿಕೊಳ್ಳುವ ಸಂಭವ ಸಮೀಪದಲ್ಲೇ ಬರುತ್ತದೆಂದು ಭಾಸವಾಗುತ್ತದೆ. ಉತ್ತಮ ಬೀಜ ಕೊಡುವುದಕ್ಕೆ ಯಾರೋ ಕೆಲವರನ್ನು ಗೊತ್ತುಮಾಡುತ್ತಾರೆ. ಹಣದ ಆಸೆಗಾಗಿ ಸರಿಯಾದ ಬೀಜವನ್ನು ಅವರು ಆಯುವುದಿಲ್ಲ. ಸರ್ಕಾರದವರು ಪ್ರತಿಯೊಂದು ಅಭಿವೃದ್ಧಿ ಕ್ಷೇತ್ರದಲ್ಲಿಯೂ ತಮ್ಮದೇ ಆದ ಬತ್ತನೆ ಫಾರಮ್‌ಗಳನ್ನಿಟ್ಟುಕೊಳ್ಳಬೇಕು. ಅಲ್ಲಿ ಹೆಚ್ಚು ಹೆಚ್ಚಾಗಿ ಬತ್ತನೆಯ ಕಾಳುಗಳನ್ನು ತಯಾರು ಮಾಡಿ ರೈತನಿಗೆ ಹಂಚುವ ವ್ಯವಸ್ಥೆಯನ್ನು ಅವರೇ ಮಾಡಬೇಕಾಗಿದೆ.

ರಾಸಾಯನಿಕ ಗೊಬ್ಬರಗಳನ್ನು ಕೊಡುತ್ತಿದ್ದಾರೆ. ಪದೇ ಪದೇ ಒಂದೇ ಸಮನಾಗಿ ಈ ಗೊಬ್ಬರವನ್ನು ಉಪಯೋಗಿಸಿದರೆ ಭೂಸಾರ ಕಡಮೆಯಾಗುತ್ತದೆ, ಮುಂದೆ ಕಾಲಕ್ರಮದಲ್ಲಿ ಬೆಳೆ ರೈತನ ಜಮೀನಿನಲ್ಲಿ ಬೆಳೆಯುವುದು ಕಡಮೆಯಾಗಿ ಅವನ ಕ್ಷೇಹತ್ತುವುದು ದುರ್ಲಭವೆಂದು ಅನೇಕರು ಹೇಳುತ್ತಾರೆ. ಇದನ್ನು ಶಾಸ್ತ್ರೀಯವಾಗಿ ಶೋಧನೆಮಾಡಿ, ಒಂದುವೇಳೆ ಈ ಅಭಿಪ್ರಾಯದಲ್ಲಿ ನಿಜವಿದ್ದರೆ ಇದನ್ನು ಹೋಗಲಾಡಿಸಲು, ಗೊಬ್ಬರದ ಕೊರತೆಯೇನಿದೆಯೋ ಅದನ್ನು ಬೇರೆ ರೀತಿ ತುಂಬಲು ಇಲಾಖೆಯವರು ಯೋಚನೆಮಾಡಬೇಕಾಗಿದೆಯೆಂದು ಹೇಳಲು ಇಷ್ಟಪಡುತ್ತೇನೆ.

ಪಶುಪಾಲನೆಯ ವಿಚಾರದಲ್ಲಿ ಹೇಳಿಕೊಳ್ಳಲು ಬೇಕಾದಷ್ಟಿದೆ. ಇವರು ಕೊಡತಕ್ಕ ಕೋಳಿ, ಕುರಿ, ಹೋರಿ ಇವುಗಳನ್ನು ಜನರಿಗೆ ಹಂಚುತ್ತಾರೆ. ಹೇಗೆ ಹಂಚುತ್ತಾರೆಂದರೆ, ಒಂದು ದೊಡ್ಡ ತಾಲ್ಲೂಕಿಗೆ ಒಂದೆರಡು ಹೋರಿಗಳನ್ನೂ ಎಂಟು ಹತ್ತು ಕುರಿಗಳನ್ನೂ ಕೊಟ್ಟರೆ ಅದರಿಂದ ಏನೋ ದೊಡ್ಡ ಕೆಲಸವನ್ನು ತಾವು ಮಾಡಿದೆವೆಂದು ಸರ್ಕಾರದವರು ಭಾವಿಸಿದ ಹಾಗಿದೆ. ಹಾಗೆ ಮಾಡುವುದಕ್ಕೆ ಬದಲು ಒಂದೊಂದು ಬ್ಲಾಕ್‌ಗೆ ಅಥವಾ ಡಿವಿಜನ್‌ಗೆ ಇಷ್ಟಿಷ್ಟು ಎಂದು ಡಿವಿಜನ್‌ವಾರ್ ಸರಿಯಾದ ರೀತಿ ವೆಟರಿನರಿ ಆಸ್ಪತ್ರೆಗಳಲ್ಲಿ ಮತ್ತು ಪಶುಗಳನ್ನು ಚೆನ್ನಾಗಿ ಸಾಕಿ ಅನುಭವವಿರುವವರನ್ನು ಗೊತ್ತುಮಾಡಿ ಸಹಾಯ ಧನವನ್ನು ಕೊಡುವುದರ ಮೂಲಕ ತಳಿ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ. ತಾಲ್ಲೂಕು ಬೋರ್ಡ್‌ಗಳಲ್ಲಿ ಪಶುಗಳನ್ನು ಕೊಂಡು ಕೊಡುವುದಕ್ಕಾಗಿ ಹಣವನ್ನು ಕೊಡುತ್ತೇವೆಂದು ಇದಕ್ಕಾಗಿ ಹಣವನ್ನೊದಗಿಸಿದ್ದಾರೆ. ಈ ಹಣವನ್ನು ವರ್ಷದ ಕೊನೆಯಲ್ಲಿ ಕೊಡುವುದರಿಂದ ಖರ್ಚುಮಾಡುವುದಕ್ಕಾಗದೆ ಅದು ಲ್ಯಾಪ್ಸ್ ಆಗುತ್ತದೆ. ಇದಕ್ಕೆ ಕಾರಣ ಈ ಹಣವನ್ನು ಎ. ಸಿ. ಬಿಲ್ ಮೇಲೆ ಡ್ರಾ ಮಾಡಿ ಪ್ರಾಣಿಗಳನ್ನು ಕೊಳ್ಳದೇ ಹೋದರೆ ರೈತನಿಗೆ ಕೊಡುವುದಕ್ಕಾಗುವುದಿಲ್ಲ. ಅವನಿಗೆ ಕೊಡದೆ ಕಾಂಟ್ರಿಬ್ಯೂಷನ್ ವಸೂಲು ಮಾಡುವುದಕ್ಕಾಗುವುದಿಲ್ಲ. ಈ ಕೆಲವು ಸಣ್ಣ ಕಾರಣಗಳಿಂದ ಎಷ್ಟು ಹಣವನ್ನೊದಗಿಸಿದರೂ ಅದು ಲ್ಯಾಪ್ಸ್ ಆಗತಕ್ಕ ಸಂದರ್ಭವಿರುವುದರಿಂದ ಸರ್ಕಾರದವರು ಈ ಸಂದರ್ಭದಲ್ಲಿರುವ ನಿಯಮಗಳನ್ನು ಸ್ವಲ್ಪ ಸಡಿಲ ಮಾಡಬೇಕೆಂದು ಸೂಚಿಸುತ್ತೇನೆ.

ಫಾರೆಸ್ಟ್ ಇಲಾಖೆಯ ವಿಷಯವನ್ನು ನಾನು ಹಿಂದೆ ಅನೇಕ ಸಾರಿ ಮಂತ್ರಿಗಳಿಗೆ ಹೇಳಿಕೊಂಡಿದ್ದೇನೆ. ಅರಣ್ಯ ಎಲ್ಲಿ ಹೆಚ್ಚಾಗಿರುತ್ತದೆ, ಎಲ್ಲಿ ಚೆನ್ನಾಗಿ ಬೆಳೆಸುವುದಕ್ಕೆ ಅವಕಾಶವಿರುತ್ತದೆ ಅಂಥ ಕಡೆ ಮುತುವರ್ಜಿಯಿಂದ ಕಾಪಾಡುವುದು ನ್ಯಾಯ. ನಾನು ಬಂದಿರತಕ್ಕ ಪ್ರದೇಶದಲ್ಲಿ ಹಂಗರು ಮೆಳೆಯೂ ಬೆಳೆಯಲು ಆಗದೇ ಇರುವ ಪ್ರದೇಶ. ಅಲ್ಲಿ ನೂರಾರು ಎಕರೆಗಳಲ್ಲಿ ಒಂದು ಗಿಡ ಕೂಡ ಇಲ್ಲದಿದ್ದರೂ ಅರಣ್ಯವೆಂದು ಇಟ್ಟುಕೊಂಡಿದ್ದಾರೆ. ರೈತರು ಅವರ ಸ್ವಂತ ಜಮೀನಿನಲ್ಲಿ ಬೆಳೆದು ತಮ್ಮ ಮನೆಯ ಉಪಯೋಗಕ್ಕೆ ಕತ್ತರಿಸಿ ತೆಗೆದುಕೊಂಡುಹೋದರೆ ಗಾರ್ಡುಗಳು ಟೌನ್ ಲಿಮಿಟ್‌ನಲ್ಲಿ ಕುಳಿತಿದ್ದು ಸೌದೆ ತರತಕ್ಕ ರೈತರಿಗೆ ಕಿರುಕುಳ ಕೊಡುತ್ತಾರೆ. ಅವರನ್ನು ಹಿಡಿದು ಗಾಡಿಯೊಂದಕ್ಕೆ 60-70 ರೂಪಾಯಿ ಜುಲ್ಮಾನೆ ಅವರಿಗೆ ಹಾಕಿಸಿರತಕ್ಕ ಅನೇಕ ಸಂದರ್ಭಗಳಿವೆ. ಮತ್ತು ಕೆಲವು ಸಂದರ್ಭಗಳಲ್ಲಿ ಯಾರಿಗೂ ಗೊತ್ತಾಗದೇ ಇರುವ ಹಾಗೆ ಬೇರೆ ರೂಪದಲ್ಲಿ ಅವರಿಂದ ಹಣವನ್ನು ವಸೂಲು ಮಾಡಿಕೊಂಡು ಕಿರುಕುಳ ಕೊಡುತ್ತಿದ್ದಾರೆ. ಇದನ್ನು ಆದಷ್ಟು ಬೇಗ ತಪ್ಪಿಸಬೇಕು. ಕಾಡಿನ ಸೌದೆಗೂ ರೈತರ ಸ್ಥಳದಲ್ಲಿ ಬೆಳೆದ ಸೌದೆಗೂ ಬಹಳ ವ್ಯತ್ಯಾಸವಿರುತ್ತದೆ. ಕಂಡುಹಿಡಿಯಬಹುದು. ಈ ಬಗ್ಗೆ ಮಾನ್ಯ ಅರಣ್ಯ ಸಚಿವರು ತಕ್ಷಣ ಗಮನಕೊಟ್ಟು ರೈತರಿಗಾಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಹೇಳಲು ಇಷ್ಟಪಡುತ್ತೇನೆ.

ಇನ್ನು ಅಭಿವೃದ್ಧಿ ಇಲಾಖೆಗಳಲ್ಲಿ ಸುಮ್ಮನೆ ಇಲಾಖೆಗಳನ್ನು ನೂರಾರು ಜನ ಕೆಲಸಗಾರರನ್ನು ನೇಮಕ ಮಾಡಿದ್ದಾಗಿದೆಯೇ ವಿನಾ ಚೆನ್ನಾಗಿ ಅಭಿವೃದ್ಧಿ ಮಾಡುವುದಕ್ಕೆ ತಕ್ಕ ವಾತಾವರಣ ಕಲ್ಪಿತವಾಗಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ಸಹಕಾರವಿಲ್ಲ, ಸಂಪರ್ಕವಿಲ್ಲ. ಹಾಗಿಲ್ಲದಿರುವುದರಿಂದ ಪ್ರತಿಯೊಬ್ಬನೂ ತನ್ನದೇ ಮೇಲೆಂದು ತಿಳಿದುಕೊಂಡು ಅಭಿವೃದ್ಧಿ ಯೋಜನೆಗಳಿಂದ ನಾವೇನು ನಿರೀಕ್ಷಿಸಿದ್ದೇವೋ ಅದಾಗುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಬಾವಿಗಳ ವಿಚಾರವನ್ನು ಮಾನ್ಯ ಮಿತ್ರರಾದ ನಂಜೇಗೌಡರು ಹೇಳಿದರು. ನಮ್ಮ ಕಡೆಯೂ ಕೂಡ ಬಹಳ ಬಾವಿಗಳಿಗೆ ಹಣ ಕೊಟ್ಟಿದ್ದಾರೆ. ಆದರೆ ಪೂರ್ಣವಾಗಿರುವ ಬಾವಿಗಳೆಷ್ಟು ಎಂದು ನೋಡಿದರೆ ಬಹಳ ಸಂಕಟವಾಗುತ್ತದೆ. ಇಂಥ ಒಂದು ಸಂದರ್ಭದಲ್ಲಿ ಸರ್ಕಾರದ ಹೇಳಿಕೆ ಕೇಳಿಕೆಗಳನ್ನು ನಾವು ನೋಡುವುದಾದರೆ ಶಾಲೆಗಳನ್ನು, ಆಸ್ಪತ್ರೆಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಬೇಕೆಂದಿದ್ದೀರಿ, ಇನ್ನೂ ಏನೇನಿದೆಯೋ ಅದೆಲ್ಲವನ್ನೂ ತಾಲ್ಲೂಕ್ ಬೋರ್ಡಿಗೆ ವಹಿಸುವುದಾದರೆ ನೀವು ಮಾಡುವುದಾದರೂ ಏನು ?— ಕೆಲವು ಖಾಸಗಿ ಸಂಸ್ಥೆಗಳಿವೆ. ಅವು ಹೇಗೆ ಕೆಲಸ ಮಾಡುತ್ತಿವೆ, ಅವುಗಳಲ್ಲೇನು ಲೋಪ ದೋಷಗಳಿವೆ ಎಂದು ಆಡಿಟ್ ಇಲಾಖೆಯನ್ನು ವಿಚಾರ ಮಾಡಿದರೆ ಸ್ವಲ್ಪ ಮಟ್ಟಿಗೆ ಅರ್ಥವಾಗುತ್ತದೆ. ಖಾಸಗಿ ಜನ ಅಧಿಕಾರ ಬೇಕೆಂದು ಹೇಳುವುದು ಸ್ವಾಭಾವಿಕವಾದರೂ ಅಧಿಕಾರವನ್ನು ಧರ್ಮದಿಂದ ನಿರ್ವಂಚನೆಯಿಂದ ನಿರ್ವಹಿಸುವ ಶಕ್ತಿ ನಮಗೆ ಬಂದಿಲ್ಲ ಎಂದು ಹೇಳುವುದಕ್ಕೆ ನಾನಂತೂ ನಾಚಿಕೆ ಪಟ್ಟುಕೊಳ್ಳುವುದಿಲ್ಲ. ನಾವು ಪೂರ್ಣವಾಗಿ ತಯಾರಾಗುವವರೆಗೆ ಈ ಎಲ್ಲಾ ಬಾಬಿನ ಕೆಲಸಗಳೂ ಸರ್ಕಾರದ ಹತೋಟಿಯಲ್ಲೇ ನಡೆಯಬೇಕು ಎಂದು ನನಗನ್ನಿಸುತ್ತದೆ. ಮತ್ತು ಈ ಬಾವಿ ಕೆಲಸವನ್ನು ಸರ್ಕಾರದ ಇಲಾಖೆಯವರೇ ವಹಿಸಿಕೊಂಡು ಒಂದೊಂದು ಬಾವಿಯಿಂದ 10-20 ಎಕರೆಗಳ ಸಾಗುವಳಿಯಾಗಿ 5-6 ರೈತರಿಗೆ ಅನುಕೂಲವಾಗುವ ಹಾಗೆ ಸರಿಯಾದ ಸ್ಥಳದಲ್ಲಿ ಬಾವಿ ತೆಗೆಸಿ, ಅಲ್ಲಿಗೆ ವಿದ್ಯುಚ್ಛಕ್ತಿ ಒದಗಿಸಿ, ಆ ಬಗ್ಗೆ ಖರ್ಚಾದ ಹಣವನ್ನು ಕಾಂಟ್ರಿಬ್ಯೂಷನ್ ವಗೈರೆ ರೂಪದಲ್ಲಿ ರೈತರಿಂದ ವಸೂಲು ಮಾಡುವುದು ಸೂಕ್ತ ಎಂದು ನನಗನ್ನಿಸುತ್ತದೆ. ಈಗ ಅನುಸರಿಸುತ್ತಿರುವ ಕ್ರಮವನ್ನೇ ಮುಂದುವರೆಸಿದರೆ ಶತಮಾನಗಳಾದರೂ ನಮಗೆ ಅನುಕೂಲ ಪರಿಸ್ಥಿತಿ ಬರುವುದಿಲ್ಲ.

ಇನ್ನು ಸಹಕಾರಿ ಇಲಾಖೆ ತೆಗೆದುಕೊಂಡರೆ ಈ ದೇಶದ ಅಳಿವು ಉಳಿವೆಲ್ಲವೂ ಕೂಡ ಈ ಸಹಕಾರದಲ್ಲೇ ಇದೆ ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಏನಿದೆ ಅಲ್ಲಿ ಈಗ ರೈತರಿಗೆ ಸಾಲ ಸರಿಯಾಗಿ ಸಿಕ್ಕುವುದಕ್ಕೆ ನಾನಾ ಅಡ್ಡಿ ಆತಂಕಗಳಿವೆ. ಅದರಲ್ಲಿಯೂ ಹಿಂದೆ ಹೇಳಿದ ಹಾಗೆ ನಾನ್‌ಅಫಿಷಿಯಲ್ಸ್ ಕಾರ್ಯದರ್ಶಿಗಳಾಗಿರುವ ಹತ್ತಾರುಕಡೆ ಪರಿಶೀಲಿಸಿ ಇದನ್ನು ತಿಳಿದಕೊಳ್ಳಲಾಗಿದೆ. ಅಲ್ಲಿ ಮಾಮೂಲು ತೆಗೆದುಕೊಳ್ಳುವ ಪದ್ಧತಿ ಸಹ ಇದೆ, ಒಂದು ಸಾವಿರ ರೂಪಾಯಿಗಳ ರಿಕಾರ್ಡಾದರೆ 150ರಿಂದ 250 ರೂಪಾಯಿಗಳವರೆಗೆ ಮಾಮೂಲು ತೆಗೆದುಕೊಳ್ಳುವ ಪದ್ಧತಿಯಿದೆ. ಅಲ್ಲಿ ಕೆಲದರು ಬಹಳ ಖದೀಮರಿರುತ್ತಾರೆ. ಆದುದರಿಂದ ಅದರ ವಿಚಾರದಲ್ಲಿ ಸ್ವಲ್ಪ ಹೆಚ್ಚು ಮುತವರ್ಜಿ ಅತ್ಯಾವಶ್ಯಕ. ಒಬ್ಬ ಹೆಬ್ಬೆಟ್ಟಿನ ಗುರ್ತು ಹಾಕಲು ಒಂದು ಬೆರಳನ್ನು ಉಪಯೋಗಿಸುತ್ತಿರುವಾಗ ಅಲ್ಲಿ ಹತ್ತು ಬೆರಳನ್ನೂ ಉಪಯೋಗಿಸುವ ಮಹನೀಯರಿದ್ದಾರೆ. ಕೆಲವು ಸೊಸೈಟಿಗಳ ರಿಕಾರ್ಡನ್ನು ತಾವು ನೋಡಬಹುದು. ಇದನ್ನು ಸುಮ್ಮನೆ ಉತ್ಪ್ರೇಕ್ಷೆ ಮಾಡಲು ಹೇಳುತ್ತಿದ್ದೇನೆಂದು ಭಾವಿಸಬಾರದು. ಇದನ್ನು ಅಗತ್ಯವಾಗಿ ಪರಿಶೀಲಿಸಬೇಕು. ಇಂಥ ನಿದರ್ಶನಗಳನ್ನು ನೋಡಿ ಆದಷ್ಟು ಇಂಥ ಸೊಸೈಟಿಗಳಿಗೆ ನೀವು ಸರ್ಕಾರಿ ಸೊಸೈಟಿ ಇನ್‌ಸ್ಪೆಕ್ಟರುಗಳನ್ನೇ ನೇಮಿಸಬೇಕು ನಿಮ್ಮ ಹಿಡಿತದಲ್ಲಿರುವವರನ್ನೇ ಕಾರ್ಯದರ್ಶಿಗಳಾಗಿ ನೇಮಿಸಬೇಕು ಎಂದು ಹೇಳುತ್ತೇನೆ.

ಸಂಸ್ಥೆಗಳಿಗೆ ಈಗ ನಾಮಿನೇಷನ್ ಮಾಡುವ ಪದ್ಧತಿಯಿದೆ. ಅದನ್ನು ತೆಗೆದರೆ ಒಳ್ಳೆಯದು. ಏಕೆಂದರೆ ಒಂದು ಸೊಸೈಟಿ ನನಗೆ ಸಂಬಂಧಪಟ್ಟಿರುವುದರಿಂದ ಅನುಭವದಿಂದ ಹೇಳುತ್ತಿದ್ದೇನೆ. ಜನರಲ್‌ಬಾಡಿ ಆದ ನಾಲ್ಕುತಿಂಗಳ ಮೇಲೆ, ಬೇರೊಂದು ಸಮಿತಿ ವ್ಯವಸ್ಥಿತವಾಗಿ ಕಾನೂನು ಪ್ರಕಾರ ಫಾರಂ ಆದಮೇಲೆ ಯಾವುದೋ ಒಂದು ದಿವಸ ಯಾರೋ ಹೇಳಿದರು ಎಂದು ಯಾರನ್ನೋ ನಾಮಿನೇಷನ್ ಮಾಡುವುದು ಸರಿಯಲ್ಲ. ಇದರ ಕಷ್ಟ ಅನುಭವಿಸಿದವರಿಗೆ ಗೊತ್ತು. ಈ ಪದ್ಧತಿಯನ್ನು ಬೇಗ ತೆಗೆಯಬೇಕು. ಇದಿರುವವರೆಗೆ ಹಳ್ಳಿಯಲ್ಲಿ ಇಲ್ಲದಿರುವ ಕಿತಾಪತಿಗೆ ಮತ್ತು ರಾಜಕೀಯಕ್ಕೆ ಅವಕಾಶವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಎನ್. ಇ. ಎಸ್. ನಲ್ಲಿ ಅಗ್ರಿಕಲ್ಚರಲ್ ಎಕ್ಸ್‌ಟೆನ್ಷನ್ ಆಫೀಸರು ಮುಂತಾದವರಿದ್ದಾರೆ. ಹಾಗೆಯೇ ಲೇಡಿ ಸೋಷಿಯಲ್ ಆರ್ಗನೈಜರುಗಳಿದ್ದಾರೆ. ಅವರ ತೊಂದರೆ ಹೇಳಲು ಬಹಳ ಸಂಕಟವಾಗುತ್ತದೆ. ನಮ್ಮಲ್ಲಿ ಬಹಳ ವಿತರಣೆಯಿಂದ ಯಶಸ್ವಿಯಾಗಿ ಕೆಲಸ ಮಾಡುವ ಮಹಿಳೆಯರು ಕೂಡ ಇದ್ದಾರೆ. ಈ ವಿಭಾಗದಲ್ಲಿ, ಬ್ಲಾಕ್ ಏರಿಯಾದಲ್ಲಿರುವ ಹೆಣ್ಣುಮಕ್ಕಳಿಗೆ ಬಹಳ ಮಟ್ಟಿಗೆ ಕಿರುಕುಳವಿದೆ. ಇತರರು ಈ ಮಹಿಳಾ ನೌಕರರನ್ನು ಸರಿಯಾಗಿ ನೋಡುವುದಿಲ್ಲ. ಮಹಿಳೆಯರಲ್ಲಿ ಕೆಲವು ನೌಕರರು ಪದವೀಧರರು ಸಹ ಆಗಿರುತ್ತಾರೆ. ತಿಂಗಳಲ್ಲಿ ನಾಲ್ಕಾರು ದಿವಸ ಸಂಚಾರ ಮಾಡಬೇಕಾಗುತ್ತದೆ. ಆದುದರಿಂದ ಹೆಂಗಸರಿಗೇ ಬೇರೆ ಏರ್ಪಾಡು ಮಾಡಬೇಕು. ಅವರನ್ನು ಬೇರೆ ಇಟ್ಟು ಅವರ ಮೇಲ್ವಿಚಾರಣೆಗೆ ಜಿಲ್ಲಾ ಮಟ್ಟದಲ್ಲಿ ಮಹಿಳಾಧಿಕಾರಿಗಳನ್ನು ನೇಮಕ ಮಾಡುವುದು ಬಹಳ ಸೂಕ್ತ. ಆದಷ್ಟು ಬೇಗ ಸರ್ಕಾರ ಈ ಕಡೆ ಗಮನ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಶ್ರೀ ಟಿ. ಎಸ್. ಪಾದಪ್ಪ ಗೌಡ)

ಗ್ರಾಮಾಂತರ ಪ್ರದೇಶಗಳಿಗೆ, ಕುಡಿಯುವ ನೀರಿನ ಬಾವಿಗಳಿಗೆ ಲೋಕಲ್ ಕಂಟ್ರಿಬ್ಯೂಷನ್ ಕೊಡಬೇಕೆಂದು ಕೇಳುತ್ತೀರಿ. ಅನೇಕ ಕಡೆ ಕುಡಿಯುವುದಕ್ಕೆ ನೀರು ಇಲ್ಲದೇ ಇರತಕ್ಕ ಸನ್ನಿವೇಶಗಳು ಇವೆ. ಕಾಂಟ್ರಿಬ್ಯೂಷನ್ ಕೊಡುವುದಿಲ್ಲ ಎಂದು ಹೇಳಿ ನೀರಿನ ಬಾವಿಗಳನ್ನು ಕೊಡದಿದ್ದರೆ ದೇಶದ ಎಲ್ಲಾ ಪ್ರಜೆಗಳಿಗೂ ಕುಡಿಯುವ ನೀರಿನ ಸೌಕರ್ಯ ಒದಗಿಸಬೇಕೆಂಬ ಸರ್ಕಾರದ ಜವಾಬ್ದಾರಿ ಏನಿದೆ ಅದನ್ನು ಹೇಗೆ ನಿರ್ವಹಿಸಿದಂತಾಯಿತು ? ಎಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ ಅಂತಹ ಕಡೆ ಗ್ರಾಮಸ್ಥರಿಂದ ಯಾವುದೇ ವಿಧವಾದ ಕಾಂಟ್ರಿಬ್ಯೂಷನನ್ನು ಅಪೇಕ್ಷಿಸದೇ ಆದಷ್ಟು ಬೇಗ ಬಾವಿಗಳನ್ನು ಮಾಡಿಕೊಡಬೇಕೆಂದು ಹೇಳಿ ನಾನು ಬಹಳ ಒತ್ತಾಯ ಪೂರ್ವಕವಾಗಿ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಲೋಕಲ್ ಗ್ರಾಂಟ್ ಎಂದು ಹೇಳಿ ತಾಲ್ಲೂಕು ಬೋರ್ಡುಗಳಿಗೆ ಹಣ ಕೊಡುತ್ತಾ ಇದ್ದೀರಿ. ಇವತ್ತಿನ ರಾಜಕೀಯ ಸ್ಥಿತಿಯಲ್ಲಿ ಏನಾಗುತ್ತಾ ಇದೆ ಎಂದರೆ ಒಂದು ತಾಲ್ಲೂಕಿನಲ್ಲಿ ನಾಲ್ಕು ಗ್ರಾಮ ಪಂಚಾಯ್ತಿಗಳು ಇರುತ್ತವೆ. ಎಲ್ಲಾ ಪಂಚಾಯ್ತಿಗಳಿಗೂ ಒಂದು ಸಮವಾದ ರೀತಿಯಲ್ಲಿ ಹಣ ಹಂಚತಕ್ಕ ಏರ್ಪಾಡು ಮಾಡದೇ ಹೋದರೆ ಯಾರು ದಬಾದುಬಿ ಮಾಡುತ್ತಾರೆ, ವಶೀಲಿ ಬಾಜಿ ನಡೆಸುತ್ತಾರೆ ಅಂಥವರ ಪಾಲಿಗೆ ಹಣ ಸಿಕ್ಕಿ ಇತರರಿಗೆ ಸಿಕ್ಕುವ ಪ್ರಮೇಯ ಬರದೆ, ಅವರು ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಒಂದು ಹೇಳುವುದು ಉಂಟು. ಗ್ರಾಮಸ್ಥರು ಮುಂದೆ ಬರುವುದಿಲ್ಲ ನಾವೇನು ಮಾಡುವುದಕ್ಕಾಗುತ್ತದೆ ಎಂದು. ಮುಂದೆ ಬರುವಂತೆ ಮಾಡುವುದಕ್ಕೇ ಈ ಇಲಾಖೆಯನ್ನು ಇಟ್ಟಿದ್ದೀರಿ. ಹತ್ತಾರು ಜನ ಅಧಿಕಾರಿಗಳು ಇದ್ದಾರೆ, ಅವರಿಗೆ ಕೆಲಸವಾದರೂ ಏನು ? ಪ್ರತಿಯೊಂದು ಗ್ರಾಮದಲ್ಲೂ ಹೋಗಿ ಅಲ್ಲಿ ಏನು ಕೆಲಸ ಆಗಬೇಕು. ಆಯಾಯ ಪಂಚಾಯ್ತಿಗಳಿಗೆ ಸರ್ಕಾರದಿಂದ ಬರತಕ್ಕ ಹಣ ಪಾವತಿಯಾಗಿ ಹೇಗೆ ಕೆಲಸ ನಡೆಯಬೇಕೆಂದು ಅಪೇಕ್ಷೆ ಪಡುತ್ತೇವೆಯೋ ಆ ರೀತಿ ಕೆಲಸ ನಡೆಯುವಂತೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ.ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದೆ ಇರತಕ್ಕ ವ್ಯವಸಾಯ, ಪಶುಸಂಗೋಪನ, ಅರಣ್ಯ, ಗ್ರಾಮಾಂತರ ಅಭಿವೃದ್ಧಿ, ಎನ್. ಇ. ಎಸ್., ಸಹಕಾರ ಈ ಬಾಬುಗಳಿಗೆ ನನ್ನ ಪೂರ್ಣವಾದ ಬೆಂಬಲವನ್ನು ಕೊಟ್ಟು ನಾಲ್ಕು ಮಾತುಗಳನ್ನು ಹೇಳಲು ಬಯಸುತ್ತೇನೆ. ಸ್ವಾಮಿ, ದೇಶಕ್ಕೆ ಬೆನ್ನುಮೂಳೆಯಂತಿರುವವರು ರೈತರು. ರೈತರಿಂದಲೇ ದೇಶದ ಅಭಿವೃದ್ಧಿಯಾಗಬೇಕು ಎಂಬ ಮಾತನ್ನು ಇವತ್ತು ಒಪ್ಪಿಕೊಳ್ಳುತ್ತಾ ಇದ್ದೇವೆ. ಆದರೆ ಇವತ್ತು ನಮ್ಮ ದೇಶದಲ್ಲಿ ರೈತರ ಪರಿಸ್ಥಿತಿ ಹೇಗಿದೆ, ರೈತನ ಸಾಲಸೋಲಗಳ ಪರಿಸ್ಥಿತಿ ಹೇಗಿದೆ ಮತ್ತು ಅವನಿಗೆ ಸರಿಯಾದಂಥ ಸಹಾಯ ದೊರೆಯುತ್ತಾ ಇದೆಯೇ ಎಂಬುದನ್ನು ಪರಿಶೀಲನೆ ಮಾಡಿದರೆ ರೈತನ ಪರಿಸ್ಥಿತಿ ನಮ್ಮ ದೇಶದಲ್ಲಿ ಚಿಂತಾಜನಕವಾಗಿದೆ. ಯಾವ ಲಾಭವೂ ಇಲ್ಲದೇ, ಸ್ವಾರ್ಥ ತ್ಯಾಗ ಮಾಡತಕ್ಕ ರೈತ ವ್ಯವಸಾಯವನ್ನೇ ನಂಬಿರುತ್ತಾನೆ, ಅವನು ಅದರಿಂದಲೇ ಸಂಪಾದನೆ ಮಾಡಬೇಕು. ದೇಶದಲ್ಲಿ ಎಲ್ಲ ಜನರಂತೆ ಅವನೂ ಇರಬೇಕು, ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಮನೋಭಾವ ಇದ್ದಂಥ ಆ ರೈತ ತನ್ನ ಕಸಬನ್ನು ಬಿಟ್ಟು ಇತರ ಕಸಬುಗಳನ್ನು ಅವಲಂಬಿಸಿದ್ದೇ ಆದರೆ ದೇಶಕ್ಕೆ ಬಹಳ ಕಷ್ಟದ ಪರಿಸ್ಥಿತಿ ಉಂಟಾದೀತು ಎಂಬುದನ್ನು ನಾವೆಲ್ಲರೂ ಅರಿತುಕೊಂಡಿದ್ದೇವೆ. ರೈತ ಬೆಳೆದ ಆಹಾರ ಧಾನ್ಯಗಳಿಗೆ ಸರಿಯಾದ ಒಂದು ಬೆಲೆ ಇಲ್ಲ. ಈ ವರ್ಷ ಈ ಬೆಲೆಗಳು ವಿಪರೀತ ಮೇಲಕ್ಕೆ ಹೋಗುತ್ತಾ ಇರತಕ್ಕ ಸಮಯದಲ್ಲಿ ಇದರಿಂದ ದೇಶದ ಆಹಾರದ ಕೊರತೆಯುಂಟಾದೀತು ಎಂದು ಹೇಳಿ ಬೆಲೆಯನ್ನು ತಡೆದು ಹಿಡಿದಿದ್ದೇವೆ. ರೈತನಿಗೆ ಸರಿಯಾದ ಬೆಲೆ ಸಿಕ್ಕದೆ ತೊಂದರೆಯಾಗಿರತಕ್ಕ ವಿಷಯ ಸರ್ಕಾರದವರ ಪರ್ಯಾಲೋಚನೆಗೆ ಬಂದು ಸೊಸೈಟಿಗಳ ಮುಖಾಂತರ ಅವನು ಬೆಳೆದ ಧಾನ್ಯವನ್ನು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಅವನು ಬೆಳೆದ ಧಾನ್ಯವೆಲ್ಲಾ ಬಹುಮಟ್ಟಿಗೆ ವ್ಯಾಪಾರಗಾರರ ಕೈಗೆ ಹೋಗತಕ್ಕ ಪರಿಸ್ಥಿತಿ ಬಂದಿದೆ. ಅದನ್ನು ನಮ್ಮ ಸರ್ಕಾರ ಅರಿತುಕೊಂಡೇ ಗೋಡೌನ್‌ಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ಮಾಣಮಾಡಿ ರೈತನು ಬೆಳೆದಂಥ ಬೆಳೆಯನ್ನು ತಾವೇ ತೆಗೆದುಕೊಳ್ಳುವುದಕ್ಕೂ ಕೂಡ ಒಂದು ಅವಕಾಶವನ್ನು ಮಾಡಿಕೊಂಡಿದ್ದಾರೆ. ರೈತ ಎಷ್ಟೋ ಕಂದಾಯವನ್ನು ದೇಶಕ್ಕೆ ಕೊಡಲಿ, ಅವನು ಎಷ್ಟೋ ಸೇವೆಯನ್ನು ಸಲ್ಲಿಸಲಿ ಅಕ್ಷರಸ್ಥನಲ್ಲ. ಸರಿಯಾಗಿ ಹೇಳುವುದಾದರೆ ಸಾವಿರಾರು ರೂಪಾಯಿ ಭೂಕಂದಾಯ ಕೊಡತಕ್ಕ ಒಬ್ಬ ರೈತ ತಾನು ಕೊಡಬೇಕಾಗಿರತಕ್ಕ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ಫಾರಂನಲ್ಲಿ ಭರ್ತಿಮಾಡಿ ಕೊಡಬೇಕಾದರೆ ಅವನು ಪಡತಕ್ಕ ಪಾಡು ನೋಡಿದರೆ ದುಃಖವಾಗುತ್ತದೆ. ಎಷ್ಟೋ ಜನಗಳ ಹತ್ತಿರ ಹೋಗಿ ಮಾತನಾಡತಕ್ಕ ಸಮಯದಲ್ಲಿ ಅದನ್ನು ನೋಡಿದ್ದೇನೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ವಸೂಲು ಮಾಡುವಾಗ

1959-60, 1960-61; 1961-62 ಈ ಮೂರು ವರ್ಷದ ಇಕ್ಸ್‌ಕಂಟ್ಯಾಕ್ಟ್ಸ್ ಒಂದೇವಾರಿ ಕೊಡಬೇಕೆಂದಾಗ ರೈತ ಎಂಥಾ ಪೇಚಾಟಕ್ಕೆ ಸಿಕ್ಕಿದ್ದ ಎಂಬುದನ್ನು ನೋಡಿ ತಿಳಿದುಕೊಂಡಿದ್ದೇನೆ. ಇಂಥಾ ಅಂಕಿ ಅಂಶ ಒದಗಿಸಬೇಕು, ಲೆಕ್ಕ ಕೊಡಬೇಕು ಎನ್ನುವ ಪರಿಸ್ಥಿತಿಯಲ್ಲಿ ನಿಸ್ಸಹಾಯಕನಾದ ರೈತನಿಗೆ ಸರ್ಕಾರದವರು ನೆರವನ್ನು ಕೊಡುವುದು ಬಹಳ ಅಗತ್ಯ ಎಂದು ನಾನು ನಂಬಿಕೊಂಡಿದ್ದೇನೆ. ಈ ದೇಶದಲ್ಲಿ ವ್ಯವಸಾಯವೇ ಬಹಳ ಪ್ರಮುಖ್ಯವಾದದ್ದು. ವ್ಯವಸಾಯ ಎಂದರೆ ಆಹಾರ ಧಾನ್ಯಗಳು ಅಷ್ಟೇ ಅಲ್ಲದೆ ಇನ್ನು ಅನೇಕ ಕಮರ್ಷಿಯಲ್ ಬೆಳೆಗಳನ್ನು ಬೆಳೆಯುತ್ತಾರೆ. ಉದಾಹರಣೆಗೆ ಹೇಳುವುದಾದರೆ ಕಾಫಿ, ಏಲಕ್ಕಿ ಮತ್ತು ಟೀ ಅಲ್ಲದೆ ಅಡಿಕೆ, ತೆಂಗು ಇವುಗಳನ್ನೆಲ್ಲಾ ಬೆಳೆಯುತ್ತಾ ಇದ್ದಾರೆ. ಇಂಥಾ ರೈತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಇವತ್ತು ನಾವು ನೋಡಬೇಕಾಗಿದೆ. ಸರ್ಕಾರದವರು ವಿಧಿಸಿರತಕ್ಕ ಮಿನಿಮಂ ವೇಜಸ್‌ನ್ನು ಕೊಡಲೇಬೇಕಾಗಿದೆ. ಇದಕ್ಕೆ ಆಗತಕ್ಕ ಗೊಬ್ಬರದ ಪರಿಸ್ಥಿತಿ ಹೇಗಿದೆ ಎಂದರೆ ಒಂದು ಟನ್ ಗೊಬ್ಬರಕ್ಕೆ 100-120 ರೂಪಾಯಿ ಇದ್ದದ್ದು ಈ ದಿನ 500 ರೂಪಾಯಿಗೆ ಏರಿದೆ. ಫ್ಯಾಕ್ಟರಿಗಳವರು ಮಾಡತಕ್ಕ ಉತ್ಪನ್ನ ಮತ್ತು ಅವರು ಕೂಲಿಯವರಿಗೆ ಕೊಡತಕ್ಕ ಸಂಬಳವನ್ನು ನೋಡಿದರೆ ರೈತರ ಸ್ಥಿತಿ ಯಾವುದಕ್ಕೂ ಹೋಲಿಸುವಂತಿಲ್ಲ. ರೈತ ಆಹಾರ ಉತ್ಪನ್ನ ಮಾಡಿ, ಸುಖವಾದ ಜೀವನ ಮಾಡತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ದೇಶದ ಆಹಾರ ಸಂಪತ್ತನ್ನು ಹೆಚ್ಚಿಸತಕ್ಕ ರೈತರಿಗೆ ತಮ್ಮ ಸಹಾಯವನ್ನು ನೀಡಬೇಕೆಂದು ಹೇಳುತ್ತಾ ಇದ್ದೇನೆ. ಹಾಗೆಯೇ ರೈತರಿಗೆ ನಮ್ಮ ಸರ್ಕಾರದವರು ಅವರಿಗೆ ತುಂಬಾ ಉಪಕಾರವಾಗತಕ್ಕ ವಿದ್ಯುಚ್ಛಕ್ತಿ, ಪಂಪು ಸೆಟ್ಟುಗಳಲ್ಲಿ ಒದಗಿಸಿ ನೀರಿನ ಸೌಕರ್ಯ ಮಾಡಿಕೊಡಬೇಕು. ಮಲೆನಾಡಿನ ಪರಿಸ್ಥಿತಿ ಹೇಳುವುದಾದರೆ ವಿದ್ಯುಚ್ಛಕ್ತಿ ಪಂಪುಗಳಿಂದ ರೈತನಿಗೆ ಅಷ್ಟು ಅನುಕೂಲವಾದ ಹಾಗೆ ಇಲ್ಲ. ತುಂಗಭದ್ರಾ, ಹೇಮಾವತಿ, ಯಗಚಿ ನದಿಗಳಿದ್ದರೂ ಕೂಡ ಮೇಲ್ಭಾಗದಲ್ಲಿ ಹುಟ್ಟಿದ ನದಿಗಳು ಕೆಳಭಾಗದಲ್ಲಿ ಹರಿಯುದೇ ಇರುವುದರಿಂದ ಪಂಪ್‌ಸೆಟ್ಟುಗಳನ್ನು ಹಾಕದೇ ಇದ್ದರೆ ವ್ಯವಸಾಯ ಮಾಡುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಮಲೆನಾಡು ಪ್ರದೇಶಗಳಲ್ಲಿ ಪೂರ್ವಕಾಲದಲ್ಲಿ ನಿರ್ಮಾಣವಾದ ಅನೇಕ ಕೆರೆಗಳು ಇವೆ. ಮೊನ್ನೆ ಪ್ರಶ್ನೆ ಕೇಳಿದಾಗ ಪೂರ್ವಕಾಲದ ಅಯ್ಯನಕೆರೆ ಹಾಳಾಗುತಾ ಇದೆ ಎಂದು ಹೇಳಿದರು. ಬಯಲು ಸೀಮೆಯಲ್ಲಿರತಕ್ಕ ಕೆರೆಗಳಿಗೂ ಮಲೆ ಸೀಮೆಯ ಕೆರೆಗಳಿಗೂ ಬಹಳ ವ್ಯತ್ಯಾಸವಿದೆ. ಮಲೆನಾಡಿನ ಕೆರೆಗಳಿಗೆ ಏರಿ ಹಾಕಿದರೆ ಪ್ರಯೋಜನ ಆಗುವುದಿಲ್ಲ. ಹೂಳು ತೆಗೆಸಬೇಕು. ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ 1 ಲಕ್ಷ ಎಕರೆಯಷ್ಟು ರಬ್ಬರು ಬೆಳೆಯತಕ್ಕ ಪ್ರದೇಶ ಇದೆ. ನಮ್ಮ ಸರ್ಕಾರದವರು ಅದನ್ನು ಮೊದಲು ಪರಿಶೀಲನೆ ಮಾಡಿ ಬಹಳ ಆದಾಯ ಬರತಕ್ಕ, ಪರದೇಶಗಳಿಗೆ ಕಳುಹಿಸತಕ್ಕ, ರಬ್ಬರ್ ಬೆಳೆಸತಕ್ಕ ಬೆಳೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಪ್ರಾರ್ಥನೆಮಾಡಿ ಕೊಳ್ಳುತ್ತೇನೆ.

ರೈತನ ವ್ಯವಸಾಯಕ್ಕೆ ಅನುಕೂಲವಾದ ಪಶುಸಂವರ್ಧನದ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಪಶುಪಾಲನೆ ಅಭಿವೃದ್ಧಿಯಾಗಬೇಕಾದರೆ ರೈತ ತೃಪ್ತಿಯಿಂದಿರಬೇಕು. ಉದಾಹರಣೆಗೆ ಹೇಳುವುದಾದರೆ ಆಹಾರ ಧಾನ್ಯಗಳಾಗಿರತಕ್ಕ, ಬತ್ತ, ರಾಗಿ ಮತ್ತು ಜೋಳ, ಕಮರ್ಷಿಯಲ್ ಕ್ರಾಪ್ಸ್ ಆಗಿರತಕ್ಕ ಏಲಕ್ಕಿ, ಕಾಫಿ, ಟೀ, ಮೆಣಸು, ರಬ್ಬರ್, ಕಿತ್ತಲೆ ಹಣ್ಣು, ಮಾವು, ನಿಂಬೇ, ಹೇರಳೆ ಮೊದಲಾದ ಸಮೃದ್ಧಿಯಾಗಿ ಫಲ ಬಿಡತಕ್ಕ ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಪ್ರೋತ್ಸಾಹ ಕೊಡಬೇಕಾದರೆ ದೇಶದಲ್ಲಿ ಪರಿಣತರಾದ ರೈತರನ್ನು ಸರ್ಕಾರದವರು ತಯಾರು ಮಾಡುವುದು ಬಹಳ ಮುಖ್ಯ. ಎಷ್ಟೋ ಜನ ವಿದ್ಯಾಭ್ಯಾಸ ಮಾಡಿದವರು ಸರ್ಕಾರಿ ನೌಕರಿಗಳಿಗೆ ಬರುತ್ತಾರೆಯೇ ಹೊರತು ವ್ಯವಸಾಯಕ್ಕೆ ಗಮನ ಕೊಡುತ್ತಿಲ್ಲ. ಆದ್ದರಿಂದ ರೈತರ ಮಕ್ಕಳಾಗಿ, ವ್ಯವಸಾಯದಲ್ಲಿ ಹೆಚ್ಚಿನ ಪರಿಶ್ರಮ ಹೊಂದಿ ವ್ಯವಸಾಯಕ್ಕೆ ಬೆಂಬಲ ಕೊಡುತ್ತಾ, ಹೆಚ್ಚು ಆಹಾರದ ಬೆಳೆಗಳನ್ನು ಬೆಳೆಯತಕ್ಕ ಜಿಲ್ಲೆಗಳಲ್ಲಿ ಒಂದಾದ ಚಿಕ್ಕಮಗಳೂರು ಜಿಲ್ಲೆಗೆ ಒಂದು ವ್ಯವಸಾಯದ ಕಾಲೇಜನ್ನು ಪ್ರಾರಂಭ ಮಾಡಿಕೊಡಬೇಕೆಂದು ನಮ್ಮ ಸರ್ಕಾರದ ವ್ಯವಸಾಯದ ಇಲಾಖೆಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ.

3-00 P.M.

ರೈತನಿಗೆ ಇರತಕ್ಕ ಮುಖ್ಯವಾದ ಮತ್ತೊಂದು ಕಸುಬೆಂದರೆ ಅದು ದನಕರುಗಳನ್ನು ಸಾಕುವುದು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಹೆಚ್ಚಿನ ಸಂಚಾರಮಾಡಿ ಹೆಚ್ಚಿನ ಪರಿಶ್ರಮ ಪಡೆದುಕೊಂಡು ಬಂದಿರುವುದರಿಂದ ನಮ್ಮ ರಾಜ್ಯದಲ್ಲಿ ದನಕರುಗಳನ್ನು ಹೇಗೆ ಸಾಕಬೇಕೆಂಬುದರ ಬಗ್ಗೆ ಆಗಿಂದಾಗ್ಗೆ ಅವರು ಅನೇಕ ಸಲಹೆಗಳನ್ನು ನಮಗೆ ತಿಳಿಸುತ್ತಿದ್ದಾರೆ. ಈ ಹಿಂದೆ ನಮ್ಮ ರಾಜ್ಯದಲ್ಲಿ ದನಕರುಗಳು ಹೋಗಿ ಮೇಯುವುದಕ್ಕೆ ನೂರಾರು ಎಕರೆ ಹುಲ್ಲುಗಾವಲದ್ದಂಥ ಗೋಮಾಳ ಪ್ರದೇಶವಿತ್ತು. ಈಗ ಆ ಗೋಮಾಳ ಪ್ರದೇಶವೆಲ್ಲ ಮಾಯವಾಗಿಹೋಗಿದೆ. ಎಲ್ಲೋ ಅಲ್ಲೊಂದು ಎಕರೆ ಇಲ್ಲೊಂದು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಎಕರೆ ಉಳಿದುಕೊಂಡಿದೆ. ಹೀಗಾಗಿ ದನಕರುಗಳ ಮೇವಿಗೆ ಈ ದಿವಸ ತುಂಬಾ ಅನಾನುಕೂಲ ವಾಗಿದೆ. ಮಾನ್ಯ ಮಂತ್ರಿಗಳೊಂದಾವರ್ತಿ ಮಾತನಾಡುತ್ತ ಆ ಸ್ವಿಟ್ಸರ್‌ಲ್ಯಾಂಡಿನಲ್ಲಿ ಒಂದೊಂದು ದನವಿನ ಮೇವಿಗಾಗಿ ಅಲ್ಲಿ 6 ಎಕರೆ ಭೂಮಿಯನ್ನು ಹುಲ್ಲು ಬೆಳಸಲು ಇಟ್ಟುಕೊಂಡಿರುತ್ತಾರೆಂತ ತಿಳಿಸಿದ್ದರು. ನಮ್ಮ ಮಂತ್ರಿಗಳು ಎಲ್ಲ ರೈತರಿಗೂ ಆ ಸಿಂಧಿ ಹಾಗೂ ಜರ್ಸಿ ಜಾತಿಯ ದೊಡ್ಡ ರಾಸುಗಳನ್ನು ಇಡಬೇಕೆಂತ ಹೇಳುತ್ತಿದ್ದಾರೆ. ಆ ನಮ್ಮ ಚಿಕ್ಕಮಗಳೂರಿನಂಥ ಜಿಲ್ಲೆಯಲ್ಲಿ–ಅದ ರಲ್ಲೂ 400 ಇಂಚು ಮಳೆ ಬೀಳತಕ್ಕ ಪ್ರದೇಶದಲ್ಲಿ ಈ ಸಿಂಧಿ-ಜರ್ಸಿ ಜಾತಿ ದನಗಳು ಬಾಳುವುದಿಲ್ಲ. ಅಲ್ಲಿಗೇನಿದ್ದರೂ ಆ ನಮ್ಮ ಮಲೆನಾಡು ಗಿಡ್ಡಗಳೇ ಅನುಕೂಲ. ಅಷ್ಟೇ ಅಲ್ಲದೆ ಇಂಥಾ ಬಲ್ ಬಾಳತಕ್ಕ ರಾಸುಗಳನ್ನಿಡಲು ನಮ್ಮ ದೇಶದಲ್ಲಿ ಎಷ್ಟು ಜನ ರೈತರಿಗೆ ಸಾಧ್ಯವಿದೆ ? ಈ ಬೆಂಗಳೂರಿನ ಪರಿಸ್ಥಿತಿಯೇ ಒಂದು ರೀತಿ-ಆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪರಿಸ್ಥಿತಿಯೇ ಬೇರೆ. ಈ ದಿವಸ ಇಂಥಾ ದೊಡ್ಡ ಬೆಲೆಬಾಳತಕ್ಕ 2-3 ಸಾವಿರ ರೂ.ಗಳ ಬೆಲೆಯುಳ್ಳ ಒಂದು ಜೊತೆ ರಾಸನ್ನಿಡುವಂಥ ಉತ್ತಮ ಆರ್ಥಿಕ ಪರಿಸ್ಥಿತಿಯುಳ್ಳ ರೈತರಾದರೂ ನಮ್ಮ ದೇಶದಲ್ಲಿ ಎಷ್ಟು ಜನ ಇದ್ದಾರೆ ? ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಆದರೆ ಜಾನುವಾರುಗಳ ವಿಚಾರ ದಲ್ಲಿ ಒಂದು ತೀರ ಕನಿಕರವಾದಂಥ ವಿಷಯ ಎಂದರೆ ಇವು ನಮಗೆ ನಮ್ಮ ತಾಯಿ-ತಂದೆಗಳಿಗಿಂತ ಅಧಿಕವಾಗಿ ಹಾಲುಕೊಟ್ಟು ನಮ್ಮನ್ನು ಅವು ಸಾಕುತ್ತವೆ. ಆದರೆ ಅವು ವಯಸ್ಸಾಗಿ-ನಿಶ್ಯಕ್ತಿ ಹೊಂದಿದ್ದಾಗ-ಅವುಗಳನ್ನು ಕಟುಕರಿಗೆ ಕೊಲೆ ಮಾಡಲು ಮಾರಾಟ ಮಾಡಿಬಿಡುತ್ತಾರೆ. ಸರ್ಕಾರ ದವರು ಈ ವಿಚಾರವನ್ನು ಗುಪ್ತ ರೀತಿಯಲ್ಲಿ ಪತ್ತೆ ಮಾಡಬಹುದು. ಆ ರೀತಿ ಮಾಡಿ ಅಂಥಾ ಕಾನೂ ನೇನಾದರೂ ಇದ್ದರೆ ಅವರಿಗೆ ಶಿಕ್ಷೆ ವಿಧಿಸಿ, ನಮ್ಮನ್ನು ತಂದೆ-ತಾಯಿಗಳಿಗಿಂತ ಹೆಚ್ಚಾಗಿ ನಮಗೆ ಹೆಚ್ಚಾಗಿ ನಮಗೆ ಹಾಲನ್ನು ಕೊಟ್ಟು ಸಂರಕ್ಷಣೆ ಮಾಡಿದಂಥ ಈ ಗೋವುಗಳ ಕೊಲೆಯನ್ನು ಕಡ್ಡಾಯದಿಂದ ತಡೆಗಟ್ಟಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರೈತನಿಗೆ ಹತ್ತಿರವಾದ ವಿಷಯವೆಂದರೆ ಅದು ಅರಣ್ಯ ಶಾಖೆಗೆ ಸಂಬಂಧಿಸಿದ್ದು. ನಮ್ಮಲ್ಲಿ ಅರಣ್ಯ ಸಂಪತ್ತು ಹೆಚ್ಚಾಗಿದ್ದೂ–ಇಲ್ಲ. ಇದರಿಂದಲೂ ರೈತನಿಗೆ ಬಹು ಅನುಕೂಲ ಉಂಟಾ ಗಿದೆ. ನಮ್ಮ ಅರಣ್ಯ ಇಲಾಖೆಯನ್ನು ಇನ್ನು ಹೆಚ್ಚು ಅಭಿವೃದ್ಧಿ ಮಾಡಿ ನಮ್ಮ ವನಸಂಪತ್ತನ್ನು ಅಭಿವೃದ್ಧಿ ಮಾಡಬೇಕೆಂಬ ಅಭಿಮಾನ ನಮ್ಮ ಈಗಿನ ಮಂತ್ರಿಗಳಲ್ಲಿ ಹೆಚ್ಚಾಗಿದೆ. ಇದಕ್ಕಾಗಿ ನಮ್ಮ ಅರಣ್ಯ ಶಾಖೆಯ ಮಂತ್ರಿಗಳು ಬಹಳ ಶ್ರಮ ವಹಿಸಿ ಕೆಲಸಮಾಡುತ್ತಿದ್ದಾರೆ. ಅದಕ್ಕಾಗಿ ನಾವೆ ಲ್ಲರೂ ಅವರಿಗೆ ಕೃತಜ್ಞರಾಗಬೇಕಾದ್ದು ಅಗತ್ಯ. ನಾನು ಕಾಡು ಹೆಚ್ಚಾಗಿರತಕ್ಕಂಥ-ಚಿಕ್ಕಮಗ ಳೂರು ಜಿಲ್ಲೆಯಿಂದ ಬರುತ್ತಿದ್ದೇನೆ. ಈ ದಿವಸ ಅರಣ್ಯ ಇಲಾಖೆಯವರು ನನಗೆ ತಿಳಿದಂತೆ ಆ ನಮ್ಮ ಕಾಡು ಪ್ರದೇಶದಲ್ಲಿ 500 ಎಕರೆಗಳಿಂದ ಸಾವಿರ ಎಕರೆವರೆಗೂ ಅಲ್ಲಿರತಕ್ಕ ಮರವಳಿಯನ್ನು ಇದ್ದಲಿ ಗಾಗಿ ಕಡೆಯಲು ಕೊಡುತ್ತಿದ್ದಾರೆ. ಹಾಗೆ ಕಡಿದು ಎಲ್ಲಾ ರಿಲೀಜ್ ಆಗುತ್ತೋ ಆ ಪ್ರದೇಶದಲ್ಲಿ ಅರಣ್ಯಶಾಖೆಯವರು ಸಾಗುವಾನಿ ಪ್ಲಾಂಟೇಷನ್ನನ್ನು ಬೆಳೆಸುವುದಾಗಿ ಹೇಳುತ್ತಿದ್ದಾರೆ. ಈ ದಿವಸ ಅಲ್ಲಿ 5–6 ಸಾವಿರ ಎಕರೆಗಳಲ್ಲಿದ್ದ ಮರಗಳನ್ನೆಲ್ಲ ಕತ್ತರಿಸಿ ಇದ್ದಿಲನ್ನು ಮಾಡುತ್ತಿದ್ದಾರೆ. ಈಗ ಇದ್ದ ಅಷ್ಟು ಮರಗಳನ್ನೆಲ್ಲ ಅವರು ಕತ್ತರಿಸಿ ಹಾಕಿದಮೇಲೆ ಮತ್ತೆ ಯಾವಕಾಲಕ್ಕೆ ಇವರು ಅಲ್ಲಿ ಮರಗಳನ್ನು ಬೆಳಸುವುದು ? ಎಷ್ಟು ದಿವಸಗಳು ಬೇಕು ? ಈ ರೀತಿ ಇರತಕ್ಕ ಮರಗಳನ್ನೆಲ್ಲ ಕಡಿದು ಹಾಳು ಮಾಡಿ-ಮುಂದೆ ಹೊಸವನ್ನು ಬೆಳೆಸುತ್ತೇವೆಂದರೆ ಇದರಿಂದ ದೇಶಕ್ಕೆ ಖಂಡಿತ ತುಂಬಾ ತೊಂದರೆಯಾಗುತ್ತದೆ. ಈ ದಿವಸ ಈ ಇದ್ದಿಲು ಸುಡುವ ನೆಪದಲ್ಲಿ, ಭಾರಿನಾಟ ಬೇರೆ ಕಡೆಗೆ ಸಾಗುತ್ತಿದೆ. ಈ ದಿವಸ ಕೆಲವು ಸ್ವಾರ್ಥಿಗಳೂ-ಲಾಭ ಬಡುಕರೂ ಇದ್ದಿಲು ಸುಡತಕ್ಕ ನೆಪದಲ್ಲಿ ಕಾಡನ್ನು ಹಿಡಿದು ಬೆಲೆಯಾದ ಮರಗಳನ್ನೆಲ್ಲ ಕತ್ತರಿಸಿ ಕಳ್ಳತನದಲ್ಲಿ ಬೇರೆ ಕಡೆಗೆ ಸಾಗಿ ಸುತ್ತಿದ್ದಾರೆ. ಇದರಿಂದ ಈ ದಿವಸ ಸರ್ಕಾರಕ್ಕೆ ಒಂದು ಕೆಟ್ಟಹೆಸರು ಬರುವಂತಾಗಿದೆ. ಈ ಮರ ಗಳನ್ನು ಕತ್ತರಿಸಿ ಬೇರೆಕಡೆಗೆ ಸಾಗಿಸಿ-ಸಾಲದ್ದಕ್ಕೆ ಆ ಮರಗಳ ಬೇರನ್ನು ಅಗೆದು ಕಿತ್ತು ಅವು ಗಳನ್ನು ಸುಟ್ಟು ಇದ್ದಿಲನ್ನು ಮಾಡುತ್ತಿದ್ದಾರೆ. ಈ ರೀತಿ ಆಗುತ್ತಿರುವುದರಿಂದ ಈ ದಿವಸ ಜನರಲ್ಲಿ ಈ ಅರಣ್ಯ ಇಲಾಖೆಯಲ್ಲಿ ತುಂಬಾ ಅನ್ಯಾಯ ನಡೆಯುತ್ತಿದೆ ಎಂಬ ಭಾವನೆ ಬಂದಿದೆ. ಈ ವಿಚಾ ರಕ್ಕೆ ಸರ್ಕಾರದವರು ಹೆಚ್ಚಿನ ಗಮನ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಕೆಲವರು ಕೇರಳದಿಂದ ಇಲ್ಲಿಗೆ ಮರದ ವ್ಯಾಪಾರಕ್ಕಾಗಿ ಬಂದು ಅಲ್ಲಲ್ಲೇ ಉಳಿದಿದ್ದಾರೆ. ಅವರ ಪೈಕಿ ಕೆಲವರು ಏನೇನೋ ನೆಪ ಹೇಳಿಕೊಂಡು ತಲಾ 4–5 ಎಕರೆ ಕಾಡುಪ್ರದೇಶವನ್ನು ದರಖಾಸ್ತು ಮೂಲಕ ಪಡೆದುಕೊಂಡಿದ್ದಾರೆ. ಹೀಗೆ ಅವರು ಜಮೀನನ್ನು ಪಡೆದುಕೊಂಡಿರುವುದರಿಂದ ಅಲ್ಲಿರತಕ್ಕ ಕಾಡೆಲ್ಲ ಸರ್ವನಾಶವಾಗುತ್ತಿದೆ. ಈ ವಿಚಾರಕ್ಕೆ ಸರ್ಕಾರದವರು ಮೊದಲು ಗಮನ ಕೊಡಬೇಕು. ಇಲ್ಲವಾದರೆ ಈ ಕಾಡು ನಾಶವಾಗಿ ಮುಂದೆ ಮಳೆಯಿಲ್ಲದೆ ಹೋಗಿ ರೈತನಿಗೆ ತುಂಬಾ ತೊಂದರೆ

ಯಾಗುತ್ತದೆ. ಆದುದರಿಂದ ಈ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ವ್ಯವಸಾಯ ಮಾಡತಕ್ಕ ರೈತನಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೆಲವರು ಕಾಫಿ ತೋಟ ಮಾಡಲು ಅರಣ್ಯಪ್ರದೇಶಗಳನ್ನು ಕೇಳುತ್ತಿದ್ದಾರೆ. ಅಂಥವರಿಗೆ ಬೆಟ್ಟಗುಡ್ಡಗಳಿರುವ ತಕ್ಕ ಜಾಗದಲ್ಲಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅಂಥ ಕಡೆಗಳಲ್ಲಿ ಈ ವ್ಯವಸಾಯ ಮಾಡಲು ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಈ ವಿಚಾರದಲ್ಲಿ ಮಾನ್ಯ ಅರಣ್ಯ ಖಾತೆಯ ಮಂತ್ರಿಗಳು ಇಲಾಖೆಯಲ್ಲಿರತಕ್ಕ ತಜ್ಞರ ಹಾಗೂ ಅನುಭವ ಇರತಕ್ಕ ಜನರ ಸಲಹೆ ಹಾಗೂ ಅವರ ಅಭಿಪ್ರಾಯ ಪಡೆದು ಇದನ್ನು ಮಾಡತಕ್ಕದ್ದು ಅವಶ್ಯಕ ಎಂದು ಹೇಳುತ್ತೇನೆ. ಏತಕ್ಕೆಂದರೆ ಬೆಟ್ಟದ ಪ್ರದೇಶದಲ್ಲಿ ಒಂದು ಎಕರೆ ತೋಟ ಬೆಳೆಸಲು ಕನಿಷ್ಟಪಕ್ಷ 5 ಸಾವಿರ ರೂ. ಖರ್ಚಾಗುತ್ತೆ. ತಂಪಾದ ಜಾಗದಲ್ಲಿ ಜಮೀನನ್ನು ಕೊಟ್ಟರೆ 2-3 ವರ್ಷಗಳಲ್ಲಿ ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಹೀಗೆ ಕಾಫಿ ತೋಟಕ್ಕೆ ಜಮೀನು ಇಲ್ಲ ಅಂತ ಹೇಳಿದರೆ ಇತ್ತ ಅರಣ್ಯದಲ್ಲಿ ಮರಗಳಾದರೂ ಸರಿಯಾಗಿರುತ್ತವೆಯೇ ಎಂದರೆ ಅದೂ ಇಲ್ಲ. ಈ ಮರಗಳ ಅಕ್ರಮ ಸಾಗಾಣಿಕೆ ನಾನಾ ರೀತಿಯಲ್ಲಿ ನಡೆಯುತ್ತಿದೆ. ಉದಾಹರಣೆ ಹೇಳುವುದಾದರೆ ಮುತ್ತೋಡಿ ಎಂಬ ಸ್ಥಳಕ್ಕೆ ಆರುಮೈಲಿ ದೂರದಲ್ಲಿ ಹಿಬ್ಬಾಕೊಡಿಗೆ, ಎಂಬ ಸ್ಥಳದಲ್ಲಿ ರಸ್ತೆ ಪಕ್ಕದಲ್ಲೇ ಒಂದು ದೊಡ್ಡ ಸಾಗುವಾನಿ ಮರ ಸುಮಾರು 20 ಘ. ಅ. ಇದ್ದಂಥ ಮರವಿತ್ತು. ಆ ಮರದ ಸುತ್ತ ಮುತ್ತಲೂ ಫಾರೆಸ್ಟ್ ಇಲಾಖೆಗೆ ಸೇರಿದ ರೇಂಜರೂ-ಫಾರೆಸ್ಟರೂ ಇರುತ್ತಾರೆ. ಅವರೂ ಆ ಮರ ಇದ್ದಕ್ಕಿದ್ದ ಹಾಗೆ ಅಲ್ಲಿಂದ ಮಾಯವಾಗಿದೆ. ಎಲ್ಲಿ ಹುಡುಕಿಸಿದರೂ ಆ ಮರ ಸಿಕ್ಕಲಿಲ್ಲ. ಒಂದು ವೇಳೆ ನೆಲವೇ ಆ ಮರವನ್ನು ತಿಂದುಬಿಟ್ಟಿತೇನೋ ಎನ್ನುವ ಸಂಶಯ ನಮಗೆ ಬಂದಿದೆ! ಇನ್ನು ಕಸ್ತೆಮನೆ ಸ್ಟೇಟ್ ಫಾರೆಸ್ಟಿಗೆ ಸೇರಿದ-ಸಂಗಮೇಶ್ವರ-ಸಿಂಗಾರ-ಹಿರಿಯಟ್ಟಿ ಇತ್ಯಾದಿ ಕಡೆಗಳಲ್ಲಿ 2.3 ಲಕ್ಷ ರೂ.ಗಳ ಬೆಲೆ ಬಾ ತಕ್ಕ ಮರಗಳನ್ನು ಕಡಿದು ಕಳ್ಳತನದಲ್ಲಿ ಮಾರಾಟ ಮಾಡಲಾಗಿದೆ ಎಂದು ಅರ್ತಲ್ಲಿ ಇದು ಒಂದು ದೊಡ್ಡ ಕಥೆಯಾಗಿಬಿಟ್ಟಿದೆ. ಸರ್ಕಾರದವರು ಖಂಡಿತ ಇದನ್ನೆಲ್ಲ ಪತ್ತೆಮಾಡಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ತುಂಬಾ ಕೆಟ್ಟ ಹೆಸರು ಬರುತ್ತೆ. ದೇಶದ ಹಿತದೃಷ್ಟಿಯಿಂದಲೂ, ಇಲಾಖೆಯವರ ಹಿತದೃಷ್ಟಿಯಿಂದಲೂ ಪ್ರಾಮಾಣಿಕತೆಯ ದೃಷ್ಟಿಯಿಂದಲೂ ಸರ್ಕಾರ ಇದಕ್ಕೆ ಹೆಚ್ಚಿನ ಗಮನ ಕೊಡಬೇಕು.

ಇನ್ನು ನಮಗೆ ಈ ಕಾಡಿನಲ್ಲಿರತಕ್ಕ ಮರಗಳೆಷ್ಟು ಪ್ರಾಮುಖ್ಯವೋ ಆ ಕಾಡಿನಲ್ಲಿರತಕ್ಕ ಪ್ರಾಣಿಗಳು ನಮಗೆ ಅಷ್ಟೇಮುಖ್ಯ. ಅವುಗಳನ್ನು ರಕ್ಷಣೆ ಮಾಡಬೇಕಾದ್ದು ಬಹಳ ಪ್ರಾಮುಖ್ಯವಾದ ವಿಷಯ. ಆಗಾಗ್ಗೆ ಈ ಖೆಡ್ಡಾ ಆಪರೇಷನ್ ಮಾಡಿ ನೂರಾರು ಆನೆಗಳನ್ನು ಹಿಡಿದು ಅವು ಒಂದನ್ನೊಂದು ಅಗಲ ಹೋಗುವ ಅವುಗಳು ಪಡತಕ್ಕ ವ್ಯಥೆಯನ್ನು ನೋಡಿದರೆ ಅಂಥ ಕರುಣಾಜನಕವಾದ ಪರಿಸ್ಥಿತಿ ಮತ್ತೊಂದಿಲ್ಲ ಅಂತ ಹೇಳಬಹುದು. ಅವುಗಳ ಸಂಕಟವನ್ನು ನೋಡುವುದಕ್ಕಾಗುವುದಿಲ್ಲ. ಆದರೆ ಇಂಥ ಒಂದು ಸಂಕಟವಾದ ಪರಿಸ್ಥಿತಿಯನ್ನು ನೋಡಿ ಆನಂದ ಪಡುವಂಥ ಜನರು ಈ ದೇಶದಲ್ಲಿ ಎಷ್ಟಿದ್ದಾರೋ ನಾನಂತೂ ಕಾಣೆ. ಈ ಹಿಂದೆ ದುಡ್ಡು ಸಂಪಾದನೆ ಮಾಡಲು ಈ ಆನೆಗಳನ್ನು ಹಿಡಿದು ಮಾರಾಟ ಮಾಡುತ್ತಿದ್ದರು. ಆದ್ದರಿಂದ ಸರ್ಕಾರದವರು ಈ ವನ್ಯಮೃಗಗಳನ್ನು ರಕ್ಷಣೆಮಾಡಲು ಅವಕಾಶ ಮಾಡಿಕೊಡಬೇಕು. ಕೆಲವರಿಗೆ ಷಿಕಾರಿಗಾಗಿ ಲೈಸೆನ್ಸ್ ಕೊಡುತ್ತಿದ್ದಾರೆ. ಇದನ್ನು ಆದಷ್ಟೂ ಕಡಮೆಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ರೈತನಿಗೆ ಹತ್ತಿರವಾದ ಮತ್ತೊಂದು ವಿಚಾರವೆಂದರೆ ಅದು ಸಹಕಾರ ಸಂಘಗಳ ವಿಚಾರ. ಇದರ ಬಗ್ಗೆ ಒಂದೆರಡು ಮಾತುಗಳನ್ನಾಡಲು ಅಪೇಕ್ಷಿಸುತ್ತೇನೆ. ಈ ಸಹಕಾರ ಸಂಘಗಳು ರೈತನಿಗೆ ಕಾಮಧೇನು ಕಲ್ಪವೃಕ್ಷವಿದ್ದ ಹಾಗೆ. ರೈತನಿಗೆ ಇವುಗಳಿಂದ ಬಹಳ ಪ್ರಯೋಜನವಿದೆ. ನಮ್ಮ ದೇಶದ ನಾಯಕರಾದ ಪಂಡಿತ ಜವಹರಲಾಲ್ ನೆಹರೂರವರು ಹೇಳಿರುವಂತೆ ದೇಶದಲ್ಲೆಲ್ಲ ಕಾಮನ್‌ವೆಲ್ತ್ ಕೋ-ಆಪರೇಟ್ ಬೇಸಿಸ್ ಮೇಲೆ ದೇಶದಲ್ಲಿರತಕ್ಕ ರೈತರೆಲ್ಲ ಸಹಕಾರದಿಂದ ಬಾಳ್ವೆ ಮಾಡಬೇಕೆಂಬುದಾಗಿ ಅವರೇನು ಒಂದು ತತ್ವ ಹೇಳಿದ್ದಾರೆ ಅದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಇಲ್ಲಿಯವರೆಗೂ ಈ ಸಂಸ್ಥೆಗಳು ರೈತನಿಗೆ ಬೇಕಾದಷ್ಟು ಸಹಾಯ ಸಹಕಾರಗಳನ್ನು ನೀಡಿವೆ. ಈ ದಿವಸ ವ್ಯವಸಾಯಗಾರರ ಪರಿಸ್ಥಿತಿ ಎಷ್ಟು ಸುಧಾರಿಸಿದೆ ಎಂಬುದು ಎಲ್ಲರಿಗೂ ಗೊತ್ತಾಗಿದೆ. ಆದುದರಿಂದ ಈ ಸಂಸ್ಥೆಗಳು ಈ ದಿವಸ ಹೇಗೆ ಕೆಲಸಮಾಡುತ್ತಿವೆ ಎಂಬುದನ್ನು ವೀಕ್ಷಿಸಬೇಕಾದ್ದು ಬಹು ಪ್ರಾಮುಖ್ಯವಾದದ್ದು. ಈ ದಿವಸ ಅನೇಕ ಗ್ರಾಮಗಳಲ್ಲಿ ಈ ಕೊಟ್ಟಣದ ಅಕ್ಕಿ-ಎಣ್ಣೆಯ ಗಾಣ, ಚರ್ಮ ಹದ ಮಾಡುವುದು, ಇತ್ಯಾದಿ ಗ್ರಾಮ ಕೈಗಾರಿಕೆಗಳಿಗೆ ದುಡ್ಡನ್ನು ಕೊಟ್ಟಿರುವುದೇನು ಕಡಿಮೆಯಾಗಿಲ್ಲ. ಇವುಗಳಲ್ಲಿ ಸರಿಯಾಗಿ ಕೆಲಸ ಮಾಡದೆ ದುಡ್ಡನ್ನು ತಿಂದು ಹಾಕಿವೆ ಎಂತ ಪುಕಾರುಗಳು ಕೇಳಿ ಬರುತ್ತಿವೆ. ಸರ್ಕಾರದವರು ಕೂಡಲೆ ಎಚ್ಚರಿಕೆ ತೆಗೆದುಕೊಳ್ಳದಿದ್ದರೆ ಕೊನೆಗೆ ಆ ಸಂಘಗಳಿದ್ದವೆಲ್ಲ ಗುರ್ತಿಸುವುದಕ್ಕೆ ಸಹ ಒಂದು ಸಾಮಾನಿಲ್ಲದಂತಾಗುತ್ತದೆ-ಮುಂದೆ ಸರ್ಕಾರ ಅವಹೇಳನಕ್ಕೆ ಗುರಿಯಾಗಬೇಕಾಗುತ್ತದೆ. ಈ ವಿಚಾರಕ್ಕೆ ಸರ್ಕಾರ ತೀವ್ರ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಗಮನ ಕೊಡಬೇಕು. ಇನ್ನು ಅನೇಕ ಸಹಕಾರ ಸಂಘಗಳಲ್ಲಿ ಸಾಲಕೊಟ್ಟ ಹಣ ಸಂಪೂರ್ಣವಾಗಿ ವಾಪಸ್ಸು ಬಂದಿಲ್ಲ. ಈ ಸೊಸೈಟಿಗಳಲ್ಲಿ ಸಾಲ ತೆಗೆದುಕೊಂಡರೆ ಅದು ವಾಪಸ್ಸು ಕೊಡತಕ್ಕ ಸಾಲವೇ ಅಲ್ಲ ಅನ್ನುವ ಭಾವನೆ ಜನರಲ್ಲಿ ಬಂದಿದೆ. ಈ ಸಾಲ ಪಡೆದು ತೃಪ್ತಿತಸ್ಥರಾಗಿ ಬರತಕ್ಕವರು ಮಹನೀಯರಾಗಲೀ-ಮಹಿಳೆಯರಾಗಿರಲಿ, ಅವರಿಗೆಲ್ಲ ನಿಷ್ಕರುಣೆಯಿಂದ ಕ್ರಮಕೈಗೊಂಡು ಆ ಹಣವನ್ನು ವಸೂಲ್ಮಾಡಬೇಕೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ಸರ್ಕಾರದವರು ಈ ಸಹಕಾರ ಸಂಘಗಳಿಗೆ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ಈ ಡಿಫಾಲ್ಟರುಗಳು ಹೆಚ್ಚಾಗುತ್ತಿದ್ದಾರೆ. ಆ ನಮ್ಮ ಚಿಕ್ಕಮಗಳೂರು ಬ್ಯಾಂಕಿನಲ್ಲಿ ಈ ಡಿಫಾಲ್ಟರ ಸಂಖ್ಯೆ ಜಾಸ್ತಿಯಾಗಿರುವುದೊಂದೇ ಅಲ್ಲದೆ ಅಲ್ಲಿ ಮೊನ್ನೆ ಎಲೆಕ್ಷನ್ ಸಹ ಆಗದೆ-ಆ ಬಗ್ಗೆ ಹೈಕೋರ್ಟಿನಿಂದ ಸ್ಟೇ ಆರ್ಡರನ್ನು ತಂದಿದ್ದಾರೆ. ಆದರೆ ಇಂಥಾ ಪರಿಸ್ಥಿತಿ ಈ ಸಂಘಗಳಿಗೆ ಬರಬಾರದು ಅಂತ ನಾನು ತಿಳಿದುಕೊಂಡಿದ್ದೇನೆ. ಇನ್ನು ಈ ಸಂಘಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡತಕ್ಕ ಬಗ್ಗೆ ಅದು ಸಕಾಲದಲ್ಲಿ ನಡೆಯುತ್ತಿಲ್ಲ. ಈ ವಿಚಾರದಲ್ಲಿ ಆ A.G.R. ಸಮಿತಿ ವರದಿಯಲ್ಲಿ ಸೂಚಿಸಿರ ತಕ್ಕ ಸಲಹೆಯನ್ನು ಸರ್ಕಾರದವರು ಜಾರಿಗೆ ತರುವಂತೆ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಗ್ರಾಮಾಭಿವೃದ್ಧಿ ವಿಚಾರದಲ್ಲಿ, ಗ್ರಾಮಾಂತರ ಪ್ರದೇಶದಿಂದ ಬಂದಿರುವವಳಾದ್ದರಿಂದ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಹಳ್ಳಿಗಳ ಕಡೆ ಸಂಚಾರ ಸೌಲಭ್ಯಗಳಿಲ್ಲದೆ ತೊಂದರೆಯಾಗಿದೆ. ಮೈಸೂರು ದೇಶ ಮೊದಲು 9 ಜಿಲ್ಲೆಗಳಿಂದ ಕೂಡಿದ್ದುದು ಈಗ 19 ಜಿಲ್ಲೆಗಳಿಂದ ಕೂಡಿದ್ದಾಗಿದೆ. ಖರ್ಚು ಮಾಡತಕ್ಕ ಹಣವನ್ನು ಎಷ್ಟು ಕಡಮೆ ರೀತಿಯಿಂದ ಖರ್ಚು ಮಾಡಿದರೂ ಸಹ ಎಲ್ಲ ಭಾಗಗಳಿಗೂ ಒದಗಿಸುವುದಕ್ಕೆ ತುಂಬ ಕಷ್ಟವಾಗಿದೆ. ಆದರೂ ಹಿಂದುಳಿದಿರತಕ್ಕ ಮಲೆನಾಡು ಪ್ರದೇಶಗಳಲ್ಲಿ ಸಂಚಾರ ಸೌಕರ್ಯಕ್ಕಾಗಿ ಹೆಚ್ಚು ಸಹಾಯ ಮಾಡಬೇಕು. ಮೊನ್ನೆಯ ದಿನ ಒಂದು ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಗಳು, ತಾಲ್ಲೂಕು ಬೋರ್ಡ್‌ಗಳು ಇಂಥ ರಸ್ತೆಗಳನ್ನು ನೋಡಿಕೊಳ್ಳಬೇಕೆಂದು ಅಪ್ಪಣೆ ಕೊಡಿಸಿದರು, ತಾಲ್ಲೂಕ್ ಬೋರ್ಡ್‌ಗಳ ಪರಿಸ್ಥಿತಿ ಏನಾಗಿದೆ ಎಂದರೆ, ಅವರು ತಮ್ಮ ವರಮಾನದಿಂದ ಒಂದು ರಸ್ತೆಯನ್ನೂ ಸಹ ಪೂರ್ಣವಾಗಿ ಮಾಡಲು ಸಾಧ್ಯವಿಲ್ಲ. ತಾಲ್ಲೂಕು ಬೋರ್ಡಿನ ವರಮಾನ ಒಂದೂವರೆ ಲಕ್ಷ ರೂಪಾಯಿ ಇದ್ದರೆ ಒಂದು ರಸ್ತೆಯ ಖರ್ಚು ಎರಡು ಲಕ್ಷ ರೂಪಾಯಿಗಳವರೆಗೂ ಆಗುತ್ತದೆ ತಾಲ್ಲೂಕ್ ಬೋರ್ಡ್ ಗ್ರಾಮಾಂತರ ರಸ್ತೆಗಳನ್ನೂ ನಡೆಸಿಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ. ಸರ್ಕಾರದವರು ಈ ರಸ್ತೆಗಳನ್ನು ಮಾಡಿಸಿ ಅದನ್ನು maintain ಮಾಡಲು ತಾಲ್ಲೂಕ್ ಬೋರ್ಡ್‌ಗಳಿಗೆ ಹಣವನ್ನು ಕೊಟ್ಟು ಅವುಗಳಿಗೆ ವಹಿಸಬಹುದು. ಇಲ್ಲದೆ ಇದ್ದರೆ ಇನ್ನೂ ನೂರು ವರ್ಷವಾದರೂ ಆ ರಸ್ತೆಗಳು ಅಭಿವೃದ್ಧಿಯಾಗುವ ಹಾಗಿಲ್ಲ. ಇದರ ಜೊತೆಗೆ ಕುಡಿಯುವ ನೀರಿನ ತೊಂದರೆ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಹೆಚ್ಚಾಗಿದೆ. ಇದಕ್ಕೂ ಸರ್ಕಾರ ಸಹಾಯ ಮಾಡಬೇಕು. ಹಿಂದುಳಿದಿರುವ ಹಳ್ಳಿಯ ಪ್ರದೇಶಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಸರ್ಕಾರದವರು ಹೆಚ್ಚಿನ ಸಹಾಯ ಮಾಡಬೇಕೆಂದು ಹೇಳಿ ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳಿಗೆ ನಾನು ಪೂರ್ಣ ಬೆಂಬಲವನ್ನು ಕೊಟ್ಟು, ಎರಡು ದಿವಸದಿಂದಲೂ ಮಾತನಾಡಲು ಪ್ರಯತ್ನ ಪಟ್ಟರೂ ಅವಕಾಶ ಸಿಕ್ಕದೆ ಇವೊತ್ತು ಮಾನ್ಯ ಅಧ್ಯಕ್ಷಣಿಯವರು ಈ ದಿವಸ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳನ್ನರ್ಪಿಸುತ್ತೇನೆ.

†ಶ್ರೀ ಎಂ. ವಿ. ಶೆಟ್ಟಿ (ಚಿಕೋಡಿ).—ಅಧ್ಯಕ್ಷರೇ, ಇಂದು Freedom from Hunger ಎಂದು ಒಂದು ವಾರ ಚಳುವಳಿಯನ್ನು ನಡೆಸಿದ್ದಾರೆ. ಈ ಚಳುವಳಿಯು ಅಲ್ಲಿ ಇಲ್ಲಿ ಸುಮಾರಾಗಿ ನಡೆದಿದೆ. ಅಂಥ ಸ್ಥಿತಿಯಲ್ಲಿ ಈ ವ್ಯವಸಾಯ ಇಲಾಖೆಯ ಡಿಮಾಂಡ್ ಮೇಲೆ ಮಾತನಾಡುವ ಪ್ರಸಂಗ ಬಂದಿದೆ. ಯಾರಿಗೆ ಹಸಿವೆಯ ಅರಿವು ಇಲ್ಲ ಅವರೆಲ್ಲ ಪ್ರತಿನಿಧಿಗಳೆಂದು ಈ ಚಳುವಳಿಯಲ್ಲಿ ಭಾಗವಹಿಸುತ್ತಾರೆ. ಈ ದೇಶದ ಪ್ರಧಾನ ಮಂತ್ರಿಗಳಾದ ಜವಹರ್‌ಲಾಲ್ ನೆಹರೂ ಅವರು ಮೊನ್ನೆ ಸ್ಪಷ್ಟವಾಗಿ ಹೇಳಿದ್ದಾರೆ. "ನನ್ನ ಹತ್ತಿರ ಭೂಮಿ ಇಲ್ಲ, ನನಗೆ ಅದರ ವಿಚಾರ ಗೊತ್ತಿಲ್ಲ ಎಂದು." ಅದೇ ರೀತಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ನನಗೆ ಭೂಮಿಯಿಲ್ಲವೆಂದು ಹೇಳಿದರು. ಈ ದೇಶದೊಳಗೆ ಮುಖ್ಯವಾಗಿರತಕ್ಕದ್ದು ವ್ಯವಸಾಯ. ರೈತನು ದೇಶದ ಬೆನ್ನುಮೂಳೆ ಎಂದು ಎಲ್ಲ ಹೇಳುತ್ತೇವೆ. ಆದರೆ ಈ ದೇಶದಲ್ಲಿ ಇಂಥ ಮುಖ್ಯವಾದ ಉದ್ಯೋಗಕ್ಕೆ ಪ್ರಾಶಸ್ತ್ಯವಿಲ್ಲ. ಮಂತ್ರಿಗಳ ಸ್ಥಾನ ನೋಡಿದರೆ 20-25 ಸ್ಥಾನಗಳಿರುತ್ತವೆ. ಮಂತ್ರಿಗಳು ವಹಿಸಿಕೊಳ್ಳುವ ಇಲಾಖೆಗಳಲ್ಲಿಯೂ ಮುಖ್ಯವಾದುವು ಮತ್ತು ಅಮುಖ್ಯವಾದುವು ಎಂದು ಮಾಡಿಕೊಂಡಿದ್ದಾರೆ. important portfolios, less important portfolios ಎನ್ನುವ ಭಾವನೆ ಬೆಳೆಯುತ್ತ ಬಂದಿದೆ. ಇದು

ದುರ್ದೈವ. ದೇಶದ ಅನ್ನ ಸಮಸ್ಯೆಯನ್ನು ಬಿಡಿಸುವಂಥ ಇಲಾಖೆಗೆ ಮುಖ್ಯಸ್ಥಾನವನ್ನು ಕೊಡಬೇಕು. ವ್ಯವಸಾಯ ಮುಖ್ಯ ಅದು ನನ್ನ ಇಲಾಖೆಯಾಗಲಿ ಎಂದು ಮುಂದೆ ಬರಬೇಕು. ಈ ದೇಶಕ್ಕೆ ಶ್ರೀಮಾನ್ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ಬಂದಾಗ ರಾಮ ಬಂದ, ನಮ್ಮ ನಾಯಕ ಬಂದ, ಎಂದು ಕೆಲವರು ಹೇಳುತ್ತಿದ್ದರು. ಆ ಮಾತಿನಿಂದ ಸಮಾಧಾನವಾಯಿತು. ಹಿಂದೆ ಇಂಗ್ಲೆಂಡ್ ದೇಶಕ್ಕೆ ಒಬ್ಬಾತ Beveridge plan ಎಂದು ಕೊಟ್ಟ, ಅದೇ ರೀತಿ ಇಲ್ಲಿಯೂ ಸಾಕಷ್ಟು ವಯಸ್ಸು ಮತ್ತು ಅನುಭವವನ್ನು ಪಡೆದಂಥ ಈ ದೇಶದ ಮುಖ್ಯಮಂತ್ರಿಗಳು ಹುರುಪಿನಿಂದ ಈ ಒಕ್ಕಲುತನದ ಖಾತೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಆಮೇಲೆ Nijalingappa plan for agriculture for the State ಎಂದು ಮಾಡಬೇಕು. ಈಗ ಇರುವುದು ಯಾರ ಮಂತ್ರಿಮಂಡಲ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲವೆಂದು ಹೇಳುತ್ತಿದ್ದೇವೆ. ದೇಶದ ಬೆನ್ನು ಮೂಳೆ, ದೇಶದ ಮುಖ್ಯವಾದ ಕಸಬು ಒಕ್ಕಲುತನ. ಇದರ ಪ್ರಗತಿಯ ಮೇಲೆ, ಇದರ ಭವಿತವ್ಯದ ಬದುಕಿನ, ಮೇಲೆ ದೇಶದ ಪ್ರಗತಿಯು ಅವಲಂಬಿಸಿದೆ. ಮಾನ್ಯ ಅರ್ಥ ಮಂತ್ರಿಗಳು ಅವರ ಬಡ್ಜೆಟ್ ಭಾಷಣದಲ್ಲಿ ಎರಡು ಯೋಜನೆಗಳು ಮುಗಿದಿದ್ದರೂ ಸಾಕಷ್ಟು food production ಆಗಲಿಲ್ಲ. ಹತ್ತು ಲಕ್ಷ ಟನ್ ಹೆಚ್ಚಾಗಬೇಕಾಗಿತ್ತು. ಆದರೆ ಒಂದೂವರೆ ಲಕ್ಷ ಟನ್ ಮಾತ್ರ ಹೆಚ್ಚಾಗಿದೆ, ಎಂದು ಹೇಳಿದ್ದಾರೆ. ಬರುವ ಮೂರು ವರ್ಷಗಳಲ್ಲಿ ಏಳೆಂಟು ಲಕ್ಷ ಟನ್ ಹೆಚ್ಚು ಕಾಳನ್ನೂ; ಧಾನ್ಯವನ್ನೂ ಬೆಳೆಯಬೇಕಾಗಿದೆ. ಮುಖ್ಯವಾಗಿ ಈ ಸರ್ಕಾರದವರು ಒಕ್ಕಲುತನಕ್ಕೆ ಏನು ಮಹತ್ವವನ್ನು ಕೊಟ್ಟಿದ್ದಾರೆಂದು ನೋಡುವುದಕ್ಕೆ ಹೋದರೆ ಹತ್ತು ಅಲ್ಲ ಇಪ್ಪತ್ತು ವರ್ಷವಾದರೂ freedom from hunger ಬರುವುದಕ್ಕೆ ಸಾಧ್ಯವಿಲ್ಲವೆಂದನ್ನಿಸುತ್ತದೆ.

ಒಕ್ಕಲುತನದ ಮಾತನಾಡುವಾಗ pump sets ವಿಷಯ ಹೇಳಿದರು. ದೇಶದಲ್ಲಿ ಒಕ್ಕಲುತನದ landless labour ನೂರಕ್ಕೆ 25 ಜನರಿದ್ದಾರೆ, ಅವರಿಗೆ ಪಂಪ್‌ಸೆಟ್‌ಗಳಾಗಲೀ, ಇತರ ಸಹಾಯಗಳಾಗಲೀ ಸಿಕ್ಕುವುದಿಲ್ಲ. ನೂರಕ್ಕೆ ಐವತ್ತು ಮನೆತನಗಳು ಒಂದು ಎಕರೆ ಹಿಡುವಳಿಯಿರುವ ಮನೆತನಗಳಾಗಿವೆ. ಇಂಥವರಿಗೂ ಪಂಪ್‌ಸೆಟ್‌ಗಳನ್ನಾಗಲೀ ಭಾವಿಗಳನ್ನಾಗಲೀ ಕೊಡುವುದಿಲ್ಲ. ಸುಮಾರು 100 ಕ್ಕೆ 75 ಜನಗಳಿಗೆ, ವ್ಯವಸಾಯ ಖಾತೆಯಿಂದ ಏನೂ ಮಾಡದೇ ಇರುವಾಗ, ವ್ಯವಸಾಯವನ್ನೇ ನಂಬಿಕೊಂಡಿರುವವರಿಗೆ ಅನುಕೂಲಗಳು ಸಿಕ್ಕುವುದು ಯಾವಾಗ ಎನ್ನುವ ಪ್ರಶ್ನೆ ಬರುತ್ತದೆ. ಅವರಿಗೆ ಸುಖ ಸಿಕ್ಕುವುದು ಎಂದು. ಈ ಜನಗಳಿಗೆ ಎರಡು ಹೊತ್ತು ಹೊಟ್ಟೆಗೆ ಸಿಕ್ಕುವುದು ಎಂದು. ಸರ್ಕಾರದಿಂದ ತಮಗೆ ಸಹಾಯವಾಗುತ್ತದೆಂದು ಈ ಜನ ನಂಬಿಕೊಂಡಿದ್ದಾರೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಖಾತೆಯ ಜವಾಬ್ದಾರಿಯನ್ನು ತಾವು ಹೊತ್ತು ನಿಜಲಿಂಪ್ಪ ಪ್ಲಾನ್ ಮಾಡಿದರೆ ಈ ದೇಶ ಬರುವ ಮೂರು ವರ್ಷಗಳಲ್ಲಿ ಯಶಸ್ವಿಯಾಗಿ ಆಹಾರೋತ್ಪಾದನೆಯಲ್ಲಿಟ್ಟುಕೊಂಡಿರುವ ಹತ್ತು ಲಕ್ಷ ಟನ್ ಗುರಿಯನ್ನು ಸಾಧಿಸಿಕೊಳ್ಳಬಹುದು. ಆಗಮಾತ್ರ, ಜನನಾಯಕ, ರಾಮ, ಎಂದ ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಒಂದು plan ಮಾಡಿ ದೇಶದಲ್ಲಿರುವ ನೂರರಲ್ಲಿ 25 ಜನ ಕೂಲಿಗಾರರು ಮತ್ತು 50 ಜನ ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗುವಂತೆ ಮಾಡಬೇಕು.

ವ್ಯವಸಾಯ ಖಾತೆಗೆ ಸಾಕಾದಷ್ಟು ಮನ್ನಣೆ ಕೂಡ ಇಲ್ಲ. ಭೂಕಂದಾಯದಿಂದ ಸಾಕಾದಷ್ಟು ಹಣ ವಸೂಲಾಗುತ್ತಿದೆ, ಬ್ರಿಟಿಷರು ರಾಜ್ಯಭಾರ ಮಾಡಿದಾಗ ಕಲೆಕ್ಟರ್ ಎಂದು ನೇಮಿಸಿ ಅವರಿಗೆ ಭೂಕಂದಾಯವನ್ನು ವಸೂಲ್ಮಾಡಲು ನೇಮಿಸಿ ಮಹತ್ವವನ್ನು ಕೊಟ್ಟರು. ಈಗ ನಮ್ಮಲ್ಲಿ ವ್ಯವಸಾಯ ಮುಖ್ಯ ಕಸಬಾಗಿರುವುದರಿಂದ, ನಾವು ವ್ಯವಸಾಯಕ್ಕೆ ಮಹತ್ವವನ್ನು ಕೊಡುತ್ತಿರುವುದರಿಂದ, ವ್ಯವಸಾಯದ ಅಧಿಕಾರಿಗಳಿಗೆ ಮಹತ್ವವನ್ನು ಕೊಡಬೇಕು ಜಿಲ್ಲೆಗಳಲ್ಲಿರುವ ವ್ಯವಸಾಯದ ಇಲಾಖೆಯ ಅಧಿಕಾರಿಗಳಿಗೆ ಮನ್ನಣೆಯನ್ನು ಕೊಡಬೇಕು. Dress maketh a man ಎನ್ನುವಂತೆ Minister maketh the Department ಎಂದು ಹೇಳಬಹುದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ವ್ಯವಸಾಯ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. "Who Cares for Agriculture in this Country" ಎಂದು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮಾನ್ ಪಾವಟೆಯವರು ಒಂದು ಲೇಖನವನ್ನು ಬರೆದಿದ್ದಾರೆ. ಎಲ್ಲ ಬಾಯಿ ಮಾತಿನಲ್ಲಿ ಹೇಳುವವರೇ ಆಗಿದ್ದಾರೆ.

ಇಡೀ ಗ್ರಾಮಸೇವಕರಿಂದ ಹಿಡಿದುಕೊಂಡು ಮುಖ್ಯಮಂತ್ರಿಗಳವರೆಗೆ, ಬರೀ "Lip Sympathy" ಇದೆ. ಹದಿನೈದು ವರ್ಷಗಳಲ್ಲಿ, ಹಿಂದೆ ಹತ್ತಾರು ವರ್ಷಗಳಲ್ಲಿ ಯಾವ ರೀತಿಯಾದ ಸ್ಥಿತಿ ಇತ್ತೋ ಅದೇ ಸ್ಥಿತಿ ಇಂದೂ ಈ ದೇಶದಲ್ಲಿದೆ. ಇಲ್ಲೇನೋ ಸರಿಯಾದ ಉತ್ಪನ್ನ 725 ಎಂದು ಇದ್ದದ್ದು 792 ಕ್ಕೆ ಮುಟ್ಟಿದೆ ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಕಾಳು ಎಷ್ಟು ಉತ್ಪತ್ತಿಯಾದದ್ದು ಎನ್ನುವುದು ಇಲ್ಲ. ನಮ್ಮ ದೇಶದಲ್ಲಿ inflation ಹೆಚ್ಚಿದೆಯೇ ಹೊರತು ಕಾಳು ಹೆಚ್ಚಾಗಿಲ್ಲ. ಏನೋ ಕೆಲವರು ಈಗ ಕಾಫೀ, ಏಲಕ್ಕಿ, ಟೀ ಪ್ಲಾಂಟೇಷನ್ನುಗಳಲ್ಲಿ ಹೆಚ್ಚಿಗೆ ಉತ್ಪನ್ನ

(ಶ್ರೀ ಎಂ. ಎ. ಶೆಟ್ಟಿ)

ಮಾಡುತ್ತಿದ್ದೇವೆಂದರು. ಇದರಿಂದ ಉತ್ಪತ್ತಿಯೂ ಹೆಚ್ಚಾಗಿರಬಹುದು. ಆದರೆ ಬಡವರಾಗಿರುವವರು ಏಲಕ್ಕಿಯನ್ನು ಎಷ್ಟು ಜನರು ಉಪಯೋಗಿಸಬಹುದು. ಒಪ್ಪತ್ತಿನ ಊಟವನ್ನೇ ಮಾಡದಿರುವವರು, ಏಲಕ್ಕಿಯನ್ನು ಎಷ್ಟು ಜನ ತಿನ್ನಲಿಕ್ಕೆ ಉಪಯೋಗಿಸಬಹುದು. ಇಂತಹ ಕಾಫಿ, ಏಲಕ್ಕಿ ಬೆಳೆಗಳನ್ನು ಮಾಡುವುದಕ್ಕಾಗಿ ರಸ್ತೆ ಬೇಕೆಂದು ಕೇಳುತ್ತಿದ್ದಾರೆ. ಮತ್ತೆ ನಮ್ಮ ಅಗ್ರಿಕಲ್‌ಚರ್ ಪ್ರೊಡಕ್ಷನ್ನು ನೋಡಿದರೆ It is only Ten Per cent. ಅಗ್ರಿಕಲ್‌ಚರ್ ಪ್ರಾಡ್ಯೂಸು ಮಾರ್ಕೆಟ್ಟಿಗೆ ಬರಬೇಕು, ಅದಕ್ಕಾಗಿ ರಸ್ತೆಗಳು ಬೇಕೆಂದು ಕೇಳುವವರು, ಅಗ್ರಿಕಲ್‌ಚರ್ ಪ್ರಾಡ್ಯೂಸ್ ಮಾಡುತ್ತಿರುವ ಜನರು ನೂರರಲ್ಲಿ ಹತ್ತರಷ್ಟಿದ್ದಾರೆ. ಈಗ ಮಾರ್ಕೆಟಿಗೇ ಎಲ್ಲರೂ ಹೋಗಿ ಕಾಳನ್ನು ಕೊಂಡುಕೊಳ್ಳುತ್ತಿದ್ದಾರೆ. ಹಳ್ಳಿಹಳ್ಳಿಗೆ ಹೋಗಿ ಕಾಳನ್ನು ಉತ್ಪನ್ನ ಮಾಡುವವರೂ ಬಹಳ ಕಡಿಮೆ ಇದ್ದಾರೆ. ಪ್ರತಿಯೊಂದು ಹಳ್ಳಿಯೂ ಇಂದು ಸ್ವಯಂಪೂರ್ಣವಾಗಿ, ಪ್ರತಿಯೊಂದು ಕುಟುಂಬವೂ ಸ್ವಯಂಪೂರ್ಣವಾಗಿರಬೇಕೆಂದು ಗಾಂಧಿಯವರು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದರು. ಇವೊತ್ತು ಅಂತಹ ಗಾಂಧಿಯವರ ಹೆಸರು ಚಿತ್ರದಲ್ಲಿರುವಂತೆ ಇದ್ದಿದ್ದರೆ ಅವರು ಕಣ್ಣೀರು ಸುರಿಸಿ Freedom for Hunger ಎಂದು ಮಾಡುತ್ತಿದ್ದರು. ಈ ದೇಶದಲ್ಲೇ ಅಲ್ಲ, ಈ ಜಗತ್ತಿನ ಯಾವ ವ್ಯಕ್ತಿಯೇ ಆಗಲೀ ಅನ್ನದ ಸಲುವಾಗಿ ಕಷ್ಟಪಡುತ್ತಿದ್ದಾರೆ. ಮೂರನೆ ಪಂಚವಾರ್ಷಿಕ ಯೋಜನೆ ಕಳೆದು ಮೂರು ವರ್ಷಗಳಾಗಿ ಇನ್ನು ಎರಡು ವರ್ಷಗಳು ಉಳಿದಿವೆ. ಹಾಗಾದರೂ ಇನ್ನೂ ಅನ್ನದ ಅಭಾವ ತಪ್ಪಲಿಲ್ಲ. ಇದಕ್ಕಾಗಿ ಈ ದೇಶದ ಜನರಿಗೆ ಅನುಕೂಲವಾಗುವಂತೆ "ನಿಜಲಿಂಗಪ್ಪ ಪ್ಲಾನು" ಎನ್ನುವಂತಹ ಒಂದು ಯೋಜನಾ ಮಾಡಿ ಜಾರಿಗೆ ತರಬೇಕು.

ಇದೂ ಅಲ್ಲದೆ ಅಗ್ರಿಕಲ್‌ಚರು ಆಫೀಸರುಗಳ ಬಗ್ಗೆ ಒಂದು ಸ್ಥಿಮಿತವಾಗಿಲ್ಲ. ಅವರ ಸರ್ವಿಸ್ಸು ಸೀನಿಯಾರಿಟಿ ಲಿಸ್ಟು ಇನ್ನೂ ಸರಿಯಾಗಲಿಲ್ಲ. ಅವರುಗಳನ್ನು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಎಂದು ಬದಲಾಯಿಸುತ್ತಿದ್ದಾರೆ. ಇವೆಲ್ಲದರ ಬಗ್ಗೆ ಮಂತ್ರಿಗಳು ಲಕ್ಷ್ಯ ಕೊಡುವುದಕ್ಕೂ ಸಾಧ್ಯವಿಲ್ಲದಂತಿದೆ. ಎಂಟೆಂಟು ವರ್ಷಗಳಕಾಲ ಈ ಅಧಿಕಾರಿಗಳನ್ನೂ ಖಾಯಂ ಮಾಡದೇ ಬರೀ "Holding incharge" ಎಂದರೆ How long they will continue? ಹೀಗಿರುವುದರಿಂದ ಈ ವ್ಯವಸಾಯದ ಬಗ್ಗೆ ಸರಿಯಾದ steam line Policy ಇಟ್ಟುಕೊಳ್ಳದಿದ್ದರೆ ಇದರಿಂದೇನೂ ಆಗುವುದಿಲ್ಲ. ಇದಕ್ಕಾಗಿ ಈಗ ತುರ್ತಿನ ಸ್ಥಿತಿ ಬಂದಿದೆ ಎಂದರೆ ಯಾರು ಇದನ್ನೆಲ್ಲಾ ಕಂಟ್ರೋಲು ಮಾಡಬೇಕು? ಗ್ರಾಮಸೇವಕರನ್ನು ಯಾರು ಕಂಟ್ರೋಲು ಮಾಡಬೇಕು? ಇದರಲ್ಲಿ Agriculture Bias ಬರುವುದು ಬಹಳ ಮುಖ್ಯ. ಆ ರೀತಿಯಾದ ಒಂದು ನೀತಿಯನ್ನು ತಾಳಿ, ಅಂತಹ ಒಂದು ಧೋರಣೆಯನ್ನು ಹೊಂದಿದರೆ ಮಾತ್ರ ಈ ರಾಷ್ಟ್ರದಲ್ಲಿ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಾದೀತು. ನಾವು ಸುಮ್ಮನೆ ಇಲ್ಲಿ ಎಷ್ಟುಬೇಕಾದರೂ ಹೇಳಬಹುದು. ಅದು ಬರೀ ಕಾಗದದಮೇಲೆಯೇ ಇರಲು ಸಾಧ್ಯ.

ಮೊನ್ನೆ ಸಹಕಾರ ಮಂತ್ರಿಗಳು Rural Village Development Plan ಎಂದು ಮಾಡಿ ಅದರಿಂದ ಅಗ್ರಿಕಲ್‌ಚರು ಪ್ರೊಡಕ್ಷನ್ನನ್ನು ಹೆಚ್ಚು ಮಾಡಬೇಕೆಂದು ಪ್ರತಿಯೊಂದು ಗ್ರಾಮ ಪಂಚಾಯತಿಗೂ ಈ ಪ್ಲಾನು ಕಳಿಸಿದ್ದೇನೆಂದು ಹೇಳಿದರು. ಎಷ್ಟು ಪಂಚಾಯತಿಗಳು ಈ ರೀತಿಯಾದ ಪ್ಲಾನನ್ನು ಮಾಡಿದ್ದಾರೆ? ಒಮ್ಮೆ ಮಾನ್ಯಮಂತ್ರಿಗಳಾದ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು,

> "Let there be 50 per cent production. There is 50 per cent production in China."

ಎಂದು ಹೇಳಿದರು.

ಹಿಂದೆ ಚೈನಾ ದೇಶದಲ್ಲಿ ನೂರಕ್ಕೆ 50 ರಷ್ಟಿತ್ತು. ಒಂದು ವರ್ಷವಾದಮೇಲೆ ನೂರಕ್ಕೆ ನೂರರಷ್ಟು ಪ್ರೊಡಕ್ಷನ್ನು ಆಯಿತು. ಏಳೆಂಟು ವರ್ಷಗಳಾದಮೇಲೆ ನೂರರಿಂದ ಇನ್ನೂರರವರೆಗೇರಿತು. ಹೀಗೆ ಹೆಚ್ಚಬೇಕು ಎನ್ನುವ ವಿಷಯ ಇಲ್ಲಿಲ್ಲ. ಇಲ್ಲಿ ನೋಡುವಾಗ ಹದಿನೈದು ವರ್ಷಗಳಿಂದಲೂ ನೂರಕ್ಕೆ ನಲವತ್ತರಷ್ಟು ಕೂಡ ಏರಿಲ್ಲ. ನಮ್ಮಲ್ಲಿ ಒಂದು ಎಕರೆಗೆ ಜೋಳ ದೀಡು ಪಲ್ಲ ಬರುತ್ತೆ ಎಂದು ಹೇಳುತ್ತಾರೆ. ಹಾಗೆ ಇಲ್ಲಿ intensive cultivation ಏನೂ ಮಾಡಿಲ್ಲ. ಒಂದು ಎಕರೆ ಜಮೀನು ಇಟ್ಟುಕೊಂಡಿರುವವರಿಗೆ ಅವನು ಸರಿಯಾಗಿ ಉತ್ಪನ್ನ ಮಾಡಲಿಕ್ಕೆ ಸರಿಯಾದ ಸಹಾಯಗಳನ್ನು ಕೊಡದೇಹೋದರೆ, ಆಹಾರದ ಕಾಳೂ ಹೆಚ್ಚಿಗೆ ಆಗುವುದಿಲ್ಲ. ಈ ತರಹ ಇದ್ದರೆ ಇನ್ನೂ ಹೆಚ್ಚು ಹೇಗೆ ಬೆಳೆಯಬೇಕು? ಇನ್ನು ಅವರಿಗೆ ಸಾಲ ಕೊಡಬೇಕಾದರೆ ಅಗ್ರಿಕಲ್‌ಚರ್ ಇಲಾಖೆಯವರು ಏನನ್ನೂ ಕೊಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಅವನಲ್ಲಿ ಶಕ್ತಿಯಿಲ್ಲ. ಇದು ಆಗುವತನಕ ಈ ದೇಶಕ್ಕೆ ಸುಖವಾಗುವುದಿಲ್ಲ. ಸುಮಾರು ಹತ್ತಿಪ್ಪತ್ತು ಎಕರೆ ಜಮೀನು ಇರು

ವವರೇನೋ ಸ್ವಲ್ಪ ವಶೀಲಿ ಮಾಡಿಕೊಂಡು ಸಾಲವನ್ನು ಪಡೆದು ಬಾವಿ ಮಾಡಿಕೊಂಡು ಜಮೀನಿನಲ್ಲಿ ಬೆಳೆಯುತ್ತಾರೆ. ಆದರೆ ನಾನು ಒಂದು ಸೂಚನೆ ಸರಕಾರಕ್ಕೆ ಇಲ್ಲಿ ಕೊಡಬೇಕಾಗಿದೆ. ಒಂದೊಂದು ಎಕರೆ ಇರುವ ನಾಲ್ಕೈದು ಜನ ಜಮೀನುದಾರರನ್ನು ಒಟ್ಟುಗೂಡಿಸಿ ಅವರಿಗಾಗಿ ಒಂದು ಬಾವಿಯನ್ನು ತೆಗೆದುಕೊಳ್ಳಲು ಜಾಯಿಂಟು ಸೆಕ್ಯೂರಿಟಿಮೇಲೆ ಈ ಬಾವಿಯನ್ನು ಕೊಡಬಹುದು. ಈಗ ಕುಡಿಯುವ ನೀರಿನ ಬಾವಿಗಾಗಿ ಹತ್ತಾರು ಜನಕ್ಕೆ ಅನುಕೂಲವಾಗುವಂತೆ ಒಂದು ಸಮಾಜದ ಸಾಮೂಹಿಕ ಬಾವಿ ಎಂದು ಮಾಡುವಂತೆ, ಹತ್ತು ಹತ್ತು ಎಕರೆಗಳಷ್ಟು ಜಮೀನಿನವರ ಉಪಯೋಗಕ್ಕಾಗಿ ಎಂದು ಒಂದು ಬಾವಿಯನ್ನು ತೆಗೆಸಿ ಆ ಜನಕ್ಕೆ ವ್ಯವಸಾಯ ಮಾಡಿಕೊಳ್ಳಲು ಸರಕಾರ ಸಹಾಯ ಮಾಡಿಕೊಡಬಹುದು. ತಕಾವಿ ಲೋನಿನಮೇಲೆ ಈ ರೀ ಬಾವಿಯನ್ನು ಮಾಡಿಸಿಕೊಡಬಹುದು. ಇದರ ಬಗ್ಗೆ ಸೂಕ್ತವಾದ ನಿಯಮ ಮಾಡಿಕೊಂಡು ಕೊಡಬಹುದು ಎಂದು ಸರಕಾರಕ್ಕೆ ಸಲಹೆ ಕೊಡುತ್ತೇನೆ.

ತಗಾಯಿ ಸಾಲ ಕೊಡುವಾಗ ಕೆಲವರು ಬಾವಿಯನ್ನು ತೆಗೆದುಕೊಂಡು ಅದರಿಂದ ಯಾವ ರೀತಿ ಬೆಳೆ ಬಂದಿದೆ, ಬಾವಿಯಾಗಿದೆಯೇ ಎನ್ನುವುದನ್ನೂ ನೋಡದೇ ಸಾಲ ಕೊಡುತ್ತಿದ್ದಾರೆ. ತಕಾವಿ ಲೋನು ತೆಗೆದುಕೊಂಡು ಬಾವಿ ಮಾಡಿದಮೇಲೆ ಅದರಿಂದ ಕಾಳನ್ನೇನೂ ಬೆಳೆಯದಿದ್ದರೆ ಇದರಿಂದ ತಕ್ಕ ಫಲ ಸಿಗುವುದಿಲ್ಲ. ಇದರಲ್ಲಿರುವ ಷರತ್ತಿನಲ್ಲಿ ಇಷ್ಟು ಎಕರೆಗಳಷ್ಟು ಕಾಳು ಬೆಳೆಯಬೇಕೆನ್ನುವ ಷರತ್ತೂ ಇದೆ. ಅದನ್ನು ಯಾರೂ ಸರಿಯಾಗಿ ನೋಡುತ್ತಲೇ ಇಲ್ಲ. ಇನ್ನು ಮುಂದಾದರೂ ತಕಾವಿ ಸಾಲ ತೆಗೆದುಕೊಂಡು ಬೇಸಾಯ ಮಾಡುವವರು ಕನಿಷ್ಟಪಕ್ಷ ಮೂರು ಎಕರೆಯಲ್ಲಾದರೂ ಕಾಳನ್ನು ಕಡ್ಡಾಯವಾಗಿ ಬೆಳೆಯಲೇಬೇಕೆಂದು ನಿರ್ಬಂಧ ಮಾಡಿದರೆ ಸ್ವಲ್ಪ ಮಟ್ಟಿಗಾದರೂ ಆಹಾರದ ಬೆಳೆ ಬೆಳೆಯಬಹುದು. ಆದರೆ ಈಗ ಏನಾಗಿದೆ ಎಂದರೆ ಬಾವಿಗಳಿಗೆಂದು ಸಾಲವನ್ನೇನೋ ಕೊಡುತ್ತಾರೆ. ಆದರೆ ಇದನ್ನು ನೋಡಲು ಗ್ರಾಮದಲ್ಲಿರುವ ಪಂಚಾಯತಿಗಳವರೂ ಲಕ್ಷ್ಯ ಕೊಡುತ್ತಿಲ್ಲ. ಬಾವಿಗಳಿಗಾಗಿ ತೆಗೆದುಕೊಂಡ ಹಣ ಆ ಜಮೀನಿಗೆ ಉಪಯೋಗವಾಗದೇಹೋದರೆ, ಕಾಳನ್ನು ಹೇಗೆ ಬೆಳೆಯಲಿಕ್ಕಾಗುತ್ತದೆ? ಕಾಳು ಬೆಳೆಯಾಗುತ್ತದೆ ಎನ್ನುವ ಒಂದು ಗ್ಯಾರಂಟಿ ಕೂಡ ಇಲ್ಲ. ನಾಲ್ಕೈದು ಎಕರೆಗಳಷ್ಟು ಜಮೀನಿನಲ್ಲಿ ಒಂದೆರಡು ಮೂರು ಎಕರೆಗಳಲ್ಲಿದ್ದರೂ ಧಾನ್ಯವನ್ನೂ ಬೆಳೆದರೆ ಸುಮಾರು ಹತ್ತು ಲಕ್ಷ ಟನ್ನಿನಷ್ಟು ಧಾನ್ಯವನ್ನು ಉತ್ಪತ್ತಿ ಮಾಡಲು ಶಕ್ಯವಿದೆ. ಈಗ ತಾಲ್ಲೂಕು ಬೋರ್ಡುಗಳಿಗೆ ಮುಖ್ಯವಾದ ಜವಾಬುದಾರಿಗಳನ್ನೆಲ್ಲಾ ಕೊಟ್ಟಿದ್ದಾರೆ. ಅದರಂತೆ ಅಗ್ರಿಕಲ್‌ಚರಲ್ ಪ್ರೊಡಕ್ಷನನ್ನು ಮತ್ತು ಇದರ ಜವಾಬ್ದಾರಿ ವಹಿಸಿ ಯಾರಿಗಾದರೂ ವಹಿಸಿಕೊಟ್ಟರೆ ಅದರಿಂದ ಸ್ವಲ್ಪ ಅನುಕೂಲವಾಗಬಹುದು. ತಾಲ್ಲೂಕು ಬೋರ್ಡುಗಳಿಗೆ ವಹಿಸಿದರೆ, ಗ್ರಾಮಸೇವಕರ ಮೂಲಕ ಅಗ್ರಿಕಲ್‌ಚರ್ ಪ್ರೊಡಕ್ಷನ್ನು ಹೇಗಾಗುತ್ತದೆ ಎನ್ನುವುದಕ್ಕೆ ಅವರಿಗೆ ಒಂದು Job Sheet ಕೊಟ್ಟು ಅದರಿಂದ ರಿಪೋರ್ಟನ್ನು ಮೇಲಿಂದಮೇಲೆ ತರಿಸಿಕೊಳ್ಳಬಹುದು. ನೀವೆಲ್ಲ ನಂಬಿರುವ ಹಾಗೆ Agriculture is a cradle of culture, ಎನ್ನುವಂತೆ ವಿಲೇಜು ಲೆವೆಲ್ಲಿನಲ್ಲಿ ನೋಡಬಹುದು, ಡಿಸ್ಟ್ರಿಕ್ಟು ಲೆವೆಲ್ಲಿನಲ್ಲಿ ನೋಡಬಹುದು. ಆದರೆ ಹಸಿವು ಹಿಂಗುವವರನ್ನು ನಾವು ಎಂದೂ ಕಂಡಿಲ್ಲ. ಏನೋ ಒಂದೆರಡು ದಿನ ಉಪವಾಸ ಮಾಡುವವರನ್ನು ನೋಡಿದ್ದೇವೆ. ಆದರೆ Every rule has got an exception ಎನ್ನುವಂತೆ ಯಾರೋ ಒಬ್ಬರು ಹೆಂಗಸು ಧನಲಕ್ಷ್ಮಿ ಎನ್ನುವವರು ಊಟವನ್ನೇ ಮಾಡುತ್ತಿಲ್ಲ ಎಂದು ಹೇಳಿದ್ದನ್ನು ಕೇಳಿದ್ದೇನೆ. ಹೀಗೆ ನೀವು 5 ವರ್ಷಗಳಿಂದಲೂ ರಾಮರಾಜ್ಯ ಮಾಡುತ್ತೇವೆಂದು ಏನು ಹೇಳುತ್ತಿದ್ದೀರೋ ಅಂತಹ ರಾಜ್ಯ ಮಾಡುವುದಕ್ಕೆ ಶಕ್ಯವಿಲ್ಲ. ಇದರಲ್ಲೇನೋ ಇದೆ. ನನಗೂ ಒಬ್ಬರು ಹೇಳಿದರು 'ಇದು ಎಮರ್ಜೆನ್ಸಿ ಕಾಲ' ಎಂದು ಈಗ ಹೆಚ್ಚು ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುತ್ತಿದ್ದಾರೆ. ಆದರೆ ಹಣವನ್ನುಳಿಸಿ ಎಂದು ನಮ್ಮ ಮಂತ್ರಿಗಳು ಭಾರಿಭಾರಿಯಾಗಿ ಹೇಳುತ್ತ ಬರುತ್ತಿದ್ದಾರೆ. ಅದಕ್ಕೆ ಸಾಕಷ್ಟು ಹಣ ಕೊಡಬೇಕಾದರೆ ಕಾಳು ಬೆಳೆಯುವವರಿಗೆ ಸರಿಯಾದ ಅನುಕೂಲವನ್ನು ನೀವು ಮಾಡಿಕೊಡಬೇಕಾಗಿದೆ. ಆಗ ಹೆಚ್ಚಿನ ಕಾಳು ಬೆಳೆದರೆ ಉಳಿಸಲಿಕ್ಕೆ ಸಾಧ್ಯವಾಗುತ್ತದೆ. ಈಗ ಏನು ಉಳಿತಾಯ ಮಾಡಬೇಕೆಂದು ಹೇಳುತ್ತೀರೋ ಅದಕ್ಕೆ ಹತ್ತರಷ್ಟು ಉಳಿತಾಯ ಮಾಡಿಕೊಡಬಹುದು. ಸುಮ್ಮನೆ ಇಲ್ಲಿ ಕುಳಿತಿರುವ 27 ಮಂತ್ರಿಗಳೇ ಬರೀ ಬಾಯಲ್ಲಿ ಹೇಳುತ್ತ ಹೋದರೆ ಇದರಿಂದೇನೂ ಪ್ರಯೋಜನವಾಗುವುದಿಲ್ಲ.

ಕಡ್ಡಾಯ ಶೇಖರಣೆಗಾಗಿ ಸೇವಿಂಗ್ಸ ಡಿಪಾಜಿಟ್ ಸ್ಕೀಂ ಅನ್ನು ಕೇಂದ್ರ ಹಣಕಾಸಿನ ಮಂತ್ರಿ ಮುರಾರ್ಜಿಯವರು ಹಾಕಿಕೊಂಡಿದ್ದಾರೆ. ಅದನ್ನು ಬೇರೆ ರೀತಿ ಮಾಡಬಹುದಾಗಿತ್ತು. ಕೋಆಪರೇಟಿವ್ ಸೊಸೈಟಿಗಳಲ್ಲಿ ಒಂದು ನೂರು ರೂಪಾಯಿ ಷೇರ್ ಬಂಡವಾಳದಲ್ಲಿ 5 ರೂಪಾಯಿ ಕಡಿಮೆಮಾಡಿ ಷೇರ್ ಕ್ಯಾಪಿಟಲ್ ಕೂಡಿಸುತ್ತಾರೆ. ಇದು ಕಡ್ಡಾಯವಾಗಿದೆ ಎಂದು ಅನಿಸುವದಿಲ್ಲ. ಆದರೆ ಕಂಪಲ್ಸರೀ ಸೇವಿಂಗ್ಸ ಆಗುತ್ತದೆ. ಅದೇ ರೀತಿಯಾಗಿ ನೂರಕ್ಕೆ ಹತ್ತು ರೂಪಾಯಿ ಮುಖಬೆಲೆಯ ಸದಸ್ಯರನ್ನು ಮಾಡಿಕೊಳ್ಳಬೇಕು. ಮತ್ತು ಮುಂದಿನ ವರ್ಷ ನೂರಕ್ಕೆ 20 ರಷ್ಟು

(ಶ್ರೀ ಎಂ. ವಿ. ಶೆಟ್ಟಿ)

ಸದಸ್ಯರನ್ನು ಹೆಚ್ಚು ಮಾಡಿಕೊಳ್ಳಲು ತಿಳಿಸಬೇಕು. ಈ ನಿಯಮದಲ್ಲಿ ಬದಲಾವಣೆ ಮಾಡುವುದು ಒಳ್ಳೆಯದು. ಇದರಿಂದ ಪರ್ಸುಯೇಶನ್ ಮಾಡಬಹುದು. ಅಂದರೆ ಬರುವ ಐದು ವರ್ಷಗಳಲ್ಲಿ 00 ಜನ ಸದಸ್ಯರಿದ್ದುದು 600 ಜನ ಸದಸ್ಯರಾಗಬಹುದು, ಒಕ್ಕಲತನ ವಿಷಯ ಒಂದೆರಡು ಮಾತು ಹೇಳಬೇಕಾಗಿದೆ. ಆದರೆ ಈಗ ವೇಳೆ ಇಲ್ಲ, ಒಂದೇ ಒಂದು ಮಾತು ಹೇಳುತ್ತೇನೆ. ನಮ್ಮ ಜನೋಪಯೋಗಿ ಜನಪ್ರಿಯ ಜನನಾಯಕ ಮಂತ್ರಿ ಮಂಡಳದವರು ಜನರಿಗೆ ಮೊದಲು ಹೊಟ್ಟೆಗೆ ಹಿಟ್ಟು ಸಿಕ್ಕುವಂತೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P. M.

ಶ್ರೀ ಎಸ್. ಅವಲರೆಡ್ಡಿ (ಶಿಡ್ಲಘಟ್ಟ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವ ಬೇಡಿಕೆಗಳಿಗೆ ಬೆಂಬಲ ಕೊಡುತ್ತಾ ಒಂದೆರಡು ವಿಷಯಗಳ ಬಗ್ಗೆ ಮಾತನಾಡಲು ಇಚ್ಛೆಪಡುತ್ತೇನೆ. ವ್ಯವಸಾಯ ಇಲಾಖೆ ಅರಣ್ಯ ಇಲಾಖೆ ನಮ್ಮ ಸರಕಾರದಲ್ಲಿ ಬಹು ಪುರಾತನ ಕಾಲದಿಂದ ಬಂದಿರುವ ಇಲಾಖೆಗಳಾಗಿವೆ. ಮೊದಲಿನಿಂದಲೂ ಅರಣ್ಯ ಇಲಾಖೆಯಿಂದ ಉತ್ಪತ್ತಿಯಿದೆ ವ್ಯವಸಾಯ ಇಲಾಖೆಯ ಬಗ್ಗೆ ಅಧಿಕಾರಿ ವರ್ಗದವರು ಈಗಿನ ಮಂತ್ರಿಮಂಡಳವು ಮುತವರ್ಜಿವಹಿಸಿ ಅಭಿವೃದ್ಧಿಗೊಳಿಸುತ್ತಿದ್ದಾರೆ. ಸ್ವಾತಂತ್ರ್ಯ ಬಂದಮೇಲೆ ಆಧುನಿಕ ವ್ಯವಸಾಯ ಪದ್ಧತಿಯಿಂದ ರಿಸರ್ಚ ಮುಖೇನ, ಪಾಶ್ಚಾತ್ಯ ದೇಶಗಳಿಗೆ ಅಧಿಕಾರಿಗಳನ್ನು ಕಳಿಸಿ ಅಲ್ಲಿರತಕ್ಕಂಥ ವಿಧಾನವನ್ನು ನಮ್ಮ ದೇಶದಲ್ಲಿ ಅನುಷ್ಠಾನಕ್ಕೆ ತರಲು ಬಹಳ ಮುಂದುವರಿದಿದ್ದೇವೆ. ಪಂಚಾಯಿತಿ ರಾಜ್ಯ, ತಾಲ್ಲೂಕ ಬೋರ್ಡ್, ಡಿಸ್ಟ್ರಿಕ್ಟ ಡೆವಲಪ್‌ಮೆಂಟ ಕೌನ್ಸಿಲ್ ಸ್ಥಾಪನೆಯಾಗಿವೆ. ತಜ್ಞರ ಸಹಾಯದಿಂದ ವ್ಯವಸಾಯ ಅಭಿವೃದ್ಧಿಗೊಳಿಸಲಾಗುತ್ತಿದೆ. ಎರಡನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಸರಿಯಾಗಿ ಉತ್ಪತ್ತಿಯಾಗದೆ ಗುರಿ ಮುಟ್ಟಲಿಲ್ಲ ಎಂಬುದು ಸರಕಾರಕ್ಕೆ ಗೋಚರವಾಯಿತು. Assured water supply ಇದ್ದರೆ assured crop ಬರುತ್ತದೆ ಎಂದು ಕಂಡು ಹಿಡಿದರು. ಆದ್ದರಿಂದ ಕೋಟ್ಯಾಂತರ ರೂಪಾಯಿ ಒದಗಿಸಿ irrigation wells, pump sets ಒದಗಿಸಲು ಏರ್ಪಾಡಾಗಿದೆ. ಇದರಿಂದ ಏನು ಪ್ರಯೋಜನವಾಗಿದೆ ಎಂದು ಅನೇಕ ಜನ ಪ್ರಶ್ನೆ ಕೇಳುತ್ತಾರೆ. ಇದು ಈಗತಾನೆ ಹುಟ್ಟಿದ ಮಗು ಆಗಿದೆ. ಈಗತಾನೆ ಹುಟ್ಟಿದ ಮಗು ದುಡಿದು ಸಂಸಾರಕ್ಕೆ ಉತ್ಪತ್ತಿಮಾಡಿ ಕೊಡುವುದಿಲ್ಲ ಎಂದು ಹೇಳಬೇಕಾಗುತ್ತದೆ. ಈ ವರ್ಷ ಶ್ರದ್ಧೆಯಿಂದ ಕೆಲಸ ಮಾಡಿದರೆ, ಸರಕಾರ ಒದಗಿಸುವ ಸೌಲಭ್ಯ ಉಪಯೋಗಿಸಿ, ಅವುಗಳನ್ನು ದುರುಪಯೋಗ ಪಡಿಸಿಕೊಳ್ಳದೆ, ಅನುಷ್ಠಾನಕ್ಕೆ ತಂದರೆ ಕೆಲವು ವರ್ಷಗಳಲ್ಲಿ ಸಂಪತ್ತು ಬೆಳಿಸಬಹುದು. ಉತ್ಪತ್ತಿ ಜಾಸ್ತಿಯಾಗುವದರಲ್ಲಿ ಸಂಶಯವಿಲ್ಲ. ಈ ಇಲಾಖೆಯಲ್ಲಿ ಬರೀ ಕಾಗದದ ಮೇಲೆ ಕ್ವೆರೀ ಹಾಕತಕ್ಕಂಥಾದ್ದು ಒಳ್ಳೆಯದಲ್ಲ, ಅದನ್ನು ವಿರೋಧ ಮಾಡಬೇಕಾಗುತ್ತದೆ. ಕ್ವೆರೀ ಹಾಕುವುದು ಹತ್ತಾರು ತಿಂಗಳು ಮುಂದಕ್ಕೆ ತಳ್ಳುವುದು ಸುಲಭ. ಅದರಿಂದ ದೇಶದಲ್ಲಿ ಉತ್ಪತ್ತಿಯಾಗುವದಿಲ್ಲ. ಅಧಿಕಾರಿಗಳು discretionary powers ಉಪಯೋಗಿಸಿಕೊಂಡು ಸಕಾಲದಲ್ಲಿ ರೈತರಿಗೆ ಸೌಲಭ್ಯ ಒದಗಿಸಿಕೊಡಬೇಕು. ರೈತರಿಗೆ ಉತ್ತಮ ಬೀಜ ಒದಗಿಸುವುದಕ್ಕೆ ವ್ಯವಸಾಯ ಇಲಾಖೆಯಿದೆ. ಬಿತ್ತನೆ ಪ್ರಿಜರ್ವ ಮಾಡತಕ್ಕ ಸ್ಕೀಂ ಮಾಡಿದ್ದಾರೆ. ಅನೇಕ ಕಡೆ ಅದು ಜಾರಿಗೆ ಬಂದಿದೆ. ಮತ್ತು ಬರಲಿದೆ. ತಜ್ಞರು ಬಹಳ ಶ್ರದ್ಧೆಯಿಂದ ದೇಶ ಭಕ್ತಿಯಿಂದ ರೈತರ ಅಭಿವೃದ್ಧಿಗಾಗಿ ಹೃತ್ಪೂರ್ವಕವಾಗಿ ಕೆಲಸ ಮಾಡಬೇಕು. ತುಮಕೂರು ಜಿಲ್ಲೆಯಿಂದ ಭತ್ತದ ಬಿತ್ತನೆಯನ್ನು ನಮ್ಮ ಜಿಲ್ಲೆಗೆ ತಂದಾಗ್ಗೆ ಸರಿಯಾಗಿ ಮೊಳಕೆ ಬರಲಿಲ್ಲ. ಆ ಬಿತ್ತನೆ ಸರಿಯಾಗಿ ಪ್ರಿಜರ್ವ ಮಾಡಿರಲಿಲ್ಲ ಎಂದು ತಿಳಿದು ಬಂದಿದೆ. ತಪ್ಪನ್ನು ಸುಧಾರಿಸಲು ಪ್ರಯತ್ನಿಸಬೇಕು. ಬರಿ ರಾಗಿ ಭತ್ತ ಜೋಳ ಬೆಳೆದರೆ ಸಾಲದು. ಹಾರ್ಟಿಕಲ್ಚರ್ ಬೆಳೆಸುವುದಕ್ಕೆ ಪ್ರಯತ್ನ ಮಾಡುವುದು ಅಗತ್ಯ. ಮುತವರ್ಜಿ ವಹಿಸಿ ಹಣ್ಣು ಹಂಪಲ ಬೆಳೆದರೆ ಅನುಕೂಲವಾಗುತ್ತದೆ. ನವನಾಗರೀಕತೆಯಲ್ಲಿ ಹಣ್ಣುಹಂಪಲ ಉಪಯೋಗ ಮಾಡುವುದು ಹೆಚ್ಚಾಗಿದೆ. ಇದರಿಂದ ಹಣ ಜಾಸ್ತಿ ಬರುತ್ತದೆ. ಚೇಪೆ, ಬಾಳೇ, ಸಪೋಟ ಮುಂತಾದ ಅನೇಕ ತರದ ಹಣ್ಣುಗಳ ಸಸಿಗಳನ್ನು ಎನ್.ಈ.ಎಸ್. ಮುಖಾಂತರ ರೈತರಿಗೆ ಕೊಡುವುದು ಒಳ್ಳೆಯದು. ರೈತರ ಆರ್ಥಿಕಸ್ಥಿತಿ ಜಾಗ್ರತೆ ಸುಧಾರಿಸುತ್ತದೆ. ಅಲ್ಲಲ್ಲಿ ಡೆಮಾನ್‌ಸ್ಟ್ರೇಷನ್ ಫಾರ್ಮ ಮಾಡಿ ಒಳ್ಳೇ ಬೀಜ, ಸಸಿ ರೈತರಿಗೆ ಒದಗಿಸಬೇಕು.

ವ್ಯವಸಾಯ ಮಾಡಲು ರೈತನು ಪುರಾತನಕಾಲದಿಂದ ಎತ್ತು ಉಪಯೋಗಿಸುತ್ತಾನೆ. ಈಗಿನ ಸುಧಾರಿಸಿದ ವ್ಯವಸಾಯದಲ್ಲ ಕಬ್ಬಿಣ ನೇಗಿಲು ರೈತನು ಉಪಯೋಗಿಸುತ್ತಾನೆ. ಆದರೆ

1,000-1,200 ರೂಪಾಯಿ ಕೊಟ್ಟು ತಂದ ಎತ್ತುಗಳನ್ನು ಹೂಡಲು ರೈತನು ಭಯಪಡುತ್ತಾನೆ. ಎತ್ತುಗಳ ವಿಚಾರದಲ್ಲಿ ರೈತನಿಗೆ ಅಪಾರ ಭಯಭಕ್ತಿಯಿರುತ್ತದೆ.

[Mr. Speaker in the Chair.]

ಆದುದರಿಂದ ಕಬ್ಬಿಣ ನೇಗಿಲು ಹೂಡಲು ಎತ್ತುಗಳನ್ನು ಉಪಯೋಗಿಸುವದಿಲ್ಲ. ಇಂಥ ಎತ್ತುಗಳಿಗೆ ಸರಿಯಾದ ಹಸಿರು ಮೇವು ಸಿಕ್ಕುವದಿಲ್ಲ. ಅವು ಬಲಹೀನವಾಗಿವೆ. ರೈತನ ಹತ್ತಿರ ಪುಷ್ಟಿಕರ ಆಹಾರವಿಲ್ಲ. ಈ ರೀತಿ ಪರಿಸ್ಥಿತಿ ಇದೆ. ಜಪಾನ ಪದ್ಧತಿ ಭತ್ತ ಬೆಳೆಯುವದಕ್ಕೆ ಅಲ್ಲಿ ಯಾವ ರೀತಿ ಗದ್ದೆ ಉಳುವೆ ಮಾಡುತ್ತಾರೋ ಅದೇ ರೀತಿ ಇಲ್ಲಿಯೂ ಅದನ್ನು ಜಾರಿಗೆ ತರಲು ಏನು ಕಷ್ಟ?

ಸರ್ಕಾರದಲ್ಲಿ ನಾನು ಇದನ್ನು ಇಡುತ್ತೇನೆ. ಜಪಾನಿನಲ್ಲಿ ಬತ್ತವನ್ನು ಜಾಸ್ತಿ ಬೆಳೆಯುತ್ತಾರೆ. ಅಲ್ಲಿ ಹೆಚ್ಚಿನ ಇಳುವರಿ ಬರುತ್ತದೆ. ಅಲ್ಲಿ ಉಪಯೋಗಿಸತಕ್ಕಂಥ ಉಳುಮೆಯ ಯಂತ್ರ ಸುಲಭವಾಗಿದೆ. ಮತ್ತು ಹಗುರವಾಗಿದೆ. ಹೆಂಗಸರು ಕೂಡ ಅದರಲ್ಲಿ ಉಳುಮೆ ಮಾಡಬಹುದು. 2 H.P. 3 PHP. 4 HP. 5 HP. ಪವರ್ ಟಿಲ್ಲರ್ಸ್‌ಗಳನ್ನು ಅಲ್ಲಿ ವ್ಯವಸಾಯಕ್ಕೆ ಉಪಯೋಗಿಸುತ್ತಾರೆ. ಜಪಾನಿನ ಸುಮಾರು 56 ಸಾವಿರ ಪವರ್ ಟಿಲ್ಲರ್ಸ್‌ಗಳು ಕೆಲಸ ಮಾಡುತ್ತಿವೆ. ತಜ್ಞರು ಅಂಥಾ ಯಂತ್ರಗಳನ್ನು ರೈತರಿಗೆ ಕೊಡಬಹುದು ಎಂದು ಹೇಳಿದಾಗ ನಮ್ಮ ಸರ್ಕಾರದವರು ಏತಕ್ಕೆ ಕೊಡಬಾರದು? ಇಂಡಸ್ಟ್ರಿಯಲ್ ಎಗ್ಜಿಬಿಷನ್ ಡೆಲ್ಲಿಯಲ್ಲಿ ಮತ್ತು ಮದ್ರಾಸಿನಲ್ಲಿ ನಡೆದಿದೆ. ನಾನೂ ಸಹ ಅದನ್ನು ನೋಡಿದ್ದೇನೆ. ಒಂದು ಟಿಲ್ಲರಿಗೆ 1,250 ರೂಪಾಯಿ ಬೆಲೆಯಾಗುತ್ತದೆ. ಅದಕ್ಕೆ 75 ಪರ್ಸೆಂಟ್ ಸೇಲ್ಸ್‌ಟ್ಯಾಕ್ಸ್ ಹಾಕಿದರೆ 1,750 ರೂಪಾಯಿಗಳು ಆಗಬಹುದು. ಒಂದು ವೇಳೆ ನಾವೇ ಅದನ್ನು ತಯಾರು ಮಾಡಿದರೆ ಅದರಿಂದ ಲಾಭ ಆಗಬಹುದು. ಇಂಥಾದ್ದನ್ನು ನಮ್ಮ ರಾಜ್ಯಸರ್ಕಾರದವರಾಗಲೀ ಅಥವಾ ಕೇಂದ್ರ ಸರ್ಕಾರದವರಾಗಲೀ ತಯಾರು ಮಾಡಿದರೆ ನಮ್ಮ ದೇಶದ ರೈತರಿಗೆ ಅನುಕೂಲವಾಗುತ್ತದೆ. ಅದು ಬಿಟ್ಟು ಸ್ಕೂಟರನ್ನು ತಯಾರು ಮಾಡುತ್ತಿದ್ದಾರೆ. ಇದರಿಂದ ಏನಾಗಿದೆಯೆಂದರೆ ಕೆಲವರು ಸ್ಕೂಟರ್‌ನ ಹಿಂದುಗಡೆ ಹೆಣ್ಣುಮಕ್ಕಳನ್ನು ಕೂರಿಸಿಕೊಂಡು ಪೆರೇಡ್ ಹೋಗುವುದಕ್ಕೆ ಅನುಕೂಲವಾಗಿದೆ. ಆದರೆ ವ್ಯವಸಾಯಕ್ಕೆ ಬೇಕಾದಂಥ ಯಂತ್ರಗಳನ್ನು ತಯಾರಿಸುವ ಕಡೆಗೆ ಸರ್ಕಾರದವರು ಗಮನ ಕೊಟ್ಟಿಲ್ಲ. ದೊಡ್ಡ ಟ್ರ್ಯಾಕ್ಟರುಗಳನ್ನು ದೊಡ್ಡ ದೊಡ್ಡ ಎಂಜಿನಿಯರು ಡಿಪಾರ್ಟ್‌ಮೆಂಟಿನವರು ಸಾವಿರಾರು ರೂಪಾಯಿಗಳು ಕೊಟ್ಟುಕೊಳ್ಳುತ್ತಿದ್ದಾರೆಯೇ ಹೊರತು ಅವು ರೈತನ ಉಪಯೋಗಿಸುವುದಕ್ಕೆ ದೊರಕುತ್ತಾ ಇಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಜಪಾನ್ ದೇಶದಲ್ಲಿರತಕ್ಕ ಯಾವುದಾದರೂ ದೊಡ್ಡ ಕಂಪೆನಿಗಳ ಕೊಲಾಬರೇಷನ್ ತೆಗೆದುಕೊಂಡು ನಮ್ಮ ಮೈಸೂರು ಸಂಸ್ಥಾನದಲ್ಲಿ ಅಂಥಾ ವ್ಯವಸಾಯದ ಯಂತ್ರಗಳನ್ನು ತಯಾರು ಮಾಡತಕ್ಕ ಒಂದು ಕಾರ್ಖಾನೆಯನ್ನು ಸ್ಥಾಪಿಸಿ ಅದರಲ್ಲಿ ತಯಾರು ಮಾಡಿದಂತಹ ವ್ಯವಸಾಯದ ಯಂತ್ರಗಳನ್ನು ರೈತರಿಗೆ ಸಪ್ಲೈ ಮಾಡಿದರೆ ಅವರು ನಿಜವಾಗಿಯೂ ಹೆಚ್ಚಿನ ಆಹಾರವನ್ನು ಉತ್ಪತ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ನಮ್ಮ ಸರ್ಕಾರದವರು ರೈತರಿಗೆ ವ್ಯವಸಾಯದ ಯಂತ್ರೋಪಕರಣಗಳನ್ನು ಒದಗಿಸದೇ ಹೋದರೆ ನಿಜವಾಗಿಯೂ ಅವರೂ ಹೆಚ್ಚಿನ ಆಹಾರವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಹೆಚ್ಚಿನ ಜಮೀನನ್ನು ಹದಮಾಡುವುದಕ್ಕಾಗುವುದಿಲ್ಲ. ಸಕಾಲದಲ್ಲಿ ಬಿತ್ತನೆಯನ್ನು ಮಾಡದಿದ್ದರೆ ಸರಿಯಾಗಿ ಪೂರ್ತಿ ಬೆಳೆ ಬರುವುದಿಲ್ಲ.

ಇನ್ನು ಫಾರೆಸ್ಟ್ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ ಫಾರೆಸ್ಟ್ ಇಲಾಖೆಯವರು ಒಳ್ಳೆಯ ಪ್ರೋಗ್ರಾಮನ್ನು ಹಾಕಿಕೊಂಡಿದ್ದಾರೆ. ಎಲ್ಲೆಲ್ಲಿ ಸರ್ಕಾರದ ಫಾರೆಸ್ಟ್ ಜಮೀನು ಇದೆಯೋ ಅಲ್ಲೆಲ್ಲಾ ಯೂಕಲಿಪ್ಟಸ್ ಗಿಡಗಳನ್ನು ಹಾಕಿದ್ದಾರೆ. ಈ ರೀತಿ ಲಕ್ಷೋಪಲಕ್ಷ ಗಿಡಗಳನ್ನು ಫಾರೆಸ್ಟ್ ಜಮೀನಿನಲ್ಲಿ ಹಾಕಿದ್ದಾರೆ. ಅದು ಈಗಾಗಲೇ 6 ಅಡಿ-10 ಅಡಿಯವರೆಗೂ ಬೆಳೆದಿದೆ. ಎನ್. ಇ. ಎಸ್. ಸ್ಕೀಮಿನವರು ಸಹಕರಿಸಿ, ಟೆಕ್ನಿಕಲ್ ಏಯ್ಡ್ ಕೊಟ್ಟು ಒಂದೊಂದು ತಾಲ್ಲೂಕಿನಲ್ಲಿ 25-50 ಎಕರೆ ಪ್ಲಾಂಟೇಷನ್ ನಡೆದಿದೆ. ನಾನು ತಾಲ್ಲೂಕು ಬೋರ್ಡಿನ ಅಧ್ಯಕ್ಷನಾಗಿದ್ದಾಗ ಸುಮಾರು 75 ಎಕರೆ ಪ್ಲಾಂಟೇಷನ್ ಮಾಡಿದೆ. ಅದು ಈಗಾಗಲೇ 8 ಅಡಿ 10 ಅಡಿ ಎತ್ತರದಲ್ಲಿ ಬೆಳೆಯುತ್ತಿದೆ. ಅಲ್ಪ ಮಳೆ ಬೀಳತಕ್ಕ ಪ್ರದೇಶದಲ್ಲಿ ನಮ್ಮ ದೇಶದಲ್ಲಿ ಸಂಸ್ಥಾನಾಮಳೆ ತಾಲ್ಲೂಕೂ ಬೋರ್ಡುಗಳೂ ಮತ್ತು ಪಂಚಾಯಿತಿಗಳೂ ಫಾರೆಸ್ಟ್ ಇಲಾಖೆಯವರ ಸಹಾಯವನ್ನು ತೆಗೆದುಕೊಂಡು ಪ್ಲಾಂಟೇಷನ್ ಮಾಡಿದರೆ ಆ ಪ್ರದೇಶದಲ್ಲಿ ಮಳೆಯ ಅಭಾವ ಇರಲಾರದು ಎಂದು ನನ್ನ ಆಶೆ. ಈ ಯೋಜನೆಯನ್ನು ಸರ್ಕಾರದವರು ಬಹಳ ವರ್ಷಗಳು ಹೀಗೆಯೇ ಮುಂದುವರಿಸಬೇಕು. ಆ ರೀತಿ ಮಾಡುವುದಾದರೆ ಆಗ ನಮಗೆ ಮಳೆ ಜಾಸ್ತಿ ಬಿದ್ದು ಸರಿಯಾಗಿ ಬೆಳೆಯಾಗಿ ಸಂಪತ್ತು ಅಭಿವೃದ್ಧಿಯಾಗುತ್ತದೆ.

ಆಮೇಲೆ ಗಂಧದಮರ ನಮ್ಮ ಕೋಲಾರ ಜಿಲ್ಲೆಯಲ್ಲಿ ಔಷಧಿಗೂ ಕೂಡ ಸಿಕ್ಕುವುದಿಲ್ಲ. ಸ್ಮಗ್ಲಿಂಗ್ ಆಗುತ್ತಿತ್ತು. ಅದನ್ನು ಅನೇಕ ಪೋಲೀಸು ಅಧಿಕಾರಿಗಳು ಹಿಡಿದಿದ್ದಾರೆ. ಗಂಧದ

(ಶ್ರೀ ಎಸ್. ಆವಲರೆಡ್ಡಿ)

ಮರ ನಮ್ಮ ದೇಶದಲ್ಲಿ ಎಷ್ಟು ಸ್ಮಗ್ಲಿಂಗ್ ಆಗುತ್ತಿವೆ ಎನ್ನುವುದನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ. ಇದಕ್ಕೆ ಏನಾದರೂ ಒಂದು ಉಪಾಯವನ್ನು ಹುಡುಕಲೇಬೇಕು. ಫಾರೆಸ್ಟ್ ಇಲಾಖೆಯವರು ನಿಜವಾಗಿಯೂ ದಕ್ಷತೆಯಿಂದ ಕೆಲಸ ಮಾಡುವುದಾದರೆ ಯಾವ ಯಾವ ಕಡೆ ಗಂಧದಮರ ಇದೆಯೋ ಅದೆಲ್ಲವನ್ನೂ ಕೂಡ ಶಾಸನಕ್ಕೆ ಅನುಗುಣವಾಗಿ ಅಲ್ಪಕಾಲಾವಧಿಯಲ್ಲಿಯೇ ಅದನ್ನು ಕಡಿದು ಬೇರೆ ಕಡೆ ಸಾಗಿಸುವುದು ಒಳ್ಳೆಯದು. ನಿಧಾನ ಮಾಡಿದರೆ ರಾತ್ರಿಹೊತ್ತು ಬೊಂಬಾಯಿಗೆ ಹೋಗುತ್ತದೆ. ಅನೇಕ ಕೇಸುಗಳನ್ನು ಹಾಕಿದ್ದಾರೆ. ಅವು ಕೋರ್ಟಿನಲ್ಲಿ ನಡೆಯುತ್ತಿವೆ. ಆದರೂ ಸಹ ಈ ಸ್ಮಗ್ಲಿಂಗ್ ಮಾತ್ರ ತಪ್ಪಲಿಲ್ಲ. ಸಾವಿರಾರು ರೂಪಾಯಿ ಬೆಲೆಬಾಳತಕ್ಕಂಥ ಗಂಧದಮರದ ಉತ್ಪತ್ತಿ ನಮಗೆ ಸಿಕ್ಕದಂತಾಗಿದೆ. ಫಾರೆಸ್ಟ್ ಇಲಾಖೆಯವರು ಸ್ವಲ್ಪ ಮುತವರ್ಜಿ ವಹಿಸಿ ರೈತರಿಗೆ ಉಪಕಾರ ಮಾಡಬೇಕು. ಈಗ ಫಾರೆಸ್ಟ್ ಇಲಾಖೆಯವರು ಬರೀ ಯೂಕಲಿಪ್‌ಟಸ್ ಗಿಡಗಳನ್ನು ಮಾತ್ರ ಸಪ್ಲೈ ಮಾಡುತ್ತಿದ್ದಾರೆ. ಅದರ ಜೊತೆಗೆ ಹೊಂಗೆಮರ, ಮಾವಿನಮರ, ಸೀಗೆಮರ, ಹುಣಸೆಯ ಮರ, ಗೇರುಮರ ಇತ್ಯಾದಿ ಮರಗಳ ಸಸಿಗಳನ್ನು ಬೆಳೆಸಿ ಅವುಗಳನ್ನು ರೈತರಿಗೆ ಎನ್. ಇ. ಎಸ್. ಮುಖಾಂತರ ಒಂದೊಂದು ಸಸಿಗೆ 8 ಆಣೆಯಂತೆ ಒದಗಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಮತ್ತು ಅವರಿಗೆ ಒಂದು ವಿಧವಾದ ಉತ್ಸಾಹ ಉಂಟಾಗುತ್ತದೆ. ಆಗ ಅವನು ದೊಡ್ಡ ಗುಣಿಗಳನ್ನು ಮಾಡಿ ಸಸಿಯನ್ನು ನೆಟ್ಟು ಅದಕ್ಕೆ ಗೊಬ್ಬರ ನೀರು ವಗೈರೆಗಳನ್ನು ಹಾಕಿ ಅದನ್ನು ಪ್ರೀತಿಯಿಂದ ಸಾಕುತ್ತಾನೆ. ಈ ರೀತಿ ಮಾಡಿದರೆ ಹೆಚ್ಚಿಗೆ ಗಿಡಗಳನ್ನು ಹಾಕುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿ ಅನೇಕ ರೈತರು ಅನೇಕ ಗಿಡಗಳನ್ನು ಹಾಕಿ ಬೆಳೆಸಿದರೆ 10–15 ವರ್ಷಗಳಾದ ನಂತರ ಜಾಸ್ತಿ ಸಂಪತ್ತು ಉತ್ಪತ್ತಿಯಾಗುವುದಕ್ಕೆ ಮಾರ್ಗವಾಗುತ್ತದೆ. ನಮ್ಮ ಸ್ನೇಹಿತರು ಅನೇಕರು ಹೇಳಿದ ಹಾಗೆ ಏನಿದ್ದರೂ ಮರಗಳನ್ನು ಕಡಿಯುವವರೇ ಜಾಸ್ತಿ. ಮರಗಳನ್ನು ಹಾಕುವವರು ಬಹಳ ಕಡಿಮೆ. ಆದ್ದರಿಂದ ಫಾರೆಸ್ಟ್ ಇಲಾಖೆಯವರು ಈ ಬಗ್ಗೆ ಒಂದು ಪ್ಲಾನನ್ನು ಹಾಕಿಕೊಂಡು ಗಿಡಗಳನ್ನು ಬೆಳೆಸಿ ರೈತರಿಗೆ ಕೊಟ್ಟರೆ ಅವರು ನಿಜವಾಗಿಯೂ ಅದನ್ನು ಸದುಪಯೋಗಪಡಿಸಿಕೊಳ್ಳುತ್ತಾರೆ. ಶ್ರೀಮಾನ್ ನಂಜೇಗೌಡರು ಈಗಾಗಲೇ ಹೇಳಿದ್ದಾರೆ, ಅರಣ್ಯದಲ್ಲಿರುವ ಅಮರಾಯಿ ಮರಗಳಿಗೆ ತಂದೆ ತಾಯಿ ಯಾರು ಎಂದು. ಈಗಾಗಲೇ ಹೊಸದಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಬಂದು ಮರಗಳಿಗೆ ನಂಬರನ್ನು ಹಾಕುತ್ತಿದ್ದಾರೆ. ಹಳ್ಳಿಗಳಲ್ಲಿರತಕ್ಕ ರೈತರ ರಸ್ತೆಯ ಪಕ್ಕದಲ್ಲಿ ಕೆಲವು ಗಿಡಗಳನ್ನು ಹಾಕಿದ್ದಾರೆ. ಅದನ್ನು ಅವರ ತಾತನೋ ಅಥವಾ ಮುತ್ತಾತನೋ ಹಾಕಿದ್ದರು. ಅವರು ಅವುಗಳ ಹಕ್ಕುದಾರಿಕೆಯನ್ನು ಅನುಭವಿಸಿಕೊಂಡು ಹುಣಿಸೆ ಮರದ ಫಸಲನ್ನು ತೆಗೆದುಕೊಳ್ಳುತ್ತಿದ್ದರು. ಹೊಂಗೆಮರದ ಹೂವನ್ನು ಗುಡಿಸಿಕೊಂಡು ಗೊಬ್ಬರಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು. ಹೊಂಗೆಯಕಾಯನ್ನು ಕೆಡವಿಕೊಂಡು ತೆಗೆದುಕೊಂಡು ಹೋಗುತ್ತಿದ್ದರು. ಹೀಗೆ ರಸ್ತೆಯ ಪಕ್ಕದಲ್ಲಿ ಕೆಲವು ಮರಗಳನ್ನು ಹಾಕಿಕೊಂಡು ಅವುಗಳ ಹಕ್ಕುದಾರಿಕೆಯನ್ನು ಅನುಭವಿಸಿಕೊಂಡು ಬಂದಿದ್ದರೂ ಸಹ ಅಲ್ಲಿರತಕ್ಕ ಹುಣಿಸೆಮರಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಹರಾಜು ಹಾಕಿ ಕಂಟ್ರಾಕ್ಟರಿಗೆ ಕೊಟ್ಟು ದುಡ್ಡು ತೆಗೆದುಕೊಂಡು ಹೋಗುತ್ತಾರೆ. ರೈತರು ಇದು ನಮಗೆ ಸೇರಿದ್ದು ಎಂದು ರೆವಿನ್ಯೂ ಇಲಾಖೆಯವರನ್ನು ಕೇಳಿದರೆ ನಿಮ್ಮಹತ್ತಿರ ಸನ್ನದ್ದು ಇದೆಯೇ ಎಂದು ಕೇಳುತ್ತಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರನ್ನು ಕೇಳಿದರೆ ಈ ಮರ ನಿಮ್ಮ ತಾತ ಅಪ್ಪ ಹಾಕಿದ್ದು ಎನ್ನುವುದಕ್ಕೆ ಆಧಾರ ಏನು ಎಂದು ಕೇಳುತ್ತಾರೆ. ಹಿಂದಿನಿಂದ ಅವಿದ್ಯಾವಂತರಾಗಿರತಕ್ಕ ರೈತರ ಕಷ್ಟಪಟ್ಟು ಮರಗಳನ್ನು ಹಾಕಿ ಬೆಳೆಸಿಕೊಂಡು ಬಂದಿರುತ್ತಾರೆ. ಅದನ್ನು ಅವರ ತಾತನೊ, ಮುತ್ತಾತನೋ ಹಾಕಿರುತ್ತಾನೆ. ಆದರ ಹಕ್ಕುದಾರಿಕೆ ಅವರಿಗೇ ಇರುತ್ತದೆ ಆದ್ದರಿಂದ ಅಂಥಾ ಮರಗಳ ಸೂಪ್ರಿವಿಜನ್ ಬೇಕಾದರೆ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೇ ಇರಲಿ. ಆದರೆ ಅದರ ಹಕ್ಕುದಾರಿಕೆ ಯಾರು ಮರವನ್ನು ಬೆಳೆಸಿರುತ್ತಾರೆಯೋ ಅವರಿಗೇ ಇರುವಂತೆ ಸರ್ಕಾರದವರು ಒಂದು ಆರ್ಡರ್ ಮಾಡಿ ಅವರಿಗೆ ಸನ್ನದ್ದು ಕೊಟ್ಟರೆ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಅನಿಮಲ್ ಹಜ್ಬೆಂಡರಿ ವಿಚಾರ. ನನಗೆ ಗೊತ್ತಿರುವ ಹಾಗೆ ವ್ಯವಸಾಯದ ಇಲಾಖೆ, ಅನಿಮಲ್ ಹಜ್ಬೆಂಡರಿ ಎಲ್ಲಾ ಒಂದೇ ಇಲಾಖೆ ಆಗಿತ್ತು. ಈಗ ಅನಿಮಲ್ ಹಜ್ಬೆಂಡರಿ ಸ್ಪೆಷಲ್ ಸಬ್ಜೆಕ್ಟ್ ಎಂದು ಅದಕ್ಕೇ ಒಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡಿದ್ದಾರೆ. ಇದು ಒಂದು ಬಹಳ ಮುಖ್ಯವಾದ ಇಲಾಖೆ. ಈ ಇಲಾಖೆಯಲ್ಲಿ ಒಳ್ಳೊಳ್ಳೆಯ ತಜ್ಞರು ಇದ್ದಾರೆ. ಇತ್ತೀಚೆಗೆ ಅನೇಕ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ, ಪಶು ವೈದ್ಯಶಾಲೆಗಳನ್ನು (ವೆಟರ್‌ನರಿ ಡಿಸ್‌ಪೆನ್ಸರಿಗಳನ್ನು) ಸ್ಥಾಪನೆ ಮಾಡುತ್ತಿದ್ದಾರೆ. ಇದು ನಮ್ಮ ಮೈಸೂರು ಸಂಸ್ಥಾನದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಬಹಳ ಯಶಸ್ವಿಯಾಗಿ ನಡೆದಿದೆ. ಆದರೆ ಕೆಲವು ತಾಲ್ಲೂಕುಗಳಲ್ಲಿ ಇದು ಯಶಸ್ವಿಯಾಗಿ

ಜರುಗಿಲ್ಲ. ಎಲ್ಲಿ ರೈತರು ಸ್ವಲ್ಪ ಬುದ್ಧಿವಂತರಾಗಿದ್ದಾರೆಯೋ ಅಂಥಾ ಕಡೆ ಅವರು ಸರ್ಕಾರದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಅನುಕೂಲ ಮಾಡಿಕೊಂಡಿದ್ದಾರೆ. ಅಂಥಾ ಸ್ಥಳಗಳಲ್ಲಿ ಇದು ಬಹಳ ಚೆನ್ನಾಗಿ ಯಶಸ್ವಿಯಾಗಿ ನಡೆದಿದೆ.

ನನ್ನ ಜಿಲ್ಲೆಯಲ್ಲಿ ಬಾಗೇಪಲ್ಲಿ ಅಂಥ ತಾಲ್ಲೂಕಿನಲ್ಲಿ ಬಹಳ ಬುದ್ಧಿವಂತರಿದ್ದಾರೆ. ಈ ಹಸುಗಳು ಶೂಲು ಆಗುವುದಕ್ಕೆ ಮುಂಚೆ ಅವುಗಳನ್ನು 2–3 ಮೈಲಿ ಹೊಡೆದುಕೊಂಡು ಹೋಗಬೇಕಾಗುತ್ತಿದೆ, ಅಷ್ಟು ಹೊತ್ತಿಗೆ ವೀರ್ಯವಿರುವುದಿಲ್ಲ. ಇಂಥ ಅನಾನುಕೂಲತೆಗಳಿರುವುದರಿಂದ ಇದು ಅಷ್ಟು ಯಶಸ್ವಿಯಾಗಿ ಜರುಗುತ್ತಾ ಇಲ್ಲ. ಸಂಬಂಧಪಟ್ಟ ಎಕ್ಸ್‌ಪರ್ಟ್‌ಗಳು ಸಲಹೆ ಕೊಟ್ಟು, ಈ ರೀತಿ ಏರ್ಪಾಡು ಮಾಡುವಾಗ ರೈತರಿಗೆ ಸೌಲಭ್ಯ ದೊರಕಿಸಿ ಕೊಡುತ್ತಾರೆಂದು ನಂಬಿದ್ದೇನೆ.

ಶ್ರೀಮಾನ್ ಕೃಷ್ಣಪ್ಪನವರು ಬಹಳ ಮುತುವರ್ಜಿವಹಿಸಿ ದೆಹಲಿಯಿಂದ ನಮ್ಮ ಜಿಲ್ಲೆಗೆ ಹರಿಯಾಣ ಬ್ರೀಡಿನ ಅನೇಕ ಹಸುಗಳನ್ನು ಕಳುಹಿಸಿಕೊಟ್ಟರು. ಅವು ಏನೇ ಕಾರಣಕ್ಕೆ ಸುಲಭವಾಗಿ ಸೂಲು ಆಗಲಿಲ್ಲ. ಕೆಲವು ಸತ್ತುಹೋದುವು. ಅವಕ್ಕೆ ಹವಾ ಗುಣ ಸರಿಹೋಯಿತೋ ಇಲ್ಲವೋ. ಮುತುವರ್ಜಿಯಿಂದ ಹಣ ಖರ್ಚುಮಾಡಿ ಸಾಕಿದರು. ಅವುಗಳ ತಳಿಗಳು ಬಹಳ ಉತ್ಪತ್ತಿಯಾಗಲಿಲ್ಲ. ನಮ್ಮ ಅಭಿಪ್ರಾಯದಲ್ಲಿ ಫಲದಲ್ಲಿರತಕ್ಕಂಥ ತಳಿ ಅಭಿವೃದ್ಧಿ ಮಾಡಬೇಕು; ಇಲ್ಲಿರತಕ್ಕಂಥ ಹವಾಮಾನ ಗುಣಕ್ಕೆ, ನೀರಿಗೆ, ಆಹಾರಕ್ಕೆ ಅವು 'ಸೂಟ್' ಆಗಬೇಕು. ಅಂಥ ತಳಿಗಳನ್ನು ಉತ್ಪತ್ತಿ ಮಾಡುವುದರಲ್ಲಿ ಮುತುವರ್ಜಿ ವಹಿಸಬೇಕು; ಅವು ಸಾಯುವುದಿಲ್ಲ ಚೆನ್ನಾಗಿ ಅಭಿವೃದ್ಧಿಯಾಗುತ್ತವೆ. ಅನೇಕ ವರ್ಷಗಳಿಂದ ನಮ್ಮ ದೇಶದಲ್ಲಿ ಹಳ್ಳಿಕಾರ್ ಅಮೃತಮಹಲ್ ದನಗಳು ಪ್ರಸಿದ್ಧಿಯಾಗಿವೆ. ಟಿಪ್ಪುಸುಲ್ತಾನ್ ಕಾಲದಲ್ಲಿಯೂ ಬಹಳ ಪ್ರಸಿದ್ಧಿಯಾಗಿದುವೊ ಅವು ಜಿರಾಯಿರಿಗೆ ಪ್ರಸಿದ್ಧವಾದುವು. ಟಿಪ್ಪುಸುಲ್ತಾನನ ಕಾಲದಲ್ಲಿ ಫಿರಂಗಿಗಳನ್ನು ಎಳೆಯುವುದಕ್ಕೂ ಹಳ್ಳೀಕಾರ್ ಎತ್ತುಗಳನ್ನು ಕಟ್ಟುತ್ತಿದ್ದರು. ಅದರ ತಳಿಯನ್ನು ಹೆಚ್ಚು ಮುತುವರ್ಜಿಯಿಂದ ಅಭಿವೃದ್ಧಿ ಮಾಡಿದರೆ ನಮ್ಮ ದೇಶಕ್ಕೆ ಅವು ಬಹಳ ಸೂಟ್ ಆಗುತ್ತವೆ ಎನ್ನುವುದು ನನ್ನ ಅಭಿಪ್ರಾಯ.

ಇನ್ನೂ ಕೋ-ಆಪರೇಷನ್ ವಿಚಾರದಲ್ಲಿ ಹೇಳಬೇಕಾದರೆ. ಸ್ವಾಮಿ, Co-operation Department ನಮ್ಮ ಮೈಸೂರಿನಲ್ಲಿ ಬಹಳ ಪುರಾತನ ಕಾಲದಿಂದಲೂ ಒಂದಿದೆ. ಹಿಂದೆ ಅನೇಕ unlimited society ಗಳು ಇದ್ದವು, ಈವಾಗ limited society ಗಳು ಆಗಿವೆ. ರೈತರಿಗೆ ಬೇಕಾದ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಒದಗಿಸಬೇಕಾಗಿದ್ದರೆ, Co-operative institution ಗಳ ಪಾತ್ರಕ್ಕೆ ಬಹಳ ಮಹತ್ವವಿದೆ. ಅನೇಕ ಸೊಸೈಟಿಗಳು ಬಹಳ ಚೆನ್ನಾಗಿ ಕೆಲಸ ನಡೆಸಿಕೊಂಡು ಬಂದಿವೆ. ರೈತನಿಗೆ ಬೇಕಾದ ಸಾಮುಗ್ರಿಗಳನ್ನು ಒದಗಿಸುವುದರಲ್ಲಿ ಸೊಸೈಟಿಗಳು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿವೆ. ಅದರಲ್ಲಿಯೂ ಕೂಡ ಈ ಕಾಲದಲ್ಲಿ ಆಧುನಿಕ ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾಗಿರತಕ್ಕಂಥ ಗೊಬ್ಬರಗಳನ್ನು ಈ ಸೊಸೈಟಿಗಳು ಬಹಳ ಚೆನ್ನಾಗಿ ಒದಗಿಸುತ್ತಿವೆ. ಈ ಸೊಸೈಟಿಗಳ ಆಡಳಿತ ಚೆನ್ನಾಗಿ ಜರುಗುತ್ತಾ ಇಲ್ಲವೆಂತ ಅನೇಕ ಸ್ನೇಹಿತರು ಟೀಕೆ ಮಾಡಿದರು. ನಿಜವಾಗಿಯೂ ವ್ಯವಸಾಯ ಸೊಸೈಟಿಗಳ ವ್ಯವಹಾರ ಚೆನ್ನಾಗಿ ಜರುಗುತ್ತಾ ಇದೆ. ಲಾಭದಾಯಕವಾಗಿಯೂ ಜರುಗುತ್ತಾ ಇದೆ. ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ತಂದ ಹಣವನ್ನು ವಾಪಸ್ಸು ಕೊಡುತ್ತಾ ಇವೆ. ಈ ಸೊಸೈಟಿಗಳ ಶೇರ್ ಹೋಲ್ಡರುಗಳಿಗೆ ಬಹಳ ಆನಂದವಾಗಿರುವುದು ನೋಡಿ, ಸೊಸೈಟಿಗಳಿಂದ ಎಲ್ಲರಿಗೂ ಉಪಕಾರವಾಗುತ್ತಿರುವುದನ್ನು ನೋಡಿ, ಅವುಗಳ ಆಡಳಿತ ದಕ್ಷತೆಯಿಂದ ಜರುಗುತ್ತಿರುವುದನ್ನು ನೋಡಿ ಕೆಲವರಿಗೆ ಸಹಿಸಲಾಗಿಲ್ಲ. ಈ ಹೊಟ್ಟೆಕಿಚ್ಚಿನ ಮಾತು ನಿಜವಾಗಿಯೂ ಪರಿಶೀಲನೆ ಮಾಡದೆ ಆಡಿದ ಮಾತು. ಎಂದು ಹೇಳಲು ಯಾವ ಅಭ್ಯಂತರವೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಯಾರಮೇಲೆ ಹೊಟ್ಟೆಕಿಚ್ಚು.

Sri S. AVALA REDDY.—I have not yielded Mr. Speaker.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀವು ಯಾವಾಗಲೂ ಈಲ್ಡ್ ಆಗುವುದಿಲ್ಲ.

ಶ್ರೀ ಎಸ್. ಅವಲ ರೆಡ್ಡಿ.—ಈ joint co-operative farming ಬಗ್ಗೆ ಬಹಳ ಮಟ್ಟಿಗೆ ಪ್ರಚಾರವಾಗುತ್ತಾ ಇದೆ. ಈ agricultural lands ತೆಗೆದುಕೊಂಡು Co-operative Farms ಮಾಡುವುದರಲ್ಲಿ, ನನಗಾದರೂ ವೈಯಕ್ತಿಕವಾಗಿ ಅಷ್ಟು ನಂಬಿಕೆ ಇಲ್ಲ. ಏಕೆಂದರೆ ನಮ್ಮ ರೈತವರ್ಗದಲ್ಲಿ ಸ್ವಂತವಾಗಿ ಜಮೀನು ಮಾಡಬೇಕು, ಅದರ ಮಾಲಿಕನಾಗಬೇಕು, ಸಾಹುಕಾರನಾಗಬೇಕು, ಎಂಬ ಆಕಾಂಕ್ಷೆ ಬಹಳ, ಜಮೀನು ಅಂದರೆ ರೈತರಿಗೆ ಬಹಳ ಆಶೆ. ಏನೇತನಿ ಚಟ್ಟಿಕೊಳ್ಳಿ, ಜಮೀನು ಅಂದರೆ ಪ್ರಾಣಬಿಡುತ್ತಾರೆ. ಯಾರಾದರೂ ಪಕ್ಕದ ರೈತ ತನ್ನ ಜಮೀನನ್ನು ಸ್ವಲ್ಪ ಉತ್ತುಬಿಟ್ಟಿದ್ದಾನೆ ಎಂದು ಗೊತ್ತಾದರೆ, ದೊಣ್ಣೆ ತೆಗೆದುಕೊಂಡು ಹೋಗಿ ಅವನನ್ನು ಖೂನಿ ಮಾಡಿಬಿಡುತ್ತಾನೆ. ನಮ್ಮ ರೈತರಿಗೆ, ಸರ್ಕಾರ ಎಲ್ಲಾ ಸೌಲಭ್ಯಗಳನ್ನು ಕೊಡುತ್ತಾರೆ, ಟ್ರಾಕ್ಟರ್ ಕೊಡುತ್ತಾರೆ, ಬೀಜ ಕೊಡುತ್ತಾರೆ, ಉಪಕರಣಗಳನ್ನು ಕೊಡುತ್ತಾರೆ, ಸೊಸೈಟಿ ಹೆಸರಿಗೆ ಜಮೀನು

(ಶ್ರೀ ಎಸ್. ಆವಲರೆಡ್ಡಿ)

ಮಾಡಿ ಹೆಚ್ಚಿನ ಉತ್ಪಾದನೆ ಹಂಚಿಕೊಳ್ಳಿ ಎಂದು ನೀವು ಎಷ್ಟೇ ಹೇಳಿದರೂ ಅವರು "ನಮಗೆ ಏಕೆ ಸ್ವಾಮಿ, ಆ ಕೆಲಸ; ಸೊಸೈಟಿಗೆ ಹೆಸರಿಗೆ ನಮ್ಮ ಜಮೀನು ಬದಲಾಯಿಸುವುದು ಆಗದು" ಎಂದು ಹೇಳುತ್ತಾರೆ. ಜಮೀನು ತನ್ನ ಸ್ವಂತದ್ದು ಆಗಬೇಕು. ಜಮೀನು ತನ್ನ ಹೆಸರಿಗೆ ಮಾಡಿದ ಪಕ್ಷದಲ್ಲಿ ಏನಾದರೂ ಸೊಸೈಟಿ ಸೇರಬಹುದು. ಜಮೀನು ಉತ್ಪತ್ತಿ ಷೇರ್ ಹೋಲ್ಡರು ಗಳಲ್ಲಿ ಹಂಚಿಕೆಯಾಗ ಬೇಕು ಎಂದು ನಾವು ಹಾಗೆ ಕಾನೂನು ಬದಲಾವಣೆ ಮಾಡಿದರೆ, ಅವರು ದಾರಿಗೆ ಬರಬಹುದು. ನಾನಂತೂ ಹಲವಾರು ಸಾರಿ Joint Co-operative Farm ಮಾಡೋಣ ಅಂತ ಹೇಳಿ ಪ್ರಯತ್ನ ಮಾಡಿದೆ, ಒಬ್ಬರೂ ಮುಂದೆ ಬರಲಿಲ್ಲ. Co-operative farming ಸಾಕಷ್ಟು ಮಾಡುವುದಕ್ಕೆ ಕಾಲ ಒದಗಿಲ್ಲ, ಸಾಧ್ಯವಿಲ್ಲ.

† ಶ್ರೀ ಜಿ. ವಿ. ಗೌಡ (ಪಾಳ್ಯ).—ಮಾನ್ಯ ಅಧ್ಯಕ್ಷರೆ, ಈ ನಾಲ್ಕಾರು ಬೇಡಿಕೆ ಗಳಿಗೆ 14 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗುತ್ತದೆ; ಅವುಗಳನ್ನು ಈ ಮಾನ್ಯ ಸಭೆಯ ಮಂಜೂರಾತಿಗಾಗಿ ಇಟ್ಟಿದ್ದಾರೆ. ವರ್ಷವರ್ಷವೂ ಇದೇ ರೀತಿ ಸರ್ಕಾರ ಹಣವನ್ನು ಪಡೆದು ಖರ್ಚು ಮಾಡಿದ್ದಾರೆ. ಇಷ್ಟು ವರ್ಷ ಪಡೆದಂಥ ಹಣಕ್ಕೆ ಖರ್ಚುಮಾಡಿದಂತಹ ಹಣಕ್ಕೆ ಅನುಗುಣವಾದಂಥ ಪ್ರತಿಫಲ ಏನು ದೊರಕಿದೆ ಅನ್ನತಕ್ಕಂಥಾದ್ದನ್ನು ಸರ್ಕಾರ ಸಮರ್ಥನೆ ಮಾಡಿ, ಮಂಜೂರಾತಿ ಕೊಡಿ ಎಂದು ಕೇಳಿದ್ದರೆ ಚೆನ್ನಾಗಿರುತ್ತಿತ್ತು. ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಆಹಾರ ಧಾನ್ಯಗಳನ್ನು ಉತ್ಪನ್ನ ಮಾಡತಕ್ಕಂಥ ವಿಷಯದಲ್ಲಿ, ವಾಣಿಜ್ಯ ಧಾನ್ಯಗಳನ್ನು ಬೆಳೆಯತಕ್ಕಂಥ ವಿಷಯದಲ್ಲಿ, ಹೆಚ್ಚು ಪ್ರಮಾಣದಲ್ಲಿ ಬೆಳೆಯಲು ಸರಿಯಾದ ವಾತಾವರಣವನ್ನು ನಿರ್ಮಾಣ ಮಾಡುವುದರಲ್ಲಿ ನೀವು ವಿಫಲರಾಗಿದ್ದೀರಿ ಎಂದು ಅನ್ನದೆ ವಿಧಿಯಿಲ್ಲ. ನೂತನ ವ್ಯವಸಾಯ ಪದ್ಧತಿಗಳನ್ನು ರೈತರು ಅಳವಡಿಸಿಕೊಳ್ಳತಕ್ಕಂಥ ವಿಚಾರದಲ್ಲಿ ಮತ್ತು ಬೆಳೆ ಗಳಿಗೆ ಬರತಕ್ಕಂಥ ರೋಗಗಳನ್ನು ನಿವಾರಣೆ ಮಾಡ ತಕ್ಕಂಥ ವಿಷಯದಲ್ಲಿ ಮಾರು ಕಟ್ಟೆಗಳನ್ನು ರಕ್ಷಣೆ ಮಾಡತಕ್ಕಂಥ ಸಲುವಾಗಿ ಯಾವ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳದೆ, ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ತಿಳುವಳಿಕೆಯನ್ನು ಕೂಡ ಕೊಟ್ಟಿಲ್ಲ ಅಂತ ವಿಷಾದದಿಂದ ಹೇಳ ಬೇಕಾ ಗಿದೆ. ಈ ಬೀಜವನ್ನು ಒದಗಿಸತಕ್ಕಂಥ ವಿಷಯದಲ್ಲಿ ಕೂಡ ನನಗಾದರೂ ಅನ್ನಿಸುತ್ತದೆ; ನಮ್ಮ ರಾಜ್ಯದಲ್ಲಿ 60–62 ಸೀಡ್ ಫಾರ್ಮುಗಳನ್ನು ನಿರ್ಮಾಣ ಮಾಡಿದ್ದಾರೆ ಆಯಾ ಪ್ರದೇಶದ ಅವಶ್ಯ ಕತೆಗೆ ತಕ್ಕಂತೆ ಸೀಡ್‌ಫಾರ್ಮುಗಳು ನಿರ್ಮಾಣವಾಗಿಲ್ಲ. ಯಾವ ಪ್ರದೇಶದಲ್ಲಿ ಉತ್ತಮ ಬೀಜಗಳು ಸಿಗುವುದಿಲ್ಲವೋ ಅಂಥ ಪ್ರದೇಶಗಳಿಗೆ ಸಹಕಾರ ಸಂಘಗಳ ಮೂಲಕವಾದರೂ ಒದಗಿಸಿ ರೈತರಿಗೆ ಈ ಒಂದು ಅನುಕೂಲತೆ ಮಾಡಿಕೊಡಬೇಕು. ಈ ವ್ಯವಸ್ಥೆ ಕೂಡ ಆಗಿಲ್ಲ. ಆದ್ದರಿಂದ ರೈತ ಹೆಚ್ಚಿನ ಉತ್ಪನ್ನ ಮಾಡಿ ಬೆಳೆಯಲಿಕ್ಕೆ ಬೇಕಾಗಿರುವಂಥ ಆಕರ್ಷಣೆ ವಾತಾವರಣ ನಿರ್ಮಾಣವಾಗಿಲ್ಲ ಎಂದು ನಾನು ಸ್ಪಷ್ಟವಾಗಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಒಂದು ನೀತಿ ಮೇಲೆ ಈ ಸೀಡ್‌ಫಾರ್ಮುಗಳು ನಿರ್ಮಾಣವಾಗ ಬೇಕಾಗಿತ್ತು. ಒಂದು ಲಕ್ಷ ಎಕರೆಗೆ ಒಂದು ಸೀಡ್‌ಫಾರ್ಮ್, ಅಥವಾ 1,500 ಚದರ ಮೈಲಿಗೆ ಒಂದು ಸೀಡ್‌ಫಾರ್ಮ್. ಈ ರೀತಿ ಆಯಾ ಪ್ರದೇಶದ ಅವಶ್ಯಕತೆಗೆ ತಕ್ಕಂತೆ ಮಾಡದೆ, ಯಾವ ಪ್ರದೇಶದಲ್ಲಿ ಉತ್ತಮ ಬೀಜಗಳು ಸಿಕ್ಕುತ್ತದೋ ಇಲ್ಲವೋ ಎಂದು ನೋಡಿ ಅಂಥ ಪ್ರದೇಶಗಳಿಗೆ ಒದಗಿಸತಕ್ಕಂಥ ವ್ಯವಸ್ಥೆ ಮಾಡದೆ, ರೈತರಿಗೆ ತಮ್ಮಲ್ಲಿ ಹೆಚ್ಚು ವಿಶ್ವಾಸ ಉಂಟಾಗಿದೆ ಎಂದು ನಿರೀಕ್ಷೆ ಮಾಡಿದರೆ ಬಹಳ ತಪ್ಪಾಗುತ್ತದೆ. ಸ್ಥಳೀಯವಾಗಿ ಗೊಬ್ಬರಗಳನ್ನು ಹಂಚಲಿಕ್ಕೆ ವ್ಯವಸ್ಥೆಯಾಗಿಲ್ಲ. ಹೋದ ವರ್ಷ ಯಾವ ಪ್ರಮಾಣದಲ್ಲಿ ಉತ್ಪನ್ನ ಮಾಡಿದೆ. ಎಷ್ಟು ಈ ದಿವಸ ಇದೆಯೆಂದು ನೋಡಬೇಕು. ಇಂಥ ಪರಿಸ್ಥಿತಿಯಲ್ಲಿ ದ್ವಿಗುಣ ಮಾಡತಕ್ಕಂಥ ಕೆಲಸ ಇಲಾಖೆಯವರು ಮಾಡಬೇಕಾಗಿತ್ತು. ನಮ್ಮ ಮಾನ್ಯ ಮಂತ್ರಿಗಳಿಗೆ ರೈತರ ಹಿತ ರಕ್ಷಣೆ ಮಾಡಬೇಕು, ಉತ್ಪನ್ನ ಹೆಚ್ಚು ಮಾಡಬೇಕೆಂಬ ಹಂಬಲವಿದೆ. ಆದರೆ ಈ ಹಂಬಲ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳ ಲ್ಲಿಯೂ ಇರಬೇಕು. ವ್ಯವಸಾಯ ಇಲಾಖೆ ಇನ್‌ಸ್ಪೆಕ್ಟರುಗಳವರಲ್ಲಿ ಈ ಹಂಬಲ ಹುಟ್ಟಿ, ಸೇವಾ ಮನೋ ಭಾವ ಬರಬೇಕು. ಇಲ್ಲದೆ ಹೋದರೆ ರೈತರನ್ನು ನಿಮ್ಮ ಯೋಜನೆಗಳ ಕಡೆ ಆಕರ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಇವುಗಳ ಬಗ್ಗೆ ವಿಶ್ವಾಸ ಬರಲಿಕ್ಕೆ ಸಾಧ್ಯವಿಲ್ಲ. ನನಗಾದರೂ ಈ ಒಂದು ವ್ಯವಸಾಯದ ಇಲಾಖೆ ಅಸ್ತಿತ್ವದಲ್ಲಿ ಇದೆಯೇ ಅನ್ನಿಸುತ್ತದೆ. ರೈತರು ಸಹಕಾರ, ಸಹಾಯ ಗಳನ್ನು, ಸಹಾನುಭೂತಿಗಳನ್ನು ತೋರಿಸಲಿಕ್ಕೆ ಈ ಒಂದು ಇಲಾಖೆಯಿಂದ ಪ್ರಯೋಜನ ಆದೀತು ಎಂಬ ಭಾವನೆ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ರೈತರಲ್ಲಿ ಬರಲಿಲ್ಲ Public Works Department, ಅಥವ Education Department. ಅಥವ ಇನ್ನೊಂದು ಇಲಾಖೆ ಏನಿದೆ, ಅಂಥದೇ ಒಂದು ಇಲಾಖೆ ಇದೆಯೆಂಬ ಭಾವನೆ ಈ ವ್ಯವಸಾಯ ಇಲಾಖೆಯ ಬಗ್ಗೆಯೂ ಹಳ್ಳಿಯಲ್ಲಿದೆ. ಈ ಒಂದು ಇಲಾಖೆಯಿಂದ ಗುಣವಿದೆ. ತಮಗೆ ಅನುಕೂಲವಿದೆ ಎಂಬ ಭಾವನೆ ಹಳ್ಳಿಯ ಜನಗಳಲ್ಲಿ ಬರುವ ಹಾಗೆ

ಈ ಇಲಾಖೆ ಕೆಲಸಮಾಡಿಲ್ಲ. The people have not felt the existence of the Department. ಹನ್ನೆರಡು ಕೋಟಿ ರೂಪಾಯಿ ಈ ವರ್ಷ ಕೇಳಿದ್ದೀರಿ ? ಆದರೆ ಅದರ ಪ್ರತಿಫಲ ಜನತೆಗೆ ಆಗತಕ್ಕಂಥ ರೀತಿಯಲ್ಲಿ ಮಾಡುತ್ತಾ ಇಲ್ಲವಲ್ಲಾ ಎಂದು ವಿಷಾದಪಡಬೇಕಾಗಿದೆ.

4-00 P. M.

ಈ ವರ್ಷ ಒದಗಿಸಿದ್ದ 14 ಲಕ್ಷ ರೂಪಾಯಿಗಳ ಹಣ ಖರ್ಚಾಗಲಿಲ್ಲ. ಮುಂದಿನ ವರ್ಷ 28 ಲಕ್ಷ ರೂಪಾಯಿಗಳನ್ನು ಜಾಸ್ತಿ ಖರ್ಚು ಮಾಡಬೇಕೆಂದು ಒದಗಿಸಿದ್ದಾರೆ. ಸಿಬ್ಬಂದಿ ಖರ್ಚು 3 ಲಕ್ಷ ರೂಪಾಯಿಗಳು ಹೆಚ್ಚಾಗುತ್ತದೆ. ಖರ್ಚು ಹೆಚ್ಚಾದಾಗಲೆಲ್ಲಾ ರೈತರಿಗೆ ಹೆಚ್ಚಿನ ಹಣ ಸಹಾಯವನ್ನು ಸರ್ಕಾರ ಕೊಟ್ಟರೇ ಆಗಬೇಕು. ಮತ್ತು ಗೊಬ್ಬರಗಳನ್ನು ಹಂಚುವ ವಿಷಯದಲ್ಲಿ ಅನೇಕ ನ್ಯೂನತೆಗಳನ್ನು ನೋಡುತ್ತಿದ್ದೇವೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಮತ್ತು ತಾಲೂಕ್ ಮಾರ್ಕೆಟಿಂಗ್ ಸೊಸೈಟಿಯವರು ಇತ್ತೀಚೆಗೆ ಅದನ್ನು ಹಂಚುತ್ತಿದ್ದಾರೆ. ಈ ಸಂಘಗಳ ಮೂಲಕ ಅದನ್ನು ಹಂಚಬೇಕೆಂದು ಇತ್ತೀಚೆಗೆ ಹಳ್ಳಿಗಳಲ್ಲಿ ಒಂದು ನಿಯಮ ಮಾಡಿದ್ದಾರೆ. ಆದರೆ ಪ್ರತಿಯೊಬ್ಬ ರೈತನಿಗೆ ಚಿಲ್ಲರೆಯಾಗಿ ಇದನ್ನು ಹಂಚಲಿಕ್ಕೆ ಅವಕಾಶವಿಲ್ಲ. ಸೊಸೈಟಿಯವರು ಗೊಬ್ಬರವನ್ನು ಮೊದಲು ತೆಗೆದುಕೊಂಡು ತಮ್ಮ ರೈತರಿಗೆ ಹಂಚಬೇಕೆಂಬ ನಿಯಮವಿದೆ. ಅನೇಕ ಸಹಕಾರ ಸಂಘಗಳು ಫರ್ಟಿಲೈಜರ್ಸನ್ನು ಮಾರಾಟ ಸಂಘಗಳಿಂದ ತೆಗೆದುಕೊಂಡು ರೈತರಿಗೆ ಹಂಚುತ್ತಿದ್ದಾರೆ. ಇದನ್ನು ತಾವು ಚೆನ್ನಾಗಿ ವಿಮರ್ಶೆ ಮಾಡಬೇಕು. ಇದರಿಂದ ರೈತರಿಗೆ ಉತ್ತಮ ಗೊಬ್ಬರ ಸಿಗಲು ಅವಕಾಶವಿಲ್ಲದೆ ಹೋಗಿದೆ. ಮಾರಾಟ ಸಂಘಗಳು ಚಿಲ್ಲರೆಯಾಗಿ ಇವನ್ನು ಮಾರುತ್ತಿಲ್ಲ. ಗ್ರಾಮಾಂತರ ಸಹಕಾರ ಸಂಘಗಳೂ ಸಹ ಮಾರಾಟ ಮಾಡುತ್ತಿಲ್ಲ. ಇದರಿಂದ ರೈತನ ಸ್ಥಿತಿ ಬಹಳ ಶೋಚನೀಯವಾಗಿದೆ. ಸರ್ಕಲ್ ಸೊಸೈಟಿಗಳಾದರೂ ಈ ಕಾರ್ಯವನ್ನು ಮಾಡಬಹುದು. ಆದರೆ ಅವರು ಲೈಸೆನ್ಸ್ ಪಡೆದು ಮಾರುವ ವ್ಯವಸ್ಥೆಯನ್ನು ಮಾಡಲಿಲ್ಲ. ಬೇಕಾದಷ್ಟು ಬಂಡವಾಳ ಸೊಸೈಟಿಗಳಲ್ಲಿಲ್ಲ. ಗೊಬ್ಬರ ಸರಬರಾಜು ವಿಷಯದಲ್ಲಿ ಬಹು ಹೆಚ್ಚಿನ ನ್ಯೂನತೆ ಉಂಟಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಿಚ್ಛಿಸುತ್ತೇನೆ. ಯಾವ ಒಂದು ಪ್ರಮಾಣದಲ್ಲೂ ಈ ಕಾರ್ಯ ನಡೆಯಲಿಲ್ಲ. ಈ ತೀವ್ರ ಪರಿಸ್ಥಿತಿಯಲ್ಲಿ ಗೊಬ್ಬರ ಸರಬರಾಜು ಹೆಚ್ಚಿನ ಪ್ರಮಾಣದಲ್ಲಿ ಆಗಿ ಅದು ದ್ವಿಗುಣವಾಗಬೇಕು. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕೆಲಸ ಕಾರ್ಯಗಳು ವ್ಯವಸಾಯ ಇಲಾಖೆಯಿಂದ ಎಷ್ಟರ ಮಟ್ಟಿಗೆ ನಡೆಯುತ್ತಾ ಇದೆ ಎಂಬುದನ್ನು ಸ್ವಲ್ಪ ಮಟ್ಟಿಗೆ ವಿಮರ್ಶೆ ಮಾಡಿ ನೋಡಿದರೆ ಜನತೆಯ ಆಶೆ ಆಕಾಂಕ್ಷೆಗಳು ಏನ ಇವೆಯೋ ಅವಕ್ಕೆ ನಿಜವಾಗಿ ಸಾಕಷ್ಟು ರೂಪು ಬಂದಿಲ್ಲವೆಂದು ನಾನಾದರೂ ಸ್ಪಷ್ಟ ಪಡಿಸುತ್ತೇನ ಈಗಾಗಲೇ ಒಂದನೆ ಯೋಜನೆ ಆಯಿತು. ಎರಡನೆ ಯೋಜನೆಯೂ ಆಯಿತು. ಮೂರನೇ ಯೋಜನೆಗೆ ಕಾಲು ಇಟ್ಟಿದ್ದೇವೆ. ಇಷ್ಟು ಅವಧಿಯೊಳಗೆ ಹೊಸ ವಾತಾವರಣ ಏನೇನು ಆಗ ಬೇಕಾಗಿತ್ತೋ ಅದು ಇನ್ನೂ ಆಗಲೇ ಇಲ್ಲವೆಂಬುದು ಈ ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಉತ್ಪನ್ನ ಜಾಸ್ತಿ ಮಾಡುವುದಕ್ಕೂ ಮತ್ತು ಕಮರ್ಷಿಯಲ್ ಕ್ರಾಪ್ಸನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಸಾಧ್ಯವಿದೆ. ಇಷ್ಟೊಂದು ಹಣವನ್ನು ಖರ್ಚು ಮಾಡಿ ಪ್ರತಿಫಲ ಸಾಕಷ್ಟು ಸಿಗಲಿಲ್ಲವೆಂದು ನಾನು ಬಹಳ ವ್ಯಸನ ಪಡಬೇಕಾಗಿದೆ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಈ ವಿಚಾರಗಳನ್ನು ಚೆನ್ನಾಗಿ ಗಮನಿಸಿ ಆದಷ್ಟು ತೀವ್ರವಾಗಿ ಈ ಇಲಾಖೆಯ ಅಸ್ತಿತ್ವದಲ್ಲಿರತಕ್ಕ ರೈತರ ಉದ್ಧಾರಕ್ಕಾಗಿ ಮತ್ತು ರೈತರಿಗೆ ಸಹಾಯ ಮಾಡುವುದಕ್ಕಾಗಿ ಆದಾಯ ಹೆಚ್ಚು ಮಾಡಿಕೊಳ್ಳುವ ರೀತಿಯಲ್ಲಿ ಹೆಚ್ಚಿನ ಪ್ರಚಾರ ವಾಗಬೇಕು. ರೈತನಾದವನು ವ್ಯವಸಾಯ ಇಲಾಖೆಯಿಂದ ಏನೇನು ಸೌಕರ್ಯಗಳನ್ನು ಬೇಕು ಎಂದು ಕೇಳುತ್ತಾನೋ ಅವನ್ನೆಲ್ಲಾ ಆತ ಪಡೆಯುವುದಕ್ಕೆ ಆಕರ್ಷಿತವಾದ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಇನ್ನು ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳ ವಿಚಾರವಾಗಿ ಹೇಳಬೇಕಾದರೆ ಇದರಿಂದ ಹೆಚ್ಚಿಗೆ ಉಪಯೋಗ ಪಡೆಯಬಹುದು ಎಂಬ ವಿಷಯ ಅನೇಕ ರೈತರಿಗೆ ಗೊತ್ತಿಲ್ಲ. ವ್ಯವಸಾಯ ಇಲಾಖೆ ಇದೆ ಎಂಬ ಭಾವನೆ ಅನೇಕ ರೈತರಲ್ಲಿ ಉಂಟಾಗಿಯೇ ಇಲ್ಲವೆಂದು ನಾನು ಹೇಳಬಹುದು. ಪ್ರತಿಯೊಂದು ತಾಲ್ಲೂಕಿಗೂ ಇವನ್ನು ಸರಬರಾಜು ಮಾಡಿ ರೈತರಿಗೆ ಅವುಗಳ ಪ್ರಯೋಜನ ವೇನೆಂಬುದನ್ನು ಗೊತ್ತು ಮಾಡಬೇಕು. ಆಗ ಅದರಿಂದ ಸಾರ್ಥಕವಾಗುತ್ತದೆ. ಇದಕ್ಕಾಗಿ ಒಂದು ದೊಡ್ಡ ಪರಿಶೋಧನೆ ಮಾಡಬೇಕೆಂದು ಸುಮಾರು 58 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಇವತ್ತಿನ ದಿವಸ ಇದರ ಪ್ರತಿಫಲ ಬಹಳ ಜಾಸ್ತಿ ಯಾಗಬೇಕು.

ಇನ್ನು ಕೋ-ಆಪರೇಟಿವ್ ಡಿಮ್ಯಾಂಡ್ ಎಂದು ಇದೆ, ಆದರೆ ಎಲ್ಲ ಸಹಕಾರ ಸಂಘಗಳು ಒಳ್ಳೆ ತಾಗಿಲ್ಲ. ನನ್ನ ಮಾನ್ಯ ಮಿತ್ರರಾದಂಥ ಶ್ರೀಮಾನ್ ಅವಲರೆಡ್ಡಿಯವರೇನೋ ಶೇಕಡ 90-95ರಷ್ಟು

(ಶ್ರೀ ಜಿ. ವಿ. ಗೌಡ)

ಸಂಘಗಳು ಇತ್ತೀಚೆಗೆ ಅಭಿವೃದ್ಧಿಯಾಗುತ್ತಿವೆ ಎಂಬುದಾಗಿ ಹೇಳಿದರು. ಅವು ಅವರ ಕ್ಷೇತ್ರದಲ್ಲಿ ಆರೀತಿ ಕೆಲಸ ಮಾಡಿದ್ದಿರಬಹುದು. ಆದರೆ ಅವುಗಳ ಬಗ್ಗೆ ಓವರ್‌ಆಲ್ ಪಿಕ್ಚರ್ ವಿಮರ್ಶೆ ಮಾಡುವಾಗ ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೆಲಸವೇನೋ ಚೆನ್ನಾಗಿ ನಡೆಯುತ್ತಾ ಇಲ್ಲ ಎಲ್ಲಿಯವರೆಗೆ ಸಹಕಾರ ಸಂಘಗಳಲ್ಲಿರುವವರು ಸರ್ಕಾರದವರನ್ನು ಮತ್ತು ಮಂತ್ರಿಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೋ ಅಲ್ಲಿಯವರೆಗೆ ಸಹಕಾರ ಕ್ಷೇತ್ರಗಳು ಮುಂದುವರಿಯುವುದಿಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯ. ಸಹಕಾರ ತತ್ವದಲ್ಲಿರತಕ್ಕ ಜನರಿಗೆ ಹೆಚ್ಚಿನ ಪ್ರೋತ್ಸಾಹವಿಲ್ಲ. ಇದರಲ್ಲಿ ರಾಜಕೀಯ ಬೆಳೆಸುವುದು ಈ ತತ್ವಕ್ಕೆ ವಿರೋಧವಾದ ಚಳುವಳಿಯನ್ನು ಮತ್ತು ಧಕ್ಕೆಯನ್ನುಂಟು ಮಾಡುವುದಾಗಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಸಹಕಾರ ಸಂಘಗಳಿಗೆ ಸಾಲ ಸಾಕಷ್ಟು ಸಿಗುತ್ತಿಲ್ಲ. ಜಿಲ್ಲಾ ಬ್ಯಾಂಕಿನವರು ಅವರಿಗೆ ಹೇಗೆ ಸಾಲ ಕೊಡುತ್ತಾರೆ ಅಂದರೆ ಕಾರ್ಯ ದರ್ಶಿಯವರು ಮತ್ತು ಅಧ್ಯಕ್ಷರೇ ಹೋಗಿ ದುಡ್ಡು ಖರ್ಚು ಮಾಡಿದಮೇಲೆ ಈ ಹಣ ಮಂಜೂರು ಆಗುತ್ತದೆ. ಸೊಸೈಟಿಗಳ ಲೆಖ್ಖದಲ್ಲಿ ಶೇಕಡ 92 ರಷ್ಟು ಈ ರೀತಿ ಇರುವುದರಿಂದ ಅನೇಕ ರೈತರಲ್ಲಿ ಇತ್ತೀಚೆಗೆ ತಾವೇ ಸ್ವಲ್ಪ ಮೊಬಲಗನ್ನು ಸರ್ಕಾರದಿಂದ ಪಡೆಯುವುದಕ್ಕೆ ಬದಲಾಗಿ ಎಲ್ಲಾದರೂ ಲೇವಾದೇವಿ ಮಾಡಿ ಸಾಕಷ್ಟು ಹಣ ಪಡೆಯಬಹುದೆಂದು ಒಂದು ರೀತಿಯ ಭಾವನೆ ಮೂಡಿ ಬಂದಿದೆ. ಈಗ ಜಿಲ್ಲಾ ಬ್ಯಾಂಕಿನವರು ನೇರವಾಗಿ ಗ್ರಾಮಂತರ ಪ್ರದೇಶಗಳಲ್ಲಿರತಕ್ಕ ಸೊಸೈಟಿಗಳಿಗೆ ಸಾಲ ಕೊಡುವುದಕ್ಕೆ ಬದಲು, ಮೈಸೂರು ರಾಜ್ಯದಲ್ಲಿ ಸಹಕಾರ ಯೂನಿಯನ್ ಮೂಲಕ ಹಣವನ್ನು ರೈತರಿಗೆ ಕೊಡುತ್ತಿದ್ದಾರೆ. ಅದು ಸಂತೋಷ. ಆದರೆ ಜಿಲ್ಲಾ ಮಟ್ಟದಲ್ಲಿ ಆ ರೀತಿ ಮಾಡುವುದಕ್ಕಿಂತಲೂ ಹೆಚ್ಚಿನ ಭದ್ರತೆ ಇರತಕ್ಕ ತಾಲ್ಲೂಕ್ ಮಟ್ಟದಲ್ಲಿ ಒಂದೊಂದು ಯೂನಿಯನ್ ಸ್ಥಾಪನೆ ಮಾಡಿದರೆ ರೈತರಿಗೆ ಹೆಚ್ಚಿನ ಪ್ರಯೋಜನ ವಿರುತ್ತದೆ. ಆದರೂ ಸರ್ಕಾರದವರು ಗ್ರಾಮಾಂತರ ಪ್ರದೇಶಗಳ ಸಹಕಾರ ಸಂಘಗಳ ಮೂಲಕ ಹಣವನ್ನು ರೈತರಿಗೆ ಹಂಚುವಾಗ ಅದನ್ನು ಅವರ ಕೈಗೆ ಸರಿಯಾಗಿ ತಲುಪುವಂತೆ ಮಾಡಿದರೆ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯಬಹುದು ಎಂದು ನನಗಾದರೂ ಅನ್ನಿಸುತ್ತದೆ. ಇವತ್ತಿನ ದಿವಸ ಈ ಕೊ-ಆಪರೇಟಿವ್ ಎಕ್ಸ್‌ಟೆನ್ಷನ್ ಆಫೀಸರ್, ಪಂಚಾಯಿತಿ ಎಕ್ಸ್‌ಟೆನ್ಷನ್ ಆಫೀಸರ್ ಮತ್ತು ಸಂಬಂಧಪಟ್ಟ ಇಲಾಖಾಧಿಕಾರಿಗಳು — ಈ ಮೂವರೂ ಹೆಚ್ಚು ಜವಾಬ್ದಾರಿಯನ್ನು ವಹಿಸಿ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡದಿದ್ದರೆ ನಿಜವಾಗಿ ಈ ಇಲಾಖೆಯಲ್ಲಿ ಹೆಚ್ಚಿನ ಪ್ರಗತಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಸಹಕಾರ ಕ್ಷೇತ್ರದಲ್ಲಿ ಸಿಬ್ಬಂದಿಗಾಗಿಯೇ ಎಷ್ಟೋ ಹಣ ಖರ್ಚಾಗುತ್ತಿದೆ. ಆದರೆ ಇದರಲ್ಲಿ ಪ್ರತಿಫಲ ಚೆನ್ನಾಗಿ ಆಗುತ್ತಿದೆಯೇ ಎಂದರೆ ಏನೂ ಇಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡುವಾಗ ಆ ಹಣಕ್ಕನುಗುಣವಾಗಿ ಪ್ರತಿಫಲ ಈ ಒಂದು ಕ್ಷೇತ್ರದಲ್ಲಿ ಸಿಗುತ್ತಿಲ್ಲವೆಂದು ನಾನು ಈ ದಿವಸ ಸ್ಪಷ್ಟವಾಗಿ ತಿಳಿಸುತ್ತೇನೆ. ಇವುಗಳ ಅಭಿವೃದ್ಧಿ ನಿಜವಾಗಿ ಆಗಬೇಕಾದರೆ ಸರ್ಕಾರದವರು ಹೆಚ್ಚು ಆಸಕ್ತಿಯನ್ನು ವಹಿಸಬೇಕು. ಕೆಲವು ಸಹಕಾರ ಸಂಘಗಳಲ್ಲಿ ಭೇದ ಭಾವಗಳುಂಟಾಗಿ ಒಂದೊಂದು ಕಡೆ ಹತ್ತಾರು ಸೊಸೈಟಿಗಳನ್ನು ಮಾಡಿಕೊಂಡಿರುತ್ತಾರೆ. ಒಂದೊಂದಕ್ಕೂ ಇದರಿಂದ ವೈಮನಸ್ಸು, ಮನಸ್ತಾಪಗಳು ಹೆಚ್ಚಾಗಿ ಒಂದು ಸೊಸೈಟಿಯವರನ್ನು ಇನ್ನೊಂದು ಸೊಸೈಟಿಯವರು ಸೇರಿಸುವುದಿಲ್ಲ. ಹೀಗಾಗಿ ತುಂಬಾ ಗ್ರಾಮವಾಸಿಗಳಿಗೆ ತೊಂದರೆಯಾಗಿದೆ. ಯಾವಾಗಲೂ ಒಂದು ಗ್ರಾಮದಲ್ಲಿ ಎರಡು ಸೊಸೈಟಿಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ವಿರಬಾರದು. ಯಾವುದೋ ಒಂದು ಕಾರಣದಿಂದ ಸೊಸೈಟಿಯ ಅಧ್ಯಕ್ಷರಿಗೆ ಮತ್ತು ಕಾರ್ಯದರ್ಶಿಯವರಿಗೆ ಮನಸ್ತಾಪವುಂಟಾಗಿ ಮೀಟಿಂಗ್‌ಗೆ ಅವರಲ್ಲಿ ಯಾರಾದರೂ ಬರುವುದಿಲ್ಲವೆಂದರೆ ಅವರಿಂದೇನೂ ನಷ್ಟವಿಲ್ಲ. ಅಂಥಾದ್ದರಿಂದೇನೂ ಉಪಕಾರ ಅಷ್ಟಾಗಿ ಆಗಲಿಕ್ಕಿಲ್ಲ. ಈ ದೃಷ್ಟಿಯಿಂದ ಆದಷ್ಟು ಮಟ್ಟಿಗೆ ರಾಜಕೀಯದಲ್ಲಿ ಸದಸ್ಯರು ದೂರ ಇರುವ ಹಾಗೆ ಸಹಕಾರ ಕ್ಷೇತ್ರದಲ್ಲಿ ಮಾಡುವುದಾದರೆ ಇಂತಹ ನ್ಯೂನತೆಗಳನ್ನು ಹೋಗಲಾಡಿಸಿ ಅವುಗಳ ಆಡಳಿತವನ್ನು ಉತ್ತಮ ಮಾಡುವುದಕ್ಕೆ ಸಾಧ್ಯವೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮದ್ರಾಸ್ ಮತ್ತು ಆಂಧ್ರ ಇತ್ಯಾದಿ ಪ್ರಾಂತ್ಯಗಳಲ್ಲಿ ಯಾವರೀತಿ ಈ ಬಗ್ಗೆ ಕೆಲಸಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಸ್ವಲ್ಪ ಮಟ್ಟಿಗೆ ಇಲ್ಲಿಂದ ಕೆಲವು ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ತಿಳಿದುಕೊಂಡರೆ ಅದರಿಂದ ಎಷ್ಟೋ ಅನುಕೂಲವುಂಟು. ರೈತರು ತಮ್ಮ ಋಣ ಬಾಧೆಯನ್ನು ತೀರಿಸುವುದಕ್ಕೆ ಇಲ್ಲಿ ಯಾವ ಒಂದು ವ್ಯವಸ್ಥೆಯನ್ನೂ ಮಾಡಲಿಲ್ಲ. ಇದುವರೆಗೂ ಇಲ್ಲಿ rural indebtedness ಅಂದರೆ ರೈತರ ಋಣಬಾಧೆಯನ್ನು ನೀಗಿಸಲಿಕ್ಕೆ ಯಾವ ವಿಧವಾದಂಥ ಕೆಲಸವೂ ಸಮರ್ಪಕವಾಗಿ ನಡೆದಿಲ್ಲವೆಂದು ನಾನು ಘಂಟಾ ಘೋಷವಾಗಿ ಹೇಳುತ್ತೇನೆ. ರೈತರ ಋಣಬಾಧೆ ತೀರಿದರೆ ನಮ್ಮ ಇಕಾನಮಿಗೆ ಎಲ್ಲಿ ಧಕ್ಕೆ ಬರುತ್ತದೋ ಎಂಬ ಭಾವನೆ ಸರಿ

ಯಾದುದಲ್ಲ. ಮುಖ್ಯವಾಗಿ ಅವರ ಋಣಬಾಧೆ ನೀಗಬೇಕು. ಸಕಾಲಕ್ಕೆ ಅವರಿಗೆ ಹಣ ಸಿಕ್ಕಿದರೆ ಉತ್ಪತ್ತಿ ಹೆಚ್ಚಿಗೆ ಆಗುತ್ತದೆ. ಅವನ ಮನಸ್ಸನ್ನು ಯಾವಾಗಲೂ ಉತ್ಪನ್ನದ ಕಡೆಗೇ ಇರುವ ಹಾಗೆ ವ್ಯವಸ್ಥೆ ಮಾಡಬೇಕು ಎಂಬುದಾಗಿ ನಾನು ತಿಳಿಸುತ್ತೇನೆ.

ಇನ್ನು ಅರಣ್ಯ ಖಾತೆ ವಿಚಾರ. ಇದು ಬಹಳ ಜವಾಬ್ದಾರಿಯನ್ನು ವಹಿಸಿರತಕ್ಕ ಖಾತೆ. ಹೋದ ವರ್ಷಕ್ಕಿಂತ ಈ ವರ್ಷದಲ್ಲಿ 19 ಲಕ್ಷ ರೂಪಾಯಿಗಳ ಹೆಚ್ಚಿನ ಆದಾಯ ಬರುತ್ತಿದೆಯೆಂದು ತೋರಿಸಿದ್ದಾರೆ. 1962-63ನೇ ಸಾಲಿನಲ್ಲಿ ಸುಮಾರು 2 ಕೋಟಿ ರೂಪಾಯಿಗಳ ಹೆಚ್ಚಿನ ಆದಾಯ ವನ್ನು ನಿರೀಕ್ಷಣೆ ಮಾಡಿತ್ತು. ಹಾಗೆಯೇ 1963-64 ರಲ್ಲಿ 2 ಕೋಟಿ ರೂಪಾಯಿಗಳಷ್ಟು ಉತ್ಪನ್ನ ಬರಬೇಕೆಂದು ಈ ಅರಣ್ಯ ಇಲಾಖೆಯಿಂದ ಆಶೆ ಇತ್ತು.

Resources and Economy ಸಮಿತಿಯವರು ಸುಮಾರು ಎರಡು ಕೋಟಿ ರೂಪಾಯಿ ಉತ್ಪತ್ತಿಯನ್ನು ಹೆಚ್ಚುಮಾಡಲು ಸಾಧ್ಯವಾಗುತ್ತದೆ ತೀವ್ರವಾಗಿ ಕೆಲಸ ಮಾಡಿದರೆ ಎಂದು, ಅಭಿ ಪ್ರಾಯ ಪಟ್ಟಿದ್ದಾರೆ. ಆದರೆ ಬರಿಯ ಹತ್ತೊಂಬತ್ತು ಲಕ್ಷ ರೂಪಾಯಿ ಮಾತ್ರ ಹೆಚ್ಚು ಆದಾಯ ತೋರಿಸಿ ಖರ್ಚನ್ನು ಐದು ಲಕ್ಷ ಹೆಚ್ಚು ತೋರಿಸಲಾಗಿದೆ. ಉತ್ಪತ್ತಿ ಎಂಟುನೂರಎಂಬತ್ತನಾಲ್ಕು ಲಕ್ಷ, ವೆಚ್ಚ ನಾನೂರಎಂಬತ್ತು ಲಕ್ಷ ಮಾಡುತ್ತಿದೆ. ಆದಾಯದ ಶೇಕಡ 54 ರಷ್ಟು ಖರ್ಚುಮಾಡು ತ್ತಿದ್ದೇವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಖರ್ಚಾಗುವ ಇಲಾಖೆ ಸರ್ಕಾರದಲ್ಲಿಲ್ಲವೆಂದು ಕಂಡು ಬಂದಿದೆ. ನೂರು ರೂಪಾಯಿ ಆದಾಯಕ್ಕೆ 54 ರೂಪಾಯಿ ಖರ್ಚುಮಾಡುತ್ತಿದ್ದೇವೆ. ಇದು ನಿಜವಾಗಿಯೂ ನನ್ನ ಅಭಿಪ್ರಾಯದಲ್ಲಿ ಸರಿಯಲ್ಲ, ಆದಷ್ಟುಮಟ್ಟಿಗೆ ಖರ್ಚನ್ನು ಕಡಿಮೆಮಾಡಬೇಕು. ಬರಿಯ ಸಿಬ್ಬಂದಿಗೇ ಅರವತ್ತೈದು ಲಕ್ಷ ಎಂದರೆ 13 ಪರ್‌ಸೆಂಟ್ ಆಗುತ್ತದೆ ಇದು ಬಹಳ ಹೆಚ್ಚು.....

ಶ್ರೀ ಬಿ. ರಾಚಯ್ಯ.—ಸಿಬ್ಬಂದಿಗೆಷ್ಟು ?

ಶ್ರೀ ಜಿ. ವಿ. ಗೌಡ.—ಅರವತ್ತೈದು ಲಕ್ಷ ರೂಪಾಯಿ ಖರ್ಚುಮಾಡುತ್ತಿದ್ದಾರೆ; ಇದು ಒಟ್ಟಿ ನಲ್ಲಿ ಶೇಕಡ 13 ಆಗುತ್ತದೆ. ಈ ಖರ್ಚು ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ಶೇಕಡ 3 ರಷ್ಟಾಗುತ್ತಿದೆ, ವ್ಯವಸಾಯ ಇಲಾಖೆಯಲ್ಲಿ 4 ರಷ್ಟು; ಯಾವ ಇಲಾಖೆಯಲ್ಲಿಯೂ ಶೇಕಡ 6 ಕ್ಕಿಂತ ಹೆಚ್ಚು ಹೋಗುವುದು ಮಿತವ್ಯಯ ದೃಷ್ಟಿಯಿಂದ ಸರಿಯಲ್ಲ. ಈ ಇಲಾಖೆಯಲ್ಲಿ ಶೇಕಡ 13 ರಷ್ಟು ಖರ್ಚು ಮಾಡಿದರೆ, ಮೈಸೂರು ರಾಜ್ಯದ ಅರಣ್ಯ ಸಂಪತ್ತು ಏನಿದೆಯೋ ಅದನ್ನು ರಕ್ಷಣೆ ಮಾಡುವ ಕೆಲಸ ಸಾರ್ವತ್ರಿಕವಾಗಿ ಬೆಳವಣಿಗೆ ಆಗಿದೆಯೆ, ಎಷ್ಟುಮಟ್ಟಿಗೆ ನಡೆದಿದೆ ಎನ್ನುವುದನ್ನು ವಿಮರ್ಶೆ ಮಾಡ ಬೇಕು. ಉತ್ಪತ್ತಿಯನ್ನು ಹೆಚ್ಚು ಮಾಡಬೇಕು, ಅರಣ್ಯ ಸಂಪತ್ತನ್ನು ಹೆಚ್ಚು ಮಾಡಬೇಕು. ಇದ ರಿಂದ ಹೆಚ್ಚಿನ ಆದಾಯವನ್ನು ತರಬೇಕೆಂಬ ಹಂಬಲ ಮಂತ್ರಿಗಳಿಗಿದೆ. ಆದರೆ ಇದೇ ಮನೋಭಾವ ಇಲಾಖೆಯವರಿಗೆ ಬಾರದೇ ಇದ್ದರೆ ಇದು ಸಾಧ್ಯವಾಗುವುದಿಲ್ಲ. ಮರಗಳ ಕಳ್ಳತನವಾಗುತ್ತಿದೆ, ಗಂಧದ ಮರದ ಕಳ್ಳಸಾಗಾಣಿಕೆಯಾಗುತ್ತಿದೆ ಎಂದು ಹೇಳುತ್ತಾರೆ. ಜನಗಳು ಮಾಡುತ್ತಾರೆ. ಅಧಿಕಾರಿಗಳ ಚಲನವಲನ ಸರಿಯಾಗಿದ್ದರೆ, ಅವರು ಎಚ್ಚರಿಕೆಯಿಂದಿದ್ದರೆ, ಅವರ ಗಮನಕ್ಕೆ ಇದು ಬಂದೇ ಬರುತ್ತದೆ. ಆದುದರಿಂದ, ಇಂಥ ಕಳ್ಳತನಗಳನ್ನು ತಡೆಗಟ್ಟಲು ಹೆಚ್ಚಿನ ವ್ಯವಸ್ಥೆ ಮಾಡ ಬೇಕು. ಡಿವಿಜನಲ್ ಅಧಿಕಾರಿಗಳು ಹೆಚ್ಚು ಕೆಲಸ ಮಾಡಬೇಕು. ಪ್ಲಾಂಟೇಷನ್ 1961—62 ರಲ್ಲಿ 31 ಸಾವಿರ ಎಕರೆ, 1962—63 ರಲ್ಲಿ 40 ಸಾವಿರ ಎಕರೆಯಷ್ಟು ಸಾಧನೆ ಮಾಡುವುದಾಗಿ ಹೇಳಿ ದ್ದಾರೆ. ಮಾನ್ಯ ಮಂತ್ರಿಗಳು ಎಲ್ಲ ಪ್ರದೇಶಗಳಲ್ಲಿಯೂ ಇದು ಸರಿಯಾಗಿ ಆಗಿದೆಯೆ ಎಂದು ನೋಡಲು ಸಾಧ್ಯವಿಲ್ಲ. ಅಧಿಕಾರಿಗಳ ಪ್ರಾಮಾಣಿಕತೆಯಿಂದ ಈ ಕೆಲಸ ಆಗಬೇಕು. ನನ್ನ ಅನುಭವದಲ್ಲಿ, ನನ್ನ ಕ್ಷೇತ್ರದಲ್ಲಿ 50 ಸಾವಿರ ಖರ್ಚಾಗಿದೆ ಎಂದು ಲೆಕ್ಕ ತೋರಿಸಿದ್ದಾರೆ. ಆದರೆ ಖರ್ಚಾಗಿರುವುದು 10 ಸಾವಿರ ಮಾತ್ರ. ಸೋಲಿಗರಿಗೆ ಕೇಂದ್ರ ಸರ್ಕಾರ ಮತ್ತು ನಮ್ಮ ಸರ್ಕಾರ ಹೆಚ್ಚು ಸೌಲಭ್ಯಗಳನ್ನೊದಗಿಸಬೇಕೆಂದು ಮಾಡಿದ್ದಾರೆ. ಅವರಿಗೆ ಕೂಲಿ, ದಿನಕ್ಕೆ 1 ರೂಪಾಯಿ 37 ನ.ಪೈ. ಕೊಡಬೇಕಾದರೆ ಕೇವಲ ಎಂಟಾಣೆ ಕೊಟ್ಟು ಅವರಿಂದ ರುಜು ಹಾಕಿಸಿಕೊಳ್ಳುತ್ತಾರೆ. ಇಂಥ ಲೋಪದೋಷಗಳು ನಡೆಯುತ್ತಿವೆ. ಈ ರೀತಿ ಆದರೆ ಸಮಾಜವನ್ನು ಹೇಗೆ ತಿದ್ದುವುದು ? ಸಮಾಜದ ದೋಷವನ್ನು ನಿವಾರಿಸುತ್ತೇವೆಂದು ಹೇಳುವ ಸರ್ಕಾರದ ಸಿಬ್ಬಂದಿಯೇ ಹೀಗೆ ಮಾಡುತ್ತಿದೆ ! ಹೀಗೆ ಕಳ್ಳ ಲೆಕ್ಕಗಳನ್ನು ಹಾಕಿದರೆ, ಪ್ಲಾಂಟೇಷನ್ ಹೇಗೆ ಹೆಚ್ಚಾಗುತ್ತದೆ ? ಅನೇಕ ಕಡೆ ಆಗಿದೆ. ಆದರೆ ಹೆಚ್ಚು ಖರ್ಚೇನು ಮಾಡಿದ್ದಾರೋ ಅದರಲ್ಲಿ ಪೂರ್ತಿ ಹಣ ಸರಿಯಾಗಿ ಖರ್ಚಾಗಿಲ್ಲ; ಶೇಕಡ 50 ರಷ್ಟು ಮಾತ್ರ ಸದುಪಯೋಗವಾಗಿದೆಯೆಂದು ತೋರಿಸುತ್ತಿದ್ದೇನೆ. ಆದುದರಿಂದ ಈ ಪರಿಸ್ಥಿತಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಆದಷ್ಟುಮಟ್ಟಿಗೂ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಪ್ಲಾಂಟೇಷನ್ ಜಾಸ್ತಿ ಮಾಡಬೇಕು. ಅಖಿಲ ಭಾರತ ಸರಾಸರಿ ಮಟ್ಟವನ್ನು ಮುಟ್ಟಲು ಸಾಧ್ಯವಾಗಬೇಕೆಂದು ತಿಳಿಸುತ್ತಿದ್ದೇನೆ.

(ಶ್ರೀ ಜಿ. ವಿ. ಗೌಡ)

ಅರಣ್ಯವಿರತಕ್ಕ ಪ್ರದೇಶದಲ್ಲಿ ಸೌದೆಗೆ ಬಹಳ ಅಭಾವವಿದೆ. ರೈತರಿಗೂ ಇತರರಿಗೂ ಹಂಚುವ ವ್ಯವಸ್ಥೆ ಸರಿಯಾಗಿಲ್ಲ. ಈಗ ತಾನೇ ಇದರ ಬಗ್ಗೆ ಕಾನೂನು ಮಾಡುತ್ತೇವೆಂದು ಹೇಳಿದರು. ಅದಾದ ಮೇಲೆ ಪರಿಸ್ಥಿತಿ ಸರಿಯಾಗಬಹುದೆಂದು ನಂಬಿದ್ದೇನೆ. ರೈತರಿಗೆ ಕೊಡಬೇಕಾದ ರಿಯಾಯಿತಿಯನ್ನು ಕೆಲವು ಕಡೆ ಕೊಡಲಿಲ್ಲ. ಈ ದೃಷ್ಟಿಯಿಂದ ಯೋಚನೆ ಮಾಡಬೇಕು. ಅನೇಕ ಪ್ರದೇಶವನ್ನು ಕಾಡು ಎಂದು ಸುಮ್ಮನೆ ಇಟ್ಟುಕೊಂಡಿದ್ದಾರೆ. ಆದರೆ ಅದರಿಂದ ಯಾವ ಉತ್ಪತ್ತಿಯೂ ಬರುತ್ತಿಲ್ಲ. ಇಂಥ ಪ್ರದೇಶಗಳನ್ನು ವ್ಯವಸಾಯಕ್ಕೆ ಕೊಡುವುದರ ಮೂಲಕ ಹೆಚ್ಚಿನ ಪ್ರಯೋಜನ ಸರ್ಕಾರಕ್ಕಾಗಬಹುದೆಂದು ಸೂಚಿಸುತ್ತೇನೆ.

ಈ ಬೇಡಿಕೆಗಳ ಬಗ್ಗೆ ಸಮರ್ಥನೀಯವಾದ ಅಂಶಗಳನ್ನು ಸರ್ಕಾರ ಈ ಮಾನ್ಯ ಸಭೆಯ ಮುಂದಿಟ್ಟು, ಸಭೆಯನ್ನು ತೃಪ್ತಿಪಡಿಸಿ, ಸಮರ್ಪಕವಾಗಿ ಕೆಲಸ ಮಾಡುತ್ತದೆ, ಮಾಡುವ ಖರ್ಚಿಗೆ ತಕ್ಕಂತೆ ಪ್ರತಿಫಲವನ್ನು ದೊರಕಿಸಿಕೊಡುತ್ತದೆ; ಜನತೆಗೆ ಒಳ್ಳೆಯದಾಗುತ್ತದೆಯೆಂದು ತೋರಿಸಿ ಸಮರ್ಥನೆಮಾಡುವುದರ ಮೂಲಕ ಬೇಡಿಕೆಗಳಿಗೆ ಮಂಜೂರಾತಿ ದೊರಕಿಸಿಕೊಳ್ಳಬೇಕು. ಮುಂದಿನ ವರ್ಷ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಕೆಲಸಗಳು ಎಲ್ಲ ಕ್ಷೇತ್ರಗಳಲ್ಲಿಯೂ ಆಗುತ್ತವೆಂದು ನಂಬಿ ಇಷ್ಟು ಹೇಳಲಿಚ್ಛಿಸುತ್ತೇನೆ. ಇಷ್ಟು ಹಣವನ್ನು ಸರ್ಕಾರ ಪಡೆದು, ಇದಕ್ಕನುಗುಣವಾದ ಪ್ರತಿಫಲ ಸಾಧನೆಯಾಗದಿದ್ದರೆ ನಿಜವಾಗಿಯೂ ವಿಷಾದಪಡಬೇಕಾದ ಪ್ರಸಂಗ ಬರುತ್ತದೆ. ಅಕ್ಕ ಪಕ್ಕದ ರಾಜ್ಯಗಳು ಇಷ್ಟೇ ಹಣ ಖರ್ಚುಮಾಡಿ ಹೆಚ್ಚಿನ ಪ್ರಗತಿ ಸಾಧಿಸಿವೆಯೆಂಬುದನ್ನರಿತು ಎಷ್ಟು ವೇಗದಿಂದ, ತ್ವರಿತವಾಗಿ ಇಲ್ಲಿ ಕೆಲಸ ಮಾಡಬೇಕೆಂಬುದನ್ನು ನಿರ್ಧರಿಸಬೇಕು. ಅಧಿಕಾರಿಗಳು, ನಾವೂ ದೇಶದ ಪ್ರತಿನಿಧಿಗಳು, ನಮಗೆ ದೇಶ ಸಂಬಳ ಕೊಡುತ್ತಿದೆ, ನಮ್ಮ ಕರ್ತವ್ಯವನ್ನು ಪೂರ್ಣವಾಗಿ, ಪರಿಣಾಮಕಾರಿಯಾಗಿ, ಶ್ರದ್ಧೆಯಿಂದ ಮಾಡಬೇಕು ಎಂಬುದನ್ನರಿತು ಮಾಡುತ್ತಾರೆಂದು ಆಶಿಸಿ, ಇಷ್ಟು ಹೇಳಲು ಅವಕಾಶಕೊಟ್ಟದಕ್ಕಾಗಿ ವಂದನೆಗಳನ್ನರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Sri M. MADHVARAJA (Udipi).—Sir, I rise to support the Dpmands for Agriculture and other Departments under Demand No. 20—Agriculture. I would like to speak a few words about Fisheries. I am fisherman myself and I am connected with the fishery industries and co-operative societies and as such I have no hesitation to say that no tangible result is shown for development of fisheries in Mysore, compared with other States like Kerala, Maharashtra and Gujarat. With an annual production of over one million tons of fish, India is one among the 7 major countries in the world and the national income from fisheries in India is estimated to be Rs. 60 crores and by overseas trade foreign exchange earned by the country is about Rs. 6 crores. The Royal Commission on Agriculture has noted the failure to develop fisheries in India. Fish is a specially valuable addition to the diet, the staple of which is rice. Under the First Five year plan although Rs. 238 crores was set apart for agriculture, only Rs. 4 crores was spent on fisheries; in the Second plan it was increased to Rs. 12 crores and in the Third Plan it has been increased up to Rs. 36 crores, but Mysore State has earmarked only Rs. 130 lakhs for development of fisheries in the Third Plan. Mysore State has acquired about 200 miles of sea coast comprising of South Kanara and North Kanara Districts and we have got very rich fisherable waters.

Compared to the East Coast, the West Coast or the Mysore State Coast has the density—proportion of fish—of one is to 300. Mysore State has one-fifteenth of the total coastal length and it accounts for one fifth of the fish production in the country.

Mr. SPEAKER.—Is it one-fifth or one-fifteenth ?

Sri M. V. KRISHNAPPA (Minister for Reveune).—Coastal length is one-fifteenth and fish production is one-fifth.

Sri M. MADHWARAJA.—The F.A.O. in their review have reported that the per capita yield of the Indian fisherman is only one ton compared to eighty tons in most advanced countries like Japan. Fishermen, as it is, are very illiterate and poor. They use the same age old frail boats depending on wind and the tide for catching fish. Any development in fisheries is not possible without mechanised fishing, in which direction, the Government has to give attention from the very beginning. Under scheme 231, mechanised fisheries, the physical target is kept at 150 boats in the Third Plan. Two boat building yards are established, one at Karwar and the other at Mangalore. In 1961-62, 16 boats have been built and in 1962-63, 28 boats have been built—in all 44 boats have been built by the Fisheries Department. But what we require today is to build many mechanised boats for fishing. We will be requiring from 800 to 1,000 boats, and each thirty feet boat will cost us Rs. 30,000. For this purpose, we may require some crores of rupees. The Centre is willing to give as much help as possible to the State Government for establishing boat building yards for fishermen.

As regards training centre for fishermen, there is only one such centre in Mangalore which trains 100 fishermen. But training centres could be increased and many more young fishermen could be trained in fisheries training and in mechanised fishing. From experience, I can say that by mechanised fishing, the annual income of the fishermen has increased from Rs. 300 to Rs. 3,000. There is a crazy demand for training in mechanised fishing at the fisheries centre, and Government were compelled to refuse admission to so many fisheries students, who were coming forward for training in mechanised fishing. At one time, it was thought that mechanised fishing would not be successful, because the fishermen would not be able to adopt themselves to this, as they were all used to age old methods of fishing. But this has been proved otherwise. Even now, I appeal to the State Government to make and strive to improve mechanised fishing, and make available mechanised boats to man the entire fish catching device, so that we may come in par with other countries in the world.

Now, about fishing harbours, it is scheme No. 234, and for this about eight lakhs of rupees is kept apart. During the last two years only Rs. 50,000 has been spent. Development of fisheries is seriously handicapped, because of the lack of breaching boats and handling of fish catch, etc. The F.A.O. experts have selected a number of ports along the Mysore State coast and they have made a comprehensive study of all the ports. Now, I understand that they have submitted reports with the estimates. When the Hon'ble Deputy Minister for Food Mr. Thomas was at in Mulpe, he was taken round the port. He was very much pleased to see the development that could be made as fishing harbour. I also saw the allocations under this item. They have estimated a sum of 21.1 lakhs for a fishing harbour at Mulpe, 4.6 lakhs at Coondapur and 40 lakhs for a fishing harbour at Karwar. When I

(SRI M. MADHAVARAJA)

wrote a letter to the Hon'ble Minister, he was pleased to reply that the Government of India would be prepared to give 50 per cent of their share, if the Mysore Government goes ahead in making these harbours. As I have said earlier, our budget provides only eight lakhs.

Another point I want to stress is about the salt subsidy. It is very unfortunate that the State Government has decided to stop this subsidy. It is a continuance assistance to the fishermen even during the British days. This Government has now come forward to stop this. After all the amount of subsidy involved is not more than fifty or seventy-five thousand rupees. The salt sold by Government in Fish Curing Yards is about 50,000 maunds, and even at one rupee per maund, it will not cost Government more than Rs. 50,000. I would like to point out that the Government is spending about 1,08,000 as only the establishment cost for thirty fish curing yards in the two districts of South and North Kanara. I must also point out that the Andhra Government is supplying free salt to all fishermen. Quality control can be kept up if curing is done at Government Curing Yards. If it is left to the fishermen, they may not care for the quality. Also, 90 per cent of the processed fish is now cured by salt methods, as there are no refrigerators, no ice and preservation of fish is being done through salt curing only. Hence, I would appeal to the Hon'ble Minister for Fisheries to renew this salt subsidy and fishermen will be hit hard by stopping of salt subsidy. Likewise, you have withdrawn payment of subsidies for fisheries requirements like nylon, twine, etc. The State Government used to meet 33⅓ per cent of the expenditure, and the reason that is given is that the Centre has withdrawn their share of fifty per cent of this subsidy. May I suggest to the Government to give their share and if you want to withdraw these facilities, you could do so gradually and not all of a sudden. After all, you are constructing not more than thirty boats and the requisite cost only about Rs. 3,000 each and your share is only Rs. 500. I would therefore like to bring to your notice that all the fishermen will be more affected by the withdrawal of this subsidy.

SRI V. M. DEO (Gubbi).—You know all those things much more. Why not form co-operative societies......

SRI M. MADHWARAJA.—It was being distributed through co-operative societies.

In 1962-63, there has been some achievement in looking after the welfare of the fisherfolk. Two more High Schools have been started. But I should say that the greatest achievement of the Fisheries Department is the Indo-Japanese collaboration. A Japanese training centre is started in Mangalore and they are going to spend fifty lakhs of rupees. About five or six Japanese have come. They are world experts in fisheries. They have got equipment worth about seven lakhs. Last time, the Japanese Ambassador was here. He was brought to our place by the Deputy Minister for Food and the Hon'ble Minister for Fisheries

(...ಜಾ ಗ್ರಂಥಾಲಯ)
Accession No. 4794
Date

was also there. They were pleased to see the good work done by the Fisheries Department and the potentialities we have in the Fisheries Industry. Mr. Speaker, Sir, you are also coming from our area and from a fishing village. I know that you have been taking keen interest in fisheries and by your efforts, I should say that.....

Mr. SPEAKER.—Drop me. You will be alright.

Sri M. MADHWARAJA.—No, No, Sir. Dr. Bhattacharya, is deputed by the Central Government, and he has come with one boat. I understand, Sir, that you have recommended to the Government—I am telling these because, as Speaker also, you are taking interest in fisheries.

Mr. SPEAKER.—It is my duty and nothing more.

4-30 P.M.

Sri M. MADHWARAJA.—Now, I have got to make a few suggestions. The Kerala Government has made very vast development in fisheries. I have gone there and seen things personally. Many fisheries industries have come up there. Government has gone out of the way to develop industries. It is due to the Indo-Norwegian foundation aid. I am very glad that the fisheries Department and the Hon'ble Minister has done his best to get this aid to Mysore State also. The Norwegian experts will train personnel and they are going to do exploratory fisheries work. But the State Government will have to encourage them. If you do that you may get crores of rupees aid from the Norwegian Government of which I am quite sure because they have done so in Kerala.

One more suggestion is,—I have spoken about the subsidy. There is great scope for putting up a salt industry in west coast, either in South Kanara or North Kanara, and the Hon'ble Industries Minister has already worked out a scheme for Salt Industries for fisheries improvement, so that the salt that is needed for fisheries Industry there, may be made available on the spot. Because I know at present salt is imported either from Tuticorin or from Bombay at fantastic prices.

Mr. SPEAKER.—Don't they produce at Sani Katta ?

Sri M. MADHWARAJA.—Yes, Sir. But it is not enough. For fish we require 90 per cent sodium chloride. To make dried fish, we must have superior kind of salt which we are now getting at fantastic price from Tuticorin and Bombay.

Finally, we have to explore the possibilities of developing fisheries and to find out what we have to do in fisheries. I request the Government to form a committee which is very necessary. Because, I do not know whether I am making a new suggestion. But other States like Gujerat and Maharashtra and Kerala have a committee of that nature and they are having this fishing activities for so many years if not decades. But the Mysore Government has just now got 200 miles of coast line only recently, and there this State of Mysore has naturally not got all the experience as other coastal States have acquired over years. There is so much work that has to be done. I must appeal to the Government to do their best to start the mechanisation of fishing. An intensive drive

(SRI M. MADHAVARAJA)

must be there and I should also suggest to the Government to form a corporation either in the public sector or in the private sector to provide our fishermen with boats. We will pay you that money with interest and what capital you sink into it, you will take back within five or seven years. Government may be aware that during the last fish famine, they had advanced long term loans repayable in instalments and out of this amount, we have paid back more than 50 per cent and no other dues is pending, in spite of the fact that fishing was not very flourishing during this year as well. I am therefore trying to make the point that whatever is done to fishermen is not a waste and they will always be greateful to the Government.

Finally, I had discussion with the Hon'ble Revenue Minister. He was also formerly a Central Minister for fisheries and I should say, he is more a fisherman himself, because he had come there during that time and stayed with us for a day. Some of the land very near to the shore has been encroached upon by the fishermen since ages. It is continuing since the British days. Now the Government have served them with eviction notices. I should say that if they must be evicted, you will have to make alternative arrangements for their rehabilitation, I remember of another case at Padubidri where the fishermen lost their properties, by sea-erosion and I am told they were given lands three or four miles away from the shore. But it must be remembered that the fishermen will always prefer to be on the shore. He has to dry his net, repair his boats and he will have to watch for the fish to come to the shore instead of his going very deep into the sea. If you ask him to stay three or four miles away from the shore, I do not think it is advisable and they may also refuse to go. Therefore, I request the Hon'ble Revenue Minister to allow them to continue there until you can provide them with alternative rehabilitation. You know in the monsoon it is very difficult for anybody to live there. The monsoon rains and winds directly hit them in the face. They will have to be provided with shelter. Although there is scheme to give housing loans, I do not think much progress is made in that respect.

I have again to stress before the Government about the importance of this industry. From my own experience, I can say that fish is a very valuable food. The Government of India have indented for canned fish for their armed forces. Fish has 25 per cent protien and 75 per cent water. In the process of canning-because I have a canning factory myself—fifty per cent of the water is reduced and when you get canned fish or tinned fish, it contains concentrated protien and minerals and vitamins. The armed forces require it and the Government of India is placing orders with us, because the only alternative is to import.

One more thing. The Government have an ice-plant at Mangalore. It was constructed by the Madras Government at a cost of 6 lakhs. During the second Plan period, that one plant has earned for the Government Rs. 60 lakhs worth of foreign exchange. In 1961-62, it

earned 12 lakhs and in 1962-63, even up to the present, twenty lakhs has been earned. For an investment of six lakhs, if you can make so much profit and earn foreign exchange, you can imagine the potentiality especially in the direction of foreign exchange which we are able to earn even with our country boats.

Another point is, Government have sanctioned some ice-plants. So many have progressed and so many are still progressing. I suggest that there must be one ice-plant every ten miles on the coast. The peculiar condition of fishing industry is, fish is a perishable and it has to be preserved immediately it is caught.

Sri SANJEEVANATH AIKALA.—The ice-plant is frozen ! The work is frozen!

Sri M. MADHWARAJA.—I think Sir, I have given a fairly good account of the fisheries.

Mr. SPEAKER.—The Hon'ble member has not said anything about the marketing facilities. People of the State also should consume it.

Sri M. MADHWARAJA.—I was speaking from my own personal experience. Though I have a canning factory, the primary need is, you must have fish available in the first instance. I hardly run the factory for 100 days in a year. We find it very difficult to sell canned fish. We must have a proper market. I am speaking about the subject from my personal experience. The Government of India wanted 200 tons of fish to be delivered in three months. And I have great pleasure in telling that I have done it. What I did for three months has not been done for three years. If fish is available and if sufficient market is created, this industry can grow. There is a fish meal plant at Malpe which has been constructed at a cost of 4½ lakhs. Of course it is not yet commissioned. Machinery has come. I am very doubtful if this plant can run even for one day. Whatever processing or marketing facilities we have, it directly depends upon the quantity of fish that is caught. That must be our idea and it has got to be done only by mechanised fishing ; and as I said earlier, a corporation in the public sector or private sector must be floated for this purpose. There are about 20,000 fishermen actively engaged in this profession. We require about 4,000 boats and the investment will be from 12 to 15 crores of rupees. Otherwise, 150 boats provided in the Third Plan will be merely a demonstration.

I conclude, Sir. Thank you.

†ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ, ಅಧ್ಯಕ್ಷರೇ: ಈಗ ನಮ್ಮ ಮುಂದೆ ಅನೇಕ ಇಲಾಖೆಗಳಿಗೆ ಸಂಬಂಧಪಟ್ಟ ಡಿಮ್ಯಾಂಡ್‌ಗಳಿರುತ್ತವೆ. ಆದರೆ ನಾನೀಗ ವ್ಯವಸಾಯದ ಇಲಾಖೆಯ ಮೇಲೆ ಮೊಟ್ಟ ಮೊದಲನೇಯದಾಗಿ ಮಾತನಾಡಲಚ್ಛಿಸುತ್ತೇನೆ.

ಸ್ವಾಮಿ, ನಮ್ಮ ದೇಶದಲ್ಲಿ ಈ ವ್ಯವಸಾಯದ ಇಲಾಖೆಯೆಂಬುದೇನಿದೆ. ಇದು ಒಂದು ವಿಚಿತ್ರವಾದ ಇಲಾಖೆಯಾಗಿಬಿಟ್ಟಿದೆ. ಈ ವ್ಯವಸಾಯದ ಇಲಾಖೆಯಾದರೋ ಈ ದೇಶದಲ್ಲಿರತಕ್ಕ ಜನಸಂಖ್ಯೆಯಲ್ಲಿ ಸುಮಾರು ಶೇಕಡ 80 ಜನಗಳಿಗೆ ನಿಕಟಸಂಬಂಧವಿರುವಂಥ ಒಂದು ಇಲಾಖೆ ಇದು. ಈ ಇಲಾಖೆ ಹೇಗಿದೆ ಎಂತ ಯಾರಾದರೂ ಕೇಳಿದರೆ—ಅದಕ್ಕೇನು ಹೇಳಬೇಕೋ ಅದೇ ನನಗೆ ದೊಡ್ಡ ಸಂಶಯವಾಗಿದೆ. ಆದುದರಿಂದ ನಾನೀಗ ಈ ಇಲಾಖೆಯ ಬಗ್ಗೆ ಏನಾದರೂ ಸಲಹೆಗಳನ್ನು ಮಾಡಬೇಕೇ ಅಥವಾ ಈ ಇಲಾಖೆಯನ್ನು ಕ್ರಿಟಿಸೈಜ್ ಮಾಡಬೇಕೇ ಎಂತ ಆಲೋಚಿಸಿದ್ದರಲ್ಲಿ ಈ ಎರಡನ್ನೂ ಮಾಡಬೇಕಾಗಿಲ್ಲವೆಂದು ಅನಿಸುತ್ತಿದೆ. ಏಕೆಂದರೆ ಈ ಇಲಾಖೆಯನ್ನೇ ಮುಚ್ಚಿಬಿಡ

(ಶ್ರೀ ಜಿ. ಮರುಳಪ್ಪ)

ಬೇಕು ಎಂದು ನನಗೆ ಅನಿಸುತ್ತಿದೆ. ಏತಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ ಈ ಇಲಾಖೆ ಇಲ್ಲಿಯವರೆಗೆಂದರೂ ವ್ಯವಸಾಯಾಭಿವೃದ್ಧಿಗೆ ಏನಾದರೂ ಕಿಂಚಿತ್ ಉಪಯೋಗ ಮಾಡಿ ಕೊಟ್ಟಿದೆಯೇ ಅಥವಾ ರೈತನು ಭೂಮಿಯನ್ನು ಯಾವ ಕಾಲದಲ್ಲಿ ಉಳುಮೆ ಮಾಡಬೇಕು, ಯಾವ ಕಾಲದಲ್ಲಿ ಬಿತ್ತನೆ ಮಾಡಬೇಕು, ರೈತನ ಖರ್ಚನ್ನು ಕಡಮೆ ಮಾಡಿ ಆತನ ಉತ್ಪತ್ತಿಯನ್ನು ಹೇಗೆ ಹೆಚ್ಚಿಸಬೇಕೆಂಬುದನ್ನಾಗಲೀ ಇತ್ಯಾದಿ ಏನಾದರೂ ಮಾಡಿದೆಯೇ ಎಂತ ನೋಡಿದರೆ—ರೈತನಿಗೆ ಉಳುಮೆ ಕಾಲದಲ್ಲಿ ಅವನಿಗೆ ಅಗತ್ಯವಾದ ಉಪಕರಣಗಳನ್ನು ಈ ಇಲಾಖೆ ಒದಗಿಸು ತ್ತಿಲ್ಲ; ಬಿತ್ತನೇ ಕಾಲದಲ್ಲಿ ರೈತನಿಗೆ ಒಳ್ಳೆ ಬೀಜಗಳನ್ನು ಒದಗಿಸುತ್ತಿಲ್ಲ; ಒಂದು ವೇಳೆ ಕಷ್ಟಪಟ್ಟು ಬೀಜವನ್ನೊದಗಿಸಿದರೆ—ಆ ಬೀಜಗಳು ಹುಟ್ಟುವುದೇ ಇಲ್ಲ; ಗೊಬ್ಬರವನ್ನು ಯಾವ ಕಾಲಕ್ಕೆ ಹಾಕಬೇಕೋ ಆ ಕಾಲಕ್ಕೆ ಇಲಾಖೆಯವರಲ್ಲಿ ಗೊಬ್ಬರ ಸಿಕ್ಕುವುದಿಲ್ಲ. ಯಾವಾಗ ಹೋಗಿ ಕೇಳಿದರೂ ಇಂಡೆಂಟ್ ಮಾಡಿದ್ದೇವೆ ಬರುತ್ತದೆ, ಬಂದರೆ, ಬಂದಮೇಲೆ ಬಂದು ತೆಗೆದು ಕೊಂಡು ಹೋಗಿ ಕೊಡುತ್ತೇವೆ ಎಂತ ಈ ಇಲಾಖೆಯವರು ಹೇಳುತ್ತ ಕುಳಿತರೆ ಆ ರೈತ ಬೇಸಾಯ ಮಾಡಲು ಸಾಧ್ಯವಿದೆಯೇ ಎಂತ ಕೇಳುತ್ತೇನೆ? ಹಾಗೂ ಒಂದು ವೇಳೆ ರೈತನು ಇದನ್ನೇ ಅನು ಸರಿಸಿಕೊಂಡು ವ್ಯವಸಾಯ ಮಾಡಲಿ ಎಂಬುದಾಗಿದ್ದರೆ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಯಾವಾಗ ಈ ಇಲಾಖೆಯವರು ಈ ಸಾಮಾನುಗಳನ್ನೆಲ್ಲಾ ರೈತನಿಗೆ ಒದಗಿಸಿಕೊಡುತ್ತಾರೋ ಆಗಲೇ—ಆ ಕಾಲದಲ್ಲೇ ಮಳೆ ಬೀಳತಕ್ಕದ್ದು ಎಂತ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದರೆ —ಅದರಂತೆ ಮಳೆ ಬರುವುದಾದರೆ ಹಾಗೂ ಆಗಬಹುದು: ನಾನು 60ನೇ ಇಸವಿಯಲ್ಲಿ ಒಂದು ಟ್ರಾಕ್ಟರ್ ಎಲ್ಲಿ ಬಿದ್ದಿದ್ದನ್ನು ನೋಡಿದೆನೋ, ಅದು 61 ರಲ್ಲೂ ಅಲ್ಲೇ ಇತ್ತು, 62 ರಲ್ಲೂ ಅಲ್ಲೇ ಇತ್ತು. ಈ ಟ್ರಾಕ್ಟರುಗಳ ಅವಸ್ಥೆ ಹೀಗಾಗಿದೆ. ನಾನಾದರೋ ಹಳ್ಳಿಯಿಂದ ಬಂದಿರತಕ್ಕವನು. ಆ ರೈತ ಈ ದಿವಸ ಈ ಟ್ರಾಕ್ಟರ್‌ಗಳು ಕೆಲಸಕ್ಕೆ ಸಿಗದೆ ಎಷ್ಟು ದುಃಖಪಡುತ್ತಿದ್ದಾನೆಂಬುದನ್ನು ಹೇಳತೀರದಾಗಿದೆ. ಯಾಕಯ್ಯ ಟ್ರಾಕ್ಟರ್ ತರಲಿಲ್ಲ ಎಂತ ಕೇಳಿದರೆ ಇಲಾಖೆಯವರು ಅದಕ್ಕೆ ಯಾವುದೋ ಬೋಲ್ಟ್ ಕಳಚಿಹೋಗಿದೆ ಎಂತ ಹೇಳುತ್ತಾರೆ ಎನ್ನುತ್ತಾನೆ. ಇಲಾಖೆಯವರು ಈ ದಿವಸ ನೇರವಾಗಿ ರೈತರಿಗೆ ಈ ಬುಲ್‌ಡೋಜರುಗಳು—ಟ್ರಾಕ್ಟರುಗಳು ಸಿಕ್ಕುವುದಿಲ್ಲ ಎಂತ ಏಕೆ ಹೇಳಬಾರದು? ಬೋಲ್ಟ್ ಕಳಚಿಹೋಗಿದೆ, ಅದಿಲ್ಲ—ಇದಿಲ್ಲ ಎಂತ ಹೇಳುವುದಾದರೂ ಎಲ್ಲಿಯತನಕ? ನಾನೇ ಒಂದಾವರ್ತಿ ಆ ಡ್ರೈವರನ್ನು ಎಷ್ಟು ದಿವಸಗಳಾಯಿತು ಏಕೆ ಆ ಬೋಲ್ಟ್ ಬರಲಿಲ್ಲ ಎಂತ ಕೇಳಿದರೆ ಆತ ಇವರು ಅವರಿಗೆ ಬರೆದಿದ್ದಾರೆ, ಅವರು ಅವರಿಗೆ ಬರೆದಿದ್ದಾರೆ. ಅಲ್ಲಿಂದ ಆ ಸಾಮಾನು ಬರಬೇಕು, ಬಂದಮೇಲೆ ನಿಮ್ಮೂರಿಗೆ ಟ್ರಾಕ್ಟರನ್ನು ತರುತ್ತೇನೆ ಎಂತ ಆತ ಹೇಳಿದ. ಆದರೆ ಇವರು ಇಷ್ಟೆಲ್ಲಾ ಸಮಾರಂಭ ಮಾಡಿಕೊಂಡು ಆ ಟ್ರಾಕ್ಟರನ್ನು ಹಳ್ಳಿಗೆ ತರುವ ವೇಳೆಗೆ ಅಲ್ಲಿ ಉಳುಮೆ ಮಾಡುವುದಕ್ಕೆ ಹದವಿಲ್ಲದೆ ಅವಕಾಶವಿರುವುದಿಲ್ಲ. ಆದರೆ—ಸ್ವಾಮಿ, ಈ ಅವ್ಯವಸ್ಥೆ ಎಲ್ಲ ಇಲಾಖೆಗಳಲ್ಲೂ ಸ್ವಲ್ಪ-ಹೆಚ್ಚು ಕಡಮೆ ಇಟ್ಟಿರಬಹುದು. ಆದರೆ ಅದೇನೂ ಅಷ್ಟು ಪ್ರಾಮುಖ್ಯವಾದ್ದಲ್ಲ. ಆದರೆ ಈ ಇಲಾಖೆ ಹುಟ್ಟಿ ಎಷ್ಟು ವರ್ಷಗಳಾಯಿತು? ಈ ಇಲಾಖೆ ಹುಟ್ಟಿ ಇಷ್ಟು ದಿವಸಗಳಾದರೂ ಇಲ್ಲಿಯ ತನಕ ಏನು ಕೆಲಸ ಮಾಡಿದೆ? ಏನಂಥಾ ಕ್ರಾಂತಿಕಾರಕ ಕೆಲಸಮಾಡಿ ಏನು ಅಂಥಾ ಈ ಕ್ಷೇತ್ರದಲ್ಲಿ ಬದಲಾವಣೆ ಮಾಡಿರತಕ್ಕದ್ದನ್ನು ನೋಡಿದರೆ ಅದೆಲ್ಲಿಯೂ ಕಾಣುತ್ತಿಲ್ಲ. ಹಳ್ಳಿಯಲ್ಲಿರತಕ್ಕ ಒಬ್ಬ ವಯಸ್ಸಾದ ಬೇಸಾಯಗಾರನಿಗಿರುವಷ್ಟು ಬುದ್ಧಿ ಈ ಇಲಾಖೆಗಿಲ್ಲ ಎಂತ ಹೇಳಿದರೆ ಅದೇನೂ ತಪ್ಪಾಗಲಾರದು. ಆದರೂ ಇದೊಂದು ಬಹು ಮುಖ್ಯವಾದ ಇಲಾಖೆ. ಈ ದಿವಸ ದೇಶದಲ್ಲಿರತಕ್ಕ ರೈತನಿಗೆ ಒಳ್ಳೆಯ ಉತ್ಪತ್ತಿ ಮಾಡುವಂಥಾ ಶಕ್ತಿ ಆತನಿಗೆ ಬಾರದ ಹೊರತು, ಅವನಿಗೆ ಸಾಕಷ್ಟು ಪ್ರೋತ್ಸಾಹವನ್ನು ಸರ್ಕಾರ ನೀಡದ ಹೊರತು ನೀವೆಷ್ಟೇ ಮಾಡಿದರೂ ದೇಶದಲ್ಲಿ ಯಾವ ಒಂದು ಉದ್ಯಮವೂ ನಡೆಯಲಾರದು—ಇದು ಸತ್ಯವಾದ ಮಾತು. ಅನ್ನವಿಲ್ಲದ ದೇಶದಲ್ಲಿ ಏನು ತಾನೆ ಮಾಡಲು ಸಾಧ್ಯವಿದೆ? ಆದರೆ ಇನ್ನೂ ಈಗತಾನೆ ಬಹಳ ಉತ್ಸಾಹಶಾಲಿಗಳಾದಂಥಾ ಹೊಸ ಮಂತ್ರಿಗಳು ಈ ಬಾಬಿಗೆ ಬಂದಿದ್ದಾರೆ. ಉತ್ತಮ ದರ್ಜೆಯ ರೈತಾಪಿ ಜನಗಳಿರುವಂಥ ಜಿಲ್ಲೆ ಯಿಂದ ಅವರು ಬಂದಿದ್ದಾರೆ. ಈ ಇಲಾಖೆಯಲ್ಲಿ ಹೆಚ್ಚಿನ ಮಾರ್ಪಾಡುಗಳನ್ನು ಮಾಡ ಬೇಕೆಂಬ ಆಸೆ ಅವರಿಗೆ ಬಹಳವಾಗಿದೆ. ಅವರು ದಕ್ಷರೂ ಹೌದು. ಇಷ್ಟೆಲ್ಲಾ ಇದ್ದರೂ ನನಗಿನ್ನೂ ಅನುಮಾನವೇ. ಏಕೆಂದರೆ ಅವರ ಕೈಕೆಳಗಿರುವ ಮೆಷಿನರಿ ಬಹಳ ಹಳೆಯದಾಗಿದ್ದು ಅದು ಕೆಟ್ಟು ಹೋಗಿದೆ. ಅದನ್ನು ಹೊಸದಾಗಿ ಮಾಡಿಕೊಂಡರೆ ಮಾತ್ರ ಇವರು ತಮ್ಮ ಕಾರ್ಯದಲ್ಲಿ ಯಶಸ್ವಿ ಯಾಗುತ್ತಾರೋ ಏನೋ ಎಂದೆನಿಸುತ್ತಿದೆ. ನಾನು ಈ ದಿವಸ ಈ ಮಾತುಗಳನ್ನು ನಗಸಾರಕ್ಕಾಗಿ ಹೇಳುತ್ತಿಲ್ಲ. ಬಹಳ ಸೀರಿಯಸ್ ಆಗಿ ಹೇಳುತ್ತಿದ್ದೇನೆ. ಈ ವ್ಯವಸಾಯದ ಇಲಾಖೆಯೊಂದು ದೊಡ್ಡ ರಾಜಕೀಯದ ಇಲಾಖೆಯಾಗಿದೆಯೇನೋ ಎಂಬ ಸಂಶಯ ಬಂದಿದೆ. ಈ ಇಲಾಖೆ ವಿಚಾರ

ದಲ್ಲಿ ಜನ ಬಹಳ ಬೇಸತ್ತಿದ್ದಾರೆ. ಈ ವಿಚಾರವನ್ನು ಸರ್ಕಾರದವರು ಜಾಗ್ರತೆಯಾಗಿ ಪರಿಶೀಲನೆ ಮಾಡತಕ್ಕದ್ದು ಯೋಗ್ಯವೆಂದು ಹೇಳುತ್ತೇನೆ.

ಯಾವ ವಿಚಾರಕ್ಕಾಗಲೀ ಈ ಇಲಾಖೆಯಲ್ಲಿ ಒಂದು ಸ್ಟ್ಯಾಟಿಸ್ಟಿಕ್ಸ್ ಇದೆಯೋ ಎಂದರೆ ಅದಿಲ್ಲ. ಈ ದಿವಸ ಈ ವ್ಯವಸಾಯದಲ್ಲಿ ಕಾವಲುಪಡುತ್ತಿರು ರೈತ ಹಾಗೂ ವ್ಯವಸಾಯದ ಕೂಲಿಗಾರರ ಆಗಚಾಟಲನ್ನೂ ಮತ್ತು ಈ ಕೈಗಾರಿಕೆಗಳಲ್ಲೂ ಇತರ ಉದ್ಯಮಗಳಲ್ಲೂ ತೊಡಗಿರತಕ್ಕ ಜನರು ಪಡುತ್ತಿರುವ ಆ ಸುಖ-ಆನಂದ, ಅವರ ಜೀವನದ ಮಟ್ಟ ಇವುಗಳನ್ನೆಲ್ಲಾ ಲೆಕ್ಕ ಹಾಕಿನೋಡಿದ್ದೇ ಆದರೆ ಆ ಹಳ್ಳಿಗಳಲ್ಲಿರತಕ್ಕ ಶೇಕಡ 80 ರಷ್ಟು ರೈತಾಪಿ ಜನಗಳಿಗೆ ವ್ಯವಸಾಯಗಾರರಿಗೆ ಅವರ ಜೀವನದ ಮಟ್ಟ ಹೆಚ್ಚಾಗುವಂತೆ ಈ ಇಲಾಖೆಯಿಂದ ಏನೇನು ಅನುಕೂಲತೆಗಳು ದೊರೆತಿರುತ್ತವೆ, ಅವರ ಕಷ್ಟ ಎಷ್ಟರಮಟ್ಟಿಗೆ ನಿವಾರಣೆಯಾಗಿದೆ ಎಂಬುದನ್ನು ತೂಕ ಹಾಕಿದರೆ ಆಗ ಈ ಇಲಾಖೆ ಇರಬೇಕೇ ಅಥವಾ ಬೇಡವೇ ಎಂಬುದು ಸರ್ಕಾರದವರಿಗೇ ಗೊತ್ತಾಗುತ್ತದೆ. ಆದರೆ ಸರ್ಕಾರದವರಿಗೆ ಇದೆಲ್ಲವೂ ಅರ್ಥವಾಗಿರಬಹುದು. ಆದರೆ ನಾನು ಮತ್ತೆ ಪೇಪರನ್ನು ಓದುತ್ತಿದ್ದಾಗ ಅಲ್ಲೆಲ್ಲೋ ಮತ್ತೆ ದೊಡ್ಡ ಸೈನ್ಯವನ್ನು ತಂದಿದ್ದಾರೆ ಎಂತ ಬರೆದಿತ್ತು. ಆದರೆ ನಮಗೆ ಯಾವ ಕಾಲವಾದರೇನು ಒಳ್ಳೆಯ ಕಾಲವೇ ಆಗಲಿ, ಕೆಟ್ಟ ಕಾಲವೇ ಆಗಲಿ ಎಂಥಾ ಕಾಲದಲ್ಲೂ ಈ ಆಹಾರ ಬೇಕೇಬೇಕು. ಇದನ್ನು ಬಿಟ್ಟಿರುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಈ ವ್ಯವಸಾಯದ ಉದ್ಯಮದಲ್ಲಿ ಒಂದು ಕ್ರಾಂತಿಕಾರಿಕ ರೀತಿಯಲ್ಲಿ ಕೆಲಸಗಳು ನಡೆದು ನಾವು ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡಿಕೊಳ್ಳಬೇಕಾಗಿದ್ದರೆ ನಾವು ರೈತರಿಗೆ ಅನೇಕ ಬಾಬಿನಲ್ಲಿ ಸೌಕರ್ಯಗಳನ್ನು ದೊರಕಿಸಿ ಕೊಡಬೇಕು— ಅವರಿಗೆ ಪ್ರೋತ್ಸಾಹ ನೀಡಬೇಕು. ನಮ್ಮಲ್ಲಿ ಆಹಾರ ಧಾನ್ಯ ಸಾಕಷ್ಟು ಇಲ್ಲದಿದ್ದಾಗ ಇನ್ನಾವ ಇಂಡಸ್ಟ್ರಿಯೂ ಇಲ್ಲ ಉದ್ಧಾರವಾಗುವುದಿಲ್ಲ ಎಂದು ನಾನು ಖಚಿತವಾಗಿ ಹೇಳಬಲ್ಲೆ. ಆದರೆ ಈಗತಾನೆ ಈ ಬೇಡಿಕೆಗಳು ನಮ್ಮ ಮುಂದೆ ಬಂದಿವೆ. ಈ ಹಣ ಮುಂದಿನ ವರ್ಷದಲ್ಲಿ ಖರ್ಚು ಮಾಡತಕ್ಕದ್ದಾಗಿದೆ. ಆದ್ದರಿಂದ ಈಗ ಬಂದಿರತಕ್ಕ ಮಂತ್ರಿಗಳು ಈ ಹಣವನ್ನು ಎಷ್ಟರಮಟ್ಟಿಗೆ ಸದ್ವಿನಿಯೋಗ ಮಾಡುತ್ತಾರೆಂಬುದನ್ನು ಇನ್ನೂ ಒಂದು ವರ್ಷ ನಾವು ಕಾದು ನೋಡಿ ಆನಂತರ ಮುಂದಿನ ವಿಚಾರ ಮಾತನಾಡತಕ್ಕದ್ದು ಉಚಿತವೆಂತ ಭಾವಿಸಿ ಇದನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ.

ಇನ್ನು ಎರಡನೇಯದಾಗಿ ಈ ಕೋ-ಆಪರೇಷನ್ ಇಲಾಖೆ ವಿಚಾರಕ್ಕೆ ಬಂದರೆ—ಇದರ ಬಗ್ಗೆ ನನ್ನ ಸ್ನೇಹಿತರು ಬಹಳವಾಗಿ ಟೀಕೆಮಾಡಿ ಮಾತನಾಡಿದ್ದಾರೆ. ಈ ದಿವಸ ದೇಶದಲ್ಲಿ ಪ್ರಜಾಪ್ರಭುತ್ವ ಸ್ಥಾಪಿತವಾಗಿದೆ. ಎಲ್ಲ ಕಡೆಗಳಲ್ಲೂ ನಾನಾಫಿಷಿಯಲ್ ಬಾಡಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕು ಎಂತ ಹೇಳುತ್ತಿರುವವರೂ ನಾವೇ ಮತ್ತು ಈ ದಿವಸ ಈ ಸ. ಸಂಘಗಳನ್ನು ಕಟುವಾಗಿ ಟೀಕೆ ಮಾಡುತ್ತಿರುವವರೂ ನಾವೇ. ಈ ದಿವಸ ಈ ಸ. ಸಂಸ್ಥೆಗಳಲ್ಲಿ ಶೇಕಡ 90 ಭಾಗ ನಾನ್‌ಅಫಿಷಿಯಲ್ಸ್‌ಗಳೇ ಇದ್ದಾರೆಂತ ಹೇಳುತ್ತಿದ್ದೇನೆ. ಅಥವಾ ಆ ನಾಮಿನೇಷನ್ ಪದ್ಧತಿಯಲ್ಲಿ ಶೇಕಡ 5 ಭಾಗದಷ್ಟು ಬೇರೆ ಜನ ಬಂದಿರಬಹುದು. ಉಳಿದವರೆಲ್ಲ ನಾವೇ. ನಾವು ಎಂದರೆ ಯಾರು ? ಪ್ರಜಾಪ್ರತಿನಿಧಿಗಳೆಂದೆನಿಸಿಕೊಂಡು ಈ ಸಭೆಯಲ್ಲಿರತಕ್ಕ ಮಹನೀಯರನೇಕರು ಆ ಸೊಸೈಟಿಗಳಲ್ಲೂ ಇದ್ದಾರೆ. ನಮಗೀದಿವಸ ಈ ಅಫಿಷಿಯಲ್ ಡಂ ಬೇಕಾಗಿಲ್ಲ ಅನ್ನೋ ಜನರೂ ಈ ದಿವಸ ಈ ಸ. ಸಂಘಗಳಲ್ಲಿರುತ್ತಾರೆ. ಆದರೆ ಏನೋ ಅಲ್ಲಿ ಒಬ್ಬರಿಗೊಬ್ಬರಿಗೆ ಪೈಪೋಟಿ ಬಂದು ಕೆಲಸಗಳು ಸರಿಯಾಗಿ ಆಗುತ್ತಿಲ್ಲವೆಂತ ಟೀಕೆ ಮಾಡಿದ್ದರೆ ಅದೊಂದು ರೀತಿಯಾಗಿರುತ್ತಿತ್ತು. ಹಾಗಿಲ್ಲದೆ ಈ ದಿವಸ ಯಾರ ಒಂದು ಜವಾಬ್ದಾರಿ ಮೇಲೆ ಈ ಕೆಲಸ ಬಿದ್ದಿದೆಯೋ ಅವರು ಆ ಕೆಲಸ ನಿರ್ವಹಿಸಲು ತಕ್ಕ ಶಕ್ತಿ ಸಾಮರ್ಥ್ಯಗಳಿಲ್ಲದೆ ಅಲ್ಲಿ ದುರಾಚಾರ ನಡೆದಿದ್ದಾರೆ ಅದಕ್ಕೆಲ್ಲ ಈ ನಾನಫಿಷಿಯಲ್ಸ್‌ಗಳೇ ಜವಾಬ್ದಾರರು. ಈ ದಿವಸ ಈ ನಾನ್ ಅಫಿಷಿಯಲ್‌ಗಳು ಸರಿಯಾಗಿ ಕೆಲಸಮಾಡದೆ ಅಲ್ಲಿ ದುರಾಡಳಿತ ನಡೆದಿದ್ದಾದರೆ ಅದಕ್ಕೆ ಈ ದಿವಸ ಇಲ್ಲಿ ಬಂದು ಸರ್ಕಾರದವರನ್ನು ಟೀಕೆ ಮಾಡುವುದರಲ್ಲಿ ಅರ್ಥವಾದರೂ ಏನಿದೆ ? ನಮ್ಮ ರಾಜ್ಯವೊಂದೇ ಅಲ್ಲ—ಇಡೀ ಹಿಂದೂಸ್ಥಾನಕ್ಕೇ ಈ ಕೋ-ಆಪರೇಟೀವ್ ಮೂವ್‌ಮೆಂಟೆಂಬುದು ಬಹಳ ಮುಖ್ಯವಾದದ್ದು. ದೇಶದ ಕಲ್ಯಾಣ ಸಾಧನೆಗೆ ಇದು ಬಹಳ ಮುಖ್ಯವಾಗಿ ಬೇಕಾದದ್ದು. ಅದರಲ್ಲಿ ಈ ಸಂಸ್ಥೆಗಳಲ್ಲಿ ಅಲ್ಲಲ್ಲೇ ಕೆಲವು ನ್ಯೂನತೆಗಳಿರಬಹುದು. ಇವುಗಳನ್ನು ತಿದ್ದಿ ಸರಿಪಡಿಸಲು ಸರ್ಕಾರ ಸರ್ವಪ್ರಯತ್ನಗಳನ್ನೂ ಮಾಡಬೇಕಾಗಿತ್ತು. ಆದರೆ ಮಾಡಿಲ್ಲ, ಆ ಜನಗಳ ತಪ್ಪನ್ನು ಯಾವ ರೀತಿ ತಿದ್ದಬೇಕು. ಅಂಥಾ ತಪ್ಪಿತಸ್ಥರಿಗೆ ಒಂದು ರೀತಿಯ ಭೀತಿಯನ್ನುಂಟುಮಾಡಿ ಈ ಸಂಸ್ಥೆಗಳು ಅಭಿವೃದ್ಧಿಗೊಳ್ಳುವಂತೆ ಸಹಾಯ ಮಾಡಬೇಕಾದ್ದು ಈ ಇಲಾಖೆಯ ಮುಖ್ಯ ಕೆಲಸವಾಗಿತ್ತು. ಆದರೆ ಇದರಲ್ಲಿ ಒಂದು ಅಂಶವನ್ನು ಮಾತ್ರ ಸರ್ಕಾರದವರು ಕೈಬಿಡಬೇಕಾಗಿದೆ. ಅದೇನಪ್ಪ ಅಂದರೆ ಈ ನಾಮಿನೇಷನ್ ಪದ್ಧತಿ. ಇದನ್ನು ಸರ್ಕಾರ ಎಲ್ಲಿಯವರೆಗೆ ರದ್ದು ಮಾಡುವುದಿಲ್ಲವೋ ಅಲ್ಲಿಯತನಕ ಸರ್ಕಾರಕ್ಕೆ ಕೆಟ್ಟ ಹೆಸರು ತಪ್ಪಿದ್ದಲ್ಲ ಎಂತ ಹೇಳುತ್ತೇನೆ. ಇದನ್ನು ರದ್ದುಮಾಡಿ ಈ ಸಂಸ್ಥೆಗಳ ಅಭಿವೃದ್ಧಿಗೆ ಸೂಕ್ತ ಗಮನ ಕೊಡಬೇಕೆಂದು ಹೇಳುತ್ತೇನೆ.

(ಶ್ರೀ ಜಿ. ಮಾದುಳಪ್ಪ)

ಇನ್ನು ನಾನೀಗ ಈ N.E.S. ಬಾಬಿನಲ್ಲಿ ಕೇವಲ ಹಳ್ಳಿಗಳಿಗೆ ಕುಡಿಯುವ ನೀರಿನ ವಿಚಾರವನ್ನು ಮಾತ್ರ ಹೇಳಬಯಸುತ್ತೇನೆ. ಈ ದಿವಸ ಇಲ್ಲಿರತಕ್ಕ ಮಂತ್ರಿಗಳೆಲ್ಲರೂ ಹಳ್ಳಿಯಿಂದಲೇ ಬಂದವರಾಗಿದ್ದಾರೆ. ಅದರಲ್ಲೂ ಈ ಬಾಬಿಗೆ ಸಂಬಂಧಪಟ್ಟ ಮಂತ್ರಿಗಳು ನೀರಿಗೆ ತುಂಬಾ ಕಷ್ಟವಿರುವಂಥಾ ಜಿಲ್ಲೆಯಿಂದಲೇ ಬಂದವರಾಗಿದ್ದಾರೆ. ಅವರ ಕಡೆ ಜನರು ನೀರು, ನೀರೆಲ್ಲಿದೆ ಎಂತ 4–5 ಮೈಲಿಗಟ್ಟಲೆ ಈ ಕುಡಿಯುವ ನೀರಿಗೆ ಅಲೆದಾಡುವಂಥಾ ಪ್ರದೇಶದಿಂದ ಈ ಮಂತ್ರಿಗಳು ಬಂದಿದ್ದಾರೆ. ಅವರಿಗೆ ಈ ಕುಡಿಯುವ ನೀರಿನ ಭಂಗ ಎಷ್ಟರಮಟ್ಟಿಗೆ ಇದೆ ಎಂಬ ಕಷ್ಟ ಅವರಿಗೆ ಗೊತ್ತಾಗಿದೆ. ಅಂಥಾವರು ಈ ದಿವಸ ಈ ಹಳ್ಳೀ ಜನರಿಗೆ ಈ ಕುಡಿಯುವ ನೀರಿನ ಬಾವಿಗಳಿಲ್ಲದೆ ಎಷ್ಟು ತೊಂದರೆಯಾಗಿದೆ ಎಂಬುದನ್ನು ಕೂಡಲೇ ಪರಿಶೀಲನೆ ಮಾಡಿ ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು ಅವರ ಕರ್ತವ್ಯ.

ಸ್ವಾಮಿ, ಬಾವಿಗಳ ವಿಚಾರದಲ್ಲಿ ನಮ್ಮ ಸ್ನೇಹಿತರು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಬಾವಿಗಳು 15 ವರ್ಷದಿಂದ, 10 ವರ್ಷದಿಂದ, 8 ವರ್ಷದಿಂದ, 4 ವರ್ಷದಿಂದ ಆಗಿಲ್ಲ, ಬಾವಿಗಳಿಗೆ ಜನತೆಯಿಂದ ದುಡ್ಡು ಕೇಳುತ್ತಿದ್ದೀರಿ. ಅವರು ಹಣ ಕೊಡದೆ ಇದ್ದರೆ ನಿಮ್ಮ ಕೋಟಾ ಕೊಡಲಿಲ್ಲವೆಂದು ಕೆಲಸ ಮಾಡಿಸುವುದಿಲ್ಲ. ಕೆಲವು ಕಂಟ್ರಾಕ್ಟರುಗಳು ಬಿಟ್ಟು ಹೋಗಿ ಕೆಲಸ ನಿಂತು ಹೋಗಿದೆ. ಹೀಗೆ ಒಂದೊಂದು ತಾಲ್ಲೂಕಿನಲ್ಲಿ 50-100-200 ಹೀಗೆ ಬಾವಿಗಳ ಕೆಲಸ pending ನಲ್ಲಿವೆ—ವರ್ಷಾಂತರಗಳಾದರೂ ಬಾವಿ ಕೆಲಸ ಮುಗಿದಿಲ್ಲವೆಂದು ಹೇಳುವದರ ಬದಲು ವರ್ಷ ಒಂದಕ್ಕೆ ಒಂದು ತಾಲ್ಲೂಕಿಗೆ ಹತ್ತು ಬಾವಿಗಳನ್ನು ಕೊಡಿ, ನಿಮ್ಮ ಶಕ್ತಿ ಎಷ್ಟಿದೆಯೋ ಅಷ್ಟನ್ನೂ ಕೊಡಿ ಆದರೆ ಗ್ರಾಮಸ್ಥರ ಭಾಗ ಕೊಟ್ಟರೆ ಮಾತ್ರ ಕುಡಿಯುವ ನೀರಿನ ಬಾವಿಯನ್ನು ಕೊಡುತ್ತೇವೆಂದು ಹೇಳಬೇಡಿ. ಸುವ್ಯವಸ್ಥಿತವಾದ ಏಜನ್ಸಿಯಿಂದ ವರ್ಷಕ್ಕೆ ಹತ್ತು ಬಾವಿಗಳಂತೆ ಗ್ರಾಮಸ್ಥರಿಗೆ ಕುಡಿಯುವ ನೀರನ್ನು ಖಂಡಿತವಾಗಿ ಒದಗಿಸಿಕೊಡಬೇಕು, ಅವರಿಂದ ಹಣ ಕೇಳಬಾರದು ಎಂದು ಹೇಳುತ್ತೇನೆ.

ಪಶುವೈದ್ಯ ಇಲಾಖೆಯ ವಿಷಯದಲ್ಲಿ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಏಕೆ ಎಂದು ಕೇಳಬಹುದು. ಈ ಇಲಾಖೆ ಯಾರ ಕೈಯಲ್ಲಿದೆಯೋ ಅವರನ್ನು ನಾನು ಬಹಳ ಚೆನ್ನಾಗಿ ಬಲ್ಲೆ. ಅವರು ಕ್ರಾಂತಿಕಾರರೆನ್ನಿಸಿಕೊಂಡವರು, ಅವರು ಚಿಕ್ಕ ವಯಸ್ಸಿನಲ್ಲಿಯೇ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿ ಅಂಥ ಪ್ರಯೋಜನವನ್ನು ಕೂಡ ರೈತರಿಗೆ ಒದಗಿಸಿಕೊಟ್ಟಿದ್ದಾರೆ. ಆದರಿಂದಲೇ ಅವರಿಗೆ ಒಂದೊಂದು ಮೆಟ್ಟಲು ಜಾಸ್ತಿಯಾಗಿ ಇಂಥ ಪದವಿ ಸಿಕ್ಕಿದೆ ಎಂದು ನಾನು ಹೇಳುತ್ತೇನೆ.

ಈ ಇಲಾಖೆಯ ವಿಷಯದಲ್ಲಿ ಜನಗಳು ಬಹಳ ಹೇಳುತ್ತಾರೆ. ಅದು ನನಗೂ ತಿಳಿದಿದೆ. ಅಲ್ಲಿ ಒಬ್ಬರ ಮಾತನ್ನು ಒಬ್ಬರು ಕೇಳುವುದಿಲ್ಲ, ಮೇಲಿನವರ ಮಾತನ್ನು ಕೆಳಗಿನವರು ಕೇಳುವುದಿಲ್ಲ, ಇದರಿಂದ ದಕ್ಷತೆ ಕಡಮೆಯಾಗಿದೆ ಎಂದು ತಿಳಿದು ಬಂದಿದೆ. ಇದಕ್ಕೆ ಸರ್ಕಾರದವರು ದಿಟ್ಟತನದಿಂದ, ಹಾಗೆಲ್ಲ ನಡೆಯುತ್ತಿಲ್ಲ, ಅದೆಲ್ಲ ಸುಳ್ಳು ಎಂದು ಹೇಳಬಹುದು. ಆದರೆ ಅದು ಸರಿಯಲ್ಲ. ನಾವು ದೇಶದ ಹಿತದೃಷ್ಟಿಯಿಂದ ಹೇಳುತ್ತೇವೆ. ಅಂಥ ತಪ್ಪುಗಳೇನಾದರೂ ಇದ್ದರೆ ಅವುಗಳನ್ನು ಒಪ್ಪಿಕೊಂಡು ತಿದ್ದುತ್ತೇವೆಂದು ಹೇಳಬೇಕು. ಅಲ್ಲಿರತಕ್ಕ ಕೆಲವು ಅಧಿಕಾರಿಗಳ ಬಗ್ಗೆ ಯಾರಿಗೂ ವಿಶ್ವಾಸವಿಲ್ಲ. ಅದನ್ನು ತಪ್ಪಿಸುವುದಕ್ಕೆ ಅನೇಕ ಎಡರು ತೊಡರುಗಳಿವೆ. ನನಗೆ ಅದೂ ಗೊತ್ತಿದೆ. ಆದರೂ ಕೂಡ ಸರ್ಕಾರ ಅದನ್ನೆಲ್ಲ ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಅರಣ್ಯ ಇಲಾಖೆ ಮೊದಲಿನಿಂದಲೂ ಅನೇಕ ಟೀಕೆಗಳಿಗೊಳಗಾಗುತ್ತ ಬಂದಿದೆ. ಕಳೆದ ಒಂದು ವರ್ಷದಿಂದ ಈ ಇಲಾಖೆ ಮೊದಲಿಗಿಂತ ಸಮರ್ಪಕವಾಗಿ ಕೆಲಸ ಮಾಡುತ್ತಿದೆ, ಚೆನ್ನಾಗಿದೆ; ಲೋಪ ದೋಷಗಳಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಮಂತ್ರಿಗಳು ಸ್ವಲ್ಪ ಹೆಚ್ಚಿಗೆ ಶ್ರದ್ಧೆ ತೆಗೆದುಕೊಳ್ಳುತ್ತಿದ್ದಾರೆ. ಕಾಡನ್ನು ಹಾಳು ಮಾಡುವುದಕ್ಕಿಂತ ಸ್ವಲ್ಪ ಉತ್ತಮಪಡಿಸಬೇಕೆನ್ನುವ ದಿಸೆಯಲ್ಲಿ ಸಹಕಾರಿಗಳಾಗಿದ್ದರೆ, ಅದರ ಉತ್ಪನ್ನಗಳನ್ನು ಹೆಚ್ಚಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ, ಕಷ್ಟ ಸುಖಗಳನ್ನು ಕೇಳಿ ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಕೆಲವರು ಆ ಇಲಾಖೆಗೆ ಸಂಬಂಧಪಟ್ಟವರು ಹೇಳುತ್ತಾರೆ. ಈ ಇಲಾಖೆಯನ್ನು ಬಹಳ ಯಶಸ್ವಿಯಾಗಿ ಮಾಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಎಲ್ಲ ಬೇಡಿಕೆಗಳನ್ನೂ ಸಂಪೂರ್ಣವಾಗಿ ಅನುಮೋದಿಸುತ್ತ ಕೆಲವು ವಿಷಯಗಳನ್ನು ಸರ್ಕಾರದಲ್ಲಿ ಸೂಚಿಸಬೇಕೆಂದು ಅಪೇಕ್ಷೆ ಮಾಡಿದ್ದೇನೆ.

ಮಾನ್ಯ ಮರುಳಪ್ಪನವರು ಬಹಳ ಚೆನ್ನಾಗಿ ಭಾಷಣ ಮಾಡಿದರು. ಅವರು ಬಹಳ ಹಿರಿಯರು ಅವರೇ ಒಪ್ಪಿಕೊಂಡಿದ್ದಾರೆ, ರೈತರ ಕುಟುಂಬದಲ್ಲಿ ಹುಟ್ಟಿದ್ದೇನೆ ಎಂದು, ಅವರು ಹೇಳಿದರು ಟ್ರಾಕ್ಟರ್ ಕೊಟ್ಟಿಲ್ಲ, ನೇಗಿಲು ಕೊಟ್ಟಿಲ್ಲ, ಬೀಜ ಕೊಟ್ಟಿಲ್ಲ, ಗೊಬ್ಬರ ಕೊಟ್ಟಿಲ್ಲ ಎಂದು. ರೈತನಾದವನ ಮನೆಗೆ ಸರ್ಕಾರದವರು ಬೀಜ ತಂದು ಕೊಡಬೇಕು, ಹೊಲ ಉಳಮೆ ಮಾಡಿಸಿ ಕೊಡಬೇಕು, ಆಮೇಲೆ ಗೊಬ್ಬರ ತಂದು ಹಾಕಬೇಕು. ಇಷ್ಟೆಲ್ಲ ಆದ ಮೇಲೆ ನಾವು ಮಾಡತಕ್ಕ ಕೆಲಸವೇನು ಎಂದು ಕೇಳುತ್ತೇನೆ.

ಶ್ರೀ ಜಿ. ಮರುಳಪ್ಪ.—ಸ್ವಾಮಿ, ಗೊಬ್ಬರ, ಬೀಜ ವಗೈರೆ ಸಕಾಲದಲ್ಲಿ ಇಲಾಖೆಯಲ್ಲಿ ದೊರೆತ್ತಿಲ್ಲವೆಂದು ಹೇಳಿದೇನೇ ಹೊರತು ನಮ್ಮ ಮನೆಗೆ ತಂದುಕೊಡಬೇಕೆಂದು ಹೇಳಲಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ನಾನಾದರೂ ಇಷ್ಟು ಹೇಳುತ್ತೇನೆ. ಇಲಾಖೆಯವರು ಸಂಶೋಧನೆ ಮಾಡಿ ಒಳ್ಳೆಯ ಬೀಜ ಸಿಕ್ಕುವಂತೆ ಮಾಡಬೇಕು. ಗೊಬ್ಬರದ ವಿಷಯ ತೆಗೆದುಕೊಂಡರೆ ತಿಪ್ಪೆ ಗೊಬ್ಬರ ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಅದರ fertilisers ಬೇಕಾದ ಹಾಗೆ ಉಪಯೋಗಿಸಿಕೊಳ್ಳಬಹುದು. ಆದರೆ ಯಾವತ್ತೂ fertilisers ಬೇಕು ಎಂದರೆ ಹೇಗೆ. ಸರ್ಕಾರದವರು ಕೊಟ್ಟಂಥ ಬೀಜಗಳನ್ನು ತಿಂದು ಸರ್ಕಾರದವರು ಬೀಜಗಳನ್ನು ತಂದು ಕೊಟ್ಟಿಲ್ಲವೆಂದು ಟೀಕೆ ಮಾಡುವುದು, ಬರೀ ಟೀಕೆ ಮಾಡತಕ್ಕವರ ಕಾರ್ಯವೇ ಹೊರತು ರೈತರ ಕಾರ್ಯವಲ್ಲ. ರೈತ ಕುಟುಂಬದಲ್ಲಿ ಹುಟ್ಟಿದವರು ಬೀಜ ಬೇಕು ಎಂದು ಸರ್ಕಾರವನ್ನು ಕೇಳದೆ ಅದನ್ನೂ ದಾಸ್ತಾನು ಮಾಡುತ್ತಾರೆ, ಗೊಬ್ಬರ ಸರಿಯಾಗಿ ಇಟ್ಟುಕೊಳ್ಳುತ್ತಾರೆ, ಯಾವ ಗೊಬ್ಬರ ಬೇಕೋ ಅದನ್ನು ಇಟ್ಟುಕೊಳ್ಳುತ್ತಾರೆ. ಅವರ ಮೇಲೆ ಸರ್ಕಾರದಿಂದ ಏನು ಸಹಾಯಬೇಕೋ ಅದನ್ನು ಕೊಡಿ ಎಂದು ಸೌಲಭ್ಯಗಳನ್ನು ಪಡೆಯುತ್ತಾರೆ. ಸರ್ಕಾರದವರೇ ಎಲ್ಲವನ್ನೂ ಕೊಡುವುದಕ್ಕಾಗುವುದಿಲ್ಲ. ನಾನೂ ರೈತರ ಕುಟುಂಬದಲ್ಲಿದ್ದೇನೆ. ರೈತರ ಅನುಭವ ಬಹಳ ಚೆನ್ನಾಗಿದೆ. ಹೆಚ್ಚು ಆಹಾರ ಉತ್ಪಾದನೆ ಮಾಡುವುದರಲ್ಲಿ ಬೆಳೆಗಳಿಗೆ ರೋಗರುಜಿನಗಳು ಬರದಂತೆ ತಡೆಗಟ್ಟತಕ್ಕ ಆಧುನಿಕ ಪದ್ಧತಿಗಳೇನಿದೆ ಅವುಗಳ ಮೂಲಕ ಆ ಸಮಸ್ಯೆಯನ್ನು ಪರಿಹಾರ ಮಾಡಿಕೊಡಬೇಕು, ಎಂಥೆಂಥ ವ್ಯವಸಾಯ ಮಾಡುವವರಿಗೆ ಏನೇನು ಸಹಾಯಬೇಕು, subsidy loan ಮುಂತಾದುವನ್ನು ಮಂಜೂರು ಮಾಡಬೇಕೆಂದು ಹೇಳಿದ್ದರೆ ಬಹಳ ಬಹಳ ಚೆನ್ನಾಗಿರುತ್ತಿತ್ತೆಂದು ನನ್ನ ಅಭಿಪ್ರಾಯ.

ವ್ಯವಸಾಯ ಇಲಾಖೆಯ ಬಗ್ಗೆ ನಾನು ಕೆಲವೊಂದು ಸೂಚನೆಗಳನ್ನು ಹೇಳಬೇಕೆಂದು ಅಪೇಕ್ಷೆ ಪಡುತ್ತೇನೆ. ಇವೊತ್ತಿನ ದಿವಸ ನಮ್ಮ ಕಡೆ Cotton Marketing Act ಇದುವರಿಗೂ ಜಾರಿಗೆ ಬಂದಿಲ್ಲ, ಇದರಿಂದ ರಾಯಚೂರಿನಲ್ಲಿ ಹತ್ತಿ ಬೆಳೆಯತಕ್ಕ ರೈತರಿಗೆ ತುಂಬ ಅನ್ಯಾಯವಾಗಿದೆ. ಈಗ ಗದಗ್ ಮಾರುಕಟ್ಟೆಯಲ್ಲಿ ಏನು ಬೆಲೆ ಇದೆಯೋ ಅದೇ ಬೆಲೆ ರಾಯಚೂರಿನಲ್ಲಿ ಸಿಕ್ಕುತ್ತಿಲ್ಲ. ಕಾನೂನು ಜಾರಿಯಲ್ಲಿಲ್ಲದೆ ಆ area demarket ಆಗಿಲ್ಲ. ಗದಗಿನಿಂದ ಎರಡು ನೂರು ಮೈಲಿ ದೂರದಲ್ಲಿ ರಾಯಚೂರು ಜಿಲ್ಲೆಯ ಹಳ್ಳಿಗಳಲ್ಲಿ ಗದಗಿನಲ್ಲಿ ಸಿಕ್ಕುವ ಬೆಲೆ ಸಿಕ್ಕುತ್ತಿಲ್ಲ. ಆದುದರಿಂದ ಆ ಕಾನೂನನ್ನು ಸರ್ಕಾರದವರು ತೀವ್ರಗತಿಯಿಂದ ಜಾರಿಗೆ ತರಬೇಕು ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

Soil Conservation ಸಲುವಾಗಿ ಒಂದು ಕಾನೂನು ಮಾಡಿದ್ದಾರೆ. ಈ ಕೆಲಸಕ್ಕೆ ಸ್ವಲ್ಪ ದುಡ್ಡನ್ನು ಕೊಟ್ಟಿದ್ದಾರೆ, ನನ್ನ ಜಿಲ್ಲೆಯ ವಿಚಾರ ಹೇಳಬೇಕೆಂದರೆ ಅಲ್ಲಿಗೆ ಕೊಟ್ಟಂಥ ದುಡ್ಡು ಸಾಲುವುದಿಲ್ಲ. ನಮ್ಮಲ್ಲಿ ಬರಗಾಲ ಬರುವ ಪ್ರದೇಶಗಳಿವೆ. ಅಲ್ಲಿ contour bunding ಹಾಕತಕ್ಕದ್ದು ಬಹಳ ಉಪಯುಕ್ತವಾಗಿದೆ, ಕಡಮೆ ಮಳೆ ಬಂದಾಗ್ಯೂ ಕೂಡ Contour bunding ಹಾಕುವುದರಿಂದ ನೀರೆಲ್ಲ ಭೂಮಿಯಲ್ಲಿ ಹಿಂಗಿ ಬೆಳೆಗಳು ಚೆನ್ನಾಗಿ ಬರುತ್ತವೆ, ಈ ಕಾರ್ಯಕ್ಕೆ ಸರ್ಕಾರ ಒದಗಿಸಿರುವ ಹಣ ಬಿಲ್‌ಕುಲ್ ಬಹಳ ಕಡಮೆ ಇದೆ. ಇದುವರೆಗೂ ಇದಕ್ಕಾಗಿ ಕೊಟ್ಟಿರುವ ಹಣ ಕೂಡ ಕಾರ್ಯಗತವಾಗಿಲ್ಲ. ಕೆಲವು ಕಡೆ black cotton soil ಇರುವುದರಿಂದ ಅಲ್ಲಿ contour bunding ಅಷ್ಟು ಯಶಸ್ವಿಯಾಗಿ ನಡೆಯುವುದಿಲ್ಲ. ಸರ್ಕಾರ ಈ ಜಮೀನನ್ನು ಅಭಿವೃದ್ಧಿಪಡಿಸಲು ಯಾವ ತರಹ ಮಾಡಬೇಕೆಂದು ಸಂಶೋಧನೆ ಮಾಡುತ್ತಿದ್ದಾರೆ. ಇದುವರೆಗೂ ಖಚಿತವಾದ ಅಭಿಪ್ರಾಯಕ್ಕೆ ಬಂದಿಲ್ಲ.

5.00 P.M.

ನನ್ನ ಅನುಭವದಲ್ಲಿ ಹೇಳುವುದಾದರೆ, ಸರಿಯಾದ ಬಂಡಿಂಗ್ ಹಾಕಿದರೆ ನೀರೂ ಸಿಕ್ಕಿ ಬೆಳೆಯನ್ನು ಮಾಡಲು ಬರುತ್ತದೆ. ಸಾಯಿಲ್ ಕನ್‌ಸರ್‌ವೇಷನ್ನು ಮಾಡುವಾಗ Heavy Bundings ಕೂಡ ಮಾಡಬೇಕು. ಈ ರೀತಿಯಾಗಿ ನಮ್ಮ ಭಾಗದಲ್ಲಿ ಮಾಡುವುದೂ ಅಲ್ಲದೆ ಕಾಂಟೂರು ಬಂಡಿಂಗ್‌ನ್ನು ಹಾಕುವುದೂ ಉಪಯುಕ್ತ ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ.

(ಶ್ರೀಮತಿ ಬಸವರಾಜೇಶ್ವರಿ)

ಇದೇ ಪ್ರಕಾರ ಈ ಕೆಲಸ ಯಶಸ್ವಿಯಾಗಿ ನಡೆಯಬೇಕಾದರೆ ಸ್ಟೇಟ್ ಲೆವೆಲ್ಲಿನಲ್ಲಿ ಒಂದು ಬೋರ್ಡನ್ನು ರಚಿಸಬೇಕು. ಡಿಸ್ಟ್ರಿಕ್ಟು ಲೆವೆಲ್ಲಿನಲ್ಲಿಯೂ ಒಂದು ಬೋರ್ಡು ರಚಿಸಿದರೆ ಇದರ ಮೂಲಕ ಕೆಲಸವನ್ನು ಸಮರ್ಪಕವಾಗಿ ಮಾಡಲು ಸರಕಾರ ಪ್ರಯತ್ನ ಮಾಡುತ್ತಾರೆ ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಇದುವರೆಗೆ ಎಷ್ಟೋ ಮಾನ್ಯ ಸದಸ್ಯರು ರೋಗರುಜಿನದ ಬಗ್ಗೆ ಹೇಳಿದರು. ಗೋದಿಗೆ ಕುಂಕುಮ್ ಎನ್ನುವ ರೋಗ ಬಂದು ಆ ಬೆಳೆ ಹಾಳಾಗುತ್ತಿದೆ ಎಂದು ಹೇಳಿದರು. ಇದರ ಬಗ್ಗೆ ಒಂದು ವಿಷಯ ಇಲ್ಲಿ ಹೇಳಲು ಸಂತೋಷವಾಗುತ್ತದೆ. ಇವೊತ್ತಿನ ದಿವಸ ಅಮೃತ ಎನ್ನುವ ಗೋಧಿಯ ಬೀಜವನ್ನು ಅಣ್ಣಿಗೆರೆ ರೀಸರ್ಚು ಫಾರಂನಲ್ಲಿ ಟೆಸ್ಟುಮಾಡಿಸಿ ನಮ್ಮ ಭಾಗದಲ್ಲಿ ಈ ಗೋಧಿ ಬೆಳೆಯನ್ನು ಮಾಡಿದ್ದಾರೆ. ಅಂತಹ ಅಮೃತ ಗೋಧಿಗೆ ಯಾವ ರೋಗವೂ ತಗಲದೆ ನಮ್ಮ ಕಡೆ ಬಹಳ ಸಮರ್ಪಕವಾಗಿ ಬೆಳೆಯನ್ನು ಬೆಳೆದಿದ್ದಾರೆ ಎಂದು ಇಲ್ಲಿ ನಾನು ಸಂಕ್ಷೇಪದಿಂದ ಹೇಳುತ್ತೇನೆ. ಇದೇ ಬೀಜವನ್ನು ಎಲ್ಲಾ ಕಡೆಗೂ ಎಕ್ಸ್‌ಟೆಂಡುಮಾಡಿ ನಮ್ಮ ಭಾಗದ ರಾಯಚೂರಿನಲ್ಲಿ ಗಂಗಾವತಿಯಲ್ಲಿರುವ ರೀಸರ್ಚು ಸ್ಟೇಷನ್ನಿನಲ್ಲಿ ಇನ್‌ವೆಸ್ಟಿಗೇಟು ಮಾಡಿಸಬೇಕೆಂದು ಸರಕಾರದಲ್ಲಿ ಸಲಹೆ ಮಾಡುತ್ತೇನೆ. ಇಂತಹ ಉತ್ತಮ ಬೀಜಗಳನ್ನು ಪಯೋಗಿಸಿ ರೋಗರುಜಿನಗಳನ್ನು ಬಾರದಂತೆ ತಡೆಗಟ್ಟಬೇಕು, ಎಂದು ಹೇಳುತ್ತ ಕೆಲವರು ಎಷ್ಟೇ ಗೊಬ್ಬರ ಹಾಕಿ ಬೆಳೆಸಿದರೂ ಹತ್ತಿ ಬೆಳೆ ಸರಿಯಾಗಿ ಬರುತ್ತಿಲ್ಲ ಎಂದು ಹೇಳಿದರು. ಈ ಹತ್ತಿ ಬೆಳೆಗೆ ಅತಿ ಮುಖ್ಯವಾದುದು ಬೀಜ. ಈಚೆಗೆ ಕೆಲವು ಭಾಗಗಳಲ್ಲಿ ಉತ್ತಮವಾದ ಲಕ್ಷ್ಮೀ ಕಾಟನ್‌ನ ಬೀಜವನ್ನು ಸಪ್ಲೈಮಾಡಿದಂತೆ ನಮ್ಮ ಭಾಗದಲ್ಲಿಯೂ ಇದೇ ಲಕ್ಷ್ಮೀ ಹತ್ತಿ ಬೀಜವನ್ನು ತೆಗೆದುಕೊಂಡು ಒಳ್ಳೆಯ ಬೆಳೆಯನ್ನು ಬೆಳೆದಿದ್ದಾರೆ. ಆದರೆ ಈ Laxmi Cotton ಎನ್ನುವುದು ಒಂದು ತರಹ Delicate ಆದ ಕ್ರಾಪ್ ಆಗಿದೆ. ಆದರೆ ಇದನ್ನು ಬೆಳೆಯಲು ಸರಿಯಾದ Power Sprayersಗಳನ್ನು ಸರಕಾರ ಕೊಟ್ಟು ಸಹಾಯ ಮಾಡಿದ್ದರಿಂದ ಇದರ ಬೆಳೆಗೆ ಬರುವ ರೋಗವನ್ನು ತಡೆಗಟ್ಟಲು ಅನುಕೂಲವಾಗಿದೆ. ಈರೀತಿ Sprayersಗಳನ್ನು ಪಯೋಗಿಸಿದರೆ ಶೇಕಡಾ ಎಂಬತ್ತರಷ್ಟು ಭಾಗದ ಬೆಳೆಗೆ ತಗಲುವ ರೋಗವನ್ನು ತಡೆಗಟ್ಟಲು ಅನುಕೂಲವಾಗುತ್ತದೆ. ಹತ್ತಿ ಬೆಳೆಯನ್ನು ಯಾವಾಗಲೂ ಬಹು ಕಡಿಮೆ ಪ್ರಮಾಣದಲ್ಲಿ ಬೆಳೆಯುವುದಿಲ್ಲ. ಹೆಚ್ಚುಹೆಚ್ಚಾಗಿಯೇ ಬೆಳೆಯುತ್ತಾರೆ. ಈ ಹತ್ತಿ ಬೆಳೆಗೆ ಅತಿ ಮುಖ್ಯವಾದುದು Power Sprayers ಅತಿ ಮುಖ್ಯವಾದುದು. ಆದುದರಿಂದ ಇಂತಹ Power Sprayersಗಳನ್ನು ಪ್ರತಿ ಒಂದು ತಾಲ್ಲೂಕಿಗೂ ಒಂದೊಂದರಂತೆ ತರಿಸಿ ಅಲ್ಲಿರುವ N.E.S. ಬ್ಲಾಕುಗಳಲ್ಲಿಟ್ಟರೆ ರೈತರಿಗೆ ಬಹಳ ಉಪಯೋಗವಾಗುತ್ತದೆ. ಆದರೆ ಇದನ್ನು ತರಿಸಲು foreign exchange ಸಿಗುವುದೂ ಕಷ್ಟವಾಗಿದೆ ಎಂದು ತಿಳಿದುಬರುತ್ತದೆ. ಸರಕಾರದವರೇನೋ 300 ಪವರ್ ಸ್ಪ್ರೇಯರುಗಳನ್ನು ತರಿಸಬೇಕೆಂದು ಏರ್ಪಾಡು ಇಟ್ಟುಕೊಂಡಿದ್ದಾರೆಂದು ಗೊತ್ತಾಗುತ್ತದೆ. ಆದಷ್ಟು ತೀವ್ರವಾಗಿ ಸರಕಾರದವರು ತರಿಸಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದರಂತೆ ಸಪ್ಲೈಮಾಡುವುದು ಅವಶ್ಯಕ ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು Diesel Rate ಈಚೆಗೆ ಬಹಳ ಹೆಚ್ಚಾಗಿದೆ. ದೊಡ್ಡದೊಡ್ಡ ಬೇಸಾಯ ಮಾಡುವ ರೈತರಿಗೆ ಟ್ರ್ಯಾಕ್ಟರುಗಳು, ಬುಲ್‌ಡೋಜರುಗಳನ್ನಿಟ್ಟುಕೊಂಡು ವ್ಯವಸಾಯ ಮಾಡುವುದರಿಂದ ಅವರಿಗೆ ಈಗ Diesel Rate ಹೆಚ್ಚಾಗಿರುವುದರಿಂದ ಬೇಸಾಯ ಮಾಡುವುದು ಕಷ್ಟವಾಗಿದೆ. ಇಂತಹ ವ್ಯವಸಾಯ ಮಾಡುವವರಿಗೆ ಏನಾದರೂ ರಿಯಾಯಿತಿ ಕೊಡುವುದು ಅಗತ್ಯವಾಗಿದೆ. Diesel Rate ಈಚೆಗೆ ಕೇಂದ್ರದವರು ಹೆಚ್ಚು ಮಾಡಿದ್ದಾರೆಂದು ಹೇಳಿ ನಮ್ಮ ಸರಕಾರಕ್ಕೆ ಏನೂ ಸಂಬಂಧವಿಲ್ಲ ಎಂದು ಹೇಳಬಹುದು. ಆದರೂ ಸಹ ನಮ್ಮ ಸರಕಾರದವರು ದೇಶದಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯಬೇಕೆಂದು ಹೇಳಿ ಪ್ರತಿಯೊಂದು ಭಾಗದಲ್ಲಿಯೂ ರೈತನಿಗೆ ಹೆಚ್ಚು ಸಹಕಾರ ಮಾಡಬೇಕೆಂದು ಹೇಳುವಾಗ, ಈ ಸಮಯದಲ್ಲಿ ಕೇಂದ್ರ ಸರಕಾರಕ್ಕೂ ಹೇಳಿ, ಹೆಚ್ಚಿನ ಬೆಳೆ ಬೆಳೆಯತಕ್ಕ ರೈತರಿಗೆ Diesel Ratesಗಳಲ್ಲಿ ಸ್ವಲ್ಪ ಕನ್‌ಸೆಷನ್ನನ್ನು ತೋರಿಸಬೇಕೆಂದು ಶಿಫಾರಸು ಮಾಡಬಹುದು. Furguson Tractersಗಳನ್ನು ಉಪಯೋಗಿಸುವಾಗ ಒಂದು ದಿವಸಕ್ಕೆ ಕನಿಷ್ಟ ಪಕ್ಷ ಎಂಟು ಗ್ಯಾಲನ್ನುಗಳ ಮೇಲೆ Diesel ಬೇಕಾಗುತ್ತದೆ. ಎಂದರೆ ಸುಮಾರು 50 ರೂಪಾಯಿಗಳಷ್ಟು Cost of Cultivation ಬರುತ್ತದೆ. ಇದು ಪರಿಶೀಲನೆ ಮಾಡಬೇಕಾದುದು ಅಗತ್ಯ. ಎಂದು ಕೇಂದ್ರ ಸರಕಾರಕ್ಕೂ ಹೇಳಿ ಸ್ವಲ್ಪ ಕನ್‌ಸೆಷನ್ನು ಕೊಡಿಸಬೇಕೆಂದು ಹೇಳುತ್ತೇನೆ. ದೇಶದಲ್ಲಿ ಹೆಚ್ಚಿನ ಉತ್ಪತ್ತಿ ಮಾಡಬೇಕೆಂದು ಪ್ರತಿಯೊಬ್ಬರೂ ಹೇಳುತ್ತಿರುವಾಗ Dieselನ ಸಹಾಯದಿಂದ ಬೇಸಾಯ ಮಾಡುವವರಿಗೆ ಸ್ವಲ್ಪ ರಿಯಾಯಿತಿ ಮಾಡಿಕೊಡಬೇಕು. ಇಲ್ಲದಿದ್ದರೆ ಇಂತಹ ದೊಡ್ಡ ಟ್ರ್ಯಾಕ್ಟರುಗಳ ಸಹಾಯದಿಂದ ಬೇಸಾಯ ಮಾಡುವುದು ರೈತರಿಗೆ ಬಹಳ ಕಷ್ಟವಾಗುತ್ತದೆ.

ಮೊನ್ನೆ ಒಂದು ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಹೇಳುತ್ತಾ ನಮ್ಮ ಭಾಗದಲ್ಲಿ ಒಂದು Agricultural Implements Factoryಯನ್ನು ತೆಗೆಯಬೇಕೆಂದಿದ್ದೇವೆ ಎಂದು ಹೇಳಿದರು. ಇದನ್ನು ತೀವ್ರತೆಯಿಂದ ಮಾಡಬೇಕೆಂದು ಸಲಹೆ ಮಾಡುತ್ತೇವೆ. ಇಲ್ಲಿಯೇ ಸಣ್ಣ ಸಣ್ಣ ಟ್ರಾಕ್ಟರುಗಳು ಮತ್ತು ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳು ಎಂದರೆ, ಕುಂಟೆ, ಕೂರಿಗೆ, Trailors, ಇತ್ಯಾದಿ ಸಾಮಾನುಗಳನ್ನೆಲ್ಲಾ ಇಲ್ಲಿಯೇ ಮಾಡಿಸಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. Trailors ಬೇಕಾಗುವ ಸ್ಪೇರು ಪಾರ್ಟುಗಳನ್ನೂ ಇಂತಹ ಫ್ಯಾಕ್ಟರಿಗಳಲ್ಲಿ ತಯಾರುಮಾಡಿದರೆ, ನಮ್ಮ ರೈತರಿಗೆ ಹೆಚ್ಚಿನ ಪ್ರಯೋಜನ ಸಿಕ್ಕುತ್ತದೆ.

ಮತ್ತೆ Light Irrigation ಸಲುವಾಗಿ Tungabhadra Left Bank channelನಲ್ಲಿ ಒಂದು Borderstrip ತೆಗೆದು ವ್ಯವಸಾಯ ಚೆನ್ನಾಗಿ ಮಾಡುತ್ತಿದ್ದಾರೆ. ಕೆಲವು ಜನ ರೈತರು ಒಟ್ಟಿಗೆ ಸೇರಿಕೊಂಡು ಇಲ್ಲಿ Tracter Ploughing, Dozing ಇತ್ಯಾದಿ ಕೆಲಸಗಳನ್ನು ಚೆನ್ನಾಗಿ ಮಾಡಿ ವ್ಯವಸಾಯ ಮಾಡುತ್ತಿದ್ದಾರೆ. ಇಂತಹವರಿಗೆ ಸರಕಾರ ಸ್ವಲ್ಪ ಸಹಾಯ ಮಾಡಿದರೆ ಇಲ್ಲಿರುವ ಜನ Rich and experienced ಆಗಿರುವುದರಿಂದ ಇತರರಿಗೆ ಸಬ್ಸಿಡಿ ಏನು ಕೊಡುತ್ತಾರೋ ಹಾಗೆ Border Stripಮಾಡಿಕೊಳ್ಳಲು ಸಹಾಯ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಸಲಹೆ ಮಾಡುತ್ತೇನೆ. ಜೀಪುಗಳನ್ನು ಸಾಧಾರಣವಾಗಿ ಎಲ್ಲರಿಗೂ ಕೊಡುತ್ತಿದ್ದಾರೆ. ಎಸ್. ಇ. ಎಸ್. ಬ್ಲಾಕಿನಲ್ಲಿ ಜೀಪು ಕೊಟ್ಟಿದ್ದಾರೆ. ಸೋಷಿಯಲ್ ವೆಲ್‌ಫೇರ್ ಶಾಖೆಗೆ ಒಂದು ಜೀಪು ಕೊಟ್ಟಿದ್ದಾರೆ. ಹೀಗೆ ಎಲ್ಲ ಇಲಾಖೆಗಳಿಗೂ ಕೊಟ್ಟಿದ್ದರೂ ಅಗ್ರಿಕಲ್‌ಚರ್ ಇಲಾಖೆಯಲ್ಲಿರುವ ಅಧಿಕಾರಿಗಳಿಗೆ ಒಂದು ಜೀಪನ್ನು ಕೊಟ್ಟಿಲ್ಲ. ಇವೊತ್ತಿನವರೆಗೂ ಜೀಪನ್ನು ಕೊಡದೇ ಇರುವುದರಿಂದ ಬಹಳ ಅನಾನುಕೂಲವಾಗುತ್ತಿದೆ. ಹೊಸ ಪದ್ಧತಿಯ ಮೇಲೆ ಬೇಸಾಯ ಮಾಡಬೇಕು, ಹೊಸ ಹೊಸ ಮಾದರಿ ಬೆಳೆಗಳನ್ನು ಬೆಳೆಯತಕ್ಕ ರೈತರಿಗೆ ಸಹಾಯಮಾಡಲು ಇವೊತ್ತಿನ ದಿನ ಜೀಪು ಇಲ್ಲದೇ ಇಲ್ಲಿರುವ ಅಗ್ರಿಕಲ್‌ಚರಿನ ಅಧಿಕಾರಿಗಳಿಗೆ ಬಹಳ ಕಷ್ಟವಾಗುತ್ತಿದೆ. ಈ ಅಗ್ರಿಕಲ್‌ಚರಲ್ ಅಧಿಕಾರಿಗಳಿಗಾಗಿ ಒಂದೊಂದು ಜೀಪನ್ನು ಕೊಡಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟೋ ಸ್ಕೀಮುಗಳಿದ್ದರೂ ಅವನ್ನು ಸ್ವಲ್ಪ ಮಟ್ಟಿಗೆ ಕಾರ್ಯಗತ ಮಾಡಿದ್ದಾರೆ. ಇನ್ನೂ ಹೆಚ್ಚು ಹೆಚ್ಚಾಗಿ ಸ್ಕೀಮುಗಳನ್ನು ತೆಗೆದುಕೊಳ್ಳದೆ ಹಾಗೆ ಇಲ್ಲಿಯವರೆಗೂ ಉಳಿದಿವೆ. ಅಗ್ರಿಕಲ್‌ಚರ್ ಕಾಲೇಜನ್ನು ಅಪ್‌ಗ್ರೇಡುಮಾಡಿ ಅಲ್ಲಿ Post graduate Coursesನ್ನು ಇಂಟ್ರೊಡ್ಯೂಸುಮಾಡಿ ಅದನ್ನು ಎಕ್ಸ್‌ಟೆಂಡು ಮಾಡಬೇಕಾಗಿತ್ತು. ಇಲ್ಲಿಯವರೆಗೂ ಆ ರೀತಿ ಈ ಕಾಲೇಜಿನಲ್ಲಿ ಎಕ್ಸ್‌ಟೆಂಡು ಮಾಡಿದಂತೆ ಕಾಣುತ್ತಿಲ್ಲ. ಈಗಲಾದರೂ ಈ ಕಾಲೇಜಿನಲ್ಲಿ ಬೇಗ Post graduate Coursesಗಳನ್ನು ಇಂಟ್ರೊಡ್ಯೂಸು ಮಾಡಬೇಕೆಂದು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅನಿಮಲ್ ಹಸ್‌ಬೆಂಡ್ರಿ ವಿಚಾರದಲ್ಲಿ ಹೇಳುವಾಗ ಉತ್ತಮವಾದ ತಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು insemination centresಗಳನ್ನು ತೆರೆದಿದ್ದರೂ ಅದು ಈ ದೇಶಕ್ಕೆ ಇನ್ನೂ ಸಾಲುತ್ತಿಲ್ಲ. ಎರಡು ಮೂರು ತಾಲ್ಲೂಕಿಗೆ ಒಂದೊಂದು insemination centres ಎಂದು ಮಾಡಿದ್ದಾರೆ. ಹಳ್ಳಿಯ ಕಡೆಯಿಂದ ಜನರು ಬಂದು ಇಲ್ಲಿ ಉತ್ತಮ ತಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು ಇದ್ದರೂ ತಳಿಗಳ ಅಭಿವೃದ್ಧಿ ಹೆಚ್ಚಾಗಿಲ್ಲ. ಈಗಿರುವ insemination centresಗಳೂ ಬಹಳ ಕಡಿಮೆ. ನಮ್ಮ ರಾಯಚೂರು ಭಾಗದಲ್ಲಿ ಒಂದೆರಡು ಸೆಂಟರುಗಳು ಮಾತ್ರ ಇವೆ. ಇದರಿಂದ ಒಂದೊಂದು ತಾಲ್ಲೂಕಿನಲ್ಲೂ ತಳಿಯನ್ನು ಅಭಿವೃದ್ಧಿಮಾಡಲು insemination centersಗಳನ್ನು ಸ್ಥಾಪನೆ ಮಾಡಬೇಕು. ಸಿರಿವಾರ ಎಂಬಲ್ಲಿ ಒಂದು ವೆಟರ್ನರಿ ಆಸ್ಪತ್ರೆಯನ್ನೇನೋ ಶುರು ಮಾಡಿ ಎರಡು ತಿಂಗಳಾದರೂ ಇವೊತ್ತಿನವರೆಗೂ ಅಲ್ಲಿಗೆ ಸರಿಯಾದ Staff ಇಲ್ಲ. ಇಲ್ಲಿಗೆ ಡಾಕ್ಟರನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಇತರ ಸ್ಟಾಫನ್ನೂ ಮತ್ತು ಔಷಧಿಗಳನ್ನೂ ಕಳುಹಿಸಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಸಹಕಾರ, ಸಹಕಾರ ಪದ್ಧತಿಮೇಲೆ ಇವೊತ್ತಿನ ದಿವಸ ಪ್ರತಿಯೊಂದು ಪಂಚಾಯತಿ ಲೆವಲ್ಲಿನಲ್ಲಿಯೂ ಒಂದೊಂದು Service co-operative Societies ಎಂದು ಮಾಡಿದ್ದಾರೆ. ಇದು ಚೆನ್ನಾಗಿ ನಡೆಯುತ್ತಿದೆ. ಆದರೆ ಈ ಮೊದಲು Large Scale Societies ಎಂದು ಶುರುವಾಗಿದ್ದುದ್ದು ಸುಮಾರು ಹತ್ತಿಪ್ಪತ್ತು ಸೊಸೈಟಿಗಳು ನಮ್ಮಲ್ಲಿದ್ದವು. ಇಂತಹ ಸೊಸೈಟಿಗಳಿಂದ ಸುಮಾರು 30-40 ಗ್ರಾಮಗಳಿಗೆ ಅನುಕೂಲವಾಗುತ್ತಿತ್ತು. ಆದರೆ ಯಾವುದಾದರೂ ಗ್ರಾಮದಲ್ಲಿ ಸಾಲದ ದುಡ್ಡನ್ನು ವಾಪಸು ಕೊಡದೇಹೋದರೆ ಇತರ ಎಲ್ಲ ಜನಕ್ಕೂ ಸಾಲ ಸಿಗುತ್ತಿರಲಿಲ್ಲ. ಪ್ರತಿಯೊಬ್ಬರಿಗೂ ಅನುಕೂಲವಾಗಬೇಕೆಂದು ಪಂಚಾಯಿತಿಗಳಲ್ಲಿ ಸರ್ವಿಸ್ ಕೋ-ಆಪರೇಟೀವ್ ಸೊಸೈಟಿಗಳನ್ನು ಕೋ-ಆಪರೇಷನ್ನಿನಮೇಲೆ ಮಾಡೋಣ ಎಂದು ಈ

(ಶ್ರೀಮತಿ ಬಸವರಾಜೇಶ್ವರಿ)

ಸೊಸೈಟಿಗಳ ಷೇರನ್ನು ಡೈವರ್ಟು ಮಾಡಿ ಎಲ್ಲ ಜನಕ್ಕೂ ಪ್ರಯೋಜನವಾಗುವಂತೆ ಮಾಡಬೇಕೆಂದು ಇತ್ತು. ಇದರಬಗ್ಗೆ ಸರಕಾರಕ್ಕೆ ಮನವಿಗಳೂ ಬಂದಿತ್ತು. ಇದರಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಆಶ್ವಾಸನ ಕೊಟ್ಟಿದ್ದರು. ಅಲ್ಲದೆ ಪ್ರತಿಯೊಂದು ಸರ್ವಿಸ್ಸು ಕೋ-ಆಪರೇಟಿವ್ ಸೊಸೈಟಿಯನ್ನೂ ಕೋ-ಅಪರೇಷನ್ನಿನಮೇಲೆ ಮಾಡಿದ್ದಾರೆ. ಹೊಸದಾಗಿ ರಚನೆಯಾಗಿರತಕ್ಕ ಸರ್ವಿಸ್ಸು ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಮೊದಲು ಷೇರುಗಳು ಶಲೆಕ್ಟಾಗುತ್ತಿದ್ದುವು. ಮೊದಲನೆ ವರ್ಷ 200-300 ರೂಪಾಯಿಗಳಷ್ಟು ಮಾಡಿ ಸೇರಿಸಿದ್ದರೂ ಶೇಕಡಾ ಹತ್ತರಷ್ಟು ಷೇರು ಬಂದಿಲ್ಲ ಎಂದು ಹೇಳುತ್ತಿರುವುದರಿಂದ ವಸೂಲು ಮಾಡುವುದು ಬಹಳ ಕಷ್ಟವಾಗಿದೆ ಎಂದರು. ಆದಕಾರಣ ಕಾನೂನು ಪ್ರಕಾರ ಎಷ್ಟು ಷೇರುಗಳವರು ಸಾಲವನ್ನು ಹಿಂದಿರುಗಿಸಿದ್ದಾರೋ ಅಂತಹವರಿಗಾದರೂ ಸ್ವಲ್ಪ ಸಹಾಯ ಮಾಡಬೇಕು. ಕೆಲವುಕಡೆ ಹತ್ತಿ ಬೆಳೆಯಿಂದ ನಷ್ಟವಾಗಿದೆ ಎಂದು ಕೆಲವರು ದುಡ್ಡು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ಅವರು ಮುಂದಿನ ಸಾಲನಲ್ಲಿ ಸಾಲದ ಜೊತೆಗೆ ಬಡ್ಡಿಯನ್ನೂ ಸೇರಿಸಿ ವಾಪಸು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಕೆಲವುಕಡೆ ಬಡವರಾಗಿರುವವರಿಗೆ ವಾಪಸು ಕೊಡಲು ಆಗುವುದಿಲ್ಲ ಎನ್ನುತ್ತಾರೆ. ಅಂತಹವರಿಗೆ 50 per cent concession ಎನ್ನುವ ರೀತಿಯಲ್ಲಾದರೂ ರಿಯಾಯತಿಕೊಟ್ಟು, ಈ ಷೇರುಗಳನ್ನು ಸಕಾಲದಲ್ಲಿ ವಸೂಲು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಕಡೆಯದಾಗಿ ರೂರಲ್ ಆಡ್ಮಿನಿಸ್ಟ್ರೇಷನ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಈಗ ಶೇಕಡ 50 ರಷ್ಟು ಪರ್ಮನೆಂಟ್ ಸೆಕ್ರೆಟರಿಗಳು ಕೆಲಸ ಮಾಡುತ್ತಿದ್ದಾರೆ. ನಾಲ್ಕು ತಿಂಗಳಾದರೂ ಅವರಿಗೆ ಸಂಬಳ ಸಿಕ್ಕಿಲ್ಲ, ಯಾವ ಇಲಾಖೆಯಿಂದ ಅವರಿಗೆ ಸಂಬಳ ಕೊಡಬೇಕೆಂಬುದು ಇನ್ನೂ ಗೊತ್ತಾಗಿಲ್ಲ. ಸಂಬಳ ದೊರೆಯದೆ ಅವರಿಗೆ ತುಂಬಾ ಅನಾನುಕೂಲವಾಗಿದೆ. ತಕ್ಷಣ ಸಂಬಳ ಅವರಿಗೆ ಸಿಕ್ಕುವಹಾಗೆ ಏರ್ಪಾಡು ಮಾಡಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಪಂಚಾಯತಿಗಳು ಇಡಬೇಕಾದಂಥ ರಿಕಾರ್ಡ್ಸ್ ಬಹಳ ಜಾಸ್ತಿಯಾಗಿವೆ. ಪಂಚಾಯತಿಗಳಲ್ಲಿರುವ ಸದಸ್ಯರಿಗೆ ಮತ್ತು ಸೆಕ್ರೆಟರಿಯವರಿಗೆ ಈ ರಿಕಾರ್ಡ್ಸ್ ಮೆಂಟೇನ ಮಾಡುವುದು ತುಂಬಾ ಕಷ್ಟವಾಗಿದೆ. ಈಗ ಇರತಕ್ಕ ಪದ್ಧತಿಯ ಪ್ರಕಾರ ರಿಕಾರ್ಡ್ಸ್ ಇಡುವುದು ತುಂಬಾ ಕಾಂಪ್ಲಿಕೇಟೆಡ್ ಆಗಿದೆ. ಅದನ್ನು ಸಿಂಪ್ಲಿಫೈ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಅನುಭವ ಕಡಿಮೆ ಇದ್ದವರು ಚಿಕ್ಕವಯಸ್ಸಿನವರು ಎಕ್ಸ್ಟೆನ್ಷನ್ ಆಫೀಸರ್ ಆಗಿ ನೇಮಕವಾಗಿದ್ದಾರೆ. ಹಿರಿಯರಾದವರು ಏನಾದರೂ ಕೇಳುವುದಕ್ಕೆ ಬಂದರೆ ಅವರನ್ನು ಕನ್ವಿನ್ಸ್ ಮಾಡುವ ಕ್ಯಾಪಾಸಿಟಿ ಈ ಚಿಕ್ಕವಯಸ್ಸಿನ ಅಧಿಕಾರಿಗಳಲ್ಲಿರುವದಿಲ್ಲ. ಕಾಲೇಜದಿಂದ ಪಾಸ್ ಆಗಿ ಬಂದು ನೇರವಾಗಿ ಎಕ್ಸ್ಟೆನ್ಷನ್ ಆಫೀಸರ್ ಎಂದು ನೇಮಕ ಮಾಡಿದರೆ ಅಂಥವರಿಗೆ ಏನೂ ಅನುಭವವಿರುವದಿಲ್ಲ. ಆದ್ದರಿಂದ ಈ ಸ್ಥಾನಕ್ಕೆ ಅನುಭವ ಶಾಲಿಗಳನ್ನು ಕಳಿಸಬೇಕು, ಅಂದರೆ ಈ ಯೋಜನೆ ಯಶಸ್ವಿಯಾಗುತ್ತದೆ. ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ಮುಖ್ಯ ಕಸುಬು ಆಗಿರುವ ವ್ಯವಸಾಯದಲ್ಲಿ ನೂರಕ್ಕೆ 86 ರಷ್ಟು ಜನ ಇದ್ದಾರೆ. ಆದರೂ ಕೂಡ ಇಂದು ನಾವು ಆಹಾರ ಉತ್ಪಾದನೆ ಮಾಡುವದರಲ್ಲಿ ಹಿಂದುಳಿದಿದ್ದೇವೆಂದು ವಿಷಾದದಿಂದ ಹೇಳಬೇಕಾಗಿದೆ. ಈ ತುರ್ತು ಪರಿಸ್ಥಿತಿ ಉದ್ಭವಿಸಿದ ಮೇಲೆ ವ್ಯವಸಾಯದ ಪ್ರಾಮುಖ್ಯತೆ ಅಷ್ಟಿಷ್ಟಲ್ಲ. ಈ ವ್ಯವಸಾಯ ಇಲಾಖೆಗೆ ಬೇಕಾಗುವ ಎಲ್ಲ ವ್ಯವಸ್ಥೆಯನ್ನು ಕಾಗದದ ಮೇಲೆ ವಿಧಾನ ಸೌಧದಲ್ಲಿ ವ್ಯವಸಾಯ ಇಲಾಖೆ ಆಫೀಸಿನಲ್ಲಿ ಮಾಡಿದ್ದಾರೆ. ಆದರೆ ಈ ಏರ್ಪಾಡು ರೈತನಿಗೆ ಮುಟ್ಟಿದೆಯೇ ಜಮೀನುಗಳಿಗೆ ಮುಟ್ಟಿದೆಯೇ ಅಂದರೆ ಖಂಡಿತವಾಗಿ ಬಹಳ ವಿಷಾದ ಪಡಬೇಕಾಗಿದೆ. ಸಂಶೋಧನೆಯಿಂದ ಫಲತಾಂಶ ಕಂಡು ಹಿಡಿಯುತ್ತೇವೆ, ಒಳ್ಳೇ ಬೀಜ ಒದಗಿಸಿ ಅಭಿವೃದ್ಧಿ ಪಡಿಸುತ್ತೇವೆಂದು ಹೇಳುತ್ತಾರೆ. ಆದರೆ ರೈತನಿಗೆ ಅದು ನೇರವಾಗಿ ದೊರೆಯುತ್ತಿದೆಯೇ ಅವನು ಜಮೀನಿನಲ್ಲಿ ಅದನ್ನು ಕಾರ್ಯಗತ ಮಾಡಲು ಸಾಧ್ಯವಾಗಿದೆಯೇ ಎಂಬುದನ್ನು ನೋಡಿದರೆ ಅದು ಪೂರ್ತಿ ಸೊನ್ನೇ ಎಂದು ಹೇಳಬಹುದು. ಏನೇನೂ ಮುಂದುವರಿದಿಲ್ಲ. ಕಾರ್ಯತಃ ಏನೂ ನಡೆದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ನಿನ್ನೆಯ ದಿವಸ ನಮ್ಮ ತಾಲ್ಲೂಕ್ ಬೋರ್ಡಿನ ಸಭೆಗೆ ಹೋಗಿದ್ದೆ ಅಲ್ಲಿಯ ಸದಸ್ಯರು ವಿಸ್ತರಣ ಅಧಿಕಾರಿಗಳು ಹೇಳಿದರು. ಸರಕಾರದಿಂದ ಬರುವ ಆರ್ಡರ್ ಓದುವದರಲ್ಲಿಯೇ ವೇಳೆ ಹೋಗುತ್ತದೆ. ವ್ಯವಸಾಯ ಕಡೆ ಗಮನ ಕೊಡುವುದಕ್ಕೆ ವೇಳೆಯೇ ಇಲ್ಲ ಎಂದು ಹೇಳಿದರು, ದಿನಾಲು ನಾಲ್ಕಾರು ಆರ್ಡರುಗಳು ಬರುತ್ತವೆ ಎಂದು ಹೇಳಿ ಅವರು ಭಯ ಪಟ್ಟರು. ವಿಸ್ತರಣಾಧಿಕಾರಿಗಳು ಗ್ರಾಮಾಂತರ ಪ್ರದೇಶಕ್ಕೆ ಹೋಗಿ ಸಹಕರಿಸಿ ಕೆಲಸ ಮಾಡದೇ ಹೋದರೆ ಈ

ಯೋಜನೆ ವಿಫಲವಾಗುತ್ತದೆ. ಇದರಿಂದ ಅನಾಹುತವಾಗುತ್ತದೆಂದು ನಿಮಗೆ ನಾನು ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡುತ್ತೇನೆ. ನಿಮ್ಮ ಈ ಇಲಾಖೆ ನಿಮ್ಮ ನೀತಿ ಟೀಕೆಗೆ ಗುರಿಯಾಗಿದೆ. ಈ ಇಲಾಖೆಯಿಂದ ಗೊಬ್ಬರ ಬೀಜ ಸರಿಯಾಗಿ ಸಕಾಲದಲ್ಲಿ ರೈತರಿಗೆ ದೊರೆಯುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ರೈತರಿಗೆ ಅನುಕೂಲ ಮಾಡಿಕೊಟ್ಟಿಲ್ಲ, ಪಂಚಾಯಿತಿಗಳು ಸಹಕಾರಿ ಸಂಘಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ. ಯಾರೂ ಜವಾಬ್ದಾರಿ ವಹಿಸಿ ಕೆಲಸ ಮಾಡತ್ತಿಲ್ಲ ವ್ಯವಸಾಯ ಇಲಾಖೆಯಿಂದ ನೇರವಾಗಿ ಬೀಜ ಗೊಬ್ಬರ ಒದಗಿಸುವ ವ್ಯವಸ್ಥೆ ಮಾಡದೇ ಇದ್ದರೆ ನಿಮ್ಮ ಈ ಪ್ಲಾನ್ ಸಫಲವಾಗುವದಿಲ್ಲ. ಎಂದು ಹೇಳಬಯಸುತ್ತೇನೆ. ಬಾಯಲ್ಲಿ ಹೆಚ್ಚು ಮಾತನಾಡುವದಕ್ಕಿಂತ ಕೃತಿಯಲ್ಲಿ ಅನುಕೂಲ ಮಾಡಿಕೊಡಬೇಕು ಎಂದು ತಿಳಿಸುತ್ತೇನೆ.

ಹೊಸ ಮಾದರಿಯ ವ್ಯವಸಾಯವನ್ನು ಶಾಸ್ತ್ರೀಯವಾಗಿ ಮಾಡುವದಕ್ಕೆ ರೈತನಿಗೆ ಪ್ರಾಕ್ಟಿಕಲ್ ಟ್ರೇನಿಂಗ್ ಕೊಡುವುದು ಮುಖ್ಯ ಜಿಲ್ಲಾ ಮಟ್ಟದಲ್ಲಿ ಒಂದು ಟ್ರೇನಿಂಗ್ ಸ್ಕೂಲ್ ಸ್ಥಾಪನೆ ಮಾಡಿ ಆರು ತಿಂಗಳು ಅಥವಾ ಒಂದು ವರ್ಷ ಪ್ರಾಕ್ಟಿಕಲ್ ಟ್ರೇನಿಂಗ್ ಕೊಡಬೇಕು. ಟ್ರೇನಿಂಗ್ ಕೊಡದೇ ಇದ್ದರೆ ಶಾಸ್ತ್ರೀಯವಾಗಿ ವ್ಯವಸಾಯ ಮಾಡುವುದು ಖಂಡಿತವಾಗಿ ವಿಫಲವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಹೆಚ್ಚು ಪರಿಶ್ರಮ ವಹಿಸಿ ಕೆಲಸ ಮಾಡುವುದು ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ.

ಈ ಇಲಾಖೆಯಲ್ಲಿ ಒಂದೆರಡು ಉಪಯುಕ್ತವಾದ ಕೆಲಸ ಮಾಡಿದ್ದಾರೆಂದು ಹೇಳಿದರೆ ಅದು ನಿಮ್ಮನ್ನು ಹೊಗಳಿದಂತಲ್ಲ. ಅದು ನನ್ನ ಕರ್ತವ್ಯವಾಗಿದೆ. ತೋಟಗಾರಿಕೆ ಸಂಬಂಧದಲ್ಲಿ ದ್ರಾಕ್ಷೆ ಹಣ್ಣು ಬೆಳೆಯುವದಕ್ಕೆ ಯೋಜನೆ ಮಾಡಿದ್ದೀರಿ ಮಳೆಬಾರದೆ ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶದಲ್ಲಿ ಈ ಯೋಜನೆ ಮಾಡಲಾಗಿದೆ ದೊಡ್ಡ ಸಮುದ್ರದಲ್ಲಿ ಒಂದು ತೊಟ್ಟು ನೀರು ಬಿಟ್ಟರೆ ಏನೂ ಉಪಯೋಗವಾಗುವದಿಲ್ಲ. ಆ ರೀತಿ ಈ ನಿಮ್ಮ ಯೋಜನೆಯಾಗಿದೆ. ಈ ಬರಗಾಲ ಪ್ರದೇಶದಲ್ಲಿ ಅಲ್ಲಲ್ಲಿ ರಿಸರ್ಚ್‌ಸೆಂಟರ್ಸ್ ಮಾಡಬೇಕು. ಡಿಮಾನ್‌ಸ್ಟ್ರೇಷನ್ ಮಾಡಿ ತೋರಿಸಿದರೆ ತೋಟಗಾರಿಕೆ ಮುಂದುವರಿಯುತ್ತದೆ. ಈ ತೋಟಗಾರಿಕೆಗೆ ಒಂದು ಡಿಪಾರ್ಟಮೆಂಟ್ ಸ್ಟೇಟಸ್ ಕೊಟ್ಟು ವ್ಯವಸಾಯ ಇಲಾಖೆಯಿಂದ ಬೇರೆ ಮಾಡುವುದಕ್ಕೆ ಹೆಚ್ಚಿನ ನಿಗಾ ಕೊಡಬೇಕು ಇಲ್ಲವಿದ್ದರೆ ಮುಂದುವರಿಯುವದಿಲ್ಲ.

ಈ ಇಲಾಖೆಯಲ್ಲಿಯು ಟ್ರಾಕ್ಟರ್ ಬುಲ್ ಡೋಜರ್ಸ್ ಒದಗಿಸುವ ಸ್ಕೀಂ ಯಶಸ್ವಿಯಾಗಿಲ್ಲ. ನೀರಾವರಿಯಿಂದ ಹೆಚ್ಚಿನ ಪ್ರಮಾಣದಲ್ಲಿ ವ್ಯವಸಾಯ ಮಾಡುವುವದಕ್ಕೆ ಟ್ರಾಕ್ಟರ್ ಬುಲ್ ಡೋಜರ್ಸ್ ಉಪಯೋಗಿಸುವುದು ಅತ್ಯುತ್ತಮವಾದುದು. ನಮ್ಮ ಸಂಸ್ಥಾನದಲ್ಲಿ 60 ಬುಲ್‌ಡೋಜರ್ಸ್ ಇದ್ದರೆ ಅವುಗಳಲ್ಲಿ 40 ಕ್ಕೆ ಕಾಯಿಲೆಯಾಗಿದೆ. ಈ ಯೋಜನೆ ಅಸಮರ್ಪಕ ರೀತಿಯಲ್ಲಿದ್ದು ವಿಫಲವಾಗಿದೆ. ಈ ಯೋಜನೆ ಇನ್ನೂ ಹೆಚ್ಚು ವಿಸ್ತರಿಸಬೇಕು. ಮತ್ತು ಕಡಿಮೆ ದರದಲ್ಲಿ ಅವಶ್ಯಕವಿದ್ದಾಗ ಸರ್ವಿಸ್ ಕೊಡುವ ಏರ್ಪಾಟು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅದೇ ರೀತಿ ಕಾಂಟೂರ ಬಂಡಿಂಗ್‌ಗಾಗಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟ್ ಜಾರಿಗೆ ತಂದಿದ್ದೀರಿ. ಆದರೆ ಅದು ಕಾರ್ಯಗತವಾಗಿಲ್ಲ. Utilisation of man power ಗಾಗಿ ನಿರುದ್ಯೋಗಿಗಳಿಗೆ ಕೆಲಸ ಕೊಡಿಸುತ್ತೇವೆಂದು ಹೇಳಿ 'ಹೋದ ವರ್ಷ ಪೈಲೆಟ್ ಪ್ರೊಜೆಕ್ಟ್ ಜಾರಿಗೆ ತಂದಿದ್ದೀರಿ. ಆದರೆ ಅದು ವಿಚಿತ್ರವಾಗಿದೆ. ನಿಜವಾಗಿಯೂ ನಾಚಿಕೆ ಪಡುವ ವಿಷಯ. 1962-63 ಸಾಂಕ್ಷನ್ ಆಗಿರುವ ಪ್ರೊಜೆಕ್ಟ್ ಕಾರ್ಯಗತ ಮಾಡಲು ಇನ್ನೂ ಅವರಿಗೆ ಸರಿಯಾಗಿ ಇನ್‌ಸ್ಟ್ರಕ್ಷನ್ಸ್ ಕೊಟ್ಟಿಲ್ಲ. ರೈತ ಎಷ್ಟು ಹಣ ಕೊಡಬೇಕು. ಮತ್ತು ಸರಕಾರದ ಸಹಾಯ ನಿರ್ದಿಷ್ಟವಾಗಿ ಕೊಟ್ಟಿಲ್ಲ. ಪಾವಗಡದಲ್ಲಿ ಇಂಥ ಒಂದು ಯೋಜನೆ ಮಾಡಿದ್ದೀರಿ. ಇದರಿಂದ ಅನ್ಯಾಯವಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ಹಣ ಒದಗಿಸಲು ನಿಧಾನವಾಗಿದೆ. ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಆರ್ಡರ್ ವಿಶದವಾಗಿ ಕೊಡದೇ ಇದ್ದರೆ ಈ ಉದ್ದೇಶ ವಿಫಲವಾಗುತ್ತದೆಂದು ವಿಷಾದದಿಂದ ಹೇಳಬೇಕಾಗುತ್ತದೆ.

ಈಗ ಬಹಳ ಮುಖ್ಯವಾಗಿ ಶಾಸ್ತ್ರೀಯವಾಗಿ ವ್ಯವಸಾಯವನ್ನು ಮಾಡಬೇಕಾದರೆ ನಮ್ಮ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಎಂದರೆ ಪೋಸ್ಟ್ ಗ್ರಾಜುಯೇಟ್ಸ್ ತರಗತಿಗಳನ್ನು ಸ್ಥಾಪನೆ ಮಾಡುವುದು ಬಹಳ ಮುಖ್ಯವಾದದ್ದು. ಸ್ನಾತಕೋತ್ತರ ಶಿಕ್ಷಣವನ್ನು ಕೊಡತಕ್ಕಂಥ ಒಂದು ವ್ಯವಸಾಯದ ಶಾಸ್ತ್ರೀಯ ಯೂನಿವರ್ಸಿಟಿಯನ್ನು ಪ್ರಾರಂಭಮಾಡುತ್ತೇವೆಂದು ಒಂದು ಯೋಜನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕಾಗಿ ನಮ್ಮ ಮಾನ್ಯ ವ್ಯವಸಾಯ ಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಇಂಥಾ ಒಂದು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದು ಬಹಳ ಅತ್ಯಗತ್ಯ. ಇದು ಬಹಳ ಚೆನ್ನಾಗಿ ಕೈಗೂಡಲಿ ಎಂದು ನಾನು ಹಾರೈಸುತ್ತೇನೆ. ನಾನು ಹಿಂದೆ ಬಜೆಟ್ಟಿನ ಮೇಲೆ ಭಾಷಣ ಮಾಡುತ್ತಾ ಹೇಳಿದ್ದೆ. ಮುಖ್ಯವಾಗಿ ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತನಿಗೆ ಸರ್ಕಾರದವರು ಒದಗಿಸತಕ್ಕಂಥ ವ್ಯವಸಾಯದ ಉಪಕರಣಗಳು, ಗೊಬ್ಬರ ಇತ್ಯಾದಿ ಸೌಲಭ್ಯಗಳು ಸಿಕ್ಕಬೇಕು. ಅವು ರೈತನಿಗೆ ಸರಿಯಾಗಿ ತಲಪಬೇಕಾ

(ಶ್ರೀ ಬಿ. ಎಲ್. ಗೌಡ)

ದರ ವ್ಯವಸಾಯ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ತೃಪ್ತರಾಗಿರಬೇಕು. ಆ ಅಧಿಕಾರಿಗಳಲ್ಲಿರತಕ್ಕ ಅತೃಪ್ತಿ ಮನೋಭಾವನೆಯನ್ನು ಹೋಗಲಾಡಿಸಬೇಕಾದರೆ ತಕ್ಷಣ ಯಾವುದಾದರೊಂದು ಏರ್ಪಾಟು ಮಾಡದೆ ಹೋದರೆ ತೊಂದರೆಯಾಗುತ್ತದೆ. ಅದರಿಂದ ದೇಶಕ್ಕೆ ಹಾನಿಯಾಗುತ್ತದೆಂದು ನಾನು ಒತ್ತಿಹೇಳುತ್ತೇನೆ. ರೈತನಿಗೆ ಮುಖ್ಯವಾಗಿ ಒಂದು ಇನ್ಸೆಂಟೀವ್ ದೊರೆಯಬೇಕಾದರೆ ಅವನು ಬೆಳೆದ ಬೆಳೆಗೆ ಒಂದು ಸರಿಯಾದ ಬೆಲೆ ಸಿಕ್ಕಬೇಕಾದ್ದು ಬಹಳ ಮುಖ್ಯ. ಈಗ ಒಂದು ವರ್ಷದಿಂದ ರೈತನಿಗೆ ಬಹಳ ಕಡಿಮೆ ಬೆಲೆ ಸಿಕ್ಕುತ್ತಿದೆ. ಒಂದು ಬೆಳೆಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಎಂದರೆ ಉತ್ಪತ್ತಿ ವೆಚ್ಚ ಎಷ್ಟಾಗುತ್ತದೆ ಎಂಬುದನ್ನು ನೋಡಿ ಲಾಭ ಇಟ್ಟು ಬೆಲೆಯನ್ನು ನಿಗದಿ ಮಾಡದೆ ಹೋದರೆ ನಾವು ವ್ಯವಸಾಯದಲ್ಲಿ ಪ್ರಗತಿಯನ್ನು ಹೊಂದುವುದಿಲ್ಲ. ಅಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಬೇರೆ ಪ್ರಾಂತಗಳಲ್ಲಿ ರೈತನು ಬೆಳೆದ ಬೆಳೆಗೆ ಒಂದು ಬೆಲೆಯನ್ನು ನಿಗದಿಮಾಡಲು ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ. ಅದೇ ರೀತಿ ನಮ್ಮ ಸಂಸ್ಥಾನದಲ್ಲಿಯೂ ಸಹ ಅಂತಹ ಒಂದು ಕಮಿಟಿಯನ್ನು ನೇಮಕ ಮಾಡಬೇಕು. ಒಟ್ಟಿನಲ್ಲಿ ರೈತನಿಗೆ ಅವನು ಬೆಳೆದ ಬೆಳೆಗೆ ನ್ಯಾಯವಾದ ಬೆಲೆಯನ್ನು ದೊರಕಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಪಶು ಸಂಗೋಪನೆಯ ವಿಷಯ; ಈ ವಿಷಯದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ, ಕೃತಕ ಗರ್ಭದಾರಣಾ ಕೇಂದ್ರಗಳು ಬಹಳ ಕಡಿಮೆ. ಅವುಗಳನ್ನು ಸ್ಥಾಪನೆಮಾಡುವುದರಲ್ಲಿ ಬಹಳ ವಿಳಂಬವಾಗುತ್ತಿದೆ. C. D. ಬ್ಲಾಕುಗಳು ಮತ್ತು ಎನ್. ಇ. ಎಸ್. ಬ್ಲಾಕುಗಳು ಇರುವ ಕಡೆಗಳಲ್ಲಿ ಒಂದೊಂದು ಕೃತಕ ಗರ್ಭದಾರಣಾ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆ. ನನ್ನ ಕ್ಷೇತ್ರದಲ್ಲಿ ಈಗ ಮೂರು ವರ್ಷಗಳಿಂದ ಎನ್. ಇ. ಎಸ್. ಬ್ಲಾಕು ಇದೆ. ಆದರೆ ಇವೊತ್ತಿನವರೆಗೂ ಅಲ್ಲಿ ಒಂದು ಕೃತಕ ಗರ್ಭದಾರಣಾ ಕೇಂದ್ರವನ್ನು ಸ್ಥಾಪನೆ ಮಾಡಿಲ್ಲ. ಚಿತ್ರದುರ್ಗ ಜಿಲ್ಲೆಯ ಅನೇಕ ಗ್ರಾಮಾಂತರ ಪ್ರದೇಶಗಳಿಗೆ ಒಳ್ಳೆಯ ತಳಿಯ ಸಹಾಯ ದೊರೆಯದೆ ತೊಂದರೆಯಾಗುತ್ತಿದೆ. ಅದಕ್ಕೋಸ್ಕರ ಶೀಘ್ರವಾಗಿ ಕಾರ್ಯಕ್ರಮಗಳನ್ನ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಈಗ ನಮ್ಮ ಮಂತ್ರಿಗಳು ಪಟ್ಟಣಗಳಲ್ಲಿ ಹಾಲನ್ನು ಸರಬರಾಜು ಮಾಡಲು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ಸ್ತುತ್ಯಾರ್ಹವಾಗಿದೆ. ಹಳ್ಳಿಗಳಲ್ಲಿ ಮಜ್ಜಿಗೆ ಸಹ ಸಿಕ್ಕುವುದಿಲ್ಲ. ಇದು ಬಹಳ ಅನ್ಯಾಯ ಮತ್ತು ವಿಷಾದಕರ ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿಯೂ ಹೆಚ್ಚು ಹೆಚ್ಚು ತಳಿ ಅಭಿವೃದ್ಧಿಯನ್ನು ಮಾಡಿ ಒಳ್ಳೊಳ್ಳೆಯ ಹಾಲನ್ನು ಕರೆಯುತಕ್ಕ ಹಸುಗಳನ್ನೂ ಮತ್ತು ಎಮ್ಮೆಗಳನ್ನು ಸಾಕುವ ಒಂದು ಯೋಜನೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಆ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ವೆಟರ್ನರಿ ಆಸ್ಪತ್ರೆಗಳನ್ನು ಸ್ಥಾಪನೆ ಮಾಡುವುದರಲ್ಲಿ ಸರ್ಕಾರದವರು ರಾಜಕೀಯವನ್ನು ಮಾಡುತ್ತಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಜಿಲ್ಲಾ ಅಭಿವೃದ್ಧಿ ಮಂಡಲಿ ಇದೆ, ಅದರಲ್ಲಿ ವ್ಯವಸಾಯದ ಅಧಿಕಾರಿಗಳಿದ್ದಾರೆ, ಎಂ. ಎಲ್. ಎ. ಗಳು ಇದ್ದಾರೆ, ತಾಲ್ಲೂಕು ಬೋರ್ಡು ಪ್ರೆಸಿಡೆಂಟರಿರುತ್ತಾರೆ. ಅವರುಗಳು ಶಿಫಾರಸ್ಸು ಮಾಡಿ ಇಂಥಾ ಜಾಗದಲ್ಲಿ ವೆಟರ್ನರಿ ಆಸ್ಪತ್ರೆಯನ್ನು ಕೊಡಬೇಕು ಎಂದು ಹೇಳಿದರೆ, ಅದನ್ನು ಓವರ್‌ಲುಕ್ ಮಾಡಿ ಕಡೆಗಾಣಿಸಿ ರಾಜಕೀಯ ದೃಷ್ಟಿಯಿಂದ ಬೇರೆ ಜಾಗಕ್ಕೆ ಕೊಟ್ಟರೆ ಅನ್ಯಾಯಮಾಡಿದ ಹಾಗಾಗುತ್ತದೆ ಎಂದು ಸಂಬಂಧ ಪಟ್ಟ ಮಂತ್ರಿಗಳು ಯೋಚನೆಮಾಡಬೇಕು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ ಪರಶುರಾಂಪುರ ಎನ್ನುವ ಒಂದು ಊರು ಇದೆ. ಅದು ಚಳ್ಳಕೆರೆಗೆ 18 ಮೈಲಿ ದೂರ ಆಗುತ್ತದೆ. ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದು ಜಿಲ್ಲಾ ಅಭಿವೃದ್ಧಿ ಮಂಡಳಿಯವರು ಒಂದು ಯೂನಾನಿಮಸ್ ರೆಜಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದು ಯಾಕೋ ಏನೋ ಮಂತ್ರಿಗಳು ಅದನ್ನು ಕಡೆಗಾಣಿಸಿ ಬೇರೆ ಜಾಗಕ್ಕೆ ಕೊಟ್ಟಿದ್ದಾರೆ. ಬೇರೆ ಕಡೆಗೆ ಕೊಡಬೇಡಿ ಎಂದು ನಾನು ಹೇಳುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಬಗ್ಗೆ ಪ್ರತ್ಯೇಕವಾಗಿ ಒಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಎಲ್. ಗೌಡ.—ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಯೂನಾನಿಮಸ್ ರೆಸಲ್ಯೂಷನ್ ಮಾಡಿ ಕಳುಹಿಸಿಕೊಟ್ಟರೂ ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಟ್ಟಿಲ್ಲ. ಆದರೆ ಬೇರೆಕಡೆಗೆ ಕೊಟ್ಟಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಲೋಕಲ್ ಬೋರ್ಡಿನವರು $\frac{1}{4}$ ಭಾಗ ಕಾಂಟ್ರಿಬ್ಯೂಷನ್ ಕೊಡದೆ ಇದ್ದರೆ ಆಸ್ಪತ್ರೆಯನ್ನು ಕೊಡುವುದಕ್ಕೆ ಬರುವುದಿಲ್ಲ. ಲೋಕಲ್ ಬೋರ್ಡಿನವರು $\frac{1}{4}$ ಭಾಗ ಕಾಂಟ್ರಿಬ್ಯೂಷನ್ ಕೊಟ್ಟು ಯಾವ ಸ್ಥಳಕ್ಕೆ ವೆಟರ್ನರಿ ಆಸ್ಪತ್ರೆಯನ್ನು ಕೊಡಬೇಕೆಂದು ಹೇಳಿದ್ದಾರೆಯೋ

ಅಲ್ಲಿಗೆ ಕೊಟ್ಟಿದ್ದೇವೆ. ಲೋಕಲ್ ಬೋರ್ಡಿನವರು ¼ ಭಾಗ ಕಾಂಟ್ರಿಬ್ಯೂಷನ್ ಕೊಡದೆ ಇದ್ದರೆ There is no question of opening a hospital at all. ಲೋಕಲ್ ಬೋರ್ಡಿನವರು ವೆಲ್‌ಕಂ ಮಾಡಿರುವುದರಿಂದ ನಾವು ಅಲ್ಲಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಎಲ್. ಗೌಡ.—ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಒಂದು ರೆಸಲ್ಯೂಷನ್ ಮಾಡಿ ಇಂಥಾ ಸ್ಥಳಕ್ಕೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡ ಮೇಲೂ ಅದನ್ನು ಕಡೆಗಾಣಿಸಿ ಬೇರೆ ಕಡೆ ಕೊಡುವ ಉದ್ದೇಶವೇನಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಾ ಕಡೆಗೂ ಯೂನಾನಿಮಸ್ ರೆಸಲ್ಯೂಷನ್ ಆಗಿದೆ.

ಶ್ರೀ ಬಿ. ಎಲ್. ಗೌಡ.—ಈಗ ಸರ್ಕಾರದವರು ವೆಟರ್ನರಿ ಆಸ್ಪತ್ರೆಯನ್ನು ಕೊಟ್ಟಿರುವ ಜಾಗಕ್ಕೆ ಯೂನಾನಿಮಸ್ ರೆಸಲ್ಯೂಷನ್ ಆಗಿಲ್ಲ. ಪಶುಪಾಲನೆ ಹೆಚ್ಚಾಗಿ ತೃಪ್ತಿಕರವಾಗಿ ನಡೆಯಬೇಕಾದರೆ ಮೇವು ಮುಖ್ಯ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಮೇವಿನ ಅಭಾವ ಬಹಳ ಜಾಸ್ತಿ ಉಂಟಾಗಿದೆ. ಆದ್ದರಿಂದ ಹೆಚ್ಚಿಗೆ ಹುಲ್ಲು ಸಿಕ್ಕತಕ್ಕಂಥ ವ್ಯವಸ್ಥೆ ಮಾಡಬೇಕು. ಮತ್ತು ಹಳ್ಳಿಗಳಲ್ಲಿ ಹುಲ್ಲಿನ ವ್ಯವಸ್ಥೆಯನ್ನು ಡೆವಲಪ್ ಮಾಡುವ ರೀತಿಯಲ್ಲಿ, ಹೆಚ್ಚು ಹುಲ್ಲನ್ನು ಬೆಳೆಯುವ ರೀತಿಯಲ್ಲಿ ಒಂದು ಯೋಜನೆಯನ್ನು ಹಾಕಿಕೊಂಡು ಹುಲ್ಲನ್ನು ಬೆಳೆಯದೆ ಹೋದರೆ ಹುಲ್ಲಿನ ಅಭಾವ ದೊಡ್ಡದಾಗುತ್ತದೆ.

ಇನ್ನು ಅರಣ್ಯ ಇಲಾಖೆಯ ವಿಚಾರದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೇ. ಅಮೃತಮಹಲ್ ದೊಡ್ಡ ದೊಡ್ಡ ಕಾವಲು ಹತ್ತಾರು ಎಕರೆ ಜಮೀನು ಬಂಜರು ಬಿದ್ದಿದೆ. ಅದನ್ನು ರೆವಿನ್ಯೂ ಇಲಾಖೆಗೆ ಒಳಪಡಿಸಿಕೊಂಡು ರೈತರಿಗೆ ವ್ಯವಸಾಯಕ್ಕೆ ಕೊಟ್ಟು ಉಳಿದ ಜಮೀನಿನಲ್ಲಿ ಅರಣ್ಯವನ್ನು ಬೆಳೆಸಿದರೆ ಒಳ್ಳೆಯದು. ಇದರಿಂದ ಅನೇಕ ಸಮಸ್ಯೆಗಳಿಗೆ ಅನುಕೂಲವಾಗುತ್ತದೆಂದು ನಾನು ತಮ್ಮಲ್ಲಿ ಹೇಳುತ್ತೇನೆ.

ಗ್ರಾಮಾಂತರ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ ಗ್ರಾಮಗಳಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಕುಡಿಯುವ ನೀರಿನ ಅಭಾವ ಜಾಸ್ತಿಯಾಗಿದೆ. ಒಂದು ವರ್ಷಕ್ಕೆ ಒಂದು ತಾಲ್ಲೂಕಿಗೆ ಎರಡು-ಮೂರು ಬಾವಿಗಳನ್ನು ಸಹ ಕೊಡುವುದಿಲ್ಲ. ದೊಡ್ಡ ದೊಡ್ಡ ಯೋಜನೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ನಮ್ಮ ದೇಶದಲ್ಲಿ ಇನ್ನು ಒಟ್ಟು 5,000 ಕುಡಿಯುವ ನೀರಿನ ಬಾವಿಗಳನ್ನು ಒದಗಿಸಬೇಕಾಗಿದೆ ಎಂದು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಆದ್ದರಿಂದ ಕುಡಿಯುವ ನೀರಿನ ಬಾವಿಗಳನ್ನು ತೆಗೆಸಲು ಆದ್ಯತೆ ಕೊಟ್ಟು ಅದನ್ನು ಮೊದಲು ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಗ್ರಾಮಾಂತರಗಳ ಪಂಚಾಯಿತಿಗಳು ಸರಿಯಾಗಿ ನಡೆಯುತ್ತಾ ಇಲ್ಲ. ಅಲ್ಲಿ ಸರಿಯಾದ ಆಡಿಟ್ ಇಲ್ಲ. ಅದಕ್ಕೋಸ್ಕರ ಆಡಿಟ್ ಮಾಡುವಂಥಾ ಒಂದು ವ್ಯವಸ್ಥೆಯನ್ನು ಮಾಡಬೇಕು. ಎಲ್. ಇ. ಎಸ್. ಅಧಿಕಾರಿಗಳನ್ನು ನೇಮಕ ಮಾಡುವುದರಲ್ಲಿ ಡಿಲೇ ಆಗುತ್ತದೆ. ಆದ್ದರಿಂದ ಅಲ್ಲಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಕುಡಿಯುವ ನೀರಿನ ಬಾವಿ ಮುಂತಾದ ಕೆಲವು ಬಾಬುಗಳಿಗೆ ವರ್ಷೇ ವರ್ಷೇ ಹಣವನ್ನು ಸರಿಯಾಗಿ ಬಜೆಟ್ಟಿನ ಪ್ರಕಾರ ಖರ್ಚು ಮಾಡದೆ ಇರುವುದರಿಂದ ದೇಶದ ಪ್ರಗತಿ ಕುಂಠಿತವಾಗುತ್ತಿದೆಯೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕೆಲವು ಆಫೀಸರುಗಳಿಗೆ ಸರಿಯಾದ ತರಪೇತು ಇಲ್ಲದೆ ಇರುವುದರಿಂದ ಸರಿಯಾಗಿ ಕೆಲಸ ಕಾರ್ಯಗಳು ಆಗುತ್ತಾ ಇಲ್ಲ.

ಇನ್ನು ಕೊನೆಯದಾಗಿ ಸಹಕಾರ ಇಲಾಖೆಯಲ್ಲಿ ಕಾಂಗ್ರೆಸ್‌ನವರಿಗೆ ಸಹಕಾರ ಬಾಕಿಯವರಿಗೆ ಅಸಹಕಾರ ನಡೆಯುತ್ತಿದೆಯೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕೋ-ಆಪರೇಟಿವ್ ಸೊಸೈಟಿಗಳಿಗೆ ನಾಮಿನೇಷನ್ ಮಾಡತಕ್ಕಂಥ ಪದ್ಧತಿಯನ್ನ ಮೊದಲು ತೆಗೆದು ಹಾಕಬೇಕೆಂದು ನನ್ನ ಸ್ನೇಹಿತರನೇಕರು ಈಗಾಗಲೇ ಹೇಳಿದ್ದಾರೆ. ಈ ನಾಮಿನೇಷನ್ ಪದ್ಧತಿಯಿಂದ ಎಷ್ಟು ದುರುಪಯೋಗ ನಡೆಯುತ್ತಿದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. 1962 ನೇ ಇಸವಿಯಲ್ಲಿ ಚಿತ್ರದುರ್ಗ ಕೋ-ಆಪರೇಟಿವ್ ಯೂನಿಯನ್ ಸ್ಥಾಪನೆ ಮಾಡಿದರು. ಅದರಲ್ಲಿ ಒಬ್ಬರು ಮಾಜಿ ಎಂ. ಎಲ್. ಎ ಯವರನ್ನು ಆಗಿ ನೇಮಕ ಮಾಡಿದರು. ಸೆಪ್ಟೆಂಬರ್ ತಿಂಗಳಿನಲ್ಲಿ ಆ ಕೋ-ಆಪರೇಟಿವ್ ಯೂನಿಯನ್ನಿನ 15 ಜನ ಮೆಂಬರುಗಳ ಪೈಕಿ ಒಬ್ಬರನ್ನು ಮಾತ್ರ ತೆಗೆದು ಹಾಕಿದರು. ಏತಕ್ಕೋಸ್ಕರ ಅವರನ್ನು ತೆಗೆದು ಹಾಕಿದರು ಅವರಿಗೇನು ಕ್ವಾಲಿಫಿಕೇಷನ್ ಇರಲಿಲ್ಲವೇ ಎಂದು ನಾನು ಕೇಳುತ್ತೇನೆ. ಇದೇ ರೀತಿ ಚಳ್ಳಕೆರೆಯಲ್ಲಿರುವ ಒಂದು ಮಾರ್ಕೆಟಿಂಗ್ ಸೊಸೈಟಿಗೆ ಒಬ್ಬರು ಖಾಸಗಿಯವರನ್ನು ಇನ್ಸ್‌ಪೆಕ್ಟರವರ ಜಾಗದಲ್ಲಿ ನೇಮಕ ಮಾಡಿದ್ದಾರೆ. ಅದು ಹಾಗಿರಲಿ, ಹೋದ ಸಾರಿ ಚುನಾವಣೆಯಲ್ಲಿ ಫೇಲಾದವರನ್ನು ಆ ಸೊಸೈಟಿಗೆ ನಾಮಕರಣ ಮಾಡಿದ್ದಾರೆ. ಈ ರೀತಿ ಸ್ವಪಕ್ಷದವರನ್ನು ನಾಮಕರಣ ಮಾಡುತ್ತಾ ಹೋದರೆ ಸೊಸೈಟಿಗಳು ಮುಂದುವರೆಯುತ್ತವೆಯೇ ? ಖಂಡಿತವಾಗಿ ಈ ನಾಮಿನೇಷನ್ ಪದ್ಧತಿಯನ್ನು ಕಂಪ್ಲೀಟಾಗಿ ತೆಗೆಯಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದೇ ರೀತಿ ಅಡಮಾನ ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ಗಳಿಗೂ ಸಹ ಚುನಾಯಿತರಾದ ಅಧ್ಯಕ್ಷರನ್ನು

(ಶ್ರೀ ಬಿ. ಎಲ್. ಗೌಡ)

ನೇಮಕ ಮಾಡಿದರೆ ಒಳ್ಳೆಯದು. ಸಂಸ್ಥಾನದ ಆಡಳಿತವನ್ನು ನಡೆಸಬೇಕಾದರೆ, ಇಂಡಿಯಾ ದೇಶದ ಆಡಳಿತವನ್ನು ನಡೆಸಬೇಕಾದರೆ ಚುನಾಯಿತರಾದ ಸದಸ್ಯರು ಇರಬೇಕಾದರೆ; ಅದೇ ರೀತಿ ಕೋ-ಆಪರೇಟೀವ್ ಸೊಸೈಟಿಗಳ ಆಡಳಿತವನ್ನು ನಡೆಸಬೇಕಾದರೂ ಚುನಾಯಿತರಾದ ಸದಸ್ಯರು ಇಲ್ಲದೆ ಹೋದರೆ ಪ್ರಜಾಪ್ರಭುತ್ವಕ್ಕೆ ಅವಹೇಳನಮಾಡಿದಂತಾಗುತ್ತದೆ.

ಈ ನಾಮಕರಣ ಪದ್ಧತಿ ಯಾವರೀತಿ ದುರುಪಯೋಗಪಡಿಸಿಕೊಳ್ಳುತ್ತಿದ್ದೀರಿ ಅನ್ನುವುದಕ್ಕೆ ನಿದರ್ಶನ ಕೊಡುತ್ತೇನೆ. ದಾವಣಗೆರೆ ದೊಡ್ಡ ಊರು, ಅಲ್ಲಿ Regulated Marketing Society ಇದೆ. ಇಡೀ ಹಳೇ ಮೈಸೂರು ಸಂಸ್ಥಾನದಲ್ಲಿ ಯಾವ Regulated Marketಗೂ ಸಹ ಖಾಸಗಿ ಅಧ್ಯಕ್ಷರಿಲ್ಲ. ಎಲ್ಲ ಕಡೆಯಲ್ಲಿಯೂ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದಾರೆ. ಆದರೆ ಇಲ್ಲಿ ಸ್ವಪಕ್ಷದವರಿಗೋ ತಮಗೆ ಬೇಕಾದವರಿಗೋ ಜಾಗ ಕೊಡುವುದಕ್ಕೋಸ್ಕರ ಜಿಲ್ಲಾಧಿಕಾರಿಗಳನ್ನು ಬಿಟ್ಟು ಈ ರೀತಿ ಮಾಡಿದ್ದಾರೆಂದು ನನಗನಿಸುತ್ತದೆ. ದಾವಣಗೆರೆಯಲ್ಲಿ ಏಕೆ ಹೀಗೆ ಮಾಡಿದ್ದೀರಿ ಅನ್ನುವ ಬಗ್ಗೆ ಸಮಜಾಯಿಷಿ ಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರಿ ಮತ್ತು ಅಭಿವೃದ್ಧಿ ಶಾಖೆಯ ಮಂತ್ರಿಗಳು).—ಇನ್ನು ಮುಂದೆ ಎಲ್ಲ ಸಂಘಗಳಿಗೂ ಖಾಸಗಿಯವರೇ ಅಧ್ಯಕ್ಷರಾಗಿರುವರು.

5-30 P. M.

ಶ್ರೀ ಬಿ. ಎಲ್. ಗೌಡ.—ಎಲ್ಲರನ್ನೂ ನಾಮಕರಣ ಮಾಡುವಿರೋ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಚುನಾಯಿತ ಅಧ್ಯಕ್ಷರನ್ನು ನೇಮಿಸಲಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಸಹಕಾರ ಇಲಾಖೆ ಆಡಿಟ್ ವ್ಯವಸ್ಥೆಯಲ್ಲಿಯೂ "ಕಾಂಗ್ರೆಸು" ನಡೆಯುತ್ತಿದೆ. ನಮ್ಮ ಚಿತ್ರದುರ್ಗ ಜಿಲ್ಲೆಯ ಒಂದು ಸಹಕಾರ ಸಂಘದ ವಿಷಯ ನಮ್ಮ ಉಪ ಮಂತ್ರಿಯವರಿಗೂ ಗೊತ್ತಿದೆ. ಈ ವ್ಯವಸಾಯ ಸಹಕಾರ ಸಂಘ ಜಿಲ್ಲಾ ಬ್ಯಾಂಕಿನಿಂದ ಮೂರು ಲಕ್ಷ ರೂಪಾಯಿ ತೆಗೆದುಕೊಂಡು ಮೂರು ವರ್ಷದಿಂದ ಕ್ಯಾಷ್ ಬುಕ್ಕು ಮತ್ತು ಲೆಡ್ಜರ್ ಬರೆದಿರುವುದಿಲ್ಲ. ಜವಾಬ್ದಾರರಾದವರ ಮೇಲೆ ತಕ್ಕ ಕ್ರಮ ತೆಗೆದುಕೊಂಡು ಶಿಕ್ಷೆಗೆ ಗುರಿಮಾಡಲು ಆರ್ಡರ್ ಆಗಿದ್ದರೂ, ಅದು ವಾಪಸ್ಸು ಬರುತ್ತಿದೆ. ಇದು ಸರಿಯಲ್ಲ. ಯಾರು ತಪ್ಪು ಮಾಡಿದ್ದಾರೋ, ಅವರ ತಪ್ಪನ್ನು ಮುಚ್ಚಬಾರದು, ಅವರಿಗೆ ಶಿಕ್ಷೆ ಮಾಡಬೇಕು. ಇಲ್ಲದೆ ಹೋದರೆ ಇದರಿಂದ ಬಹಳ ತೊಂದರೆಯಾಗುತ್ತದೆ. ಇಂಥ ತಾತ್ಸಾರ ಮನೋಭಾವ ಬೆಳೆಯುವ ರೀತಿಯಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತ ನಡೆಸಬಾರದು.

† ಶ್ರೀ ಜಿ. ಮಾದೇಗೌಡ (ಮಳವಳ್ಳಿ).—ಸ್ವಾಮಿ, ಈ ದಿವಸ ಈ ಸಭೆಯ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ಕೆಲವು ಬೇಡಿಕೆಗಳ ಬಗ್ಗೆ ನಾಲ್ಕಾರು ಸಲಹೆಗಳನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ.

ವ್ಯವಸಾಯದ ಮೇಲೆ ಹೇಳುತ್ತಾ, ಇಂಡಿಯಾ ದೇಶ ಹಳ್ಳಿಗಳ ದೇಶ, ಹಳ್ಳಿಗಳಲ್ಲಿರತಕ್ಕಂಥ ಸುಮಾರು 80 ಭಾಗ ಜನ ವ್ಯವಸಾಯವನ್ನೇ ಅವಲಂಬಿಸಿಕೊಂಡಿದ್ದಾರೆ ಅನ್ನತಕ್ಕಂಥದ್ದು ನಿತ್ಯ ಸತ್ಯದ ಮಾತು. ನಮ್ಮ ದೇಶ ಆರ್ಥಿಕವಾಗಿ ಪ್ರಗತಿಯನ್ನು ಸಾಧಿಸಬೇಕಾದರೆ ಮತ್ತು ದೇಶ ಮುಂದುವರಿಯಬೇಕಾದರೆ, ವ್ಯವಸಾಯಗಾರರು ಮುಂದುವರಿಯಬೇಕು. ಅವರ ಪ್ರಗತಿ ಆಗಬೇಕು ಅನ್ನುವ ದೃಷ್ಟಿಯಿಂದ ಸರ್ಕಾರದವರು ಎರಡು ಪಂಚವಾರ್ಷಿಕ ಯೋಜನೆಗಳ ಮುಖಾಂತರ ಅನೇಕ ಯೋಜನೆಗಳನ್ನು ಕೈಗೊಂಡು ಅನೇಕ ವಿಧದಲ್ಲಿ ರೈತರಿಗೆ ಉಪಕಾರ ಮಾಡಿದ್ದಾರೆ. ಈಗಾಗಲೇ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 192 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 2 ಲಕ್ಷ ಟನ್ ಆಹಾರ ಉತ್ಪನ್ನವನ್ನು ಜಾಸ್ತಿ ಮಾಡಿದ್ದಾರೆ. ಹಾಗೆಯೇ ಎರಡನೇ ಯೋಜನೆಯಲ್ಲಿ ಸುಮಾರು 755 ಲಕ್ಷ ರೂಪಾಯಿಯನ್ನು ಖರ್ಚುಮಾಡಿ ಸುಮಾರು 38 ಲಕ್ಷ ಟನ್‌ಗಳ ಆಹಾರದ ಉತ್ಪನ್ನವನ್ನು ಮಾಡಿದ್ದಾರೆ. ಈ ರೀತಿ ಆಹಾರ ಉತ್ಪಾದನೆ ಜಾಸ್ತಿ ಮಾಡತಕ್ಕಂಥ ವಿಧಾನದಲ್ಲಿ ಸರ್ಕಾರದವರು ಅನೇಕ ಕೆಲಸಗಳನ್ನು, ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರು ಅನೇಕರು ಸೂಚಿಸಿದ ಹಾಗೆ ವ್ಯವಸಾಯದ ಉಪಕರಣಗಳು ಏನಿವೆ ಅವನ್ನು, ಮತ್ತು ಸುಧಾರಿಸಿದ ಬೀಜಗಳನ್ನು ಒದಗಿಸುವುದರ ಮುಖಾಂತರ, Compost ಗೊಬ್ಬರಗಳನ್ನು ತಯಾರುಮಾಡಿ ರೈತರಿಗೆ ಅವನ್ನು ವ್ಯವಸಾಯಕ್ಕೆ ಉಪಯೋಗಿಸುವ ಹಾಗೆ ಮಾಡಿ ಅನೇಕ ಗೊಬ್ಬರಗಳನ್ನು ಸೊಸೈಟಿಯ ಮುಖಾಂತರ ಕೊಟ್ಟು ಅನೇಕ ಅಧಿಕಾರಿ ವರ್ಗದವರು

ಹಣ ಕೊಟ್ಟು, ನಾಟಿ ಹಾಕಿ, Japan method of cultivation ಪ್ರಚಾರಕ್ಕೆ ತಂದು, ವ್ಯವಸಾಯಕ್ಕೆ ಬರತಕ್ಕಂಥ ರೋಗರುಜಿನಗಳನ್ನು ಕೂಡ ಔಷಧಿಗಳನ್ನು ಕೊಟ್ಟು ತಡೆದು, ಮಿಶ್ರ ವ್ಯವಸಾಯ ಮತ್ತು ರೊಟೇಷನ್ ಕ್ರಾಪ್ ಏನಿದೆ ಅವುಗಳನ್ನು ಪ್ರಚಾರಕ್ಕೆ ತಂದು ಅನೇಕ ರೀತಿಯಲ್ಲಿ ದೇಶದ ಆಹಾರೋತ್ಪತ್ತಿಯನ್ನು 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಹಳವಾಗಿ ಏರಿಸಿದರು. ಆದರೂ ಕೂಡ ಇವತ್ತಿನ ದಿವಸ ಅನೇಕಸಾರಿ ಈ ಮಾನ್ಯ ಸಭೆಯಲ್ಲಿ ಈ ವ್ಯವಸಾಯದ ಇಲಾಖೆ ಉಗ್ರವಾದ ಟೀಕೆಗೆ ಒಳಗಾಗಿದೆ. ಈಗ ಮಾತನಾಡಿದ ಶ್ರೀ ಮರುಳಪ್ಪನವರು ಈ ವ್ಯವಸಾಯ ಇಲಾಖೆ ಮುಚ್ಚಬಡಬೇಕು ಅನ್ನುವಹಾಗೆ ಟೀಕೆ ಮಾಡಿದರು. ಆದರೆ ಒಂದು ಮಾತನ್ನು ಮಾತ್ರ ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಪಾಶ್ಚಿಮಾತ್ಯ ದೇಶವೇ ಆಗಲಿ, ಯಾವ ದೇಶವೇ ಆಗಲಿ, ಈ ಒಂದು ಇಲಾಖೆ ಏನಿದೆ ಅದಕ್ಕೆ ಮುಖ್ಯವಾದ ಸ್ಥಾನವನ್ನು ಕೊಡಬೇಕು. ಪಾಶ್ಚಿಮಾತ್ಯ ದೇಶಗಳಲ್ಲಿ ಈ ಇಲಾಖೆಗೆ ಮುಖ್ಯ ಸ್ಥಾನವನ್ನೂ ಕೂಡ ಕೊಡುತ್ತಾ ಇದ್ದಾರೆ. ಈ ಅನ್ನದ ಇಲಾಖೆಗೆ, ಈ ಹೊಟ್ಟೆಯ ಇಲಾಖೆಗೆ, ಈ ವ್ಯವಸಾಯದ ಇಲಾಖೆಗೆ ಮಾನ್ಯತೆ ಕೊಡದಿದ್ದರೆ ಯಾವ ಕೈಗಾರಿಕೆಯೇ ಆಗಲಿ, ಯಾವ ದೇಶವೇ ಆಗಲಿ, ಆರ್ಥಿಕ ಸ್ಥಿತಿಯಲ್ಲಿ ಉತ್ತಮವಾಗುವುದಿಲ್ಲ ಅನ್ನತಕ್ಕಂಥಾದ್ದನ್ನು ಎಲ್ಲರೂ ಕೂಡ ಒಪ್ಪಿಕೊಳ್ಳುವ ಮಾತು. ಈ ವ್ಯವಸಾಯದ ಅಭಿವೃದ್ಧಿ ಮೇಲೆ ಕೈಗಾರಿಕೆ ಅವಲಂಬಿಸಿದೆ, ದೇಶದ ಆರ್ಥಿಕ ಸ್ಥಿತಿಯೂ ಕೂಡ ಇದನ್ನೇ ಅವಲಂಬಿಸಿವೆ ಅನ್ನತಕ್ಕಂಥಾದ್ದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ವ್ಯವಸಾಯದಲ್ಲಿ ಎಷ್ಟು ಏಳಿಗೆಯನ್ನು ಮುಟ್ಟುತ್ತೇವೆಯೋ, ಅಷ್ಟರ ಮಟ್ಟಿಗೆ ದೇಶದ ಪ್ರಗತಿಯನ್ನು ಸಾಧಿಸುತ್ತೇವೆ. ಅದಕ್ಕೋಸ್ಕರ ನಾನು ಈ ಸಂದರ್ಭದಲ್ಲಿ ಸೂಚಿಸತಕ್ಕಂಥಾದ್ದು, ಎರಡು ಪಂಚವಾರ್ಷಿಕ ಯೋಜನೆಯನ್ನು ಮುಗಿಸಿದ್ದರೂ ಕೂಡ, ಅನೇಕ ಯೋಜನೆಗಳನ್ನು ಕೈಗೊಂಡಿದ್ದರೂ ಕೂಡ ನಾವು ಎಷ್ಟು ಪ್ರಗತಿಯನ್ನು, ಫಲವನ್ನು ನಿರೀಕ್ಷಣೆ ಮಾಡಿದ್ದೆವೋ ಅಷ್ಟು ದೊರೆತಿಲ್ಲ. ಏಕೆಂದರೆ ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ನಾವು ಏನೊಂದು ಯೋಜನೆಯನ್ನು ಕೈಗೊಂಡಿದ್ದೇವೆಯೋ ಅದು ಪ್ರತಿಯೊಬ್ಬ ರೈತನಿಗೂ ಮುಟ್ಟುತ್ತಾ ಇಲ್ಲ. ಪ್ರತಿಯೊಬ್ಬ ರೈತನಿಗೂ ಕೂಡ ಸುಧಾರಿಸಿದ ವ್ಯವಸಾಯದ ಬೀಜಗಳು, method, ಮುಟ್ಟುತ್ತಾ ಇಲ್ಲ. ಹಾಗೆಯೇ Compost ಗೊಬ್ಬರ ಅನ್ನತಕ್ಕಂಥಾದ್ದನ್ನೂ ತಯಾರು ಮಾಡುತ್ತಾ ಇದ್ದೇವೆ, ಅದರ ಪ್ರಚಾರವಿಲ್ಲ. Compost Demonstratorಗಳನ್ನು ಸರ್ಕಾರದವರು ನೇಮಿಸಿದ್ದಾರೆ. ಅವರು ಪ್ರತಿಯೊಬ್ಬನ ಮನೆ ಬಾಗಿಲಿಗೂ ಹೋಗಿ ಯಾವುದನ್ನು ತಯಾರು ಮಾಡುತ್ತಿದ್ದೇವೆಯೋ ಅದನ್ನು ಹೇಳುತ್ತಾ ಇಲ್ಲ. ಸರ್ಕಾರದವರ ಪ್ರಯತ್ನ ಇಲ್ಲದೇನೇ ತಾನೇ ಸ್ವತಃ ವ್ಯವಸಾಯ ಮಾಡತಕ್ಕಂಥ ಶಕ್ತಿ ರೈತನಿಗೆ ಇಲ್ಲ. ಇವತ್ತು ಇಂಡಿಯಾ ದೇಶದಲ್ಲಿ ರೈತರು 80 ಪರ್ಸೆಂಟ್ ಜನ. ಅವರು ಅನಕ್ಷರತೆ ಮತ್ತು ಅಜ್ಞಾನದಿಂದ ತುಂಬಿರುತ್ತಾರೆ. ಈ ದೇಶದಲ್ಲಿ ವ್ಯವಸಾಯ ಕೂಡ ಬಹಳ ಹಿಂದುಳಿದಿದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಅದಕ್ಕೋಸ್ಕರ ಸರ್ಕಾರ ರೈತರ ಏಳಿಗೆಯ ಗುರಿಯನ್ನು ಮುಟ್ಟಬೇಕಾದರೆ, ಇಂಡಿಯಾ ಸರ್ಕಾರದವರು ಅವರ ಒಂದು ಯೋಜನೆಯನ್ನು ಪ್ರತಿ ಪ್ರಾಂತ ಸರ್ಕಾರಗಳೂ ಕೈಗೊಳ್ಳಬೇಕು. ಈವತ್ತಿನ ದಿವಸ ಆ Package Deal Programme ಈ ರಾಜ್ಯದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜಾರಿಯಲ್ಲಿದೆ. ಅದು ಸುಮಾರು 5 ವರ್ಷದ ಯೋಜನೆ. ಈಗಾಗಲೇ 5 ವರ್ಷಗಳು ಆದರೂ ಕೂಡ, ನಾವು ಒಂದು ವರ್ಷ ಮುಗಿದು, 2ನೇ ವರ್ಷದ ಮೂರನೇ ತಿಂಗಳಿನಲ್ಲಿದ್ದೇವೆ. ಆದರೂ ಕೂಡ ನನಗೆ ಕಂಡಹಾಗೆ ಈ ಯೋಜನೆಯನ್ನು ಅರ್ಥ ಮಾಡಿಕೊಂಡಿರತಕ್ಕಂಥ ಅಧಿಕಾರ ವರ್ಗದವರು ಏನಿದ್ದಾರೆಯೋ ಅವರು ಬಹಳ ಕಡಿಮೆ ಎಂದು ಈ ಸಂದರ್ಭದಲ್ಲಿ ವಿಷಾದದಿಂದ ಹೇಳಬೇಕಾಗಿದೆ. ನಾವು ಇವತ್ತು ಪ್ರಜಾಪ್ರಭುತ್ವ ಯುಗದಲ್ಲಿ ಇದ್ದೇವೆ. ಈ ದೇಶವನ್ನು ಸಖೀರಾಜ್ಯದ ಕಡೆಗೆ ಅನೇಕ ಯೋಜನೆಗಳನ್ನು ಹಾಕಿಕೊಂಡು ತೆಗೆದುಕೊಂಡು ಹೋಗುತ್ತಾ ಇದ್ದೇವೆ.

ಈ ಯೋಜನೆಯನ್ನು ನಾವು ಹಾಕುವಾಗ ಪಕ್ಷಗಳ ಸರ್ಕಾರವನ್ನು ರಚನೆ ಮಾಡುವ ಕಾಲದಲ್ಲಿ ಪಕ್ಷಗಳು ತಮ್ಮ ಪಕ್ಷದ ತತ್ವಕ್ಕನುಗುಣವಾಗಿ ಈ ಯೋಜನೆಯನ್ನು ರೂಪಿಸುವುದು ಪ್ರಜಾಪ್ರಭುತ್ವದ ಧರ್ಮ. ಹಾಗೆಯೇ ಈ ಯೋಜನೆಯನ್ನು ನೆರವೇರಿಸುವಂಥಾದ್ದು ನಿಜವಾಗಿ ಪಕ್ಷಗಳು ಅಲ್ಲ. ಆಡಳಿತ ವರ್ಗವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಯಾವ ಆಡಳಿತ ವರ್ಗಕ್ಕೆ ತನ್ನ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ದಕ್ಷತೆ ಇರುವುದಿಲ್ಲವೋ ಆಗ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ ಮತ್ತು ಯೋಜನೆಯೂ ಸಹ ಯಶಸ್ವಿಯಾಗುವುದಿಲ್ಲವೆಂಬ ಮಾತನ್ನು ನಾನು ಮತ್ತೆ ಒತ್ತಿ ಹೇಳಬೇಕಾಗಿದೆ. ಇವತ್ತಿನ ದಿವಸ ನಾವು ಏನೊಂದು ಯೋಜನೆಯನ್ನು ಹಾಕಿಕೊಂಡ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿ ಮೂರನೆಯ ಪಾಂಚವಾರ್ಷಿಕ ಯೋಜನೆಯ ಎರಡನೆಯ ವರ್ಷವನ್ನು ಮುಗಿಸಿದ್ದೇವೆ. ನಾವು ಏನೊಂದು ಈ ಯೋಜನೆಯಿಂದ ನಿರೀಕ್ಷಣೆ ಮಾಡಿದ್ದೆವೋ ಅಷ್ಟು ಫಲ ನಿಜವಾಗಿ ದೊರಕಿಲ್ಲ ಇದಕ್ಕೆ ಮುಖ್ಯ ಕಾರಣ ಪಕ್ಷಗಳಲ್ಲ; ಆಡಳಿತ ವರ್ಗದಲ್ಲಿರತಕ್ಕ ಕೋಮುವಾರು ಭಾವನೆ ಮತ್ತು

(ಶ್ರೀ ಪಿ. ಮಾದೇಗೌಡ)

ಆಡಳಿತವರ್ಗದಲ್ಲಿರಬೇಕಾದ ದಕ್ಷತೆ ಇಲ್ಲದೇ ಇರುವುದು ಆಗಿದೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾನು ಮಂಡ್ಯಾ ಜಿಲ್ಲೆಯ ಉದಾಹರಣೆಯನ್ನು ಕೊಟ್ಟು ಈ ಮಾತನ್ನು ಪುಷ್ಟೀಕರಿಸುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ ಇಂಡಿಯಾ ಸರ್ಕಾರದವರ ಯೋಜನೆಯಾದಂಥ ಈ ಪ್ಯಾಕೇಜ್‌ಡೀಲ್ ಪ್ರೋಗ್ರಾಂನ್ನು ಕೇಂದ್ರ ಸರ್ಕಾರದವರೇ ಕೊಡಬೇಕಾದರೆ ಈ ಒಂದು ಜಿಲ್ಲೆಯಲ್ಲಿ ಒಂದು ಮಾದರೀ ರೀತಿಯಲ್ಲಿ ಈ ವ್ಯವಸಾಯವನ್ನು ಪ್ರಯೋಗ ಮಾಡಬೇಕೆಂದು ಮಾಡಿದರು. ಏಕೆಂದರೆ ಅಲ್ಲಿ ರೈತರೇ ಬಹಳ ಹೆಚ್ಚಾಗಿದ್ದಾರೆ. ಪ್ರತಿಯೊಬ್ಬ ರೈತನಿಗೆ ಏನೇನು ಸೌಲಭ್ಯಗಳು ಬೇಕಾಗಿವೆ ಎಂಬುದನ್ನು ಮೊದಲು ಗಮನಿಸಬೇಕಾಗಿದೆ. ಗಾಡಿ, ಎತ್ತು, ನೇಗಿಲು ಮುಂತಾದ ವ್ಯವಸಾಯೋಪಕರಣಗಳನ್ನು ರೈತನಿಗೆ ಕೊಡಬೇಕು. ಸಾಲವನ್ನೂ ಸಹ ಕೊಡಬೇಕಾಗಿದೆ. ರೈತನಾದವನು ಒಂದು ಪಲ್ಲ ಬೆಳೆಯುವ ಕಡೆ 10 ಪಲ್ಲ, 10 ಪಲ್ಲ ಬೆಳೆಯುವ ಕಡೆ 20 ಪಲ್ಲ, 1 ರೂಪಾಯಿ ಸಂಪಾದನೆ ಮಾಡುವ ಕಡೆ 10 ರೂಪಾಯಿಗಳನ್ನು ಸಂಪಾದನೆ ಮಾಡುವ ಹಾಗೆ ಅವನಿಗೆ ತಿಳುವಳಿಕೆ ಹೇಳಬೇಕು. ದೇಶದ ಉತ್ಪತ್ತಿ, ಅವನ ಆರ್ಥಿಕ ಪರಿಸ್ಥಿತಿ ಖಂಡಿತವಾಗಿ ಉತ್ತಮವಾಗಬೇಕು. ಎಂಬ ದೃಷ್ಟಿಯಿಂದ ಈ ಯೋಜನೆಯನ್ನು ಮಂಡ್ಯಾ ಜಿಲ್ಲೆಯಲ್ಲಿ ಜಾರಿಗೆ ತಂದರು. ಇದೇ ರೀತಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಪ್ರಾಂತ್ಯ ಸರ್ಕಾರದವರೂ ಸಹ ಕೊಟ್ಟಿದ್ದಾರೆ. ಆದರೆ ಇದರ ಪರಿಸ್ಥಿತಿ ಈಗ ಏನಾಗಿದೆ ಎಂದರೆ ಒಂದು ಯಕ್ಷಿಣಿ ತರವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಯಕ್ಷಣಿಗಾರ ಒಂದು ಸಂತೆ ಮೈದಾನದಲ್ಲಿ ಒಂದು ರೂಪಾಯಿ ಕೊಡಿ 10 ರೂಪಾಯಿ ಮಾಡುತ್ತೇನೆ. ಒಂದು ಹಿಡಿ ಮರಳನ್ನೂ ಕೂಡ ಪೆಪ್ಪರ್‌ಮೆಂಟ್ ಮಾಡುತ್ತೇನೆಂದು ಹೇಳುವ ಹಾಗೆ ಈ ಪ್ಯಾಕೇಜ್‌ಡೀಲ್ ಪ್ರೋಗ್ರಾಂ ಸ್ಥಿತಿ ಆಗಿದೆ. ಇದೇನು ದೊಂಬರ ಆಟವೋ ಅಥವಾ ಯಕ್ಷಿಣಿ ಆಟವೋ ಗೊತ್ತಿಲ್ಲ. ಆದರೆ ನಾನು ಸರ್ಕಾರವನ್ನು ಟೀಕೆ ಮಾಡುತ್ತಾ ಇಲ್ಲ. ಅಧಿಕಾರವರ್ಗದವರು ಪ್ರಜಾಪ್ರಭುತ್ವದಲ್ಲಿ ಈ ಯೋಜನೆಗಳನ್ನು ಎಷ್ಟರಮಟ್ಟಿಗೆ ನಿಷ್ಠೆಯಿಂದ ಮಾಡುತ್ತಿದ್ದಾರೆ ಮತ್ತು ಎಷ್ಟರ ಮಟ್ಟಿಗೆ ಅವರಿಗೆ ದೇಶಪ್ರೇಮವಿದೆ ಯೆಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮಂಡ್ಯಾ ಜಿಲ್ಲೆಯ ಈ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತವಾಡಬೇಕಾಗಿದ್ದರೆ ಪ್ರತಿಯೊಂದು ಕುಟುಂಬದಲ್ಲಿಯೂ ಈ ದೇಶಕ್ಕೆ ಬೇಕಾದಂಥ ಈ ಯೋಜನೆಯನ್ನು ಬೆಳೆಸಿ ತಕ್ಕ ಸೌಕರ್ಯಗಳನ್ನು ಒದಗಿಸಬೇಕು. ಒಂದೊಂದು ಸಂಸಾರಕ್ಕೂ ಈ ಯೋಜನೆ ಹರಡುವಂತೆ ಮಾಡಬೇಕು. ಪ್ರತಿಯೊಂದು ಕುಟುಂಬದಲ್ಲಿರತಕ್ಕ ತರೀ ಜಮೀನು, ಬಾಗಾಯಿತು ಜಮೀನು ಅವರಲ್ಲಿರತಕ್ಕ ದನಕರುಗಳು ಇತ್ಯಾದಿ ಹೀಗೆ ಪ್ರತಿಯೊಂದು ಕೂಡ ಈ ಯೋಜನೆಯಲ್ಲಿ ಬರುತ್ತದೆ. ಹಿಂದೆ ಇದ್ದಂಥ ಉತ್ಪತ್ತಿ, ಮುಂದೆ ಇನ್ನೂ ಅಧಿಕವಾಗಿ ವ್ಯವಸಾಯ ಮಾಡಬೇಕಾದರೆ ಅವನಿಗೆ ಅಧಿಕವಾಗಿ ಬೇಕಾಗಿರತಕ್ಕ ಸಹಾಯ ಅಂದರೆ ಗೊಬ್ಬರವನ್ನು ಯಾವ ರೀತಿ ಸರಬರಾಜು ಮಾಡಬೇಕು, ಭೂಮಿ ವಿಷಯ ತಿಳಿಯಬೇಕು, ಯಾವ ಬೆಳೆ ಹಾಕಿದರೆ ಒಳ್ಳೆಯ ಫಲ ಸಿಗುತ್ತದೆ ಎನ್ನುವುದನ್ನು ಈ ಯೋಜನೆಯಲ್ಲಿ ಸರ್ಕಾರದವರು ಕ್ರೋಢೀಕರಿಸಬೇಕು. ಮೂರನೆಯ ಒಂದು ಭಾಗವನ್ನು ಈ ಮಂಡ್ಯಾ ಜಿಲ್ಲೆಯಲ್ಲಿ ಹೋದ ವರ್ಷ ಈ ಯೋಜನೆಗೆ ಸೇರಿಸಿದ್ದಾರೆ. ಈ ಯೋಜನೆ ¼ ಭಾಗ ಪ್ರದೇಶದಲ್ಲಿ ಮಾತ್ರ ಮಾಡಿ ಈಗ್ಗೆ ಒಂದು ವರ್ಷ ಮುಗಿದಿದೆ. ಈ ವರ್ಷ ಅವಧಿಯಲ್ಲಿ ಮಂಡ್ಯಾ ಜಿಲ್ಲೆಯಲ್ಲಿ ಆಹಾರೋತ್ಪತ್ತಿ ಎಷ್ಟು ಹೆಚ್ಚಿದೆ ಎಂಬುದನ್ನು ತಿಳಿಯಲು ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಇಲಾಖಾಧಿಕಾಗಳು ಇನ್ನೂ ಆ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಏಕೋ ಹಿಂದು ಮುಂದು ನೋಡುತ್ತಿದ್ದಾರೆ. ಅವರ ವಿಷಯವೇ ಬೇರೆ. ನಾನು ಆ ಜಿಲ್ಲೆಯ ಒಬ್ಬ ಜವಾಬ್ದಾರಿಯುತ ರೈತನಾಗಿ ಇದನ್ನು ಹೇಳುತ್ತಿದ್ದೇನೆ. ಆದರೆ ಈ ಯೋಜನೆಯು ಒಂದು ವರ್ಷದ ಅವಧಿಯಲ್ಲಿ ಒಂದು ನಯಾಪೈಸೆಯಷ್ಟು ಏನೊಂದು ಪ್ರಯೋಜನವನ್ನೂ ಪಡೆದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಘಂಟಾಘೋಷವಾಗಿ ಹೇಳುತ್ತೇನೆ. ಮೊದಲು ಉಗ್ರವಾಗಿ ಈ ಯೋಜನೆಯಮೇಲೆ ನಾನು ಟೀಕೆ ಮಾಡಿದ್ದೆ. ವ್ಯವಸಾಯ ಮಂತ್ರಿಗಳಾದ ಶ್ರೀಮಾನ್ ನಾರಾಯಣ ಗೌಡರನ್ನು ಕೆಲವು ಕಡೆಗಳಲ್ಲಿ ನಾನೇ ಕರೆದುಕೊಂಡು ಹೋಗಿದ್ದೇನೆ. ಅನೇಕ ಅಧಿಕಾರಿಗಳು ಡಿಮಾನ್‌ಸ್ಟ್ರೇಷನ್ ಮಾಡುತ್ತಿದ್ದ ಪ್ಲಾಟುಗಳ ಹತ್ತಿರವೂ ಕರೆದುಕೊಂಡು ಹೋಗಿದ್ದೇನೆ. ಒಂದೊಂದು ಪ್ಲಾಟನ್ನು ತೋರಿಸಿದ್ದೇನೆ: ಎಷ್ಟರ ಮಟ್ಟಿಗೆ ಬತ್ತದ ಬೆಳೆ ಬೆಳೆದಿದೆ ಎಂಬುದನ್ನು ನೋಡಿದ್ದಾರೆ. ಸ್ವಾತಂತ್ರ್ಯ ಮುಂಚಿತವಾಗಿ ಹೆಚ್ಚು ಬೆಳೆಯನ್ನು ಬೆಳೆಯುತ್ತಿದ್ದುದು ಈಗ ಕಡಿಮೆಯಾಗಿದೆ. ಇವತ್ತು ಈ ಜಿಲ್ಲೆಯಲ್ಲಿ ಬೆಳೆಯುತ್ತಿರುವುದಕ್ಕಿಂತ ಹೆಚ್ಚಿನ ಉತ್ತಮ ಮಟ್ಟದಲ್ಲಿ ಹಿಂದೆ ಬೆಳೆಯುತ್ತಿದ್ದರು ಈ ಯೋಜನೆಗೆ ಮುಂಚೆ ವ್ಯವಸಾಯವನ್ನು ಸಹ ಬಹಳ ಚೆನ್ನಾಗಿ ಮಾಡುತ್ತಿದ್ದರು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ ಈ ಯೋಜನೆಯಿಂದ ಅಲ್ಲಿನ ರೈತರು ವ್ಯವಸಾಯ ಮಾಡುವುದನ್ನು ಕಲಿತಿರ

ಲಲ್ಲ. ಈ ಯೋಜನೆಯಿಂದ ಮಂಡ್ಯಾದ 1 ಲಕ್ಷದ 25 ಸಾವಿರ ಎಕರೆ ತರೀ ಜಮೀನಿನಲ್ಲಿ ಎಷ್ಟರ ಮಟ್ಟಿಗೆ ಉತ್ಪತ್ತಿ ಜಾಸ್ತಿಯಾಗಿದೆ ಎಂಬುವಾಗಿ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಉತ್ಪತ್ತಿ ಯಾವ ರೀತಿ ಜಾಸ್ತಿ ಮಾಡಬೇಕೆಂಬ ಬಗ್ಗೆ ಸರ್ಕಾರ ತೀವ್ರ ಗಮನಿಸಬೇಕು. ಮೊದಲು ರೈತನಿಗೆ ಬೇಕಾದ ಬುರ್‌ಡೋಜರುಗಳನ್ನು ಗೊಬ್ಬರ ಮತ್ತು ಬೀಜಗಳನ್ನು ಪ್ಯಾಕೇಜ್‌ಡೀಲ್ ಪ್ರೋಗ್ರಾಂನಿಂದ ಕೊಡಬೇಕೆಂದು ಇಂಡಿಯಾ ಸರ್ಕಾರದವರು 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ದನಕರುಗಳನ್ನು ಕೊಂಡುಕೊಳ್ಳಲಿಕ್ಕೆ ನೇಗಿಲು, ಗೊಬ್ಬರ ಮುಂತಾದುವನ್ನು ಕೊಂಡುಕೊಳ್ಳಲಿಕ್ಕೆ ಹಣ ಸಹಾಯವನ್ನು ರೈತನ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗಿ ಕೊಡುವ ವ್ಯವಸ್ಥೆ ಮಾಡಬೇಕು. ಅಲ್ಲದೆ ಅವನಿಗೆ ಇರುವ ಜಡತ್ವವನ್ನು ಹೋಗಲಾಡಿಸಿ ಆಹಾರೋತ್ಪತ್ತಿಯನ್ನು ಹೆಚ್ಚು ಬೆಳೆಯುವ ಹಾಗೆ ಪ್ರೋತ್ಸಾಹ ಕೊಡಬೇಕು. ಈ ಯೋಜನೆ ಯಶಸ್ವಿಯಾಗಬೇಕಾದರೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ತೋರಿಸುತ್ತಿರುವ ಬಹಳ ಉದಾಸೀನ ಮನೋಭಾವ ಕೂಡಲೇ ತೊಲಗಬೇಕು. ಈ ಮಾತನ್ನು ಬಹಳ ವಿಷಾದದಿಂದ ನಾನು ಹೇಳುತ್ತೇನೆ. ಮತ್ತೊಂದು ವಿಷಯ ಈ ಇಲಾಖೆಗೆ ಸಂಬಂಧಪಟ್ಟ ಮುಖ್ಯಾಧಿಕಾರಿಗಳು ಯಾರು ಇದ್ದಾರೋ ಅವರ ಪರಿಚಯ ನನಗಿಲ್ಲ. ವೈಯುಕ್ತಿಕವಾಗಿ ನನಗೆ ಅವರಮೇಲೆ ಏನೂ ದ್ವೇಷವಿಲ್ಲ. ಈ ಯೋಜನೆ ಮುಖ್ಯವಾಗಿ ಒಂದು ಜಿಲ್ಲೆಯ ಜನರ ಭವಿಷ್ಯವನ್ನು ಬದಲಾಯಿಸುವುದು ಆಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲು ಈ ಜಿಲ್ಲೆಗೆ ಎಷ್ಟು ಹಣವನ್ನು ಸಾಲಕೊಡುತ್ತಿದ್ದೆವೋ ಅದಕ್ಕಿಂತ ಡಬ್ಬಲ್ಲಾಗಿ ಈಗ ಕೊಡುತ್ತಿದ್ದೇವೆ.

ಶ್ರೀ ಜಿ. ಮಾದೇಗೌಡ.—ಪ್ಯಾಕೇಜ್‌ಡೀಲ್ ಪ್ರೋಗ್ರಾಂ ಈ ಜಿಲ್ಲೆಯಲ್ಲಿ ಬಂದ ಅವಧಿಯಲ್ಲಿ ಹೇಳತಕ್ಕ ಮಾತು ಇದು. ಅದನ್ನೇ ನಾನು ಹೇಳುತ್ತೇನೆ. ಒಟ್ಟಿನಲ್ಲಿ ಈ ಯೋಜನೆಯಲ್ಲಿ ಮಂಡ್ಯಾ ಜಿಲ್ಲೆಯಲ್ಲಿ ಆಹಾರೋತ್ಪನ್ನವೇನೂ ಜಾಸ್ತಿಯಾಗುತ್ತಾ ಇಲ್ಲ. ಈ ಯೋಜನೆ ಅನೇಕ ರೈತರನ್ನು ತುಂಬಾ ಸಾಲಗಾರರನ್ನಾಗಿ ಮಾಡಿದೆ ಎಂದು ನಾನು ಹೇಳಬಹುದು. ಏಕೆಂದರೆ ಈ ಯೋಜನೆಯ ಉನ್ನತ ಅಧಿಕಾರಿಗಳ ಉದಾಸೀನ ಮನೋಭಾವನೆಯೇ ಮುಖ್ಯ ಕಾರಣ. ನಾನು ಒಂದು ಸಾರಿ ಈ ಪ್ಯಾಕೇಜ್‌ಡೀಲ್ ಪ್ರೋಗ್ರಾಂನಿಂದ ಈ ಜಿಲ್ಲೆಗೆ ಉಪಯೋಗ ಹೆಚ್ಚಾಗಿದೆ ಎಂಬುದು ಬರೀ ಪೇಪರ್‌ನಲ್ಲಿದೆಯೇ ಹೊರತು ಕಾರ್ಯತಃ ಪ್ರಯೋಜನವೇನೂ ಆಗಿಲ್ಲವೆಂದು ಮುಖ್ಯಮಂತ್ರಿಗಳಿಗೆ ಹೇಳಿದೆ. ಅವರು ನಮ್ಮ ಜಿಲ್ಲೆಗೆ ಓಡಿ ಬಂದರು. ವ್ಯವಸಾಯ ಮಂತ್ರಿಗಳೂ ಓಡಿ ಬಂದರು. ಮುಖ್ಯಾಧಿಕಾರಿ ಯಾರು ಇದ್ದಾರೋ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಒಂದು ಜಿಲ್ಲೆಯ ಜನಗಳ ಭವಿಷ್ಯವನ್ನು ನಿರ್ಧರಿಸುವ ಯೋಜನೆ ಮತ್ತು ಜನಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ಯೋಜನೆಯನ್ನು ಒಂದು ಜಿಲ್ಲೆಯಲ್ಲಿ ಕೈ ಕೊಂಡಿರುವಾಗ ಒಬ್ಬ ಮುಖ್ಯಾಧಿಕಾರಿ ಇವತ್ತಿನವರೆಗೂ ಅಲ್ಲಿಗೆ ಕಾಲು ಇಟ್ಟಿಲ್ಲವೆಂದರೆ ಬಹಳ ಶೋಚನೀಯವಾದ ಪರಿಸ್ಥಿತಿ ಎಂದು ನಾನು ಹೇಳಬೇಕಾಗಿದೆ. ಈ ವಿಷಯದಲ್ಲಿ ಸರ್ಕಾರದವರು ಒಂದು ನಿಮಿಷ ಕೂಡ ಯೋಚನೆ ಮಾಡಲಿಲ್ಲ. ಎಲ್ಲೋ ತಮ್ಮ ಬುದ್ಧಿಯನ್ನು ಓಡಿಸಲಿಲ್ಲವೆಂದು ನಾನು ಅಂದುಕೊಂಡಿದ್ದೇನೆ.

ಈ ಸಂದರ್ಭದಲ್ಲಿ ಮಾನ್ಯ ವ್ಯವಸಾಯ ಮಂತ್ರಿಗಳನ್ನು ಕೇಳುತ್ತೇನೆ, ಈ ಬಗ್ಗೆ ಅವರ ವಿವರಣೆಯನ್ನು ಕೇಳಬೇಕಾಗಿದೆ. ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಎಷ್ಟು ಬೆಳೆಯಬಹುದೆಂದಿದ್ದಾರೆ, ಬೆಳೆಯುವವರಿಗೇನ ಸೌಲಭ್ಯಕೊಟ್ಟಿದ್ದಾರೆ ಎಂಬುದನ್ನು ಹೇಳಬೇಕು. ಆಧುನಿಕ ವ್ಯವಸಾಯೋಪಕರಣಗಳನ್ನು ತಯಾರುಮಾಡುವ ಇಂಪ್ಲಿಮೆಂಟ್ ಫ್ಯಾಕ್ಟರಿಯನ್ನು ಸ್ಥಾಪನೆಮಾಡಲು ಮಂಡ್ಯದಲ್ಲಿ ಅವಕಾಶವಿದೆ. ನಮ್ಮ ರೈತರು ಇನ್ನೂ ಹಳೆಯ ಕಾಲದ ಗುದ್ದಲಿ, ಹಳೆಯ ಕಾಲದ ನೇಗಿಲು ಇಂಥವುಗಳನ್ನೇ ಉಪಯೋಗಿಸುತ್ತಿದ್ದಾರೆ. ಆದಕಾರಣ ಆಧುನಿಕ ಉಪಕರಣಗಳ ಕಾರ್ಖಾನೆಯನ್ನು ಮಾಡಬೇಕೆಂದು ಕೇಳಿದ್ದೇನೆ. ಅದಕ್ಕೆ ಇನ್ನೂ ಜಾಗಸಿಕ್ಕಿಲ್ಲ ಮಂಡ್ಯ ಜಿಲ್ಲೆಯಲ್ಲಿ ಎಂದು ಹೇಳಿದರು. ಇದು ಐದು ವರ್ಷದ ಯೋಜನೆ, ತಲೆತಲಾಂತರದ ಯೋಜನೆಯಲ್ಲವೆಂದು ನಾನು ವ್ಯವಸಾಯ ಸಚಿವರಿಗೆ ಎಚ್ಚರಿಕೆ ಕೊಟ್ಟು ಹೇಳುತ್ತಿದ್ದೇನೆ. ಇನ್ನು ನಾಲ್ಕು ವರ್ಷದ ಅವಧಿ ಇದೆ. ಇದು ಅವರ ಮತ್ತು ನಮ್ಮ ಗೌರವವನ್ನು ಕಾಪಾಡತಕ್ಕ ಯೋಜನೆ, ದೇಶದ ಭವಿಷ್ಯವನ್ನು, ಇಡೀ ದೇಶದ ಆರ್ಥಿಕಸ್ಥಿತಿಯನ್ನು ಹೆಚ್ಚಿಸತಕ್ಕ ಪ್ರಶ್ನೆಯನ್ನೊಳಗೊಂಡಿರುವ ಪ್ರಶ್ನೆ. ಇದರ ಬಗ್ಗೆ ಉದಾಸೀನ ಮಾಡಬಾರದು. ಯಾವ ಅಧಿಕಾರಿಗಳು ಉದಾಸೀನ ಮಾಡಿದ್ದಾರೋ ಅವರ explanation ಕರೆಯಬೇಕು, ಅವರಿಗೆ ಸರಿಹೂದ ಶಿಕ್ಷೆಯನ್ನು ಕೊಡಬೇಕು. ಇಲ್ಲವಿದ್ದರೆ ಸರ್ಕಾರಕ್ಕಾಗಲೀ ನಮಗಾಗಲೀ ಗೌರವ ಬರುವುದಿಲ್ಲ. ಇಡೀ ದೇಶವೇ ಮಂಡ್ಯ ಜಿಲ್ಲೆಯನ್ನು ನೋಡುತ್ತಿದೆ. ಸರ್ಕಾರದವರು ಏನು ಉದ್ದೇಶದಿಂದ ಪರೀಕ್ಷಾಕೇಂದ್ರವಾಗಿ ಮಾಡಬೇಕೆಂದು ಮಂಡ್ಯ ಜಿಲ್ಲೆಯಲ್ಲಿ ಮಾಡಿದ್ದಾರೆಂದರೆ, ಅದನ್ನು ನೋಡಿ ಪಕ್ಕದ ರೈತರು ಕಲಿತುಕೊಂಡು ಬರಬೇಕೆಂದು ಮಾಡಿದ್ದಾರೆ

(ಶ್ರೀ ಜಿ. ಮಾದೇಗೌಡ)

ನಿಜವಾಗಿಯೂ ಈ ಯೋಜನೆ ಅಲ್ಲಿ ಅವು ಯಶಸ್ವಿಯಾಗುವುದಿಲ್ಲವೆಂದು ಹೇಳುತ್ತಾರೆ. ಈಗಲಾದರೂ ಕಾಲಮಿಂಚಿಹೋಗಿಲ್ಲ. ಈ ಪ್ರಶ್ನೆ ದೇಶದ ಭವಿಷ್ಯ, ದೇಶದ ಆರ್ಥಿಕ ಸ್ಥಿತಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತೇನೆ.

ಎರಡನೆಯದಾಗಿ, ಸಹಕಾರ ಸಂಘಗಳ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ Package plan ವ್ಯರ್ಥವೆ ?

ಶ್ರೀ ಜಿ. ನಾರಾಯಣ ಗೌಡ.—ಮಾನ್ಯ ಸದಸ್ಯರು ಹೋದ ವರ್ಷದ ಉತ್ಪತ್ತಿ ಎಷ್ಟು, ಈ ವರ್ಷದ ಉತ್ಪತ್ತಿ ಎಷ್ಟು ಎನ್ನುವುದನ್ನು ಹೇಳಬಲ್ಲರೆ ? ಅವರಲ್ಲಿ ಅಂಕಿ ಅಂಶಗಳಿವೆಯೆ ?

ಶ್ರೀ ಜಿ. ಮಾದೇ ಗೌಡ.—ನನ್ನಲ್ಲಿಲ್ಲ, ನಿಮಗೇ ಗೊತ್ತಿದೆ.

ಶ್ರೀ ಜಿ. ನಾರಾಯಣ ಗೌಡ.—ಸರಿಯಾಗಿ ತಿಳಿಯದೆ ಹೇಗೆ ಹೇಳುತ್ತಾರೆ.

ಶ್ರೀ ಜಿ. ಮಾದೇ ಗೌಡ.—ನಾನು ರೈತ. ಹೊರಗಿನಿಂದ ಬಂದ ಜನ, ತಮ್ಮ ಜಮೀನಿಲ್ಲದಿರುವ ಸ್ಥಳದಿಂದ ಬಂದ ಜನರು ಚೆನ್ನಾಗಿದೆ ಎಂದು ಹೇಳಬಹುದು. ಆದರೆ ಮೂವತ್ತು ವರ್ಷದಿಂದ ವ್ಯವಸಾಯಮಾಡಿರತಕ್ಕ ಜನ ನಾವು ಮಂಡ್ಯ ಜಿಲ್ಲೆಯಲ್ಲಿ ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಬೆಳೆ ಹೇಗಿವೆ, ಪ್ಯಾಕೇಜ್‌ಡೀಲ್ ಹೇಗಿದೆ ಎನ್ನುವುದನ್ನು ನೋಡಿಕೊಂಡು ಬಂದಿರುವ ಜನ ನಾವು. ಇದಕ್ಕೆ ಶ್ರೀಮಾನ್ ನಾರಾಯಣ ಗೌಡರು ವಿವರಣೆ ಕೊಡಬೇಕು. ಬಡ್ಜೆಟ್‌ನಲ್ಲಿ ಹಣವನ್ನೊದಗಿಸಿದೆ ಅಧಿಕಾರಿಗಳನ್ನು ಪೋಸ್ಟ್‌ಮಾಡಿಲ್ಲ. Implement Factory ಮಾಡಿಲ್ಲ. ಬುಲ್‌ಡೋಜರ್ಸ್ ಇನ್ನೂ ಕೊಟ್ಟಿಲ್ಲ. ಹೀಗಿರುವಾಗ ಹೇಗೆ ರೈತರನ್ನು ಉದ್ಧಾರ ಮಾಡುತ್ತಾರೆ ? ಅವರು ಉತ್ತರವನ್ನು ನನಗೆ ಹೇಳಬೇಕು.

ಸಹಕಾರ ಸಂಘಗಳ ವಿಷಯದಲ್ಲಿ ಒಂದುಮಾತು ಹೇಳಬೇಕಾಗಿದೆ. ಸಾಧಾರಣವಾಗಿ ಸಹಕಾರ ಸಂಘಗಳ ಮೇಲೆ ದೇಶ ಬೆಳೆಯಬೇಕೆಂಬ ತತ್ವವನ್ನೊಪ್ಪಿದ್ದಾರೆ. ಈ ಸಹಕಾರ ಸಂಘಗಳು ರೈತರಿಗೆ ಧೈರ್ಯವನ್ನು ತಂದುಕೊಟ್ಟಿವೆ, ಉತ್ಸಾಹವನ್ನು ಕೊಟ್ಟಿವೆ. ಹಳ್ಳಿಗಾಡಿನ ಜನರಿಗೆ ಈ ದೇಶದಲ್ಲಿ ನಾವು ಜೀವನ ಮಾಡಬಹುದೆಂಬ ಧೈರ್ಯ ಮತ್ತು ಶಕ್ತಿಯನ್ನು ಕೊಟ್ಟಿವೆ. ಪ್ರತಿಯೊಂದು ಪಂಚಾಯಿತಿಗೂ ಒಂದೊಂದು ಸಹಕಾರ ಸಂಘವಿರಬೇಕೆಂಬ ತತ್ವವನ್ನೊಪ್ಪಿಕೊಂಡಿದ್ದೇವೆ. ಇದರಲ್ಲಿ ಒಂದು ನ್ಯೂನತೆ ನನಗೆ ಕಾಣುತ್ತದೆ. ರೈತರಲ್ಲಿ ಸಾಮಾನ್ಯವಾಗಿ ಈ ಸಹಕಾರ ಸಂಘಗಳು ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ಅನೇಕಸದಸ್ಯರು ಹೇಳಿದ್ದಾರೆ. ಇದಕ್ಕೆ ಮುಖ್ಯಕಾರಣ ಸೆಕ್ರೆಟರಿಗಳೂ ಡೈರೆಕ್ಟರುಗಳೂ ಸರಿಯಾಗಿರುವುದಿಲ್ಲ. ಸರ್ಕಾರದವರು ಸಂಬಳ ಪಡೆಯುವ ಸೆಕ್ರೆಟರಿ ಎಂದು ಏನು ಮಾಡಿದ್ದಾರೋ ಅವರನ್ನು ಸರ್ಕಾರದ ನೌಕರರಾಗಿ ಮಾಡಿಕೊಳ್ಳಬೇಕು. ನೌಕರರಿಗಿರುವ ರಿಕ್ರೂಟ್‌ಮೆಂಟ್ ರೂಲ್ಸ್ ಇವರಿಗೂ ಅನ್ವಯಿಸಬೇಕು. ಇತರ ಸರ್ಕಾರಿ ನೌಕರರಂತೆ ಇವರನ್ನೂ ಒಂದು ಸಹಕಾರ ಸಂಘದಿಂದ ಇನ್ನೊಂದಕ್ಕೆ ವರ್ಗ ಮಾಡತಕ್ಕ ಅವಕಾಶವಿರಬೇಕು. ಇಲ್ಲದಿದ್ದರೆ ಈ ಸಹಕಾರ ಸಂಘಗಳು ಸರಿಯಾಗಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

†ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಯವರೆ, ಈ ದಿವಸ ನಮ್ಮ ಮುಂದೆ ಸರ್ಕಾರದವರು ಅತಿಮುಖ್ಯವಾದ ಹಲವು ಬೇಡಿಕೆಗಳನ್ನಿಟ್ಟಿದ್ದಾರೆ. ಆದರಲ್ಲಿಯೂ ವ್ಯವಸಾಯ ಬಹುಮುಖ್ಯವಾದದು. ದೇಶದಲ್ಲಿ ಶೇಕಡ 70-80 ಜನರು ವ್ಯವಸಾಯ ವೃತ್ತಿಯಿಂದಜೀವನವನ್ನು ಜರುಗಿಸುತ್ತಿದ್ದಾರೆ. ನಮ್ಮ ದೇಶ ಮುಂದುವರಿದಿದೆ, ಪ್ರಗತಿ ಸಾಧಿಸಿದೆ, ಜನತೆಗೆ ಬೇಕಾದ ಜೀವನದ ವಸ್ತುಗಳು ದೊರಕಿವೆ ಎಂದು ಹೇಳುವುದಾದರೆ, ಇವು ಎಷ್ಟರಮಟ್ಟಿಗೆ ದೊರಕಿವೆ ಎಂದು ಅಳತೆ ಮಾಡಬೇಕೆಂದರೆ, ಹಳ್ಳಿಗಳಿಗೆ ಹೋಗಬೇಕು. ಹಣಕಾಸಿನ ಮಂತ್ರಿಗಳು ನಮ್ಮ ಮುಂದೆ ಬಡ್ಜೆಟ್ ಇಟ್ಟಾಗ ದೇಶದಲ್ಲಿ *per capita* income ಹೆಚ್ಚಾಗಿದೆ ಎಂದು ಹೇಳಿದರು. ಇಡೀ ಭಾರತದಲ್ಲಿ ಈ ಹೊತ್ತು ಜಾಸ್ತಿಯಾಗಿರುವ ಉತ್ಪತ್ತಿಯನ್ನು ಗಣನೆಗೆ ತೆಗೆದುಕೊಂಡು ಒಬ್ಬ ವ್ಯಕ್ತಿಗೆ, ಸಂಸಾರಕ್ಕೆ ಇಷ್ಟು ಎಂದು ಲೆಕ್ಕಹಾಕಿದ್ದಾರೆ. ಈ ಹೆಚ್ಚಿನ ವರಮಾನ ಯಾವ ವರ್ಗಕ್ಕೆ, ಯಾವ ಜನರಿಗೆ ತಲುಪಿದೆ, ಯಾವ ಕಸುಬನ್ನು ಮಾಡುವ ಜನರಿಗೆ ತಲುಪಿದೆ ಎಂದು ನೋಡಿದರೆ, ಇದು ಹಳ್ಳಿಯವರಿಗೆ ತಲುಪಿಲ್ಲ. ಹಳ್ಳಿಯವರು ಎಷ್ಟು ದುಡಿದರೂ ಅರ್ಧ ಹೊಟ್ಟೆಗೆ ಸಾಲದು, ಜೀವನವನ್ನು ಸಾಗಿಸುವುದಕ್ಕೆ ಶಕ್ಯವಿಲ್ಲವಾಗಿದೆ. ಹಳ್ಳಿಗಳಿಗೆ ಅನೇಕ ಸೌಲಭ್ಯಗಳನ್ನು ಕೊಟ್ಟಿದ್ದೇವೆ, ಕೆರೆಗಳನ್ನು ಭಾವಿಗಳನ್ನು ಕಟ್ಟಿಸಿದ್ದೇವೆ, ಪಂಪ್ ಸೆಟ್‌ಗಳನ್ನು ಕೊಡುತ್ತಿದ್ದೇವೆ, ಹಾಗೆಯೇ ಅನುಕೂಲಗಳನ್ನು ಸರ್ಕಾರದಿಂದ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ವಾಸ್ತವವಾಗಿ ಖರ್ಚು ಮಾಡುತ್ತಿದ್ದಾರೆ, ದೊಡ್ಡ ದೊಡ್ಡ ಅಣೆಗಳನ್ನು ಕಟ್ಟುತ್ತಿದ್ದಾರೆ, ನೀರಾವರಿ

ಯನ್ನು ಹೆಚ್ಚುಮಾಡಬೇಕೆಂದು ಹೋಗುತ್ತಿದ್ದಾರೆ. ಇಷ್ಟಾದರೂ ಹಳ್ಳಿಗರ ಜೀವನ ಒಂದೇರೀತಿ ಇದೆ. ಒಬೇರಾಯನ ಕಾಲದಲ್ಲಿ ಹೇಗೆ ಕಷ್ಟದಲ್ಲಿ ಜೀವನ ನಡೆಸುತ್ತಿದ್ದರೋ ಹಾಗೆಯೇ ಈಗಲೂ ನಡೆಸುತ್ತಿದ್ದಾರೆ. ಇದಕ್ಕೆ ಕಾರಣ ವ್ಯವಸಾಯದಲ್ಲಿ ಉತ್ಪತ್ತಿ ಕಡಮೆಯಾಗಿದೆ. Extensive cultivation ಆಗಿದೆ. ತುಂಗಭದ್ರ ಮುಂತಾದ ದೊಡ್ಡ ದೊಡ್ಡ ಜಲಾಶಯಗಳ ಕೆಳಗೆ ಹೆಚ್ಚು ವಿಸ್ತೀರ್ಣದಲ್ಲಿ ಬೆಳೆಯಾಗುತ್ತಿದೆ. ಆದರೆ ಒಂದು ಎಕರೆಯಲ್ಲಿ ಎಷ್ಟು ಉತ್ಪತ್ತಿಯಾಗುತ್ತಿದೆ ಎನ್ನು ವುದನ್ನು ಲೆಕ್ಕಹಾಕಿದರೆ, ಕಡಮೆಯಾಗಿದೆ. ಹೀಗೆ ಕಡಮೆಯಾಗಲು ಕಾರಣವೇನೆಂದು ತಿಳಿದುಕೊಳ್ಳ ಬೇಕು.

6-00 P.M.

ಇವತ್ತು ನಮ್ಮಲ್ಲಿ ಅನೇಕರನ್ನು ಜಪಾನಿಗೆ, ಪಾಶ್ಚಾತ್ಯ ದೇಶಗಳಿಗೆ ಕಳುಹಿಸುತ್ತಿದ್ದಾರೆ. ಅವರು ಅಲ್ಲಿ ಹೇಗಿದೆ ಎಂದು ನೋಡಿಕೊಂಡು ಬರುತ್ತಾರೆ. ಆದರೆ ಅವರಿಂದ ನಮಗೆ ಸಾಕಾದಷ್ಟು ಪ್ರಯೋಜನ ಲಭಿಸುತ್ತಿಲ್ಲ. ಈ ದಿವಸ ನಮ್ಮ ದೇಶ ವ್ಯವಸಾಯವನ್ನು ಪ್ರಧಾನವಾಗಿ ಅವಲಂಬಿಸಿರು ವುದರಿಂದ ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟು ರೈತರನ್ನು ಉದ್ಧಾರ ಮಾಡಬೇಕು, ಅವರಿಗೆ ನೆರವು ಕೊಡಬೇಕು, ಜನರ ಜೀವನ ಸುಖಮಯವಾಗಿ ಮಾಡಬೇಕು ಎಂಬ ಉದ್ದೇಶ ಸರಕಾರಕ್ಕಿದೆ. ಆದರೆ ಸರ್ಕಾರ ನೀಡುವ ನೆರವು ಯಾವರೀತಿ ಬೇಕಾದವರಿಗೆ, ಅರ್ಹರಿಗೆ ದೊರೆಯುತ್ತಿದೆ ಎಂದು ಯೋಚನೆ ಮಾಡಬೇಕು. ರೈತ ಈ ದಿವಸ ಜಮೀನನ್ನು ಉಳುತ್ತಾನೆ, ಬೆಳೆ ತೆಗೆಯುತ್ತಾನೆ. ಆದರೆ ವ್ಯವಸಾಯದ ಇಲಾಖೆಯವರು ಇಂಥ ಭೂಮಿಯಲ್ಲಿ ಇಂಥ ಬೆಳೆ ತೆಗೆಯಬೇಕು, ಇಂಥ ಸಾರ ಕಡಮೆ ಅದಕ್ಕೆ ಹೀಗೆ ಮಾಡಬೇಕು ಎಂದು ಹೇಳುತ್ತಿಲ್ಲ. ಈಗ ಕೆಲವರು ಒಂದು ಎಕರೆಯಲ್ಲಿ 4 ಪಲ್ಲ ಬತ್ತ ಬೆಳೆದರೆ ಮತ್ತೆ ಕೆಲವರು 30 ಪಲ್ಲ ಬೆಳೆಯುತ್ತಾರೆ. ಆದರೆ ಅದಕ್ಕೇನು ಕಾರಣ, ಬೆಳೆಯಲು ರೈತನಿಗೆ ಶಕ್ತಿಯಿಲ್ಲವೆ, ಅಥವಾ ಆ ಜಮೀನು ಬತ್ತ ಬೆಳೆಯಲು ಯೋಗ್ಯವಲ್ಲವೆ, ಅಥವಾ ಅದಕ್ಕೇನು ಹಾಕಿದರೆ ಹೆಚ್ಚು ಬೆಳೆಯ ಬಹುದು ಎಂಬುದನ್ನು ಇಲಾಖೆಯವರು ಪರಿಶೀಲಿಸಿ ತಿಳಿಸಬೇಕು. ಈಗ ಸುಮ್ಮನೆ ಉಪ್ಪು, ಸಲ್ಫೇಟ್ ಮುಂತಾದ್ದನ್ನು ಕೊಡುತ್ತಿದ್ದಾರೆ. ಅದು ಸಾಲದು. ರೈತರಿಗೆ ಯಾವ ಜಮೀನಿನಲ್ಲಿ ಏನು ಬೆಳೆಯು ವುದು ಒಳ್ಳೆಯದು, ಹೆಚ್ಚು ಬೆಳೆಯಲು ಏನು ಮಾಡಬೇಕು ಎಂಬ ಬಗ್ಗೆ ತಿಳಿವಳಿಕೆ ಕೊಡಬೇಕಾದ್ದು ಅತ್ಯಾವಶ್ಯಕ. ಸಾಯಿಲ್ ಕನ್ಸರ್ವೇಷನ್ ಕಡೆಗೆ ಹೆಚ್ಚು ಗಮನ ಕೊಟ್ಟು ನಾನು ಸೂಚಿಸಿದಂತೆ ರೈತರಿಗೆ ಸರಿಯಾದ ತಿಳಿವಳಿಕೆಯನ್ನು ಈ ವಿಚಾರದಲ್ಲಿ ನೀಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಇನ್ನೊಂದು ಈ ದಿವಸ ಮುಖ್ಯವಾಗಿ ಸೊಸೈಟಿಯಲ್ಲಿ ಉಪ್ಪು ಸಿಕ್ಕುವುದಿಲ್ಲ, ಸೂಪರ್ ಫಾಸ್ಫೇಟ್ ಸಿಕ್ಕುವುದಿಲ್ಲ ಎಂದು ಅನೇಕರು ಹೇಳಿದ್ದಾರೆ. ಆದರೆ ಸೊಸೈಟಿಯಿಂದ ದೊರೆಯುವ ಉಪ್ಪಿಗೆ ಹೆಚ್ಚು ಪ್ರಾಧಾನ್ಯತೆ ಕೊಡಬಾರದು ಎಂದು ರೈತನಾಗಿ ನಾನು ಹೇಳುತ್ತೇನೆ. ಉಪ್ಪು ಈ ದಿವಸವಿಲ್ಲದಿದ್ದರೆ ನಾಳೆಯಾದರೂ ಸಿಕ್ಕುತ್ತದೆ. ಆದರೆ ನಿಜವಾದ ತೊಂದರೆಯೇನಿದೆ ಎಂಬುದನ್ನು ಮನಗಾಣ ಬೇಕಾದ್ದು ಅವಶ್ಯಕ. ಸಾವಿರಾರು ವರ್ಷಗಳಿಂದ ಭೂಮಿಯಲ್ಲಿ ಬೆಳೆ ಬೆಳೆಯುತ್ತಿದ್ದಾರೆ. ಸಾಲದ್ದಕ್ಕೆ ಈಚೆಗೆ ಉಪ್ಪು ಹಾಕುತ್ತಿದ್ದೇವೆ. ಆದುದರಿಂದ ಭೂಮಿಯ ಸಾರ ಕಡಮೆಯಾಗಿದೆ. ಅದಕ್ಕಾಗಿ ಆರ್ಗ್ಯಾನಿಕ್ ವಸ್ತುವನ್ನು, ಪಶುಗಳ ಗೊಬ್ಬರವನ್ನು ಹಾಕಬೇಕು. ಅದನ್ನು ಈಗ ಅಷ್ಟಾಗಿ ಉಪ ಯೋಗಿಸುತ್ತಿಲ್ಲ. ಸಗಣಿಯನ್ನು ಭೂಮಿಗೆ ಹಾಕಬೇಕು. ರಾಗಿ, ಅಕ್ಕಿ ಈ ದಿವಸ ಬೆಳೆಯುವುದು ಸಗಣಿಯಲ್ಲಿ ಎಂದು ಹೇಳುವುದುಂಟು. ಅದರಲ್ಲಿ ಆರ್ಗ್ಯಾನಿಕ್ ವಸ್ತುವಿದೆ. ಅದನ್ನು ಉಪಯೋಗಿಸು ವುದು ಒಳ್ಳೆಯದು. ಈಗ ಕೆಮಿಕಲ್ ಮನ್ಯೂರ್ ಭೂಮಿಗೆ ಹಾಕುತ್ತಿರುವುದರಿಂದ ಭೂಮಿ ಕೆಡುತ್ತಿದೆ. ಪೈರು ಸರಿಯಾಗಿ ಬೇರು ಬಿಡಲು ಅವಕಾಶವಿಲ್ಲದಂತಾಗಿದೆ. ಇದನ್ನು ವ್ಯವಸಾಯದ ಇಲಾಖೆ ಯವರು ಪರಿಶೀಲಿಸಿ ರೈತರಿಗೆ ಸರಿಯಾದ ತಿಳುವಳಿಕೆ ಕೊಡಬೇಕು. ನಮ್ಮ ಕಡೆ ಹೊಗೆಸೊಪ್ಪು, ಮೆಣಸಿನಕಾಯಿ, ಕಬ್ಬು ಮುಂತಾದ್ದನ್ನು ಬೆಳೆಯುತ್ತಾರೆ. ಒಂದು ಬೆಳೆ ತೆಗೆದ ಮೇಲೆ ಬೇರೆ ಯಾವ ಬೆಳೆ ಇಡಬೇಕೆಂಬುದನ್ನು ತಿಳಿಸಬೇಕು. ಅಲ್ಲದೆ ಅನೇಕ ರೋಗಗಳು ಈ ದಿವಸ ಬರುತ್ತಿವೆ. ನಮ್ಮ ಕಡೆ ಅಂದರೆ ಗೌರಿಬಿದನೂರು ತಾಲ್ಲೂಕಿನಲ್ಲಿ ವರ್ಜಿನಿಯ ಟೊಬ್ಯಾಕೊ ಬೆಳೆಯುತ್ತಾರೆ. ಅದಕ್ಕೆ ಬೂದಿರೋಗ ಬರುತ್ತದೆ. ವ್ಯವಸಾಯದ ಇಲಾಖೆ ಸಂಶೋಧನೆ ಮಾಡಿ ಆ ರೋಗಕ್ಕೆ ಔಷಧಿ ಕಂಡು ಹಿಡಿದಿಲ್ಲ. ವ್ಯವಸಾಯದ ಇಲಾಖೆಯು ಸಂಶೋಧನೆಗೆ ಹೆಚ್ಚು ಗಮನ ಕೊಡಬೇಕು. ಮೊನ್ನೆ ಮಂತ್ರಿಗಳು ಈ ಸಂಬಂಧದಲ್ಲಿ ಒಂದು ಯೂನಿವರ್ಸಿಟಿ ಸ್ಥಾಪಿಸುತ್ತೇವೆಂದು ಹೇಳಿದರು. ಅಂಥ ಯೂನಿವರ್ಸಿಟಿಯಲ್ಲಿ ಬರೀ ಗೊಬ್ಬರ ಮುಂತಾದುವುಗಳ ಸರಬರಾಜಿಗೆ ಹೆಚ್ಚು ಗಮನ ಕೊಡದೆ ಸಂಶೋಧನೆಗೆ ಅಧಿಕವಾಗಿ ಖರ್ಚು ಮಾಡಬೇಕು. ಹಾಗೆ ಮಾಡಿ ಹೆಚ್ಚು ಬೆಳೆಯಲು ಅವಕಾಶ ಕಲ್ಪಿಸಿ ಕೊಡಬೇಕು.

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಇನ್ನು ಬೀಜ ಸಕಾಲದಲ್ಲಿ ಕೊಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಸರ್ಕಾರದಿಂದ ಬೀಜ ತೆಗೆದು ಕೊಂಡು ಬೆಳೆಯುವುದು ಸರಿಯಾದ ರೈತ ಮಾಡತಕ್ಕ ಕೆಲಸವಲ್ಲ. ಸರ್ಕಾರದವರು ಇಂಥ ಬತ್ತ ಹಾಕಿದರೆ ಇಷ್ಟು ಜಾಸ್ತಿ ಬೆಳೆ ಬರುತ್ತದೆ, ನೀರು ಕಡಮೆಯಾದರೂ ಪರವಾಗಿಲ್ಲ ಎಂದು ಹೊಸ ಸಂಶೋಧನೆ ನಡೆಸಿ ತಿಳಿಸಿದರೆ ಅನುಕೂಲವೇ ಹೊರತು ಬರೀ ಬೀಜ ಕೊಟ್ಟರೆ ಅಷ್ಟು ಪ್ರಯೋಜನ ವಿಲ್ಲ. ರೈತರಿಗೆ ಬೀಜ ಎಲ್ಲಾದರೂ ಸಿಕ್ಕುತ್ತದೆ. ಇಲಾಖೆ ಬೀಜ ಒದಗಿಸುವುದು ಖಂಡಿತ ಸಾಧ್ಯ ವಲ್ಲ. ಅದು ಬರೀ ಸಂಶೋಧನೆ ಮಾಡಿ ಹೆಚ್ಚು ಉತ್ಪತ್ತಿ ಮಾಡಲು ಸೂಕ್ತ ಸಲಹೆ ನೀಡಬೇಕು. ಬೀಜ ಒದಗಿಸದಿದ್ದರೆ ನಷ್ಟವಿಲ್ಲ, ಅನಾನುಕೂಲವಿಲ್ಲ.

ಈಗ ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಯುವುದಕ್ಕೆ ಎಕ್ಸೈಜ್ ಸುಂಕ ಹಾಕುತ್ತಿದ್ದಾರೆ. ಅದೇ ರೀತಿ ಗೌರೀಬಿದನೂರು ತಾಲ್ಲೂಕಿನಲ್ಲಿ ವರ್ಜಿನಿಯಾ ಟೊಬ್ಯಾಕೊ ಹೆಚ್ಚಾಗಿ ಬೆಳೆಯುವುದಕ್ಕೆ ಅದೊಂದೇ ತಾಲ್ಲೂಕಿಗೆ 30-40 ಲಕ್ಷ ರೂಪಾಯಿಗಳ ಎಕ್ಸೈಜ್ ಡ್ಯೂಟಿ ಕೇಂದ್ರ ಸರ್ಕಾರದವರು ವಿಧಿಸುತ್ತಿದ್ದಾರೆ. ಅದೇ ಮಂಡ್ಯ ಜಿಲ್ಲೆಯಲ್ಲಿ ಕೇಂದ್ರದವರು ಪಡೆಯುವ ಎಕ್ಸೈಜ್ ಡ್ಯೂಟಿಯ ಸ್ವಲ್ಪ ಭಾಗವನ್ನು ಕಬ್ಬು ಬೆಳೆಯುವ ಪ್ರದೇಶದ ರಸ್ತೆ ಮುಂತಾದುವುಗಳ ಅನುಕೂಲಕ್ಕಾಗಿ ಕೊಡುತ್ತಿದ್ದಾರೆ. ಆದರೆ ಹಾಗೆ ನಮಗೆ ಕೊಟ್ಟಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಕೊಡುತ್ತಿರುವುದು ಎಕ್ಸೈಜ್ ಸುಂಕದಿಂದ ಅಲ್ಲ, ಕೇನ್‌ಸೆಸ್‌ನಿಂದ, ಲೋಕಲ್‌ಸೆಸ್‌ನಿಂದ ಕೊಡಲಾಗುತ್ತಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹೇಗಾದರೂ ಇರಲಿ, ನಾವೂ ಹೆಚ್ಚು ತೆರಿಗೆ ಕೊಡುತ್ತೇವೆ. ನಾವು ಕೊಡುವ ತೆರಿಗೆಯಲ್ಲಿ ಸ್ವಲ್ಪ ಭಾಗವನ್ನಾದರೂ ಹೊಗೆಸೊಪ್ಪನ್ನು ಬೆಳೆಯುವ ಪ್ರದೇಶದ ಅನುಕೂಲಕ್ಕೆ ಒದಗಿಸುವುದು ಅವಶ್ಯಕ.

ಇನ್ನೊಂದು ವಿಚಾರ. ಹೊಗೆಸೊಪ್ಪನ್ನು ಬೆಳೆಯುವವನಿಗೆ ಅದರ ಕಷ್ಟ ಸುಖ, ಅದಕ್ಕೆ ನೆರವು ಏನುಬೇಕೆಂಬುದು, ಅದರ ಕ್ವಾಲಿಟಿ ಮುಂತಾದ್ದೆಲ್ಲಾ ಗೊತ್ತಿರುತ್ತದೆ. ಇದು ಅನುಭವಸ್ಥರ ಮಾತು. ಅಂಥವರನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಹಾಕಿದರೆ ಅನುಕೂಲ. ಹಾಗೆ ಮಾಡದೆ ಜಾತಿ ಮತಗಳಿಗೆ ಪ್ರಾಧಾನ್ಯತೆ ನೀಡಿ ಬೇಕಾದವರಿಗೆ ಅವಕಾಶ ಕೊಟ್ಟರೆ ಅಂಥವರಿಗೆ ಹೊಗೆಸೊಪ್ಪಿನ ವಿಚಾರ ಖಂಡಿತ ಗೊತ್ತಿರುವುದಿಲ್ಲ. ಬಹುಶಃ ಅವರು ಸಿಗರೇಟು ಸೇದಬಹುದು. ಈಗ ಸರಿಯಾಗಿ ವಿಚಾರ ತಿಳಿಯದವರನ್ನು ಅಖಿಲಭಾರತ ಟೊಬ್ಯಾಕೊ ರಿಸರ್ಚ್ ಇನ್‌ಸ್ಟಿಟ್ಯೂಟಿಗೆ ಕಳುಹಿಸಿದ್ದಾರೆ. ಅವರಿಗೆ ಬಹುಶಃ ಇಂಗ್ಲಿಷ್ ಕೂಡಬಾರದಿರಬಹುದು ಅಂಥವರನ್ನು ಆ ಸಂಸ್ಥೆಗಳಿಗೆ ಹಾಕಿದರೆ ಏನು ಪ್ರಯೋಜನ ! ಅದರಿಂದ ಬಹಳ ತೊಂದರೆಯಾಗುತ್ತದೆ. ಇಂಥ ಒಂದು ಅನ್ಯಾಯಕ್ಕೆ, ಅಧರ್ಮಕ್ಕೆ ಅವಕಾಶ ಕೊಡಬಾರದೆಂದು ಪ್ರಾರ್ಥಿಸುತ್ತೇನೆ. ಎಲ್ಲೋ ಆಗಲಿ ರೈತರ ಪರವಾಗಿ ಯಾರನ್ನಾದರೂ ಸಂಸ್ಥೆಗಳಿಗೆ ಹಾಕುವಾಗ ಅನುಭವಸ್ಥರನ್ನು ಮಾತ್ರ ಹಾಕಬೇಕು, ಇಲ್ಲದಿದ್ದರೆ ಬೇಕಾದ ಸೌಲಭ್ಯ ದೊರೆಯುವುದಿಲ್ಲ, ರೈತರಿಗೆ ಸಹಾಯವಾಗುವುದಿಲ್ಲ. ವ್ಯವಸಾಯಕ್ಕೆ ಅನುಕೂಲವಾಗುವಂತೆ, ದೇಶಕ್ಕೆ ಒಳ್ಳೆಯದಾಗುವಂತೆ ಸರಿಯಾದ ಅನುಭವಿಗಳನ್ನು ಮಾತ್ರ ಹಾಕಬೇಕು. ಜಾತಿ ಮತ್ತು ಪ್ರಭಾವಗಳಿಗೆ ಅವಕಾಶ ಕೊಡಬಾರದು ಎಂದು ಪ್ರಾರ್ಥಿಸುತ್ತೇನೆ.

ಆಮೇಲೆ ಸಾಮೂಹಿಕ ವ್ಯವಸಾಯ ಎಂದಿದೆ. ನಮ್ಮ ತಾಲ್ಲೂಕಿನಲ್ಲಿ ವಿದುರಾಶ್ವತ್ಥ ಎಂಬ ಗ್ರಾಮವಿದೆ. ಅಲ್ಲಿ ಒಳ್ಳೆಯ ಜಮೀನು, ಬೇಕಾದಷ್ಟು ನೀರಿನ ಸೌಕರ್ಯ ಇದೆ. ಅಲ್ಲಿನ ಭೂಮಿಯನ್ನು ಗಂಡುಭೂಮಿ ಎಂದು ಹೇಳುವುದುಂಟು. ಅಲ್ಲಿ ಸುಮಾರು ಒಂದುಸಾವಿರ ಎಕರೆಗಳಷ್ಟು ಜಮೀನನ್ನು ಸಾಗುವಳಿಗೆ ಕೊಟ್ಟಿದ್ದಾರೆ, ಕೊ-ಆಪರೇಟಿವ್ ಫಾರ್ಮಿಂಗ್‌ಗೆ ವ್ಯವಸ್ಥೆ ಮಾಡಿದ್ದಾರೆ. ಸರ್ಕಾರದವರು ಅದಕ್ಕಾಗಿ ಬಹಳವಾಗಿ ಖರ್ಚುಮಾಡಿರಬಹುದು. ಅಲ್ಲಿ ಒಂದು ಸಂಘ, ಒಕ್ಕೂಟ ಕೂಡಿದ್ದಾರೆ. ಅಲ್ಲಿ ಜಮೀನು ಪಡೆಯಬೇಕೆಂದು ಆಸೆಯಿಂದಿದ್ದವರಿಗೆ, ಜಮೀನಿಲ್ಲದವರಿಗೆ ಭೂಮಿಯನ್ನು ಕೊಟ್ಟಿದ್ದಾರೆ. ಆದರೆ ಲಕ್ಷಗಟ್ಟಲೆ ಅಲ್ಲಿ ಖರ್ಚಾಗುತ್ತಿರುವಾಗ ಯಾವರೀತಿ ಕೆಲಸಕಾರ್ಯ ನಡೆಯುತ್ತಿದೆಯೆಂದು ನೋಡಿದರೆ ನಾಚಿಕೆಯಾಗುತ್ತದೆ. ನಮ್ಮ ವ್ಯವಸಾಯದ ನಾಡಿನಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಬಿಟ್ಟರೆ ಬೇರೆ ಮಾರ್ಗವಿಲ್ಲ, ಅದರಿಂದ ಉದ್ಧಾರವಾಗುತ್ತೇವೆ ಎಂದು ಹೇಳುತ್ತಾರೆ. ಆದರೆ ನಮ್ಮ ಅನುಭವದ ಪ್ರಕಾರ ಅದರಿಂದ ವ್ಯವಸಾಯ ಮುಂದುವರೆಯುವುದಿಲ್ಲ, ನಷ್ಟ ಎಂದು ಗೊತ್ತಾಗಿದೆ. ಅದನ್ನು ಹೇಳಲು ಧೈರ್ಯವಿಲ್ಲದೆ ಕೆಲವರು ಸುಮ್ಮನಿದ್ದಾರೆ. ಹಣವನ್ನು ಸದ್ವಿನಿಯೋಗ ಮಾಡಿದರೆ ಕೀರ್ತಿ ಬರುತ್ತದೆ, ದೇಶಾಭ್ಯುದಯವಾಗುತ್ತದೆ. ಈಗ ನಮ್ಮಲ್ಲಿರುವ ಒಕ್ಕೂಟದಿಂದ ಪ್ರಯೋಜನವಾಗುತ್ತಿಲ್ಲ. ಆದುದರಿಂದ ಕೋ-ಆಪರೇಟಿವ್ ಫಾರ್ಮಿಂಗ್ ಖಂಡಿತ ಮಾಡಬಾರದು, ನಮ್ಮ ತಾಲ್ಲೂಕಿನಲ್ಲಿ ಬಹಳ ಮಟ್ಟಿಗೆ ಜಯಪ್ರದವಾಗಿಲ್ಲ, ಈ ರೀತಿಯ ಅನ್ಯಾಯಕ್ಕೆ ಅವಕಾಶ ಮಾಡಬಾರದು ಎಂದು ಪ್ರಾರ್ಥಿಸುತ್ತೇನೆ.

ಕೋಆಪರೇಷನ್ ಇಲಾಖೆ ವ್ಯವಸಾಯದ ಇಲಾಖೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಎಂದು ಸರ್ಕಾರದವರೂ ಭಾವಿಸಿಕೊಂಡಿದ್ದಾರೆ, ನಾವೂ ತಿಳಿದುಕೊಂಡಿದ್ದೇವೆ. ಪ್ರತಿಯೊಂದು ಹಳ್ಳಿಯಲ್ಲಿ ಸಹಕಾರ ಸಂಘ ಇರಬೇಕು, ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಅದರ ಸದಸ್ಯನಾಗಿರಬೇಕು ಎಂದು ಸರ್ಕಾರದವರು ಒಳ್ಳೆಯ ಸದುದ್ದೇಶವನ್ನು ಇಟ್ಟುಕೊಂಡಿದ್ದಾರೆ. ಆದರೆ ಯಾವ ರೀತಿ ಆ ಸಂಸ್ಥೆಗಳು ನಡೆಯುತ್ತ ಇವೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದರಿಂದ ದೇಶ ಕೆಟ್ಟುಹೋಗುತ್ತದೆ, ಸರ್ಕಾರದ ಸಂಸ್ಥೆ ಹಾಳಾಯಿತು ಎಂದರೆ ಸರ್ಕಾರವೇ ಹಾಳಾದ ಹಾಗೆ, ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ, ಖಂಡಿತವಾಗಿಯೂ ನೀವು ರಾಜ್ಯ ಆಳಲಾರಿರಿ ಎನ್ನುವ ಕೂಗನ್ನು ಇವತ್ತಿನದಿನ ನಾನು ಕೂಗುತ್ತ ಇದ್ದೇನೆ. ಶ್ರೀಮಾನ್ ಮರುಳಪ್ಪನವರು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ, ತಪ್ಪಿದರೆ ಅದು ನಮ್ಮೆಲ್ಲರ ತಪ್ಪಲ್ಲವೇ, ನಾವೂ ನೀವು ಎಲ್ಲರೂ ಐಕ್ಯವಾಗಿ ಹೊಂದಿಕೊಳ್ಳಬೇಕು ಎಂದು ಹೇಳಿದರು. ಅವರಿಗೆ ಇವತ್ತು ಒಂದು ಪ್ರಶ್ನೆ ಕೇಳುತ್ತೇನೆ ಮಂತ್ರಿಗಳು ಯಾರು ಸ್ವಾಮಿ ? ಅವರೂ ನಮ್ಮ ಹಾಗೆಯೇ ಖಾಸಗೀ ಜನರು. ಸುದೈವ ಅಥವಾ ಅದೃಷ್ಟದಿಂದ ಅವರು ಇವತ್ತಿನದಿನ ಮಂತ್ರಿಗಳಾಗಿದ್ದಾರೆ. ಸಹಕಾರಿ ಸಂಸ್ಥೆಗಳಲ್ಲಿ ತಪ್ಪು ಏನಿದೆ ಎಂಬುದನ್ನು ನಮ್ಮ ಸ್ನೇಹಿತರು ಹೇಳಿದರು. ಅವರಿಗೆ ಇವತ್ತು ಹೇಳುತ್ತೇನೆ ಸಹಕಾರ ಸಂಸ್ಥೆ ಉದ್ಧಾರವಾದಷ್ಟೂ ಕೂಡ ಜನಗಳಿಗೆ ವರ್ತಕರಾಗಲಿ ಯಾರೇ ಆಗಲೀ ಶೋಷಣೆ ತಪ್ಪುತ್ತದೆ. ಎಲ್ಲರೂ ಒಗ್ಗಟ್ಟಾಗಿ, ಐಕ್ಯವಾಗಿ ತಮಗಿರತಕ್ಕ ರಿಸೋರ್ಸ್‌ನ್ನು ಕೇಂದ್ರೀಕರಿಸಿಕೊಂಡರೆ ತಮಗೆ ಬರತಕ್ಕ ಲಾಭ ಬರುತ್ತದೆ. ನ್ಯಾಯದೊರಕುತ್ತದೆ, ಸೌಲಭ್ಯ ಸಿಕ್ಕುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾನು ಈ ಸಂದರ್ಭದಲ್ಲಿ ವಿಷಾದದಿಂದ ಹೇಳಬೇಕಾಗಿರುವುದೇನೆಂದರೆ ಈ ಸಹಕಾರ ಸಂಸ್ಥೆಯ ಕೆಲಸ ಚೆನ್ನಾಗಿ ನಡೆಯುತ್ತಿಲ್ಲ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಮೊದಲನೆಯದಾಗಿ ಪ್ರತಿ ಸೊಸೈಟಿಯಲ್ಲೂ ಕೂಡ ನಾನ್ ಅಫೀಷಿಯಲ್ ಡೈರೆಕ್ಟರ್ ಆಗಲೀ ಪ್ರೆಸಿಡೆಂಟರಾಗಲೀ ಆಡಳಿತ ನಡೆಸುತ್ತಿದ್ದಾರೆ. ಈ ಜವಾಬ್ದಾರಿಯನ್ನು ಅವರಿಂದ ತಪ್ಪಿಸಬೇಕೆಂದು ಹೇಳುತ್ತೇನೆ. ಸೊಸೈಟಿಯಲ್ಲಿ ಸಾಲ ಕೊಡುವವರು ಅವರು, ಯಾವ ಕುಟುಂಬವೇ ತೆಗೆದುಕೊಳ್ಳಿ ಒಂದಲ್ಲ ಒಂದು ರೀತಿಯಲ್ಲಿ ಅವರಿಗೆ ಅಧೀನವಾಗಿರಬೇಕು. ಸಾಲ ಸಿಕ್ಕಬೇಕಾದರಾಗಲೀ, ಗೊಬ್ಬರ ಸಿಕ್ಕಬೇಕಾದರಾಗಲೀ ಪ್ರತಿಯೊಂದೂ ಸೊಸೈಟಿ ಮೂಲಕ ಪಡೆಯಬೇಕು. ಸೆಕ್ರೆಟರಿಯನ್ನು ಹೊಂದಿಕೊಂಡು ಹೋಗದಿದ್ದರೆ ಅದನ್ನು ಪಡೆಯಲು ಬ್ರಹ್ಮನಕೈಯಿಂದಲೂ ಆಗುವುದಿಲ್ಲ. ಅವನು ಅನ್ಯಾಯ ಮಾಡಿದರೆ ಪ್ರತಿಭಟಿಸುವ ಶಕ್ತಿ ಅವರಿಗೆ ಇರುವುದಿಲ್ಲ. ಇಂಥಾ ಅನ್ಯಾಯ ಮಾಡಿದ್ದೀರಿ ಎಂದರೆ ಸಿಕ್ಕತಕ್ಕ ಸೌಲಭ್ಯ ದೊರೆಯುವುದಿಲ್ಲ. ಆದ್ದರಿಂದ ಜವಾಬ್ದಾರಿ ಮನುಷ್ಯನಾಗಿರತಕ್ಕ ಆ ಡೈರೆಕ್ಟರ್‌ಸ್ಥಾನದಲ್ಲಾಗಲೀ ಪ್ರೆಸಿಡೆಂಟರ ಸ್ಥಾನದಲ್ಲಾಗಲೀ ದಯವಿಟ್ಟು ಈ ಸೊಸೈಟಿಗಳಲ್ಲಿ ನಾನ್ ಅಫಿಷಿಯಲ್‌ನ್ನು ಖಂಡಿತ ಇಡಬೇಡಿ. ಅಫಿಷಿಯಲ್ ಸೆಕ್ರೆಟರಿ ಅಥವಾ ಪ್ರೆಸಿಡೆಂಟ್ ಇಟ್ಟರೂ ಕೂಡ, 4-5 ಫರ್ಲಾಂಗ್‌ನಲ್ಲಿ 5-6 ಸೊಸೈಟಿಗಳು ಇರುತ್ತವೆ. ಅವುಗಳ ಮೇಲ್ವಿಚಾರಣೆ ಮಾಡಲಿಕ್ಕೆ ತಾಲ್ಲೂಕಿಗೆ ಒಬ್ಬ ಇನ್‌ಸ್ಪೆಕ್ಟರನ್ನು ಹಾಕಿದ್ದೀರಿ. 200, 300 ಹಳ್ಳಿಗಳಿಗೆ ಒಬ್ಬ ಇನ್‌ಸ್ಪೆಕ್ಟರು ಹೋಗಿ ಏನುಮಾಡಬಲ್ಲ ? ಆದ್ದರಿಂದ ಅನೇಕ ಸೊಸೈಟಿಗಳಿರುವ ಕಡೆ ಎರಡು ಭಾಗಗಳನ್ನಾಗಿ ಮಾಡಿ. ನಮ್ಮ ತಾಲ್ಲೂಕಿನಲ್ಲಿ ಒಂದು ಸಹಕಾರ ಸಕ್ಕರೆ ಕಂಪೆನಿ ಇದೆ. ಬಹಳ ಅನ್ಯಾಯವಾಗುತ್ತಾ ಇದೆ. ಸಹಕಾರ ಎಂದರೆ ಏನು ? ಏನಾದರೂ ಭಿನ್ನತೆ ಇದ್ದರೆ, ಬೇದಭಾವ ಇದ್ದರೆ, ದ್ವೇಷ ಇದ್ದ ಪಕ್ಷದಲ್ಲಿ ದೊಡ್ಡ ಮನುಷ್ಯರು ಅಥವಾ ಸಮಾಜದಲ್ಲಿ ಒಳ್ಳೆಯ ಸ್ಥಾನದಲ್ಲಿರುವವರು ಯಾರಿದ್ದಾರೆ ಅವರನ್ನೆಲ್ಲಾ ಒಂದುಗೂಡಿಸಿ, ಸಾಮರಸ್ಯವನ್ನುಂಟುಮಾಡುವುದಲ್ಲವೆ ? ಅದನ್ನು ಬಿಟ್ಟು ಒಂದೇ ಪಾರ್ಟಿ ಒಂದೇ ಪಕ್ಷಕ್ಕೆ ಸೇರಿದ ಜನರಿಗೆ ಆಸ್ಥಾನಕ್ಕೆ ಅರ್ಹತೆ ಇದೆಯೇ ಇಲ್ಲವೇ ಎಂಬುದನ್ನೂ ಸಹ ನೋಡದೇ ಜವಾಬ್ದಾರಿ ಕೊಡುವುದರಿಂದ ಆ ಸಂಸ್ಥೆಗೆ ಧಕ್ಕೆ ಬರುತ್ತದೆ. ಒಂದು ಪಾರ್ಟಿಯವರನ್ನೇ ಸಂಘ ಕಟ್ಟಬೇಕೆಂದರೆ ಅದು ಸಾಧ್ಯವೇ, ನ್ಯಾಯವೇ; ಈ ರೀತಿಮಾಡುತ್ತ ಹೋದರೆ ಪ್ರಪಂಚದಲ್ಲಿ ಯಾರೂ ಬದುಕುವುದಿಲ್ಲ, ಅಂಥಾ ಸಂಸ್ಥೆ ಚಿರಸ್ಥಾಯಿಯಾಗಿ ಇರುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅದರಲ್ಲಿ ನೀವೂ ಇದ್ದೀರಲ್ಲಾ !

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಾನೂ ಇದ್ದೇನೆ. ಆದರೆ ಅದಕ್ಕೆ ಡೈರೆಕ್ಟರು ಯಾರನ್ನು ನೇಮಕ ಮಾಡಿದ್ದೀರಿ ಎಂಬುದನ್ನು ಹೇಳುತ್ತಾ ಇದ್ದೇನೆ. ನಾನು ಅದಕ್ಕೆ ಸಹಕಾರ ಕೊಡುವುದಿಲ್ಲ ಎಂದು ಹೇಳುತ್ತಿಲ್ಲ ಸಕ್ಕರೆ ಕಂಪೆನಿ ಆಗಬೇಕಾಗಿದ್ದರೆ ಒಬ್ಬರ ದೃಷ್ಟಿಯನ್ನಿಟ್ಟುಕೊಂಡು ಕೆಲಸಮಾಡಿದರೆ ಅದು ಊರ್ಜಿತವಾಗುವುದಿಲ್ಲ. ಇಡೀ ತಾಲ್ಲೂಕಿನ ಶ್ರೇಯಸ್ಸನ್ನು ಗಮನದಲ್ಲಿಟ್ಟುಕೊಂಡು ಆ ಕಂಪೆನಿಗಾಗಿ ನಾವುಗಳೆಲ್ಲರೂ ಸೇರಿ ಭುಜಕ್ಕೆ ಭುಜಕೊಟ್ಟು ಕೆಲಸ ಮಾಡಿದ್ದೇವೆ. ಇವತ್ತು ಹೇಳುತ್ತೇನೆ, ಆಕ್ಷೇಪಣೆ ಮಾಡಬೇಕು, ಆರೋಪ ಮಾಡಬೇಕು ಅದಕ್ಕೆ ಕಳಂಕ ತರಬೇಕು, ಎಂದು ನಾನು ಇದನ್ನು ಹೇಳುತ್ತಿಲ್ಲ. ಪ್ರತಿಯೊಬ್ಬ ಮನುಷ್ಯನೂ ತನ್ನ ತಪ್ಪು ತಿಳಿದುಕೊಂಡು ಕೆಲಸ ಮಾಡಬೇಕು. ತನ್ನ ತಪ್ಪನ್ನು ಒಪ್ಪಿಕೊಳ್ಳಬೇಕಾಗಿದ್ದರೆ He must have courage.

ಶ್ರೀ ಎಂ. ವಿ. ಕೃಷ್ಣಪ್ಪ.—ಅವರೂ ನಿಮ್ಮ ಹಾಗೇ ಯುವಕರಲ್ಲವೇ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅವರಿಗೆ ಸಕ್ಕರೆ ಕಂಪನಿ ಆಡಳಿತದಲ್ಲಿ ಏನು ಅನುಭವವಿದೆ ಎಂದು ಚೇರ್ಮನ್ ಪದವಿ ಕೊಟ್ಟಿರಿ ? ಆ ದಿನ ನನ್ನ ಪಕ್ಕದಲ್ಲೇ ಕುಳಿತುಕೊಂಡು ಮಾತನಾಡು ತ್ತಿದ್ದಾಗ ನಿಮ್ಮನ್ನು ಪ್ರಾರ್ಥನೆ ಮಾಡಿದೆ. ಯಾರು ಯಾರಿಗೋ ಅನುಭವವಿಲ್ಲದವರಿಗೆ ಇಂಥಾ ಜವಾಬ್ದಾರಿ ಸ್ಥಾನ ಕೊಡಬೇಡಿ. ಬಹಳ ಅನ್ಯಾಯವಾಗುತ್ತದೆ ಎಂದು ಕೇಳಿಕೊಂಡೆ ಅವರ ಮೇಲೆ ನಾನು ಆಕ್ಷೇಪಣೆ ಮಾಡುತ್ತಿಲ್ಲ. ಅವರಿಗೆ ಸಹಕಾರಕೊಡುತ್ತೇನೆ, ಬೆಂಬಲಕೊಡುತ್ತೇನೆ, ಸಹಕಾರ, ಬೆಂಬಲ ಕೊಡುವುದಿಲ್ಲ ಎನ್ನುವುದರಲ್ಲಿ ಈಗ ಅರ್ಥವಿಲ್ಲ. ಫ್ಯಾಕ್ಟರಿ ಸ್ಥಾಪನೆ ಮಾಡಬೇಕೆಂದು ಪ್ರಯತ್ನ ನಡೆಸಿದಾಗ ಇಡೀ ತಾಲ್ಲೂಕಿನ ದೃಷ್ಟಿ ನಮಗೆ ಇತ್ತೇ ಹೊರತು ಆ ಪಕ್ಷ ಈ ಪಕ್ಷಗಳ ದೃಷ್ಟಿ ಇರಲಿಲ್ಲ. ಕೃಷ್ಣಪ್ಪನವರ ಹೋರಾಟ 20 ವರ್ಷದಿಂದ ಇದೆ. ಇದಕ್ಕೆ ಅವರೇ ಮುಖ್ಯ ಕಾರಣರು. ಒಪ್ಪಿಕೊಳ್ಳು ತ್ತೇನೆ......

Mr. SPEAKER.—Please Conclude.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅರಣ್ಯದ ವಿಚಾರದಲ್ಲಿ ಒಂದೆರಡು ಮಾತು......

Mr. SPEAKER.—The Hon'ble member's time is over.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).— ಮಾನ್ಯ ಅಧ್ಯಕ್ಷರೇ, ತಮ್ಮ ಮುಂದೆ ಇರ ತಕ್ಕ ಈ ಬೇಡಿಕೆಗಳ ವಿಷಯದಲ್ಲಿ 4 ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಬೇಡಿಕೆಗಳು ಬಹಳ ಪ್ರಾಮುಖ್ಯವಾದವು ಗಳು. ದೇಶದ ಎಲ್ಲಾ ನಾಯಕರ ಕಣ್ಣು ಈ ಒಂದು ಬೇಡಿಕೆಯ ಮೇಲೆ ಬಿದ್ದಿದೆ. ಆದರೆ ದುರ್ದೈವ, ಇದು ಒಂದು ಅರಣ್ಯರೋದನ ಎಂದರೆ ತಪ್ಪಾಗಲಾರದು. ಒಂದೇ ಸಮನೆ ರೈತಾಪಿ ವರ್ಗದ ಜನರು ವ್ಯವಸಾಯಕ್ಕೆ ಸಾಕಾದಷ್ಟು ಸೌಲಭ್ಯವಿಲ್ಲದೆ ಧಾರಣವಾಸಿಗಳು ಸ್ಥಿಮಿತಕ್ಕೆ ಬರುತ್ತಾ ಇಲ್ಲ. ಇದನ್ನು ಸರಿಪಡಿಸುವುದಕ್ಕೆ ಇಲಾಖೆಯವರು Cost of production ಏನಾ ಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಿ ಎಂದರೆ ಇವತ್ತಿನವರೆಗೂ ತಿಳಿಸದೆ ಮನಸ್ಸಿಗೆ ಬಂದ ಹಾಗೆ ಬತ್ತ, ರಾಗಿಗಳ ಧಾರಣೆ ಬೀಳುತ್ತಾ ಇದೆ. ಬತ್ತಕ್ಕೆ 21 ರೂಪಾಯಿ ಇದೆ. ಈ ರೀತಿ ರೈತರ ಪರಿಸ್ಥಿತಿ ಯಾವಾಗಲೂ ಅನಿರ್ದಿಷ್ಟವಾಗಿದೆಯೇ ವಿನಾ ಇಂಡಸ್ಟ್ರೀ ಮತ್ತು ಇತರ ಕ್ಷೇತ್ರ ಗಳಲ್ಲಿ ನಿಖರವಾದ ಬೆಲೆಯನ್ನು ಗೊತ್ತುಮಾಡಿ Cost of production ಇಷ್ಟೇ ಎಂದು ನಿಖರ ವಾಗಿ ಹೇಳತಕ್ಕ ಧೈರ್ಯ, ಶಕ್ತಿ ಈ ಒಂದು ಕ್ಷೇತ್ರದಲ್ಲಿ ಇಲ್ಲದೇ ಈ ವ್ಯವಸಾಯದ ಕಸುಬೇ ಕುಸಿಯುತ್ತಾ ಇದೆ ಎಂದು ಹೇಳಿದರೂ ತಪ್ಪಾಗಲಾರದು. ಸ್ವಾಮಿ ಈ ದಿವಸ ಮನಸ್ಸುಬಿಚ್ಚಿ ಹೇಳಬೇಕಾಗಿದೆ. ಗ್ರಾಮಾಂತರಗಳಲ್ಲಿ ಇನ್ನು ಮುಂದೆ ಯಾವ ಒಬ್ಬ ವಿದ್ಯಾವಂತನಾಗಲೀ, ಅನುಕೂಲವಾಗಿರತಕ್ಕವನಾಗಲೀ ಶ್ರೀಮಾನ್ ಕೃಷ್ಣಪ್ಪನವರು ಪದೇಪದೇ ಹೇಳುತ್ತಾ ಇದ್ದಾರೆ ದಡ್ಡನು ವ್ಯವಸಾಯಕ್ಕೆ ಹೋಗುತ್ತಾನೆ ಎಂದು. ಅದು ನಿಜವಾಗಿಯೂ ಹಾಗೆಯೇ ಆಗುತ್ತಿದೆ. ಯಾವ ಬುದ್ಧಿವಂತ ಇದರಲ್ಲಿ ಇರುವುದಕ್ಕಾಗುವುದಿಲ್ಲ. ಇರುವುದೂ ಇಲ್ಲ. ಈಗ ಯಾರು ದುಡಿಮೆ ಮಾಡುತ್ತಾ ಇದ್ದಾರೆ. ಯಾವ್ಯರೀತಿಯ ಕಷ್ಟವನ್ನು ಲಕ್ಷಿಸದೇ ವ್ಯವಸಾಯವನ್ನೇ ನಂಬಿ ಕೆಲಸ ಮಾಡುತ್ತಾ ಇದ್ದಾರೆ. ಅವರ ಮನಸ್ಸು ಬದಲಾವಣೆ ಆಗತಕ್ಕ ಕಾಲ ಬಂದಿದೆ. ಇವತ್ತು ಸರ್ಕಾರಿ ಕ್ಷೇತ್ರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಒಬ್ಬ ಮನುಷ್ಯನಿಗೆ ಕನಿಷ್ಠ ವೇತನ 100 ರೂಪಾಯಿ ಕೊಡುತ್ತಾ ಇದ್ದೀರಿ. ನೀವು ರೈತನ ವಿಷಯದಲ್ಲಿ ಬೇಕಾದಷ್ಟು ಹೇಳುತ್ತೀರಿ. ಆದರೆ ಅವನು ಏನು ಉತ್ಪನ್ನ ಮಾಡುತ್ತಾನೆ ಅದಕ್ಕೆ ತಕ್ಕಂಥ ಒಂದು ಬೆಲೆಯನ್ನು ನಿಗದಿಮಾಡಿ ಅವನಿಗಿರತಕ್ಕಂಥ ಒಂದು ಕಷ್ಟವನ್ನು ನಿವಾರಣೆ ಮಾಡಿ ಎಂದರೆ ಇವತ್ತಿನವರೆಗೂ ಮಾಡದೇ ಉದಾಸೀನ ಮಾಡು ತ್ತಿರುವುದು ಸರಿಯಲ್ಲ. ಇದನ್ನು ನಮ್ಮ ರಾಜ್ಯ ಸರ್ಕಾರದವರು ಕೇಂದ್ರಸರ್ಕಾರದವರಿಗೆ ತಿಳಿಸಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಅಸಾಧ್ಯವಾದ ಆಶೆಯನ್ನಿಟ್ಟುಕೊಂಡು ವ್ಯವಸಾಯದ ಉತ್ಪನ್ನ ಹೆಚ್ಚುಮಾಡಬೇಕೆಂದು ಏನು ಹೊರಟಿದ್ದೇವೆಯೋ ಅದು ಖಂಡಿತ ಸಾಧ್ಯ ವಾಗುವುದಿಲ್ಲ. ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳನ್ನು ಪ್ರಾಜೆಕ್ಟುಗಳಮೇಲೆ ಹಾಕಿ ದ್ದೀರಿ, ನಾಳೆ ದಿವಸ ಮನಸ್ಸಿಗೆ ನೋವು ಆಗತಕ್ಕ ಸಂದರ್ಭ ಬರಬಹುದೇನೋ ಎಂದು ನನಗೆ ಅನಿಸುತ್ತದೆ.

ಸ್ವಾಮಿ ಈ ವ್ಯವಸಾಯದ ಇಲಾಖೆ ಮತ್ತು ವೆಟರಿನರಿ ಇಲಾಖೆಗಳು ಸಣ್ಣ ಇಲಾಖೆಗಳಾದರೂ ಬಹಳ ಮುಖ್ಯವಾದವುಗಳು. ಈ ಇಲಾಖೆಗಳೆರಡೂ ನೇರವಾಗಿ ರೈತರ ಅಭಿವೃದ್ಧಿಗಾಗಿ ಕೆಲಸ ಮಾಡಬೇಕಾಗಿದೆ. ಆದರೆ ಇಲ್ಲಿಗೆ ಐದು-ಆರು ವರ್ಷಗಳಿಂದಲೂ ಈ ಎರಡು ಇಲಾಖೆಗಳಲ್ಲಿಯೂ

ಇರತಕ್ಕ ಆಡಳಿತದ ಮೇಲಧಿಕಾರಿಗಳಿಗೂ ಮತ್ತು ಕೆಳಮಟ್ಟದ ಅಧಿಕಾರಿಗಳಲ್ಲೂ ಒಂದು ಶಿಸ್ತು ಮತ್ತು ಆ ಒಂದು ಹೊಂದಾವಣಿಕೆಯಿಲ್ಲದಿರುವುದರಿಂದ ಈ ಎರಡು ಇಲಾಖೆಗಳಲ್ಲೂ ಅನೇಕ ಲೋಪ ದೋಷಗಳುಂಟಾಗಿವೆ. ಈ ವಿಚಾರ ಮಂತ್ರಿಗಳೂ ಬೇಗ ಮನಗಂಡು ಸರಿಪಡಿಸದೆ ಹೋದರೆ ಈ ಇಲಾಖೆಗಳಿಂದ ರೈತನಿಗೇನೂ ಉಪಕಾರವಾಗುವುದಿಲ್ಲ. ಈ ಎರಡು ಇಲಾಖೆಗಳಲ್ಲೂ ಆಡಳಿತ ಕೆಟ್ಟಿದೆ ಎಂಬುದನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಹೀಗೆ ಈ ದಿವಸ ಮಾನ್ಯ ಮಂತ್ರಿಗಳು ಎಷ್ಟೇ ಉಮೇದಿನಿಂದ ಕೆಲಸ ಮಾಡಬೇಕೆಂದು ಹೊರಟರೂ ಅವೊಂದೂ ಕಾರ್ಯಗತ ವಾಗುತ್ತಿಲ್ಲ. ಈ ವಿಚಾರ ಜವಾಬ್ದಾರಿಯುತರಾದಂಥ ಜನರ ಮನಸ್ಸಿಗೆಲ್ಲ ಗೊತ್ತಿದೆ. ಇಂಥ ವಿಷಯಗಳೇನಾದರೂ ಇದ್ದರೆ ಇವುಗಳಿಗೆ ಸಂಬಂಧಪಟ್ಟ ಮಂತ್ರಿಗಳಲ್ಲಿ ಜನರ ಕುಂದುಕೊರತೆಗಳನ್ನು ಹೇಳುವುದಕ್ಕಾಗಿ ನಾವು ಮಂತ್ರಿಗಳಲ್ಲಿ ಹೋಗಬೇಕಾಗಿರುತ್ತದೆಯೇ ವಿನಾ ಅವರು ನಮ್ಮ ಸ್ನೇಹಿತರು– ನಮ್ಮ ಖಾಸಗೀ ವಿಷಯ ಹೇಳೋಣ ಎಂತ ಯಾರೂ ಮಂತ್ರಿಗಳ ಹತ್ತಿರ ಹೋಗುವುದಿಲ್ಲ. ಈ ಮಂತ್ರಿ ಗಳಾದರೂ ನಮ್ಮ ಹಾಗೇ ಅವರೂ ಮೊದಲು ಸದಸ್ಯರಾಗಿದ್ದು ಈಗ ಆ ಸ್ಥಾನದಲ್ಲಿರಬಹುದು. ಆದರೆ ಇಂಥಾ ವಿಚಾರಗಳನ್ನು ನಾವು ಸಂಬಂಧಪಟ್ಟ ಮಂತ್ರಿಗಳಲ್ಲಿ ಹೋಗಿ ತಿಳಿಸಿದ ಕೂಡಲೆ, ಅವರು ಈ ವಿಚಾರಗಳನ್ನು ತನಿಖೆ ಮಾಡಿಸಿ ನಾವು ಹೇಳುತ್ತಿರುವ ವಿಷಯಗಳಲ್ಲಿ ಸತ್ಯಾಂಶವಿಲ್ಲ–ಅವೆಲ್ಲ ಅಸತ್ಯ ವಾದ ದೂರುಗಳೆಂತ ಹೇಳಲಿ. ಆಗ ನಾವೂ ಸಹ ಸರಿಯಾದ ಅಂಕಿ-ಅಂಶಗಳನ್ನು ಶೇಖರಣೆ ಮಾಡಿ ಕೊಳ್ಳದೆ ಇಂಥ ದೂರುಗಳನ್ನು ಹೇಳಬಾರದು ಎಂದು ನಾವೂ ಸಹ ನಮ್ಮ ಲೋಪ ದೋಷಗಳನ್ನು ಸರಿಪಡಿಸಿಕೊಳ್ಳುತ್ತೇವೆ. ಆದರೆ ಹಾಗೇನೂ ಮಾಡದೆ ಸದಸ್ಯರು ತಿಳಿಸಿದ ದೂರುಗಳ ಬಗ್ಗೆ ಉದಾಸೀನತೆ ಮಾಡುತ್ತಾ ಹೋದರೆ ಆಡಳಿತದಲ್ಲಿ ಇರಬೇಕಾದ ಬಿಗಿ ತಪ್ಪಿ ಹೋಗಿ ಜನ ಸಾಮಾನ್ಯ ರಿಗೆ ಈ ಇಲಾಖೆಗಳಿದ್ದರೂ ನಿಷ್ಪ್ರಯೋಜನವಾಗುತ್ತದೆ. ಇಂಥಾದ್ದಕ್ಕೆಲ್ಲ ಅವಕಾಶವಿರಬಾರದು. ಈ ವಿಚಾರಗಳಿಗೆ ಕೂಡಲೆ ಗಮನ ಕೊಡಬೇಕೆಂತ ಅಧ್ಯಕ್ಷರ ಮೂಲಕ ಸರ್ಕಾರದವರಲ್ಲಿ ಪ್ರಾರ್ಥಿಸಿ ಕೊಳ್ಳುತ್ತೇನೆ.

ಇನ್ನು ಈ ಸಾಯಿಲ್ ಕನ್ಸರ್ವೇಷನ್ ಕೆಲಸ ಬಹಳ ವರ್ಷಗಳಿಂದ ಹಾಗೇ ನಿಂತು ಹೋಗಿದೆ. ಇದರಿಂದ ನ್ಯಾಷನಲ್ ವೇಸ್ಟ್ ತುಂಬಾ ಆಗುತ್ತಿದೆ. ನಾವಿನ್ನೂ ಸಹಸ್ರಾರು ವರ್ಷಗಳ ಕಾಲ ಈ ಈ ಭೂಮಿ ಮೇಲೆ ನಿಂತು ಇದರಿಂದ ಜೀವನ ಮಾಡಬೇಕಾಗಿದೆ. ಇಂಥ ಜನಜೀವನಕ್ಕೆ ಅತ್ಯಗತ್ಯ ವಾದ ಭೂಮಿ ಈ ದಿವಸ ಹಳ್ಳ ತಿಟ್ಟಗಳಿಂದ ಕೂಡಿ ಅಲ್ಲಲ್ಲೆ ದೊಂಗರುಗಳುಬಿದ್ದು ಭೂಮಿ ಅನುಕೂಲಕ್ಕೆ ಬಾರದೆ ನಾಶವಾಗುತ್ತಿದೆ. ಈ ಸಾಯಿಲ್ ಕನ್ಸರ್ವೇಷನ್ ಮಾಡದೆ ನಾವು ಈ ದಿವಸ ಎಷ್ಟೇ ಹಣ ಖರ್ಚುಮಾಡಿದರೂ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈಗಲಾದರೂ ನಾವು ಈ ಸಾಯಿಲ್ ಕನ್ಸರ್ವೇಷನ್ ಬಗ್ಗೆ ನಿಗಾ ತೆಗೆದುಕೊಂಡು ಸಾಕಷ್ಟು ಕಾರ್ಯಕ್ರಮಗಳನ್ನು ಕೂಡಲೆ ಕೈಗೊಂಡು ಅಲ್ಲಲ್ಲೆ ಈ ಬಂಡಿಂಗ್ ಹಾಕತಕ್ಕ ಪ್ರೋಗ್ರಾಂ ಮಾಡಿ ಸಾಯಿಲ್ ಕನ್ಸರ್ವೇಷನ್ ಕೆಲಸವನ್ನು ಮಾಡಲೇಬೇಕು. ಸರ್ಕಾರದವರು ಈ ಬಗ್ಗೆ ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಅಗ್ರಿಕಲ್ಚರ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಇಂಜಿನಿಯರಿಂಗ್ ಸೆಕ್ಷನ್ ಇದೆ ಅಂತ ದೊಡ್ಡದಾಗಿ ಹೆಬ್ಬಾಳದಲ್ಲಿ ಮಾಡಿದ್ದಾರೆ. ಆದರೆ ಇದರಿಂದ ರೈತರಿಗೊಂದು ಹೆಚ್ಚಿನ ಸಹಾಯವಾಗಬಹುದೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈ ಖಾಸಗಿ ಎಂಟರ್‌ಪ್ರೈಜು ಗಳಲ್ಲಿ ಕೆಲಸ ಎಷ್ಟು ಮುತುವರ್ಜಿಯಿಂದ ನಡೆಯುತ್ತಿದೆಯೋ ಅಷ್ಟು ಮುತುವರ್ಜಿಯಿಂದ ಈ ಸರ್ಕಾರಿ ಇಲಾಖೆಗಳಲ್ಲಿ ಕೆಲಸವಾಗುತ್ತಿಲ್ಲ. ಉದಾಹರಣೆಗೆ ಈ ದಿವಸ ಆ ವೆಬ್ಸ್ ಕಂಪನಿಯನ್ನು ತೆಗೆದು ಕೊಂಡರೆ ಅಲ್ಲಿ ಎಷ್ಟು ಜನ ಕೆಲಸಗಾರರಿದ್ದಾರೋ ಅದರ ನಾಲ್ಕರಷ್ಟು ಜನ ಈ ನಮ್ಮ ಸರ್ಕಾರಿ ಆಡಳಿತದಲ್ಲಿರುವ ವರ್ಕ್‌ಷಾಪುಗಳಲ್ಲಿರುತ್ತಾರೆ. ಆದರೆ ಆ ಪ್ರೈವೇಟ್ ಕಂಪೆನಿಗಳವರು ಎಫಿಷಿ ಯೆಂಟಾಗಿ–ಪ್ರಾಂಪ್ಟಾಗಿ ಕೆಲಸ ಮಾಡುವಂತೆ ಇಲ್ಲಿ ಕೆಲಸವಾಗುತ್ತಿಲ್ಲ. ಆದರೆ ಆ ಖಾಸಗೀ ಕಂಪೆನಿಗಳಲ್ಲಿ ಕೆಲಸಮಾಡತಕ್ಕವರೂ ನಮ್ಮವರೇ. ಇಲ್ಲಿ ಕೆಲಸಮಾಡತಕ್ಕವರೂ ನಮ್ಮವರೇ. ಅಲ್ಲಿ ಅವರು ಕೊಟ್ಟಹಾಗೆ ಇಲ್ಲಿಯೂ ಇವರಿಗೆ ಸಂಬಳ ಸಾರಿಗೆಗಳನ್ನು ಕೊಡಲಾಗುತ್ತಿದೆ. ಆದರೆ ಈ ದಿವಸ ಆ ವೆಬ್ಸ್ ಕಂಪೆನಿಯವರು ಪ್ರಾಂಪ್ಟಾಗಿ ಟ್ರ್ಯಾಕ್ಟರುಗಳನ್ನು ಡೆಲಿವರಿ ಕೊಡುತ್ತಿರುವಂತೆ ಈ ಸರ್ಕಾರದವರು ಮಾಡುತ್ತಿಲ್ಲ. ಇದಕ್ಕೆ ಕಾರಣವೇನು? ಈ ದಿವಸ ಸರ್ಕಾರದವರು ಹೀಗೆ ದಕ್ಷತೆಯಿಂದ ಕೆಲಸ ಮಾಡದೆ ಇರುವುದರಿಂದಲೇ ಆ ಪ್ರೈವೇಟ್ ಕಂಪೆನಿಯವರು ಈ ಟ್ರ್ಯಾಕ್ಟರ್ ಸರ್ವೀಸಿಗೆ ಛಾರ್ಜನ್ನು ಬಹಳ ದುಬಾರಿಮಾಡುತ್ತಿದ್ದಾರೆ, ಬಿಲ್ ಜಾಸ್ತಿ ಹಾಕುತ್ತಾರೆ. ಇದರಿಂದ ಆ ರೈತರ ಕಷ್ಟ ಹೇಳ ತೀರದಾಗಿದೆ. ಆದುದರಿಂದ ಈ ದಿವಸ ಆ ಹೆಬ್ಬಾಳದಲ್ಲಿರತಕ್ಕ ಅಗ್ರಿಕಲ್ಚರ್ ಇಂಜಿನಿಯರಿಂಗ್ ಸೆಕ್ಷನ್ ಏನಿದೆ ಅದನ್ನು ಒಂದು ಸುವ್ಯವಸ್ಥೆಗೆ ತಂದು ಅದರಿಂದ ರೈತರಿಗೆ ಹೆಚ್ಚಿನ ಸೌಲಭ್ಯ ಉಂಟಾಗುವಂತೆ ಸರ್ಕಾರದವರು ಸರ್ವಪ್ರಯತ್ನಗಳನ್ನೂ ನಡೆಸಬೇಕೆಂದು ನಾನು ಸಭಾಪತಿಗಳ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಕೆ. ವಿ. ಬೈರೇಗೌಡ)

ಇನ್ನು ನಮ್ಮ ಅಗ್ರಿಕಲ್‌ಚರ್ ಕಾಲೇಜಿನ ವಿಷಯಕ್ಕೆ ಬಂದರೆ ಇದು ಬಹಳ ಮುಖ್ಯವಾದದ್ದು. ಆದರೆ ನಮ್ಮ ನೆರೆ ರಾಜ್ಯದಲ್ಲಿರತಕ್ಕ ಅಗ್ರಿಕಲ್‌ಚರಲ್ ಕಾಲೇಜಿನ ಆಡಳಿತ ಕೇಳಿದರೆ ನಮ್ಮಲ್ಲಿ ಅಂಥ ಆಡಳಿತವಿಲ್ಲವಲ್ಲ ಎಂತ ನಮಗೆ ಬಹಳ ದುಃಖವಾಗುತ್ತದೆ. ನಮ್ಮ ಅಧಿಕಾರಿಗಳೇ ಅಲ್ಲಿಗೆ ಹೋಗಿ ಬಂದವರು. ಅಲ್ಲಿಯ ಆಡಳಿತ ಬಹಳ ಚೆನ್ನಾಗಿರುತ್ತೆಂದು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿರತಕ್ಕ ನಮ್ಮ ಅಧಿಕಾರಿಗಳೇ ಹೇಳುತ್ತಿದ್ದಾರೆ. ನಾನೇ ಈ ಮಾತುಗಳನ್ನು ಅವರ ಬಾಯಿಂದ ಕೇಳಿದ್ದೇನೆ. ಆದರೆ ನಮ್ಮ ಅಂಥ ದಕ್ಷರಾದ, ಶಕ್ತರಾದ ಅಧಿಕಾರಿಗಳಿಲ್ಲವೆಂದೂ ಇಲ್ಲ, ಇಲ್ಲಿಯೂ ಇದ್ದಾರೆ. ಆದರೆ ನಮ್ಮ ಮಂತ್ರಿಗಳು ಆಗಾಗ್ಗೆ ಈ ಅಧಿಕಾರಿಗಳೊಡನೆ ಕುಳಿತು ಮಾತನಾಡಿ, ಅವರಲ್ಲಿ ಒಂದು ಸಂಪರ್ಕ ಬೆಳಸಬೇಕು. ಜನರು ಈ ಇಲಾಖೆಯಿಂದ ಏನನ್ನು ನಿರೀಕ್ಷಿಸುತ್ತಿದ್ದಾರೆಂಬುದನ್ನು ಅವರೊಡನೆ ಸಮಾಲೋಚನೆ ಮಾಡಬೇಕು. ಈಗ ದೇಶದಲ್ಲಿ ಅಲ್ಲಲ್ಲೇ ಈ ಲ್ಯಾಂಡ್ಸ್ ಗ್ರ್ಯಾಂಟ್ ಕಾಲೇಜುಗಳನ್ನು ಸ್ಥಾಪಿಸಲು ಅಮೆರಿಕಾ ದೇಶದವರೂ ಮತ್ತು ನಮ್ಮ ಕೇಂದ್ರ ಸರ್ಕಾರದವರು ಬೇಕಾದಹಾಗೆ ಹಣ ಕೊಡುತ್ತಾರೆ. ಹಾಗಿರುವಾಗ ನಮ್ಮ ಹೆಬ್ಬಾಳದಲ್ಲಿರುವ ಆ ಅಗ್ರಿಕಲ್‌ಚರಲ್ ಮತ್ತು ವೆಟರಿನೆರಿ ಕಾಲೇಜುಗಳಿಗೆ ಸಂಬಂಧಪಟ್ಟ ಹಾಗೆ ಅಲ್ಲಿ ಒಂದು ಲ್ಯಾಂಡ್ಸ್ ಗ್ರ್ಯಾಂಟ್ ಕಾಲೇಜನ್ನು ಸ್ಥಾಪನೆ ಮಾಡಿದರೆ ಅದು ಇಡೀ ದಕ್ಷಿಣ ಭಾರತದಲ್ಲೇ ಬಹಳ ಯಶಸ್ವಿಯಾಗುತ್ತದೆಂದು ನಾನು ನಂಬಿದ್ದೇನೆ. ಆದರೆ ಈ ಒಂದು ಇಲಾಖೆಗೂ ಇನ್ನೊಂದು ಇಲಾಖೆಯ ಅಧಿಕಾರಿಗಳಲ್ಲಿ ಒಂದು ವ್ಯತ್ಯಾಸ ಉಂಟಾಗಿ ಆಡಳಿತ ಅವ್ಯವಸ್ಥೆಯಾಗಿರುತ್ತದೆಂಬ ವಿಷಯವನ್ನು ನಾನು ಸ್ವತಃ ಮನಗಂಡ ಮೇಲೆ ಇದನ್ನು ಮಾನ್ಯ ಮಂತ್ರಿಗಳಾದ ಶ್ರೀ ಎಂ. ವಿ. ಕೃಷ್ಣಪ್ಪನವರಿಗೆ ಅನೇಕ ಸಾರ್ತಿ ಹೇಳಿದ್ದೇನೆ. ಆದರೆ ಅವರು ಅವರಿಗಿರತಕ್ಕ ಉತ್ಸಾಹವನ್ನೆಲ್ಲಾ ಕೇವಲ ಭಾಷಣದ ಮೂಲಕ ಮಾಡಲು ಹೊರಟಿದ್ದಾರೆ. ಆದರೆ ಅವರು ಇಲಾಖೆಯ ಆಡಳಿತದಲ್ಲಿರತಕ್ಕ ಅವ್ಯವಸ್ಥೆಯನ್ನು ಸರಿಪಡಿಸದೆ ಹೋದಲ್ಲಿ ಅವರ ಬರಿ ಆ ಒಂದು ಭಾಷಣವಾಗಲೀ ಅವರ ಉತ್ಸಾಹವಾಗಲೀ ಏನೂ ಕೆಲಸ ಮಾಡಲಾರದೆಂದು ಹೇಳುತ್ತೇನೆ. ಈ ದಿವಸ ನಮ್ಮಲ್ಲಿ ಆಹಾರೋತ್ಪತ್ತಿಯನ್ನು ಜಾಸ್ತಿ ಮಾಡಬೇಕಾಗಿದೆ. ಹೀಗೇ ಈ ಕುರಿಗಳ ಅಭಿವೃದ್ಧಿ ವಿಷಯದಲ್ಲಿ ಈ ದಿವಸ ಬಹಳ ಕಂಠಿತವಾಗಿದೆ. ರೈತಾಪಿ ಕಸುಬುಗಳಲ್ಲಿ ಇದೂ ಸಹ ಒಂದು ಬಹಳ ಮುಖ್ಯವಾದದ್ದು. ಮೈಸೂರು ದೇಶದಲ್ಲೂ ಮೂರು-ನಾಲ್ಕು ಈ ಕುರಿ ಅಭಿವೃದ್ಧಿ ಕೇಂದ್ರಗಳಿರುತ್ತವೆ. ಆದರೆ ಈ ಬೆಂಗಳೂರು ಜಿಲ್ಲೆಯಲ್ಲಿ ಇರತಕ್ಕ ಈ ಕುರಿ ಅಭಿವೃದ್ಧಿ ಕೇಂದ್ರದಲ್ಲಿ ಅಂಥ ಯಾವ ಅಭಿವೃದ್ಧಿಯನ್ನು ಸಾಧಿಸಿರತಕ್ಕದ್ದು ಇಲ್ಲಿಯವರೆಗೆ ನಮ್ಮ ಕಣ್ಣಿಗೆ ಬಿದ್ದಿಲ್ಲ. ಆ ಅಸೋಸಿಯೇಷನ್‌ಗಳವರಿಗೆ ಸರಿಯಾಗಿ ಈ ಕ್ಲಿಪ್ಪಿಂಗ್ ಮೆಷಿನ್‌ಗಳೇ ಸಿಕ್ಕದೆ ಬಹಳ ತೊಂದರೆಪಡುತ್ತಿದ್ದಾರೆ. ಅವುಗಳನ್ನು ಇಲ್ಲಿಯ ತನಕ ಪಾಶ್ಚಿಮಾತ್ಯ ರಾಷ್ಟ್ರಗಳಿಂದಲೇ ತರಿಸಲಾಗುತ್ತಿದೆ. ಆದರೆ ಅವುಗಳನ್ನು ನಮ್ಮಲ್ಲೇ ತಯಾರಿಸುವುದಕ್ಕೆ ಅವಕಾಶವಿದ್ದರೆ ಅದನ್ನು ಪರಿಶೀಲಿಸಿ ಅವರಿಗೆ ಬೇಗ ಆ ಕ್ಲಿಪ್ಪಿಂಗ್ ಮೆಷೀನ್‌ಗಳನ್ನೇ ಒದಗಿಸಬೇಕು. ಇನ್ನು ಈ ಇಲಾಖೆಯಲ್ಲಿ ಸಾಕಷ್ಟು ಟ್ರೈನ್ಡ್ ಡಾಕ್ಟರುಗಳಿಲ್ಲದೆ ಬಹಳ ತೊಂದರೆಯಾಗಿದೆ. ಈ ಕೊರತೆಯನ್ನು ನಿವಾರಣೆ ಮಾಡುವ ತನಕ ಈಗ ರಿಟೈರ್ ಆಗತಕ್ಕ ಡಾಕ್ಟರುಗಳೇನಿರುತ್ತಾರೆ ಅವರನ್ನೇ ಸ್ವಲ್ಪ ಇನ್ನು ಸರ್ವೀಸಿನಲ್ಲಿರುವಂತೆ ಮುಂದುವರಿಸುವುದು ಅಗತ್ಯವೆಂದು ಸಲಹೆ ಮಾಡಬಯಸುತ್ತೇನೆ. ನಮ್ಮ ಈ ಇಲಾಖೆಗಳಲ್ಲಿ ಪರಿಣತರಿಲ್ಲದೆ ಹೋದರೆ ಯಾವ ಅಭಿವೃದ್ಧಿ ಕೆಲಸಗಳೂ ಆಗುವುದಿಲ್ಲ. ಆದುದರಿಂದ ಈ ಇಲಾಖೆಯ ಆಡಳಿತವನ್ನು ಸ್ವಲ್ಪ ಒಳಹೊಕ್ಕು ಮಾನ್ಯ ಮಂತ್ರಿಗಳು ಪರಿಶೀಲಿಸತಕ್ಕದ್ದು ಅಗತ್ಯ. ಅದಕ್ಕೆ ಹೆಚ್ಚು ಗಮನ ಕೊಡಬೇಕೆಂತ ನಾನು ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಹಾರ್ಟಿಕಲ್‌ಚರಲ್ ಇಲಾಖೆಯ ವಿಚಾರ ಹಿಂದೆ ಈ ಇಲಾಖೆ ವ್ಯವಸಾಯದ ಇಲಾಖೆಯ ಆಡಳಿತಕ್ಕೊಳಪಟ್ಟಿತ್ತು. ಈಗ ಇದನ್ನು ಒಂದು ಪ್ರತ್ಯೇಕ ಇಲಾಖೆಯನ್ನಾಗಿ ಮಾಡಲಾಗಿದೆ. ಈ ದಿವಸ ನಮಗೆ ಈ ಆಹಾರದಲ್ಲಿ ಬೀಳತಕ್ಕ ಕೊರತೆಯನ್ನು ಈ ಹಣ್ಣು ಹಂಪಲು-ತರಕಾರಿಗಳಿಂದ ಆ ನಷ್ಟವನ್ನು ಭರ್ತಿ ಮಾಡಿಕೊಳ್ಳಬೇಕಾಗಿದೆ. ಆದುದರಿಂದ ದೇಶಾದ್ಯಂತವೂ ಎಲ್ಲ ಕಡೆಗಳಲ್ಲೂ ಈ ಹಣ್ಣುಗಳನ್ನು ತರಕಾರಿಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯಲು ಅವಕಾಶವಿದೆ. ಆದುದರಿಂದ ಜನರಿಗೆ ಒಳ್ಳೆಯ ಅಂದರೆ ಉತ್ತಮ ಜಾತಿ ಬೀಜಗಳನ್ನೇ ಸರ್ಟಿಫೈಡ್ ಜನರಿಂದ ದೊರೆಯುವಂತೆ ಒಂದು ವ್ಯವಸ್ಥೆ ಮಾಡಬೇಕಾಗಿದೆ. ಹಾಗೇ ಈ ಗ್ರಾಫ್ಟೆಡ್ ಗಿಡಗಳನ್ನು ಸಹ ಸರ್ಟಿಫೈಡ್ ಸ್ಟೇರ್ಸ್ ಮ್ಯಾನ್‌ಗಳಿಂದಲೇ ಸರಬರಾಯಾಗುವಂತೆ ಮಾಡಬೇಕು. ಕೆಲವು ಖೋಟಾ ಗ್ರಾಫ್‌ಟೆಡ್ ಗಿಡಗಳನ್ನು ಐದು ವರ್ಷದಲ್ಲೇ ಫಲಬಿಡುತ್ತೆಂದು ಕೊಟ್ಟಿದ್ದವುಗಳಿಂದ ಯಾವ ಫಸಲೂ ಬಾರದೇ ರೈತರು ಬಹಳ ಅನುಮಾನಕ್ಕೀಡಾಗಿದ್ದಾರೆ. ಹೀಗಾಗಿ ಜನರು ಈ ದಿವಸ ಈ ಹಣ್ಣಿನ ಗಿಡ ಬೇಸಾಯಕ್ಕೆ ಹೆಚ್ಚು ಗಮನ ಕೊಡದಂತಾಗಿದೆ.

ಆ ರೀತಿ ಆಗದ ಹಾಗೆ ಸಾಕದಷ್ಟು ಸಿಬ್ಬಂದಿ ಇಟ್ಟು ಈ cultivation ಮಾಡಬೇಕು. ಬೆಂಗಳೂರು ಜಿಲ್ಲೆಯಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚು ಎಕರೆಗಳಲ್ಲಿ ದ್ರಾಕ್ಷಿ ಬೆಳೆದಿದೆ. ಅದಕ್ಕೆ ಕಾರಣ ಕರ್ತರು ಬೆಂಗಳೂರು ಸಿಟಿ ಕೋ-ಆಪರೇಟಿವ್ ಸೊಸೈಟಿಯವರು. ಇವೊತ್ತಿನ ದಿನ ಅದನ್ನು ಬರೀ ಹಣ್ಣಿನ ರೂಪದಲ್ಲಿ ಬಳಸುವುದಕ್ಕೆ ಸಾಧ್ಯವಿಲ್ಲ; ಅದನ್ನು ಬೇರೆ ರೀತಿಯಲ್ಲಿ ಪರಿವರ್ತನೆ ಮಾಡಬೇಕೆಂದು ಹತ್ತಾರು ಸಾರಿ ಸರ್ಕಾರದವರ ಗಮನಕ್ಕೂ ವ್ಯವಸಾಯ ಮಂತ್ರಿಗಳಾದ ಶ್ರೀ ನಾರಾಯಣ ಗೌಡರ ಗಮನಕ್ಕೂ ತಂದು ಸೊಸೈಟಿ ಮುಖಾಂತರ ಅಥವಾ ಬೇರೆ ಕ್ಷೇತ್ರದಲ್ಲಿ ದ್ರಾಕ್ಷಿ ಹಣ್ಣಿನಿಂದ 'ವೈನ್' ತಯಾರಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಎಂದು ತಿಳಿಸಿದೆವು. ಇಡೀ ಭಾರತದಲ್ಲಿ ಬೆಂಗಳೂರಿನ ಕಪ್ಪು ದ್ರಾಕ್ಷಿ ಉತ್ತಮವಾದ ಹಣ್ಣು, ಅದರಲ್ಲಿ ಉತ್ತಮವಾದ 'ವೈನ್' ಆಗುತ್ತದೆಂದು ಮೈಸೂರಿನ food technological instituteನವರು ಹೇಳಿದ್ದಾರೆ. ಸರ್ಕಾರ ಇದರ ಕಡೆ ಹೆಚ್ಚಿನ ಗಮನವನ್ನು ಕೊಟ್ಟು 10-12 ಸಾವಿರ ಎಕರೆ ಪ್ರದೇಶದಲ್ಲಿರುವ ದ್ರಾಕ್ಷಿ ಬೆಳೆ ಹಾಳಾಗದಂತೆ ನೋಡಿಕೊಳ್ಳುವುದು ಅವರ ಕರ್ತವ್ಯ. ಈ ಕ್ಷೇತ್ರದಲ್ಲಿ ಪೈಪೋಟಿಗೆ ಸಾಕಾದಷ್ಟು ಅವಕಾಶವಿದೆ. ದ್ರಾಕ್ಷಾರಸ ತೆಗೆಯುವ ಉದ್ಯಮವನ್ನು ಸರ್ಕಾರದವರೂ ಮಾಡದೆ, ಬೇರೆಯವರಿಗೂ ಕೊಡದೆ ನಿಧಾನ ಮಾಡುವುದರಿಂದ ಬಹಳ ನಷ್ಟವಾಗುತ್ತದೆ. ಸರ್ಕಾರದವರು ನಿಧಾನಮಾಡುವುದರಿಂದ ಒಂದೊಂದು seasonನಲ್ಲೂ ಆಗುವ ನಷ್ಟವನ್ನು ತಡೆಯಲಾರದೆ ದ್ರಾಕ್ಷಿಯ ಗಿಡಗಳನ್ನು ತೆಗೆಯುವುದಕ್ಕೆ ಮೊದಲು ಮಾಡಿದ್ದಾರೆ. ಜನರಿಗೆ dicourage ಆಗದ ಹಾಗೆ ದ್ರಾಕ್ಷಾರಸ ತೆಗೆಯುವ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

6-30 P.M.

ಇನ್ನು ಇದಿರತಕ್ಕದ್ದು ಸಹಕಾರ ಸಂಘಗಳು. ನಮ್ಮ ಸ್ನೇಹಿತರು ಹೇಳಿದಂತೆ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳುವುದಕ್ಕೆ ಶಕ್ತಿಕೊಟ್ಟಿದೆ, ಪ್ರತಿಯೊಂದು ಪಂಚಾಯಿತಿಗಳಲ್ಲಿಯೂ Service Co-operatives ಮಾಡಬೇಕೆಂದು ಹೊರಟಿದ್ದಾರೆ. ಅದರ ಆಡಳಿತವನ್ನು ಖಾಸಗೀ ಜನಗಳಿಗೇ ಬಿಟ್ಟಿದ್ದಾರೆ. ಒಂದೊಂದು ಪಂಚಾಯಿತಿಯಲ್ಲಿರುವ ಜನ ನಿಸ್ವಾರ್ಥತೆಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿದೆ ಎಂದು ನೋಡತಕ್ಕ ಕಾಲ ಬಂದಿದೆ. Large Societies ಎಂದು ನಾಲ್ಕೈದು ಪಂಚಾಯಿತಿಗಳಿಗೆ ಒಂದೊಂದು ಸೊಸೈಟಿ ಮಾಡಿ ಉತ್ತಮವಾಗಿ ನಡೆಸುವುದಕ್ಕೆ ಅವರ ವಶಕ್ಕೆ ಕೊಟ್ಟು ಅವು ಚೆನ್ನಾಗಿ ಬೆಳೆದು ಅವುಗಳ ಪ್ರಯೋಜನವಾಗಿದೆ. ನನಗೆ ತಿಳಿದ ಹಾಗೆ ಸರ್ವಿಸ್ ಕೋ-ಆಪರೇಟಿವ್ಸ್‌ನಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ, ಸೊಸೈಟಿಗಳು ರಿಜಿಸ್ಟರಾಗಿ ಹಾಗೆಯೇ ಇದೆ.

ಇವುಗಳ supervisionನಲ್ಲಿ ಅಲ್ಲಿ ಇಲ್ಲಿ ಲೋಪದೋಷಗಳು ಬರುತ್ತವೆ. ಇದಕ್ಕೆ ಬಹುಶಃ ಖಾಸಗಿಯವರಿಗೆ ಕೊಟ್ಟಾಗ, ನಿಸ್ವಾರ್ಥತೆ ಇಲ್ಲದಿರುವಾಗ ಅನ್ಯಾಯ ನಡೆದಾಗ ಅದನ್ನು ನೋಡಿಕೊಳ್ಳುವುದಕ್ಕೆ ಸರ್ಕಾರದ ಯಂತ್ರವಿದೆ. 50-60 ಸೊಸೈಟಿಗಳು ರಿಜಿಸ್ಟರಾದರೆ 10-15 ಮಾತ್ರ ಕೆಲಸಮಾಡುತ್ತವೆ. Co-operative Inspectors ಅಥವಾ Co-operative Extension Officers ಸ್ವಲ್ಪ ತ್ವರಿತದಿಂದ ಕೆಲಸ ಮಾಡಿ, ಸಾಕಾದಷ್ಟು ಸೂಪರ್‌ವಿಷನ್ ಇದ್ದರೆ, ಯಾವ ತರಹ ಲೋಪಕ್ಕೂ ಅವಕಾಶವಿರುವುದಿಲ್ಲ. ಸಾಹುಕಾರರ ಕೈತಪ್ಪಿಸಿ ನೇರವಾಗಿ ಅವರ ಶಕ್ತಿಯಿಂದಲೇ ಸಹಾಯಗಳನ್ನು ಪಡೆಯುವುದಕ್ಕೆ ಉತ್ತಮವಾದ ಕಾಲ ಬಂದಿದೆ. ಈಗಿರುವ supervision ಏನೇನೂ ಸಾಲದು. ಮಾನ್ಯ ಮಂತ್ರಿಗಳು ಇದರ ಕಡೆಗೆ ಗಮನಕೊಟ್ಟು ಸರಿಯಾದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಮದ್ರಾಸಿನಲ್ಲಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಒಬ್ಬ ಮನುಷ್ಯ ದಸ್ತು ಮಾಡಿದನೆಂದರೆ ಕೂಡಲೇ ಕಾನೂನು ಪ್ರಕಾರ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡುತ್ತಾರೆ. ನಮ್ಮಲ್ಲಿ ಸಾಕಾದಷ್ಟು ದಾಕ್ಷಿಣ್ಯಕ್ಕೆ ಪ್ರಭಾವಗಳಿಗೆ ಸಿಕ್ಕಿ ಬೀಳುತ್ತಾರೆ. ಕೆಲವರಂತೂ ಈ ಸೊಸೈಟಿಗಳಿಂದಲೇ ಜೀವನ ಮಾಡುವುದಕ್ಕೆ ಹೋಗಿದ್ದಾರೆ. ಇದಕ್ಕೆಲ್ಲ ಕಾರಣ ಮೇಲ್ಪಟ್ಟ ಅಧಿಕಾರಿಗಳು ಸ್ವಲ್ಪ ಮಟ್ಟಿಗೆ ಅವರನ್ನು ಕಾನೂನು ಪ್ರಕಾರ deal ಮಾಡದೇ ಇರುವುದೇ ಆಗಿದೆ. ಈ ಒಂದು ಧರ್ಮ ಸಂಸ್ಥೆಗಳಲ್ಲಿ ಕೆಲಸ ಮಾಡುವ ಜನ ತಪ್ಪು ಮಾಡಿದಾಗ ಅವರು ಯಾರೇ ಆಗಿರಲಿ ಶಿಕ್ಷೆಗೆ ಗುರಿಪಡಿಸಿದರೆ ಸಹಕಾರ ಸಂಘಗಳು ಅಭಿವೃದ್ಧಿಯಾಗುತ್ತವೆಂದು ತಿಳಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

Mr. SPEAKER.—Before calling upon the next Member may I know the total time required by the Ministers for their reply ?

Sri G. NARAYANA GOWDA.—I require about 45 minutes.

Sri B. RACHAIAH.—I require 45 minutes.

Sri KONDAJJI BASAPPA.—About half an hour.

Mr. SPEAKER.—Roughly 2½ hours may be needed. We will adjust accordingly. Secondly, I would like to know the sense of the House on the question whether we should reserve tentatively time for clarifications or should we discontinue the custom of asking clarifications?

Sri C. J. MUCKANNAPPA.—Whether clarification should be allowed or not is the Chair's discretion.

Mr. SPEAKER.—But I will have to ascertain the sense of the House. Discretion cannot be arbitrary.

Sri C. J. MUCKANNAPPA.—If one or two members want clarifications, I think the Speaker should not shut it out.

Sri V. M. DEO.—When the Ministers are taking such a long time, I think there is no need for clarifications.

Mr. SPEAKER.—I will consider that.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಇವೊತ್ತು ಎರಡು ವಿಚಾರ ಮಾತನಾಡಬೇಕೆಂದಿದ್ದೇನೆ. ಒಂದು ಅಗ್ರಿಕಲ್ಚರ್ ಇನ್ನೊಂದು ಅನಿಮಲ್ ಹಸ್ಬೆಂಡ್ರಿ. ಮೊದಲು ವ್ಯವಸಾಯವನ್ನು ತೆಗೆದುಕೊಂಡು, ಅದರ ಸಂಬಂಧದಲ್ಲಿ ಕಳಿಸಿರುವ ಖೋತಾ ಸೂಚನೆಯಲ್ಲಿ ಸೂಚಿಸಿರುವ item 18, 30, 35 ಮತ್ತು 44ರ ಬಗ್ಗೆ ಮಾತನಾಡುತ್ತೇನೆ. ಇವು ನಾಲ್ಕು ಒಳ್ಳೆಯ ವಿಷಯಗಳು. ಇವು ಯಾವುವೆಂದರೆ Installation of pumpsets, well boring machines, Research and Mechanisation ಇವು ವ್ಯವಸಾಯವನ್ನು ಖಾತ್ರಿ ಮಾಡುತ್ತವೆ. ಹಾಗೆಯೇ ಪಶು ಸಂಗೋಪನ ಇಲಾಖೆಯನ್ನು ತೆಗೆದುಕೊಂಡರೆ cross breeding, control of diseases, increase of animal products ಇವುಗಳ ವಿಚಾರವಾಗಿ ಹೇಳಬಯಸುತ್ತೇನೆ.

ನಾನು ಮೊದಲು ಆರಂಭಕ್ಕೆ ಇಳಿದಾಗ ಪಾಪರ್ ಆಗಿಬಿಟ್ಟೆ. ಆಗ ಏನು ಮಾಡಬೇಕೆಂದು ಯೋಚಿಸಿದೆ ನನ್ನ ಹತ್ತಿರ ಹೆಚ್ಚು ದುಡ್ಡಿರಲಿಲ್ಲ. ಸರ್ಕಾರ ನಡೆಸತಕ್ಕ ಪ್ರತಿಯೊಂದು ಬಾಬಿನಲ್ಲಿಯೂ ನಷ್ಟ ಮಾಡಿಕೊಳುತ್ತದೆಂದು ಕೇಳಿದ್ದೇನೆ. ಅದರ ಪೈಕಿ ಸರ್ಕಾರಕ್ಕೆ ಕಡಮೆ ನಷ್ಟವಾಗುವ ಇಲಾಖೆ ಯಾವುದಿದೆಯೋ ಆ ಇಲಾಖೆ ಮಾಡುವ ಕೆಲಸವನ್ನು ನಾನೂ ಮಾಡೋಣವೆಂದು ತೀರ್ಮಾನಿಸಿದೆ. ಕೋಳಿ ಸಾಗಾಣಿಕೆಯಲ್ಲಿ ಸ್ವಲ್ಪ ಲಾಭವಿತ್ತು ಈಗ ಅದೂ ಕಡಮೆಯಾಗಿದೆ. ಇದಕ್ಕೆ ಕಾರಣವೇನೆಂದರೆ 'ಮಾರ್ಕೆಟಿಂಗ್' ಮಾಡುವಾಗ ಅದರಲ್ಲಿರುವ ನ್ಯೂನತೆಗಳು. ನನ್ನ ಮಾನ್ಯ ಸ್ನೇಹಿತರಾದ ಕೃಷ್ಣಪ್ಪನವರು ಯಾವತ್ತಿಗೂ ಮಾರ್ಕೆಟ್ ಇಲ್ಲದೆ ಇದ್ದರೆ ಆ ವೃತ್ತಿ ಹಾಳಾಗುತ್ತದೆ ಎಂದು ಹೇಳುತ್ತಾರೆ. ಆ ವಿಚಾರದಲ್ಲಿ ನನಗೂ ಅವರಿಗೂ ಭಿನ್ನಾಭಿಪ್ರಾಯವಿಲ್ಲ. ಈ animal productsನಲ್ಲಿ ಲಾಭ ಬರುತ್ತಿಲ್ಲವೆಂದು ಅವರೇ ಹೇಳಿದ್ದಾರೆ. ಇದಕ್ಕೆ ಏನೋ ಒಂದು ಕಾರಣವಿರಬೇಕು. ಮಾನ್ಯ ಮಂತ್ರಿಗಳು ಬಹಳ ದೇಶ ತಿರುಗಾಡಿಕೊಂಡು ಬಂದಿದ್ದಾರೆ. ಅಲ್ಲಿ ಯಾವರೀತಿ ವ್ಯವಸ್ಥೆ ಇದೆ, ಯಾವರೀತಿ ಇದರಿಂದ ಲಾಭ ಬರುವಂತೆ ಮಾಡಬಹುದೆಂಬುದು ಅವರಿಗೆ ಗೊತ್ತಿರಬಹುದು. ನಮ್ಮಲ್ಲಿಯೂ ಸಹ ಇತರ ದೇಶಗಳಲ್ಲಿ ಮಾಡುತ್ತಿರುವಂತೆ ಮಾಡಿ ಸರ್ಕಾರಕ್ಕೆ ನಷ್ಟವಾಗದಂತೆಯೂ, ಜನರಿಗೆ ಪ್ರಯೋಜನವಾಗುವಂತೆಯೂ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇಲ್ಲಿ ಒಂದು ವಿಚಾರವನ್ನು ಹೇಳುತ್ತೇನೆ. ನೀವೆಲ್ಲ ಮಂತ್ರಿಗಳು ಟೂರು ಪ್ರೋಗ್ರಾಂ ಹಾಕಿಕೊಂಡು, ಅಲ್ಲಿ ಜೀಪುಗಳಲ್ಲಿ ಹೋಗಿದ್ದೆವು ಇಲ್ಲಿ ಹೋಗಿದ್ದೆವು ಎಂದು ಹೇಳಿ ರಾಜಕೀಯ ಮಾಡುವುದು ಬೇಡ. ಆ ರೀತಿ ಕಾಂಗ್ರೆಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಡಿಸ್ಟ್ರಿಕ್ಟುಗಳಿಗೆ ಟೂರು ಹೋದಾಗ ಎಲ್ಲೆಲ್ಲಿ ಏನೇನು ಕೆಲಸಗಳಾಗಿವೆ, ಸ್ಕೀಮಿನಂತೆ ಜನಕ್ಕೆ ಉಪಯೋಗವಾಗಿದೆಯೋ ಎಂದು ನೋಡುವುದಕ್ಕೆ ಈ ಮಂತ್ರಿಗಳು ಹೋಗುವುದಿಲ್ಲ. ಸುಮ್ಮನೆ ಬಾಯಲ್ಲಿ ಇಲ್ಲಿಗೊಂದು ಪ್ಲಾನನ್ನು ಇಂಪ್ಲಿಮೆಂಟು ಮಾಡುತ್ತೇವೆ ಎಂದು ಹೇಳುತ್ತಾರೆ. They don't inspect villages. ಒಂದೊಂದು ಡಿಪಾರ್ಟುಮೆಂಟಿಗೂ Relativity ನೆಲ ಇರುವುದಿಲ್ಲ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಒಂದಕ್ಕೊಂದು ಕೋಆರ್ಡಿನೇಷನ್ನೆ ಇಲ್ಲದಿರುವುದು. ಹಿಂದೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಪರದೇಶಗಳಿಗೆ ಟೂರು ಹೋಗಿದ್ದಾಗ ಅಲ್ಲೆಲ್ಲಾ ಡಿಪಾರ್ಟುಮೆಂಟುಗಳು ಸ್ಟೋರಿನ ಮೂಲಕವೇ ಎಲ್ಲ ಉಪಕರಣಗಳನ್ನು ಮಾರು

ತ್ತಿರುವುದನ್ನು ನೋಡಿ ಬಂದಿದ್ದಾರೆ. ಅಂತಹ ಸ್ಟೋರುಗಳು ಇಲ್ಲಿಯೂ ಇದ್ದರೆ ಎಷ್ಟು ಚೆನ್ನಾಗಿರುತ್ತದೆ ಎನ್ನುವುದನ್ನು ಬಾಯಲ್ಲಿ ಹೇಳುತ್ತಾರೆ. ಆ ರೀತಿಯಿಂದ ಒಂದೇ ಒಂದು ಷೋ ರೂಂ ನಮ್ಮ ಬೆಂಗಳೂರಿನಲ್ಲಿ ಮಹಾತ್ಮಾ ಗಾಂಧಿ ರೋಡಿನಲ್ಲಿರುವ ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಎಂಪೋರಿಯಂ ಅಲ್ಲಿರುವ ಹುಡುಗಿಯರೂ ಸಹ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ನಿಜವಾಗಿಯೂ ಇಂತಹ ಷೋ ರೂಮುಗಳು ಇದ್ದರೆ ನೋಡುವುದಕ್ಕೂ ಚೆನ್ನಾಗಿರುತ್ತದೆ. ಈರೀತಿ ಇಲಾಖೆಗಳನ್ನು ಡೆವೆಲಪ್ ಮಾಡಬೇಕು. ಆ ರೀತಿ ಮಾಡುವಾಗ ಎಲ್ಲ ಇಲಾಖೆಗಳ ಮೇಲೆಯೂ ಸರಿಯಾದ ಕಂಟ್ರೋಲ್ ಇಟ್ಟು ಚೆಕ್ ಮಾಡಬೇಕು. ಆ ರೀತಿ ಏನನ್ನೂ ಮಾಡದೆ ಸುಮ್ಮನೆ ಎಲ್ಲವನ್ನೂ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ನಮ್ಮ ರಾಷ್ಟ್ರದಲ್ಲಿ ಎಲ್ಲಿ ಕತ್ತರಿ ಬೀಳುತ್ತದೆ ಯಾವರೀತಿಯಾಗಿ ದುಡ್ಡನ್ನು ತಿನ್ನಬಹುದು ಎನ್ನುವುದನ್ನೆಲ್ಲಾ ಜನ ತಿಳಿದಿದ್ದಾರೆ. ಬೇಕಾದಷ್ಟು ಡಿಪಾರ್ಟುಮೆಂಟುಗಳನ್ನೂ ಮಾಡುತ್ತಾರೆ. ಆದರೆ ಅದನ್ನು ಸರಿಯಾಗಿ feed ಮಾಡುತ್ತಿಲ್ಲ. ಹಳ್ಳಿಗಳಲ್ಲಿ ಹೆಚ್ಚಿನ ಉತ್ಪತ್ತಿ ಮಾಡಿ ಲಾಭ ಸಂಪಾದನೆ ಮಾಡಬೇಕೆಂದು ಹೇಳುತ್ತಾರೆ. ಇದಕ್ಕೆ ಬೇಕಾದಷ್ಟು ಸಾಲ ಕೊಡುತ್ತಾರೆ, ಬಂಡವಾಳ ಹಾಕುತ್ತಾರೆ, ಎಲ್ಲ ಮಾಡುತ್ತಾರೆ, ಪ್ರತಿವರ್ಷವೂ ರಾಷ್ಟ್ರದ ದುಡ್ಡನ್ನು ಹಾಕಿ ಅದರಿಂದ ಸರಿಯಾದ ಲಾಭ ಬರುತ್ತಿದ್ದರೆ ಸರಿಯಾಗಿರುತ್ತಿತ್ತು. ಆ ರೀತಿ ಲಾಭ ಬರುವಂತಹ ಯೋಜನೆ ಮಾಡಿದ್ದೀರಾ ಎಂದರೆ ಏನೂ ಇಲ್ಲ. ನಮಗೆ ಬಂದಿರುವ ಬಳುವಳಿ ಏನು ಎನ್ನುವುದನ್ನು ತಿಳಿದುಕೊಳ್ಳಬೇಕು. ಮೈಸೂರು ಸಂಸ್ಥಾನ ಹಿಂದೆ ಎಲ್ಲರಿಗೂ ಮಾದರಿಯಾದ ಸಂಸ್ಥಾನವೆಂದು ಹೆಸರು ಗಳಿಸಿತ್ತು. ಎಲ್ಲ ಕ್ಷೇತ್ರದಲ್ಲಿಯೂ ಪ್ರಗತಿ ಸಾಧಿಸಿತ್ತು. ಆದರೆ ಈಗಿನ ಕಾಲದಲ್ಲಿ ನೋಡಿದರೆ ಹಿಂದೆ ಈ ಸಂಸ್ಥಾನ ಹಾಗಿತ್ತೋ ಇಲ್ಲವೋ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲ ಜನರೂ ಇದನ್ನು ನೋಡಿ ನಗುತ್ತಿದ್ದಾರೆ. ಇದರ ಅರ್ಥವೇನು ಎನ್ನುವುದನ್ನು ತಾವು ಸರಿಯಾಗಿ ತಿಳಿದುಕೊಳ್ಳಬೇಕು. ಅಮೆರಿಕಾದಲ್ಲಿ ಹಿಂದೆ ಇದ್ದ 'ಲಿಂಕನ್' ಎಂಬುವರು ಎಷ್ಟೋ ವರ್ಷಗಳ ಹಿಂದೆ ಒಂದು ಮಾತು ಹೇಳಿದರು, ಅದು 'Government of the People, Government for the People and Government by the People' ಎಂದು. ಕೆಲವರು ಇಲ್ಲಿ ಹೇಳುತ್ತಾರೆ ಇಲ್ಲಿರುವುದು Government of the People ಎನ್ನುವಂತಿದ್ದಾರೆ. ಇದು ಕಾಂಪೊಂಡು ಗೋಡೆಯಂತಾಗುತ್ತಿತ್ತು. ಅದು ಬೇರೆ ವಿಚಾರ. ಸಾರ್ವಜನಿಕರಿಂದ ಹಣ ಎತ್ತಿಬಿಟ್ಟು ಸಾರ್ವಜನಿಕರಿಗಾಗಿ ನೀರಾವರಿ ಮಾಡುತ್ತೇವೆನ್ನುತ್ತಾರೆ. ಹಿಂದೆ ನಮ್ಮ ಮಹಾರಾಜರೇ ಭಾವಿ ತೆಗೆಸಿ ಜನಕ್ಕೆ ನೀರಾವರಿಗೆ ಸಹಾಯ ಮಾಡುತ್ತಿದ್ದರು.

It was not by the people. ಹಿಂದೆ ಮಹಾರಾಜರು ಚೆನ್ನಾಗಿ ಅರಿತಂತಹವರನ್ನು ದಿವಾನರನ್ನಾಗಿ ನೇಮಿಸಿಕೊಳ್ಳುತ್ತಿದ್ದರು, ಆಗ ಚೆನ್ನಾಗಿ ಕೆಲಸ ನಡೆಸುತ್ತಿದ್ದರು. ಇದರಲ್ಲಿ ಒಂದು ನೈತಿಕ ಪ್ರಶ್ನೆ ಬರುತ್ತದೆ. ಅದೇನೆಂದರೆ ನೀವು ಸಾರ್ವಜನಿಕರಿಂದ ಹಣ ಎತ್ತಿ ಅವರಿಗಾಗಿ ದೇಶಕ್ಕಾಗಿ ಪ್ರೊವೈಡು ಮಾಡುತ್ತಿದ್ದೇವೆ ಎಂದು ಹೇಳುತ್ತ, ನೀವು ಹೆಸರು ಸಂಪಾದಿಸಬಹುದು. ಆದರೆ ಯಾವಾಗ ಕೆಲಸಮಾಡುವುದಕ್ಕೆ ಷುರುಮಾಡಿದ್ದೀರಿ ಅದರಿಂದ ಜನರಿಗೆ ಬರುವ ಪ್ರಯೋಜನ ಏನು ಎಂದು ಯಾರೂ ನೋಡುವುದಕ್ಕೆ ಹೋಗುವುದಿಲ್ಲ. ನಿಜವಾಗಿಯೂ ನೋಡಿದರೆ ಎಷ್ಟು ಇಂಚಿನ ಕಾಲುವೆ ಮಾಡಿದ್ದೀರಿ. ಎಷ್ಟು ಕೊಳಚೆ ಪ್ರದೇಶಗಳನ್ನು ನಿರ್ಮೂಲಮಾಡಿದ್ದೀರಿ ಎನ್ನುವುದನ್ನು ಏನೂ ಹೇಳಲಿಲ್ಲ, ಇದಕ್ಕೆಲ್ಲ ಮೂಲದಾರಿ ಯಾವುದೂ ಎಂದು ಹೇಳಿದ್ದರೆ ಒಳ್ಳೆಯದಾಗಿತ್ತು. ಎಷ್ಟೋ ಕಾರಣಗಳನ್ನು ನಾನು ಶಾಂಪಲ್ ಆಗಿ ಎಷ್ಟೋ ಉದಾಹರಣೆಗಳಾಗಿ ಹೇಳಬಹುದು. ಸ್ವಲ್ಪ ನಿಮ್ಮ ಮಂತ್ರಿ ಮಂಡಲವನ್ನೇ ನೋಡಿ, ನೀವೇನೋ ನಿನ್ನೆ ಮೊನ್ನೆ ಬಂದವರು ನಿಮಗಿಂತ ಹಿಂದೆ ಇದ್ದವರು ಹೇಗೆ ಮಾಡಿದ್ದರು ಎನ್ನುವುದನ್ನು ನೋಡಿಕೊಂಡು ನೀವು ಹಾಗೆಯೇ ಮಾಡಿಕೊಂಡು ಹೋಗುತ್ತಿದ್ದೀರೇ ವಿನಾ ಏನೂ ಬದಲಾವಣೆಯಿಲ್ಲ.

Mr. SPEAKER.—The Hon'ble Member has not come to Agriculture as yet. He has got something original in regard to Agriculture.

ಶ್ರೀ ವಿ. ಎಂ. ದೇವ್.—ನಾನು ಹೇಳುವುದು ಇಷ್ಟು. ನೀರಾವರಿಗೆಂದು ಬಾವಿ ಮಾಡಿಸಿ, ಪಂಪ್‌ಸೆಟ್ಟುಗಳನ್ನೇನೋ ಕೊಡುತ್ತಿದ್ದೀರಿ. ಆದರೆ ಈ ನೀರಿಗೆ ಮೂಲ ಎಲ್ಲಿ, ಎಲ್ಲಿಂದ ಬರುತ್ತದೆ ಎನ್ನುವುದನ್ನು ಹೇಳಲಿಲ್ಲ. ಕೆರೆಗಳು ಆಗಬೇಕು, ರಿಸರ್ವಾಯರು ಆಗಬೇಕು, ಅಣೆಕಟ್ಟು ಆಗಬೇಕು. ಅದರಿಂದ ಕಾಲುವೆ ತೆಗೆದು ನೀರನ್ನು ಉಪಯೋಗಮಾಡಿಕೊಳ್ಳಬೇಕು. ಈ ನೀರಿನ ವಿಚಾರವನ್ನು ನಾನು ಪದೇ ಪದೇ ಇಲ್ಲಿ ಹೇಳುತ್ತಲೇ ಇದ್ದೇನೆ. ಸ್ವಲ್ಪ ನೀರು ಉಪಯೋಗಿಸುವಾಗ ಯಾವ ರೀತಿ ಯಾವ ಯೋಜನೆ ಮಾಡಬೇಕು ಎನ್ನುವಾಗ ಈಗಿನ ಪರಿಸ್ಥಿತಿಯನ್ನು ಸರಿಯಾಗಿ ನೋಡಿಕೊಂಡು ಪಂಪುಗಳನ್ನು ಹಾಕುವುದಕ್ಕಾಗಲೀ, ಕೆರೆಗಳನ್ನು ಕಟ್ಟುವುದಕ್ಕಾಗಲೀ ಯೋಚನೆ ಮಾಡಿ ಮಾಡಬೇಕು. ಇದನ್ನು ಮಾಡಬೇಕಾದರೆ ಡಿಪಾರ್ಟುಮೆಂಟಿಗೂ ಕೂಡ ಖರ್ಚು ಕಡಿಮೆಯಾಗುತ್ತದೆ

(ಶ್ರೀ ವಿ. ಎಂ. ದೇವ್)

ಇದರಿಂದ ಬೇಗ ಕೆಲಸವೂ ಆಗುತ್ತದೆ. ಆಗ ಒಂದು ಕೆರೆಯಾಗಬೇಕಾಗಿದ್ದರೆ, ಮೂರು ತಿಂಗಳಲ್ಲಿ ಆಗುತ್ತದ. ಆಮೇಲೆ ಮೂರು ತಿಂಗಳಲ್ಲಿ ಬೆಳೆಯೂ ಬರುತ್ತದೆ. ಬೆಳೆ ಬಂದರೆ ಅವರಿಂದ ಕಂದಾಯ ಬರುತ್ತದೆ. ಹೀಗೆ ಒಂದು fleetನಂತೆ ಕೆಲಸವಾಗುತ್ತದೆ. ಈಗ ನಾವು ನೋಡಿದರ ಒಂದು ಕೆರೆಯಾಗಬೇಕಾದರೆ ಹತ್ತು ವರ್ಷಗಳು ಬೇಕಾಗುತ್ತದೆ. ಈ ತರಹ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಈ ಡಿಪಾರ್ಟುಮೆಂಟುಗಳಲ್ಲಿ ನೈತಿಕವಾಗಿ ಜನಗಳಿಗೆ ಪವರು ಎಲ್ಲಿಂದ ಜನರೇಟು ಆಗುತ್ತದೆ ಎನ್ನುವುದನ್ನು ಯಾರೂ ನೋಡಿಲ್ಲ. ಇಂಗ್ಲೀಷಿನಲ್ಲಿ ಹೇಳುವಂತೆ Labour Heroism ಇರಬೇಕು. ಪ್ರತಿಯೊಬ್ಬ ಮನುಷ್ಯನಿಂದ ಅವನಿಗೆ ಕೊಟ್ಟಿರುವ ಕೆಲಸದಿಂದ ಒಳ್ಳೆಯದಾಗುತ್ತಿದೆಯೋ ಎನ್ನುವುದನ್ನು ಯೋಚನೆಮಾಡಬೇಕು. ಇದಕ್ಕೆಲ್ಲಾ ಉತ್ತೇಜನ ಮುಖ್ಯ. ಇಂತಹ ಯೋಚನೆ ಮಾಡಬೇಕಾದರೆ, ಮುಖ್ಯವಾಗಿ ಈ ದೇಶದಲ್ಲಿ ಭೂಸುಧಾರಣೆ ಬೇಗ ಬರಬೇಕು. ಅದು ಹೇಗೆ ಬರಬೇಕೆಂದರೆ ಪಟಾಕಿಸರ ಬಂದ ಹಾಗೆ, ಇದರ ಕೆಲಸವನ್ನು ನಿರ್ವಹಿಸಬೇಕು. ಇದಕ್ಕೆ ವಾತಾವರಣವನ್ನು ಕಲ್ಪಿಸಬೇಕು. ಹಾಗೆ ಮಾಡದೇ ಇದ್ದರೆ, ನಿಮ್ಮ ಐಡಿಯಾಗಳೆಲ್ಲಾ ತಲೆಕೆಳಗಾಗುತ್ತದೆ. ಮೊದಲನೆಯದಾಗಿ ನಿಮ್ಮ ನೈತಿಕಬಲ ಕೆಟ್ಟಿದೆ. ಅಗ್ರಿಕಲ್‌ಚರಲ್‌ನಲ್ಲಿ ಕೂಡ ಸ್ವಲ್ಪ ನೈತಿಕವಾಗಿ ನಡೆದರೆ ಬಹು ಉತ್ತಮವಾದ ಕೆಲಸವಾಗುತ್ತದೆ. ಏಕೆಂದರೆ ನೀವು ಡೈರೆಕ್ಟಾಗಿ ಹೋಗುವುದೇ ಕಡಮೆ. ಎಲ್ಲ ಇಂಡೈರೆಕ್ಟ್ ಆಗಿ ರೈತರಮೇಲೆ ಹೊರೆ ಹೊರಿಸುತ್ತಿದ್ದೀರಿ. ನಮ್ಮ ಮಂತ್ರಿಗಳು ಕೆಲವರು ಒಂದೊಂದು ಸಾರಿ ರೈತರಿಗೆ ಸಹಾಯವನ್ನು ಮಾಡೋಣ ಎನ್ನುತ್ತಾರೆ. ಇನ್ನು ಕೆಲವರು ಅರ್ಧ ದುಡ್ಡು ಜನರು ಕೊಟ್ಟರೆ ಆಗ ನೋಡೋಣ ಎನ್ನುತ್ತಾರೆ. ನಮ್ಮ ದೇಶದಲ್ಲಿ ಯೋಜನೆಗಳನ್ನು ತಯಾರು ಮಾಡಬಹುದು. ಆದರೆ ಅದಕ್ಕೆ ಬೇಕಾಗುವ ಕಚ್ಚಾ ಮಾಲುಗಳು ಎಲ್ಲಿಂದ ಬರುತ್ತದೆ ಎನ್ನುವುದನ್ನು ನೋಡಬೇಕು.

ಕೈಗಾರಿಕೆಯ ಕ್ಷೇತ್ರದಲ್ಲಿ ಒಬ್ಬ ಮಂತ್ರಿಗಳು ಒಂದು ತರಹ ಹೇಳಿದರೆ, ಮತ್ತೊಬ್ಬರು ಇನ್ನೊಂದು ತರಹ ಮಾಡಿದರ ಇದರಿಂದ ಜನರಿಗೆ ಅನುಕೂಲವಾಗುವುದಿಲ್ಲ.

ಒಟ್ಟಿನಲ್ಲಿ ನಾನು ಹೇಳುವುದು ನಮ್ಮ ರಾಷ್ಟ್ರಕ್ಕೆ ಲಾಭವಾಗುವಂತೆ ಮಾಡಿ; ಕೈಗಾರಿಕೆಯನ್ನು ಮಾಡುತ್ತೇವೆಂದು ಎಲ್ಲೂ ಹೇಳಲಿಲ್ಲ. ಈ ರೀತಿ ಕೈಗಾರಿಕೆ ಮಾಡುವುದು ಬೇಡ. ಎಷ್ಟೋ ದೊಡ್ಡ ದೊಡ್ಡ ಇಂಡಸ್ಟ್ರೀಸುಗಳೆಂದು ಮಾಡಿ ಕೋಟಿಗಟ್ಟಲೆ ಹಣ ಹಾಕಿದ್ದೀರಿ, ಇದರಿಂದ ಜನತೆಗೆ ಮತ್ತು ದೇಶಕ್ಕೆ ಲಾಭ ಬರುವಂತೆ ಮಾಡಿಕೊಂಡು ಜಾಸ್ತಿಮಾಡಿ ಅದರಂತೆ ನಿಮ್ಮ ಇಲಾಖೆಗಳೂ ಕೆಲಸಮಾಡಲಿ.

ಶ್ರೀಮಾನ್ ಕೃಷ್ಣಪ್ಪನವರ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ನಿಜವಾಗಿಯೂ ಅವರಲ್ಲಿ ನಮ್ಮ ಸಂಸ್ಕೃತಿಯು ದೈವದತ್ತವಾಗಿ ಬಂದಿದೆ. ಅದು ಪ್ರಯತ್ನಪಟ್ಟು ಬೆಳೆಸಿದುದು ಅಲ್ಲ. It is very desirable. ಅದರಿಂದ ಒಳ್ಳೆಯದು ಆಗುತ್ತದೆ. ಅವರು ತಮ್ಮ ಇಲಾಖೆಯ ಮುಖಾಂತರ ಕೆಲವು ಜರ್ಸಿ ಕುದುರೆಗಳನ್ನು ತರಿಸಿದ್ದಾರೆ. ಅದರಲ್ಲಿ ಕೆಲವು ಸತ್ತುಹೋದವು. ಜರ್ಸಿ ಪ್ರಭಾವದಿಂದ ಒಳ್ಳೆಯದಿದ್ದರೆ ಒಳ್ಳೆಯದಾಗುತ್ತದೆ. ಕೆಟ್ಟದಿದ್ದರೆ ಕೆಟ್ಟದು ಆಗುತ್ತದೆ. ಒಟ್ಟಿನಲ್ಲಿ ಹೇಳುವುದು ಇಷ್ಟೇ. ದುಡ್ಡು ಹೆಚ್ಚಾಗಿ ಬರುವ ಬಾಬು ಚೆನ್ನಾಗಿ ಮಾಡಿ ದೇಶವನ್ನು ಮುಂದೆ ತರಬೇಕು. ಸುಮ್ಮನೆ ರೈತರನ್ನು ಸುಲಿದರೆ ಏನೂ ಪ್ರಯೋಜನವಾಗುವದಿಲ್ಲ.

ಅರಣ್ಯ ಇಲಾಖೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಇದರಲ್ಲಿ ಶೇಕಡ 13 ರಷ್ಟು ಅಧಿಕಾರಿಗಳನ್ನು ನೇಮಕ ಮಾಡಿಲ್ಲ. ಸರಕಾರಕ್ಕೆ ಹಾನಿಯಾಗುತ್ತದೆ. ಸಾ ಮಿಲ್ಲುಗಳಿಂದ ಖಾಸಗಿಯವರಿಗೆ ಮರದ ದಿಮ್ಮಿಗಳನ್ನು ಕಳ್ಳ ಸಂತೆಯಲ್ಲಿ ಕಳಿಸುತ್ತಿದ್ದಾರೆ ಶೇಕಡ 13 ರಷ್ಟು ಖರ್ಚು ಏತಕ್ಕೆ ಬರುತ್ತದೆ ಎಂಬುದಕ್ಕೆ ಇದು ಮುಖ್ಯವಾದ ಕಾರಣ. ಮಾನ್ಯ ಸದಸ್ಯರಾದ ಶ್ರೀಮತಿ ಬಸವರಾಜೇಶ್ವರಿಯವರು ಒಂದು ಮಾತು ಹೇಳಿದರು. ಇದರಲ್ಲಿ ಸರಿಯಾಗಿ ಇಟ್ಟುವದಿಲ್ಲ. ಅವರಿಗೆ ಸರಿಯಾಗಿ ಪರಿಹಾರ ಕೊಡಬೇಕೆಂದು ಹೇಳುತ್ತೇನೆ. ನಾವು ಎಲ್ಲರೂ ಹೇಗೆ ಆಗಿದ್ದೇವೆಂದರೆ ಬೋನಿನಲ್ಲಿ ಸುಖವಾಗಿ ಇದ್ದಹಾಗೆ ಇದೆ. ನಾವು ಸುಖ ಕಂಡಿದ್ದೇವೆ ನೀವು ಸುಖ ಕಂಡಿಲ್ಲ ಎಂದಲ್ಲ. ಮೈಸೂರು ರಾಜ್ಯ ಮೊದಲು ಪ್ರಥಮಸ್ಥಾನ ಪಡೆದಿದ್ದಿತು. ಈಗ ಆರನೇ ಸ್ಥಾನಕ್ಕೆ ಬಂದಿದೆ. ಒಳ್ಳೇ ಹೆಸರು ತರಲು ಪ್ರಯತ್ನ ಮಾಡಬೇಕು. ಬಾವಿ ವಿಚಾರದಲ್ಲಿ ಈಗಾಗಲೇ ಅನೇಕ ಸದಸ್ಯರು ಹೇಳಿದ್ದಾರೆ. ಲಿಫ್ಟ್ ಇರಿಗೇಷನ್ ಬಗ್ಗೆ ಹೇಳಿದ್ದಾರೆ. ಡಿಪಾರ್ಟ್‌ಮೆಂಟಿನವರೇ ಎಲ್ಲ ಜವಾಬ್ದಾರಿ ವಹಿಸಿ ಈ ಕೆಲಸ ಮಾಡಿಕೊಡಬೇಕು. ಜನಗಳಿಗೆ ವ್ಯವಸಾಯಕ್ಕೆ ಸಾಕಷ್ಟು ನೀರು ದೊರೆಯುತ್ತಿಲ್ಲ. ಈ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳಬೇಕು.

ಮಂತ್ರಿ ಮಂಡಲದಲ್ಲಿ ನಿಮ್ಮ ನಿಮ್ಮೊಳಗೆ ಕಚ್ಚಾಡುವದರ ಬದಲು ಈ ರೀತಿ ಸಾಂಸ್ಕೃತಿಕ ಕಾರ್ಯಕ್ರಮವನ್ನಿಟ್ಟುಕೊಳ್ಳಬೇಕು. ದೇಶಕ್ಕೆ ಒಳ್ಳೆಯದಾಗುತ್ತದೆ. ದೇವರು ನಿಮಗೆ ಒಳ್ಳೆ ಬುದ್ಧಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಈಗ ಸಭೆಯ ಮುಂದೆ ಮಂಡಿಸಿರತಕ್ಕ ವ್ಯವಸಾಯ, ಪಶು ಸಂಗೋಪನ, ಅರಣ್ಯ, ಗ್ರಾಮಾಭಿವೃದ್ಧಿ, ಸಾಮುದಾಯಿಕ ಅಭಿವೃದ್ಧಿ ಯೋಜನೆ ಸಹಕಾರ, ಈ ಬೇಡಿಕೆಗಳನ್ನು ಸ್ವಾಗತಿಸುತ್ತೇನೆ ಮತ್ತು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ಇಲಾಖೆಯಲ್ಲಿರುವ ಕೆಲವು ನ್ಯೂನತೆಗಳನ್ನು ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಕೆಲವು ಸಲಹೆಗಳನ್ನು ಮಾಡಲು ಬಯಸುತ್ತೇನೆ. ಈ ನ್ಯೂನತೆಗಳನ್ನು ಸರಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ವ್ಯವಸಾಯ ಇಲಾಖೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಒಳ್ಳೇ ಬೀಜದ ಸಲುವಾಗಿ ಸರಕಾರದ ಮೇಲೆ ಆಶ್ರಯ ಮಾಡುವುದು ಸರಿಯಲ್ಲ ಯಾಕೆಂದರೆ ಅನೇಕ ಸಲ ಸರಕಾರಿ ಅಧಿಕಾರಿಗಳು ಬಿತ್ತನೆ ಕಾಲದಲ್ಲಿ ಒಳ್ಳೇ ಬೀಜ ಒದಗಿಸಿಲ್ಲ; ಬಿತ್ತನೆ ಕಾಲ ಆದಮೇಲೆ ಅವರು ಬೀಜ ಒದಗಿಸುತ್ತಾರೆ. ಇದರಿಂದ ಬಹಳ ಅನಾನುಕೂಲವಾಗುತ್ತದೆ. ಅಧಿಕಾರಿಗಳನ್ನು ನಂಬಿಕೊಂಡು ಬಿತ್ತನೆ ಬೀಜ ತರಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಅನೇಕ ರೈತರು ಬಿತ್ತನೆ ಸಲುವಾಗಿ ಮೊದಲೇ ಬೀಜ ಸಿದ್ಧವಾಗಿಟ್ಟುಕೊಂಡಿರುತ್ತಾರೆ. ಆದರೆ ಇದರಲ್ಲಿಯೂ ಒಂದು ಕಷ್ಟ ಇದೆ. ಬಿತ್ತನೆ ಬೀಜ ಸ್ಟಾಕ್ ಮಾಡಿ ಇಟ್ಟುಕೊಳ್ಳಲು ಸರಿಯಾದ ಸ್ಥಳದ ಅನುಕೂಲತೆ ಇಲ್ಲದ ಮೂಲಕ ತೊಂದರೆಯಾಗುತ್ತದೆ. ಇದಕ್ಕೆ ಸರಕಾರ ಸಹಾಯ ಮಾಡಿ, ರೈತರಿಗೆ ಸಾಲ ಕೊಟ್ಟು ಸ್ವಂತ ಕಣಜಗಳನ್ನು ಕಟ್ಟಿಸಿಕೊಳ್ಳುವಂತೆ ಮಾಡಬೇಕು. ಇದಕ್ಕೆ ಸಬ್‌ಸಿಡಿ ಕೊಡಬಹುದು ಇಲ್ಲದಿದ್ದರೆ ಸಾಲ ಕೊಟ್ಟರೆ ಸಾಕು. ಇನ್ನೊಂದು ವಿಚಾರ. ಬಿತ್ತನೆ ಬೀಜಗಳು ಎಷ್ಟು ಬೇಕೋ ಅಷ್ಟು ದೊರಕುತ್ತಿಲ್ಲ. ಆದ್ದರಿಂದ ಅದರ ಪ್ರಮಾಣ ಹೆಚ್ಚಿಸಬೇಕು. ಆಯಾಯ ತಾಲ್ಲೂಕಿನಲ್ಲಿ ಹೋಬಳಿಯಲ್ಲಿ ಬಿತ್ತನೆ ಬೀಜ ಬೆಳೆಯಲು ರೈತರಿಗೆ ಪ್ರೋತ್ಸಾಹ ಕೊಡತಕ್ಕಂಥಾದ್ದು ಸರಕಾರದ ಕರ್ತವ್ಯ. ಜನರೂ ಸಹ ಇದಕ್ಕೆ ಸಹಕರಿಸುತ್ತಾರೆ.

7 P.M.

ಅನೇಕ ಬೆಳೆಗಳಿಗೆ ಎಲ್ಲ ಕಡೆ ರೋಗ ಬಂದು ಬೆಳೆಗಳು ನಾಶವಾಗುತ್ತವೆ. ಇದರಿಂದ ರೈತನಿಗೆ ಬಹಳ ಹಾನಿಯಾಗುತ್ತದೆ. ಎಲ್ಲಿಯಾದರೂ ಬೆಳೆಗೆ ರೋಗ ಬಂದಿದೆ ಎಂದು ತಿಳಿದ ಕೂಡಲೆ, ಕೇಳಿದ ಕೂಡಲೆ ಸಂಬಂಧಪಟ್ಟ ಅಧಿಕಾರಿಗಳು ಜಾಗ್ರತೆ ಅಲ್ಲಿಗೆ ಹೋಗಿ ರೋಗದ ಲಕ್ಷಣವೇನು, ಅದಕ್ಕೆ ಏನು ಪರಿಹಾರೋಪಾಯವಿದೆ ಎನ್ನುವುದನ್ನು ಕಂಡುಹಿಡಿಯಲು ಶ್ರಮವಹಿಸಬೇಕು. ಇಲಾಖೆ ಮುಖ್ಯಾಧಿಕಾರಿ ಈ ಕೆಲಸ ವಹಿಸಿಕೊಳ್ಳಬೇಕು. ಎಲ್ಲಿ ಯಾವ ಯಾವ ರೋಗ ಬಂದಿದೆ ಎನ್ನುವದನ್ನು ಅಲ್ಲಿಗೆ ಹೋಗಿ ನೋಡುವುದಕ್ಕೆ ಅನುಕೂಲವಾಗಲು ಅವರಿಗೆ ಒಂದು ಜೀಪ್ ಕಾರ್ ಒದಗಿಸಬೇಕು ಎಂದು ಸಲಹೆ ಮಾಡುತ್ತೇನೆ.

ಮಂತ್ರಿಗಳು ಹಳ್ಳಿಗಳಿಗೆ ಹೋಗಿ ರೈತನ ಕಷ್ಟ ಸುಖವನ್ನು ತಿಳಿದುಕೊಂಡು ಬರುತ್ತಾರೆ. ಆದರೆ ಈ ಇಲಾಖೆಯ ಮುಖ್ಯಾಧಿಕಾರಿಗಳು ಹಳ್ಳಿಗೆ ಹೋಗುವದಿಲ್ಲ. ರೈತರು ಅಧಿಕಾರಿಯನ್ನು ನೋಡಿರುವದಿಲ್ಲ ಎಂಬುದು ಆಶ್ಚರ್ಯವಾಗುತ್ತದೆ. ಅಧಿಕಾರಿಗಳು ಅನೇಕ ಗಂಟೆ ಕೆಲಸ ಮಾಡುತ್ತಾರೆ. ಆದರೆ ಅವರನ್ನು ಜನರು ನೋಡಿರುವದಿಲ್ಲ. ಮುಖ್ಯಾಧಿಕಾರಿಗಳು ಜನರನ್ನು ಕಂಡು ಜನರ ಮನಸ್ಸನ್ನು ಸಂತೋಷಪಡಿಸಬೇಕು. ಬೆಳೆಗಳಿಗೆ ಬರತಕ್ಕಂಥ ರೋಗ ತಡೆಗಟ್ಟಲು ಏನೇನು ಮಾಡಬೇಕು ಎಂಬುದನ್ನು ತಾನೇ ಜನಗಳಿಗೆ ತಿಳಿಸುವಂತೆ ಬಹಳ ಪ್ರವಾಸ ಮಾಡಬೇಕು. ಟ್ರ್ಯಾಕ್ಟರ್‌ಗಳನ್ನು ಎಲ್ಲ ತಾಲ್ಲೂಕುಗಳಿಗೆ ಒದಗಿಸಬೇಕು. ಈಗ ಇರತಕ್ಕಂಥ ಡ್ರೈವರ್‌ಗಳು ಟ್ರ್ಯಾಕ್ಟರ್ ನಡೆಸುವುದಕ್ಕೆ ಸಾಕಷ್ಟು ಆಸಕ್ತಿ ವಹಿಸುವದಿಲ್ಲ, ಕೆಲಸ ತಪ್ಪಿಸಿಕೊಳ್ಳುತ್ತಾರೆ. ಆದ್ದರಿಂದ ಇತ್ತ ಕಡೆ ಸರಕಾರ ಹೆಚ್ಚಾಗಿ ಗಮನ ಕೊಡಬೇಕು.

ವ್ಯವಸಾಯಕ್ಕೆ ಗೊಬ್ಬರ ಬಹಳ ಮುಖ್ಯವಾದುದು. ರಾಸಾಯನಿಕ ಗೊಬ್ಬರ ಅಮೋನಿಯಂ ಸಲ್ಫೇಟ್ ಚೆನ್ನಾಗಿರುತ್ತದೆ. ಅದು ಲಾಭಕರವೆಂದು ವ್ಯವಸಾಯಗಾರರು ತಿಳಿದಂತಿದೆ. ಆದರೆ, ರಾಸಾಯನಿಕ ಗೊಬ್ಬರಕ್ಕಿಂತಲೂ, ಅಗ್ಗವಾಗಿಯೂ ಮತ್ತು ಹೆಚ್ಚಿನ ಫಸಲನ್ನು ಕೊಡುವುದಾಗಿಯೂ ಇರುವ ಗೊಬ್ಬರವಿದೆ. ನನ್ನ ಸ್ನೇಹಿತರೊಬ್ಬರು ಎರಡು ಮೂರು ಸಾರಿ ರಾಸಾಯನಿಕ ಗೊಬ್ಬರ ಉಪಯೋಗಿಸಿ ಪರೀಕ್ಷೆ ಮಾಡಿದ್ದಾರೆ. ಎಲೆ ಗೊಬ್ಬರ ಸಗಣಿ ಗೊಬ್ಬರ ಸಹ ಉಪಯೋಗಿಸಿ

(ಶ್ರೀ ಆರ್. ಮುನಿಸ್ವಾಮಯ್ಯ)

ಪರೀಕ್ಷಿಸಿದ್ದಾರೆ. ಎಲೆ ಗೊಬ್ಬರದಿಂದ ಉತ್ಪತ್ತಿ ಜಾಸ್ತಿಯಾಗುತ್ತದೆಂದು ಅವರು ಕಂಡು ಹಿಡಿದಿದ್ದಾರೆ. ಆದ್ದರಿಂದ ಎಲೆ ಗೊಬ್ಬರವನ್ನು ಹೆಚ್ಚಾಗಿ ಒದಗಿಸುವುದಕ್ಕೆ ವ್ಯವಸಾಯ ಮತ್ತು ಅರಣ್ಯ ಇಲಾಖೆಯವರು ವ್ಯವಸ್ಥೆ ಮಾಡಬೇಕು.

ನಮ್ಮಲ್ಲಿ ಮಲೆನಾಡಿನಲ್ಲಿ ಬೆಟ್ಟಗುಡ್ಡಗಳಲ್ಲಿ ಬೇಕಾದಷ್ಟು ಅರಣ್ಯ ಇದೆ. ಆ ಅರಣ್ಯಗಳಲ್ಲಿ ಮರಗಳಿಂದ ಎಲೆಗಳು ಉದುರುವ ಕಾಲದಲ್ಲಿ ಅವುಗಳನ್ನು ಗುಡಿಸಿ ವ್ಯವಸಾಯಕ್ಕೆ ಅದರಿಂದ ಹೆಚ್ಚಿಗೆ ಉಪಯೋಗವಾಗುವ ಕಡೆಗೆ ಸಾಗಿಸಬೇಕು. ಸಾಧ್ಯವಾದಷ್ಟು ಸಬ್ಸಿಡಿ ಕೊಟ್ಟು ಅದನ್ನು ರೈತರಿಗೆ ಒದಗಿಸುವ ಏರ್ಪಾಡು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

Mr. SPEAKER.—Evidently the Hon'ble Member will require more time. Is he going to conclude in a few minutes or would he like to continue to-morrow.

ಶ್ರೀ ಆರ್. ಮುನಿಸ್ವಾಮಯ್ಯ.—ನಾನು ನಾಳೆ ದಿವಸ ಮಾತನಾಡುತ್ತೇನೆ.

Mr. SPEAKER.—The House will now rise to meet again to-morrow at 12 Noon.

The House adjourned at Five Minutes past Seven of the Clock to mee again at 12 *Noon On Friday, the 22nd March* 1963.

WD 384—GPB—900—28-8-63

MYSORE LEGISLATIVE ASSEMBLY.

TWENTY-FOURTH DAY.

Friday, 22nd March 1963.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

Mr. SPEAKER.—I would like to make one request. When I call upon the next question, no supplementary should be asked by the Hon. Members for the earlier one, I would appeal to the Hon. Members not to embarrass me by asking supplementaries when I call upon the next question.

STARRED QUESTIONS

(to which oral answers were given)

Construction of a Town Hall in Kumsi Town.

*Q.—32. Smt. RATNAMMA MADHAVA RAO (Shimoga).—

Will the Government be pleased to state :—

(*a*) whether it has come to the notice of the Government that the contribution towards the construction of a Town Hall in Kumsi Town, by the Kumsi Municipal Council, so far back as seven years has not been utilised for the said purpose of the Town Hall construction ;

(*b*) if so, the action they have taken, or propose to take in this behalf ?

A.—Sri K. PUTTASWAMY (Minister for Municipal Administration).—

(*a*) Yes.

(*b*) The estimate has been revised to Rs. 12,000 in June 1962. The Town Municipal Council, Kumsi, has credited Rs. 7,302.94 nP. to the P.W.D. The work will be taken up by the Public Works Department as soon as the balance of Rs. 4,697.06 nP. is credited by the Town Municipal Council, Kumsi, to the P.W.D. accounts.

ಶ್ರೀಮತಿ ರತ್ನಮ್ಮ ಮಾಧವರಾವ್.—ಮೊದಲಿನ ಎಸ್ಟಿಮೇಟು ಎಷ್ಟು ಇದ್ದಿತು? ರಿವೈಜ್ಡ್ ಎಸ್ಟಿಮೇಟು ಯಾವಾಗ ಮಾಡಿದೆ?

ಶ್ರೀ ಕೆ. ಪುಟ್ಟಸ್ವಾಮಿ.—ಮೊದಲಿನ ಎಸ್ಟಿಮೇಟು 9,950 ರೂಪಾಯಿಯಾಗಿತ್ತು. 12,000 ರೂಪಾಯಿ ರಿವೈಜ್ಡ್ ಎಸ್ಟಿಮೇಟು 1-6-1962 ರಲ್ಲಿ ಮಾಡಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಅದು ಬಡ ಮುನಸಿಪಾಲಿಟಿಯಾಗಿರುವುದರಿಂದ ಇಷ್ಟು ದುಡ್ಡು ಕೊಡಲು ಕಷ್ಟವಾಗುತ್ತದೆ. ಅದಕ್ಕೆ ಗ್ರಾಂಟ್ ಕೊಡುತ್ತೀರಾ?

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಗ್ರ್ಯಾಂಟ್ ಕೇಳಿಲ್ಲ ಈ ವರ್ಷ ಬಜೆಟ್ಟಿನಲ್ಲಿ ಉಳಿಯುವ ಹಣ ದಿಂದ 4,697 ರೂಪಾಯಿ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಕಟ್ಟಡದ ಕೆಲಸ ಜಾಗ್ರತೆ ಮಾಡಿಸಿಕೊಡುತ್ತೀರಾ?

ಶ್ರೀ ಕೆ. ಪುಟ್ಟಸ್ವಾಮಿ.—ಹಣ ಕೊಟ್ಟ ಕೂಡಲೆ ಮಾಡಿಸುತ್ತೇವೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಮುನಿಸಿಪಾಲಿಟಿಗೆ ಲೋನ್ ಕೊಡುವುದಕ್ಕಾಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ನಮಗೆ ವರದಿ ಬಂದ ಪ್ರಕಾರ, ಈ ಪುರಸಭೆಯು 4,697-06 ರೂಪಾಯಿಯನ್ನು current year's closing balance ದಿಂದ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

Discontinuance of the XI Standard in Higher Secondary and Multi-Purpose High Schools

*Q.—97. Sri S. KARIAPPA (Kanakapura).—

Will the Government be pleased to state :—

(a) whether it is not a fact that circular instructions have been issued to the effect that the XI Standard in the Higher Secondary and Multi-purpose High Schools should not be opened or continued from the next academic year :

(b) if so, the reasons for doing so ;

(c) the extent to which the students who have taken agriculture as elective one are affected due to the above instructions ;

(d) whether the Government have considered the case of teachers who are going to be affected as a result of such an action, in the full fledged Higher Secondary and Multi-purpose High Schools ;

(e) whether the Government have thought of any relief measures in the case of students and teachers who are likely to be affected ;

(f) if so, what they are

(g) whether there are any representations from any quarter or quarters in this regard ;

(h) if so, the points urged by them ?

A.—Sri S. R. KANTHI (Minister for Education).—

(a) Yes.

(b) The syllabus for the Standard XI is not finalised.

(c) These students may not have difficulty in joining the P.U.C. course in the two Universities.

(d) No.

(e) Does not arise in view of reply to Clauses (c) and (d).

(f) Does not arise in view of reply to Clause (c) above.

(g) Yes.

(h) It is urged that :—

(1) Postponing the opening of the XI Standard during 1963-64 will seriously affect the educational career of the students who have offered agriculture as an elective after passing the X-Standard examination in 1963.

(2) Students who have now taken Agriculture under electives will not be admitted to the Pre-University Course in any college, as there is no provision for the teaching of that subject at the Pre-University Course level.

(3) These students, although they pass X-Standard Public Examination do not become eligible for admission in the Agricultural College because the minimum academic qualification for admission there is the Pre-University Course Examination.

(4) There is no continuation course in Agriculture at the end of X-Standard in any other institution and the career of such students will be spoiled if facilities for the teaching of that subject are not provided for one more year at the end of the X Standard.

(5) The students taking Agriculture as an elective subject and passing the X-Standard Examination cannot change their elective subject in the Pre-University Class as such a change is not permissible under University Regulation.

Sri G. V. GOWDA.—It has been stated that the syllabus for the Standard-XI is not finalised. Is it not a fact that a uniform scheme so far as Standard-X throughout the State will be achieved by the end of this year ?

†Sri S. R. KANTHI.—It is going to be achieved by the end of this year, and there is going to be a common syllabus including the X-Standard.

Sri G. V. GOWDA.—When the Government knew that a common uniform pattern has to be achieved by the end of this year, should they not have evolved a common syllabus so as to commence from 1963-64 ?

Sri S. R. KANTHI.—I have already explained this matter that there were particular difficulties. Those difficulties were, that the two Universities in the State had no common syllabus for P.U.C. So, it was not possible to evolve a common syllabus for the X-Standard. Now, the Mysore University had announced that they are going to have a common syllabus from 1963-64. Soon after this is finalised, it will be possible to evolve a common syllabus.

Sri K. S SURYANARAYANA RAO.—Are weto take it that Standard-XI is to be suspended for the year 1963-64 ?

Sri S. R. KANTHI.—We have not introduced the XI-Standard.

Sri G. V. GOWDA.—Can we have the assurance that they are going to have XI-Standard from 1964-65 at least ?

Sri S. R. KANTHI.—It is under consideration. On account of the emergency we had to hold our hands back. When the situation improves, we will not only have a common syllabus for the XI-Standard, but also we will be able to implement it from the year 1963-64.

†Indicates that the remarks or speeches have not been revised by the member concerned

ಶ್ರೀ ಎಸ್. ಕರಿಯಪ್ಪ.—ಅಗ್ರಿಕಲ್ಚರ್ ಕೋರ್ಸ್ ತೆಗೆದುಕೊಂಡಂಥ ವಿದ್ಯಾರ್ಥಿಗಳಿಗೆ ಎರಡು ವರ್ಷ ಕಂಪ್ಲೀಟ್ ಆಗುವುದಿಲ್ಲ. ಅವರ ಗತಿ ಏನು ಸ್ವಾಮಿ ?

Sri S. R. KANTHI.—Now, we have to evolve a common syllabus by the end of this year. It will be applicable not only to the full fledged Higher Secondary Schools, but also to the Multi-purpose High Schools. So far as S.S.L.C. is concerned, there will be no difficulty. The students can appear for the S.S.L.C., through the Multi-purpose High Schools, and if they pass, they will be admitted to the Pre-University Course in the Mysore University. We are corresponding so far as the other University is concerned.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮಲ್ಟಿಪರ್ಪಸ್ ಹೈಸ್ಕೂಲುಗಳಲ್ಲಿ ವ್ಯವಸಾಯ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ವ್ಯವಸಾಯ ಕಾಲೇಜಿನಲ್ಲಿ ಸೀಟು ಕೊಡುತ್ತೀರಾ ?

Sri S. R. KANTHI.—Those who pass the S.S.L.C. from the Multi-purpose High School, they will be admitted to the P.U.C. We have made a request to both the Universities. After passing the P.U.C., they will be admitted to the Agricultural College.

Sri K. S. SURYANARAYANA RAO.—What should happen supposing there is no P.U.C. examination ?

Sri S. R. KANTHI.—It was the old syllabus - in Hyderabad-Karntak it was XI-Standard, in ex-Mysore it was called the X-Standard and in Coorg it was called the VII Form. All these will be abolished shortly, and from next year there will be uniformity. Those who pass the above examinations, they will be directly admitted to the P.U.C.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—"Students who have now taken Agriculture under electives will not be admitted to the P.U.C. in any college." ಇಂಥ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಅಡ್ಮಿಷನ್ ಕೊಡದೆ ಹೋದರೆ ಅವರ ಗತಿ ಏನು ಸ್ವಾಮಿ ?

Sri S. R. KANTHI.—I have already said that the Director of Public Instructions is corresponding with the two Universities. There will not be much difficulty so far as Mysore University is concerned, but with regard to the Karnatak University there will be difficulty. Those who pass S.S.L.C. from the Multi-purpose High School with Agriculture as an elective subject, they will be admitted to the P.U.C. in Science. If I can give the correct position, the student of the X-Standard in the Multi-purpose High School, will have taken in the Compulsory Group, General Science and Elementary Mathematics, and under Group IV he takes Chemistry and Biology ; and, as such there will be no difficulty to admit him to the P.U.C. in Science.

ಶ್ರೀ ಎಸ್. ಕರಿಯಪ್ಪ.—Pre-University course ಗೆ Physics, Chemistry, Mathematics group ತೆಗೆದುಕೊಂಡ ವಿದ್ಯಾರ್ಥಿಗಳು ಸೇರುವುದಕ್ಕೆ ಸಾಧ್ಯವಿದೆಯೆ ? ಈ ರೀತಿ ಮಾಡುವುದಕ್ಕೆ ಫಾಕಲ್ಟೀಸ್ ಒಪ್ಪಿಗೆ ಪಡೆದಿದ್ದೀರಾ ? ಅಕಡೆಮಿಕ್ ಕೌನ್ಸಿಲ್ ಒಪ್ಪಿಗೆ ಪಡೆದಿದ್ದೀರಾ ?

Sri S. R. KANTHI.—I have already said that we are corresponding with the two Universities, and as far as Government can see, there is not much difficulty so far as Mysore University is concerned. There is slight difficulty in respect of Karnatak University, and it will be overcome.

Sri G. V. GOWDA.—Is it not a fact that the students who take agriculture as an elective subject are compelled to go only to the Agricultural Colleges unlike other students taking Medicine or Engineering Courses ?

Sri S. R. KANTHI.—Under the old syllabus, they can go only to the Agricultural College, but if they take the Science group, they can have other facilities also.

ಶ್ರೀ ಎಸ್. ಕರಿಯಪ್ಪ.—ಈಗ X Standard ನಲ್ಲಿರುವವರಿಗೆ ಕೆಮಿಸ್ಟ್ರಿಯಾಗಲಿ, ಫಿಜಿಕ್ಸ್ ಆಗಲಿ, ಮ್ಯಾಥೆಮೆಟಿಕ್ಸ್ ಆಗಲಿ ಸಾಕಷ್ಟು ಜ್ಞಾನ ಬರುವುದಕ್ಕೆ ಅವಕಾಶವಿಲ್ಲದೇ ಇರುವುದರಿಂದ ಅಂಥವರನ್ನು ಫ್ರೀಯೂನಿವರ್ಸಿಟಿ ಕೋರ್ಸಿಗೆ ಸೇರಿಸಿಕೊಳ್ಳುತ್ತಾರೆಂಬುದಕ್ಕೆ ಅನುಮಾನವಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಅನುಮಾನ ಬಂದಿಲ್ಲ, ಈಗಲೇ ನಿಶ್ಚಿತವಾಗಿ ಹೇಳುವುದಕ್ಕಾಗುವುದಿಲ್ಲ ಅವರ ಜೊತೆಯಲ್ಲಿ ಪತ್ರವ್ಯವಹಾರ ನಡೆಸುತ್ತಿದ್ದೇವೆ.

Sri G. V. GOWDA.—Students who have taken agriculture as elective subject in High Schools, will they not have admissions to P.U.C in any other college with other combination ?

Sri S. R. KANTHI.—There are diffierent groups of curricula. For instance, group 1 is humanities, Arts and Science, group 2 is science, and group 3 is technical science and group 4 is agriculture. These students study the same chemistry and biology as under group 2. So they can be admitted for science group.

ಶ್ರೀ ಎಸ್. ಕರಿಯಪ್ಪ.—ಮಲ್ಟಿಪರ್ಪಸ್ ಹೈಸ್ಕೂಲುಗಳಲ್ಲಿರುವ ಉಪಾಧ್ಯಾಯರುಗಳನ್ನು ಎಂ.ಎಸ್.ಸಿ. ಮತ್ತು ಎಂ. ಎ. ಡಿಗ್ರಿ ತೆಗೆದುಕೊಳ್ಳುವುದಕ್ಕೆ ಡೆಪ್ಯೂಟ್ ಮಾಡಿದ್ದೀರಿ. ಅವರು ಪಾಸು ಮಾಡಿಕೊಂಡು ಬಂದ ಮೇಲೆ ಅವರ ಗತಿಯೇನು ?

ಶ್ರೀ ಎಸ್. ಆರ್. ಕಂಠಿ.—ಈಗ ಹಾಲಿ ಇದ್ದವರು ಮತ್ತು ಮುಂದೆ ಬರುವವರು ಎಲ್ಲರನ್ನೂ ಕೂಡ ಅವರು ಯಾವ ಯಾವ ಹೈಸ್ಕೂಲಿನಲ್ಲಿ ಇದ್ದಾರೆಯೋ ಆಯಾ ಹೈಸ್ಕೂಲಿನಲ್ಲಿ ಅಬ್ಸಾರ್ಬ್ ಮಾಡಿಕೊಳ್ಳಲಾಗುತ್ತದೆ.

Warehousing Business carried out by the State Warehousing Corporation during the year 1961-62.

*Q.—249. **Sri M. R. PATIL** (Hubli).—

Will the Government be pleased to state :—

(a) the number of towns and cities in the State where the State Warehousing Corporation carried on the Warehousing Business during the year 1961-62 ;

(b) the total quantity of agricultural produce that was received by the Corporation during the said year for storage ;

(c) of the total quantity so stored, during the said year, what was the quantity received from (i) the Merchants (ii) the Cultivators, respectively ;

(d) in all, how many persons did take advantage of warehousing facilities during the said year and how many of them were the residents of villages ?

A.—Sri KONDAJJI BASAPPA (Deputy Minister for Co-operation).—

(*a*)	Cities	...	3	Total ... 28.	
	Towns	...	24		
	Villages	...	1		

(*b*) The total quantity of agricultural produce received by the Corporation during the said year is 73,089 tons.

(*c*) Of the quantity received so stored, the quantity received from :

(i) Merchants	...	61,756.655 tons.
(ii) Cultivators	...	11,332.345 tons.

(*d*) In all, 1,072 persons took advantage of the warehousing facilities.

Merchants	...	588
Co-operative Societies	...	2
Others	...	482

Sri M. R. PATIL.—Is it a fact that the acceptance of the rural credit survey report prompted the Government to have a warehousing programme ?

Sri KONDAJJI BASAPPA.—Yes Sir, It is a fact that according to the report of the rural credit survey the policy of warehousing programme has been laid down.

Sri G. V. GOWDA.—May I know the total amount realised by storing the produce in these warehouses ?

Sri KONDAJJI BASAPPA.—In the year 1958-59 the storage charges received were Rs. 3,628-98 nP. There were only three storages. In 1959-60 the storage charges received were Rs. 39,626–00. There were six started during this year. During 1960-61 the amount was Rs. 1,88,860-00. Eight were started in this year. During the year 1961-62 the amount was Rs. 4,88,667-00.

ಶ್ರೀ ಸಿದ್ದಯ್ಯಕಾಶೀಮಠ.—ಮಳಿಗೆಗಳು ಇರುವಂಥಾ ಕೆಲವೊಂದು ಊರುಗಳಲ್ಲಿ ಸ್ಟೇಟ್ ಬ್ಯಾಂಕುಗಳಿಲ್ಲದೆ ಲೇವಾದೇವಿಗೆ ತೊಂದರೆಯಾಗಿದ್ದು ಸರ್ಕಾರಕ್ಕೆ ತಕರಾರು ಬಂದಿದೆಯೇ ?

Sri KONDAJJI BASAPPA.—In fact it is one of the conditions that banking facilities should be provided. Otherwise we would not start.

ಶ್ರೀ ಬಿ. ಎಲ್. ಗೌಡ.—ಮಳಿಗೆಗಳಲ್ಲಿ ವ್ಯವಸಾಯದ ಸಾಮಾನುಗಳಲ್ಲದೆ ಸಿಮೆಂಟು ಮತ್ತು ಕಬ್ಬಿಣ ಇವುಗಳನ್ನು ದಾಸ್ತಾನು ಮಾಡಲು ಸರ್ಕಾರದವರು ಸಾಲ ಕೊಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಇಲ್ಲ.

ಶ್ರೀ ಬಿ. ಎಲ್. ಗೌಡ.—ಚಳ್ಳಕೆರೆಯಲ್ಲಿ ಅಂಥಾದ್ದು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—So far it has not come to our notice.

Sri B. L. GOWDA.—May I know the amount of loans secured by the cultivators as against these storages.

Sri KONDAJJI BASAPPA.—That I cannot say. It is the bank that has to give loans on warehouse receipts.

Sri M. R. PATIL.—Is it a fact that warehouses were established to help the cultivator to store his produce and hold it on for a better price rather than to help the merchant.

Sri KONDAJJI BASAPPA.—It is not correct. In fact the entire programme was undertaken partly in the interest of co-operative movement and largely with the view to furtherence of the price policy and over-all economic growth of the country.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಳಿಗೆಗಳಿಗೆ ಸಾಲವನ್ನು ಕೊಡುವ ಸಂಬಂಧದಲ್ಲಿ ಸರ್ಕಾರದವರು ವ್ಯವಸಾಯಗಾರರಿಗಿಂತ ವ್ಯಾಪಾರಗಾರರಿಗೆ ಹೆಚ್ಚು ಸಹಾಯವನ್ನು ಮಾಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ರೈತರಿಗೆ ಸಿಕ್ಕಬೇಕಾದ ಸಾಲ ಸರಿಯಾಗಿ ಅವರಿಗೆ ಸಿಕ್ಕಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

Sri KONDAJJI BASAPPA.—It is very clear. We cannot make discrimination between a trader and a cultivator. Section 70 of the Act says that no warehouse shall discriminate and all persons shall avail themselves of the facilities of the warehouse.

Sri K. S. SURYANARAYANA RAO.—The section seems to indicate that there is no discrimination between the cultivator and the merchant and they are treated alike. Is it not a fact that credit is not available to a merchant for all food grains if he does not make use of the warehouse whereas credit is available to him if it is stored in the warehouse. If it is so, why this discrimination ?

Sri KONDAJJI BASAPPA.—No discrimination is made where warehouse receipts are concerned. Whoever produces the receipt will get the credit.

Sri K. S. SURYANARAYANA RAO.—Is it not a fact that there is curb on credit for food grains by general banking institutions ?

Scheduled Castes House Building Societies ಎಂದು ಸರ್ಕಾರದವರೇ ಪ್ರಾರಂಭ ಮಾಡಿದ್ದಾರೆ. ಇಲ್ಲಿ ಕಾನೂನಿಗೆ ವಿರೋಧವಾಗಿ ಕೆಲಸಮಾಡಿದ್ದಾರೆ. ಈ ಸೊಸೈಟಿಗಳಿಗೆ ತಾಲ್ಲೂಕ್ ಬೋರ್ಡ್ ಅಧ್ಯಕ್ಷರಾಗಿರುವವರು ಅಧ್ಯಕ್ಷರಾಗಿರಬೇಕೆಂದು ಆರ್ಡರ್ ಮಾಡಿದ್ದಾರೆ. ಇದು ಕಾನೂನಿಗೆ ವಿರೋಧವಾಗಿದೆ. ಇದನ್ನು ಜಾಗ್ರತೆ ತಪ್ಪಿಸಿ ಆಯಾ ಸೊಸೈಟಿಗಳ ಷೇರು ಹೋಲ್ಡರುಗಳೇ ಅಧ್ಯಕ್ಷರನ್ನು ಚುನಾಯಿಸಬೇಕು ಎಂದು ಒಂದು ಆರ್ಡರ್ ಹೊರಡಿಸಬೇಕು. ಈ ಸೊಸೈಟಿಗಳಲ್ಲಿ ಷೇರ್ ಹೋಲ್ಡರುಗಳಿಂದ ಚುನಾಯಿತರಾದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು office beares ಇದ್ದರೆ ಒಳ್ಳೆಯದು. ಹರಿಜನರ ಸೊಸೈಟಿಗಳಿಗೆ ಅಧ್ಯಕ್ಷರಾಗತಕ್ಕ ಅರ್ಹತೆ ಇರುವವರು ಅವರಲ್ಲಿ ಯಾರೂ ಇಲ್ಲವೇನೋ ಎನ್ನುವ ಅನುಮಾನ ವುಂಟಾಗಿದೆ. ಹರಿಜನರಿಗೆ ಒಂದು ರೀತಿಯ ಅವಮಾನ ಮಾಡಿದಹಾಗೆ ಕಾಣಿಸುತ್ತದೆ. ಸಹಕಾರ ಶಾಖೆಯ ಮಂತ್ರಿಗಳು, ಮತ್ತು ಸಮಾಜ ಕಲ್ಯಾಣ ಶಾಖೆಯ ಮಂತಿಗಳು, ಹರಿಜನರೇ ಆಗಿರತಕ್ಕ ಮಾನ್ಯ ಶ್ರೀ. ಬಿ. ರಾಚಯ್ಯನವರೂ ಇದನ್ನು ಜಾಗ್ರತೆ ಪರಿಶೀಲಿಸಿ ಅವಮಾನವನ್ನು ಪರಿಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

(ಶ್ರೀ ಆರ್. ಮುನಿಸ್ವಾಮಯ್ಯ)

ನಮ್ಮ ದೇಶದಲ್ಲಿ ಅನೇಕ ಸೊಸೈಟಿಗಳಲ್ಲಿ ಸರ್ಕಾರದವರು ಬಂಡವಾಳವನ್ನು ಹಾಕಿದ್ದಾರೆ. ಇಂಥ ಸೊಸೈಟಿಗಳಿಗೆ ಡೈರೆಕ್ಟರುಗಳನ್ನು ನಾಮಕರಣ ಮಾಡುತ್ತಾರೆ. ಅದಕ್ಕೆ ಹರಿಜನರನ್ನು ಸಹ ನಾಮಕರಣ ಮಾಡಬೇಕೆಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before I call upon Sri Siddaiah Kasimath to speak, I would like to know how the debate ought to be regulated. Yesterday it was mentioned that 2 hours would be required by Ministers for reply.

Sri M. V. KRISHNAPPA (Minister for Revenue).—There are 4 Ministers who have to reply. We require atleast 3 hours.

Mr. SPEAKER.—Then the reply would begin at 4.O'clock, The debate will go on till 4–P.M. I will also make it clear that after the reply is over there would be no clarifications asked or given.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮುಖ್ಯವಾದ ಪಾಯಿಂಟ್ಸ್ ಗುರುತು ಹಾಕಿ ಕೊಂಡು precise ಆಗಿ ಉತ್ತರ ಕೊಡಲಿ ಸ್ವಾಮಿ. ಭಾಷಣ ಮಾಡುವವರು ಇನ್ನೂ ಇದ್ದಾರೆ.

Mr. SPEAKER.—How am I to know what reply would be given? I know there is demand to speak. That is why I am trying to give maximum accommodation.

Sri SANJEEVANATHA AIKALA (Suratkal).—Since the reply would be stereotyped, why should the Ministers be given 3 hours. It is to much.

Mr. SPEAKER.—Sri Sanjeevanatha Aikala is always original. Why does he anticipate that it would be stereotyped? In any case, the reply will begin at 4 O'clock and there would be no clarifications. Whatever, members want to raise, let them do it during the debate itself and not ask for clarifications later.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ರಾಜ್ಯದ ಮಾನ್ಯ ವ್ಯವಸಾಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರುವ ವ್ಯವಸಾಯ, ಪಶು ಸಂಗೋಪನ, ಅರಣ್ಯಗಳು, ಗ್ರಾಮಾಭಿವೃದ್ಧಿ, C. D. ಮತ್ತು N.E.S. ಬ್ಲಾಕುಗಳು, ಸಹಕಾರ ಇವುಗಳ ಬಗ್ಗೆ ಕೆಲವೊಂದು ಸಲಹೆಗಳನ್ನು ಮಾಡ ಬೇಕೆಂದು ಅಪೇಕ್ಷಿಸುತ್ತೇನೆ.

ಸರ್ಕಾರ ರೈತರಿಗೆ ಸಹಾಯ ಮಾಡಬೇಕೆಂದು ಸಾಕಷ್ಟು ಯೋಜನೆಗಳನ್ನು ಮಾಡಿ ಅದಕ್ಕೆ ಬೇಕಾಗುವಷ್ಟು ದುಡ್ಡನ್ನು ಸಹ ಇಟ್ಟಿರುತ್ತಾರೆ. ಆದರೆ ಇವೊತ್ತು ಸರ್ಕಾರದಿಂದ ದುಡ್ಡನ್ನು ಉಪಯೋಗ ಮಾಡತಕ್ಕಂಥ agencies ಏನಿವೆ, C.D. Blocks ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಕೆಲಸವನ್ನು ನಿರ್ದಿಷ್ಟವಾಗಿ ಮಾಡದೇ ಇರುವುದರಿಂದ ಸರ್ಕಾರಕ್ಕೆ ಮೇಲಿಂದ ಮೇಲೆ ಅಪವಾದ ಬರುವುದು. ಸರ್ಕಾರ ಹೆಚ್ಚಿಗೆ ಆಹಾರ ಉತ್ಪಾದನೆ ಮಾಡಬೇಕೆಂದು ಅಲ್ಲಲ್ಲಿ ಕೆರೆಗಳನ್ನೂ ದೊಡ್ಡ ನೀರಾವರಿ ಪ್ರಾಜೆಕ್ಟ್‌ಗಳನ್ನೂ ಅಷ್ಟೇ ಅಲ್ಲದೆ ರೈತರ ಸ್ವಂತಕ್ಕಾಗಿ ಬಾವಿಗಳನ್ನು ತೋಡಿ ಕೊಳ್ಳುವುದಕ್ಕೆ ಹಣವನ್ನು ಒದಗಿಸಿ ಅದರ ಮುಖಾಂತರವಾಗಿ ನೀರಾವರಿಯನ್ನು ಹೆಚ್ಚುಮಾಡಿ ಆಹಾರವನ್ನು ಹೆಚ್ಚು ಉತ್ಪಾದನೆ ಮಾಡಬೇಕೆಂಬ ಉದ್ದೇಶದಿಂದ ಇವೊತ್ತಿನ ದಿವಸ ಸಹಾಯ ಮಾಡುತ್ತಿದ್ದಾರೆ.

1-30 P.M.

ಇನ್ನು ರೈತರಿಗೆ ಇರತಕ್ಕ ಕಷ್ಟಗಳಲ್ಲಿ ಒಂದನ್ನು ಹೇಳಬೇಕು ಎಂದರೆ ಅವರಿಗೇನೂ ಇರಲಿಕ್ಕೆ ಪಟ್ಟಣದಲ್ಲಿದ್ದಂತೆ ಮನೆ ಬೇಕಾಗಿಲ್ಲ, ತೊಡಲಿಕ್ಕೆ ಉತ್ತಮವಾದ ಬಟ್ಟೆ ಏನೂ ಬೇಕಾಗಿಲ್ಲ. ಅವರಿಗೆ seasonal ಆಗಿ ಉಳುವುದಕ್ಕೆ ಒಳ್ಳೆಯ ನೇಗಿಲು, ವಗೈರೆ ಸಲಕರಣೆಗಳನ್ನು ಒದಗಿಸಿಕೊಡತಕ್ಕದ್ದು ಆದ್ಯಕರ್ತವ್ಯ, ನಮ್ಮ ರೈತರಿಗಾಗಿ ಹಾಸನದಲ್ಲಿ agricultural implements ತಯಾರು ಮಾಡುತ್ತಾರೆ. ಅವುಗಳು ಮುಖ್ಯವಾಗಿ ನಮ್ಮ ಮುಂಬೈ ಕರ್ಣಾಟಕದಲ್ಲಿ ವಿಶೇಷ ಉಪಯೋಗಕ್ಕೆ ಬಾರದಂತೆ ಆಗಿರುತ್ತವೆ. ಇದಕ್ಕಾಗಿ ಆ ಕಾರ್ಖಾನೆಯಲ್ಲಿರುವಂಥ ಒಬ್ಬ ತಜ್ಞರನ್ನು ಆ ಭಾಗಕ್ಕೆ

ಕಳುಹಿಸಿ ಅಲ್ಲಿ ಯಾವ ಮಾದರಿಯ ಗುದ್ದಲಿ, ಸಲಿಕೆ, ಕೊಡಲಿ, ಕುರಚಿಗಿ, ಮುಂತಾದ ಸಾಮುಗ್ರಿಗಳನ್ನು ಉಪಯೋಗಿಸುತ್ತಾರೆಂದು ತಿಳಿದುಕೊಂಡು ಆ ತೆರನಾಗಿ ಮಾಡಿಕಳಿಸಿದರೆ, ಅವುಗಳನ್ನು ಹೆಚ್ಚು ಪುರೋಟ ಮಾಡಲಿಕ್ಕೆ ಪ್ರಯತ್ನಮಾಡಿದರೆ ಅದರಿಂದ ಸಹಾಯವಾಗುತ್ತದೆಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ರೈತರಿಗೆ ಸಕಾಲದಲ್ಲಿ ಬೀಜ ಕೊಡತಕ್ಕದ್ದು ಬಹಳ ಮುಖ್ಯವಾದುದು. ಈಗಾಗಲೇ ನಮ್ಮ ಸ್ನೇಹಿತರು ಸಾಕಷ್ಟು ಈ ಬೀಜದ ಬಗ್ಗೆ ಹೇಳಿದ್ದಾರೆ. ಬೀಜ ಹಂಚುವಿಕೆಯನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಮುಖಾಂತರ ಅಲ್ಲಲ್ಲಿರುವ ಎಲ್ಲಾ ತಾಲ್ಲೂಕುಗಳ ಬ್ಲಾಕುಗಳ ಮೂಲಕ ಹಂಚಬೇಕೆಂದು ಮಾಡಿದ್ದಾರೆ. ಈ ಬೀಜಗಳ ಬಗ್ಗೆ ಈಗಾಗಲೇ ಸಾಕಷ್ಟು ತಕರಾರುಗಳು ಸರಕಾರಕ್ಕೆ ಬಂದಿವೆ ನಮ್ಮ ಭಾಗದಲ್ಲೂ ಜೋಳದ ಬೀಜ ಕೊಟ್ಟಾಗ ಬಹಳವಾಗಿ ಅದರ ಬಗ್ಗೆ ಪ್ರಚಾರ ಮಾಡಿ ರೈತರಿಗೆ ತಿಳಿಸುತ್ತಿದ್ದಾರೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕುಗಳ ಮೂಲಕವಾಗಿಯೂ ಜನಕ್ಕೆ ತಿಳುವಳಿಕೆ ಕೊಡಲು ಪ್ರಚಾರ ಮಾಡುವುದೇನೋ ಸರಿ. ಆದರೆ ಅವರು ಹೇಳಿದಂತೆ ಬೀಜಗಳನ್ನು ತೆಗೆದುಕೊಂಡು ಉಪಯೋಗಿಸಿದರೂ ಸರಿಯಾದ ಬೆಳೆಯಾಗದೇ ನಾಪೀಕು ಆಗಿ ಇದರ ದೆಸೆಯಿಂದ ಬಹಳ ಕಷ್ಟದ ಪರಿಸ್ಥಿತಿ ಬಂದೊದಗಿದೆ. ಪ್ರತಿ ವರ್ಷವೂ ಈ ಬೀಜಗಳನ್ನು ಹಂಚುವಾಗ ನೋಡಿ ಸರಯಾದ ಉತ್ತಮ ತರವಾದ ಬೀಜಗಳನ್ನು ಹಂಚಿದರೆ, ಅದರಿಂದ ಒಳ್ಳೆಯ ಬೆಳೆಯನ್ನು ತರಲು ಅನುಕೂಲವಾಗುತ್ತದೆ. ಈಗೇನೋ ಮೇಲಿಂದ ಮೇಲೆ ಪೇಪರುಗಳಲ್ಲಿ, ಪ್ರಚಾರ ಶಾಖೆಯ ಮುಖಾಂತರ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಯಾವ ರೀತಿಯಾಗಿ ಬೀಜ ಉಪಯೋಗಿಸಬೇಕು, ಗೊಬ್ಬರ ಹೇಗೆ ಹಾಕಬೇಕು ಎನ್ನುವುದನ್ನು ತಿಳಿಸಿ ಬೆಳೆಯನ್ನು ಹೆಚ್ಚಿಗೆ ಮಾಡಿಕೊಳ್ಳಬಹುದು ಎಂದು ಸಲಹೆ ಕೊಡುತ್ತಿರುತ್ತಾರೆ. ರೇಡಿಯೋಗಳಲ್ಲಿ ಕೂಡ ಪ್ರಚಾರ ಮಾಡಿ ಜನಗಳಿಗೆ ತಿಳಿಯುವಂತೆ ಮಾಡುತ್ತಿದ್ದಾರೆ. ಹೀಗೆ ಉತ್ತಮವಾದ ಪ್ರಚಾರ ಮಾಡುವುದರಿಂದ ದೇಶದ ಜನ ಹೆಚ್ಚು ಬೆಳೆಯಲಿಕ್ಕೆ ಸಾಧ್ಯವಾದೀತು ಎಂದು ಮಾಡುತ್ತಿರುವುದೇನೋ ಉತ್ತಮವಾದುದು. ಇದರಿಂದ ಜನತೆಗೂ ಸಹಾಯಕರವಾಗಿರುತ್ತೆ.

ನಿನ್ನೆ ದಿವಸ ಈ ಸಭೆಯ ಮಾನ್ಯ ಸದಸ್ಯರಾದ ಶ್ರೀಮತಿ ಬಸವ ರಾಜೇಶ್ವರಿಯವರು ಅಣ್ಣಿಗೇರಿ ರೀಸರ್ಚು ಫಾರಂನಲ್ಲಿ ''ಅಮೃತ್'' ಎನ್ನುವ ಗೋಧಿ ಬೀಜ ತಂದು ಉಪಯೋಗಿಸಿ ಬಹಳ ಉತ್ತಮವಾದ ಬೆಳೆ ಬೆಳೆದಿದ್ದೇವೆಂದು ಹೇಳಿದರು. ಅವರ ಊರು ಈ ಫಾರಂಗೆ ಸುಮಾರು ಇನ್ನೂರು ಮೈಲಿಗಳ ದೂರದಲ್ಲಿದೆ. ಆದರೆ ನನ್ನ ಊರು ಈ ಫಾರಮ್ಮಿಗೆ ಕೇವಲ ಐವತ್ತು ಮೈಲಿಗಳ ದೂರದಲ್ಲೇ ಇದೆ. ನಮ್ಮ ಭಾಗದಲ್ಲಿ ಈ ''ಅಮೃತ್'' ಗೋಧಿ ಬೀಜವನ್ನು ಉಪಯೋಗಿಸಿ ಬೆಳೆ ತೆಗೆದಾಗ ಇದಕ್ಕೆ ಒಂದು ತರದ ಭಂಡಾರ ರೋಗ ತಗಲಿ ಬೆಳೆ ಹಾಳಾದವು. ಈ ವಿಚಾರವನ್ನು ವ್ಯವಸಾಯದ ಶಾಖೆಯ ಅಧಿಕಾರಿಗಳಿಗೂ ತಿಳಿಸಿದ್ದೇನೆ. ಇದಕ್ಕೆ ನಾನು ಸಲಹೆ ಮಾಡುವುದು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸೀಡ್ ಫಾರಂ ಇರುವಂತೆ ಮಾಡಿ ಅಲ್ಲಿ ಬೆಳೆಯುವವರಿಗೆ ಅನುಕೂಲವಾಗುವಂತೆ ಉತ್ತಮವಾದ ಬೆಳೆಯನ್ನು ಮಾಡಲು ಪ್ರಾಯೋಗಿಕವಾಗಿ ಸಂಶೋಧನೆ ಮಾಡಿ ನಡೆಸಿದರೆ ಜನರಲ್ಲೂ ಆಸಕ್ತಿ ಹೆಚ್ಚಿ ಉತ್ತಮ ತರವಾದ ಬೆಳೆಯನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆ. ಆದಕಾರಣ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕುಗಳಿರುವಂತೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಸೀಡ್ ಫಾರಂ ಇರುವಂತೆ ಏರ್ಪಾಡು ಮಾಡಿದರೆ ಇದರಿಂದ ಎಷ್ಟೋ ಜನಕ್ಕೆ ಸಹಾಯ ಮಾಡಿದಂತಾಗುತ್ತದೆ.

ನಮ್ಮ ಧಾರವಾಡ ಜಿಲ್ಲಾ ಭಾಗಗಳಲ್ಲಿ ಜೋಳದ ಬೆಳೆಗೆ ಒಂದು ತರಹ ಚಿಟ್ಟೆಗಳು ಬಂದು ಬೆಳೆ ಹಾಳಾಗುತ್ತಿದೆ. ಸುಮಾರು ಆರೆಂಟು ವರ್ಷಗಳಿಂದಲೂ ಜೋಳದ ಪೀಕು ಬಾರದೆ ನಾಶವಾಗಿ ಈ ಭಾಗಗಳು ಬರಗಾಲಕ್ಕೆ ತುತ್ತಾಗುತ್ತಿವೆ. ಹೋದ ವರ್ಷ D.D.T. Meeting ನಮ್ಮಲ್ಲಿ ನಡೆದಾಗ ಈ ಚಿಟ್ಟೆಹುಳವನ್ನು ನಾಶಪಡಿಸಲು ಅಲ್ಲಿಯ ಮೆಡಿಕಲ್ ಆಫೀಸರು 22 ಪೌಂಡುಗಳಷ್ಟು ಡಿ.ಡಿ.ಟಿ. ಪೌಡರು ಹಾಕಬೇಕು ಅದರ ಜೊತೆಗೆ ಶೇಕಡಾ ಐವತ್ತರಷ್ಟು ''ಗೆಮಾಕ್ಸಿನ್'' ಎನ್ನುವ ಪೌಡರನ್ನು ಹಾಕಿದರೆ, ಈ ಹುಳುಗಳು ಹಾಳಾಗುತ್ತವೆ ಎಂದು ಹೇಳಿದರು, ಅವರು ಹೇಳಿದಂತೆ ಈ ಪುಡಿಗಳನ್ನು ಉಪಯೋಗಿಸಿದರೂ ಕೂಡ ಈ ಚಿಟ್ಟೆ ಹುಳಗಳು ಈ ಪ್ರಯೋಗದಿಂದ ಸಾಯದೆ ಹಾಗೇ ಉಳಿದುವು. ಈ ರೀತಿ ಪ್ರಯೋಗ ನಡೆಸಿದ ಮೇಲೆ ವ್ಯವಸಾಯದ ಅಧಿಕಾರಿಗಳಿಗೆ ನಾನು ಲಿಖಿತ ಮೂಲಕ ತಿಳಿಸಿದರೆ ಅದಕ್ಕೆ ಅವರು ಯಾವ ರೀತಿ ಉತ್ತರ ಕೊಟ್ಟರು ಎಂದರೆ, ಪೌಡರುಗಳನ್ನು ಉಪಯೋಗಿಸುವಾಗ ಬೆಳೆಯಾಗುವ ಪೈರಿನ ಪ್ರತಿಯೊಂದು ಎಲೆಯ ಮೇಲೂ ಈ ಪೌಡರು ಬೀಳುವಂತೆ ಚೆಲ್ಲಿದರೆ ಈ ಹುಳುಗಳು ನಾಶವಾಗುತ್ತೆ ಎಂದು ಹೇಳುತ್ತ ಸರಿಯಾದ ಸಮಂಜಸವಾದ ಉತ್ತರ ಕೊಡಲಿಲ್ಲ. ಹೀಗೆ ಪ್ರತಿಯೊಂದು ಜೋಳದಗರಿಯ ಮೇಲೂ ಇಂತಹ ಔಷಧಿಗಳನ್ನು ಚೆಲ್ಲುವುದು ಎಷ್ಟು ಅಸಮಂಜಸವಾಗಿ ಕಾಣುತ್ತೆ ಎನ್ನುವುದನ್ನು ತಾವೇ ತಿಳಿದುಕೊಳ್ಳಬಹುದು. ಈ ಚಿಟ್ಟೆ ಹುಳುಗಳ ಹಾವಳಿ ಸುಮಾರು ಮೂರು ನಾಲ್ಕು ಸಾವಿರದಷ್ಟು ಹುಳುಗಳು ಬಂದು, ಹಾವೇರಿ,

(ಶ್ರೀ ಸಿದ್ದಯ್ಯ ಕಾಶಿಮಠ)

ಶಿರಹಟ್ಟಿ ಈ ಊರುಗಳಲ್ಲಿ ಜೋಳದ ಬೆಳೆ ನಾಶಮಾಡಿ ಹಾಳು ಮಾಡುತ್ತಿವೆ. ಅದಕ್ಕಾಗಿ ಈ ಚಿಟ್ಟೆ ಹುಳಗಳ ಹಾವಳಿ ತಪ್ಪಿಸಲು ಸರಿಯಾದ ಔಷಧಿಗಳನ್ನು ಕಂಡುಹಿಡಿಯಬೇಕೆಂದು ಸಲಹೆ ಮಾಡು ತ್ತೇನೆ. ಹೋದವರ್ಷ ಕೂಡ ಇದೇ ವಿಚಾರ ನಾನು ವ್ಯವಸಾಯದ ಅಧಿಕಾರಿಗಳಲ್ಲಿ ಹೇಳುವಾಗ ಅವರು ಹೆಲಿಕಾಪ್ಟರಿನಲ್ಲಿ ತಂದು ಇದಕ್ಕೆ ನಾಶಮಾಡುವ ಪೌಡರುಗಳನ್ನು ಈ ಹಳ್ಳಿಯ ಜಮೀನು ಗಳಲ್ಲಿ ಹಾಕಿ ಹುಳುಗಳನ್ನು ನಾಶಮಾಡುತ್ತೇವೆಂದು ಹೇಳಿದರು. ಇಲ್ಲಿಯವರೆಗೆ ಹೆಲಿಕಾಪ್ಟರೂ ಇಲ್ಲ ಬೇರೆಯಾವ ರೀತಿಯಿಂದಲೂ ತಡೆಗಟ್ಟಲಿಲ್ಲ. ಈ ರೀತಿ ಮೇಲಿಂದ ಮೇಲೆ ರೋಗಕ್ಕೆ ತುತ್ತಾ ಗುತ್ತಿರುವ ಈ ಬೆಳೆಗಳಿಗೆ ಸರಿಯಾದ ಚಿಕಿತ್ಸೆ ಮಾಡಲು ಪ್ರಯತ್ನಿಸಬೇಕು. ಸರಿಯಾದ ಮೆಡಿಸಿನ್ ಕಂಡುಹಿಡಿಯಬೇಕು. ಹತ್ತು ವರ್ಷಗಳ ಹಿಂದೆ ತಯಾರಿಸಿದ ಮೆಡಿಸನ್ನು ಇಂದು ಉಪಯೋಗಿಸಿದರೆ ಅದರಿಂದ ಒಳ್ಳೆಯದಾಗುವುದಿಲ್ಲ ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಹಾವೇರಿ ಭಾಗದಲ್ಲಿ ವರದಾ ನದಿಯ ನೆರೆಯ ಹಾವಳಿ ಹೆಚ್ಚಾಗುತ್ತಿದೆ. ಈ ನದಿಯ ನೀರು ಬಂದು ಹತ್ತಿರವಿದ್ದ ಜಮೀನನ್ನೆಲ್ಲಾ ಕೊರೆದು ಎಷ್ಟೋ ಜನರ ಮನೆಗಳನ್ನು ಹಾಳುಮಾಡಿದೆ. ಇದರಿಂದ ಅಲ್ಲಿನ ರೈತರು ಉಳಿಯುವ ಸ್ಥಿತಿಯಿಲ್ಲ. ಇದರ ಬಗ್ಗೆ ಸೌಕರ್ಯಗಳನ್ನು ಕೊಟ್ಟಿಲ್ಲ. ಇಲ್ಲಿದ್ದ ಮಣ್ಣಿನ ಮನೆಗಳೂ ನೀರಿನ ಪಾಲಾಗಿವೆ. ಇಲ್ಲಿಯ ಜನರ ಪರಿಸ್ಥಿತಿ ಬಹಳ ವಿಷಾದವಾಗಿದೆ. ನೆರೆಯ ಹಾವಳಿಯಿಂದ ಕಷ್ಟಪಡುತ್ತಿರುವ ಜನಕ್ಕೆ ಬೇರೆ ಕಡೆ ಜಮೀನನ್ನು ಕೊಟ್ಟು ಸಹಾಯ ಮಾಡಬೇಕು. ಕೆಲವು ಭಾಗದಲ್ಲಿ ಜಿಂಕುಷೀಟುಗಳನ್ನೇನೋ ಕೊಡುತ್ತಿದ್ದಾರೆ. ಇಲ್ಲಿ ಕೆಲವು ಕಡೆ ಮಣ್ಣಿನ ಹೆಂಚಿನ ಮನೆಗಳನ್ನು ಕೊಟ್ಟಿದ್ದರು. ಅವು ಕೂಡ ನೆರೆ ಹಾವಳಿಯಿಂದ ಪೂರ್ಣವಾಗಿ ನಾಶವಾಗಿವೆ. ಸರಕಾರ ಈಗಲಾದರೂ ಸ್ವಲ್ಪ ಗಮನಕೊಟ್ಟು ಮನೆಗಳಿಲ್ಲದ ಈ ಜನಕ್ಕಾಗಿ ಸ್ವಲ್ಪ ಜಿಂಕುಷೀಟುಗಳು ಮತ್ತು ಮರದ ಸಾಮಾನುಗಳನ್ನು ಕೊಟ್ಟು ಸಹಾಯ ಮಾಡಬೇಕಾದುದು ಅಗತ್ಯ. ನಮ್ಮ ಭಾಗದ ಹಾವೇರಿ, ಕಿತ್ತೂರು, ಚನ್ನೂರು ಈ ಊರುಗಳಲ್ಲಿ ಈ ನೆರೆ ಹಾವಳಿ ಹೆಚ್ಚಾಗಿದೆ. ಇಲ್ಲಿದ್ದ ಮನೆಗಳೆಲ್ಲ ನೆಲಸಮವಾಗಿವೆ. ಇಲ್ಲಿರುವ ಜನರು ಅವರ ಸಂಸಾರದವರಿ ಗಾಗಲೀ ದನಕರುಗಳನ್ನು ಕಟ್ಟಲಿಕ್ಕಾಗಲೀ ಸರಿಯಾದ ವ್ಯವಸ್ಥೆ ಇಲ್ಲದೆ ಕಷ್ಟಕ್ಕೆ ಸಿಕ್ಕಿದ್ದಾರೆ. ಇಂತಹ ಜನಕ್ಕೆ ಆದಷ್ಟು ತೀವ್ರವಾಗಿ ಸಹಾಯ ಮಾಡದೇ ಇದ್ದರೆ ತುಂಬಾ ತೊಂದರೆಯಾಗುತ್ತದೆ. ಮನೆ ಇಲ್ಲದವರಿಗೆ ಕೆಲವು ಭಾಗಗಳಲ್ಲಿ ಮುನ್ನೂರು, ನಾನೂರು ರೂಪಾಯಿಗಳ ಸಹಾಯವನ್ನು ಕೊಡು ವಂತೆ ಇಲ್ಲಿ ಮನೆ ಕಳೆದುಕೊಂಡ ಜನಕ್ಕೂ ಕೊಟ್ಟರೆ ಇವರೂ ಸ್ವಲ್ಪ ಉಳಿಯಲಿಕ್ಕೆ ಸಾಧ್ಯವಾಗು ತ್ತದೆ. ಸಿಮೆಂಟು, ಕಬ್ಬಿಣವಂತೂ ಈ ಭಾಗದ ರೈತರಿಗೆ ಸಿಗುತ್ತಿಲ್ಲ. ಧಾರವಾಡ ಜಿಲ್ಲೆಯಲ್ಲಿ ಕಳೆದ ಮೂರು ತಿಂಗಳಿಂದಲೂ ಯಾವ ರೀತಿಯಾದ ಸಿಮೆಂಟು, ಜಿಂಕುಷೀಟಾಗಲೀ, ತಗಡಾಗಲೀ, ಕಬ್ಬಿಣವಾಗಲೀ ದೊರಕುತ್ತಿಲ್ಲ. ಮುಖ್ಯವಾಗಿ ಈ ಭಾಗಕ್ಕೆ ಕೆಲವು ಜಿಂಕುಷೀಟುಗಳನ್ನು, ಚಕ್ಕಡಿ, ಹಲಗೆಗಳನ್ನು ಕಳುಹಿಸಬೇಕು. ಆದರೆ ಕೆಲವು ವೇಳೆ ಚಕ್ಕಡಿ ಹಲಗೆಗಳು unsize ಆಗಿಬರುತ್ತವೆ. ಇದನ್ನೆಲ್ಲಾ ಸರಿಪಡಿಸಿ ನಮ್ಮ ಭಾಗದ ಹಳ್ಳಿಗಳಿಗೆ ಈ ಸಾಮಾನುಗಳನ್ನು ತೀವ್ರವಾಗಿ ಕಳುಹಿಸಿ ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ನೀರಾವರಿ ಬಾವಿಗಳ ಬಗ್ಗೆ ಹೇಳಬೇಕಾದರೆ, ಇದು ಒಂದು ಚಲೋ ಆದ ಯೋಜನೆ. ಸರ್ಕಾರ ದವರು ಇದನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಮೂಲಕ ಕಾರ್ಯಗತ ಮಾಡಬೇಕೆಂದು ಮಾಡಿದ್ದಾರೆ. ಮೊನ್ನೆ ಶಿಗ್ಗಾವಿ ತಾಲ್ಲೂಕಾದಲ್ಲಿ ಅಲ್ಲಿ ಜನರೇ ಮುಂದೆ ಬಂದು ಅಲ್ಲಿರುವ ಎನ್.ಇ.ಎಸ್. ಅಧಿಕಾರಿಗಳೂ ತಹಸೀಲ್ದಾರರು ಬಿ.ಡಿ.ಓ. ಹೀಗೆ ಅಸಿಸ್ಟೆಂಟು ಕಮಿಷನರು ಎಲ್ಲರೂ ಕೂಡಿಕೊಂಡು ಏಳು ತಿಂಗಳು ಅವಧಿಯಲ್ಲಿ ಸುಮಾರು 300 ಬಾವಿಗಳನ್ನು ತೆಗೆಯಬೇಕಂದು ಪ್ರಯತ್ನ ಮಾಡಿದ್ದರು. ಅದಕ್ಕೆ ಏಳೇಳು ದಿವಸಗಳಲ್ಲೇ ಮಂಜೂರಾತಿಯೂ ಸಿಕ್ಕಿ ಅಲ್ಲಿಯ ಜನರಿಗೆ ಬಾವಿ ತೆಗೆಯಲು ಸಹಾಯ ಮಾಡುತ್ತಿದ್ದಾರೆ. ಇದೇ ರೀತಿ ಪ್ರತಿಯೊಂದು ತಾಲ್ಲೂಕಾದಲ್ಲಿ ಮಾಡಿ ದರೆ ಬಹಳ ಉತ್ತಮವಾಗಿರುತ್ತದೆ. ನನ್ನ ತಾಲ್ಲೂಕಾದಲ್ಲೂ ಈಗ್ಗೆ ಏಳು ತಿಂಗಳಿನಿಂದಲೂ ಸುಮಾರು 140 ಬಾವಿಗಳನ್ನು ತೆಗೆಸಬೇಕೆಂದು ಪ್ರಯತ್ನ ನಡೆಸಿದ್ದೇವೆ. ಇದಕ್ಕೆ ಪ್ರತಿಯೊಬ್ಬರೂ ಆಸಕ್ತವಹಿಸಿ ಕೆಲಸ ಮಾಡಿದರೆ ದೇಶದಲ್ಲಿ ಹೆಚ್ಚಿನ ಬೆಳೆಬಂದು ಆಹಾರವು ಉತ್ಪತ್ತಿಯಾಗುತ್ತದೆ. ಸಹಕಾರ ಭಾವನೆಯಿಂದ ಎಲ್ಲರೂ ಒಟ್ಟಿಗೆ ಕೆಲಸ ಮಾಡುತ್ತ ಹೋದರೆ ಈ ದೇಶದ ವ್ಯವಸಾಯವೂ ಅಭಿವೃದ್ಧಿಯಾಗುತ್ತದೆ.

ಅನಿಮಲ್ ಹಸ್‌ಬೆಂಡ್ರಿ ವಿಚಾರ. ನಾನು ಈ ಮಾಹೆ 13ನೇ ತಾರೀಖು ನಮ್ಮ ಮಾನ್ಯ ಸ್ಪೀಕರ್‌ರವರ ಗಮನಕ್ಕೆ ಇದರ ವಿಚಾರದ ಬಗ್ಗೆ ಹೇಳಿದಾಗ ಬಡ್ಜೆಟ್ಟಿನಲ್ಲಿ ನಾನು ಮಾತನಾಡು ವಾಗ ಇದರ ಬಗ್ಗೆ ಹೇಳಬಹುದು ಎಂದು ಅಪ್ಪಣೆ ಕೊಟ್ಟರು.

ಹೆಸರುಘಟ್ಟ ಫಾರಂನಲ್ಲಿ Indo-American Aid Programme ಪ್ರಕಾರ ಇಲ್ಲಿಗೆ ಒಂದು ನೂರು ಜರ್ಸಿ ದನಗಳನ್ನು ತಂದರು. ಇದರ ಪೈಕಿ ಕೆಲವು ದನಗಳಿಗೆ ರಿಂಡರ್‌ಪೆಸ್ಟ್ ಎನ್ನುವ ರೋಗ ತಗುಲಿ ಇದು ಇತರ ದನಗಳಿಗೂ ಹರಡಿ ಈಗಾಗಲೇ ಏಳೆಂಟು ದನಗಳು ಸತ್ತು ಹೋದವು. ಇದೇ ರೀತಿ ಇತರ 50–60 ದನಗಳಿಗೆ ಪಕ್ಕೆಯಲ್ಲಿ ಈ ರೋಗ ತಗುಲಿ ಸಾಯುವುದರಲ್ಲಿವೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ಕೇಳಬೇಕೆಂದಿದ್ದಾಗ ಅವಕಾಶ ಸಿಗಲಿಲ್ಲ. ಹಿಂದೆ 1944ನೇ ಇಸವಿಯಲ್ಲಿ ಈ ತರಹ ರೋಗ ಬಂದು ಎಷ್ಟೋ ದನಕರುಗಳು ಹಾಳಾದ ಸಂಗತಿ ತಮಗೆಲ್ಲರಿಗೂ ಗೊತ್ತೇ ಇದೆ. ಆಗ ಎಷ್ಟು ಜನರಿಗೆ ಇದರಿಂದ ಕಾಳಜಿಯಾಗಿತ್ತು ಎನ್ನುವುದೂ ತಿಳಿದಿದ್ದರಿಂದ, ನಾನು ಪರಿಸ್ಥಿತಿ ವಿಷಮಿಸಬಾರದೆಂದು 13ನೇ ತಾರೀಖಿನ ದಿನವೇ ಇಲ್ಲಿ ಹೇಳಲು ಅವಕಾಶವಾಗದೆ ನಿಧಾನವಾಯಿತು. ನಾನು ಈಚೆಗೆ 5-6 ದಿನಗಳಲ್ಲಿ ಈ ದನಗಳನ್ನು ನೋಡಬೇಕೆಂದು ಹೋಗಿದ್ದೆ. ಅಲ್ಲಿಂದ ನೋಡಿಕೊಂಡು ಬಂದು ಇದರ ಬಗ್ಗೆ ತಕ್ಕ ಕ್ರಮತೆಗೆದು ಕೊಳ್ಳಬೇಕೆಂದು ಡೈರೆಕ್ಟರಿಗೆ ಫೋನು ಮಾಡಿದರೆ ಅವರು ಟೂರು ಹೋಗಿದ್ದಾರೆಂದು ತಿಳಿಯಿತು. 14ನೇ ತಾರೀಖು ಪುನಃ ಫೋನು ಮಾಡಿದರೂ ಡೈರೆಕ್ಟರು ಇನ್ನೂ ಟೂರಿನಿಂದ ಬಂದಿಲ್ಲ ಎಂದು ತಿಳಿಯಿತು. Rinderpest Disease ನ್ನು ತಡೆಗಟ್ಟಲು ಸರಿಯಾದ ರೀಸರ್ಚು ಫಾರಂ ಕೂಡ ಇಲ್ಲ. ಇವೊತ್ತಿನ ದಿನ ಮುಖ್ಯವಾಗಿ ಜವಾಬುದಾರಿ ಹೊತ್ತ ಅಧಿಕಾರಿಗಳೂ ಸರಿಯಾಗಿ ಕೆಲಸ ಮಾಡದೇ ಇದ್ದರೆ ಎಷ್ಟು ಸಮಂಜಸವಾಗಿರುತ್ತದೆ, ತಾವೇ ಯೋಚನೆ ಮಾಡಬೇಕೆಂದು ಇಲ್ಲಿ ನಾನು ಹೇಳಬೇಕಾಗಿದೆ.

ಸರ್ಕಾರದ ದುಡ್ಡು ಹೋದರೆ ಹೋಗಲಿ. ಆದರೆ ಹಳ್ಳಿಗಳಲ್ಲಿ ಜನರು ಗಾಬರಿಯಾಗಿದ್ದಾರೆ. ಈ ರೋಗ ಅಕ್ಕಪಕ್ಕದ ಹಳ್ಳಿಗಳಲ್ಲ ಹಬ್ಬಿ ಎಲ್ಲಿ ತೊಂದರೆಯಾಗುತ್ತದೋ ಎಂಬ ಭಯ ಬಂದಿವೆ. ಡೈರೆಕ್ಟರ್ ಅವರು 13 ನೇ ತಾರೀಖಿನ ಹಿಂದು ಪೇಪರಿನಲ್ಲಿ ಒಂದು ಸ್ಟೇಟ್‌ಮೆಂಟು ಕೊಟ್ಟು ರಿಂಡರ್ ಪೆಸ್ಟ ಡಿಸೀಜ್ ಆದುದು ಸತ್ಯ ಎಂದು ಹೇಳಿದ್ದಾರೆ.

> "It was stated that vaccine from the Indian Veterinary Research Institute, Bareilly, was mild in character."

ಇನ್‌ಸ್ಟಿಟ್ಯೂಟ್ ಮೇಲೆ ತಪ್ಪು ಹಾಕಿದ್ದಾರೆ. ಅದನ್ನು ತರುವಾಗ್ಗೆ ಇಲ್ಲಿ ಮುಂಜಾಗ್ರತೆ ವಹಿಸಬೇಕಾಗಿತ್ತು. ಔಷಧಿ ಸರಿಯಾಗಿಲ್ಲ ಎಂದು ಹೇಳುವುದು ಸರಿಯಿಲ್ಲ. ಇಲ್ಲಿ ಅದನ್ನು ಪರಿಕ್ಷಿಸಲು ಲೈವ್‌ಸ್ಟಾಕ್ ಎಕ್ಸ್‌ಪರ್ಟ ಇರಲಿಲ್ಲವೆ? ಈಗಾಗಲೇ ಹತ್ತು ಜರ್ಸಿ ದನಗಳು ಸತ್ತು ಹೋಗಿವೆ. ಇದಕ್ಕೆ ಯಾರು ಜವಾಬ್ದಾರರು? ಈ ಜರ್ಸಿ ದನಗಳನ್ನು ತರುವುದಕ್ಕೆ ಎರಡು ಲಕ್ಷ ರೂಪಾಯಿ ಖರ್ಚಾಗಿದೆ. ಒಂದೊಂದು ದನಕ್ಕೆ 4,000 ರೂಪಾಯಿ ಬೆಲೆಯಾಗುತ್ತದೆ. ಅಂದರೆ 4,000 ರೂಪಾಯಿ ಹಾನಿಯಾಗಿದೆ. ಇದನ್ನು ತಡೆಗಟ್ಟಲು ಜವಾಬ್ದಾರರಾಗಿದ್ದವರು ಕ್ರಮ ಕೈಕೊಳ್ಳಲಿಲ್ಲವೆ? ರೋಗ ತಡೆಗಟ್ಟಲು ಮುಂಜಾಗ್ರತೆ ವಹಿಸಬೇಕಾಗಿತ್ತು.

ಶ್ರೀ ಎಂ. ವಿ. ಕೃಷ್ಣಪ್ಪ.—ರೋಗ ಬರಲಿಲ್ಲ, ರೋಗ ಬರಬಾರದು ಎಂದು ಮುಂಜಾಗ್ರತೆ ವಹಿಸಲು ವಾಕ್ಸಿನೇಶನ್ ಮಾಡಿತು. ಸಿಂಪ್ಟಂಮ್ಸ್ ಬರಲಿಲ್ಲ. ಸಿಂಪ್ಟಮ್ಸ್ ಬರಬೇಕಾಗಿತ್ತು ರೋಗ ಸಹ ಬರಲಿಲ್ಲ. ತರುವಾಗ್ಗೆ ಏರೋಪ್ಲೇನ್‌ನಲ್ಲಿ ಕೂಡ ಎರಡು ದನಗಳು ಸತ್ತು ಹೋದುವು.

ಶ್ರೀ ಸಿದ್ದಯ್ಯ ಕಾಶೀಮಠ.—ಇದನ್ನು ತಡೆಗಟ್ಟಲು ಮೊದಲಿನಿಂದ ಏಕೆ ಕ್ರಮ ತೆಗೆದು ಕೊಳ್ಳಲಿಲ್ಲ? ಡೈರೆಕ್ಟರ್ ಅವರು ಎಷ್ಟು ಬೇಜವಾಬ್ದಾರಿಯಿಂದ ಟೂರ್ ಮೇಲೆ ಹೋಗಿದ್ದರು ಎಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಪಶುಸಂಗೋಪನೆ ಇಲಾಖೆಯಲ್ಲಿ ಆಸಕ್ತಿ ವಹಿಸಿ ಮಂತ್ರಿಗಳು ಪರದೇಶಕ್ಕೆ ಹೋಗಿ ಒಳ್ಳೆ ತಳಿ ತಂದು ಇಲ್ಲಿ ಅಭಿವೃದ್ಧಿ ಮಾಡಬೇಕೆಂಬ ಹವ್ಯಾಸ ಇಟ್ಟು ಕೊಂಡಿದ್ದಾರೆ. ಆದರೆ ಅವರು ಈ ಗುರಿ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಸಂಶಯ ವಿರುತ್ತದೆ. ಪ್ರತಿ ಹತ್ತು ಹಳ್ಳಿಗಳಿಗೆ ಒಂದು ಪಶು ರಕ್ಷಣಾ ಕೇಂದ್ರ ತೆಗೆದರೆ ಅನುಕೂಲವಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಶಿರಹಟ್ಟಿ ಮತ್ತು ಬೆಳ್ಳಟ್ಟಿಯಲ್ಲಿ ಎರಡು ಕೇಂದ್ರಗಳಿವೆ. ಹಿಂದ ಕ್ಕೊಮ್ಮೆ 17 ತಿಂಗಳುಗಳವರೆಗೆ ಪ್ಯೂನ್‌ಗಳಿಗೆ ಪಗಾರ ಕೊಟ್ಟಿದ್ದಿಲ್ಲ. ಈಗ 8 ತಿಂಗಳುಗಳಿಂದ ಅಲ್ಲಿಯ ಪ್ಯೂನ್‌ಗಳಿಗೆ ಪಗಾರ ಕೊಟ್ಟಿಲ್ಲ. ಇವರು 40-50 ರೂಪಾಯಿ ಸಂಬಳ ತೆಗೆದುಕೊಳ್ಳುವ ಬಡ ನೌಕರರು. ಅವರಿಗೆ ತೊಂದರೆಯಾಗಿದೆ ಆದುದರಿಂದ ತಡ ಮಾಡದೆ ಕೂಡಲೇ ಅವರಿಗೆ ಪಗಾರ ಕೊಡಿಸಬೇಕು.

ಇನ್ನು ಕೋ-ಆಪರೇಟಿವ್ ಆಕ್ಟ್ ಬಗ್ಗೆ ಒಂದು ಸಲಹೆ ಮಾಡಲು ಇಚ್ಛಿಸುತ್ತೇನೆ. 14ನೇ ರೂಲ್‌ನಲ್ಲಿ ಅರ್ಜಿ ಹಾಕುವುದಕ್ಕೆ ಒಂದು ತಿಂಗಳು ಅವಧಿ, ಸ್ಕ್ರುಟಿನಿ ಮಾಡಲು ನಾಲ್ಕು ದಿವಸ ಅವಧಿ ಇರಬೇಕೆಂದು ಇದೆ. ಆದರೆ ಅರ್ಜಿಗಳನ್ನು withdraw ಮಾಡುವುದಕ್ಕೆ date ಇದರಲ್ಲಿಲ್ಲ. ಈ ರೂಲ್ಸ್‌ನಲ್ಲಿ withdraw ಮಾಡುವ date ಹಾಕಬೇಕು ಎಂದು ಹೇಳುತ್ತೇನೆ.

(ಶ್ರೀ ಸಿದ್ದಯ್ಯ ಕಾಶಿಮಠ)

ಇನ್ನೊಂದು ವಿಷಯ ಗ್ರಾಮ ಪಂಚಾಯಿತಿಗಳಲ್ಲಿ ಸೇವಾ ಸಹಕಾರ ಸಂಘಗಳು ಇರಬೇಕೆಂದು ಹೇಳುತ್ತಾರೆ. ಇವುಗಳಿಗೆ ನಿಬಂಧನೆ ಹಾಕಿ ರಿಜಿಸ್ಟರ್ ಮಾಡಬೇಕೆಂದು ಇರುವುದು ಯೋಗ್ಯ ವಾಗಿದೆ. ಈ ಸೇವಾ ಸಹಕಾರಿ ಸಂಘಗಳಲ್ಲಿ 200 ಜನ ಸದಸ್ಯರು ಮತ್ತು 5,000 ರೂಪಾಯಿ ಷೇರ್ ಬಂಡವಾಳ ಇರಬೇಕೆಂದು ಮಾಡಿ ಪ್ರತಿಯೊಂದು ಸೊಸೈಟಿಗೆ ವಹಿಸಿ ಕೊಡಬೇಕು ಅಂದರೆ ಒಳ್ಳೆಯ ದಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ (ಭೀಳಿಗೆರೆ).—ಮಾನ್ಯ ಸಭಾಪತಿಗಳೇ, ಸಭೆಯ ಮುಂದೆ ಮಂಡಿಸಿರುವ ವ್ಯವಸಾಯ ಇಲಾಖೆ ಬೇಡಿಕೆಗಳಿಗೆ ಸಮರ್ಥನೆ ಕೊಡುತ್ತಾ ಪಶುಸಂಗೋಪನೆ, ಅರಣ್ಯ, ಗ್ರಾಮಾಭಿವೃದ್ಧಿ, ರಾಷ್ಟ್ರೀಯ ವಿಸ್ತರಣಾ ಯೋಜನೆ, ಸಹಕಾರ ಮುಂತಾದ ಬೇಡಿಕೆಗಳನ್ನು ಸಂಪೂರ್ಣವಾಗಿ ಒಪ್ಪಿ ಅವುಗಳಿಗೆ ಬೆಂಬಲ ಕೊಡುತ್ತಾ ಅತಿ ಮುಖ್ಯವಾದ ವ್ಯವಸಾಯ ಇಲಾಖೆಯ ಬಗ್ಗೆ ಮಾತನಾಡಲು ಇಚ್ಛಿಸುತ್ತೇನೆ. ನಮ್ಮ ದೇಶದಲ್ಲಿ ವ್ಯವಸಾಯ ಬಹಳ ಪ್ರಾಮುಖ್ಯವಾದುದು. ನಮ್ಮ ದೇಶದಲ್ಲಿ ಶೇಕಡ 80 ರಷ್ಟು ಜನ ಹಳ್ಳಿಗಳಲ್ಲಿ ವಾಸಿಸುತ್ತಾರೆ. ವ್ಯವಸಾಯ ಅವರ ಮುಖ್ಯ ಕಸಬು ಆಗಿದೆ. ಸಾವಿರಾರು ವರ್ಷಗಳಿಂದ ಹಳ್ಳಿಗಳಲ್ಲಿ ಇದು ಜಾರಿಗೆ ಬಂದಿದೆ. ವ್ಯವಸಾಯ ಇಲಾಖೆ ಅನೇಕ ವರ್ಷಗಳಿಂದ ಸಂಶೋಧನೆ ನಡೆಸಿದೆ. ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡಲು ಸಾಕಷ್ಟು ಬಿತ್ತನೆ ಬೀಜ, ವ್ಯವಸಾಯ ಸಾಮಗ್ರಿಗಳು, ಒಳ್ಳೇ ಗೊಬ್ಬರ ಒದಗಿಸುವುದಕ್ಕೆ ಪ್ರಯತ್ನ ನಡೆದಿದೆ. ಆದರೆ ವ್ಯವಸಾಯ ಇಲಾಖೆಯು ಎಷ್ಟರ ಮಟ್ಟಿಗೆ ಸಹಾಯ ಮಾಡಬೇಕೋ ಅಷ್ಟರ ಮಟ್ಟಿಗೆ ಸಹಾಯ ಮಾಡಿಲ್ಲ ಎಂದು ತಿಳಿಸತಕ್ಕಂಥಾದ್ದು ನಮ್ಮ ಕರ್ತವ್ಯವಾಗಿದೆ. ನೂರಕ್ಕೆ ಐದರಷ್ಟು ರೈತರು ಬಿತ್ತನೆ ಬೀಜವನ್ನು ಸೊಸೈಟಿಯಿಂದಾಗಲಿ, ವ್ಯವಸಾಯ ಇಲಾಖೆಯಿಂದಾಗಲಿ ಪಡೆದಿಲ್ಲ ಎಂದು ಸ್ಪಷ್ಟವಾಗಿ ತಿಳಿಸುತ್ತೇನೆ. ಸಾಧಾರಣವಾಗಿ ರೈತನಿಗೆ ಬೇಕಾಗುವಬೀಜ ಮಳೆಗಾಲ ಬರುವುದಕ್ಕೆ ಮುಂಚೆ ಸಕಾಲದಲ್ಲಿ ಒದಗಿಸಬೇಕು. ಸಕಾಲದಲ್ಲಿ ರೈತನು ಉಪಯೋಗಿಸಿದರೆ ಲಾಭ ಪಡೆಯುತ್ತಾನೆ. ಸಾಗುವಳಿ ಮಾಡಲು ಒಳ್ಳೇ ಗೊಬ್ಬರ ಸಿಕ್ಕುತ್ತಿಲ್ಲ. ಚೀಣೀ ಆಕ್ರಮಣದ ನಂತರ ಹೆಚ್ಚು ಆಹಾರ ಉತ್ಪಾದನೆ ಮಾಡಬೇಕೆಂಬ ಧೋರಣೆ ವ್ಯವಸಾಯ ಇಲಾಖೆಯಲ್ಲಿ ಬಂದಹಾಗೆ ಇದೆ. ರೈತನ ತೊಂದರೆ ನಿವಾರಣೆಮಾಡಿ ರೈತನಿಗೆ ಸಹಾಯ ಒದಗಿಸಿ ಕೊಟ್ಟು ಹೆಚ್ಚಾಗಿ ಅನುಕೂಲಮಾಡಿ ಕೊಡುವ ಕಾರ್ಯವಾಗಬೇಕು. ಒಟ್ಟಿನಲ್ಲಿ ಇಂದು ದೇಶದಲ್ಲಿ ಹೆಚ್ಚು ಆಹಾರ ಉತ್ಪಾದನೆಯಾಗಬೇಕಾಗಿದೆ. ಸಾವಿರಾರು ವರ್ಷಗಳಿಂದ ಹಳೇ ಪದ್ಧತಿಯನ್ನು ರೈತನು ಅನುಸರಿಸಿ ಕೊಂಡು ಬರುವುದರಿಂದ ಆಹಾರ ಉತ್ಪಾದನೆ ಹೆಚ್ಚಾಗುವುದಿಲ್ಲ. ಅತ್ಯಾಧುನಿಕ ಸಲಕರಣೆ ಉಪಯೋಗಿಸಿ ಒಳ್ಳೇ ಬಿತ್ತನೆ ಬೀಜ, ಗೊಬ್ಬರ ಉಪಯೋಗಿಸಿದರೆ ವ್ಯವಸಾಯ ಸ್ವಯಂಪೂರ್ಣ ವಾಗುವುದರಲ್ಲಿ ಸಂಶಯವಿಲ್ಲ. ವ್ಯವಸಾಯ ಇಲಾಖೆಯಲ್ಲಿಯೂ ಕೂಡ ಆಧುನಿಕ ರೀತಿಯಲ್ಲಿ ಪರಿವರ್ತನೆಯಾಗಬೇಕಾದುದು ಅಗತ್ಯ. ಈ ಇಲಾಖೆಯಲ್ಲಿ ಸಂಶೋಧನೆಗಾಗಿ 60-70 ಲಕ್ಷ ರೂಪಾಯಿ ಖರ್ಚುಮಾಡಲಾಗುತ್ತಿದೆ. ನಮ್ಮ ರಾಜ್ಯದಲ್ಲಿ 27 ರಿಸರ್ಚ್ ಸೆಂಟರ್ಸ್ ಇವೆ. ಆಧುನಿಕ ರೀತಿಯಲ್ಲಿ ಸಂಶೋಧನೆ ನಡೆಸುತ್ತಿದ್ದೀರಿ. ಈ ಸಂಶೋಧನೆ ಮೂಲಕ ದೊರೆಯುವ ಅನುಭವವನ್ನು ರೈತನಿಗೆ ಪ್ರಾಕ್ಟಿಕಲ್ಲಾಗಿ ವಿವರವಾಗಿ ತಿಳಿಸಿ ಪ್ರಯೋಜನ ಹೊಂದುವಹಾಗೆ ಮಾಡಬೇಕು. ತಜ್ಞರು ಎಷ್ಟರ ಮಟ್ಟಿಗೆ ತಿಳುವಳಿಕೆ ಕೊಡುತ್ತಾರೋ ಅಷ್ಟರ ಮಟ್ಟಿಗೆ ಪ್ರಯೋಜನ ಹೊಂದುವ ರೀತಿಯಲ್ಲಿ ಮಾಡತಕ್ಕಂಥಾದ್ದು ಅಗತ್ಯವಾದ ವಿಚಾರ.

ಆದರೆ ವ್ಯವಸಾಯ ಇಲಾಖೆಯಿಂದ ಏನು ಕೆಲಸವಾಗಿದೆಯೆಂದರೆ ಕಾಂಟೂರ್ ಬಂಡಿಗೋಸ್ಕರ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಒಂದು ಚೆನ್ನಾಗಿ ನಡೆದಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ 20 ಲಕ್ಷ ಎಕರೆ ರೇಕ್ಲಮೇಷನ್ ನಡೆದಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 40 ಲಕ್ಷ ಎಕರೆ ರೆಕ್ಲಮೇಷನ್ ನಡೆದಿದೆ. 40 ಬುಲ್ಡೋಜರುಗಳು, 40 ಟ್ರ್ಯಾಕ್ಟರುಗಳು ಇವುಗಳ ಉಪಯೋಗದಿಂದ ಲ್ಯಾಂಡ್ ರೆಕ್ಲಮೇಷನ್ ಯಶಸ್ವಿಯಾಗಿ ನಡೆದಿದೆ. ಟ್ರ್ಯಾಕ್ಟರುಗಳು ಮತ್ತು ಬುಲ್ಡೋಜರುಗಳಿಂದ ಜನತೆ ಎಷ್ಟರ ಮಟ್ಟಿನ ಪ್ರಯೋಜನವನ್ನು ಹೊಂದ ಬೇಕೋ ಅಷ್ಟರಮಟ್ಟಿನ ಪ್ರಯೋಜನವನ್ನು ಹೊಂದುವುದಕ್ಕೆ ಸಾಧ್ಯವಾಗಿಲ್ಲ ಮತ್ತು ಅವುಗಳು ಒಳ್ಳೆಯ ಕಂಡೀಷನ್‌ನಲ್ಲಿ ಇಲ್ಲ. ಇಲಾಖೆಯ ಮುಖಾಂತರ ಈ ಟ್ರ್ಯಾಕ್ಟರುಗಳು ಮತ್ತು ಬುಲ್ಡೋಜರ್‌ಗಳನ್ನು ಜನಗಳಿಗೆ ಒದಗಿಸುವ ವ್ಯವಸ್ಥೆಯಿಂದ ತಕ್ಕ ಮಟ್ಟಿಗೆ ಇವುಗಳ ಉಪಯೋಗ ನಡೆದರೂ ಸಹ ಇವುಗಳ ಜವಾಬ್ದಾರಿಯನ್ನು ಸಹಕಾರ ಸಂಘಗಳಿಗೆ ವಹಿಸಿದ ಪಕ್ಷದಲ್ಲಿ ಅವುಗಳಿಂದ ಹೆಚ್ಚಿನ ಕೆಲಸವಾಗುತ್ತದೆ, ಎನ್ನುವುದನ್ನು ನಾನು ಸರ್ಕಾರಕ್ಕೆ ಸಲಹೆ ಮಾಡಲಿಚ್ಛಿಸುತ್ತೇನೆ.

ಈಗ ಬಹಳ ಪ್ರಾಮುಖ್ಯವಾಗಿ ವ್ಯವಸಾಯದ ಕಾಲೇಜುಗಳು ಹೆಬ್ಬಾಳ ಮತ್ತು ಧಾರವಾಡ ದಲ್ಲಿ ಇವೆ. ಈ ಒಂದು ವಿದ್ಯಾಭ್ಯಾಸವನ್ನು ಮಾಡುವುದರ ಜೊತೆಗೆ ಹೆಚ್ಚಿನ ಸಂಶೋಧನೆಯನ್ನು

ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಸಿ.ಡಿ. ಬ್ಲಾಕ್, ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯು ಜಾರಿಗೆ ಬಂದಮೇಲೆ ಅದು ವ್ಯವಸಾಯದ ಇಲಾಖೆಗೆ ಓವರ್ ಲ್ಯಾಪ್ಡ್ ಆಗಿದೆ. ಇದರಿಂದ ಸ್ವಲ್ಪ ಜನಗಳಿಗೆ ಒಂದು ರೀತಿಯ ಕನ್ಫ್ಯೂಜನ್ ಆಗಿದೆ ಎನ್ನುವುದನ್ನು ನಾನು ಹೇಳು ವುದಕ್ಕೆ ಇಚ್ಛಿಸುತ್ತೇನೆ. ಸಿ.ಡಿ. ಬ್ಲಾಕುಗಳು ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ವ್ಯವಸಾಯದ ಒಂದು ಪ್ರಾಕ್ಟಿಕಲ್ ವರ್ಕ್ ಮಾಡುತ್ತಾ ಇರುವುದರಿಂದ ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ವಿದ್ಯಾಭ್ಯಾಸವನ್ನು ಮಾಡುವುದರ ಜೊತೆಗೆ ಹೆಚ್ಚಿನ ಸಂಶೋಧನೆಯನ್ನು ಮಾಡಿ ಫೀಲ್ಡ್ ಕೆಲಸ ಮಾಡುವುದಕ್ಕೆ ಅವಕಾಶವನ್ನು ಒದಗಿಸಿಕೊಟ್ಟು ಒಂದು ಸಾಮರಸ್ಯವನ್ನು ಉಂಟು ಮಾಡಿದರೆ ವ್ಯವಸಾಯದ ಇಲಾಖೆ ಇನ್ನೂ ಹೆಚ್ಚಿನ ಫಲಪ್ರದವಾದ ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನಾನು ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ವ್ಯವಸಾಯ ಇಲಾಖೆಯಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಬೇಕು. ಹೆಚ್ಚಿನ ಉತ್ಪಾದನೆಯನ್ನು ಮಾಡಬೇಕು..ನಮ್ಮ ದೇಶದಲ್ಲಿ 100ಕ್ಕೆ 80 ಜನ ಈ ಕಸಬನ್ನು ಅವಲಂಬಿಸಿರುವುದರಿಂದ ಆ ಜನಗಳ ಜೀವನದ ಮಟ್ಟ ಉತ್ತಮವಾಗ ಬೇಕಾಗಿದೆ. ಪ್ರಜಾಪ್ರಭುತ್ವದಲ್ಲಿ ನಾಗರೀಕ ಪ್ರಜೆಗಳು ಸುಖ ಸಂತೋಷದಿಂದ ಬಾಳಬೇಕಾದರೆ ಈ ವ್ಯವಸಾಯ ಇಲಾಖೆ ಹೆಚ್ಚಿನ ಕೆಲಸವನ್ನು ಮಾಡಬೇಕು. ಈ ಇಲಾಖೆಯಲ್ಲಿ ಹೆಚ್ಚು ಹಣವನ್ನು ಖರ್ಚುಮಾಡಿದರೂ ಸಹ ಅದು ಸಾರ್ಥಕವಾಗಬೇಕು. ಯಾವ ಇಲಾಖೆ ಸಂಶೋಧನಾ ಕೆಲಸವನ್ನು ನಡೆಸುತ್ತಿದೆಯೋ ಅದು ಫೀಲ್ಡ್ ಕೆಲಸವನ್ನು ಮಾಡತಕ್ಕ ಮನುಷ್ಯನ ಅನುಕೂಲಕ್ಕೆ ಆಗುವಂತೆ ಇರ ಬೇಕು. ಸಂಶೋಧನೆಯ ಫಲ ಬಿತ್ತನೆ ಮಾಡುವ ಕೆಲಸಕ್ಕೆ ಅನುಕೂಲವಾಗಿ ' ಉತ್ತಮವಾಗಿ ದಿನೇ ದಿನೇ ಪ್ರಗತಿದಾಯಕವಾದ ಬೆಳೆಯನ್ನು ಬೆಳೆಯುವುದಕ್ಕೆ ವ್ಯವಸಾಯ ಇಲಾಖೆಯವರು ಅನುಕೂಲ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಗೋಸಂಪತ್ತಿನ ವಿಚಾರದಲ್ಲಿ ಹೇಳುವುದಾದರೆ ಯಾವ ದೇಶದಲ್ಲೇ ಆಗಲೀ ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ ಗೋಸಂಪತ್ತು ಚೆನ್ನಾಗಿರಬೇಕು. ಈಗ ನಮ್ಮ ದೇಶದಲ್ಲಿ ಗೋಸಂಪತ್ತು ಪರಿಪೂರ್ಣವಾಗಿದೆ ಎಂದು ನಾವು ಭಾವಿಸುವುದಕ್ಕಾಗುವುದಿಲ್ಲ. ನಮ್ಮ ದೇಶ ಸಹಸ್ರಾರು ವರ್ಷ ಗಳಿಂದ ಗೋಸಂಪತ್ತನ್ನು ಪಡೆದುಕೊಂಡು ಬಂದಿದೆ. ಗೋಸಂಪತ್ತು ಎಂದರೆ ಮುಖ್ಯವಾಗಿ ಒಳ್ಳೆಯತಳಿ ಎತ್ತುಗಳನ್ನು, ಹಸುಗಳನ್ನು, ಕುರಿ ಮೇಕೆಗಳನ್ನು ಇಟ್ಟುಕೊಂಡರೆ ವ್ಯವಸಾಯ ಗಾರನಿಗೆ ಸಹಾಯವಾಗುತ್ತದೆ. ಅವು ಒಳ್ಳೆಯ ಗೊಬ್ಬರವನ್ನು ಮತ್ತು ಹಾಲನ್ನೂ ಕೊಡುತ್ತವೆ. ಆದ್ದರಿಂದ ಗೋಸಂಪತ್ತು ಅಭಿವೃದ್ಧಿಯಾಗಬೇಕು. ಹಾಲು ಜನಗಳಿಗೆ ಮುಖ್ಯವಾದ ಆಹಾರ ವಾಗಿರುವುದರಿಂದ ಬೆಂಗಳೂರಿನಲ್ಲಿ ಕ್ಷೀರ ಸಮೃದ್ಧಿಕ್ಷೇತ್ರವನ್ನು ಸರ್ಕಾರದವರು ಚೆನ್ನಾಗಿ ನಡೆಸಿ ದ್ದಾರೆ. ಒಂದು ಲಕ್ಷ ಪ್ರಜಾಸಂಖ್ಯೆ ಇರುವ ಎಲ್ಲಾ ಕಡೆಗೂ ಮಿಲ್ಕ್ ಡೈರಿ ಸೆಂಟರುಗಳನ್ನು ಮಾಡ ಬೇಕೆಂಬ ಯೋಚನೆ ಸರ್ಕಾರದಲ್ಲಿದೆ. ಈ ಇಲಾಖೆಯನ್ನು ವಹಿಸಿಕೊಂಡಿರುವ ಮಾನ್ಯ ಮಂತ್ರಿಗಳಾದ ಶ್ರೀ ಮಾನ್ ಎಂ. ವಿ. ಕೃಷ್ಣಪ್ಪನವರು ಕೇಂದ್ರ ಸರ್ಕಾರದಲ್ಲಿ ಅನೇಕ ವರ್ಷಗಳು ವ್ಯವಸಾಯ ಇಲಾಖೆ ಮತ್ತು ಅನಿಮಲ್ ಹಸ್ಬೆಂಡರಿ ಇಲಾಖೆಗಳನ್ನು ವಹಿಸಿಕೊಂಡು ಕೆಲಸಮಾಡಿ ಅನುಭವವನ್ನು ಪಡೆದಿದ್ದಾರೆ.' ಮತ್ತು ಪಾಶ್ಚಿಮಾತ್ಯ ದೇಶಕ್ಕೆ ಹೋಗಿ ಒಳ್ಳೆಯ ತಳಿಯನ್ನು ಬೆಳೆಸುವುದು ಮುಂತಾದ ಅನುಭವವನ್ನು ಪಡೆದುಕೊಂಡು ಬಂದಿದ್ದಾರೆ. ಅವರು ಬಹಳ ಉತ್ಸಾಹಶಾಲಿಗಳು. ಅವರಿಗೆ ರೈತನ ವಿಷಯದಲ್ಲಿ ತುಂಬಾ ವಿಶ್ವಾಸವಿದೆ. ಗೋಸಂಪತ್ತನ್ನು ನಮ್ಮ ದೇಶಕ್ಕೆ ಅನುಗುಣ ವಾಗಿ ಅಭಿವೃದ್ಧಿ ಮಾಡಬೇಕಾಗಿದ್ದರೆ ಪಾಶ್ಚಿಮಾತ್ಯ ದೇಶದ ಅನುಭವವನ್ನು ಉಪಯೋಗಿಸಿಕೊಂಡು ಅಭಿವೃದ್ಧಿಯನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ನಮ್ಮ ದೇಶದಲ್ಲಿರತಕ್ಕ ಒಟ್ಟು 516 ವೆಟರ್ನರಿ ಆಸ್ಪತ್ರೆಗಳ ಪೈಕಿ 144 ಆಸ್ಪತ್ರೆಗಳಲ್ಲಿ ಮಾತ್ರ ಶಸ್ತ್ರ ಚಿಕಿತ್ಸೆಯ ಅನುಭವವಿರತಕ್ಕ ಡಾಕ್ಟರುಗಳಿದ್ದಾರೆ. ಇನ್ನು ಉಳಿದಂಥಾ ಆಸ್ಪತ್ರೆಗಳಲ್ಲಿ ಸ್ಟಾಕ್‌ಮೆನ್‌ಗಳೇ ಆ ಕೆಲಸವನ್ನು ಮಾಡು ತ್ತಿದ್ದಾರೆ. ಶ್ರೀಮಾನ್ ಎ: ಜಿ. ರಾಮಚಂದ್ರರಾಯರ ಕಮಿಟಿ ರಿಪೋರ್ಟಿನಲ್ಲಿ ವೆಟರ್ನರಿ ಆಸ್ಪತ್ರೆ ಗಳನ್ನು ಹೆಚ್ಚಿಸಬೇಕು, ಶಸ್ತ್ರ ಚಿಕಿತ್ಸೆ ಮಾಡುವ ಸಾಮಾನುಗಳು ಮತ್ತು ಒಳ್ಳೆಯ ಅನುಭವವಿರುವ ಡಾಕ್ಟರುಗಳು ಇರಬೇಕೆಂದು ಹೇಳಿದ್ದಾರೆ. ಹೆಚ್ಚು ಜಾನುವಾರುಗಳಿಗೆ ಖಾಯಿಲೆ ಆಗುವುದರಿಂದ ಅವುಗಳನ್ನು ನೋಡಿಕೊಳ್ಳುವುದಕ್ಕೆ ವೆಟರ್ನರಿ ಆಸ್ಪತ್ರೆಗಳಿರಬೇಕು ಮತ್ತು ಅವು ಚೆನ್ನಾಗಿ ಕೆಲಸ ಮಾಡಬೇಕು.

ಇನ್ನು ಸಾಮುದಾಯಿಕ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳು. ಈ ವಿಷಯದಲ್ಲಿ ಬಹುಮುಖ್ಯವಾದದ್ದು ಏನೆಂದರೆ ಪ್ರತಿ ಹಳ್ಳಿಗೂ ಕೂಡ ಕುಡಿಯುವ ನೀರಿನ ಬಾವಿಯನ್ನು ಒದಗಿಸ ಬೇಕು. ಈ ವರ್ಷದ ಬಡ್ಜೆಟ್ ಭಾಷಣದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ''Drinking water is a primary necessity of life. With a view to tackle the problem on any emergency basis, a survey was undertaken of the present position which revealed that there are 5,200 villages in the State which do not have

(ಶ್ರೀ ಡಿ. ಎಂ. ಸಿದ್ದಯ್ಯ)

even a single well capable of yielding potable water.'' ಎಂದು ಹೇಳಿದ್ದಾರೆ ನಮ್ಮ ದೇಶದಲ್ಲಿ ಸುಮಾರು 5,200 ಹಳ್ಳಿಗಳಲ್ಲಿ ಕುಡಿಯುವ ನೀರಿನ ಒಂದು ಬಾವಿಯೂ ಇಲ್ಲ ಎಂದು. ಮಾನ್ಯ ಹಣಕಾಸಿನ ಸಚಿವರು ಒಪ್ಪಿಕೊಂಡಿದ್ದಾರೆ. ಇಂಥಾ ಪರಿಸ್ಥಿತಿ ನಮ್ಮ ದೇಶದಲ್ಲಿರುವಾಗ ಹಳ್ಳಿಗಳ ಉದ್ಧಾರಕ್ಕಾಗಿ ಕೆಲಸ ಮಾಡುವಂಥಾದ್ದು ಪ್ರಾಮುಖ್ಯ. ಹಳ್ಳಿಗಳಲ್ಲಿರತಕ್ಕ ಜನರಿಗೆ ಕುಡಿಯುವ ನೀರು ಒದಗದೇ ಇದ್ದರೆ ಉಳಿದ ಪ್ರಗತಿಯನ್ನು ಹೇಗೆ ಸಾಧಿಸಿದೆ ಎನ್ನುವಂಥಾದ್ದನ್ನು ನಾವು ಯೋಚನೆಮಾಡಬೇಕಾದ್ದೆ. ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಕೆಲಸಗಳು ಇದುವರೆಗೆ 51 ಕೆಲಸಗಳು ಪೂರ್ಣವಾಗಿವೆ. ಕುಡಿಯುವ ನೀರನ್ನು ಒದಗಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರ ದವರ ನೆರವು ಇದೆ. ಪೈಪು ಮೂಲಕ ಜನಗಳಿಗೆ ನೀರನ್ನು ಒದಗಿಸತಕ್ಕದ್ದು ಮತ್ತು ಹಳ್ಳಿಗಳಲ್ಲಿ ಚರಂಡಿ ವ್ಯವಸ್ಥೆ ಮಾಡತಕ್ಕದ್ದು ಇವೆಲ್ಲವೂ ದುರವಸ್ಥೆಯ ಸ್ಥಿತಿಯಲ್ಲಿವೆ. ನಾವು ಸ್ವರಾಜ್ಯವನ್ನು ಸಂಪಾದನೆ ಮಾಡಿ 15 ವರ್ಷಗಳಾದುವು. ನಾವು ಪ್ರಜಾಪ್ರಭುತ್ವದ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದೇವೆ. ಮುಖ್ಯವಾಗಿ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಚರಂಡಿ ವ್ಯವಸ್ಥೆ, ಸ್ಕೂಲು, ಪಂಚಾಯಿತಿ ಹಾಲು, ನಾಲ್ಕೈದು ಹಳ್ಳಿಗಳನ್ನು ಸೇರಿಸಿ 15 ಸಾವಿರ ಪ್ರಜಾಸಂಖ್ಯೆ ಇರುವ ಜಾಗಕ್ಕೆ ಒಂದು ಆಸ್ಪತ್ರೆ ಇವುಗಳನ್ನು ಅತ್ಯವಶ್ಯಕವಾಗಿ ಮಾಡಲೇಬೇಕು. ಇವುಗಳನ್ನು ಮಾಡದೇ ಹೋದರೆ ಹಳ್ಳಿಗಳ ಪುನರುದ್ಧಾರವನ್ನು ಸಾಧಿಸುವುದು ಸಾಧ್ಯವಿಲ್ಲ. ಪ್ರಜಾಪ್ರಭುತ್ವಕ್ಕಾಗಿ ಕಾಂಗ್ರೆಸ್ ಮಹಾಸಂಸ್ಥೆ ದುಡಿದು ಸ್ವಾತಂತ್ರ್ಯವನ್ನು ಸಂಪಾದನೆಮಾಡಿತು. ಯಾವ ಒಂದು ಸಮತಾವಾದ ಸಮಾಜವನ್ನು ಸ್ಥಾಪನೆಮಾಡಿ ದೇಶದಲ್ಲಿ ಸುಖಸಂಪತ್ತನ್ನು ರಚನೆ ಮಾಡುತ್ತೇವೆಂದು ಕಾಂಗ್ರೆಸ್ ಸಂಸ್ಥೆಯವರು ಪಣತೊಟ್ಟಿದ್ದರೋ ಅದು ಸಾರ್ಥಕವಾಗಬೇಕಾದರೆ ಸರ್ಕಾರದವರ ದೃಷ್ಟಿ ಹಳ್ಳಿಗಳಕಡೆ ಹರಿಯು ಬೇಕು. ನಮ್ಮ ಸರ್ಕಾರದವರು ಹಳ್ಳಿಗಾಡಿನಲ್ಲಿರತಕ್ಕ ಜನಗಳಿಗೆ ಪ್ರಜಾಪ್ರಭುತ್ವ ಸರ್ಕಾರದ ಸುಖವನ್ನು ಅನುಭವಿಸುವುದಕ್ಕೆ ಅರ್ಹರಾಗುವಂತೆ ಮಾಡಬೇಕು. ಹಳ್ಳಿಗಾಡಿನಲ್ಲಿರತಕ್ಕ ಜನಗಳಿಗೆ ಸುಖಸೌಲಭ್ಯಗಳನ್ನು ಒದಗಿಸಿ ಅವರ ಜೀವನಮಟ್ಟ ಉತ್ತಮವಾಗುವಂತೆ ನಮ್ಮ ಸರ್ಕಾರದವರು ಮಾಡಬೇಕು. ಸಾಮುದಾಯಿಕ ಯೋಜನೆಗಳು, ರಾಷ್ಟ್ರೀಯ ವಿಸ್ತರಣಾ ಯೋಜನೆಗಳು 1963ನೇ ಇಸವಿಯಲ್ಲಿ ದೇಶಾದ್ಯಂತ ಜಾರಿಗೆ ಬರುತ್ತವೆ.

ಸಾಮುದಾಯಿಕ ಯೋಜನೆಗಳು ನಿಜವಾಗಿಯೂ ಕೂಡ ಹಳ್ಳಿಯ ಜನಗಳ ಜೀವನವನ್ನು ಮಾರ್ಪಡಿಸಿ, ಯೋಜನೆಗಳ ಹೆಗ್ಗುರಿ ಮತ್ತು ಆದರ್ಶಗಳು ಸಾಧನೆಯಾಗುವಂತೆ ಕೆಲಸ ಮಾಡ ಬೇಕು. ಸಿ. ಡಿ. ಆಫೀಸರುಗಳೇ ಆಗಲಿ, ಗ್ರಾಮ ಸೇವಕರುಗಳೇ ಆಗಲಿ, ಜನಗಳ ಜೊತೆ ಬೆರತು ಅವರ ಆಶೋತ್ತರಗಳನ್ನು ಅರ್ಥ ಮಾಡಿಕೊಂಡು, ಅವರ ವಿಶ್ವಾಸವನ್ನುಗಳಿಸಿ ಅವರಿಂದ ಈ ಒಂದು ಸಾಮುದಾಯಿಕ ಯೋಜನೆಗೆ ನೆರವು ಪಡೆದು ಈ ಮಹತ್ಕಾರ್ಯದಲ್ಲಿ ತೊಡಗುವುದಕ್ಕೆ ಅಶಕ್ತರಾಗಿದ್ದಾರೆಂದು ಹೇಳಲು ಇಚ್ಛೆಪಡುತ್ತೇನೆ. ನಿನ್ನೆ ದಿವಸ ನಮ್ಮ ಚಾಮರಾಜನಗರ ಎನ್.ಇ.ಎಸ್. ಬ್ಲಾಕನ್ನು ನಮ್ಮ ಮೈಸೂರಿನ ಡೆಪ್ಯುಟಿ ಕಮಿಷನರು ಇನ್ಸ್ಪೆಕ್ಟ್ ಮಾಡಿ ಎರಡನೇ ಬ್ಲಾಕಿನಲ್ಲಿ ಏನೂ ಕೆಲಸವಾಗಿಲ್ಲ, ಸುಮ್ಮನೆ ಜೀಪುಗಳು ಓಡಾಡುತ್ತಿವೆ ಎಂದು ಪೇಪರಿಗೆ ಒಂದು ವರದಿ ಕೊಟ್ಟಿದ್ದಾರೆ. ಒಂದನೇ ಬ್ಲಾಕಿನಲ್ಲಿ ಸುಮಾರಾಗಿ ಕೆಲಸವಾಗಿದೆ; ಆದರೆ ಈ ಎರಡನೇ ದರಲ್ಲಿ ಜೀಪುಗಳ ಓಡಾಟವನ್ನು ನೋಡಿ ಅವು ಎಲ್ಲಿಗೆ ಹೋಗುತ್ತವೆ, ಏಕೆ ಹೋಗುತ್ತವೆ ಎಂದು ಪ್ರಶ್ನಿಸಿ ಜನಗಳು ಆಶ್ಚರ್ಯ ಪಡುತ್ತಾರೆ. ಡೆಪ್ಯುಟಿ ಕಮಿಷನರೆ ಪತ್ರಿಕಾ ಪ್ರತಿನಿಧಿಗಳಿಗೆ ಈ ರೀತಿ ಹೇಳಬೇಕಾದರೆ, ಈ ಸಿ. ಡಿ. ಮತ್ತು ಸಾಮುದಾಯಿಕ ಯೋಜನೆಗಳು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿವೆಯೆಂದು ನಾವು ಊಹಿಸಿಕೊಳ್ಳಬಹುದು. ಸರ್ಕಾರದವರು ಪುನರ್ವಿಮರ್ಶೆ ಮಾಡಿ ಎಲ್ಲೆಲ್ಲಿ ಏನು ದೋಷವಿದೆಯೋ ಅದನ್ನು ಸರಿಪಡಿಸಬೇಕು. ನಮ್ಮ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಡೇ ಅವರು ಹಗಲು ಸಂಜೆ ಈ ಸಾಮುದಾಯಿಕ ಯೋಜನೆಗಳ ವಿಷಯದಲ್ಲಿ ಎಷ್ಟರ ಮಟ್ಟಿಗೆ ಉತ್ಸಾಹಶಾಲಿಗಳಾಗಿದ್ದಾರೆಂದರೆ, ಹಿಂದುಸ್ಥಾನದಲ್ಲಿ ಕೇವಲ ಅತ್ಯಲ್ಪ ಕಾಲದಲ್ಲಿ ಕ್ರಾಂತಿಕಾರಕವಾದ ಒಂದು ರೀತಿಯಲ್ಲಿ ಬದಲಾವಣೆ ಮಾಡಿ, ನಮ್ಮ ದೇಶದ ಜನಗಳೆಲ್ಲರೂ ಕೂಡ ಸುಖಿಗಳಾಗಬೇಕು ಎಂದು ಆಸೆಯನ್ನು ಇಟ್ಟುಕೊಂಡು ಕೆಲಸ ಮಾಡು ತ್ತಿದ್ದಾರೆ. ಈ ಸಾಮುದಾಯಿಕ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಬೇಕಾದಷ್ಟು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧರಿದ್ದಾರೆ. ನಮ್ಮ ಸರ್ಕಾರದವರು ಕೂಡ ರಾಜ್ಯದ ಎಲ್ಲಾ ಕಡೆಯಲ್ಲಿಯೂ ಸಾಮುದಾಯಿಕ ಯೋಜನೆಗಳನ್ನು ಜನಗಳಿಗೆ ಪ್ರಯೋಜನವಾಗಲಿ ಎಂದು ಜಾರಿಗೆ ತಂದಿದ್ದಾರೆ. ಈ ಹಣ ಕೊಟ್ಟದ್ದು ಸಾರ್ಥಕ ವಾಗುತ್ತಿದೆಯೇ, ಹಳ್ಳಿಗಾಡಿನ ಜನಗಳಿಗೆ ಈ ಸಾಮುದಾಯಿಕ ಯೋಜನೆ ಹಾಗೂ ಈ ಒಂದು ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಎಷ್ಟರ ಮಟ್ಟಿಗೆ ಪ್ರತಿಫಲ ದೊರಕುತ್ತಿದೆ. ಎಷ್ಟರ

ಮಟ್ಟಿಗೆ ದೊರಕಬೇಕೋ ಅಷ್ಟು ದೊರಕುತ್ತಿದೆಯೋ ಅನ್ನತಕ್ಕಂಥಾದ್ದನ್ನು ಸರ್ಕಾರದವರು ಆಮೂಲಾಗ್ರವಾಗಿ ವಿಮರ್ಶೆ ಮಾಡಿ, ಇವುಗಳು ಹಳ್ಳಿಗಾಡಿನವರಿಗೆ ಅನುಕೂಲವಾಗುವ ರೀತಿಯಲ್ಲಿ ವಿನಿಯೋಗವಾಗಿ ಕೊಟ್ಟ ಹಣ ಸಾರ್ಥಕವಾಗಿದೆಯೋ ಎನ್ನುವುದನ್ನು ನೋಡಬೇಕೆಂದು ಸೂಚನೆ ಕೊಡುತ್ತೇನೆ.

2-00 P.M.

ನಾಲ್ಕನೆಯದಾಗಿ ಈ ಸಹಕಾರ ಸಂಘದ ವಿಷಯದಲ್ಲಿ ಒಂದು ಮಾತು ಹೇಳದಿದ್ದ ಪಕ್ಷದಲ್ಲಿ ಕರ್ತವ್ಯಲೋಪವಾಗುತ್ತದೆ. ಈ ಸಹಕಾರ ಸಂಘಗಳು ಇನ್ನೂ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಬೇಕು. ಪ್ರತಿಯೊಂದು ಪಂಚಾಯಿತಿಗೂ ಒಂದು ಕನ್‌ಸ್ಯೂಮರ್ ಸೊಸೈಟಿ ಅವಶ್ಯಕವಾಗಿ ಬೇಕು. ಇದನ್ನು ಅನೇಕ ಕಡೆಗಳಲ್ಲಿ ಕೊಡದಿರುವುದರಿಂದ ರೈತರು ಹಾಳಾಗುತ್ತಿದ್ದಾರೆ. ನಮ್ಮ ದೇಶ ಉದ್ಧಾರವಾಗಬೇಕಾದರೆ ಸಹಕಾರ ತತ್ವದಲ್ಲಿ ಅನೇಕ ಕಾರ್ಯಗಳು ಜನರ ಹಿತದೃಷ್ಟಿಯಿಂದ ನಡೆಯಬೇಕು. ಸಹಕಾರ ತತ್ವ ಎಷ್ಟರ ಮಟ್ಟಿಗೆ ಬೆಳೆದರೆ ಅಷ್ಟರ ಮಟ್ಟಿಗೆ ಹಳ್ಳಿ ಜೀವನ ಅಭಿವೃದ್ಧಿಯಾಗುವುದಕ್ಕೆ ಅನುಕೂಲವಾಗುತ್ತದೆ.

ಕೊನೆಯದಾಗಿ, ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು, ಅರಣ್ಯದ ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀಮಾನ್ ರಾಚಯ್ಯನವರು ಈ ಇಲಾಖೆಯ ಮಂತ್ರಿಯಾದ ಮೇಲೆ ಈ ಇಲಾಖೆ ಚುರುಕಾಗಿ ಕೆಲಸ ಮಾಡುತ್ತಿದೆ. ಅನೇಕ ಕೆಲಸ ಕಾರ್ಯಗಳನ್ನು ಸಾಧಿಸಿದ್ದಾರೆ. ಗಂಧದ ಮರ ಸಾಗಾಣಿಕೆಯಾಗುತಿದ್ದುದನ್ನು ಪತ್ತೆ ಮಾಡಿ ಸರ್ಕಾರಕ್ಕೆ ಬೇಕಾದಷ್ಟು ಹಣ ಉಳಿಸಿಕೊಟ್ಟಿದ್ದಾರೆ. ನಿನ್ನೆ ತಾನೆ ಶಿವಮೊಗ್ಗದಿಂದ ಗಂಧದ ಮರ ಕದ್ದುರವಾಗೆಯಾಗುತ್ತಿದ್ದುದನ್ನು ಪತ್ತೆಮಾಡಿದ್ದಾರೆಂದು ಪೇಪರಿನಲ್ಲಿ ವರದಿಯಾಗಿದೆ. ಇಷ್ಟೇ ಅಲ್ಲ. ಸೌದೆಗೋಸ್ಕರ ಫಾರೆಸ್ಟ್ ಕಡಿದು, ಫಾರೆಸ್ಟ್ ಹಾಳಾಗಿರುವುದನ್ನು, ಹೊಸ ಸಸಿಗಳನ್ನು ನೆಡಿಸಿ, ಅಂದರೆ ಅಫಾರೆಸ್ಟೇಷನ್ ಮೂಲಕ, ಅಭಿವೃದ್ಧಿಪಡಿಸಬೇಕು. ಗಂಧದ ಮರವನ್ನು ಎಷ್ಟರ ಮಟ್ಟಿಗೆ ಕದ್ದು ಹೊರಗಡೆ ಕಳುಹಿಸಿ, ನಮ್ಮ ರಾಜ್ಯದ ಅರಣ್ಯ ಸಂಪತ್ತು ಹೇಗೆ ದುರುಪಯೋಗವಾಗುತ್ತಿದೆ ಎನ್ನುವುದನ್ನು ಎ. ಜಿ. ರಾಮಚಂದ್ರರಾವ್ ಕಮಿಟಿಯವರು ಚೆನ್ನಾಗಿ ವರದಿ ಮಾಡಿದ್ದು 23 ಕೋಟಿ ರೂಪಾಯಿಯಷ್ಟು ಗಂಧದ ಮರ ಹೊರಗಡೆ ಸಾಗಾಣಿಕೆಯಾಗುತ್ತಿದೆ. ನಮ್ಮ ದೇಶಕ್ಕೆ ಎಷ್ಟು ಗಂಧದಮರ ಸಿಗಬೇಕೋ ಅಷ್ಟು ಸಿಗದೆ, 50 ಪರ್ಸೆಂಟಿನಷ್ಟು ಕದ್ದು ಹೊರಗಡೆ ಹೋಗಿ ದುರುಪಯೋಗವಾಗುತ್ತಿದೆ. ಇದಕ್ಕೆ ದೊಡ್ಡ ವ್ಯವಸ್ಥಿತವಾದ ಕಳ್ಳರ ಗುಂಪಿದೆ; ಅದನ್ನು ಹಿಡಿಯಬೇಕಾದರೆ ಸರ್ಕಾರದವರು ಹೆಚ್ಚು ಸಾಮರ್ಥ್ಯತೆ ವಹಿಸಬೇಕು. ಕೇವಲ isolated stray cases ಹಿಡಿದರೆ ಸಾರ್ಥಕವಾಗುವುದಿಲ್ಲ. ಪತ್ತೆ ಹಚ್ಚುವ ಕಾರ್ಯವನ್ನು ಸುವ್ಯವಸ್ಥಿತ ರೀತಿಯಲ್ಲಿ ಏರ್ಪಾಡು ಮಾಡಬೇಕು. ಅದನ್ನು ತಮ್ಮ ವರದಿಯಲ್ಲಿ ಎ. ಜಿ. ಆರ್. ಕಮಿಟಿಯವರು ಸ್ಪಷ್ಟಪಡಿಸಿದ್ದಾರೆ. ಅವರು ಹೇಳಿರುವುದನ್ನು ಒಂದೆರಡು ಮಾತುಗಳೊಳಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅವರು ಹೇಳಿರುವುದು ಈ ರೀತಿ ಇದೆ:

> "Even a head-load of it fetches Rs. 400 to Rs. 500. On the official estimate the quantity of sandalwood oil produced by privately-run stills outside the State is now about 50 per cent of the quantity produced in the State Sandal Wood Oil Factory. But as the quantity of sandal wood found outside the State is inconsiderable, it is obvious that private distillers are using for the most part of wood that is smuggled out of State. Not only the State's Sandal Wood Oil Factories are handicapped for lack of wood but they have to face competition from private distillers who use wood smuggled from the State. This is adding insult to injury. Sandal wood smuggling has indeed become a racket with perhaps a back ground of powerfull vested interests. If the State revenue is to be safeguarded, effective action to check and prevent large-scale smuggling of sandal wood and teak also should be taken. Isolated attempts at catching smugglers hardly touches the fringe of the problem."

(ಶ್ರೀ ಡಿ. ಎಂ. ಸಿದ್ದಯ್ಯ)

ಹೀಗೆ 20-23 ಕೋಟಿ ರೂಪಾಯಿನಷ್ಟು ಗಂಧದಮರ ಹೊರಗಡೆಗೆ ಕದ್ದು ಸಾಗಾಣಿಕೆಯಾಗಿ, ನಮ್ಮ ರಾಜ್ಯದ ಅರಣ್ಯದ ಉತ್ಪಾದನೆಗೆ ಒಂದು ದೊಡ್ಡ ಕಾಂಪಿಟಿಷನ್ ನಡೆಸುತ್ತಿದ್ದಾರೆ. ಅನೇಕ vested interests ಈ ದುಷ್ಟ ಚಟುವಟಿಕೆ ಹಿಂದುಗಡೆ ನಿಂತು ಕೆಲಸ ಮಾಡುತ್ತಾ ಇವೆ. ಅದರ ದೆಸೆಯಿಂದ, ಸಾರ್ಥಕವಾಗತಕ್ಕ ರೀತಿಯಲ್ಲಿ ಬಂದೋಬಸ್ತು ಮಾಡಬೇಕಾಗಿದೆ. ನಮ್ಮ ಸರ್ಕಾರದವರು ಮದ್ರಾಸ್ ಮತ್ತು ಕೇರಳ ಸರ್ಕಾರಗಳ ಜೊತೆಗೆ ಸಹಕರಿಸಿಕೊಂಡು ಖದೀಮರಾದ ಈ ಕಳ್ಳರುಗಳನ್ನು ಹಿಡಿದು, ಕೋಟ್ಯಾಂತರ ರೂಪಾಯಿ ಸೂರೆ-ಹೋಗುತ್ತಿರುವ ಅರಣ್ಯ ಸಂಪತ್ತನ್ನು ಉಳಿಸಿ, ನಮ್ಮ ರಾಜ್ಯವನ್ನು ಹೆಚ್ಚು ಸಮೃದ್ಧಿ ಮಾಡಬೇಕು.

ಕೊನೆಯದಾಗಿ ಇಲಾಖೆ ಇಲಾಖೆಗಳು ಒಂದಕ್ಕೊಂದಕ್ಕೆ ಹಾಸು ಹೊಕ್ಕಾಗಿ, ಹೊಂದಿಕೊಂಡು, ರೈತ ಜನಾಂಗಕ್ಕೆ, ಹಳ್ಳಿಗಾಡಿನ ಜನಾಂಗಕ್ಕೆ ನೆರವಾಗಿ, ಅವರ ಅಭ್ಯುದಯಕ್ಕೆ, ಏಳಿಗೆಗೆ ಅತ್ಯಗತ್ಯವಾದ ಕೆಲಸ ಕಾರ್ಯಗಳನ್ನು ಮಾಡಿಕೊಡಬೇಕೆಂದು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ಜನ ಜೀವನ ಸುಗಮವಾಗಲಿ ಎಂಬ ಧ್ಯೇಯದಿಂದ ಸರ್ಕಾರ ದುಡಿಯಲಿ ಎಂದು ಹೇಳಿ, ಈ ಬೇಡಿಕೆಯನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

[MR. CHAIRMAN (SMT. BASAVARAJESWARI) in the Chair].

† ಶ್ರೀ ವೀರಭದ್ರಪ್ಪ ಈರಪ್ಪ (ಎಲ್‌ಬುರ್ಗ).—ಸಭಾಪತಿಗಳೆ, ನಾನು ಈ ಸಭೆಯಮುಂದೆ ಮಾನ್ಯ ಮಂತ್ರಿಯವರು ಮಂಡಿಸಿದ ಬೇಡಿಕೆಗಳ ಬಗ್ಗೆ ನಡೆದ ಚರ್ಚೆಯಲ್ಲಿ, ನಾನೂ ಕೂಡ ಕೆಲವು ಮಾತುಗಳನ್ನು ಮಾತನಾಡಬೇಕೆಂದಿದ್ದೇನೆ.

ಮಹಾಸ್ವಾಮಿ, ನಾನು ರಾಯಚೂರು ಜಿಲ್ಲೆಯಿಂದ ಬಂದಿದ್ದರಿಂದ ಅಲ್ಲಿಯ ಪರಿಸ್ಥಿತಿಗಳನ್ನಷ್ಟೇ ಈ ಸಭೆಯ ಮುಂದೆ ಇಡುತ್ತೇನೆ. ನಮ್ಮ ರಾಯಚೂರು ಜಿಲ್ಲೆ ಹೆಚ್ಚು ಬೆಳೆಯುವಂಥ ಪ್ರದೇಶವಾಗಿದ್ದು, ಅಲ್ಲಿ ಹತ್ತಿ, ಜೋಳ, ಗೋಧಿ, ನವಣೆ, ಕಬ್ಬು, ಭತ್ತ, ಮೊದಲಾದ ಬೆಳೆಗಳಿವೆ. ಆದರೆ ಸರ್ಕಾರದಿಂದ ಅವುಗಳಿಗೆ ಸರಿಯಾದ ಅನುಕೂಲತೆಗಳನ್ನು ಒದಗಿಸಿಕೊಡದಿರುವುದರಿಂದ, ರೈತರಿಗೆ ಎಷ್ಟು ಹೆಚ್ಚಿನ ಬೆಳೆಯನ್ನು ಬೆಳೆಯಲು ಸಾಧ್ಯವೋ ಅಷ್ಟನ್ನು ಬೆಳೆಯಲು ಸಾಧ್ಯವಾಗದಂತಾಗಿದೆ. ಈ ದಿವಸ ಅಲ್ಲಿ ನೆಲ್ಲು ಬೆಳೆಯುವ ರೈತರಿಗೆ ಹೆಚ್ಚಿನ ಸಹಾಯ ಬೇಕಾಗಿದೆ, ರೈತರಿಗೆ ಬೀಜ, ಗೊಬ್ಬರ ಮತ್ತು ಒಕ್ಕಲುತನದ ಉಪಕರಣಗಳನ್ನು ಸರಿಯಾಗಿ ಒದಗಿಸದೆ ಇರುವುದರಿಂದ ಅವರು ಸಾಕಷ್ಟು ಹೆಚ್ಚು ಬೆಳೆ ಬೆಳೆಯಲು ಅನಾನುಕೂಲತೆ ಉಂಟಾಗಿದೆ. ದಯಮಾಡಿ ಸರ್ಕಾರದವರು ರೈತರಿಗೆ ಬೇಕಾಗುವ ಬೀಜ, ಗೊಬ್ಬರ ಮತ್ತು ಒಕ್ಕಲುತನದ ಉಪಕರಣಗಳನ್ನು ಸರಿಯಾಗಿ ಒದಗಿಸುವಂತೆ ನೋಡಿಕೊಳ್ಳಬೇಕೆಂದು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಮಹಾಸ್ವಾಮಿ, ಇನ್ನೊಂದು ಮಹತ್ತರವಾದ ವಿಷಯ ನಮ್ಮಲ್ಲಿ ಹೆಚ್ಚಾಗಿ ಹತ್ತಿ ಬೆಳೆ ಬೆಳೆಯುತ್ತದೆ. ಕೇಂದ್ರ ಸರ್ಕಾರದವರು 1923ನೇ ಇಸವಿಯಲ್ಲಿ Cotton Control Act ಅಂತ ಹೇಳಿ ಮಾಡಿ, ಅದನ್ನು ಸರ್ವೆ ಮಾಡಿದರು. ಸರ್ವೆ ಮಾಡಿದ ಕಾಲಕ್ಕೆ ನಮ್ಮ ರಾಯಚೂರು ಜಿಲ್ಲೆಯ ಕೊಪ್ಪಳ್, ಯಲ್‌ಬುರ್ಗ ಮತ್ತು ಕುಷ್ಟಗಿ ಈ ಮೂರು ತಾಲ್ಲೂಕುಗಳು ಹೆಚ್ಚು ಹತ್ತಿ ಬೆಳೆಯುವ ಪ್ರದೇಶಗಳು ಎಂದು ಪರಿಗಣಿಸಿ, ಈ ಪ್ರದೇಶದಲ್ಲಿ ಬೆಳೆದ ಹತ್ತಿಯನ್ನು ಗದಗ್ ಮಾರ್ಕೆಟಿನಲ್ಲಿ ಮಾರಾಟ ಮಾಡುವುದಕ್ಕೆ ಯಾವ ತರಹದ ಅಭ್ಯಂತರವೂ ಇಲ್ಲ ಎಂದು ಮಾರಾಟ ಮಾಡಲು ಲೈಸೆನ್ಸ್ ಕೊಡುವುದಕ್ಕೆ ಪ್ರಾರಂಭ ಮಾಡಿದರು. ಹೆಚ್ಚು ಗಂಟು ಹತ್ತಿ ಅಲ್ಲಿ ಬೆಳೆಯುತ್ತದೆ. ಸಾಧಾರಣವಾಗಿ ಈ ಪದ್ಧತಿ ಸುಮಾರು ಹತ್ತು ವರ್ಷಗಳಿಂದ ಅಲ್ಲಿ ಬಳಕೆಯಲ್ಲಿದ್ದು ಗದಗ್‌ನಲ್ಲಿ ಮಾರಾಟ ಮಾಡಿ ರೈತರು ಲಾಭ ಹೊಂದುತ್ತಿದ್ದರು. ಇತ್ತೀಚೆಗೆ ಯಾವುದೋ ಒಂದು ಕಾರಣದಿಂದ—ಒಕ್ಕಲುತನದ ಅಧಿಕಾರಿಗಳ ತಪ್ಪಿನಿಂದಲೋ, ಕಳ್ಳ ವ್ಯಾಪಾರಸ್ಥರ ಒಂದು ತಪ್ಪಿನ ಪರಿಣಾಮದಿಂದಲೋ, ಈ ಮಾಲು ಗದಗ್ ಮಾರ್ಕೆಟ್ಟಿಗೆ ಹೋಗಬಾರದು ಎಂದು ಒಂದು ಪ್ರತಿಬಂಧಕ ಮಾಡಿದ್ದಾರೆ. ಇದರಿಂದ ನಮ್ಮ ಮೂರು ತಾಲ್ಲೂಕಿನ ರೈತರಿಗೆ ಸಾಧರಣವಾಗಿ ಪ್ರತಿ ವರ್ಷ 10 ಲಕ್ಷ ರೂಪಾಯಿನಷ್ಟು ಹಾನಿಯಾಗುತ್ತಿದೆ. ಆದರೆ ಇದರಿಂದ ಕೆಳ ಮಟ್ಟದ ಸರ್ಕಾರಿ ನೌಕರುದಾರರಿಗೆ ಕಳ್ಳ ವ್ಯಾಪಾರ ಮಾಡತಕ್ಕವರಿಗೆ ಮಾತ್ರ ಲಾಭ ಮಾಡಿಕೊಡುತ್ತಿದ್ದಾರೆ. ಕೇಂದ್ರ ಸರ್ಕಾರದವರಲ್ಲಿ ಈ ಬಗ್ಗೆ ಮನವಿ ಮಾಡಿಕೊಂಡೆವು. ಅವರು ಈ ವಿಷಯ ರಾಜ್ಯ ಸರ್ಕಾರಕ್ಕೆ ವಿಶೇಷವಾಗಿ ಸಂಬಂಧಿಸಿದ್ದು, ಕೇಂದ್ರ ಯಾವ ತರಹ ಪ್ರತಿಬಂಧಕವನ್ನು ಹಾಕುವುದಿಲ್ಲ, ಸರ್ವೆ ಮಾಡಿದ ರಾಜ್ಯ ಸರ್ಕಾರಕ್ಕೆ ತಿಳಿಸಿ ಎಂದು ಹೇಳಿದರು.

ಈಗ ಸರ್ಕಾರಕ್ಕೆ ಸುಮಾರು ಐದಾರು ವರ್ಷಗಳಿಂದ ರೈತರು ಅನೇಕ ರೀತಿಯಿಂದ ಮನವಿ ಮಾಡಿಕೊಂಡಿದ್ದಾರೆ. ಅಂದ ಮೇಲೆ ಇನ್ನೂ ಈಗ ಪರಿಶೀಲನೆ ಮಾಡುತ್ತೇವೆ, ವಿಚಾರ ಮಾಡುತ್ತೇವೆಂಬುದಾಗಿ ಹೇಳಿಕೊಂಡು ದಿವಸಗಳನ್ನು ಕಳೆಯುವುದರಲ್ಲಿದ್ದಾರೆ. ಸಾಧಾರಣವಾಗಿ 6 ತಿಂಗಳುಗಳ ಹಿಂದೆಯೇ ಸರ್ಕಾರದಿಂದ ಅವುಗಳ ಬಗ್ಗೆ ಇತ್ತೀಚೆಗೆ ಒಂದು ರೀತಿ ರೂಲ್ಸ್ ಮಾಡಿದ್ದೇವೆಂಬುದಾಗಿ ಒಂದು ಪತ್ರ ಬಂದಿದೆ. ಈಗ ಮಾನ್‌ಸೂನ್ ಬಂದಿರುವುದರಿಂದ ರೈತರು ಹತ್ತಿ ಬೆಳೆಯನ್ನು ತೆಗೆದುಕೊಳ್ಳಲು ಕಳ್ಳತನದಿಂದ ಹೋಗುತ್ತಾರೆ. ಇದರ ಪರಿಣಾಮ ಇತರರ ಮೇಲೆ ಆಗುವುದರಿಂದ, ಈಗ ಅದನ್ನು ತೀವ್ರಗತಿಯಿಂದ ತೆಗೆಯುವುದಕ್ಕೆ ಪ್ರಯತ್ನ ಮಾಡಿದರೆ 10 ಲಕ್ಷ ರೂಪಾಯಿಗಳು ಹಾನಿಯಾಗುತ್ತದೆ. ಅದಲ್ಲದೆ ಸರ್ಕಾರದವರು ರೈತರಿಗೆ ಈ ಬೆಳೆಯನ್ನು ಉಳಿಸಿದಂತಾಗುತ್ತದೆಂದು ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ ನಾನು ಸಹಕಾರ ಸಂಘಗಳ ಬಗ್ಗೆ ಕೆಲವೊಂದು ಮಾತುಗಳನ್ನು ಹೇಳಬೇಕಾಗಿದೆ. ಸಹಕಾರ ಸಂಘಗಳಲ್ಲಿ ಏನು ಜನ ಬರುತ್ತಾರೋ ಅವರು ಕೇವಲ ಕೆಲವೊಂದು ಕ್ಷೇತ್ರದವರು ಮಾತ್ರವೆಂದು ಹೇಳಬಹುದು. ಈಗ ಇದು ಒಂದು ಧರ್ಮ ಛತ್ರ ಆಗಿಹೋಗಿದೆ. ಏಕೆಂದರೆ ಈ ಕ್ಷೇತ್ರದಲ್ಲಿ ಯಾರೋ ದುಡ್ಡು ಕೊಡಿಸುತ್ತಾರೆ, ಯಾರೋ ಕಾರುಬಾರು ಮಾಡುತ್ತಾರೆ. ಅಲ್ಲಿ ಒಬ್ಬನ ಮೇಲೊಬ್ಬ ಆಡಳಿತ ಮಾಡಲಿಕ್ಕೆ ಹೋಗುತ್ತಾರೆ. ಎಲ್ಲರೂ ಒಬ್ಬ ಮುಖ್ಯಸ್ಥನು ಹೇಳುವ ಹಾಗೆ ಕೇಳತಕ್ಕ ಒಂದು ನೀತಿ ನಿಯಮವೇ ಇಲ್ಲ. ಇದರಿಂದ ಅನೇಕ ಸಂಸ್ಥೆಗಳಲ್ಲಿ ಇವುಗಳ ಆಡಳಿತ ಕೆಟ್ಟುಹೋಗಿರುವುದರಿಂದ ಅನೇಕರು ಇದರ ಹಣವನ್ನು ಅಪಹರಣ ಮಾಡುತ್ತಿದ್ದಾರೆ. ನಮ್ಮ ಸರ್ಕಾರದವರೂ ಸಹ ಇಂಥಾದ್ದಕ್ಕೆ ಹೆಚ್ಚು ಗಮನಕೊಡದೆ ಮೇಲಿಂದ ಮೇಲೆ ಇಲ್ಲಿಯೂ ಅನಾಹುತಗಳು ಆಗುತ್ತಿವೆ. ಸರ್ಕಾರದವರು ಇದಕ್ಕಾಗಿ ಸೂಕ್ತ ಕ್ರಮಗಳನ್ನು ಈಗಲೇ ಕೈಕೊಳ್ಳಬೇಕು. ಈ ಸಂಸ್ಥೆಗಳಿಗೆ ಬರತಕ್ಕ ಜನರಲ್ಲಿ ಕೆಲವು ಮಂದಿಯನ್ನು ಸರ್ಕಾರದವರು ನಾಮಿನೇಷನ್ ಮಾಡುವಾಗ ತಮಗೆ ಬೇಕಾದವರಿಗೆ ಶಿಫಾರಸ್ಸು ಮಾಡಿ ನೇಮಕ ಮಾಡುತ್ತಾರೆ. ಇದರಿಂದ ಆಡಳಿತದಲ್ಲಿ ಹೆಚ್ಚಿನ ಲೋಪದೋಷಗಳು, ವೈಮನಸ್ಯ ಭಾವನೆಯುಂಟಾಗುತ್ತದೆ. ಸರ್ಕಾರದಿಂದ ಕೊಡತಕ್ಕ ಗ್ರಾಂಟು, ಇತ್ಯಾದಿ ದುರುಪಯೋಗವಾಗಿ ದುರಾಡಳಿತಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಸಂಘದ ಹಣವನ್ನು ವಿಶೇಷವಾಗಿ ಅಪಹರಣ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನಾಮಿನೇಷನ್ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆಯಬೇಕು. ಪೂರ್ತಿಯಾಗಿ ಚುನಾವಣೆ ನಡೆಯಿಸುವುದಕ್ಕೆ ಏರ್ಪಾಡು ಮಾಡಬೇಕು. ಕಾರ್ಯಾಕಾರಿ ಮಂಡಲಿಯಲ್ಲಿ ತಮಗೆ ಸಂಬಂಧಪಟ್ಟವರನ್ನೇ ನಾಮಿನೇಷನ್ ಮಾಡದೆ ಅದಕ್ಕೆ ಸಂಬಂಧಪಟ್ಟವರನ್ನು ಯೋಗ್ಯ ಶಿಕ್ಷಕರನ್ನಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಮೂರನೆಯದಾಗಿ ಹಳ್ಳಿಗಳ ವಿಷಯ, ನಮ್ಮ ತಾಲ್ಲೂಕು ಆಡಳಿತ ಹಿಂದಿನ ಕಾಲದಲ್ಲಿ ಒಬ್ಬ ಜಹಗೀರುದಾರನ ಆಡಳಿತದಲ್ಲಿತ್ತು. ಆಗಲೇ ಕುಡಿಯುವ ನೀರಿನ ವ್ಯವಸ್ಥೆಯಂತು ಇಲ್ಲ. ಈಗ ತಾಲ್ಲೂಕ್ ಬೋರ್ಡ್ ರಚನೆಯಾದ ಮೇಲೆ ಅಲ್ಲೊಂದು ಇಲ್ಲೊಂದು ಬಾವಿಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಈರೀತಿ ಮಾಡಿದರೆ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 200-300 ವರ್ಷಗಳಲ್ಲಿ ನೀರಿನ ಬಾವಿಗಳು ನಿರ್ಮಾಣವಾಗಬಹುದೆಂದು ನಾನು ಭಾವಿಸುತ್ತೇನೆ. ಕಳೆದ ವರ್ಷ ತಾಲ್ಲೂಕಿನ ಜನರು ಸುಮಾರು ಐದಾರು ಮೈಲಿಗಳಿಂದ ನೀರನ್ನು ತರುತ್ತಿದ್ದರು. ಆ ವಿಷಯ ಮರಾ ಮತ್ತು ಇಲಾಖಾ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ. ಅನೇಕ ವೇಳೆ ಈ ಸಭೆಯಲ್ಲಿ ನಾನು ಮಾತನಾಡುವಾಗಲೂ ಈ ವಿಷಯವನ್ನು ಹೇಳಿದ್ದೇನೆ. ಆದರೆ ಈ ವಿಷಯ ಸರ್ಕಾರಕ್ಕೆ ಚೆನ್ನಾಗಿ ಮನವರಿಕೆಯಾಗಿದ್ದರೂ ಕೂಡ ಅದಕ್ಕೆ ಬೇಕಾದ ನಿವಾರಣೋಪಾಯಗಳನ್ನು ಕಂಡುಹಿಡಿದು ಆ ಕಾರ್ಯವನ್ನು ಯಶಸ್ವಿಗೊಳಿಸಲು ಪ್ರಯತ್ನ ಪಟ್ಟಿಲ್ಲವೆಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಆದ್ದರಿಂದ ದಯಮಾಡಿ ಈಗಲಾದರೂ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ತೊಂದರೆಯನ್ನು ನಿವಾರಿಸುವುದಕ್ಕೆ ಸರ್ಕಾರದವರು ತೀವ್ರಗತಿಯಿಂದ ಪ್ರಯತ್ನ ಮಾಡಬೇಕೆಂದು ನಾನು ಮತ್ತೊಮ್ಮೆ ಸರ್ಕಾರದವರಿಗೆ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ತಾವರೆ ಫಕೀರಪ್ಪ ಸಿದ್ದಪ್ಪ (ಸಿಗ್ಗಾಂ).—ಮಾನ್ಯ ಸಭಾಪತಿಗಳೇ, ಈ ದಿನ ಒಕ್ಕಲುತನ, ಅರಣ್ಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬಂದಿರತಕ್ಕ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಅದಕ್ಕೆ ಬೆಂಬಲ ಕೊಡುತ್ತಾ ಸರ್ಕಾರದ ಮುಂದೆ ನನ್ನ ಒಂದೆರಡು ಸೂಚನೆಗಳನ್ನು ಮಂಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅನೇಕ ಮಾನ್ಯ ಸದಸ್ಯರು ತಮ್ಮ ಸೂಚನೆಗಳನ್ನು ಈ ಸಭೆಯ ಮುಂದೆ ಇಡುವಾಗ ಸರ್ಕಾರದಿಂದ ಆಗದೆ ಬಿಟ್ಟಿರತಕ್ಕ ಕೆಲಸವನ್ನು ಅಥವಾ ಅವರಲ್ಲಿ ಇದ್ದಂಥ ನ್ಯೂನತೆಗಳನ್ನು ಎತ್ತಿ ತೋರಿಸುವುದರ ಕಡೆಗೆ ತಮ್ಮ ಹೆಚ್ಚಿನ ಲಕ್ಷ್ಯವನ್ನು ಇವತ್ತು ಕೊಡುತ್ತಿದ್ದಾರೆಯೇ ಹೊರ್ತು ಮತ್ತೇನೂ ಇಲ್ಲ. ಅದರ ಜೊತೆಗೆ ಈ ಸರ್ಕಾರದಿಂದ ಆಗಿರತಕ್ಕ ಒಳ್ಳೆಯ ಕಾರ್ಯಗಳು ಏನು ಎಂಬುದನ್ನು ತಿಳಿದು ಆ ಬಗ್ಗೆ ನಮ್ಮ ವಿಶ್ವಾಸವನ್ನು ವ್ಯಕ್ತಪಡಿಸುವುದು ನಮ್ಮ ಪಾಲಿನ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಸರ್ಕಾರ

(ಶ್ರೀ. ತಾವರೆ ಫಕೀರಪ್ಪ ಸಿದ್ದಪ್ಪ)

ನಡೆಸತಕ್ಕ ಈ ದೊಡ್ಡ ಸಿಬ್ಬಂದಿ ವರ್ಗವೇನಿದೆ ಅವರ ಮೇಲೆ ಇದರ ಹೆಚ್ಚಿನ ಹೊಣೆ ಇದೆಯೆಂಬು ದನ್ನು ನಾವು ಮರೆಯಬಾರದು. ಅವರು ಮಾಡತಕ್ಕ ಒಳ್ಳೆಯ ಕೆಲಸಗಳನ್ನು ನಾವು ತೆರೆದ ಮನಸ್ಸಿನಿಂದ ನೋಡಬೇಕು. ಒಳ್ಳೆಯ ಮಾತಿಗೆ ಹೊಗಳುವಂತಹವರೂ ಇದ್ದಾರೆ, ಕೆಟ್ಟ ಮಾತಿಗೆ ತೆಗಳುವಂತಹವರೂ ಇದ್ದಾರೆ. ಅದಕ್ಕಾಗಿ ಒಳ್ಳೆಯಸ್ಥಾನ ಸಿಕ್ಕಿ ದೇಶಾಭಿವೃದ್ಧಿ ಕಾರ್ಯಗಳ ಕಡೆಗೆ ಹೆಚ್ಚಿಗೆ ಗಮನ ಕೊಟ್ಟು ಸಿಬ್ಬಂದಿ ಮನೋಭಾವವನ್ನು ಬೆಳೆಸುತ್ತಿರುವ ಮೂಲಕ ದೇಶದ ಆಡಳಿತ ವನ್ನು ಚೆನ್ನಾಗಿ ದಕ್ಷತೆಯಿಂದ ನಡೆಸುತ್ತಿರುವವರನ್ನು ಪ್ರೀತಿ, ವಿಶ್ವಾಸದಿಂದ ಕಾಣುವುದು ನಮ್ಮ ಪವಿತ್ರ ಕರ್ತವ್ಯವೆಂದು ನಾನು ತಿಳಿದು ಕೊಂಡಿದ್ದೇನೆ. ಇದರ ಜೊತೆಗೆ ಸರ್ಕಾರದ ಲೋಪ ದೋಷ ಗಳನ್ನು ಎತ್ತಿ ತೋರಿಸುವ ಕಾಲಕ್ಕೆ ಸರ್ಕಾರವೂ ಸಹ ಒಂದು ಅಂಗ ಎಂಬುದನ್ನು ನಾವು ಮರೆಯ ಬಾರದು. ಕೇವಲ ಸರ್ಕಾರದ ಮೇಲೆ ಟೀಕೆ ಮಾಡುವುದರಿಂದಲಾಗಲ್ಲೀ ಅಥವಾ ಅದರ ನ್ಯೂನತೆ ಗಳನ್ನು ಎತ್ತಿ ತೋರಿಸುವುದರಿಂದಲಾಗಲೀ ನಮ್ಮ ಪಾಲಿನ ಕರ್ತವ್ಯ ಮಾಡಿದಂತಾಗುತ್ತದೆಂದು ಯಾರೂ ತಿಳಿಯದೆ ಅದು ನಮ್ಮ ಪಾಲಿನ ಜವಾಬ್ದಾರಿಗಳಲ್ಲಿ ಒಂದು ಎಂದು ತಿಳಿಯಬೇಕು. ಹೆಚ್ಚಿನ ಹೊಣೆ ಅವರ ಹಾಗೆ ನಮ್ಮ ಪಾಲಿನಲ್ಲಿಯೂ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ ಸರ್ಕಾರ ಎನ್ನುವುದು ಒಂದು ಸರ್ಕಸ್ ಇದ್ದ ಹಾಗೆ ಆ ಒಂದು ಸರ್ಕಸ್ ನಡೆಸುವ ಹೊಣೆ ಮಂತ್ರಿ ಮಂಡಲದ ಮೇಲೆ ಬಂದಿದೆ. ಆದ್ದರಿಂದ ಸರ್ಕಾರದ ಅಧಿಕಾರಿಗಳಿಗೆ ಪೂರ್ಣ ಅಧಿಕಾರ ಕೊಡದೇ ಇದ್ದರೆ ಕಾನೂನಿಗನುಸಾರವಾಗಿ ಅವರು ಆಡಳಿತವನ್ನು ನಿರ್ವಹಿಸುವುದಕ್ಕಾಗುವುದಿಲ್ಲವೆಂಬುದನ್ನು ನಾವು ಈ ಸಂದರ್ಭದಲ್ಲಿ ತಿಳಿಯಬೇಕು. ಆ ರೀತಿ ಅಧಿಕಾರ ಕೊಡದೇ ಹೋದರೆ ಅದು ಒಂದು ನಮ್ಮ ಹೆಡ್ಡತನವೆಂದು ಭಾವಿಸಬೇಕಾಗುತ್ತದೆ. ಸರ್ಕಾರ ಎಂಬುದು ಸರ್ಕಸ್ ಪ್ರಯೋಗ ಶಾಲೆ ಇದ್ದಹಾಗೆ. ಇಲ್ಲಿ ಕಾಯಿದೆಗಳನ್ನು ಮಾಡುತ್ತಾರೆ. ಆ ಕಾಯಿದೆಗಳನ್ನು ಅಮಲಿನಲ್ಲಿ ತರುವುದಕ್ಕೆ ಅನೇಕ ಕ್ಷೇತ್ರಗಳಿವೆ. ಆದರೆ ಅವು ಅಲ್ಲಿ ಎಷ್ಟರ ಮಟ್ಟಿಗೆ ಜಯಪ್ರದವಾಗುತ್ತವೆ, ಜಯಪ್ರದವಾಗು ವುದಿಲ್ಲವೆಂಬುದನ್ನು ವಿಮರ್ಷೆ ಮಾಡುವುದನ್ನು ಸರ್ಕಾರವೆಂಬ ಪ್ರಯೋಗ ಶಾಲೆಗೆ ಬಿಟ್ಟುಬಿಡಬೇಕು. ಅನೇಕ ಮಾನ್ಯ ಸದಸ್ಯರು ಈ ಲಿಬರಲೈಜ್ ವೆಲ್ ಸ್ಕೀಮುಗಳಿಗಾಗಿ ಸಾಕಷ್ಟು ಹಣ ಸಿಗುವುದಿಲ್ಲ ವೆಂದು ಹೇಳಿದರು. ಸಿಬ್ಬಂದಿ ವರ್ಗದವರನ್ನು ಮಾತ್ರ ತಮ್ಮ ಪ್ರೀತಿ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ಇಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರಿಸಿದರೆ ಅದರಿಂದ ಅಷ್ಟಾಗಿ ಯಶಸ್ವಿ ಕೆಲಸ ವಾಗಲಾರದು ಎಂದು ಹೇಳಿದರು. ಅದು ಸತ್ಯಕ್ಕೆ ದೂರವಾದ ಮಾತಾಗಿದೆ ಎಂದು ನಾನು ಹೇಳ ಬೇಕಾಗಿದೆ. ಈ ಲಿಬರಲೈಜ್ ವೆಲ್ ಸ್ಕೀಮು ಕಾಮಗಾರಿಗಳು ಒಂದು ವಾರದಲ್ಲಿಯೇ ನಮ್ಮ ಕಡೆ ಬಿ.ಡಿ.ಓ. ಗ್ರಾಮಸೇವಕರು, ಕುಲಕರ್ಣಿಗಳ ಸಹಾಯದಿಂದ ರೈತರ ಅರ್ಜಿಗಳನ್ನೆಲ್ಲಾ ಪರಿ ಶೀಲಿಸಿ ಸುಮಾರು 300 ಬಾವಿಗಳನ್ನು ಮೊದಲನೆಯ ಹಂತವನ್ನು ಮುಗಿಸಿದ್ದಾರೆಂದು ನಾನು ಆನಂದದಿಂದ ಹೇಳಬೇಕಾಗಿದೆ. ಇಷ್ಟೇ ಅಲ್ಲ. ಅನೇಕ ಕಡೆಗಳಲ್ಲಿ ಈ ಬಾಬಿಗೆ ಒದಗಿಸಿದ ಹಣ ಅಪವ್ಯಯವಾಗುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿವೆ ಎಂದೂ ಸಹ ಕೆಲವರು ಹೇಳಿದರು. ಹೆಚ್ಚಿನ ಜವಾಬ್ದಾರಿ ಹೊತ್ತಿರತಕ್ಕ ನಾವು ಈ ಬಗ್ಗೆ ಸ್ವಲ್ಪ ಮಟ್ಟಿಗಾದರೂ ಲಕ್ಷ್ಯ ಕೊಡಬೇಕು. ನಮ್ಮಲ್ಲಿ 3 ಲಕ್ಷ ರೂಪಾಯಿಗಳ ದೊಡ್ಡ ಮೊತ್ತವನ್ನು ರೈತರಿಗೆ ಹಂಚುವಾಗ ಪ್ರತಿಯೊಬ್ಬ ರೈತನಿಗೆ 500 ರೂಪಾಯಿಗಳವರೆಗೂ ಕೊಟ್ಟು ಉಳಿದ ಹಣವನ್ನು ಬ್ಯಾಂಕಿನಲ್ಲಿ ಡಿಪಾಜಿಟ್ ಇಡಬೇಕೆಂಬ ವ್ಯವಸ್ಥೆ ಮಾಡಿದ್ದಾರೆಂದು ಹೇಳಿದರು. ನಾನು ಒಂದು ಸಾರಿ ಶನಿವಾರ ಮತ್ತು ಭಾನುವಾರ ನನ್ನ ಕ್ಷೇತ್ರಕ್ಕೆ ಹೋಗಿ ನೋಡಿದಾಗ ಈಗಾಗಲೇ ಮತ್ತೆ 63 ಬಾವಿಗಳ ಕೆಲಸ ಪ್ರಾರಂಭ ಮಾಡಿದ್ದಾರೆ. ಸುಮಾರು 3 ಪುಟ್ಟು 4 ಪುಟ್ಟು ಎರಡನೆ ಹಂತ ಕೆಲಸ ನಡೆಯಿಸಿ ಪೂರೈಸುವವ ರಾಗಿದ್ದಾರೆ. ಈ ರೀತಿಯಾದಂಥ ಉತ್ತಮವಾದ ಯೋಜನೆಗಳು ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ನಡೆಯುತ್ತಾ ಇವೆ. ಒಟ್ಟಿನಲ್ಲಿ ಸರ್ಕಾರ ಈ ಲಿಬರಲೈಜ್ ವೆಲ್ ಸ್ಕೀಮುಗಳಿಗೆ ಯಥೇಚ್ಛವಾಗಿ ಹಣವನ್ನು ಕೇಂದ್ರ ಸರ್ಕಾರದಿಂದ ಒದಗಿಸಬೇಕು. ಅದೇ ಪ್ರಕಾರ ರಾಜ್ಯ ಸರ್ಕಾರ ದವರೂ ಸಹ ಹೆಚ್ಚಿನ ನೆರವನ್ನು ರೈತರಿಗೆ ಉಂಟುಮಾಡಬೇಕು. ಕೆರೆ, ಹೊಳೆಗಳ ಬಗ್ಗೆ ದೊಡ್ಡ ಪ್ರಮಾಣದ ಅನುಕೂಲತೆ ಪ್ರತಿಯೊಬ್ಬ ರೈತನಿಗೆ ಆದುದಾದರೆ, ಸರ್ಕಾರಕ್ಕೆ ಅದರಿಂದ ದೊಡ್ಡ ಲಾಭವಾದೀತು ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಇತ್ತೀಚೆಗೆ ನಮ್ಮ ದೃಷ್ಟಿ ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿಸುವ ಕಡೆಗೆ ಹೋಗ ಬೇಕಾಗಿದೆ. ಅಂತಹ ಕಾಲಕ್ಕೆ ಪ್ರತಿಯೊಬ್ಬ ರೈತನ ಮನಸ್ಸು ಆ ಕಡೆಗೆ ಹರಿಯಬೇಕು. ಏಕೆಂದರೆ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳು ಬಹಳವಾಗಿರುವುದರಿಂದ, ಆ ಪ್ರದೇಶಗಳಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳೇನೆಂಬುದನ್ನು ಎಲ್ಲರೂ ಗಮನಿಸಬೇಕಾಗಿದೆ. ಬಿಜಾಪುರ, ಧಾರವಾಡ, ಗುಲ್ಬರ್ಗ, ರಾಯಚೂರು ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ದೊಡ್ಡ ದೊಡ್ಡ, ಬಾವಿಗಳನ್ನು ತೆಗೆಯು

ವುದಕ್ಕಾಗಲಿಲ್ಲ. ಆದಕಾರಣ ವ್ಯವಸಾಯ ಇಲಾಖೆಯವರು ಈ ಬಗ್ಗೆ ಹೆಚ್ಚಿನ ಲಕ್ಷ್ಯ ಕೊಡಬೇಕಾಗಿದೆ. ಇಲ್ಲದೆ ಹೋದರೆ ಜನಗಳು ಕೆಳ ಮಟ್ಟಕ್ಕೆ ಇಳಿದು ಅವರ ಆರ್ಥಿಕ ಪರಿಸ್ಥಿತಿ ಕೆಟ್ಟಿತು ಎಂದು ನಾನು ಹೇಳುತ್ತೇನೆ.

ಸಾಧಾರಣವಾಗಿ ಪೂರ್ವಕಾಲದಿಂದ ಒಣ ವ್ಯವಸಾಯ ಎಂದು ಮಾಡಿಕೊಂಡು ಬಂದಿದ್ದಾರೆ, ಇದನ್ನು dry cultivation ಎಂದು ಹೇಳುತ್ತಾರೆ. ಇಂಥ ವ್ಯವಸಾಯ ಒಳ್ಳೆಯದು, ದೊಡ್ಡ ಪ್ರಮಾಣದಲ್ಲಿ ಟ್ರ್ಯಾಕ್ಟರುಗಳನ್ನಿಟ್ಟು ಕೆಲವು ಕಡೆ ಮಾಡಿಸಿದರೆ ಒಳ್ಳೆಯದು. ಇದರಿಂದ, ಅಂದರೆ ಒಣ ಬೇಸಾಯದಿಂದ ಹುಳುಗಳ ಕಾಟ ಕಡಮೆಯಾಗಬಹುದು. ಬಿಸಿಲು ಕಾಲದಲ್ಲಿಯೂ ಒಳಗೆ ತಂಪು ಉಳಿದು ಬಹಳ ಬೇಗ ಉಪಯೋಗವಾಗುತ್ತದೆ. ಆದುದರಿಂದ ತಾಲ್ಲೂಕು ಮಟ್ಟದಲ್ಲಿಯೋ, ರೆವಿನ್ಯೂ ಡಿವಿಜನ್ ಮಟ್ಟದಲ್ಲಿಯೋ ಟ್ರ್ಯಾಕ್ಟರುಗಳನ್ನಿಟ್ಟು ಈ ಒಣ ಬೇಸಾಯವನ್ನು ತೀವ್ರ ಜಾರಿಗೆ ತರಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಈ ಸಂಬಂಧವಾಗಿ ಸರ್ಕಾರದಲ್ಲಿ ಇನ್ನೊಂದು ವಿನಂತಿ. ಈಗ ಇರುವ ಟ್ರ್ಯಾಕ್ಟರುಗಳ ಸಂಖ್ಯೆ ಬಹಳ ಕಡಮೆ. ಅನೇಕ sick ಆಗುತ್ತಿವೆ, ಕೆಲಸ ಮಾಡುತ್ತಿರುವ ಟ್ರ್ಯಾಕ್ಟರುಗಳ ಸಂಖ್ಯೆ ಬಹಳ ಕಡಮೆ. ಈ ಕಾರಣ ಸಿಬ್ಬಂದಿಯ ಮೇಲೆ ಖರ್ಚು ಮಾಡುವ ಹಣ ದುರುಪಯೋಗವಾಗುತ್ತಿದೆ. ಸರ್ಕಾರದ ಬೊಕ್ಕಸದಿಂದ ಈ ಹಣ ವ್ಯರ್ಥವಾಗಿ ಹೋಗುತ್ತಿದೆ. ಇದನ್ನು ಹೀಗೆಯೇ ನಡೆಸುವುದಾದರೆ ಇದನ್ನು ಬಂದು ಮಾಡುವುದೇ ರಾಜ್ಯಕ್ಕೆ ಒಳ್ಳೆಯದು. ಕೆಲಸ ಮಾಡುವುದಾದರೆ ಉತ್ತಮ ರೀತಿಯಿಂದ ನಡೆಸಿ ರೈತರಿಗೆ ಲಾಭ ಮಾಡಿಕೊಡಬೇಕು, ಇಲ್ಲದಿದ್ದರೆ ಬಂದು ಮಾಡಬೇಕು.

ಬರಗಾಲ ಪ್ರದೇಶದಲ್ಲಿ ಗಿಡಗಳನ್ನು ಬೆಳೆಸುವ ವಿಚಾರದಲ್ಲಿ ದೊಡ್ಡ ಪ್ರಚಾರ ಮಾಡಬೇಕಾಗಿದೆ. ಬನ್ನಿ ಗಿಡ ಎಲ್ಲ ಕಡೆಗಳಲ್ಲಿಯೂ ಪೀಕು ಬರುವುದಿಲ್ಲ, ಅಲ್ಲಿ ಪೀಕು ಬರುತ್ತದೆ, ಎರೆ ಸೀಮೆಯಲ್ಲಿ ವಿನಾ ಬೇರೆ ಕಡೆ ಹುಟ್ಟುವುದಿಲ್ಲ. ರೈತರಿಗೆ ಪ್ರೋತ್ಸಾಹ ಮಾಡಿ, ಚೇತನ ಕೊಟ್ಟು ಹೊಲದಲ್ಲಿ ಬನ್ನಿನೆಡುವ ಕೆಲಸ ಮಾಡಿಸಿದರೆ, ಭೂಮಿಗೂ ತಂಪಾಗುತ್ತದೆ, ಅಲ್ಲದೆ ಅದರ ಕೆಳಗೆ ಹೆಚ್ಚು ಬೆಳೆಯೂ ಬರುತ್ತದೆ. ಫಾರೆಸ್ಟ್‌ನಲ್ಲಿ ಮರಗಳನ್ನು ಬೆಳೆಸುವ ಹಾಗೆ ಹೊಲದಲ್ಲಿ ಬೆಳೆಸಬೇಕು. ನಮ್ಮಲ್ಲಿ ಫಾರೆಸ್ಟ್ ಇಲ್ಲ. ಇದರ ಕೆಳಗೆ ಉತ್ತಮ ಪೀಕ್ ಬರುವುದರಿಂದ ಇದರ ಕಡೆ ಸರ್ಕಾರ ಲಕ್ಷ್ಯ ಕೊಡಬೇಕು.

ಇನ್ನೊಂದು ಮಾತು ವ್ಯವಸಾಯ ಇಲಾಖೆಯ ವಿಚಾರವಾಗಿ ಬಹಳ ನೊಂದು ದುಃಖದಿಂದ ಹೇಳುವ ಪ್ರಸಂಗ ಬಂದಿದೆ. ಹಾವೇರಿಯ ಪೂರ್ವಭಾಗದಲ್ಲಿ 50 ಸಾವಿರ ಎಕರೆ ಕ್ಷೇತ್ರದಲ್ಲಿ ಕಳೆದ ಹದಿನೈದು ಹದಿನೆಂಟು ವರ್ಷಗಳಿಂದ ಚಿಟ್ಟೆಯ ಉಪದ್ರವವಾಗುತ್ತಿದೆ. ಆ ಕ್ಷೇತ್ರದಲ್ಲಿ ಬೆಳೆಯುವ ಜೋಳ, ನವಣೆ ಎಲ್ಲ ಬೆಳೆಯನ್ನೂ ಸಂಪೂರ್ಣವಾಗಿ ತಿನ್ನುತ್ತಿದೆ. ಆ ಪ್ರದೇಶ ಇದರಿಂದ ಪದೇ ಪದೇ ಬರಗಾಲಕ್ಕೆ, ಕ್ಷಾಮಕ್ಕೆ ತುತ್ತಾಗುತ್ತಿದೆ. ದನಗಳಿಗೆ ಮೇವು ಕೂಡ ಅಲ್ಲಿಲ್ಲ. ಮೇವಿಲ್ಲದೆ, ದನಗಳು ಸತ್ತು ಹೋಗುತ್ತಿವೆ. ವ್ಯವಸಾಯ ಇಲಾಖೆಯವರು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಅವರ ಬೆನ್ನು ಹತ್ತಿದರೆ, ಹುಳುಗಳು ಪೀಕು ತಿಂದು ನಾಶ ಮಾಡಿದ ಮೇಲೆ ಅಲ್ಲಿಗೆ ಸಲಕರಣೆ ತರುತ್ತಾರೆ. ಇದು ಹದಿನೈದು ಇಪ್ಪತ್ತು ವರ್ಷಗಳ ಪ್ರಶ್ನೆ, ಐವತ್ತು ಸಾವಿರ ಎಕರೆಯ ಪ್ರಶ್ನೆ, ಇದನ್ನು ನೋಡಿದರೆ ವ್ಯವಸಾಯ ಇಲಾಖೆ ಏನೂ ಸಹಾಯ ಮಾಡುತ್ತಿಲ್ಲವೆನಿಸುತ್ತದೆ. ಮೀನ ಮೇಷ ನೋಡದೆ ಅವರು ತೀವ್ರ ಕಾರ್ಯ ಕೈಗೊಳ್ಳಬೇಕು. ಒಂದು ಕಡೆ ಆಹಾರ ಹೆಚ್ಚು ಉತ್ಪತ್ತಿ ಮಾಡಬೇಕೆಂದು ಹೇಳುವದು, ಇನ್ನೊಂದು ಕಡೆ ಶ್ರೇಷ್ಠವಾದ ಐವತ್ತು ಸಾವಿರ ಎಕರೆಯಲ್ಲಿ ಬೆಳೆದ ಆಹಾರ ಧಾನ್ಯ ಹದಿನೈದು ಇಪ್ಪತ್ತು ವರ್ಷದಿಂದ ನಾಶವಾದರೂ ಏನೂ ಮಾಡದೆ ಸುಮ್ಮನಿರುವುದು. ಹೀಗಾದರೆ ರೈತರು ಏನು ಮಾಡಬೇಕೆಂದು ಕಳಕಳಿಯಿಂದ ಯೋಚನೆ ಮಾಡಬೇಕು. ಇನ್ನುಮುಂದಾದರೂ ಈ ಪರಿಸ್ಥಿತಿಯ ನಿವಾರಣೆಗೆ ತಕ್ಕ ವ್ಯವಸ್ಥೆ ಮಾಡಿ, ರೈತ ಮೊದಲು ಖರ್ಚು ಕೊಡಬೇಕೆಂದು ಹೇಳದೆ, ಸಾಲವಾಗಿಯಾದರೂ ಸಹಾಯ ಕೊಟ್ಟು ಅದಕ್ಕೆ ಬೇಕಾದ ಪೌಡರ್ ಪಡೆದು ಸ್ಪ್ರೇ ಮಾಡಿಸಿದರೆ, ರೈತರು ಹಣವನ್ನು ಕೊಡಲು ಸಿದ್ಧರಾಗಿದ್ದಾರೆ. ಸರ್ಕಾರ ಈ ಯೋಜನೆಯನ್ನು ಕೈಗೊಂಡು ರೈತರನ್ನು ಈ ಬವಣೆಯಿಂದ ಬಿಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ನಮ್ಮ ಭಾಗದಲ್ಲಂತೂ ಈ ಸಹಕಾರ ಸಂಘಗಳು ಕೇವಲ ಸಾಲ ತರುವುದು ಕೊಡುವುದು ಒಂದು ಕೆಲಸವನ್ನು ಬಿಟ್ಟು ಬೇರೆ ಇನ್ನಾವ ಕೆಲಸವನ್ನೂ ಮಾಡುತ್ತಿರುವುದು ಕಂಡುಬರುತ್ತಿಲ್ಲ. ಸಹಕಾರ ಸಂಘಗಳ ಕಾರ್ಯಕ್ಷೇತ್ರವನ್ನು ನಾವು ರಾಜ್ಯದ ಮೂಲೆಯಲ್ಲಿಯೂ ಬೆಳೆಸಬೇಕೆಂದು ಜೀವನದ ಎಲ್ಲ ಕಾರ್ಯಗಳೂ ಸಹಕಾರದ ಮೇಲೆ ನಡೆಯಬೇಕೆಂದು ಒಪ್ಪಿಕೊಂಡಿದ್ದೇವೆ. ಸಹಕಾರಿ ಕ್ಷೇತ್ರ ಕೇವಲ ಸಾಲ ತರುವುದು ಕೊಡುವುದರಷ್ಟಕ್ಕೇ ನಿಲ್ಲದೆ, ರೈತರು ಬೆಳೆಗಳಿಗೆ ಬಳಸುವ ಸಾಮಾನ್ಯ ಔಷಧಗಳು, ಉತ್ತಮ

(ಶ್ರೀ ತಾವರೆ ಫಕೀರಪ್ಪ ಸಿದ್ದಪ್ಪ)

ಬೀಜಗಳು ಮುಂತಾದುವನ್ನೊದಗಿಸಬೇಕು, ರೈತನ ಜೀವನ ಸಹಕಾರದ ಕಡೆಗೆ ಹೊರಳುವಂತೆ ಮಾಡಬೇಕಾಗಿದೆ. ಸಹಕಾರ ಸಂಘಗಳು ಕೇವಲ ಸಾಲಕ್ಕೆ ತಮ್ಮ ಸರ್ವಶಕ್ತಿಯನ್ನೂ ವಿನಿಯೋಗ ಮಾಡದೆ ವ್ಯವಸಾಯದ ಸಮಸ್ಯೆಯನ್ನು ನಿವಾರಿಸಲು ಅವಕಾಶ ಮಾಡಿಕೊಡಬೇಕು. ಇಷ್ಟು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

Sri B. R. SUNTHANKAR (Belgaum-I).—Madam, I wish to offer a few remarks on the demand for Agriculture. Agriculture is a subject of primary importance, but in spite of that this subject is not receiving the attention of the Government as it deserves. The Narghal Committee have specifically recommended that Chief Ministers of States should handle this subject, but not only this Government but most of the State Governments have not followed that recommendation. Agriculture is the basis of our rural economy, but this basis, unfortunately, is very weak and is not sound and is yet to be consolidated. In our younger days we used to read that Indian budgets were vagaries of the monsoon. Now the present-day budgets are not so much vagaries of monsoons, but our agriculture still remains a victim of the vagaries of monsoons. Our agricultural production still depends upon the seasonal conditions. If the seasonal conditions are well and good we get good harvest and the Government can boast of increase in agricultural production.

The dismal feature of the agricultural sector in our country is the failure of planning in agriculture. Two Plans have failed to increase agricultural production in our country. As for the performance of this Government in the Second Plan, it has been unfortunately a failure. Agricultural production has been declining since 1959-60. The index number has been coming down. This is the picture given in the Mysore Budget. "In 1960-61, the index number for all food crops, which was ruling at 145. 7 in 1959-60, declined to 136 .— " The picture of 1961-62 is not also encouraging. Figure for 1962-63 is not before us. As far as 1961-62 is concerned, the picture is not encouraging. In the Second Plan, it was anticipated that agricultural production of the State would inerease from 33 lakh tons to 38 lakh tons. But actually, it has declined. The main defect with this Government is that they claim their achievements from their anticipations. Their anticipations are their achievements. We are given anticipations and they are claimed as achievements. The A.G.R. Committee has rightly pointed out that the figures given by the Agricultural Department, as regards agricultural production, were erroneous. That is why once my honourable friend Mr. Krishna said that we are given fictitious figures.

2-30 P.M.

As for the performance, as I said earlier, in the Second Plan, it is very unsatisfactory. There are five heads which are connected with agriculture — agriculture, land development, animal husbandry, soil conservation and development of area under irrigation projects. In the Second Five Year Plan, the outlay for all these subjects was Rs. 979 lakhs.

But, what was the actual expenditure? The actual expenditure was Rs. 711 lakhs. There was a shortfall under all these heads of Rs. 268 lakhs. That means, 27 per cent of the allotted amount was not spent: so, that means, the progress to the extent of 27 per cent could not be achieved and fulfilled.

I may give some instances of how this department is working. There was a campaign known as the World Seed Campaign. The F.A.O. of the United Nations Organisation had decided to observe the year 1961 as the World Seed Campaign year. But the Government woke up to this campaign as late as April 1962. An *ad-hoc* committee for the seed campaign was appointed in April 1962. This committee never met, did not do any work and by November 1962, it was disbanded. That is how the year of seed campaign was observed in the State.

Then, about mechanical cultivation section — this is one of the most neglected sections. There are 44 tractors and 40 bull-dozers with this Government. More than half of them are out of order, and the remaining are always under repairs. Further, Madam, out of those that are repaired or in working order, some are rented to the P.W.Department, instead of giving to the cultivators.

About the soil conservation — soil conservation is also not receiving the attention it deserves. Two schemes for the old Mysore area have been sanctioned. But these are not being implemented, because the staff is not appointed. So, even in the first Two years of the third Plan, soil conservation programmes remain unimplemented.

Similarly, about lift irrigation machinery in Bijapur District — the Lift Irrigation machinery that was there in Bijapur District at the time of Re-organization was transferred to this Government. But that machinery, for years together, has been lying idle without doing any work and the staff was maintained there. Through out.

Similarly, Madam, about the consolidation of holdings. I may quote another instance of how the work is done. In Bombay Karnatak area, under the former Bombay Government, this programme of consolidation of holdings was being implemented on a priority basis. It is a centrally sponsored scheme and the Former Bombay Government was very keen about implementing this scheme. But, since the time of Re-organisation, this scheme is being neglected and it is not doing proper work.

Similarly, Madam, in the Third Five Year Plan, under the head Agriculture, in all there are 140 schemes. I want to know from the Government how many of these schemes are being implemented, what is the progress that has been achieved during the last two years and what are the results of the schemes that are undertaken, and how many schemes yet remain to be undertaken. I want to know from the Government this information.

The failure in planning agriculture is mainly due to the failure in execution. Madam, the present organisation of the Agricultural Department is unable to cope with the task, which is entrusted to it. The Narghal committee has categorically opined that the crisis of agriculture in India is primarily an administrative crisis. Madam, this

(SRI B. R. SUNTHANKAR)

applies more fillingly to the department of the State. This deficiency in administration has kept down the achievements of our expenditure targets. And, expenditure incurred has failed to show proportionate benefits. The achievements are not commensurate with the expenditure that is incurred on the various schemes and programmes. Madam, toning of this agricultural department, not only toning, but re-organisation of this whole set up of agricultural department has become a necessity. Unless the set up is re-organised as to suit the planning requirements, there will be no development or improvement in the agriculture of the State.

There are a large number of vacancies of the gazetted as well as the non-gazetted posts in the Department. More than 100 gazetted posts are vacant. Similarly hundreds of non-gazetted posts are vacant for years together. Madam on account of the want of qualified and trained members and staff, a number of schemes are not being implemented and targets are not being achieved.

Speaking of my district of Belgaum, two gazetted posts have been vacant and 22 non-gazetted posts are vacant for several months. That is why a number of schemes in the district have been lagging behind. Madam, in order to acheve target of agricultural production, all-out efforts will have to be made by the Government. Madam the Hon'ble Sri V. T. Krishnamachari has recently said in one of the conferences that with proper efforts agricultural production in our country can be increased three-fold. Much was expected of the community development. The community development movement was expected to increase the production to a great extent. But unfortunately this community development movement has failed in this respect. This movement has failed to mobilise the rural community for intensive development of agriculture. So, it, is necessary, to put all out effort to increase agricultural production, extensive as well as intensive. The Maharashtra Government Madam, I may point out, has decided and laid out and drawn up programmes to increase agricultural production six monthly programmes have been drawn up and they are trying their best to increase the agricultural production for every six months. Our Government should follow the example. They should chalk out at least annual programmes. There are cultivable fallow lands to the extent of a 33 lakh acres. It is about 7per cent of the cultivable area that is in the State. All efforts should be made to bring these fallow lands under cultivation. Similarly Madam, intensive agriculture should be adopted. The area that is sown more than twice in the year is very low. There have been irrigation projects with perennial cannals which were executed 30-40 years back. Unfortunately the area that is sown more than once in the year is very less. With a little effort this area may be increased to an enormous extent. The cultivators under these projects, I am speaking about the old projects, can be induced can be persuaded to have more than one crop. Even as a step towards encouragement they may be tempted

with remissions in Land Revenue if they undertake 2 crops or 3 crops. Remission in land revenue may be given to them as a temptation, as an inducement and as encouragement. Government should take that bold step, I think.

In this respect Madam, this Government has taken a wise decision to have field channels so that the water is taken to the very fields of the cultivators. This is a very welcome step. No doubt soil conservation and dry farming are very important.

CHAIRMAN.—Two minutes more.

Sri B. R. SUNTHANKAR.—This is a very important matter Madam I will just take five minutes.

The progress that is made by this Government under soil conservation and dry farming is very limited. Madam, the importance of soil conservation and dry farming is not fully realised by the Government. I regret to say in the former Bombay Government, it has been our experience that with soil conservation and improved dry farming methods, yields can be increased to the extent of 30 to 50 per cent. Still Conservation is very great importance. With all the irrigation projects executed, the maximum area that will not be more than 25 per cent. That means 75 per cent of the land remains un-irrigated for ever. And something will have to be done for this unirrigateed area, and soil conservation and improved dry farming methods are the best methods.

Madam, in our State, in all two crore acres of land are in need of soil conservation and dry farming methods. In the first two plans Madam only 2,97,204 acres came under soil conservation at a cost of 10 crores of rupees. Under the Third Plan, it is expected that 2.70 lakhs acres may come under soil conservation and 5.40lakh acres may come under dry farming. If we look to the figures of other States, Madam, Maharashtra Govrnment where conditions are similar in this matter, they have fixed their target for the third plan as 50 lakh acres for soil conservation and 231 lakh acres for dry farming. Looking to the needs of the State, the targets that are fixed for that in the Third plan are very meagre. Government should concentrate on this soil conservation and dry farming methods. They are very necessary. Dry farming should receive the primary place in the scheme of agriculture particulary in the dry areas. Agriculturists should be convinded of the utility of dry farming methods. For that Madam, demonstration on a large scale should be held to convince the cultivator of the utility and urgency of the soil conservation and dry farming.

Similarly, improved implements should be provided to the cultivators for the dry farming. Similarly, about Japanese method of paddy cultivation.

CHAIRMAN.—The Hon'ble Member may conclude. His time is over. Others have to be accommodated.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಾವು ಓಟ್ ಮಾಡಬೇಕಾದ ಸುಮಾರು ಹೆಚ್ಚು ಕಡಿಮೆ 14 ಕೋಟಿ ರೂಪಾಯಿಗಳ ವಿಚಾರದಲ್ಲಿ ಮಾತನಾಡುತ್ತ ನಾಲ್ಕು ಸೂಚನೆ ಕೊಡಬೇಕೆಂದು ನಿಂತಿದ್ದೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಈ ವ್ಯವಸಾಯದ ವಿಚಾರವಾಗಿ ಮಾತನಾಡುತ್ತ ನಮ್ಮ ದೇಶದಲ್ಲಿ ಏನೋ ಆ ದನದ ಜೊತೆಗೆ ಒಂದು ದನವಾಗಿ, ಆ ಕುರಿಯ ಜೊತೆಗೆ ಒಂದು ಕುರಿಯಾಗಿ ನಮ್ಮ ದೇಶದಲ್ಲಿ ಈ ರೈತನು ಇಂಥ ಒಂದು ಪ್ರಾಣಿಯಾಗಿದ್ದಾನೆಂಬುದನ್ನು ತಿಳಿಸುವುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ. ರೈತನ ಒಂದು ಪರಿಸ್ಥಿತಿ ಇನ್ನಾವ ದೇಶದಲ್ಲೂ ಇರಲಾರದೆಂದು ಭಾವಿಸುತ್ತೇನೆ. ಯಾವ ದೇಶದಲ್ಲೂ ನೋಡು "ಅನ್ನದಾತೋಸುಖೀಭವ" ಎಂತ ಈ ರೈತನಿಗೆ ಹೇಳುತ್ತಾ ಆತನ ಕಷ್ಟಸುಖಗಳನ್ನು ಪರಿಹರಿಸಲು ಆತನಿಗೆ Technical advise, subsidy ಮತ್ತು ಎಲ್ಲಾ ತರಹ ಸಹಾಯ ಇತ್ಯಾದಿ ನಾನಾ ರೂಪದಲ್ಲಿ ಅನುಕೂಲ ಮಾಡಿಕೊಡಲು ಸರ್ಕಾರ ಹಾಗೂ ಸಮಾಜ ಮುಂದೆ ಬರುತ್ತಿದ್ದರೆ ನಮ್ಮ ದೇಶದಲ್ಲಿ ಆ ರೈತರನ್ನು ನೋಡಿ ನಗುತ್ತಾರೆ, ಅಷ್ಟೇ ಅಲ್ಲ ಅವನನ್ನೊಂದು ಪ್ರಾಣಿಯಾಗಿ ಕಾಣುತ್ತಿದ್ದಾರೆ. ಈ ದಿವಸ ಅವರೊಂದು ಒಳ್ಳೆಯ ಬಟ್ಟೆ ಹಾಕಿದರೆ ಇಲ್ಲಿಯ ಜನರಿಗೆ ಕಣ್ಣು ಚುಚ್ಚುತ್ತದೆ. ರೈತ ಎಲ್ಲೂ ಮುಂದಕ್ಕೆ ಬರಬಾರದು ಆತ ಯಾವ ರೀತಿಯಲ್ಲೂ ಇನ್ನು ಮುಂದೆ ಮುಂದಕ್ಕೆ ಬಾರದೆ ಇರುವ ಹಾಗೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ. ಈಗಿರತಕ್ಕ ರೈತನ ಪರಿಸ್ಥಿತಿಯಲ್ಲಿ ಅವನ ಒಂದೊಂದು ಅಂತಸ್ತಿನಲ್ಲೂ ವ್ಯತ್ಯಾಸವಿರುತ್ತದೆ. ಈ ದಿವಸ ರೈತಾಪಿಜನರೆಲ್ಲರೂ ಪ್ರಜ್ಞರಾಗಿ ಒಂದೇ ರೀತಿಯಲ್ಲಿರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈ ದಿವಸ ಎಲ್ಲರೂ ಆ ರೈತನು ದೇಶಕ್ಕೆ ಬೆನ್ನು ಮೂಳೆಯಾಗಿದ್ದಾನೆ ಎಂದು ಬಾಯಲ್ಲಿ ಬರಿ ಮಾತುಗಳಿಂದ ಅವನನ್ನು ಹೊಗಳುತ್ತಿದ್ದಾರೇ ವಿನಾ ಅವನ ಕಷ್ಟಗಳನ್ನು ವಿಚಾರ ಮಾಡದೆಯಿದ್ದರೂ ಆ ಕಷ್ಟದಲ್ಲಿರತಕ್ಕ ರೈತನು ಇವರ ಒಂದು ಒಳ್ಳೆಯ ಪದವನ್ನು ಕೇಳಿ ಆ ಆಶಾವಾದಿಯು ತನ್ನ ಕಷ್ಟಗಳನ್ನೆಲ್ಲಾ ಮರೆತು ಅವನ ಹೊಟ್ಟೆ ಒಂದು ಸಂತೋಷದಿಂದ ಹಿಗ್ಗಿ ಬಿಡುತ್ತದೆ. ಇದಕ್ಕೆ ಕಾರಣ ಆ ರೈತನ ಎಲ್ಲ ತರಹಿಯ ಜೀವನದಲ್ಲೂ ಎಲ್ಲಿಯೂ ಒಂದು ಸಂಘಟನಾ ಶಕ್ತಿ ಇಲ್ಲ. ಈ ದಿವಸ ವ್ಯಾಪಾರಸ್ಥರಲ್ಲಿ ಒಂದು ಸಂಘಟನೆ ಇದೆ. ಹೀಗೆ ಇನ್ನು ಅನೇಕರಲ್ಲಿ ಈ ಸಂಘಟನೆ ಇರುತ್ತದೆ. ಆದರೆ ಅಂಥಾ ಒಂದು ಸಂಘಟನೆ ಈ ರೈತಾಪಿವರ್ಗದಲ್ಲಿಲ್ಲದೆ ಇವರು ಕಷ್ಟ ಪಡುತ್ತಿದ್ದಾರೆ. ಈ ದಿವಸ ದವಸಧಾನ್ಯಗಳ ಬೆಲೆಗಳೆಲ್ಲ ಇಳಿದು ಹೋಗುತ್ತಿವೆ. ಆ ರೈತನು ಕೊಳ್ಳಬೇಕಾದ ಸಾಮಾನುಗಳ ಬೆಲೆ ಏರುತ್ತಿರುವಾಗ ಆ ರೈತನು ಬೆಳೆಯತಕ್ಕ ಬೆಳೆಗೆ ಇಷ್ಟು ಜಾಸ್ತಿ ಬೆಲೆಕೊಡಬೇಕೆಂದು ಅರ್ಜಿ ಮಾಡಲು ಅವರಲ್ಲಿ ಒಂದು ಆರ್ಗನೈಜೇಷನ್ನಿಲ್ಲ. ಇಂಥಾ ಕಷ್ಟ ಪರಿಸ್ಥಿತಿಯಲ್ಲಿರುವ ಆತನನ್ನು ವಿಚಾರ ಮಾಡದೆ, ಅವನು ಬೆಳೆಯತಕ್ಕ ಬೆಳೆಗಳಿಂದ ನಾವು ಸುಖಪಡುತ್ತಾ ಇರುವವರು ಯಾವ ಪಾಪಕ್ಕೆ ಹೋಗಬೇಕಾಗುವುದೋ ತಿಳಿಯದು.

ನಮ್ಮ ಕಡೆಯ ರೈತರಿಗಿರತಕ್ಕ ಅನೇಕ ಕಷ್ಟದಲ್ಲ ಮುಖ್ಯವಾದುದು ನೀರಿನ ಕಷ್ಟ. ಅನೇಕ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ನೀರಿನ ಸೌಕರ್ಯವನ್ನು ಒದಗಿಸಿದ್ದೇವೆ ಎಂದು ಇಲ್ಲಿ ಹೊಗಳಿದ್ದೂ ಹೊಗಳಿದ್ದೇ. ಆದರೆ ಇಲ್ಲಿಯ ತನಕ ಅವರಿಗೆ ಈ ನೀರಿನ ಸೌಕರ್ಯವಾಗಲೀ, ಗೊಬ್ಬರದ ಸೌಕರ್ಯವಾಗಲೀ ಉತ್ತಮ ಬೀಜಗಳ ಸೌಕರ್ಯವಾಗಲೀ ಒಂದೂ ದೊರೆಯುತ್ತಿಲ್ಲ. ಹಾಗೂ ಒಂದು ವೇಳೆ ಇವರು ಬೀಜಗಳನ್ನೇನಾದರೂ ಕೊಟ್ಟರೆ ಅವುಗಳನ್ನು ಇರುವೆ, ಗೆದ್ದಲು ತಿಂದು ಹಾಕಿಬಿಡುತ್ತವೆ. ಹೀಗಾಗಿ ನನ್ನ ಕ್ಷೇತ್ರದಲ್ಲಿರತಕ್ಕ ಜನರು ಕಳೆದ ಹನ್ನೆರಡು ವರ್ಷಗಳಿಂದಲೂ ಮಳೆ ಬೆಳೆಗಳಿಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ನಮ್ಮ ರೈತರು ಹೀಗೆ ವ್ಯವಸಾಯಕ್ಕೆ ಸಾಕಷ್ಟು ನೀರು ದೊರೆಯದೆ ತೊಂದರೆ ಪಡುತ್ತಿರುವುದರಿಂದ ಈ ರಿಸರ್ಚ್ ಬಾಬಿನಲ್ಲಿ ಕೆಲಸ ಮಾಡತಕ್ಕವರು ಕಡಮೆ ನೀರಿನಿಂದ ಆಗತಕ್ಕ ಬೆಳೆಯೂ ಹಾಗಿವೆ ಎಂಬುದನ್ನು ಕಂಡು ಹಿಡಿದು; ಅಲ್ಪ ಕಾಲದಲ್ಲೇ ಬೆಳೆಕೊಡತಕ್ಕಂಥ ಬಿತ್ತನೆ ಬೀಜಗಳನ್ನು ನಮ್ಮ ಜಿಲ್ಲೆಗೆ ಒದಗಿಸಬೇಕಾಗಿದೆ. ಆದಕಾರಣ ಈ ವಿಚಾರಕ್ಕೆ ನಮ್ಮ ರಿಸರ್ಚ್ ವರ್ಕಿನವರು ಹೆಚ್ಚಿನ ನಿಗಾ ಕೊಟ್ಟು ಈ ಒಂದು ಅನುಕೂಲ ಮಾಡಿ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಬಾವಿಗಳ ವಿಚಾರಕ್ಕೆ ಬಂದರೆ ನಮ್ಮ ಭಾಗದ ರೈತನು ಈ ಬಾವಿಗಳ ಸಾಲದಿಂದ ಏನೂ ಬದುಕುವ ಹಾಗಿಲ್ಲ. ಸಾಮಾನ್ಯವಾಗಿ ನಮ್ಮ ಭಾಗದ ರೈತನು ಈ ಬಾವಿ ನೀರಿನಿಂದ ಆತನು ವ್ಯವಸಾಯ ಮಾಡಬೇಕಾಗಿದ್ದರೆ ಒಂದೊಂದು ಬಾವಿಗೆ ಕನಿಷ್ಟಪಕ್ಷ 10-12 ಸಾವಿರ ರೂಪಾಯಿಗಳಿಲ್ಲದೆ ಬಾವಿಗಳಾಗುವುದಿಲ್ಲ. ಸರ್ಕಾರದವರು ಈ ದಿವಸ ಕೊಡತಕ್ಕ ಸಬ್‌ಸಿಡಿ ಹಣ ಆ 3 ಸಾವಿರ ರೂಪಾಯಿಗಳಲ್ಲಿ ಕೆಲವು ಕಡೆ ಅರ್ಧಭಾಗ ಕೆಲಸಕೂಡ ಆಗುವುದಿಲ್ಲ, ಮತ್ತೆ ಕೆಲವು ಕಡೆಗಳಲ್ಲಿ $\frac{1}{4}$ ಭಾಗ ಕೆಲಸ ಸಹಾ ಆಗುವುದಿಲ್ಲ. ಅಂತೂ ರೈತನಿಗೆ ಬಾವಿ ಆಗದಿದ್ದರೂ ಆ 3 ಸಾವಿರ ರೂಪಾಯಿಗಳ ಸಬ್‌ಸಿಡಿಗೆ ಆತನು ಸಾಲಗಾರನೇನೋ ಆಗುತ್ತಾನೆ. ಆ ಬಾವಿಗಳು ಈ ಹಣದಲ್ಲಿ ಪೂರ್ತಿ ಆಗುವುದಕ್ಕೆ ಅವಕಾಶವಿಲ್ಲ—ಬಾವಿಗಳಲ್ಲಿ ನೀರೂ ಇಲ್ಲ—ಇಂಥ ಅರ್ಧಮರ್ಧ ಬಾವಿಗಳಲ್ಲಿ ಅವನು ಬಿದ್ದು ಸಾಯಲೂ ಸಾಧ್ಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ಏನು ಮಾಡಬೇಕೆಂದರೆ—ಆ ರೈತನಿಗೆ ಹೇಗಾದರೂ ಒಂದು ಅನುಕೂಲ ಕಲ್ಪಿಸಿ

ಕೊಡಲೇಬೇಕೆಂಬ ಇರಾದೆ ಇದ್ದರೆ, ಒಬ್ಬೊಬ್ಬ ರೈತನಿಗೂ ಕನಿಷ್ಟ 5-6 ಎಕರೆ ಜಮೀನಿಗೆ ನೀರನ್ನು ಒದಗಿಸತಕ್ಕಂಥ ಬಾವಿಗಳನ್ನು ಸರ್ಕಾರದವರೇ ತೆಗೆಸಿಕೊಡಬೇಕು. ಅನಂತರ ಆ ಖರ್ಚಾದ ಹಣ ವನ್ನು ರೈತನಿಂದ ವಾಟರ್ ರೇಟ್ ಮತ್ತು Contribution ಮೂಲಕವಾಗಿ 15-20 ವರ್ಷಗಳ ಕಂತಿನಲ್ಲಿ ತೀರ್ವಳಿ ಮಾಡುವಂತೆ ಒಂದು ಏನಾದರೂ ವ್ಯವಸ್ಥೆಮಾಡಿ ಸರ್ಕಾರದವರೇ ರೈತರಿಗೆ ಈ ಬಾವಿಗಳನ್ನು ತೆಗಿಸಿ ಅವುಗಳಿಗೆ ಪಂಪನ್ನು ಹಾಕಿಸಿ ಕೊಟ್ಟರೆ ವಿನಾ ಇಲ್ಲದಿದ್ದರೆ ರೈತನು ಖಂಡಿತ ಇನ್ನು ಮುಂದೆ ಏನೂ ಬೆಳೆಯಲಾರ. ಮುಂದೆ ರೈತನು ಯಾವ ಕಾಲಕ್ಕೇನು ಬೆಳೆಯುತ್ತಾನೆಂಬು ದನ್ನೇ ಹೇಳುವುದಕ್ಕಾಗುವುದಿಲ್ಲ. ಈಗ ತಾನೆ ಶ್ರೀಮಾರ್ಕ್ ದೇವ್ ಅವರು ನನ್ನ ಹತ್ತಿರ ಬಂದು ಅವರು ಒಂದು ಒಳ್ಳೆಯ ಸಲಹೆಯನ್ನು ಸೂಚಿಸಬೇಕೆಂದು ನನಗೆ ಹೇಳಿದರು. ಆ ಸೂಚನೆ ಏನೆಂದರೆ ಕೆರೆಗಳ ಸುತ್ತಮುತ್ತಲು ಬಾವಿಗಳನ್ನು ತೆಗೆದರೆ ಅಲ್ಲಿ ವಾಟರ್ ಟೇಬಲ್ ಜಾಸ್ತಿಯಿರುತ್ತೆ. ಅವುಗಳ ಮೂಲಕ ಅಕ್ಕಪಕ್ಕದ ಜಮೀನುಗಳಿಗೆ ನೀರಿನ ಅನುಕೂಲ ಆಗುತ್ತದೆ ಎಂದು ಹೇಳಿದ್ದಾರೆ. ಸರ್ಕಾರದವರು ಈ ಒಂದು Idea ವನ್ನು ಸಹ ಉಪಯೋಗ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಇರಿಗೇಷನ್ ವಿಚಾರದಲ್ಲಿ ಜಮೀನಿಗೆ ನೀರನ್ನು ಬಿಟ್ಟು-ನೀರು ಹಾಯಿಸಿ ಬೆಳೆ ತೆಗೆಯುವುದಕ್ಕೆ ಬದಲು ಸ್ಪ್ರಿಂಕ್ಲಿಂಗ್ ಮೆಥೆಡ್ಡನ್ನು ಜಾರಿಗೆ ತಂದರೆ ಬಹಳ ಅನುಕೂಲವಾಗುತ್ತದೆ. ಇದರಿಂದ ಹೆಚ್ಚು ವಿಸ್ತೀರ್ಣದ ಜಮೀನನ್ನು ಇರಿಗೇಟ್ ಮಾಡಬಹುದು. ಇದು ಬಹಳ ಉತ್ತಮ ವಾದ ಬೇಸಾಯ ಪದ್ಧತಿಯೆಂದು ತಜ್ಞರು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಯಾರ್ಯಾರು ಮುಂದೆ ಬರುತ್ತಾರೋ ಅವರಿಗೆಲ್ಲ ಸರ್ಕಾರದವರು ಈ ಸ್ಪ್ರಿಂಕ್ಲಿಂಗ್ ಇರಿಗೇಷನ್‌ಗೆ ಅವಕಾಶ ಮಾಡಿಕೊಡ ಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಬೋರ್‌ವೆಲ್‌ಗಳ ವಿಚಾರ: ಈ ಬೋರ್‌ವೆಲ್ ಮೆಷಿನ್‌ಗಳನ್ನು ಹಾಕಿ ಬಾವಿ ಮಾಡಿಸಿ ಅದಕ್ಕೆ ಪಂಪನ್ನು ಹಾಕಿ ಒಂದು ದೊಡ್ಡ ರಿಜರ್ವಾಯರ್ ಮಾಡಿ ಅದರಿಂದ ಬೆಳೆಗೆ ಸ್ಪ್ರಿಂಕ್ಲಿಂಗ್ ಆಗಿ ನೀರು ಬೀಳುವಂತೆ ಒಂದು ವ್ಯವಸ್ಥೆ ಮಾಡಿಕೊಟ್ಟರೆ ರೈತನಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಅರೇಂಜ್‌ಮೆಂಟಿನಿಂದ ನೀರೂ ಸಹ ಚೆನ್ನಾಗಿ ಬರುತ್ತೆ. ಹೆಚ್ಚು ಭೂಮಿಯಲ್ಲಿ ಬೆಳೆ ತೆಗೆಯ ಬಹುದು. ಆದುದರಿಂದ ಈಗ P. W. D. ವಶದಲ್ಲಿರತಕ್ಕ ಈ ಬೋರ್‌ವೆಲ್ ಸ್ಕೀಂನ್ನು ತೆಗೆದು ಅಗ್ರಿಕಲ್ಚರ್ ಇಲಾಖೆಗೆ ಕೊಟ್ಟರೆ ರೈತನ ಕಷ್ಟವನ್ನು ಸ್ವಲ್ಪಮಟ್ಟಿಗಾದರೂ ನಿವಾರಣೆ ಮಾಡಿದ ಹಾಗೆ ಆಗುತ್ತದೆ. ಈ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಈ ಕಾಂಟೂರ್ ಬಂಡಿಂಗ್ ವಿಚಾರದಲ್ಲಿ ಈಗಾಗಲೇ ಅನೇಕರು ಮಾತನಾಡಿದ್ದಾರೆ. ನಾನು ಈಗಿರತಕ್ಕ ಮಂತ್ರಿಗಳಲ್ಲೂ ಮತ್ತು ಹಿಂದೆ ಇದ್ದ ಮಂತ್ರಿಗಳಲ್ಲೂ ಹಾಗೂ ಈ ಇಲಾಖೆ ಡೈರೆಕ್ಟರಲ್ಲೂ ನಮ್ಮ ತಾಲ್ಲೂಕಿಗೆ ಬರಬೇಕೆಂದೂ ಅಲ್ಲಿಯ ಸ್ಥಿತಿ ನೋಡಬೇಕೆಂದೂ ನಾನು ಕೇಳಿ ಕೊಂಡಿದ್ದೆನು. ಆದರೆ ಯಾರೂ ಇಲ್ಲಿಯವರೆಗೂ ಬರಲಿಲ್ಲ. ಅಲ್ಲಿಯ ಜನ ಇದನ್ನೆಲ್ಲಾ ವಿವರಿಸಲು ನನ್ನನ್ನು ಚುನಾವಣೆ ಮಾಡಿ ಕಳುಹಿಸಿದ್ದಾರೆ. ನನಗೆ ಇರತಕ್ಕ ಇಂಥಾ ಒಂದು ದೊಡ್ಡ Top Voice ನಲ್ಲಿ ಎಷ್ಟೋ ವಿಚಾರ ಹೇಳುತ್ತೇನೆ. ಆದರೆ ಅದು ಯಾರಿಗೂ ಕೇಳುತ್ತಿಲ್ಲ. ಆದಾಗ್ಯೂ ನಾನು ಆ ನಮ್ಮ ಪ್ರದೇಶಕ್ಕೆ ಈ ಕಾಂಟೂರ್ ಬಂಡಿಂಗ್ ವಿಚಾರ ಬಹಳ ಅಗತ್ಯವಾಗಿದೆ. ಈ ಕಾರ್ಯವನ್ನು ಕೈಗೊಂಡು ಎಲ್ಲರಿಗೂ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಂಪ್ ಸೆಟ್‌ಗಳ ವಿಚಾರದಲ್ಲಿ ನಾನು ನಮ್ಮ ಸರ್ಕಾರದವರನ್ನು ಕಂಗ್ರಾಜುಲೇಟ್ ಮಾಡಬೇಕಾಗಿದೆ. ಏಕೆಂದರೆ ಇವುಗಳಿಗೆ ಇನ್‌ಷೂರೆನ್ಸ್ ಮಾಡಿದ ಕೂಡಲೇ ಅವರಿಗೆ ಸಾಲ ದೊರೆಯುತಕ್ಕಂಥ ಒಂದು ಏರ್ಪಾಡನ್ನು ಮಾಡಿದ್ದಾರೆ. ಇದೇ ರೀತಿ ಆ ಟ್ರ್ಯಾಕ್ಟರುಗಳಿಗೂ ಕೂಡ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಟ್ರಾಕ್ಟ್ಯರುಗಳಿಗೂ ಇನ್‌ಷೂರ್ ಮಾಡತಕ್ಕ ಅವಕಾಶ ಕಲ್ಪಿಸಿಕೊಡಬೇಕು. ಏಕೆಂದರೆ ಈ ದಿವಸ ಭೂಮಿಗೆ ನಮ್ಮಲ್ಲಿ ಯಾರೂ ಸರಿ ಯಾದ ವ್ಯಾಲ್ಯೂ ಕೊಡುತ್ತಿಲ್ಲ. ಕಾರಣ ಬರ ಬಂದರೆ ಏನೂ ಬೆಳೆಯಾಗುವುದಿಲ್ಲ ಎಂದು. ಅಲ್ಲಿ ನೂರಾರು ಎಕರೆ ಜಮೀನಿದ್ದರೂ ಎಲ್ಲ ವೇಸ್ಟ್ ಆಗಿದೆ. ಯಾರೂ ಈ ದಿವಸ ಈ ಭೂಮಿಗೆ ವ್ಯಾಲ್ಯು ಯೇಷನ್ ಸರ್ಟಿಫಿಕೇಟನ್ನು ಕೊಡುತ್ತಿಲ್ಲ. ಆದ್ದರಿಂದ ಸರ್ಕಾರದವರು ಈಸಿ ಟರ್ಮ್‌ನಲ್ಲಿ ಈ ಟ್ರ್ಯಾಕ್ಟರುಗಳಿಗೂ ಇನ್‌ಷೂರೆನ್ಸ್ ಮಾಡತಕ್ಕ ಏರ್ಪಾಡನ್ನು ಮಾಡಿಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ.

ಇನ್ನು ಈ ಇನ್‌ಸೆಕ್ಟಿಸೈಡ್ಸ್ ವಿಚಾರಕ್ಕೆ ಬಂದರೆ—ನಮ್ಮಲ್ಲಿ ಅನೇಕ ಹಳ್ಳಿಗಳಲ್ಲಿ ಹುರಳಿ ಬೆಳೆ ಯೆಲ್ಲ ನಾಶವಾಯಿತು. ನನ್ನ ಜಮೀನಿನಲ್ಲೇ ಮೊದ ಮೊದಲು ಸ್ವಲ್ಪ ಚೆನ್ನಾಗಿ ಬಂದಿತ್ತು. ಆದರೆ ತಡೆಯಲ್ಲಿ ಮಾರಿ ರೋಗ ಬಂತು. ಆಗ ನಾನೇ ಈ ಇಲಾಖೆಯವರಿಗೆ ಹೇಳಿ ಕಳುಹಿಸಿದೆ. ಅವರು ಬರುವ ಹೊತ್ತಿಗೆ ಅರ್ಧ ಬೆಳೆಯೆಲ್ಲ ಹಾಳಾಗಿತ್ತು. ಹೀಗೆ ಈ ವಿಚಾರದಲ್ಲಿ ನಮ್ಮಂಥಾ ಜನರಿಗೇ ಈ ಇಲಾಖೆಯಿಂದ ಒಂದು ಅನುಕೂಲ ದೊರೆಯಲಿಲ್ಲ ಎಂದು ಹೇಳುವಾಗ ಇನ್ನು ಸಾಧಾರಣ ಜನರ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಗತಿ ಏನಾಗಿರಬಹುದು ? ಈ ರೋಗ ಬಂದು ಅಲ್ಲಿ ಅನೇಕರಿಗೆ ಬೆಳೆ ಕೆಟ್ಟು ಅನಾನುಕೂಲವಾಗಿದೆ. ಇನ್ನು ಮುಂದಕ್ಕಾದರೂ ತಕ್ಷಣ ಇಲಾಖೆಯವರು ನಿಗಾ ತೆಗೆದುಕೊಂಡು ರೈತರಿಗೆ ಅವರ ಬೆಳೆ ಕೈ ಹತ್ತುವ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

3.00 P. M.

ನಮಗೆ ಕೊಟ್ಟಿರುವ IIIrd ಪ್ಲಾನ್ Bookನಲ್ಲಿ ಎರಡು ಕಾಲೋನಿಗಳನ್ನು ಹಿಂದುಳಿದ ವರ್ಗದವರಿಗೆ ಎಂದು propose ಮಾಡಿದ್ದಾರೆ. ಅದರ ಬಗ್ಗೆ ನಾನು ರೆವೆನ್ಯೂ ಡಿಮಾಂಡ್ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತೇನೆ. ಈಡಿಗರಲ್ಲ ಕೆಲಸವಿಲ್ಲದೆ ಕಾರ್ಯವಿಲ್ಲದೆ ಬೀದಿ ಬೀದಿ ಅಲೆಯುವಂಥ ಪ್ರಸಂಗ ಬಂದಿತ್ತು. ಹಿಂದಿನ ರೆವೆನ್ಯೂ ಮಂತ್ರಿಗಳು ಈಡಿಗರನ್ನೆಲ್ಲ ಸೇರಿಸಿ ಒಂದು ಕಾಲೋನಿಮಾಡಿ, ಬೇಗೂರು ಹತ್ತಿರ ಒಂದು ಬೋರ್ಡ್ ಹಾಕಿ ಅವರಿಗೆಲ್ಲ ಸಾಗುವಳಿ ಚೀಟಿಯನ್ನು ಹಂಚಿ ಬಂದರು. ಈಗ ಅಲ್ಲಿ ಗುಡಿಸಲೂ ಇಲ್ಲ, ಏನೂ ಇಲ್ಲ. ರೆವೆನ್ಯೂ ಮಂತ್ರಿಗಳು ಅವರಿಗೆಲ್ಲ ಬುಲ್‌ಡೋಜರ್, ಟ್ರ್ಯಾಕ್ಟರ್ ಕಳಿಸಿ ನೆಲವನ್ನು ಹದಮಾಡಿ ಕೊಡುತ್ತೇವೆಂದು ಮಾತುಕೊಟ್ಟು ಬಂದರು. ಇನ್ನೂ ಅವರಿಗೆ ಸಹಾಯ ಮಾಡುವುದರಲ್ಲಿದ್ದಾರೆ. ವ್ಯವಸಾಯ ಅಷ್ಟು ಸುಲಭವಾದ ಕೆಲಸವಲ್ಲ. ರೂಪಾಯಿಗಳನ್ನು ಚೆಲ್ಲಿ ನಯೇ ಪೈಸೆ ಆಯಬೇಕು. ಇಂಥ ಕಷ್ಟವಿರುವಾಗ ಈಡಿಗರು ಹೇಗೆ ತಾನೇ ವ್ಯವಸಾಯ ಮಾಡಬಲ್ಲರು ? ಹೊಸದಾಗಿ ಏನಾದರೂ ಕಾಲೋನಿಗಳನ್ನು ಮಾಡುವುದಿದ್ದರೆ ಹಿಂದೆ ಇಲ್ಲಿ ಮಾಡಿರುವ ಕಾಲೋನಿಗಳನ್ನು ಉದ್ಧಾರ ಮಾಡಿ ಈಡಿಗರ ಜನಾಂಗಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ.

Farmer's Forum ಎಂದು ಒಂದು Organisation ಇದೆ. ಅದನ್ನು ನಮ್ಮ ಹಣಕಾಸಿನ ಇಲಾಖೆಯವರು Recognise ಮಾಡುವುದಿಲ್ಲವೆಂದು ಹೇಳುತ್ತಾರೆ. ಸಂಘಟಿತರಾಗದೆ ಇರುವ ರೈತಾಪಿ ಜನಗಳಿಗೆ ಅನುಕೂಲವನ್ನು ಕಲ್ಪಿಸಿಕೊಡುವ ಪರಿಸ್ಥಿತಿ ಬಂದರೆ ಅದಕ್ಕೆ ಒಂದು Organisation ಬೇಕಾಗುತ್ತದೆ. ಈ ದಿಕ್ಕಿನಲ್ಲಿ ಕೆಲಸ ಮಾಡಲು ಮುಂದೆ ಬರತಕ್ಕ ಸಂಘ ಸಂಸ್ಥೆಗಳಿಗೆ ಕೊಡಬೇಕಾದ ಸವಲತ್ತುಗಳನ್ನು ಕೊಡುತ್ತಿಲ್ಲ. ಸ್ಕೌಟ್ಸ್, ಸೇವಾದಳ, ಇಂಥವುಗಳಿಗೆಲ್ಲ ಎಷ್ಟು ಹಣ ಕೊಡಬೇಕಾದರೂ ಕೊಡುತ್ತೀರಿ. ರೈತಾಪಿ ಜನಗಳನು ನೋಡಿದರೆ ಅವರಿಗೆ ಅದೇ ತರಹ ಸಹಾಯವನ್ನು ಕೊಡುತ್ತಿಲ್ಲ. ರೈತರ ಬಗ್ಗೆ ಈ ತರಹ ಭಾವನೆ ಬರಬಾರದೆಂದು ಹೇಳುತ್ತೇನೆ.

ಇನ್ನು animal husbandry ವಿಷಯವಾಗಿ ಸ್ವಲ್ಪ ಮಾತನಾಡುತ್ತೇನೆ. ನಮ್ಮ ಮಾನ್ಯ ಮಂತ್ರಿಗಳು ಡೈರಿ ಪ್ರಾಜೆಕ್ಟ್ ವಿಚಾರವಾಗಿ ಆಗಾಗ ಹೇಳಿಕೆ ಕೊಡುವುದನ್ನೂ, ಅಸೆಂಬ್ಲಿಯಲ್ಲಿ ಹೇಳುವುದನ್ನೂ ಕೇಳುತ್ತಿದ್ದೇವೆ. ಅವರಿಗೆ Milk ಸರ್ವೆ ಮಾಡುವುದಕ್ಕೆ ಒಂದು ಇಲಾಖೆ ಇದೆ. ಅದಕ್ಕೆ ಕೆಲವು ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ಸರ್ಕಾರಿ ಆರ್ಡರ್ ಪ್ರಕಾರ ಅವರಿಗೆ ಇಂಥ ಅರ್ಹತೆ ಇರಬೇಕು ಎಂದು ಹೇಳಿಲ್ಲ, Statistics ಓದಿಕೊಂಡು B.Sc., M.Sc., ಮಾಡಿಕೊಂಡಿರುವಂಥ qualified hands ಮತ್ತು ಅನುಭವವಿರುವವರನ್ನು ಕೆಲಸಕ್ಕೆ ನೇಮಿಸಿಕೊಳ್ಳದೆ ಸಿಕ್ಕಾಪಟ್ಟೆ first division clerk second divsion clerk ಎಂದು ಅವರಿಗೆ ಇಷ್ಟ ಬಂದವರನ್ನೂ ನೇಮಿಸಿಕೊಂಡು ಸರ್ವೆ ಮಾಡಬೇಕಾದರೆ ಹೇಗೆ ಸಾಧ್ಯ ? ನಿಜವಾಗಿಯೂ statistics-know-how ಇಲ್ಲದೆ ಇರುವವರನ್ನು ತೆಗೆದುಕೊಂಡರೆ ನಮಗೆ ಬೇಕಾದ ಮಾಹಿತಿ ಸಿಕ್ಕುತ್ತದೆಯೇ ? ನಮ್ಮ dairy project ಯಶಸ್ವಿಯಾಗಿ ಕೆಲಸ ಮಾಡಬೇಕಾದರೆ qualified hands ನೇಮಕ ಮಾಡಿಕೊಳ್ಳಿ. ಡೈರೆಕ್ಟರ್ ಸಾಹೇಬರು ಬರೀ ರಾಜಕೀಯ ಮಾಡಿದರೆ ಉಪಯೋಗವಿಲ್ಲವೆಂದು ಹೇಳುತ್ತೇನೆ.

Stockmen ಮತ್ತು Compounders ವಿಚಾರ ತೆಗೆದುಕೊಂಡರೆ ಇದುವರೆಗೆ ಕೊಟ್ಟಿರುವಂಥ ಎಲ್ಲ ಆಸ್ಪತ್ರೆಗಳಲ್ಲಿಯೂ ಸ್ಟಾಕ್‌ಮೆನ್ ಇಲ್ಲ, ಕಾಂಪೌಂಡರ್ ಇಲ್ಲ. ಸಾಧ್ಯವಾದಷ್ಟು ಮಟ್ಟಿಗೂ ಎಲ್ಲ ಆಸ್ಪತ್ರೆಗಳಿಗೂ ಅವರನ್ನು ಕಳಿಸಬೇಕೆಂದು ಹೇಳುತ್ತಿದ್ದೇನೆ. ಇದರಲ್ಲಿ ನಮ್ಮ ತಾಲ್ಲೂಕಿನ ಒಂದು ಕೋರಿಕೆಯೂ ಇದೆ, ಬೊಮ್ಮಲಾಪುರಕ್ಕೆ ಒಂದು rural veterinary dispensary ಕೊಡಬೇಕೆಂದು ಸರ್ಕಾರದವರಲ್ಲಿ ನಾನು ಬೇಡಿಕೊಳ್ಳುತ್ತೇನೆ.

ಗ್ರಾಮಾಭಿವೃದ್ಧಿ ವಿಚಾರಕ್ಕೆ ಬಂದರೆ ಕುಡಿಯುವ ನೀರಿನ ಬಾವಿಗಳು ನಾಲ್ಕೈದು ವರ್ಷಕ್ಕೆ ಮಿಗಿಲಾದ ಬಾವಿಗಳಿಲ್ಲವೆಂದು ನಮ್ಮ ಮಂತ್ರಿಗಳು ಹೇಳಿದರು. ನನ್ನ ಪ್ರಶ್ನೆಯೊಂದಕ್ಕೆ ಮಾನ್ಯ ಉಪ ಮಂತ್ರಿಗಳು ಹೇಳಿದರು, ಹತ್ತು ಹನ್ನೆರಡು ವರ್ಷಗಳಿಂದ ಕೆಲವು ಇವೆ, ಕೂಡಲೇ ಸಿದ್ಧಮಾಡಿ

ಕೊಡುತ್ತೇವೆ ಎಂದು ಹೇಳಿದರು. ಬೇರಂಬಾಡಿ ಎಂಬ ಗ್ರಾಮದಲ್ಲಿ 20 ವರ್ಷಗಳ ಹಿಂದೆ ತೆಗೆದು ಎರಡು ಬಾವಿಗಳು ಅರ್ಧಮರ್ಧವಾಗಿ ಅದರಲ್ಲಿ ದನಕರುಗಳು ಬಿದ್ದು ಹೋಗಿವೆ, ಇಂಥಾ ಬಾವಿಗಳು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬೇಕಾದಷ್ಟಿವೆ. ಕುಡಿಯುವ ನೀರಿನ ಸೌಲಭ್ಯ ಮಾಡಿಕೊಡಬೇಕೆಂದು ಎಷ್ಟು ಕೇಳಿದರೂ ಉಪಯೋಗವಿಲ್ಲದಂತಾಗಿದೆ. ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಇತರರಿಗಿಂತ ಚಿಕ್ಕವರು ಅವರಿಗೆ ತಿರುಗಾಡುವುದಕ್ಕೆ ಸಾಮರ್ಥ್ಯವಿದೆ. ಒಂದು ಸಲ ನಮ್ಮ ತಾಲ್ಲೂಕಿಗೆ ಬಂದು ನೋಡಿಕೊಂಡು ಬನ್ನಿ ಎಂದು ಕರೆದರೂ ಕೂಡ ಬರುತ್ತಿಲ್ಲ. ಅವರು ದಯವಿಟ್ಟು ಬಂದು ನಮ್ಮ ಊರನ್ನು ನೋಡಬೇಕೆಂದು ಕೇಳಿಕೊಳ್ಳುತ್ತೇನೆ.

Village extension ವಿಚಾರವಾಗಿ ಎಷ್ಟೋ ಊರುಗಳಿಂದ ಬಂದಂಥ ಅರ್ಜಿಗಳು ತಮ್ಮಲ್ಲಿ ಹಾಗೆಯೇ ಉಳಿದಿವೆ. ಅದನ್ನು ಬೇಗ ವಿಲೇವಾರೆ ದೊಡ್ಡ ದೊಡ್ಡ ವಿಲೇಜ್ ಎಕ್ಸ್‌ಟೆನ್‌ಷನ್‌ಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಎಷ್ಟೋ ರಸ್ತೆಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಿದ್ದೀರಿ. ಈ ರಸ್ತೆಗಳಿಗೆ ರಿಪೇರಿ ಮಾಡಬೇಕಾದರೆ ಸರ್ಕಾರದಲ್ಲಿ ಹಣವಿಲ್ಲ, P. W. D. ನಲ್ಲಿ ಹಣವಿಲ್ಲ, ತಾಲ್ಲೂಕ್ ಬೋರ್ಡಿನಲ್ಲಿ ಹಣವಿಲ್ಲ, ಪಂಚಾಯಿತಿಯಲ್ಲಿ ಹಣವಿಲ್ಲ, ನಮ್ಮಲ್ಲಿ ಮೊದಲೇ ಇಲ್ಲ. ನಾವು ತೀರ ಬಡವರು. ಒಂದು ಊರಿನಿಂದ main ರೋಡಿಗೆ ಬರಬೇಕಾದರೆ ದಾರಿಯಿಲ್ಲ, ಮಳೆ ಬಂದರೆ ದ್ವೀಪದಲ್ಲಿರುವಂಥ ಪ್ರಸಂಗ ಉಂಟಾಗುತ್ತದೆ. ದಯವಿಟ್ಟು ಲೋಕೋಪಯೋಗಿ ಮಂತ್ರಿಗಳ ಹತ್ತಿರ ಸ್ವಲ್ಪ ಹಣವನ್ನು ತೆಗೆದುಕೊಂಡು ಈ ರಸ್ತೆಗಳನ್ನು ಸರಿಮಾಡಿಸಿ ಕೊಡಬೇಕು.

ಇನ್ನು ಸಹಕಾರದ ವಿಚಾರವಾಗಿ ಮಾತನಾಡುವಾಗ, co-operative farming ಚೆನ್ನಾಗಿ ನಡೆಯುತ್ತಿದೆ ಎಂದು ನಮಗೆ ತಿಳುವಳಿಕೆ ಬರುವಹಾಗೆ ಹೇಳುತ್ತಿದ್ದಾರೆ. ಒಂದೊಂದು ಸಂಸಾರದಲ್ಲಿ ಎಂಟು ಹತ್ತು ಜನರಿದ್ದರೆ ಅವರೆಲ್ಲ ಒಟ್ಟಿಗೆ ಸೇರಿ co-operative farming ಎಂದು ಮಾಡಿಕೊಂಡಿರುತ್ತಾರೆ. ನಮ್ಮಲ್ಲಿ ಗಂಡ, ಹೆಂಡತಿ, ಏಳೆಂಟು ಮಕ್ಕಳಿರುವುದು ಸಹಜವಾಗಿದೆ. ನಾನು ಒಂದು co-operative farming ವಿಚಾರವನ್ನು ನೋಡಿದ್ದವರಲ್ಲಿ ಗಂಡ, ಹೆಂಡತಿ ಡೈರೆಕ್ಟರುಗಳು, ಮೂರು ಜನ ಮಕ್ಕಳು ಅದಕ್ಕೆ ಮೆಂಬರುಗಳು, ಅವರ ಇಬ್ಬರು ಸೊಸೆಯರೂ ಮೆಂಬರುಗಳು, ಒಬ್ಬ ತಂಗಿಯೂ ಮೆಂಬರು, ಹೀಗೆ ಒಟ್ಟು ಹತ್ತು ಜನ ಮೆಂಬರುಗಳಾಗಿದ್ದಾರೆ. ಈ ಸೊಸೈಟಿ 1961ರಲ್ಲಿ ರಿಜಿಸ್ಟರಾಗಿದೆ. ಇದಕ್ಕೆ managerial cost ಬೇರೆ ಕೇಳಿದ್ದಾರೆ. ಇದು ಸಾಲದೆಂದು ತಾಲ್ಲೂಕು ಫಂಡಿನಲ್ಲಿ ಹತ್ತು ಸಾವಿರ ರೂಪಾಯಿ ಖರ್ಚಿನಲ್ಲಿ ಗೋಡೌನ್ ಒಂದನ್ನು ಕಟ್ಟಿಸಿಕೊಂಡಿದ್ದಾರೆ. ಇಷ್ಟೇ ಅಲ್ಲದೆ ತಮ್ಮ ಸ್ವಂತ ಹೆಸರಿನಲ್ಲಿ 50-60 ಸಾವಿರ ರೂಪಾಯಿ ಇಟ್ಟುಕೊಂಡಿದ್ದಾರೆ. ಬ್ಯಾಂಕ್‌ಗಳಲ್ಲಿ ಬೇಕಾದಷ್ಟು ಸಾಲಗಳನ್ನು ತೆಗೆದುಕೊಂಡಿದ್ದಾರೆ. ಹೀಗೆಲ್ಲ ಎಷ್ಟೋ ಸವಲತ್ತುಗಳನ್ನು ಯಾರು ಯಾರಿಗೋ ಒದಗಿಸಿ ಕೊಡುತ್ತಿದ್ದೀರಿ.—ಇನ್ನೂ ಏನೇನು ಸೌಲಭ್ಯಗಳನ್ನು ಒದಗಿಸಿ ಕೊಡುತ್ತೀರೆಂದು ಹೇಳಬೇಕು. ಇನ್ನೂ ಎಷ್ಟೆಷ್ಟು ಜನಗಳಿಗೆ ಏನೇನು ಮಾಡುವುದಕ್ಕೆ ಸಾಧ್ಯವೆನ್ನುವುದನ್ನು ದಯವಿಟ್ಟು ಹೇಳಿದರೆ ಬಹಳ ಸಂತೋಷವಾಗುತ್ತದೆ.

ಇನ್ನು Co-operative Extension Officers ವಿಚಾರ ಹೇಳುತ್ತ ಅವರು ಮಾಡಿರುವ ಪಾಪವೇನು ಎಂದು ಕೇಳುತ್ತೇನೆ. ಪ್ರತಿಯೊಂದು ಕೆಲಸಕ್ಕೂ ಅವರನ್ನು ಹಾಕಿಕೊಂಡು ದುಡಿಸುತ್ತೀರಿ. ಈವಾಗ ಧಾನ್ಯಗಳನ್ನು ಸಂಗ್ರಹಿಸಲು ಉಪಯೋಗಿಸುತ್ತಿದ್ದೀರಿ. A to Z ಎಲ್ಲ ಕೆಲಸಗಳಿಗೂ ಅವರನ್ನು ತೆಗೆದುಕೊಳ್ಳುತ್ತೀರಿ. ಈ ಪರಿಸ್ಥಿತಿಯಲ್ಲಿ ಅವರಿಗೆ ಕೊಡುವ ಸಂಬಳ ಸಾಕೇ ? Agricultural Instructorsಗೆ ಜಾಸ್ತಿ ಕೊಡುತ್ತೀರಿ, Veterinary Inspectorsಗೆ ಜಾಸ್ತಿ ಕೊಡುತ್ತೀರಿ, Sericultural Inspectorsಗೆ ಜಾಸ್ತಿ ಕೊಡುತ್ತೀರಿ, ಎಲ್ಲರಿಗೂ ಹೆಚ್ಚಾಗಿ ಕೊಡುತ್ತೀರಿ. ಆದರೆ Co-operative Extension Officersಗೆ ಮಾತ್ರ ಕೊಡುವುದಿಲ್ಲವೆಂದರೆ ಯಾವ ನ್ಯಾಯ ? ಅವರು ಕೆಲಸ ಮಾಡುವುದಿಲ್ಲವೆ ? ಒಂದು ಬ್ಲಾಕಿನಲ್ಲಿ ಕೆಲಸ ಮಾಡುವವರಲ್ಲಿ ಇವರಿಗೆ ಮಾತ್ರ ಸರಿಯಾದ ಸಂಬಳ ಕೊಡುವುದಿಲ್ಲವೆಂದರೆ ಸರಿಯಲ್ಲ. ಅವರ ಕಷ್ಟ ಸುಖಗಳನ್ನೂ ನೋಡಿ ಎಲ್ಲರಿಗೂ ಕೊಡುವಂತೆ ಸಂಬಳಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅರಣ್ಯ ಮಂತ್ರಿಗಳು ಎಲ್ಲಿಯೋ ಹೋಗಿದ್ದಾರೆ. ಅವರ ಇಲಾಖೆಯಲ್ಲಿ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಕುಂದುಕೆರೆ ಊರು ಚಿಕ್ಕದಾಗಿತ್ತು. ಅದು ದೊಡ್ಡದಾಗುತ್ತಿದೆ. ಹಿಂದೆ ಆ ಊರಿನ ಸುತ್ತ ಇದ್ದ ಜಾಗವನ್ನು ಅರಣ್ಯ ಇಲಾಖೆಯವರು ತೆಗೆದು ಕೊಂಡಿದ್ದಾರೆ. ಈಗ ಊರು ಬೆಳೆಯುತ್ತಿರುವುದರಿಂದ ಮೊದಲು ಇದ್ದಂತೆ ಅವರಿಗೆ ಜಾಗಕೊಟ್ಟು Boundry Shift ಮಾಡಬೇಕು ಎಂದು ನನ್ನ ಪ್ರಾರ್ಥನೆ. ಈಗಿರುವ ಬೌಂಡರಿಯೊಳಗೆ ಆಡು, ಕುರಿ, ದನ ಕರುಗಳನ್ನು ಮೇಯಿಸುವುದಕ್ಕೆ ಕಷ್ಟವಾಗಿದೆ. ಆದುದರಿಂದ ದನ ಕರುಗಳನ್ನು ಮೇಯಿಸುವುದಕ್ಕೆ ಅನುಕೂಲಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕೊನೆಯದಾಗಿ ಎಡುವನಹಳ್ಳಿಯವರು ಅರಣ್ಯವನ್ನು ರಿಲೀಸ್‌ಮಾಡಿ ಕೊಡಬೇಕೆಂದು ಕೇಳಿದಾಗ ಅವರಿಗೆ ಅದು Tiger block, ರಿಲೀಸ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದೇ ನಿಟ್ಟೂರೆ ಗ್ರಾಮದವರಿಗೆ ಕೊಡುವುದಕ್ಕೆ ಅವಕಾಶ ಕೊಡುವವರಾಗಿದ್ದಾರೆ. 15-20 ಮೈಲಿಯಿಂದ ಬಂದು ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದರೆ ಎಡವನಹಳ್ಳಿಯವರು ಜಮಿನಿಲ್ಲದೆ, ಜಮೀನುಕೊಡಿ ಎಂದರೆ ಇಲ್ಲದ ಭಯವನ್ನು ಹುಟ್ಟಿಸುತ್ತಾರೆ. ಕೊಡುವುದಕ್ಕೆ ಇಷ್ಟವಿಲ್ಲದೆ ಹೋದರೆ 'Tiger block' ಹುಲಿ ಬಂದು ಹಿಡಿದು ಕೊಳ್ಳುತ್ತದೆಂದು ಹೇಳುವುದು, ಇನ್ನೊಬ್ಬರಿಗೆ ಏನೂ ಹೇಳದೆ ಕೊಡುವುದು ಹೀಗೆಲ್ಲ ಮಾಡುತ್ತಾರೆ. Tiger block ನಿಂದ ಬೇರೆಯವರಿಗೆ ತೊಂದರೆಯಾಗುವುದಿಲ್ಲವೇ, ಅವರನ್ನು ಹುಲಿ ಹಿಡಿದು ಕೊಳ್ಳುವುದಿಲ್ಲವೇ? ಇದರ ಕಡೆಗೂ ಸರ್ಕಾರ ಗಮನ ಕೊಡಬೇಕೆಂದು ಹೇಳಿ. ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ಹಣಕಾಸಿನ ಸಚಿವರು ಬಡ್ಜೆಟ್ಟಿನ ಭಾಷಣದ ಎರಡನೆ ಭಾಗದಲ್ಲಿ ಎಲ್ಲ ಇಲಾಖೆಗಳ ವಿವರಗಳನ್ನು ಹೇಳುತ್ತ ವ್ಯವಸಾಯದ ವಿಷಯವಾಗಿ ಹೇಳುತ್ತ ಎರಡು ಮುಖ್ಯವಾದ ವಿಷಯಗಳನ್ನು ಹೇಳಿದ್ದಾರೆ. ಒಂದನೇದು ವ್ಯವಸಾಯಕ್ಕಾಗಿ ಪಂಪುಸೆಟ್ಟುಗಳನ್ನು ಒದಗಿಸಿ ನೀರಾವರಿ ವ್ಯವಸ್ಥೆಗೆ ಅನುಕೂಲಮಾಡುವುದು; ಮತ್ತೊಂದು ಎಂದರೆ ಎರಡನೇ ಮುಖ್ಯವಾದ ಅಂಶ ಎಂದರೆ ಬಾವಿಗಳನ್ನು ತೆಗೆದು ಅಂತಹ ಬಾವಿಗಳಲ್ಲಿ ನೀರು ಸರಬರಾಜು ಆಗುವುದಕ್ಕಾಗಿ Borewells Machineಗಳನ್ನು ಹಾಕಿ ಬಾವಿಯಲ್ಲಿರುವ ನೀರಿನ ಅಂಶವನ್ನು ಜಾಸ್ತಿಮಾಡತಕ್ಕ ಅಂಶ, ಈ ಎರಡನೆಯ ಅಂಶಕ್ಕಾಗಿ ಈ ಇಲಾಖೆಯವರು ಮಹತ್ವ ಕೊಟ್ಟಿರುವುದು ನಿಜವಾಗಿಯೂ ಶ್ಲಾಘನೀಯವಾದುದು. ವ್ಯವಸಾಯವನ್ನು ಇಂತಹ ಬಾವಿಗಳಿಂದ ಮಾಡಿರತಕ್ಕ ರೈತರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಎನ್ನುವುದನ್ನು ನಾವೆಲ್ಲರೂ ನಿಜವಾಗಿಯೂ ಒಪ್ಪಿಕೊಳ್ಳಬಹುದು. ಈಗ ತಾನೇ ಮಾತನಾಡಿದ ಶ್ರೀಮತಿ ನಾಗರತ್ನಮ್ಮನವರು ಹೇಳುವಾಗ ಅವರ ಪ್ರಾಂತದಲ್ಲಿದ್ದ ಬಾವಿಗಳ ಹಾಗೆ ನಮ್ಮ ಪ್ರಾಂತದಲ್ಲೂ ಇವೆ. ಈ ಬಾವಿಗಳಿಂದ ಬರುವ ನೀರನ್ನೇ ನಂಬಿಕೊಂಡು ವ್ಯವಸಾಯ ಮಾಡಬೇಕಾಗಿದೆ. ನಮ್ಮ ಭಾಗದಲ್ಲಿ ಒಂದು ಬಾವಿ ತೆಗೆಸಬೇಕಾದರೆ ಏನಿಲ್ಲ ಎಂದರೂ ಹತ್ತು ಸಾವಿರ ರೂಪಾಯಿಗಳಷ್ಟು ಬೇಕಾಗುತ್ತದೆ. ಇದರ ಮೇಲೆ ಪಂಪುಸೆಟ್ಟು ಹಾಕಿಕೊಳ್ಳಬೇಕಾದರೆ, ಇನ್ನೆರಡು ಸಾವಿರ ರೂಪಾಯಿಗಳು ಬೇಕಾಗುತ್ತದೆ. ಎಂದರೆ ಒಟ್ಟು ಒಂದು ಬಾವಿಗೆ ಹತ್ತು, ಹನ್ನೆರಡು ಸಾವಿರ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಈಗ ಕಮ್ಯೂನಿಟಿ ಡೆವೆಲಪ್‌ಮೆಂಟು ಬಾಬಿನಲ್ಲಿ ಬಡ್ಜೆಟ್ಟಿನಲ್ಲಿ ಸುಮಾರು 3·4 ಲಕ್ಷ ರೂಪಾಯಿಗಳಷ್ಟು ನೀರಾವರಿಗಾಗಿ ಕೊಟ್ಟಿದ್ದಾರೆ. ಇದರಿಂದ ಪ್ರತಿಯೊಬ್ಬರಿಗೂ ನಾಲ್ಕು ಸಾವಿರದಷ್ಟು ಒಂದೊಂದು ಬಾವಿ ಮಾಡಿಕೊಳ್ಳಲು ಕೊಡಲಾಗುತ್ತಿದೆ. ಇದು ಆಯಾ ಜಿಲ್ಲಾಧಿಕಾರಿಗಳ ಮುಖಾಂತರ ಪ್ರತಿ ತಾಲ್ಲೂಕಿಗೂ ಬಾವಿ ಮಾಡಿಕೊಳ್ಳುವವರಿಗೇನೋ ಖರ್ಚಾಗುತ್ತಿದೆ. ಆದರೆ ನಿಜವಾಗಿಯೂ ನೋಡಿದರೆ, ನಾಲ್ಕು ಸಾವಿರ ರೂಪಾಯಿಗಳಲ್ಲಿ ಒಂದು ಬಾವಿ ತೆಗೆಸುವುದಕ್ಕಾಗುವುದಿಲ್ಲ. ಅದರಿಂದ ಹೆಚ್ಚಿನ ಖರ್ಚಾಗಿ ವ್ಯವಸಾಯಮಾಡುವ ರೈತ ಸಾಲಗಾರನಾಗುತ್ತಾನೆಯೇ ಹೊರತು ನಿಜವಾಗಿ ಇದರಿಂದ ಅನುಕೂಲ ಪಡೆಯುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ Borewells Unit ಎಂದು ಮಾಡಬೇಕೆಂದು, ಇದರ ಅವಶ್ಯಕತೆಗಾಗಿ 3·21 ಲಕ್ಷ ರೂಪಾಯಿಗಳಷ್ಟು ಈ ಬಡ್ಜೆಟ್ಟಿನಲ್ಲಿ ಸೇರಿಸಿ ನೀರಾವರಿ ಬಾವಿಗಳಲ್ಲಿ ನೀರು ಬರುವಂತೆ ಅನುಕೂಲಗಳನ್ನು ಮಾಡಿಕೊಡಲು ಒಂದು ಯೋಜನೆ ಇಲ್ಲಿ ಬಂದಿದೆ. ಇದೇನೋ ಒಳ್ಳೆಯ ಭಾವನೆ. ಎರಡನೇದು Pumpsets ಕೊಡುವುದರಲ್ಲಿ ಕೆಲವರು ಒಂದು ಕೋಟಿ ರೂಪಾಯಿಗಳಷ್ಟು ಎಂದು ಹೇಳಿ ಕೊಟ್ಟಿದ್ದರೂ ಆದು ಈ ಮಾರ್ಚಿ ತಿಂಗಳಿನೊಳಗಾಗಿ ಇನ್ನೂ ಖರ್ಚಾಗಿಲ್ಲ. ಇದರಿಂದಾಗಿ ಒಂದು ಪಂಪುಸೆಟ್ಟು ಕೊಳ್ಳುವಹಾಗಿಲ್ಲ ಎಂದು ಹೇಳಿದರು. ನಾನು ನೋಡಿರುವ ಹಾಗೆ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಆಗಲೇ ವರ್ಗಾವಣೆಮಾಡಿ ಅವರಿಗೂ ಕೂಡ ಬೇಗನೆ ಪಂಪುಸೆಟ್ಟುಗಳನ್ನು ಒದಗಿಸಬೇಕೆಂದು ಹೇಳಲಾಗಿದೆ. ಅದಲ್ಲದೆ ಅವರಿಗೆ ಆಗಲೇ ಕೆಲವು Diesel setsಗಳು ಬಂದಿವೆ. ಇದಕ್ಕಾಗಿ 17 ಲಕ್ಷ ರೂಪಾಯಿಗಳಷ್ಟು ಖರ್ಚಾಗುತ್ತೆ ಎಂದು ತಿಳಿದು ಅದನ್ನೂ ಕೂಡ, ಈ ಮಾಹೆ 31ನೇ ತಾರೀಖಿನೊಳಗೆ ಒದಗಿಸಿದೆ. ಈಗಾಗಲೇ ಈ ಹಣದಿಂದ ಅನೇಕ ಜಿಲ್ಲಾಧಿಕಾರಿಗಳಿಗೆ ಡೀಸಲ್ ಪಂಪುಸೆಟ್ಟುಗಳನ್ನು ಒದಗಿಸಿದ್ದಾರೆ ಎಂದು ಇಲ್ಲಿ ಹೇಳುವುದಕ್ಕೆ ಸಂತೋಷಪಡುತ್ತೇನೆ.

ಈ ಇಲಾಖೆಯವರು ವ್ಯವಸಾಯ ಅಭಿವೃದ್ಧಿಯಾಗಬೇಕು ಎಂದು ಬಹಳ ಆಸಕ್ತಿಯನ್ನು ವಹಿಸಿದ್ದಾರೆ. ಇಂತಹ ಕಾರ್ಯಕ್ರಮವೇನೋ ಸ್ವಾಗತಾರ್ಹವಾದುದು ಎಂದು ನಾನೂ ಒಪ್ಪುತ್ತೇನೆ. ಈ ಇಲಾಖೆಯ ವಿಚಾರವಾಗಿ ಅನೇಕ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ, ಲೋಪ ದೋಷಗಳನ್ನು ತೋರಿಸಿದ್ದಾರೆ. ನನಗಾದರೂ ಅನ್ನಿಸುತ್ತಿರುವುದು, ಈ ಇಲಾಖೆಗೆ ಸಂಸ್ಥಾನದ ಮಟ್ಟದಲ್ಲಿ ಒಬ್ಬರು ಡೈರೆಕ್ಟರವರಿದ್ದಾರೆ. ಪ್ರತಿ ಜಿಲ್ಲೆಯಲ್ಲಿಯೂ ಒಬ್ಬೊಬ್ಬರು ಅಸಿಸ್ಟೆಂಟು ಡೈರೆಕ್ಟರುಗಳು ಅಗ್ರಿಕಲ್‌ಚರಲ್ ಆಫೀಸರುಗಳು ಇದ್ದಾರೆ. ತಾಲ್ಲೂಕು ಮಟ್ಟಕ್ಕೆ ಬರುವುದಾದರೆ, ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ನು ಆಫೀಸರು ಎಂದಿದ್ದಾರೆ. ಹಾಗೆ ಪ್ರತಿಯೊಂದು ಕಮ್ಯೂನಿಟಿ ಬ್ಲಾಕಿನಲ್ಲಿಯೂ ಒಬ್ಬೊಬ್ಬರು ಗ್ರಾಮ ಸೇವಕರಿರುತ್ತಾರೆ. ಇದೇನೋ ಸರಪಳಿಯಂತಿದೆ. ಆದರೆ ಇದು Disconnected Links ಇದ್ದಹಾಗೆ ಇದೆ. ಡಿಸ್ಟ್ರಿಕ್ಟು ಲೆವೆಲ್ಲಿನಲ್ಲೇನೋ ಅಗ್ರಿಕಲ್‌ಚರಲ್ ಆಫೀಸರೆಂದಿದ್ದಾರೆ. It is a Defunct institution ಏನು ಕೆಲಸ ಮಾಡುತ್ತಾರೋ ಹೇಳುವಂತಿಲ್ಲ. ಇಲ್ಲಿ ಯಾರಮೇಲೂ ಹತೋಟಿ ಇರುವಂತೆ ಕಾಣುತ್ತಿಲ್ಲ. ಗ್ರಾಮ ಸೇವಕರ ಮೇಲೆ ಹತೋಟಿ ಇಲ್ಲ. ಅವರು ಏನೇನು ಕಾರ್ಯಕ್ರಮ ಮಾಡುತ್ತಾರೆಂದು ಅವರನ್ನು ಕೇಳುವುದಿಲ್ಲ. ತಾಲ್ಲೂಕುಗಳಿಗೆ ಅಧಿಕಾರಿಗಳು ಪ್ರವಾಸ ಹೋದಾಗ ಅಗ್ರಿಕಲ್‌ಚರ್ ಎಕ್ಸ್‌ಟೆನ್‌ಷನ್ ಆಫೀಸರು, ಹಾಗೂ ಗ್ರಾಮ ಸೇವಕರು ಇವರು ಯಾವರೀತಿ ಅಂಕೆಗಳನ್ನು ಶೇಖರಿಸುತ್ತಾರೋ ಅದರಂತೆ ಅವರು ಕೊಟ್ಟ ಅಂಕೆ ಅಂಶಗಳನ್ನು ತೆಗೆದುಕೊಂಡು ಬರುತ್ತಾರೆ. ಈ ಸಂದರ್ಭದಲ್ಲಿ ಇವರು ನಿಜವಾದ ಅಂಕೆ ಅಂಶಗಳನ್ನು ಕೊಡುತ್ತಾರೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದಕ್ಕೆ ಕಾರಣ ಇಷ್ಟು ಬಹಳ ದಿವಸಗಳಿಂದ ನಾವು ನಮ್ಮ ಪ್ಲಾನುಗಳಿಗಾಗಿ ಎಷ್ಟೋ ಸ್ಕೀಮುಗಳನ್ನು ಹಾಕಿದ್ದರೂ ಅದಕ್ಕಾಗಿ ನಿಗದಿಯಾದ ಹಣ ಖರ್ಚಾಗಲಿಲ್ಲ ಎಂದು ಹೇಳುತ್ತಿರುವುದನ್ನು ಕೇಳುತ್ತಿದ್ದೇವೆ. ಮೊದಲನೆ ಯೋಜನೆಗೆ ನೂರು ಕೋಟಿ ರೂಪಾಯಿಗಳಷ್ಟು ಮಾತ್ರ ಖರ್ಚಾಯಿತು ಎರಡನೇ ಯೋಜನೆಯಲ್ಲಿ ಇಷ್ಟು ಖರ್ಚಾಯಿತು ಎಂದು ಹೇಳುವುದಕ್ಕಿಂತ ಈ ಖರ್ಚು ಹೇಗೆ ಆಗುತ್ತಿದೆ ಅದರ ಬಗ್ಗೆ ನಿಗಾ ಕೊಡಬೇಕು ಎಷ್ಟು ಮಟ್ಟಿನ Physical Targets ಬಂದಿವೆ, ನಾವು ಖರ್ಚುಮಾಡಿದ್ದ ಹಣಕ್ಕೆ ಸರಿಯಾದ ಪ್ರತಿಫಲ ದೊರಕಿದೆಯೇ ಎನ್ನುವುದರ ಕಡೆಗೆ ಸರ್ಕಾರದಲ್ಲಿರುವ ಈ ಇಲಾಖೆಯ ಅಧಿಕಾರಿಗಳು ಯೋಚನೆ ಮಾಡುತ್ತಿಲ್ಲ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು. ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದಯ್ಯನವರು ಈಗ ಹೇಳಿದ ಹಾಗೆ ಚಾಮರಾಜನಗರದ ತಾಲ್ಲೂಕಿಗೆ ಡೆಪ್ಯೂಟೀ ಕಮೀಷನರವರು ಭೇಟಿಕೊಟ್ಟಾಗ ಆ ತಾಲ್ಲೂಕಿನ ಹಣ ಇನ್ನೂ ಖರ್ಚಾಗಲಿಲ್ಲ ಎಂದು ಅಲ್ಲಿದ್ದ ಬಿ. ಡಿ. ಓ. ಅಧಿಕಾರಿಗಳು ಆಗ ಹೇಳಿದರು; ಹಾಗೆ ಆ ಸದಸ್ಯರು ಹೇಳಿದಂತೆ ಕೋಲಾರಕ್ಕೆ ಒಂದು D. C. Farm Experts Plan ನ ಸಂದರ್ಭದಲ್ಲಿ ಅಲ್ಲಿಗೆ ಡೆಪ್ಯೂಟಿ ಕಮೀಷನರುಗಳು ಬಂದಿದ್ದಾಗ ಆ ಸಭೆಯಲ್ಲಿ ಹೀಗೆ ಹೇಳಿದ್ದಾರೆ.

"The Deputy Commissioner was of the opinion that most officials did not take pains even to explain to the farmers what they should do to improve their methods. In certain cases, the officials themselves do not know their own job."

ಈ ರೀತಿ ಡೆಪ್ಯೂಟಿ ಕಮಿಷನರುಗಳು ಆಗಿಂದಾಗ್ಗೆ Sputniks ಬಿಟ್ಟಹಾಗೆ ಸ್ಟೇಟುಮೆಂಟುಗಳನ್ನು ಕೊಡುತ್ತಾರೆ. ಬಹುಶಃ ಇದಕ್ಕೆ ಕಾರಣ ಇಷ್ಟು ಅಧಿಕಾರಿಗಳು ಟೂರು ಹೋಗುತ್ತಾರೆ, ಅಲ್ಲಿರುವ ಗ್ರಾಮಸೇವಕರು ಇರುತ್ತಾರೆ ಅವರು ಕೊಟ್ಟ ಫಿಗರ್ಸ್‌ನ್ನೂ ತೆಗೆದುಕೊಂಡು ಬರುತ್ತಾರೆ. ಅವರೇನು ಕೆಲಸ ಮಾಡುತ್ತಾರೆ ಅಥವಾ ಮಾಡಿದ್ದಾರೆ ಎನ್ನುವುದನ್ನು ನೋಡುವುದಕ್ಕೂ ಹೋಗುವುದಿಲ್ಲ. ಡೆಪ್ಯೂಟಿ ಕಮಿಷನರುಗಳು District Agricultural Offices ಗೆ ಬರೆಯುತ್ತಾರೆ ಆ ಅಧಿಕಾರಿಗಳು ಹಳ್ಳಿಗಳಿಗೆ ಹೋದಾಗ ಅಲ್ಲಿರುವ ಅಧಿಕಾರಿಗಳಿಂದ ಎಷ್ಟೆಷ್ಟರ ಮಟ್ಟಿಗೆ ಕೆಲಸವಾಗಿದೆ, ಅದರಲ್ಲಿ ಸತ್ಯಾಂಶ ಏದೆಯೇ ಎನ್ನುವುದನ್ನು ಹೋಗಿ ನೋಡುವುದಿಲ್ಲ. ವರ್ಷದ ಕೊನೆಗೆ ತಾಲ್ಲೂಕು ಅಡ್ವೈಜರಿ ಕಮಿಟಿಗಳ ಮುಂದೆ ದೊಡ್ಡ ದೊಡ್ಡ ಹಣಕಾಸಿನ ಸ್ಟೇಟುಮೆಂಟು ಬರುತ್ತದೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸಂಸ್ಥಾನದ ಅಭಿವೃದ್ಧಿಯ ಕಡೆಗೆ ನಿಗಾ ಕೊಡುತ್ತಿಲ್ಲ. ಯೋಜನೆಗಳಿಗಾಗಿ ಒದಗಿಸಿರುವ ಹಣವನ್ನು ಸರಿಯಾಗಿ ಖರ್ಚು ಮಾಡುತ್ತಾರೆಯೇ ಇಲ್ಲವೇ ಎನ್ನುವುದಕ್ಕೆ ಅಲ್ಲಿಗೆ ಹೋಗಿ ನೋಡುವುದಿಲ್ಲ. ಇದರಿಂದ ಅಧಿಕಾರಿಗಳು ಅವರಿಗೆ ಇರುವ ಕರ್ತವ್ಯವನ್ನೂ ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಯಾವಾಗಲೂ ಒಂದು ಪ್ರೋಗ್ರೆಸ್ಸನ್ನು ನೋಡಬೇಕಾದರೆ, ಹಳ್ಳಿಯಲ್ಲಿರುವ ರೈತರು ಅವರು ಮಾಡುವ ಪ್ರೊಡಕ್ಷನ್ನು ಹೇಗಿದೆ, ಅವನು ಬೆಳೆ ಬೆಳೆಯತಕ್ಕ ಕ್ರಮ ಸರಿಯಾಗಿದೆಯೇ, ಉತ್ತಮವಾದ ಬೀಜಗಳನ್ನುಪಯೋಗಿಸಿಕೊಂಡು ಉತ್ತಮವಾದ ಬೆಳೆಯನ್ನು ಬೆಳೆಯುತ್ತಿದ್ದಾನೆಯೇ ಎನ್ನುವುದನ್ನು ತಾಲ್ಲೂಕಿಗೆ ಅಧಿಕಾರಿಗಳು ಇನ್ಸ್‌ಪೆಕ್ಷನ್ನಿಗೆ ಹೋದಾಗ ನೋಡಿಕೊಂಡು ಬಂದರೆ ಆಗ ಈ ಪ್ರೊಗ್ರೆಸ್ಸಿನಲ್ಲಿ ಒಂದು ನಂಬಿಕೆ

(ಶ್ರೀ ಎಂ. ಸಿ. ಬಸಪ್ಪ)

ಬರುತ್ತದೆ. ಆದರೆ ಈಗ ಅಧಿಕಾರಿಗಳು ಬ್ಲಾಕುಗಳಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಕಳುಹಿಸುವ ವರದಿಗಳ ಮೇಲೆ ಸರ್ಕಾರ ತಿಳಿದುಕೊಂಡರೆ ಅವೆಲ್ಲಾ ಬರೀ ಪೇಪರು ರಿಕಾರ್ಡ್ಸ್‌ಗಳಾಗುತ್ತವೆ. ಇದರಿಂದ ಜನಕ್ಕೆ ಏನು ಫಲ ದೊರೆಯುತ್ತಿದೆ, ಅಸಿಸ್ಟೆನ್ಸ್ ಎಷ್ಟು ಕೊಡಬಹುದು ಎಂದು ಅಧಿಕಾರಿಗಳು ಕೊಡುವ ಕಾಗದದ ಆಧಾರದ ಮೇಲೆ ನಂಬಿಕೊಂಡು ಮಾಡಿದರೆ ಸರಿಯಾಗಿರುವುದಿಲ್ಲ. ಇಂತಹವರ ಕೈಯ್ಯಲ್ಲಿ ಆಗದಿದ್ದರೆ ಸರ್ಕಾರದವರು ಇವರಿಂದ ನಿಜವಾಗಿಯೂ ಸರಿಯಾದ ಪ್ರೋಗ್ರೆಸ್ಸು ಮಾಡಿದಂತಾಗುತ್ತದೆಯೇ? ಇವೊತ್ತು ಆಫೀಸಿನಲ್ಲಿ ಕುಳಿತುಕೊಂಡು ಎಷ್ಟು ಹಣ ಖರ್ಚಾಗಿದೆ, ಎಷ್ಟು ಆಗಿಲ್ಲ ಎಂದು B. D. O. ಆಫೀಸರು ಬರೆದು ಕಳುಹಿಸುತ್ತಾರೆ. ಅವರು ಚೆನ್ನಾಗಿ ಕೆಲಸಮಾಡಿದ್ದಾರೆ ಎಂದು ಆ ವರದಿ ನೋಡಿಕೊಂಡು ಶಹಬಾಷ್‌ಗಿರಿ ಕೊಡುವಂತಹ ಮನೋಭಾವ ಬಹುಶಃ ನಮ್ಮ ಅಧಿಕಾರಿಗಳಲ್ಲಿ ಬದಲಾವಣೆಯಾಗದಿದ್ದರೆ, ನಮ್ಮ ಜನತೆಗೆ ಅನೇಕ ಕಷ್ಟದ ಪರಿಸ್ಥಿತಿ ಬರುತ್ತದೆ. ರೈತರಿಗೆ ಹೇಗೂ ಮಾತನಾಡಲು ಬರುವುದಿಲ್ಲ ಎಂದು ಇಷ್ಟುಮಟ್ಟಿಗೆ ಸಾಧನೆ ಸಾಧಿಸಿದ್ದೇವೆ ಎಂದು ಹೇಳಿದರೆ ಬಹುಶಃ ಇದೊಂದು ತಪ್ಪು ಭಾವನೆಯಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ.

ಈ ಮೊದಲು ನಾನು ಒಂದು ಸಲಹೆ ಮಾಡಿದ್ದೇನೆ. ಅದಕ್ಕೆ ಸರ್ಕಾರ ಉತ್ತರ ಕೊಟ್ಟಿಲ್ಲ. ವ್ಯವಸಾಯ ಇಲಾಖೆಯಲ್ಲಿ ಡಿಸ್ಟ್ರಿಕ್ಟ್ ಅಗ್ರಿಕಲ್ಚರಲ್ ಆಫೀಸರ್ ಮತ್ತು ಗ್ರಾಮಸೇವಕ ಇವರಲ್ಲಿ ನೇರವಾಗಿ ಸಂಬಂಧವಿಲ್ಲ. ಸರ್ಕಾರದ ಧೋರಣೆ ಏನಿದೆ ಎನ್ನುವುದನ್ನು ರೈತರಿಗೆ ತಿಳಿಸಿ ಹೇಳತಕ್ಕಂಥವನು ಗ್ರಾಮಸೇವಕ. ಈ ಗ್ರಾಮಸೇವಕನ ಕೆಲಸ ಸರಿಯಾಗಿ ನಡೆಯುವುದಕ್ಕೆ ಗಮನ ಕೊಡಬೇಕಾದುದು ಅಗತ್ಯ. ಈ ಇಲಾಖೆಯಲ್ಲಿ ಹಣ ಖರ್ಚಾಗುತ್ತದೆ. ಆದರೆ ಎಷ್ಟು ಪ್ರಗತಿಯಾಗಿದೆ ನೋಡಬೇಕಾದುದು ಅಗತ್ಯ. ಅಧಿಕಾರಿಗಳು ಟೂರ್ ಮೇಲೆ ಹೋದಾಗ್ಗೆ ಹಳ್ಳಿಗಳಿಗೆ ಹೋಗಿ ನಮ್ಮ ಗುರಿ ಸಾಧನೆಯಾಗುತ್ತಿದೆಯೇ, ಅದರಲ್ಲಿ ಏನಾದರೂ ಬದಲಾವಣೆಮಾಡುವುದು ಅಗತ್ಯವಾಗಿದೆಯೇ ಎನ್ನುವುದನ್ನು ನೋಡಿ ಆಲೋಚನೆ ಮಾಡಬೇಕು. ಅಧಿಕಾರಿಗಳು ಈ ವಿಚಾರದಲ್ಲಿ ನಿಕಟವಾದ ಸಂಬಂಧವಿಟ್ಟುಕೊಳ್ಳುವುದು ಅಗತ್ಯ ಎಂದು ಸಲಹೆ ಕೊಡುತ್ತೇನೆ.

ಇನ್ನು ಪಶುಸಂಗೋಪನ ವಿಷಯದ ಬಗ್ಗೆ ಕೆಲವು ಸೂಚನೆಗಳಿವೆ. ಇದರಲ್ಲಿ ಮುಖ್ಯವಾಗಿ ಆರ್ಟಿಫೀಷಿಯಲ್ ಇನ್‌ಸೆಮಿನೇಷನ್ ಮುಖಾಂತರ ತಳಿ ಸುಧಾರಣೆ ಮಾಡಲು ಪ್ರಯತ್ನ ನಡೆದಿದೆ. ಆದರೆ ಈ ಕೆಲಸ ನಿಧಾನವಾಗುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಕಳೆದ ಏಳುವರ್ಷಗಳಿಂದ ಕೇಳಿಕೊಳ್ಳುತ್ತಿದ್ದರೂ ಕೂಡ ಇನ್ನೂ ಒಂದು ಕೃತಕ ಗರ್ಭಧಾರಣೆ ಕೇಂದ್ರ ಪ್ರಾರಂಭವಾಗಿಲ್ಲ. ಮೊದಲು ಬಿಲ್ಡಿಂಗ್ ಇಲ್ಲ ಎಂದು ಹೇಳಿದರು. ಬಿಲ್ಡಿಂಗ್ ಆಯಿತು. ರೆಫ್ರಿಜಿರೇಟರ್ ತರಿಸಬೇಕೆಂದರು, ಅದನ್ನು ತರಿಸಲಾಯಿತು. ಕರಂಟ್ ಇಲ್ಲ ಎಂದು ಹೇಳಲು ಕರಂಟ್ ತಂದದ್ದಾಯಿತು. ಇಷ್ಟೆಲ್ಲ ಆದಮೇಲೆ ಮೈಕ್ರೋಸ್ಕೋಪ್ ಇಲ್ಲ. ಆದ್ದರಿಂದ ಪ್ರಾರಂಭ ಮಾಡುವುದು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಹೀಗೆ ಒಂದು ಆದಮೇಲೆ ಮತ್ತೊಂದನ್ನು ಯೋಚನೆ ಮಾಡುತ್ತಾರೆ. ಏನೇನು ಬೇಕೋ ಎನ್ನುವುದನ್ನು ಏಕಕಾಲಕ್ಕೆ ತಿಳಿಸುವುದಿಲ್ಲ. ಹೀಗೆ ಮಾಡಿದರೆ ಒಂದು ಕೇಂದ್ರ ಪ್ರಾರಂಭಿಸಲು ಹತ್ತು ವರ್ಷಗಳಾದರೂ ಬೇಕು. ಸರಕಾರ ಹಣ ಒದಗಿಸುತ್ತಾರೆ. ಆದರೆ ಕೆಲಸ ಕಾರ್ಯಗಳು ನಿಧಾನವಾಗುತ್ತಿವೆ. ಇದು ಸರಿಯಲ್ಲ. ನಮ್ಮ ಕಂದಾಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಗೋಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕೆ ಪರದೇಶಗಳಿಗೆ ಹೋಗಿ ಅರಿತುಕೊಂಡು ಬಂದಿದ್ದಾರೆ. ಗೋಸಂಪತ್ತು ಅಭಿವೃದ್ಧಿಪಡಿಸಲು ಅವರಿಗೆ ಬಹಳ ಆಸಕ್ತಿಯಿದೆ. ನಮಗೆ ಹಾಲು ಬೇಕಾಗಿರುವುದು ಮುಖ್ಯ ಅಂಶ. ಒಳ್ಳೇ ತಳಿ ಅಭಿವೃದ್ಧಿಮಾಡಲು ಸರಕಾರ ಗಮನ ಕೊಡಬೇಕೆಂದು ಸರಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೋಆಪರೇಟಿವ್ ಇಲಾಖೆ ಬಗ್ಗೆ ಅನೇಕ ಸ್ನೇಹಿತರು ಸಲಹೆ ಕೊಟ್ಟಿದ್ದಾರೆ. ನಾನು ಒಂದು ಸೂಚನೆ ಮಾಡಲು ಬಯಸುತ್ತೇನೆ. ರೈತರಿಗೆ ಸಾಲ ದೊರೆಯಲು ಸಹಾಯ ಮಾಡುವುದಕ್ಕಾಗಿ ಹಳ್ಳಿಗಳಲ್ಲಿ ಸೊಸೈಟಿಗಳು ಪ್ರಾರಂಭವಾಗಬೇಕು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಪ್ರಾರಂಭವಾದ ಸೊಸೈಟಿಗಳು ಮೂರು ವರ್ಷಗಳಲ್ಲಿ ನಿಂತುಹೋಗುತ್ತವೆ. ಈ ರೀತಿ ಸೊಸೈಟಿಗಳು ನಿಂತುಹೋಗುವುದು ಸರಿಯಲ್ಲ. ಇದರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ಇಂಥ ಸೊಸೈಟಿಗಳಲ್ಲಿ ಒಬ್ಬ ಜವಾಬ್ದಾರಿ ಮನುಷ್ಯ ಇರಬೇಕಾದುದು ಅಗತ್ಯ. ಒಬ್ಬ ಪೇಡ ಸೆಕ್ರೆಟರಿ ಇದ್ದರೆ ಸದಸ್ಯರು ಡಿಫಾಲ್ಟರ್ ಆಗುವುದಿಲ್ಲ. ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತವೆ. ಸಹಕಾರ ಸಂಘಗಳು ಚೆನ್ನಾಗಿ ಬೆಳೆದು ಅಭಿವೃದ್ಧಿ ಹೊಂದುವಹಾಗೆ ಮಾಡಬೇಕಾದುದು ಅಗತ್ಯ. ಕೋಆಪರೇಟಿವ್ ಸೊಸೈಟಿ ಮುಖಾಂತರ ರೈತನಿಗೆ ಸಾಲ ಕೊಡಬೇಕೆಂಬ ಒಳ್ಳೇ ತೀರ್ಮಾನ ಎರಡು ವರ್ಷಗಳ ಹಿಂದೆ ಮಾಡಲಾಗಿದೆ. ಆದರೆ ತಕ್ಕಾವಿ ಸಾಲ ಕೊಡುವುದು ರೆವೆನ್ಯೂ ಏಜೆನ್ಸಿ ಮೂಲಕ ನಡೆಯುತ್ತಿದೆ.

ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ, ತಾಲ್ಲೂಕ ಬೋರ್ಡಿನಿಂದ ಸಾಲ ಕೊಡಲಾಗುತ್ತಿದೆ. ಸಹಕಾರ ಸಂಘಗಳು ಸಾಲ ಕೊಡಬೇಕೆಂಬ ತೀರ್ಮಾನ ಈ ಹಿಂದೆ ಮಾಡಿದೆ.

ಆದುದರಿಂದ ಸಹಕಾರಿ ಸಂಘಗಳಲ್ಲಿ ನಂಬಿಕೆ ಇಟ್ಟು ಅವುಗಳನ್ನು ಬೆಳೆಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಸಹಕಾರಿ ಸಂಘಗಳು ಚೆನ್ನಾಗಿ ಕೆಲಸ ಮಾಡಬೇಕಾದರೆ ಜವಾಬ್ದಾರಿ ವಹಿಸಿ ಕೊಳ್ಳುವ ಒಬ್ಬ ಹೇಡ್ ಸರ್ವೆಂಟ್ ಇರಬೇಕಾದುದು ಅಗತ್ಯ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೆಲಸ ಕಾರ್ಯ ಮಾಡತಕ್ಕಂಥ ಸಹಕಾರ ಸಂಘಗಳ ಸ್ಥಿತಿ ಸಮಾಧಾನಕರವಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಇವುಗಳನ್ನು ಸರಿಯಾಗಿ organise ಮಾಡಬೇಕು. ಮತ್ತು ಉತ್ಪತ್ತಿ ಹೆಚ್ಚುತರುವ ಹಾಗೆ ಮಾಡಬೇಕಾದುದು ಅಗತ್ಯ. ರೈತರಿಗೆ ಅನುಕೂಲವಾಗಬೇಕು. ಜವಾಬ್ದಾರಿ ಇದ್ದಂಥ ಹೇಡ್ ಸರ್ವೆಂಟ್ ಇದ್ದರೆ ಲೋಪ ದೋಷಗಳು ಬರುವುದಿಲ್ಲ. ಕೆಲಸ ಕಾರ್ಯ ಮಾಡಲು ಅನುಕೂಲವಾಗುತ್ತದೆ. ಈ ವರ್ಷ ಕೋ ಆಪರೇಟಿವ್ ಜಾಯಿಂಟ್ ಫಾರ್ಮಿಂಗ್ ಸೊಸೈಟೀಸ್‌ಗಳನ್ನು ರಿಜಿಸ್ಟರ್ ಮಾಡಿದ್ದಾರೆ. ಅನೇಕ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳನ್ನು ಒಳ್ಳೇ ಉದ್ದೇಶವಿಟ್ಟುಕೊಂಡು ಮಾಡಲಾಗಿವೆ. ಖೋತಾ ಸೂಚನೆಗಳಲ್ಲಿ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಅಯಶಸ್ವಿಯಾಗಿವೆ ಎಂದು ಹೇಳಿರುವುದು ತಪ್ಪು ಅಭಿಪ್ರಾಯವಾಗಿದೆ. ಅಲ್ಲಿ ಇಲ್ಲಿ ಒಂದೆರಡು ಕಡೆ ತಪ್ಪು ಕಂಡುಬಂದಿರಬಹುದು. ಒಟ್ಟಿನಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿವೆ. ಇದಲ್ಲದೆ ಅಚ್ಚುಕಟ್ಟಾಗಿ ಕೆಲಸ ಕಾರ್ಯಗಳು ನಡೆಯುವುದಕ್ಕೆ ಹಣದ ಸಹಾಯ ಸರ್ಕಾರ ಮಾಡಬೇಕೆಂದು ಹೇಳುತ್ತೇನೆ.

3-30 P.M.

ಅರಣ್ಯ ಇಲಾಖೆಯಲ್ಲಿ ಒಂದೇ ಒಂದು ಬೇಡಿಕೆಯನ್ನು ಸರ್ಕಾರದವರ ಮುಂದಿಡಬೇಕೆಂದು ಇದ್ದೇನೆ. ಫಾರೆಸ್ಟ್ ಇನ್‌ಕಂ ಅನ್ನು ತಾಲ್ಲೂಕುಬೋರ್ಡಿಗೆ ಕೊಡಬೇಕು ಎನ್ನುವ ವಿಚಾರದಲ್ಲಿ ಒಂದು ಅಭಿಪ್ರಾಯವನ್ನು ನಾನು ಈ ದಿವಸ ಹೇಳುತ್ತೇನೆ. ಸರ್ಕಾರದವರು ಮಾಡತಕ್ಕ ಕೆಲಸಕಾರ್ಯಗಳನ್ನು ತಾಲ್ಲೂಕು ಬೋರ್ಡಿನವರು ಮಾಡುವುದಾದರೆ ಆಗ ಫಾರೆಸ್ಟ್ ಇಲಾಖೆಯವರು ಫಾರೆಸ್ಟಿನಿಂದ ಬರತಕ್ಕ ಇನ್‌ಕಂ ಅನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡಬಹುದು. ಈ ವಿಷಯದಲ್ಲಿ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹೆಗ್ಗಡದೇವನಕೋಟೆಯ ತಾಲ್ಲೂಕನ್ನು ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಶೇಕಡಾ 75 ಭಾಗ ಅಲ್ಲಿ ಅರಣ್ಯ ಪ್ರದೇಶವಿದೆ. ಶೇಕಡಾ 25 ಭಾಗ ಮಾತ್ರ ಲ್ಯಾಂಡ್ ರೆವಿನ್ಯೂ ಕೊಡತಕ್ಕ ಅಗ್ರಿಕಲ್‌ಚರಲ್ ಲ್ಯಾಂಡ್ ಇರುತ್ತದೆ. ಶೇಕಡಾ 25 ಭಾಗದ ಪ್ರದೇಶದಲ್ಲಿ ಬರತಕ್ಕ ಲ್ಯಾಂಡ್‌ರೆವಿನ್ಯೂವಿನ ಶೇಕಡಾ 20 ರಷ್ಟು ಕಂದಾಯವನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡುತ್ತಾರೆ. ತಾಲ್ಲೂಕು ಬೋರ್ಡಿನಲ್ಲಿ ಒಂದು ವರ್ಷಕ್ಕೆ 5 ಸಾವಿರ 10 ಸಾವಿರ ರೂಪಾಯಿಗಳ ಸಂಬಳವನ್ನು ಕೊಡತಕ್ಕ ಸ್ಟಾಫ್ ಇದೆ. ಆದ್ದರಿಂದ ಕೆಲವು ಸಂದರ್ಭಗಳಲ್ಲಿ ಆ ಸ್ಟಾಫಿಗೆ ಸಂಬಳವನ್ನು ಕೊಡುವುದಕ್ಕೆ ಕೂಡ ಹಣ ಸಾಲದೆ ಬರುವ ಸನ್ನಿವೇಶ ಬರಬಹುದು. ಒಂದು ಒಂದೂವರೆ ಲಕ್ಷ ಎಕರೆಗಳಲ್ಲಿ ಕಾಡನ್ನು ಬೆಳೆಸಿದ ಪಕ್ಷದಲ್ಲಿ ಅಲ್ಲಿ ಇನ್ನು ಉಳಿದಿರತಕ್ಕ ಅಗ್ರಿಕಲ್‌ಚರಲ್ ಲ್ಯಾಂಡ್ ಪ್ರದೇಶದಲ್ಲಿ ಲ್ಯಾಂಡ್ ರೆವಿನ್ಯೂ ಕಲೆಕ್ಟ್ ಮಾಡಿ ಅದರಲ್ಲಿ 20 ಪರ್ಸೆಂಟ್ ತಾಲ್ಲೂಕು ಬೋರ್ಡಿಗೆ ಕೊಡುತ್ತಾರೆ. ಕೆಲವು ಸಂದರ್ಭಗಳಲ್ಲಿ ತಾಲ್ಲೂಕು ಬೋರ್ಡುಗಳಲ್ಲಿ ಅಲ್ಲಿನ ಖರ್ಚು ವೆಚ್ಚಗಳಿಗೆ ಹಣ ಸಾಲದೆ ಬರುವುದರಿಂದ ಕಾಡು ವಿಶೇಷವಾಗಿರುವ ಪ್ರದೇಶದಲ್ಲಿ ಕಾಡಿನಿಂದ ಬರತಕ್ಕ ಉತ್ಪತ್ತಿಯಲ್ಲಿ ಶೇಕಡಾ 20 ಭಾಗವನ್ನು ತಾಲ್ಲೂಕು ಬೋರ್ಡಿಗೆ ಕೊಡತಕ್ಕಂಥ ಒಂದು ಏರ್ಪಾಡನ್ನು ಮಾಡಿದರೆ ಅಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ಅಭಿವೃದ್ಧಿ ಮಾಡಿದಂತಾಗುತ್ತದೆ. ಆ ರೀತಿ ಮಾಡುವುದರಿಂದ ತಾಲ್ಲೂಕು ಬೋರ್ಡಿನವರು ಉತ್ತಮ ಮಟ್ಟದಲ್ಲಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ನೂತನ ಅಧ್ಯಕ್ಷರಿಗೆ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಈ ಸಭೆಯ ಮುಂದೆ ಆಡಲು ಅಪೇಕ್ಷಿಸುತ್ತೇನೆ. ಈ ವ್ಯವಸಾಯ ಇಲಾಖೆ ಬಹಳ ಕಾಲದಿಂದ ನಮ್ಮ ದೇಶದಲ್ಲಿದೆ. ಇದರಿಂದ ರೈತನಿಗೆ ಎಷ್ಟು ಪ್ರಯೋಜನ ಆಗಬೇಕೋ ಅಷ್ಟು ಪ್ರಯೋಜನ ನಿಜವಾಗಿಯೂ ಆಗುತ್ತಿಲ್ಲ ಅದಕ್ಕೆ ಕಾರಣವೇನೆಂದರೆ ಅಧಿಕಾರಿಗಳಲ್ಲಿ ಏನೊಂದು ಮನೋಭಾವನೆ ಬಂದಿದೆಯೆಂದರೆ ಯಾವ ಆಫೀಸಿಗೆ ಹೋದರೂ ಸೀನಿಯಾರಿಟಿ ಪಟ್ಟಿ ಸರಿಯಾಗಿಲ್ಲ. ನನಗೆ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಿ ಎಂದು ಹೇಳತಕ್ಕದೇ ಮೊದಲನೆಯ ಉತ್ತರವೇ ಹೊರತು ನಾವು ಹೋದ ಕೆಲಸಗಳಿಗೆ ಖಂಡಿತಾ ಅವರು ಗಮನ ಕೊಡುವುದಿಲ್ಲ. ಬೊಂಬಾಯಿ ಸರ್ಕಾರದಲ್ಲಿದ್ದವರು ನಾವು ಬೊಂಬಾಯಿ ಸರ್ಕಾರದಲ್ಲಿದ್ದಾಗ ಎಷ್ಟೋ ಚೆನ್ನಾಗಿತ್ತು. ಇಲ್ಲಿಗೆ ಬಂದು ಹೀಗೆ

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಆಯಿತು ಎಂದು ಹೇಳುತ್ತಾರೆ. ಮೈಸೂರು ನೌಕರರು ಹಳೆಯ ಮೈಸೂರು ಇದ್ದಾಗ ಎಷ್ಟೋ ಚೆನ್ನಾಗಿತ್ತು. ಬೊಂಬಾಯಿ ಸರ್ಕಾರದಲ್ಲಿದ್ದವರು ಇಲ್ಲಿಗೆ ಬಂದು ಹೀಗಾಯಿತು ಎಂದು ಹೇಳುತ್ತಾರೆ. ಇದು ನಮಗಂತೂ ಅರ್ಥವೇ ಆಗುವುದಿಲ್ಲ. ನಾವು ಇದನ್ನು ತಿಳಿದುಕೊಳ್ಳುವುದಕ್ಕೆ ಆಗ ವುದೂ ಇಲ್ಲ. ಈಗ ಆಫೀಸುಗಳಲ್ಲಿ ನೌಕರರುಗಳಿಗೆ ಉಂಟಾಗಿರತಕ್ಕ ತೊಂದರೆಗಳನ್ನು ಬಗೆಹರಿಸದೇ ಹೋದರೆ ಇಲಾಖೆಗಳಲ್ಲಿ ಯಾವ ಕೆಲಸಗಳೂ ಆಗುವುದಿಲ್ಲ. ನೌಕರರು ಸರಿಯಾಗಿ ಕೆಲಸವನ್ನೂ ಮಾಡುವುದಿಲ್ಲ. ವ್ಯವಸಾಯದ ಇಲಾಖೆಯಲ್ಲಿ ಮಹತ್ತರವಾದ ಯೋಜನೆಗಳನ್ನು ಸಾಧನೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇದು ಕೆಲವು ಸಂದರ್ಭಗಳಲ್ಲಿ ತದ್ವಿರುದ್ಧವಾಗಿದೆ. ಉದಾಹರಣೆಗೆ ಹೇಳುವುದಾದರೆ ತೆಂಗಿನಕಾಯಿ ಬೀಜವನ್ನು ಕೊಳ್ಳುತ್ತಿದ್ದಾರೆ. ಅದು ಒಳ್ಳೆಯ ಬೀಜವೇ ಹೇಗೆ ಎಂಬುದನ್ನು ಏನೂ ನೋಡುವುದಿಲ್ಲ. ಒಂದು ಸಾವಿರಕ್ಕೆ 350 ರೂಪಾಯಿನಂತೆ ಯಾರು ಬೇಕಾದರೂ ತಂದುಹಾಕಬಹುದು. ಇಂಥಾ ತೆಂಗಿನಕಾಯಿನ ಬೀಜವನ್ನು ಹೊರಗಡೆ ಕಳುಹಿಸುವ ಸಂದರ್ಭದಲ್ಲಿ ಈ ರೀತಿ ಮಾಡಿದರೆ ಇಲಾಖೆಯಿಂದ ಕಳುಹಿಸುವುದಕ್ಕೆ ಮಾನ್ಯತೆ ಬರುತ್ತದೆಯೇ ಎಂಬುದನ್ನು ಆಲೋಚನೆ ಮಾಡಬೇಕು. ವ್ಯವಸಾಯಕ್ಕೆ ಬೇಕಾದ ಉಪಕರಣಗಳು ಎಂದರೆ ಈಗ ಒಬ್ಬ ಸಾಮಾನ್ಯ ಮನುಷ್ಯ ಒಂದು ಟ್ರ್ಯಾಕ್ಟರನ್ನು ಕೊಂಡುಕೊಳ್ಳಬೇಕಾದರೆ ಅವನು 70 ಸಾವಿರ ರೂಪಾಯಿಗಳ ಸಾಲ್ವೆನ್ಸಿ ಕೊಡಬೇಕಾಗುತ್ತದೆ. 70 ಸಾವಿರ ರೂಪಾಯಿಗಳ ಒಂದು ಆಧಾರವನ್ನು ಕೊಡತಕ್ಕ ರೈತರು ನಮ್ಮ ದೇಶದಲ್ಲಿ ಯಾರಾದರೂ ಇದ್ದಾರೆಯೇ? ಅವನೇನಾದರೂ ಒಂದು ಸಾರಿ ಮಂತ್ರಿ ಯಾಗಿದ್ದರೆ ಒಂದು ಲಕ್ಷ, 40 ಸಾವಿರ, 20 ಸಾವಿರ ರೂಪಾಯಿಗಳ ಸಾಲ್ವೆನ್ಸಿಯನ್ನು ಅವನು ಕೊಡ ಬಹುದು. ಸಣ್ಣಪುಟ್ಟ ರೈತರಿಗೆ ಅನುಕೂಲವಾಗತಕ್ಕ ಸಣ್ಣಸಣ್ಣ ಟ್ರ್ಯಾಕ್ಟರುಗಳನ್ನು ಸಾಲದ ರೂಪದಲ್ಲಿ ರೈತರಿಗೆ ಕೊಡಲು ಸೊಸೈಟಿಗಳಿಗೆ ಒಂದೆರಡು ಟ್ರ್ಯಾಕ್ಟರುಗಳನ್ನು ಕೊಡಬೇಕು. ಲಾಭ ನಷ್ಟ ಇಲ್ಲದ ರೀತಿಯಲ್ಲಿ ಟ್ರ್ಯಾಕ್ಟರುಗಳನ್ನು ಉಪಯೋಗಿಸಬೇಕೆಂದು ಸರ್ಕಾರದ ಧ್ಯೇಯ ಇದೆ. ಈಗ ಯಾರಾದರೂ ಒಬ್ಬ ರೈತ ಒಂದು ಟ್ರ್ಯಾಕ್ಟರನ್ನು ತೆಗೆದುಕೊಂಡು ಹೋಗಿ ಒಂದು ವೇಳೆ ಅದರ ಯಾವುದಾದರೂ ಒಂದು ಸಣ್ಣ ಸಾಮಾನು ಹೋಗಿ ಟ್ರ್ಯಾಕ್ಟರು ಕೆಲಸ ಮಾಡದೆ 5-6 ದಿವಸ ನಿಂತು ಕೊಂಡರೆ ಅದರ ದಿನವಹಿಯ ಬಾಡಿಗೆ ರೈತನಮೇಲೆ ಬೀಳುತ್ತದೆ. ಚಿಕ್ಕಪುಟ್ಟ ಸಾಮಾನುಗಳನ್ನು ತರಬೇಕಾದರೂ ಬೆಂಗಳೂರಿಗೆ ಬರಬೇಕು. ಆದ್ದರಿಂದ ಯಾವುದಾದರೂ ಸೊಸೈಟಿಗಳಿಗೆ ಒಂದೆರಡು ಟ್ರ್ಯಾಕ್ಟರುಗಳನ್ನು ಕೊಟ್ಟು ಅವುಗಳ ಮುಖಾಂತರ ರೈತರಿಗೆ ಟ್ರ್ಯಾಕ್ಟರುಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಅವುಗಳನ್ನು ಸರಿಯಾಗಿ ಮ್ಯಾನೇಜ್ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ತಿಪಟೂರಿನಲ್ಲಿ ಟ್ರ್ಯಾಕ್ಟರು 3 ತಿಂಗಳು ಇರಬೇಕೆಂದು ಒಂದು ಕಾನೂನನ್ನು ಮಾಡಿದ್ದಾರೆ. ಅದು ಮೂರು ತಿಂಗಳಕಾಲವೇನೋ ನಿಂತಿರುತ್ತದೆ. ಆದರೆ ಸರಿಯಾಗಿ ಕೆಲಸ ಮಾಡುವುದು 4 ದಿವಸ ಅಥವಾ 5 ದಿವಸಗಳು ಮಾತ್ರ, ಸರ್ಕಾರದವರು ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸೊಸೈಟಿಗಳಿಗೆ ಕೊಟ್ಟು ಅವುಗಳ ಮುಖಾಂತರ ರೈತರಿಗೆ ಟ್ರ್ಯಾಕ್ಟರು ಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು.

ನಮ್ಮ ಕಂದಾಯಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ರೇಡಿಯೋ ಮುಖಾಂತರ ಪಂಪುಸೆಟ್ಟುಗಳನ್ನು ಕೊಡುವ ವಿಚಾರವನ್ನು ಪ್ರಚಾರ ಮಾಡುತ್ತಿದ್ದಾರೆ. ಆದರೆ ಅದಕ್ಕೆ ದುಡ್ಡು ಕೊಡುವವರು ಯಾರು, ಪಂಪುಸೆಟ್ಟುಗಳನ್ನು ಕೊಡುವವರು ಯಾರೆಂಬುದು ಆ ಪರಮಾತ್ಮನೊಬ್ಬನಿಗೇ ಗೊತ್ತು. ನಾನು ಈ ಬಗ್ಗೆ ಒಂದು ಕಾಗದವನ್ನು ಸರ್ಕಾರಕ್ಕೆ ಬರೆದಿದ್ದೆ. ಅದಕ್ಕೆ "The matter is under Consideration" ಎಂದು ಉತ್ತರ ಬಂದಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ತಾಲ್ಲೂಕು ಬೋರ್ಡಿನವರಿಗೆ ಅಪ್ಲಿಕೇಷನ್ ಹಾಕಿದರೆ ಅವರು ಪಂಪುಸೆಟ್ಟನ್ನು ಅಲಾಟ್ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪಂಪುಸೆಟ್ಟು ಪಡೆದುಕೊಂಡು ಬೇಸಿಗೆ ಬೆಳೆಯನ್ನು ಬೆಳೆಯಿರಿ ಎಂದು ರೇಡಿಯೋದಲ್ಲಿ ಎಷ್ಟು ಪ್ರಸಾರವಾಯಿತು, ಅದಕ್ಕೆ ಎಷ್ಟು ದುಡ್ಡನ್ನು ಖರ್ಚುಮಾಡಿದ್ದೀರಿ, ಆದರೆ ಇವೊತ್ತಿನವರೆಗೂ ರೈತನಿಗೆ ಒಂದು ಪಂಪುಸೆಟ್ಟೂ ಮುಟ್ಟಿಲ್ಲ. ವ್ಯವಸಾಯಗಾರರಿಗೆ ಉತ್ತೇಜನ ಕೊಡುತ್ತೇವೆ ಬಾವಿ ತೆಗೆಯಲು ಸಾಲ ಕೊಡುತ್ತೇವೆ, ಪಂಪುಸೆಟ್ಟು ಕೊಡುತ್ತೇವೆಂದು ಹೇಳಿದರು. ಆದರೆ ರೈತನಿಗೆ ಆ ಯಾವ ಸೌಲಭ್ಯವೂ ದೊರೆತಿಲ್ಲ. ಪಂಪುಸೆಟ್ಟುಗಳದು ಯಾವ ನಂಬರೋ ಅಥವಾ ಯಾವ ಲೇಬಲ್ ಒಂದೂ ನಮಗೆ ಗೊತ್ತಿಲ್ಲ. ಸ್ಟೋರ್ ಪರ್ಚೇಸ್ ಕಮಿಟಿಯಲ್ಲಿ ನಾಲ್ಕು ಜನಗಳನ್ನು ಬುಕ್ ಮಾಡಿಕೊಂಡರೆ ಯಾವ ರೀತಿ ಬೇಕಾದರೂ ರೈತನಿಗೆ ಟೋಪಿ ಹಾಕು ವುದಕ್ಕೆ ಅವಕಾಶವಿದೆ. ಅದೂ ನೇರವಾಗಿ ಸರ್ಕಾರದಿಂದ ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ದವರು ದುಡ್ಡು ಸಾಲ ಕೊಡುತ್ತಾರೆ. ಅವರಿಗೆ ಯಾವ ಕಂಪೆನಿ ಇಚ್ಛೆ ಇದೆಯೋ ಆ ಕಂಪೆನಿಯಲ್ಲಿ

ತೆಗೆದುಕೊಳ್ಳಿ ಎಂದು ಅವರು ಹೇಳಬಹುದು. ಬಾವಿ ತೆಗೆಯುವುದಕ್ಕೆ 3 ಸಾವಿರ ರೂಪಾಯಿಗಳ ನಿಗದಿಯಾದ ಸಾಲವನ್ನು ಕೊಡುತ್ತೇವೆಂದು ಹೇಳುತ್ತಾರೆ. ಒಂದೊಂದು ಬಾವಿಗೆ 4 ಸಾವಿರ 5 ಸಾವಿರ, 10 ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತದೆ. ಆದ್ದರಿಂದ ಸರ್ಕಾರದವರು ಬಾವಿಗಳಿಗೆ ದುಡ್ಡನ್ನು ಮಂಜೂರು ಮಾಡುವಾಗ ಬಾವಿ ತೆಗೆಯತಕ್ಕ ಜಾಗ, ಭೂಮಿ ಇವುಗಳನ್ನೆಲ್ಲಾ ನೋಡಿ ಎಷ್ಟು ಆಳ ತೋಡಿದರೆ ನೀರು ಬರುತ್ತದೆ ಎಷ್ಟು ಖರ್ಚಾಗುತ್ತದೆ ಎಂಬುದನ್ನೆಲ್ಲಾ ನೋಡಿ ನಂತರ ಬಾವಿಗೆ ದುಡ್ಡನ್ನು ಸರ್ಕಾರದವರು ಮಂಜೂರು ಮಾಡಬೇಕೆಂದು ನಾನು ಹೇಳುತ್ತೇನೆ. ಬಾವಿ ತೆಗೆಸಿದರೆ ಕರೆಂಟು ಕೊಡುತ್ತಾರೆಯೋ ಇಲ್ಲವೋ ಎನ್ನುವ ಅನುಮಾನಕ್ಕೆ ಅವಕಾಶವಿಲ್ಲದಂತೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಈ ಕೂಡು ಒಕ್ಕಲುತನ ವ್ಯವಸಾಯದ ವಿಷಯವನ್ನು ಚೆನ್ನಾಗಿ ಆಲೋಚನೆ ಮಾಡಿ, ಈ ಯೋಜನೆಯನ್ನು ಏತಕ್ಕೋಸ್ಕರ ಮಾಡಿಕೊಂಡಿದ್ದೀರೋ ನನಗಂತೂ ಏನೂ ಅರ್ಥವಾಗಿಲ್ಲ. ಯಾವ ಒಬ್ಬ ಮನುಷ್ಯನೂ ಸ್ವಾರ್ಥವಿಲ್ಲದೆ ಇಲ್ಲ, ಎಲ್ಲರಲ್ಲಿಯೂ ಇದೆ; ಇದು ಎಲ್ಲಿಯೂ ಇಲ್ಲದೆ ಇಲ್ಲ. ಭೂಮಿಗೋಸ್ಕರ ಕೊಡಲಿ ಹಿಡಿದುಕೊಂಡು ವ್ಯಾಜ್ಯವಾಗಿ ಅನೇಕ ಕ್ರಿಮಿನಲ್ ಕೇಸುಗಳಾಗಿವೆ. ಇದರಿಂದ ಏನಾಗುತ್ತಿದೆ, ಎಂದರೆ ಬುದ್ಧಿವಂತರಾದವರು 10 ಜನ ಅವಿದ್ಯಾವಂತರನ್ನು ಇಟ್ಟು ಕೊಂಡು, ಕೆಲವು ಕಾಲ ವ್ಯವಸಾಯ ಮಾಡಿಸಿ, 200 ರೂಪಾಯಿ ಸಾಮಾನಿಗೆ 500 ರೂಪಾಯಿ ಎಂದು ತೋರಿಸಿ, 400 ರೂಪಾಯಿ ಖರ್ಚಾಗಿದ್ದರೆ, 4 ಸಾವಿರ ರೂಪಾಯಿ ಖರ್ಚು ಹಾಕಿ, ಕಡೆಯಲ್ಲಿ ಎಲ್ಲ ಅವ್ಯವಸ್ಥೆ ಮಾಡಿ, ಸಹಕಾರೀ ವ್ಯವಸಾಯ ನಡೆಯಲಿಲ್ಲವೆಂದು ಹೇಳಿ, ಆ ಭೂಮಿ ಯನ್ನು ಸ್ವಂತಕ್ಕೇ, ಭೂಹೀನರಿಂದ ಸ್ಕ್ರೈನ್ ಮಾಡಿಸಿಕೊಂಡು ಅವರ ಹೆಸರಿನಲ್ಲಿ ತಮಗೇ ಮಾಡಿ ಕೊಳ್ಳುವ ಸಂಭವ ಬಂದಿದೆ. ಇದರಲ್ಲಿ ಇನ್ನೊಂದು ಸ್ಕೀಮು ಏನಿದೆ ಅದು ಇನ್ನೂ ವಿಚಿತ್ರವಾಗಿದೆ. ಒಂದೇ ಫ್ಯಾಮಿಲಿಯ ಹತ್ತು ಮಂದಿ, ಮಕ್ಕಳು ಮರಿಗಳೇ ಸೇರಿಕೊಂಡು ಒಂದು ಸೊಸೈಟಿ ಮಾಡಿ ಕೊಳ್ಳಬಹುದು. ಇದು ಅತ್ಯಾಶ್ಚರ್ಯಕರ - ಪ್ರಪಂಚದಲ್ಲಿ ಇದನ್ನು ಎಲ್ಲಿಯೂ ನೋಡಲಿಲ್ಲ. ಈ ತರಹ ಮಾಡಬಹುದೆಂದು ನನಗೆ ಗೊತ್ತಿದ್ದರೆ ನಾನೂ 3-4 ಸೊಸೈಟಿಗಳನ್ನು ಮಾಡಿಕೊಳ್ಳ ಬಹುದಾಗಿತ್ತು. ನಮ್ಮ ಮನೆಯಲ್ಲಿ ನಾವು 30 ಜನ ಇದ್ದೇವೆ, ಮಾಡಿಕೊಳ್ಳುವುದೇನೂ ಕಷ್ಟವಿರಲಿಲ್ಲ ಇಂಥ ಸೊಸೈಟಿಗಳಿಗೆ ದುಡ್ಡು ಕೊಡುವುದಾದರೆ, ನಮ್ಮ ದೇಶದ ದುಡ್ಡಿಗೆ ಉಳಿಗಾಲವಿದೆಯೇ, ಲೆಕ್ಕ ಹಾಕಿ. ನೀವು 10 ಜನ ಸೇರಿಸಿ ಒಂದು ಸೊಸೈಟಿಯೆಂದು ಹೆಸರು ಇಟ್ಟರೂ, ಸೊಸೈಟಿ ಲೆಕ್ಕ ಪತ್ರ ಇಡಬೇಕು, ಹಣ ಸದ್ವಿನಿಯೋಗವಾಗಿದೆಯೋ ಇಲ್ಲವೊ ಎನ್ನುವುದನ್ನು ತನಿಖೆ ಮಾಡುತ್ತಾರೆ, ಮೇಲಿನವರಿಗೆ ಲೋಪದೋಷಗಳಿಗೆ ಜವಾಬು ಕೊಡಬೇಕಾಗುತ್ತದೆ, ಆದ್ದರಿಂದ ನಿಮಗೆ ತೊಡ ಕಾಗುತ್ತದೆ, ಅಷ್ಟು ಸುಲಭವಾಗಿ ಈ ಸಹಕಾರೀ ವ್ಯವಸಾಯ ಯೋಜನೆಯ ಬೆನಿಫಿಟ್ಟನ್ನು ನೀವು ಪಡೆದುಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರದ ಸಹಾಯ ಪಡೆಯಬೇಕಾದರೆ ಇನ್ಯಾವುದಾದರೂ ಉಪಾಯ ಹುಡುಕಿ. ಮೊದಲು ಈ ಸಹಕಾರೀ ವ್ಯವಸಾಯದ ಸ್ಕೀಮನ್ನು ತೆಗೆಯಬೇಕು. ನನಗೇ ಈ ಸ್ಕೀಮಿನ ವಿವರಗಳು ಗೊತ್ತಿರಲಿಲ್ಲ. ಮೊನ್ನೆ ಅರಸೀಕೆರೆಯ ಒಬ್ಬ ವ್ಯಾಪಾರಸ್ಥರು ಬಂದು ಇಂಥ ಒಂದು ಕ್ಷೇತ್ರ ಮಾಡುವುದಕ್ಕೆ ಸಹಾಯ ಕೋರಿದರು, ಅವರಿಂದ 10 ಜನ ಒಂದು ಸೊಸೈಟಿ ಮಾಡಿಕೊಳ್ಳಬಹುದೆಂದು ಗೊತ್ತಾಯಿತೂ ಒಂದೇ ಮನೆಯವರಿಗೆ ಸೊಸೈಟಿ ಮಾಡಿಕೊಟ್ಟರೆ, ಹಣ ದುರುಪಯೋಗವಾಗಿ ಬಿಡುತ್ತದೆ, ಆದ್ದರಿಂದ ಮೊದಲು ಈ ಯೋಜನೆಯನ್ನು ಹೊಡೆದು ಹಾಕಿ ಎಂದು ಸರ್ಕಾರದಲ್ಲಿ ಒತ್ತಿ ಮನವಿಮಾಡಿಕೊಳ್ಳುತ್ತೇನೆ.

ಇನ್ನೂ ಸ್ವಲ್ಪ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳ ವಿಷಯಕ್ಕೆ ಹೋಗೋಣ. ಬಡ ರೈತರು ಭೂಗಂದಾಯ ಕೊಟ್ಟು ಬಾವಿ ರಸ್ತೆಯಾಗುತ್ತಿರುವುದು ಅನಾದಿಕಾಲದಿಂದಲೂ ನಮ್ಮ ದೇಶದಲ್ಲಿ ಬಂದಿದೆ. ರೈತನ ಭೂಗಂದಾಯದ ಆಧಾರದ ಮೇಲೆಯೇ ಸರ್ಕಾರ ಅನ್ನು ವುದನ್ನು ಸ್ಥಾಪನೆ ಮಾಡಿದಂಥಾದ್ದು, ಇದು ಪಾಳೆಗಾರರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಸರ್ಕಾರದ ಆಡಳಿತ ಭೂಗಂದಾಯವನ್ನೇ ಅವಲಂಬಿಸಿದೆ. ಅದು ಇವತ್ತಿಗೂ ತಪ್ಪಲಿಲ್ಲ. ಈಗ 10-14 ವರ್ಷಗಳಿಂದ ಪಂಚವಾರ್ಷಿಕ ಯೋಜನೆಗಳು ಅಂತ ಮಾಡಿದ್ದೇವೆಂದು ಬೇಕಾದಷ್ಟು ಭಾಷಣ, ಪ್ರಚಾರಮಾಡಿದ್ದೇ ಮಾಡಿದ್ದು. ಈಗ ಕುಡಿಯುವ ನೀರಿನ ಬಾವಿ, ಒಂದು ರಸ್ತೆ, ಸ್ಕೂಲು, ಇತ್ಯಾದಿಗಳನ್ನು ಕೇಳಿದರೆ ತಾಲ್ಲೂಕು ಬೋರ್ಡುಗಳನ್ನು ತೋರಿಸುತ್ತೀರ ಇದು ಏನಾಗಿದೆ ಯೆಂದರೆ ಯಾವುದಾದರೂ ಒಂದು ಕಂಪೆನಿ ಮಾಲಿಕ ಇನ್‌ಸಾಲ್‌ವೆನ್ಸಿಗೆ ಹಾಕಿ ಬಿಟ್ಟರೆ, ಅವನಿಂದ ಎಷ್ಟು ಹಣ ಬರುತ್ತೇ ಬಂದುದನ್ನು ಎಲ್ಲಾ ಹಂಚಿಕೊಳ್ಳಿ, ಎಂದ ಹಾಗಿದೆ. ತಮ್ಮ ಮೇಲಿನ ಜವಾಬ್ದಾರಿಯನ್ನು ಯಾರ ಮೇಲೋ ಹಾಕಿಬಿಟ್ಟು ಪ್ರತಿಯೊಂದಕ್ಕೂ ನಿಮ್ಮ ಹತ್ತಿರ ದುಡ್ಡಿಲ್ಲವೆಂದು ಬಿಡುವುದೇ ? ನಾಮಿನೇಷನ್ನಿಗೆ ಅವಕಾಶವಿಲ್ಲವೆಂದು ಈ ಸಂಸ್ಥೆಗಳನ್ನು ಮಾಡಿಕೊಂಡಿರಾ ? ನಿಮ್ಮ ಜವಾಬ್ದಾರಿಯನ್ನು ಇನ್ನೊಬ್ಬರಿಗೆ ವಹಿಸಿ ನೀವು ಕಳಚಿಕೊಂಡುಬಿಡುವುದೇ? ನಿಮ್ಮ ಸ್ಟೇಟ್‌ಮೆಂಟಿನಲ್ಲಿ ಆರು ಸಾವಿರ ಬಾವಿಗಳು ಪೂರ್ತಿಯಾಗಿವೆ ಎಂದು ಹೇಳುತ್ತೀರಾ. ಈ ಪ್ರಮಾಸಂಖ್ಯೆ ಜಾಸ್ತಿ

(ಶ್ರೀ ಕೆ. ಪಿ. ರೇವಣ ಸಿದ್ಧಪ್ಪ)

ಯಾಗುತ್ತಿರುವ ಕಾಲದಲ್ಲಿ ಇದರಿಂದ ಪರಿಸ್ಥಿತಿ ಉತ್ತಮವಾಗೊಂಡಿದೆ ಎಂದು ಭಾವಿಸುತ್ತೀರಾ? ಬೆಂಗಳೂರಿನಲ್ಲಿ ಒಂದು ದೊಡ್ಡ ಕಾರ್ಪೊರೇಷನ್ನಿದೆಯೆಂದು, ಬೆಂಗಳೂರಿಗೆ ನೀರನ್ನು ಕಾವೇರಿಯಿಂದ, ಗಂಗಾ ನದಿಯಿಂದ ತಂದು ಭೂಕೈಲಾಸ ಮಾಡುತ್ತೇವೆಂದು ಹೇಳುತ್ತೀರ. ಅದೇ ಹಳ್ಳೀಗಾಡಿನವರು ಪಾಪಿಗಳು, ಅವರಿಗೆ ನೀರು ಕೊಟ್ಟಿದ್ದೀರಾ? ಕೊಡುವುದಕ್ಕೆ ನಿಮ್ಮ ಹಣೆಯಲ್ಲಿಯೇ ಬರೆಯಲಿಲ್ಲ. ಏಕೆಂದರೆ ಅವರು ಮೂಕ ಪ್ರಾಣಿಗಳು. ಅವರಿಗೆ ನೀರು ಕೊಡವುದಕ್ಕೆ ನಿಮ್ಮ ಹಣೆಯಲ್ಲಿಯೇ ಬರೆಯಲಿಲ್ಲ, ಇಂಥ ಸರ್ಕಾರ ದೇಶದಲ್ಲಿ ಇರಬಹುದೇ, ಆಲೋಚನೆ ಮಾಡಿ. ಒಂದು ದಿವಸ ಬೆಂಗಳೂರು ನಗರದಲ್ಲಿ ನೀರಿಗೆ ತೊಂದರೆಯಾದರೆ ಪೇಪರುಗಳಲ್ಲಿ ಬರದದ್ದೇ ಬರೆದದ್ದು. ಮಂತ್ರಿಗಳಾದಿಯಾಗಿ ಎಲ್ಲರೂ ಬೆಂಗಳೂರು ಜನರ ನೀರಿನ ಕಷ್ಟ ನೀಗಿಸಲು ಏನು ಮಾಡಬೇಕೆಂದು ಯೋಚಿಸುತ್ತಾರೆ. ಆದರೆ ಮಂತ್ರಿಗಳ ಯಾವ ಭಾಷಣ ಕೇಳಿದರೂ ಹಳ್ಳಿಯ ಮಾತೇ, ಹಳ್ಳಿಯ ಉದ್ಧಾರಕ್ಕೆ ತಾವು ದುಡಿಯುವುದು ಎಂದು ಹೇಳುತ್ತಾರೆ, ಹೀಗೆ ಮಾತನಾಡುವುದಕ್ಕೂ ಮಿತಿ, ಬೆಲೆ ಬೇಡವೇ? ನೀವೆಲ್ಲ ರೈತರ ಮಕ್ಕಳು, ಮಂತ್ರಿಗಳಾಗಿ ಇಂಥ ದೊಡ್ಡ ಭವ್ಯ ಬಂಗಲೆ ಸಿಕ್ಕಿದೆ, ಸ್ವರ್ಗ ಸಿಕ್ಕಿದೆ ಎಂದು ಅಂದುಕೊಂಡಿದ್ದೀರ. ಒಂದಲ್ಲ ಒಂದು ದಿವಸ ನೀವು ಹಿಂದಕ್ಕೆ ಹೋಗಲೇಬೇಕಾಗುತ್ತದೆ. ಶಾಶ್ವತವಲ್ಲ ಮಂತ್ರಿ ಪದವಿ. ನಿಮ್ಮ ವರ್ತನೆಗೆ ಏನಾದರೂ ನಾಚಿಕೆ ಪಟ್ಟುಕೊಳ್ಳುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ ಮತ್ತು ಅಭಿವೃದ್ಧಿ ಶಾಖೆಗಳ ಮಂತ್ರಿಗಳು).—ಅಜೇಯವಾದುದು ಅಂತ ನಮ್ಮಲ್ಲಿ ಯಾರೂ ತಿಳಿದುಕೊಂಡಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀವು ಇದನ್ನು ಆಗಲೇ ಎರಡುಸಲ ಅನುಭವಿಸಿದ್ದೀರಿ. ಮಂತ್ರಿ ಪದವಿ ಹೋದ ಸ್ವಲ್ಪ ದಿವಸದಲ್ಲಿ ನಿಮ್ಮ ಕೋಟುಗಳು ಸಡಿಲವಾಗಿಬಿಡುತ್ತವೆ, ತಿರುಗಿ ಮಂತ್ರಿಯಾದರೆ ಕೋಟುಗಳು ಬಿಗಿಯಾಗಿಬಿಡುತ್ತವೆ. ಮಂತ್ರಿತ್ವ ಸ್ಥಿರವಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ನಿಮ್ಮ ಮೆಂಬರ್‌ಷಿಪ್ಪೇ ಶಾಶ್ವತವಲ್ಲ, ಇನ್ನು ಮಂತ್ರಿ ಪದವಿ ಶಾಶ್ವತ ಅಂತ ಯಾರು ತಿಳಿದುಕೊಂಡಿದ್ದಾರೆ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸದಸ್ಯತ್ವಕ್ಕೆ ಐದು ವರ್ಷವಾದರೂ ಇದೆ, ನಿಮಗೆ ಎರಡು ವರ್ಷಕ್ಕೆ ಒಂದು ಟರ್ಮ್ ಆಗಿದೆ.

ಮುನಿಸಿಪಾಲಿಟಿಗಳಾದರೆ ತೆರಿಗೆಗಳನ್ನು ಹಾಕುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಸಾಮಾನ್ಯವಾದ ರೈತನಿಗೆ ಬೇಕಾದ ಧಾನ್ಯಗಳ ಮೇಲೆ ಸುಂಕ ಹಾಕುತ್ತಾರೆ, ಬಟ್ಟೆ ಮೇಲೆ ಸುಂಕ ಹಾಕುತ್ತಾರೆ. ರೈತನಿಗೆ ಬೇಕಾದ ಪ್ರತಿಯೊಂದು ಪದಾರ್ಥ ಮೇಲೆಯೂ ಹಾಕುತ್ತಾರೆ ಆದರೆ ಈ ತಾಲ್ಲೂಕು ಬೋರ್ಡಿಗೆ ಅಂಥ ಆದಾಯವೇನಿದೆ. ಲ್ಯಾಂಡ್ ರೆವಿನ್ಯುನಲ್ಲಿ ಸ್ವಲ್ಪ ದುಡ್ಡು ಅದಕ್ಕೆ ಕೊಟ್ಟಿದ್ದೀರ. ಈ ಪಂಚಾಯಿತಿ ಎಲೆಕ್ಷನ್ನುಗಳಲ್ಲಿ ನಿಮ್ಮ ಅವಾಂತರ ವಿಪರೀತವಾಗಿದೆ. ಯಾರಾದರೂ ಮಿನಿಸ್ಟರ ಆಫೀಸಿಗೆ ಹೋಗಿ ಯಾವುದಾದರೂ ಮುಖ್ಯ ಸಮಸ್ಯೆಗಳ ನಿವಾರಣೆ ಬಗ್ಗೆ ಸ್ವಲ್ಪ ಸಾವಧಾನವಾಗಿ ಚರ್ಚಿಸೋಣವೆಂದು ಹೋದರೆ, ಐದು ನಿಮಿಷ ಅವರ ಹತ್ತಿರ ಕೂತುಕೊಳ್ಳುವುದರಲ್ಲಿ "ಅವರ ಟ್ರಾನ್ಸ್‌ಫರ್ ಏನು ಮಾಡಿದಿರಿ, ಆ ಹುಡುಗ ಇಲ್ಲಿಗೆ ಬಂದಿದ್ದಾನೆ, ಅವನ ವಿಚಾರ ಏನು ಮಾಡಿದಿರಿ" ಎಂದು ಫೋನ್ ಶುರುವಾಗುತ್ತದೆ, ಇನ್ನು ಇದಕ್ಕೆ ಆಫೀಸರುಗಳನ್ನು ಏಕೆ ದೂರಬೇಕು? ಮೊದಲು ತಪ್ಪು ನಿಮ್ಮಲ್ಲಿಯೇ ಇಟ್ಟುಕೊಂಡಿರುತ್ತೀರ. Administrationನಲ್ಲಿ ಈ ಪಾಟಿ ತಲೆಹಾಕಬೇಡಿ, ಕೈಹಾಕಬೇಡಿ, ಯಾವುದೇ ಮುಖ್ಯವಾದ ಒಂದೆರಡು ಸಂಗತಿಗಳನ್ನು ನೀವು ಮನಸ್ಸಿಗೆ ಹಾಕಿಕೊಂಡು ಬಾಕೀದನ್ನು ಅಧಿಕಾರಿಗಳಿಗೇ ಬಿಟ್ಟುಬಿಟ್ಟು ರಾಜ್ಯಭಾರ ಮಾಡಿ. ರಾಜಕೀಯವನ್ನು ಆಡಳಿತದಲ್ಲಿ ಬೆರಸಿದರೆ ಅಧ್ವಾನವಾಗುತ್ತದೆ. ಡಿಸ್ಟ್ರಿಕ್ಟ್ ಬ್ಯಾಂಕ್ ಎಲೆಕ್ಷನ್ನಿಗೆ ಮಿನಿಸ್ಟರು ಬಂದು ನಿಂತುಕೊಳ್ಳುತ್ತಾರೆ, ವಿರೋಧ ಪಕ್ಷದ ಕಡೆಯವರು ಇಸ್ಪೀಟು ಆಡುತ್ತಾರೆ. ಅಂತ ಏನೇನೋ ಆರೋಪ ಹೊರಿಸಿ ಅವರನ್ನು ಅಪಹರಣ ಮಾಡಿಸುತ್ತಾರೆ. ನಿಮ್ಮ dignity ಕಾಪಾಡಿಕೊಳ್ಳಬೇಕು ಹೀಗೆಲ್ಲಾ. ಆದರೆ, ಮೈಸೂರು ಮಂತ್ರಿಗಳಿಗೆ ಗೌರವ ಬರುವ ಹಾಗೆ ಇಲ್ಲ. ನಿಮಗೆ ಗೌರವ ಬರಲಿ ಎಂದು ಹೇಳುತ್ತಿದ್ದೇನೆ ಅಷ್ಟೇ. ಯಾವ ಊರಿಗೇ ಹೋಗಲೀ, ನೀವು ಮೈಸೂರಿನವರೇ, ಏನ್ರೀ ನಿಮ್ಮ ವಿದ್ಯುಚ್ಛಕ್ತಿ ಉತ್ಪಾದನೆ ಇಷ್ಟು ಕಡಿಮೆ ಪರ್ಸೆಂಟೇಜ್ ಇದೆ, ನೀರಾವರಿ ಕೆಲಸ ಇಷ್ಟು ಕಡಿಮೆ ಇದೆ, ನಿಮ್ಮ ಮಂತ್ರಿಗಳ ಸಂಖ್ಯೆ ಎಷ್ಟು ಜಾಸ್ತಿ ಇದೆ ಅವರು ಏನು ಮಾಡುತ್ತಿದ್ದಾರೆ ಎಂದು ಹೀಯಾಳಿಸುತ್ತಾರೆ. ಆದ್ದರಿಂದ ದಯೆಯಿಟ್ಟು ನಮ್ಮ ರಾಜ್ಯದ ಪ್ರಗತಿಯನ್ನು ಪ್ರತಿ ಕ್ಷೇತ್ರದಲ್ಲಿಯೂ ಬಾಕಿ ಪ್ರಾಂತ್ಯಗಳ ಮಟ್ಟಕ್ಕೆ ಏರಿಸುವಂತೆ ಪ್ರಯತ್ನ ಮಾಡಲು ನಿಮ್ಮ ಕಾಲವನ್ನು ಉಪಯೋಗಿಸಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಮೀನುಗಾರಿಕೆ ಮೇಲೆ ನನಗೂ ಒಂದೊಂದು ಪುಸ್ತಕ ಕೊಟ್ಟಿದ್ದೀರಿ. ನಾನು ದುಃಖದಿಂದ ಹೇಳಬೇಕಾಗಿದೆ, ಇವತ್ತಿನವರೆಗೂ ಒಂದು ದಿವಸವಾದರೂ ಸಂಬಂಧಪಟ್ಟ ಇಲಾಖೆಯ ಯಾವ ನೌಕರನೂ ನಮ್ಮ ಹತ್ತಿರ ಕಾಣಿಸಲಿಲ್ಲ. ಬೇಜವಾಬ್ದಾರಿ ಸರ್ಕಾರವಿದ್ದಾಗಲಾದರೂ ಪೌಲ್ಟ್ರಿ ಸಾಕುವುದು ಹೇಗೆ, ಕೋಳಿಗಳು ಸಾಕುವುದು ಹೇಗೆ ಎಂದು ಅಧಿಕಾರಿಗಳು ನಮ್ಮಲ್ಲಿಗೆ ಬಂದು ತೋರಿಸಿಕೊಡುತ್ತಿದ್ದರು. ನಾನು ಆಗಿನ್ನೂ ಅಸೆಂಬ್ಲಿ ಮೆಂಬರೂ ಆಗಿರಲಿಲ್ಲ. ಮೆಂಬರಾಗುವುದಕ್ಕೆ ಅಪ್ಲಿಕೇಷನ್ ಸಹ ಕಳುಹಿಸಿರಲಿಲ್ಲ. ಈಗ ಜವಾಬ್ದಾರಿ ಸರ್ಕಾರ ಬಂದ ಮೇಲೆ, ನಾನು ವಿಧಾನ ಸಭೆಯ ಸದಸ್ಯನಾಗಿದ್ದರೂ ಒಬ್ಬರೂ ನನ್ನ ಹತ್ತಿರಕ್ಕೆ ಬಂದಿಲ್ಲ, ಇನ್ನೂ ಯಾರ ಹತ್ತಿರ ಹೋದದ್ದನ್ನೂ ನಾನು ಕೇಳಲಿಲ್ಲ. ಈ ಕೆರೆಗಳನ್ನು ದೇವಸ್ಥಾನಕ್ಕೆಂದು ಹರಾಜು ಮಾಡುತ್ತಾರೆ, ಪಂಚಾಯಿತಿಗೆಂದು ಹರಾಜು ಮಾಡುತ್ತಾರೆ, ಹೀಗೆ ಹರಾಜು ಮಾಡುವಾಗ ಮೀನು ಸಿಗುವ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸಬೇಕು. ಈ ಮೀನು ಕೈಗಾರಿಕೆ ವಿಚಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರು ಚೆನ್ನಾಗಿ ಮಾತನಾಡಿ ಬರತಕ್ಕಂಥ ಸಬ್‌ಸಿಡಿಯನ್ನೆಲ್ಲಾ ಪೂರ್ತಿಯಾಗಿ ಹೊಡೆದುಬಿಡುತ್ತಾರೆ. ಈ ಮೀನುಗಾರಿಕೆ ಅಭಿವೃದ್ಧಿಯಾಗದ ಕಡೆ ಉತ್ತಮಪಡಿಸಬೇಕು. ನೀರಿಲ್ಲದ ಕಡೆ ಹೆಚ್ಚಿಗೆ ಬೆಳೆಯಾಗುವಂತೆ ಮಾಡಬೇಕು. ಮಂಡ್ಯ ಜಿಲ್ಲೆಗೆ package-deal proposal sanction ಮಾಡಿದ್ದಾರೆ. ಈ ಯೋಜನೆ ಇಲ್ಲದೇನೇ ಎಲ್ಲಾ ರೈತರು ಅಲ್ಲಿ ನೀರಿನ ಸೌಕರ್ಯವಿರುವುದರಿಂದ ಒಳ್ಳೆಯ ಬೆಳೆಯನ್ನು ಆಗಲೇ ತೆಗೆಯುತ್ತಿದ್ದಾರೆ. ಅವರು ಹೆಚ್ಚಿಗೆ ಬೆಳೆಯಲೇಬೇಕು, ಬೆಳೆಯುತ್ತಾರೆ. ಈ ಒಂದು ಹೊಸ ಯೋಜನೆಯನ್ನು ಅಲ್ಲಿಗೆ ಕೊಟ್ಟದ್ದರಿಂದ ಅವರು ಹೆಚ್ಚಾಗಿ ಬೆಳೆಯುವುದಿಲ್ಲ. ಇದು ಹೇಗಿದೆಯೆಂದರೆ ಚೆನ್ನಾಗಿರುವ ಮಗುವನ್ನು ಇನ್ನಷ್ಟು ಚೆನ್ನಾಗಿರು ಎಂದು ಸಾಕಣೆ ಕೊಟ್ಟಹಾಗಾಯಿತು. ಎಲ್ಲಿ ಮೀನು ಹಿಡಿಯುವ ಕೆಲಸವಿಲ್ಲವೋ, ಅಲ್ಲಿ ಮೀನನ್ನು ಹೆಚ್ಚಾಗಿ ಬೆಳೆಸುವುದಕ್ಕೆ ಪ್ರಯತ್ನಪಡಬೇಕು.

ಈ ಬಾವಿಗಳಿಗೆ ಬೋರ್‌ವೆಲ್ ಸಿಸ್ಟಂ ಏರ್ಪಡಿಸುವ ಕೆಲಸ ಪಿ.ಡಬ್ಲ್ಯು.ಡಿ. ಯಲ್ಲಿ ಇದೆಯೆಂದು ಹೇಳುತ್ತೀರ. ಇದಕ್ಕೆ ನಾವು ಸಾವಿರ ರೂಪಾಯಿ ಡಿಪಾಸಿಟ್ ಇಡಬೇಕು. ಈ ಕೆಲಸ ನಿರ್ವಹಣೆಯನ್ನು ತಾಲ್ಲೂಕು ಬೋರ್ಡುಗಳು ಅಥವ ಪಂಚಾಯಿತಿ ಅಥವ ಸೊಸೈಟಿಗಳಿಗೆ ಕೊಟ್ಟು, ಇದರಿಂದ ಜನಗಳಿಗೆ ಅನುಕೂಲವಾಗುವಂತೆ ಏರ್ಪಾಡು ಮಾಡಿಕೊಡಬೇಕು.

ಇನ್ನು ಎನ್. ಇ. ಎಸ್ ವಿಷಯದಲ್ಲಿ ಹೇಳುವುದಾದರೆ ಈ ಬಗ್ಗೆ ಕೆಲವು ಸದಸ್ಯರು ಸರ್ಕಾರವೇ ಬೇರೆ ಅಲ್ಲ, ಸದಸ್ಯರು ಬೇರೆ ಅಲ್ಲ. ನಾವೆಲ್ಲಾ ಒಂದೇ ಎಂಬ ಭಾವನೆಯಿಂದ ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಹೇಳಿದರು. ಆ ರೀತಿ ಹೇಳುವವನಲ್ಲಿ ನಾನೂ ಒಬ್ಬನಾಗಿದ್ದೇನೆ. ಆದರೆ ಇಂತಹ ಸ್ಕೀಮುಗಳ ಹೆಸರುಗಳನ್ನು ಹೇಳಿಕೊಂಡು ದುಡ್ಡನ್ನು ಹಾಳು ಮಾಡಬೇಡಿ. ಈ ಕಾಮಗಾರಿಗಳನ್ನು ತಾಲ್ಲೂಕ್ ಬೋರ್ಡಿಗಾಗಲೀ, ತಹಸೀಲ್‌ದಾರನಿಗಾಗಲೀ ಅಥವಾ ಇಂಜನಿಯರ್ ಡಿಪಾರ್ಟ್‌ಮೆಂಟಿಗಾಗಲೀ ವಹಿಸಿ ಹಣವನ್ನು ಖರ್ಚು ಮಾಡಿದ್ದಕ್ಕೆ ತಕ್ಕ ಪ್ರತಿಫಲ ಬರುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗಿನ ಸ್ಕೀಮುಗಳಲ್ಲಿ ಕೈಹಾಕಿರುವವರಿಗೆ ಜೀಪು ತೆಗೆದುಕೊಂಡು ಹೋಗತಕ್ಕ ಅನುಭವವೇ ಇರುವುದಿಲ್ಲ. ನಮ್ಮ ದೇಶದವರಿಗೆ ಸಾಕಷ್ಟು ಮಾನ್ಯತೆ ಇಲ್ಲ. ಹೊರಗಿನವರಿಗೆ ಈ ಪಂಚವಾರ್ಷಿಕ ಯೋಜನೆಗಳಲ್ಲಿ ವಿಶೇಷವಾಗಿ ಪ್ರೋತ್ಸಾಹ ಕೊಡುತ್ತಿದ್ದಾರೆಯೇ ಹೊರತು ನಮ್ಮವರಿಗೆ ಅಷ್ಟಾಗಿ ಇಲ್ಲ. ಟ್ರೈನಿಂಗ್ ವಿಷಯದಲ್ಲಿ ನಮ್ಮವರಿಗೆ ಎಷ್ಟರಮಟ್ಟಿಗೆ ಸರ್ಕಾರದ ಅಭಿಮಾನವಿದೆಯೆಂಬುದನ್ನು ತಿಳಿದುಕೊಳ್ಳಬೇಕು ಮತ್ತು ನೆರೆ ರಾಜ್ಯದ ಜನಗಳಲ್ಲಿ ಎಷ್ಟರಮಟ್ಟಿಗೆ ಅಭಿಮಾನವಿದೆ ಎಂಬುದನ್ನು ಸಹ ತಿಳಿಯಬೇಕಾಗಿದೆ. ನಾವು ಮಾದರೀ ಮೈಸೂರಿನವರು ಎಂಬುದಾಗಿ ಹೇಳಿಕೊಳ್ಳುವಾಗ ಆಂಧ್ರಕ್ಕೆ ಹೋಗಿ ಕಲಿಯಬೇಕೇ, ನಮಗೆ ಶಕ್ತಿ ಇಲ್ಲವೇ, ನಮ್ಮಲ್ಲಿ ನೈತಿಕ ಬೆಂಬಲವಿಲ್ಲವೇ ಎಂಬುದನ್ನು ವಿಚಾರ ಮಾಡಿ ಯೋಚನೆ ಮಾಡಬೇಕು. ಆದ್ದರಿಂದ ಮಂತ್ರಿಗಳು ತಾವೇ ಯಾವಾಗಲೂ ಮಂತ್ರಿಯಾಗಿರಲೇಬೇಕೆಂಬ ಯೋಚನೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ತಮ್ಮ ಕೆಲಸಕಾರ್ಯಗಳನ್ನು ಜವಾಬ್ದಾರಿಯಿಂದ ಮಾಡಬೇಕು. ಇಲ್ಲದಿದ್ದರೆ ಹೆಚ್ಚಿನ ಶಬ್ದಗಳ ಪ್ರಯೋಗ ಮಾಡಬೇಕಾದೀತೆಂದು ಎಚ್ಚರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿ. ಘಾಯದೆ (ಅಂಕೋಲ).—ಮಾನ್ಯ ಸಭಾಪತಿಗಳೇ, ಇವತ್ತು ಈ ಸಭೆಯ ಮುಂದೆ ಇಟ್ಟಿರುವ ವ್ಯವಸಾಯ, ಗೋ ಸಂಪತ್ತು, ಅರಣ್ಯ, ಗ್ರಾಮಾಭಿವೃದ್ಧಿ, ಸಹಕಾರಿ ಇಲಾಖೆಯ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ವಿಷಯದಲ್ಲಿ ನಾನು ನನ್ನ ಜಿಲ್ಲೆಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಸರ್ಕಾರದ ಮುಂದೆ ತಮ್ಮ ಮೂಲಕ ಇಡಬಯಸುತ್ತೇನೆ. ನಾನು ಬಂದಿರುವ ಜಿಲ್ಲೆ ಕಾರವಾರ ಜಿಲ್ಲೆ, ಅಲ್ಲಿ ಈ ಅರಣ್ಯ ಸಂಪತ್ತು ವಿಶೇಷವಾಗಿದೆ. ಆದರೆ ಅದನ್ನು ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಳ್ಳುವುದು ಉತ್ತಮ. ಕಾರವಾರದಲ್ಲಿ ಶೇ. 82 ಭಾಗ ಇದೆ. ನನ್ನ ಒಂದು ತಾಲ್ಲೂಕಿನಲ್ಲಿಯೇ ಶೇ. 92 ಭಾಗ ಇದೆ. ಅಂದಮೇಲೆ ವಿಶೇಷವಾಗಿ ಕಾಡನ್ನು ಬೆಳೆಸುವುದರಿಂದ ಸ್ವಲ್ಪಮಟ್ಟಿಗೆ ತೊಂದರೆ, ಕೆಡಕು ಉಂಟು. ಆದ್ದರಿಂದ ಈಗ ಸರ್ಕಾರಕ್ಕೆ ಎಷ್ಟರ

(ಶ್ರೀ ಎಸ್. ಸಿ. ಘಾಯದೆ)

ಮಟ್ಟಿಗೆ ಕಾಡು ಸಂಪತ್ತು ಬೇಕೆಂಬ ಬಗ್ಗೆ ಒಂದು ಪ್ರಮಾಣಬೇಕು. ಕಾಡೆಲ್ಲಾ ಒಂದೇ ಕಡೆ ಕೂಡಿ ಹಾಕುವುದರಲ್ಲಿ ಏನೂ ಪ್ರಯೋಜನವಿಲ್ಲ. ಹೀಗೆ ನನ್ನ ಒಂದು ತಾಲ್ಲೂಕಿನಲ್ಲಿಯೇ ಶೇ. 92 ಭಾಗ ಕಾಡು ಇದ್ದರೆ ಜನ ಸಾಮಾನ್ಯರು ಹೇಗೆ ಜೀವಿಸಬೇಕೆಂಬ ವಿಚಾರವನ್ನು ಪರಿಶೀಲನೆ ಮಾಡಬೇಕಾಗಿದೆ. ನಮ್ಮಲ್ಲಿ ನೀರಾವರಿಗೆ ಫಲವತ್ತಾದ ಜಮೀನುಗಳುಂಟು. ಅರಣ್ಯ ಇಲಾಖೆಯವರು ಲಾಯಕ್ಕಾದ ಭೂಮಿಗಳನ್ನು ರೈತರಿಗೆ ಕೊಡುವ ಹಾಗೆ ವ್ಯವಸ್ಥೆ ಮಾಡಬೇಕು. ಆದರೆ ಅರಣ್ಯ ಶಾಖೆಯವರು ಅಂತಹ ಫಲವತ್ತಾದ ಮತ್ತು ನೀರಾವರಿಗೆ ಯೋಗ್ಯವಾದ ಜಮೀನುಗಳನ್ನು ಕೂಡಲೆ ರೈತರಿಗೆ ರಿಲೀಜ್ ಮಾಡುವುದಿಲ್ಲ. ಅರಣ್ಯಗಳಲ್ಲಿ ಫಾರೆಸ್ಟ್ ಬಹಳವಾಗಿ ಬೆಳೆಸುತ್ತಿರುವುದರಿಂದ ಜನ ಸಾಮಾನ್ಯರಿಗೆ ಕೆಲವು ಸಂದರ್ಭಗಳಲ್ಲಿ ಬಹಳ ತೊಂದರೆ ಇದೆ. ನಮ್ಮಲ್ಲಿ Wild Animal protection ಆಕ್ಟ್ ಎಂಬುದಾಗಿ ಇದೆ. ಅದರಿಂದ ಕಾಡು ಜಾನುವಾರುಗಳಿಗೆ ಸಂರಕ್ಷಣೆ ಇದೆಯೇ ಹೊರ್ತು ಬಡ ರೈತನಿಗೆ ಯಾವ ರಕ್ಷಣೆಯೂ ಇಲ್ಲ. ಇದರಿಂದಾಗಿ ಅನೇಕ ಕಾಡು ಮೂಕ ಪ್ರಾಣಿಗಳು ಆಹಾರ ಬೆಳೆಗಳನ್ನೆಲ್ಲಾ ತಿಂದು ರೈತನ ಬೆಳೆಯನ್ನೆಲ್ಲಾ ಹಾಳುಮಾಡಿ ತುಂಬಾ ಲುಕ್ಸಾನು ಪಡುವ ಸ್ಥಿತಿ ಬಂದಿದೆ. ಅದರ ಬಗ್ಗೆ ಸರ್ಕಾರದವರು ರೈತನಿಗೆ ಏನು ಪ್ರೊಟೆಕ್ಷನ್ ಕೊಡುತ್ತಾರೆಂಬುದನ್ನು ವಿಚಾರ ಮಾಡಬೇಕು. ಇದರಲ್ಲಿ ಜನಸಾಮಾನ್ಯರಿಗೆ ಕೂಡಲೇ ರಕ್ಷಣೆಯನ್ನು ಕೊಡಬೇಕು. ಈಗಾಗಲೇ ರೈತಾಪಿ ಜನರ ಧನ ಸಂಪತ್ತೆಲ್ಲಾ ಕಾಡು ಮೃಗಗಳಿಂದ ಹಾಳಾಗುತ್ತಿದೆ, ಅದರ ಬಗ್ಗೆ ಅವರಿಗೆ ಕಂಪೆನ್ಸೇಷನ್ ಕೊಡಬೇಕೆಂದು ನಾನು ಕೇಳುತ್ತೇನೆ. ಇನ್ನೊಂದು ವಿಷಯ. ನಮ್ಮ ಭಾಗದಲ್ಲಿ ವ್ಯವಸಾಯಕ್ಕೆ ಲಾಯಕ್ಕಾದ ಜಮೀನುಗಳು ಬಹಳ ಇವೆ. ತಮಗೆ ಒಂದು ಉದಾಹರಣೆಯನ್ನು ಬೇಕಾದರೆ ಕೊಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಬಹಳ ವಿಸ್ತಾರವಾದ ತಾಲ್ಲೂಕ್ ಎಂದರೆ ಮುಂಡಗೋಡ ತಾಲ್ಲೂಕು. 7,300 ಚಿಲ್ಲರೆ ಎಕರೆ ಜಮೀನು ಒಳ್ಳೆಯ ಸಾಗಲಾಯಖ ಫಲವತ್ತಾದ ಜಮೀನು ಇದೆ. ಅಂತಹ ಉತ್ತಮ ಜಮೀನನ್ನು ರೈತರಿಗೆ, ಅದರಲ್ಲೂ ಕಡಿಮೆ ಹಿಡುವಳಿ ಜಮೀನ್ದಾರರಿಗೆ ಕೊಡುವ ವಿಚಾರವನ್ನು ಇದುವರೆಗೂ ಮಾಡಲಿಲ್ಲ. ಮಾನ್ಯ ಮಂತ್ರಿಗಳು ಈ ವಿಷಯವನ್ನು ತೀವ್ರವಾಗಿ ಗಮನಿಸಬೇಕು ಎಂಬುದಾಗಿ ನಾನು ಹೇಳುತ್ತೇನೆ. ಅಂತಹ ಜಮೀನನ್ನು ಸಾಗುವಳಿಗೆ, ಬೇಸಾಯ ಕೆಲಸಕ್ಕೆ ಜಾಗ್ರತೆಯಾಗಿ ಬಿಟ್ಟು ಕೊಡಬೇಕು ಎಂಬುದಾಗಿ ನಾನು ವಿನಂತಿಸಿಕೊಳ್ಳುತ್ತೇನೆ. ಇದರಲ್ಲಿ ಏನಾದರೂ ವಿಳಂಬವಾದರೆ ನಮ್ಮ ಸಂಸ್ಥಾನಕ್ಕೆ ಹಾನಿಯೇ ಹೊರ್ತು ಮತ್ತೇನೂ ಇಲ್ಲ. ಆದ್ದರಿಂದ ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನಕೊಟ್ಟು ಜಮೀನು ಎಷ್ಟು ಕೊಡಲಿಕ್ಕೆ ಸಾಧ್ಯವೋ ಅಷ್ಟನ್ನು ಜಾಗ್ರತೆಯಾಗಿ ರೈತರಿಗೆ ಹಂಚಬೇಕು. ಈ ಬಗ್ಗೆ ಈಗಾಗಲೇ ಒಂದು ಕಮಿಟಿ ಮಾಡಿದ್ದೇವೆಂದು ಹೇಳಿದರು. ಆ ಕಮಿಟಿ ಮುಖಾಂತರ ಆದಷ್ಟು ಜಾಗ್ರತೆ ಈ ಪ್ರಾಬ್ಲಮ್ ಒಂದು ನಿರ್ಣಯಕ್ಕೆ ಬರಬೇಕು. ಆ ರೀತಿ ಕ್ರಮ ತೆಗೆದುಕೊಂಡು ಫಲವತ್ತಾಗಿರ ತಕ್ಕ ಜಮೀನುಗಳನ್ನು ರೈತಾಪಿ ಜನರಿಗೆ grow more food ಸ್ಕೀಂ ಜಯಪ್ರದವಾಗುವಂತೆ ಮಾಡಲು ಹಂಚಬೇಕು ಎಂಬುದಾಗಿ ನಾನು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಮತ್ತೆ ಯಾರೂ ಯಾವರೀತಿಯಲ್ಲೂ ಭಿನ್ನಾಭಿಪ್ರಾಯ ಮಾಡುವ ಹಾಗಿಲ್ಲ. ಈ ವಿಷಯದಲ್ಲಿ ಅರಣ್ಯ ಇಲಾಖೆಯವರು ಸಾಕಷ್ಟು ಮನಸ್ಸು ಮಾಡದಿದ್ದರೆ ಇನ್ನಾವ ಕಾಲದಲ್ಲಿ ಈ ಇಲಾಖೆ ಅಭಿವೃದ್ಧಿಯಾಗುತ್ತದೋ ಗೊತ್ತಿಲ್ಲ. ರೈತಾಪಿ ಜನಗಳು ತೀವ್ರವಾಗಿ ಆಹಾರೋತ್ಪತ್ತಿಯನ್ನುಂಟುಮಾಡಲು ಸರ್ಕಾರದವರು ಹೆಚ್ಚಿನ ಸಹಾನುಭೂತಿಯನ್ನು ತೋರಿಸಬೇಕು ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಸಾಕಷ್ಟು ಅವರಿಗೆ ಕೊಡಬೇಕು. ಜನತೆಯೂ ಸಹ ಸರ್ಕಾರದ ಕಾರ್ಯಕಲಾಪಗಳ ಬಗ್ಗೆ ಹೆಚ್ಚಿನ ಸಹಕಾರವನ್ನು ಕೊಡಬೇಕು.

ಇನ್ನು ನಮ್ಮಲ್ಲಿರುವ ಪಶು, ಗೋ ಸಂಪತ್ತು ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕೆಂದು ಇಚ್ಛೆವುಳ್ಳವನಾಗಿದ್ದೇನೆ. ನನ್ನ ಮತದಾನ ಮತದಲ್ಲಿ ಅದರಲ್ಲೂ ಮುಂಡಗೋಡು ತಾಲ್ಲೂಕಿನಲ್ಲಿ 25 ಸಾವಿರ ಜನಸಂಖ್ಯೆ ಇದ್ದರೆ 35 ಸಾವಿರಕ್ಕೆ ಮೇಲ್ಪಟ್ಟು ದನಗಳ ಸಂಖ್ಯೆ ಇದೆ. ಅಂದಮೇಲೆ ಜನಸಂಖ್ಯೆಗಿಂತ ದನಗಳ ಸಂಖ್ಯೆ ಹೆಚ್ಚು ಇದೆ. ಅವುಗಳ ಬೆಳವಣಿಗೆಗೆ ಹೆಚ್ಚಿನ ಸೌಕರ್ಯವಿಲ್ಲ. ಅವನ್ನು ಸಾಕತಕ್ಕವರು ಗೌಳಿ ಜನರು. ಅವರಿಗೆ ಸರಿಯಾದ ಮನೆಗಳಿರುವುದಿಲ್ಲ. ದನಕರುಗಳನ್ನು ಇಟ್ಟುಕೊಂಡು ಅಡವಿಗಳಲ್ಲಿಯೇ ವಾಸ ಮಾಡುತ್ತಿರುತ್ತಾರೆ. ಆಗಾಗ್ಗೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆದಾಡುತ್ತಿರುತ್ತಾರೆ. ಉತ್ತಮವಾದ ಪ್ರದೇಶವನ್ನು ಅವರಿಗೆ ಕೊಡುವ ವ್ಯವಸ್ಥೆ ಮಾಡಿದರೆ, ಅವರ ವಾಸಕ್ಕೆ ಅನುಕೂಲವಾಗುತ್ತದೆ. ಮತ್ತು ಗೋ ಸಂಪತ್ತನ್ನು ಚೆನ್ನಾಗಿ ಬೆಳೆಸುವುದಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ. ಏಕೆಂದರೆ ಅವರು ಅವುಗಳ ಸಾಗಾಣಿಕೆಯಿಂದ ಮಾತ್ರ ಜೀವನ ಮಾಡುತ್ತಿದ್ದಾರೆ. ಅಂತಹವರಿಗೆ ಸಕಲ ಸೌಕರ್ಯಗಳನ್ನು ಕೊಟ್ಟರೆ ನಮ್ಮ ಪಶು ಸಂಪತ್ತು ಸಕ್ಸೆಸ್ ಆಗುತ್ತದೆ. ಅವುಗಳಲ್ಲಿ ಹೊಸ ಬ್ರೀಡ್ಸ್ ಕೆಲವನ್ನು ಉಪಯೋಗಿಸಿ

ಕೊಂಡು ನಮ್ಮ ಪಶು ಸಂಪತ್ತನ್ನು ಮತ್ತಷ್ಟು ಅಭಿವೃದ್ಧಿಪಡಿಸಬಹುದೆಂಬುದನ್ನು ಸರ್ಕಾರದವರು ಈ ಸಂದರ್ಭದಲ್ಲಿ ಮನವರಿತು ಆ ಬಗ್ಗೆ ತಕ್ಕ ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮಾಭಿವೃದ್ಧಿಯ ವಿಚಾರ. ಈಗ ತಾಲ್ಲೂಕ್ ಬೋರ್ಡುಗಳು ಮತ್ತು ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿವೆ. ನಮ್ಮ ಮಟ್ಟಿಗೆ ಹೇಳುವುದಾದರೆ, ನಮ್ಮದು forest ತಾಲ್ಲೂಕು, ರೆವಿನ್ಯು ಕಡಮೆ ಪ್ರಮಾಣದಲ್ಲಿ ಬರುತ್ತದೆ. ತಾಲ್ಲೂಕು ಮತ್ತು ಪಂಚಾಯಿತಿಗಳಿಗೆ ಉತ್ಪತ್ತಿ ಸಾಲದು. ಹಿಂದೆ ನಮ್ಮ ಪ್ರದೇಶ ಬೊಂಬಾಯಿ ಪ್ರಾಂತದಲ್ಲಿದ್ದಾಗ ಫಾರೆಸ್ಟ್ ಉತ್ಪತ್ತಿಯಿಂದ ಶೇಕಡ 2ರಷ್ಟು ಫಾರೆಸ್ಟ್ ಗ್ರಾಂಟ್ ಲೋಕಲ್ ಬೋರ್ಡಿಗೆ ಕೊಡುತ್ತಿದ್ದರು. ನಮ್ಮದು ಅರಣ್ಯ ಪ್ರದೇಶವಾಗಿರುವುದರಿಂದ ಸಾಕಷ್ಟು ರೆವಿನ್ಯೂ ಉತ್ಪತ್ತಿ ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳಿಗೆ ಸಿಕ್ಕುವುದಿಲ್ಲ. ಇದರಿಂದ ಗ್ರಾಮಾಭಿವೃದ್ಧಿ ಮಂಡಲಿಗಳ ಕೆಲಸ ಸಾಗುವುದಿಲ್ಲ. ಈ ಕೆಲಸಗಳು ಸಾಗಬೇಕಾದರೆ ಫಾರೆಸ್ಟ್ ಉತ್ಪತ್ತಿಯಿಂದ ಗ್ರಾಂಟು ಕೊಡಬೇಕೆಂದು ಒತ್ತಿ ಹೇಳಲು ಬಯಸುತ್ತೇನೆ.

4-00 P.M.

ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ಕೆಲವು ಸಹಕಾರ ಸಂಘಗಳನ್ನು ನೋಡಿದ್ದೇನೆ. ಕೆಲವು ಚಲೋ ಕೆಲಸ ಮಾಡುತ್ತಿವೆ. ಆದರೆ ಕೆಲವು ಸಂಘಗಳು one man society ಗಳಾಗಿವೆ. ಈಗಾಗಲೇ ಮಾನ್ಯ ಸದಸ್ಯರು ಉದಾಹರಣೆ ಕೊಟ್ಟಿದ್ದಾರೆ. ಒಂದೇ ಮನೆಯವರು ಮುಖ್ಯಸ್ಥರು ಸಹಕಾರ ಸಂಘ ಮಾಡಿಕೊಂಡು ಲಾಭ ಪಡೆಯುತ್ತಿದ್ದಾರೆ. ಹೀಗಾಗಬಾರದು. ಇದಕ್ಕೆ ಕಠಿಣ ಶಿಕ್ಷೆಯನ್ನು ಸರ್ಕಾರ ಯೋಚನೆ ಮಾಡಿ ಇದನ್ನು ಹತೋಟಿಗೆ ತರಬೇಕು. ಸಹಕಾರ ಇಲಾಖೆಯಿಂದ ಜನರಿಗೆ ಏನು ಸಹಾಯ ಸಿಕ್ಕಬೇಕೋ ಅದು ಸಿಕ್ಕುವಂತೆ ಆಗಬೇಕೆಂದು ಹೇಳುತ್ತೇನೆ.

[MR. SPEAKER in the Chair].

ಸಹಕಾರ ಸಂಘಗಳು ಕೆಡುವುದಕ್ಕೆ ಸೆಕ್ರೆಟರಿಗಳು ಬಹಳ ಮಟ್ಟಿಗೆ ಕಾರಣ. ಅವರು ರೈತರಿಗೆ ಮೋಸ ಮಾಡುತ್ತಿದ್ದಾರೆಂಬ ಬಗ್ಗೆ ಕೆಲವು ನಿದರ್ಶನಗಳು ಬಂದಿವೆ. ಮಂತ್ರಿಗಳು ನಮ್ಮ ಭಾಗಕ್ಕೆ ಬಂದಿದ್ದಾಗ ಉದಾಹರಣೆಗಳನ್ನು ಕೊಟ್ಟಿದ್ದೇನೆ. ಇದನ್ನು ಸರಿಪಡಿಸಬೇಕೆಂದು ಹೇಳಿ ನನಗೆ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The Minister will now commence the reply.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿನ್ನೆಯ ದಿವಸ ಈ ಚರ್ಚೆ ಈ ದಿನ ಐದು ಗಂಟೆಯವರೆಗೆ ಆಗಬೇಕೆಂದಿತ್ತು. ನಿನ್ನೆ ನಾವು ಒಬ್ಬೊಬ್ಬರಿಗೆ 20 ನಿಮಿಷ ಸಾಕೆಂದು ಒಪ್ಪಿಕೊಂಡಿದ್ದೆವು. ಈಗ ಬಹಳ ಜನ ಮಾತನಾಡುವವರಿದ್ದಾರೆ. ಈಗ ಕೊನೆಯ ಪಕ್ಷ ನಾಲ್ಕೈದು ಜನರಿಗಾದರೂ ಮಾತನಾಡಲು ಅವಕಾಶ ಕೊಡಬೇಕು. Let the debete go on up to 5 O'Clock.

Mr. SPEAKER.—I said that at 4 O'clock, the Government reply would commence.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ತೀರ್ಮಾನ ತೆಗೆದುಕೊಂಡದ್ದು.......

Mr. SPEAKER.—What happened yesterday everybody knows, but today something has happenend. Probably, the hon. member was not present then and he feels that because he was not present then the decision of the House is not binding on him. It is the decision of the House. I put it to the house and took the sence of the House.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಭೆ ತೀರ್ಮಾನ ತೆಗೆದುಕೊಂಡದ್ದು ನನ್ನ ಮೇಲೆ binding ಅಲ್ಲವೆಂದು ಹೇಳುವುದಿಲ್ಲ. ನಾವೂ ಸರ್ಕಾರದವರಿಗೆ ಸಹಕಾರ ಕೊಟ್ಟಿದ್ದೇವೆ. ವ್ಯವಸಾಯ ಇಲಾಖೆ, ಸಹಕಾರ ಇಲಾಖೆ, ಎಳ್.ಇ.ಎಸ್.ಇ. ಎಲ್ಲ ಹೇಗೆ ಕೆಲಸ ಮಾಡುತ್ತಿವೆ ಎನ್ನುವುದನ್ನು ಹೇಳುವುದಕೆ ನಮಗೆ ಅವಕಾಶ ಬೇಕು. ತಾವು ತೀರ್ಮಾನವಾಗಿದೆಯೆಂದು, ನಾನು ಅದಕ್ಕೇನೂ ಹೇಳುವುದಿಲ್ಲ. ಸರ್ಕಾರವನ್ನು ಕೇಳಿ ನಮಗೆ ಅವಕಾಶ ಮಾಡಿ ಕೊಡಬೇಕೆಂದು ನನ್ನ ಸೂಚನೆ.

Mr. SPEAKER.—The Members already requested me.

Sri C. J. MUCKANNAPPA.—I am making a repeated request because it may prevail on the goodself. If it does not prevail, we cannot do anything.

Mr. SPEAKER.—Kindly resume your seat. I will tell what I am doing.

Before the Minister begins, I wish to point out that one impression that the member has got that it lies in me, is not correct. It lies with the House. I asked the House and fixed it. The Ministers want three hours for the reply. How much time they are going to take for the reply? I am yet to see. There is no rule by which I can put time limit upon Minister's reply. So far as members are concerned, under the rules it is left to my discretion, that discretion I exercise after consulting the House. Beyond that, what is it that I can do?

Sri K. LAKKAPPA (Hebbur).—They are also members of the House.

Sri C. J. MUCKANNAPPA.—You could have allowed another five more members to speak. ಅದಕ್ಕೆ 15 ನಿಮಿಷ ಮಿತಿ ಇಡಿ ಎಂದು ಹೇಳಿದೆವು.....

Mr. SPEAKER.—The hon. member knows that one member suggested half-an-hour.

Sri C. J. MUCKANNAPPA.—Sri Keshavamurthy has been trying to speak for the last 10 days.

Mr. SPEAKER.—The hon. member is not entitled to point out that. Sri Keshavamurthy belongs to a Party. His Leader is sending names. So if Sri Keshavamurthy has any complaint, it is against his leader and not against the House.

Sri C. J. MUCKANNAPPA.—Why does the chair say like that.

Mr. SPEAKER.—The hon. member you referred to Sri Keshavamurthy's instance.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ನಮಗೆ ಈ ಸಭೆಯಲ್ಲಿ ಅಷ್ಟೊಂದೆ ಸ್ವಾತಂತ್ರ್ಯವಿಲ್ಲವೆ ?

Mr. SPEAKER.—One member's swatantrya cannot standing itself; it has to be co-ordinated with that of other members.

ಶ್ರೀ ಎಂ. ವಿ. ಕೃಷ್ಣಪ್ಪ.—ಪಶು ಸಂಗೋಪನೆಯ ವಿಚಾರದಲ್ಲಿ ಮಾನ್ಯ ಸದಸ್ಯರು ಒಳ್ಳೆಯ ಅಭಿಪ್ರಾಯವನ್ನೂ ಒಳ್ಳೆಯ ಸಲಹೆಗಳನ್ನೂ ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಸಮಯದಲ್ಲಿ ಮಾನ್ಯ ಸಭೆಗೆ ನನ್ನ ಪ್ರಾರ್ಥನೆ ಇಷ್ಟು: ಪಶುಪಾಲನೆ, ಪಶುಸಂಗೋಪನೆ ಬಹು ಮುಖ್ಯವಾದ ಇಲಾಖೆ. ರೈತ ದೇಶಕ್ಕೆ ಬೆನ್ನು ಮೂಳೆಯಾದರೆ ಪಶು ಸಂಗೋಪನೆ ರೈತನ ಮೂಳೆ...

Sri S. GOPALA GOWDA.—On a point of order, Sir.

Mr. SPEAKER.—Let it be a point of order and nothing else.

ಶ್ರೀ ಎಸ್. ಗೋಪಾಲಗೌಡ.—ತಾವು ಈ ಕಾಲವನ್ನು ಹಂಚುವ ವಿಷಯದಲ್ಲಿ ಸಭೆಯ ಅಭಿಪ್ರಾಯವನ್ನು ಪಡೆದು ಮಾಡುತ್ತಿರುವುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದಿರಿ. ಈ ಬೆಳಿಗ್ಗೆ ಕೂಡ ನಾನು ಸಭೆಯ ಪರವಾಗಿ ಪ್ರಾರ್ಥನೆ ಮಾಡಿಕೊಂಡೆ. ಐದು ಗಂಟೆಯತನಕ ಸದಸ್ಯರು ಭಾಷಣಗಳನ್ನು ಮಾಡುತ್ತೇವೆ; ಸರ್ಕಾರ ಎರಡು ಗಂಟೆಯ ಕಾಲ ಉತ್ತರ ಕೊಡಲಿ ಎಂದು. ಆದರೆ ತಾವು ಪುನಃ ನಾಲ್ಕು ಗಂಟೆ ಎಂದು ಗೊತ್ತುಮಾಡಿದಿರಿ. ಸಭೆ ಎಂದರೆ, ಮಂತ್ರಿಗಳು ಎಂದರೆ, ನಾನು ಒಪ್ಪುವುದಿಲ್ಲ. ಇದಕ್ಕೆ ಮೂರು ದಿವಸ ಎಂದು ಇಟ್ಟೆವು. ಆ ಮೂರು ದಿವಸದಲ್ಲಿ ಕಾರ್ಯಕ್ರಮ ಬದಲಾವಣೆಯಾಗಿದೆ. ಸಾಧ್ಯವಾದಷ್ಟು ಎಲ್ಲರಿಗೂ ಭಾಗವಹಿಸಲು ಅವಕಾಶ ದೊರೆಯುತ್ತದೆ, ಕಾರ್ಯಕ್ರಮ ಅದರಿಂದ ನಡೆಯುತ್ತದೆ ಎಂದು ಅದನ್ನೊಪ್ಪಿದೆವು. ಆದರೆ ಅದರಂತೆ ನಡೆಯದೆ ಇರುವುದರಿಂದ, ಇದು ಅಕ್ರಮ, ಸರಿಯಾದ ಕ್ರಮವಲ್ಲ. ಠರಾವನ್ನು ಮಂಡಿಸಿದವರಿಗೆ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಡಬೇಕಾಗುತ್ತದೆಂದು ನನ್ನ ಅಭಿಪ್ರಾಯ.

(Sri S. M. Krishna rose)

Mr. SPEAKER.—Is the hon. member raising a fresh point of order?

Sri S. M. KRISHNA (Maddur).—I am supporting the point of order.

Mr. SPEAKER.—There is nothing like supporting a point of order. If I want clarification I will ask for it.

ಶ್ರೀ ಎಸ್. ಎಂ. ಕೃಷ್ಣ.—ನಿನ್ನೆ ನನಗೆ ಗೊತ್ತಿರುವಂತೆ, ಈ ಸಭೆಯನ್ನು ಮುಂದುವರಿಸಿ ಐದು ಗಂಟೆಯವರೆಗೆ ಸದಸ್ಯರು ಮಾತನಾಡಬಹುದೆಂದಿದ್ದೆವು. ಆದರೆ ಈಗ ತಿಳಿಸಿರುವಂತೆ ನಾಲ್ಕು ಗಂಟೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಹೀಗೆ ನಿನ್ನೆಯ ಪ್ರಕಾರ ಐದು ಗಂಟೆಗೆ ಮಂತ್ರಿಗಳ ಉತ್ತರ ಪ್ರಾರಂಭವಾಗುತ್ತದೆಂದಿದ್ದುದು ಮತ್ತೆ ಈಗ ನಾಲ್ಕು ಗಂಟೆಗೆ ಅವರ ಉತ್ತರ ಪ್ರಾರಂಭವಾಗುತ್ತದೆಂದರೆ, ಈ ಮನೋಭಾವ ನಮ್ಮಲ್ಲಿ ಕೆಲವರಿಗೆ ವಿಸ್ಮಯವನ್ನುಂಟು ಮಾಡಿದೆ. ಆದುದರಿಂದ ದಯೆಯಿಟ್ಟು ತಾವು ಸರ್ಕಾರದ ಹಿತವನ್ನು ಕಾಪಾಡುವುದೊಂದೇ ಅಲ್ಲ, ನಮ್ಮ ಹಿತವನ್ನೂ ಕೂಡ ಇದುವರೆಗೆ ಕಾಪಾಡಿಕೊಂಡು ಬಂದಿದ್ದೀರಿ, ಇನ್ನು ಮುಂದೆ ಕೂಡ ಅದೇ ರೀತಿ ಮಾಡುತ್ತೀರಿ ಎಂಬ ನಂಬಿಕೆ ಸಹ ನಮಗಿದೆ. ತಾವು ಕೊಟ್ಟಿರುವ ರೂಲಿಂಗನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ನಾವು ಸರ್ಕಾರದಿಂದ ನಿರೀಕ್ಷೆ ಮಾಡುವುದು ಕೊಂಚಮಟ್ಟಿಗಾದರೂ ನಮ್ಮ ವಿಚಾರದಲ್ಲಿ ಸಹಾನುಭೂತಿ. ಅದನ್ನು ತೋರಿಸುವ ಮನೋಭಾವ ತಮ್ಮಲ್ಲಿದ್ದರೆ ಸಾಕು ಎಂಬುದೇ ನನ್ನ ಆಶೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು 9 ಗಂಟೆಗಳ ಕಾಲ ಮಾತನಾಡಿದ್ದಾರೆ. ಅವರು ಮಾಡಿರುವ ಆರೋಪಗಳಿಗೆ ಸರ್ಕಾರ ಉತ್ತರ ಕೊಡಬೇಕು. 3-4 ಮುಖ್ಯ ಇಲಾಖೆಗಳ ವಿಷಯದಲ್ಲಿ 4 ಮಂತ್ರಿಗಳು ಉತ್ತರ ಕೊಡಲು 3 ಗಂಟೆಯಾದರೂ ನಮಗೆ ಬೇಕು. ಚರ್ಚೆ ಮಾಡುವಾಗ ಬಯ್ದಿರುವುದಕ್ಕೆ ಉತ್ತರ ಕೊಡಬೇಕಾದ್ದು ನಮ್ಮ ಕರ್ತವ್ಯ.

Sri S. M. KRISHNA.—Sir, I take objection to that word "ಬಯ್ದಿರುವುದು"

Sri M. V. KRISHNAPPA.—If you take objection, I will withdraw that word.

Sri K. LAKKAPPA.—I rise to a point of order, Sir. ಮಾನ್ಯ ಮಂತ್ರಿಗಳು ಈ ಸಭೆಯ ಘನತೆ ಗೌರವಕ್ಕೆ ಬೆಲೆ ಕೊಡದೆ ಸದಸ್ಯರು ಬಯ್ದರೆಂದು ಹೇಳಿದರು. ನಾವೇನು ಬಯ್ದಿರುವುದು ? ಆ ರೀತಿ ಅವರು ಹೇಳಬಹುದೆ ?

Mr. SPEAKER.—The members have to raise a point of order and not pass remarks. Has the hon. member got anything to say that "ಬಯ್ದಿರುವುದು" is unparliamentary ?

Sri K. LAKKAPPA.—The Learned Speaker has several times stated that the hon'ble members must use dignified language, to maintain the dignity of the House........

Mr. SPEAKER.—I am grateful to the hon. members for having brought to my notice this fact. In fact, in the ruling that I am going to give next week, I will touch on these matters.

ಶ್ರೀ ಎಂ. ವಿ. ಕೃಷ್ಣಪ್ಪ.—'ಬಯ್ದಿರುವುದು' ಎಂದು ಹೇಳಿದ್ದು ಅನ್ ಪಾರ್ಲಿಮೆಂಟರಿಯಾದರೆ ನಾನು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಮಂತ್ರಿಗಳು ಬಯ್ದರು ಎಂದು ಹೇಳದೆ ಒಳ್ಳೆಯ ಮನೋಭಾವದಿಂದ, ಹಾಗೆ ತಿಳಿದುಕೊಳ್ಳದೆ ಉತ್ತರ ಕೊಡಬೇಕು.

Mr. SPEAKER.—I have not given my ruling on the point raised by Sri Gopala Gowda.

Sri M. V. KRISHNAPPA.—Sir, Government requires more than 2½ hours. Hon'ble Members have made criticism for a period of nine hours and to reply appropriately all the four Ministers require four hours. . . .

Sri C. J. MUCKANNAPPA.—If the Government are so serious, we are prepared to sit for another hour more.

ಶ್ರೀ ಜಿ. ವಿ. ಗೌಡ—ಸಾಮಾನ್ಯವಾಗಿ ಬೇಡಿಕೆಗಳನ್ನು ಕ್ಲಬ್ ಮಾಡುವಾಗ ಹಿಂದೆ ಬೇರೆ ರೀತಿ ಮಾಡುತ್ತಿದ್ದರು. ಪಶುಪಾಲನೆ ಮತ್ತು ವ್ಯವಸಾಯ..........

Mr. SPEAKER.—What is it that the member is saying? Is he going to give me his views or his proposal?

Sri G. V. GOWDA.—At least in the future........

Mr. SPEAKER.—Let us go through the present point.

With regard to the point raised by Sri Gopala Gowda, I do not think that there is any point of order in it. Because he is under the impression that the House agreed that the debate would go on till 5 o'clock and thereafter the Ministers would reply. My question with regard to the time that might be required by Hon'ble Ministers was a sort of tentative assessment. There cannot be a complete assessment until the debate is over. Today's debate, they could not anticipate and find out what they have to say and what they have not to say. I asked yesterday that we may apportion the time as to how much time is required for members, whether they require 20 minutes or more. Whenever it is said that a certain time is required, it is not a rigid thing, which can be taken as a term of contract and therefore binding. Yesterday, there was nothing of that type. Knowing the situation and generally assessing the sense of the House, I said at that time that we could go on till 5 P.M. That was not a ruling. I must give the Ministers a chance to reply so that anyting said against them may be defended. More or less, you have put them on the defensive. A person who is put on defence should get every opportunity to defend himself. That is an elementary principle of debate. How can I permit the suggestion that is made that we may sit for an hour more? It has come for the first time now. To say that the Ministers should not be given time, and that I should put it to them to cut down their reply—all this is not possible. This sort of a thing has not happened for the first time. Our Legislature is not new, nor is it sitting for the first time. We had all our past experience. Has there been at any time any occasion when a Minister was denied the chance to reply? To the extent that he desires, I should give him time. Again, I am very much embarassed when you say that I must be pleased to persuade the Ministers and that it is in my discretion. It is not in my discretion. The matter rests with the House and not with the Speaker. I am here to regulate the debate. If I try to be of use, it is only with a view to help the debate so that maximum utility may be had. I have absolutely no powers. My powers are zero. My discretion which is subsisting in me is really no discretion. I am not expected to participate, but in seeing that order is maintained, and that rules are observed. In the observance of the rules, I should see that no disturbance is made when a person is speaking. That is what I have been finding it difficult to enforce. And, it is due affection on my part for the members. I treat them equally as my own-brothers. It is not as if there should be no disturbance. The debate becomes lively sometimes

if there are one or two interruptions. But to degenerate to a level of this type is a thing I do not understand. I do not know why it happens. The Minister will kindly begin now.

ಶ್ರೀ ಎಂ. ವಿ. ಕೃಷ್ಣಪ್ಪ.—ಪಶುವೈದ್ಯ ಮತ್ತು ಪಶು ಸಂಗೋಪನೆ ವಿಷಯದಲ್ಲಿ ಮಾನ್ಯ ಸದಸ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ.

Sri C. J. MUCKANNAPPA.—What is a ruling Sir ?

Mr. SPEAKER.—The point of order has been ruled out.

Sri C. J. MUCKANNAPPA.—The chair did not say so.

Mr. SEPEAKER.—I said that I was unable to accept. I will now say again that there is no point of order.

ಶ್ರೀ ಎಸ್. ಗೋಪಾಲ ಗೌಡ.—ನಾವು ಕೆಲವರು ಹೆಚ್ಚುಸಲ ಈ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇವೆ. ಅದಕ್ಕೆ ಕೆಲವು ಕಾರಣಗಳಿವೆ. ನಾವು ಖೋತಾ ಸೂಚನೆಗಳನ್ನು ಕಳುಹಿಸಿರುತ್ತೇವೆ. ಆದುದರಿಂದ ಆ ವಿಷಯದ ಮೇಲೆ ಸ್ವಲ್ಪ ಹೇಳಬೇಕಾದ್ದಿರುತ್ತದೆ. ಎಲ್ಲ ವಿಷಯಗಳ ಮೇಲೂ ನಾವು ಮಾತನಾಡಬೇಕಾಗಿಲ್ಲ. ಬೇರೆಯವರು ಹೇಳಿದ್ದನ್ನು ಹೇಳಬೇಕಾದ್ದಿಲ್ಲ. ಆದರೆ ನಾವು ಹೇಳಬೇಕಾದ್ದನ್ನು ಹೇಳುವುದು ನಮ್ಮ ಕರ್ತವ್ಯ. ಅದಕ್ಕೆ ತಮ್ಮಲ್ಲಿ ಪ್ರಾರ್ಥನೆ ಮಾಡುವುದು, ಬೆಳಿಗ್ಗೆಯೇ ನಿಮ್ಮನ್ನು ಕರೆಯುತ್ತೇನೆ ಅಥವಾ ಇಲ್ಲ ಎಂದು ಸೂಚನೆ ಕೊಟ್ಟರೆ, ನಾವು ನಮ್ಮ ಇತರ ಕೆಲಸಗಳಿಗೆ ಗಮನ ಕೊಡಬಹುದು. ಇದೇ ನಾನು ತಮ್ಮಲ್ಲಿ ಮಾಡಿಕೊಳ್ಳತಕ್ಕ ಪ್ರಾರ್ಥನೆ. ಮೂರುಗಂಟೆ ಕಾಲವಿರುವಾಗ 20 ನಿಮಿಷವಾದರೂ ಕೊಡಲಿ ಎಂದು ನಾನು ಕೇಳಿದೆನೇ ಹೊರತು ಇನ್ನೇನೂ ಇಲ್ಲ. ಈಗ ಅವಕಾಶ ದೊರೆಯಲಿಲ್ಲ. ವಾಸ್ತವವಾಗಿ ಕೇಳುವಂಥಾದ್ದೇನೂ ಇಲ್ಲ. ಆದುದರಿಂದ ನಾನು ಹೊರಗೆ ಹೋಗುವುದಕ್ಕೆ ಈಗ ಅಪ್ಪಣೆ ಕೊಡಬೇಕೆಂದು ಕೇಳಿ ಹೊರಡುತ್ತೇನೆ.

Mr. SPEAKER.—Let the Hon'ble Member resume his seat.

ಶ್ರೀ ವಿ. ಎಂ. ದೇವ್.—ಹೌಸ್ ಆಫ್ ಕಾಮನ್ಸ್‌ನಲ್ಲಿ ರಾತ್ರಿಯೆಲ್ಲಾ ಕುಳಿತುಕೊಳ್ಳುತ್ತಾರೆ. ನಮಗೆ ಒಂದು ಗಂಟೆಯಾದರೂ ಜಾಸ್ತಿ ಅವಕಾಶ ಕೊಡಬೇಕು. It was unforeseen that they would begin at 4 O'clock.

Mr. SPEAKER.—I have understood the member fully—new situation—unforeseen circumstances.

ಶ್ರೀ ಎಂ. ವಿ. ಕೃಷ್ಣಪ್ಪ.—ಗೋಪಾಲನ ವಿಷಯದಲ್ಲಿ ಮಾತನಾಡುವಾಗಲಾದರೂ ಸಹ ಗೋಪಾಲಗೌಡರು ಇರಬೇಕೆಂದು ಅವರಲ್ಲಿ ಮೊದಲನೆಯದಾಗಿ ಪ್ರಾರ್ಥನೆ.

Mr. SPEAKER.—Sri Gopala Gowda observed that he would like to be told in the morning as to whether he would get a chance by the evening. Is it possible for me ?

Sri C. J. MUCKANNAPPA.—Certainly it is possible.

Mr. SPEAKER.—Do I need that interjection ?

Sri C. J. MUCKANNAPPA.—I am not here to set right the mistakes of the Speaker. There is a different place for that.

Mr. SPEAKER.—I am aware of your right to take it. I will leave it at that. You will kindly realise that when I say something if you do not have patience, I cannot possibly help. If you don't have patience, I am not permitting any interjection.

Now I said, 'it may not be possible for me'. The interjection was 'certainly, Sir'; how is it possible ? How do I know at what time the member will conclude ? How many minutes he will take ?

Sri C. J. MUCKANNAPPA.—The chair has got every right. Please do not drag me into that arena, Sir.

Mr. SPEAKER.—The member should not put that question. When Sri Gopala Gowda has said something, I am bound to answer. I am saying that Sri Gopala Gowda's idea that he will not sit down and hear the Debate is something which does not appeal to me. I would make a personal request that he should remain and see if there is anything. The other work may be important. But I say that the work of this House is also equally important. We are here as representatives discussing the budget. Therefore, I would suggest to him that he may not retire for the rest of the day.

Sri C. J. MUCKANNAPPA.—Is it the intention of the Government that we should not be given time?

Mr. SPEAKER—I have got too high a regard and too great an opinion about the intelligence of the Hon'ble Member because I know that he understands what he means.

Sri C. J. MUCKANNAPPA.—No Sir, if I had been intelligent, I would have been occupying some higher place.

Mr. SPEAKER.—Nobody will agree with the member if he says that he is not intelligent.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇಲ್ಲಿ ಬಂದಿರತಕ್ಕ ಸದಸ್ಯರು ಮಾತನಾಡುವುದಕ್ಕೆ ಅವಕಾಶವೇ ಕೊಡಬಾರದು. ಇಲ್ಲ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ನಾವು ಏನು ಬೇಕಾದರೂ ಮಾಡಬಹುದು ಎಂಬ ಸರ್ಕಾರದ ಈ ಒಂದು ಮನೋಭಾವ ಏನಿದೆ ಅದಕ್ಕೆ ವಿರುದ್ಧ...

Mr. SPEAKER.—If the Hon'ble Minister has not yielded, his continuing to speak with a loud voice will not be good. He may ask the Minister to yield.

Sri C. J. MUCKANNAPPA.—In these things, one may not be very rigid. If a particular member gets up in the house here, if you begin to say that the Minister has not yielded, what right you have got to speak and all that, it is rather difficult. Even now Sir, with a protest against the adament behaviour of the Government in shutting out the Members of this House in participating in this discussion, on the following Demands, I along with my friends stage a walk-out.

Mr. SPEAKER.—Protests are not always welcome and they may be used with greater caution.

(At this stage Sri C. J. Muckannappa, Sri Deo, Sri S. Gopala Gowda and others left the House).

ಶ್ರೀ ಎಂ. ವಿ. ಕೃಷ್ಣಪ್ಪ.—ಪಶುಪಾಲನೆ ವ್ಯವಸಾಯಗಾರರಿಂದ ಕೂಡಿರುವ ಈ ದೇಶದಲ್ಲಿ ಬಹಳ ಮುಖ್ಯವಾದುದು. ನಾನು ನೋಡಿರುವಂತೆ ಪ್ರಪಂಚದ ನಾನಾದೇಶಗಳಲ್ಲಿ, ಎಲ್ಲೆಲ್ಲಿ ವ್ಯವಸಾಯ ಮುಂದುವರಿದಿದೆಯೋ, ವ್ಯವಸಾಯವನ್ನೇ ನಂಬುವವರು ಸುಖ ಸಂತೋಷದಿಂದ ಇದ್ದಾರೊ ಅಲ್ಲೆಲ್ಲಾ ಪಶು ಸಂಪತ್ತನ್ನು ಬಹಳವಾಗಿ ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ನಮ್ಮ ದೇಶದಲ್ಲೂ ಕೂಡ ಪರದೇಶಗಳಿಗಿಂತಲೂ ಪಶುಗಳ ವಿಷಯದಲ್ಲಿ ಬಹಳ ಗೌರವದಿಂದ ಅವನ್ನು ಬೆಳೆಸಿ ಕೊಂಡು ಬಂದಿದ್ದೇವೆ. ಆದರೆ ಈ ಪಶುಗಳು ಕಾರಣಾಂತರದಿಂದ, ಈಗ ದೇಶಕ್ಕೆ ಎಷ್ಟು ಉಪಯೋಗ ಕರವಾಗಿ ಇರಬೇಕೊ ಅಷ್ಟು ಉಪಯೋಗಕರವಾಗಿ ಇಲ್ಲ ಎಂಬುದು ವ್ಯವಸಾಯಗಾರರಾದ ಮಾನ್ಯ ಸದಸ್ಯರಿಗೆ ಗೊತ್ತಿದೆ. ಪದೇ ಪದೇ ಹೇಳುತ್ತಾ ಇದ್ದೇನೆ ರೈತ ದೇಶಕ್ಕೆ ಬೆನ್ನು ಮೂಳೆ ಯಾದರೆ ರೈತನಿಗೆ ಬೆನ್ನು ಮೂಳೆ ಇದ್ದ ಹಾಗೆ ಪಶುಗಳು ಇವೆ. ಪ್ರಪಂಚದ ಯಾವ ದೇಶದಲ್ಲಿ ರೈತ ಸುಖವಾಗಿದ್ದಾನೋ ಅವನಿಗೆ ಮುಖ್ಯವಾದ ಉತ್ಪನ್ನ ಪಶುಗಳಿಂದ ಬರುತ್ತದೆ. ಈ ದೇಶ ದಲ್ಲಿ ಪಶು ಸಂಗೋಪನ ಮತ್ತು ಪಶು ವೈದ್ಯದ ವಿಷಯದಲ್ಲಿ ಆಗಾಗ್ಗೆ ಕೆಲವು ಟೀಕೆಗಳು ಬರುತ್ತಿವೆ. ರೈತನಿಗೆ ಅನುಕೂಲವಾಗುವಂತೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ

ಪರಿಣತರು, ತಜ್ಞರು ಇಲ್ಲ. ಎಂದು ಆರೋಪಣೆ ಇದೆ. ಈ ವಿಷಯದಲ್ಲಿ ಮಾನ್ಯಸದಸ್ಯರು ಅಕ್ಕರೆಯಿಂದ ಮುತುವರ್ಜಿ ವಹಿಸಿ ಮಾತನಾಡಿದುದನ್ನು ಸ್ವಾಗತಿಸುತ್ತೇನೆ. ಒಂದು ಪ್ರಾರ್ಥನೆ ಇಷ್ಟೆ. ನಮಗೆ ಎಷ್ಟು ತೊಂದರೆಗಳಿವೆ ಎಂಬುದನ್ನು ತಿಳಿದುಕೊಳ್ಳಬೇಕು. ಮನುಷ್ಯ ಸಾಮಾನ್ಯವಾಗಿ ಪಶುಗಳನ್ನು ಅನಾದರಣೆ ಮಾಡುತ್ತಾ ಬಂದಿದ್ದಾನೆ. ನಮ್ಮ ಸಂಸ್ಥಾನದ ವಿಷಯ ತೆಗೆದುಕೊಳ್ಳುವುದಾದರೆ, ಮನುಷ್ಯನಿಗಾಗಿ ವೈದ್ಯ ಇಲಾಖೆಗೆ 8 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಾ ಇದ್ದೇವೆ. ಪಶು ಸಂಗೋಪನ ಮತ್ತು ಪಶು ವೈದ್ಯ ಇಲಾಖೆಗೆ 1 ಕೋಟಿ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. 560 ಆಸ್ಪತ್ರೆಗಳು ಇವೆ. 55 full key village centres ಇವೆ. 250 sub-centres ಇವೆ. ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್ 14-15 ದೊಡ್ಡ ಫಾರಂಗಳು ಇವೆ. ಇನ್ನೂ ಅನೇಕ ಕುರಿ, ಕೋಳಿ, ಹಂದಿ ಫಾರಂಗಳು ಇವೆ. ಈ ಪಶು ವೈದ್ಯ ಇಲಾಖೆ ಎಷ್ಟು ದೊಡ್ಡದು ಎಂಬುದು ನಮಗೆ ಗೊತ್ತಿದೆ. 2 ಕೋಟಿ 30 ಲಕ್ಷ ಜನರು ಇದ್ದಾರೆ ಅಷ್ಟೇ ಹೆಚ್ಚು ಕಡಮೆ ದನಗಳೂ ಇವೆ. 2 ಕೋಟಿ 30 ಲಕ್ಷ ಜನಗಳಿಗೆ 8 ಕೋಟಿ ರೂಪಾಯಿ ಡಾಕ್ಟರೂ ಮತ್ತು ಔಷಧಿಗಳಿಗೆ ಖರ್ಚು ಮಾಡಿದರೆ 2 ಕೋಟಿ 30 ಲಕ್ಷ ಪಶುಗಳಿಗೆ 1 ಕೋಟಿ 40 ಲಕ್ಷ ರೂಪಾಯಿ ಖರ್ಚುಮಾಡುತ್ತೇವೆ. ಇದರಲ್ಲಿ ಪಶುಸಂಗೋಪನೆಯೂ ಸೇರಿಕೊಂಡಿದೆ. Breeding as well as diarying, ಆಸ್ಪತ್ರೆಗಳನ್ನು ನಡೆಸುವುದಕ್ಕೆ ತಜ್ಞರು ಇಲ್ಲ. ಅಕಸ್ಮಾತ್ತಾಗಿ ಇದ್ದರೂ ಹಣ ಇಲ್ಲದೆ ಔಷಧಿ ಇಲ್ಲ, ಸಲಕರಣೆಗಳು ಇಲ್ಲ. ಕಟ್ಟಡದ ಫಂಡೂ ಇಲ್ಲ. ವೆಟರ್ನರಿ ಇಲಾಖೆಯ ಬಜೆಟ್ ಅಂಕಿ ಅಂಶ ನೋಡಿದರೆ ಆಸ್ಪತ್ರೆ ಕಟ್ಟುವುದಕ್ಕೆ ಮೂರು ಕಾಸು ಇಲ್ಲ. ಎಷ್ಟೋ ಆಸ್ಪತ್ರೆಗಳನ್ನು ದಾನಿಗಳು ಕಟ್ಟಿಸಿದ್ದಾರೆ. ಈ ರೀತಿ ಪಶು ಅಭಿವೃದ್ಧಿಗೆ ಅನಾದರಣೆ ಮಾಡುತ್ತಾ ಬಂದದ್ದರಿಂದ 1 ಕೋಟಿ 40 ಲಕ್ಷ ರೂಪಾಯಿಗಳನ್ನು ಕೊಟ್ಟು full fledged ಆಸ್ಪತ್ರೆ ಪ್ರಾರಂಭ ಮಾಡಿ ಕೆಲಸ ಕಾರ್ಯಗಳನ್ನು ಮಾಡಿಸಿ ಎಂದರೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ಈ ರೀತಿ ನಮ್ಮ ಕಷ್ಟ ಹೋಗಲಾಡಿಸಬೇಕೆಂದೇ ಹೋಬಳಿ ಹೋಬಳಿಯಲ್ಲಿ ಪಶು ವೈದ್ಯಶಾಲೆಯನ್ನು ಮಾಡಿದ್ದೇವೆ. 460 ಪಶು ವೈದ್ಯಶಾಲೆಗಳು ನಡೆಯುತ್ತಾ ಇವೆ. ಹಣದ ಅಭಾವದಿಂದ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್‌ಗೆ ಸಾಕಾದಷ್ಟು ಸಲಕರಣೆಗಳನ್ನು ಒದಗಿಸಲು ಸಾಧ್ಯವಾಗಿಲ್ಲ. ವೆಟರ್ನರಿ ಕಾಲೇಜನ್ನು ಬಹಳ ಪುರಾತನವಾಗಿಯೇ ಸ್ಥಾಪನೆಮಾಡಿದ್ದೇವೆ. ಎಷ್ಟು ಜನ ಡಾಕ್ಟರುಗಳು ಇರಬೇಕೋ ಅಷ್ಟು ಇಲ್ಲ. ಹೋದವರ್ಷ ಇಪ್ಪತ್ತೈದು ಜನ ಗ್ರ್ಯಾಜುಯೇಟ್ಸ್ ಆಗಿದ್ದಾರೆ ಈ ವರ್ಷ 50 ಜನ ಗ್ರ್ಯಾಜುಯೇಟ್ಸ್‌ಗಳಾಗಿ ಬರುವವರಿದ್ದಾರೆ. ಇನ್ನು ಒಂದೆರಡು ವರ್ಷಗಳಲ್ಲಿ ಮೈಸೂರು ಸಂಸ್ಥಾನದಲ್ಲಿರುವ 500-600 ಎಲ್ಲಾ ಆಸ್ಪತ್ರೆಗಳಲ್ಲೂ ವೆಟರ್ನರಿ ಡಾಕ್ಟರುಗಳು ಇರುವ ಪರಿಸ್ಥಿತಿ ಬರುತ್ತದೆ ಅದರಲ್ಲಿ ಅನುಮಾನವಿಲ್ಲ. ಆದರೆ ಡಾಕ್ಟರುಗಳು ಮತ್ತು ಔಷಧಿ ಸಲಕರಣೆಗಳಿದ್ದರೂ ಕೂಡ ಒಳ್ಳೆಯ ಕಟ್ಟಡ ಕಟ್ಟಸದಿದ್ದರೆ ಈ ತೊಂದರೆ ಬಗೆಹರಿಯುವುದಿಲ್ಲ. ಸರ್ಕಾರದವರು ಹಣ ಖರ್ಚುಮಾಡಿಲ್ಲ ಎಂದು ಅಲ್ಲ; ಪೂರ್ವದಿಂದಲೂ ಎಂದರೆ ಅಶೋಕನ ಕಾಲದಿಂದಲೂ ಪಶುಗಳ ಮೇಲೆ ಅಕ್ಕರೆಯಿಂದ, ಪ್ರೇಮದಿಂದ ಹಣ ಖರ್ಚು ಮಾಡಿದ್ದರೂ ಕೂಡ ಎಷ್ಟು ಹಣ ಬೇಕೋ ಅಷ್ಟು ಇಲ್ಲದ ಕಟ್ಟಡಗಳನ್ನು ಕಟ್ಟಿಲ್ಲ. ಯಾರಾದರೂ ದಾನಿಗಳು ಮುಂದೆ ಬಂದು ಒಂದು ಮುರುಕಲು ಮನೆ ಕೊಡಬೇಕು ಅಲ್ಲಿ ಆಸ್ಪತ್ರೆ ಸ್ಥಾಪನೆ ಮಾಡಬೇಕು. ಈ ಒಂದು ಪರಿಸ್ಥಿತಿಯಲ್ಲಿ ಯಾವ ಪಕ್ಷ ಅಧಿಕಾರಿಯೇ ಆಗಲೀ ಮಂತ್ರಿಯೇ ಆಗಲೀ ಬಂದರೂ ಕೂಡ ಈ ಇಲಾಖೆಯಲ್ಲಿ ಸಾಕಾದಷ್ಟು ಹಣ ಇಲ್ಲದೆ ಸರಿಯಾಗಿ ನಡೆಸುವುದಕ್ಕಾಗುವುದಿಲ್ಲ ಎಂದು ಮೊದಲನೆಯದಾಗಿ ತಮ್ಮ ಗಮನಕ್ಕೆ ತರುತ್ತೇನೆ.

ಈ ದೇಶದಲ್ಲೂ ಬೇಕಾದಷ್ಟು ದನಗಳಿವೆ. ಒಳ್ಳೆಯ ಜಾತಿ ದನಗಳೂ ಇವೆ. ಇವುಗಳಲ್ಲಿ ಮುಖ್ಯವಾದವು ಹಳ್ಳಿಕಾರ್, ಅಮೃತಮಹಲ್ ಜಾತಿ ದನಗಳು ನಮ್ಮಲ್ಲಿವೆ. ಇನ್ನು ಉತ್ತರ ಕರ್ನಾಟಕದಲ್ಲಿ ರಾಯಚೂರು, ಬಿಜಾಪುರ, ಗುಲ್ಬರ್ಗ ಇಂತಹ ಕಡೆಗಳಲ್ಲೂ ಕಿಲಾರಿ ದೇವಣಿ ಇತ್ಯಾದಿ ಒಳ್ಳೆ ತಳಿ ದನಗಳಿರುತ್ತವೆ. ಇನ್ನು ಮಲೆನಾಡು ಪ್ರದೇಶದಲ್ಲೂ ಮಂಗಳೂರು ಪ್ರಾಂತ್ಯದಲ್ಲೂ ಮಲೆನಾಡು ಗಿಡ್ಡ ಎಂದು ಒಂದು ಜಾತಿ ದನಗಳಿರುತ್ತವೆ. ಹೀಗೆ ನಮ್ಮಲ್ಲೂ ನಾಲ್ಕೈದು ಜಾತಿಯ ಒಳ್ಳೇ ದನಗಳಿವೆ. ಆದರೆ ಇವುಗಳೆಲ್ಲ ಈಗ ಲಾಪ್‌ಸೈಡೆಡ್ ದನಗಳಾಗಿವೆ. ಆದರೆ ಇವುಗಳೆಲ್ಲ ಇಲ್ಲಿಯ ತನಕ ಕೇವಲ ಒಳ್ಳೆಯ ಹೋರಿಗಳನ್ನು ಮಾತ್ರ ಕೊಡುತ್ತಿದ್ದವು. ಆದರೆ ಅಷ್ಟು ಹೆಚ್ಚು ಹಾಲನ್ನು ಕರೆಯುತ್ತಿರಲಿಲ್ಲ. ಆದರೆ ಈಗ ಈ ದನಗಳು ಒಳ್ಳೆಯ ಹಾಲನ್ನು ಸಹ ಕೊಡುವ ಹಾಗೆ ಈ ತಳಿಯನ್ನು ಉತ್ತಮ ಮಾಡತಕ್ಕ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಈ ವಿಚಾರದಲ್ಲಿ ಈ ದಿವಸ ಕೇಂದ್ರ ಸರ್ಕಾರದವರು ಎಲ್ಲ ರಾಜ್ಯ ಸರ್ಕಾರಗಳಿಗೂ ಈ ಪಶು ವೈದ್ಯ ಶಾಲೆಗಳನ್ನು ರಿವ್ಯೂ ಮಾಡಿ ಕೇವಲ ಉತ್ತಮ ತಳಿ ಹೋರಿಗಳೊಂದನ್ನೇ ತಯಾರಿಸದೆ ಒಳ್ಳೆ ಹಾಲನ್ನೂ ಸಹ ಕೊಡತಕ್ಕಂಥ ತಳಿಗಳನ್ನು ಬೆಳೆಸಬೇಕೆಂತ ಹೇಳಿದ್ದಾರೆ. ಆದುದರಿಂದ ನಾವೀಗ ಈ ಭರದನ್ನೂ ಅಭಿವೃದ್ಧಿಗೆ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ನಾನು ಈ ಹಿಂದೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಒಂದಾವರ್ತಿ ಸ್ವಿಟ್ಸರ್‌ಲೆಂಡಿಗೆ ಹೋಗಿದ್ದಾಗ ಅಲ್ಲಿ ಒಬ್ಬ ಶ್ರೀಮಂತರ ಮನೆಯಲ್ಲಿ ಎರಡು-ಮೂರು ದಿವಸ ಉಳಿದಿದ್ದೆ. ಅವರ ಮನೆಯಲ್ಲಿ ಅಸ್ಟ್ರಿನ್ ಬ್ರೆಜಿಯರ್ ಎಂಬ ಒಂದು ಜಾತಿ ಹಸು ಇತ್ತು. ಆ ಹಸು ದಿನ ಒಂದಕ್ಕೆ 30 ಸೇರು ಹಾಲನ್ನು ಕರೆಯುತ್ತಿತ್ತು. ಆದರೆ ಅದೇ ಆಸ್ಟ್ರಿನ್ ಬ್ರೆಜಿಯರ್ ಜಾತಿ ಆಕಳು ಇಲ್ಲಿಗೆ 60-70 ವರ್ಷಗಳ ಹಿಂದೆ ಕೇವಲ ದಿನಕ್ಕೆ 2-3 ಸೇರು ಹಾಲನ್ನು ಮಾತ್ರ ಕರೆಯುತ್ತಿತ್ತಂತೆ. ಆದರೆ ಅದೇ ತಳಿ ಹಸುವನ್ನು ಈ ದಿವಸ ದಿನಕ್ಕೆ 30 ಸೇರು ಹಾಲು ಕರೆಯುವಂತೆ ಅಭಿವೃದ್ಧಿ ಮಾಡಿದ್ದಾರೆ. ಆದರೆ ಈ ದಿವಸ ನಾವಾದರೂ ನಮ್ಮ ದೇಶದಲ್ಲಿ ಈ ಮೂರನ್ನು ಅಂದರೆ Three in one ಸ್ಕೀಮನ್ನು ಜಾರಿಗೆ ತಂದು ನಮ್ಮ ಹಸುಗಳನ್ನು ಅಭಿವೃದ್ಧಿ ಮಾಡಿ, ಒಳ್ಳೇ ಹೋರಿಗಳನ್ನು ಬೆಳೆಸುವಂತೆ ಮಾಡಬೇಕೆಂತ ಇದ್ದೇವೆ.

4-30 P.M.

It should be a meniature of a Sindhri Factory. You know Sindhri factory supplies 415 lakhs tons of fertiliser. It should be a Chittaranjan factory where locomotives are manufactures. Our bullocks should be as strong as that.

ಚಿತ್ತರಂಜನಿ ಎಂತ ಲೋಕೋಮೋಟೀವ್ ರೈಲ್ವೆ ಎಂಜಿನ್‌ಗಳನ್ನು ತಯಾರಿಸುವ ಕಾರ್ಖಾನೆಯಿದೆ. ಈ ದಿವಸ ಹಿಂದೂಸ್ಥಾನದಲ್ಲಿ ರೈಲ್ವೆ ಎಂಜಿನ್‌ಗಳು ಎಷ್ಟು ಭಾರವನ್ನು ಎಳೆಯುತ್ತವೆಯೋ ಅದರ 6 ರಷ್ಟು ಗೂಡ್ಸ್‌ಗಳ ಭಾರವನ್ನು ಹಿಂದೂಸ್ಥಾನದಲ್ಲಿ ಈ ದಿವಸ ಈ ಎತ್ತುಗಳು ಎಳೆಯುತ್ತಿವೆ.

So, the idea is that our cow should be three in one:

It should be a meniature of a Sindhri factory, a Chittaranjan factory and a Aarey colony, that is, for milk.

ಹೇಗೆ ನಮ್ಮ ಹಸುಗಳು ಇನ್ನು ಮುಂದೆ ಒಂದೊಂದು ಹಸುವೂ ದಿನಕ್ಕೆ 7-8 ಸೇರು ಹಾಲು ಕರೆಯುವುದರ ಜೊತೆಗೆ ಒಳ್ಳೇ ಹೋರಿ ಕರುಗಳನ್ನು ಅಂದರೆ ರೈತನ ಕೆಲಸಕ್ಕೆ ಭದ್ರವಾಗಿರುವಂಥ ಹೋರಿಗಳನ್ನು ಮತ್ತು ರೈತನ ಬೆಳೆಗೆ ಸಾಕಾಗುವಷ್ಟು ಗೊಬ್ಬರವನ್ನು ಸಹ ಒದಗಿಸುವಂತೆ ನಮ್ಮ ತಳಿಗಳನ್ನು ಉತ್ತಮ ಮಾಡಲು ಒಂದು ಯೋಜನೆಯನ್ನು ತಯಾರಿಸಲು ನಾವೀಗ ಹೊರಟಿದ್ದೇವೆ.

ಈ ಭಾಗದಲ್ಲಿ ಈಗಾಗಲೇ ನಮ್ಮ ಕೆಲ ಕೆಲವು ಯೋಜನೆಗಳು ಅಲ್ಲಲ್ಲೇ ಸಕ್ಸಸ್ ಆಗುತ್ತಿವೆ. ಈ ದಿವಸ ಈ ಕ್ರಾಸ್‌ಬ್ರೀಡ್ ಹಸುಗಳನ್ನು ತಯಾರಿಸತಕ್ಕ ಒಂದು ದೊಡ್ಡ ಕೇಂದ್ರ ಬೆಂಗಳೂರಿನಲ್ಲಿದೆ. ಇದಕ್ಕಾಗಿ ನಾವು 8 ಗೂಳಿಗಳನ್ನು ಆರ್ಡರ್ ಮಾಡಿ ತರಿಸಿ ಆ ನಮ್ಮ ಆಡುಗೋಡಿಯಲ್ಲಿ ಇಟ್ಟಿದ್ದೇವೆ. ಈಗಾಗಲೇ ನಮ್ಮ ಬೆಂಗಳೂರಿನಲ್ಲಿ ಈ ಗೂಳಿಗಳಿಂದ ಉತ್ಪತ್ತಿಯಾದಂತ 40 ಸಾವಿರ ಕ್ರಾಸ್‌ಬ್ರೀಡ್ ಹಸುಗಳಿರುತ್ತವೆ. ಇವು ಜಾತಿಯಲ್ಲಿ ಆ ಯೂರೋಪಿನ್ ಹಸುಗಳಿದ್ದಂತೆ ಕಾಣುತ್ತಿವೆ. ಈ 40 ಸಾವಿರ ಕ್ರಾಸ್‌ಬ್ರಿಡ್ ಆಕಳುಗಳು ಈ ದಿವಸ ಬೆಂಗಳೂರಿನಲ್ಲಿ ಇಲ್ಲದೆ ಹೋಗಿದ್ದರೆ ಈ ಹತ್ತು ವರ್ಷಗಳಿಂದ ವಿಶೇಷವಾಗಿ ಬೆಳೆಯುತ್ತಿರುವ ಈ ಬೆಂಗಳೂರು ನಗರದಲ್ಲಿ ಹಾಲಿಗೆ ಬದಲು ಬರಿ ನೀರನ್ನು ಕುಡಿದುಕೊಂಡಿರಬೇಕಾಗಿತ್ತು. ಈಗಲಾದರೂ ಆ ನೀರು ಮಿಶ್ರಿತ ಹಾಲು ದೊರೆಯುತ್ತಿದೆ. ಆದರೆ ಈ ದಿವಸ ನಾವು ಈ ಆಕಳುಗಳ ತಳಿಯನ್ನು ಅಭಿವೃದ್ಧಿ ಮಾಡದೆ ನಾವು ಆ ನಮ್ಮ ಹಳ್ಳಿಕಾರ್ ದನಗಳನ್ನೇ ನಂಬಿಕೊಂಡಿದ್ದರೆ ನಮಗೆ ಏನೂ ಪ್ರಯೋಜನವಾಗುತ್ತಿರಲಿಲ್ಲ. ಈಗ ನಮ್ಮ ಮಲೆನಾಡಿನಲ್ಲಿರತಕ್ಕ ಆ ಕರುಗಳನ್ನು ಹೀಗೆ ಅಭಿವೃದ್ಧಿ ಮಾಡಬೇಕಾಗಿದೆ. ಈ ಬಗ್ಗೆ ಈಗಾಗಲೇ ಒಂದು ಯೋಜನೆ ಸಿದ್ಧವಾಗಿ ಅದು ಕೇಂದ್ರ ಸರ್ಕಾರದಿಂದಲೂ ಅಂಗೀಕಾರ ಪಡೆದಿದೆ. ಈ ದಿವಸ ಮಲೆನಾಡಿನಲ್ಲಿರತಕ್ಕ ಹಸುಗಳು ದಿನಕ್ಕೆ ಕೇವಲ 1-2 ಸೇರು ಹಾಲನ್ನು ಕರೆಯುತ್ತಿವೆ-ಅದೇ ಹೆಚ್ಚು. ಆದರೆ ಈಗಾಗಲೆ ನಾವು ಈ ಮಲೆನಾಡಿನ ಹಸುಗಳ ಅಭಿವೃದ್ಧಿಗಾಗಿ ಬೆಂಗಳೂರಿನಿಂದ ಮಂಗಳೂರಿಗೆ ಜರ್ಸಿಬುಲ್‌ಗಳಿಂದ ಉತ್ಪತ್ತಿಯಾದ ಕ್ರಾಸ್‌ಬ್ರೀಡ್ 100-150 ಹಸುಗಳನ್ನು ಕಳುಹಿಸಿದ್ದೇವೆ. ಅಲ್ಲಿಯೂ ಒಂದು ಕೇಂದ್ರವಿದೆ. ಈಗ ಆ ಹಸುಗಳು ಕರುಹಾಕಿ-ಆ ಕರುಗಳು ಮತ್ತೆ ಕರು ಹಾಕಿರುತ್ತವೆ. ಈ ಹಸುಗಳೆಲ್ಲ ಆ ಮಲೆನಾಡು ಗಿಡ್ಡದ ತಳಿಗೆ ಸೇರಿದವುಗಳಾಗಿದ್ದರೂ ದಿನಕ್ಕೆ 32 ಪೌಂಡ್ ಹಾಲು ಕೊಡುತ್ತಿವೆ. ಆದರೆ ಇದೇ ಹಸುವಿನ ತಾಯಿ ದಿನಕ್ಕೆ 3 ಪೌಂಡ್ ಹಾಲನ್ನು ಕೊಡುತ್ತಿತ್ತು. ಈ ದಿವಸ ಆ ಮಂಗಳೂರಿನಲ್ಲಿರತಕ್ಕ ಹಸುಗಳು ದಿನಕ್ಕೆ 33-34 ಪೌಂಡ್ ಹಾಲನ್ನು ಕರೆಯುತ್ತಿವೆ.

ಈಗಾಗಲೇ ಈ ಉತ್ತಮ ತಳಿ ಹಸುಗಳನ್ನಿಡಲು ಆ ಮಲೆನಾಡಿಗೆ ಸಂಬಂಧಪಟ್ಟ ಹಾಗೆ-ಹಾಸನ ಸಕಲೇಶಪುರ-ಶಿವಮೊಗ್ಗ ಮತ್ತು ಉಡುಪಿ ಈ ಸ್ಥಳಗಳಲ್ಲಿ ಸೆಂಟರುಗಳನ್ನು ತೆರೆಯಲಾಗಿದೆ. ಈ ಕೇಂದ್ರಗಳ ಸ್ಥಾಪನೆಗಾಗಿ ಕೇಂದ್ರ ಸರ್ಕಾರ ಧನ ಸಹಾಯ ನೀಡುವುದಾಗಿ ಭರವಸೆ ಕೊಟ್ಟಿದೆ. ಈ ಬಗ್ಗೆ ಒಂದು ದೊಡ್ಡ ಸ್ಕೀಮನ್ನೇ ತಯಾರಿಸಿದ್ದೇವೆ. ಅದಕ್ಕೆ ಕೇಂದ್ರ ಸರ್ಕಾರದ ಅಪ್ರೂವಲ್ ಸಹ ದೊರೆತಿದೆ. ಆ ಮಲೆನಾಡಿನಲ್ಲಿ ದನಗಳಿಗೆ ಬೇಕಾದ ಒಳ್ಳೆಯ ಹುಲ್ಲು ದೊರೆಯುತ್ತದೆ. ಆ ಹುಲ್ಲು ಬೆಳೆಸುವ ಕಾರ್ಯವನ್ನು ಸಹ ಕೈಗೊಂಡು ಇದರ ಜೊತೆಯಲ್ಲೇ ನಾವು ಅದನ್ನು ಮುಂದುವರಿಸಬೇಕೆಂದಿದ್ದೇವೆ. ನಮ್ಮಲ್ಲಿರತಕ್ಕ 23 ಕೀ ಸೆಂಟರ್ ವಿಲೇಜ್‌ಗಳಲ್ಲಿ ಈ ದಿವಸ 2 ಲಕ್ಷ ಒಳ್ಳೆ ದನಗಳನ್ನು ಹೆಚ್ಚಿಗೆ ಬೆಳೆಸಿರುತ್ತೇವೆ. ಈ ಸೆಂಟರುಗಳಲ್ಲಿ ಅಮೃತಮಹಲ್ ಮತ್ತು ದೇವಣಿ ಜಾತಿ ದನಗಳನ್ನು ಕ್ರಾಸ್‌ಬ್ರೀಡ್ ಮಾಡಿ ಮತ್ತೆ ಇವುಗಳಿಂದ 2 ಲಕ್ಷ ಕರುಗಳು ಹುಟ್ಟಿರುತ್ತವೆ. ಈ ಬಗ್ಗೆ ಈಗಾಗಲೇ 52 full-fledged artificial insemination centre ಗಳನ್ನು ಮಾಡಿರುವುದರ ಜೊತೆಗೆ 250 ಸಬ್‌ಸೆಂಟರುಗಳನ್ನು ಮಾಡಿ ಅವುಗಳಿಗೆ ಸರಬರಾಯಿ ಮಾಡಲು 100 ಬ್ರೀಡಿಂಗ್ ಬುಲ್‌ಗಳನ್ನು ತಂದಿದ್ದೇವೆ. ಒಂದು ಗೂಳಿ ನ್ಯಾಚುರಲ್ ಆಗಿ ಎಷ್ಟು ಗರ್ಭೋತ್ಪತ್ತಿ ಮಾಡಬಹುದೋ ಅಷ್ಟರಲ್ಲೇ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಪ್ರಕಾರ ಗರ್ಭದಾನ ಮಾಡಿದರೆ ಆ ಸ್ಕೀಮನ್ನೇ 10-12 ಆಕಳುಗಳಿಗೆ ಉಪಯೋಗಿಸಬಹುದೆಂದು ತಿಳಿದುಬಂದಿದೆ. ಆದುದರಿಂದ ನಾವೀಗ ಈ ಗೂಳಿಗಳನ್ನು ಸರಬರಾಯಿ ಮಾಡತಕ್ಕ ಕೆಲಸವನ್ನು ಕಡಮೆ ಮಾಡುತ್ತಿದ್ದೇವೆ. ನಾವು ಹೋದ ವರ್ಷ 10 ರೂರಲ್ ಡಿಸ್ಪೆನ್ಸರಿಗಳನ್ನು ಕೊಟ್ಟಿದ್ದೆವು. ಈ ವರ್ಷ 25 ಕೊಟ್ಟಿದ್ದೇವೆ. ಮುಂದಿನ ವರ್ಷವೂ 25-30 ಡಿಸ್ಪೆನ್ಸರಿಗಳನ್ನು ಕೊಡಬೇಕೆಂದಿದ್ದೇವೆ. ಹೀಗೆ ಎಲ್ಲ ವಿಚಾರದಲ್ಲೂ ಈ ಇಲಾಖೆಯ ಡೆವಲಪ್‌ಮೆಂಟ್ ಆಗುತ್ತಿದೆ. ಇನ್ನು ಈ ಹಸುಗಳ ತಳಿಗಳನ್ನು ಸಾಕಷ್ಟು ಅಭಿವೃದ್ಧಿ ಮಾಡಲಾಗಿದೆ. ಈ ಕಾರ್ಯ ಇನ್ನೂ ಬೆಳೆಯಬೇಕು. ಆದರೆ ಈ ದಿವಸ ಪಶುಸಂಗೋಪನ ಕಾರ್ಯದಲ್ಲಿ ತೊಡಗಿರತಕ್ಕ ಜನರಿಗೆ ಅದರಲ್ಲೂ ಹಾಲನ್ನು ಮಾರಾಟ ಮಾಡಿ ಜೀವನ ಮಾಡತಕ್ಕ ಜನರಿಗೆ ನ್ಯಾಯವಾಗಿ ಎಷ್ಟು ದುಡ್ಡು ಅವರು ಮಾರತಕ್ಕ ಹಾಲಿಗೆ ದೊರೆಯಬೇಕೋ ಅಷ್ಟು ಸರಿಯಾಗಿ ದೊರೆತರೆ ಆತನ ಕೈಲಿ ವಾರಕ್ಕೆ ಹೇಗೂ 60-70 ರೂ.ಗಳು ಓಡಾಡುವಂತಾಗುತ್ತದೆ. ಅದರಿಂದ ಆತನಿಗೂ ಒಂದು ಉತ್ಸಾಹ ಬಂದು ಅವನೂ ಸಹ ಈ ಹಸುಗಳ ಸಾಕುವಿಕೆಯಲ್ಲಿ ಸಾಕಷ್ಟು ನಿಗಾ ವಹಿಸುತ್ತಾನೆ. ಅವುಗಳಿಗೆ ಸರಿಯಾಗಿ ಹುಲ್ಲು-ಹಿಂಡಿ-ತೌಡು ಇತ್ಯಾದಿಗಳನ್ನೆಲ್ಲಾ ಹಾಕೇ ಹಾಕುತ್ತಾನೆ. ಅವುಗಳನ್ನು ಚೆನ್ನಾಗಿ ಅಭಿವೃದ್ಧಿಗೂ ತರುತ್ತಾನೆ. ಅವು ಒಳ್ಳೆಯ ಹಾಲನ್ನು ಸಹ ಕೊಡುತ್ತವೆ. ನಾವೇನೂ ಹೆಚ್ಚಿನ ಪ್ರೋತ್ಸಾಹ ಅವನಿಗೆ ಕೊಡಬೇಕಾದ್ದಿಲ್ಲ.

Dairy development ಬಹಳ ಹಿಂದೆ ಉಳಿದಿತ್ತು. ಮೈಸೂರು ಸಂಸ್ಥಾನದೊಳಗೆ ಈಗ ಒಂದು ವರ್ಷದಲ್ಲಿ ಭಾರಿ ಕೆಲಸ ನಡೆದಿದೆ. ರಾಷ್ಟ್ರದಲ್ಲಿ ಬೊಂಬಾಯಿ ಹತ್ತಿರ ಅರೇ ಕಾಲೋನಿ, ಕಲ್ಕತ್ತದಲ್ಲಿ ಅರೀನ್‌ಘಟ್ಟ ಕಾಲೋನಿ ಮತ್ತು ಮದ್ರಾಸಿನಲ್ಲಿ ಮಾದಾವರಂನಲ್ಲಿ ಕಾಲೋನಿಗಳನ್ನು ಪ್ರಾರಂಭ ಮಾಡಿದವರು ನಾವೇ. ನಾನು ಚೇರ್ಮನ್ ಆಗಿ ದೆಹಲಿಯಲ್ಲಿ ಒಂದು milk scheme ಪ್ರಾರಂಭ ಮಾಡಿದೆ. ಅದರಿಂದ ಒಂದು ದಿವಸಕ್ಕೆ ಹತ್ತು ಲಕ್ಷ ಪೌಂಡ್ ಹಾಲನ್ನು ಹಂಚುತ್ತಿದ್ದಾರೆ. ಈಗ ಬೆಂಗಳೂರು ಡೈರಿ ಸ್ಕೀಂ ತೆಗೆದುಕೊಂಡಿದ್ದೇವೆ. ಇದಕ್ಕೆ ಈಗಾಗಲೇ 60-70 ಲಕ್ಷ ರೂಪಾಯಿ ಖರ್ಚಾಗಿ ಕಟ್ಟಡ ಪೂರ್ತಿಯಾಗುವುದರಲ್ಲಿದೆ. 35 ಲಕ್ಷ ರೂಪಾಯಿ ಮೌಲ್ಯದ ಯಂತ್ರೋಪಕರಣಗಳು UNICEF ಮತ್ತು ಪ್ರಪಂಚದ ಎಲ್ಲ ಭಾಗಗಳಿಂದಲೂ ಬರುತ್ತದೆ. ಒಟ್ಟು ಒಂದೂವರೆ ಕೋಟಿ ರೂಪಾಯಿನಷ್ಟು ಬಂಡವಾಳ ಹಾಕಿ ಬೆಂಗಳೂರು ಮಿಲ್ಕ್ ಸ್ಕೀಂ ಮೂರು ನಾಲ್ಕು ತಿಂಗಳಲ್ಲಿ ಸಿದ್ಧವಾಗುತ್ತದೆ. ಬೇಸಿಗೆಯಲ್ಲಿ ಇದು ಸಿದ್ಧವಾಗುವುದರಿಂದ ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಇದರ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ನಮ್ಮ ಸ್ನೇಹಿತರಾದ ರಾಮಕೃಷ್ಣಹೆಗ್ಗಡೆಯವರ ಸಂಗಡ ಮಾತನಾಡಿ 100 Milk Producers Co-operative Societies ಪ್ರಾರಂಭ ಮಾಡಲು ವ್ಯವಸ್ಥೆ ಮಾಡಿದ್ದೇವೆ. ಇವುಗಳಿಗೆ ಒಂದೊಂದಕ್ಕೂ 60-70 ಸಾವಿರ ರೂಪಾಯಿ ಸಾಲವಾಗಿ ಕೊಡುತ್ತೇವೆ. ಇದು ಮೂರು ವರ್ಷಗಳಲ್ಲಿ ವಾಪಸ್ಸು ಕೊಡುವಂಥ medium term loan. ನಾಳೆಯ ದಿವಸ ನನ್ನ ಛೇಂಬರಿನಲ್ಲಿ ಒಂದು ಮೀಟಿಂಗ್ ಇದೆ. ಕೇಂದ್ರದ ಅಧಿಕಾರಿಗಳು ಬರುತ್ತಾರೆ, Mayor, Commissioner ಮತ್ತು ಸಂಬಂಧಪಟ್ಟ ಇಲಾಖೆಯವರೆಲ್ಲ ಬರುತ್ತಾರೆ.

ಇದಲ್ಲದೆ Milch Cattle Market ಒಂದನ್ನು ಪ್ರಾರಂಭ ಮಾಡಬೇಕೆಂಬ ಉದ್ದೇಶವಿದೆ. ಈಗ ಯಾರಾದರೂ ಹಸು ಅಥವಾ ಎಮ್ಮೆಯನ್ನು ಕೊಂಡುಕೊಳ್ಳಬೇಕಾದರೆ ಎಲ್ಲಿಗೆ ಹೋಗಬೇಕೋ ಗೊತ್ತಾಗುವುದಿಲ್ಲ. ಹಸು, ಎಮ್ಮೆ ಬೇಕಾದವರಿಗೆ ಅನುಕೂಲವಾಗುವಂತೆ ಈ ಯೋಜನೆ ಮಾಡಲಾಗಿದೆ. Milk Producers Co-operative Societies ಗಳವರು ತಮಗೆ ಹಸು, ಎಮ್ಮೆ ಬೇಕಾದರೆ ಇಲ್ಲಿಗೆ ಹೋಗಿ ಕೊಂಡುಕೊಳ್ಳಬಹುದು. ಈಗಾಗಲೇ ಮದ್ರಾಸ್ ಮತ್ತು ಬೊಂಬಾಯಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಗಳಲ್ಲಿ ಈ ತರಹ ಪದ್ಧತಿ ಇದೆ. ಈ ಮಾರುಕಟ್ಟೆಗೆ ಹೋಗಿ ಹಸು ಬೇಕು ಎಂದರೆ ಎರಡು ದಿನ ಹಾಲು ಕರೆದು ತೋರಿಸುತ್ತಾರೆ. ಅನಂತರ ದುಡ್ಡು ಕೊಟ್ಟು ತರಬಹುದು. ಇದರಲ್ಲಿ ಮೋಸಕ್ಕೆ ಅವಕಾಶವಾಗುವುದಿಲ್ಲ. ಇದರಿಂದ ಸಾಲದ ರೂಪವಾಗಿ ನಾವು ಕೊಡತಕ್ಕ 80-90 ಲಕ್ಷ ರೂಪಾಯಿ ಸದುಪಯೋಗವಾಗುತ್ತದೆ. ಇಲ್ಲದೆ ಇದ್ದರೆ ಸಾಲ ತೆಗೆದುಕೊಂಡದ್ದು ಬೇರೇ ರೀತಿಯಲ್ಲಿ ಉಪ ಯೋಗವಾಗುತ್ತದೆ.

ಹಳ್ಳಿಗಳಲ್ಲಿ ಸ್ಥಾಪಿತವಾಗುವ ಸೊಸೈಟಿಗಳಿಂದ ಬೆಳಗ್ಗೆ ಮತ್ತು ಸಾಯಂಕಾಲ-ವ್ಯಾನುಗಳು ಹೋಗುತ್ತವೆ. ಇದಕ್ಕಾಗಿ 30 ವ್ಯಾನುಗಳನ್ನು ಕೊಂಡುಕೊಳ್ಳಬೇಕಾಗಿದೆ. ಇವು ಪ್ರತಿದಿನವೂ ಬೆಳಗ್ಗೆ ಮತ್ತು ಸಂಜೆ ಹಾಲನ್ನು ಸಂಗ್ರಹಿಸಿಕೊಂಡು ಬರುತ್ತವೆ. ಬೇರೆ ಸಹಕಾರ ಸಂಘಗಳಂತೆ ಇವು ಇರುವುದಕ್ಕಾಗುವುದಿಲ್ಲ. ಪೋಸ್ಟ್ ಆಫೀಸಿಗಾದರೂ ಒಂದು ದಿವಸ ರಜ ಇರಬಹುದು. ಆದರೆ ಈ ಸೊಸೈಟಿಗಳಿಗೆ ಒಂದು ದಿವಸವೂ ರಜಾ ದೊರೆಯುವ ಹಾಗಿಲ್ಲ. They must be living societies. They must be active both in the morning and evening to collect milk. ಬೆಂಗಳೂರು ಒಂದು ಮಾಡಲ್ ಆಗಿ ಮಾಡಿಕೊಂಡು, ಅನಂತರ ಈ ಯೋಜನೆ ಯನ್ನು ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು-ಮಂಗಳೂರಿನಲ್ಲಿ ಈಗಾಗಲೇ foundation ಹಾಕಿದ್ದೇವೆ—ಗುಲ್ಬರ್ಗ, ಕೆ.ಜಿ.ಎಫ್, ಬೆಳಗಾಂವ, ಹೀಗೆ ಒಂದು ಲಕ್ಷ ಜನಸಂಖ್ಯೆಗೆ ಸಮೀಪವಿರುವ ಪಟ್ಟಣಗಳಲ್ಲಿ ಮುಂದಿನ ಮೂರು ನಾಲ್ಕು ವರ್ಷಗಳಲ್ಲಿ ಈ ತರಹ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ. ಡೈರಿ ಅಭಿವೃದ್ಧಿಯಾದರೆ ಹೆಚ್ಚು ಹಾಲು ಉತ್ಪತ್ತಿಯಾಗಿ ಜನ ಗಳಿಗೆ ಹಣ ಬರುತ್ತದೆ. 20-30 ಸೇರು ಹಾಲು ಕೊಡುವ ಹಸುವನ್ನು ಕಟುಕನೂ ಕೊಲ್ಲುವುದಿಲ್ಲ. ಅದು ಗಣಿ ಇದ್ದ ಹಾಗೆ. ಕೆಲಸಕ್ಕೆ ಬಾರದ ದನಗಳಿದ್ದರೆ, ಎಷ್ಟೇ ಪ್ರಚಾರವನ್ನು ನಾವು ಮಾಡಿ ದರೂ ಅದನ್ನು ಕೊಲ್ಲಲು ಮಾರುತಾರೆ. Therefore we must make the cow more precious. ಎಷ್ಟು ಒಳ್ಳೆಯ ಹಸುಗಳಿದ್ದರೆ, ಅದರಿಂದ ಜನಗಳಿಗೂ ಭಾರಿ ವಿಶ್ವಾಸ ಬರುತ್ತದೆ. ಈ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ಡೈರಿ ಪ್ರಾಜೆಕ್ಟ್‌ಗಳು ಚೆನ್ನಾಗಿ ನಡೆಯುತ್ತವೆ, ಅದರಲ್ಲಿ ಯಾವ ತರಹ ಅನುಮಾನಕ್ಕೂ ಅವಕಾಶವಿಲ್ಲ.

ಇನ್ನು jercy bulls ವಿಷಯ ಅನಿಮಲ್ ಹಸ್ಬೆಂಡ್ರಿ ಇಲಾಖೆಯಲ್ಲಿ ಜಗಳವಿದೆ ಎಂದು ಹೇಳಿ ದರು. ಆ ಇಲಾಖೆಯಲ್ಲಿ ಜಗಳವಿಲ್ಲವೆಂದಲ್ಲ, ಯಾವ ಇಲಾಖೆಯಲ್ಲಿ ಜಗಳವಿಲ್ಲ? ನಮ್ಮ ಮನೆಯಲ್ಲಿ ಜಗಳವಿಲ್ಲವೇ, ನಿಮ್ಮ ಮನೆಯಲ್ಲಿ ಜಗಳವಿಲ್ಲವೇ? ಹಳ್ಳಿಗಳ ಕಡೆ ಹೇಳುವಂತೆ ಒಕ್ಕಲಿಗರ ಜಗಳ, ವೈಶ್ಯರ ಜಗಳ ಎಂಬಂತಾಗಿದೆ. ಇದರಲ್ಲಿ ವ್ಯತ್ಯಾಸವೇನೆಂದರೆ ವೈಶ್ಯರಲ್ಲಿ ಜಗಳ ಬಂದಾಗ ಅವರು ಮನೆಯ ಬಾಗಿಲು ಹಾಕಿಕೊಳ್ಳುತ್ತಾರೆ. ಅವರು ಜಗಳವಾಡುವುದು ಯಾರಿಗೂ ಕೇಳಿಸುವುದಿಲ್ಲ, ತಿಳಿಯುವುದಿಲ್ಲ. ಒಕ್ಕಲಿಗರಲ್ಲಿ ಜಗಳ ಬಂದರೆ ಅವರು ಬೀದಿಗೆ ಬಂದು ಕೂಗಾಡುತ್ತಾರೆ. ಹಾಗೆಯೇ ಪಶುಸಂಗೋಪನ ಇಲಾಖೆಯಲ್ಲಿನ ಜಗಳ ಒಕ್ಕಲಿಗರ ಜಗಳದ ಹಾಗೆ ಬೀದಿಗೆ ಬಂತು, ಪ್ರಪಂಚಕ್ಕೆಲ್ಲ ತಿಳಿಯುವ ಹಾಗೆ ಆಯಿತು. ಈ ಇಲಾಖೆಯಲ್ಲಿರುವವರೆಲ್ಲ technical people. ಇವರಿಗೆ ಶಿಫಾರಸ್ಸಿನಿಂದ ಸ್ಥಾನಮಾನಗಳು ದೊರೆಯುವುದಿಲ್ಲ; ಯೋಗ್ಯತೆಯಿಂದ ದೊರೆಯುತ್ತದೆ. ಅವರೆಲ್ಲ ಏಕ್‌ದಂ ಕೆಟ್ಟುಹೋಗಿದ್ದಾರೆಂದು ಹೇಳುವುದು ಕಷ್ಟ. ರಾಜಕಾರಣಿಗಳು ಮಧ್ಯೆ ಪ್ರವೇಶಿ ಸದೆ ಹೋದರೆ ಅವರು ಸರಿಯಾಗಿ ನಡೆದುಕೊಳ್ಳುತ್ತಾರೆ.

ಜೆರ್ಸಿ ಗೂಳಿಗಳ ವಿಚಾರದಲ್ಲಿ ಒಂದು ಭ್ರಾಂತಿ ಎದ್ದ ಹಾಗೆ ಒಂದು adjournment motion ತಂದರು. ಇದು ಅವರು ಹೇಳಿದಷ್ಟು serious ಎಂದು ತಿಳಿದುಕೊಳ್ಳುವುದಿಲ್ಲ. ಇವು ಕೇಂದ್ರಸರ್ಕಾರದ್ದು.

Sri SIDDIAH KASIMATH.—The director himself has given it in the newspaper.

Sri M. V. KRISHNAPPA.—We have spent not even a single pie over the Jersey bulls. ನಾನು ಕೇಂದ್ರದಲ್ಲಿದ್ದಾಗ ಈ ಯೋಜನೆಯನ್ನು ಮಂಜೂರು ಮಾಡಿ ದವು. ಆದುದರಿಂದ ನನಗೆ ಅದರಲ್ಲಿರುವಷ್ಟು ಅಕ್ಕರೆ ಬೇರೆಯವರಿಗಿಲ್ಲ. ಪ್ರತಿಯೊಂದು ಗೂಳಿಯೂ ಕೋಟ್ಯಂತರ ರೂಪಾಯಿ ಬೆಲೆ ಇರುವಂಥವು. ಹಿಂದೆ ಎಂಟು ಗೂಳಿಗಳನ್ನು ತಂದಿದ್ದು ಅದರಿಂದ ಒಂಬತ್ತು ವರ್ಷಗಳಲ್ಲಿ 40 ಸಾವಿರ ಹಸುಗಳು ಉತ್ಪತ್ತಿಯಾದುವು. ಈಗ ಹಿಂದೂಸ್ಥಾನಕ್ಕೆ ಬಂದಂಥ ಗೂಳಿಗಳಲ್ಲಿ ನೂರು ಗೂಳಿಗಳು ನಮಗೆ ಬಂದಿವೆ, 200 ಗೂಳಿಗಳನ್ನು ಹಿಮಾಚಲ ಪ್ರದೇಶದಲ್ಲಿಟ್ಟಿದ್ದಾರೆ. ಅದರ ಬಗ್ಗೆ ನಾವು ಗಮನ ಕೊಡುವುದಿಲ್ಲವೆಂದು ತಿಳಿದುಕೊಳ್ಳಬಾರದು. It is more precious to me than any one else. ಅಮೆರಿಕದ ಒಂದೊಂದು ಫಾರಂ

ನವರೂ ಇವುಗಳನ್ನು ದಾನವಾಗಿ ಕೊಟ್ಟಿದ್ದಾರೆ. ವಿಮಾನದ ಮೂಲಕ ನೂರು ಗೂಳಿಗಳನ್ನು ತರುವಾಗ ಒಂದು ದಾರಿಯಲ್ಲಿಯೇ ಸತ್ತುಹೋಯಿತು. ಅವು ಬಹಳ poor condition ನಲ್ಲಿದ್ದುವು. ಮೇವು ತಿಂದು ಎಷ್ಟೋ ದಿನಗಳಾಗಿವೆ ಎನ್ನುವ ಹಾಗೆ ಇದ್ದವು. ನಾಲ್ಕೈದು ತಿಂಗಳಲ್ಲಿ ಬಹಳ ಚೆನ್ನಾಗಿ pik-up ಆದುವು. ಈಗ ಬಹಳ ಚೆನ್ನಾಗಿ ಬರುತ್ತಿವೆ. ಶ್ರೀ ವರ್ಮಾ ಕಾಶೀಮಠ ಅವರು ಇವುಗಳಿಗೆ rinder-pest ರೋಗ ಬಂತು ಎಂದು ಹೇಳಿದರು. ಈ ರೋಗ ಬರಬಾರದೆಂದು preventive vaccination ಮಾಡಿದೆವು. ಹಾಗೆ ವ್ಯಾಕ್ಸಿನೇಟ್ ಮಾಡಿದ ಮೇಲೆ ಅದರ ಮೈಯಲ್ಲಿ ಆ ರೋಗದ ಚಿಹ್ನೆಗಳು ಕಾಣಿಸಿದವು. When vaccinated it bring the symptomes of that disease on the body. ಅವುಗಳಿಗೆ rinder-pest ಬರಲಿಲ್ಲ. Rinder-pest has been completely eradicated from South India today after a fight lasting ten years. ಈಗ rinder-pest ಇಲ್ಲವೇ ಇಲ್ಲ; ರೋಗ ಬರಕೂಡದು ಎನ್ನುವುದಕ್ಕಾಗಿ ಇಲ್ಲಿ vaccinate ಮಾಡಿದ್ದು, ನಾವು ವ್ಯಾಕ್ಸಿನೇಷನ್ ಮಾಡಿಲ್ಲ ಇದು ಆದದ್ದು U. P. ನಲ್ಲಿ Izatnagar ಮತ್ತು ಮಂಚೇಶ್ವರದಲ್ಲಿ. ಇವೆಲ್ಲ ಅಮೆರಿಕಾದಿಂದ ಬಂದ ದನಗಳು. ನಮ್ಮ ದೇಶಕ್ಕೆ ಬಂದಾಗ ಇವು ಇಲ್ಲಿಯ ಪರಿಸ್ಥಿತಿಗೆ ಸ್ವಲ್ಪ ಕಷ್ಟವಾಗಿರಬಹುದು.

Because of long neglect, they have developed immunity from diseases. Resistance power ನಮ್ಮ ಭಾಗದ ದನಗಳಲ್ಲಿರುವಂತೆ ಈ ಅಮೆರಿಕಾದ ದನಗಳಿಗೆ ಇಲ್ಲ. They have not got resistance power. ಏನೋ ಸ್ವಲ್ಪ ವ್ಯಾಕ್ಸಿನೇಷನ್‌ನಲ್ಲಿ ಹೆಚ್ಚು ಕಡಿಮೆಯಾಗಿರಬಹುದು. ಸ್ವಲ್ಪ ಡೋಸೇಜು ವ್ಯತ್ಯಾಸವಾಗಿರಬಹುದು. ನಮ್ಮಲ್ಲೂ ಕೋಳಿಗಳಿಗೆ ವ್ಯಾಕ್ಸಿನೇಷನ್ ಮಾಡುವಾಗ ಶೇಕಡ ಹತ್ತು, ಹದಿನೈದು ಭಾಗದಷ್ಟು ಕೋಳಿಗಳು ಸತ್ತು ಹೋಗುತ್ತವೆ. ಹಿಂದೆ ಎಂ. ಪಿ. ಗಳೊಬ್ಬರಿಗೆ ಒಂದು ಪೆನ್‌ಸಿಲಿನ್ ಇಂಜಕ್ಷನ್ ಕೊಟ್ಟಾಗಲೂ ಸತ್ತು ಹೋದರು. ಹೀಗೆ ಸತ್ತುಹೋಗುತ್ತದೆ ಎಂದು ಭಾವನೆ ಮಾಡಿಕೊಳ್ಳಬೇಕಾಗಿಲ್ಲ.

They have not got resistance power. ಇದು ಒಂದು ತರದ ದೊಡ್ಡ ರೋಗ. ಇಂತಹ ರೋಗ ಬರಬಾರದು, ಬಂದಿದೆ. ಇದರಲ್ಲಿ ಇಲ್ಲಿಯವರೆಗೆ ಒಂಭತ್ತು ಮಾತ್ರ ಸತ್ತಿವೆ. ಇನ್ನು ಅರವತ್ತು ಎಪ್ಪತ್ತು ಸಾಯುವುದರಲ್ಲಿವೆ ಎಂದು ಮಾನ್ಯ ಸದಸ್ಯರು ಭಾವನೆ ಮಾಡಿಕೊಳ್ಳಬಾರದು. ಸಾಯುವುದನ್ನೇ ದೊಡ್ಡದಾಗಿಟ್ಟುಕೊಳ್ಳಬಾರದು. ಸಂಸ್ಥಾನದಲ್ಲಿ ಎಲ್ಲರೂ ಸಾಯುವುದನ್ನೇ ಜಾಸ್ತಿಯಾಗಿ ಹೇಳುತ್ತಾರೆ. ಏನೋ ದೇವರ ದಯೆಯಿಂದ ಬದುಕಲಿ ಎಂದು ಹೇಳುವುದಿಲ್ಲ ಚೆನ್ನಾಗಿದ್ದರೂ, ಚೆನ್ನಾಗಿರುವ ಮಾತನ್ನು ಹೇಳುವುದಿಲ್ಲ. ಇನ್ನು 90 ದನಗಳಿವೆ. ಅವು ಬದುಕುತ್ತವೆ ಎಂದು ನಾನು ಆಶೆ ಪಡುತ್ತೇನೆ. ಒಂಭತ್ತೇನೋ ಸತ್ತವು. ಇಲ್ಲ ಎಂದು ಹೇಳುತ್ತಿಲ್ಲ.

It is a very highly technical matter. In fact, it is a research. In a way it helps the veterinary science. ಇವಕ್ಕೆ ರೆಸಿಸ್ಟೆನ್ಸ್ ಪವರ್ ಇಲ್ಲದೇ ಹೋಗಿರಬಹುದು.

It helps the veterinary science. ಅಷ್ಟೊಂದು ದೊಡ್ಡದಾಗಿ ಇಲ್ಲಿ ರೋಗ ಬಂದಿಲ್ಲ. ಇಲ್ಲಿರುವ ಅಧಿಕಾರಿಗಳು ಈ ದನಗಳನ್ನು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಈ ಸೆಷನ್ನು ಷುರುವಾದ 22 ದಿನಗಳಲ್ಲಿ ನಾನು ನಾಲ್ಕು ಸಲ ಹೆಸರುಘಟ್ಟಕ್ಕೆ ಸರ್‌ಪ್ರೈಸ್ ಆಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಇಲ್ಲಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಅದರಲ್ಲೇನೂ ಅನುಮಾನವಿಲ್ಲ. ಇದರಲ್ಲಿ ಇನ್ನಾವುದೂ ಇಲ್ಲ. ಬೇರೆ ಇಲಾಖೆಗಳಲ್ಲಿರುವಂತೆಯೇ ಈ ಇಲಾಖೆಯಲ್ಲಿಯೂ ಐದಾರು ವರ್ಷಗಳಿಂದ ಸ್ವಲ್ಪ ಜಗಳ ಪ್ರಾರಂಭವಾಗಿತ್ತು. We will certainly try to punish those people who are responsible for it. ಯಾವ ಡಿಪಾರ್ಟುಮೆಂಟಿನಲ್ಲಿ ತಾನೇ ಜಗಳವಿಲ್ಲ. ನಾನಾಗಲೇ ಹೇಳಿದಂತೆ ವೈಶ್ಯರು ಮನೆಯೊಳಗೆ ಬಾಗಿಲು ಹಾಕಿಕೊಂಡು ಜಗಳವಾಡುತ್ತಾರೆ. ಒಕ್ಕಲಿಗರು ಹೊರಗಡೆ ನಿಂತು ಜಗಳ ಮಾಡುತ್ತಾರೆ. ಈ ಡಿಪಾರ್ಟುಮೆಂಟು ಚೆನ್ನಾಗಿ ಕೆಲಸ ಮಾಡುತ್ತಿದೆ. ನಮ್ಮಲ್ಲಿ ಅಂತಹ ಆಫೀಸರುಗಳು ಯಾರಾದರೂ ಇದ್ದರೆ ಅಂತಹ ಆಫೀಸರುಗಳಿಗೆ warning ನ್ನು ಕೊಡಬೇಕೆಂದು ನಮ್ಮ ಸೆಕ್ರೆಟರಿಗಳಿಗೂ ತಿಳಿಸಲಾಗಿದೆ. They must square up all these differences. ಇಲ್ಲದಿದ್ದರೆ ಗಂಗೆಯಲ್ಲಿ ಕೂಡ ಮೂರು ಸಲ ಮುಳುಗಿದರೂ ಗಂಗಾಮಾತೆ ಎತ್ತುತ್ತಾರಂತೆ. ಆದರೆ ನಾಲ್ಕೈದು ಸಲ ಮುಳುಗಿದರೆ ಏನೂ ಮಾಡುವುದಿಲ್ಲವಂತೆ. ಹಾಗೆ ಇಲ್ಲಿಯೂ ಮಾಡಿದರೆ they will find their own way. ಇಲಾಖೆಯಲ್ಲಿ ಕೆಲಸ ಚೆನ್ನಾಗಿಯೇ ನಡೆಯುತ್ತಿದೆ. ಇಷ್ಟು ಪಶುಸಂಗೋಪನೆ ಇಲಾಖೆಯ ಬಗ್ಗೆ ಹೇಳುತ್ತೇನೆ. ಕಡೆಯದಾಗಿ ಶ್ರೀಮಾನ್ ಮಧ್ವರಾಜ್‌ರವರು fisheries ಬಗ್ಗೆ ಒಂದು ಸಲಹೆ ಮಾಡಿದ್ದಾರೆ.

ಶ್ರೀ ಪಿ. ಎಂ. ದೇವ್.—ನೀವು ವೆಟರ್ನರಿ ಆಸ್ಪತ್ರೆಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ತೆರೆದಿದ್ದೀರಿ. ಆದರೆ ಅಲ್ಲಿರುವ ಅಧಿಕಾರಿಗಳು ಹಳ್ಳಿಗಳ ಕಡೆ ತಿರುಗಲು ಒಂದೊಂದು ಜೀಪನ್ನು ಕೊಡಬೇಕೆಂದು ಸಲಹೆ ಮಾಡಿದ್ದರೂ ತಾವೇನೂ ಅದರ ಬಗ್ಗೆ ಹೇಳಲಿಲ್ಲ. ತಾವೆಲ್ಲ ಪಟ್ಟಣದ ಕಡೆಗೆ ಗಮನ ಕೊಡುತ್ತಿದ್ದೀರೇ ಹೊರತು, ಬೇರೆ ಕಡೆ ಇರುವ ಹಳ್ಳಿಗಳ ಕಡೆಗೆ ಗಮನ ಕೊಡುತ್ತಿಲ್ಲ. ನಿಮ್ಮ ಗಮನ ಎಲ್ಲ ಕಡೆಗೂ ಇರಬೇಕು. ಹೀಗೆ ಓಡಾಡಲು ಇಲ್ಲಿನ ಭಾಗಗಳಿಗೆ ಒಂದೊಂದು ಜೀಪನ್ನು ಕೊಡುವಂತೆ ಮಾಡಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಡೈರೀ ಸ್ಕೀಮು ಬಂದಿರುವುದು ಪಟ್ಟಣಗಳಿಗೋಸ್ಕರವಲ್ಲ. ನೂರು ಸೊಸೈಟಿಗಳನ್ನು ಪಟ್ಟಣದಲ್ಲಿ ಮಾಡಿದರೆ 300 ಸೊಸೈಟಿಗಳು Rural parts ಗಳಲ್ಲೇ ಆಗುತ್ತವೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಇಷ್ಟೊಂದು ದುಡ್ಡು ಕೊಟ್ಟು ಮಾಡುತ್ತಿರುವುದು. ಬೆಂಗಳೂರಿಗೋಸ್ಕರವೇ ಎಂದು ಮಾಡುತ್ತಿಲ್ಲ. ಬೆಂಗಳೂರಿನಲ್ಲಿರುವ Dairy Scheme ultimately it helps the rural population. It is mainly for the benefit of the rural population that the milk schemes are thought of.

ಮಾನ್ಯ ಸದಸ್ಯರು ಹೇಳಿದಂತಹ ಅನೇಕ ಸಲಹೆಗಳನ್ನು ನಾವು ಪ್ರತಿಯೊಂದನ್ನೂ ನೋಡಿ ಅದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಂಡು ಮಾಡಲು ಪ್ರಯತ್ನ ಪಡುತ್ತೇವೆ.

ಕಡೆಯದಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಮಧ್ವರಾಜ್‌ರವರು fisheries ಬಗ್ಗೆ ಒಂದು ವಿಚಾರ ಹೇಳಿದರು. fisheries ಎಂದರೆ ಮೀನವನ್ ಆಗಿದ್ದದ್ದು ಈಗ ಚೆನ್ನಾಗಿ ಮಾನವನ್ ಆಗಿದೆ. ಹಿಂದೆ ಮತ್ಸ್ಯಾವತಾರ ಆಗಿದ್ದುದು ನೀರಿನಲ್ಲೇ. ಮೀನವನ್ ಆಗಿರುವುದು ಮಾನವನ್ ಆಗಿರುವಂತೆ ಉಪಯೋಗಿಸಿಕೊಳ್ಳಬೇಕಾದರೆ ಮೀನುಗಳನ್ನು Exploit ಮಾಡದೇ ಬೇರೆ ಮಾರ್ಗವಿಲ್ಲ.

Life has started from the sea. We have over-exploited the land with this huge population. ಕರಾವಳಿಯಲ್ಲಿ ಎಂದರೆ sea coast ನಲ್ಲಿ fishermen ಗಳು ಮನೆಗಳನ್ನು ಕಟ್ಟಿಕೊಂಡು ಕೆಲವರಿದ್ದಾರೆ. ಕೆಲವರು ಮನೆಗಳಿಲ್ಲದೆ ಟೆಂಟುಗಳನ್ನು ಹಾಕಿಕೊಳ್ಳಲು ಅವರಿಗೆ ಅವಕಾಶವನ್ನು ಕೊಡುತ್ತಿಲ್ಲ ಎಂದು ಹೇಳಿದರು. ರೆವಿನ್ಯೂ ಮಂತ್ರಿಯಾದುದರಿಂದ ಇಲ್ಲಿ ಭೂಮಿ ಕೊಡುವ ವಿಷಯ ಅರ್ಥಮಾಡಿಕೊಂಡಿದ್ದೇನೆ. ಈ ಜನಗಳ ತೊಂದರೆಯ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ಫೋನಿನ ಮೂಲಕ ಕೇಳಿ ವಿಚಾರಿಸಿದ್ದರಲ್ಲಿ ಇದರ ಬಗ್ಗೆ ಹಿಂದೆ ಒಂದು G. O. ಆಗಿದೆ. ಅದರಲ್ಲಿ 100 yards from the sea we should not allow any one to build anything. ಎಂದು ಹೇಳಿದಾಗ ನಾನು ಅವರಿಗೆ ಈ ರೀತಿ ಇಲ್ಲಿನ ಜನಕ್ಕೆ ತೊಂದರೆ ಮಾಡುವುದಕ್ಕಾಗುವುದಿಲ್ಲ. ಇಂತಹ ಜನ ಮೀನಿನ ಕಸಬಿನಲ್ಲಿರುವವರು ಸೌತ್ ಕೆನರಾದಲ್ಲಿದ್ದಾರೆ. ನಾರ್ತ್ ಕೆನರಾದಲ್ಲಿಯೂ ಇದ್ದಾರೆ. ಇಂತಹ ಜನಕ್ಕೆ ನೆರವಾಗುವ ರೀತಿಯಲ್ಲಿ ಅವರ ಸೌಕರ್ಯಕ್ಕೋಸ್ಕರ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಈ ಜನರು ಯಾವಾಗಲೂ ಸಮುದ್ರದ ನೀರಿನ ಮೇಲೆಯೇ ಇರುತ್ತಾರೆ. ಏನೋ ಒಂದು ನಾಲ್ಕು ತಿಂಗಳು ಕಾಲ ಮನೆಯೊಳಗೆ ಬಂದು ಇರೋಣ ಎಂದು ಮನೆಗಾಗಿ ಭೂಮಿ ಕೇಳಿದರೆ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಮೂಲಭೂತವಾದ ಹಕ್ಕನ್ನೇ ಕಿತ್ತುಕೊಂಡ ಹಾಗಾಗುತ್ತದೆ. ಈ ವಿಷಯದಲ್ಲಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ. ಇಷ್ಟನ್ನು ಹೇಳಿ ನನ್ನ ಇಲಾಖೆಗೆ ಸೇರಿದಂತೆ ಇರುವ ಒಂದು ಕೋಟಿ ನಲವತ್ತು ಮೂರು ಲಕ್ಷ ಚಿಲ್ಲರೆ ಇರುವ ಬೇಡಿಕೆಯನ್ನು ಈ ಮಾನ್ಯ ಸಭೆ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

5 P.M.

ಶ್ರೀ ಜಿ. ನಾರಾಯಣಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ವ್ಯವಸಾಯ ಇಲಾಖೆ ಬೇಡಿಕೆ ಮೇಲೆ ಮಾತನಾಡುತ್ತಾ ಮಾನ್ಯ ಸದಸ್ಯರುಗಳು ಅನೇಕ ಉಪಯುಕ್ತವಾದ ಸಲಹೆಗಳನ್ನೂ ರಚನಾತ್ಮಕವಾದ ಟೀಕೆಯನ್ನೂ ಮಾಡಿದ್ದಾರೆ. ಈ ಉಪಯುಕ್ತವಾದ ಸಲಹೆ ಮತ್ತು ರಚನಾತ್ಮಕವಾದ ಟೀಕೆ ಮಾಡಿರುವುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಅನೇಕ ಮಾನ್ಯ ಸದಸ್ಯರು ವ್ಯವಸಾಯ ಇಲಾಖೆ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಮಾತನಾಡಿದ್ದಾರೆ. ನಮ್ಮ ದೇಶ ವ್ಯವಸಾಯವೇ ಪ್ರಾಮುಖ್ಯವಾಗಿರುವ ದೇಶ. ನೂರಕ್ಕೆ 85ರಷ್ಟು ಮಂದಿ ವ್ಯವಸಾಯದಲ್ಲಿ ತೊಡಗಿರುತ್ತಾರೆ. ಹಾಗೂ ದೇಶದಲ್ಲಿ ನೂರರಲ್ಲಿ ನೂರು ಜನಕ್ಕೆ ಆಹಾರ ಒದಗಿಸಿಕೊಡುವವರಾಗಿದ್ದಾರೆ. ಆದುದರಿಂದ ಅನೇಕ ಮಾನ್ಯ ಸದಸ್ಯರು ಇದರಲ್ಲಿ ಆಸಕ್ತಿ ವಹಿಸಿ ತಮ್ಮ ಸಲಹೆಗಳನ್ನು ಕೊಟ್ಟಿರುವುದು ಬಹಳ ಶ್ಲಾಘನೀಯ. ಮೊದಲನೇ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹ ಹೆಚ್ಚು ಆಹಾರ ಉತ್ಪಾದನೆ ಮಾಡಿಲ್ಲ ಎಂದು ಕೆಲವು ಸದಸ್ಯರು ಆರೋಪಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಅಂಕಿಅಂಶಗಳನ್ನು ಕೊಟ್ಟು ಹೆಚ್ಚು ಉತ್ಪತ್ತಿಯಾಗಿದೆ

ಎನ್ನುವುದನ್ನು ಕೋರಿಸುತ್ತೇನೆ. ನಾವು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ 97, ಸಾವಿರ ಟನ್ ಉತ್ಪತ್ತಿ ಮಾಡುವ ಗುರಿ ಇಟ್ಟುಕೊಂಡಿದ್ದೆವು. ಆ ಗುರಿ ಮೀರಿ 1.5 ಲಕ್ಷ ಟನ್ ಅಷ್ಟು ನಾವು ಉತ್ಪತ್ತಿ ಮಾಡಿದ್ದೇವೆ, ಹಾಗು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 5.1 ಲಕ್ಷ ಟನ್ ಉತ್ಪಾದನೆ ಮಾಡುವ ಗುರಿ ಇಟ್ಟುಕೊಂಡಿದ್ದೆವು. ಅದಕ್ಕೆ ಮಿಗಿಲಾಗಿ 6 ಲಕ್ಷ ಟನ್ ಉತ್ಪತ್ತಿ ಮಾಡಿದ್ದೇವೆ. ಹಾಗು ಮೂರನೇ ಯೋಜನೆಯ ಮೊದಲನೇ ವರ್ಷದಲ್ಲಿ ತಮಗೆಲ್ಲರಿಗೂ ಗೊತ್ತಿರುವ ಹಾಗೆ 63,000 ಟನ್ ಹೆಚ್ಚು ಉತ್ಪತ್ತಿ ಮಾಡಿದ್ದೇವೆ. 1961-62ರಲ್ಲಿ 1.4 ಲಕ್ಷ ಟನ್ ಉತ್ಪತ್ತಿ ಆಗುವುದರಲ್ಲಿದೆ. 1962-63ನೇ ಸಾಲಿನಲ್ಲಿ 10 ಲಕ್ಷ ಟನ್‌ದಷ್ಟು ಉತ್ಪತ್ತಿ ಹೆಚ್ಚು ಮಾಡಬೇಕೆಂಬ ಗುರಿ ಇಟ್ಟುಕೊಂಡಿದ್ದೇವೆ. ಈ ಗುರಿ ಸಾಧಿಸಲು ಪ್ರಯತ್ನಪಡುತ್ತಿದ್ದೇವೆ. ಆಹಾರ ಉತ್ಪತ್ತಿ ಮಾಡುವ ವಿಷಯದಲ್ಲಿ, ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ, ಅದನ್ನು ಮಾತಿನಿಂದಾಗಲಿ, ಮಾಟದಿಂದಾಗಲಿ ಉತ್ಪತ್ತಿ ಮಾಡುವುದಕ್ಕಾಗುವುದಿಲ್ಲ. ನಾವು ಎಷ್ಟು ಶ್ರದ್ಧೆವಹಿಸಿ ದುಡಿದರೂ ಕೂಡ, ನಮಗೆ ಪ್ರಕೃತಿ ಸಹಾಯ ಬೇಕು. ಈ ಕಾರ್ಯದಲ್ಲಿ ಅನೇಕ ತೊಂದರೆಗಳಿವೆ. ಅವುಗಳನ್ನೆಲ್ಲ ನಿವಾರಿಸಿಕೊಂಡು ನಾವು ಮುಂದುವರಿದರೆ ಉತ್ಪತ್ತಿ ಕಡೆ ನಾವು ಹೋಗುವೆವು, ನಮಗೆ ಇರುವ ಭೂಮಿ, ನೀರಿನ ಸೌಕರ್ಯ ಇವುಗಳ ಮೇಲೆ ಆಹಾರ ಉತ್ಪತ್ತಿ ಅವಲಂಬಿಸಿರುತ್ತದೆ. ನಮ್ಮ ದೇಶದಲ್ಲಿರುವ ಹೆಚ್ಚು ಭೂಮಿಗೆ ನೀರಿನ ಸೌಕರ್ಯವಿಲ್ಲದ್ದರಿಂದ ಮಳೆಯ ನೀರಿನ ಆಧಾರವನ್ನು ಪಡೆದು ಆಹಾರ ಉತ್ಪತ್ತಿ ಮಾಡುತ್ತಿದ್ದೇವೆ. ಆದುದರಿಂದ ಹೆಚ್ಚು ನೀರಿನ ಸೌಲಭ್ಯ ಪಡೆದು ಅನುಕೂಲ ಮಾಡಿಕೊಡುವ ಕಡೆ ನಾವು ಗಮನ ಕೊಡಬೇಕಾಗಿದೆ. ಮಳೆಯ ಸಹಾಯವನ್ನೇ ಅವಲಂಬಿಸಿರುವ ಭೂಮಿ ಗುಂಟ ಬದು ಹಾಕಿ ನೀರು ನಿಲ್ಲುವ ಹಾಗೆ ಮಾಡಬೇಕಾದುದು ನಮ್ಮ ಕರ್ತವ್ಯ. ಈ Soil Conservation Scheme ತೆಗೆದುಕೊಂಡು ಬಂದು ಒಂದು ಲಕ್ಷ ಎಕರೆ ಭೂಮಿಯಲ್ಲಿ ಇದನ್ನು ಕಾರ್ಯಗತ ಮಾಡಿದ್ದೇವೆ. ಆದರೆ ನಾವು ಈ ಕಾರ್ಯಕ್ರಮದಲ್ಲಿ ಹೆಚ್ಚು ಯಶಸ್ಸು ಪಡೆದಿಲ್ಲ ಎಂದು ಮಾನ್ಯ ಸದಸ್ಯರಾದ ಶ್ರೀ ಸುಂಠನಕರ ಹೇಳಿದರು. ನಾನು ಅವರಿಗೆ ಹೇಳುತ್ತೇನೆ, ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸರಿಯಾಗಿ ತರಬೇತಿ ಪಡೆದ ಜನ ಇಲ್ಲದೇ ಇರುವ ಕಾರಣ ಈಗ ಅವರಿಗೆ ತರಬೇತಿಕೊಡಲು ಅಲ್ಲಲ್ಲಿ ಸ್ಕೂಲುಗಳನ್ನು ಪ್ರಾರಂಭ ಮಾಡಿ ತರಬೇತಿ ಮಾಡುತ್ತಾ ಇದ್ದೇವೆ. ಒಂದು ವರ್ಷದಲ್ಲಿ 120 ಜನ ತರಬೇತಿ ಪಡೆಯುವ ಸಂಭವವಿದೆ. ಈ ಜನ ತರಬೇತಿಯಾದ ಮೇಲೆ ನಾವು ಇದಕ್ಕೆ ಹೆಚ್ಚು ಹೆಚ್ಚಾಗಿ ಗಮನಕೊಟ್ಟು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಇವಕ್ಕಾಗಿ 2.29 ಕೋಟಿ ರೂ. ಇಟ್ಟುಕೊಂಡಿದ್ದೇವೆ. ಅದಲ್ಲದೆ ಪ್ರತಿ ವರ್ಷ ಮೂರು ಲಕ್ಷ ಎಕರೆ ಭೂಮಿಯೊಳಗೆ ಬದು ಹಾಕುವುದಕ್ಕೆ ಪ್ರಯತ್ನಪಡುತ್ತೇವೆ. ಹಾಗು ತಮಗೆಲ್ಲರಿಗೂ ಗೊತ್ತಿರುವ ಹಾಗೆ ಬರಗಾಲ ಪ್ರದೇಶದಲ್ಲಿ ಮತ್ತು ಹಿಂದುಳಿದ ಪ್ರದೇಶದಲ್ಲಿ ಈ ಯೋಜನೆಯಿಂದ ಬಹಳ ಪ್ರಯೋಜನವಾಗುತ್ತಿದೆ. ಇದನ್ನು ಹೆಚ್ಚಾಗಿ ಅಲ್ಲಲ್ಲಿ ಪ್ರಯೋಗ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ.

ಎರಡನೇದಾಗಿ ಆಹಾರ ಉತ್ಪಾದನೆಗೆ ಭೂಮಿ ಎಷ್ಟು ಪ್ರಾಮುಖ್ಯವೋ, ಹಾಗೆಯೇ ನೀರೂ ಸಹ ಅಷ್ಟೇ ಪ್ರಾಮುಖ್ಯವಾಗಿದೆ. ಮೇಜರ್ ಮತ್ತು ಮೀಡಿಯಮ್ ಇರಿಗೇಷನ್ ಪ್ರಾಜೆಕ್ಟುಗಳಿಂದ ನೀರು ಒದಗಿಸುವುದನ್ನು ಕಲ್ಪನೆ ಮಾಡಿಕೊಂಡು ಅದರಿಂದ ಎಷ್ಟು ಸಾಧ್ಯವೋ ಅಷ್ಟು ನಾವು ಆಹಾರ ಉತ್ಪತ್ತಿ ಮಾಡುವುದು ಆಗುತ್ತದೆ. ಹಾಗೆಯೇ ಮೇಜರ್ ಪ್ರಾಜೆಕ್ಟುಗಳಿಂದ ಸಹ ಎಲ್ಲ ಕಡೆಗಳಲ್ಲೂ ಸಾಧ್ಯವಿರುವವರೆಗೆ ಫೀಡರ್ ಚಾನೆಲ್ಸ್ ಮಾಡಿ ನೀರಿನ ಸೌಲಭ್ಯ ಮಾಡಿ ಕೊಡುವುದಕ್ಕೆ ಯೋಚನೆ ಮಾಡಿ 3.5 ಕೋಟಿ ರೂ. ಇದಕ್ಕೆ ಸರ್ಕಾರ ಖರ್ಚು ಮಾಡುತ್ತಿದೆ. ಇದರಿಂದ ಉಪಯೋಗವಾಗಿದೆ ಎಂದು ಮಾನ್ಯ ಮಿತ್ರರೊಬ್ಬರು ಹೇಳಿರುವುದು ಶ್ಲಾಘನೀಯವಾದುದು. ಸರ್ವೇ ಸಾಧಾರಣವಾಗಿ ಇದನ್ನು ಬಳ್ಳಾರಿ ಹತ್ತಿರ ಪ್ರಾರಂಭ ಮಾಡಿದ್ದಾರೆ. ರಾಯಚೂರು ಜಿಲ್ಲೆಯಲ್ಲಿಯೂ, ಘಟಪ್ರಭಾ ಹತ್ತಿರ ಇರುವ ಪ್ರದೇಶದಲ್ಲಿ ಸಹ ಇದನ್ನು ಪ್ರಾರಂಭ ಮಾಡುವವರಾಗಿದ್ದೇವೆ. ಮೈನರ್ ಇರಿಗೇಷನ್ ಮೂಲಕ ಬೇಕಾದಷ್ಟು ಸೌಲಭ್ಯ ಹೊಂದಿ ಆಹಾರ ಉತ್ಪತ್ತಿ ಜಾಸ್ತಿಯಾಗಿದೆ ಎಂದು ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಆಲೂರು ಹನುಮಂತಪ್ಪನವರು ತಿಳಿಸಿದ್ದಾರೆ. ಮೈನರ್ ಇರಿಗೇಷನ್ ಬಾಬಿನಲ್ಲಿ ಹಲವಾರು ವರ್ಷಗಳಿಂದ ನೀರಾವರಿ ಬಾವಿಗಳನ್ನು ಕೊಡುತ್ತಿದ್ದೇವೆ. ನೀರಾವರಿ ಬಾವಿಗಳನ್ನು ಕೊಟ್ಟು ನೀರನ್ನು ಒದಗಿಸುವುದಕ್ಕೋಸ್ಕರ ಈಗ ಪಂಪ್‌ಸೆಟ್ ಕೊಡುತ್ತಾ ಇದ್ದೇವೆ. ಹಾಗೆಯೇ ಇದಕ್ಕೆ ಇರುವ ನಿರ್ಬಂಧ, ನಿಬಂಧನೆಗಳನ್ನು ಸಡಲಿಸಿ ಕಾರ್ಯಗತ ಮಾಡುತ್ತಲಿದ್ದೇವೆ. ಸಾಧಾರಣವಾಗಿ ಮೂರನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ 30,000 ಬಾವಿಗಳನ್ನು ಕೊಡುತ್ತೇವೆ. ಈ ಯೋಜನೆ ಇದೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ನೀರಾವರಿ ಬಾವಿ ಇದ್ದುಬಿಟ್ಟರೆ ನೀರನ್ನು ಮೇಲಕ್ಕೆ ಹೇಗೆ ಎತ್ತುವುದು ಎಂಬ ಪ್ರಶ್ನೆ ರೈತರಿಗೆ ಇರುತ್ತದೆ. ಅದಕ್ಕಾಗಿಯೇ ಸರ್ಕಾರದವರು ಪಂಪ್‌ಸೆಟ್ ತಂದು ಇಟ್ಟುಕೊಳ್ಳಲು ರೈತರಿಗೆ ಸಾಲದ ರೂಪದಲ್ಲಿ ಹಣ ಒದಗಿಸುವ ಯೋಜನೆ ಮಾಡಿದೆ.

(ಶ್ರೀ ಜಿ. ನಾರಾಯಣಗೌಡ)

ಪಂಪ್‌ಸೆಟ್ಟುಗಳ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಈಗ ವಿದ್ಯುಚ್ಛಕ್ತಿಯಿಂದ ನಡೆಸಲ್ಪಡುತ್ತಿರುವ ಪಂಪ್‌ಸೆಟ್ಟುಗಳು ಮತ್ತು ಡೀಜೆಲ್ ಆಯಿಲ್‌ನಿಂದ ನಡೆಸಲ್ಪಡುತ್ತಿರುವ ಇಂಜಿನ್‌ಗಳು ಇವೆರಡನ್ನೂ ರೈತರಿಗೆ ಕೊಡುತ್ತಿದ್ದೇವೆ. ಈ ವಿಷಯದಲ್ಲಿ ನಾನು ಮಾನ್ಯ ಸದಸ್ಯರಿಗೆ ಹೇಳಬೇಕಾದರೆ ಡೀಜೆಲ್ ಇಂಜಿನ್ ಪಂಪ್‌ಸೆಟ್ಟುಗಳಿಗೋಸ್ಕರವಾಗಿ ದೇಶಾದ್ಯಂತ ನಮಗೆ 2,300 ಅರ್ಜಿಗಳು ಬಂದಿದ್ದವು. ಅದರೊಳಗೆ 592 ಡೀಜೆಲ್ ಇಂಜಿನ್‌ಗಳನ್ನು ಇದುವರೆಗೆ ನಾವು ರೈತರಿಗೆ ಸಪ್ಲೈಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಯಾವ ವರ್ಷದಲ್ಲಿ 592 ಪಂಪ್‌ಸೆಟ್ಟುಗಳನ್ನು ರೈತರಿಗೆ ಸಪ್ಲೈ ಮಾಡಿದ್ದೀರಿ ?

ಶ್ರೀ ಜಿ. ನಾರಾಯಣಗೌಡ.—ಇದೇ ವರ್ಷದಲ್ಲಿ ಸಪ್ಲೈ ಮಾಡಿದ್ದೇವೆ. ಎಲೆಕ್ಟ್ರಿಕ್ ಪಂಪ್ ಸೆಟ್ಟುಗಳನ್ನು ಸಪ್ಲೈ ಮಾಡತಕ್ಕ ವಿಚಾರ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಹಿಂದೆ ಪಂಪ್ ಸೆಟ್ಟುಗಳನ್ನು ಕೊಂಡುಕೊಳ್ಳುವುದಕ್ಕೆ ಬಹಳ ತೊಂದರೆ ಇತ್ತು. ಡಿಪಾಜಿಟ್ ಮಾಡಬೇಕಾಗಿತ್ತು. ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಮತ್ತು ಸಾಲ್ವೆನ್ಸಿ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿತ್ತು. ಇದಕ್ಕೆಲ್ಲಾ ಹಣ ಖರ್ಚಾಗುತ್ತಿತ್ತು. ರೈತ ಬಾವಿಯನ್ನು ತೆಗೆಯುವುದಕ್ಕೆ ಸಾಲ ತೆಗೆದುಕೊಳ್ಳಲು ಆಸ್ತಿಯನ್ನು ಆಧಾರಮಾಡಿ ಸಾಲವನ್ನು ತೆಗೆದುಕೊಂಡಿದ್ದರೆ, ಮತ್ತೆ ಪಂಪ್‌ಸೆಟ್ಟು ತೆಗೆದುಕೊಳ್ಳಲು ಸಾಲಕ್ಕೆ ಆಧಾರ ಮಾಡಲು ಬೇರೆ ಆಸ್ತಿ ಇಲ್ಲದಿದ್ದರೆ ಅವನು ಪಂಪ್‌ಸೆಟ್ಟನ್ನು ತೆಗೆದುಕೊಳ್ಳುವ ಹಾಗೇ ಇರಲಿಲ್ಲ. ಅಡೀಷನಲ್ ಸೆಕ್ಯೂರಿಟಿಗೆ ಯಾರೂ ಇರುತ್ತಾ ಇರಲಿಲ್ಲ. ಇದನ್ನೆಲ್ಲಾ ಸರ್ಕಾರದವರು ಯೋಚನೆ ಮಾಡಿ ಅಡೀಷನಲ್ ಸೆಕ್ಯೂರಿಟಿ ಸಹಿತ ಇಲ್ಲದೆ ಪಂಪ್‌ಸೆಟ್ಟನ್ನು ಕೊಡಬಹುದು ಎಂದು ತೀರ್ಮಾನ ಮಾಡಿ ಕಡೆಗೆ ಅವನು ಇನ್‌ಷೂರ್ ಮಾಡಿದರೆ ಅವನಿಗೆ ಪಂಪ್‌ಸೆಟ್ಟು ಕೊಡಲು ಬಾವಿ ಇದ್ದರೆ ಸಾಕು, ಅವನು ಸ್ವಂತ ಮಾಡುವ ಜಮೀನಾಗಲೀ ಅಥವಾ ಗೇಣಿಗೆ ಮಾಡುವ ಜಮೀನಾಗಲೀ ಇದ್ದರೆ ಸಾಕು, ಅಂಥವರಿಗೆಲ್ಲ ಪಂಪ್‌ಸೆಟ್ ಕೊಡಬಹುದು ಎಂದು ತೀರ್ಮಾನ ಮಾಡಿದ್ದೇವೆ. ಇನ್‌ಷೂರೆನ್ಸ್ ಪ್ರೀಮಿಯಂ ಸಹಿತ ತೀರಾ ಕಡಿಮೆ. ಎರೆಕ್ಷನ್ ಮತ್ತು ಟ್ರಾನ್ಸಿಸ್ಟ್‌ಗೆ 100 ರೂ. ಬೆಲೆ ಬಾಳುವ ಒಂದು ಪಂಪ್‌ಸೆಟ್ಟಿಗೆ 65 ನಯೇಪೈಸೆ. ಆಮೇಲೆ ಬರ್ಗ್ಲರಿ ಮತ್ತು ತಫ್ಟ್ ಇತ್ಯಾದಿ ಗಳಿಗೋಸ್ಕರ 25 ನಯೇಪೈಸೆ. ಅದರಲ್ಲಿ ಪಂಪ್‌ಸೆಟ್ಟು ಚಾವಣಿ ಇರುವ ಮನೆಯಲ್ಲಿದ್ದರೆ 25 ನಯೇಪೈಸೆ. ಚಾವಣಿ ಇಲ್ಲದೆ ಇರುವ ಮನೆಯಲ್ಲಿದ್ದರೆ 37 ನಯೇ ಪೈಸೆ ಎಂದು ಎರೆಕ್ಷನ್ ಮತ್ತು ಟ್ರಾನ್ಸಿಸ್ಟ್‌ಗೋಸ್ಕರ ಇಷ್ಟು ಇನ್‌ಷ್ಯೂರೆನ್ಸ್ ಪ್ರೀಮಿಯಮ್ ಕೊಡಬೇಕೆಂದು ಇದೆ. ರೂಲ್ಸ್‌ಗಳನ್ನು ಇಷ್ಟು ಸಡಲಿಸಿ ನಾವು ಪಂಪ್‌ಸೆಟ್ಟುಗಳನ್ನು ರೈತರಿಗೆ ಕೊಡುತ್ತಿದ್ದೇವೆ. ಏನು ಕೊಟ್ಟರೂ ಸಹ ಟೀಕೆ ಇದ್ದೇ ಇರುತ್ತದೆ.

ಇನ್ನು ಸರ್ಕಾರದವರು ಬಾವಿ ತೆಗೆಯಲು ರೈತನಿಗೆ ಸಾಲ ಕೊಟ್ಟು, ಪಂಪ್‌ಸೆಟ್ಟು ಕೊಟ್ಟು ಒಂದು ವೇಳೆ ಸರಿಯಾದ ನೀರಿನ ವಸತಿ ಇಲ್ಲದೆಹೋದರೆ, ಅದನ್ನು ಹೋಗಲಾಡಿಸಲು ಬೋರ್‌ವೆಲ್ ಸಿಸ್ಟಮ್‌ನಲ್ಲಿ ಬೇರೆ ಹಣವನ್ನು ಸ್ಯಾಂಕ್ಷನ್ ಮಾಡಬಹುದು. ಇದರಿಂದ ರೈತನಿಗೆ ಎರಡು ರೀತಿಯ ಅನುಕೂಲ ಆಗುತ್ತದೆ. ಮೊದಲನೆಯದಾಗಿ ಸರ್ವೀಸ್ ವೆಲ್ ಎಂದು ಮಾಡಿಕೊಳ್ಳಬಹುದು. ಆಮೇಲೆ ಬಾವಿ ಪ್ರಾರಂಭಮಾಡಿ ಜಲಾಧಾರಕ್ಕೆ ಕೊರತೆಬದ್ದಾಗ ಬೋರ್‌ವೆಲ್ ಮಾಡಿಕೊಳ್ಳ ಬಹುದು. ಇರುವ ಬಾವಿಗೇನೇ ಬೇರೆ ಬೋರ್‌ಮಾಡಿ ನೀರನ್ನು ಪಡೆಯಬಹುದು. ರಿಜರ್ವಾಯರ್ ಇರುತ್ತದೆ. ಅದರಿಂದ ಬೇಕಾದರೂ ಪಡೆಯಬಹುದು. ಎರಡು ಮೂರು ತರದಲ್ಲಿ ಅನುಕೂಲ ವಾಗುತ್ತದೆ. ಇದಕ್ಕೂ ಸಹಿತ 100 ಕ್ಕೆ 25 ರೂಪಾಯಿ ಸಬ್ಸಿಡಿ ಸಿಕ್ಕುತ್ತದೆ. ಇಷ್ಟು ಅನುಕೂಲ ಗಳನ್ನು ಸರ್ಕಾರದವರು ರೈತನಿಗೆ ಮಾಡಿಕೊಟ್ಟಿದ್ದಾರೆ. ಇದು ನೀರಿನ ವಸತಿಯ ವಿಷಯ ಆಯಿತು.

ಆಮೇಲೆ ಸುಧಾರಿಸಿದ ಬೀಜಗಳು ವ್ಯವಸಾಯದ ಉಪಕರಣಗಳು ಹಾಗೂ ಗೊಬ್ಬರ ಇವು ಬಹಳ ಪ್ರಾಮುಖ್ಯವಾದುವುಗಳು. ಈ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ವೆಂಕಟೇಗೌಡರು ಕೂಡ ಒಂದೊಂದು ತಾಲ್ಲೂಕಿನಲ್ಲಿ ಒಂದು ಲಕ್ಷ ಎಕರೆಗೆ ಒಂದೊಂದು ಸೀಡ್‌ಫಾರಮ್ ಮಾಡಬೇಕೆಂದು ಹೇಳಿದ್ದಾರೆ. ಆದರೆ ಇದನ್ನು ಮಾಡು ವುದು ಬಹಳ ಕಷ್ಟವಾಗಿದೆ. ಏತಕ್ಕೆಂದರೆ ಅನೇಕ ಸಂದರ್ಭಗಳಲ್ಲಿ ನಮಗೆ ಸೀಡ್‌ಫಾರಮ್ ಮಾಡುವುದಕ್ಕೆ ಉತ್ತಮವಾದ ಜಮೀನು ಸಿಕ್ಕುವುದಿಲ್ಲ. ಹೀಗೆ ನಾನಾ ಅನಾನುಕೂಲಗಳು ಇರು ತ್ತವೆ. ಎಲ್ಲೆಲ್ಲಿ ನಮಗೆ ಅನುಕೂಲಗಳು ಸಿಕ್ಕುತ್ತವೆಯೋ ಅಲ್ಲೆಲ್ಲಾ ನೋಡಿ ಸರ್ವೇ ಮಾಡಿ

ಸಾಧಾರಣವಾಗಿ ಎಲ್ಲಾ ಭಾಗಗಳಿಗೂ ಅನ್ವಯವಾಗುವ ಹಾಗೆ ಅಲ್ಲಲ್ಲೇ ಸೀಡ್ ಫಾರಮ್‌ಗಳನ್ನು ಮಾಡಿದ್ದೇವೆ. ಇಂಥಾ ಸೀಡ್ ಫಾರಮ್‌ಗಳು ಒಟ್ಟು ನಮ್ಮ ದೇಶದಲ್ಲಿ ಇವೊತ್ತಿನ ದಿವಸ 61 ಇವೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಸೀಡ್ ಫಾರಮ್‌ಗಳನ್ನು ಮಾಡುವವರಾಗಿದ್ದೇವೆ. ಇನ್ನು ಉತ್ತಮ ತಳಿ ಬೀಜಗಳನ್ನು ತಯಾರುಮಾಡುವುದಕ್ಕೆ ಸಂಶೋಧನಾಲಯಗಳು ಬಹಳ ಪ್ರಾಮುಖ್ಯವಾದುವುಗಳು. ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ಹತ್ತಿ, ಕಬ್ಬು, ರಾಗಿ, ಬತ್ತ, ಜೋಳ ಮುಂತಾದ ಅನೇಕ ಬೆಳೆಗಳಿಗೆ ಅನೇಕ ಸಂದರ್ಭಗಳಲ್ಲಿ ಬೇರೆ ಬೇರೆ ತಳಿಯನ್ನು ನಾವು ಕಂಡುಹಿಡಿಯಬೇಕಾಗುತ್ತದೆ. ಈ ತಳಿಯನ್ನು ನಾವು ಹೆಚ್ಚಿಗೆ ಮಲ್ಟಿಪ್ಲೈ ಮಾಡುವುದಕ್ಕೆ ಸೀಡ್‌ಫಾರಮ್‌ಗಳಿಗೆ ಕೊಟ್ಟರೆ ಸಾಧ್ಯವಾಗುತ್ತದೆ. ಮಾನ್ಯ ಸದಸ್ಯರು ಕೆಲವರು ಹೇಳಿದರು, ಕೆಲವು ಸಂದರ್ಭಗಳಲ್ಲಿ ಸಂಶೋಧನಾಲಯಗಳಲ್ಲಿ ಸರಿಯಾದ ತಳಿಯನ್ನು ಕಂಡುಹಿಡಿಯುತ್ತಿಲ್ಲ ಎಂದು. ಈ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಟೀಕೆಯನ್ನು ಮಾಡಿದರು. ಬಹುಶಃ ಒಂದು ಉದಾಹರಣೆ ಕೊಟ್ಟರೆ ಮಾನ್ಯ ಸದಸ್ಯರೆಲ್ಲರಿಗೂ ಅದು ವಿಶದವಾಗುತ್ತದೆ.

ಹತ್ತಿ ವಿಷಯದೊಳಗೆ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದರು. ಈಗ ಧಾರವಾಡ ಡಿಸ್ಟ್ರಿಕ್ಟ್ ಒಂದನ್ನೇ ತೆಗೆದುಕೊಂಡರೂ ಕೂಡ ಜಯಧರ ಮತ್ತು ಲಕ್ಷ್ಮಿ ಹತ್ತಿ ಬಹಳ ಶ್ರೇಷ್ಠವಾದದ್ದು. ಅದು ಒಳ್ಳೆಯ ಬೆಳೆ ಬರುತ್ತದೆ ಎಂಬುದಾಗಿ ಒಂದಾನೊಂದು ಕಾಲದಲ್ಲಿ ಕೆಲವರು ಹೇಳುತ್ತಿದ್ದರು. ಆದರೆ ಈಗ ಈ ಹತ್ತಿಯ ಬೆಳೆ ಡಿಟೇರಿಯೋರೇಟಾಗಿದೆ. ಇದರಲ್ಲಿ ಹೆಚ್ಚಿಗೆ ಬೆಳೆ ಬರುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇದಕ್ಕೆ ಅನೇಕ ಕಾರಣಗಳಿವೆ. ಈಗ ಸರ್ವೇಸಾಧಾರಣವಾಗಿ ಒಂದು ಬೆಳೆ 10 ವರ್ಷ ಚೆನ್ನಾಗಿ ಬೆಳೆಯುತ್ತದೆ. ಆಮೇಲೆ ಕುಗ್ಗುತ್ತಾ ಬರುತ್ತದೆ. ಆದ್ದರಿಂದ ಸಂಶೋಧನೆಯ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಆದ್ದರಿಂದ ಈ ಸಂಶೋಧನಾಲಯಗಳ ಕಡೆಗೂ ನಾವು ಹೆಚ್ಚು ಗಮನವನ್ನು ಕೊಡುತ್ತಿದ್ದೇವೆ.

ಮಾನ್ಯ ಸದಸ್ಯರಾದ ಶ್ರೀ ಬೊಮ್ಮಣ್ಣನವರು ಅರಸೀಕೆರೆ ವಿಷಯ ಹೇಳಿದರು. ಅಲ್ಲಿ ಬೀಜದ ತೆಂಗಿನಕಾಯಿ ಸರಿಯಾದ್ದು ಕೊಡದೆ ಅನ್ಯಾಯವಾಗಿದೆಯೆಂದು ಹೇಳಿದರು. ನನ್ನ ಗಮನಕ್ಕೆ ಬಂದಿದೆ, ನಾನು ಅನ್ಯಾಯವಾಗದ ಹಾಗೆ ನೋಡಿಕೊಳ್ಳುತ್ತೇನೆ.

ನಾವು ಬೀಜ ಕೊಡುತ್ತೇವೆ. ಬೀಜ ಕೊಟ್ಟಮೇಲೆ ಗೊಬ್ಬರದ ಪ್ರಶ್ನೆ. ಈಗ ನಮಗೆ ಗೊಬ್ಬರ ಅಂದರೆ ಕಾಂಪೋಸ್ಟ್ ಗೊಬ್ಬರ, ಹಸಿರೆಲೆ ಗೊಬ್ಬರ, ಇದರ ಜೊತೆಗೆ ಕೃತಕ ಗೊಬ್ಬರ, ಇಷ್ಟನ್ನೂ ರೈತನಿಗೆ ಕೊಡುವುದಕ್ಕೆ ಅನುಕೂಲ ಮಾಡಿದ್ದೇವೆ. ಹಸಿರೆಲೆ ಒಂದೇ ತಯಾರು ಮಾಡತಕ್ಕಂಥಾದ್ದು. ಕೃತಕ ಗೊಬ್ಬರ ಮಾತ್ರ ನಾವು ತರಿಸಿಕೊಡಬೇಕಾಗಿದೆ. ಕೃತಕ ಗೊಬ್ಬರ ಸರಿಯಾಗಿ ಸಿಗುತ್ತಾ ಇಲ್ಲ ಎಂದು ಮಾನ್ಯ ಸದಸ್ಯರು ಟೀಕೆ ಮಾಡಿದರು. ಬಹುಶಃ ಅಂಕಿ ಅಂಶಗಳನ್ನೇ ಕೊಟ್ಟರೆ ಅವರಿಗೆ ಗೊತ್ತಾಗಬಹುದು. ಕೃತಕ ಗೊಬ್ಬರ ನಮಗೆ ಇಂಡಿಯಾ ಸರ್ಕಾರದವರು ಏನು ಕಳುಹಿಸಿಕೊಡುತ್ತಾರೆಯೋ ಆ ಕೃತಕ ಗೊಬ್ಬರ ನಮ್ಮ ದೇಶಾದ್ಯಂತ ಸಾಕಾದಷ್ಟು ಪ್ರಮಾಣದಲ್ಲಿ ಆಗುತ್ತಾ ಇಲ್ಲ. ಆದ್ದರಿಂದ ನಮಗೆ ಅಲ್ಲಿ ಏನು ತಯಾರಾಗುತ್ತೋ, ಏನು ಬರಬೇಕಾಗಿತ್ತೋ, ಅದು ಬರುತ್ತಾ ಇದೆ. ಹಾಗೆಯೇ ಎರಡನೇ ಪಂಚವಾರ್ಷಿಕ ಯೋಜನೆ ಅವಧಿಯೊಳಗೆ ನಮಗೆ ಬೇಕಾದ 3,67,500 ಟನ್ನಿಗೆ ಇಂಡಿಯಾ ಸರ್ಕಾರದಿಂದ 2,04,267 ಟನ್ ಮಾತ್ರ ಬಂದಿದೆ. ಈ ವರ್ಷದಲ್ಲಿ 3,64,000 ಟನ್ನಿನಲ್ಲಿ 1,44,000 ಟನ್ ಈಗಾಗಲೇ ನಾವು ಇಂಡೆಂಟ್ ಮಾಡಿದ್ದೇವೆ; ಸ್ವಲ್ಪ ಹೆಚ್ಚು ಕಡಿಮೆ ಅದೂ ಬರಬಹುದು ಅನ್ನುವ ಆಸೆನೂ ಇದೆ. ಆದರೆ ಕೃತಕ ಗೊಬ್ಬರ ಎಷ್ಟೇ ತಯಾರಿಸಿದರೂ ಅದರ ಹಂಚಿಕೆ ಸರಿಯಾಗಿ ಆಗುತ್ತಾ ಇಲ್ಲ ಅನ್ನುವ ದೂರುಗಳಿವೆ. ಸಾಧಾರಣವಾಗಿ ಕೃತಕ ಗೊಬ್ಬರ ತರಿಸಿ State Marketing Society ಮೂಲಕವಾಗಲಿ, ಅಥವಾ Taluk Marketing Society ಮೂಲಕವಾಗಲಿ ಹಂಚುತ್ತೆ; ಅನೇಕ ಸಂದರ್ಭಗಳಲ್ಲಿ Service Co-operative Society ಗಳ ಮೂಲಕ ಹಂಚಲಾಗುತ್ತದೆ. ಕೆಲವು ಸ್ಥಳಗಳಲ್ಲಿ Service Co-operative Society ಗ್ರಾಮಾಂತರ ಪ್ರದೇಶಗಳಿಗೆ ಹಂಚಲು ಮುಂದೆ ಬರುತ್ತಾ ಇಲ್ಲ. ಇಂಥ ಸಂದರ್ಭಗಳಲ್ಲಿ Taluk Marketing Society ಗಳು ಅವರಿಗೆ ಕೊಡಬಹುದು ಅನ್ನುವ ಒಂದು ಯೋಜನೆ ಮಾಡಿದ್ದೇವೆ.

ಆಮೇಲೆ ಗೊಬ್ಬರಕ್ಕೇ ನೇರವಾಗಿ ನಾವು ಈಚೆಗೆ ಲೋನ್ ಕೊಡುವ ಒಂದು ಅವಕಾಶ, ಒಂದು ಯೋಜನೆ ಸಹಿತ ಯೋಚನೆ ಮಾಡಿದ್ದೇವೆ. ಅದನ್ನು ಕಾರ್ಯಗತ ಮಾಡಬೇಕೆಂದು ಮಾಡಿಕೊಂಡಿದ್ದೇವೆ. ಹೀಗೆ ನಮ್ಮ ಫಾರಂ ಅಥವಾ ಕಂಪೋಸ್ಟ್ ಗೊಬ್ಬರವನ್ನು ತಯಾರು ಮಾಡುವುದಕ್ಕೆ ಯಾವ ಗ್ರಾಮಪಂಚಾಯಿತಿ ಮುಂದೆ ಬರುತ್ತೋ ಅಂಥ ಗ್ರಾಮಪಂಚಾಯಿತಿಗೆ ಸ್ವಲ್ಪ ಸಹಾಯ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಿದೆ.

ಈಗ ಬೀಜದ ವಿಷಯದಲ್ಲಿ ತಾವು ಹೇಳಬಹುದು, ಅನೇಕ ಸಂದರ್ಭಗಳಲ್ಲಿ ಎಲ್ಲ ರೈತರಿಗೂ ಬೇಕಾದಷ್ಟು ಬೀಜ ಸಿಗುತ್ತಾ ಇಲ್ಲವೆಂದು. ಒಂದುವೇಳೆ ನಮ್ಮ ರಾಜ್ಯದ ರೈತರಿಗೆ ಬೇಕಾದಷ್ಟು ಬೀಜ ಇಲ್ಲದೇ ಇರಬಹುದು. ಅದನ್ನು ತಾವು ಆಲೋಚನೆ ಮಾಡಬೇಕು ಅನೇಕ ಸಂದರ್ಭಗಳಲ್ಲಿ

(ಶ್ರೀ ಜಿ. ನಾರಾಯಣಗೌಡ)

ರೈತರುಗಳು ಅದನ್ನು ಮಲ್ಟಿಪ್ಲೈ ಮಾಡಿ ಬೇರೆ ಕಡೆಗೆ ಕಳುಹಿಸುವ ಸಂದರ್ಭವೂ ಇದೆ. ರೈತರುಗಳಿಗೆ ಹಾಗೆ ಮಾಡಬೇಕೆಂದು ಹೇಳಿ ತಾವು ಸಹಾಯಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇಷ್ಟು ಎಲ್ಲಾ ಆಯಿತು—ರೈತನಿಗೆ ನೀರಿನ ವಸತಿ ಇದೆ, ಬೀಜ ಇದೆ, ಗೊಬ್ಬರ ಕೊಡುತ್ತೇವೆ. ಅವನ ಪೈರೂ ಆಯಿತು. ಆದರೆ ಆ ಪೈರಿಗೆ ರೋಗ ಬರುವ ಸನ್ನಿವೇಶ ಇದೆ. ಈ ರೋಗ ರುಜಿನಗಳ ನಿವಾರಣೆಗೋಸ್ಕರ ನಾವು ಹೆಚ್ಚುಗಮನ ಕೊಡಬೇಕಾದುದು ನಮ್ಮ ಕರ್ತವ್ಯ. ಅದಕ್ಕೋಸ್ಕರ ನಾವು ಕ್ರಿಮಿಕೀಟಗಳ ನಿಷೇಧಕ್ಕೆ ಬೇಕಾದ ಔಷದಿಗಳನ್ನೂ ಮತ್ತು ಸ್ಪ್ರೇಯರುಗಳನ್ನು, ಸಬ್‌ಸಿಡಿ ಕೊಟ್ಟು ಬಂದಂಥ ಮಾನ್ಯ ಸದಸ್ಯರು ಹತ್ತಿ ಬೆಳೆಗೆ ಅಲ್ಲಿ ಬಹಳ ಅನಾಹುತವಾಗಿದೆಯೆಂದು ಹೇಳಿದರು ನಾವು ಮೊದಲೇ ಏರಿಯಲ್ ಸ್ಪ್ರೇಯಿಂಗ್ ಮಾಡಬೇಕೆಂದು ಯೋಚನೆ ಮಾಡಿದ್ದೆವು. ಅದು ಸರ್ಕಾರದಿಂದಲೂ ಸ್ಯಾಂಕ್ಷನ್ ಆಗಿತ್ತು. ಬಹುಶಃ ಕಾರಣಾಂತರಗಳಿಂದ ಏರಿಯಲ್ ಸ್ಪ್ರೇಯಿಂಗ್ ಆಗಲಿಲ್ಲ. ಅದರ ಕಡೆಗೆ ಗಮನ ಮುಂದೆ ಕೊಡುತ್ತೇವೆಂದು ನಾನು ತಮಗೆ ಭರವಸೆ ಕೊಡುತ್ತೇನೆ.

ಹೀಗೆಯೇ ಈಗ ಪವರ್ ಸ್ಪ್ರೇಯರ್ಸ್ ಏನಿದೆ ಅವುಗಳನ್ನು ಹೆಚ್ಚಿಗೆ ತರಿಸಿಕೊಡಿ ಎಂದು ನಮ್ಮ ರೈತರು ಕೇಳುತ್ತಾ ಇದ್ದಾರೆ. ಈ ಪವರ್ ಸ್ಪ್ರೇಯರ್ಸ್ ಮತ್ತು ಡಸ್ಟರ್‌ಗಳಿಗೆ ನಮಗೆ ಫಾರಿನ್ ಎಕ್ಸ್‌ಚೇಂಜ್ ಬೇಕಾಗುತ್ತದೆ. ಆದರೂ ಡಸ್ಟರಿಗೆ ಇಂಡಿಯಾ ಸರ್ಕಾರದ ಅನುಮತಿ ಸಹಿತ ನಾವು ಕೇಳಿದ್ದೇವೆ.

ಹೀಗೆ ನಾವು ಅದನ್ನೆಲ್ಲಾ ಒಂದುವೇಳೆ ಮಾಡಿದರೂ ಸಹಿತ, ಈಗ ಏನಾಗಿದೆಯೆಂದರೆ, ನಮ್ಮ ರೈತನಿಗೆ ಅನೇಕ ಸಂದರ್ಭಗಳಲ್ಲಿ ನಾವೇ ಆಗಲಿ, ಇಲಾಖೆಯವರೇ ಆಗಲಿ, ತಾವೇ ಆಗಲಿ, ಯಾರಾದರೂ ಹೇಳಿದರೆ ಅಷ್ಟು ಬೇಗನೆ ಅದನ್ನು ಗಮನಕ್ಕೆ ತೆಗೆದುಕೊಳ್ಳುವ ಶಕ್ತಿ ಇಲ್ಲ. ಇದಕ್ಕೆ ಕಾರಣ ಅವನಿಗೆ ಹೆಚ್ಚು ವಿದ್ಯೆ ಇಲ್ಲದಿರುವುದು. ಅದಕ್ಕೋಸ್ಕರ ನಮ್ಮ ದೇಶದೊಳಗೆ ಎರಡು ಕಾಲೇಜುಗಳನ್ನು ನಡೆಸುತ್ತಾ ಇದ್ದೇವೆ. ಹಾಗೆಯೇ ಆರು ಅಗ್ರಿಕಲ್ಚರಲ್ ಸ್ಕೂಲುಗಳನ್ನು ನಾವು ನಡೆಸುತ್ತಾ ಇದ್ದೇವೆ. ಈ ಮೂರನೆಯ ಯೋಜನೆಗಳಿಗೆ ಸಹಿತ ಕೆಲವು ಸ್ಕೂಲುಗಳನ್ನು ಕೊಡಬೇಕು ಅಂತ ನಾವು ಮನಸ್ಸು ಮಾಡಿದ್ದೇವೆ. ಈ ಸ್ಕೂಲುಗಳಲ್ಲಿ ಮುಖ್ಯವಾಗಿ ರೈತರಿಗೆ ಹೆಚ್ಚು ಅವಕಾಶ ಕೊಡುವ ಸಂದರ್ಭಗಳು ಇವೆ.

ರೈತರಿಗೋಸ್ಕರವಾಗಿ ಎರಡು ಮೂರು ತಿಂಗಳು ತರಬೇತಿ ಕೊಡುವ ಟ್ರೈನಿಂಗ್ ಸೆಂಟರುಗಳನ್ನು ಏರ್ಪಡಿಸಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಈಗ ನಾನು ಹೇಳಬಹುದು, ರಾಮಕೃಷ್ಣಪುರದಲ್ಲಿ ಈಚೆಗೆ ಇಂಡಿಯಾದೇಶದ ಕೃಷಿಕ ಸಮಾಜದ ನೆರವನ್ನು ಪಡೆದು, ಹಾಗೂ ನಮ್ಮ ಸರ್ಕಾರ ಸ್ವಲ್ಪ ನೆರವು ಕೊಟ್ಟು ಒಂದು ಟ್ರೈನಿಂಗ್ ಸೆಂಟರ್ ಮಾಡಿದ್ದೇವೆ. ಇಲ್ಲಿ ಟ್ರೈನಿಂಗ್ ಸೆಂಟರಿಗೆ ಇಪ್ಪತ್ತು ಮಂದಿ ರೈತರ ಮಕ್ಕಳು ಆಗಲೇ ಬಂದಿದ್ದಾರೆ. ಅವರಿಗೆ ತಿಂಗಳಿಗೆ 30 ರೂ. ಭತ್ಯವನ್ನು ಕೊಡುತ್ತಾ ಇದ್ದೇವೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಹೀಗೆ ನಮ್ಮ ರೈತರ ವಿದ್ಯಾಭ್ಯಾಸ ಮುಂದುವರಿದರೇನೇ ನಮ್ಮಲ್ಲಿ ಆಹಾರೋತ್ಪತ್ತಿ ಕಡೆ ಹೆಚ್ಚು ಗಮನ ಕೊಡುತ್ತಾರೆ. ಕೆಲವರು ಹೇಳಿದರು; ವಿದ್ಯಾಭ್ಯಾಸ ಕೊಟ್ಟರೆ ಅನೇಕರು ನೌಕರಿಗೆ ಹೋಗುವುದಕ್ಕೆ ಪ್ರಾರಂಭ ಮಾಡುತ್ತಾರೆ, ಅದಕ್ಕೋಸ್ಕರ ಹೆಚ್ಚಿಗೆ ಈ ವಿದ್ಯಾಭ್ಯಾಸ ಬೇಕಾಗಿಲ್ಲ ಅಂತ. ಆದರೆ ಎಲ್ಲರೂ ವಿದ್ಯಾವಂತರಾದರೆ ನೌಕರಿಗೆ ಹೋಗಬೇಕು ಅನ್ನತಕ್ಕಂಥ ಹಂಬಲ ಕಡಿಮೆಯಾಗುತ್ತದೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಅದರಿಂದಲೇ, ಈ ಮಾನ್ಯ ಸಭೆಯೊಳಗೆ ನಾನು Agricul.ural University Bill ಒಂದನ್ನು ಇಂಟ್ರಡ್ಯೂಸ್ ಮಾಡಿದ್ದೇನೆ. ಅದಕ್ಕೆ ಬಹುಶಃ ತಮ್ಮೆಲ್ಲರ ಸಹಕಾರ ಇರುವುದೆಂದು ನಾನು ತಿಳಿದುಕೊಂಡಿದ್ದೇನೆ.

ಆಮೇಲೆ ನಿಮಗೆ ಅಗ್ರಿಕಲ್ಚರಲ್ ಸ್ಕೂಲುಗಳು ಆರು ಇವೆ ಅಂತ ಈಗ ನಾನು ಏನು ಹೇಳಿದ್ದೆನೋ, ಅವೂ ಅಲ್ಲದೆ, Soil management ಮತ್ತು Irrigation ನಲ್ಲಿ ತರಪೇತಿ ಕೊಡುವುದಕ್ಕೋಸ್ಕರ, ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಮೋಕವೊಳಗೆ, ರಾಯಚೂರು ಡಿಸ್ಟ್ರಿಕ್ಟಿನಲ್ಲಿ ಗಂಗಾವತಿಯಲ್ಲಿ ಬಿಜಾಪುರ ಡಿಸ್ಟ್ರಿಕ್ಟಿನಲ್ಲಿ ಮುಧೋಳನಲ್ಲಿ, ಮೂರು ಸ್ಥಳಗಳಲ್ಲಿ, ತರಪೇತಿ ಸೆಂಟರುಗಳನ್ನೂ ಸಹ ನಾವು ಏರ್ಪಾಡು ಮಾಡಿದ್ದೇವೆ.

5-30 P.M.

ಇನ್ನು ಕೆಲವು ಮಾನ್ಯ ಸದಸ್ಯರು, ಈ ಇಲಾಖೆಯೊಳಗಿನ ನೌಕರರಿಗೆ ಒಂದು ರೀತಿಯ ಅತೃಪ್ತಿ ಉಂಟಾಗಿದೆ, ಇನ್ನೂ ಸೀನಿಯಾರಿಟಿ ಪಟ್ಟಿ ತಯಾರಾಗಿಲ್ಲ ಎನ್ನುವ ವಿಷಯಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದು ಸರ್ಕಾರಕ್ಕೂ ಚೆನ್ನಾಗಿ ಗೊತ್ತಿದೆ. ಸರ್ಕಾರದವರು ಆ ಬಗ್ಗೆ

ತೀವ್ರವಾಗಿ ಆಲೋಚಿಸಿ ಬಹಳ ಬೇಗನೆ ಒಂದು ತೀರ್ಮಾನಕ್ಕೆ ಬರುತ್ತಾರೆಂಬುದು ತಮಗೆಲ್ಲರಿಗೂ ಗೊತ್ತಿದೆ. ಈ ವಿಷಯವಾಗಿ ಹೈಕೋರ್ಟಿಗೆ ರಿಟ್ ಅರ್ಜಿಗಳು ಹೋಗಿವೆ. ಆದ್ದರಿಂದ ಅದು ಹಾಗೆಯೇ ಮುಂದುವರಿಸಿಕೊಂಡು ಬಂದಿದೆ. ಆದರೂ ಕೂಡ ಈ ಬಗ್ಗೆ ಹೆಚ್ಚಿಗೆ ಗಮನ ಈ ವಿಚಾರ ವನ್ನು ಬೇಗನೆ ಬಗೆಹರಿಸುವುದಕ್ಕೆ ಕೂಡಲೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ನಾನು ಹೇಳುತ್ತೇನೆ. ಹಿಂದೆ ಬಡ್ಜೆಟ್ ಭಾಷಣದ ಮೇಲೆ ಮಾತನಾಡಿದ ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ಮತ್ತು ಶ್ರೀ ಜಿ. ಮಾದೇಗೌಡರು ಮಂಡ್ಯಾದಲ್ಲಿ ಸಾಂದ್ರ ಬೇಸಾಯ ಕ್ರಮವನ್ನೇನು ತಂದಿ ದ್ದೇವೆಯೋ ಆ ಬಗ್ಗೆ ವಿಶೇಷವಾಗಿ ಟೀಕೆ ಮಾಡಿದರು. ಅದರ ವಿಷಯ ಹೇಳುವುದು ಇಷ್ಟೇ. ನಾವು ಇಂಡಿಯಾ ಸರ್ಕಾರದ ನೆರವನ್ನು ಪಡೆದು ಸಾಧಾರಣವಾಗಿ 5 ಕೋಟಿ 61 ಲಕ್ಷ ಚಿಲ್ಲರೆ ರೂಪಾಯಿ ಗಳನ್ನು ಐದು ವರ್ಷಗಳಿಗೆ ಸಾಂದ್ರ ಬೇಸಾಯ ಅಭಿವೃದ್ಧಿಗೋಸ್ಕರವಾಗಿ ಅವರಿಂದ ತೆಗೆದುಕೊಂಡಿ ದ್ದೇವೆ. ಈ ವಿಚಾರ ತಮಗೆಲ್ಲರಿಗೂ ಗೊತ್ತಿದೆ. ಅವರಿಗೂ ಗೊತ್ತು. ಆ ಒಂದು ಯೋಜನೆ ಈಗ ತಾನೇ ಪ್ರಾರಂಭವಾಗಿದೆ, ಇನ್ನೂ ಮುಂದೆ ನೋಡೋಣ ಎಂಬ ವಿಷಯವನ್ನು ಹೇಳಿದರು. ಇದ ರಿಂದ ಏನು ಭಾವನೆ ಬಂದಿದೆ ಎಂದರೆ ಅಧಿಕಾರಿಗಳು ಅಲ್ಲಿ ಹೋಗಿ ಎಲ್ಲಾ ಅವರೇ ಕೆಲಸ ಮಾಡಿ ರೈತನ ಮನೆ ಬಾಗಿಲಿಗೆ ಅಥವಾ ಅವನು ಇದ್ದ ಕಡೆ ಆಹಾರ ಪದಾರ್ಥಗಳನ್ನು ಸೇರಿಸುವ ವ್ಯವಸ್ಥೆ ಮಾಡಬೇಕು ಎಂಬುದಾಗಿ ಅವರು ಮಾತನಾಡಿದ ಹಾಗೆ ಹೇಳಿದರು. ಪ್ಯಾಕೇಜ್ ಡೀಲ್ ಪ್ರೋಗ್ರಾಂ ಮುಖ್ಯವಾಗಿ ಅವನು ಹೆಚ್ಚು ಬೆಳೆಯುವುದಕ್ಕೆ ಅವಕಾಶವಾಗಲಿ ಎಂದು ಮಾಡಿದ್ದು. ಆದ್ದರಿಂದ ಅವನಿಗೆ ಫರ್ಟಿಲೈಜರ್ಸ್‌ನ್ನು ಹೆಚ್ಚಿಗೆ ಸರಬರಾಜು ಮಾಡಬೇಕು. ಸುಧಾರಿಸಿದ ಬೀಜ ಮತ್ತು ಸುಧಾರಿಸಿದ ಸಲಕರಣೆಗಳು ಮತ್ತು ಟೆಕ್ನಿಕಲ್ ನೋ-ಹೌ ಅವರ ಸಹಾಯ ಇವೆಲ್ಲಾ ಕೊಡುವುದ ಕ್ಕೋಸ್ಕರ ಸರ್ಕಾರ ಹೆಚ್ಚು ಪ್ರಯತ್ನ ಮಾಡುತ್ತಿದೆ. ಇದರಿಂದ ಹೆಚ್ಚಿಗೆ ಆಹಾರೋತ್ಪತ್ತಿ ಮಾಡಲಿ ಎಂಬುದೇ ಸರ್ಕಾರದ ಧ್ಯೇಯ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸಭೆಯ ಮುಂದೆ ಹೇಳಬೇಕಾಗಿದೆ. ಈಗ ಮಂಡ್ಯಾ ಜಿಲ್ಲೆಯಲ್ಲಿ ಪ್ರಾರಂಭವಾಗಿರುವ ಐದು ವರ್ಷ ಗಳ ಏನೊಂದು ಯೋಜನೆ ಹಾಕಿದ್ದರೋ ಅದನ್ನು ಸರ್ವೆ ಸಾಧಾರಣವಾಗಿ ನಾಲ್ಕು ವರ್ಷಗಳಿಗೆ ಇಳಿಸಿದ್ದೇವೆ. ಏಕೆಂದರೆ ಮೊದಲನೆ ವರ್ಷ ಮತ್ತು ಎರಡನೆ ವರ್ಷ ಶೇ. 20 ರಷ್ಟು ಕವರ್ ಮಾಡಿ ದರೆ ಸಾಕು ಎಂದು ಮಾಡಿದ್ದವು. ಆ ಮೇಲೆ 3—4—5 ನೇ ವರ್ಷಗಳಲ್ಲಿ ಶೇ. 65 ರವರೆಗೂ ಹೋಗುತ್ತೇವೆಂದು ಅಂದು ಕೊಂಡೆವು. ಆದರೆ ಈಗ ಮೊದಲನೇ ವರ್ಷದಲ್ಲಿ ಕೆಲಸ ನಡೆದಿರುವು ದನ್ನು ನೋಡಿದರೆ ಎರಡು ವರ್ಷಗಳಲ್ಲಿ ಶೇ. 20 ರಷ್ಟು ಕವರ್ ಆಗಬೇಕಾದ್ದುದು ಮೊದಲನೇ ವರ್ಷದಲ್ಲಿ ಕವರ್ ಆಗಿದೆ. 1963—64 ನೇ ಸಾಲಿನೊಳಗೆ ಶೇ. 60 ಭಾಗದಷ್ಟು ಕವರ್ ಮಾಡಿ 3-4 ನೇ ವರ್ಷದಲ್ಲಿಯೇ ನೂರಕ್ಕೆ ನೂರರಷ್ಟು ಕವರ್ ಮಾಡುವ ಒಂದು ಯೋಜನೆಯನ್ನು ಇಟ್ಟುಕೊಂಡಿ ದ್ದೇವೆ. ನನಗೆ ಆ ಒಂದು ನಂಬಿಕೆ ಇದೆ. ಏಕೆಂದರೆ ಸ್ಟೇಟ್ ಲೆವಲ್‌ನೊಳಗೆ ಒಂದು ಕೋ-ಆರ್ಡಿ ನೇಷನ್ ಕಮಿಟಿ ಇದೆ. ಜಿಲ್ಲಾ ಲೆವಲ್‌ನಲ್ಲಿ ಒಂದು ಕೋ-ಆರ್ಡಿನೇಷನ್ ಕಮಿಟಿ ಇದೆ. ಇದರಲ್ಲಿ ಜಿಲ್ಲಾ ಮತ್ತು ತಾಲ್ಲೂಕ್ ಬೋರ್ಡ್ ಅಧ್ಯಕ್ಷರು, ಸದಸ್ಯರು ಇದ್ದಾರೆ. ಅಸೆಂಬ್ಲಿ ಮತ್ತು ಕೌನ್ಸಿ ಲ್ಲಿನ ಮಾನ್ಯ ಸದಸ್ಯರುಗಳು ಅದಕ್ಕೆ ಪರ್ಮನೆಂಟ್ invitees ಆಗಿದ್ದಾರೆ. ಬಹುಶಃ ಅನೇಕ ಸಂದರ್ಭಗಳಲ್ಲಿ ಅವರು ಸಲಹೆ ಕೊಡಬಹುದು. ಅವರ ಸಲಹೆ ತೆಗೆದುಕೊಂಡು ಅದರ ಬೆಳವಣಿಗೆಯಾಗುವಂತೆ ಮಾಡಬೇಕು ಎಂಬುದಾಗಿ ನಾನು ಹೇಳ ಬಯಸುತ್ತೇನೆ ಇನ್ನು ನಾವು ಮೊದಲನೆ ವರ್ಷದಲ್ಲಿದ್ದೇವೆ. ಈಗಾಗಲೇ ಎಷ್ಟೋ ಈ ಬಗ್ಗೆ ಕೆಲವು ಅಡ್ಡಿ ಆತಂಕ ಗಳು ಬಂದಿವೆ. ಸರ್ವೆ ಸಾಧಾರಣವಾಗಿ ಅಲ್ಲಿ 10 ಬ್ಲಾಕುಗಳು ಆಗಿವೆ. ಪ್ರತಿಯೊಂದಕೂ ಟ್ರಾಕ್ಟರುಗಳನ್ನು ಒದಗಿಸಬೇಕಾಗಿತ್ತು. ಆದರೂ ತಕ್ಷಣ ಒದಗಿಸಲಿಕ್ಕಾಗಲಿಲ್ಲ. ಕಾರ್ಯತಃ ಪ್ರಾರಂಭ ಮಾಡಿದ್ದು 62 ನೇ ಇಸವಿಯಲ್ಲಿ. ಅದೇನೂ ಉತ್ಪ್ರೇಕ್ಷೆ ಅಲ್ಲ. ಆ ರೀತಿ ಮಾತನಾಡು ವುದು ಸರಿಯಲ್ಲ. ಆಗಲೇ 10 ಟ್ರ್ಯಾಕ್ಟರುಗಳನ್ನು ತೆಗೆದುಕೊಂಡು ಒಂದೊಂದು ತಾಲ್ಲೂಕಿನ ಬ್ಲಾಕಿಗೂ ಬಾಡಿಗೆ ರೂಪವಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಇನ್ನು ಕೆಲವರು ವರ್ಕ್ ಷಾಪ್ ವಿಷಯವಾಗ ಹೇಳಿದರು. ಆದರೆ ಅವರು ಅದನ್ನು ನೋಡಿದ್ದು ಇಲ್ಲವೆಂದು ಮಾತ್ರ ಹೇಳಿ ದರು. ಆ ಒಂದು ವರ್ಕ್ ಷಾಪನ್ನು ಡಿಸೆಂಬರ್‌ನೊಳಗೆ ಇಲ್ಲಿ ಸ್ಥಾಪನೆಮಾಡಬೇಕೆಂದು ಒಂದು ಸರ ಕಾರೀ ಆಜ್ಞೆಯಾಗಿದೆ. ಆದರೆ ಇಂಡಿಯಾ ಸರ್ಕಾರದ ನೆರವು ಮತ್ತು ತಜ್ಞರ ಅಭಿಪ್ರಾಯವನ್ನು ಪಡೆಯಲು ಅದು ಸ್ವಲ್ಪ ನಿಧಾನವಾಗಿದೆ. ಇಂಜನಿಯರುಗಳ ಸಹ ವರ್ಗವಾಗಿದೆ. ಅವರು ಈಗ ಚಾರ್ಜ್ ತೆಗೆದುಕೊಂಡಿದ್ದಾರೆ. ವರ್ಕ್ ಷಾಪ್ ಸ್ಥಾಪನೆಯ ಮುಖ್ಯೋದ್ದೇಶ ಏನೆಂದರೆ ಟ್ರ್ಯಾಕ್ಟ ರುಗಳ ಸರ್ವಿಸ್ ಮಾಡುವುದು, ಡಿಜೈನ್ ಮಾಡಿ ಯಾವ್ಯಾವ ಪ್ರದೇಶಗಳಿಗೆ ಯಾವ್ಯಾವ ಉಪಕರಣ ಗಳು ಬೇಕು ಅವನ್ನೆಲ್ಲಾ ಅಲ್ಲಿನ ಲೋಕಲ್ ಆರ್ಟಿಸಾನುಗಳಿಗೆ ಕೊಟ್ಟು ಅವರಿಗೆ ಚೆನ್ನಾಗಿ ತರ ಬೇತು ಕೊಡುವುದು ಆಗಿದೆ. ಆ ದೃಷ್ಟಿಯಲ್ಲಿ ಸರ್ಕಾರ ಈ ಪ್ರೋಗ್ರಾಂ ಅನ್ನು ಹಾಕಿಕೊಂಡಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಷ್ಟು ಅಲ್ಲಿ ಅಷ್ಟು ಅನ್ಯಾಯವಾಗಿಲ್ಲ. ನಾವೇನು ಸರಿಯಾದ

(ಶ್ರೀ ಜಿ. ನಾರಾಯಣಗೌಡ)

ರೀತಿಯಲ್ಲಿ ನಿರೀಕ್ಷಣೆ ಮಾಡಿದ್ದೆವೋ ಆ ಮಟ್ಟದಲ್ಲಿ ಕೆಲಸ ಮಾಡಿವೆ. ಮುಂದೆ ಇನ್ನೆರಡು ಮೂರು ವರ್ಷಗಳೊಳಗೆ ಹೆಚ್ಚಿನ ಪ್ರಗತಿ ದಾರಿಯೊಳಗೆ ಹೋಗುವ ಹಾಗೆ ಮಾಡುವುದು ಆಗುತ್ತದೆ. ಇಷ್ಟು ಮಾತ್ರ ನಾನು ಹೇಳುತ್ತೇನೆ. ನನ್ನ ಮಾನ್ಯ ಮಿತ್ರರು ಒಂದೆರಡು ಸಲಹೆಗಳನ್ನು ಮಾಡಿದರೆ ಅದರ ಸಲುವಾಗಿ ಒಂದೆರಡು ವಿಷಯಗಳು ಮಾತನಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಈ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ಯಾಕೇಜ್ ಡೀಲ್ ಯೋಜನೆ ಇದೆಯೇ ?

ಶ್ರೀ ಜಿ. ನಾರಾಯಣಗೌಡ.—ಸೌತ್ ಕೆನರಾಕ್ಕೆ ಬೇಸಾಯವನ್ನು intensify ಮಾಡುವುದ ಕ್ಕೋಸ್ಕರ ಈ ಒಂದು ಯೋಜನೆಯನ್ನು ಕೇಳಿಕೊಂಡಿದ್ದೇವೆ. ಆ ಒಂದು ವಿಷಯದಲ್ಲಿ ಅವರು ಪರಿ ಶೀಲನೆ ಮಾಡುತ್ತಿದ್ದಾರೆ. ಸೌತ್ ಕೆನರಾ ಅಷ್ಟೇ ಅಲ್ಲ. ಶಿವಮೊಗ್ಗ ಮತ್ತು ಮೈಸೂರುಗಳಲ್ಲೂ ಸಹಿತ ಬತ್ತ ಹೆಚ್ಚಾಗಿ ಬೆಳೆಯುವ ಯೋಜನೆಯನ್ನು ಸಹ ಇಟ್ಟುಕೊಂಡಿದ್ದೇವೆ. ಆ ಬಗ್ಗೆ ಇಂಡಿಯಾ ಸರ್ಕಾರದ ನೆರವನ್ನು ಸಹ ಕೇಳಿದ್ದೇವೆ. ಅದು ಬಂದಾಗ ಆ ಯೋಜನೆ ತೆಗೆದುಕೊಳ್ಳಲು ಸಾಧ್ಯ ವಾಗಬಹುದು.

ಇನ್ನು ಟ್ರ್ಯಾಕ್ಟರುಗಳ ವಿಷಯದಲ್ಲಿ ಒಂದು ಸಲಹೆ ಬಂತು. ನಮ್ಮ ದೇಶದೊಳಗೆ ದೊಡ್ಡ ದೊಡ್ಡ ಟ್ರ್ಯಾಕ್ಟರುಗಳನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದು ಪ್ರಯೋಜನವಿಲ್ಲ. ಅದ ಕ್ಕೋಸ್ಕರವಾಗಿ ಚಿಕ್ಕಚಿಕ್ಕ ಟ್ರ್ಯಾಕ್ಟರುಗಳನ್ನು ತಯಾರಿಸಿಕೊಡುವುದು ಒಳ್ಳೆಯದು ಎಂದು ಕೆಲವರು ಅಭಿಪ್ರಾಯಪಟ್ಟರು. ಇದರಲ್ಲಿ ನನಗೇನೂ ಭಿನ್ನಾಭಿಪ್ರಾಯವಿಲ್ಲ. ಅವುಗಳನ್ನು ಜಾಗ್ರತೆಯಾಗಿ ತಯಾ ರುಮಾಡಿಸಬಹುದೆಂದು ನಾನು ಅಂದುಕೊಂಡಿದ್ದೇನೆ. ಆದರೆ ಆ ಕಾರ್ಯ ಅದಷ್ಟು ಬೇಗನೆ ಆಗದೇ ಇರಬಹುದು. ಆ ಬಗ್ಗೆ ಸರ್ಕಾರಕ್ಕೆ ತೀವ್ರಾಸಕ್ತಿ ಇದ್ದೇ ಇದೆ. ತೀವ್ರ ಗಮನವೂ ಸಳೆದಿದ್ದಾರೆ. ಆದರೆ ಆ ಕಾರ್ಯ ಎಷ್ಟು ಬೇಗನೆ ಆಗುತ್ತದೆ ಎಂದು ಹೇಳುವುದಕ್ಕೆ ಈಗ ಸಾಧ್ಯವಿಲ್ಲ.

ಇಷ್ಟು ಮಾತ್ರ ಹೇಳಿ ನಾನು ನನ್ನ ಇಲಾಖೆ ಬಗ್ಗೆ ಏನು ಬೇಡಿಕೆಗಳನ್ನು ಮಾನ್ಯ ಸಭೆಯ ಮುಂದೆ ಇಟ್ಟಿದ್ದೇನೋ ಅದಕ್ಕೆ ಮಾನ್ಯ ಸದಸ್ಯರೆಲ್ಲರೂ ಸರ್ವಾನುಮತದಿಂದ ಬೆಂಬಲ ಕೊಡಬೇ ಕೆಂದು ಬೇಡಿಕೊಳ್ಳುತ್ತೇನೆ.

ಶ್ರೀ ಬಿ. ಎಂ. ದೇವ್.—ಪಂಪ್‌ಸೆಟ್‌ಗಳು ಮುಂತಾದ ಸೌಲಭ್ಯಗಳು ನನ್ನಂಥ ಶಾಸನ ಸಭೆಯ ಸದಸ್ಯರಿಗೂ, ಅನುಕೂಲಸ್ಥರಿಗೂ ಸಿಕ್ಕಬಹುದು, ಬಡವರಿಗೆ ಸಿಕ್ಕುವುದಿಲ್ಲ. ಭೂಸುಧಾರಣೆ ಜಾರಿಗೆ ಬಂದ ಹೊರತು ಬಡವರಿಗೆ ಈ ಸೌಲಭ್ಯಗಳು ಸಿಕ್ಕುವುದಿಲ್ಲ. ಈ ವಿಚಾರವಾಗಿ ಮಂತ್ರಿಗಳು ಏನನ್ನೂ ಹೇಳಲಿಲ್ಲ. ಈ ದೃಷ್ಟಿಯಿಂದ ನೀವು (ಸರ್ಕಾರ) ಪಾಪಮಾಡುತ್ತಿದ್ದೀರಿ, ಇದರಲ್ಲಿ ಪಾಲು ಗೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ಇದನ್ನು ಪ್ರತಿಭಟಿಸುವುದಕ್ಕಾಗಿ ನಾನು ಸಭೆಯನ್ನು ಬಿಟ್ಟು ಹೋಗುತ್ತೇನೆ.

(ಸಭೆಯಿಂದ ಹೊರಗೆ ಹೋದರು).

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆಯ ಮಂತ್ರಿಗಳು).—ಸ್ವಾಮಿ, ಈಗ ಎರಡು ದಿವಸಗಳಿಂದ ಮಾನ್ಯ ಸದಸ್ಯರು ಕೊಟ್ಟ ಸಲಹೆಗಳು ಮತ್ತು ಮಾಡಿದ ಟೀಕೆಗಳಿಗೆ ವ್ಯವ ಸಾಯ ಮತ್ತು ಪಶುಪಾಲನೆ ಇಲಾಖೆಗಳ ಮಂತ್ರಿಗಳು ಉತ್ತರಗಳನ್ನು ಕೊಟ್ಟಿದ್ದಾರೆ. ಈ ಎರಡು ಇಲಾಖೆಗಳ ಜೊತೆಗೆ ಮೀನುಗಾರಿಕೆಯ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರು ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ ಬಹಳ ಕಾಲದಿಂದ ಟೀಕೆಗೊಳಗಾಗಿದ್ದ ಅರಣ್ಯ ಇಲಾಖೆಯ ಬಗ್ಗೆ ಈಗ ಟೀಕೆಗಳು ಸ್ವಲ್ಪ ಕಡಮೆಯಾಗಿವೆಯೆಂದು ಸದಸ್ಯರು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಅತ್ಯಂತ ಸಂತೋಷದಿಂದ ನನ್ನ ಧನ್ಯವಾದಗಳನ್ನ ರ್ಪಿಸುತ್ತೇನೆ. ಈ ಉಪಯುಕ್ತ ಇಲಾಖೆಗಳಿಗೆ ಸಂಬಂಧಪಟ್ಟಂತೆ ಚರ್ಚೆಮಾಡಲು ಎಲ್ಲ ಸದಸ್ಯರಿಗೂ ಕಾಲಾವಕಾಶವಿಲ್ಲದಿದ್ದುದರಿಂದ ಒಂದು ಮಾತು ಹೇಳಬೇಕಾಗಿದೆ. ನನ್ನ ಇಲಾಖೆಗಳಿಗೆ ಸಂಬಂಧ ಪಟ್ಟಂತೆ ಅನೇಕ ಸದಸ್ಯರು ತಮ್ಮ ಖೋತಾ ನಿರ್ಣಯಗಳನ್ನು ಕಳುಹಿಸಿದ್ದಾರೆ. ಅವರು ಈ ಬಗ್ಗೆ ಸಭೆಯಲ್ಲಿ ಮಾತನಾಡದಿದ್ದರೂ, ಅವರ ಖೋತಾ ನಿರ್ಣಯಗಳಿಗೆ ನಾನು ಉತ್ತರ ಕೊಡುವುದರಿಂದ ಬಹುಶಃ ಅವರು ತೃಪ್ತಿಗೊಳ್ಳುವರೆಂದು ನಂಬಿದ್ದೇನೆ. ಮತ್ಸ್ಯ ಪರಿಪಾಲನೆ ಕೆಲಸದಲ್ಲಿ ಬಹಳ ಅನುಭವ ಪಡೆದಿರುವ ಮಾನ್ಯ ಸದಸ್ಯರಾದ ಶ್ರೀಮಾರ್ಕ ಮಧ್ವರಾಜ್ ಅವರು ಈ ಸಭೆಯ ಮಾನ್ಯ ಸದಸ್ಯರೆಲ್ಲರಿಗೂ ಮನವರಿಕೆಯಾಗುವ ರೀತಿಯಲ್ಲಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಒಟ್ಟಿನಲ್ಲಿ ಅವರು ಕೊನೆಯದಾಗಿ ಹೇಳಿದ್ದೆಂದರೆ, ಸಂಸ್ಥಾನದಲ್ಲಿ ಸುಮಾರು 200 ಮೈಲಿ ಸಮುದ್ರತೀರವಿದ್ದು,

ಭಾರತ ಕರಾವಳಿಯ ಹದಿನೈದನೆಯ ಒಂದು ಭಾಗದಷ್ಟು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗಿದ್ದರೂ ಕೂಡ ಹಿಂದೂದೇಶದಲ್ಲಿ ಹಿಡಿಯುವ ಮೀನುಗಳಲ್ಲಿ ನಮ್ಮದು ಆರರಲ್ಲಿ ಒಂದು ಭಾಗವಿದ್ದರೂ ಕೂಡ, ಈ ಇಲಾಖೆಗೆ ಸಾಕಷ್ಟು ಹಣವನ್ನೊದಗಿಸಿಲ್ಲ, ಈಗ ಒದಗಿಸಿರುವ ಹಣ ಸಾಲದೆಂದು ಹೇಳಿದ್ದಾರೆ. ಆ ಮಾತನ್ನು ಒಪ್ಪಿಕೊಳ್ಳುತ್ತೇನೆ. ಆದುದರಿಂದಲೇ ಈ ಮೂರನೆಯ ಯೋಜನೆಯ ಮೀನುಗಾರಿಕೆಯ ಅಭಿವೃದ್ಧಿಗಾಗಿ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳನ್ನೊದಗಿಸಿದ್ದರೂ ಈ ಇಲಾಖೆಯ ಮುಖ್ಯಾಧಿಕಾರಿಗಳು ಇದು ಸಾಲುವುದಿಲ್ಲವೆಂದು ಹೇಳಿ ಕೇರಳ, ಬೊಂಬಾಯಿ ಮುಂತಾದ ಮೀನುಗಾರಿಕೆಯಲ್ಲಿ ಹೆಚ್ಚಿನ ಅಭಿವೃದ್ಧಿ ಪಡೆದಿರುವ ಇತರ ಪ್ರಾಂತಗಳಲ್ಲಿ ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿದ್ದಾರೆ, ಇಲ್ಲಿ ಕೊಟ್ಟಿರುವುದು ಕಡಮೆ ಎಂದು ಹೇಳಿದುದರಿಂದ 3 ಕೋಟಿ 52 ಲಕ್ಷ ರೂಪಾಯಿಗೆ ಅಂದಾಜನ್ನು ತಯಾರು ಮಾಡಿಸಿ ಮಂಜೂರು ಮಾಡಿ, ಇಂಡಿಯಾ ಸರ್ಕಾರದವರು ಇದಕ್ಕೆ ನೆರವನ್ನು ಕೊಡಬೇಕೆಂದು ಈ ವರ್ಷ ಸತತವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ಮೂರನೆಯ ಪಂಚವಾರ್ಷಿಕ ಯೋಜನೆಗೆ ಏನು ಹಣವನ್ನೊದಗಿಸಿದ್ದಾರೋ ಅದಷ್ಟನ್ನೂ ಎರಡು ವರ್ಷಗಳೊಳಗೆ ಖರ್ಚು ಮಾಡಿದರೆ, ನಾವು ಯೋಜನೆಯನ್ನೇನಿಟ್ಟಿದ್ದೇವೋ ಅದಕ್ಕೆ ಬೇಕಾದ ಹೆಚ್ಚು ಹಣವನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಈ ಬಗ್ಗೆ ಪತ್ರವ್ಯವಹಾರ ಮಾಡಿದ್ದೇವೆ. ಈ ವರ್ಷ ಮತ್ಸ್ಯಪರಿಪಾಲನೆಗಾಗಿ 19 ,2–63ರಲ್ಲಿ ಎಷ್ಟು ಹಣವನ್ನೊದಗಿಸಿದ್ದೆವೋ ಅದಕ್ಕಿಂತ 21 ಲಕ್ಷ ರೂಪಾಯಿ, ಎಂದರೆ 43 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದೇ ರೀತಿ ಹೆಚ್ಚು ಮಾಡಿದರೆ 3 ಕೋಟಿ 52 ಲಕ್ಷ ರೂಪಾಯಿನ ಯೋಜನೆ ತೃಪ್ತಿಕರವಾಗಿ ಪರಿಪೂರ್ಣವಾಗುತ್ತದೆಂಬ ನಂಬಿಕೆ ಇದೆ. ಮುಖ್ಯವಾಗಿ ಸಮುದ್ರದಲ್ಲಿ ದೋಣಿಗಳಲ್ಲಿ ಹೋಗುವ ಜನರ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ಇವರು ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಹಿಂದುಳಿದಿದ್ದಾರೆ. ಇಂತಹ ವೃತ್ತಿಗಳಿಗೆ ಇನ್ನೂ ಹೆಚ್ಚು ಉತ್ತೇಜನ ಕೊಡಬೇಕೆಂದು ಸರ್ಕಾರದವರು ಅವರಿಗೆ, ಶಿಕ್ಷಣ ಪಡೆದ ಬೆಸ್ತರಿಗೆ ಯಾಂತ್ರಿಕ ದೋಣಿಗಳನ್ನೊದಗಿಸಬೇಕೆಂದು ಮಂಗಳೂರು ಮತ್ತು ಕಾರವಾರಗಳಲ್ಲಿ ಎರಡು ಕೇಂದ್ರಗಳನ್ನು ತೆರೆದಿದ್ದಾರೆ. ಏಕ ಕಾಲದಲ್ಲಿ 8 ಯಾಂತ್ರಿಕ ದೋಣಿಗಳನ್ನು ಕಟ್ಟುವುದಕ್ಕೆ ವ್ಯವಸ್ಥೆಯಿದೆ. ಈ ವರ್ಷ ಒಂದೊಂದು ಕಡೆ 16 ರಷ್ಟು ಕಟ್ಟಬೇಕೆಂದು ಪ್ರಯತ್ನ ನಡೆಯುತ್ತಿದೆ. ಇದೂ ಅಲ್ಲದೆ ಖಾಸಗಿ ಸಹಕಾರ ಸಂಸ್ಥೆಗಳವರು ಮುಂದೆ ಬಂದಿದ್ದಾರೆ, ಅವರಿಗೂ 10 ಯಾಂತ್ರಿಕ ದೋಣಿಗಳನ್ನು ಕಟ್ಟಿಸಬೇಕೆಂದು ಸರ್ಕಾರದವರು ಮಂಜೂರಾತಿಯನ್ನು ಈಗಾಗಲೇ ನೀಡಿದ್ದಾರೆ. ಇಷ್ಟಾದರೂ ಈ ದೇಶದಲ್ಲಿ ಸುಮಾರು ಒಂದು ಲಕ್ಷ ಜನ ಮೀನುಗಾರಿಕೆ ವೃತ್ತಿಯನ್ನವಲಂಬಿಸಿಕೊಂಡಿರುವ ಜನರಲ್ಲಿ 20ಸಾವಿರ ಜನರು ಯಾವಾಗಲೂ ಮೀನು ಹಿಡಿಯುವವರಿದ್ದಾರೆ. ಇವರಿಗೆ ನಾಲ್ಕು ಸಾವಿರದಷ್ಟು ಯಾಂತ್ರಿಕ ದೋಣಿಗಳನ್ನು ಕೊಡಬೇಕಾಗುತ್ತದೆ. ಎರಡು ರೀತಿಯ ದೋಣಿಗಳಿವೆ. 16,500 ರೂಪಾಯಿ, 32,000 ರೂಪಾಯಿ ಬೆಲೆ ಬೀಳುತ್ತದೆ. ಇದರಲ್ಲಿ ಮೂರನೆಯ ಒಂದು ಭಾಗ ಮುಫತ್ತಾಗಿ ಕೊಟ್ಟು ಮಿಕ್ಕ ಹಣವನ್ನು ಸಾಲವಾಗಿ ಕೊಟ್ಟು ವಸೂಲು ಮಾಡತಕ್ಕ ವ್ಯವಸ್ಥೆಯನ್ನು ಇಲಾಖೆಯಲ್ಲಿ ಮಾಡಿಕೊಂಡಿದ್ದಾರೆ. ಈ ದೃಷ್ಟಿಯಿಂದ ಯಾಂತ್ರಿಕ ಉಪಕರಣಗಳನ್ನೊದಗಿಸಬೇಕೆಂದಿಟ್ಟುಕೊಂಡಿದ್ದೇವೆ. ದೋಣಿಗಳನ್ನು ಕಟ್ಟತಕ್ಕ ಜನರು ಮುಂದೆ ಬಂದರೆ ಹೆಚ್ಚಿನ ರೀತಿಯ ಸಹಾಯ ಮಾಡಲು ಸರ್ಕಾರ ಸಿದ್ಧ. ಇದಕ್ಕೆ ಬೇಕಾದ ಯಂತ್ರಗಳು ಮತ್ತು ಕೆಲವು ಭಾಗಗಳು ನಮ್ಮ ದೇಶದಲ್ಲಿ ಸಿಕ್ಕುತ್ತಿಲ್ಲ. ಈ ಸಂಬಂಧವಾಗಿ ಪತ್ರವ್ಯವಹಾರ ನಡೆಸುತ್ತಿದ್ದೇವೆ. ಆದರೂ ಕಿರ್ಲೋಸ್ಕರ್ ಕಂಪೆನಿಯವರು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಈ ಯಂತ್ರಗಳನ್ನು ಕೊಡತಕ್ಕ ಪರಿಸ್ಥಿತಿ ಬಂದಿಲ್ಲ. ಆದುದರಿಂದ ಜಪಾನ್, ನಾರ್ವೆ ದೇಶಗಳಿಂದ ಒದಗಿಸಿಕೊಳ್ಳಲು ಸಾಧ್ಯವೆ ಎಂಬ ಬಗ್ಗೆ ವ್ಯವಹಾರ ನಡೆಸಿ, ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಷನ್‌ನವರು ಸುಮಾರು 26 ಇಂಜಿನುಗಳನ್ನು ಈ ವರ್ಷ ಒದಗಿಸಿದ್ದಾರೆ. ಇನ್ನೂ ಹೆಚ್ಚು ಬರಬಹುದು. ಅದು ಬಂದ ಪಕ್ಷಕ್ಕೆ ಈ ವರ್ಷ 28 ಕಟ್ಟಬೇಕೆಂದು ಹೇಳಿರುವುದನ್ನು ಹೆಚ್ಚು ಮಾಡುವುದಕ್ಕವಕಾಶವಿದೆ. ಯಾಂತ್ರಿಕ ದೋಣಿಗಳ ಜೊತೆಗೆ ಇದಕ್ಕೆ ಬೇಕಾದ ಬಲೆಗಳನ್ನೂ, ಇನ್ನೂ ಇತರ ಸಾಮಗ್ರಿಗಳನ್ನೂ ಒದಗಿಸಿಕೊಳ್ಳಬೇಕಾದರೆ ಹಣ ಬೇಕಾಗುತ್ತದೆ. ಇದನ್ನೂ ಸಾಲದ ರೂಪವಾಗಿ ಕೊಡುತ್ತಿದ್ದೇವೆ. ಇಷ್ಟಾದರೂ ಸಮುದ್ರಕ್ಕೆ ಒಂದು ತೊಟ್ಟು ಹಾಲು ಹಾಕಿದಹಾಗಾಗುತ್ತದೆ. ಈ ದೇಶದ ಆಹಾರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಸಫಲರಾಗಿದ್ದೇವೆಂದು ಹೇಳುವಹಾಗಿಲ್ಲ. ಸುಮಾರು ಹತ್ತು ಸಾವಿರ ಚದರ ಮೈಲಿಯಲ್ಲಿ ಮೀನು ಹಿಡಿಯುವ ಅವಕಾಶವಿರುವ ಪ್ರದೇಶವಿದೆ. ಇದರಿಂದ ದೇಶದ ಆಹಾರ ಸಮಸ್ಯೆಯನ್ನು ಪರಿಹರಿಸುವುದರ ಜೊತೆಗೆ ಸಮಾಜದಲ್ಲಿ ಹಿಂದಿರುವ ಜನರಿಗೆ ಕೆಲಸವನ್ನು ಕೊಟ್ಟಂತಾಗುತ್ತದೆ. ಅಲ್ಲದೆ ಇದರಿಂದ ದೊರೆಯುವ ಮೀನುಗಳನ್ನು ನಮ್ಮ ಜನರಿಗೆ ಒದಗಿಸುವುದಲ್ಲದೆ ಪರದೇಶಗಳಿಗೆ ಕಳುಹಿಸಿ ಎರಡೂವರೆ ಕೋಟಿ ರೂಪಾಯಿನಷ್ಟು ವಿದೇಶವಿನಿಮಯ ದೊರಕಿಸಿಕೊಳ್ಳಬಹುದು. ಎಂದಮೇಲೆ ಇದರ ಪ್ರಾಮುಖ್ಯತೆ ಎಷ್ಟೆಂಬುದನ್ನು ತಿಳಿದುಕೊಳ್ಳಬಹುದು. ಇದು ಸಣ್ಣ ಇಲಾಖೆಯೆಂದು ಭಾವಿಸಿದರೆ ಅದು ತಪ್ಪು ಎನ್ನುವುದನ್ನು ತೋರಿಸುವ

(ಶ್ರೀ ಬಿ. ರಾಚಯ್ಯ)

ದೃಷ್ಟಿಯಿಂದ ಈ ದಿವಸ ಬೆಳಿಗ್ಗೆ ಈ ಇಲಾಖೆಯ ಕಾರ್ಯಚಟುವಟಿಕೆಯ ವಿವರಗಳನ್ನು ಅಂಕಿ ಅಂಶಗಳ ಮೂಲಕ ಮಾನ್ಯ ಸದಸ್ಯರಿಗೆ ಕೊಟ್ಟಿರುವುದು.

